THE BOOK WAS DRENCHED

ಶ್ರೀ ಶಂಕರಾಚಾರ್ಯರವರ ಗ್ರಂಥಗಳು

ಪ್ರಕರಣಗಳು

ಸಂಪುಟ ೧



ಕರ್ನಾಟಕ ಸಾಹಿತ್ಯ ಮಂದಿರ,
ಧಾರವಾಡ.

ಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರು

UNIVERSAL
LIBRARY
OU_202023
UNIVERSAL
LIBRARY

OSMANIA UNIVERSITY LIBRARY

Call No K 181.4/S52P. Accession No K 5297

Author ಶಂಕರಾಚಾರ್ಯ. 1949

Title ಪ್ರಕರಣಗಳು (ಪ್ರಂಥ ೨೮)

This book should be returned on or before the date last marked below.

ಶ್ರೀಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಶ್ರೀ ಶಂಕರಾಚಾರ್ಯರವರ ಗ್ರಂಥಗಳು

ಪ್ರಕರಣಗಳು

ಸಂಪುಟ ೧

(ಉಪದೇಸಾಹಸ್ರಿ ಗದ್ಯ, ಪದ್ಯ ;
ಅಪರೋಕ್ಷಾನುಭೂತಿ ; ಆತ್ಮಾನಾತ್ಮವಿವೇಕ)

ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳವರು



ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೧೯೪೯

ಪ್ರಕಾಶಕರ ವಿನ್ನಪ

—*—

ಶ್ರೀಶಂಕರಾಚಾರ್ಯರವರ ಅಮೋಘವಾದ ಕೃತಿಗಳನ್ನೆಲ್ಲ ಕನ್ನಡಿಸಿ ಮಹಾಜನರ ಮುಂದೆ ಇಡುವ ಸುಯೋಗವು ಕಾರ್ಯಾಲಯಕ್ಕೆ ಇದೀಗ ಲಭಿಸಿರುತ್ತದೆ. ನಮ್ಮನ್ನಾಳುವ ಶ್ರೀಮತ್ಕರ್ಣಾಟಕಸಿಂಹಾಸನಾಧೀಶ್ವರರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಐ., ಜಿ.ಸಿ.ಎಸ್.ಐ.ರವರು ಜಗತ್ಪ್ರಸಿದ್ಧರಾದ ಆಚಾರ್ಯರವರ ಗ್ರಂಥಗಳೆಲ್ಲವನ್ನೂ ಪರಿಶೋಧಿಸಿ ಸಮೂಲವಾಗಿ ಕನ್ನಡಿಸಿ ಪ್ರಕಟಿಸಬೇಕೆಂದು ಕೊಡಿಸಿರುವ ಉದಾರಾಜ್ಞೆಯನ್ನು ಶಿರಸಾವಹಿಸಿ ಈ ಮಹಾಕಾರ್ಯವನ್ನು ನಾವು ಕೈಗೊಂಡಿರುತ್ತೇವೆ.

ಇದುವರೆಗೆ ನಾವು ಪ್ರಕಟಿಸಿದ್ದ ಕೆಲವು ಗ್ರಂಥಗಳನ್ನು ಈ ಸಲ ಸಂಪೂರ್ಣವಾಗಿ ಪರಿಷ್ಕರಿಸಿ ಭಾಷ್ಯದ ಸಂಸ್ಕೃತಮೂಲ, ಕನ್ನಡ ಅನುವಾದ, ಮುಖ್ಯ ವಿಷಯಗಳನ್ನು ವಿಶದೀಕರಿಸುವ ಟಿಪ್ಪಣಿಗಳು, ಆಚಾರ್ಯರ ಮಿಕ್ಕ ಗ್ರಂಥಗಳಲ್ಲಿರುವ ವಿಷಯವಿವೇಚನೆಯ ಹೋಲಿಕೆಯನ್ನು ಸುಲಭಗೆಯಿಸುವ ಗ್ರಂಥಸಮಾಮರ್ಶಿಕೆಗಳು, ಆಯಾ ಗ್ರಂಥದ ಸಾರ, ಮಂತ್ರಗಳ ಅಥವಾ ಶ್ಲೋಕಗಳ ಅಕಾರಾನುಕ್ರಮಣಿಕೆ, ಶಬ್ದಾನುಕ್ರಮಣಿಕೆ – ಇವುಗಳನ್ನೂ ಸೇರಿಸಿ ಪರಿಪೂರ್ತಿಗೊಳಿಸಿರುತ್ತದೆ. ಅಂತಹ ಗ್ರಂಥಗಳನ್ನು ಮೊದಲನೆಯ ಸಲಕ್ಕೆ ಕನ್ನಡಿಸಿ ಇದೇ ರೀತಿಯ ಸಲಕರಣೆಗಳೊಡನೆ ಹೊರಕ್ಕೆ ತರಲಾಗಿದೆ. ಗ್ರಂಥದ ಪೀಠಿಕೆಯಲ್ಲಿ ಕಾಣುವ ವಿಷಯವಿವೇಚನೆಯು ವಿಚಾರಪ್ರಚೋದಕವಾಗಿರುವಂತೆ ಏರ್ಪಡಿಸಲಾಗಿದೆ. ಮೂಲಭಾಷ್ಯವನ್ನು ತಕ್ಕಂತೆ ಪ್ರಘಟ್ಟಗಳಾಗಿ ವಿಂಗಡಿಸಿ ತಲೆಬರಹಗಳನ್ನು ಸೇರಿಸಿರುವದು; ಮುಖ್ಯಪಾಠಭೇದಗಳನ್ನು ಸೂಚಿಸಿರುವದು; ಪ್ರಮಾಣವಚನಗಳ ಸ್ಥಾನವನ್ನು ಅಲ್ಲಲ್ಲಿಯೇ ತೋರಿಸಿರುವದು; ಭಾಷ್ಯ, ಅನುವಾದ, ಟಿಪ್ಪಣಿಗಳು – ಮುಂತಾದವುಗಳು ವಿಂಗಡವಾಗಿ ಕಾಣುವಂತೆ ಬೇರೆಬೇರೆಯ ತರದ ಅಚ್ಚಿನ ಅಕ್ಷರಗಳನ್ನು ಆರಿಸಿಕೊಂಡಿರುವದು– ಇದಿಷ್ಟೂ ಈ ಗ್ರಂಥರತ್ನಮಾಲೆಯ ವಿಶೇಷಗಳು.

ಈ ಗ್ರಂಥಾವಳಿಯ ಪ್ರಯೋಜನವು ಕನ್ನಡನಾಡಿನ ಮಹಾಜನಗಳಿಗೆ ಸತತವಾಗಿ ಲಭಿಸುವಂತೆಯೂ, ಇದಕ್ಕೆ ಉದಾರಹಸ್ತಾವಲಂಬನವನ್ನಿತ್ತು ಅಧ್ಯಾತ್ಮ ಪ್ರಕಾಶಕಾರ್ಯಾಲಯಕ್ಕೆ ಪರಿಪಾಲಕರಾಗಿರುವ ಮಹಾಪ್ರಭುಗಳವರಿಗೆ ಇತೋಪ್ಯತಿಶಯವಾದ ಆಯುರಾರೋಗ್ಯೈಶ್ವರ್ಯವಿಜಯಕೀರ್ತಿವಂಶಾಭಿವೃದ್ಧ್ಯಾದಿಗಳನ್ನು ಸುರಿಮಳೆಗೈಯುವಂತೆಯೂ, ಅನುಗ್ರಹಿಸಬೇಕೆಂದು ಅಖಿಲಾತ್ಮನೂ ಲೋಕಶುಭಕರನೂ ಆದ ಭಗವಂತನನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಪ್ರಕರಣಗಳಿಗೆ ಮುನ್ನುಡಿ

ಶ್ರೀ ಶಂಕರಾಚಾರ್ಯರವರ ಕೃತಿಗಳೆಂದು ಪ್ರಸಿದ್ಧವಾಗಿರುವ ಗ್ರಂಥಗಳಲ್ಲಿ ಸುಪ್ರಸಿದ್ಧ ಭಾಷ್ಯಗಳಲ್ಲದೆ ಹಲವು ಪ್ರಕರಣಗಳೂ ಸೇರಿರುವವು. ಆ ಮಹಾತ್ಮರ ಹೆಸರಿನಲ್ಲಿ ಹೊರಕ್ಕೆ ಬಂದಿರುವ ಗ್ರಂಥಗಳೆಲ್ಲವೂ ಆಚ್ಛಾಗಿರುವದಿಲ್ಲ. ಶ್ರೀರಂಗದ ವಾಣೀವಿಲಾಸಮುದ್ರಣಾಲಯ ಮತ್ತು ಪೂನಾದ ಆಷ್ಟೇಕರ್ ಕಂಪೆನಿ– ಇವರು ಪ್ರಕಾಶಿಸಿರುವ ಗ್ರಂಥಸಂಗ್ರಹವನ್ನೂ ನಮಗೆ ಶಂಕರಕೃತಿಗಳೆಂದು ದೊರಕಿರುವ ಒಂದೆರಡು ಗ್ರಂಥಗಳನ್ನೂ ಸೇರಿಸಿ ಈ ಗ್ರಂಥರತ್ನಮಾಲೆಯಲ್ಲಿ ಪ್ರಕಟಿಸಿರುತ್ತೇವೆ. ಈಗ ನಾವು ಪ್ರಕಟಿಸಿರುವವಲ್ಲದೆ ಬೇರೆಯ ಗ್ರಂಥಗಳು ಆ ಮಹನೀಯರ ಹೆಸರಿನಲ್ಲಿ ಪ್ರಚಾರವಿಲ್ಲವೆಂದಾಗಲಿ ಈಗ ಪ್ರಕಟಿಸಿರುವ ಗ್ರಂಥಗಳೆಲ್ಲ ಭಾಷ್ಯಕಾರರಚಿತವೇ ಎಂದಾಗಲಿ ನಾವು ಧೈರ್ಯದಿಂದ ಹೇಳಲಾರೆವು. ಆದರೂ ಈಗ ನಾವು ಪ್ರಸಿದ್ಧ ಪಡಿಸಿರುವ ಗ್ರಂಥಸಂಗ್ರಹವು ಶಾಂಕರಸಿದ್ಧಾಂತವನ್ನು ಗೊತ್ತುಪಡಿಸಬೇಕೆಂಬ ವಿದ್ವಾಂಸರಿಗೂ ಸ್ವಲ್ಪದರಲ್ಲಿ ವೇದಾಂತಪ್ರಕ್ರಿಯೆಯ ರೂಪರೇಖೆಯನ್ನು ಕಂಡು ಕೊಳ್ಳಬೇಕೆಂಬ ಜಿಜ್ಞಾಸುಗಳಿಗೂ ಪ್ರಯೋಜನಕರವಾಗಿರುವವೆಂದು ನಾವು ನೆರೆ ನಂಬಿರುತ್ತೇವೆ.

—ಪ್ರಕಾಶಕರು.

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ ೫೨

ಶ್ರೀ ಶಂಕರಾಚಾರ್ಯವಿರಚಿತ

ಉಪದೇಶಸಾಹಸ್ರಿ

(ಗದ್ಯಪ್ರಬಂಧ)

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ,
ಮುಂತಾದವುಗಳೊಡನೆ

ಬರೆದವರು:
ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳವರು

ಅಧ್ಯಾತ್ಮಗ್ರಂಥಾವಳಿಯ ಕ್ರಮಾಂಕ ೧೯

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ
೧೯೪೯

ಮೊದಲನೆಯ ಸಂಸ್ಕರಣ ೧೯೪೯
(೧೦೦೦ ಪ್ರತಿಗಳು)

ಇವರ ಪಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು
All Rights Reserved

ಮುದ್ರಣಕಾರರು:
ವೈ. ನರಸಪ್ಪ,
ಅಧ್ಯಾತ್ಮಪ್ರಕಾಶ ಮುದ್ರಣಾಲಯ,
ಹೊಳೆನರಸೀಪುರ.

ಪೀಠಿಕೆ

ಉಪದೇಶಸಾಹಸ್ರಿಯ ಸ್ಥಾನ

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನ ಮಾಲೆಯಲ್ಲಿ ಪ್ರಕಟವಾಗುತ್ತಿರುವ ಶ್ರೀ ಶಂಕರಭಗವತ್ಪಾದರವರ ಪ್ರಕರಣಗಳಲ್ಲಿ ಗದ್ಯಪದ್ಯರೂಪವಾಗಿರುವ ಉಪದೇಶಸಾಹಸ್ರಿಗೆ ಅಗ್ರಸ್ಥಾನವನ್ನು ಕೊಟ್ಟಿರುವದಕ್ಕೆ ಪ್ರಬಲವಾದ ಕಾರಣಗಳಿವೆ. ಗದ್ಯಪದ್ಯಗಳಿರಡೂ ಆಚಾರ್ಯರ ಕೃತಿಗಳೇ ಎನ್ನುವದಕ್ಕೆ ಗ್ರಂಥಗಳ ಶೈಲಿ, ವಿಷಯ– ಮುಂತಾದವುಗಳು ಪ್ರಸ್ಥಾನತ್ರಯಭಾಷ್ಯಗಳಷ್ಟೇ ಪ್ರಸನ್ನಗಂಭೀರವಾಗಿಯೂ ಯುಕ್ತ್ಯನುಭವಗಳಿಂದ ಸಂಪೃಕ್ತವಾಗಿಯೂ ಇರುವದಲ್ಲದೆ, ಪದ್ಯಭಾಗವು ಆಚಾರ್ಯರ ಬೆಂಬಳಿಯ ಶಿಷ್ಯರಾದ ಸುರೇಶ್ವರಾಚಾರ್ಯರವರ ವಾರ್ತಿಕದಲ್ಲಿ ಉದಾಹೃತವಾಗಿರುವದು ಇಂಥ ಕಾರಣಗಳಲ್ಲಿ ಮುಖ್ಯವಾದದ್ದು.

ಗದ್ಯಪ್ರಬಂಧದ ವಿಷಯ

ಗದ್ಯಭಾಗದಲ್ಲಿರುವ ಮೂರು ಪ್ರಕರಣಗಳು ವೇದಾಂತದ ಶ್ರವಣಮನನ ನಿದಿಧ್ಯಾಸನಗಳನ್ನು ಹೇಗೆ ಮಾಡಬೇಕೆಂಬುದನ್ನು ಉತ್ತಮರೀತಿಯಲ್ಲಿ ತಿಳಿಸುತ್ತವೆ. ಆಗಮಪ್ರಧಾನವಾಗಿರುವ **"ಶಿಷ್ಯಪ್ರತಿಬೋಧನವಿಧಿ"**ಯಲ್ಲಿ ವೇದಾಂತವಾಕ್ಯಗಳನ್ನು ಏಕವಾಕ್ಯತೆಮಾಡಿ ಸಿದ್ಧಾಂತವನ್ನು ಸ್ಥಾಪಿಸಿರುತ್ತದೆ. ಯುಕ್ತಿಪ್ರಧಾನವಾದ **"ಕೂಟಸ್ಥಾದ್ವಯಾತ್ಮಬೋಧ"**ದಲ್ಲಿ ಆತ್ಮಾನಾತ್ಮರ ಇತರೇತರಾಧ್ಯಾಸ, ಆತ್ಮನ ಅವಸ್ತುತತ್ವ, ಆತ್ಮನ ಅಸಂಹತತ್ವ ಮತ್ತು ಚೈತನ್ಯಸ್ವರೂಪತ್ವ, ಪ್ರಮಾತೃಪ್ರಮೇಯಾ ಕೂಟಸ್ಥಚೈತನ್ಯವೇ ಎಂಬುದು– ಇಷ್ಟನ್ನೂ ಅಬಾಧಿತವಾದ ಯುಕ್ತಿಗಳಿಂದ ಸಾಧಿಸಿಕೊಟ್ಟಿರುತ್ತದೆ. ಮೂರನೆಯ ಪ್ರಕರಣವಾದ **"ಪರಿಸಂಖ್ಯಾನ"**ದಲ್ಲಿ ಮುಮುಕ್ಷುಗಳು ಮಾಡಬೇಕಾದ ಅದ್ವೈತಾನುಸಂಧಾನದ ಪ್ರಕಾರವನ್ನು ಉಪದೇಶಿಸಿದೆ. ಶ್ರುತಿಯುಕ್ತ್ಯನುಭವಗಳ ಆಧಾರದಿಂದ ರಚಿಸಿರುವದರಿಂದಲೇ ಪ್ರಕರಣತ್ರಯರೂಪವಾದ **ಈ** ಗ್ರಂಥವು ಭಾಷ್ಯಗ್ರಂಥಗಳಂತೆಯೇ ಒಂದು ಅಮೂಲ್ಯ ಆಕರಗ್ರಂಥವೆಂದು ಹಿಡಿಯಲು ತಕ್ಕದ್ದಾಗಿದೆಯೆಂಬುದು ಮನಮುಟ್ಟಿ ಓದಿದವರಿಗೆಲ್ಲ ಸ್ಫುಟವಾಗಿ ತೋರುತ್ತದೆ.

ಗ್ರಂಥದಲ್ಲಿ ವಿಚಾರಣೀಯಾಂಶಗಳು

ಈ ಗ್ರಂಥದಲ್ಲಿ ಪೂರ್ವಾಪರವಿರೋಧವಾಗಲಿ ಭಾಷ್ಯಪ್ರಸ್ಥಾನವಿರೋಧವಾಗಲಿ ಎಲ್ಲಿಯೂ ಕಂಡುಬರುವದಿಲ್ಲ. ಆದರೂ ಜಿಜ್ಞಾಸುಗಳು ಎಚ್ಚರಿಕೆ

ಯಿಂದ ಮನನಮಾಡುವದಕ್ಕೆ ಯೋಗ್ಯವಾದಮುಖ್ಯ ವಿಷಯಗಳಲ್ಲಿ ಪರಮ ಹಂಸಪಾರಿವ್ರಾಜ್ಯ, ಪ್ರಮಾತೃತ್ವವಿಚಾರ, ಪರಿಸಂಖ್ಯಾನ– ಈ ಮೂರನ್ನು ಇಲ್ಲಿ ಸಂಕ್ಷೇಪವಾಗಿ ವಿಮರ್ಶಿಸುವದು ಅವಶ್ಯವಾಗಿರುತ್ತದೆ. ಈ ವಿಷಯಗಳನ್ನು ಇಲ್ಲಿ ಇಟ್ಟಿರುವ ರೀತಿಯನ್ನು ಭಾಷ್ಯಗ್ರಂಥಗಳಲ್ಲಿ ಪ್ರತಿಪಾದಿಸಿರುವ ರೀತಿಗೆ ಹೋಲಿಸುವದರಿಂದ ಲಾಭವಿದೆ.

(೧) ಪರಮಹಂಸಪಾರಿವ್ರಾಜ್ಯ

ಭಾಷ್ಯಗ್ರಂಥಗಳಲ್ಲಿ ಅಲ್ಲಲ್ಲಿ ಪ್ರತಿಪಾದಿಸಿರುವಂತೆ ಇಲ್ಲಿಯೂ ಪರಮ ಹಂಸಪಾರಿವ್ರಾಜ್ಯವನ್ನು ಜ್ಞಾನಾಂಗವಾಗಿ ಬೋಧಿಸಿದೆ ಎಂಬುದನ್ನು ನಾವು ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಶಿಷ್ಯನ ಲಕ್ಷಣದಲ್ಲಿ* (೨) ಏಷಣಾತ್ರಯವನ್ನು ತ್ಯಾಗಮಾಡಿದ ಪರಮಹಂಸಪರಿವ್ರಾಜಕನಾಗಿರಬೇಕೆಂದು ತಿಳಿಸಿರುತ್ತದೆ. ಆಚಾರ್ಯನ ಲಕ್ಷಣದಲ್ಲಿ (೫) ಸರ್ವಕರ್ಮಸಾಧನತ್ಯಾಗವನ್ನು ಹೇಳಿದೆ. ಶಿಷ್ಯನು ಗುರುವಿಗೆ ತಿಳಿಸಿರುವ ತನ್ನ ವೃತ್ತಾಂತದಲ್ಲಿ (೯) 'ನಾನು ಪರಮ ಹಂಸಪರಿವ್ರಾಜಕನಾಗಿರುವೆನು' ಎಂದು ಹೇಳಿದೆ. ಗುರುವು 'ಕರ್ಮತ್ಯಾಗವೇ ಶಾಸ್ತ್ರದ ಉಪದೇಶ' ಎಂದಿರುತ್ತಾನೆ. ಇದನ್ನೆಲ್ಲ ಮನದಂದರೆ ಪರಮಹಂಸ ಪಾರಿವ್ರಾಜ್ಯವು ಜಿಜ್ಞಾಸುವಿಗೆ ಆವಶ್ಯಕವೆಂದು ಆಚಾರ್ಯರ ಅಭಿಪ್ರಾಯವಿತ್ತೆಂದು ಆಗುತ್ತದೆ.

ಇಲ್ಲಿ ಒಂದು ಶಂಕೆಯುಂಟಾಗುವ ಸಂಭವವಿದೆ: ಶಿಷ್ಯನು ತಾನು ಪರಮಹಂಸನಾಗಿರುವೆನೆಂದು ಮೊದಲು ಹೇಳಿಕೊಂಡಿದ್ದರೂ 'ಕರ್ಮಗಳನ್ನೂ ಅವಕ್ಕೆ ಸಾಧನವಾಗಿರುವ ಯಜ್ಞೋಪವೀತಾದಿಗಳನ್ನೂ ಹೇಗೆ ಬಿಡಲಿ?' ಎಂದು ಒಮ್ಮೆ (೨೩) ಕೇಳಿರುತ್ತಾನೆ. ಈ ವ್ಯಾಹತಿಯನ್ನು ಹೇಗೆ ತಪ್ಪಿಸಿಕೊಳ್ಳಬೇಕು? ಮೊದಲು ಪರಮಹಂಸಪರಿವ್ರಾಜಕನಾಗಿರುತ್ತೇನೆಂದು ಹೇಳಿಕೆಯನ್ನು ಮಾರ್ಪಡಿಸಿ 'ಪರಿವ್ರಾಜಕನಾಗಿರುತ್ತೇನೆ' ಎಂದಿಷ್ಟೇ ಹೇಳಿದನೆಂದು ಇಟ್ಟುಕೊಂಡು ಅಧಿಕಾರಿಯು ಯಜ್ಞೋಪವೀತಸಹಿತನಾಗಿರುವ ಪರಿವ್ರಾಜಕನು ಎಂಬ ಅರ್ಥವನ್ನು ಮಾಡಿದರೆ ಹೇಗೋ ಹೊಂದಿಸಬಹುದು. ಏಕೆಂದರೆ ಬೃಹದಾರಣ್ಯಕಭಾಷ್ಯದಲ್ಲಿ ಯಜ್ಞೋಪವೀತವಿರುವ ಸಂನ್ಯಾಸವನ್ನೂ

---

* ಇಲ್ಲಿ ಕಂಸದಲ್ಲಿ ಕೊಟ್ಟಿರುವ ಸಂಖ್ಯೆಗಳು ಗ್ರಂಥಭಾಗವನ್ನು ಸೂಚಿಸುವವು. ಈ ಸಂಖ್ಯೆಗಳು ವ್ಯಾಖ್ಯಾನಗಳಲ್ಲಿರುವ ಸಂಖ್ಯೆಗಳಲ್ಲ. ವಿಷಯವನ್ನು ನಾವು ಒಡೆದು ಕೊಂಡು ಅದಕ್ಕೆ ಅನುಗುಣವಾಗಿ ಅನುಕ್ರಮಸಂಖ್ಯೆಗಳನ್ನು ಸ್ವತಂತ್ರವಾಗಿಯೇ ಹಾಕಿರುತ್ತೇವೆ.

ಒಪ್ಪಿಕೊಂಡಿರುವದು ಕಂಡುಬರುತ್ತದೆ. ಆದರೆ ಈಗ ನಮಗೆ ದೊರೆತಿರುವ ಅಚ್ಚಿನ ಪುಸ್ತಕಗಳಲ್ಲೆಲ್ಲ 'ಪರಮಹಂಸ' ಎಂಬ ಮಾತು ಇದ್ದೇ ಇದೆ. ಆದ್ದರಿಂದ ಈ ತೊಡಕನ್ನು ಹೇಗೆ ಬಿಡಿಸಬೇಕೆಂಬುದು ವಿಚಾರಣೀಯವಾಗಿರುತ್ತದೆ.

ಇದಂತಿರಲಿ. ಸಂನ್ಯಾಸಿಗಳಲ್ಲದವರಿಗೆ ವೇದಾಂತವಿಚಾರಕ್ಕೆ ಅಧಿಕಾರವೇ ಇಲ್ಲವೆ? ಎಂಬುದೊಂದು ಈ ಸಂದರ್ಭದಲ್ಲಿ ನಿರ್ಣಯಿಸಬೇಕಾದ ಪ್ರಶ್ನೆ. ಇದಕ್ಕೆ ಉತ್ತರವನ್ನು ಕಂಡುಹಿಡಿಯಬೇಕೆನ್ನುವವರು ಸಂನ್ಯಾಸವೆಂಬ ಶಬ್ದವನ್ನು ಆಚಾರ್ಯರು ಯಾವಯಾವ ಅರ್ಥದಲ್ಲಿ ಉಪಯೋಗಿಸಿರುತ್ತಾರೆಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ತತ್ತ್ವಜ್ಞಾನಿಯಾದ ಆಚಾರ್ಯನ ಪರಮಹಂಸಪಾರಿವ್ರಾಜ್ಯವು ಆತ್ಮಸ್ವರೂಪದಲ್ಲಿ ನೆಲೆನಿಲ್ಲುವದೆಂಬ ರೂಪದ್ದು; ಮುಮುಕ್ಷುವಾದ ಶಿಷ್ಯನಲ್ಲಿರಬೇಕಾದದ್ದು ಕರ್ತೃತ್ವಜ್ಞಾನಸಹಿತವಾಗಿಯೇ ಗಾರ್ಹಸ್ಥ್ಯಕರ್ಮಗಳನ್ನೆಲ್ಲ ತ್ಯಜಿಸಿ ಯಮನಿಯಮಾದಿಗಳನ್ನು ಅನುಷ್ಠಾನ ಮಾಡಬೇಕಾದದ್ದು (ಗೀ. ಭಾ. ೫-೧). ಸರ್ವಕಾಮಗಳನ್ನೂ ತ್ಯಾಗಮಾಡಲಾರದೆ ಧ್ಯಾನಯೋಗಕ್ಕೆ ಇನ್ನೂ ಏರದೆ ಇರುವವರು ಮಾಡತಕ್ಕದ್ದೋ ಎಂದರೆ ಕರ್ಮಫಲತ್ಯಾಗರೂಪದ್ದು (ಗೀ.ಭಾ. ೧೨-೧೨). **ಹೀಗೆ ಆಚಾರ್ಯರು ಸಂನ್ಯಾಸವನ್ನು ಬೇರೆಬೇರೆಯ ಮೆಟ್ಟಿಲುಗಳಾಗಿ ತೋರಿಸಿರುತ್ತಾರೆ.** ಇದನ್ನು ಮನಸ್ಸಿಗೆ ತಂದುಕೊಂಡವರಿಗೆ ಮಾತ್ರ ಈ ವಿಷಯದಲ್ಲಿ ಆಚಾರ್ಯರವರ ಅಭಿಪ್ರಾಯವು ಪೂರ್ಣವಾಗಿ ಹೊಳೆಯುವದು. ಆತ್ಮಜ್ಞಾನನಿಷ್ಠೆಗೆ ಪರಮಹಂಸರೇ ವಿಶೇಷಾಧಿಕಾರಿಗಳಾದರೂ ಜ್ಞಾನಮಾತ್ರಕ್ಕೆ ಸರ್ವಾಶ್ರಮಿಗಳೂ ಅಧಿಕಾರಿಗಳೆಂಬ ತೈತ್ತಿರೀಯಭಾಷ್ಯೋಕ್ತಿಯ ಸ್ವಾರಸ್ಯವೂ ಅಂಥವರಿಗೆ ಮಾತ್ರ ಅರಿಕೆಯಾಗುವದು.

(೨) ಪ್ರಮಾತೃತ್ವವಿಚಾರ

ಶಾರೀರಕಮೀಮಾಂಸಾಭಾಷ್ಯದ ಉಪೋದ್ಘಾತದಲ್ಲಿ ಅಧ್ಯಾಸನಿರೂಪಣವನ್ನು ಮಾಡುವಾಗ ಪ್ರಮಾತೃತ್ವವು ಅವಿದ್ಯಾಪುರಸ್ಸರವೆಂದು (ಬ್ರ. ಸೂ. ಭಾ. ಭಾ. ೫) ಪ್ರತಿಪಾದಿಸಿರುತ್ತದೆ. ಆದರೆ ಈ ಗ್ರಂಥದಲ್ಲಿ ಅರಿವು, ಅರಿಯುವಾತನು– ಈ ಎರಡೂ ನಿತ್ಯಚೈತನ್ಯಸ್ವರೂಪವೇ (೫೦, ೫೧) ಎಂದಿದೆ. ಈ ಎರಡು ಮತಗಳು ಒಂದಕ್ಕೊಂದು ವಿರುದ್ಧವಲ್ಲವೆ? ಇದನ್ನೂ ಜಿಜ್ಞಾಸುಗಳು ವಿಚಾರಮಾಡಬೇಕು. ಇಲ್ಲಿ ನಿಜವೇನೆಂದರೆ, ಅಧ್ಯಾಸಭಾಷ್ಯದಲ್ಲಿ ಪ್ರಮಾಣವ್ಯವಹಾರವು ಅವಿದ್ಯಾಪುರಸ್ಸರವೆಂದು ತೋರಿಸುವದಕ್ಕಾಗಿ, ತಾರ್ಕಿಕರು ಒಪ್ಪಿರುವ ಪ್ರಮಾತೃತ್ವವು–ಪ್ರಮಾಶ್ರಯತ್ವ ಮತ್ತು ಪ್ರಮಾಣವ್ಯಾಪಾರಯಿತೃತ್ವವು– ಅವಿದ್ಯಕವೆಂದು ಹೇಳಿರುತ್ತದೆ. ಈ ಗ್ರಂಥದಲ್ಲಿ ಪ್ರಮಾತೃವಿನ ಪರ

ಮಾರ್ಥಸ್ವರೂಪವು ಕೂಟಸ್ಥಚೈತನ್ಯವೇ ಎಂದು ಹೇಳಿರುತ್ತದೆ. ಆದ್ದರಿಂದಲೇ ಇಲ್ಲಿ "ನ ತು ತಾರ್ಕಿಕಸಮಯೇ ಇವ ಅನ್ಯಾ ಉಪಲಬ್ಧಿಃ, ಅನ್ಯಃ ಉಪಲಬ್ಧಾ ಚ" (೫೧) ತಾರ್ಕಿಕರು ಒಪ್ಪಿರುವಂತೆ ಸಿದ್ಧಾಂತದಲ್ಲಿ ಅರಿವು ಬೇರೆ, ಅರಿವಾತನು ಬೇರೆ ಎಂಬುದಿಲ್ಲ– ಎಂದು ಹೇಳಿರುತ್ತದೆ. ಪ್ರಮೆಯು ಹೊಸದಾಗಿ ಉಂಟಾಗುವದಲ್ಲವೆಂದೂ ಅದು ಕೂಟಸ್ಥಚೈತನ್ಯಮಾತ್ರವೆಂದೂ (೫೨) ಅದು ಆತ್ಮಸ್ವರೂಪವೇ ಎಂದೂ (೫೬, ೫೮) ಇಲ್ಲಿ ಹೇಳಿರುವದನ್ನೂ ಹೀಗೆಯೇ ಹೊಂದಿಸಿಕೊಳ್ಳಬೇಕು. ಔಪಾಧಿಕವಾಗಿ ಉಂಟಾಗುವ ಪ್ರಮೆಯು ಆವಿದ್ಯಕವಾದರೂ ಸ್ವರೂಪದಿಂದ ಅದು ಕೂಟಸ್ಥಚೈತನ್ಯವೇ ಆಗಿರುತ್ತದೆ.

(೩) ಪರಿಸಂಖ್ಯಾನ

ಮೂರನೆಯ ಪ್ರಕರಣದಲ್ಲಿ ಹೇಳಿರುವ ಪರಿಸಂಖ್ಯಾನದ ಸ್ವರೂಪವೇನು? ಎಂಬುದೂ ಜಿಜ್ಞಾಸುಗಳು ವಿಮರ್ಶಿಸಿ ತಿಳಿಯತಕ್ಕದ್ದಾಗಿದೆ. ಏಕೆಂದರೆ ಇಲ್ಲಿ ಹೇಳಿರುವದು ಕೇವಲ ಭಾವನಾರೂಪವಾದ ಸಾಧನವಲ್ಲ. ಮುಮುಕ್ಷುಗಳು ಅಧ್ಯೈತವನ್ನು ಭಾವನೆಮಾಡಿದರೂ ಅವರಿಗೆ ಮಂಗಲವೇ ಆಗುವದರಲ್ಲಿ ಸಂಶಯವಿಲ್ಲ. ಆದರೂ ಗ್ರಂಥಕರ್ತರು ಶ್ರವಣಮನನಪ್ರಧಾನವಾದ ಗ್ರಂಥಗಳೆರಡನ್ನು ಬರೆದಬಳಿಕ ಇದನ್ನು ಬರೆದಿರುವದರಿಂದ ಇದು– ಭಾವನಾರೂಪವಾದ ಉಪಾಸನೆ ಎನ್ನುವದಕ್ಕಿಂತಲೂ– ವಸ್ತುಪರೀಕ್ಷಣೆಯಿಂದ ಅನುಭವಾರೂಢವಾಗಿ ಮಾಡಿಕೊಳ್ಳುವ ಚಿಂತನವಿಶೇಷವೇ ಎಂದು ಬಗೆಯುವದು ಯುಕ್ತವಾಗಿರುತ್ತದೆ.

ಅವಿದ್ಯಾನಿಮಿತ್ತದಿಂದ ರಾಗಾದಿದೋಷಗಳು ಉಂಟಾಗುವವು (೬೮) ಎಂದು ಹೇಳಿದಬಳಿಕ ಈ ಗ್ರಂಥಕರ್ತರು ಶಬ್ದಾದಿವಿಷಯಗಳು ತಮ್ಮ ರೂಪದಿಂದಲೂ (೭೦) ತಮ್ಮ ಪರಿಣಾಮವಿಶೇಷಗಳಾದ ಶರೀರೇಂದ್ರಿಯಾಂತಃಕರಣಗಳ ರೂಪದಿಂದಲೂ (೭೧) ಸಂಹತವಾಗಿ ಪರತಂತ್ರವಾಗಿರುವ ಅಚೇತನವಾಗಿರುವದರಿಂದ, ಅಸಂಹತನೂ ಸ್ವತಂತ್ರನೂ ಆಗಿರುವ ಚೈತನ್ಯಸ್ವರೂಪನಾದ ಆತ್ಮನಿಗೆ ಅವುಗಳಿಂದ ಯಾವ ವಿಕಾರವೂ ಆಗಲಾರದು ಎಂಬುದನ್ನು ತಿಳಿಸಿ ಆತ್ಮನು ಅವಿಕಾರ್ಯನಾಗಿರುವದರಿಂದಲೂ ಅವನಲ್ಲಿ ಯಾವ ಹಾನಿವೃದ್ಧಿಗಳೂ ಆಗಲಾರವು ಎಂದಿದಾರೆ. ಕೊನೆಯಲ್ಲಿ **"ಅನಾತ್ಮನಶ್ಚ ಅಸತ್ತ್ವಾತ್ ಇತಿ ಪರಮೋ ಹೇತುಃ । ಆತ್ಮನಶ್ಚ ಅದ್ವಯತ್ವ ವಿಷಯಾಣಿ ದ್ವಯಸ್ಯ ಅಸತ್ತ್ವಾತ್ ಯಾನಿ ಸರ್ವಾಣಿ ಉಪನಿಷದ್ ವಾಕ್ಯಾನಿ ವಿಸ್ತರಶಃ ಸಮೀಕ್ಷಿತವ್ಯಾನಿ ಸಮೀಕ್ಷಿತವ್ಯಾನಿ ॥"** ಎಂದು ಉಪಸಂಹಾರಮಾಡಿರುತ್ತಾರೆ. ಅನಾತ್ಮವು ಅಸತ್ತಾಗಿರುವದರಿಂದ ಆತ್ಮನು

ಅದ್ವಿತೀಯನೆಂಬುದನ್ನೇ. ತಿಳಿಸುವ ಉಪನಿಷದ್ವಾಕ್ಯಗಳನ್ನೇ ಆಲೋಚಿಸುತ್ತಿರ ಬೇಕು ಎಂದು ಒತ್ತಿಹೇಳಿರುವದರಿಂದ ಇದು ಅನುಭವಾವಸಾನವಾದ ನಿಧಿಧ್ಯಾ ಸನವೇ ಎಂದು ನಿಶ್ಚಯವಾಗುತ್ತದೆ.

ಗ್ರಂಥದ ಈ ಸಂಸ್ಕರಣದ ವಿಶೇಷ

ಉಪದೇಶಸಾಹಸ್ರಿಯ ಗದ್ಯಭಾಗವನ್ನು ಬೆಂಗಳೂರಿನಲ್ಲಿರುವ ಶ್ರೀಯುತ **ಯಜಮಾನ್ ಗರಡಿ ದೊ. ಮುದ್ದುರಾಜಪ್ಪನವರ ಪ್ರೋತ್ಸಾಹದಿಂದ** ವಿಸ್ತಾರವಾದ ಕನ್ನಡವ್ಯಾಖ್ಯಾನದೊಡನೆ ಈಗ ಸುಮಾರು ಹದಿನೇಳುವರ್ಷಗಳ ಹಿಂದೆಯೇ ಪ್ರಕಟಿಸಿದ್ದೆನು. ಪ್ರತಿಗಳು ಇನ್ನೂ ಸಿಕ್ಕುತ್ತವೆಯಾದ್ದರಿಂದ ಹೆಚ್ಚಿನ ವಿವರವನ್ನು ಬಯಸುವವರು ಆ ಗ್ರಂಥವನ್ನೇ ಓದಬೇಕು. ಆದರೆ ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲೆಗಾಗಿ ಸಜ್ಜುಗೊಳಿಸಿರುವ ಈ ಪ್ರಕಟನೆಯಲ್ಲಿ ಸಂಸ್ಕೃತಮೂಲವನ್ನು ಪಾಠಾಂತರನಿರ್ದೇಶಪೂರ್ವಕವಾಗಿ ಪರಿಷ್ಕರಿಸಿ ಸೇರಿಸಿರುತ್ತದೆ. ಹಿತಮಿತವಾಗಿರುವ ಟಿಪ್ಪಣಿಗಳೊಡನೆ ಪರಿ ಶೋಧಿತವಾದ ಕನ್ನಡದ ಅನುವಾದವನ್ನೂ ಪ್ರಕರಣಗಳ ಸಾರವನ್ನೂ ಬರೆದಿರುತ್ತದೆ. ಗ್ರಂಥದ ಕೊನೆಯಲ್ಲಿರುವ ಶಬ್ದಾನುಕ್ರಮಣಿಕೆಯೂ ಮೊದಲಿನಲ್ಲಿರುವ ಪೀಠಿಕೆಯೂ ಈ ಗ್ರಂಥಕ್ಕಾಗಿಯೇ ಬರೆದವುಗಳಾಗಿವೆ. ಉಪದೇಶ ಸಾಹಸ್ರಿಯ ಪದ್ಯಭಾಗವೂ ಈ ಸಂಪುಟದಲ್ಲಿಯೇ ಇರುವದರಿಂದ ಈ ಎರಡು ಗ್ರಂಥಗಳಿಗೂ ಇರುವ ಸಂಬಂಧವನ್ನು ತಿಳಿಮಾಡಿಕೊಳ್ಳಬೇಕೆಂಬ ವಾಚಕರಿಗೆ ಇದು ಅನುಕೂಲವಾಗಿರುವದೆಂದು ನಂಬಲಾಗಿದೆ. ಈಗಿನ ರೂಪದಲ್ಲಿ ಗ್ರಂಥವು ಸಂಕ್ಷೇಪಾಪೇಕ್ಷಿಗಳಾದ ಪಾಠಕರಿಗೆ ಹೆಚ್ಚು ಪ್ರಯೋಜನಕರವಾಗಿದೆ ಎಂದು ನನಗೆ ಭರವಸೆಯಿದೆ. ಗ್ರಂಥವನ್ನು ಅಚ್ಚಿಗೆ ಸಿದ್ಧಪಡಿಸುವದಕ್ಕೆ **ಶ್ರೀಯುತ ಪಿ.ಎನ್. ನರಸಿಂಹಯ್ಯನವರು** ಎಂದಿನಂತೆ ಸಹಾಯವನ್ನಿತ್ತಿರುವದಕ್ಕಾಗಿ ಅವರಿಗೆ ಅನುವಾದಕನು ಕೃತಜ್ಞನಾಗಿರುತ್ತಾನೆ.

ಅಧ್ಯಾತ್ಮಕುಟೀರ,
ವಿರೋಧಿಸಂವತ್ಸರದ ಜ್ಯೇಷ್ಠ ಶುದ್ಧ ೧೧

ಸಚ್ಚಿದಾನಂದಸರಸ್ವತೀ

ವಿಷಯಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಮೂಲದ ಭಾಗಗಳನ್ನು ಸೂಚಿಸುವವು.

೧. ಶಿಷ್ಯಪ್ರತಿಬೋಧನವಿಧಿ

ಪ್ರಕರಣಾನುಬಂಧಗಳು (೧)– ಶಿಷ್ಯನ ಲಕ್ಷಣ (೨)– ಗುರುವಿನಿಂದ ಬಂದ ಜ್ಞಾನವೇ ಪ್ರಯೋಜನಕಾರಿ(೩)– ಜ್ಞಾನವು ಹಿಡಿಯದಿರುವದಕ್ಕೆ ಕಾರಣವೂ ಅದಕ್ಕೆ ಪರಿಹಾರವೂ(೪)– ಆಚಾರ್ಯನ ಲಕ್ಷಣ (೫)– ಪರಮಾತ್ಮೈಕ್ಯದ ಮತ್ತು ಪರಮಾತ್ಮಲಕ್ಷಣದ ಉಪದೇಶ (೬)– ದೇಹಾತ್ಮವಾದನಿರಾಸ (೮–೯)– ಆತ್ಮನು ಶರೀರಕ್ಕಿಂತ ಬೇರೆಯಾಗಿರುವನು (೧೦)– ಆತ್ಮನಿಗೆ ಜಾತಿ, ವಂಶ, ಸಂಸ್ಕಾರ ಮುಂತಾದವುಗಳಿಲ್ಲ (೧೧)– ಪರಮಾತ್ಮನೇ ನಮ್ಮೆಲ್ಲರ ಆತ್ಮನು (೧೨)– ಶರೀರದ ಸ್ವರೂಪಸಮರ್ಥನೆಗಾಗಿ ಸೃಷ್ಟಿಕ್ರಮವರ್ಣನೆ (೧೩)– ಆಕಾಶಾದಿಗಳಿಗೂ ಪರಮಾತ್ಮನಿಗೂ ಸಂಬಂಧ (೧೪)– ವಾಯ್ವಾದಿಭೂತಗಳ ಉತ್ಪತ್ತಿ (೧೫)– ಶರೀರದ ಉತ್ಪತ್ತಿ (೧೬)– ಶರೀರಕ್ಕೆ ಜಾತ್ಯನ್ವಯಸಂಸ್ಕಾರಗಳು (೧೭)– ಮನಸ್ಸೂ ಇಂದ್ರಿಯಗಳೂ ನಾಮರೂಪಾತ್ಮಕವೇ (೧೮)– ಜೀವನು ಪರಮಾತ್ಮನೇ ಆದ್ದರಿಂದ ಜಾತ್ಯಾದಿರಹಿತನು (೧೯)– ಭೇದಜ್ಞಾನವನ್ನು ಶ್ರುತಿಯಲ್ಲಿ ನಿಂದಿಸಿದೆ (೧೯)– ಭೇದಜ್ಞಾನವು ಸಂಸಾರಕ್ಕೂ ಅಭೇದಜ್ಞಾನವು ಮೋಕ್ಷಕ್ಕೂ ಕಾರಣ (೨೦)– ಕರ್ಮತ್ಯಾಗವೇ ಶಾಸ್ತ್ರದ ಉಪದೇಶ (೨೧)– ಶಾಸ್ತ್ರದಲ್ಲಿ ಕರ್ಮನಿವೃತ್ತಿಯನ್ನು ಹೇಳಿದೆ ಎಂಬುದು ಹೇಗೆ? (೨೨)– ಶಂಕೆ: ಆತ್ಮೈಕ್ಯಜ್ಞಾನವು ಪ್ರತ್ಯಕ್ಷವಿರುದ್ಧವಲ್ಲವೆ ? (೨೩)– ಆತ್ಮನಲ್ಲಿ ವೇದನೆಯು ಪ್ರತ್ಯಕ್ಷವಾಗಿಲ್ಲ (೨೪)– ವೇದನೆಗೆ ಆಶ್ರಯವು ಅಂತಃಕರಣವು, ಆತ್ಮನಲ್ಲ (೨೫)– ಜೀವನು ಪರಮಾತ್ಮನೇ (೨೬)– ದ್ವೈತವು ಅವಿದ್ಯಾಕೃತವಾದದ್ದು (೨೭)– ಶ್ರುತಿಯಲ್ಲಿ ಸಾಧ್ಯಸಾಧನಗಳನ್ನೂ ಉತ್ಪತ್ತ್ಯಾದಿಗಳನ್ನೂ ಹೇಳಿರುವದೇಕೆ ? (೨೮)– ಪರಮಾರ್ಥದರ್ಶನಕ್ಕೆ ಏಷಣಾತ್ರಯತ್ಯಾಗವು ಬೇಕು (೨೯) ಪುಟ ೧–೩೯

ಒಂದನೆಯ ಪ್ರಕರಣದ ಸಾರ ಪುಟ ೪೦–೪೨

೨. ಕೂಟಸ್ಥಾದ್ವಯಾತ್ಮಬೋಧ*

ಅವಿದ್ಯೆಯೇ ಸಂಸಾರಕ್ಕೆ ನಿಮಿತ್ತ (೩೦–೩೩)– ಅವಿದ್ಯೆಗೆ ಆತ್ಮನೇ ವಿಷಯ (೩೪–೩೬)– ಅಧ್ಯಾರೋಪಕ್ಕೆ ಪ್ರಸಿದ್ಧವಸ್ತುವೇ ಬೇಕೆಂಬುದಿಲ್ಲ (೩೭)– ಅಹಂಪ್ರತ್ಯಯವಿಷಯನು ಅಪ್ರಸಿದ್ಧನೆಂಬುದು ಹೇಗೆ ? (೩೮–೩೯)– ಅನ್ಯೋನ್ಯಾಧ್ಯಾಸದಲ್ಲಿ ಅಸದ್ವಾದಪ್ರಸಂಗವಿಲ್ಲ (೪೦–೪೨)– ಆತ್ಮನು ಸ್ವತಃಸಿದ್ಧನಾಗಿರುವದರಿಂದ ಆರೋಪಣೆಯಾಗಬಹುದು (೪೩)– ಅವಿದ್ಯೆಗೆ ಆತ್ಮನೇ ಆಶ್ರಯ (೪೪)– ಆತ್ಮನು ಚೈತನ್ಯರೂಪನಾದ್ದರಿಂದ ಪರಾರ್ಥನಲ್ಲ(೪೫–೪೬)

---

* ಉಪಸಂಹಾರದ ಪುಷ್ಪಿಕೆಯಲ್ಲಿ ಇದನ್ನು 'ಅವಗತಿಪ್ರಕರಣ'ವೆಂದು ಅಚ್ಚಿನ ಪುಸ್ತಕಗಳು ಕರೆದಿವೆ.

ಆತ್ಮನು ಚೈತನ್ಯಸ್ವರೂಪನು, ಚೈತನ್ಯಗುಣಪುಳ್ಳವನಲ್ಲ (೪೭-೫೦)- ಆತ್ಮನಿಗಿಂತ ಬೇರೆಯಾದ ಅರಿವು ಇಲ್ಲ (೫೧-೫೨)- ಅವಿದ್ಯೆಯಿಂದಲೇ ಆತ್ಮನಲ್ಲಿ ಅರಿವೆಂಬ ವಿಕಾರವಾಗುವದು (೫೩)- ಎಚ್ಚರಕನಸುಗಳಿಂದ ಆತ್ಮನಲ್ಲಿ ವಿಕಾರವಿಲ್ಲ (೫೪)- ಆತ್ಮನ ಚೈತನ್ಯವು ಆಗಂತುಕವಲ್ಲ (೫೫-೫೬)- ಆತ್ಮನು ಸ್ವತಃಸಿದ್ಧನು (೫೭)- ಆತ್ಮನ ಅರಿವು ನಿತ್ಯವಾಗಿರುತ್ತದೆ (೫೮)- ಪ್ರಮಾತೃವು ಪ್ರಮಾಣಸಿದ್ಧನೆಂಬ ಪಕ್ಷದಲ್ಲಿ ದೋಷ (೫೯)- ಆತ್ಮನ ವಿಷಯದಲ್ಲಿ ಪ್ರಮೆಯುಂಟಾಗಬೇಕೆಂದರೆ ದೋಷ (೬೦)- ಆತ್ಮನಲ್ಲಿರುವ ಪ್ರಮಾತೃತ್ವವು ಔಪಚಾರಿಕ (೬೧)- ಪ್ರಮಾತೃವಿಷಯದಲ್ಲಿ ಆಕ್ಷೇಪಸಮಾಧಾನಗಳು (೬೨-೬೩)- ದೇಹಾದಿಗಳು ಪ್ರಮಾಣಸಿದ್ಧವೇ (೬೪)- ಅರಿವು ಪ್ರಮಾಣದ ಫಲವೆನ್ನುವದು ಹೇಗೆ? (೬೫)- ಉಪಸಂಹಾರ (೬೬-೬೭) ಪುಟ ೪೩-೪೫

ಎರಡನೆಯ ಪ್ರಕರಣದ ಸಾರ ಪುಟ ೪೬-೪೯

೩. ಪರಿಸಂಖ್ಯಾನ

ಗ್ರಂಥಾರಂಭಪ್ರತಿಜ್ಞೆ (೬೮)- ವಿಷಯವಿಷಯಿಗಳ ವಿಂಗಡ (೬೯)- ಬಾಹ್ಯಪರಿಸಂಖ್ಯಾನಕ್ರಮ (೭೦)- ಆಧ್ಯಾತ್ಮಿಕಪರಿಸಂಖ್ಯಾನ (೭೧)- ಅವಿಕಾರ್ಯತ್ವಪರಿಸಂಖ್ಯಾನ (೭೨) ಪುಟ ೪೦-೪೭

ಮೂರನೆಯ ಪ್ರಕರಣದ ಸಾರ ಪುಟ ೪೮

ಶಬ್ದಾನುಕ್ರಮಣಿಕೆ ಪುಟ ೪೯-೫೦೪

ಸಂಕೇತಗಳ ವಿವರಣೆ

ಉಪನಿಷತ್ತುಗಳನ್ನು ಮೊದಲನೆಯ ಅಕ್ಷರದಿಂದ ತಿಳಿಸಿದೆ.
ಉದಾಹರಣೆಗೆ ಈ = ಈಶಾವಾಸ್ಯೋಪನಿಷತ್ತು, ಛಾಂ.= ಛಾಂದೋಗ್ಯೋಪ
ನಿಷತ್ತು, ಕೌ.= ಕೌಷೀತಕ್ಯುಪನಿಷತ್ತು, ಇತ್ಯಾದಿ.

ಸಂಕೇತ	ವಿವರಣೆ
ಅ॥	ಅಷ್ಟೇಕರ್ ಕಂಪೆನಿ(ಪೂನ) "ಶ್ರೀ ಶಂಕರಾಚಾರ್ಯವಿರಚಿತ ಪ್ರಕರಣಗ್ರಂಥಸಂಗ್ರಹ"ದ ಪಾಠ
ಆ. ಧ. ಸೂ.	ಆಪಸ್ತಂಬಧರ್ಮಸೂತ್ರ
ಗೀ.	ಭಗವದ್ಗೀತೆ
ತೈ. ಆ.	ತೈತ್ತಿರೀಯಾರಣ್ಯಕ
ತೈ. ನಾ.	ತೈತ್ತಿರೀಯೋಪನಿಷತ್ತು ನಾರಾಯಣಪನ್ನ
ನಿ॥	ನಿರ್ಣಯಸಾಗರಮುದ್ರಣಾಲಯದಲ್ಲಿ ಅಚ್ಚಾಗಿರುವ ಗದ್ಯಪದ್ಯಾತ್ಮಕ ಉಪದೇಶಸಾಹಸ್ರಿಯ ಪಾಠ
ಭಾ.	ಭಾಷ್ಯ.
ಮೈ॥	ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಅಚ್ಚಾಗಿರುವ ಗದ್ಯ ಪದ್ಯಾತ್ಮಕ ಉಪದೇಶಸಾಹಸ್ರಿಯ ಪಾಠ
ವಾ॥	ವಾಣಿವಿಲಾಸ ಮುದ್ರಣಾಲಯದಲ್ಲಿ ಅಚ್ಚಾಗಿರುವ ಶ್ರೀ ಶಂಕರಾಚಾರ್ಯ ಕೃತಿಗಳಲ್ಲಿ ಹದಿನಾಲ್ಕನೆಯ ಸಂಪುಟದಲ್ಲಿರುವ ಉಪದೇಶಸಾಹಸ್ರಿಯ ಪಾಠ.

———o———

॥ ಓಂ ॥

ಉಪದೇಶಸಾಹಸ್ರಿ

(ಗದ್ಯಪ್ರಬಂಧ)

೧. ಶಿಷ್ಯಪ್ರತಿಬೋಧನವಿಧಿ

ಪ್ರಕರಣಾನುಬಂಧಗಳು

(ಮೂಲ)

ಅಥ ಮೋಕ್ಷಸಾಧನೋಪದೇಶವಿಧಿಂ ವ್ಯಾಖ್ಯಾಸ್ಯಾಮೋ ಮುಮುಕ್ಷೂಣಾಂ ಶ್ರದ್ಧಾನಾನಾಮ್ ಅಧಿನಾಮ್ ಅರ್ಥಾಯ॥೧॥

(ಅರ್ಥ)

ಈಗ ಶ್ರದ್ಧೆಯುಳ್ಳವರೂ (ಶಾಸ್ತ್ರಜ್ಞಾನವನ್ನು) ಬಯಸುವವರೂ ಆಗಿರುವ ಮುಮುಕ್ಷುಗಳ ಪ್ರಯೋಜನಕ್ಕಾಗಿ ಮೋಕ್ಷಸಾಧನವನ್ನು ಉಪದೇಶಿಸುವ ಬಗೆಯನ್ನು ವಿವರಿಸುವೆವು.[1]

ಶಿಷ್ಯನ ಲಕ್ಷಣ

(ಮೂಲ)

ತದಿದಂ ಮೋಕ್ಷಸಾಧನಂ ಜ್ಞಾನಂ ಸಾಧನಸಾಧ್ಯಾತ್ ಅನಿತ್ಯಾತ್ ಸರ್ವಸ್ಮಾತ್ ವಿರಕ್ತಾಯ ತ್ಯಕ್ತಪುತ್ರವಿತ್ತಲೋಕೈಷ-

1. ಮೋಕ್ಷಸಾಧನವನ್ನು ಉಪದೇಶಿಸುವ ವಿಧಾನವು ವಿಷಯವೆಂದಿರುವದರಿಂದ ಇದು ಉಪದೇಶಕರಿಗೆಂದು ಅರ್ಥವಾಗುತ್ತದೆ. ಆದರೆ ಆಚಾರ್ಯರು ಕೃತಕೃತ್ಯರಾಗಿರುವದರಿಂದ ಶಿಷ್ಯರಿಗೆ ಪ್ರಯೋಜನವಾಗುವ ಜ್ಞಾನವನ್ನು ಉಪದೇಶಿಸುತ್ತೇವೆಂಬುದರಲ್ಲಿಯೇ ತಾತ್ಪರ್ಯವಿದೆ. ಜ್ಞಾನವು ವಿಷಯ, ಮೋಕ್ಷವು ಪ್ರಯೋಜನ, ಅಪ್ರಯೋಜನವನ್ನು ಬಯಸುವ ಯೋಗ್ಯಶಿಷ್ಯರು ಅಧಿಕಾರಿಗಳು; ಜ್ಞಾನವನ್ನು ಉಪದೇಶಿಸುವದೇ ಗ್ರಂಥದ ಸಂಬಂಧ.

ಸ್ಮಾಯ ಪ್ರತಿಪನ್ನಪರಮಹಂಸಪಾರಿವ್ರಾಜ್ಯಾಯ ಶಮದಮಾದಿಯುಕ್ತಾಯ ಶಾಸ್ತ್ರಪ್ರಸಿದ್ಧಶಿಷ್ಯಗುಣಸಂಪನ್ನಾಯ ಶುಚಯೇ ಬ್ರಾಹ್ಮಣಾಯ ವಿಧಿವತ್ ಉಪಸನ್ನಾಯ ಶಿಷ್ಯಾಯ ಜಾತಿಕರ್ಮವೃತ್ತವಿದ್ಯಾಭಿಜನೈಃ ಪರೀಕ್ಷಿತಾಯ ಬ್ರೂಯಾತ್ ಪುನಃಪುನಃ ಯಾವತ್ ಗ್ರಹಣಂ ವೃಧ್ದೀಭವತಿ। ಶ್ರುತಿಶ್ಚ "ಪರೀಕ್ಷ್ಯ ಲೋಕಾನ್ [1] ....ತತ್ತ್ವತೋ ಬ್ರಹ್ಮವಿದ್ಯಾಮ್" (ಮುಂ. ೧-೨-೧೨) ಇತಿ ॥ ೨ ॥

(ಅರ್ಥ)

೨ ಈ ಮೋಕ್ಷಸಾಧನವಾದ ಜ್ಞಾನವನ್ನು (ಯಾವದಾದರೊಂದು) ಸಾಧನದಿಂದ ಸಾಧ್ಯವಾಗಿ ಅನಿತ್ಯವಾಗಿರುವ ಎಲ್ಲದರಿಂದಲೂ ವಿರಕ್ತನಾಗಿ ಪುತ್ರ, ವಿತ್ತ, ಲೋಕಗಳು[2] ಇವುಗಳ ಏಷಣೆಯನ್ನು [3] ಬಿಟ್ಟು ಪರಮಹಂಸಪಾರಿವ್ರಾಜ್ಯವನ್ನು [4] ಹೊಂದಿ, ಶಮೆ, ದಮೆ, ದಯೆ – ಮುಂತಾದವುಗಳಿಂದ ಕೂಡಿ, ಶಾಸ್ತ್ರಪ್ರಸಿದ್ಧವಾಗಿರುವ ಶಿಷ್ಯಗುಣಗಳಿಂದೊಡಗೂಡಿ ಶುಚಿಯಾದ ಬ್ರಾಹ್ಮಣನಾಗಿರುವ [5] ವಿಹಿತವಾಗಿರುವ ರೀತಿಯಲ್ಲಿ ಉಪಸನ್ನನಾಗಿರುವ [6] ಶಿಷ್ಯನಿಗೆ ಜಾತಿ, ಕರ್ಮ, ನಡತೆ, ವಿದ್ಯೆ, ಕುಲ – ಇವುಗಳನ್ನು [7] ಪರೀಕ್ಷಿಸಿ (ಅವನಿಗೆ ಹೇಳಿದ್ದು) ತಿಳಿದು ಗಟ್ಟಿಯಾಗುವವರೆಗೂ ಪುತ್ತೆನುತ್ತೆ ಹೇಳಬೇಕು. "(ಕರ್ಮದಿಂದಾಗುವ) ಲೋಕಗಳನ್ನು ಪರೀಕ್ಷಿಸಿ (ಅವುಗಳಲ್ಲಿ ಬ್ರಾಹ್ಮಣನು ವೈರಾಗ್ಯವನ್ನು ಹೊಂದಬೇಕು. ಸಾಧನದಿಂದ ನಿತ್ಯವಾದ ಮೋಕ್ಷವು ಸಿದ್ಧವಾಗದು. ಅದನ್ನು ತಿಳಿದುಕೊಳ್ಳುವದಕ್ಕಾಗಿ ಗುರುವಿನ ಬಳಿಗೇ ಹೋಗಬೇಕು. ಗುರುವು) ಯಥಾರ್ಥವಾಗಿ ಬ್ರಹ್ಮವಿದ್ಯೆಯನ್ನು (ತಿಳಿಸಬೇಕು)" (ಮುಂ. ೧–೨–೧೨) ಎಂದು ಶ್ರುತಿಯೂ ಇದೆ.

1. 'ಲೋಕಾನ್' ಎಂಬ ಮಾತು ಆ॥ ನಿ॥ ಪಾಠದಲ್ಲಿ ಸೂತ್ರ ಇದೆ.

2. ಈ ಲೋಕದ ಜಯಕ್ಕಾಗಿ ಪುತ್ರ, ಪಿತೃಲೋಕಕ್ಕಾಗಿ ಕರ್ಮರೂಪವಾದ ವಿತ್ತ, ದೇವಲೋಕಕ್ಕಾಗಿ ಉಪಾಸನಾರೂಪವಾದ ವಿತ್ತ– ಈ ಮೂರರ ಜಯಕೆಯನ್ನು ಬಿಟ್ಟವರು ಜ್ಞಾನಕ್ಕೆ ಅಧಿಕಾರಿಗಳು.

3. ಏಷಣಾತ್ರಯವಿಚಾರಕ್ಕೆ ಬೃ. ೪-೪-೨೨ ನೋಡಿ.

4. ಜ್ಞಾನಕ್ಕೋಸ್ಕರವಾಗಿ ಸರ್ವಕರ್ಮಸಂನ್ಯಾಸವನ್ನು ಮಾಡಿ ಹೊಂದುವ ಆಶ್ರಮವಿದು. ಇದನ್ನು 'ವಿವಿದಿಷಾಸಂನ್ಯಾಸ' ಎಂದು ಕರೆಯುತ್ತಾರೆ.

5. ಬ್ರಾಹ್ಮಣನಿಗೆ ಜ್ಞಾನದಲ್ಲಿ ವಿಶೇಷಾಧಿಕಾರವಿರುತ್ತದೆ; ಮಿಕ್ಕವರಿಗೆಲ್ಲರಿಗೂ ಸಾಮಾನ್ಯಾಧಿಕಾರವಿದೆ.

6. ಗುರುವಿನ ಬಳಿಗೆ ಶಿಷ್ಯನಾಗಿ ಬಂದು ಸಂಸ್ಕಾರವನ್ನು ಹೊಂದಿರುವ. ಮುಂ. ಭಾ. ೧-೧-೩.

7. ಜಾತ್ಯಾದಿಗಳು ಹಿಂದಿನ ಆಶ್ರಮಕ್ಕೆ ಸಂಬಂಧಪಟ್ಟವು.

ಗುರುವಿನಿಂದ ಬಂದ ಜ್ಞಾನವೇ ಪ್ರಯೋಜನಕಾರಿ

(ಮೂಲ)

ದೃಷ್ಟಗೃಹೀತಾ ಽಪಿ ವಿದ್ಯಾ ಆತ್ಮನಃ ಶ್ರೇಯಸೇ ಸನ್ತತ್ಯೈ ಚ ಭವತಿ। ವಿದ್ಯಾಸನ್ತತಿಶ್ಚ ಪ್ರಾಣ್ಯನುಗ್ರಹಾಯ ಭವತಿ ಸೌರಿವ ನದೀಂ ತಿತೀರ್ಷೋಃ। ಶಾಸ್ತ್ರಂ ಚ "ಯಾವ್ಯಪ್ಯಸ್ಯಾ ಇಮಾಮುದ್ಧಿಃ ಸರಿಗ್ಭಿರ್ಗೃಹೀತಾಂ ಧನಸ್ಯ ಪೂರ್ಣಾಂ ದದ್ಯಾದೇತತೇವ ತತೋ ಽಭೂಯಃ" (ಛಾಂ. ೩-೧೧-೬) ಇತಿ। ಅನ್ಯಥಾ ಚ ಜ್ಞಾನಪ್ರಾಪ್ತ್ಯಭಾವಾತ್। "ಆಚಾರ್ಯವಾನ್ ಪುರುಷೋ ವೇದ" (ಛಾಂ. ೬-೧೪-೨), "ತಸ್ಯೈವಾಚಾರ್ಯಾದ್ವಿದ್ಯಾ ವಿದಿತಾ" (ಛಾಂ. ೪-೯-೩) "ಆಚಾರ್ಯಾತ್ ಹ್ಯೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪಯತಿ" (?)[1] ಇತ್ಯಾದಿಶ್ರುತಿಭ್ಯಃ। "ಉಪದೇಕ್ಷ್ಯನ್ತಿ ತೇ ಜ್ಞಾನಮ್" (ಗೀ. ೪-೩೪) ಇತ್ಯಾದಿಸ್ಮೃತೇಶ್ಚ ॥ ೩ ॥

(ಅರ್ಥ)

(ಬ್ರಹ್ಮ)ವಿದ್ಯೆಯನ್ನು ಗ್ರಹಿಸಿದ್ದು ದೃಢವಾದರೇ ತನಗೆ ಶ್ರೇಯಸ್ಸಾಗುವದಕ್ಕೂ[2] ಮುಂದೆ ಮುಂದೆ ಬೆಳೆಯುವದಕ್ಕೂ (ಕಾರಣ)ವಾಗುತ್ತದೆ. ವಿದ್ಯೆಯು ಮುಂದೆ ಮುಂದೆ ಬೆಳೆಯುವದಾದರೋ ನದಿಯನ್ನು ದಾಟಲಿಕ್ಕೆಸುವವನಿಗೆ ತೆಪ್ಪವು ಹೇಗೋ (ಹಾಗೆ) ಜೀವರುಗಳ ಅನುಗ್ರಹಕ್ಕೆ (ಕಾರಣ) ವಾಗುತ್ತದೆ.[3] "ಸಮುದ್ರದಿಂದ ಸುತ್ತುವರಿಯಲ್ಪಟ್ಟಿರುವ ಧನವು ಪೂರ್ಣವಾಗಿರುವ ಈ (ಭೂಮಿ)ಯನ್ನೇ ದಾನಮಾಡಲಿ, ಅದಕ್ಕಿಂತಲೂ ಈ (ವಿದ್ಯಾದಾನವೇ) ಹೆಚ್ಚಿನದು" (ಛಾಂ. ೩-೧೧-೬) ಎಂದು ಶಾಸ್ತ್ರವೂ ಇದೆ. (ಆಚಾರ್ಯನ ಉಪದೇಶವಿಲ್ಲದೆ) ಬೇರೆ ಬಗೆಯಿಂದ ಜ್ಞಾನಪ್ರಾಪ್ತಿಯಾಗುವದಿಲ್ಲವಾದ್ದರಿಂದಲೂ (ಉಪದೇಶಿಸಬೇಕು). "ಆಚಾರ್ಯವಂತನಾದ ಪುರುಷನೇ

1. ಈ ಶ್ರುತಿ ಯಾವದೋ ತಿಳಿಯದು. ತಿಳಿಯುವೆ ಇರುವ ಸ್ಥಾನವನ್ನು ಸೂಚಿಸುವದಕ್ಕೆ (?) ಈ ಚಿಹ್ನೆಯನ್ನು ಉಪಯೋಗಿಸಿದೆ. ನಿ॥ ಪಾಠದಲ್ಲಿ ಇದನ್ನು ಎರಡು ವಾಕ್ಯಗಳಾಗಿ ತಪ್ಪಾಗಿ ಒಡೆದಿರುತ್ತದೆ.

2. ಮುಕ್ತಿಯು ದೊರೆಯುವದಕ್ಕೂ.

3. ಆಚಾರ್ಯನಿಗೆ ಆದರಿಂದ ಆಗಬೇಕಾದ ಬೇರೆಯು ಪ್ರಯೋಜನವು ಯಾವದೂ ಇರುವದಿಲ್ಲ.

ಅರಿತುಕೊಳ್ಳುತ್ತಾನೆ" (ಛಾಂ. ೬-೧೪-೨) "ಆಚಾರ್ಯನಿಂದಲೇ ತಿಳಿದು ಕೊಂಡ ವಿದ್ಯೆಯು (ಉತ್ತಮಗತಿಯನ್ನು ಹೊಂದಿಸುವದು)" (ಛಾಂ. ೪-೯-೩), "ಆಚಾರ್ಯನೇ ದಾಟಿಸತಕ್ಕವನು, ಜ್ಞಾನವೇ ಇಲ್ಲಿ ದೋಣಿ ಎನಿಸುತ್ತದೆ" (?) ಮುಂತಾದ ಶ್ರುತಿಗಳಿಂದ (ಇದು ಸಿದ್ಧವಾಗುತ್ತದೆ),"(ತತ್ತ್ವದರ್ಶಿಗಳಾದ ಜ್ಞಾನಿ ಗಳಿರುವರಲ್ಲ), ಅವರು ನಿನಗೆ ಜ್ಞಾನವನ್ನು ಉಪದೇಶಿಸುವರು" (ಗೀ. ೪-೩೪) -ಮುಂತಾದ ಸ್ಮೃತಿಯಿಂದಲೂ (ಸಿದ್ಧವಾಗುತ್ತದೆ).

ಜ್ಞಾನವು ಹಿಡಿಯದಿರುವದಕ್ಕೆ ಕಾರಣವೂ ಅದಕ್ಕೆ ಪರಿಹಾರವೂ

(ಮೂಲ)

ಶಿಷ್ಯಸ್ಯ ಜ್ಞಾನಾಗ್ರಹಣಂ ಚ ಲಿಙ್ಗೈರ್ಬುದ್ಧ್ವಾ ತ್ಯಾಗಸ್ಯ ಚ ಹೇತೂನ್ ಅಧರ್ಮಲೌಕಿಕಪ್ರಮಾದನಿತ್ಯಾನಿತ್ಯವಿವೇಕವಿಷಯಾ-ಸಂಜಾತದೃಢಪೂರ್ವಶ್ರುತತ್ವಲೋಕಚಿನ್ತಾವೇಕ್ಷಣಜಾತಾದ್ಯಭಿ-ಮಾನಾದೀನ್ ತತ್ಪ್ರತಿಪಕ್ಷೈಶ್ಚ ಶ್ರುತಿಸ್ಮೃತಿವಿಹಿತೈಃ ಅಪನಯೇತ್ ಅಕ್ರೋಧಾದಿಭಿರಹಿಂಸಾದಿಭಿಶ್ಚ ಯಮೈಶ್ಚ ಜ್ಞಾನಾಭಿರುದ್ಧೈರ್ಯಕ್ತ ನಿಯಮೈಃ। ಅಮಾನಿತ್ವಾದಿಗಣಂ[1] ಚ ಜ್ಞಾನೋಪಾಯಂ ಸಮ್ಯಗ್ ಗ್ರಾಹಯೇತ್ ॥ ೪ ॥

(ಅರ್ಥ)

ಶಿಷ್ಯನಿಗೆ ಜ್ಞಾನವು ಹಿಡಿಯಲಿಲ್ಲವೆಂಬುದನ್ನು (ಆಯಾ) ಚಿಹ್ನೆಗಳಿಂದ ತಿಳಿದುಕೊಂಡು ಹಾಗೆ ಹಿಡಿಯದೆ ಇರುವದಕ್ಕೆ ಕಾರಣ(ವಾಗಿರ ಬಹುದಾದ) ಅಧರ್ಮ, ಲೌಕಿಕ(ವಿಷಯದಲ್ಲಿ ಆಸಕ್ತಿ), ಸಾವಧಾನವಾಗಿಲ್ಲ ದಿರುವದು, '(ಇದು) ನಿತ್ಯ, (ಇದು) ಅನಿತ್ಯ' ಎಂಬುದನ್ನು ಪಿಂಗಡಿಸಿ (ಆ) ವಿಷಯದಲ್ಲಿ (ಈ) ಮೊದಲೇ ಗಟ್ಟಿಯಾದ ತಿಳಿವಳಿಕೆಯನ್ನು (ಸಂಪಾದಿಸಿ) ಕೊಳ್ಳದೆ ಇರುವದು, ಜನರ ಚಿಂತೆಗಳನ್ನು ಹೆಚ್ಚಾಗಿ ಹಚ್ಚಿಕೊಂಡಿರುವದು ಜಾತಿ ಮುಂತಾದವುಗಳಲ್ಲಿರುವ ಅಭಿಮಾನ-ಇವೇ ಮುಂತಾದವುಗಳನ್ನು ಇವಕ್ಕೆ ವಿರುದ್ಧವಾದವುಗಳೆಂದು ಶ್ರುತಿಸ್ಮೃತಿಗಳಲ್ಲಿ ತಿಳಿಸಿರುವ ಅಕ್ರೋಧಾದಿಗಳೆಂಬ

1. 'ಗುಣಮ್' ಎಂದಿರುವ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
2. ಅ. ಧ ಸೂ. ೧-೨೩-೬.

ಮತ್ತು ಆಹಿಂಸಾದಿಗಳೆಂಬ ಯಮಗಳಿಂದಲೂ ಜ್ಞಾನಕ್ಕೆ ವಿರುದ್ಧವಲ್ಲದ ನಿಯಮಗಳಿಂದಲೂ ಹೋಗಲಾಡಿಸಬೇಕು. ಜ್ಞಾನಕ್ಕೆ ಸಾಧನವಾಗಿರುವ ಅಮಾನಿತ್ವವೇ ಮುಂತಾದವುಗಳ[1] ಗುಂಪನ್ನು ಚೆನ್ನಾಗಿ ತಿಳಿಸಿಕೊಡಬೇಕು.

ಆಚಾರ್ಯನ ಲಕ್ಷಣ

(ಮೂಲ)

ಆಚಾರ್ಯಸ್ತು ಬ್ರಹ್ಮಾಪ್ತೋಪಸಂಗ್ರಹಾಧಾರಣಾನುದಯಂ ವಯಾನುಗ್ರಹಾದಿಸಂಪನ್ನೋ ಲಬ್ಧಾಗಮಃ. ವೈಷ್ಣವೈಷ್ಟ ಭೋಗೇಷು ಅನಾಸಕ್ತಃ, ತ್ಯಕ್ತಸರ್ವಕರ್ಮಸಾಧನೋ ಬ್ರಹ್ಮವಿತ್ ಬ್ರಹ್ಮಣಿ ಸ್ಥಿತಃ. ಅಭಿನ್ನವೃತ್ತ್ಯೋ ದಸ್ಯ ದರ್ಶಕಾದಿತ್ಯಮಾಯಾ ಮಾತ್ಸರ್ಯಾನೃತಾಹಬುದ್ಧ್ಯಾರಮಮುತ್ಪಾದಯೋಷಣಾರಹಿತ[2] ಕೇವಲ ಪರಾನುಗ್ರಹಪ್ರಯೋಜನಃ. ಪಿಪ್ಪೋಷಯೋಗಾಧಿಕೃ — ೫ ॥

(ವಿವರಣೆ)

ಆಚಾರ್ಯನಾದವನೋ (ಜೀಕಾದವನನ್ನು) ಉಪಸಿಕೊಳ್ಳುವದು, (ಜೀಡವಾದವನ್ನು) ನಿರಾಕರಿಸುವದು, (ವಿಷಯವನ್ನು) ತಿಳಿದುಕೊಳ್ಳುವದು, ನೆನಪಿನಲ್ಲಿಟ್ಟುಕೊಳ್ಳುವದು, ಶಮ, ದಮ, ದಯೆ, ಅನುಗ್ರಹ– ಮುಂತಾದವುಗಳಿಂದ ಕೂಡಿದವನೂ, ಆಗಮವನ್ನು[3] ಪಡೆದುಕೊಂಡಿರುವವನೂ ಕಂಡಿರುವ (ಈ ಲೋಕದ) ಮತ್ತು ಕಾಣದ (ಪರಲೋಕದ) ಭೋಗಗಳಲ್ಲಿ ಆಸಕ್ತಿಯಿಲ್ಲದವನೂ, ಕರ್ಮದ ಸರ್ವಸಾಧನಗಳನ್ನೂ[4] ಬಿಟ್ಟವನೂ ಬ್ರಹ್ಮವನ್ನು ಅರಿತುಕೊಂಡು ಬ್ರಹ್ಮದಲ್ಲಿ ನೆಲೆನಿಂತವನೂ (ಲೋಕದ) ಆಚಾರದ (ಎಲ್ಲೆಯನ್ನು) ಮೀರದವನೂ ದಂಭ, ದರ್ಪ, ಮೋಸ, ಕಕ್ಕುಲಾಯಿ, ಹೊಟ್ಟೆಕಿಚ್ಚು, ಸುಳ್ಳು, ನಾನುನನ್ನದೆಂಬ ಅಭಿಮಾನ– ಮುಂತಾದ ದೋಷಗಳಿಲ್ಲದವನೂ ಮತ್ತೊಬ್ಬರಿಗೆ ಅನುಗ್ರಹ(ಮಾಡಬೇಕೆಂಬು)ದೊಂದೇ ಪ್ರಯೋಜನದಿಂದ ವಿದ್ಯೆಯನ್ನು ವಿನಿಯೋಗಮಾಡಲೆಳಸುವವನೂ (ಆಗಿರುವವನು).

---

1. ಗೀ. ೧೩-೭ರಲ್ಲಿ ಹೇಳಿರುವ ಜ್ಞಾನಸಾಧನಗಳನ್ನು.
2. ಪ್ಯೆ॥ ಹೊರತು ಉಳಿದ ಪುಸ್ತಕಗಳಲ್ಲೆಲ್ಲ 'ವರ್ಜಿತಃ' ಎಂದಿಷ್ಟೇ ಇದೆ.
3. ಗುರುಪರಂಪರಾಗತವಾದ ತತ್ತ್ವೋಪದೇಶವನ್ನು.
4. ಯಜ್ಞೋಪವೀತ, ನಿವೀತ, ಪ್ರಾಚೀನಾವೀತ– ಎಂಬ ಕರ್ಮಸಾಧನಗಳನ್ನು.

ಪರಮಾತ್ಮೈಕ್ಯದ ಮತ್ತು ಪರಮಾತ್ಮಲಕ್ಷಣದ ಉಪದೇಶ

(ಮೂಲ)

ಪೂರ್ವಮ್ ಉಪದಿಶೇತ್-- "ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್" (ಛಾಂ. ೬-೨-೧), "ಯತ್ರ ನಾನ್ಯತ್ ಪಶ್ಯತಿ" (ಛಾಂ. ೭-೨೪-೧), ಆತ್ಮೈವೇದಂ ಸರ್ವಮ್" (ಛಾಂ. ೭-೨೫-೨), "ಆತ್ಮಾ ವಾ ಇದಮೇಕ ಏವಾಗ್ರ ಆಸೀತ್" (ಐ. ೧-೧), "ಸರ್ವಂ ಖಲ್ವಿದಂ ಬ್ರಹ್ಮ" (ಛಾಂ. ೩-೧೪-೧). ಇತ್ಯಾದ್ಯಾಃ ಆತ್ಮೈಕ್ಯಪ್ರತಿಪಾದನಪರಾಃ ಶ್ರುತೀಃ ॥ ೬ ॥

(ಅರ್ಥ)

(ಇಂಥ ಆಚಾರ್ಯನು ಶಿಷ್ಯನಿಗೆ) "ಸೋಮ್ಯನೆ, ಮೊದಲು ಈ (ಪ್ರಪಂಚವು) ತನಗೆರಡನೆಯದಿಲ್ಲದ ಸತ್ತೊಂದೇ ಆಗಿದ್ದಿತು" (ಛಾಂ. ೬-೨-೧). "ಎಲ್ಲಿ ಮತ್ತೊಂದನ್ನು ಕಾಣುವದಿಲ್ಲವೋ....(ಅದೇ ಭೂಮವು)" (ಛಾಂ. ೭-೨೪-೧), "ಇದೆಲ್ಲವೂ ಆತ್ಮನೇ" (ಛಾಂ. ೭-೨೫-೨), "ಇದು ಮೊದಲು ಆತ್ಮನೊಬ್ಬನೇ ಆಗಿದ್ದಿತು" (ಐ. ೧-೧), "ಇದೆಲ್ಲವೂ ಬ್ರಹ್ಮವೇ ಅಲ್ಲವೆ?" (ಛಾಂ. ೩-೧೪-೧)- ಎಂಬಿವೇ ಮುಂತಾದ ಆತ್ಮೈಕ್ಯವನ್ನು ತಾತ್ಪರ್ಯದಿಂದ ತಿಳಿಸುವ ಶ್ರುತಿಗಳನ್ನು ಉಪದೇಶಿಸಬೇಕು.

(ಮೂಲ)

ಉಪದಿಶ್ಯ ಚ ಗ್ರಾಹಯೇತ್ ಬ್ರಹ್ಮಣೋ ಲಕ್ಷಣಮ್- "ಯ ಆತ್ಮಾ ಅಪಹತಪಾಪ್ಮಾ" (ಛಾಂ. ೮-೭-೧), "ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ" (ಬೃ. ೩-೪-೧, ೩-೫-೧). "ಯೋಽಶನಾಯಾಪಿಪಾಸೇ" (ಬೃ. ೩-೫-೧), "ನೇತಿ ನೇತಿ"[೨] (ಬೃ. ೨-೩-೬). "ಅಸ್ಥೂಲಮನಣು" (ಬೃ. ೩-೮-೮), "ಸ ಏಷ ನೇತಿ ನೇತಿ"[೨] (ಬೃ. ೪-೪-೨೬, ೪-೨-೪, ೪-೪-೨೨, ೪-೫-೧೫), "ಅದೃಷ್ಟಂ ದ್ರಷ್ಟೃ"

---

1. ಇದು ಉಪಾಸನಾವಾಕ್ಯವಾದರೂ ಜ್ಞಾನವಾಕ್ಯಗಳಾದ "ಈಶಾವಾಸ್ಯ ಮಿದಂ ಸರ್ವಮ್" ಮುಂತಾದ ವಾಕ್ಯಗಳಿಗೆ ಅನುಗುಣವಾಗಿದೆಯೆಂದು ಉದಾಹರಿಸಿರಬಹುದೆಂದು ತೋರುತ್ತದೆ.

೨. ಮೈ॥ ವಾ॥ ಗಳ ಹೊರತು ಮಿಕ್ಕವುಗಳಲ್ಲಿ 'ನೇತಿ' ಎಂಬುದು ಒಂದೇ ಸಲ ಇದೆ.

(ಬೃ. ೩-೪-೧೧), "ವಿಜ್ಞಾನಮಾನನ್ದಮ್"[1] (ಬೃ. ೩-೯-೨೮), "ಸತ್ಯಂ ಜ್ಞಾನಮನನ್ತಮ್"[1] (ತೈ. ೨-೧), "ಆದೃಶ್ಯೇಽನಾತ್ಮ್ಯೇ" (ತೈ. ೨-೭), "ಸ ವಾ ಏಷ ಮಹಾನಜ ಆತ್ಮಾ" (ಬೃ. ೪-೪-೨೨), "ಅಪ್ರಾಣೋ ಹ್ಯಮನಾಃ" (ಮುಂ. ೨-೧-೨), "ಸ ಬಾಹ್ಯಾಭ್ಯನ್ತರೋ ಹ್ಯಜಃ" (ಮುಂ. ೨-೧-೨), "ವಿಜ್ಞಾನಘನ ಏವ" (ಬೃ. ೨-೪-೧೨), "ಅನನ್ತರಮಬಾಹ್ಯಮ್" (ಬೃ. ೨-೫-೧೯, ೪-೪-೫), "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ"[2] (ಕೇ. ೧-೧-೩), "ಆಕಾಶೋ ವೈ ನಾಮ" (ಛಾಂ. ೮-೧೪-೧) ಇತ್ಯಾದಿಶ್ರುತಿಭ್ಯಃ। ಸ್ಮೃತಿಭಿಶ್ಚ- "ನ ಜಾಯತೇ ಮ್ರಿಯತೇ ವಾ"[3] (ಗೀ. ೨-೨೦), "ನಾದತ್ತೇ ಕಸ್ಯ ಚಿತ್ ಪಾಪಮ್" (ಗೀ. ೫-೧೫), "ಯಥಾಕಾಶಸ್ಥಿತೋ ನಿತ್ಯಮ್" (ಗೀ. ೯-೬), "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ" (ಗೀ. ೧೩-೨-), "ನ ಸತ್ತನ್ನಾಸದುಚ್ಯತೇ" (ಗೀ. ೧೩-೧೨), "ಅನಾದಿತ್ವಾನ್ನಿರ್ಗುಣತ್ವಾತ್" (ಗೀ. ೧೩-೩೦), "ಸಮಂ ಸರ್ವೇಷು ಭೂತೇಷು" (ಗೀ. ೧೩-೨೭), "ಉತ್ತಮಃ[4] ಪುರುಷಃ" (ಗೀ. ೧೫-೧೭), ಇತ್ಯಾದಿಭಿಃ ಶ್ರುತ್ಯುಕ್ತಲಕ್ಷಣಾವಿರುದ್ಧಾಭಿಃ ಪರಮಾತ್ಮಸಂಸಾರಿತ್ವಪ್ರತಿಪಾದನಪರಾಭಿಃ, ತಸ್ಯ ಸರ್ವೇಣ ಅನನ್ಯತ್ವಪ್ರತಿಪಾದನಪರಾಭಿಶ್ಚ ॥ ೭ ॥

(ಅರ್ಥ)

(ಹೀಗೆ) ಉಪದೇಶಮಾಡಿದಮೇಲೆ "ಯಾವ ಆತ್ಮನು ಪಾಪವಿಲ್ಲದವನೋ" (ಛಾಂ. ೮-೭-೧), "ಯಾವದು ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವೋ" (ಬೃ. ೩-೪-೧, ೩-೫-೧), "ಯಾವನು ಹಸಿವುನೀರಡಿಕೆಗಳನ್ನು (ವಿಕಾರಿರುವನೋ)" (ಬೃ. ೩-೫-೧), "ಇದಲ್ಲ. ಇದಲ್ಲ" (ಬೃ. ೨-೩-೬), "ಸ್ಥೂಲವಲ್ಲ, ಸೂಕ್ಷ್ಮವೂ ಅಲ್ಲ" (ಬೃ. ೩-೮-೮), "ಆ ಇವನೇ ಇದಲ್ಲ, ಇದಲ್ಲ (ಎಂದ ಆತ್ಮನು)" (ಬೃ. ೩-೯-೨೬, ೪-೨-೪, ೪-೪-೨೨, ೪-೫-೧೫), "ಕಾಣಲ್ಪಡದ್ದು, ನೋಡುವದು" (ಬೃ. ೩-೪-೧೧), "ವಿಜ್ಞಾನ

1. ಈ ಎರಡು ವಾಕ್ಯಗಳಲ್ಲಿ 'ಬ್ರಹ್ಮ' ಎಂಬ ಮಾತೂ ವಾ॥ ಪಾಠದಲ್ಲಿವೆ.
2. 'ಅಧಿ' ಎಂಬ ಮಾತು ವಾ॥ ಪಾಠದಲ್ಲಿ ಮಾತ್ರವಿದೆ.
3. ಮೈ॥ ವಾ॥ ಗಳಲ್ಲಿ ' ವಾ ' ಇಲ್ಲ.
4. ಆ॥ ವಾ॥ ಗಳಲ್ಲಿ 'ಅನ್ಯಃ' ಎಂದು ಹೆಚ್ಚಾಗಿದೆ.

ವೂ ಆನಂದವೂ (ಆದದ್ದು ಬ್ರಹ್ಮವು)" (ಬೃ. ೩-೯-೨೮), "ಸತ್ಯವೂ ಜ್ಞಾನವೂ ಅನಂತವೂ (ಆದ ಬ್ರಹ್ಮವು)" (ತೈ. ೨-೧), "(ಇಂದ್ರಿಯಗಳಿಗೆ) ಕಾಣದ, (ತನಗೆ ಬೇರೊಬ್ಬ) ಆತ್ಮನಿಲ್ಲದ" (ತೈ. ೨-೭), "ಆ ಈತನೇ ದೊಡ್ಡವನಾದ ಜನ್ಮರಹಿತನಾದ ಆತ್ಮನು" (ಬೃ. ೪-೪-೨೨), "ಪ್ರಾಣವಿಲ್ಲದವನು, ಮನಸ್ಸಿಲ್ಲದವನು" (ಮುಂ. ೭-೧-೨), "ಹೊರಗೂ ಒಳಗೂ ಇರುವ ಅಜನು" (ಮುಂ. ೭-೧-೨), "ವಿಜ್ಞಾನದ ಗಟ್ಟಿಯೇ" (ಬೃ. ೪-೪-೧೨), "(ತನಗೆ ಒಳಗಿಲ್ಲದ್ದು, ಹೊರಗಿಲ್ಲದ್ದು" (ಬೃ. ೪-೪-೧೯, ೩-೯-೪), "ಅದು ತಿರಿತದ್ದಕ್ಕಿಂತಲೂ ಜೀರೆಯೇ, ಅರಿಯಲ್ಪಡದ್ದಕ್ಕಿಂತಲೂ ಜೀರೆಯೇ" (ಕೇ. ೧-೧-೩), "ಆಕಾಶನೆಂಬ (ಬ್ರಹ್ಮವೇ ನಾಮರೂಪಗಳನ್ನು ನಿರ್ವಹಿಸುವದು)" (ಛಾ. ೮-೧೪-೧) ಇಜ್ಯೇ ನುಂತಾದ ಶ್ರುತಿಗಳಿಂದ ಬ್ರಹ್ಮದ ಲಕ್ಷಣವನ್ನು ತಿಳಿಸಿಕೊಡಬೇಕು.

ಮತ್ತು "ಹುಟ್ಟುವದಿಲ್ಲ, ಸಾಯುವದೂ ಇಲ್ಲ" (ಗೀ. ೨-೨೦), "ಯಾರ ಪಾಪವನ್ನೂ ತೆಗೆದುಕೊಳ್ಳುವದಿಲ್ಲ" (ಗೀ. ೫-೧೫), "ಹೇಗೆ (ವಾಯುವು) ಆಕಾಶದಲ್ಲಿ ಯಾವಾಗಲೂ ಇರುವದೋ" (ಗೀ. ೯-೬), "ಕ್ಷೇತ್ರಜ್ಞನೂ ನಾನೆಂದೇ ತಿಳಿ" (ಗೀ. ೧೩-೨), "ಅದು ಸತ್ತಲ್ಲ, ಅಸತ್ತೂ ಎನಿಸುವದಿಲ್ಲ" (ಗೀ. ೧೩-೧೨), "ಅನಾದಿಯಾಗಿರುವದರಿಂದಲೂ ನಿರ್ಗುಣವಾಗಿರುವದರಿಂದಲೂ" (ಗೀ. ೧೩-೩೧), "ಸರ್ವಭೂತಗಳಲ್ಲಿಯೂ ಸಮವಾಗಿರುವ (ಪರಮೇಶ್ವರನನ್ನು)" (ಗೀ. ೧೩-೨೭), "ಉತ್ತಮನಾದ ಪುರುಷನು" ಈ ಕ್ಷರಾಕ್ಷರಗಳಿಗಿಂತ ಬೇರೆ (ಗೀ. ೧೫-೧೭), ಎಂಬಿವೇ ಮುಂತಾದ ಶ್ರುತ್ಯುಕ್ತಲಕ್ಷಣಕ್ಕೆ ವಿರುದ್ಧವಲ್ಲದ, ಪರಮಾತ್ಮನು ಅಸಂಸಾರಿಯೆಂದು ತಾತ್ಪರ್ಯದಿಂದ ತಿಳಿಸುವ, ಸ್ಮೃತಿಗಳಿಂದಲೂ ಆ (ಪರಮಾತ್ಮನು) ಎಲ್ಲರಿಗೂ ಅನನ್ಯನೆಂಬುದನ್ನು ತಾತ್ಪರ್ಯದಿಂದ ತಿಳಿಸುವ (ಸ್ಮೃತಿಗಳಿಂದಲೂ ಬ್ರಹ್ಮಲಕ್ಷಣವನ್ನು ತಿಳಿಸಿಕೊಡಬೇಕು).

ಸ್ವಾತ್ಮನಾದನಿರಾಸ

(ಮೂಲ)

ಏವಂ ಶ್ರುತಿಸ್ಮೃತಿಭಿಃ ಗೃಹೀತಪರಮಾತ್ಮಲಕ್ಷಣಂ ತಿಷ್ಯಂ ಸಂಸಾರಸಾಗರಾತ್ ಉತ್ತಿತೀರ್ಷುಂ ಪೃಚ್ಛೇತ್- ಕಸ್ತ್ವಮಸಿ ಸೋಮ್ಯ ? ಇತಿ ॥ ೮ ॥

(ಅರ್ಥ)

ಹೀಗೆ ಶ್ರುತಿಗಳಿಂದಲೂ ಸ್ಮೃತಿಗಳಿಂದಲೂ ಪರಮಾತ್ಮನ ಲಕ್ಷಣವನ್ನು ತಿಳಿಸಿಕೊಟ್ಟಮೇಲೆ, ಸಂಸಾರಸಾಗರವನ್ನು ದಾಟಬೇಕೆಂದಿರವ (ಆ) ಶಿಷ್ಯನನ್ನು, ಆಯ್ಯ, ನೀನು ಯಾರು ?" ಎಂದು ಕೇಳಬೇಕು.

(ಮೂಲ)

ಸ ಯದಿ ಬ್ರೂಯಾತ್— ಬ್ರಾಹ್ಮಣಪುತ್ರಃ, ಅದೋಽನ್ವಯಃ, ಬ್ರಹ್ಮಚಾರೀ ಆಸಮ್, ಗೃಹಸ್ಥೋ ವಾ, ಇದಾನೀಮ್ ಅಸ್ಮಿ (ಪರಮಹಂಸ)[1] ಪರಿವ್ರಾಟ್, ಸಂಸಾರಸಾಗರಾತ್ ಜನ್ಮಮೃತ್ಯು ಮಹಾಗ್ರಾಹಾತ್ ಉತ್ತಿತೀರ್ಷುಃ ಇತಿ। ಆಚಾರ್ಯೋ ಬ್ರೂಯಾತ್ — ಇಹೈವ ತವ ಸೋಮ್ಯ ಮೃತಸ್ಯ ಶರೀರಂ ವಯೋಭಿರದ್ಯತೇ ಮೃದ್ಭಾವಂ ವಾ ಆಪದ್ಯತೇ। ತತ್ರ ಕಥಂ ಸಂಸಾರಾತ್ ಉದ್ಧರ್ತುಮ್ ಇಚ್ಛಸಿ ಇತಿ? ನ ಹಿ ನದ್ಯಾಃ ಅವರೇ ಕೂಲೇ ಭಸ್ಮೀಭೂತೇ ನದ್ಯಾಃ ಪಾರಂ ತರಿಷ್ಯಸಿ ಇತಿ ॥ ೯ ॥

(ಅರ್ಥ)

ಆತನು "ಬ್ರಾಹ್ಮಣಪುತ್ರನು, ಇಂಥ ವಂಶದವನು, ಹಿಂದೆ ಬ್ರಹ್ಮಚಾರಿಯಾಗಿದ್ದೆನು, ಅಥವಾ ಗೃಹಸ್ಥನಾಗಿದ್ದೆನು; ಈಗ ಹುಟ್ಟುಹೊಂದುಗಳಿಂಬ ದೊಡ್ಡ ಮೊಸಳೆಗಳಿರುವ ಸಂಸಾರಸಾಗರವನ್ನು ದಾಟಬೇಕೆಂಬ ಇಚ್ಛೆಯಿಂದ (ಪರಮಹಂಸ)ಪರಿವ್ರಾಜಕನಾಗಿರುವೆನು" ಎಂದು ಹೇಳಿದರೆ, ಆಚಾರ್ಯನು "ಅಯ್ಯ, (ನೀನು) ಸತ್ತರೆ ನಿನ್ನ ಶರೀರವನ್ನು ಇಲ್ಲಿಯೇ ಪಕ್ಷಿಗಳು ತಿಂದುಹಾಕಿಬಿಡುವವು; ಅಥವಾ (ಅದು) ಮಣ್ಣುಪಾಲಾಗಿಬಿಡುವದು. ಹೀಗಿರುವಲ್ಲಿ ಸಂಸಾರವನ್ನು ದಾಟಲೆಳಸಿರುವೆ ಎಂಬುದು ಹೇಗೆ? ನದಿಯ ಈಚೆಯ ದಡದಲ್ಲಿಯೇ ಸುಟ್ಟು ಬೂದಿಯಾಗುವದಾದರೆ ನದಿಯ ಆಚೆಯ ದಡವನ್ನು ಮುಟ್ಟುವದಾಗಲಾರದಷ್ಟೆ?" ಎಂದು ಕೇಳಬೇಕು.

ಆತ್ಮನು ಶರೀರಕ್ಕಿಂತ ಬೇರೆಯಾಗಿರುವನು

(ಮೂಲ)

ಸ ಯದಿ ಬ್ರೂಯಾತ್– ಅನ್ಯೋಽಹಂ ಶರೀರಾತ್। ಶರೀರಂ ತು ಜಾಯತೇ ಮ್ರಿಯತೇ ವಯೋಭಿರದ್ಯತೇ, ಮೃದ್ಭಾವಮಾಪದ್ಯತೇ,[2] ಶಸ್ತ್ರಾಗ್ನ್ಯಾದಿಭಿಶ್ಚ ವಿನಾಶ್ಯತೇ, ವ್ಯಾಧ್ಯಾದಿಭಿಶ್ಚ ಪ್ರ-

1. ಈ ಶಬ್ದವು ಇಲ್ಲಿರಬೇಕೆ?– ಎಂಬುದು ವಿಚಾರಣೀಯವಾಗಿದೆ. ಮುಂದೆ ೨೩ನೆಯ ಖಂಡದ ಅನುವಾದದ ಕೆಳಗಿನ ಟಿಪ್ಪಣಿಯನ್ನು ನೋಡಿ.

2. ನಿ॥ ಆ॥ ಪಾಠಗಳಲ್ಲಿಲ್ಲ.

ಯುಜ್ಯತೇ। ತಸ್ಮಿನ್ ಅಹಂ ಸ್ವಕೃತಧರ್ಮವಶಾತ್ ಪಕ್ಷೀ ನೀಡಮಿವ ಪ್ರವಿಷ್ಟಃ ಪುನಃಪುನಃ ಶರೀರವಿನಾಶೇ ಧರ್ಮಾಧರ್ಮವಶಾತ್ ಶರೀರಾನ್ತರಂ ಯಾಸ್ಯಾಮಿ ಪೂರ್ವನೀಡವಿನಾಶೇ ಪಕ್ಷೀವ ನೀಡಾನ್ತರಮ್। ಏವಮೇವ ಅಹಮ್ ಅನಾದೌ ಸಂಸಾರೇ ದೇವ-ಮನುಷ್ಯತಿರ್ಯಙ್ನಿರಯಸ್ಥಾನೇಷು ಸ್ವಕರ್ಮವಶಾತ್ ಉಪಾತ್ತಮ್ ಉಪಾತ್ತಂ ಶರೀರಂ ತ್ಯಜನ್ ನವಂ ನವಂ ಚ ಅನ್ಯತ್ ಉಪಾದದಾನಃ ಜನ್ಮಮರಣಪ್ರಬನ್ಧಚಕ್ರೇ ಘಟೀಯನ್ತ್ರವತ್ ಸ್ವಕರ್ಮಣಾ ಭ್ರಾಮ್ಯಮಾಣಃ, ಕ್ರಮೇಣ ಇದಂ ಶರೀರಮ್ ಆಸಾದ್ಯ ಸಂಸಾರಚಕ್ರಭ್ರಮಣಾತ್ ಆಸ್ಮಾತ್ ನಿರ್ವಿಣ್ಣಃ ಭಗವನ್ತಮ್ ಉಪಸನ್ನೋಽಸ್ಮಿ ಸಂಸಾರಚಕ್ರಭ್ರಮಣಪ್ರಶಮಾಯ। ತಸ್ಮಾತ್ ನಿತ್ಯ ಏವಾಹಂ ಶರೀರಾತ್ ಅನ್ಯಃ। ಶರೀರಾಣಿ ಆಗಚ್ಛನ್ತಿ, ಅಪಗಚ್ಛನ್ತಿ ಚ ವಾಸಾಂಸೀವ ಪುರುಷಸ್ಯ ಇತಿ। ಆಚಾರ್ಯೋ ಬ್ರೂಯಾತ್— ಸಾಧ್ವವಾದೀಃ। ಸಮ್ಯಕ್ ಪಶ್ಯಸಿ। ಕಥಂ ಮೃಷಾ ಅವಾದೀಃ ಬ್ರಾಹ್ಮಣಪುತ್ರಃ, ಅಮೋಽನ್ನಯಃ ಬ್ರಹ್ಮಚಾರೀ ಆಸಮ್, ಗೃಹಸ್ಥೋ ವಾ। ಇದಾನೀಮಸ್ಮಿ (ಪರಮಹಂಸ) ಪರಿವ್ರಾಡಿತಿ? ॥೧೨॥

(ಅರ್ಥ)

ಆಗ ಅವನು "ನಾನು ಶರೀರಕ್ಕಿಂತ ಬೇರೆಯಾಗಿಯೇ ಇರುವೆನು, ಶರೀರವು ಹುಟ್ಟುತ್ತದೆ, ಸಾಯುತ್ತದೆ; ಪಕ್ಷಿಗಳಿಗೆ ಆಹಾರನಾಗುತ್ತದೆ, ಮಣ್ಣು ಪಾಲಾಗುತ್ತದೆ, ಶಸ್ತ್ರಗಳು, ಬೆಂಕಿ– ಮುಂತಾದವುಗಳಿಂದ ನಾಶವನ್ನೈದುತ್ತದೆ, ರೋಗರುಜಿನಗಳನ್ನೂ ಹೊಂದುತ್ತದೆ. ನಾನು ಮಾಡಿದ ಧರ್ಮಾಧರ್ಮಗಳ ವಶದಿಂದ, ಹಕ್ಕಿಯು ಗೂಡನ್ನು ಸೇರುವಂತೆ, ಇದರಲ್ಲಿ ನಾನು ಸೇರಿಕೊಂಡು ಶರೀರವು ನಾಶವಾದಹಾಗೆಲ್ಲ ಮತ್ತೆಮತ್ತೆ ಧರ್ಮಾಧರ್ಮಗಳ ದೆಸೆಯಿಂದ ಹಿಂದಿನ ಗೂಡು ಹೋದರೆ ಹಕ್ಕಿಯು ಮತ್ತೊಂದು ಗೂಡನ್ನು ಸೇರುವಂತೆ ಬೇರೆ ಬೇರೆ ಶರೀರವನ್ನು ಸೇರುತ್ತಲಿರುವೆನು. ಹೀಗೆಯೇ ನಾನು ಅನಾದಿಯಾದ ಸಂಸಾರದಲ್ಲಿ ದೇವತೆಗಳ, ಮನುಷ್ಯರ, ಕೀಳುಪ್ರಾಣಿಗಳ, ನರಕದ– ಸ್ಥಾನಗಳಲ್ಲಿ ನನ್ನ ಕರ್ಮಗಳ ದೆಸೆಯಿಂದ ಪಡೆದ ಪಡೆದ ಶರೀರವನ್ನು ಬಿಡುತ್ತಲೂ ಹೊಸ ಹೊಸದಾಗಿ ಬೇರೊಂದನ್ನು ತೆಗೆದುಕೊಳ್ಳುತ್ತಲೂ ಹುಟ್ಟುಹೊಂದುಗಳು ಒಂದರ ಹಿಂದೊಂದು ಬರುತ್ತಿರುವ (ಈ) ಚಕ್ರದಲ್ಲಿ ರಾಟೆಯಹಾಗೆ ನನ್ನ ಕರ್ಮದಿಂದ ಸುತ್ತುತ್ತಾ (ಕಾಲ)ಕ್ರಮದಲ್ಲಿ ಈ ಶರೀರವನ್ನು ಹೊಂದಿ ಈ ಸಂಸಾರಚಕ್ರ

ದಲ್ಲಿ ತೊಳಲುವದಕ್ಕೆ ಬೇಸತ್ತು ಸಂಸಾರಚಕ್ರದ ತೊಳಲನ್ನು ನಿಲ್ಲಿಸಿಕೊಡ ಬೇಕೆಂದು ಪೂಜ್ಯರಾದ ತಮ್ಮನ್ನು ಶರಣುಹೊಂದಿರುವೆನು. ಆದ್ದರಿಂದ ನಾನು ಈ ಶರೀರಕ್ಕಿಂತ ಬೇರೆಯಾಗಿ ನಿತ್ಯನೇ ಆಗಿರುವೆನು; ನನಗೆ ಶರೀರಗಳು ಮನುಷ್ಯನ ಉಡುಪುಗಳಂತೆ[1] ಬರುತ್ತಲೂ ಹೋಗುತ್ತಲೂ ಇರುತ್ತವೆ"[2] ಎಂದು ಹೇಳಿದರೆ ಆಚಾರ್ಯನು "ನೀನು ಹೇಳಿದ್ದು ಸರಿ, ಸರಿಯಾಗಿ ತಿಳಿದುಕೊಂಡಿದೀಯೆ. (ಹೀಗಿರುವಲ್ಲಿ) 'ನಾನು ಬ್ರಾಹ್ಮಣಪುತ್ರನು, ಇಂಥ ವಂಶದವನು, ಹಿಂದೆ ಬ್ರಹ್ಮಚಾರಿಯೋ ಗೃಹಸ್ಥನೋ ಆಗಿದ್ದೆನು; ಈಗ (ಪರಮಹಂಸ)ಪರಿವ್ರಾಜಕನಾಗಿದ್ದೇನೆ' ಎಂದು ಸುಳ್ಳನ್ನು ಏಕೆ ಹೇಳಿದೆ ?" ಎಂದು ಕೇಳಬೇಕು.

ಆತ್ಮನಿಗೆ ಜಾತಿ, ವಂಶ, ಸಂಸ್ಕಾರ- ಮುಂತಾದವುಗಳಿಲ್ಲ

(ಮೂಲ)

ಸ ಯದಿ ಬ್ರೂಯಾತ್-- ಭಗವನ್ ಕಥಮ್ ಅಹಂ ಮೃಷಾ ಅವಾದಿಷಮ್ ? ಇತಿ। ತಂ ಪ್ರತಿಬ್ರೂಯಾತ್ "ಆಚಾರ್ಯಃ— ಯತಸ್ತ್ವಂ ಭಿನ್ನಜಾತ್ಯನ್ವಯಸಂಸ್ಕಾರಂ ಶರೀರಂ ಜಾತ್ಯನ್ವಯ ವರ್ಜಿತಸ್ಯ ಆತ್ಮನಃ ಪ್ರತ್ಯಭ್ಯಾಜ್ಞಾಸೀಃ 'ಬ್ರಾಹ್ಮಣಪುತ್ರಃ', 'ಅಮುಷ್ಯೋಽನ್ವಯಃ' ಇತ್ಯಾದಿನಾ ವಾಕ್ಯೇನ ಇತಿ ॥೧೧॥

(ಅರ್ಥ)

ಆತನು "ಪೂಜ್ಯರೆ, ನಾನು ಸುಳ್ಳುಹೇಳಿದೆನೆಂಬುದು ಹೇಗೆ ?" ಎಂದು[3] ಕೇಳಿದರೆ ಅವನಿಗೆ ಆಚಾರ್ಯನು (ಹೀಗೆಂದು) ಹೇಳಬೇಕು. "ಹೇಗೆಂದರೆ, ಬೇರೆಬೇರೆ ಜಾತಿ, ವಂಶ, ಸಂಸ್ಕಾರ- ಇವುಗಳಿರುವ ಶರೀರವು ಜಾತಿವಂಶಗಳಿಲ್ಲದ ನಿನ್ನ (ಸ್ವರೂಪ)ವೆಂದರಿತು 'ಬ್ರಾಹ್ಮಣಪುತ್ರನು', 'ಇಂಥ ವಂಶದವನು' ಎಂದು ಮುಂತಾದ ವಾಕ್ಯದಿಂದ (ಹೇಳಿರು)ತ್ತೀಯೆ."[4]

---

1. ಗೀ. ೩-೨೭ನ್ನು ನೋಡಿ. ಮನುಷ್ಯನಿಗಿಂತ ಉಡುಪುಗಳು ಬೇರೆಯಾಗಿರುವಂತೆ ನನಗಿಂತ ಶರೀರಗಳು ಬೇರೆ; ಅವು ನನ್ನ ಸ್ವರೂಪಕ್ಕೆ ಸೇರಿರುವದಿಲ್ಲ.

2. ಶಿಷ್ಯನ ಅಭಿಪ್ರಾಯದಲ್ಲಿ ಆತ್ಮನಿಗೆ ಕರ್ತೃತ್ವಭೋಕ್ತೃತ್ವಗಳೂ ಜನ್ಮಾಂತರವೂ ಉಂಟು.

3. "ತಂ ಪ್ರತಿಬ್ರೂಯಾತ್ ಆಚಾರ್ಯಃ ಸ ಯದಿ ಬ್ರೂಯಾತ್" ಎಂದು ಸಂ॥

4. ಗುರುವಿನ ಅಭಿಪ್ರಾಯದಲ್ಲಿ ಎಲ್ಲರ ಆತ್ಮನೂ ಅಸಂಸಾರಿಯೂ ಪರಮಾತ್ಮನೇ.

ಪರಮಾತ್ಮನೇ ನಮ್ಮೆಲ್ಲರ ಆತ್ಮನು

(ಮೂಲ)

ಸ ಯದಿ ಪೃಚ್ಛೇತ್— ಕಥಂ ಭಿನ್ನಜಾತ್ಯನ್ವಯಸಂಸ್ಕಾರಂ ಶರೀರಂ ಕಥಂ ವಾ ಅಹಂ ಜಾತ್ಯನ್ವಯಸಂಸ್ಕಾರವರ್ಜಿತಃ? ಇತಿ। ಆಚಾರ್ಯಃ [1]" ಶೃಣು ಸೋಮ್ಯ ಯಥಾ ಇದಂ ಶರೀರಂ ತ್ವತ್ತೋ ಭಿನ್ನಂ ಭಿನ್ನಜಾತ್ಯನ್ವಯಸಂಸ್ಕಾರಮ್, ತ್ವಂ ಚ ಜಾತ್ಯನ್ವಯ ಸಂಸ್ಕಾರವರ್ಜಿತಃ " ಇತ್ಯುಕ್ತ್ವಾ ತಂ ಸ್ಮಾರಯೇತ್ "ಸ್ಮರ್ತುಮರ್ಹಸಿ ಸೋಮ್ಯ ಪರಮಾತ್ಮಾನಂ ಸರ್ವಾತ್ಮಾನಂ ಯಥೋಕ್ತ ಲಕ್ಷಣಂ (ಯಂ)[2] ಶ್ರಾವಿತೋಽಸಿ ಸದೇವ ಸೋಮ್ಯೇದಮ್ (ಛಾಂ. ೬-೨-೧) ಇತ್ಯಾದಿಭಿಃ ಶ್ರುತಿಭಿಃ[3], ಲಕ್ಷಣಂ ಚ ತಸ್ಯ ಶ್ರುತಿಭಿಃ ಸ್ಮೃತಿಭಿಶ್ಚ" (ಇತಿ)[4] ॥೧೨॥

(ಅರ್ಥ)

ಆತನು "ಶರೀರವು ಬೇರೆಬೇರೆಯ ಜಾತಿವಂಶಸಂಸ್ಕಾರಗಳುಳ್ಳದ್ದೆಂಬುದೂ ನಾನು ಜಾತಿವಂಶಸಂಸ್ಕಾರಗಳಿಲ್ಲದವನೆಂಬುದೂ ಹೇಗೆ?" ಎಂದು ಕೇಳಿದರೆ, ಆಚಾರ್ಯನು "ಅಯ್ಯ, ಈ ಶರೀರವು ನಿನಗಿಂತ ಬೇರೆಯಾಗಿದ್ದುಕೊಂಡು ಬೇರೆ ಬೇರೆಯ ಜಾತಿವಂಶಸಂಸ್ಕಾರಗಳುಳ್ಳದ್ದಾಗಿರುವದೆಂಬುದೂ ನೀನು ಜಾತಿವಂಶ ಸಂಸ್ಕಾರಗಳಿಲ್ಲದವನೆಂಬುದೂ ಹೇಗೆಂಬುದನ್ನು (ತಿಳಿಸುವೆನು) ಕೇಳು" ಎಂದು ಹೇಳಿದ ಮೇಲೆ, " ಅಯ್ಯ, ಸರ್ವಾತ್ಮನಾಗಿರುವ[5] ಪರಮಾತ್ಮನನ್ನು 'ಅಯ್ಯ, ಮೊದಲು ಇದು ಸತ್ತೇ (ಆಗಿತ್ತು ಛಾಂ. ೬-೨-೧)" ಎಂಬುದೇ ಮುಂತಾದ ಶ್ರುತಿಗಳಿಂದ ಹಿಂದೆಯೇ ತಿಳಿಸಿದ್ದೇನಲ್ಲ,[6] ಅವನನ್ನು ನೆನಪಿಸಿಕೊ, ಅವನ

---

1. ಇದರ ಮುಂದೆ ಆಚ್ಚಿನ ಪುಸ್ತಕಗಳಲ್ಲಿರುವ 'ಬ್ರೂಯಾತ್' ಎಂಬುದು ಹೆಚ್ಚಿಂದು ಬಿಟ್ಟಿದೆ. ಬ್ರೂಯಾತ್ ಎಂಬ ಮಾತಿದ್ದರೆ ಮುಂದೆ 'ವರ್ಜಿತಃ' ಆಗುತ್ತಲೂ 'ಇತಿ' ಎಂಬ ಮಾತು ಇರಬೇಕಾಗುವದು.

2. ಈ ಮಾತು ಇಲ್ಲಿರಬೇಕೆಂದು ತೋರುತ್ತದೆ.

3. 'ಸ್ಮೃತಿಭಿಶ್ಚ' ಬೇಕಿಲ್ಲ.

4. ಮುದ್ರಿತಪುಸ್ತಕಗಳಲ್ಲಿಲ್ಲದಿದ್ದರೂ ಇದಿದ್ದರೆ ಒಳ್ಳೆಯದು.

5. ಎಲ್ಲರಿಗೂ ಆತ್ಮನಾಗಿರುವ ಎಂದರ್ಥ. ನಮ್ಮಗಳ ಆತ್ಮನಿಗೆ ಜಾತಿವಂಶಾದಿಗಳು ಇಲ್ಲವೆಂಬುದನ್ನು ತಿಳಿಯುವದಕ್ಕೆ ಇದನ್ನು ಗ್ರಹಿಸುವದು ಅತ್ಯವಶ್ಯವಾಗಿರುತ್ತದೆ.

6. ಆರನೆಯ ಖಂಡದಲ್ಲಿರುವ ಶ್ರುತಿಗಳನ್ನು ನೋಡಿರಿ.

ಲಕ್ಷಣವನ್ನೂ ಶ್ರುತಿಗಳಿಂದಲೂ ಸ್ಮೃತಿಗಳಿಂದಲೂ[1] (ತಿಳಿಸಿದ್ದೇನಲ್ಲ, ಅದನ್ನೂ ನೆನಪಿಸಿಕೊ)" ಎಂದು ಅವನಿಗೆ ನೆನಪುಕೊಡಬೇಕು.

ಶರೀರದ ಸ್ವರೂಪವರ್ಣನೆಗಾಗಿ ಸೃಷ್ಟಿಕ್ರಮವರ್ಣನೆ

(ಮೂಲ)

ಲಬ್ಧಪರಮಾತ್ಮಲಕ್ಷಣಸ್ಯ ಕೃತಯೇ ಬ್ರೂಯಾತ್—ಯೋಽಸೌ ಆಕಾಶನಾಮಾ ನಾಮರೂಪಾಭ್ಯಾಮ್ ಅರ್ಥಾನ್ತರಭೂತಃ ಅಶರೀರಃ ಅಸ್ಥೂಲಾದಿಲಕ್ಷಣಃ ಅಪಹತಪಾಪ್ಮಾದಿಲಕ್ಷಣಶ್ಚ ಸರ್ವೈಃ ಸಂಸಾರಧರ್ಮೈಃ ಅನಾಗನ್ಧಿತಃ "ಯತ್ಸಾಕ್ಷಾದಪರೋಕ್ಷಾತ್ ಬ್ರಹ್ಮ ಯ ಆತ್ಮಸರ್ವಾನ್ತರಃ"[2] (ಬೃ. ೩-೪-೧, ೩-೫-೧), "ಅದೃಷ್ಟೋ ದ್ರಷ್ಟಾಶ್ರುತಃ ಶ್ರೋತಾಮತೋ ಮನ್ತಾವಿಜ್ಞಾತೋ ವಿಜ್ಞಾತಾ" (ಬೃ.೩-೭-೨೩), 'ನಿತ್ಯವಿಜ್ಞಾನಸ್ವರೂಪಃ'[3] (ಬೃ. ೪-೩-೩೦) 'ಅನನ್ತರೋಽಬಾಹ್ಯಃ'[4] (ಬೃ. ೩-೯-೯), "ವಿಜ್ಞಾನಘನ ಏವ" (ಬೃ. ೨-೪-೧೨) 'ಪರಿಪೂರ್ಣಃ ಆಕಾಶವತ್'[5] (ಛಾಂ. ೩-೧೨-೯) ಅನನ್ತಶಕ್ತಿಃ, ಆತ್ಮಾ ಸರ್ವಸ್ಯ, 'ಅಶನಾಯಾದಿವರ್ಜಿತಃ'[6] (ಬೃ. ೩-೫-೧) ಅವಿಭಾವತಿರೋಭಾವವರ್ಜಿತಶ್ಚ, ಸ್ವಾತ್ಮವಿಲಕ್ಷಣಯೋಃ ನಾಮರೂಪಯೋಃ, ಜಗದ್ಬೀಜಭೂತಯೋಃ ಸ್ವಾತ್ಮಸ್ಥಯೋಃ, ತತ್ತ್ವಾನ್ಯತ್ವಾಭ್ಯಾಮ್ ಅನಿರ್ವಚನೀಯಯೋಃ ಸ್ವಯಂವೇದ್ಯಯೋಃ[7] ಸದ್ಭಾವಮಾತ್ರೇಣ ಅಚಿನ್ತ್ಯಶಕ್ತಿತ್ವಾತ್ ವ್ಯಾಕರ್ತಾ ಅವ್ಯಾಕೃತಯೋಃ ॥

(ಅರ್ಥ)

(ಹೀಗೆ) ಪರಮಾತ್ಮನ ಮತ್ತು (ಅವನ)ಲಕ್ಷಣದ ನೆನಪು (ಅವನಿಗೆ)ಬಂದ ಮೇಲೆ (ಆಚಾರ್ಯನು) ಹೇಳಬೇಕಾದದ್ದೇನೆಂದರೆ; "ಈ ನಾಮರೂಪಗಳಿಗಿಂತ ಬೇರೆಯಾದವನೂ ಶರೀರವಿಲ್ಲದವನೂ ಅಸ್ಥೂಲಾದಿಲಕ್ಷಣವುಳ್ಳವನೂ ಯಾವ ಪಾಪವೂ ಇಲ್ಲವನಾಗಿರುವದೇ ಮುಂತಾದ ಲಕ್ಷಣದವನೂ ಯಾವ ಸಂಸಾರ

1. ಏಳನೆಯ ಖಂಡದಲ್ಲಿರುವ ಶ್ರುತಿಸ್ಮೃತಿಗಳನ್ನು ನೋಡಿರಿ.

2. ಇಲ್ಲಿಂದ ಮುಂದಿರುವ ಶ್ರುತಿಗಳನ್ನು ಆಚಾರ್ಯರು ತಮ್ಮ ವಾಕ್ಯಕ್ಕೇ ಸೇರಿಸಿಕೊಂಡು ಹೆಣೆದಿರುತ್ತಾರೆ.

3, 4, 5, 6— ಈ ಸಂಖ್ಯೆಗಳನ್ನು ಹಾಕಿರುವ ಸ್ಥಲಗಳಲ್ಲಿ ಶ್ರುತಿಗಳ ಅರ್ಥವು ಮಾತ್ರ ಇದೆ.

7. 'ಸ್ವಸಂವೇದ್ಯಯೋಃ' ವಾ॥ ಅ॥

ಧರ್ಮಗಳ ವಾಸನೆಯೂ ಇಲ್ಲದವನೂ ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವಾಗಿ ಎಲ್ಲಕ್ಕೂ ಒಳಗಿರುವ ಆತ್ಮನೂ, (ಮತ್ತೊಂದಕ್ಕೆ) ಕಾಣಿಸದೆ (ಎಲ್ಲವನ್ನೂ) ನೋಡುವವನೂ (ಮತ್ತೊಂದಕ್ಕೆ) ಕೇಳಿಸದೆ (ಎಲ್ಲವನ್ನೂ) ಕೇಳುವವನೂ (ಮತ್ತೊಬ್ಬರ) ಆಲೋಚನೆಗೆ ಸಿಕ್ಕದೆ (ಎಲ್ಲವನ್ನೂ) ಆಲೋಚಿಸುವವನೂ (ಯಾರ) ಅರಿವಿಗೂ ಸಿಕ್ಕದೆ (ಎಲ್ಲವನ್ನೂ) ಅರಿಯುವವನೂ ನಿತ್ಯವಾದ ವಿಜ್ಞಾನದ ಸ್ವರೂಪವುಳ್ಳವನೂ, ಒಳಗಿಲ್ಲದವನೂ ಹೊರಗಿಲ್ಲದವನೂ ವಿಜ್ಞಾನದ ಗಟ್ಟಿಯೇ ಆಗಿರುವವನೂ ಆಕಾಶದಂತೆ ಪರಿಪೂರ್ಣನಾಗಿರುವವನೂ (ಇಷ್ಟೆಂಬ) ಲೆಕ್ಕವಿಲ್ಲದ ಶಕ್ತಿಗಳುಳ್ಳವನೂ, ಎಲ್ಲರಿಗೂ ಆತ್ಮನೂ, ಹಸಿವು ಮುಂತಾದವುಗಳಿಲ್ಲದವನೂ ತೋರುವದು ಮರೆಯಾಗುವದು ಎಂಬಿವುಗಳಿಲ್ಲದವನೂ ಆಗಿರುವ ಆಕಾಶವೆಂಬ ಹೆಸರುಳ್ಳ[1] ಈ (ಪರಮಾತ್ಮನು) ತನ್ನ ಸ್ವರೂಪಕ್ಕಿಂತ ವಿಲಕ್ಷಣವಾಗಿಯೂ ಜಗತ್ತಿಗೆ ಬೀಜವಾಗಿರುವವಾಗಿಯೂ ತನ್ನಲ್ಲಿಯೇ ಇದ್ದುಕೊಂಡು (ಅದೇ) **ತನ್ನ ಸ್ವರೂಪವೆಂದಾಗಲಿ (ಅದಕ್ಕಿಂತ) ಬೇರೆಯೆಂದಾಗಲಿ ನಿರ್ವಚನಮಾಡಿಹೇಳುವದಕ್ಕಾಗದವುಗಳಾಗಿಯೂ[2] ತನಗೆ ತಿಳಿಯುವವಾಗಿಯೂ ಅವ್ಯಾಕೃತವಾಗಿಯೂ[3] ಇರುವ ನಾಮರೂಪಗಳನ್ನು** ಕೇವಲ ತನ್ನ ಇರುವಿಕೆಯಿಂದಲೇ, (ಇಂಥದ್ದೆಂದು) ಚಿಂತಿಸುವದಕ್ಕೆ ಆಗದ ಶಕ್ತಿಯುಳ್ಳಾತನಾದ್ದರಿಂದ[4] ವ್ಯಾಕರಣಮಾಡಿದನು.[5]

ಆಕಾಶಾದಿಗಳಿಗೂ ಪರಮಾತ್ಮನಿಗೂ ಸಂಬಂಧ

(ಮೂಲ)

ತೇ ನಾಮರೂಪೇ ಅವ್ಯಾಕೃತೇ ಸತೀ ವ್ಯಾಕ್ರಿಯಮಾಣೇ ತಸ್ಮಾತ್ ಏತಸ್ಮಾತ್ ಆತ್ಮನಃ ಆಕಾಶನಾಮಾಕೃತೀ ಸಂವೃತ್ತೇ।

---

1. ಛಾಂ. ೪-೧೪-೧

2. ಸೃಷ್ಟಿಗಿಂತ ಮುಂಚೆಯೂ ಸೃಷ್ಟಿಯಾದ ಮೇಲೂ ನಾಮರೂಪಗಳು ಆತ್ಮನಿಗಿಂತ ಬೇರೆಯಾಗಿರುವದಿಲ್ಲ; ಸರಿಯಾಗಿ ನೋಡಿದರೆ ಆತ್ಮನೇ ಆಗಿರುವವು. ತೈ. ಭಾ. ೨-೬ (ಭಾ. ಭಾ. ೧೬೪) ನೋಡಿ. ಇದು ಹೇಗೆಂಬುವದನ್ನು ಮುಂದಿನ ಖಂಡದಲ್ಲಿ ವಿವರಿಸಿರುತ್ತದೆ.

3. ವಿಂಗಡವಾಗದೆ ಹಿಡಿಕೆ ಕುಡಿಕೆ ಮುಂತಾದವುಗಳಾಗುವ ಮುಂಚೆ ಮಣ್ಣಿರುವಂತೆ, ನೊರೆಗುಳ್ಳೆ ಮುಂತಾದವಾಗುವ ಮುಂಚೆ ನೀರಿರುವಂತೆ, ಒಂದೇ ಆಗಿರುವದನ್ನು **ಅವ್ಯಾಕೃತ** ವೆನ್ನುವರು.

4. ತಾನಿದ್ದಂತೆಯೇ ಇದ್ದು ವ್ಯಾಕೃತನಾಮರೂಪಗಳಾಗುವ ಶಕ್ತಿ ; ಇದು ಪರಮಾತ್ಮನ ರೂಪವೆ ಆಗಿದೆ.

5. ವಿಂಗಡಿಸಿದನು.

ತಚ್ಚ ಆಕಾಶಾಖ್ಯಂ ಭೂತಮ್ ಅನೇನ ಪ್ರಕಾರೇಣ ಪರಮಾತ್ಮನಃ ಸಂಭೂತಂ ಪ್ರಸನ್ನಾದಿವ ಸಲಿಲಾತ್ ಮುಲಮಿವ ಫೇನಮ್। ನ ಸಲಿಲಮ್, ನ ಚ ಸಲಿಲಾತ್ ಅತ್ಯನ್ತಭಿನ್ನಂ ಫೇನಮ್। ಸಲಿಲವ್ಯತಿರೇಕೇಣ ಅದರ್ಶನಾತ್। ಸಲಿಲಂ ತು ಸ್ವಚ್ಛಮ್, ಅನ್ಯತ್ ಫೇನಾತ್ ಮುಲರೂಪಾತ್, ಏವಂ ಪರಮಾತ್ಮಾ ನಾಮರೂಪಾಭ್ಯಾಮ್ ಅನ್ಯಃ ಫೇನಸ್ಥಾನೀಯಾಭ್ಯಾಂ ಶುದ್ಧಃ ಪ್ರಸನ್ನಃ, ತದ್ವಿಲಕ್ಷಣಃ ತೇ ನಾಮರೂಪೇ ಅವ್ಯಾಕೃತೇ ಸತೀ ವ್ಯಾಕ್ರಿಯಮಾಣೇ ಫೇನಸ್ಥಾನೀಯೇ ಆಕಾಶನಾಮಾಕೃತೀ ಸಂವೃತ್ತೇ ॥೧೪॥

(ಅರ್ಥ)

ಈ ನಾಮರೂಪಗಳು (ಮೊದಲು) ಅವ್ಯಾಕೃತವಾಗಿದ್ದು (ಮುಂದೆ) ವ್ಯಾಕೃತವಾಗುವಾಗ ಆಕಾಶವೆಂಬ ಹೆಸರನ್ನೂ ಆಕಾರವನ್ನೂ ಉಳ್ಳವಾಗಿ ಆ ಈ ಆತ್ಮನಿಂದ ಉಂಟಾದವು.[1] ಆ ಆಕಾಶವೆಂಬ ಹೆಸರಿನ ಭೂತವು ಈ ಪ್ರಕಾರದಿಂದ ತಿಳಿಯಾದ ನೀರಿನಿಂದ ಕೊಳೆಯಾದ ನೊರೆಯು (ಹುಟ್ಟು)ವಂತೆ ಪರಮಾತ್ಮನಿಂದ ಉಂಟಾಯಿತು. ನೊರೆಯು ನೀರೂ ಅಲ್ಲ, ನೀರಿಗಿಂತ ಬೇರೆಯೂ ಅಲ್ಲ; ಏಕೆಂದರೆ (ಅದು) ನೀರನ್ನು ಬಿಟ್ಟು (ಬೇರೆಯಾಗಿ) ಕಾಣುವದಿಲ್ಲ. ಆದರೆ ಸ್ವಚ್ಛವಾಗಿರುವ ನೀರು (ಮಾತ್ರ) ಕೊಳೆಯ ರೂಪವಾಗಿರುವ ನೊರೆಗಿಂತ ಬೇರೆ. **ಹೀಗೆಯೇ ಪರಮಾತ್ಮನು ನೊರೆಯಂತಿರುವ ನಾಮರೂಪಗಳಿಗಿಂತಲೂ ಬೇರೆಯಾಗಿ ಶುದ್ಧನೂ ಪ್ರಸನ್ನನೂ ಅವುಗಳಿಗಿಂತ ವಿಲಕ್ಷಣನೂ ಆಗಿರುತ್ತಾನೆ.**[2] (ಹೀಗಾದರೆ ಹೀಗೆ) ನೊರೆಯಂತೆ[3] ಈ ನಾಮರೂಪಗಳು ಅವ್ಯಾಕೃತವಾಗಿದ್ದು (ಮುಂದೆ) ವ್ಯಾಕೃತವಾಗುವಾಗ ಆಕಾಶವೆಂಬ ಹೆಸರನ್ನೂ (ಆಕಾಶದ) ಆಕಾರವನ್ನೂ ತಳೆದವು.[4]

---

1. ನಾವು ಹಿಂದೆ ಹೇಳಿರುವ ಪರಮಾತ್ಮನನ್ನೇ ಈಗ ಹೇಳುತ್ತಿರುವದು ಎಂಬುದನ್ನು ಆ ಈ ಎಂಬ ಮಾತಿನಿಂದ ತಿಳಿಸಿವೆ.

2. ಪರಮಾತ್ಮನಿಗಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳುವದಕ್ಕೆ ಬಾರದ್ದರಿಂದ ನಾಮರೂಪಗಳು ಅನೃತವಾಗಿರುತ್ತವೆ. ಆದರೆ ಪರಮಾತ್ಮನು ಸತ್ಯವಾಗಿದ್ದು ಅವುಗಳಿಗಿಂತ ವಿಲಕ್ಷಣನಾಗಿರುತ್ತಾನೆ ಎಂದು ಭಾವ. ತೈ. ೨-೬ (ಭಾ. ಭಾ. ೧೬೫) ನೋಡಿ.

3. ನೀರು-ನೊರೆಗಳ ದೃಷ್ಟಾಂತದಿಂದ ನಾಮರೂಪಗಳನ್ನು ವರ್ಣಿಸಿರುವದು ಐತರೇಯ, ಬೃಹದಾರಣ್ಯಕ- ಈ ಉಪನಿಷತ್ತುಗಳ ಭಾಷ್ಯಗಳಲ್ಲಿಯೂ ಕಾಣುತ್ತದೆ.

4. ಇಲ್ಲಿ ಮತ್ತೆ ಈ ವಿಷಯವನ್ನು ಉಪಸಂಹಾರಮಾಡಿರುವದು ಪಂಚಭೂತಸೃಷ್ಟಿಯನ್ನು ಮುಂದುವರಿಸುವದಕ್ಕೆ. ಈ ಸೃಷ್ಟಿಕ್ರಮವು ತೈತ್ತಿರೀಯವನ್ನನುಸರಿಸಿ ಹೇಳಿದ್ದು.

ವಾಯ್ವಾದಿಭೂತಗಳ ಉತ್ಪತ್ತಿ

(ಮೂಲ)

ತತೋಽಪಿ ಸ್ಥೂಲಭಾವಮ್ ಆಪದ್ಯಮಾನೇ ನಾಮರೂಪೇ ವ್ಯಾಕ್ರಿಯಮಾಣೇ ವಾಯುಭಾವಮ್ ಆಪದ್ಯೇತೇ। ತತೋಽಪಿ-ಅಗ್ನಿಭಾವಮ್, ಅಗ್ನೇರಬ್ಭಾವಮ್, ತತಃ ಪೃಥ್ವೀಭಾವಮ್, ಇತ್ಯೇವಂಕ್ರಮೇಣ ಪೂರ್ವಪೂರ್ವಾನುಪ್ರವೇಶೇನ ಪಞ್ಚ ಮಹಾಭೂತಾನಿ ಪೃಥಿವ್ಯನ್ತಾನಿ ಉತ್ಪದ್ಯನ್ತೇ ॥೧೫॥

(ಅರ್ಥ)

(ಈ) ನಾಮರೂಪಗಳು ಆದಕ್ಕಿಂತಲೂ ಸ್ಥೂಲಭಾವವನ್ನು ಪಡೆದು ವ್ಯಾಕೃತವಾಗಿ ವಾಯುರೂಪವನ್ನು ಹೊಂದುವವು. ಅದರಿಂದಲೂ ಅಗ್ನಿರೂಪವನ್ನು, ಅಗ್ನಿಯಿಂದ ನೀರಿನ ರೂಪವನ್ನು, ಅದರಿಂದ ಪೃಥ್ವಿಯ ರೂಪವನ್ನು-ಎಂದೀ ಕ್ರಮದಿಂದ ಹಿಂದುಹಿಂದಿನ (ಭೂತದ ಗುಣವು) ಸೇರಿಕೊಳ್ಳುತ್ತಾ ಪೃಥಿವಿಯವರೆಗಿನ ಐದು ಮಹಾಭೂತಗಳು[1] ಉಂಟಾದವು.

ಶರೀರದ ಉತ್ಪತ್ತಿ

(ಮೂಲ)

ತತಃ ಪಞ್ಚಮಹಾಭೂತಗುಣವಿಶಿಷ್ಟಾ ಪೃಥ್ವೀ ಪೃಥಗ್ವ್ಯಶ್ಚ ಪಞ್ಚಾತ್ಮಕ್ಯೋ ವ್ರೀಹಿಯವಾದ್ಯಾ ಓಷಧಯೋ ಜಾಯನ್ತೇ। ತಾಭ್ಯೋ ಭಕ್ಷಿತಾಭ್ಯೋ ಲೋಹಿತಂ[2] ಶುಕ್ರಂ[3] ಚ ಸ್ತ್ರೀಪುಂಸ ಶರೀರಸಂಬನ್ಧಿ ಜಾಯತೇ। ತದುಭಯಮ್ ಋತುಕಾಲೇ ಅವಿದ್ಯಾಪ್ರಯುಕ್ತಕಾಮುಖಜನಿರ್ಮಥನೋದ್ಭೂತಂ [4] ಮನ್ತ್ರಸಂಸ್ಕೃತಂ

1. ಇಲ್ಲಿ 'ಮಹಾಭೂತಗಳು' ಎಂಬಲ್ಲಿ 'ಮಹಾ' ಹೆಚ್ಚು; ಅಥವಾ ಮಹಾಭೂತವೆಂದರೇ ತನ್ಮಾತ್ರೆಗಳು. ಗೀ. ಭಾ. ೧೩-೫ ನೋಡಿ. ಆಕಾಶದ ಶಬ್ದಗುಣವು ವಾಯುವಿನಲ್ಲಿ, ವಾಯುವಿನಲ್ಲಿರುವ ಶಬ್ದಸ್ಪರ್ಶಗಳು ಅಗ್ನಿಯಲ್ಲಿ, ಅಗ್ನಿಯ ಶಬ್ದಸ್ಪರ್ಶರೂಪಗಳು ಅಪ್ಪಿನಲ್ಲಿ, ಅಪ್ಪಿನಲ್ಲಿರುವ ಶಬ್ದಸ್ಪರ್ಶರೂಪರಸಗಳು ಪೃಥ್ವಿಯಲ್ಲಿ ಸೇರಿಕೊಂಡೇ ಇರುವವು. ಆದ್ದರಿಂದ ಪೃಥ್ವಿಯಲ್ಲಿ ಗಂಧವೂ ಸೇರಿ ಐದು ಗುಣಗಳು. ತೈ. ಭಾ. ೨-೧ ನೋಡಿ.

2. 'ಲೋಹಿತಂ ಚ' ಎಂದು ನಿ॥ ಪಾಠ.

3. 'ಶುಕ್ಲಂ' ಎಂದು ವ್ಯಾಖ್ಯಾನದ ಪಾಠ.

4. 'ಉದ್ಭೃತಂ' ಎಂಬ ನಿ॥ ಪಾಠವು ಬೇಕಿಲ್ಲ.

ಗರ್ಭಾಶಯೇ ನಿಷಿಚ್ಯತೇ । ತತ್ ಸ್ವಯೋನಿರಸಾನುಪ್ರವೇಶೇನ ವಿವರ್ಧಮಾನಂ ಗರ್ಭೀಭೂತಂ ನವಮೇ ದಶಮೇ ವಾ ಮಾಸಿ ಸಂಜಾಯತೇ ॥ ೧೬ ॥

(ಅರ್ಥ)

ಆಮೇಲೆ (ಈ) ಐದು ಮಹಾಭೂತಗಳ ಗುಣಗಳಿಂದೊಡಗೂಡಿದ ಭೂಮಿಯು [1] (ಉಂಟಾಗುತ್ತದೆ). ಭೂಮಿಯಿಂದ ಐದು (ಭೂತ) ಗಳ ಕಾರ್ಯವಾದ ಬತ್ತ, ಜವೆಗೋಧಿ– ಮುಂತಾದ ಸಸ್ಯಗಳು ಹುಟ್ಟುತ್ತವೆ. ಅವುಗಳನ್ನು ತಿಂದ ಹೆಂಗಸಿನ ಮತ್ತು ಗಂಡಸಿನ ಶರೀರಕ್ಕೆ ಸೇರಿದ ಲೋಹಿತವೂ ಶುಕ್ಲವೂ ಉಂಟಾಗುತ್ತವೆ. ಅವೆರಡೂ ಋತುಕಾಲದಲ್ಲಿ ಅವಿದ್ಯೆಯಿಂದುಂಟಾದ ಕಾಮವೆಂಬ ಕಡೆಗೋಲಿನ ಕಡೆತದಿಂದ ಹೊರತೋರಿಕೊಂಡು ಮಂತ್ರ ಸಂಸ್ಕೃತವಾಗಿ [2] ಗರ್ಭಾಶಯದಲ್ಲಿ ಚಿಮುಕಿಸಲ್ಪಡುತ್ತವೆ. ಇದು ತನ್ನ ಯೋನಿಯಲ್ಲಿರುವ ರಸಗಳ ಸೇರುವಿಕೆಯಿಂದ ಬೆಳೆಯುತ್ತಾ ಗರ್ಭವಾಗಿ ಒಂಬತ್ತನೆಯ ತಿಂಗಳಲ್ಲಿಯೋ ಹತ್ತನೆಯ ತಿಂಗಳಲ್ಲಿಯೋ [3] ಜನ್ಮವನ್ನು ಪಡೆಯುತ್ತದೆ.

ಶರೀರಕ್ಕೆ ಜಾತ್ಯನ್ವಯಸಂಸ್ಕಾರಗಳು

(ಮೂಲ)

ತತ್ ಜಾತಂ ಲಬ್ಧನಾಮಾಕೃತಿಕಂ ಜಾತಕರ್ಮಾದಿಭಿಃ ಮನ್ತ್ರಸಂಸ್ಕೃತಂ ಪುನಃ ಉಪನಯನಸಂಸ್ಕಾರಯೋಗೇನ ಬ್ರಹ್ಮಚಾರಿಸಂಜ್ಞಂ ಭವತಿ । ತದೇವ ಶರೀರಂ ಪತ್ನೀಯೋಗಸಂಸ್ಕಾರಯೋಗೇನ ಗೃಹಸ್ಥಸಂಜ್ಞಂ ಭವತಿ । ತದೇವ ವನಸ್ಥಸಂಸ್ಕಾರೇಣ ತಾಪಸಸಂಜ್ಞಂ ಭವತಿ । ತದೇವ ಕ್ರಿಯಾವಿನಿವೃತ್ತಿನಿಮಿತ್ತ ಸಂಸ್ಕಾರೇಣ ಪರಿವ್ರಾಟ್ಸಂಜ್ಞಂ ಭವತಿ । ಇತ್ಯೇವಂ ತ್ವತ್ತೋ ಭಿನ್ನಂ ಭಿನ್ನಜಾತ್ಯನ್ವಯಸಂಸ್ಕಾರಂ ಶರೀರಮ್ ॥ ೧೭ ॥

---

1. ಪಂಚೀಕೃತವಾದ ಭೂತಗಳಿಂದುಂಟಾಗಿರುವ ಭೂಮಿಯು.
2. ಗರ್ಭಾಧಾನಕ್ಕೆ ಪ್ರಯೋಗಿಸುವ ಮಂತ್ರಗಳಿಂದ ಸಂಸ್ಕಾರವಾಗಿ.
3. ಬಹಳಕಾಲ ಅಸಹ್ಯವಾದ ಸ್ಥಳದಲ್ಲಿರುತ್ತದೆ ಎಂದು ನೈರಾಗ್ಯವನ್ನು ಹುಟ್ಟಿಸುವದಕ್ಕಾಗಿ ಹೇಳಿದ ಮಾತಿದು. ಶರೀರವು ನಾಮರೂಪಾತ್ಮಕವೆಂದೂ ಆತ್ಮನು ಶರೀರಕ್ಕಿಂತ ವಿಲಕ್ಷಣನೆಂದೂ ಹೇಳಿದ್ದರ ವಿವರಣೆಗಾಗಿ ಇಲ್ಲಿಯವರೆಗಿನ ವರ್ಣನೆಯನ್ನು ಕೊಟ್ಟಿರುತ್ತದೆ.

(ಅರ್ಥ)

(ಹೀಗೆ) ಹುಟ್ಟಿದ ಆ (ಶರೀರವು) ಹೆಸರನ್ನೂ ಆಕೃತಿಯನ್ನೂ[1] ಪಡೆದು ಜಾತಕರ್ಮವೇ ಮುಂತಾದವುಗಳಿಂದ ಮಂತ್ರಸಂಸ್ಕಾರವನ್ನು[2] ಹೊಂದಿ, ಮತ್ತೆ ಉಪನಯನವೆಂಬ ಸಂಸ್ಕಾರದ ಸಂಬಂಧದಿಂದ ಬ್ರಹ್ಮಚಾರಿ ಎಂಬ ಹೆಸರು(ಳ್ಳದ್ದಾಗಿರುತ್ತವೆ.) ಅದೇ ಶರೀರವು ಹೆಂಡತಿಯನ್ನು ಪಡೆಯೋಣವೆಂಬ ಸಂಸ್ಕಾರದ ಸಂಬಂಧದಿಂದ ಗೃಹಸ್ಥನೆಂಬ ಹೆಸರು(ಳ್ಳದ್ದಾಗಿರುತ್ತದೆ.) ಅದೇ ವನಸ್ಥರ ಸಂಸ್ಕಾರದಿಂದ ತಾಪಸನೆಂಬ ಹೆಸರು(ಳ್ಳದ್ದಾಗಿರುತ್ತದೆ.) ಅದೇ ಕರ್ಮಗಳನ್ನು ಬಿಡುವದಕ್ಕೆ ನಿಮಿತ್ತವಾದ ಸಂಸ್ಕಾರದಿಂದ ಪರಿವ್ರಾಜಕನೆಂಬ ಹೆಸರು(ಳ್ಳದ್ದಾಗಿರುತ್ತದೆ). ಹೀಗೆ ಶರೀರವು ನಿನಗಿಂತ ಬೇರೆಯಾಗಿದೆ, ಬೇರೆ ಬೇರೆಯ ಜಾತಿ, ಅನ್ವಯ, ಸಂಸ್ಕಾರ– (ಇವು)ಗಳುಳ್ಳದ್ದಾಗಿದೆ.

ಮನಸ್ಸೂ ನಾಮರೂಪಾತ್ಮಕವೇ

(ಮೂಲ)

ಮನಶ್ಚ ಇನ್ದ್ರಿಯಾಣಿ ಚ ನಾಮರೂಪಾತ್ಮಕಾನ್ಯೇವ "ಅನ್ನಮಯಂ ಹಿ ಸೋಮ್ಯ ಮನಃ" (ಛಾಂ. ೬-೫-೪) ಇತ್ಯಾದಿ ಶ್ರುತಿಭ್ಯಃ ॥ ೧೪ ॥

(ಅರ್ಥ)

ಮನಸ್ಸು, ಇಂದ್ರಿಯಗಳುಕೂಡ ನಾಮರೂಪಕಾರ್ಯಗಳೇ. "ಅಯ್ಯ, ಮನಸ್ಸು ಅನ್ನಮಯವಾಗಿರುವದು" (ಛಾಂ. ೬–೫–೪) ಎಂಬುದೇ ಮುಂತಾದ ಶ್ರುತಿಗಳಿಂದ (ಇದು ಸಿದ್ಧವಾಗಿರುತ್ತದೆ).

ಜೀವನು ಪರಮಾತ್ಮನೇ, ಆದ್ದರಿಂದ ಜಾತ್ಯಾದಿರಹಿತನು

(ಮೂಲ)

ಕಥಂ ಚ ಅಹಂ ಭಿನ್ನಜಾತ್ಯನ್ವಯಸಂಸ್ಕಾರವರ್ಜಿತಃ ಇತ್ಯೇತತ್ ಶೃಣು । ಯೋಽಸೌ ನಾಮರೂಪಯೋರ್ವ್ಯಾಕರ್ತಾ

1. ಶರೀರವು ನಾಮರೂಪಾತ್ಮಕವಾದ್ದರಿಂದ ಅದರಲ್ಲಿ ಬೇರೆ ಜಾತ್ಯನ್ವಯಸಂಸ್ಕಾರಗಳಿರಬಹುದು– ಎಂಬುದನ್ನು ಉಪಸಂಹಾರಮಾಡುವದಕ್ಕೆ ಈಗ ಹೊರಟಿದೆ. ಹುಟ್ಟುವದು ಜಾತಿಯು; ಆಯಾ ತಂದೆತಾಯಿಗಳ ಆಕೃತಿಯು ಹಿಂಬಾಲಿಸುವದು ಅನ್ವಯವು; ಜಾತಕರ್ಮ, ಉಪನಯನ– ಮುಂತಾದವುಗಳನ್ನು ಪಡೆಯುವದು ಸಂಸ್ಕಾರವು.

2. ಜಾತಕರ್ಮವೇ ಮುಂತಾದ ಕರ್ಮಗಳಲ್ಲಿ ಶರೀರವು ಮಂತ್ರಸಂಸ್ಕೃತವಾಗುತ್ತದೆ, ಆತ್ಮನಿಗೆ ಯಾವ ಮಂತ್ರವೂ ಇಲ್ಲ.

ನಾಮರೂಪಧರ್ಮವಿಲಕ್ಷಣಃ ಸ ಏವ ನಾಮರೂಪೇ ವ್ಯಾಕುರ್ವನ್ ಸೃಷ್ಟ್ವಾವ ಇದಂ ಶರೀರಂ ಸ್ವಯಂ ಸಂಸ್ಕಾರಧರ್ಮವರ್ಜಿತಃ ನಾಮರೂಪೇ ಇಹ ಪ್ರವಿಷ್ಟಃ, ಅನ್ಯೈರದೃಷ್ಟಃ ಸ್ವಯಂ ಪಶ್ಯನ್ ತಥಾ ಅಶ್ರುತಃ ಶೃಣ್ವನ್ ಅಮತೋ ಮನ್ವಾನಃ ಅವಿಜ್ಞಾತೋ ವಿಜಾನನ್, 'ಸರ್ವಾಣಿ ರೂಪಾಣಿ ವಿಚಿತ್ಯ ಧೀರೋ ನಾಮಾನಿ ಕೃತ್ವಾಽಭಿವದನ್ ಯದಾಸ್ತೇ' ಇತಿ । ಅಸ್ಮಿನ್ನರ್ಥೇ ಶ್ರುತಯಃ ಸಹಸ್ರಶಃ - "ತತ್ಸೃಷ್ಟ್ವಾವ । ತದೇವಾನುಪ್ರಾವಿಶತ್" (ತೈ. ೨-೬), "ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಮ್" (ತೈ. ಆ. ೩-೧೨-೨೧), "ಸ ಏಷ ಇಹ ಪ್ರವಿಷ್ಟಃ" (ಬೃ. ೧-೪-೭), "ಏಷ ತ ಆತ್ಮಾ" (ಬೃ. ೩-೭-೨೩), "ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತ" (ಏ. ೧-೩), "ಏಷ ಸರ್ವೇಷು ಭೂತೇಷು ಗೂಢೋಽತ್ಮಾ" (ಶ್ವೇ. ೧-೩-೧೨), "ಸೇಯಂ ದೇವತೈಕ್ಷತ ಹನ್ತಾ ಹಮಿಮಾಸ್ತಿಸ್ರೋ ದೇವತಾಃ" (ಛಾಂ. ೬-೩-೨) ಇತ್ಯಾದ್ಯಾಃ॥[1]

ಸ್ಮೃತಯೋಽಪಿ- "ಆತ್ಮೈವ ದೇವತಾಃ ಸರ್ವಾಃ" (ಮನು. ೧೨-೧೧೯), "ನವದ್ವಾರೇ ಪುರೇ ದೇಹೀ" (ಗೀ. ೫-೧೩), "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ" (ಗೀ. ೧೩-೨), "ಸಮಂ ಸರ್ವೇಷು ಭೂತೇಷು" (ಗೀ. ೧೩-೨೭), "ಉಪದ್ರಷ್ಟಾನುಮನ್ತಾ ಚ" (ಗೀ. ೧೩-೨೨) " ಉತ್ತಮಃ ಪುರುಷಸ್ತ್ವನ್ಯಃ" (ಗೀ. ೧೫-೧೭), "ಆಶರೀರಂ ಶರೀರೇಷು" (?)[2] ಇತ್ಯಾದ್ಯಾಃ। ತಸ್ಮಾತ್ ಜಾತ್ಯನ್ವಯಸಂಸ್ಕಾರವರ್ಜಿತಸ್ತ್ವಮ್ ಇತಿ ಸಿದ್ಧಮ್ ॥ ೧೮ ॥

(ಅರ್ಥ)

ಇನ್ನು ನಾನು ಬೇರೆಬೇರೆಯ ಜಾತಿ, ವಂಶ, ಸಂಸ್ಕಾರ– ಇವುಗಳಿಲ್ಲದವನು ಹೇಗೆ ಎಂದು (ಕೇಳಿದೆಯಲ್ಲ), ಅದನ್ನು (ವಿವರಿಸುವೆನು) ಕೇಳು. ನಾಮರೂಪಗಳನ್ನು ವಿಂಗಡಿಸಮವನಾಗಿಯೂ ನಾಮರೂಪಧರ್ಮಗಳಿಗಿಂತ ವಿಲಕ್ಷಣನಾಗಿಯೂ, (ಛಾಂ. ೮-೧೪-೧) ಇರುವ ಈ ಪರಮಾತ್ಮನುಂಟಷ್ಟೆ, ಅವನೇ

---

1. 'ಶ್ರುತಯಃ' ಎಂದು ಮೈ॥ ವಾ॥ ಪಾಠಗಳಲ್ಲಿ ಹೆಚ್ಚಾಗಿದೆ.

2. ಈ ಸ್ಮೃತಿಯು ಯಾವದೆಂಬುದು ತಿಳಿಯಲಿಲ್ಲ. ಇಂಥದ್ದೊಂದು ವಾಕ್ಯವು ಕಠದಲ್ಲಿದೆ.

ನಾಮರೂಪಗಳನ್ನು ವಿಂಗಡಿಸಿ ಈ ಶರೀರವನ್ನು ಸೃಷ್ಟಿಸಿ ತಾನು ಯಾವ ಸಂಸ್ಕಾರಧರ್ಮಗಳೂ ಇಲ್ಲದವನಾಗಿ ನಾಮರೂಪಗಳಲ್ಲಿ ಇಲ್ಲಿಯೇ ಪ್ರವೇಶಿಸಿರುವನು (ಬೃ. ೧–೪–೭). ಮತ್ತೊಬ್ಬರಿಗೆ ಕಾಣಿಸದೆ ತಾನು ನೋಡುತ್ತಲೂ, ಕೇಳಿಸದೆ ತಾನು ಕೇಳುತ್ತಲೂ, ಯೋಚನೆಗೆ ಸಿಕ್ಕದೆ ಯೋಚಿಸುತ್ತಲೂ ಅರಿವಿಗೆ ಸಿಕ್ಕದೆ ಅರಿಯುತ್ತಲೂ (ಬೃ. ೩–೭–೧೩, ೩–೯–೧೧) ಎಲ್ಲಾ ರೂಪಗಳನ್ನೂ ಕಂಡು (ಆ) ಧೀರನು (ಅವುಗಳಿಗೆ) ಹೆಸರುಗಳನ್ನು ಮಾಡಿಕೊಂಡು ಕರೆಯುತ್ತಲೂ ಇರುವನು. (ತೈ. ಆ. ೩–೧೨–೭).

ಈ ವಿಷಯದಲ್ಲಿ "ಅದನ್ನು ಸೃಷ್ಟಿಸಿ ಅದನ್ನೇ ಅನುಪ್ರವೇಶಮಾಡಿದನು" (ತೈ. ೨–೬), "ಒಳಗೆ ಹೊಕ್ಕು ಜನರನ್ನು ಶಾಸನಮಾಡುತ್ತಿರುವವನು" (ತೈ. ಆ. ೩–೧೨–೨೧) "ಆ ಈತನು ಇಲ್ಲಿ ಪ್ರವೇಶಿಸಿರುವನು" (ಬೃ. ೧–೪–೭), "ಇವನು ನಿನ್ನ ಆತ್ಮನು" (ಬೃ. ೩–೭–೨೩), "ಆತನು ಇದೇ ಎಲ್ಲೆಯನ್ನು ಸೀಳಿಕೊಂಡು ಈ ದ್ವಾರದಿಂದ (ಒಳಗೆ) ಬಂದು ಸೇರಿದನು" (ಐ. ೧–೩). "ಈ ಎಲ್ಲಾ ಪ್ರಾಣಿಗಳಲ್ಲಿಯೂ ಹೊಕ್ಕಿರುವ ಆತ್ಮನು" (ಕ. ೧–೩–೧೨), "ಆ ಈ ದೇವತೆಯು (ಹೀಗೆಂದು) ಯೋಚಿಸಿತು: "ಒಳ್ಳೆಯದು, ನಾನು ಈ ಮೂರು ದೇವತೆಗಳನ್ನು (ಈ ಜೀವಾತ್ಮನ ರೂಪದಿಂದ ಹೊಕ್ಕು ನಾಮರೂಪಗಳನ್ನು ವಿಂಗಡಿಸುವೆನು)" (ಛಾಂ. ೬–೩–೨) ಇವೇ ಮುಂತಾದ ಸಾವಿರಾರು ಶ್ರುತಿಗಳಿರುವವು.

"ಆತ್ಮನೇ ಎಲ್ಲಾ ದೇವತೆಗಳೂ" (ಮನು. ೧೨–೧೧೯), "ಒಂಬತ್ತು ದ್ವಾರಗಳ (ಈ) ದೇಹವೆಂಬ ಪುರದಲ್ಲಿ ದೇಹಿಯು (ಏನೂ ಮಾಡದೆ ಕುಳಿತಿರುವನು)" (ಗೀ. ೫–೧೩), "ಕ್ಷೇತ್ರಜ್ಞನೂ ನಾನೆಂದು ತಿಳಿ" (೧೩–೨), "ಎಲ್ಲಾ ಭೂತಗಳಲ್ಲಿಯೂ ಸಮನಾಗಿ" (ಗೀ. ೧೩–೨೭), "ನೋಡುತ್ತಲೂ ಅನುಮತಿಯನ್ನು ಕೊಡುತ್ತಲೂ) (ಗೀ. ೧೩–೨೨), "ಆದರೆ ಉತ್ತಮ ಪುರುಷನು ಬೇರೆ" (ಗೀ. ೧೫–೧೭) ಶರೀರಗಳಲ್ಲಿದ್ದು ಅಶರೀರನಾಗಿರುವ" (?) ಇವೇ ಮುಂತಾದ ಸ್ಮೃತಿಗಳೂ (ಇರುವವು). ಆದ್ದರಿಂದ ನೀನು ಜಾತಿ, ಅನ್ವಯ, ಸಂಸ್ಕಾರ– ಇವು (ಯಾವವೂ) ಇಲ್ಲದವನೆಂದು ಸಿದ್ಧವಾಯಿತು.

ಭೇದಜ್ಞಾನವನ್ನು ಶ್ರುತಿಯಲ್ಲಿ ನಿಂದಿಸಿದೆ

ಸ ಯದಿ ಬ್ರೂಯಾತ್ — ಅನ್ಯ ಏವಾಹಮ್ ಅಜ್ಞಃ ಸುಖೀ ದುಃಖೀ ಬದ್ಧಃ ಸಂಸಾರೀ । ಅನ್ಯೋಽಸೌ ಮದ್ವಿಲಕ್ಷಣಃ ಅಸಂಸಾರೀ

ದೇವಃ । ತಮ್ಅಹಂ ಬಲ್ಯುಪಹಾರನಮಸ್ಕಾರಾದಿಭಿಃ ವರ್ಣಾಶ್ರಮ ಕರ್ಮಭಿಶ್ಚ ಆರಾಧ್ಯ ಸಂಸಾರಸಾಗರಾತ್ ಉತ್ತೀರ್ಷುರಸ್ಮಿ । ಕಥಮಹಂ ಸ ಏವೇತಿ ? ಆಚಾರ್ಯೋ ಬ್ರೂಯಾತ್ — ನೈವಂ ಸೋಮ್ಯ, ಪ್ರತಿಪತ್ತುಮರ್ಹಸಿ । ಪ್ರತಿಷಿದ್ಧತ್ವಾತ್ ಭೇದಪ್ರತಿಪತ್ತೇಃ । ಕಥಂ ಪ್ರತಿಷಿದ್ಧಾ ಭೇದಪ್ರತಿಪತ್ತಿರಿತಿ ? ಅತ ಆಹ— "ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ " (ಬೃ. ೧-೪-೧೦) "ಬ್ರಹ್ಮ ತಂ ಪರಾದಾದ್ಯೋಽನ್ಯತ್ರಾತ್ಮನೋ ಬ್ರಹ್ಮ ವೇದ " (ಬೃ. ೨-೪-೬, ೪-೫-೭), "ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ " (ಬೃ. ೪-೪-೧೯) ಇತ್ಯೇವಮಾದ್ಯಾಃ ॥ ೧೯ ॥

(ಅರ್ಥ)

ಅವನು "ಅಜ್ಞನೂ ಸುಖದುಃಖಗಳುಳ್ಳವನೂ ಬದ್ಧನೂ ಸಂಸಾರಿಯೂ ಆಗಿರುವ ನಾನೇ ಬೇರೆ; ನನಗಿಂತ ವಿಲಕ್ಷಣನಾಗಿಯೂ ಅಸಂಸಾರಿಯೂ ಆಗಿರುವ ಆ ದೇವನೇ ಬೇರೆ. ಆತನನ್ನು ನಾನು ಬಲಿಯನ್ನು ಒಪ್ಪಿಸುವದು, ನಮಸ್ಕಾರಮಾಡುವದು– ಮುಂತಾದವುಗಳಿಂದಲೂ[1] ವರ್ಣಾಶ್ರಮಕರ್ಮಗಳಿಂದಲೂ ಆರಾಧನೆಮಾಡಿ ಸಂಸಾರಸಾಗರದಿಂದ ಪಾರಾಗಬೇಕೆಂದು ಬಯಸುತ್ತಿರುವೆನು. (ಹೀಗಿರುವಲ್ಲಿ) ನಾನು ಆತನೇ ಹೇಗಾದೇನು ? " ಎಂದು ಕೇಳಿದರೆ ಆಚಾರ್ಯನು ಹೇಳಬೇಕಾದದ್ದೇನೆಂದರೆ, "ಅಯ್ಯ, ಹೀಗೆಂದು ತಿಳಿಯಬೇಡ ; ಏಕೆಂದರೆ ಭೇದಜ್ಞಾನವನ್ನು ಶ್ರುತಿಯಲ್ಲಿ ಪ್ರತಿಷೇಧಮಾಡಿರುತ್ತದೆ. ಭೇದಜ್ಞಾನವು ಹೇಗೆ ಪ್ರತಿಷಿದ್ಧವಾಗಿದೆ ? ಎಂದರೆ ಅದಕ್ಕೆ ಹೇಳುತ್ತಾನೆ: ಈ (ದೇವತೆಯು) ಬೇರೆ, ನಾನು ಬೇರೆಯಾಗಿರುತ್ತೇನೆ– ಎಂದು (ಉಪಾಸನೆಮಾಡುವವನಿರುವನಲ್ಲ) ಅವನು ಅರಿಯನು " (ಬೃ. ೧-೪-೧೦) "ಆತ್ಮನಿಗಿಂತ ಬ್ರಾಹ್ಮಣ್ಯವನ್ನು ಬೇರೆ ಎಂದು ಯಾವನು ತಿಳಿಯುವನೋ ಅವನನ್ನು ಬ್ರಾಹ್ಮಣ್ಯವು ತಿರಸ್ಕರಿಸುತ್ತದೆ" (ಬೃ. ೨-೪-೬) "ಯಾವನು ಈ (ಬ್ರಹ್ಮ)ದಲ್ಲಿ ಭೇದವನ್ನು ಅರಿಯುವನೋ ಅವನು ಸಾವಿನ ಮೇಲೆ ಸಾವನ್ನು

---

1. ಭಗವಂತನು ಜೀವನಿಗಿಂತ ಬೇರೆಯಾಗಿಯೇ ಇರುತ್ತಾನೆ; ಜೀವನು ಅವನನ್ನು ಸತತವೂ ಆರಾಧನೆಮಾಡಿ ಶರೀರವು ಬಿದ್ದಬಳಿಕ ಭಗವತ್ಸ್ವರೂಪವನ್ನೇ ಪಡೆಯುವನು ಎಂಬುದು ಭಾಗವತಮತವು. ಇದನ್ನು ಸೂತ್ರಭಾಷ್ಯದಲ್ಲಿಯೂ ಗೀತಾಭಾಷ್ಯದಲ್ಲಿಯೂ ಬೃಹದಾರಣ್ಯಕಭಾಷ್ಯದಲ್ಲಿಯೂ ಖಂಡಿಸಿದೆ.

ಪಡೆಯುತ್ತಿರುವನು " (ಬೃ. ೪-೪-೧೯)- ಇವೇ ಮುಂತಾದ (ಶ್ರುತಿಗಳು ಪ್ರತಿಷೇಧಿಸುತ್ತವೆ). [1]

ಭೇದಜ್ಞಾನವು ಸಂಸಾರಕ್ಕೂ
ಅಭೇದಜ್ಞಾನವು ಮೋಕ್ಷಕ್ಕೂ ಕಾರಣ

(ಮೂಲ)

ಏತಾ ಏವ ಶ್ರುತಯೋ ಭೇದಪ್ರತಿಪತ್ತೇಃ ಸಂಸಾರಗಮನಂ ದರ್ಶಯನ್ತಿ । ಅಭೇದಪ್ರತಿಪತ್ತೇಶ್ಚ ಮೋಕ್ಷಂ ದರ್ಶಯನ್ತಿ ಸಹಸ್ರಶಃ । "ಸ ಆತ್ಮಾ ತತ್ತ್ವಮಸಿ " (ಛಾಂ. ೬-೧೩-೩) ಇತಿ ಪರಮಾತ್ಮಭಾವಂ ವಿಧಾಯ " ಆಚಾರ್ಯವಾನ್ ಪುರುಷೋ ವೇದ " (ಛಾಂ. ೬-೧೪-೨) ಇತ್ಯುಕ್ತ್ವಾ, " ತಸ್ಯ ತಾವದೇವ ಚಿರಮ್ " (ಛಾಂ. ೬-೧೪-೨) ಇತಿ ಮೋಕ್ಷಂ ದರ್ಶಯನ್ತಿ ಅಭೇದವಿಜ್ಞಾನಾದೇವ । ಸತ್ಯಾಭಿಸನ್ಧಸ್ಯ ಅತಸ್ಕರಸ್ಯೇವ ದಾಹಾದ್ಯಭಾವಂ[2] ಸಂಸಾರಾಭಾವಂ ದರ್ಶಯನ್ತಿ ದೃಷ್ಟಾನ್ತೇನ । ಭೇದದರ್ಶನಾತ್ ಅಸತ್ಯಾಭಿಸನ್ಧಸ್ಯ ಸಂಸಾರಗಮನಂ ದರ್ಶಯನ್ತಿ ತಸ್ಕರಸ್ಯೇವ ದಾಹಾದಿದೃಷ್ಟಾನ್ತೇನ । "ತ ಇಹ ವ್ಯಾಘ್ರೋ ವಾ " (ಛಾಂ. ೬-೯-೩) ಇತ್ಯಾದಿನಾ ಚ । ಅಭೇದದರ್ಶನಾತ್ "ಸ ಸ್ವರಾಡ್ಭವತಿ " (ಛಾಂ. ೭-೨೫-೨) ಇತ್ಯುಕ್ತ್ವಾ ತದ್ವಿಪರೀತೇನ ಭೇದದರ್ಶನೇನ ಸಂಸಾರಗಮನಂ ದರ್ಶಯನ್ತಿ "ಅಥ ಯೇಽನ್ಯಥಾತೋ ವಿದುರನ್ಯರಾಜಾನಸ್ತೇ ಕ್ಷಯ್ಯಲೋಕಾ ಭವನ್ತಿ " (ಛಾಂ. ೭-೨೫-೨) ಇತಿ[3] ಪ್ರತಿಶಾಖಮ್ । ತಸ್ಮಾತ್ ಮೃಷೈವ ಏವಮ್ ಅನಾದೀಃ ಬ್ರಾಹ್ಮಣ ಪುತ್ರಃ ಅದೋಽನ್ವಯಃ ಸಂಸಾರೀ ಪರಮಾತ್ಮವಿಲಕ್ಷಣಃ ಇತಿ ॥೨೦॥

---

1. 'ಇತ್ಯೇವಮಾದ್ಯಾಃ' ಎಂಬ ಮೂಲವು ಆಚ್ಚಿನ ಪುಸ್ತಕಗಳಲ್ಲೆಲ್ಲ ಇದೆ ; ಆದರೆ ಅದು ಅನ್ವಯವಾಗುವದಕ್ಕೆ 'ಶ್ರುತಯಃ ಪ್ರತಿಷೇಧನ್ತಿ' ಎಂದು ಅಧ್ಯಾಹಾರಮಾಡಬೇಕು.

2. 'ದಾಹಾದ್ಯಭಾವವತ್ ' ಎಂಬ ಮೈ॥ ನಿ॥ ಪಾಠವನ್ನು ಹೀಗೆ ತಿದ್ದಿಕೊಂಡಿದೆ. 'ಸತ್ಯಾಭಿಸನ್ಧಸ್ಯ ಅತಸ್ಕರಸ್ಯೇವ ದಾಹಾದ್ಯಭಾವದೃಷ್ಟಾನ್ತೇನ ಸಂಸಾರಾಭಾವಂ ದರ್ಶಯನ್ತಿ' ಎಂದು ವಾ॥ ಆ॥ ಪಾಠಗಳಲ್ಲಿ ತಿದ್ದಿರುತ್ತದೆ. ಇಲ್ಲಿ ಲೇಖಕರು ಮೂಲವನ್ನು ಏನೋ ಮಾರ್ಪಡಿಸಿ ಬರೆದುಕೊಂಡಿರುತ್ತಾರೆಂದು ತೋರುತ್ತದೆ.

3. ಇದರ ಮುಂದೆ 'ಏವಂ' ಎಂಬ ಮಾತು ಇದ್ದರೆ ಸರಿಯಾಗುವದು.

(ಅರ್ಥ)

ಇದೇ ಶ್ರುತಿಗಳು ಭೇದಜ್ಞಾನದಿಂದ ಸಂಸಾರಗತಿ(ಯಾಗುವದೆಂದು) ತಿಳಿಸುತ್ತವೆ. ಇದಲ್ಲದೆ ಅಭೇದಜ್ಞಾನದಿಂದ ಮೋಕ್ಷವಾಗುವದೆಂದು ಸಾವಿರಾರು ಶ್ರುತಿಗಳು ಹೇಳುತ್ತವೆ. ಹೇಗೆಂದರೆ "ಅದೇ ಆತ್ಮನು, ಅದೇ ನೀನು" (ಛಾಂ. ೬–೧೩–೩) ಎಂದು ಪರಮಾತ್ಮಭಾವವನ್ನು ಹೇಳಿ "ಯಾವನಿಗೆ ಆಚಾರ್ಯನು ಇರುವನೋ ಅವನಿಗೆ ತಿಳಿಯುವದು" (ಛಾಂ. ೬–೧೪–೨) ಎಂದು ಹೇಳಿದ ಮೇಲೆ "(ಎಲ್ಲಿಯವರೆಗೆ ಶರೀರವು ಬೀಳದಿರುವದೋ) ಅಲ್ಲಿಯವರೆಗೇ ಅವನಿಗೆ ತಡವು (ಆಮೇಲೆ ಕೂಡಲೆ ಸತ್ಯನ್ನು ಸೇರಿಕೊಳ್ಳುವನು)" (ಛಾಂ. ೬–೧೪–೨) ಎಂದು ಅಭೇದವಿಜ್ಞಾನದಿಂದಲೇ ಮೋಕ್ಷವುಂಟಾಗುವದೆಂದು ತಿಳಿಸುತ್ತವೆ. ಕಳ್ಳನಲ್ಲದವನಿಗೆ (ಕೈ)ಸುಡದಿರುವದೇ ಮುಂತಾದ ರಂತೆ[1] ಸತ್ಯ(ನಾದ ಪರಮಾತ್ಮನಲ್ಲಿ) ತಾತ್ಪರ್ಯವುಳ್ಳವನಿಗೆ ಸಂಸಾರವಿರುವದಿಲ್ಲ ಎಂದು ದೃಷ್ಟಾಂತದಿಂದ ತಿಳಿಸುತ್ತವೆ. "ಅವು ಇಲ್ಲಿ ಹುಲಿಯಾಗಿರಲಿ (ಸಿಂಹವಾಗಿರಲಿ) .... ಮೊದಲು ಏನೇನಾಗಿದ್ದವೋ ಅದದೇ ಎಚ್ಚತ್ತ ಬಳಿಕ ಆಗಿಬಿಡುವವು"[2] (ಛಾಂ. ೬–೯–೨) ಮುಂತಾದ ವಾಕ್ಯದಿಂದಲೂ (ಭೇದಜ್ಞಾನಿಗಳಿಗೆ ಸಂಸಾರಗತಿಯನ್ನು ತಿಳಿಸುವವು). ಅಭೇದದರ್ಶನದಿಂದ "ಅವನು ಸ್ವರಾಜನಾಗುವನು" (ಛಾಂ. ೭–೨೫–೨) ಎಂದು ಹೇಳಿ ಅದಕ್ಕೆ ವಿಪರೀತವಾದ ಭೇದದರ್ಶನದಿಂದ ಸಂಸಾರಗತಿಯಾಗುವದೆಂದು "ಯಾರು ಇದಕ್ಕಿಂತ ಬೇರೆಯಾಗಿ ತಿಳಿಯುವರೋ ಅವರಿಗೆ ಮತ್ತೊಬ್ಬ ರಾಜನಿರುವನು, ಅವರ ಲೋಕವು ಕ್ಷಯವಾಗುವದು (ಛಾಂ. ೭–೨೫–೨) ಎಂದು ತಿಳಿಸುವವು. ಹೀಗೆ ಪ್ರತಿಶಾಖೆಯಲ್ಲಿಯೂ (ಶ್ರುತಿಗಳು ತಿಳಿಸುತ್ತವೆ).

ಆದ್ದರಿಂದ "ನಾನು ಬ್ರಾಹ್ಮಣಪುತ್ರನು, ಇಂಥ ವಂಶದವನು, ಸಂಸಾರಿಯು, ಪರಮಾತ್ಮನಿಗಿಂತ ವಿಲಕ್ಷಣನು' ಎಂದು (ನೀನು) ಸುಳ್ಳನ್ನೇ ಹೇಳಿರುವೆ.[3]

ಕರ್ಮತ್ಯಾಗವೇ ಶಾಸ್ತ್ರದ ಉಪದೇಶ

(ಮೂಲ)

ತಸ್ಮಾತ್ ಪ್ರತಿಷಿದ್ಧತ್ವಾತ್ ಭೇದದರ್ಶನಸ್ಯ ಭೇದವಿಷಯತ್ವಾಚ್ಚ ಕರ್ಮೋತ್ಪಾದಾನಸ್ಯ, ಕರ್ಮಸಾಧನತ್ವಾಚ್ಚ ಯಜ್ಞೋಪ

1. ಕಳ್ಳನಾದವನಿಗೆ ಅಗ್ನಿಪರೀಕ್ಷೆಮಾಡಿದರೆ ಸತ್ಯವನ್ನು ನುಡಿದದ್ದರಿಂದ ಅವನ ಕೈ ಸುಡದಿರುವಂತೆ.

2. ಸುಷುಪ್ತಿಯಲ್ಲಿ ಬ್ರಹ್ಮವನ್ನು ಸೇರುತ್ತವೆಯಾದರೂ ಅವರ ಜ್ಞಾನವಿಲ್ಲದ್ದರಿಂದ ಅವಕ್ಕೆ ಮುಕ್ತಿಯಾಗುವದಿಲ್ಲ ಎಂದರ್ಥ.

3. ಏಕೆಂದರೆ ನೀನು ನಿತ್ಯಮುಕ್ತನಾದ ಪರಮಾತ್ಮನೇ.

ವೀತಾದೇಃ ; ಕರ್ಮಸಾಧನೋಪಾದಾನಸ್ಯ ಪರಮಾತ್ಮಭೇದಪ್ರತಿಪತ್ತ್ಯಾ ಪ್ರತಿಷೇಧಃ ಕೃತೋ ವೇದಿತವ್ಯಃ । ಕರ್ಮಣಾಂ ತತ್ಸಾಧನಾನಾಂ ಚ ಯಜ್ಞೋಪವೀತಾದೀನಾಂ ಪರಮಾತ್ಮಭೇದಪ್ರತಿಪತ್ತಿವಿರುದ್ಧತ್ವಾತ್ । ಸಂಸಾರಿಣೋ ಹಿ ಕರ್ಮಾಣಿ ವಿಧೀಯಂತೇ ತತ್ಸಾಧನಾನಿ ಚ ಯಜ್ಞೋಪವೀತಾದೀನಿ । ನ ಪರಮಾತ್ಮನೋಽಭೇದದರ್ಶಿನಃ[1] ಭೇದದರ್ಶನಮಾತ್ರೇಣ ಚ ತತೋಽನ್ಯತ್ವಮ್ ॥ ೨೧ ॥

(ಆರ್ಥ)

ಆದ್ದರಿಂದ (ಹೀಗೆ) ಭೇದದರ್ಶನವನ್ನು (ಶ್ರುತಿಯಲ್ಲಿ) ಪ್ರತಿಷೇಧಮಾಡಿರುವದರಿಂದಲೂ ಕರ್ಮವನ್ನು ಸ್ವೀಕರಿಸುವದು ಭೇದವಿಷಯವಾಗಿರುವದರಿಂದಲೂ ಯಜ್ಞೋಪವೀತವೇ ಮುಂತಾದದ್ದು[2] ಕರ್ಮಕ್ಕೇ ಸಾಧನವಾಗಿರುವದರಿಂದಲೂ ಪರಮಾತ್ಮನಿಗೂ (ಜೀವನಿಗೂ) ಅಭೇದಜ್ಞಾನವನ್ನು (ಹೇಳಿದ್ದ)ರಿಂದ ಕರ್ಮಸಾಧನಗಳನ್ನು ಸ್ವೀಕರಿಸಬಾರದೆಂದು ಹೇಳಿದಂತಾಯಿತೆಂದು ತಿಳಿಯಬೇಕು.[3] ಏಕೆಂದರೆ ಕರ್ಮಗಳೂ ಅವುಗಳ ಸಾಧನವಾಗಿರುವ ಯಜ್ಞೋಪವೀತವೇ ಮುಂತಾದವುಗಳೂ ಪರಮಾತ್ಮನಿಗೂ ತನಗೂ ಅಭೇದವೆಂದು (ತಿಳಿಯುವ) ಜ್ಞಾನಕ್ಕೆ ವಿರುದ್ಧವಾಗಿರುತ್ತವೆ. ಸಂಸಾರಿಗೆ ಕರ್ಮಗಳನ್ನೂ ಅದರ ಸಾಧನವಾದ ಯಜ್ಞೋಪವೀತಾದಿಗಳನ್ನೂ ವಿಧಿಸಿದೆಯೇ ಹೊರತು ಪರಮಾತ್ಮನಿಗೂ ತನಗೂ ಭೇದವಿಲ್ಲವೆಂದು ಅರಿತುಕೊಂಡವನಿಗೆ (ವಿಧಿ)ಸಿಲ್ಲ.[4] ಭೇದದರ್ಶನಮಾತ್ರದಿಂದಲೇ ಆ (ಪರಮಾತ್ಮನಿಗಿಂತ ನಾನು) ಬೇರೆಯಾಗಿರುವದು.[5]

---

1. ವ್ಯಾಖ್ಯಾನದಲ್ಲಿ 'ನ ಪರಮಾತ್ಮನೋಽನನ್ಯತ್ವದರ್ಶಿನ ಇತ್ಯರ್ಥಃ' — ಎಂದಿರುವದನ್ನು ಕಂಡೋ ಏನೋ, ಈ ವಾಕ್ಯವನ್ನು ಮೈ॥ ಪಾಠದಲ್ಲಿ ಕಂಸದಲ್ಲಿಟ್ಟಿದೆ.

2. ಪತ್ನೀಪುತ್ರಧನಾದಿಗಳು ಎಂದರ್ಥ.

3. ಕರ್ಮವನ್ನೂ ಕರ್ಮಸಾಧನಗಳನ್ನೂ ಬಿಡಬೇಕು—ಎಂದು ಸಂನ್ಯಾಸವನ್ನು ಇಲ್ಲಿ ಶ್ರುತಾರ್ಥಾಪತ್ತಿಪ್ರಮಾಣದಿಂದ ಸಿದ್ಧಪಡಿಸಿರುತ್ತದೆ. ಬೃಹದಾರಣ್ಯಕಜಾಬಾಲಾದಿಗಳಲ್ಲಿ ಪ್ರತ್ಯಕ್ಷವಾಗಿಯೇ ಶ್ರುತಿಯಲ್ಲಿ ಕರ್ಮಸಾಧನಸಂನ್ಯಾಸವನ್ನು ವಿಧಿಸಿರುತ್ತದೆ ಎಂದು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಅಲ್ಲಲ್ಲಿ ಹೇಳಿರುತ್ತಾರೆ.

4. ವಿಧಿಸುವದಕ್ಕೂ ಆಗುವದಿಲ್ಲ.

5. ಆತ್ಮೈಕತ್ವವಾದದಲ್ಲಿ ಕರ್ಮವಿಧಿಗೆ ಅವಕಾಶವೆಲ್ಲಿ ? ಎಂಬ ತಕ್ಷೇಪಕ್ಕೆ ಪರಿಹಾರವನ್ನು ಇಲ್ಲಿ ಸೂಚಿಸಿದೆ.

ಶಾಸ್ತ್ರದಲ್ಲಿ ಕರ್ಮನಿವೃತ್ತಿಯನ್ನು ಹೇಳಿದೆ ಎಂಬುದು ಹೇಗೆ?

(ಮೂಲ)

ಯದಿ ಕರ್ಮಾಣಿ ಕರ್ತವ್ಯಾನಿ ನ ನಿವಿವರ್ತಯಿಷಿತಾನಿ ಕರ್ಮಸಾಧನಾಸಂಬನ್ಧಿನಃ ಕರ್ಮನಿಮಿತ್ತಜಾತ್ಯಾಶ್ರಮಾದ್ಯಸಂಬನ್ಧಿನಶ್ಚ; ಪರಮಾತ್ಮನಶ್ಚ ಆತ್ಮನೈವ ಅಭೇದಪ್ರತಿಪತ್ತಿಂ ನಾವಕ್ಷ್ಯತ್ "ಸ ಆತ್ಮಾ ತತ್ತ್ವಮಸಿ" (ಛಾಂ. ೬-೧೩-೩) ಇತ್ಯೇವಮಾದಿಭಿರ್ನಿಶ್ಚಿತರೂಪೈರ್ವಾಕ್ಯೈಃ। ಭೇದಪ್ರತಿಪತ್ತಿನಿನ್ದಾಂ ಚ ನಾಭ್ಯುಧಾಸ್ಯತ್। "ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ" (ಬೃ.೪-೪-೨೩), "ಅನನ್ವಾಗತಂ ಪುಣ್ಯೇನಾನನ್ವಾಗತಂ ಪಾಪೇನ" (ಬೃ. ೪-೩-೨೨), "ಅತ್ರ ಸ್ತೇನೋಽಸ್ತೇನಃ" (ಬೃ. ೪-೩-೨೨) ಇತ್ಯಾದಿನಾ ಕರ್ಮಸಂಬನ್ಧಿಸ್ವರೂಪತ್ವಂ ಕರ್ಮನಿಮಿತ್ತವರ್ಣಾದ್ಯಸಂಬನ್ಧರೂಪತಾಂ ಚ ನಾಭ್ಯುಧಾಸ್ಯತ್, ಕರ್ಮಾಣಿ ಚ ಕರ್ಮಸಾಧನಾನಿ ಚ ಯಜ್ಞೋಪವೀತಾದೀನಿ ಯದಿ ಅಪರಿತಿತ್ಯಾಜಯಿಷಿತಾನಿ। ತಸ್ಮಾತ್ ಸಸಾಧನಂ ಕರ್ಮ ಪರಿತ್ಯಕ್ತವ್ಯಂ ಮುಮುಕ್ಷುಣಾ। ಪರಮಾತ್ಮಾಭೇದದರ್ಶನವಿರೋಧಾತ್। ಆತ್ಮಾ ಚ ಪರ ಏವ ಇತಿ ಪ್ರತಿಪತ್ತವ್ಯಃ ಯಥಾ ಶ್ರುತ್ಯುಕ್ತಲಕ್ಷಣಃ ॥ ೨೨ ॥

(ಅರ್ಥ)

ಕರ್ಮಗಳನ್ನು ಮಾಡಬೇಕಾಗಿದ್ದು (ಅವುಗಳನ್ನು) ಬಿಡಿಸಬೇಕೆಂಬ ತಾತ್ಪರ್ಯವು (ಶ್ರುತಿಗೆ) ಇಲ್ಲದಿದ್ದರೆ ಕರ್ಮಸಾಧನಗಳ ಸಂಬಂಧವಿಲ್ಲದವನೂ ಕರ್ಮನಿಮಿತ್ತವಾಗಿರುವ ಜಾತಿ, ಆಶ್ರಮ– ಮುಂತಾದ ಸಂಬಂಧಗಳು ಇಲ್ಲದವನೂ (ಆದ) ಪರಮಾತ್ಮನಿಗೂ ಆತ್ಮನಿಗೂ[1] ಅಭೇದವನ್ನು ತಿಳಿಯಬೇಕೆಂದು "ಅದು ಆತ್ಮನು, ಅದು ನೀನಾಗಿರುವೆ" (ಛಾಂ.೬-೧೩-೩) ಎಂಬುದೇ ಮುಂತಾದ ನಿಶ್ಚಿತರೂಪವಾದ ವಾಕ್ಯಗಳಿಂದ ಹೇಳುತ್ತಿರಲಿಲ್ಲ, ಭೇದಜ್ಞಾನದ

---

1. ಆತ್ಮನಿಗೂ ಪರಮಾತ್ಮನಿಗೂ ಎಂದರ್ಥ; ಆತ್ಮನಿಗೆ ಪರಮಾತ್ಮರೂಪವನ್ನು ಹೇಳಿದೆಯೇ ಹೊರತು ಪರಮಾತ್ಮನಿಗೆ ಆತ್ಮರೂಪವನ್ನು ಹೇಳಿಲ್ಲ. ಈಗ ಇರುವ ಮೂಲದಂತೆ ಪರಮಾತ್ಮನಿಗೆ ಆತ್ಮನೊಡನೆ ಐಕ್ಯವನ್ನು ಹೇಳಿರುವಂತೆ ತೋರುತ್ತದೆ. 'ಆತ್ಮನೈವ' ಎಂಬುದರ ಬದಲು 'ಆತ್ಮನಶ್ಚ' ಎಂದಿದ್ದರೆ ಉತ್ತಮವೆಂತ ಕಾಣುತ್ತದೆ.

ನಿಂದೆಯನ್ನೂ ಮಾಡುತ್ತಿರಲಿಲ್ಲ.[1] "ಇದು ಬ್ರಾಹ್ಮಣನ ನಿತ್ಯವಾದ ಮಹಿಮೆಯು" (ಕರ್ಮದಿಂದ ಬೆಳೆಯುವದಿಲ್ಲ, ಕಡಿಮೆಯಾಗುವದೂ ಇಲ್ಲ" (ಬೃ.೪–೪–೨೦), "ಪುಣ್ಯದಿಂದಲೂ ಒಡಗೂಡದ, ಪಾಪದಿಂದಲೂ ಒಡಗೂಡದ" (ಬೃ.೪–೩–೨೨) "ಇಲ್ಲಿ ಕಳ್ಳನು ಕಳ್ಳನಾಗಿರುವದಿಲ್ಲ" (ಬೃ. ೪–೩–೨೨)–ಮುಂತಾದ (ವಾಕ್ಯದಿಂದ)[2] ಕರ್ಮಕ್ಕೆ ಸಂಬಂಧಪಡದ ಸ್ವರೂಪವುಳ್ಳವನೆಂದೂ ಕರ್ಮಕ್ಕೆ ನಿಮಿತ್ತವಾದ ವರ್ಣಾದಿಗಳಿಗೆ ಸಂಬಂಧಪಡದ ಸ್ವರೂಪವುಳ್ಳವನೆಂದೂ ಕರ್ಮಗಳನ್ನೂ ಕರ್ಮಸಾಧನಗಳಾದ ಯಜ್ಞೋಪವೀತಾದಿಗಳನ್ನೂ ಪರಿತ್ಯಾಗಮಾಡಿಸುವ ಅಭಿಪ್ರಾಯವಿಲ್ಲದ ಪಕ್ಷದಲ್ಲಿ (ಶ್ರುತಿಯು) ಹೇಳುತ್ತಿರಲಿಲ್ಲ.

ಆದ್ದರಿಂದ ಮುಮುಕ್ಷುವಾದವನು ಸಾಧನಸಹಿತವಾಗಿ ಕರ್ಮವನ್ನು ಬಿಟ್ಟುಬಿಡಬೇಕು; ಏಕೆಂದರೆ (ಅದು) ಪರಮಾತ್ಮನಿಗೂ (ತನಗೂ) ಅಭೇದವೆಂಬ ಜ್ಞಾನಕ್ಕೆ ವಿರುದ್ಧವಾಗಿರುತ್ತದೆ. ಮತ್ತು ಆತ್ಮನು ಶ್ರುತಿಗಳಲ್ಲಿ ಹೇಳಿರುವ ಲಕ್ಷಣದ ಪರಮಾತ್ಮನೇ ಎಂದು ತಿಳಿದುಕೊಳ್ಳಬೇಕು.

ಶಂಕೆ: ಆತ್ಮೈಕ್ಯಜ್ಞಾನವು ಪ್ರತ್ಯಕ್ಷವಿರುದ್ಧವಲ್ಲವೆ?

(ಮೂಲ)

ಸ ಯದಿ ಬ್ರೂಯಾತ್ "ಭಗವನ್, ದಹ್ಯಮಾನೇ ಛಿದ್ಯಮಾನೇ ವಾ ದೇಹೇ ಪ್ರತ್ಯಕ್ಷಾ ವೇದನಾ, ಅಶನಾಯಾದಿನಿಮಿತ್ತಂ ಚ ಪ್ರತ್ಯಕ್ಷಂ ದುಃಖಂ ಮಮ। ಪರಶ್ಚ ಅಯಮಾತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿಘತ್ಸೋಽಪಿಪಾಸಃ ಸರ್ವಗನ್ಧರಸವಿವರ್ಜಿತಃ ಶ್ರೂಯತೇ ಸರ್ವಶ್ರುತಿಷು ಸ್ಮೃತಿಷು ಚ। ಕಥಂ ತದ್ವಿಲಕ್ಷಣಃ ಅನೇಕಸಂಸಾರಧರ್ಮಸಂಯುಕ್ತಃ ಪರಮಾತ್ಮಾನಮಾತ್ಮತ್ವೇನ ಚ। ಮಾಂ ಸಂಸಾರಿಣಂ ಪರಮಾತ್ಮತ್ವೇನ (ಚ),[3] ಅಗ್ನಿಮಿವ ಶೀತತ್ವೇನ ಪ್ರತಿಪದ್ಯೇಯಮ್? ಸಂಸಾರೀ ಚ ಸನ್ ಸರ್ವಾಭ್ಯುದಯನಿಃಶ್ರೇಯಸಸಾಧನೇ ಅಧಿಕೃತಃ ಅಭ್ಯುದಯನಿಃ

---

1. ೧೯ನೆಯ ಖಂಡವನ್ನು ನೋಡಿ.

2. 'ಇತ್ಯಾದಿನಾ' ಎಂಬಲ್ಲಿಗೆ ಒಂದು ಖಂಡವನ್ನು ಮುಗಿಸಿರುವ ಅಚ್ಚಿನ ಪಾಠಕ್ರಮವು ಸರಿಯಲ್ಲ.

3. ಇಲ್ಲಿ ಒಂದು 'ಚ' ಬೇಕು; ವಾ॥ ಪಾಠದಲ್ಲಿ 'ಮಾಂ ಚ' ಎಂದು ಚಕಾರವನ್ನು ಸೇರಿಸಿಕೊಂಡಿದೆ.

ಶ್ರೇಯಸಸಾಧನಾನಿ ಕರ್ಮಾಣಿ ತತ್ಸಾಧನಾನಿ ಚ ಯಜ್ಞೋಪವೀತಾದೀನಿ ಕಥಂ ಪರಿತ್ಯಜೇಯಮ್? ಇತಿ ॥ ೨೩ ॥

(ಅರ್ಥ)

ಆತನು " ಪೂಜ್ಯರೆ, ದೇಹವನ್ನು ಸುಟ್ಟರಾಗಲಿ ಕತ್ತರಿಸಿದರಾಗಲಿ ನನಗೆ ನೋವಾಗುವದು ಪ್ರತ್ಯಕ್ಷವು; ಹಸಿವು ಮುಂತಾದ ನಿಮಿತ್ತದಿಂದ ನನಗೆ ದುಃಖವಾಗುವದೂ ಪ್ರತ್ಯಕ್ಷವಾಗಿದೆ; ಆದರೆ ಈ ಪರಮಾತ್ಮನು[1] ಯಾವ ಪಾಪವೂ ಇಲ್ಲದವನೆಂದೂ ಮುಪ್ಪಿಲ್ಲದವನೆಂದೂ ಮರಣವಿಲ್ಲದವನೆಂದೂ ಶೋಕವಿಲ್ಲದವನೆಂದೂ ಹಸಿವಿಲ್ಲದವನೆಂದೂ ನೀರಡಿಕೆಯಿಲ್ಲದವನೆಂದೂ ಯಾವ ವಾಸನೆಯಾಗಲಿ ಸವಿಯಾಗಲಿ ಇಲ್ಲದವನೆಂದೂ[2] ಎಲ್ಲಾ ಶ್ರುತಿಗಳಲ್ಲಿಯೂ ಸ್ಮೃತಿಗಳಲ್ಲಿಯೂ ಹೇಳಿರುತ್ತದೆ.[3] ಹೀಗಿರುವಲ್ಲಿ ಆ ಪರಮಾತ್ಮನಿಗಿಂತ ಬೇರೆಯ ಸ್ವರೂಪದವನೂ ಅನೇಕ ಸಂಸಾರಧರ್ಮಗಳಿಂದ ಕೂಡಿರುವವನೂ (ಆಗಿರುವ ನಾನು) ಪರಮಾತ್ಮನೇ ನಾನೆಂದೂ ಸಂಸಾರಿಯಾದ ನಾನು ಪರಮಾತ್ಮನೆಂದೂ, ಬೆಂಕಿಯು ತಣ್ಣಗಿದೆ ಎಂದು ತಿಳಿಯುವಂತೆ (ವಿರುದ್ಧವಾಗಿ) ಹೇಗೆ ತಿಳಿದುಕೊಳ್ಳಲಿ? ಮತ್ತು ಸಂಸಾರಿಯಾಗಿದ್ದುಕೊಂಡು ಎಲ್ಲಾ (ಬಗೆಯ) ಅಭ್ಯುದಯದ ಮತ್ತು ನಿಃಶ್ರೇಯಸದ ಸಾಧನಗಳನ್ನು ಮಾಡುವದಕ್ಕೆ ಅಧಿಕಾರಿಯಾಗಿರುವಲ್ಲಿ ಅಭ್ಯುದಯಕ್ಕೂ ನಿಃಶ್ರೇಯಸಕ್ಕೂ ಸಾಧನವಾಗಿರುವ ಕರ್ಮಗಳನ್ನೂ ಆ (ಕರ್ಮಗಳಿಗೆ) ಸಾಧನವಾಗಿರುವ ಯಜ್ಞೋಪವೀತಾದಿಗಳನ್ನೂ ಹೇಗೆ ಬಿಡಲಿ? "[4] ಎಂದು ಕೇಳಿದರೆ–

ಪರಿಹಾರ: ಆತ್ಮನಲ್ಲಿ ವೇದನೆಯು ಪ್ರತ್ಯಕ್ಷವಾಗಿಲ್ಲ

(ಮೂಲ)

ತಂ ಪ್ರತಿಬ್ರೂಯಾತ್— ಯದವೋಚೋ ದಹ್ಯಮಾನೇ ಛಿದ್ಯಮಾನೇ ವಾ ದೇಹೇ ಪ್ರತ್ಯಕ್ಷಾ ವೇದನಾ ಉಪಲಭ್ಯತೇ ಮಮ

1. ಇಲ್ಲಿ ಛಾಂದೋಗ್ಯ ೮–೭–೧ನ್ನು ಗ್ರಂಥಕಾರರು ತಮ್ಮ ವಾಕ್ಯದಲ್ಲಿ ಹೆಣೆದುಕೊಂಡಿರುತ್ತಾರೆಂಬುದು ಸ್ಪಷ್ಟ. ಮೂಲದಲ್ಲಿ 'ಅಯಮಾತ್ಮಾ' ಎಂದು ಒಂದು ಸಲ ಹೆಚ್ಚಾಗಿದೆ; 'ವಿರಜೋ' ಎಂದು ತಪ್ಪಾಗಿ ಅಚ್ಚಾಗಿದೆ.

2. ಕ. ೧–೩–೧೫

3. 'ಸರ್ವಶ್ರುತಿಷು ಸ್ಮೃತಿಷು ಚ' ಎಂಬ ಭಾಗವು ಹೊಸದಾಗಿ ಗ್ರಂಥಕ್ಕೆ ಸೇರಿದ್ದರೂ ಸೇರಿರಬಹುದೆಂದು ತೋರುತ್ತದೆ.

4. ಪರಮಹಂಸಪರಿವ್ರಾಜಕನಾಗಿರುತ್ತೇನೆ ಎಂದು ಹಿಂದೆ ೧೪ರಲ್ಲಿ ಹೇಳಿರುವದು ಇದಕ್ಕೆ ವಿರುದ್ಧವಾಗಿರುವಂತೆ ತೋರುವದು. ಏಕೆಂದರೆ ಪರಮಹಂಸನಿಗೆ ಯಜ್ಞೋಪವೀತವಿಲ್ಲ. ಟೀಕೆಯನ್ನು ನೋಡಿ.

ಇತಿ, ತದಸತ್। ಕಸ್ಮಾತ್? ದಹ್ಯಮಾನೇ ಛಿದ್ಯಮಾನೇ ಇವ ವೃಕ್ಷೇ ಉಪಲಬ್ಧಿಃ ಉಪಲಭ್ಯಮಾನೇ ಕರ್ಮಣಿ ಶರೀರೇ ದಾಹ ಚ್ಛೇದವೇದನಾಯಾ ಉಪಲಭ್ಯಮಾನತ್ವಾತ್ ದಾಹಾದಿಸಮಾನಾ ಶ್ರಯೈವ ವೇದನಾ। ಯತ್ರ ಹಿ ದಾಹಃ ಛೇದೋ ವಾ ಕ್ರಿಯತೇ ತತ್ರೈವ ವ್ಯಪದಿಶತಿ ದಾಹಾದಿವೇದನಾಂ ಲೋಕಃ, ನ ವೇದನಾಂ ದಾಹಾದ್ಯುಪಲಬ್ಧರಿ ಇತಿ। ಕಥಮ್? 'ಕ್ವ ತೇ ವೇದನಾ?' ಇತಿ ಸ್ಪೃಷ್ಟಃ ಶಿರಸಿ ಮೇ ವೇದನಾ ಉರಸಿ ಉದರೇ ಇತಿ ವಾ ಯತ್ರ ದಾಹಾದಿಃ ತತ್ರೈವ ವ್ಯಪದಿಶತಿ, ನ ತು ಉಪಲಬ್ಧರಿ ಇತಿ। ಯದಿ ಉಪಲಬ್ಧರಿ ವೇದನಾ ಸ್ಯಾತ್ ವೇದನಾನಿಮಿತ್ತಂ ವಾ ದಾಹ ಚ್ಛೇದಾದಿ, ವೇದನಾಶ್ರಯತ್ವೇನ ವ್ಯಪದಿಶೇತ್ ದಾಹಾದ್ಯಾಶ್ರಯ ವತ್। ಸ್ವಯಂ ಚ ನೋಪಲಭ್ಯೇತ ಚಕ್ಷುರ್ಗತರೂಪವತ್। ತಸ್ಮಾತ್ ದಾಹಚ್ಛೇದಾದಿಸಮಾನಾಶ್ರಯತ್ವೇನ ಉಪಲಭ್ಯಮಾನ ತ್ವಾತ್ ದಾಹಾದಿವತ್ ಕರ್ಮಭೂತೈವ ವೇದನಾ ॥ ೨೪ ॥

(ಅರ್ಥ)

ಅವನಿಗೆ ಹೇಳಬೇಕಾದ್ದೇನೆಂದರೆ: "ದೇಹವನ್ನು ಸುಟ್ಟರಾಗಲಿ ಕತ್ತರಿಸಿದರಾಗಲಿ ನನಗೆ ನೋವಾಗುವದು ಪ್ರತ್ಯಕ್ಷವಾಗಿದೆ ಎಂದೆಯಷ್ಟೆ, ಅದು ಸರಿಯಲ್ಲ. ಏಕೆಂದರೆ ಮರವನ್ನು ಸುಟ್ಟರಾಗಲಿ ಕತ್ತರಿಸಿದರಾಗಲಿ ಮರವು ಅರಿಯುವವನಿಗಿಂತ ಬೇರೆಯಾಗಿ ಕಾಣಿಸುವಂತೆ, ಅರಿಯುತ್ತಿರುವ (ಆತ್ಮನಿಗೆ) ಅರಿಯಲ್ಪಡುತ್ತಿರುವ (ಅರಿವಿನ) ಕರ್ಮವಾದ ಶರೀರದಲ್ಲಿ ಸುಟ್ಟ ಅಥವಾ ಕತ್ತರಿಸಿದ ನೋವು ಕಾಣಬರುವದರಿಂದ ಸುಡುವದೇ ಮುಂತಾದದ್ದು ಎಲ್ಲಿರುವದೋ ನೋವೂ ಅದನ್ನು ಆಶ್ರಯಿಸಿಯೇ (ಇರುವದೆನ್ನಬೇಕು) ಎಲ್ಲಿ ಸುಡುವದು, ಕತ್ತರಿಸುವದು ಮುಂತಾದದ್ದು ಆಗುತ್ತದೆಯೋ ಅಲ್ಲಿಯೇ ಸುಡುವದು ಮುಂತಾದದ್ದರಿಂದಾದ ನೋವೂ ಇದೆ ಎಂದು ಜನರು ಹೇಳುತ್ತಾರೆಯೇ ಹೊರತು ಆ ಸುಡುವದೇ ಮುಂತಾದದ್ದನ್ನು ಅರಿಯುವವನಲ್ಲಿ (ಇದೆ) ಎಂದು (ಹೇಳುವ)ದಿಲ್ಲ. (ಅದು) ಹೇಗೆ? (ಎಂದರೆ) 'ನಿನಗೆ ನೋವು ಎಲ್ಲಿ?' ಎಂದರೆ 'ನನಗೆ ತಲೆಯಲ್ಲಿ ನೋವು' ಎಂದೋ'(ನನಗೆ)ಎದೆಯಲ್ಲಿ ಅಥವಾ ಹೊಟ್ಟೆಯಲ್ಲಿ ನೋವು' ಎಂದೋ ಎಲ್ಲಿ ಸುಡುವದೇ ಮುಂತಾದದ್ದು ಆಗಿರುವದೋ ಅಲ್ಲಿಯೇ ಹೇಳುತ್ತಾರೆಯೇ ಹೊರತು 'ಅರಿಯುವ (ನನ್ನ)ಲ್ಲಿ' ಎಂದು (ಹೇಳುವ)ದಿಲ್ಲ. ಅರಿಯುವ (ಆತ್ಮನಲ್ಲಿ) ನೋವಾಗಲಿ ನೋವಿಗೆ ಕಾರಣವಾದ ಸುಡುವದು

ಕತ್ತರಿಸುವದು ಮುಂತಾದದ್ದಾಗಲಿ ಇರುತ್ತಿದ್ದರೆ ಸುಡುವಿಕೆ ಮುಂತಾದದ್ದರ ಆಶ್ರಯವೆಂದು (ದೇಹಭಾಗಗಳನ್ನು ಹೇಳು)ವಂತೆ, ಆ ನೋವಿಗೆ (ತಾನೇ) ಆಶ್ರಯವೆಂದು ಹೇಳುತ್ತಿದ್ದರು. ಮತ್ತು (ಅದು ಅರಿಯುವ ಆತ್ಮನಲ್ಲಿದ್ದರೆ) ಕಣ್ಣಿನಲ್ಲಿರುವ ರೂಪವು (ಕಣ್ಣಿಗೆ ಕಾಣುವದಕ್ಕೆ ಆಗದೆ ಇರು)ವಂತೆ (ಅದು) ತಾನೂ (ಆತ್ಮನಿಗೆ) ಕಾಣಿಸದೆಯೂ ಹೋಗಬೇಕಾಗುತ್ತಿತ್ತು. ಆದಕಾರಣ (ಹೀಗೆ) ಸುಟ್ಟ (ಗಾಯ), ಕತ್ತರಿಸಿದ (ಗಾಯ), ಮುಂತಾದವುಗಳು (ಎಲ್ಲಿರುವವೋ) ಅದೇ ಆಶ್ರಯದಲ್ಲಿರುವದಾಗಿ ಕಂಡುಬರುವದರಿಂದ ಸುಟ್ಟದ್ದು ಮುಂತಾದವುಗಳಂತೆ ನೋವೂ ಕರ್ಮರೂಪವಾದದ್ದೇ.[1]

ವೇದನೆಗೆ ಆಶ್ರಯವು ಅಂತಃಕರಣವು, ಆತ್ಮನಲ್ಲ

(ಮೂಲ)

ಭಾವರೂಪತ್ವಾಚ್ಚ ಸಾಶ್ರಯಾ ತಣ್ಡುಲಪಾಕವತ್। ವೇದನಾ ಸಮಾನಾಶ್ರಯ ಏವ ತತ್ಸಂಸ್ಕಾರಃ। ಸ್ಮೃತಿಸಮಾನಕಾಲ ಏವ ಉಪಲಭ್ಯಮಾನತ್ವಾತ್। ವೇದನಾವಿಷಯಃ ತನ್ನಿಮಿತ್ತ ವಿಷಯಶ್ಚ ದ್ವೇಷೋಽಪಿ ಸಂಸ್ಕಾರಸಮಾನಾಶ್ರಯ ಏವ। ತಥಾ ಚೋಕ್ತಮ್—

ರೂಪಸಂಸ್ಕಾರತುಲ್ಯಾಧೀ ರಾಗದ್ವೇಷೌ ಭಯಂ ಚ ಯತ್।
ಗೃಹ್ಯತೇ ಧೀಶ್ರಿಯಂ ತಸ್ಮಾತ್ ಜ್ಞಾತಾ ಶುದ್ಧೋಽಭಯಸ್ಸದಾ॥[2]

ಕಿಮಾಶ್ರಯಾಃ ಪುನಃ ರೂಪಾದಿಸಂಸ್ಕಾರಾದಯಃ ಇತಿ? ಉಚ್ಯತೇ। ಯತ್ರ ಕಾಮಾದಯಃ। ಕ್ವ ಪುನಸ್ತೇ ಕಾಮಾದಯಃ? "ಕಾಮಃ ಸಙ್ಕಲ್ಪೋ ವಿಚಿಕಿತ್ಸಾ" (ಬೃ. ೧-೫-೩) ಇತ್ಯಾದಿಶ್ರುತೇಃ ಬುದ್ಧಾವೇವ। ತತ್ರೈವ ರೂಪಾದಿಸಂಸ್ಕಾರಾದಯೋಽಪಿ। "ಕಸ್ಮಿನ್ನು ರೂಪಾಣಿ ಪ್ರತಿಷ್ಠಿತಾನೀತಿ ಹೃದಯೇ" (ಬೃ. ೩-೯-೨೧)। "ಕಾಮಾ ಯೇಽಸ್ಯ ಹೃದಿ ಶ್ರಿತಾಃ" (ಬೃ. ೪-೪-೭) "ತೀರ್ಣೋ ಹಿ ತದಾ ಸರ್ವಾನ್ ಶೋಕಾನ್ ಹೃದಯಸ್ಯ" (ಬೃ. ೪-೩-೨೨), "ಅಸಙ್ಗೋ

---

1. ವಿಷಯವಾದದ್ದೇ ಹೊರತು ವಿಷಯಿಯಾದ ಆತ್ಮನ ಧರ್ಮವಲ್ಲ.

2. ಇಲ್ಲಿಂದು ಇತಿಯು ಬಿಟ್ಟುಹೋಗಿದೆಯೆಂದು ತೋರುತ್ತದೆ.

ಹ್ಯಯಮ್'' (ಬೃ. ೪-೩-೧೬), "ತದ್ವಾ ಅಸ್ಯೈತದತಿಚ್ಛನ್ದಾಃ'' (ಬೃ-೪-೩-೨೧) ಇತ್ಯಾದಿಶ್ರುತಿಶತೇಭ್ಯಃ। "ಅವಿಕಾರ್ಯೋಽಯಮುಚ್ಯತೇ'' (ಗೀ. ೨-೨೫), "ಅನಾದಿತ್ವಾನ್ನಿರ್ಗುಣತ್ವಾತ್'' (ಗೀ. ೧೩-೩೧), ಇತ್ಯಾದಿ। ಇಚ್ಛಾದ್ವೇಷಾದಿ ಚ ಕ್ಷೇತ್ರಸ್ಯೈವ ವಿಷಯಸ್ಯ ಧರ್ಮಃ ನಾತ್ಮನಃ (ಗೀ. ೧೩-೬)[1] ಇತಿ ಸ್ಮೃತಿಭ್ಯಶ್ಚ ಕರ್ಮಸ್ಥೈವ ಅಶುದ್ಧಿಃ ನಾತ್ಮಸ್ಥಾ ಇತಿ ॥ ೨೫ ॥

(ಅರ್ಥ)

ಮತ್ತು (ಈ ನೋವು) ಅಕ್ಕಿಯನ್ನು ಬೇಯಿಸುವ (ಕ್ರಿಯೆಯಂತೆ) ಭಾವ ರೂಪವಾಗಿರುವದರಿಂದ[2] ಆಶ್ರಯವುಳ್ಳದ್ದಾಗಿರಬೇಕು. ವೇದನೆಗೆ ಸಮಾನವಾದ ಆಶ್ರಯವೇ ಅದರ ಸಂಸ್ಕಾರ(ಕ್ಕೂ ಇರಬೇಕು); ಏಕೆಂದರೆ ಸ್ಮೃತಿ ಸಮಾನಕಾಲದಲ್ಲಿಯೇ (ಅದು) ಅನುಭವಕ್ಕೆ ಬರುತ್ತದೆ.[3] ನೋವಿನ ವಿಷಯದಲ್ಲಿಯೂ ಅದರ ನಿಮಿತ್ತದ* ವಿಷಯದಲ್ಲಿಯೂ (ಉಂಟಾಗುವ) ದ್ವೇಷವೂ ಸಂಸ್ಕಾರದ ಆಶ್ರಯದಲ್ಲಿಯೇ (ಆಗುವವು). ಆದ್ದರಿಂದಲೇ

ರೂಪಸಂಸ್ಕಾರತುಲ್ಯಾಧೀ ರಾಗದ್ವೇಷೌ ಭಯಂ ಚ ಯತ್।
ಗೃಹ್ಯತೇ ಧೀಶ್ರಿಯಂ ತಸ್ಮಾತ್ ಜ್ಞಾತಾ ಶುದ್ಧೋಽಭಯಃ ಸದಾ ॥

"ರೂಪದ ಸಂಸ್ಕಾರವು (ಯಾವ ಉಪಾಧಿಯಲ್ಲಾಗುವದೋ) ಅದೇ ಉಪಾಧಿಯಾದ ಬುದ್ಧಿಯಲ್ಲಿಯೇ ರಾಗದ್ವೇಷಗಳೂ ಭಯವೆಂಬುದೂ ಕಾಣಬರುವವಾದ್ದರಿಂದ ಜ್ಞಾತೃವಾದ ಆತ್ಮನು ಯಾವಾಗಲೂ ಶುದ್ಧನೂ ಭಯರಹಿತನೂ ಆಗಿರುತ್ತಾನೆ" ಎಂದು ದೊಡ್ಡವರು ಹೇಳಿರುತ್ತಾರೆ.[4]

(ಪ್ರಶ್ನೆ):— ಹಾಗಾದರೆ (ಈ) ರೂಪಾದಿಗಳ ಸಂಸ್ಕಾರವೇ ಮುಂತಾದವುಗಳು ಯಾವ ಆಶ್ರಯ(ದಲ್ಲಿ ಉಂಟಾಗುತ್ತವೆ) ?

---

1. ಇದು ಶ್ಲೋಕದ ಅರ್ಧ ಮಾತ್ರ.
2. ಕಾರ್ಯರೂಪವಾಗಿರುವದರಿಂದ.
3. ವೇದನೆ, ಸಂಸ್ಕಾರ, ಸ್ಮೃತಿ- ಇವೆಲ್ಲ ಒಂದೇ ಕಾಲದಲ್ಲಿ, ಎಂದರೆ ಎಚ್ಚರಕನಸುಗಳಲ್ಲಿ ಮಾತ್ರ ಕಾಣುತ್ತವೆ, ಅಂತಃಕರಣದ ವ್ಯಾಪಾರವಿಲ್ಲದ ಸುಷುಪ್ತ್ಯಾದಿಗಳಲ್ಲಿ ಕಾಣುವದಿಲ್ಲ.
4. ಸುಡುವದು, ಕತ್ತರಿಸುವದು- ಮುಂತಾದದ್ದು.
5. ಈ ವಾಕ್ಯವು ಯಾವ ಗ್ರಂಥದ್ದೆಂಬುದು ತಿಳಿಯದು. ಉಪ. ಪದ್ಯ೧೫-೧೩ರಲ್ಲಿಯೂ ಇದು ಕಾಣಬರುತ್ತದೆ. ಟೀಕೆಯನ್ನು ನೋಡಿ.

(ಉತ್ತರ) :-- ಹೇಳುತ್ತೇವೆ. ಕಾಮಾದಿಗಳು ಎಲ್ಲಿ ಆಗುತ್ತವೆಯೋ (ಅಲ್ಲಿಯೇ ಆಗುತ್ತವೆ.)

(ಪ್ರಶ್ನೆ):— ಹಾಗಾದರೆ ಆ ಕಾಮಾದಿಗಳು ಎಲ್ಲಿ (ಆಗುವವು) ?

"ಕಾಮವು, ಸಂಕಲ್ಪವು, ಸಂಶಯವು, – (ಎಲ್ಲವೂ ಮನಸ್ಸೇ).) " ಮುಂತಾದ ಶ್ರುತಿಪ್ರಮಾಣದಿಂದ (ಅವು) ಬುದ್ಧಿಯಲ್ಲಿಯೇ[1] ಆಗುವವು. ರೂಪವೇ ಮುಂತಾದವುಗಳ ಸಂಸ್ಕಾರಗಳೂ (ಆ) ಬುದ್ಧಿಯಲ್ಲಿಯೇ (ಆಗುವವು). ಏಕೆಂದರೆ "ರೂಪಗಳು ಎತರಲ್ಲಿ ನಿಂತಿವೆ ? ಎಂದರೆ ಹೃದಯದಲ್ಲಿಯೇ" (ಬೃ. ೩–೯–೨೦), "ಇವನ ಹೃದಯವನ್ನು ಆಶ್ರಯಿಸಿಕೊಂಡಿರುವ ಕಾಮಗಳು (ಯಾವಾಗ ಬಿಡುಗಡೆಯಾಗುವವೊ) " (ಬೃ. ೪–೪–೭), " ಆಗ ಹೃದಯದ ತೋಕಗಳೆಲ್ಲವನ್ನೂ ಇವನು ಓಟರುತ್ತಾನಷ್ಟೆ ? " (ಬೃ. ೪–೩–೨೨) " ಈ (ಪುರುಷನು) ಅಸಂಗನಲ್ಲವೆ? " (ಬೃ. ೪–೩–೧೬), 'ಈ (ಆತ್ಮನ) ಆ (ರೂಪವು ಕಾಮವನ್ನು ವಿಾರಿರುತ್ತದೆ" ಎಂಬಿವೇ ಮುಂತಾದ ನೂರಾರು ಶ್ರುತಿಗಳಿಂದಲೂ 'ಈತನು ಅವಿಕಾರ್ಯನೆನಿಸುತ್ತಾನೆ" (ಗೀ.೨–೨೫), "ಆದಿಯಿಲ್ಲದಿರುವದರಿಂದ ಲೂ ಗುಣಗಳಿಲ್ಲದಿರುವದರಿಂದಲೂ"(೧೩–೩೧)ಎಂದು ಮುಂತಾಗಿರುವ- ಇಚ್ಛೆ, ದ್ವೇಷ- ಮುಂತಾದವುಗಳು ವಿಷಯವಾದ·ಕ್ಷೇತ್ರದ ಧರ್ಮವೇ ಹೊರತು ಆತ್ಮನ ಧರ್ಮವಲ್ಲ ಎಂದು ಹೇಳುವ– ಸ್ಮೃತಿಗಳಿಂದಲೂ ಅಶುದ್ಧಿಯು ವಿಷಯ (ಅನಾತ್ಮ)ಕ್ಕೇ ಸೇರಿದ್ದೇ ಹೊರತು (ವಿಷಯಿಯಾದ) ಆತ್ಮನಲ್ಲಿರುವದಿಲ್ಲವೆಂದು (ನಿರ್ಣಯವಾಗುತ್ತದೆ).

ಜೀವನು ಪರಮಾತ್ಮನೇ

(ಮೂಲ)

ಅತೋ ರೂಪಾದಿಸಂಸ್ಕಾರಾಧ್ಯಶುದ್ಧಿಸಂಬನ್ಧಾಭಾವಾತ್ ನ ಪರಸ್ಮಾತ್ ಆತ್ಮನೋ ವಿಲಕ್ಷಣಸ್ತ್ವಮ್ ಇತಿ ಪ್ರತ್ಯಕ್ಷಾದಿವಿರೋಧಾಭಾವಾತ್ ಯುಕ್ತಂ ಪರ ಏವ ಆತ್ಮಾ ಅಹಮ್ ಇತಿ ಪ್ರತಿಪತ್ತುಮ್। "ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮೀತಿ"[2] (ಬೃ. ೧-೪-೧೦),

---

1. ಶ್ರುತಿಯಲ್ಲಿ ಹೇಳಿರುವ ಮನಸ್ಸು ಅವರ ಈ ವ್ಯಾಖ್ಯಾನದಲ್ಲಿ ಹೇಳಿರುವ ಬುದ್ಧಿಯೂ ಅಂತಃಕರಣವೇ.

2. ಇಲ್ಲಿ 'ಇತಿ' ಬಿಟ್ಟದೆಯೋ ಇಷ್ಟೇ ಭಾಗವನ್ನು ಉದಾಹರಿಸಿದೆಯೋ ತಿಳಿಯದು. ವಾ।। ಪಾಠದಲ್ಲಿ ಇತಿಯನ್ನು ಸೇರಿಸಿದೆ. ಮುಂದೆ ಕೆಲವು ವಾಕ್ಯಗಳಲ್ಲಿಯೂ ಹೀಗೆ ಸಂಶಯವಾದ ಭಾಗಗಳನ್ನು ಕಂಸದಲ್ಲಿಟ್ಟಿದೆ.

"ಏಕಧೈವಾನುದ್ರಷ್ಟವ್ಯಮ್" (ಬೃ. ೪-೪-೨೦), "ಅಹಮೇವಾಧಸ್ತಾತ್" (ಛಾಂ. ೭-೨೫-೧), "ಆತ್ಮೈವಾಧಸ್ತಾತ್" (ಛಾಂ. (೭-೨೫-೨), ಸರ್ವಮಾತ್ಮಾನಂ ಪಶ್ಯೇತ್" (ಬೃ. ಮಾ. ೪-೪-೨೩), "ಯತ್ರ ತ್ವಸ್ಯ ಸರ್ವಮಾತ್ಮೈವ" (ಬೃ. ೪.೫.೧೫), "ಇದಂ ಸರ್ವಂ ಯದಯಮಾತ್ಮಾ" (ಬೃ.೨-೪-೬, ೪-೫-೭), "ಸ ಏಷೋಽಕಲಃ" (ಪ್ರ. ೬-೫), "ಅನನ್ತರಮಬಾಹ್ಯಮ್" (ಬೃ. ೨-೫-೧೯, ೩-೮-೪), "ಸ ಬಾಹ್ಯಾಭ್ಯನ್ತರೋ ಹ್ಯಜಃ" (ಮುಂ. ೨-೧-೨), "ಬ್ರಹ್ಮೈವೇದಮ್" (ಮುಂ.೨-೨-೧೧), "ಏತಯಾ ದ್ವಾರಾ ಪ್ರಾಪದ್ಯತ" (ಐ. ೧-೩), "ಪ್ರಜ್ಞಾನಸ್ಯ ನಾಮಧೇಯಾನಿ" (ಐ.೩-೧), "ಸತ್ಯಂ ಜ್ಞಾನಮನನ್ತಂ ಬ್ರಹ್ಮ .... ತಸ್ಮಾದ್ವಾ" (ತೈ. ೨-೧), "ತತ್ ಸೃಷ್ಟ್ವಾ। ತದೇವಾನುಪ್ರಾವಿಶತ್" (ತೈ. ೨-೬), "ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ" (ಶ್ವೇ. ೬-೧೧), "ಅಶರೀರಂ ಶರೀರೇಷು" (ಕ. ೧-೨-೨೧), "ನ ಜಾಯತೇ ಮ್ರಿಯತೇ ವಾ)" (ಕ. ೧-೨-೧೮), "ಸ್ವಪ್ನಾನ್ತಂ ಜಾಗರಿತಾನ್ತಂ (ಚ)" (ಕ. ೨-೧-೪), "ಸ ಮ ಆತ್ಮೇತಿ ವಿದ್ಯಾತ್" (ಕೌ. ೩-೯), "ಯಸ್ತು ಸರ್ವಾಣಿ ಭೂತಾನಿ" (ಈ. ೬), "ತದೇಜತಿ ತನ್ನೈಜತಿ" (ಈ. ೫), "ವೇನಸ್ತತ್ಪಶ್ಯನ್" (ತೈ. ನಾ. ೩), "ತದೇವಾಗ್ನಿಃ" (ತೈ.೨) "ಅಹಂ ಮನುರಭವಂ ಸೂರ್ಯಶ್ಚ" (ಬೃ. ೧-೪-೧೦), "ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಮ್" (ತೈ. ಆ. ೩-೧೩-೨೧), "ಸದೇವ ಸೋಮ್ಯ" (ಛಾಂ. ೬-೨-೧), "ತತ್ಸತ್ಯಂ ಸ ಆತ್ಮಾ ತತ್ತ್ವಮಸಿ" (ಛಾಂ. ೬-೮-೭), ಇತ್ಯಾದಿ ಶ್ರುತಿಭ್ಯಃ। ಸ್ಮೃತಿಭ್ಯಶ್ಚ "ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ" (ಆ. ಧ. ಸೂ. ೧-೨೨-೪), "ಆತ್ಮೈವ ದೇವತಾಃ" (ಮನು. ೧೨-೧೧೯), "ನವದ್ವಾರೇ ಪುರೇ" (ಗೀ. ೫-೧೩), "ಸಮಂ ಸರ್ವೇಷು ಭೂತೇಷು" (ಗೀ. ೧೩-೨೭), "ವಿದ್ಯಾವಿನಯಸಂಪನ್ನೇ"(ಗೀ. ೫-೧೮), "ಅವಿಭಕ್ತಂ ವಿಭಕ್ತೇಷು" (ಗೀ. ೧೩-೧೬), "ವಾಸುದೇವಃ ಸರ್ವಮ್" (ಗೀ. ೭-೧೯), ಇತ್ಯಾದಿಭ್ಯಃ ಏಕ ಏವಾತ್ಮಾ ಪರಂ ಬ್ರಹ್ಮ ಸರ್ವಸಂಸಾರಧರ್ಮವಿನಿರ್ಮುಕ್ತಸ್ತ್ವಮ್ ಇತಿ ಸಿದ್ಧಮ್ ॥ ೨೬ ॥

(ಅರ್ಥ)

ಆದ್ದರಿಂದ ರೂಪವೇ ಮುಂತಾದವುಗಳ ಸಂಸ್ಕಾರವೇ ಮುಂತಾದಅಶುದ್ಧಿಯು ಸಂಬಂಧವೇ ಇಲ್ಲದಿರುವದರಿಂದ ಪರಮಾತ್ಮನಿಗಿಂತ ನೀನು ವಿಲಕ್ಷಣನಲ್ಲ. ಹೀಗೆ ಪ್ರತ್ಯಕ್ಷವೇ ಮುಂತಾದ (ಪ್ರಮಾಣ)ಗಳಿಗೆ ವಿರೋಧವಿಲ್ಲದೆ ಇರುವದರಿಂದ 'ನಾನು ಪರಮಾತ್ಮನೇ' ಎಂದು ತಿಳಿಯುವದು ಯುಕ್ತವೇ. ''ಅದು ತನ್ನನ್ನೇ 'ನಾನು ಬ್ರಹ್ಮವು' ಎಂದು ತಿಳಿದುಕೊಂಡಿತು. (ಅದರಿಂದ ಸರ್ವವೂ ಆಯಿತು; ಅದರಂತೆ ಈಗಲೂ ನಾನೇ ಬ್ರಹ್ಮವೆಂದು ತಿಳಿದುಕೊಂಡವನು ಸರ್ವವೂ ಆಗುತ್ತಾನೆ,)'' (ಬೃ. -೪-೧೦), ''ಆತ್ಮಸ್ವರೂಪವು ಒಂದೇ ಎಂದು ಕಂಡುಕೊಳ್ಳಬೇಕು'' (ಬೃ. ೪-೪-೨೦), ''ನಾನೇ ಕೆಳಗಡೆ ಇರುತ್ತೇನೆ, (ನಾನೇ ಮೇಲುಗಡೆ ಇರುತ್ತೇನೆ....)'' (ಛಾಂ. ೭-೨೫-೧), ''....ಆತ್ಮನೇ ಕೆಳಗಡೆ ಇದಾನೆ, (ಆತ್ಮನೇ ಮೇಲುಗಡೆ ಇರುತ್ತಾನೆ....)'' (ಛಾಂ. ೭-೨೫-೨), ''ಎಲ್ಲವನ್ನೂ ಆತ್ಮನೆಂದೇ ಕಾಣಬೇಕು'' (ಬೃ.ಮಾ. ೪-೪-೨೩), ''ಆದರೆ ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ (ಆಗಿರುವದೋ ಅಲ್ಲಿ ಏತರಿಂದ ಯಾರನ್ನು ಕಾಣಬೇಕು....)'' (ಬೃ. ೪-೫-೧೫), ''ಇದೆಲ್ಲವೂ ಈ ಆತ್ಮನೆಂಬುದೇ'' (ಬೃ. ೨-೪-೬, ೪-೫-೭), ''ಆ ಈತನು ಅವಯವಗಳಿಲ್ಲದವನೂ (ಅಮೃತನೂ ಆಗುವನು)'' (ಪ್ರ. ೬-೫), ' ಒಳಗಿಲ್ಲದ್ದು, ಹೊರಗಿಲ್ಲದ್ದು'' (ಬೃ. ೨-೫-೧೯, ೩-೮-೮) ''ಹೊರಗೂ ಒಳಗೂ ಜನ್ಮರಹಿತನಾದವನೇ''(ಮುಂ.೨-೧-೨),''ಇದು ಬ್ರಹ್ಮವೇ''(ಮುಂ.೨-೨-೧೧), ''ಈ ದ್ವಾರದಿಂದ ದೇಹವನ್ನು ಸೇರಿದನು '' (ಐ.೧-೩), ''(ಇವೆಲ್ಲ) ಪ್ರಜ್ಞಾನದ ಹೆಸರುಗಳು '' (ಐ. ೩-೧), ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಬ್ರಹ್ಮವು .... ಆ ಈ (ಆತ್ಮನಿಂದ ಆಕಾಶವುಂಟಾಯಿತು)'' (ತೈ. ೨-೧) ''ಅದನ್ನು ಸೃಷ್ಟಿಸಿ ತಾನೇ ಪ್ರವೇಶಿಸಿತು '' (ತೈ. ೨-೬), ''ಒಬ್ಬ ದೇವನೇ ಸರ್ವಭೂತಗಳಲ್ಲಿ ಅಡಗಿರುವನು, ಸರ್ವವ್ಯಾಪಿಯು '' (ಶ್ವೇ. ೬-೧೧) ''ಅಶರೀರನಾಗಿ ಶರೀರಗಳಲ್ಲಿರುವ (ಆತ್ಮನನ್ನು) '' (ಕ.೧-೨-೨೨) ''ಹುಟ್ಟುವದಿಲ್ಲ, ಸಾಯುವದೂ ಇಲ್ಲ '' (ಕ. ೧-೨-೧೮), ''ಸ್ವಪ್ನದ ಅವಸ್ಥೆಯನ್ನೂ ಜಾಗರಿತದ ಅವಸ್ಥೆಯನ್ನೂ (ನೋಡುವ ದೊಡ್ಡ ವಿಭುವನ್ನು ಆತ್ಮನೆಂದು ತಿಳಿದುಕೊಂಡರೆ ಶೋಕಿಸುವದಿಲ್ಲ,)''(ಕ.೨-೧-೪)''(ಇವನೇ ಲೋಕಪಾಲಕನು, ಇವನೇ ಲೋಕಾಧಿಪತಿಯು, ಇವನೇ ಲೋಕೇಶ್ವರನು)'' ಅವನು ನನ್ನ ಆತ್ಮನೆಂದು ತಿಳಿಯಬೇಕು (ಕೌ. ೩-೯), ''ಯಾವನಾದರೆ ಸಮಸ್ತಭೂತಗಳನ್ನೂ (ಆತ್ಮನಲ್ಲಿಯೇ ಕಂಡುಕೊಳ್ಳುವನೋ....)'' (ಈ. ೬), ''ಅದು ಅಲುಗಾಡುತ್ತದೆ, ಅದೇ ಅಲುಗಾಡುವದಿಲ್ಲ'' (ಈ. ೫), ''ಅದನ್ನು ಕಂಡುಕೊಂಡವನು ತೇಜೋರೂಪನಾಗುವನು'' (ತೈ. ನಾ. ೨), ''ಅದೇ ಅಗ್ನಿಯು, (ಅದೇ ವಾಯುವು)'' (ತೈ. ನಾ. ೨) ''ನಾನು ಮನುವೂ ಸೂರ್ಯನೂ ಆಗಿರುವೆನು'' (ಬೃ. ೧-೪-೧೦) ' (ಜನ)ರಿಗೆ

ಳಗೆ ಪ್ರವೇಶಿಸಿರುವ ಶಾಸ್ತೃವು (ಒಬ್ಬನೇ ಆಗಿದ್ದು ಬಲುಬಗೆಯಿಂದ ಸಂಚರಿಸುತ್ತಿರುವನು)'' (ತೈ.ಆ.೩-೧೧), ''ಸೋಮ್ಯನೆ, (ಮೊದಲು ಇದು) ಸತ್ತೇ (ಆಗಿತ್ತು).... ಅದು ಸತ್ಯವು, ಅದು ಆತ್ಮನು, ನೀನು ಅದಾಗಿರುವೆ'' (ಛಾಂ. ೬-೨-೧ .... ೬-೮-೭) ಇವೇ ಮುಂತಾದ ಶ್ರುತಿ(ಪ್ರಮಾಣ)ಗಳಿಂದಲೂ ''(ಹೃದಯ)ಗುಹೆಯಲ್ಲಿರುವ (ಈ ಪರಮಾತ್ಮನಿಗೆ) ಎಲ್ಲಾ ಪ್ರಾಣಿಗಳೂ ಪುರಗಳು'' (ಆ. ಧ. ಸೂ. ೧-೨೨-೪) ''ಆತ್ಮನೇ (ಎಲ್ಲಾ) ದೇವತೆಗಳು'' (ಮನು. ೧೨-೧೧೯), ''ಒಂಭತ್ತು ಬಾಗಿಲಿನ ಪುರವಾದ (ಈ ದೇಹದಲ್ಲಿ ವಶಿಯಾದವನು ಏನನ್ನೂ ಮಾಡದೆ ಸುಖವಾಗಿ ಕುಳಿತಿರುವನು)'' (ಗೀ. ೫-೧೩), ''ಸರ್ವಭೂತಗಳಲ್ಲಿ ಸಮವಾಗಿರುವ (ಪರಮೇಶ್ವರನನ್ನು ಕಂಡವನೇ ನಿಜವಾಗಿ ಕಂಡವನು)'' (ಗೀ. ೧೩-೨೭), ''ವಿದ್ಯಾವಿನಯಸಂಪನ್ನನಾದ (ಬ್ರಾಹ್ಮಣನಲ್ಲಿಯೂ, ಸೋವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ಚಂಡಾಲನಲ್ಲಿಯೂ ಪಂಡಿತರು ಸಮದರ್ಶಿಗಳಾಗಿರುವರು)'' (ಗೀ. ೫-೧೮), ''ಬೇರೆ ಬೇರೆಯಾಗಿರುವ (ಪ್ರಾಣಿಗಳಲ್ಲಿ ತಾನು ಬೇರೆಬೇರೆಯಾಗದೆ ಇರುವದು)'' (ಗೀ. ೧೩-೧೬), ''ವಾಸುದೇವನೇ ಎಲ್ಲವೂ'' (೭-೧೯) ಇವೇ ಮುಂತಾದ ಸ್ಮೃತಿ(ಪ್ರಮಾಣ)ಗಳಿಂದಲೂ ನೀನು ಒಬ್ಬನೇ ಆತ್ಮನೂ ಪರಬ್ರಹ್ಮವೂ ಯಾವ ಸಂಸಾರದ ಧರ್ಮವೂ ಇಲ್ಲದವನೂ ಆಗಿರುವೆ ಎಂದು ಸಿದ್ಧವಾಯಿತು.

ದ್ವೈತವು ಅವಿದ್ಯಾಕೃತವಾದದ್ದು

(ಸೂ೭)

ಸ ಯದಿ ಬ್ರೂಯಾತ್- ಯದಿ ಭಗವನ್ ಅನನ್ತರೋಽಬಾಹ್ಯಃ ಸ ಬಾಹ್ಯಾಭ್ಯನ್ತರೋ ಹ್ಯಜಃ ಕೃತ್ಸ್ನಃ ಪ್ರಜ್ಞಾನಘನ ಏವ ಸೈನ್ಧವಘನವತ್ ಆತ್ಮಾ ಸರ್ವಮೂರ್ತಿಭೇದನರ್ಜಿತಃ ಆಕಾಶವತ್ ಏಕರಸಃ, ಕಿಮಿದಂ ದೃಶ್ಯತೇ ಶ್ರೂಯತೇ ವಾ ಸಾಧ್ಯಂ ಸಾಧನಂ ವಾ ಸಾಧಕಶ್ಚ ಇತಿ ಶ್ರುತಿಸ್ಮೃತಿಲೋಕಪ್ರಸಿದ್ಧಂ ವಾದಿಶತವಿಪ್ರತಿಪತ್ತಿವಿಷಯಃ? ಇತಿ । ಆಚಾರ್ಯೋ ಬ್ರೂಯಾತ್- ಅವಿದ್ಯಾಕೃತಮೇತತ್ ಯದಿದಂ ದೃಶ್ಯತೇ ಶ್ರೂಯತೇ ವಾ । ಪರಮಾರ್ಥತಸ್ತು ಏಕ ಏವ ಆತ್ಮಾ ಅವಿದ್ಯಾದೃಷ್ಟೇಃ ಅನೇಕವತ್ ಆಭಾಸತೇ ತಿಮಿರದೃಷ್ಟ್ಯಾ[1] ಅನೇಕಚನ್ದ್ರವತ್ "ಯತ್ರ ವಾ ಅನ್ಯದಿವ ಸ್ಯಾತ್'' (ಬೃ. ೪-೩-೩೧) "ಯತ್ರ

1. 'ತಿಮಿರದೃಷ್ಟೇಃ' ಎಂದು ಇದ್ದರೆ ಚೆನ್ನಾಗಿರುತ್ತದೆ; ಅಥವಾ ಹಿಂದೆ 'ಅವಿದ್ಯಾದೃಷ್ಟ್ಯಾ' ಎಂದಾದರೂ ಇದ್ದರೆ ಚೆನ್ನಾಗಿರುತ್ತಿತ್ತು.

ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ" (ಬೃ.೨-೪-೧೪) "ಮೃತ್ಯೋಃ ಸ ಮೃತ್ಯುಮಾಪ್ನೋತಿ" (ಬೃ. ೪-೪-೧೯) "ಅಥ ಯತ್ರಾನ್ಯತ್ ಪಶ್ಯತ್ಯನ್ಯಚ್ಛೃಣೋತ್ಯನ್ಯದ್ವಿಜಾನಾತಿ ತದಲ್ಪಮ್ ....ಅಥ ಯದಲ್ಪಂ ತನ್ಮರ್ತ್ಯಮ್" (ಛಾಂ. ೭-೨೪-೧), "ವಾಚಾರಮ್ಭಣಂ ವಿಕಾರೋ ನಾಮಧೇಯಮ್" ಅನೃತಮ್[1] (ಛಾಂ. ೬-೧೪), "ಅನ್ಯೋಽಸಾವನ್ಯೋಽಹಮ್"(ಬೃ. ೧-೪-೧೦)ಇತಿ ಭೇದದರ್ಶನನಿಮ್ಪೋಪಪತ್ತೇಃ ಅವಿದ್ಯಾಕೃತಂ ದ್ವೈತಮ್, "ಏಕಮೇವಾದ್ವಿತೀಯಮ್" (ಛಾಂ.೬-೨-೧) "ಯತ್ರ ತ್ವಸ್ಯ"(ಬೃ. ೪-೫-೧೫) "ಕೋ ಮೋಹಃ ಕಃ ಶೋಕಃ" (ಈ. ೭) ಇತ್ಯಾದ್ಯೇಕತ್ವವಿಧಿಶ್ರುತ್ಯಶ್ಚೇತಿ ॥ ೨೭ ॥

(ಅರ್ಥ)

ಆಗ ಆತನು "ಪೂರ್ಣರೆ, ಒಳಗಿಲ್ಲದೆ ಹೊರಗಿಲ್ಲದೆ ಹೊರಗೂ ಒಳಗೂ ಜನ್ಮರಹಿತನಾದ ಉಪ್ಪಿನ ಹರಳು (ಎಲ್ಲೆಲ್ಲಿಯೂ ಉಪ್ಪೇ ಆಗಿರು)ವಂತೆ, ಎಲ್ಲವೂ ಚೈತನ್ಯದ ಗಟ್ಟಿಯೇ ಆಗಿರುವ(ಈ)ಆತ್ಮನು ಯಾವ (ಬಗೆಯ) ಆಕಾರ ಭೇದಗಳೂ ಇಲ್ಲದವನಾಗಿ ಆಕಾಶದಂತೆ ಒಂದೇ ರೂಪನಾಗಿರುತ್ತಾನಾದರೆ 'ಸಾಧ್ಯವು, ಅಥವಾ ಸಾಧನವು, ಸಾಧಕನು' ಎಂದು ಶ್ರುತಿಸ್ಮೃತಿಲೋಕ ಪ್ರಸಿದ್ಧವಾಗಿಯೂ ನೂರಾರು ವಾದಿಗಳ ವಿರುದ್ಧಾಭಿಪ್ರಾಯಗಳಿಗೆ ವಿಷಯವಾಗಿಯೂ ಕಾಣಬರುತ್ತಿರುವ ಮತ್ತು ಕೇಳಬರುತ್ತಿರುವ ಇದು ಏನು?" ಎಂದು ಕೇಳಿದಕ್ಕೆ, ಆಚಾರ್ಯನು "ಈ ಕಾಣಬರುತ್ತಿರುವ ಮತ್ತು ಕೇಳಬರುತ್ತಿರುವ (ಭೇದ)ವಿದೆಯಲ್ಲ, ಇದು ಅವಿದ್ಯಾಕೃತವಾದದ್ದು. ನಿಜವಾಗಿ (ನೋಡಿದರೆ) ಒಬ್ಬನೇ ಆಗಿರುವ ಆತ್ಮನು ಕಣ್ಣುಪರೆಯ ದೃಷ್ಟಿಯಿಂದ (ಒಬ್ಬ ಚಂದ್ರನೇ) ಅನೇಕ ಚಂದ್ರರಂತೆ (ಕಾಣುವಹಾಗೆ), ಅವಿದ್ಯಾದೃಷ್ಟಿಗೆ ಅನೇಕರಾಗಿರುವಂತೆ ತೋರುತ್ತಾನೆ. "ಎಲ್ಲಿ ಮತ್ತೊಂದಿರುವಂತೆ ಇರುವದೋ" (ಬೃ. ೪–೩–೩೧) "ಎಲ್ಲಿ ದ್ವೈತದಂತೆ ಇರುವಮೋ ಅಲ್ಲಲ್ಲವೆ, ಒಬ್ಬನು ಮತ್ತೊಬ್ಬನನ್ನು ಕಾಣುತ್ತಾನೆ?" (ಬೃ. ೨–೪–೧೪), "(ಇಲ್ಲಿ ಭೇದವಿರುವಂತೆ ಕಾಣುವನಲ್ಲ, ಅವನು) ಸಾವಿನಮೇಲೆ ಸಾವನ್ನು ಪಡೆಯುತ್ತಿರುವನು" (ಬೃ. ೪–೪–೧೯), ಇನ್ನು ಎಲ್ಲಿ ಬೇರೊಂದನ್ನು ಕಾಣುತ್ತಿರುವನೋ, ಬೇರೊಂದನ್ನು ಕೇಳುತ್ತಿರುವನೋ, ಬೇರೊಂದನ್ನು ಅರಿಯುತ್ತಿರುವನೋ, ಅದು ಅಲ್ಪವಾದದ್ದು.... ಇನ್ನು ಅಲ್ಪ

1. "ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತ್ವೇತ್ಯೇವ ಸತ್ಯಮ್" ಎಂದು ಆಗಿ ನಿಗಿ ಪಾಠಗಳಲ್ಲಿ ತಿದ್ದಿಕೊಂಡಿರುವದು ಅವಶ್ಯವಿಲ್ಲ.

ವಾಗಿರುವದಲ್ಲ, ಅದು ಮರ್ತ್ಯವು" (ಛಾಂ. ೭–೨೪–೧), "ಕಾರ್ಯವು ಮಾತಿ ನಿಂದಾಗಿರುವ ಹೆಸರು ಮಾತ್ರ" (ಛಾಂ. ೭–೧–೪ ಆದ್ದರಿಂದ ಆದು) ಅನೃತವು, "ಈ (ದೇವತೆ)ಬೇರೆ, ನಾನು ಬೇರೆ (ಎಂದು ತಿಳಿಯುವವನು ಅರಿಯನು)" (ಬೃ. ೧–೪–೧೦) ಎಂದು ಭೇದಜ್ಞಾನವನ್ನು ನಿಂದಿಸಿರುವದು ಹೊಂದುವದ ಕ್ಕಾಗಿ ದ್ವೈತವು ಅವಿದ್ಯಾಕೃತವು ; "ಒಂದೇ ಎರಡನೆಯದಿಲ್ಲದ್ದು" (ಛಾಂ. ೬–೨–೧), "ಆದರೆ ಎಲ್ಲಿ ಈತನಿಗೆ (ಸರ್ವವೂ ಆತ್ಮನೇ ಆಯಿತೋ ಅಲ್ಲಿ ಏತ ರಿಂದ ಯಾರನ್ನು ನೋಡಿಯಾನು?)" (ಬೃ. ೪–೬–೧೫), "(ಏಕತ್ವವನ್ನು ಕಂಡವನಿಗೆ) ಯಾವ ಮೋಹವು, ಯಾವ ಶೋಕವು? " (ಈ. ೭)– ಇವೇ ಮುಂತಾದ ಏಕತ್ವವನ್ನು ತಿಳಿಸುವ ಶ್ರುತಿಗಳಿಂದಲೂ (ದ್ವೈತವು ಅವಿದ್ಯಾ ಕೃತವೆಂದು ತಿಳಿಯಬೇಕು).

ಶ್ರುತಿಯಲ್ಲಿ ಸಾಧ್ಯಸಾಧನಗಳನ್ನೂ ಉತ್ಪತ್ತ್ಯಾದಿಗಳನ್ನೂ ಹೇಳಿರುವದೇಕೆ?

(ಮೂಲ)

ಯದ್ಯೇವಂ ಭಗವನ್, ಕಿಮರ್ಥಂ ಶ್ರುತ್ಯಾ ಸಾಧ್ಯಸಾಧನಾದಿ ಭೇದ ಉಚ್ಯತೇ। ಉತ್ಪತ್ತಿಃ ಪ್ರಲಯಶ್ಚ ಇತಿ? ಅತ್ರೋಚ್ಯತೇ। ಅವಿದ್ಯಾವತಃ ಉಪಾತ್ತಶರೀರಾದಿಭೇದಸ್ಯ ಇಷ್ಟಾನಿಷ್ಟಯೋಗಿನಮ್ ಆತ್ಮಾನಂ ಮನ್ಯಮಾನಸ್ಯ ಸಾಧನೈರೇವ ಇಷ್ಟಾನಿಷ್ಟಪ್ರಾಪ್ತಿ ಪರಿಹಾರೋಪಾಯವಿವೇಕಮ್ ಅಜಾನತಃ, ಇಷ್ಟಪ್ರಾಪ್ತಿಂ ಚ ಅನಿಷ್ಟಪರಿಹಾರಂ ಚ ಇಚ್ಛತಃ[1] ಶನೈಃ ತದ್ವಿಷಯಮ್ ಅಜ್ಞಾನಂ ನಿವರ್ತಯಿತುಂ ಶಾಸ್ತ್ರಂ ನ ಸಾಧ್ಯಸಾಧನಾದಿಭೇದಂ ವಿಧತ್ತೇ। ಅನಿಷ್ಟರೂಪಃ ಸಂಸಾರೋ ಹಿ ಸಃ ಇತಿ। ತದ್ಭೇದದೃಷ್ಟಿಮೇವ ಅವಿದ್ಯಾಂ ಸಂಸಾರಮೂಲಮ್[2] ಉನ್ಮೂಲಯತಿ ಉತ್ಪತ್ತಿಪ್ರಲಯಾ ದ್ಯೇಕತ್ವೋಪಪತ್ತಿಪ್ರದರ್ಶನೇನ। ಅವಿದ್ಯಾಯಾಮ್ ಉನ್ಮೂಲಿತಾ

---

1. 'ಸಾಧನೈರೇವ ಇಷ್ಟಪ್ರಾಪ್ತಿಂ ಚ ಅನಿಷ್ಟಪರಿಹಾರಂ ಚ ಇಚ್ಛತಃ, ಇಷ್ಟಾನಿಷ್ಟ ಪ್ರಾಪ್ತಿಪರಿಹಾರೋಪಾಯವಿವೇಕಮ್ ಅಜಾನತಃ' ಎಂಬ ಅನುಕ್ರಮವಿದ್ದರೆ ಹೊಂದುಗೆ ಯಾಗುವದು. ಈಗ ನಾವು ಕೊಟ್ಟಿರುವಂತೆಯೇ ಅಚ್ಚಿನಲ್ಲಿದೆ. ಅರ್ಥವನ್ನು ಸರಿಯಾದ ಅನುಕ್ರಮದಲ್ಲಿಯೇ ಬರೆದಿದೇವೆ.

2. 'ಸಂಸಾರಮ್' ಎಂಬ ನಿಜ ಪಾಠವು ತಪ್ಪು.

ಯಾಂ ಶ್ರುತಿಸ್ಮೃತಿನ್ಯಾಯೇಭ್ಯಃ ಅನನ್ತರಮಬಾಹ್ಯಮ್, ಸಬಾಹ್ಯಾಭ್ಯನ್ತರೋ ಹ್ಯಜಃ, ಸೈನ್ಧವಘನವತ್ ಪ್ರಜ್ಞಾನಘನ ಏವ ಏಕ ಆತ್ಮಾ ಆಕಾಶವತ್ ಪರಿಪೂರ್ಣಃ ಇತ್ಯತ್ರೈವ ಏಕಾ ಪ್ರಜ್ಞಾ ಪ್ರತಿಷ್ಠಾ ಪರಮಾರ್ಥದರ್ಶಿನೋ ಭವತಿ । ನ ಸಾಧ್ಯಸಾಧನೋತ್ಪತ್ತಿಪ್ರಲಯಾದಿ ಭೇದೇನ ಅಶುದ್ಧಿಗನ್ಧೋಽಪಿ ಉಪಪದ್ಯತೇ ॥ ೨೮ ॥

(ಅರ್ಥ)

(ಪ್ರಶ್ನೆ):– ಹಾಗಾದರೆ, ಪೂಜ್ಯರೆ, ಶ್ರುತಿಯಲ್ಲಿ ಸಾಧ್ಯಸಾಧನಾದಿಭೇದವನ್ನೂ ಉತ್ಪತ್ತಿ, ಪ್ರಲಯ– ಎಂಬ (ಭೇದವನ್ನೂ) ಏತಕ್ಕೆ ಹೇಳಿರುತ್ತದೆ?

(ಉತ್ತರ):– ಇದಕ್ಕೆ(ಉತ್ತರವನ್ನು)ಹೇಳುತ್ತೇವೆ: ಶರೀರವೇ ಮುಂತಾದ ಭೇದವನ್ನು ಸ್ವೀಕರಿಸಿ ತಾನು ಇಷ್ಟಾನಿಷ್ಟಗಳ ಸಂಬಂಧವುಳ್ಳವನು ಎಂದು ತಿಳಿದುಕೊಂಡಿರುವ, ಸಾಧನಗಳಿಂದಲೇ[1] ಇಷ್ಟಪ್ರಾಪ್ತಿಯನ್ನೂ ಅನಿಷ್ಟಪರಿಹಾರವನ್ನೂ ಬಯಸುತ್ತಾ, ಇಷ್ಟಾನಿಷ್ಟಗಳ ಪ್ರಾಪ್ತಿಪರಿಹಾರಗಳಿಗೆ ಉಪಾಯವು (ಯಾವದೆಂದು) ವಿಂಗಡಿಸಿ ಅರಿಯದೆ ಇರುವ ಅವಿದ್ಯಾವಂತನಿಗೆ ಆ ವಿಷಯದ ಅಜ್ಞಾನವನ್ನು ಮೆಲ್ಲಮೆಲ್ಲಗೆ[2] ಕಳೆಯುವದಕ್ಕೆ (ಹೊರಟಿರುತ್ತದೆ), ಶಾಸ್ತ್ರ. (ಅದು) ಸಾಧ್ಯಸಾಧನವೇ ಮುಂತಾದ ಭೇದವನ್ನು ವಿಧಾನ ಮಾಡುವದಿಲ್ಲ[3]; ಏಕೆಂದರೆ ಆ (ಭೇದವು,) ಅನಿಷ್ಟರೂಪವಾದ ಸಂಸಾರವು. (ಶಾಸ್ತ್ರವು ಮತ್ತೇನು ಮಾಡುವದೆಂದರೆ) ಉತ್ಪತ್ತಿ, ಪ್ರಲಯ– ಮುಂತಾದ

---

1. ಯಾವವಾದರೂ ಕರ್ಮವನ್ನು ಮಾಡಿಯೇ ತನಗೆ ಬೇಕಾದ ಒಳ್ಳೆಯ ಫಲವನ್ನು ಪಡೆದುಕೊಳ್ಳಬೇಕು, ಬೇಡದ ಕೆಟ್ಟ ಫಲವನ್ನು ತೊಲಗಿಸಿಕೊಳ್ಳಬೇಕು– ಎಂದು ಅಜ್ಞನು ಇಚ್ಛಿಸುತ್ತಿರುತ್ತಾನೆ. ಏಕೆಂದರೆ ನಾನು ಕರ್ತೃ, ಭೋಕ್ತೃ– ಎಂಬ ತಿಳಿವಳಿಕೆಯು ಅವನಿಗೆ ಸ್ವಾಭಾವಿಕವಾಗಿರುತ್ತದೆ.

2. ಕ್ರಮಕ್ರಮವಾಗಿ ಎಂದರ್ಥ. ನೀನು ಕರ್ತೃವಲ್ಲ, ಭೋಕ್ತೃವಲ್ಲ– ಎಂದು ಚಿತ್ತಶುದ್ಧಿಯಿಲ್ಲದವನಿಗೆ ತಿಳಿಸಿದರೂ ಅವನಿಗೆ ಅದರಲ್ಲಿ ವಿಶ್ವಾಸವುಂಟಾಗುವದಿಲ್ಲ. ಆದ್ದರಿಂದ ಚಿತ್ತಶುದ್ಧಿಗಾಗಿ ಕರ್ಮವನ್ನು ಹೇಳಿ, ಬಳಿಕ ಜ್ಞಾನವನ್ನು ಉಪದೇಶಿಸಬೇಕೆಂದು ಶಾಸ್ತ್ರವು ಹೊರಟಿರುತ್ತದೆ.

3. ಭೇದವು ಸತ್ಯವೆಂದೇನೂ ಶಾಸ್ತ್ರವು ಹೇಳುವದಿಲ್ಲ; ಅಜ್ಞರಿಲ್ಲದೂ ಅದು ಸತ್ಯವೆಂದು ತಾವೇ ತಿಳಿದುಕೊಂಡಿರುತ್ತಾರೆ ಎಂದರ್ಥ. ತೈ. ಭಾ. ೧-೧೧ (ಭಾ. ಭಾ. ೭೯), ಬೃ ಭಾ. ೨–೧–೨೦ ಇವನ್ನು ನೋಡಿರಿ.

ಏಕತ್ವಯುಕ್ತಿಯನ್ನು ತೋರಿಸಿಕೊಟ್ಟು[1] ಸಂಸಾರಕ್ಕೆ ಮೂಲವಾಗಿರುವ ಆ ಭೇದದೃಷ್ಟಿ ಎಂಬ ಅವಿದ್ಯೆಯನ್ನೇ ಕೆತ್ತುಹಾಕುತ್ತದೆ.

(ಹೀಗೆ) ಅವಿದ್ಯೆಯನ್ನು ಕೆತ್ತುಹಾಕಿದಮೇಲೆ ಶ್ರುತಿಸ್ಮೃತಿನ್ಯಾಯಗಳಿಂದ ಸಿದ್ಧವಾಗಿರುವ ಒಳಗಿಲ್ಲದ ಹೊರಗಿಲ್ಲವೆ, ಒಳಗೂ ಹೊರಗೂ ಜನ್ಮರಹಿತವಾಗಿರುವ, (ಒಂದೇ ಸರಿಯಾದ) ಉಪ್ಪಿನ ಹರಳಿನಂತೆ ಚೈತನ್ಯದ ಗಟ್ಟಿಯೇ ಆಗಿ ಆಕಾಶದಂತೆ ಎಲ್ಲೆಲ್ಲಿಯೂ ತುಂಬಿಕೊಂಡಿರುವ ಆತ್ಮನು ಒಬ್ಬನೇ ಎಂಬೀ (ವಿಷಯ)ದಲ್ಲಿಯೇ ಒಂದೇ (ನಿಶ್ಚಿತವಾದ) ಬುದ್ಧಿಯು ಪರಮಾರ್ಥದರ್ಶಿಗೆ ನೆಲೆನಿಲ್ಲುವದು. (ಆಗ) ಸಾಧ್ಯಸಾಧನಗಳು, ಉತ್ಪತ್ತಿಪ್ರಲಯಗಳು– ಮುಂತಾದ ಭೇದದಿಂದ (ಆಗಿರುವ) ಅಶುದ್ಧಿಯು ವಾಸನೆಯು ಕೂಡ (ಆತ್ಮನಲ್ಲಿದೆ ಎಂಬುದು) ಹೊಂದುವದಿಲ್ಲ.

ಪರಮಾರ್ಥದರ್ಶನಕ್ಕೆ ಏಷಣಾತ್ರಯತ್ಯಾಗವು ಬೇಕು

(ಮೂಲ)

ತಚ್ಚೈತತ್ ಪರಮಾರ್ಥದರ್ಶನಮ್ ಪ್ರತಿಪತ್ತುಮಿಚ್ಛತಾ ವರ್ಣಾಶ್ರಮಾದ್ಯಭಿಮಾನಕೃತಸಾಙ್ಕ್ಯತರೂಪಪುತ್ರವಿತ್ತಲೋಕೈಷಣಾದಿಭ್ಯೋ ವ್ಯುತ್ಥಾನಂ ಕರ್ತವ್ಯಮ್। ಸಮ್ಯಕ್ಪ್ರತ್ಯಯವಿರೋಧಾತ್ ತದಭಿಮಾನಸ್ಯ। ಭೇದದರ್ಶನಪ್ರತಿಷೇಧೋಪಪತ್ತೇಶ್ಚ[2]। ನ ಹಿ ಏಕಸ್ಮಿನ್ ಆತ್ಮನಿ ಅಸಂಸಾರಿತ್ವಬುದ್ಧೌ ಶಾಸ್ತ್ರನ್ಯಾಯೋತ್ಪಾದಿತಾಯಾಂ ತದ್ವಿಪರೀತಾ ಬುದ್ಧಿರ್ಭವತಿ। ನ ಹಿ ಅಗ್ನೌ ಶೀತತ್ವಬುದ್ಧಿಃ, ಶರೀರೇ ವಾ ಅಜರಾಮರಣಬುದ್ಧಿಃ। ತಸ್ಮಾತ್ ಅವಿದ್ಯಾಕಾರ್ಯತ್ವಾತ್ ಸರ್ವಕರ್ಮಣಾಂ ತತ್ಸಾಧನಾನಾಂ ಚ ಯಜ್ಞೋಪವೀತಾದೀನಾಂ ಪರಮಾರ್ಥದರ್ಶನನಿಷ್ಠೇನ ತ್ಯಾಗಃ ಕರ್ತವ್ಯಃ ॥೨೯॥

---

1. ಯಾವದರಿಂದ ಯಾವ ಕಾರ್ಯವು ಹುಟ್ಟುವದೋ ಯಾವದರಲ್ಲಿಯೇ ಲಯವಾಗುವದೋ ಆ ಕಾರಣಕ್ಕಿಂತ ಬೇರೆಯಾಗಿ ಆ ಕಾರ್ಯವು ಇರುವದಿಲ್ಲ; ಇದರಂತೆ ಬ್ರಹ್ಮದಿಂದ ಹುಟ್ಟಿ ಬ್ರಹ್ಮದಲ್ಲಿಯೇ ಅಡಗುವದರಿಂದ ಜಗತ್ತು ಬ್ರಹ್ಮಕ್ಕಿಂತ ಬೇರೆಯಲ್ಲ ಎಂದು ಆತ್ಮನ ಏಕತ್ವವನ್ನೇ ತಿಳಿಸುವದಕ್ಕೆ ಉತ್ಪತ್ತಿಪ್ರಲಯಾದಿಯುಕ್ತಿಯನ್ನು ಶಾಸ್ತ್ರವು ತಿಳಿಸುತ್ತದೆ.

2. 'ಭೇದದರ್ಶನೋಪಪತ್ತಿಶ್ಚ ಉಪಪದ್ಯತೇ' ಎಂಬ ಅಚ್ಚಿನ ಪಾಠವು ವ್ಯಾಖ್ಯಾನ ಸಮ್ಮತವಾದರೂ ಈಗ ನಾವು ತಿದ್ದಿಹಾಕಿರುವ ಪಾಠವೇ ಹಿಂದಿನ ವಾಕ್ಯಕ್ಕೆ ಸರಿಯಾಗಿ ಅನ್ವಯವಾಗುತ್ತದೆ.

(ಅರ್ಥ)

ಅಂಥ ಈ ಪರಮಾರ್ಥಜ್ಞಾನವನ್ನು ಪಡೆದುಕೊಳ್ಳಬೇಕೆಂದು ಬಯಸುವಾತನು ವರ್ಣ, ಆಶ್ರಮ- ಮುಂತಾದವುಗಳ ಅಭಿಮಾನದಿಂದಾಗಿರುವ ಪಾಜ್ಯ್ರ ರೂಪವಾದ,[1] ಮಕ್ಕಳು, ವಿತ್ತ, ಲೋಕ- ಎಂಬ (ಮೂರು) ಏಷಣೆಗಳೇ ಮುಂತಾದವುಗಳನ್ನು ಬಿಟ್ಟು ಮೇಲಕ್ಕೇಳಬೇಕು.[2] ಏಕೆಂದರೆ ಆ ಅಭಿಮಾನವು ಸರಿಯಾದ ಜ್ಞಾನಕ್ಕೆ ವಿರುದ್ಧವಾಗಿರುತ್ತದೆ.[3] ಭೇದದರ್ಶನವನ್ನು (ಶ್ರುತಿಯಲ್ಲಿ) ನಿಂದಿಸಿರುವದು ಹೊಂದುವದರಿಂದಲೂ[4] (ಹೀಗೆ ಮಾಡಬೇಕು). ಏಕೆಂದರೆ ಒಬ್ಬನೇ ಆತ್ಮನಲ್ಲಿ (ಅವನು) ಅಸಂಸಾರಿಯೆಂಬ ಬುದ್ಧಿಯು ಶಾಸ್ತ್ರದಿಂದಲೂ ಯುಕ್ತಿಯಿಂದಲೂ ಉಂಟಾದಮೇಲೆ (ಅವನು ಸಂಸಾರಿ ಎಂದು) ಇದಕ್ಕೆ ವಿರುದ್ಧವಾದ ಬುದ್ಧಿಯು ಉಂಟಾಗಲಾರದು. ಬೆಂಕಿಯಲ್ಲಿ (ಅದು) ತಣ್ಣಗಿದೆ ಎಂಬ ಬುದ್ಧಿಯಾಗಲಿ, ಶರೀರದಲ್ಲಿ ಮುಪ್ಪುಸಾವುಗಳಿಲ್ಲವೆಂಬ ಬುದ್ಧಿಯಾಗಲಿ ಆಗಲಾರದಷ್ಟೆ?[5] ಆದ್ದರಿಂದ ಎಲ್ಲಾ ಬಗೆಯ ಕರ್ಮಗಳೂ[6] ಅವುಗಳ ಸಾಧನವಾಗಿರುವ ಯಜ್ಞೋಪವೀತಾದಿಗಳೂ ಅವಿದ್ಯೆಯ ಕಾರ್ಯವಾಗಿರುವದರಿಂದ[7] ಪರಮಾರ್ಥದರ್ಶನದಲ್ಲಿ ನಿಷ್ಠನಾದವನು (ಅವುಗಳನ್ನು) ಬಿಟ್ಟುಬಿಡಬೇಕು.

---

1. ತಾನು, ಹೆಂಡತಿ, ಪುತ್ರ, ಮಾನುಷ್ಯೈವಿತ್ತಗಳು- ಎಂಬ ಐವಕ್ಕೆ ಪಾಜ್ಯ್ರವೆಂದು ಹೆಸರು. ಬೃ. ೧-೪-೧೭ ನೋಡಿ.

2. ಸಂನ್ಯಾಸಮಾಡಬೇಕು. ಜ್ಞಾನೇಚ್ಛೆಯಿಂದ ಮಾಡುವ ಈ ಏಷಣಾತ್ಯಾಗಕ್ಕೆ **ವಿವಿದಿಷಾಸಂನ್ಯಾಸ**ವೆಂದು ಹೆಸರು. ಇಲ್ಲಿ 'ಏಷಣಾಭ್ಯೋ' ಎಂದು ಮೂಲದಲ್ಲಿರುವ ಆದಿ ಹೆಚ್ಚಿಂದು ತೋರುತ್ತದೆ. ಅಥವಾ ಈ ಖಂಡದಲ್ಲಿ ಹೇಳಿರುವ ಯಜ್ಞೋಪವೀತಾದಿಗಳನ್ನು ಆದಿ ಎಂಬ ಶಬ್ದದಿಂದ ಗ್ರಹಿಸಬಹುದು. ಈ ಏಷಣಾತ್ಯಾಗಕ್ಕೆ ಬೃ. ೪-೪-೨೨ನ್ನು ನೋಡಿ.

3. ಸರಿಯಾದ ಜ್ಞಾನವೆಂದರೆ ನಾನು ಕರ್ತೃವಲ್ಲದ ಭೋಕ್ತೃವಲ್ಲದ ಪರಮಾತ್ಮನು ಎಂಬ ತಿಳಿವಳಿಕೆ.

4. ಹಿಂದೆ ೧೯ನೆಯ ಖಂಡದಲ್ಲಿ ಇಂಥ ಶ್ರುತಿಗಳನ್ನು ಉದಾಹರಿಸಿದೆ.

5. ಏಕೆಂದರೆ ಈ ಬುದ್ಧಿಗಳು ಪ್ರತ್ಯಕ್ಷವಿರುದ್ಧವಾಗಿವೆ. ಇವರಂತೆ ನಾನು ಇಂಥ ವರ್ಣದವನು, ಇಂಥ ಆಶ್ರಮದವನು, ಇಂಥಿಂಥ ಕರ್ಮಗಳನ್ನೂ ಉಪಾಸನೆಗಳನ್ನೂ ಮಾಡಿ ಈ ಲೋಕ, ಪಿತೃಲೋಕ, ದೇವಲೋಕ- ಇವುಗಳಲ್ಲೊಂದನ್ನು ಪಡೆಯುವವನು ಎಂಬ ಅಭಿಮಾನವು ನಾನು ಕರ್ತೃವಲ್ಲದ ಭೋಕ್ತೃವಲ್ಲದ ಅದ್ವಿತೀಯಾತ್ಮನು ಎಂಬ ಶಾಸ್ತ್ರಪ್ರಮಾಣಕವಾದ ಪರಮಾರ್ಥದರ್ಶನಕ್ಕೆ ವಿರುದ್ಧವಾಗಿರುತ್ತದೆ.

6. ನಿತ್ಯಕರ್ಮಗಳನ್ನು ಕೂಡ ಸಂನ್ಯಾಸಮಾಡತಕ್ಕದ್ದೆಂದು ಭಾವ.

7. ಆತ್ಮನನ್ನು ತಪ್ಪಾಗಿ ತಿಳಿದುಕೊಂಡಿರುವ ಅವಿದ್ಯೆಯಿಂದಲೇ ಕರ್ಮಸಾಧನಗಳಾದ ಯಜ್ಞೋಪವೀತಾದಿಸಾಧನಗಳನ್ನು ಸ್ವೀಕರಿಸಿ ಕರ್ಮಗಳನ್ನು ಮಾಡುತ್ತಾರಾದ್ದರಿಂದ ಅವು ಅವಿದ್ಯಾಕಾರ್ಯಗಳು.

ಒಂದನೆಯ ಪ್ರಕರಣದ ಸಾರ

ಇಲ್ಲಿ ಕೊಟ್ಟಿರುವ ಅಂಕೆಗಳು ಮೂಲದ ಖಂಡಗಳ ಸಂಖ್ಯೆಯನ್ನು ಸೂಚಿಸುವವು.

೧–೫. **ಸಾಧನಸಂಪತ್ತಿ**ಯುಳ್ಳವರಿಗೇ ಪೊತ್ತವರು ವಿದ್ಯೆಯನ್ನು ಉಪದೇಶಿಸುವರು. ಏಕೆಂದರೆ ವಿದ್ಯೆಯು ಅಂಥವರಲ್ಲಿಯೇ ಫಲಕಾರಿಯಾಗುವದು. ಅಂಥವರಿಗೆ ಹೇಳಿಕೊಟ್ಟವರ ಜ್ಞಾನವು ದೃಢವಾಗುವದು. ಅವರ ಮೂಲಕ ವಿದ್ಯೆಯೂ ಮುಂಬರಿಯುವದು. **ಆದ್ದ**ರಿಂದ ವೇದಾಂತತತ್ತ್ವವನ್ನು ಮನಗಾಣಬೇಕೆನ್ನುವವನು **ಸಾಧನಚತುಷ್ಟಯ**ವನ್ನು **ಸಂಪಾ**ದಿಸಿಕೊಳ್ಳುವ ಯತ್ನವನ್ನು ಮಾಡಬೇಕು; ಅವುಗಳ ಪ್ರಾಪ್ತಿಗಾಗಿ **ಯಮನಿಯಮ**ಗಳನ್ನು ಅಭ್ಯಾಸಮಾಡಬೇಕು. ಇಂಥ ಅಧಿಕಾರಿಗಳಾದ ಶಿಷ್ಯರು ಮಾತ್ರವೇ ಸದ್ಗುರುವಿನ ಉಪ**ದೇಶ**ದಿಂದ ಕೃತಕೃತ್ಯರಾಗುವರು.

೬–೭ ನಮ್ಮ**ಗಳೆಲ್ಲರಿಗೂ** ಒಬ್ಬನೇ **ಆತ್ಮ**ನಿರುವನು; ಅವನು **ನಿತ್ಯಶುದ್ಧಬುದ್ಧ**ಮುಕ್ತಸ್ವಭಾವನಾಗಿರುವನು– ಎಂದು **ಉಪನಿಷತ್ತು**ಗಳಲ್ಲಿ ಸಾರಿರುತ್ತದೆ. **ಈ ಆತ್ಮ**ನಿಗೇ **ಬ್ರಹ್ಮ**ವೆಂದೂ **ಪರಮಾತ್ಮ**ನೆಂದೂ ಹೆಸರು. ಬ್ರಹ್ಮದ **ಲಕ್ಷಣ**ವನ್ನು ಹೇಳುವ ವೇದಾಂತ ವಾಕ್ಯಗಳನ್ನು ಮೊದಲು **ಲಕ್ಷ್ಯ**ವಿಟ್ಟು ನೋಡಿ ನಮ್ಮ ಆತ್ಮನು ಅಂಥ ಬ್ರಹ್ಮವೆಂಬುದು ಸರಿಯೊ, ಅಲ್ಲವೊ?– ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ.

೮–೧೨ ಅತ್ಯಂತಸ್ಥೂಲಬುದ್ಧಿಯುಳ್ಳವರು ಶರೀರವೇ ತಾವೆಂದು ತಿಳಿದುಕೊಂಡಿರುವರು. ಆದರೆ ಸ್ವಲ್ಪಮಟ್ಟಿಗೆ ವಿಚಾರನೂಡಿರುವ ಆಸ್ತಿಕರಿಗೆ ಶರೀರವು ಇಲ್ಲಿಯೇ ನಾಶವಾಗುವದರಿಂದ ಲೋಕಾಂತರದಲ್ಲಿ ಫಲವನ್ನು ಪಡೆಯುವ ಆತ್ಮನು ಶರೀರವಾಗಿರಲಾರದು ಎಂಬ ತಿಳಿವಳಿಕೆಯು ಬೇಗನೆ ಉಂಟಾಗುತ್ತದೆ. ಆದರೆ ಧರ್ಮಾಧರ್ಮಗಳನ್ನು ಮಾಡುವ ಜೀವರು ತಾವೆಂದು ಅವರು **ತಿಳಿದುಕೊಂಡಿರುವ**ದೂ ತಪ್ಪೇ. ಏಕೆಂದರೆ ಶರೀರಕ್ಕೆ ಸೇರಿದ ಜಾತಿ, ಆನ್ವಯ, ಸಂಸ್ಕಾರ– ಮುಂತಾದವುಗಳೆಲ್ಲ ತಮ್ಮ ಆತ್ಮನಿಗೇ ಇರುವವೆಂದು ಅವರು ಆರೋಪಿಸಿಕೊಂಡಿರುತ್ತಾರೆ. **ನಿಜವಾಗಿ ಅವರ ಆತ್ಮ**ನು **ಅತ್ಯಂತಶುದ್ಧ**ನಾದ **ಪರಮಾತ್ಮ**ನೇ ಆಗಿರುತ್ತಾನೆ.

೧೩–೧೪ **ಶ್ರುತಿವಾಕ್ಯ**ಗಳ **ಅರ್ಥ**ವನ್ನು **ಪರಿಶೀಲಿಸು**ವವರಿಂದ ಇದು ಸ್ಪಷ್ಟವಾಗುತ್ತದೆ. ಹೇಗೆಂದರೆ ಪರಮಾತ್ಮನು ತನ್ನ ಸ್ವರೂಪವೇ ಆಗಿದ್ದುಕೊಂಡಿದ್ದ ನಾಮರೂಪಗಳನ್ನು ನೀರಿನಿಂದ ನೊರೆಯನ್ನು ಹೊರಗೆಡವಿದಂತೆ ಹೊರಗೆಡವಿ ಪಿಂಗಡಿಸುತ್ತಾನೆಂದೂ ಅವುಗಳಿಂದ ಆಕಾಶಾದಿಪಂಚಭೂತಗಳೂ ಅವುಗಳಿಂದ ಭೂಮಂಡಲವೂ ಅಲ್ಲಿ ಬೆಳೆವ ಸಸ್ಯಗಳನ್ನು ತಿಂದ ತಂದೆತಾಯಿಗಳ ಶುಕ್ಲಶೋಣಿತಗಳ ಸಂಬಂಧದಿಂದ ಉಂಟಾದ ಗರ್ಭವೇ ಶರೀರವಾಗುವದೆಂದೂ ಆ ಶರೀರಕ್ಕೇ ಜಾತಿ, ಆನ್ವಯ, ಸಂಸ್ಕಾರ– ಮುಂತಾದವುಗಳೆಲ್ಲವೂ ಸೇರಿರುವವೆಂದೂ ಶ್ರುತಿಯಲ್ಲಿ ವರ್ಣಿಸಿರುತ್ತದೆ. ಶರೀರದಲ್ಲಿರುವ ಮನಸ್ಸೂ ಈ ನಾಮರೂಪಗಳ ಕಾರ್ಯವೇ ಎಂದೂ ವರ್ಣಿಸಿರುತ್ತದೆ. ಆದ್ದರಿಂದ ಆತ್ಮನು ಶರೀರಕ್ಕಿಂತಲೂ ಮನಸ್ಸಿಗಿಂತಲೂ ವಿಲಕ್ಷಣನು, ಶುದ್ಧನು– ಎಂದಾಯಿತು.

೧೯-೨೦ ನಾಮರೂಪಗಳನ್ನು ವ್ಯಾಕೃತವಾಗಿ ಮಾಡುವ ಪರಮಾತ್ಮನೇ ಜೀವನಾಗಿ ಶರೀರದೊಳಗೆ ಹೊಕ್ಕಿರುತ್ತಾನೆಂದು ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಆದರೂ ವೇದದಲ್ಲಿರುವ ಉಪಾಸನಾವಾಕ್ಯಗಳಲ್ಲಿ ಮಾತ್ರವೇ ತಾತ್ಪರ್ಯವುಳ್ಳ ಕೆಲವರು ತಾವು ಸಂಸಾರಿಗಳೆಂದೂ ಪರಮೇಶ್ವರನನ್ನು ಆರಾಧಿಸಿ ಸತ್ತ ಬಳಿಕ ಆತನ ಸಾಯುಜ್ಯವನ್ನು ತಾವು ಪಡೆದುಕೊಳ್ಳಬೇಕಾಗಿರುವದೆಂದೂ ಭಾವಿಸುತ್ತಾರೆ. ಇದು ಶ್ರುತಿಸಮ್ಮತವಾದ ತಿಳಿವಳಿಕೆಯಲ್ಲ; ಏಕೆಂದರೆ ಶ್ರುತಿಯಲ್ಲಿ 'ನಾನು ಬೇರೆ, ಪರಮಾತ್ಮನು ಬೇರೆ' ಎಂಬ ತಿಳಿವಳಿಕೆಯನ್ನು ನಿಂದಿಸಿದೆ. ಈ ಭೇದಜ್ಞಾನದಿಂದ ಸಂಸಾರಬಂಧವೂ ಅಭೇದಜ್ಞಾನದಿಂದ ಮೋಕ್ಷವೂ ಆಗುವದೆಂದು ಶ್ರುತಿವಚನಗಳು ಸ್ಪಷ್ಟವಾಗಿ ಸಾರುತ್ತಿವೆ.

೨೧-೨೨ ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳುಕೂಡ ಭೇದವಿಷಯವಾಗಿರುವದರಿಂದ ಅವುಗಳನ್ನೂ ಅವುಗಳ ಸಾಧನವಾದ ಯಜ್ಞೋಪವೀತಾದಿಗಳನ್ನೂ ಮುಮುಕ್ಷುವಾದವನು ತ್ಯಾಗಮಾಡಬೇಕು. ಏಕೆಂದರೆ ಆತ್ಮನಿಗೆ ಕರ್ಮಾದಿಸಂಬಂಧವಿಲ್ಲವೆಂದೂ ಅವನು ಪರಮಾತ್ಮನೇ ಎಂದೂ ಹೇಳುವ ಶ್ರುತಿಯ ಉಪದೇಶಕ್ಕೆ ಕರ್ಮಾದಿಗಳು ವಿರುದ್ಧವಾಗಿರುತ್ತವೆ.

೨೩-೨೬ ಈ ಆತ್ಮೈಕ್ಯಜ್ಞಾನವು ಪ್ರತ್ಯಕ್ಷವಿರುದ್ಧವೆಂದು ಕೆಲವರಿಗೆ ತೋರಬಹುದು. ಏಕೆಂದರೆ ಹಸಿವುಬಾಯಾರಿಕೆಯಿಂದಲೂ ಸುಡುವದು ಕತ್ತರಿಸುವದು ಮುಂತಾದವುಗಳಿಂದಲೂ ನಾವು ದುಃಖಪಡುತ್ತಿರುವೆವು; ಆದರೆ ಪರಮಾತ್ಮನು ಎಲ್ಲಾಬಗೆಯ ದುಃಖಗಳನ್ನೂ ದೋಷಗಳನ್ನೂ ಮೀರಿರುವನು ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದ್ದರಿಂದ ಸಂಸಾರಿಯನ್ನು ಈಶ್ವರನೆಂದು ತಿಳಿಯುವದು ಪ್ರತ್ಯಕ್ಷವಿರುದ್ಧವು ಎಂದು ಅವರ ಅಭಿಪ್ರಾಯವು.

ಆದರೆ ಆತ್ಮನಲ್ಲಿ ದುಃಖವಿರುವದು ಪ್ರತ್ಯಕ್ಷವಾಗಿಲ್ಲ. ಏಕೆಂದರೆ ದುಃಖವು ಪ್ರತ್ಯಕ್ಷವಿಷಯವಾಗಿದೆ, ಆತ್ಮನು ಪ್ರತ್ಯಕ್ಷಕ್ಕೆ ವಿಷಯನಲ್ಲ. ಆತ್ಮನು ವಿಷಯವನ್ನು ಅರಿಯುವವನು; ವಿಷಯವಾದ ನೋವು ಶರೀರದ ಇಂಥ ಪ್ರದೇಶದಲ್ಲಿದೆ ಎಂದು ಅನುಭವಕ್ಕೆ ಬರುತ್ತದೆಯೇ ಹೊರತು ಅರಿಯುವ ನನ್ನಲ್ಲಿವೆ ಎಂದೇನೂ ಅನುಭವಕ್ಕೆ ಬರುವದಿಲ್ಲ. ಇದಲ್ಲದೆ ದುಃಖವು ಅರಿಯುವ ಆತ್ಮನ ಧರ್ಮವಾಗಿದ್ದರೆ, ಕಣ್ಣಿಗೆ ವಿಷಯದ ರೂಪವೆಲ್ಲವೂ ಗೋಚರವಾದರೂ ತನ್ನಲ್ಲಿರುವ ರೂಪವು ಗೋಚರವಾಗದಂತೆ ಈ ದುಃಖವೂ ಗೋಚರವಾಗದೆ ಇರಬೇಕಾಗಿತ್ತು. ಆದರೆ ಹಾಗಿಲ್ಲ. ಆದ್ದರಿಂದ ದುಃಖವು ವಿಷಯದ ಧರ್ಮವೇ ಎಂದು ನಿಶ್ಚಯವಾಗುತ್ತದೆ.

ನೋವು, ದುಃಖ ಮುಂತಾದವು ಕಾರ್ಯವಾಗಿರುವದರಿಂದ ಯಾವದಾದರೊಂದು ಆಶ್ರಯದಲ್ಲಿಯೇ ಇರಬೇಕಷ್ಟೆ. ಆ ಆಶ್ರಯವು ಯಾವದೆಂಬುವದನ್ನು ವಿಚಾರಮಾಡಿದರೆ ರಾಗ, ದ್ವೇಷ, ಭಯ ಮುಂತಾದವುಗಳಿಗೆ ಆಶ್ರಯವಾಗಿರುವ ಅಂತಃಕರಣವೇ ಅದಕ್ಕೆ ಆಶ್ರಯವೆಂದು ಗೊತ್ತಾಗುತ್ತದೆ. ಕಾಮ, ಸಂಕಲ್ಪ, ಮುಂತಾದವುಗಳೆಲ್ಲ ಅಂತಃಕರಣ ಧರ್ಮಗಳೆಂದು ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿಯೂ ಇರುತ್ತದೆ.

ಆದ್ದರಿಂದ ಆತ್ಮನಲ್ಲಿ ಯಾವ ದುಃಖಾದಿಗಳೂ ಇರುವದಿಲ್ಲ. ಆದ್ದರಿಂದ ಆತ್ಮನು ಒಬ್ಬನೇ ಎಂಬುದು ಪ್ರತ್ಯಕ್ಷವಿರುದ್ಧವಲ್ಲ. ಆದ್ದರಿಂದ ನಾನು ಪರಮಾತ್ಮನೇ ಎಂದು ಶ್ರುತ್ಯನುಸಾರವಾಗಿ ನಿಶ್ಚಯಿಸುವದು ಸರಿಯೇ.

೨೭–೨೮ ಶ್ರುತಿಗನುಸಾರವಾಗಿ ಕೂಟಸ್ಥನಿತ್ಯನೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ಆದ ಪರಮಾತ್ಮನೊಬ್ಬನೇ ಪರಮಾರ್ಥವೆಂಬುದೇ ನಿಶ್ಚಯವಾದರೆ ಪ್ರತ್ಯಕ್ಷಾದಿಪ್ರಮಾಣಗೋಚರವಾಗಿಯೂ ಶ್ರುತಿಪ್ರಕಾಶಿತವಾಗಿಯೂ ಅನೇಕವಾದಿಗಳ ವಿವಾದಕ್ಕೆ ವಿಷಯವಾಗಿಯೂ ಇರುವ ಸಾಧ್ಯಸಾಧನರೂಪವಾದ ಈ ದ್ವೈತಕ್ಕೆ ಏನು ಗತಿ? –ಎಂದು ಒಂದು ಶಂಕೆಯು ತಲೆ ಎತ್ತಿಕೊಳ್ಳಬಹುದು. ಇದೆಲ್ಲ ಅವಿದ್ಯಾಕೃತವಾದದ್ದು, ಪರಮಾರ್ಥವಲ್ಲ. ಆದ್ದರಿಂದಲೇ ಶ್ರುತಿಯಲ್ಲಿ ದ್ವೈತದರ್ಶನವನ್ನು ನಿಂದಿಸಿರುತ್ತದೆ. ಇದು ಅವಿದ್ಯಾಕೃತವೆಂದೂ ಹೇಳಿರುತ್ತದೆ.

ಹಾಗಾದರೆ ಶ್ರುತಿಯಲ್ಲಿ ಇಂಥ ಸಾಧ್ಯಕ್ಕೆ ಇಂಥ ಸಾಧನವನ್ನು ಮಾಡಬೇಕು ಎಂದು ವಿಧಿಸಿರುವದೇಕೆ? ಜಗತ್ತಿನ ಸೃಷ್ಟಿಯನ್ನು ವರ್ಣಿಸಿರುವದೇಕೆ? –ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವೇನೆಂದರೆ, ಶ್ರುತಿಯಲ್ಲಿ ಸಾಧ್ಯಸಾಧನರೂಪವಾದ ಜಗತ್ತು ಸತ್ಯವೆಂದು ಹೇಳಿರುವದಿಲ್ಲ. ಯಾರು ಇದನ್ನು ಸತ್ಯವೆಂದು ತಿಳಿದಿರುವರೋ ಅವರಿಗೆ ಇಷ್ಟಪ್ರಾಪ್ತಿಗೂ ಅನಿಷ್ಟನಿವೃತ್ತಿಗೂ ಇಂಥಿಂಥ ಸಾಧನಗಳಿರುವವು ಎಂದು ಮಾತ್ರ ಸಾಧ್ಯಪ್ರಾಪ್ತಿಯ ಉಪಾಯವನ್ನು ತಿಳಿಸಿಕೊಡುತ್ತದೆ. ಯಾರು ಈ ಸಾಧ್ಯಸಾಧನಪ್ರಪಂಚದಿಂದ ವಿರಕ್ತರಾಗಿರುವರೋ ಅವರಿಗೆ ಕಾಲಕ್ರಮದಿಂದ ಚಿತ್ತಶುದ್ಧಿಯಾದ ಬಳಿಕ ಆತ್ಮೈಕತ್ವವೆಂಬ ಪರಮಾರ್ಥವನ್ನು ತಿಳಿಸಿಕೊಡಬೇಕೆಂಬುವೇ ಶಾಸ್ತ್ರದ ಉದ್ದೇಶವು.

ಜಗತ್ತಿನ ಉತ್ಪತ್ತಿಪ್ರಲಯ – ಮುಂತಾದವುಗಳನ್ನು ಶಾಸ್ತ್ರದಲ್ಲಿ ಬೋಧಿಸಿರುವದೂ ಜಗತ್ತು ಸತ್ಯವೆಂದು ತಿಳಿಸುವದಕ್ಕಲ್ಲ. ಜಗತ್ತು ಯಾವ ಆತ್ಮನಿಂದ ಹುಟ್ಟಿ, ಯಾವನಲ್ಲಿಯೇ ಇದ್ದು, ಯಾವನಲ್ಲಿ ಲಯವಾಗುವದೋ ಆ ಪರಮಾತ್ಮನಿಗಿಂತ ಬೇರೆಯಾಗಿ ಜಗತ್ತೆಂಬುವೇ ಇಲ್ಲ – ಎಂದು ಆತ್ಮೈಕತ್ವವನ್ನು ತಿಳಿಸುವದಕ್ಕೆ ಉಪಾಯವಾಗಿಯೇ ಉತ್ಪತ್ತಿಸ್ಥಿತಿಪ್ರಲಯಗಳನ್ನು ಶಾಸ್ತ್ರದಲ್ಲಿ ಬೋಧಿಸಿರುತ್ತದೆ.

೨೯. ಪರಮಾತ್ಮನೊಬ್ಬನೇ ಪರಮಾರ್ಥವು; ಸಂಸಾರಿಯಾದ ಜೀವನಾಗಲಿ, ಚೇತನವಾದ ಜಗತ್ತಾಗಲಿ ಅವನಿಗಿಂತ ಬೇರೆಯಾಗಿ ಇರುವವೇ ಇಲ್ಲ – ಎಂಬ ಈ ಪರಮಾರ್ಥವನ್ನು ಅನುಭವಕ್ಕೆ ತಂದುಕೊಳ್ಳಬೇಕೆಂದು ಇಚ್ಛಿಸುವ ಮುಮುಕ್ಷುಗಳು ಪುತ್ರವಿತ್ತಲೋಕೈಷಣೆಗಳನ್ನು ಬಿಟ್ಟು, ಸರ್ವಕರ್ಮಸಂನ್ಯಾಸವನ್ನು ಮಾಡಬೇಕು. ಏಕೆಂದರೆ ವರ್ಣಾಶ್ರಮಾದ್ಯಭಿಮಾನವು ಈ ಪರಮಾರ್ಥಜ್ಞಾನಕ್ಕೆ ವಿರುದ್ಧವಾಗಿರುತ್ತದೆ.

——×——

೨. ಕೂಟಸ್ಥಾದ್ವಯಾತ್ಮಬೋಧ

ಅವಿದ್ಯೆಯೇ ಸಂಸಾರಕ್ಕೆ ನಿಮಿತ್ತ

(ಮೂಲ)

ಸುಖಮಾಸೀನಂ ಬ್ರಾಹ್ಮಣಂ ಬ್ರಹ್ಮನಿಷ್ಠಂ ಕಶ್ಚಿತ್ ಬ್ರಹ್ಮಚಾರೀ ಜನ್ಮಮರಣಲಕ್ಷಣಾತ್ ಸಂಸಾರಾತ್ ನಿರ್ವಿಣ್ಣಃ ಮುಮುಕ್ಷುಃ, ವಿಧಿವತ್ ಉಪಸನ್ನಃ ಪಪ್ರಚ್ಛ— ಭಗವನ್, ಕಥಮಹಂ ಸಂಸಾರಾತ್ ಮೋಕ್ಷಿಷ್ಯೇ[1]? ಶರೀರೇಂದ್ರಿಯವಿಷಯವೇದನಾವಾನ್ ಜಾಗರಿತೇ ದುಃಖಮನು ಅನುಭವಾಮಿ, ತಥಾ ಸ್ವಪ್ನೇ ಅನುಭವಾಮಿ ನ ಪುನಃ ಪುನಃ ಸುಷುಪ್ತಿಪ್ರತಿಪತ್ತ್ಯಾ ವಿಶ್ರಮ್ಯ ವಿಶ್ರಮ್ಯ[2]। ಕಿಮ್ ಅಯಮನೋವ ಮಮ ಸ್ವಭಾವಃ? ಕಿಂ ವಾ ಅನ್ಯಸ್ವಭಾವಸ್ಯ ಸತೋ ನೈಮಿತ್ತಿಕಃ ಇತಿ? ಯದಿ ಸ್ವಭಾವಃ, ನ ಮೇ ಮೋಕ್ಷಾಶಾ। ಸ್ವಭಾವಸ್ಯ ಅವರ್ಜನೀಯತ್ವಾತ್। ಅಥ ನೈಮಿತ್ತಿಕಃ, ನಿಮಿತ್ತಪರಿಹಾರೇ ಸ್ಯಾತ್ ಮೋಕ್ಷೋಪಪತ್ತಿಃ ॥ ೩೦ ॥

(ಅರ್ಥ)

ಸುಖವಾಗಿ ಕುಳಿತಿದ್ದ ಬ್ರಹ್ಮನಿಷ್ಠನಾದ ಒಬ್ಬ ಬ್ರಾಹ್ಮಣನ ಬಳಿಗೆ ಒಬ್ಬಾನೊಬ್ಬ ಬ್ರಹ್ಮಚಾರಿಯು ಜನ್ಮಮರಣಲಕ್ಷಣವಾದ ಸಂಸಾರದಿಂದ ವಿರಕ್ತನಾಗಿ, (ಅದರಿಂದ) ಮುಕ್ತನಾಗಬೇಕೆಂಬ ಇಚ್ಛೆಯಿಂದ ವಿಧಿಯಂತೆ ಬಳಿಸಾರಿ[3] ಕೇಳಿದನೇನೆಂದರೆ:

"ಪೂಜ್ಯರೆ, ನಾನು ಸಂಸಾರದಿಂದ ಹೇಗೆ ಮುಕ್ತನಾದೇನು? ಶರೀರ, ಇಂದ್ರಿಯ, ವಿಷಯ – ಇವುಗಳಿಂದಾದ ಅನುಭವವುಳ್ಳವನಾಗಿ ಎಚ್ಚರದಲ್ಲಿ ದುಃಖವನ್ನು ಅನುಭವಿಸುತ್ತಿರುವೆನು; ಹೀಗೆಯೇ ಕನಸಿನಲ್ಲಿಯೂ ಅನುಭವಿಸು

1. 'ಮೋಕ್ಷ್ಯೇ' ಪಾ॥

2. "ಇದರ ಮುಂದೆ ಜಾಗ್ರತ್ಸ್ವಪ್ನಯೋರ್ದುಃಖಮನುಭವಾಮಿ" ಎಂದು ಹೆಚ್ಚಾಗಿ ಪಾ॥

3. ಸಾಧನಗಳಿಂದ ಸಾಧ್ಯವಾದ ಲೋಕಗಳನ್ನು ಪರೀಕ್ಷೆಮಾಡಿ ವಿರಕ್ತನಾದವನು ಮುಕ್ತಿಯ ವಿಷಯವನ್ನು ತಿಳಿಯುವದಕ್ಕಾಗಿ ವಿಧಿವತ್ತಾಗಿ ಸದ್ಗುರುವಿನ ಬಳಿಗೆ ಶಿಷ್ಯನಾಗಿ ಹೋಗಬೇಕು – ಎಂಬ ಮುಂಡಕ ೧-೨-೧೨ರ ಸೂಚನೆ.

ತ್ತಿರುವೆನು. ತನಿನಿದ್ರೆಯನ್ನು ಪಡೆದು (ಆಗಾಗ್ಗೆ ಸ್ವಲ್ಪ) ವಿಶ್ರಮಿಸಿಕೊಂಡು ವಿಶ್ರಮಿಸಿಕೊಂಡು ಮತ್ತೆಮತ್ತೆ (ಈ ದುಃಖವನ್ನು ಅನುಭವಿಸುತ್ತಿರುವೆನು). ಇದೇ ನನ್ನ ಸ್ವಭಾವವೊ, ಅಥವಾ ಬೇರೆಯ ಸ್ವಭಾವದವನಾಗಿರುವ ನನಗೆ (ಈ ಸ್ಥಿತಿಯು ಯಾವದಾದರೊಂದು) ನಿಮಿತ್ತದಿಂದ ಬಂದಿರುವದೊ ? ಸ್ವಭಾವವೇ ಆಗಿದ್ದರೆ, ನನಗೆ ಬಿಡುಗಡೆಯ ಆಶೆಯೇ ಇರುವದಿಲ್ಲ ; ಏಕೆಂದರೆ ಸ್ವಭಾವವನ್ನು ಬಿಡುವದಕ್ಕೆ ಆಗುವದಿಲ್ಲ.[1] ಹಾಗಿಲ್ಲದೆ (ಯಾವದಾದರೊಂದು) ನಿಮಿತ್ತದಿಂದ (ಆಗಿದ್ದರೆ,) ಆ ನಿಮಿತ್ತವನ್ನು–ಪರಿಹರಿಸಿಕೊಂಡರೆ ಬಿಡುಗಡೆಯಾದರೂ ಆದೀತು.”

(ಮೂಲ)

ತಂ ಗುರುರುವಾಚ– ಶೃಣು ವತ್ಸ ! ನ ತವಾಯಂ ಸ್ವಭಾವಃ ! ನೈಮಿತ್ತಿಕಃ ॥ ೩೧ ॥

(ಅರ್ಥ)

ಅವನಿಗೆ ಗುರು ಹೇಳಿದನೇನೆಂದರೆ ಮಗನೆ, ಕೇಳು. ಇದು ನಿನ್ನ ಸ್ವಭಾವವಲ್ಲ. ನಿಮಿತ್ತದಿಂದ ಆದದ್ದು.

(ಮೂಲ)

ಇತ್ಯುಕ್ತಃ ಶಿಷ್ಯ ಉವಾಚ—ಕಿಂ ನಿಮಿತ್ತಮ್ ? ಕಿಂ ವಾ ತಸ್ಯ ನಿವರ್ತಕಮ್ ? ಕೋ ವಾ ಮಮ ಸ್ವಭಾವಃ ? ಯಸ್ಮಿನ್ ನಿಮಿತ್ತೇ ನಿವರ್ತಿತೇ ನೈಮಿತ್ತಿಕಾಭಾವಃ, ರೋಗನಿಮಿತ್ತನಿವೃತ್ತಾವಿವ ರೋಗೀ ಸ್ವಭಾವಂ ಪ್ರಪದ್ಯೇಯ ಇತಿ ? ॥ ೩೨ ॥

(ಅರ್ಥ)

ಹೀಗೆನ್ನಲು ಶಿಷ್ಯನಿಂತೆಂದನು : (ಆ) ನಿಮಿತ್ತವು ಯಾವದು ? ಅದನ್ನು ಹೋಗಲಾಡಿಸುವ (ಉಪಾಯವು) ಯಾವದು ? ರೋಗದ ನಿಮಿತ್ತವು ಹೋದ ಮೇಲೆ ರೋಗಿಯು (ತನ್ನ ಆರೋಗ್ಯಸ್ವಭಾವವನ್ನು ಪಡೆಯುವ) ಹಾಗೆ ಆ ನಿಮಿತ್ತವು ತೊಲಗಿದ ಮೇಲೆ ನೈಮಿತ್ತಿಕವೂ ಇಲ್ಲವಾಗಿ (ನನ್ನ) ಸ್ವಭಾವವನ್ನು ಪಡೆಯಬೇಕಲ್ಲ, (ಆ) ನನ್ನ ಸ್ವಭಾವವಾದರೂ ಯಾವದು ?

(ಮೂಲ)

ಗುರುರುವಾಚ–ಅವಿದ್ಯಾ ನಿಮಿತ್ತಮ್ ! ವಿದ್ಯಾ ತಸ್ಯ ನಿವರ್ತಿಕಾ ! ಅವಿದ್ಯಾಯಾಂ ನಿವೃತ್ತಾಯಾಂ ತನ್ನಿಮಿತ್ತಾಭಾವಾತ್ ಮೋಕ್ಷ್ಯಸೇ

1. ಬಂಧವು ಪರಮಾರ್ಥವೆಂಬವರ ಪಕ್ಷದಲ್ಲಿ ಈ ದೋಷವು ಬರುವದು.

ಜನ್ಮಮರಣಲಕ್ಷಣಾತ್ ಸಂಸಾರಾತ್। ಸ್ವಪ್ನಜಾಗ್ರದ್ದುಃಖಂ ಚ ನಾನುಭವಿಷ್ಯಸಿ ಇತಿ ॥ ೫೫ ॥

(ಅರ್ಥ)

ಗುರುವಿಂತೆಂದನು: ಅವಿದ್ಯೆಯೇ ನಿಮಿತ್ತವು,[1] ವಿದ್ಯೆಯೇ ಇದನ್ನು ಹೋಗಲಾಡಿಸುವ (ಉಪಾಯವು). ಅವಿದ್ಯೆಯು ಹೋದರೆ ಅದರ ನಿಮಿತ್ತವು ಇಲ್ಲವಾಗುವದರಿಂದ ಜನ್ಮಮರಣಲಕ್ಷಣವಾದ ಸಂಸಾರದಿಂದ ಬಿಡುಗಡೆಯನ್ನು ಹೊಂದುವೆ! ಕನಸು, ಎಚ್ಚರ –ಎಂಬ ದುಃಖವನ್ನೂ ಅನುಭವಿಸದೆ ಇರುವೆ.

ಅವಿದ್ಯೆಗೆ ಆತ್ಮನೇ ವಿಷಯ

(ಮೂಲ)

ಶಿಷ್ಯ ಉವಾಚ—ಕಾ ಸಾ ಅವಿದ್ಯಾ? ಕಿಂವಿಷಯಾ ವಾ? ವಿದ್ಯಾ ಚ ಕಾ ಅವಿದ್ಯಾ ನಿವರ್ತಿಕಾ? ಯಯಾ ಸ್ವಭಾವಂ ಪ್ರತಿ ಪದ್ಯೇಯ ಇತಿ? ॥ ೫೪ ॥

(ಅರ್ಥ)

ಶಿಷ್ಯನಿಂತೆಂದನು: ಆ ಅವಿದ್ಯೆ ಯಾವದು? (ಅದು) ಯಾವ ವಿಷಯದಲ್ಲಿ (ಉಂಟಾಗಿದೆ)? ಮತ್ತು ಅವಿದ್ಯೆಯನ್ನು ತೊಲಗಿಸುವದಾಗಿ ನನ್ನ ಸ್ವಭಾವವನ್ನು ಪಡೆಯಿಸುವದಲ್ಲ, (ಆ) ವಿದ್ಯೆ ಯಾವದು?

(ಮೂಲ)

ಗುರುರುವಾಚ—ತ್ವಂ ಪರಮಾತ್ಮಾನಂ ಸನ್ತಮ್ ಅಸಂಸಾರಿಣಂ ಸಂಸಾರ್ಯಹಮಸ್ಮಿ ಇತಿ ವಿಪರೀತಂ ಪ್ರತಿಪದ್ಯಸೇ, ಅಕರ್ತಾರಂ ಸನ್ತಂ ಕರ್ತಾ ಇತಿ, ಅಭೋಕ್ತಾರಂ ಸನ್ತಂ ಭೋಕ್ತಾ ಇತಿ, ವಿದ್ಯಮಾನಂ ಚ ಅವಿದ್ಯಮಾನ ಇತಿ। ಇಯಮ್ ಅವಿದ್ಯಾ ॥ ೫೫ ॥

(ಅರ್ಥ)

ಗುರುವಿಂತೆಂದನು: ನೀನು ಅಸಂಸಾರಿಯಾದ ಪರಮಾತ್ಮನಾಗಿದ್ದುಕೊಂಡು 'ನಾನು ಸಂಸಾರಿಯಾಗಿರುವೆನು' ಎಂದೂ, ಕರ್ತೃವಲ್ಲದಿದ್ದುಕೊಂಡು 'ಕರ್ತೃ' ಎಂದೂ, ಭೋಕ್ತೃವಲ್ಲದಿದ್ದುಕೊಂಡು 'ಭೋಕ್ತೃ' ಎಂದೂ (ನಿಜ

1. ಅವಿದ್ಯೆಯು ಸಂಸಾರಕ್ಕೆ ನಿಮಿತ್ತವೆಂದು ಇಲ್ಲಿ ಹೇಳಿರುವದನ್ನು ಲಕ್ಷಿಸಬೇಕು. ಉಪಾದಾನವಾದ ಅವಿದ್ಯೆಯೊಂದಿದೆ ಎಂಬ ವಾದವು ಈ ಪ್ರಕರಣದಲ್ಲಾಗಲಿ, ಪ್ರಸ್ಥಾನತ್ರಯ ಭಾಷ್ಯದಲ್ಲಾಗಲಿ ಕಾಣಬರುವದಿಲ್ಲ.

ವಾಗಿ) ಇರುತ್ತಿದ್ದರೂ (ನಾನು) 'ಇಲ್ಲ'ವೆಂದೂ ತಪ್ಪಾಗಿ ತಿಳಿದುಕೊಂಡಿರುತ್ತೀಯೆ. ಇದೇ ಅವಿದ್ಯೆ.[1]

(ಮೂಲ)

ಶಿಷ್ಯ ಉವಾಚ—ಯದ್ಯಪಿ ಅಹಂ ವಿದ್ಯಮಾನಃ, ತಥಾಪಿ ನ ಪರಮಾತ್ಮಾ। ಕರ್ತೃತ್ವಭೋಕ್ತೃತ್ವಲಕ್ಷಣಃ ಸಂಸಾರೋ ಮಮ ಸ್ವಭಾವಃ। ಪ್ರತ್ಯಕ್ಷಾದಿಭಿಃ ಪ್ರಮಾಣೈಃ ಅನುಭೂಯಮಾನತ್ವಾತ್। ನ ಅವಿದ್ಯಾನಿಮಿತ್ತಃ। ಅವಿದ್ಯಾಯಾಃ ಸ್ವಾತ್ಮವಿಷಯತ್ವಾನುಪಪತ್ತೇಃ। ಅವಿದ್ಯಾ ನಾಮ ಅನ್ಯಸ್ಮಿನ್ ಅನ್ಯಧರ್ಮಾಧ್ಯಾರೋಪಣಾ। ಯಥಾ ಪ್ರಸಿದ್ಧಂ ರಜತಂ ಪ್ರಸಿದ್ಧಾಯಾಂ ಶುಕ್ತಿಕಾಯಾಮ್,[2] ಪ್ರಸಿದ್ಧಂ ಪುರುಷಂ ವಾ ಸ್ಥಾಣೌ ಅಧ್ಯಾರೋಪಯತಿ, ಪ್ರಸಿದ್ಧಂ ವಾ ಸ್ಥಾಣುಂ ಪುರುಷೇ। ನಾಪ್ರಸಿದ್ಧಂ ಪ್ರಸಿದ್ಧೇ, ಪ್ರಸಿದ್ಧಂ ವಾ ಅಪ್ರಸಿದ್ಧೇ। ನ ಚ ಆತ್ಮನಿ ಅನಾತ್ಮಾನಮ್ ಅಧ್ಯಾರೋಪಯತಿ। ಆತ್ಮನಃ ಅಪ್ರಸಿದ್ಧತ್ವಾತ್। ತಥಾ ಆತ್ಮಾನಮ್ ಅನಾತ್ಮನಿ। ಆತ್ಮನಃ ಅಪ್ರಸಿದ್ಧತ್ವಾದೇವ ॥ ೨೬ ॥

(ಅರ್ಥ)

ಶಿಷ್ಯನಿಂತೆಂದನು: "ನಾನು ಇದೇನೆಂಬುದು ಸರಿಯೇ; ಆದರೂ ನಾನು ಪರಮಾತ್ಮನಲ್ಲ, ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ನನ್ನ ಸ್ವಭಾವವು; ಏಕೆಂದರೆ (ಇದು) ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಅನುಭವ(ದಲ್ಲಿ ತೋರುತ್ತಿದೆ. ಇದು) ಅವಿದ್ಯೆಯ ನಿಮಿತ್ತ(ದಿಂದ ಆದದ್ದಲ್ಲ). ಏಕೆಂದರೆ ಅವಿದ್ಯೆಯು ನನ್ನ ಆತ್ಮನ ವಿಷಯದಲ್ಲಿ ಉಂಟಾಗಲಾರದು. ಅವಿದ್ಯೆ ಎಂದರೆ ಒಂದು (ವಸ್ತುವಿನಲ್ಲಿ) ಇನ್ನೊಂದರ ಧರ್ಮವನ್ನು ಹುಟ್ಟುಗಟ್ಟುವದು.[3] ಉದಾಹರಣೆಗೆ (ತಮಗೆ ಮೊದಲೇ) ಗೊತ್ತಾಗಿರುವ ಬೆಳ್ಳಿಯನ್ನು ಗೊತ್ತಾಗಿರುವ ಕಪ್ಪೆಯಚಿಪ್ಪಿನಲ್ಲಿ, ಗೊತ್ತಾಗಿರುವ ಮೋಟುಮರದಲ್ಲಿ ಮನುಷ್ಯನನ್ನು

---

1. ಪರಮಾತ್ಮಸ್ವರೂಪವನ್ನು ತಪ್ಪಾಗಿ ತಿಳಿದುಕೊಂಡಿರುವನೇ ಅವಿದ್ಯೆ –ಎಂದರ್ಥ.

2. ಈ ಸೂತ್ರಾಪಮೇಲೆ ಅಚ್ಚಿನ ಪುಸ್ತಕದಲ್ಲಿ ಮತ್ತೊಂದು 'ಯಥಾ' ಹೆಚ್ಚಾಗಿದೆ. ಈ ವಾಕ್ಯವು ಲೇಖಕರ ಕೈತಪ್ಪಿನಿಂದ ಹೆಚ್ಚುಕಡಿಮೆಯಾಗಿರುವಂತೆ ತೋರುತ್ತದೆ.

3. ಅಧ್ಯಾಸ, ಅಧ್ಯಾರೋಪ, ಭ್ರಾಂತಿ, ಮಿಥ್ಯಾಜ್ಞಾನ, ವಿಪರೀತಜ್ಞಾನ –ಇವೆಲ್ಲ ಸರ್ಯಾಯಗಳು. ಮಿಥ್ಯಾಜ್ಞಾನವು ಅವಿದ್ಯೆಯೆಂದು ಗುರು ಹೇಳಿರುತ್ತಾನೆಂದು ಶಿಷ್ಯನು ತಪ್ಪಾಗಿ ತಿಳಿದುಕೊಂಡಿರುತ್ತಾನೆಂದು ರಾ॥ ವ್ಯಾಖ್ಯಾನಲ್ಲಿದೆ. ಅವಕ್ಕೆ ಈ ಪ್ರಕರಣದಲ್ಲಿ ಆಧಾರವು ಕಂಡುಬರುವದಿಲ್ಲ.

ಆರೋಪಿಸುತ್ತಾರೆ, ಅಥವಾ ಗೊತ್ತಾಗಿರುವ ಮೋಟುಮರವನ್ನು ಮನುಷ್ಯನಲ್ಲಿ ಆರೋಪಿಸುತ್ತಾರೆ. (ಆದರೆ) ಅಪ್ರಸಿದ್ಧವಾದದ್ದನ್ನು ಪ್ರಸಿದ್ಧವಾದದ್ದರಲ್ಲಾಗಲೀ, ಪ್ರಸಿದ್ಧವಾದದ್ದನ್ನು ಅಪ್ರಸಿದ್ಧವಾದದ್ದರಲ್ಲಾಗಲಿ(ಆರೋಪಿಸುವದಿಲ್ಲ. ಆದ್ದರಿಂದ) ಆತ್ಮನಲ್ಲಿ ಅನಾತ್ಮನನ್ನು ಆರೋಪಿಸುವದಿಲ್ಲ; ಏಕೆಂದರೆ ಆತ್ಮನು ಅಪ್ರಸಿದ್ಧನು. ಇದರಂತೆ ಆತ್ಮನನ್ನು ಅನಾತ್ಮದಲ್ಲಿ (ಆರೋಪಿಸುವದೂ ಇಲ್ಲ); ಆತ್ಮನು ಅಪ್ರಸಿದ್ಧನಾಗಿರುವನೆಂಬುದೇ (ಇಲ್ಲಿಯೂ ಕಾರಣವಾಗಿರುತ್ತದೆ).

ಅಧ್ಯಾರೋಪಕ್ಕೆ ಪ್ರಸಿದ್ಧವಸ್ತುವೇ ಬೇಕೆಂಬುದಿಲ್ಲ

(ಮೂಲ)

ತಂ ಗುರುರುವಾಚ—ನ। ವ್ಯಭಿಚಾರಾತ್। ನ ಹಿ ವತ್ಸ, ಪ್ರಸಿದ್ಧಂ ಪ್ರಸಿದ್ಧೇ ಏವ ಅಧ್ಯಾರೋಪಯತೀತಿ ನಿಯನ್ತುಂ ಶಕ್ಯಮ್। ಆತ್ಮನಿ ಅಧ್ಯಾರೋಪಣದರ್ಶನಾತ್। 'ಗೌರೋಽಹಮ್', 'ಕೃಷ್ಣೋಽಹಮ್' ಇತಿ ದೇಹಧರ್ಮಸ್ಯ ಅಹಂಪ್ರತ್ಯಯವಿಷಯೇ ಆತ್ಮನಿ ಅಹಂಪ್ರತ್ಯಯವಿಷಯಸ್ಯ ಚ ಆತ್ಮನಃ ದೇಹೇ 'ಅಯಮಸ್ಮಿ' ಇತಿ ॥ ೩೭ ॥

(ಅರ್ಥ)

ಅವನಿಗೆ ಗುರು (ಹೀಗೆಂದು) ಹೇಳಿದನು: "ಹಾಗಲ್ಲ. ಏಕೆಂದರೆ (ಈ ನಿಯಮವು) ಬೇರ್ಪಡುತ್ತದೆ. ಅಯ್ಯ, ಮಗು, ಪ್ರಸಿದ್ಧವಾದದ್ದನ್ನು ಪ್ರಸಿದ್ಧವಾದದ್ದರಲ್ಲಿಯೇ ಅಧ್ಯಾರೋಪಮಾಡುತ್ತಾರೆಂದು ನಿಯಮವನ್ನು (ಕಲ್ಪಿಸು)ವದಕ್ಕೆ ಆಗಲಾರದು. ಏಕೆಂದರೆ ಆತ್ಮನಲ್ಲಿ(ಯೂ) ಅಧ್ಯಾರೋಪವನ್ನು (ಮಾಡುವದು) ಕಂಡುಬರುತ್ತದೆ. 'ನಾನು ಬೆಳ್ಳಗಿರುವೆನು', 'ನಾನು ಕಪ್ಪಗಿರುವೆನು' ಎಂದು ದೇಹಧರ್ಮವನ್ನು **ಅಹಂಪ್ರತ್ಯಯವಿಷಯನಾದ ಆತ್ಮನಲ್ಲಿ**(ಯೂ)[1] ಅಹಂಪ್ರತ್ಯಯವಿಷಯನಾದ ಆತ್ಮನನ್ನು 'ನಾನು ಇಂಥವನಾಗಿರುವೆನು' ಎಂದು ದೇಹದಲ್ಲಿಯೂ (ಅಧ್ಯಾರೋಪಮಾಡುವದು ಕಂಡುಬರುತ್ತದೆ).

1. ಪರಮಾತ್ಮನು ನಮ್ಮ ಆತ್ಮನೆಂಬ ಸಿದ್ಧಾಂತದಲ್ಲಿ ಅಪ್ರಸಿದ್ಧನಾದ ಆತ್ಮನಲ್ಲಿ ಅಧ್ಯಾರೋಪವೆಂದಂತಾಗುತ್ತದೆ-ಎಂಬ ಅನಿಷ್ಟವನ್ನು ಶಿಷ್ಯನು ಆಪಾದಿಸಿದ್ದನು. ನಾನೆಂಬ ಅರಿವಿಗೆ ಗೋಚರನಾಗಿರುವ ಜೀವಾತ್ಮನಲ್ಲಿ ದೇಹಧರ್ಮವನ್ನು ಅಧ್ಯಾರೋಪಮಾಡುತ್ತಾರೆಂದು ವೈದಿಕರೆಲ್ಲರೂ ಒಪ್ಪಿರುವದರಿಂದ ಈ ನಿಯಮವು ಸರಿಯಲ್ಲವೆಂದು ಗುರು ಆಕ್ಷೇಪಕ್ಕೆ ಪರಿಹಾರವನ್ನು ಹೇಳಿರುತ್ತಾನೆ.

ಅಹಂಪ್ರತ್ಯಯವಿಷಯನು ಅಪ್ರಸಿದ್ಧನೆಂಬುದು ಹೇಗೆ ?

(ಮೂಲ)

ಶಿಷ್ಯ ಆಹ— "ಪ್ರಸಿದ್ಧ ಏವ ತರ್ಹಿ ಆತ್ಮಾ ಅಹಂಪ್ರತ್ಯಯ ವಿಷಯತಯಾ, ದೇಹಶ್ಚ 'ಅಯಮ್' ಇತಿ । ತತ್ರ ಏವಂ ಸತಿ ಪ್ರಸಿದ್ಧಯೋರೇವ ದೇಹಾತ್ಮನೋಃ ಇತರೇತರಾಧ್ಯಾರೋಪಣಾ[1] ಸ್ಥಾಣುಪುರುಷಯೋಃ ಶುಕ್ತಿಕಾರಜತಯೋರಿವ । ತತ್ರ ಕಂ ವಿಶೇಷ ಮಾಶ್ರಿತ್ಯ ಭಗವತಾ ಉಕ್ತಮ್ 'ಪ್ರಸಿದ್ಧಯೋರಿತರೇತರಾಧ್ಯಾರೋ ಪಣಾ ಇತಿ ನಿಯಮ್ತುಂ ನ ಶಕ್ಯತೇ' ಇತಿ ? ॥ ೩೮ ॥

(ಆರ್ಥ)

ಶಿಷ್ಯನು ಹೇಳುತ್ತಾನೆ: "ಹಾಗಾದರೆ ಆತ್ಮನು ಅಹಂಪ್ರತ್ಯಯವಿಷಯ ನೆಂದು ಪ್ರಸಿದ್ಧನೇ, ದೇಹವೂ 'ಇದು' ಎಂದು (ಪ್ರಸಿದ್ಧವೇ ಎಂದಾಯಿತು). ಇದು ಹೀಗಿರುವಲ್ಲಿ ಮೋಟುಮರ, ಮನುಷ್ಯ– (ಇವ)ರಂತೆಯೂ ಕಪ್ಪೆಯ ಚಿಪ್ಪು, ಬೆಳ್ಳಿ– (ಇವು)ಗಳಂತೆಯೂ ಪ್ರಸಿದ್ಧವೇ ಆಗಿರುವ ದೇಹಾತ್ಮರುಗಳಿಗೆ ಒಂದರಲ್ಲೊಂದರ ಅಧ್ಯಾರೋಪಣೆ(ಯಾಗಿದೆ ಎಂದಾಗುವದು). ಇಲ್ಲಿ ಯಾವ ವಿಶೇಷವನ್ನು ಇಟ್ಟುಕೊಂಡು 'ಪ್ರಸಿದ್ಧವಾದ (ವಸ್ತು)ಗಳಿಗೇ ಒಂದರಲ್ಲೊಂ ದರ ಅಧ್ಯಾರೋಪಣೆಯಾಗುವದೆಂದು) ನಿಯಮಿಸುವದಕ್ಕೆ ಆಗಲಾರದು' ಎಂದು ಪೂಜ್ಯರಾದ (ತಾವು) ಹೇಳೋಣವಾಯಿತು ?

(ಮೂಲ)

ಗುರುರಾಹ—ಶೃಣು, ಸತ್ಯಂ ಪ್ರಸಿದ್ಧೌ ದೇಹಾತ್ಮಾನೌ । ನ ತು ಸ್ಥಾಣುಪುರುಷಾವಿವ ವಿವಿಕ್ತಪ್ರತ್ಯಯವಿಷಯತಯಾ । ನ ಹಿ 'ಅಯಂ ದೇಹಃ', 'ಅಯಮ್ ಆತ್ಮಾ' ಇತಿ ವಿವಿಕ್ತಾಭ್ಯಾಂ ಪ್ರತ್ಯಯಾಭ್ಯಾಂ ದೇಹಾತ್ಮಾನೌ ಗೃಹ್ಣಾತಿ ಯಃ[2] ಕಶ್ಚಿತ್ । ಅತ ಏವ ಹಿ ಮೋಮುಹ್ಯತೇ ಲೋಕಃ ಆತ್ಮಾನಾತ್ಮವಿಷಯೇ 'ಏವಮಾತ್ಮಾ', 'ನೈವಮಾತ್ಮಾ' ಇತಿ ।

---

1. 'ಇತರೇತರೇತರಾಧ್ಯಾರೋಪಣಾತ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿ ಕೊಂಡಿದೆ. ಆ ಪಾಠದಲ್ಲಿ ಮುಂದಿನ 'ತತ್ರ' ಅನವಶ್ಯವಾಗುತ್ತದೆ. ವಾ॥ ಪಾಠದಲ್ಲಿ ಹೀಗೆ ತಿದ್ದಿಕೊಂಡಿದೆ.

2. 'ಯತಃ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ವಾ॥ ಪಾಠದಲ್ಲಿ ಹೀಗೆ ತಿದ್ದಿಕೊಂಡಿದೆ.

ಇಮಂ ವಿಶೇಷಮ್ ಆಶ್ರಿತ್ಯ ಅವೋಚಮ್ 'ನೈವಂ ನಿಯನ್ತುಂ ಶಕ್ಯಮ್' ಇತಿ ॥ ೫೯ ॥

(ಅರ್ಥ)

ಗುರು ಹೇಳುತ್ತಾನೆ: "(ಅದನ್ನು) ಕೇಳು. ದೇಹಾತ್ಮರು ಪ್ರಸಿದ್ಧರಾಗಿ ದಾರೆಂಬುದು ನಿಜವೇ. ಆದರೆ ಮೋಟುಮರ, ಮನುಷ್ಯ– ಇವರ ಹಾಗೆ (ಬೇರೆಬೇರೆ) ವಿಂಗಡವಾದ ಪ್ರತ್ಯಯಗಳಿಗೆ ವಿಷಯವಾಗಿ ಎಲ್ಲಾ ಜನರಿಗೂ ಪ್ರಸಿದ್ಧರಾಗಿರುವವಿಲ್ಲ; ಮತ್ತೇನೆಂದರೆ, (ಯಾವಾಗಲೂ) ಎಡೆಬಿಡದೆ (ಒಂದರಿಂದೊಂದು) ವಿಂಗಡವಾದ ಪ್ರತ್ಯಯಗಳಿಗೆ ವಿಷಯವಾಗಿ (ಪ್ರಸಿದ್ಧರಾಗಿರುತ್ತಾರೆ). 'ಇದು ದೇಹ', 'ಇವನು ಪರಮಾತ್ಮನು'– ಎಂದು ವಿಂಗಡವಾಗಿರುವ ಪ್ರತ್ಯಯಗಳಿಂದ ಯಾವನೂ ದೇಹಾತ್ಮರುಗಳನ್ನು ಗ್ರಹಿಸುವದಿಲ್ಲವಷ್ಟೆ, ಆದ್ದರಿಂದಲೇ ಅಲ್ಲವೆ, 'ಆತ್ಮನು ಹೀಗಿರುವನು', 'ಆತ್ಮನು ಹೀಗಿರುವದಿಲ್ಲ' ಎಂದು ಆತ್ಮಾನಾತ್ಮಗಳ ವಿಷಯದಲ್ಲಿ[1] ಜನರು ಭ್ರಾಂತಿಪಡುತ್ತಿರುವರು? ಈ ವಿಶೇಷವನ್ನು ಇಟ್ಟುಕೊಂಡು (ನೀನು ಹೇಳಿದ)ಹಾಗೆ ನಿಯಮವನ್ನು ಏರ್ಪಡಿಸುವದಕ್ಕಾಗುವದಿಲ್ಲ' ಎಂದು ಹೇಳಿದೆನು.

ಅನ್ಯೋನ್ಯಾಧ್ಯಾಸದಲ್ಲಿ ಅಸದ್ವಾದಪ್ರಸಂಗವಿಲ್ಲ

(ಮೂಲ)

ನನು ಅವಿದ್ಯಾಧ್ಯಾರೋಪಿತಂ ಯತ್ರ ಯತ್ ತತ್ ಅಸತ್ ತತ್ರ ದೃಷ್ಟಮ್ । ಯಥಾ ರಜತಂ ಶುಕ್ತಿಕಾಯಾಂ, ಸ್ಥಾಣೌ ಪುರುಷಃ ರಜ್ಜ್ವಾಂ ಸರ್ಪಃ, ಆಕಾಶೇ ತಲಮಲಿನತ್ವಮ್ ಇತ್ಯಾದಿ । ತಥಾ ದೇಹಾತ್ಮನೋರಪಿ ಯದಿ ನಿತ್ಯಮೇವ ನಿರನ್ತರಾವಿವಿಕ್ತಪ್ರತ್ಯಯೇನ ಇತರೇತರಾಧ್ಯಾರೋಪಃ ಕೃತಾ ಸ್ಯಾತ್, ತತ್ ಇತರೇತರಯೋಃ ನಿತ್ಯಮೇವ ಅಸತ್ತ್ವಂ[2] ಸ್ಯಾತ್ । ಯಥಾ ಶುಕ್ತಿಕಾದಿಷು ಅವಿದ್ಯಾಧ್ಯಾರೋಪಿತಾನಾಂ ರಜತಾದೀನಾಂ ನಿತ್ಯಮೇವ ಅತ್ಯನ್ತಾಸತ್ತ್ವಮ್ ತದ್ವಿಪರೀತಾನಾಂ ಚ ವಿಪರೀತೇಷು, ತದ್ವತ್ ದೇಹಾತ್ಮನೋಃ

---

1. 'ಆತ್ಮನು ಹೀಗಿರುವನು' ಎಂಬಲ್ಲಿ ಅನಾತ್ಮವನ್ನು ಅಧ್ಯಾಸಮಾಡಿಕೊಂಡೇ ಇರುತ್ತಾದ್ದರಿಂದ ಆತ್ಮಾನಾತ್ಮಗಳ ವಿಷಯದಲ್ಲಿ ಭ್ರಾಂತಿಪಡುವರು ಎಂದು ಅನ್ಯೋನ್ಯಾಧ್ಯಾಸವನ್ನು ಸೂಚಿಸಿರುತ್ತದೆ.

2. 'ಅಸತ್ತ್ವಂ' ಎಂದು ಖ॥

ಅವಿದ್ಯಯೈವ ಇತರೇತರಾಧ್ಯಾರೋಪಣಾ ಕೃತಾ ಸ್ಯಾತ್। ತತ್ರ ಏವಂ ಸತಿ ದೇಹಾತ್ಮನೋಃ ಅಸತ್ತ್ವಂ ಪ್ರಸಜ್ಯೇತ। ತಚ್ಚ ಅನಿಷ್ಟವಮ್। ವೈನಾಶಿಕಪಕ್ಷತ್ವಾತ್ । ಅಥ ತದ್ವಿಪರ್ಯಯೇಣ ದೇಹಃ ಆತ್ಮನಿ ಅವಿದ್ಯಯಾ ಅಧ್ಯಾರೋಪಿತಃ, ದೇಹಸ್ಯ ಆತ್ಮನಿ ಸತಿ ಅಸತ್ತ್ವಂ ಪ್ರಸಜ್ಯೇತ। ತಚ್ಚ ಅನಿಷ್ಟವಮ್। ಪ್ರತ್ಯಕ್ಷಾದಿವಿರೋಧಾತ್। ತಸ್ಮಾತ್ ದೇಹಾತ್ಮಾನೌ ನ ಅವಿದ್ಯಯಾ ಇತರೇತರಸ್ಮಿನ್ ಅಧ್ಯಾರೋಪಿತೌ। ಕಥಂ ತರ್ಹಿ, ವಂಶಸ್ತಮ್ಬವತ್ ನಿತ್ಯಸಂಯುಕ್ತೌ ॥ ೪೦ ॥

(ಅರ್ಥ)

(ಶಿಷ್ಯ):– ಯಾವದರಲ್ಲಿ ಯಾವದನ್ನು ಅವಿದ್ಯೆಯಿಂದ ಅಧ್ಯಾರೋಪ ಮಾಡುತ್ತಾರೋ ಅದು ಅಲ್ಲಿ (ನಿಜವಾಗಿ) ಇರುವದಿಲ್ಲವೆಂದು ಕಂಡಿರುತ್ತದೆ. ಉದಾಹರಣೆಗೆ ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿ, ಮೋಟುಮರದಲ್ಲಿ ಮನುಷ್ಯನು, ಹಗ್ಗದಲ್ಲಿ ಹಾವು, ಆಕಾಶದಲ್ಲಿ ತಳವು ಮಲಿನವಾಗಿರುವದು –ಇವೇ ಮುಂತಾದ (ಆರೋಪಿತವಸ್ತುಗಳು ಆಯಾ ಆಸ್ಪದದಲ್ಲಿ ನಿಜವಾಗಿ ಇರುವದಿಲ್ಲ). ಇದರಂತೆ ದೇಹಾತ್ಮರುಗಳಿಗೂ, ಯಾವಾಗಲೂ ಎಡೆಬಿಡದೆ (ಒಂದರಿಂದೊಂದು) ವಿಂಗಡವಾಗದ ಪ್ರತ್ಯಯಗಳಿಂದ ಒಂದರಲ್ಲೊಂದರ ಅಧ್ಯಾರೋಪಣೆಯಾಗಿದೆ ಎಂದರೆ, ಆಗ ಒಂದರಲ್ಲಿ ಇನ್ನೊಂದು ಯಾವಾಗಲೂ (ನಿಜವಾಗಿ) ಇಲ್ಲವೆಂದೇ ಆಗುವದು. ಹೇಗೆ ಕಪ್ಪೆಯಚಿಪ್ಪು ಮುಂತಾದವುಗಳಲ್ಲಿ ಅವಿದ್ಯೆಯಿಂದ ಅಧ್ಯಾರೋಪಿತವಾದ ಬೆಳ್ಳಿ ಮುಂತಾದವುಗಳು ಹೇಗೆ ಎಂದಿಗೂ ಸ್ವಲ್ಪವೂ ಇರುವದಿಲ್ಲವೋ,[1] ಮತ್ತು (ಅವುಗಳಿಗೆ) ವಿಪರೀತವಾದ (ಕಪ್ಪೆಯಚಿಪ್ಪು ಮುಂತಾದವುಗಳು) ವಿಪರೀತವಾದ (ಬೆಳ್ಳಿ ಮುಂತಾದವುಗಳಲ್ಲಿಯೂ ಎಂದಿಗೂ ಸ್ವಲ್ಪವೂ ಇರುವದಿಲ್ಲವೋ), ಅದರಂತೆ ದೇಹಾತ್ಮರುಗಳಿಗೆ ಅವಿದ್ಯೆಯಿಂದಲೇ ಇತರೇತರಾಧ್ಯಾರೋಪವನ್ನು ಮಾಡಿರಬೇಕು; ಹಾಗಾದಲ್ಲಿ ದೇಹಾತ್ಮರುಗಳು (ನಿಜವಾಗಿ) ಇಲ್ಲವೆಂದೇ ಆಗುವದು. ಅದು ಅನಿಷ್ಟವು; ಏಕೆಂದರೆ (ಇದು) ವೈನಾಶಿಕಪಕ್ಷವಾಗಿರುತ್ತದೆ.[2] ಹೀಗಲ್ಲದೆ, ಇದಕ್ಕೆ ವಿಪರೀತವಾಗಿ ದೇಹ(ವೊಂದೇ) ಆತ್ಮನಲ್ಲಿ ಅವಿದ್ಯೆಯಿಂದ ಆರೋಪಿತವಾಗಿದೆ ಎಂದರೆ, ಸದ್ಭಾವನಾದ ಆತ್ಮನಲ್ಲಿ ದೇಹವು ಇಲ್ಲವೆಂದಾಗುವದು. ಅದೂ ಅನಿಷ್ಟವೇ; ಏಕೆಂದರೆ (ಇದು) ಪ್ರತ್ಯಕ್ಷಾದಿಗಳಿಗೆ ವಿರುದ್ಧವಾಗುವದು.

---

1. ಇಲ್ಲಿಂದ ಮುಂದಕ್ಕೆ ಸ್ವಲ್ಪ ಪುನರುಕ್ತಿಯಿರುವಂತೆ ತೋರುತ್ತದೆ.

2. ಆತ್ಮನೂ ಆರೋಪಿತನಾದ್ದರಿಂದ ಅಸತ್ತಾಗಿರುತ್ತಾನೆ. ಅನಾತ್ಮವೂ ಅಸತ್ತಾಗಿರುತ್ತದೆ–ಎಂಬುದು ವೈನಾಶಿಕರಾದ ಶೂನ್ಯವಾದಿಗಳ ಪಕ್ಷವು; ಆತ್ಮವಾದಿಗಳಾದ ವೇದಾಂತಿಗಳಿಗೆ ಇದು ಅನಿಷ್ಟವು –ಎಂದು ಆಕ್ಷೇಪ.

ಆದಕಾರಣ ದೇಹಾತ್ಮರುಗಳನ್ನು ಅವಿದ್ಯೆಯಿಂದ ಒಂದನ್ನೊಂದರಲ್ಲಿ, ಆರೋಪಣೆಮಾಡಿದಾರೆಂಬುದು (ಸರಿ)ಯಲ್ಲ; ಬಿದಿರು(ಗಳು)ಗಳೂ ಕಂಬಗಳೂ (ಒಂದಕ್ಕೊಂದು ಕೂಡಿರುವಂತೆ ಅವು) ನಿತ್ಯವಾಗಿ ಕೂಡಿಕೊಂಡಿರುವನೆಂದು (ಹೇಳುವದು ಯುಕ್ತವಾಗಿದೆ).

(ಮೂಲ)

ನ। ಅನಿತ್ಯತ್ವಪರಾರ್ಥತ್ವಪ್ರಸಙ್ಗಾತ್। ಸಂಹತತ್ವಾತ್ ಪರಾರ್ಥತ್ವಮ್ ಅನಿತ್ಯತ್ವಂ ಚ ವಂಶಸ್ತಮ್ಭಾದಿವದೇವ। ಕಿಂ ಚ ಯಸ್ತು ಪರೈರ್ದೇಹೇನ ಸಂಹತಃ ಕಲ್ಪಿತ ಆತ್ಮಾ, ಸ ಸಂಹತತ್ವಾತ್ ಪರಾರ್ಥಃ। ತೇನ ಅಸಂಹತಃ ಪರೋಽನ್ಯಃ ನಿತ್ಯಃ ಸಿದ್ಧಸ್ತಾವತ್। ತಸ್ಯ ಅಸಂಹತಸ್ಯ ದೇಪೇ ದೇಹಮಾತ್ರತಯಾ ಅಧ್ಯಾರೋಪಿತತ್ವೇನ ಅನಾತ್ಮನಿತ್ಯತ್ವಾದಿದೋಷಪ್ರಸಙ್ಗೋ ಭವತಿ। ತತ್ರ ನಿರಾತ್ಮಕೋ ದೇಹಃ ಇತಿ ವೈನಾಶಿಕಪಕ್ಷಪ್ರಾಪ್ತಿದೋಷಃ ಸ್ಯಾತ್। ನ। ಸ್ವತ ಏವ ಆತ್ಮನಃ ಆಕಾಶಸ್ಯೇವ ಅಸಂಹತತ್ವಾಭ್ಯುಪಗಮಾತ್। ಸರ್ವೈಣ ಅಸಂಹತಿಃ ಸ ಚ ಆತ್ಮಾ ಇತಿ ನ ನಿರಾತ್ಮಕೋ ದೇಹಾದಿಃ ಸರ್ವಃ ಸ್ಯಾತ್। ಯಥಾ ಚ ಆಕಾಶಂ ಸರ್ವೈಣ ಅಸಂಹತಮ್ ಇತಿ ಸರ್ವಂ ನ ನಿರಾಕಾಶಂ ಭವತಿ, ಏವಮ್। ತಸ್ಮಾತ್ ನ ವೈನಾಶಿಕಪಕ್ಷ ಪ್ರಾಪ್ತಿದೋಷಃ ಸ್ಯಾತ್ ॥ ೪೧ ॥

(ಅರ್ಥ)

(ಗುರು):– ಅಲ್ಲ. ಏಕೆಂದರೆ (ಆ ಪಕ್ಷದಲ್ಲಿ ಅವೆರಡೂ ಅನಿತ್ಯನೆಂದೂ ಪರಾರ್ಥವೆಂದೂ ಆದೀತು. (ಗಳುಗಳು, ಕಂಬಗಳು –ಮುಂತಾದವುಗಳಂತೆ) ಒಂದಕ್ಕೊಂದು ಸೇರಿಕೊಂಡಿದ್ದರೆ ಗಳುಗಳು ಕಂಬಗಳು ಇವುಗಳಂತೆಯೇ– (ಅವೆರಡೂ) ಪರಾರ್ಥವೂ[1] ಅನಿತ್ಯವೂ (ಆಗುವವು). ಇದಲ್ಲದೆ ದೇಹದೊಡನೆ ಸೇರಿಕೊಂಡಿರುವನೆಂದು ಪರ(ವಾದಿಗಳು) ಕಲ್ಪಿಸಿರುವ ಆತ್ಮನಿರುವನಲ್ಲ, ಅವನು

---

1. ಗಳುಗಳೂ ಕಂಬಗಳೂ ಒಂದಕ್ಕೊಂದು ಸೇರಿಕೊಂಡು ಅನಿತ್ಯವಾಗಿರುತ್ತವೆ; ಮತ್ತೊಬ್ಬನಾದ ಮನೆಯ ಯಜಮಾನನಿಗಾಗಿ ಇರುತ್ತವೆ. ಹಾಗೆಯೇ ದೇಹಾತ್ಮರೂ ಇರಬೇಕಾಗುವದು ಎಂದರ್ಥ.

ಸಂಹತನಾಗಿರುವದರಿಂದ ಪರಾರ್ಥನು.[1] ಅವನೊಡನೆ ಸೇರಿಕೊಳ್ಳದೆ ಇರುವ ನಿತ್ಯನಾದ ಮತ್ತೊಬ್ಬನಾದ ಬೇರೆಯ ಆತ್ಮನು ಮೊದಲು ಸಿದ್ಧನಾಗುವನು.[2]

(ಶಿಷ್ಯ):– ಆ ಅಸಂಹತನಾದ (ಆತ್ಮನು) ದೇಹದಲ್ಲಿ ಆರೋಪಿತನಾಗಿರುವದರಿಂದ ಬರಿಯ ದೇಹವೇ ಆಗಿರುವದರಿಂದ,[3] (ಅವನು) ನಿಜವಾಗಿಲ್ಲವೆಂಬುದು, ಅನಿತ್ಯನಾಗುವದು– (ಇವೇ) ಮುಂತಾದ ದೋಷಗಳು ಉಂಟಾಗುವವು. ಆಗ ದೇಹವು ನಿರಾತ್ಮಕನಾದದ್ದು[4] ಎಂಬ ವೈನಾಶಿಕರ ಪಕ್ಷವೇ ಬಂದೊದಗುವದೆಂಬ ದೋಷವಾಗಬಹುದಲ್ಲವೆ?

(ಗುರು):– ಆಗುವದಿಲ್ಲ. ಏಕೆಂದರೆ ಆತ್ಮನು (ತನ್ನ) ಸ್ವರೂಪದಿಂದಲೇ ಆಕಾಶದಂತೆ ಅಸಂಹತನಾಗಿರುವನೆಂದು ಒಪ್ಪಿರುತ್ತೇವೆ. ಯಾವದರೊಡನೆಯೂ ಸಂಹತನಾಗದವನು, ಅವನೇ ಆತ್ಮನು;[5] ಆದ್ದರಿಂದ ದೇಹವೇ ಮುಂತಾದ ವೆಲ್ಲವೂ ನಿರಾತ್ಮಕವಾಗಲಾರದು.[6] ಆಕಾಶವು ಯಾವದರೊಡನೆಯೂ ಸಂಹತವಾಗಿರುವದಿಲ್ಲವಾದ್ದರಿಂದ, ಎಲ್ಲವೂ ನಿರಾಕಾಶವೆಂಬುದು ಹೇಗೆ ಆಗುವದಿಲ್ಲ

---

1. ಒಂದಕ್ಕೊಂದು ಹೊಂದಿಕೊಂಡು ಕೆಲಸಮಾಡುವ ವಸ್ತುಗಳು ಅವುಗಳೊಡನೆ ಹೊಂದಿಕೊಳ್ಳದೆ ಬೇರೆಯಾಗಿದ್ದುಕೊಂಡಿರುವ ಮತ್ತೊಂದರ ಪ್ರಯೋಜನಕ್ಕಾಗಿ ಕೆಲಸಮಾಡುತ್ತಿರುವವು– ಎಂಬ ಸಾಂಖ್ಯರ ನ್ಯಾಯವನ್ನು ವೇದಾಂತಿಗಳೂ ಒಪ್ಪಿರುತ್ತಾರೆ.

2. ಆತ್ಮನು ದೇಹದೊಡನೆ ಕೂಡಿಕೊಂಡಿರುತ್ತಾನೆಂದು ಒಪ್ಪಿದರೆ ದೇಹ, ಆತ್ಮ– ಇವೆರಡಕ್ಕಿಂತ ಬೇರೊಬ್ಬನು ಇರಬೇಕೆಂದು ಸಿದ್ಧವಾಗುವದು. ಕರ್ತೃಭೋಕ್ತೃವೆಂದು ಕಲ್ಪಿಸಿರುವ ಆತ್ಮನಿಗಿಂತ ಬೇರೆಯಾಗಿರುವ ಈ ಆತ್ಮನೇ ವೇದಾಂತಿಗಳು ಹೇಳುವ ಸಾಕ್ಷಿಯು.

3. ಆತ್ಮನು ದೇಹದಲ್ಲಿ ಆರೋಪಿತನಾಗಿರುವದರಿಂದ, ಹಗ್ಗದಲ್ಲಿ ಆರೋಪಿತವಾವ ಹಾವು ಹಗ್ಗವೇ ಆಗಿರುವಂತೆ, ಬರಿಯ ದೇಹವೇ ಆಗುವನು ಎಂದರ್ಥ.

4. ದೇಹಕ್ಕಿಂತ ಬೇರೆಯಾಗಿರುವ ಆತ್ಮನಲ್ಲ ಎಂದು ಚಾರ್ವಾಕರೂ ಒಪ್ಪಿರುತ್ತಾರಾದರೂ ದೇಹವೂ ಆತ್ಮನಲ್ಲಿ ಆರೋಪಿತನಾಗಿರುವದರಿಂದ ಅದೂ ಅಸತ್ತೇ, ಆತ್ಮನು ದೇಹದಲ್ಲಿ ಆರೋಪಿತನಾಗಿರುವದರಿಂದ ಅವನೂ ಅಸತ್ತೇ; ಆದ್ದರಿಂದ ಇದು ಶೂನ್ಯವಾದಿಗಳ ಪಕ್ಷವೇ ಎಂದು ಶಿಷ್ಯನ ಭಾವ.

5. ದೇಹದಲ್ಲಿ ಆರೋಪಿತವಾಗಿರುವವನು ಕಲ್ಪಿತಾತ್ಮನು; ಅಕಲ್ಪಿತಾತ್ಮನು ಯಾವದರಲ್ಲಿಯೂ ಬೆರೆತುಕೊಂಡೇ ಇಲ್ಲ– ಎಂದರ್ಥ. ದೇಹಾತ್ಮರ ಅಧ್ಯಾರೋಪದ ಸ್ಥಿತಿಯಲ್ಲಿಯೂ ಆತ್ಮನು ತಾನು ಇದ್ದಂತೆಯೇ ಇರುವನೆಂಬುವೇ ಸಿದ್ಧಾಂತ. ಇದಕ್ಕಾಗಿಯೇ ಆಕಾಶ ದೃಷ್ಟಾಂತವನ್ನು ಕೊಟ್ಟಿರುವದು.

6. ಶೂನ್ಯವಲ್ಲ; ಆತ್ಮನಲ್ಲಿಯೇ ಆರೋಪಿತವಾಗಿರುವದರಿಂದ ಆತ್ಮನೇ.

ವೋ ಹಾಗೆಯೇ (ಇಲ್ಲಿಯೂ ತಿಳಿಯಬೇಕು).[1] ಆದ್ದರಿಂದ ವೈನಾಶಿಕಪಕ್ಷದ ಪ್ರಾಪ್ತಿಯಾಗುವದೆಂಬ ದೋಷವು (ಸಿದ್ಧಾಂತದಲ್ಲಿ) ಆಗಲಾರದು.

(ಮೂಲ)

ಯತ್ಪುನರುಕ್ತಮ್, ದೇಹಸ್ಯ ಆತ್ಮನಿ ಅಸತ್ತ್ವೇ[2] ಪ್ರತ್ಯಕ್ಷಾದಿ ವಿರೋಧಃ ಸ್ಯಾತ್ ಇತಿ । ತನ್ನ । ಪ್ರತ್ಯಕ್ಷಾದಿಭಿಃ ಆತ್ಮನಿ ದೇಹಸ್ಯ ಸತ್ತ್ವಾನುಪಲಬ್ಧೇಃ । ನ ಹಿ ಆತ್ಮನಿ ಕುಣ್ಡೇ ಬದರಮ್, ಕ್ಷೀರೇ ಸರ್ಪಿಃ, ತಿಲೇ ತೈಲಮ್, ಭಿತ್ತೌ ಚಿತ್ರಮಿವ ಚ ಪ್ರತ್ಯಕ್ಷಾದಿಭಿಃ ದೇಹ ಉಪಲಭ್ಯತೇ । ತಸ್ಮಾತ್ ನ ಪ್ರತ್ಯಕ್ಷಾದಿವಿರೋಧಃ ॥ ೪೨ ॥

(ಅರ್ಥ)

ಇನ್ನು ಆತ್ಮನಲ್ಲಿ ದೇಹವು ಇಲ್ಲವೆಂದರೆ ಪ್ರತ್ಯಕ್ಷವೇ ಮುಂತಾದ (ಪ್ರಮಾಣಗಳಿಗೆ) ವಿರೋಧವಾದೀತು ಎಂದು ಹೇಳಿದೆಯಷ್ಟೆ, ಅದು ಸರಿಯಲ್ಲ. ಏಕೆಂದರೆ ಆತ್ಮನಲ್ಲಿ ದೇಹವಿರುವದು ಪ್ರತ್ಯಕ್ಷಾದಿಗಳಿಂದ ಕಂಡುಬಂದಿಲ್ಲ. ಕುಂಡದಲ್ಲಿ ಬೋರೆಹಣ್ಣಿನಂತೆಯೂ, ಹಾಲಿನಲ್ಲಿ ಬೆಣ್ಣೆಯಂತೆಯೂ, ಎಳ್ಳಿನಲ್ಲಿ ಎಣ್ಣೆಯಂತೆಯೂ, ಗೋಡೆಯಲ್ಲಿ ಚಿತ್ರದಂತೆಯೂ[3] ಪ್ರತ್ಯಕ್ಷಾದಿ(ಪ್ರಮಾಣ)ಗಳಿಂದ ಆತ್ಮನಲ್ಲಿ ದೇಹವು ಕಂಡುಬರುವದೇ ಇಲ್ಲ.[4] ಆದ್ದರಿಂದ ಪ್ರತ್ಯಕ್ಷಾದಿ ವಿರೋಧವಿಲ್ಲ.

ಆತ್ಮನು ಸ್ವತಃಸಿದ್ಧನಾಗಿರುವದರಿಂದ ಆರೋಪಣೆಯಾಗಬಹುದು

(ಮೂಲ)

ಕಥಂ ತರ್ಹಿ ಪ್ರತ್ಯಕ್ಷಾದ್ಯಪ್ರಸಿದ್ಧಾತ್ಮನಿ ದೇಹಾಧ್ಯಾರೋಪಣಾ । ದೇಹೇ ಚ ಆತ್ಮಾರೋಪಣಾ ? ನಾಯಂ ದೋಷಃ ।

---

1. ಘಟ, ಪಟ- ಮುಂತಾದವುಗಳಿಲ್ಲವೂ ಆಕಾಶವಲ್ಲಿರುತ್ತವೆಯಾದರೂ ಆಕಾಶವು ಅವುಗಳೊಡನೆ ಸೇರಿಕೊಂಡಿಲ್ಲ; ಅವು ಇರುವಾಗಲೂ ಇಲ್ಲದಾಗಲೂ ತಾನೇ ಇದ್ದುಕೊಂಡಿದೆ. ಆದ್ದರಿಂದ ಯಾವದಕ್ಕೂ ಆಕಾಶವಿಲ್ಲವಾದೀತು ಎಂದು ಆಪಾದನೆಮಾಡುವದಕ್ಕೆ ಬರುವದಿಲ್ಲ.

2. 'ಆತ್ಮನ್ಯಾಸತ್ತ್ವೇ' ಎಂಬ ನಿ॥ ಪಾಠವು ಬೇಕಿಲ್ಲ.

3. ಈ ಉದಾಹರಣೆಗಳಲ್ಲಿ ಅಧಿಕರಣಕ್ಕೂ ಅದರಲ್ಲಿರುವ ವಸ್ತುವಿಗೂ ಬೇರೆಬೇರೆಯೆ ಸಂಬಂಧಗಳಿರುವದು ಪ್ರತ್ಯಕ್ಷದಿಂದ ಅಥವಾ ಅನುಮಾನದಿಂದ ತಿಳಿದುಬರುತ್ತಿದೆ.

4. ಏಕೆಂದರೆ ಆತ್ಮನು ಪ್ರತ್ಯಕ್ಷಕ್ಕಾಗಲಿ ಅನುಮಾನಕ್ಕಾಗಲಿ ಗೋಚರನಲ್ಲ.

ಸ್ವಭಾವಪ್ರಸಿದ್ಧತ್ವಾತ್ ಆತ್ಮನಃ। ನ ಹಿ ಕಾದಾಚಿತ್ಕಸಿದ್ಧಾವೇವ ಅಧ್ಯಾರೋಪಣಾ ನ ನಿತ್ಯಸಿದ್ಧೌ ಇತಿ ನಿಯಸ್ತುಂ ಶಕ್ಯಮ್। ಆಕಾಶೇ ತಲಮಲಾದ್ಯಧ್ಯಾರೋಪಣದರ್ಶನಾತ್ ॥ ೪೩ ॥

(ಅರ್ಥ)

(ಶಿಷ್ಯ):- ಹಾಗಾದರೆ ಪ್ರತ್ಯಕ್ಷವೇ ಮುಂತಾದ (ಪ್ರಮಾಣಗಳಿಂದ) ಪ್ರಸಿದ್ಧನಲ್ಲದ ಆತ್ಮನಲ್ಲಿ ದೇಹವನ್ನು ಅಧ್ಯಾರೋಪಣೆ(ಮಾಡಿರುವದೂ) ದೇಹದಲ್ಲಿ ಆತ್ಮನನ್ನು ಆರೋಪಣೆ(ಮಾಡಿರುವದೂ) ಹೇಗೆ ?[1]

(ಗುರು):- ಇದು ದೋಷವಲ್ಲ. ಏಕೆಂದರೆ ಆತ್ಮನು ಸ್ವಭಾವಪ್ರಸಿದ್ಧನಾಗಿರುತ್ತಾನೆ.[2] ಯಾವಾಗಲೋ (ಒಂದು ಪ್ರಮಾಣದಿಂದ) ಸಿದ್ಧಿಯಾದರೇ ಅಧ್ಯಾರೋಪಣೆ/ಯಾಗುವದೇ ಹೊರತು), ನಿತ್ಯಸಿದ್ಧಿಯಾದರೆ (ಆಗುವ)ದಿಲ್ಲ. ಎಂದು ನಿಯಮಿಸುವದಕ್ಕೆ ಆಗುವದೇ ಇಲ್ಲ. ಏಕೆಂದರೆ ಆಕಾಶದಲ್ಲಿ ತಲದ ಕಪ್ಪು ಮುಂತಾದದ್ದನ್ನು ಅಧ್ಯಾರೋಪಿಸಿರುವದು ಕಂಡುಬರುತ್ತದೆ.[3]

ಅವಿದ್ಯೆಗೆ ಆತ್ಮನೇ ಆಶ್ರಯ

(ಮೂಲ)

ಕಿಂ ಭಗವನ್, ದೇಹಾತ್ಮನೋಃ ಇತರೇತರಾಧ್ಯಾರೋಪಣಾ ದೇಹಾದಿಸಙ್ಘಾತಕೃತಾ ಅಥವಾ ಆತ್ಮಕೃತಾ ಇತಿ ? ಗುರುರುವಾಚ —ಯದಿ ದೇಹಾದಿಸಙ್ಘಾತಕೃತಾ, ಯದಿ ವಾ ಆತ್ಮಕೃತಾ, ಕಿಂ ತತ್ರ ಸ್ಯಾತ್? ಇತ್ಯುಕ್ತಃ ಶಿಷ್ಯ ಆಹ—ಯದ್ಯಹಂ ದೇಹಾದಿಸಙ್ಘಾತ

---

1. ಪ್ರಮಾಣದಿಂದ ಸಿದ್ಧನಾದದ್ದನ್ನು ಪ್ರಮಾಣಸಿದ್ಧವಾದವ್ವರಲ್ಲಿಯೇ ಆರೋಪಣೆ ಮಾಡಬೇಕಲ್ಲವೆ ? -ಎಂದು ಶಂಕೆ. ಪ್ರಸಿದ್ಧವಾಗವೆ ಇವ್ವದನ್ನೂ ಪ್ರಸಿದ್ಧವಾದವ್ವರಲ್ಲಿ ಆರೋಪಿಸಬಹುದು, ಪ್ರಸಿದ್ಧವಾಗದೆ ಇರುವವರಲ್ಲಿಯೂ ಆರೋಪಿಸಬಹುದು -ಎಂದು ಅಹಂ ಪ್ರತ್ಯಯನಿಷಯನಾದ ಆತ್ಮನ ವೃಷ್ಟಾಂತದಿಂದ ಹಿಂದೆ ಲ,ಂನೆಯೆ ಬಂಡವಲ್ಲಿ ತೋರಿಸಿಕೊಟ್ಟೇ ಇದೆ. ಈ ಪ್ರಸಿದ್ಧವಾಗಿರಬೇಕೆಂಬ ನಿಯಮವನ್ನು ಒಪ್ಪಿ ಸಮಾಧಾನವನ್ನು ಹೇಳುವದಕ್ಕಾಗಿ ಈ ಶಂಕೆಯನ್ನು ಮತ್ತೆ ಇಲ್ಲಿ ಎಬ್ಬಿಸಿದೆ.

2. ಪ್ರಮಾಣಗಳು ಆತ್ಮಪ್ರಸಿದ್ಧಿಯಿಂದಲೇ ಪ್ರಸಿದ್ಧವಾಗುತ್ತವೆ ; ಆತ್ಮನು ಪ್ರಮಾಣಗಳನ್ನು ಬಯಸಿ ಸಿದ್ಧನಾಗುವವನಲ್ಲ, ಸ್ವತಃಸಿದ್ಧನು.

3. ಪ್ರತ್ಯಕ್ಷಗೋಚರವಲ್ಲದ ಆಕಾಶದಲ್ಲಿ ಪ್ರತ್ಯಕ್ಷಗೋಚರವಾದ ಧರ್ಮವನ್ನು ಆರೋಪಿಸುವಂತೆ ಪ್ರಮಾಣಸಿದ್ಧನಲ್ಲದ ಆತ್ಮನಲ್ಲಿ ಪ್ರಮಾಣಸಿದ್ಧವಾದ ದೇಹಾದಿಗಳನ್ನು ಆರೋಪಿಸಬಹುದು. ಇದರಂತೆ ಇದಕ್ಕೆ ವಿಪರೀತವಾಗಿಯೂ ಆರೋಪಿಸಬಹುದು ಎಂದು ಸಮಾಧಾನ.

ಮಾತ್ರಃ ತತೋ ಮನು ಅಚೇತನತ್ವಾತ್ ಪರಾರ್ಥತ್ವಮ್ ಇತಿ ನ ಮತ್ಕೃತಾ ದೇಹಾತ್ಮನೋಃ ಇತರೇತರಾಧ್ಯಾರೋಪಣಾ। ಅಥ ಅಹಮಾತ್ಮಾ ಪರೋಽನ್ಯಃ ಸಙ್ಘಾತಾತ್ ಚಿತಿಮತ್ತ್ವಾತ್ ಸ್ವಾರ್ಥಃ ಇತಿ ಮಯೈವ ಚಿತಿಮತಾ ಆತ್ಮನಿ ಅಧ್ಯಾರೋಪಣಾ ಕ್ರಿಯತೇ ಸರ್ವಾನರ್ಥಬೀಜಭೂತಾ ॥ ೪೪ ॥

(ಅರ್ಥ)

(ಶಿಷ್ಯ):– ಪೂಜ್ಯರೆ, ದೇಹಾತ್ಮರುಗಳನ್ನು ಒಂದರಲ್ಲೊಂದನ್ನು ಅಧ್ಯಾರೋಪಣೆ ಮಾಡಿರುವದು ದೇಹಾದಿಸಂಘಾತದಿಂದ ಆದದ್ದೊ, ಅಥವಾ ಆತ್ಮನಿಂದ ಆದದ್ದೊ ?

ಗುರುವಿಂತೆಂದನು: ದೇಹವೇ ಮುಂತಾದವುಗಳ ಸಂಘಾತದಿಂದ ಆದ ದ್ದಾಗಲಿ, ಅಥವಾ ಆತ್ಮನಿಂದಲೇ ಆಗಿರಲಿ, ಆದರ (ವಿಚಾರದಿಂದ) ಇಲ್ಲಿ ಏನು (ಪ್ರಯೋಜನ) ?

ಹೀಗೆನ್ನಲು ಶಿಷ್ಯನಿಂತೆಂದನು: ನಾನು ಬರಿಯ ದೇಹಾದಿಸಂಘಾತವೇ ಆಗಿದ್ದರೆ, ಆಗ ನಾನು ಅಚೇತನನಾದ್ದರಿಂದ ಮತ್ತೊಬ್ಬರಿಗಾಗಿರುವವನೆಂದಾಗಿ ದೇಹಾತ್ಮರುಗಳ ಅನ್ಯೋನ್ಯಾಧ್ಯಾರೋಪವು ನನ್ನಿಂದಾದದ್ದಲ್ಲ (ವೆಂದಾಗುವದು)· ಹಾಗಿಲ್ಲದೆ ನಾನು (ಈ) ಸಂಘಾತಕ್ಕಿಂತ ಬೇರೆಯಾದ ಹೆಚ್ಚಿನ ಆತ್ಮನಾದರೆ, (ಆಗ) ಚೈತನ್ಯವುಳ್ಳವನಾದ್ದರಿಂದ ನಾನು ನನಗಾಗಿರತಕ್ಕವನು[1] ಎಂದಾಗಿ ಚೈತನ್ಯವುಳ್ಳ ನನ್ನಿಂದಲೇ ಸರ್ವಾನರ್ಥಗಳಿಗೂ ಬೀಜವಾಗಿರುವ[2] ಅಧ್ಯಾರೋಪಣೆಯು ಆಗುತ್ತಿದೆ (ಎಂದಾಗುವದು).

ಆತ್ಮನು ಚೈತನ್ಯರೂಪನಾದ್ದರಿಂದ ಪರಾರ್ಥನಲ್ಲ

(ಮೂಲ)

ಇತ್ಯುಕ್ತೋ ಗುರುರುವಾಚ– ಅನರ್ಥಬೀಜಭೂತಾಂ ಚೇತ್ ಮಿಥ್ಯಾಧ್ಯಾರೋಪಣಾಂ ಜಾನೀಷೇ, ಮಾಕಾರ್ಷೀಸ್ತರ್ಹಿ।

1. ಯಾವದು ಮತ್ತೊಂದಕ್ಕಾಗಿರುವದೋ ಅದು **ಪರಾರ್ಥವು,** ಸ್ವತಂತ್ರವಲ್ಲ; ಯಾವದು ತನಗಾಗಿ ತಾನು ಮತ್ತೊಂದರ ಹಂಗಿಲ್ಲದೆ ಇರುವದೋ ಅದು **ಸ್ವಾರ್ಥವು** ಸ್ವತಂತ್ರವು.

2. ನಿಮಿತ್ತವಾಗಿರುವ ಎಂದರ್ಥ. ೪೩ನೆಯ ಖಂಡದ ಅನುವಾದವನ್ನೂ ಟಿಪ್ಪಣಿಯನ್ನೂ ನೋಡಿರಿ.

ನೈವ ಭಗವನ್, ಶಕ್ನೋಮಿ ನ ಕರ್ತುಮ್ । ಅನ್ಯೇನ ಕೇನಚಿತ್ ಪ್ರಯುಕ್ತೋಽಹಂ ನ ಸ್ವತನ್ತ್ರ ಇತಿ । ನ ತರ್ಹಿ ಅಚಿತಿಮತ್ತ್ವಾತ್ ಸ್ವಾರ್ಥಸ್ತ್ವಮ್ । ಯೇನ ಪ್ರಯುಕ್ತಃ ಅಸ್ವತನ್ತ್ರಃ ಪ್ರವರ್ತಸೇ, ಸ ಚಿತಿಮಾನ್ ಸ್ವಾರ್ಥಃ । ಸಜ್ಞಾತ ಏವ ತ್ವಮ್ ॥ ೪೫ ॥

(ಅರ್ಥ)

ಹೀಗೆನ್ನಲು ಗುರುವಿನಂತೆಂದನು: ಸುಳ್ಳುಸುಳ್ಳಾಗಿ ಅಧ್ಯಾರೋಪಿಸಿಕೊಳ್ಳುವದು ಅನರ್ಥಕ್ಕೆ ಬೀಜವಾಗಿರುವದೆಂದು ನಿನಗೆ ತಿಳಿದಿದ್ದರೆ, ಆಗ (ಅದನ್ನು) ಮಾಡದಿರು.

(ಶಿಷ್ಯ):– ಪೂಜ್ಯರೆ, ಹಾಗೆ (ಅಧ್ಯಾರೋಪವನ್ನು) ಮಾಡದೆ ಇರಲು ನನ್ನಿಂದ ಆಗುವಂತೆಯೇ ಇಲ್ಲ. ನಾನು ಯಾರೋ ಮತ್ತೊಬ್ಬನಿಂದ ಪ್ರೇರಿತನಾಗಿರುತ್ತೇನೆ, ಸ್ವತಂತ್ರನಲ್ಲ.[1]

(ಗುರು):– ಹಾಗಾದರೆ ಚೈತನ್ಯವಿಲ್ಲದವನಾದ್ದರಿಂದ ನೀನು ಸ್ವಾರ್ಥನಲ್ಲ ಯಾವನಿಂದ ಪ್ರೇರಿತನಾಗಿ ಸ್ವಾತಂತ್ರ್ಯವಿಲ್ಲದೆ ಪ್ರವರ್ತಿಸುತ್ತಿರುವೆಯೋ ಅವನೇ ಚೈತನ್ಯವುಳ್ಳವನು, ಸ್ವಾರ್ಥನು, ನೀನು (ದೇಹಾದಿಗಳ) ಸಂಘಾತವೇ.[2]

(ಮೂಲ)

ಯದಿ ಅಜೇತನೋಽಹಮ್, ಕಥಂ ಸುಖದುಃಖವೇದನಾಂ ಭವದುಕ್ತಂ ಚ ಜಾನಾಮಿ? ಗುರುರುವಾಚ — ಕಿಂ ಸುಖದುಃಖವೇದನಾಯಾ ಮದುಕ್ತಾಚ್ಚ ಅನ್ಯಸ್ತ್ವಮ್, ಕಿಂ ವಾ ಅನನ್ಯ ಏವ ಇತಿ? ಶಿಷ್ಯ ಉ ವಾ ಚ — ನಾಹಂ ತಾವತ್ ಅನನ್ಯಃ । ಕಸ್ಮಾತ್? ಯಸ್ಮಾತ್ ತದುಭಯಂ ಕರ್ಮಭೂತಂ ಘಟಾದಿಕಮಿವ ಜಾನಾಮಿ । ಯದಿ ಅನನ್ಯೋಽಹಮ್, ತೇನ ತದುಭಯಂ ನ ಜಾನೀಯಾಮ್ । ಕಿಂ ತು ಜಾನಾಮಿ । ತಸ್ಮಾತ್ ಅನ್ಯಃ । ಸುಖ

---

1. ಜೀವನು ಪರತಂತ್ರನು, ಸ್ವತಂತ್ರನಾದ ಈಶ್ವರನಿಂದ ಪ್ರೇರಿತನಾಗಿ ಕೆಲಸದಲ್ಲಿ ಪ್ರವರ್ತಿಸುತ್ತಾನೆ ಎಂಬ ಅಭಿಪ್ರಾಯವು ಈ ಶಂಕೆಯಲ್ಲಿ ಅಡಗಿದೆ.

2. ಚೈತನ್ಯವು ಪರಪ್ರೇರಿತವಾಗಿ ಕೆಲಸಮಾಡುವದಿಲ್ಲವಾದ್ದರಿಂದ ಮತ್ತೊಬ್ಬರಿಂದ ಪ್ರೇರಿತವಾದದ್ದು ಅಚೇತನವೇ ಎಂದಭಿಪ್ರಾಯ. ಆತ್ಮಚೈತನ್ಯವು ಕೂಟಸ್ಥವು, ಸಂಘಾತವು ಅಚೇತನವು; ಆದ್ದರಿಂದ ಪರಮಾರ್ಥದೃಷ್ಟಿಯಿಂದ ಯಾರೂ ಅಧ್ಯಾಸಕರ್ತೃವಲ್ಲನೆಂಬುದೇ ನಿಜ. ಆದರೂ ವ್ಯವಹಾರದೃಷ್ಟಿಯಿಂದ ದೇಹಾದಿಗಳು ಅಚೇತನವಾಗಿರುವದರಿಂದ ಅವುಗಳಿಗೆ ಸ್ವತಂತ್ರವೃತ್ತಿಯಿಲ್ಲ ಎಂಬ ಯುಕ್ತಿಯಿಂದ ಆತ್ಮನೇ ಅಧ್ಯಾಸಕರ್ತನೆಂದು ಇಟ್ಟುಕೊಂಡಿದೆ

ದುಃಖವೇದನಾವಿಕ್ರಿಯಾ ಚ ಸ್ವಾರ್ಥೈವ ಪ್ರಾಪ್ನೋತಿ, ತ್ವದುಕ್ತಂ ಚ ಸ್ಯಾತ್ ಅನನ್ಯತ್ರೈ। ನ ಚ ತಯೋಃ ಸ್ವಾರ್ಥತಾ ಯುಕ್ತಾ। ನ ಹಿ ಚನ್ದನಕಣ್ಟಕಕೃತೇ ಸುಖದುಃಖೇ ಚನ್ದನಕಣ್ಟಕಾರ್ಥೇ ಘಟೋಪಯೋಗೋ ವಾ ಘಟಾರ್ಥಃ। ತಸ್ಮಾತ್ ತದ್ವಿಜ್ಞಾತುರ್ಮಮ ಚನ್ದನಾದಿಕೃತಃ ಅರ್ಥಃ। ಅಹಂ ಹಿ ತತೋಽನ್ಯಃ ಸಮಸ್ತಮರ್ಥಂ ಜಾನಾಮಿ ಬುದ್ಧ್ಯಾರೂಢಮ್। ತಂ ಗುರುರುವಾಚ — ಏವಂ ತರ್ಹಿ ಸ್ವಾರ್ಥಸ್ತ್ವಮ್, ಚಿತಿಮತ್ತ್ವಾತ್ ನ ಪರೇಣ ಪ್ರಯುಜ್ಯಸೇ। ನ ಹಿ ಚಿತಿಮಾನ್ ಪರತನ್ತ್ರಃ ಪರೇಣ ಪ್ರಯುಜ್ಯತೇ। ಚಿತಿಮತಃ ಚಿತಿಮದರ್ಥತ್ವಾನುಪಪತ್ತೇಃ। ಸಮತ್ವಾತ್ ಪ್ರದೀಪಪ್ರಕಾಶಯೋರಿವ। ನಾಪಿ ಅಚಿತಿಮದರ್ಥತ್ವಂ ಚಿತಿಮತೋ ಭವತಿ। ಅಚಿತಿಮತಃ ಅಚಿತಿಮತ್ತ್ವಾದೇವ ಸ್ವಾರ್ಥಸಂಬನ್ಧಾನುಪಪತ್ತೇಃ। ನಾಪಿ ಅಚಿತಿಮತೋಃ ಅನ್ಯೋನ್ಯಾರ್ಥತ್ವಂ ದೃಷ್ಟಮ್। ನ ಹಿ ಕಾಷ್ಠಕುಡ್ಯೇ ಅನ್ಯೋನ್ಯಾರ್ಥಂ ಕುರ್ವಾತೇ ॥೪೬॥

(ಅರ್ಥ)

(ಶಿಷ್ಯ):– ನಾನು ಅಚೇತನನಾದರೆ ಸುಖದುಃಖಗಳ ಅನುಭವವನ್ನೂ ತಾವು ಹೇಳಿದ್ದನ್ನೂ ಅರಿಯುತ್ತಿರುವೆನಲ್ಲ, (ಇದು) ಹೇಗೆ ?

ಗುರುವಿಂತೆಂದನು: ಸುಖದುಃಖಗಳ ಅನುಭವ, ನಾನು ಹೇಳಿದ (ಮಾತು)– ಇವುಗಳಿಗಿಂತ ನೀನು ಬೇರೆಯೊ, ಅಥವಾ ಅವೇ ನೀನೊ ?

ಶಿಷ್ಯ ನಿಂತೆಂದನು: ನಾನು ಅವೇ ಅಂತೂ ಅಲ್ಲ. ಏಕೆ? ಎಂದರೆ ವಿಷಯವಾಗಿರುವ ಅವೆರಡನ್ನೂ ಗಡಿಗೆ ಮುಂತಾದದ್ದನ್ನು (ಅರಿಯುವ)ಹಾಗೆ ಅರಿಯುತ್ತಿರುವೆನು. ನಾನು ಅವೇ ಆಗಿದ್ದರೆ, ಆಗ ಅವೆರಡನ್ನೂ ಅರಿಯುವದಾಗುತ್ತಿರಲಿಲ್ಲ. ಆದರೆ ಅರಿಯುತ್ತಿದೇನೆ. ಆದ್ದರಿಂದ (ನಾನು ಅವುಗಳಿಗಿಂತ) ಬೇರೆ. ಅವೇ (ನಾನಾ)ಗಿದ್ದರೆ ಸುಖದುಃಖಗಳನ್ನು ಅನುಭವಿಸುವದೆಂಬ ಕ್ರಿಯೆಯೂ ತಾವು ಹೇಳಿದ ಮಾತೂ ತನಗೋಸ್ಕರವೇ (ಎಂದು) ಆಗುವದು. ಆದರೆ ಅವೆರಡೂ ತಮಗೋಸ್ಕರವೇ ಎಂಬುದು ಸರಿಯಲ್ಲ. ಏಕೆಂದರೆ ಗಂಧದಿಂದಲೂ ಮುಳ್ಳಿನಿಂದಲೂ ಆಗುವ ಸುಖದುಃಖಗಳು ಗಂಧಕ್ಕೋಸ್ಕರನಲ್ಲ; ಮುಳ್ಳಿಗೋಸ್ಕರವಲ್ಲ; ಗಡಿಗೆಯ ಉಪಯೋಗವು ಗಡಿಗೆಗೋಸ್ಕರವೂ ಅಲ್ಲ. ಆದ್ದರಿಂದ ಅವನ್ನು ಅರಿಯುವ ನನಗೇ ಗಂಧವೇ ಮುಂತಾದವುಗಳಿಂದಾದ ಪ್ರಯೋಜನವು (ಎನ

ಬೇಕು). ಏಕೆಂದರೆ ನಾನೇ ಅದಕ್ಕಿಂತ ಬೇರೆಯಾಗಿದ್ದು (ನನ್ನ) ಬುದ್ಧಿಗೆ ಹತ್ತುವ ಎಲ್ಲಾ ಅರ್ಥವನ್ನೂ[1] ಅರಿಯುತ್ತಿರುವೆನು.

ಅವನಿಗೆ ಗುರುವಿಂತೆಂದನು: ಹಾಗಾದರೆ ನೀನು ನಿನಗಾಗಿಯೇ (ಇರುವವನು), ಚೈತನ್ಯವುಳ್ಳವನಾದ್ದರಿಂದ ಮತ್ತೊಬ್ಬನಿಂದ ಪ್ರೇರಿತನಾಗುತ್ತಿಲ್ಲ. ಚೈತನ್ಯವುಳ್ಳವನು ಪರತಂತ್ರನಾಗಿ ಮತ್ತೊಬ್ಬನಿಂದ ಪ್ರೇರಿಸಲ್ಪಡಲೇ ಆರನು. ಏಕೆಂದರೆ ಎರಡು ದೊಡ್ಡ ಬೆಳಕುಗಳಿಗೆ (ಬೆಳಕಾಗಿರುವದೆಂಬುದು ಸಮವಾಗಿರುವಂತೆ (ಚೈತನ್ಯವುಳ್ಳದ್ದಾಗಿರುವದೆಂಬುದು ಎರಡಕ್ಕೂ) ಸಮವಾಗಿರುವದರಿಂದ (ಒಂದು) ಚೈತನ್ಯವುಳ್ಳ (ವಸ್ತು) ಮತ್ತೊಂದು ಚೈತನ್ಯವುಳ್ಳ (ವಸ್ತು)ವಿಗಾಗಿ ಇರುವದೆಂಬುದು ಹೊಂದುವದಿಲ್ಲ[2] ಚೈತನ್ಯವುಳ್ಳದ್ದು ಅಚೇತನ(ವಸ್ತು) ವಿಗಾಗಿ (ಇರುವ)ದೆಂಬುದೂ ಆಗುವದಿಲ್ಲ; ಏಕೆಂದರೆ ಅಚೇತನವು ಅಚೇತನವಾಗಿರುವದರಿಂದಲೇ (ಅದಕ್ಕೆ) ಸ್ವಾರ್ಥಸಂಬಂಧವು ಹೊಂದುವದಿಲ್ಲ.[3] ಆ ಚೇತನವಾದ (ಎರಡು ವಸ್ತುಗಳು) ಒಂದಕ್ಕೊಸ್ಕರ ಮತ್ತೊಂದಿರುವದೂ ಕಂಡಿರುವದಿಲ್ಲ; ಕಟ್ಟಿಗೆಯೂ ಗೋಡೆಯೂ ಒಂದಕ್ಕೊಂದು ಪ್ರಯೋಜನವನ್ನು (ಮಾಡಿಕೊಡು)ತ್ತವೆ ಎಂಬುದಿಲ್ಲವಷ್ಟೆ.

ಆತ್ಮನು ಚೈತನ್ಯಸ್ವರೂಪನು, ಚೈತನ್ಯಗುಣವುಳ್ಳವನಲ್ಲ

(ಮೂಲ)

ನನು ಚಿತಿಮತ್ತ್ವೇ ಸಮೇಽಪಿ ಭೃತ್ಯಸ್ವಾಮಿನೋಃ ಅನ್ಯೋ ನ್ಯಾರ್ಥತ್ವಂ ದೃಷ್ಟಮ್। ನೈವಮ್। ಅಗ್ನೇಃ ಉಷ್ಣಪ್ರಕಾಶವತ್

---

1. ವಿಷಯವನ್ನು ಅಥವಾ ಸುಖದುಃಖರೂಪವಾದ ಪ್ರಯೋಜನವನ್ನು ಎಂದರ್ಥ. ಬುದ್ಧಿಗೆ ಹತ್ತಿದ್ದನ್ನೇ, ಎಂದರೆ ಅಂತಃಕರಣಕ್ಕೆ ಸಂಬಂಧಪಟ್ಟದ್ದನ್ನೇ ಆತ್ಮನು ಅರಿಯುತ್ತಾನೆ– ಎಂಬುದರ ನಿಜವಾದ ಅರ್ಥವೇನೆಂದರೆ ಅಂತಃಕರಣವನ್ನೂ ಅಂತಃಕರಣವೃತ್ತಿಗಳನ್ನೂ ತನ್ನ ಚೈತನ್ಯಪ್ರಕಾಶದಿಂದ ಬೆಳಗುತ್ತಾನೆ ಎಂದರ್ಥ. ಇದು ಮುಂದೆ ಸ್ಪಷ್ಟವಾಗುವದು. ಉಪ. ಪದ್ಯ ೭–೧೦ನ್ನು ನೋಡಿ.

2. ಚೇತನವಾದ ಮನುಷ್ಯನು ಅಚೇತನವಾದ ಕಟ್ಟಿಗೆಯನ್ನು ತನ್ನ ಪ್ರಯೋಜನಕ್ಕಾಗಿ ಉಪಯೋಗಿಸುವದು ಕಂಡಿದೆ. ಚೇತನವಾದವನು ಮತ್ತೊಂದು ಚೇತನವನ್ನು ಉಪಯೋಗಿಸಿದ್ದು ಕಂಡೂ ಇಲ್ಲ, ಹಾಗೆ ಉಪಯೋಗಿಸಿಕೊಳ್ಳುವದರಿಂದ ಆಗಬೇಕಾದ ಪ್ರಯೋಜನವೂ ಇಲ್ಲ ಎಂದು ಅರ್ಥ.

3. ಅದು ತನ್ನ ಪ್ರಯೋಜನಕ್ಕಾಗಿ ಚೇತನವನ್ನು ಉಪಯೋಗಿಸಿಕೊಳ್ಳುತ್ತದೆ ಎಂದು ಹೇಳುವದಕ್ಕೆ ಬರುವದಿಲ್ಲ.

ತವ ಚಿತಿಮಾತ್ರಸ್ಯ ವಿವಕ್ಷಿತತ್ವಾತ್। ಪ್ರದರ್ಶಿತಶ್ಚ ದೃಷ್ಟಾನ್ತಃ ಪ್ರದೀಪಪ್ರಕಾಶಯೋರಿತಿ। ತತ್ರೈವಂ ಸತಿ ಸ್ವಬುದ್ಧ್ಯಾರೂಢಮೇವ ಸರ್ವಮ್ ಉಪಲಭಸೇ ಅಗ್ನ್ಯುಷ್ಣಪ್ರಕಾಶತುಲ್ಯೇನ ಕೂಟಸ್ಥನಿತ್ಯ ಚೈತನ್ಯಸ್ವರೂಪೇಣ। ಯದಿ ಚೈವಮಾತ್ಮನಃ ಸರ್ವದಾ ನಿರ್ವಿಶೇಷ ತ್ವಮ್ ಉಪಗಚ್ಛಸಿ ಕಿಮಿತಿ ಊಚಿವಾನ್ "ಸುಷುಪ್ತೇ ವಿಶ್ರಮ್ಯ ವಿಶ್ರಮ್ಯ ಜಾಗ್ರತ್ಸ್ವಪ್ನಯೋಃ ದುಃಖಮ್ ಅನುಭವಾಮಿ। ಕಿಮ್ ಅಯಮೇವ ಮಮ ಸ್ವಭಾವಃ ಕಿಂ ವಾ ನೈಮಿತ್ತಿಕಮ್ ಇತಿ[1]? ಕಿಮ್ ಅಸೌ ವ್ಯಾಮೋಹೋಽಪಗತಃ, ಕಿಂ ವಾ ನ ಇತಿ? ॥೪೭॥

(ಅರ್ಥ)

(ಶಿಷ್ಯ):– ಜೀತನನಾಗಿರುವದೆಂಬುದು ಸಮವಾಗಿದ್ದರೂ ಆಳೂ ಧಣಿಯೂ ಒಬ್ಬರಿಗೊಬ್ಬರು ಪ್ರಯೋಜನವನ್ನುಂಟುಮಾಡಿಕೊಡುವದು) ಕಂಡಿದೆಯಲ್ಲ!

(ಗುರು):– ಹಾಗಲ್ಲ. ಏಕೆಂದರೆ ಬೆಂಕಿಗೆ ಬಿಸಿಬೆಳಕುಗಳ ಹಾಗೆ ನಿನಗೆ ಚೈತನ್ಯವಿರುವದು ಎಂದು (ನನ್ನ) ಅಭಿಪ್ರಾಯವು. ಎರಡು ದೊಡ್ಡ ಬೆಳಕು ಗಳಂತೆ ಎಂದು ದೃಷ್ಟಾಂತವನ್ನು ಆಗಲೆ ಕೊಟ್ಟೂ ಇರುತ್ತೇನೆ.[2] ಇದು ಹೀಗಿರು ವದರಿಂದ[3] ಬೆಂಕಿಗೆ ಬಿಸಿಬೆಳಕುಗಳಂತಿರುವ ಕೂಟಸ್ಥನಿತ್ಯವಾದ[4] ಚೈತನ್ಯ ಸ್ವರೂಪದಿಂದ ನಿನ್ನ ಬುದ್ಧಿಗೆ ಹತ್ತಿಕೊಂಡಿದ್ದೆಲ್ಲವನ್ನೂ (ನೀನು) ಅರಿಯು ತ್ತಿರುವೆ. ಹೀಗೆ ನೀನು ಯಾವಾಗಲೂ ನಿರ್ವಿಶೇಷನೆಂದು[5] ಒಪ್ಪಿಕೊಂಡಿರುವೆ ಯಾದರೆ ಸುಷುಪ್ತಿಯಲ್ಲಿ ವಿಶ್ರಮಿಸಿಕೊಂಡು ವಿಶ್ರಮಿಸಿಕೊಂಡು "ಎಚ್ಚರಕನಸು

---

1. 'ಇತಿ ಚ' ಎಂಬ ಅಚ್ಚಿನ ಪಾಠದಲ್ಲಿ 'ಚ' ಹೆಚ್ಚೆಂದು ಬಿಟ್ಟಿದೇವೆ.

2. ಎರಡು ದೊಡ್ಡ ಬೆಳಕುಗಳಲ್ಲಿ ಒಂದರಿಂದ ಮತ್ತೊಂದಕ್ಕೆ ಆಗುವ ಉಪಕಾರ ವೇನೂ ಇರುವದಿಲ್ಲವೆಂದು ಹಿಂದಿನ ಖಂಡದಲ್ಲಿ ದೃಷ್ಟಾಂತವನ್ನು ಕೊಟ್ಟಿರುತ್ತದೆ.

3. ಚೈತನ್ಯಸ್ವಭಾವವನಾದ ನೀನು ಮತ್ತೊಂದಕ್ಕೆ ಪ್ರಯೋಜನವನ್ನುಂಟುಮಾಡು ವಂತಿಲ್ಲವಾದ್ದರಿಂದ.

4. ಕೂಟಸ್ಥನಿತ್ಯ, ಪರಿಣಾಮನಿತ್ಯ– ಎಂದು ನಿತ್ಯವಸ್ತುಗಳು ಎರಡು ಬಗೆ. ಯಾವ ವಸ್ತು ಮಾರ್ಪಡುತ್ತಿದ್ದರೂ ಅದೇ ಇದು ಎಂಬ ಬುದ್ಧಿಯು ಹಾಗೆಯೇ ಇದ್ದು ಕೊಂಡಿರುವಮೋ ಅದು ಪರಿಣಾಮಿನಿತ್ಯ. ಯಾವದು ಹೇಗೂ ಮಾರ್ಪಡುವದೇ ಇಲ್ಲವೋ ಅದು ಕೂಟಸ್ಥನಿತ್ಯ.

5. ವಿಷಯಗಳನ್ನು ಅರಿಯುವದರಿಂದ ನಿನ್ನಲ್ಲಿ ಯಾವ ವಿಶೇಷವೂ ಉಂಟಾಗು ವದಿಲ್ಲವೆಂದು– ಎಂದರ್ಥ. ಇದು ಮುಂದೆ ಸ್ಫುಟವಾಗುವದು.

ಗಳಲ್ಲಿ ದುಃಖವನ್ನು ಅನುಭವಿಸುತ್ತಿರುವೆನು. ಇದೇ ನನ್ನ ಸ್ವಭಾವವೊ, ಅಥವಾ ನೈಮಿತ್ತಿಕವೊ ?" ಎಂದೇಕೆ ಹೇಳಿದೆ? ಈ ಭ್ರಾಂತಿಯು (ಈಗ ಲಾದರೂ) ಹೋಯಿತೊ, ಅಥವಾ ಇಲ್ಲವೊ ?

(ಮೂಲ)

ಇತ್ಯುಕ್ತಃ ಶಿಷ್ಯ ಆಹ— ಭಗವನ್, ಅಪಗತಃ ತ್ವತ್ಪ್ರಸಾದಾತ್[1] । ಕಿಂ ತು ಮಮ ಕೂಟಸ್ಥತಾಯಾಂ ಸಂಶಯಃ । ಕಥಮ್ ? ಶಬ್ದಾದೀನಾಂ ಸ್ವತಃಸಿದ್ಧಿರ್ನಾಸ್ತಿ । ಅಚೇತನತ್ವಾತ್ । ಶಬ್ದಾದ್ಯಾಕಾರಪ್ರತ್ಯಯೋತ್ಪತ್ತೇಸ್ತು । ತೇಷಾಂ[2] ಪ್ರತ್ಯಯಾನಾಮ್ ಇತರೇತರವ್ಯಾವೃತ್ತವಿಶೇಷಣಾನಾಂ ನೀಲಪೀತಾದ್ಯಾಕಾರವತಾಂ ಸ್ವತಃಸಿದ್ಧ್ಯಸಂಭವಾತ್[3] ಬಾಹ್ಯಾಕಾರನಿಮಿತ್ತತ್ವಂ ಗಮ್ಯತೇ ಇತಿ ಬಾಹ್ಯಶಬ್ದಾದ್ಯಾಕಾರತ್ವಸಿದ್ಧಿಃ[4]। ತಥಾ ಪ್ರತ್ಯಯಾನಾಮಪಿ ಅಹಂ ಪ್ರತ್ಯಯಾಲಮ್ಬನವಸ್ತುಭೇದಾನಾಂ ಸಂಹತತ್ವಾತ್ ಅಜ್ಞೈತನ್ಯೋಪಪತ್ತೇಃ ಸ್ವಾರ್ಥತ್ವಾಸಂಭವಾತ್ ಸ್ವರೂಪವ್ಯತಿರಿಕ್ತಗ್ರಾಹಕಗ್ರಾಹ್ಯತ್ವೇನ ಸಿದ್ಧಿಃ ಶಬ್ದಾದಿವದೇವ । ಅಸಂಹತತ್ವೇ ಸತಿ ಚೈತನ್ಯಾತ್ಮಕತ್ವಾತ್ ಸ್ವಾರ್ಥೋಽಪಿ ಅಹಂಪ್ರತ್ಯಯಾನಾಂ ನೀಲಪೀತಾದ್ಯಾಕಾರಾಣಾಮ್ ಉಪಲಬ್ಧಾ ಇತಿ ವಿಕ್ರಿಯಾವಾನೇವ ಕಥಂ[5] ಕೂಟಸ್ಥಃ ? -ಇತಿ ಸಂಶಯಃ ॥ ೪೮ ॥

(ಅರ್ಥ)

ಹೀಗೆನ್ನಲು ಶಿಷ್ಯನು ಹೇಳುತ್ತಾನೆ: ಪೂಜ್ಯರೆ, ತಮ್ಮ ಅನುಗ್ರಹದಿಂದ (ಈ ಭ್ರಾಂತಿಯೇನೋ) ಹೋಯಿತು, ಆದರೆ ನಾನು ಕೂಟಸ್ಥನೆಂಬ (ವಿಷಯ)ದಲ್ಲಿ ಸಂಶಯ(ವಿದೆ). ಹೇಗೆ ?– ಎಂದರೆ, ಶಬ್ದಾದಿಗಳು ಅಚೇತನವಾಗಿರು

---

1. 'ವ್ಯಾಮೋಹಃ' ಎಂದು ಇದರ ಮುಂದೆ ಹೆಚ್ಚಾಗಿ ನಿ॥ ಆ॥ ಪಾಠಗಳಲ್ಲಿದೆ.

2. ಈ ಮಾತನ್ನು ಹಿಂದಿನ ವಾಕ್ಯಕ್ಕೇ ಅಚ್ಚಿನ ಪುಸ್ತಕಗಳಲ್ಲಿ ಸೇರಿಸಿದೆಯಾದರೂ ಈ ವಾಕ್ಯಕ್ಕೆ ಸೇರುಸುವದೇ ಮೇಲು.

3. ಇದರ ಮುಂದಿರುವ 'ತಸ್ಮಾತ್' ಎಂಬ ಅಚ್ಚಿನ ಪುಸ್ತಕಗಳ ಪಾಠವು ಬೇಕಿಲ್ಲ.

4. 'ಬಾಹ್ಯಾಕಾರವತ್ ಶಬ್ದಾದ್ಯಾಕಾರತ್ವಸಿದ್ಧಿಃ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

5. ಈ ಮಾತು ಆ॥ವಾ॥ ಪಾಠಗಳಲ್ಲಿ ಮಾತ್ರ ಇದೆ ; ಇದು ಇಲ್ಲಿ ಅವಶ್ಯವಾಗಿದೆ.

ವದರಿಂದ (ಅವುಗಳಿಗೆ) ಸ್ವತಃಸಿದ್ಧಿಯಿಲ್ಲ.[1] ಶಬ್ದವೇ ಮುಂತಾದವುಗಳ ಆಕಾರದ ಪ್ರತ್ಯಯಗಳು ಉಂಟಾಗುವದರಿಂದಲಾದರೆ (ಅವುಗಳ ಸಿದ್ಧಿಯಾಗುವದು,[2] ಆ ಪ್ರತ್ಯಯಗಳು ಒಂದಕ್ಕೊಂದು ವಿಲಕ್ಷಣವಾದ ಧರ್ಮಗಳುಳ್ಳವಾಗಿ ಕಪ್ಪು, ಹಳದಿ –ಮುಂತಾದ ಆಕಾರವುಳ್ಳವಾಗಿರುವದರಿಂದ ಸ್ವತಃಸಿದ್ಧಿಯಾಗುವಂತಿಲ್ಲವಾಗಿ ಹೊರಗಿನ (ವಸ್ತುಗಳ) ಆಕಾರವೆಂಬ ನಿಮಿತ್ತ(ದಿಂದ ಆಗುವವೆಂದು) ನಿಶ್ಚಯವಾಗುವದರಿಂದ ಹೊರಗಿನ ಶಬ್ದಾದಿಗಳ ಆಕಾರಗಳು ಸಿದ್ಧಿಯಾಗುತ್ತವೆ.[3] ಹೀಗೆ ಯೇ ಅಹಂಪ್ರತ್ಯಯಕ್ಕೆ ವಿಷಯವಾಗಿರುವ (ಅಂತಃಕರಣ)ವಸ್ತುವಿನ ವಿಶೇಷಗಳಾಗಿರುವ (ಈ) ಪ್ರತ್ಯಯಗಳುಕೂಡ (ಒಂದಕ್ಕೊಂದು) ಸೇರಿಕೊಂಡಿರುವದರಿಂದ (ಅವು) ಅಚೇತನವಾಗಿರಬೇಕಾದ ಕಾರಣ ತಮಗಾಗಿ ತಾವು ಇರಲಾರವಾದ್ದರಿಂದ (ಮೇಲೆ ಹೇಳಿದ) ಶಬ್ದಾದಿಗಳಂತೆಯೇ (ಅವೂ) ತನ್ನ್ಮ ಸ್ವರೂಪಕ್ಕಿಂತ ಬೇರೆಯಾಗಿರುವ ಜ್ಞಾತೃವಿಗೆ ಅರಿಯಬರುವದರಿಂದಲೇ ಸಿದ್ಧವಾಗಬೇಕು.[4] (ಆದರೆ ಈ ಜ್ಞಾತೃವಾದ) ನಾನು ಅಸಂಹತನಾಗಿ ಚೈತನ್ಯಸ್ವರೂಪನಾಗಿರುವದರಿಂದ ನನಗಾಗಿಯೇ ಇದ್ದುಕೊಂಡಿರುವೆನಾದರೂ ಕಪ್ಪು, ಹಳದಿ– ಮುಂತಾದ ಆಕಾರದ (ಈ) ಪ್ರತ್ಯಯಗಳನ್ನು ಅರಿಯುತ್ತಿರುವದರಿಂದ ವಿಕಾರವುಳ್ಳವನೇ,[5] ಕೂಟಸ್ಥನೆಂಬುದು ಹೇಗೆ ಎಂಬುದೇ ಸಂಶಯವು.

---

1. ಪ್ರಮಾಣಸಿದ್ಧವಾಗಬೇಕು, ಮತ್ತೊಂದರಿಂದ ಅರಿಯಲ್ಪಟ್ಟೇ ಸಿದ್ಧವಾಗಬೇಕು.

2. ಅಂತಃಕರಣವೃತ್ತಿಗಳಿಗೆ ಗೋಚರವಾದಮೇಲೆಯೇ ಶಬ್ದಾದಿಗಳು ಇರುವವೆಂದು ತಿಳಿಯಬರುತ್ತದೆ.

3. ಕಪ್ಪಿನ ವೃತ್ತಿಗಿಂತ ಹಳದಿಯ ವೃತ್ತಿಯು ಬೇರೆಯಾಗಿರುವದಕ್ಕೆ ಬರಿಯ ಅಂತಃಕರಣವು ನಿಮಿತ್ತವಾಗಲಾರದು; ಹೊರಗಿನ ವಸ್ತುವೆಂದು ಬೇರೆ ಇರಬೇಕು ಎಂದರ್ಥ.

4. ಪ್ರತ್ಯಯವೈಚಿತ್ರ್ಯವೇ ಶಬ್ದಾದಿಗಳು ಬೇರೆಬೇರೆಯಾಗಿವೆ ಎಂಬ ವಿಷಯಕ್ಕೆ ಪ್ರಮಾಣವೆಂದು ಭಾವ.

5. ಸಂಹತವಾಗಿರುವ ವಸ್ತುಗಳು ಪರಾರ್ಥವಾಗಿರಬೇಕು. ಅಂತಃಕರಣ ಪ್ರತ್ಯಯಗಳು ಒಂದಕ್ಕೊಂದು ಸೇರಿಕೊಂಡಿರುವದರಿಂದ ಅವು ತಮಗಿಂತ ಬೇರೆಯಾದ ಚೈತನ್ಯಕ್ಕಾಗಿ ಇರುತ್ತವೆ ಎಂದಾಯಿತು.

6. ಅಂತಃಕರಣವು ವಿಷಯಗಳನ್ನು ಅರಿಯುವಾಗ ಆಯಾ ವಿಷಯಗಳ ಆಕಾರವಾಗಿ ಮಾರ್ಪಡುವಂತೆ, ನಾನೂ ಪ್ರತ್ಯಯಗಳನ್ನು ಅರಿಯುತ್ತಿರುವದರಿಂದ ಆಯಾ ಆಕಾರವಾಗಿ ಪರಿಣಮಿಸುತ್ತೇನೆಂದಾಯಿತು ಎಂದು ಭಾವ.

(ಮೂಲ)

ತಂ ಗುರುರುವಾಚ— ನ ಯುಕ್ತಸ್ತವ ಸಂಶಯಃ। ಯತ ಸ್ತೇಷಾಂ ಪ್ರತ್ಯಯಾನಾಂ ನಿಯಮೇನ ಅಶೇಷತಃ ಉಪಲಬ್ಧೀರೇವ ಅಪರಿಣಾಮಿತ್ವಾತ್ ಕೂಟಸ್ಥತ್ವಸಿದ್ಧೌ ನಿಶ್ಚಯಹೇತುರೇವ ಅಶೇಷ ಚಿತ್ತಪ್ರಚಾರೋಪಲಬ್ಧಿಂ ಸಂಶಯಹೇತುಮ್ ಆತ್ಥ। ಯದಿ ಹಿ ತವ ಪರಿಣಾಮಿತ್ವಂ ಸ್ಯಾತ್ ಅಶೇಷಸ್ಯವಿಷಯಚಿತ್ತಪ್ರಚಾರೋ ಪಲಬ್ಧಿರ್ನ ಸ್ಯಾತ್। ಚಿತ್ತಸ್ಯೇವ ಸ್ವವಿಷಯೇ, ಯಥಾ ಚ ಇನ್ದ್ರಿಯಾಣಾಂ ಸ್ವವಿಷಯೇಷು। ನ ಚ ತಥಾ ಆತ್ಮನಸ್ತವ ಸ್ವವಿಷಯೈಕದೇಶೋಪಲಬ್ಧಿ। ಅತಃ ಕೂಟಸ್ಥತೈವ ತವ ಇತಿ ॥ ೪೯॥

(ಅರ್ಥ)

ಅವನನ್ನು ಕುರಿತು ಗುರುವಿಂತೆಂದನು: (ಈ) ನಿನ್ನ ಸಂಶಯವು ಯುಕ್ತವಲ್ಲ. ಏಕೆಂದರೆ ಈ ಪ್ರತ್ಯಯಗಳೆಲ್ಲವನ್ನೂ ತಪ್ಪದೆ ಅರಿಯುತ್ತಿರುವದರಿಂದಲೇ (ನೀನು) ಪರಿಣಾಮವಲ್ಲ(ವೆಂದಾಗು)ವದರಿಂದ ಕೂಟಸ್ಥನೆಂಬುದು ಸಿದ್ಧವಾಗುತ್ತಿರುವಲ್ಲಿ ಎಲ್ಲಾ ಚಿತ್ತಪ್ರಚಾರಗಳನ್ನೂ[1] ಅರಿಯುವದೆಂಬ ನಿಶ್ಚಯಹೇತುವನ್ನೇ ಸಂಶಯಕ್ಕೆ ಹೇತುವೆಂದು ಹೇಳುತ್ತಿರುವೆಯಲ್ಲ! ನಿನ್ನಲ್ಲಿ (ನಿಜವಾಗಿ) ಪರಿಣಾಮಿತ್ವವು ಇರುತ್ತಿದ್ದರೆ, ಚಿತ್ತವು ಹೇಗೆ ತನ್ನ ವಿಷಯ(ವೆಲ್ಲವನ್ನೂ ಅರಿಯಲಾರದೋ), ಮತ್ತು ಇಂದ್ರಿಯಗಳು ಹೇಗೆ ತಮ್ಮ ವಿಷಯ(ಗಳೆಲ್ಲವನ್ನೂ ಅರಿಯಲಾರವೋ) ಹಾಗೆ ನಿನಗೆ ವಿಷಯವಾದ ಚಿತ್ತಪ್ರಚಾರಗಳೆಲ್ಲವನ್ನೂ ಅರಿಯುವದು ಆಗುತ್ತಿರಲಿಲ್ಲ[2] ಆದರೆ ಹಾಗೆ ಆತ್ಮನಾಗಿರುವ ನಿನಗೆ ಸ್ವವಿಷಯಗಳು ಬಂದು ಭಾಗವನ್ನು ಮಾತ್ರ ಅರಿಯುವದೆಂಬುದಿಲ್ಲ. ಆದ್ದರಿಂದ ನೀನು ಕೂಟಸ್ಥನೇ (ಎಂದು ನಿಶ್ಚಯವಾಯಿತು).

(ಮೂಲ)

ತತ್ರಾಹ— ಉಪಲಬ್ಧಿರ್ನಾಮವ ಧಾತ್ವರ್ಥೋ ವಿಕ್ರಿಯೈವ, ಉಪಲಬ್ಧುಃ ಕೂಟಸ್ಥತ್ವತಾ ಚ ಇತಿ ವಿರುದ್ಧಮ್। ನ। ಧಾತ್ವರ್ಥ ವಿಕ್ರಿಯಾಯಾಂ ಉಪಲಬ್ಧ್ಯುಪಚಾರಾತ್। ಯೋ ಹಿ ಬೌದ್ಧಃ

1. ಚಿತ್ತವೃತ್ತಿಗಳೆಲ್ಲವನ್ನೂ.

2. ಒಂದೊಂದು ವೃತ್ತಿಯು ಒಂದೊಂದು ವಿಷಯವನ್ನೇ ಅರಿಯುವಂತೆ ನೀನೂ ಒಂದೊಂದೇ ಪ್ರತ್ಯಯವನ್ನು ಅರಿಯಬೇಕಾಗುತ್ತಿತ್ತು ಎಂದರ್ಥ.

ಪ್ರತ್ಯಯಃ ಸ ಧಾತ್ವರ್ಥಃ ವಿಕ್ರಿಯಾತ್ಮಕಃ, ಆತ್ಮನಃ ಉಪಲಬ್ಧ್ಯಾ ಭಾಸಫಲಾವಸಾನಃ ಇತಿ ಉಪಲಬ್ಧಿಶಬ್ದೇನ ಉಪಚರ್ಯತೇ। ಯಥಾ ಛಿದಿಕ್ರಿಯಾ ದ್ವೈಧೀಭಾವಫಲಾವಸಾನಾ ಇತಿ ಧಾತ್ವರ್ಥೇನ ಉಪಚರ್ಯತೇ ತದ್ವತ್ ॥ ೫೦ ॥

(ಅರ್ಥ)

ಇಲ್ಲಿ (ಶಿಷ್ಯನು) ಹೇಳುತ್ತಾನೆ: ಅರಿಯುವದೆಂಬುದು ಧಾತುವಿನ ಅರ್ಥವಾದ ವಿಕಾರವೇ, ಅರಿಯುವಾತನು ಕೂಟಸ್ಥಸ್ವರೂಪನೂ (ಆಗಿರುತ್ತಾನೆ) ಎಂಬುದು (ಒಂದಕ್ಕೊಂದು) ವಿರುದ್ಧ.[1]

(ಗುರು):– ಹಾಗಲ್ಲ. ಏಕೆಂದರೆ ಧಾತುವಿನ ಅರ್ಥವಾದ ವಿಕಾರವನ್ನು (ತಿಳಿಸುವದಕ್ಕೆ) ಅರಿವು (ಎಂಬ ಮಾತನ್ನು) ಉಪಚಾರದಿಂದ (ಪ್ರಯೋಗಿಸಿರುತ್ತದೆ). ಹೇಗೆಂದರೆ ಬುದ್ಧಿಯ ಪ್ರತ್ಯಯವಿದೆಯಲ್ಲ, ಅದು ಧಾತುವಿನ ಅರ್ಥವಾಗಿ ವಿಕಾರದ ರೂಪವಾಗಿರತಕ್ಕದ್ದು. (ಇದು) ಆತ್ಮನ ಅರಿವಿನಂತೆ ತೋರುವ ಫಲವಲ್ಲಿ ಕೊನೆಗಾಣುವದರಿಂದ[2] ಅರಿವು ಎಂಬ ಶಬ್ದದಿಂದ ಉಪಚಾರದಿಂದ ಕರೆಯಲ್ಪಡುತ್ತದೆ. ಹೇಗೆ ಕಡಿಯುವದು ಎಂಬ ಕ್ರಿಯೆಯು ಎರಡು ಪಾಲಾಗು ವಿಕೆ ಎಂಬ ಫಲವಲ್ಲಿ ಕೊನೆಗಾಣುವದರಿಂದ (ಕಡಿ ಎಂಬ ಧಾತುವಿನ) ಅರ್ಥವೆಂದು ಉಪಚಾರಕ್ಕಾಗಿ ಹೇಳಲ್ಪಡುವದೋ ಅದರಂತೆ(ಯೇ ಇದು).

ಆತ್ಮನಿಗಿಂತ ಬೇರೆಯಾದ ಅರಿವು ಇಲ್ಲ

(ಮೂಲ)

ಇತ್ಯುಕ್ತಃ ಶಿಷ್ಯ ಆಹ— ನನು ಭಗವನ್, ಮಮ ಕೂಟಸ್ಥತ್ವ ಪ್ರತಿಪಾದನಂ ಪ್ರತಿ ಅಸಮರ್ಥೋ ದೃಷ್ಟಾಂತಃ। ಕಥಮ್? ಛಿದಿಃ

---

1. ಅರಿಯುವದು ಎಂಬ 'ಅರಿ'ಧಾತುವಿನ ಅರ್ಥವಾದ ಒಂದು ಕ್ರಿಯೆಯನ್ನು ಹೇಳುತ್ತವೆ. ಆ ಕ್ರಿಯೆಯ ಕರ್ತೃವಾದ ಆತ್ಮನು ಪರಿಣಾಮಿಯಲ್ಲ ಎಂಬುದು ತನಗೆ ತಾನೇ ವಿರುದ್ಧ.

2. ವಿಷಯವನ್ನು ಅರಿಯುವಾಗ ಆಗುವ **ವಿಕ್ರಿಯೆ**ಯೆಂಬುದು ಅಂತಃಕರಣದ ವೃತ್ತಿಯು; ಆ ವೃತ್ತಿಯಲ್ಲಿ **ಚಿದಾಭಾಸ**ವಾದ (ಅರಿವಿನಂತೆ ತೋರುವ) **ಫಲ**ವು ತೋರುವದರಿಂದ ಆ ವೃತ್ತಿಯನ್ನು ಅರಿವು ಎಂದು ಕರೆಯುತ್ತಾರೆ ಎಂದರ್ಥ. ಇಲ್ಲಿ ವೃತ್ತಿಯನ್ನು ಅರಿವೆಂದಿರುವದು ಗೌಣವೆಂದೂ ಆತ್ಮನು ಮುಖ್ಯಾರ್ಥದಲ್ಲಿ ಅರಿವೆಂದೂ ಹೇಳಿರುವದು ತೈತ್ತಿರೀಯಭಾಷ್ಯಕ್ಕೆ ವಿರುದ್ಧ. ಏಕೆಂದರೆ ೨-೧ (ಭಾ.ಭಾ. ೧೦೬)ರಲ್ಲಿ ಧಾತ್ವರ್ಥಗಳು ಜ್ಞಾನಶಬ್ದವಾಚ್ಯಗಳೆಂದೂ ಆತ್ಮನು ಲಕ್ಷ್ಯವೆಂದೂ ಹೇಳಿದೆ. ಇಲ್ಲಿ 'ಉಪಚರ್ಯತೇ' ಎಂಬ ಮಾತನ್ನು ಆ ಭಾಷ್ಯಕ್ಕೆ ಹೇಗೆ ಹೊಂದಿಸಬೇಕೆಂಬುದನ್ನು ವಿದ್ವಾಂಸರು ಆಲೋಚಿಸಬೇಕಾಗಿದೆ.

ಛೇದ್ಯವಿಕ್ರಿಯಾವಸಾನಾ ಉಪಚರ್ಯತೇ ಯಥಾ ಧಾತ್ವರ್ಥೇನ, ತಥಾ ಉಪಲಬ್ಧಿಶಬ್ದೋಪಚರಿತೋಽಪಿ ಧಾತ್ವರ್ಥೋ ಬೌದ್ಧ ಪ್ರತ್ಯಯಃ ಆತ್ಮನಃ ಉಪಲಬ್ಧಿವಿಕ್ರಿಯಾವಸಾನಶ್ಚೇತ್, ನಾತ್ಮನಃ ಕೂಟಸ್ಥತಾಂ ಪ್ರತಿಪಾದಯಿತುಂ ಸಮರ್ಥಃ। ಗುರುರುವಾಚ— ಸತ್ಯಮೇವಂ ಸ್ಯಾತ್ ಯದಿ ಉಪಲಬ್ಧ್ಯುಪಲಬ್ಧ್ಯೋರ್ವಿಶೇಷಃ। ನಿತ್ಯೋಪಲಬ್ಧಿಮಾತ್ರ ಏವ ಹಿ ಉಪಲಬ್ಧಾ। ನ ತು ತಾರ್ಕಿಕ ಸಮಯೇ ಇವ ಅನ್ಯಾ ಉಪಲಬ್ಧಿಃ, ಅನ್ಯಃ ಉಪಲಬ್ಧಾ ಚ ॥ ೫೧ ॥

(ಅರ್ಥ)

ಹೀಗೆನ್ನಲು ಶಿಷ್ಯನು ಹೇಳುತ್ತಾನೆ: ಪೂಜ್ಯರೆ, ನಾನು ಕೂಟಸ್ಥನೆಂದು ತಿಳಿಸುವದಕ್ಕೆ ಈ ದೃಷ್ಟಾಂತವು ಸಾಲದು. ಹೇಗೆ? ಎಂದರೆ ಕಡಿಯುವ(ದೆಂಬ ಕ್ರಿಯೆಯು) ಕಡಿಯಲ್ಪಡುವ ವಸ್ತುವಿನಲ್ಲಿ (ಉಂಟಾಗುವ) ವಿಕಾರದಲ್ಲಿ ಕೊನೆಗಾಣುವದರಿಂದ (ಕಡಿ ಎಂಬ) ಧಾತುವಿನ ಅರ್ಥವೆಂದು (ಅದನ್ನು) ಹೇಗೆ ಉಪಚಾರಕ್ಕೆ ಹೇಳುವರೋ ಹಾಗೆ (ಅರಿ ಎಂಬ) ಧಾತುವಿನ ಅರ್ಥವಾದ ಬುದ್ಧಿಯ ಪ್ರತ್ಯಯದ ಅರಿವು ಎಂಬ ಶಬ್ದಕ್ಕೆ ಉಪಚಾರದಿಂದ ಅರ್ಥವಾದರೂ ಆತ್ಮನ ಅರಿವೆಂಬ ವಿಕ್ರಿಯೆಯಲ್ಲಿ ಕೊನೆಗಾಣುವದಾದರೆ ಆತ್ಮನು ಕೂಟಸ್ಥನೆಂದು ತಿಳಿಸುವದಕ್ಕೆ (ಇದು) ಸಾಕಾಗಲಾರದು. (ಇದಕ್ಕೆ) ಗುರುವಿಂತೆಂದನು: ನಿಜ; ಅರಿವು, ಅರಿವಾತನು– ಇವೆರಡಕ್ಕೂ ಹೆಚ್ಚುಕಡಿಮೆಯಿದ್ದರೆ ಹೀಗೆಯೇ ಆಗುವದು. (ಆದರೆ ನಮ್ಮ ಸಿದ್ಧಾಂತದಲ್ಲಿ) ನಿತ್ಯವಾದ ಅರಿವೇ ಅರಿಯುವಾತನು; (ಇಷ್ಟೇ) ಹೊರತು ತಾರ್ಕಿಕರ ಶಾಸ್ತ್ರದಲ್ಲಿ (ಹೇಳು)ವಂತೆ ಅರಿವು ಬೇರೆ, ಅರಿಯುವಾತನು ಬೇರೆ– ಹೀಗಿಲ್ಲ.

(ಮೂಲ)

ನನು ಉಪಲಬ್ಧಿಫಲಾವಸಾನೋ ಧಾತ್ವರ್ಥಃ ಕಥಮ್ ಇತಿ ? ಉಚ್ಯತೇ। ಶೃಣು। ಉಪಲಬ್ಧ್ಯಭಾಸಫಲಾವಸಾನಃ ಇತ್ಯುಕ್ತಮ್। ಕಿಂ ನ ಶ್ರುತಂ ತತ್ ತ್ವಯಾ? ನ ತು ಆತ್ಮವಿಕ್ರಿಯೋತ್ಪಾದನಾವಸಾನಃ[1] ಇತಿ ಮಯಾ ಉಕ್ತಮ್। ಶಿಷ್ಯ ಉ ವಾ ಚ— ಕಥಂ ತರ್ಹಿ ಕೂಟಸ್ಥೇ ಮಯಿ ಅಶೇಷಸ್ವವಿಷಯಚಿತ್ತಪ್ರಚಾರೋಪಲಬ್ಧೃ

1. 'ಆತ್ಮವಿಕ್ರಿಯೋತ್ಪಾದಾವಸಾನಃ' ಎಂಬ ಅಚ್ಚಿನ ಪಾಠವು ತಪ್ಪು.

ತ್ವಮ್ ಇತ್ಯಾತ್ಥ ?[1] ತಂ ಗುರುರುವಾಚ— ಸತ್ಯಮುವ್ಹೋಚಮ್[2]।
ತೇನೈವ ಕೂಟಸ್ಥತಾಮ್ ಅಬ್ರುವಂ ತವ ॥ ೫೨ ॥

(ಅರ್ಥ)

(ಶಿಷ್ಯ):– ಧಾತುವಿನ ಅರ್ಥವು ಅರಿವೆಂಬ ಫಲದಲ್ಲಿ ಕೊನೆಗಾಣುವದೆಂಬುದು ಹೇಗೆ ?

(ಗುರು):– ಹೇಳುತ್ತೇನೆ, ಕೇಳು. 'ಅರಿವಿನಂತೆ ತೋರುವ' ಫಲದಲ್ಲಿ ಕೊನೆಗಾಣುವದು ಎಂದು (ನಾನು) ಹೇಳಿದೆನು. ಅದು ನಿನಗೆ ಕೇಳಿಸಲಿಲ್ಲವೇನು ? ಹಾಗಲ್ಲದೆ ಆತ್ಮನಲ್ಲಿ (ಯಾವದಾದರೊಂದು) ವಿಕಾರವನ್ನುಂಟು ಮಾಡುವದರಲ್ಲಿ ಕೊನೆಗಾಣುವದೆಂದೇನೂ ನಾನು ಹೇಳಲಿಲ್ಲ.

ಶಿಷ್ಯನಿಂತೆಂದನು: ಹಾಗಾದರೆ ಕೂಟಸ್ಥನಾಗಿರುವ ನಾನು ನನಗೆ ವಿಷಯವಾದ ಚಿತ್ತವ ಪ್ರಚಾರಗಳನ್ನೆಲ್ಲ ಅರಿಯುವೆನೆಂದು ಹೇಗೆ ಹೇಳಿದಿರಿ ?[4]

ಅವನಿಗೆ ಗುರು ಹೇಳಿದನೇನೆಂದರೆ: ನಿಜ, ಹೇಳಿದೆನು. ಅದರಿಂದಲೇ ನೀನು ಕೂಟಸ್ಥನೆಂದಾಯಿತೆಂದು ಹೇಳಿದೆನು.[5]

ಅವಿದ್ಯೆಯಿಂದಲೇ ಆತ್ಮನಲ್ಲಿ ಅರಿವೆಂಬ ವಿಕಾರವಾಗುವದು

(ಮೂಲ)

ಯದ್ಯೇವಂ ಭಗವನ್, ಕೂಟಸ್ಥನಿತ್ಯೋಪಲಬ್ಧಿಸ್ವರೂಪೇ ಮಯಿ ಶಬ್ದಾದ್ಯಾಕಾರಬೌದ್ಧಪ್ರತ್ಯಯೇಷು ಚ ಮತ್ಸ್ವರೂಪೋಪಲಬ್ಧ್ಯಭಾಸಫಲಾವಸಾನವತ್ಸು ಉತ್ಪದ್ಯಮಾನೇಷು ಕಸ್ತು ಅಪರಾಧೋ ಮಮ ? ಸತ್ಯಮ್, ನಾಸ್ತ್ಯಪರಾಧಃ। ಕಿಂ ತು ಅವಿದ್ಯಾಮಾತ್ರಸ್ತು ಅಪರಾಧಃ ಇತಿ ಪ್ರಾಗೇವ ಅವ್ಹೋಚಮ್ ॥ ೫೩ ॥

---

1. ಇಲ್ಲಿ 'ಇತಿ'ಯಿಲ್ಲದೆ 'ಆತ್ಥ' ಎಂದಿಷ್ಟೇ ಇದ್ದರೂ ಸಾಗುತ್ತದೆ.
2. 'ಸತ್ಯಮೇವಾವ್ಹೋಚಮ್' ಎಂದು ವಾ॥ ಪಾಠದಲ್ಲಿ 'ಏವ' ಹೆಚ್ಚಾಗಿದೆ.
3. ಫಲಪಾಪದ್ದು ನಿತ್ಯ ಹೇಗಾದೀತು ? –ಎಂದು ಆಕ್ಷೇಪ.
4. ಅರಿವು ನಿತ್ಯವಾಗಿದ್ದರೆ ಅರಿಯುವದೆಂಬ ಕ್ರಿಯೆ ಹೇಗೆ ಉಂಟಾಗಬೇಕು ?
5. 'ಸೂರ್ಯನು ಬೆಳಗುತ್ತಾನೆ' ಎಂಬಂತೆ ಸ್ವರೂಪವನ್ನೇ ಕ್ರಿಯೆಯೆಂದು ಉಪಚಾರಕ್ಕೆ ಹೇಳಿರುತ್ತದೆ ಎಂದು ಭಾವ.

(ಅರ್ಥ)

(ಶಿಷ್ಯ):– ಪೂಜ್ಯರೆ, ಹೀಗೆ ನಾನು ಕೂಟಸ್ಥನಾಗಿ ಯಾವಾಗಲೂ ಚೈತನ್ಯಸ್ವರೂಪನೇ ಆಗಿದ್ದರೆ, ಮತ್ತು ಶಬ್ದವೇ ಮುಂತಾದ ಆಕಾರದ ಬುದ್ಧಿಯ ಪ್ರತ್ಯಯಗಳು ನನ್ನ ಸ್ವರೂಪವಾಗಿರುವ ಅರಿವಿನಂತೆ ತೋರುವ ಫಲದಲ್ಲಿ ಕೂನೆ ಗಾಣುತ್ತಾ ಹುಟ್ಟುತ್ತಿರುವವಾದರೆ, ನನ್ನ ತಪ್ಪಾದರೂ ಯಾವದು ?[1]

(ಗುರು):– ನಿನ್ನದೇನೂ ತಪ್ಪಿಲ್ಲ, ನಿಜ. ಆದರೆ ತಪ್ಪುತಿಳಿವಳಿಕೆ ಯೊಂದೇ ತಪ್ಪು ಎಂದು ಮೊದಲೇ ಹೇಳಿರುತ್ತೇನೆ.[2]

ಬಿಜ್ಞರಕನಸುಗಳಿಂದ ಆತ್ಮನಲ್ಲಿ ವಿಕಾರವಿಲ್ಲ

(ಮೂಲ)

ಯದಿ ಭಗವನ್, ಸುಷುಪ್ತೇ ಇವ ಮಮ ವಿಕ್ರಿಯಾ ನಾಸ್ತಿ ಕಥಂ ಸ್ವಪ್ನಜಾಗರಿತೇ? ತಂ ಗುರುರುವಾಚ—ಕಿಂ ತ್ವನುಭೂಯೇತೇ[3] ತ್ವಯಾ ಸತತಮ್[4] ? ಬಾಢಮ್ ಅನುಭವಾಮಿ, ಕಿಂತು ವಿಚ್ಛಿದ್ಯ ವಿಚ್ಛಿದ್ಯ ನ ತು ಸತತಮ್ । ತಂ ಗುರುರುವಾಚ—ತರ್ಹಿ ಆಗನ್ತುಕೇ ತ್ವೇತೇ ನ ತವ ಆತ್ಮಭೂತೇ। ಯದಿ ತವ ಆತ್ಮಭೂತೇ ಚೈತನ್ಯ ಸ್ವರೂಪವತ್ ಸ್ವತಃಸಿದ್ಧೇ ಸನ್ತತೇ ಇವ ಸ್ಯಾತಾಮ್ । ಕಿಂ ಚ ಸ್ವಪ್ನಜಾಗರಿತೇ ನ ತವ ಆತ್ಮಭೂತೇ। ವ್ಯಭಿಚಾರಿತ್ವಾತ್ । ವಸ್ತ್ವಾದಿವತ್ । ನ ಹಿ ಯಸ್ಯ ಯತ್ ಸ್ವರೂಪಮ್ ತತ್ ತಸ್ಮ್ಯಭಿಚಾರಿ ದೃಷ್ಟಮ್ । ಸ್ವಪ್ನಜಾಗರಿತೇ ತು ಚೈತನ್ಯಮಾತ್ರಾತ್[5] ವ್ಯಭಿಚರತಃ । ಸುಷುಪ್ತೇ ಜೀತ್ ಸ್ವರೂಪಂ ವ್ಯಭಿಚರೇತ್, ತತ್ ನಷ್ಟಮ್ ನಾಸ್ತಿ ಇತಿ ವಾ ಬಾಧ್ಯಮೇವ ಸ್ಯಾತ್ । ಆಗನ್ತುಕಾನಾಮ್ ಅತದ್ಧರ್ಮಾಣಾಮ್ ಉಭಯಾತ್ಮಕತ್ವದರ್ಶನಾತ್ । ಯಥಾ ಧನ

---

1. ನನಗೇಕೆ ದುಃಖಾನುಭವವಾಗುತ್ತಿದೆ ? –ಎಂದರ್ಥ.

2. ದುಃಖವು ನಿಜವಾಗಿ ಆಗುತ್ತಿಲ್ಲ, ದುಃಖವಾಗುತ್ತದೆ ಎಂಬ ತಪ್ಪುತಿಳಿವಳಿಕೆಯಿದೆ. ಈ ತಪ್ಪುತಿಳಿವಳಿಕೆಯ ವಿಚಾರವನ್ನು ಆನೆಯ ಏಂಡಪಲ್ಲಿಯೇ ತಿಳಿಸಿದ್ದಾಗಿದೆ.

3. ಕಿಂ ತು ಎಂದೇ ಅಚ್ಚಿನ ಪಾಠ; ಕಿಂ ನು ಎಂದಿದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.

4. ಈ ವಾಕ್ಯದಲ್ಲಿಯೂ ಮುಂದಿನ ವಾಕ್ಯದಲ್ಲಿಯೂ 'ಸನ್ತತಮ್' ಎಂದು ಆ॥ ವಾ॥ ಪಾಠ.

5. 'ಚೈತನ್ಯಮಾತ್ರತ್ವಾತ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ವಸ್ತ್ವಾದೀನಾಂ ನಾಶೋ ದೃಷ್ಟಃ। ಸ್ವಪ್ನಭ್ರಾನ್ತಿಲಬ್ಧಾನಾಂ ತು ಅಭಾವೋ ದೃಷ್ಟಃ ॥ ೫೪ ॥

(ಅರ್ಥ)

(ಶಿಷ್ಯ):— ಪೂಜ್ಯರೆ, ಸುಷುಪ್ತಿಯಲ್ಲಿ ಹೇಗೋ ಹಾಗೆ ನನ್ನಲ್ಲಿ (ಯಾವಾಗಲೂ ಯಾವ) ವಿಕಾರವೂ ಇಲ್ಲವಾದರೆ, ಕನಸೂ ಎಚ್ಚರವೂ (ಆಗುತ್ತಿರುವದು) ಹೇಗೆ ?[1] ಅವನಿಗೆ ಗುರುವಿಂತೆಂದನು : (ನಿನ್ನ) ಯಾವಾಗಲೂ (ಬಿಡದೆ) ನಿನ್ನ ಅನುಭವದಲ್ಲಿರುತ್ತವೆಯೇನು ?

(ಶಿಷ್ಯ):— ಹೌದು, (ಅದನ್ನು) ಅನುಭವಿಸುತ್ತಿದ್ದೇನೆ, ಆದರೆ ಬಿಟ್ಟು ಬಿಟ್ಟು (ಅನುಭವಿಸುತ್ತಿರುವೆನೇ ಹೊರತು) ಯಾವಾಗಲೂ (ಅನುಭವಿಸು)ತ್ತಿಲ್ಲ. ಅವನಿಗೆ ಗುರುವಿಂತೆಂದನು : ಹಾಗಾದರೆ ಅವು ನಡುವೆ ಒಂದವುಗಳೇ ಹೊರತು ನಿನ್ನ ಸ್ವರೂಪವಲ್ಲ. ಚೈತನ್ಯಸ್ವರೂಪದ ಹಾಗೆ (ಇವೂ) ನಿನ್ನ ಸ್ವರೂಪವೇ ಆಗಿ ಸ್ಥಿತಿಸಿದ್ದವಾಗಿದ್ದರೆ, ಯಾವಾಗಲೂ (ಬಿಡದೆ) ಇದ್ದುಕೊಂಡೇ ಇರುತ್ತಿದ್ದವು. ಇದಲ್ಲದೆ ಎಚ್ಚರಕನಸುಗಳು ಬಟ್ಟೆಗಳೇ ಮುಂತಾದವುಗಳ ಹಾಗೆ ನಿನ್ನನ್ನು ಬಿಟ್ಟುಹೋಗುತ್ತಿರುವದರಿಂದ[2] ನಿನ್ನ ಸ್ವರೂಪವಾಗಲಾರವು. ಯಾವದು ಏತರ ಸ್ವರೂಪವಾಗಿರುವದೋ ಅದು ಅದನ್ನು ಬಿಟ್ಟು ಹೋಗುವದು ಕಂಡುಬಂದಿಲ್ಲ. ಆದರೆ ಕನಸುಎಚ್ಚರಗಳು ಚೈತನ್ಯಮಾತ್ರವನ್ನು ಬಿಟ್ಟು ಹೋಗುತ್ತಿರುವವು. ಸುಷುಪ್ತಿಯಲ್ಲಿ ಸ್ವರೂಪವನ್ನು ಬಿಟ್ಟುಹೋಗುವದಾದರೆ ಅದು ನಷ್ಟವಾಯಿತೆಂದಾಗಲಿ ಇಲ್ಲವೆಂದಾಗಲಿ ಬಾಧ್ಯವೇ ಆಗಬೇಕು; ಏಕೆಂದರೆ ನಡುವೆ ಬಂದ ಅತದ್ಧರ್ಮಗಳು (ಈ) ಎರಡು ರೂಪವಾಗಿಯೂ (ಬಾಧಿತವಾಗುವದು) ಕಂಡಿದೆ. ಉದಾಹರಣೆಗೆ ಹಣ, ಬಟ್ಟೆ ಮುಂತಾದವುಗಳು ನಾಶವಾದದ್ದು ಕಂಡಿದೆ ; ಕನಸಿನಲ್ಲಿಯೂ ಭ್ರಾಂತಿಯಲ್ಲಿಯೂ ಕಂಡ ವಸ್ತುಗಳಾದರೋ ಇಲ್ಲವೆಂದಾಗುವದು ಕಂಡಿದೆ.[3]

---

1. ನಿರ್ವಿಕಾರನಾದವನಿಗೆ ಕನಸು, ಎಚ್ಚರ —ಎಂಬ ವಿಕಾರಗಳುಂಟೆಂಬುದು ವಿರುದ್ಧವಲ್ಲವೆ ? —ಎಂದು ಆಕ್ಷೇಪ.

2. ಬಟ್ಟೆಗಳನ್ನು ಪಾತಿಕೊಂಡರೂ ತೆಗೆದುಹಾಕಿದರೂ ನಮ್ಮ ಸ್ವರೂಪದಲ್ಲಿ ಯಾವ ವಿಕಾರವೂ ಆಗುವದಿಲ್ಲ; ಬಟ್ಟೆಗಳು ನಮ್ಮ ಸ್ವರೂಪವೂ ಅಲ್ಲ. ಹಾಗೆಯೇ ಎಚ್ಚರ ಕನಸುಗಳೂ ವ್ಯಭಿಚರಿತವಾಗುವದರಿಂದ ನಮ್ಮ ಸ್ವರೂಪವಲ್ಲ.

3. ಹೀಗೆಯೇ ಎಚ್ಚರಕನಸುಗಳು ನಷ್ಟವಾಗಲಿ ಇಲ್ಲವೆಂದಾಗಲಿ ಆಗಂತುಕವೆಂದೇ ಆಗುವದು.

ಆತ್ಮನ ಚೈತನ್ಯವು ಆಗಂತುಕವಲ್ಲ

(ಮೂಲ)

ನನು ಏವಂ ಭಗವನ್, ಚೈತನ್ಯಸ್ವರೂಪಮಪಿ ಆಗನ್ತುಕಂ ಪ್ರಾಪ್ತಮ್ । ಸ್ವಪ್ನಜಾಗರಿತಯೋರಿವ ಸುಷುಪ್ತೇ ಅನುಪಲಬ್ಧೇಃ। ಅಚೈತನ್ಯಸ್ವರೂಪೋ ವಾ ಸ್ಯಾಮ್ ಅಹಮ್ । ನ। ಪಶ್ಯ, ತದನುಪಪತ್ತೇಃ। ಚೈತನ್ಯಸ್ವರೂಪಂ ಚೇತ್ ಆಗನ್ತುಕಂ ಪಶ್ಯಸಿ, ಪಶ್ಯ। ನೈತತ್ ವರ್ಷಶತೇನಾಪಿ ಉಪಪತ್ತ್ಯಾ ಕಲ್ಪಯಿತುಂ ಶಕ್ನುಮೋ ವಯಮ್, ಅನ್ಯೋ ವಾ ಅಚೈತನ್ಯೋಽಪಿ। ಸಂಹತತ್ವಾತ್ ಸಾರಾರ್ಥ್ಯಮ್ ಅನೇಕತ್ವಂ ನಾಶಿತ್ವಂ ಚ ನ ಕೇನಚಿತ್ ವಾರಯಿತುಂ ಶಕ್ಯಮ್। ಅಸ್ವಾರ್ಥ್ಯಸ್ಯ ಸ್ವತಃಸಿದ್ಧ್ಯಭಾವಾತ್ ಇತಿ ಅವ್ಮೋಚಾಮ। ಚೈತನ್ಯಸ್ವರೂಪಸ್ಯ ತು ಆತ್ಮನಃ ಸ್ವತಃಸಿದ್ಧೇಃ, ಅನ್ಯಾನಪೇಕ್ಷತ್ವಮ್ [1]। ಅವ್ಯಭಿಚಾರಾತ್ ॥ ೫೫ ॥

(ಅರ್ಥ)

(ಶಿಷ್ಯ):– ಪೂಜ್ಯರೆ, ಹಾಗಾದರೆ ಚೈತನ್ಯಸ್ವರೂಪವೂ ನಡುವೆ ಬಂದದ್ದೆಂದಾಗುವದಲ್ಲ! ಏಕೆಂದರೆ ಸ್ವಪ್ನಜಾಗರಿತಗಳಂತೆ (ಅದು) ಸುಷುಪ್ತದಲ್ಲಿ ಕಾಣಿಸುವದಿಲ್ಲ.[2] ಅಥವಾ ನಾನು ಅಚೈತನ್ಯಸ್ವರೂಪನೇ ಎಂದಾಗುವದಲ್ಲ![3]

(ಗುರು):– ಹಾಗಲ್ಲ, (ಏಕೆಂದರೆ) ನೋಡು! ಅದು ಯುಕ್ತವಾಗುವದಿಲ್ಲ. ಚೈತನ್ಯಸ್ವರೂಪವು ನಡುವೆ ಬಂದದ್ದೆಂದು ತಿಳಿಯುವೆಯಾದರೆ, ತಿಳಿ. (ಆದರೆ ಚೈತನ್ಯಸ್ವರೂಪರಾದ) ನಾವು ಇದನ್ನು ನೂರುವರ್ಷಗಳು (ಕಳೆದರೂ) ಯುಕ್ತಿಯಿಂದ ಹೊಂದಿಸಲು ಅಶಕ್ತರಾಗಿರುತ್ತೇವೆ. ಅಚೈತನ್ಯನಾದ ಮತ್ತೆ ಯಾವನೇ

---

1. 'ಅನ್ಯಾನಪೇಕ್ಷತ್ವಮ್' ಎಂಬ ಮಾತಿನ ಮುಂದೆ 'ನ ಕೇನಚಿದ್ ವಾರಯಿತುಂ ಶಕ್ಯಮ್' (ಯಾರಿಂದಲೂ ತಪ್ಪಿಸಿಕೊಳ್ಳಲಾಗುವಂತಿಲ್ಲ) ಎಂಬ ವಾಕ್ಯವು ಅಚ್ಚಿನ ಪುಸ್ತಕದಲ್ಲಿದ್ದರೂ ಅವಶ್ಯವಿಲ್ಲ.

2. ಯಾವದು ಸ್ವರೂಪವನ್ನು ಬಿಟ್ಟುಹೋಗುವದೋ ಅದು ಧರಿಸುವ ವಸ್ತ್ರದಂತೆಯೂ ಸಂಪಾದಿಸಿದ ಧನದಂತೆಯೂ ಆಗಂತುಕವಾಗಿರುತ್ತವೆ ಎಂದು ನೀವೇ ಹೇಳಿದ್ದೀರಿ ಎಂದು ಭಾವ.

3. ಚೈತನ್ಯವೆಂದರೆ ಅರಿಯುವದು. ಕಾಣುವದು, ಕೇಳುವದು, ಯೋಚಿಸುವದು, ಅರಿತುಕೊಳ್ಳುವದು – ಇವೇ ಚೈತನ್ಯವು; ಇವು ಯಾವವೂ ಸುಷುಪ್ತಿಯಲ್ಲಿಲ್ಲವಾದ್ದರಿಂದ ನಾನು ಅಚೇತನನೆಂದೇ ಆಯಿತಲ್ಲ! –ಎಂದು ಭಾವ.

ಆಗಲಿ; (ಇದನ್ನು ಹೊಂದಿಸಲು) ಅಶಕ್ತನಾಗಿರುತ್ತಾನೆ;[1] ಏಕೆಂದರೆ ಸಂಹತನಾಗಿರುವದರಿಂದ ಮತ್ತೊಂದರ ಪ್ರಯೋಜನಕ್ಕಾಗಿರುವದೆಂಬುದನ್ನೂ ಅನೇಕ (ಅವಯವಗಳಿಂದ) ಕೂಡಿರಬೇಕೆಂಬುದನ್ನೂ ನಾಶಿಯಾಗಿರಬೇಕೆಂಬುದನ್ನೂ ತಪ್ಪಿಸಿಕೊಳ್ಳುವದಕ್ಕೆ ಯಾವನಿಂದಲೂ ಆಗಲಾರದು. ಏಕೆಂದರೆ ಯಾವದು ತನ್ನ ಪ್ರಯೋಜನಕ್ಕಾಗಿಲ್ಲವೋ ಅದು ಸ್ವತಃಸಿದ್ಧವಲ್ಲ (ಎಂದು ಹಿಂದೆಯೇ) ಹೇಳಿರುತ್ತೇವೆ. ಆತ್ಮನ ಚೈತನ್ಯಸ್ವರೂಪವೋ ಎಂದರೆ ಸ್ವತಃಸಿದ್ಧವಾಗಿರುವದರಿಂದ ಮತ್ತೊಂದನ್ನು ಬಯಸಿ ಸಿದ್ಧವಾಗತಕ್ಕದ್ದಲ್ಲ. ಏಕೆಂದರೆ ಅದು ವ್ಯಭಿಚರಿತವಾಗುವದಿಲ್ಲ.[2]

(ಮೂಲ)

ನನು ವ್ಯಭಿಚಾರೋ ದರ್ಶಿತೋ ಮಯಾ 'ಸುಷುಪ್ತೇ ನ ಪಶ್ಯಾಮಿ' ಇತಿ। ನ। ವ್ಯಾಹತತ್ವಾತ್। ಕಥಂ ವ್ಯಾಘಾತಃ? ಪಶ್ಯತ ಸ್ತ್ವ ನ ಪಶ್ಯಾಮಿ ಇತಿ ವ್ಯಾಹತಂ ವಚನಮ್। ನ ಹಿ ಕದಾಚಿತ್ ಭಗವನ್, ಸುಷುಪ್ತೇ ಮಯಾ ಚೈತನ್ಯಮ್ ಅನ್ಯದ್ವಾ ಕಿಂಚಿತ್ ದೃಷ್ಟವಮ್! ಪಶ್ಯನ್ ತರ್ಹಿ ಸುಷುಪ್ತೇ ತ್ವಮ್। ಯಸ್ಮಾತ್ ದೃಷ್ಟಮೇವ ಪ್ರತಿಷೇಧಸಿ, ನ ದೃಷ್ಟಿಮ್। ಯಾ ತವ ದೃಷ್ಟಿಃ ತತ್ ಚೈತನ್ಯಮ್ ಇತಿ ಮಯಾ ಉಕ್ತಮ್। ಯಯಾ ತ್ವಂ ವಿದ್ಯಮಾನಯಾ ನ ಕಿಂಚಿತ್ ದೃಷ್ಟವಮ್ ಇತಿ ಪ್ರತಿಷೇಧಸಿ ಸಾ ದೃಷ್ಟಿಃ ತ್ವಚ್ಚೈತನ್ಯಮ್ ॥ ೫೬ ॥

(ಅರ್ಥ)

(ಶಿಷ್ಯ):– ಸುಷುಪ್ತಿಯಲ್ಲಿ ನಾನು ಏನೂ ನೋಡುವದಿಲ್ಲ ಎಂಬ (ಚೈತನ್ಯಕ್ಕೂ) ವ್ಯಭಿಚಾರವನ್ನು[4] ನಾನು ತೋರಿಸಿಕೊಟ್ಟಿನಲ್ಲ!

---

1. ಅಚೇತನನಿಗೆ ಅರಿಯುವದಕ್ಕೆ ಆಗುವದಿಲ್ಲ, ಚೇತನನಾದವನು ಸ್ವರೂಪವು ಇಲ್ಲವಾಗುವದೆಂಬುದಿಲ್ಲ ಎಂದು ಅಭಿಪ್ರಾಯ.

2. ಇದನ್ನು ಶಿಷ್ಯನೇ ೧೯ನೆಯ ಖಂಡದಲ್ಲಿ ಒಪ್ಪಿಕೊಂಡಿದಾನೆ.

3. ಯಾವದರ ಸ್ವರೂಪವು ವ್ಯಭಿಚರಿತವಾಗುವದೋ ಅದು ಮಿಥ್ಯೆ; ಸತ್ಯವಾಗಿರುವ ವಸ್ತುವಿನ ಸ್ವರೂಪವು ಎಂದಿಗೂ ವ್ಯಭಿಚರಿತವಾಗುವದಿಲ್ಲ, ಅದೇ ಆ ವಸ್ತು.

4. ನನ್ನನ್ನು ಬಿಟ್ಟುಹೋಗುತ್ತದೆ ಎಂಬುವದನ್ನು, ಬೇರ್ಪಡುವದೆಂಬುದನ್ನು.

(ಗುರು):– ಹಾಗಲ್ಲ. ಏಕೆಂದರೆ ವ್ಯಾಹತವಾಗಿದೆ.[1] (ಇದು) ವ್ಯಾಹತವಾಗಿದೆ ಎಂಬುದು ಹೇಗೆ? ಎಂದರೆ ನೋಡುತ್ತಲೇ ಇದ್ದರೂ ನೋಡುವದಿಲ್ಲವೆಂಬ ಮಾತು ವ್ಯಾಹತವು.

(ಶಿಷ್ಯ):– ಪೂಜ್ಯರೆ, ಸುಷುಪ್ತದಲ್ಲಿ ನನಗೆ ಚೈತನ್ಯವಾಗಲಿ ಮತ್ತೊಂದಾಗಲಿ ಯಾವದೂ ಕಾಣಿಸಿದ್ದಿಲ್ಲವಲ್ಲ[2]!

(ಗುರು):– ಹಾಗಾದರೆ ಸುಷುಪ್ತದಲ್ಲಿ ನೀನು ನೋಡುವ(ನಾಗಿರುವೆ ಯೆಂದೇ ಆಯಿತು). ಏಕೆಂದರೆ ನೋಡಿದ (ವಸ್ತುವನ್ನು) ಇಲ್ಲವೆನ್ನುತ್ತೀಯೇ ಹೊರತು, ನೋಟವನ್ನು (ಇಲ್ಲವೆನ್ನುವ)ದಿಲ್ಲ. ಯಾವದು ನಿನ್ನ ನೋಟವೋ[3] ಅದೇ ಚೈತನ್ಯವು ಎಂದು ನಾನು ಹೇಳಿರುತ್ತೇನೆ. ಯಾವ (ನೋಟವು) ಇರುವದರಿಂದ (ಅದಕ್ಕೆ) ಮತ್ತೇನೂ ಕಾಣಿಸುವದಿಲ್ಲವೆನ್ನುವೆಯೋ ಆ ನೋಟವೇ ನಿನ್ನ ಚೈತನ್ಯವು.

ಆತ್ಮನು ಸ್ವತಃಸಿದ್ಧನು

(ಮೂಲ)

ತಸ್ಯ[4] ಸರ್ವತ್ರ ಅವ್ಯಭಿಚಾರಾತ್ ಕೂಟಸ್ಥನಿತ್ಯತ್ವಂ ಸಿದ್ಧಂ ಸ್ವತ ಏವ, ನ ಪ್ರಮಾಣಾಪೇಕ್ಷಯಾ। ಸ್ವತಃಸಿದ್ಧಸ್ಯ ಹಿ ಪ್ರಮಾತುಃ ಅನ್ಯಸ್ಯ ಪ್ರಮೇಯಸ್ಯ ಪರಿಚ್ಛಿತ್ತಿಂ ಪ್ರತಿ ಪ್ರಮಾಣಾಪೇಕ್ಷಾ। ಯಾ ತು ಅನ್ಯಾ[5] ಪರಿಚ್ಛಿತ್ತಿಃ ಅಪೇಕ್ಷ್ಯತೇ ಅನ್ಯಸ್ಯ ಅಪರಿಚ್ಛಿತ್ತಿರೂಪಸ್ಯ ಪರಿಚ್ಛೇದಾಯ, ಸಾ ಹಿ ನಿತ್ಯೈವ ಕೂಟಸ್ಥಾ ಸ್ವಯಂಜ್ಯೋತಿಃ ಸ್ವಭಾವಾ। ಆತ್ಮನಿ ಪ್ರಮಾತ್ವೇ[6] ನ ತಾಂ ಪ್ರತಿ ಪ್ರಮಾಣಾಪೇಕ್ಷಾ। ತತ್ಸ್ವಭಾವತ್ವಾತ್, ಯಥಾ ಪ್ರಕಾಶನಮ್ ಉಷ್ಣತ್ವಂ ವಾ

---

1. ತನಗೆತಾನೇ ವಿರುದ್ಧವಾದ ಮಾತು **ವ್ಯಾಹತ**ವೆನಿಸುವದು.

2. ಚೈತನ್ಯವು ಕಾಣಿಸದೆ ಇರುವದರಿಂದ ಇಲ್ಲವೆಂದು ಶಿಷ್ಯನು ತಪ್ಪಾಗಿ ತಿಳಿದು ಕೊಂಡಿರುತ್ತಾನೆ. ಆದರೆ ಚೈತನ್ಯವು ವಿಷಯವಲ್ಲದೆ ತಾನೇ ಸಿದ್ಧವಾಗಿವೆ ಎಂಬುದೇ ಗುರುವಿನ ಅಭಿಪ್ರಾಯ.

3. ವಸ್ತುವನ್ನು ನೋಡುವಾಗ ಚೈತನ್ಯಕ್ಕೆ ನೋಟವೆಂಬ ಹೆಸರು ಬರುತ್ತದೆ. ತನ್ನನಿದ್ರೆಯಲ್ಲಿ ಅರಿಯುವ ಸ್ವರೂಪವಿನೆ, ಅರಿಯತಕ್ಕ ವಸ್ತು ವಿಲ್ಲ– ಎಂಬುದನ್ನು ಗುರು ಸ್ಪಷ್ಟಪಡಿಸುತ್ತಿದ್ದಾನೆ. ಬೃ. ಭಾ. ೪–೩–೨೩ನ್ನು ನೋಡಿ.

4. 'ತರ್ಹಿ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

5. ಇದರ ಮುಂದೆ ಇರುವ 'ನಿತ್ಯಾ' ಎಂಬ ಅಚ್ಚಿನ ಪಾಠವು ಬೇಕಿಲ್ಲ.

6. 'ಪ್ರಮಾಣತ್ವೇ' ಎಂಬ ಅಚ್ಚಿನ ಪಾಠವು ತಪ್ಪು. ಇದರ ಮುಂದಿರುವ 'ಪ್ರಮಾತೃತ್ವೇ ವಾ' ಎಂಬ ಮಾತುಗಳನ್ನು ಕೈಬಿಟ್ಟಿದೆ. ಅನುವಾದದ ಟಪ್ಪಣಿಯನ್ನು ನೋಡಿ.

ಲೋಹೋದಕಾದಿಷು ಪರತಃ ಅಪೇಕ್ಷ್ಯತೇ ಅಗ್ನ್ಯಾದಿತ್ಯಾದಿಭ್ಯಃ।
ಅತತ್ಸ್ವಭಾವತ್ವಾತ್ । ನ ಅಗ್ನ್ಯಾದಿತ್ಯಾದೀನಾಂ ತದಪೇಕ್ಷಾ।
ಸರ್ವದಾ ತತ್ಸ್ವಭಾವತ್ವಾತ್ ॥ ೫೭ ॥

(ಅರ್ಥ)

ಆ (ಚೈತನ್ಯವು) ಎಲ್ಲಿಯೂ ಬೇರ್ಪಡದೆ ಇರುವದರಿಂದ ಕೂಟಸ್ಥ ನಿತ್ಯವೆಂದು ತನ್ನಿಂದಲೇ ಸಿದ್ಧವಾಗುತ್ತದೆ, ಪ್ರಮಾಣವನ್ನು ಬಯಸಿ (ಅದು ಸಿದ್ಧವಾಗಬೇಕಾದದ್ದಿರುವ)ದಿಲ್ಲ. ಹೇಗೆಂದರೆ ಸ್ವತಃಸಿದ್ಧನಾಗಿರುವ ಪ್ರಮಾತೃವಿಗೆ (ತನಗಿಂತ) ಬೇರೆಯಾಗಿರುವ ಪ್ರಮೇಯದ ಪರಿಚ್ಛಿತ್ತಿಗಾಗಿ[1] ಪ್ರಮಾಣದ ಅಪೇಕ್ಷೆಯಿರುತ್ತದೆ, ಆದರೆ ಅಪರಿಚ್ಛಿತ್ತಿರೂಪವಾಗಿರುವ[2] ಒಂದು ವಸ್ತುವಿನ ಪರಿಚ್ಛೇದಕ್ಕಾಗಿ ಯಾವ ಇನ್ನೊಂದು ಪರಿಚ್ಛಿತ್ತಿಯು ಬೇಕಾಗೆವದೋ, ಆ (ಪರಿಚ್ಛಿತ್ತಿಯು) ನಿತ್ಯವಾಗಿಯೂ ಕೂಟಸ್ಥವಾಗಿಯೂ ಸ್ವಯಂಜ್ಯೋತಿಃ ಸ್ವಭಾವವಾಗಿಯೂ ಇರಬೇಕಷ್ಟೆ.?[3] ಆತ್ಮನಲ್ಲಿ ಪ್ರಮಾತೃತ್ವವಿರುವಲ್ಲಿ ಅದಕ್ಕಾಗಿ ಪ್ರಮಾಣದ ಬಯಕೆಯಿರುವದಿಲ್ಲ.[4] ಏಕೆಂದರೆ (ಅದು) ಇವನ ಸ್ವಭಾವವೇ ಆಗಿರುತ್ತದೆ. ಇದಕ್ಕೊಂದು ವೃಷ್ಟ್ಯಾಂತ: ಬೆಳಕಾಗಲಿ ಬಿಸಿಯಾಗಲಿ(ಬೇಕಾದರೆ) ಕಬ್ಬಿಣ, ನೀರು– ಮುಂತಾದವುಗಳಿಗೆ (ಅವಕ್ಕಿಂತ) ಬೇರೆಯಾದ ಬೆಂಕಿ, ಸೂರ್ಯ– ಮುಂತಾದವರಿಂದ ಬರಬೇಕಾಗಿರುತ್ತದೆ. ಏಕೆಂದರೆ (ಆ ಬೆಳಕು ಬಿಸಿಗಳು) ಅವುಗಳ ಸ್ವಭಾವವಾಗಿರುವದಿಲ್ಲ. (ಆದರೆ) ಬೆಂಕಿ, ಸೂರ್ಯ– ಮುಂತಾದ (ವಸ್ತು)ಗಳಿಗೆ ಅಂಥ (ಮತ್ತೊಂದು ವಸ್ತುವಿನಿಂದ ಬೆಳಕುಬಿಸಿಗಳು ಬರಬೇಕೆಂಬ) ಅಪೇಕ್ಷೆಯಿರುವದಿಲ್ಲ. ಏಕೆಂದರೆ (ಬೆಳಕುಬಿಸಿಗಳು) ಯಾವಾಗಲೂ ಅವುಗಳ ಸ್ವಭಾವವಾಗಿಯೇ ಇರುತ್ತವೆ.

---

1. ಪರಿಚ್ಛಿತ್ತಿ, ಪರಿಚ್ಛೇದ– ಎಂಬ ಮಾತುಗಳನ್ನು ಗೊತ್ತುಪಡಿಸುವದು ಎಂಬರ್ಥದಲ್ಲಿ ಪ್ರಯೋಗಿಸುವರು. ಅರಿವು ಎಂದು ಕನ್ನಡಿಸಿಕೊಂಡರೆ ಈ ಸಂದರ್ಭಕ್ಕೆ ಸರಿಹೋಗುತ್ತದೆ.

2. ಅಜ್ಞಾತವಾಗಿರುವ, ಗೊತ್ತಾಗಿ ಅರಿಯಲ್ಪಡದ.

3. ಪ್ರಮೇಯವು ಅಜ್ಞಾತವಾಗಿರುವದರಿಂದ ಅದನ್ನು ಅರಿಯುವದಕ್ಕೆ ಜ್ಞಾನವು ಬೇಕು; ಆ ಜ್ಞಾನವು ಅನಿತ್ಯವಾದರೆ, ಅಥವಾ ಇದ್ದಂತೆ ಇರದೆಹೋದರೆ ಅದನ್ನು ಅರಿತ ಬಳಿಕವೂ ಜ್ಞಾತೃತ್ವವು ಹೋಗಿಬಿಡಬಹುದು. ಜ್ಞಾನವನ್ನು ಅರಿಯುವದಕ್ಕೆ ಜ್ಞಾನಾಂತರವು ಬೇಕಾದರೆ ಅನವಸ್ಥೆಯೂ ಆಗಬಹುದು.

4. 'ಪ್ರಮಾತೃತ್ವೇ ವಾ' ಎಂಬುದೂ ಇದ್ದರೆ 'ಪ್ರಮಾತೃತ್ವವಾದರೂ ಇರುವಲ್ಲಿ' ಎಂದು ಸೇರಿಸಿಕೊಳ್ಳಬೇಕು. ಮುಂದೆ ಪ್ರಮಾತೃತ್ವವೂ ನಿತ್ಯವೆಂದು ಹೇಳಿದೆ.

ಆತ್ಮನ ಅರಿವು ನಿತ್ಯವಾಗಿರುತ್ತದೆ

(ಮೂಲ)

ಅನಿತ್ಯತ್ವೇ ಏವ ಪ್ರಮಾ ಸ್ಯಾತ್, ನ ನಿತ್ಯತ್ವೇ ಇತಿ ಚೇತ್। ನ। ಅವಗತೇಃ ನಿತ್ಯತ್ವಾನಿತ್ಯತ್ವಯೋಃ ವಿಶೇಷಾನುಪಪತ್ತೇಃ। ನ ಹಿ ಅವಗತೇಃ ಪ್ರಮಾತ್ವೇ ಅನಿತ್ಯಾ ಅವಗತಿಃ ಪ್ರಮಾ ನ ನಿತ್ಯಾ– ಇತಿ ವಿಶೇಷಃ ಅವಗಮ್ಯತೇ। ನಿತ್ಯಾಯಾಂ ಪ್ರಮಾತುಃ ಅಪೇಕ್ಷಾಭಾವಃ, ಅನಿತ್ಯಾಯಾಂ ತು ಯತ್ನಾನ್ತರಿತತ್ವಾತ್ ಅವಗತಿಃ ಅಪೇಕ್ಷ್ಯತೇ ಇತಿ ವಿಶೇಷಃ ಸ್ಯಾತ್ ಇತಿ ಚೇತ್। ಸಿದ್ಧಾ ತರ್ಹಿ ಆತ್ಮನಃ ಪ್ರಮಾತುಃ ಸ್ವತಃಸಿದ್ಧಿಃ ಪ್ರಮಾಣನಿರಪೇಕ್ಷತಯೈವ ಇತಿ। ಅಭಾವೇಽಪಿ ಅಪೇಕ್ಷಾಭಾವಃ। ನಿತ್ಯತ್ವಾತ್ ಇತಿ ಚೇತ್। ನ। ಅವಗತೇರೇವ ಆತ್ಮನಿ ಸದ್ಭಾವಾತ್ ಇತಿ ಪರಿಹೃತಮೇತತ್ ॥ ೫೮ ॥

(ಅರ್ಥ)

(ಶಿಷ್ಯ):– ಅನಿತ್ಯವಾದದ್ದೇ ಪ್ರಮೆಯಾದೀತೇ ಹೊರತು ನಿತ್ಯವಾದರೆ ಆಗದು.[1]

(ಗುರು):– ಹಾಗಲ್ಲ. ಏಕೆಂದರೆ ನಿತ್ಯವಾಗಲಿ ಅನಿತ್ಯವಾಗಲಿ ಅರಿವಿನಲ್ಲಿ ವಿಶೇಷವೇನೂ ಆಗಲಾರದು. ಅರಿವೇ ಪ್ರಮೆಯಿಂದಾದಮೇಲೆ, ಅನಿತ್ಯವಾದ ಅರಿವು ಪ್ರಮೆ, ನಿತ್ಯವಾದದ್ದು (ಪ್ರಮೆ)ಯಲ್ಲ– ಎಂಬ ವಿಶೇಷವನ್ನು ನಿರ್ಣಯಿಸುವದಕ್ಕಾಗುವದಿಲ್ಲವಷ್ಟೆ.

(ಶಿಷ್ಯ):– (ಪ್ರಮೆಯು) ನಿತ್ಯವಾದರೆ (ವಿಷಯಜ್ಞಾನಕ್ಕೆ) ಪ್ರಮಾತೃವಿಗೆ(ಮತ್ತೇನೂ) ಬೇಕಿಲ್ಲ; (ಅದು) ಅನಿತ್ಯವಾದರೋ ಬೇರೊಂದು ಯತ್ನದಿಂದ (ಪ್ರಮೇಯವು ಸಿದ್ಧವಾಗಬೇಕಾಗುವದರಿಂದ) ಅರಿವು ಬೇಕಾಗುವದು– ಎಂಬ ವಿಶೇಷವಿರಬಹುದಲ್ಲ![2]

---

1. ಪ್ರಮೆ ಎಂದರೆ ವಿಷಯದ ಅರಿವು; ಅದು ಮೊದಲು ಇಲ್ಲದೆ ಇದ್ದು ಆಮೇಲೆ ಉಂಟಾಗಬೇಕು. ಏಕೆಂದರೆ ಅಜ್ಞಾತವಾದದ್ದನ್ನೇ ಅರಿಯಬೇಕೆಂದು ಬಯಸುತ್ತಾರೆ ಎಂದು ಭಾವ.

2 ಇಲ್ಲಿ ಶಿಷ್ಯನು ತನ್ನ ಭಾವವನ್ನು ಹೊರಗೆಡಹಿರುತ್ತಾನೆ.

(ಗುರು):– ಹಾಗಾದರೆ ಪ್ರಮಾತೃವಾದ ಆತ್ಮನು ಪ್ರಮಾಣಪನ್ನು ಬಯಸದೆಯೇ ಸ್ವತಃಸಿದ್ಧನೆಂದು ಏರ್ಪಡುತ್ತದೆ.[1]

(ಶಿಷ್ಯ):– (ಆತ್ಮನಲ್ಲಿ ಅರಿವು ನಿತ್ಯವಾಗಿ) ಇಲ್ಲದಿದ್ದರೂ ಯಾವ ಪ್ರಮಾಣವೂ ಬೇಕಿರುವದಿಲ್ಲವಲ್ಲ! ಏಕೆಂದರೆ (ಆಗಲೂ) ನಿತ್ಯನೇ ಆಗಿರುತ್ತಾನೆ.

(ಗುರು):– ಹಾಗಲ್ಲ. ಏಕೆಂದರೆ ಆತ್ಮನಲ್ಲಿ ಅರಿವೇ ಇರುತ್ತದೆ ಎಂದು ಈ (ಶಂಕೆಯನ್ನು) ಪರಿಹರಿಸಿದ್ದಾಗಿದೆ.[2]

ಪ್ರಮಾತೃವು ಪ್ರಮಾಣಸಿದ್ಧನೆಂಬ ಪಕ್ಷದಲ್ಲಿ ದೋಷ

(ಸೂ. ೪)

ಪ್ರಮಾತುಶ್ಚೇತ್ ಪ್ರಮಾ ಣಾಪೇಕ್ಷಾ ಸಿದ್ಧಿಃ, ಕಸ್ಯ ಪ್ರಮಿತ್ಸಾ ಸ್ಯಾತ್? ಯಸ್ಯ ಪ್ರಮಿತ್ಸಾ ಸ ಏವ ಪ್ರಮಾತಾ ಅಭ್ಯುಪಗಮ್ಯತೇ। ತದೀಯಾ ಚ ಪ್ರಮಿತ್ಸಾ ಪ್ರಮೇಯವಿಷಯೈವ ನ ಪ್ರಮಾತೃವಿಷಯಾ। ಪ್ರಮಾತೃವಿಷಯತ್ವೇ ಅನವಸ್ಥಾಪ್ರಸಙ್ಗಾತ್ ಪ್ರಮಾತುಃ ತದಿಚ್ಛಾಯಾಸ್ಸ। 'ತಸ್ಯಾಪ್ಯನ್ಯಃ ಪ್ರಮಾತಾ', 'ತಸ್ಯಾಪ್ಯನ್ಯಃ' ಇತಿ। ಅತಮೇವ ಇಚ್ಛಾಯಾಃ ಪ್ರಮಾತೃವಿಷಯತ್ವೇ। ಪ್ರಮಾತುಃ ಆತ್ಮನೋಽನ್ಯಾವಹಿತತ್ವಾಚ್ಚ ಪ್ರಮೇಯತ್ವಾನುಪಪತ್ತಿಃ। ಲೋಕೇ ಹಿ ಪ್ರಮೇಯಂ ನಾಮ ಪ್ರಮಾತುಃ ಇಚ್ಛಾಕೃತಿಪ್ರಯತ್ನಪ್ರಮಾಣ ಜನ್ಯವ್ಯವಹಿತಂ ಸಿಧ್ಯತಿ। ನಾನ್ಯಥಾ ಅಫಗತಿಃ ಪ್ರಮೇಯವಿಷಯಾ ವ್ಯಷ್ಟಾ। ನ ಚ ಪ್ರಮಾತುಃ ಪ್ರಮಾತಾ ಸ್ವಸ್ಯ ಸ್ವಯಮೇವ ಕೇನ ಚಿತ್ ವ್ಯವಹಿತಃ ಕಲ್ಪಯಿತುಂ ಶಕ್ಯಃ ಇಚ್ಛಾದೀನಾಮ್ ಅನ್ಯತಮೇನಾಪಿ। ಸ್ಮೃತಿಶ್ಚ ಸ್ಮರ್ತವ್ಯವಿಷಯಾ, ನ ಸ್ಮರ್ತೃವಿಷಯಾ।

---

1. ಪ್ರಮಾತೃವಿನ ವಿಷಯದಲ್ಲಿ ಪ್ರಮೆಯುಂಟಾಗಬೇಕಾದವ್ದೇ ಇಲ್ಲ; ಏಕೆಂದರೆ ಅವನಲ್ಲಿ ನಿತ್ಯವಾಗಿ ಪ್ರಮೆಯಿರುತ್ತದೆ. ಆದ್ದರಿಂದ ಪ್ರಮಾಣದ ಬಯಕೆಯೂ ಇಲ್ಲ ಎಂದು ಏರ್ಪಡುತ್ತದೆ. ಅಸಿದ್ಧವಾದವ್ದಕ್ಕೆ ಪ್ರಮೆ ಹೊಸದಾಗಿರಬೇಕು. ಪ್ರಮೆಯ ಸ್ವರೂಪವಾಗಿಯೇ ಇರುವ ಆತ್ಮನಿಗೆ ಏತಕ್ಕೆ ಬೇಕು?– ಎಂದು ಭಾವ. ಅರಿವು, ಅರಿಯುವಾತನು– ಎರಡೂ ಒಂದೇ ವಸ್ತು ಎಂದು ೨೨ನೇ ಖಂಡದಲ್ಲಿ ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

2. ಆತ್ಮನಲ್ಲಿ ನಿತ್ಯಚೈತನ್ಯವಿಲ್ಲವೆಂಬುದನ್ನು ೨೬ನೆಯ ಖಂಡದಲ್ಲಿ ಖಂಡಿಸಿದೆ.

ತಥಾ ಇಚ್ಛಾಯಾಃ ಇಷ್ಟವಿಷಯತ್ವಮೇವ, ನ ಇಚ್ಛಾವದ್ವಿಷಯತ್ವಮ್ । ಸ್ಮೃತೇರ್ಜ್ಞಾವದ್ವಿಷಯತ್ವೇಽಪಿ ಹಿ ಉಭಯೋಃ ಅನವಸ್ಥಾಪೂರ್ವವತ್ ಅಪರಿಹಾರ್ಯಾ ಸ್ಯಾತ್ ॥ ೫೯ ॥

(ಅರ್ಥ)

ಪ್ರಮಾತೃವು ಪ್ರಮಾಣದ ಅಪೇಕ್ಷೆಯಿಂದಲೇ ಸಿದ್ಧನಾಗುವನೆಂದರೆ, (ಅವನನ್ನು) ಪ್ರಮಾಣದಿಂದ ಅರಿತುಕೊಳ್ಳಬೇಕೆಂಬ ಇಚ್ಛೆಯು ಯಾರಿಗೆ ಆಗಬೇಕು ?[1] ಯಾವನಿಗೆ ಅರಿತುಕೊಳ್ಳಬೇಕೆಂಬ ಇಚ್ಛೆ(ಯಿರುವದೋ) ಅವನೇ ಪ್ರಮಾತೃವೆಂದು (ನಾವು) ಅಂಗೀಕರಿಸುತ್ತೇವೆ. ಆ (ಪ್ರಮಾತೃವಿಗೆ ಆಗುವ) ಅರಿಯಬೇಕೆಂಬ ಇಚ್ಛೆಯು ಪ್ರಮೇಯದ ವಿಷಯದಲ್ಲಿಯೇ ಹೊರತು ಪ್ರಮಾತೃವಿನ ವಿಷಯದಲ್ಲಲ್ಲ. ಏಕೆಂದರೆ (ಅವುಗಳು) ಪ್ರಮಾತೃವಿಷಯದಲ್ಲಿಯೂ ಉಂಟಾಗುವದಾದರೆ ಪ್ರಮಾತೃ ಮತ್ತು ಆ (ಪ್ರಮಾತೃವಿನ) ಇಚ್ಛೆ – ಇವುಗಳಿಗೆ ನಿಲುಗಡೆಯಿಲ್ಲದೆ ಹೋಗಬೇಕಾಗುವದು. (ಹೇಗೆಂದರೆ) ಆ (ಪ್ರಮಾತೃವಿಗೂ) ಮತ್ತೊಬ್ಬ ಪ್ರಮಾತೃ (ಬೇಕು), ಅವನಿಗೆ ಇನ್ನೊಬ್ಬ (ಪ್ರಮಾತೃ ಬೇಕು) –ಎಂದು (ಪ್ರಮಾತೃಗಳ ಸಾಲು ನಿಲುಗಡೆಯಿಲ್ಲದ್ದಾಗುವದು). ಹೀಗೆಯೇ ಇಚ್ಛೆಯು ಪ್ರಮಾತೃವಿನ ವಿಷಯವೆಂದರೂ (ಅದಕ್ಕೂ ನಿಲುಗಡೆ ಇಲ್ಲದೆ ಹೋಗುವದು.[2]

ಇದಲ್ಲದೆ ಪ್ರಮಾತೃವು ತನಗೆ (ತಾನು) ಅವ್ಯವಹಿತನಾಗಿರುವದರಿಂದಲೂ (ಇವನು) ಪ್ರಮೇಯನೆಂಬುದು ಯುಕ್ತವಾಗುವದಿಲ್ಲ.[3] ಹೇಗೆಂದರೆ ಲೋಕದಲ್ಲಿ ಪ್ರಮೇಯವೆಂಬುದು ಪ್ರಮಾತೃವಿನ ಇಚ್ಛೆ, ಸ್ಮೃತಿ, ಪ್ರಯತ್ನ, ಪ್ರಮಾಣವು ಹುಟ್ಟುವದು – ಇವುಗಳಿಂದ ವ್ಯವಹಿತವಾಗಿಯೇ ಸಿದ್ಧವಾಗುತ್ತದೆ. (ಹೀಗಿಲ್ಲದೆ) ಬೇರೆಯ ರೀತಿಯಿಂದ ಪ್ರಮೇಯದ ವಿಷಯದಲ್ಲಿ ಅರಿವಾದದ್ದು ಕಂಡು ಬಂದಿಲ್ಲ. ಆದರೆ ಪ್ರಮಾತೃವು ಪ್ರಮಾತೃವಾದ ತನಗೆ ತಾನೇ ಇಚ್ಛೆಯೇ ಮುಂತಾದವುಗಳಲ್ಲಿ ಯಾವದೊಂದರಿಂದಲೂ ವ್ಯವಹಿತನಾಗಿರುವನೆಂದು ಕಲ್ಪಿಸು

---

1. ಪ್ರಮಾತೃವಿನ ಇಚ್ಛೆಯಿಂದಲ್ಲಲ್ಲವೆ, ಪ್ರಮಾಣವ್ಯಾಪಾರವಾಗುವದು ? ಆದರೆ ಪ್ರಕೃತದಲ್ಲಿ ಅದಿಲ್ಲ.

2. ಪ್ರಮಾತೃವಿಗೆ ಮತ್ತೊಬ್ಬ ಪ್ರಮಾತೃ, ಅವನಿಗೆ ಮತ್ತೊಬ್ಬ ಎಂದಾಗುವಂತೆಯೇ ಪ್ರಮಾತೃವನ್ನರಿಯುವದಕ್ಕೆ ಮತ್ತೊಬ್ಬನ ಇಚ್ಛೆ, ಅವನನ್ನರಿಯುವದಕ್ಕೆ ಮತ್ತೊಬ್ಬನ ಇಚ್ಛೆ –ಹೀಗೆ ನಿಲುಗಡೆಯಿಲ್ಲದೆಹೋಗುವದು.

3. ತನಗೂ ಪ್ರಮೇಯಕ್ಕೂ ನಡುವೆಯಿದ್ದು ಪ್ರಮೇಯವನ್ನು ಮರೆಮಾಡಿರುವದು ವ್ಯವಧಾನವೆನಿಸುತ್ತದೆ. ಪ್ರಮೇಯವು ಅದರಿಂದ ಮರೆಯಾಗಿರುವದರಿಂದ ವ್ಯವಹಿತವೆನಿಸುತ್ತದೆ. ಆದರೆ ತನಗೆ ತಾನು ಏತರಿಂದಲೂ ಮರೆಯಾಗಿರುವದಿಲ್ಲ.

ವದಕ್ಕೆ ಆಗುವದಿಲ್ಲ.[1] ಸ್ಮೃತಿಯು ಸ್ಮರಿಸಿಕೊಳ್ಳಬೇಕಾದದ್ದರ ವಿಷಯವು ಸ್ಮರಿಸುವವನ ವಿಷಯವಲ್ಲ; ಹೀಗೆಯೇ ಇಚ್ಛೆಯೂ ಇಷ್ಟ(ವಸ್ತುವಿನ) ವಿಷಯವೇ ಹೊರತು ಇಚ್ಛೆಯುಳ್ಳಾತನ ವಿಷಯವಲ್ಲ. (ಇವು) ಸ್ಮರಿಸುವವನ ಮತ್ತು ಇಚ್ಛಾವಂತನ ವಿಷಯದಲ್ಲಿಯೂ (ಆಗುವವೆಂದರೆ) ಮೊದಲೇ (ಹೇಳಿರು) ವಂತೆ ಈ ಎರಡಕ್ಕೂ ಅನವಸ್ಥೆಯನ್ನು ತಪ್ಪಿಸಿಕೊಳ್ಳುವದಕ್ಕೆ ಆಗದೆ ಹೋಗುವದು.[2]

ಆತ್ಮನ ವಿಷಯದಲ್ಲಿ ಪ್ರಮೆಯುಂಟಾಗಬೇಕೆಂದರೆ ದೋಷ

(ಮೂಲ)

ನನು ಪ್ರಮಾತೃವಿಷಯಾವಗತ್ಯನುತ್ಪತ್ತೌ ಅನವಗತ ಏವ ಪ್ರಮಾತಾ ಸ್ಯಾದಿತಿ ಚೇತ್। ನ। ಅವಗನ್ತುರವಗತೇಃ ಅವಗನ್ತವ್ಯವಿಷಯತ್ವಾತ್। ಅವಗನ್ತೃವಿಷಯತ್ವೇ ಚ ಅನವಸ್ಥಾ ಪೂರ್ವವತ್ ಸ್ಯಾತ್। ಅವಗತಿರ್ತು ಆತ್ಮನಿ ಕೂಟಸ್ಥನಿತ್ಯಾತ್ಮ ಜ್ಯೋತಿಃ ಅನ್ಯತಃ ಅನಪೇಕ್ಷೈವ ಸಿದ್ಧಾ ಅಗ್ನ್ಯಾದಿತ್ಯಾದ್ಯುಷ್ಣಪ್ರಕಾಶವತ್ ಇತಿ ಪೂರ್ವಮೇವ ಪ್ರಸಾಧಿತಮ್। ಅವಗತೇಃ ಚೈತನ್ಯಾತ್ಮ ಜ್ಯೋತಿಷಃ ಸ್ವಾತ್ಮನಿ ಅನಿತ್ಯತ್ವೇ ಆತ್ಮನಃ ಸ್ವಾರ್ಥತಾನುಪಪತ್ತಿಃ। ಕಾರ್ಯಕರಣಸಂಘಾತವತ್[3] ಸಂಹತತ್ವಾತ್ ಪಾರಾರ್ಥ್ಯಂ ದೋಷವತ್ತ್ವಂ ಚ ಅವೋಚಾಮ। ಕಥಮ್? ಚೈತನ್ಯಾತ್ಮ ಜ್ಯೋತಿಷಃ ಸ್ವಾತ್ಮನಿ ಅನಿತ್ಯತ್ವೇ ಸ್ಮೃತ್ಯಾದಿವ್ಯವಧಾನಾತ್ ಸಾನ್ತರತ್ವಮ್। ತತಶ್ಚ ತಸ್ಯ ಚೈತನ್ಯಜ್ಯೋತಿಷಃ ಪ್ರಾಗುತ್ಪತ್ತೇಃ ಪ್ರಧ್ವಂಸಾಚ್ಚ ಊರ್ಧ್ವಮ್ ಆತ್ಮನ್ಯೇವ ಅಭಾವಾತ್, ಚಕ್ಷುರಾದೀನಾಮಿವ ಸಂಹತತ್ವಾತ್ ಪಾರಾರ್ಥ್ಯಂ ಸ್ಯಾತ್। ಯದಾ ಚ ತತ್

---

1. ತನ್ನನ್ನು ತಾನು ಅರಿಯಬೇಕೆಂದು ಇಚ್ಛಿಸುತ್ತಾನೆ, ತನ್ನನ್ನು ತಾನು ಸ್ಮರಿಸಿಕೊಳ್ಳುತ್ತಾನೆ, ಅರಿಯುವದಕ್ಕೆ ಯತ್ನಿಸುತ್ತಾನೆ, ಆಮೇಲೆ ಪ್ರಮಾಣವು ಹುಟ್ಟುತ್ತದೆ –ಎನ್ನುವದಕ್ಕಾಗುವದಿಲ್ಲ.

2. **ಅನವಸ್ಥೆ** ಎಂದರೆ ನಿಲುಗಡೆಯಿಲ್ಲದಿರುವದು. ನಿಲುಗಡೆಯಿಲ್ಲದ ಸಾಲಿನಲ್ಲಿ ಯಾವದೊಂದೂ ಸಿದ್ಧವಾಗಿರುವದಿಲ್ಲವಾದ್ದರಿಂದ ಅದರ ಬಲದಿಂದ ಮತ್ತೊಂದು ಸಿದ್ಧವಾಗಲಾರದೆ ಇರುತ್ತದೆ.

3. 'ಕಾರ್ಯಕಾರಣಸಂಘಾತವತ್' ಎಂಬ ಮೈ॥ ನಿ॥ ಪಾಠಗಳಿಗಿಂತ ಇದೇ ಉತ್ತಮ.

ಉತ್ಪನ್ನಮ್ ಆತ್ಮನಿ ವಿದ್ಯತೇ, ನ ತದಾ ಆತ್ಮನಃ ಸ್ವಾರ್ಥತ್ವಮ್। ತದ್ಭಾವಾಭಾವಾಪೇಕ್ಷಾ ಹಿ ಆತ್ಮಾನಾತ್ಮನೋಃ ಸ್ವಾರ್ಥತ್ವ ಪರಾರ್ಥತ್ವಸಿದ್ಧಿಃ। ತಸ್ಮಾತ್ ಆತ್ಮನಃ ಅನ್ಯನಿರಪೇಕ್ಷಮೇವ ನಿತ್ಯ ಚೈತನ್ಯಜ್ಯೋತಿಷ್ಟ್ವಂ ಸಿದ್ಧಮ್ ॥ ೬೦ ॥

(ಅರ್ಥ)

(ಶಿಷ್ಯ):– ಪ್ರಮಾತೃವಿನ ವಿಷಯದಲ್ಲಿ ಅರಿವು ಉಂಟಾಗದೆ ಇರುವ ದಾದರೆ, ಪ್ರಮಾತೃವನ್ನು ಅರಿತಂತೆಯೇ ಆಗುವದಿಲ್ಲವಲ್ಲ!

(ಗುರು):– ಹಾಗಲ್ಲ. ಏಕೆಂದರೆ, ಅರಿಯುವಾತನ ಅರಿವಿಗೆ ಅರಿಯಲ್ಪಡುವ (ವಸ್ತುವೇ) ವಿಷಯವಾಗಿರುತ್ತದೆ.[1] ಅರಿಯುವಾತನ ವಿಷಯದಲ್ಲಿಯೂ (ಅರಿವು ಇರುವ)ದೆಂದರೆ ಹಿಂದೆ ಹೇಳಿದಂತೆ ಆನವಸ್ಥೆಯಾದೀತು.[2] ಇದಲ್ಲದೆ ಆತ್ಮನಲ್ಲಿ ಅರಿವು ಕೂಟಸ್ಥವಾಗಿ, ನಿತ್ಯವಾಗಿ, ಸ್ವಯಂಜ್ಯೋತಿಯಾಗಿ ಮತ್ತೊಂದರ ಅಪೇಕ್ಷೆಯಿಲ್ಲದೆಯೇ ಬೆಂಕಿ, ಸೂರ್ಯ – ಮುಂತಾದವುಗಳ ಬಿಸಿಬೆಳಕು ಮುಂತಾದವುಗಳಂತೆ (ತಾನೇ) ಸಿದ್ಧವಾಗಿರುವದೆಂದು ಮೊದಲೇ ತೋರಿಸಿಕೊಟ್ಟಿರುತ್ತದೆ.[3] ಚೈತನ್ಯರೂಪವಾಗಿ ಸ್ವಯಂಪ್ರಕಾಶವಾಗಿರುವ ಅರಿವು ತನ್ನ ಆತ್ಮನಲ್ಲಿ ನಿತ್ಯವಾಗಿರುವದಿಲ್ಲವೆಂದರೆ, ಆತ್ಮನು ತನಗಾಗಿ ತಾನು ಇರುವನೆಂಬುದು ಹೊಂದುವದಿಲ್ಲ; ಕಾರ್ಯಕರಣಸಂಘಾತದಂತೆ (ಇವನೂ ಸಂಹತನಾಗಿರುವದರಿಂದ ಮತ್ತೊಂದರ ಪ್ರಯೋಜನಕ್ಕಾಗಿರುವನೆಂಬ ದೋಷವನ್ನೂ ಹೇಳಿರುತ್ತೀವೆ.[4] ಹೇಗೆಂದರೆ, ಚೈತನ್ಯರೂಪವಾಗಿರುವ ಈ ಸ್ವಯಂಪ್ರಕಾಶವು ತನ್ನ ಆತ್ಮನಲ್ಲಿ ನಿತ್ಯವಾಗಿಲ್ಲದಿದ್ದರೆ ಸ್ಮೃತಿಯೇ ಮುಂತಾದವುಗಳ ವ್ಯವಧಾನವಿರುವದರಿಂದ (ಅದು ಆತ್ಮನಿಗೆ) ದೂರವಾಗಿದೆ ಎಂದಾಗುವದು. ಆದ್ದರಿಂದ ಆ ಚೈತನ್ಯರೂಪವಾದ ಬೆಳಕು ಹುಟ್ಟುವದಕ್ಕೆ ಮೊದಲೂ ನಾಶವಾದ ಬಳಿಕವೂ ಆತ್ಮನಲ್ಲಿಯೇ ಇಲ್ಲದ್ದರಿಂದ (ಆತ್ಮನು) ಕಣ್ಣು ಮುಂತಾದವುಗಳಂತೆ ಸಂಹತನಾಗಿರುವ(ನೆಂದಾಗುವದರಿಂದ) ಮತ್ತೊಂದರ ಪ್ರಯೋಜನಕ್ಕಾಗಿರುವನೆಂದಾಗುವದು. ಮತ್ತು ಅದು ಹುಟ್ಟಿದಮೇಲೆ ಆತ್ಮನಲ್ಲಿ ಇರುವದೆಂದು ಯಾವಾಗ

---

1. ಅರಿಯುವಾತನೂ ವಿಷಯನಲ್ಲ.

2. ಪ್ರಮಾತೃ, ಆ ಪ್ರಮಾತೃವಿನ ಇಚ್ಛೆ – ಮುಂತಾದವುಗಳ ಸಾಲು ಸಲುಗಡೆಯಿಲ್ಲದೆ ಬೇಕಾದೀತು.

3. ಇದನ್ನು ೨೮ನೆಯ ಖಂಡದಲ್ಲಿ ವಸ್ತುವಿನ ಸ್ವಭಾವವು ಮತ್ತೊಂದರಿಂದ ಬರತಕ್ಕ ದ್ದಲ್ಲವೆಂದು ತೋರಿಸಿಕೊಟ್ಟಿದೆ.

4. ಅಚೇತನವಾದದ್ದೂ ಸಂಹತವೂ ಪರಾರ್ಥವೂ ಆಗಿರುವದೆಂದು ೪೦ನೆಯ ಖಂಡದಲ್ಲಿ ತಿಳಿಸಿಕೊಟ್ಟಿದೆ.

(ಹೇಳುವೆವೋ) ಆಗ ಆತ್ಮನು ತನಗೆ ತಾನು ಇರತಕ್ಕವನಲ್ಲ. ಏಕೆಂದರೆ ಆ (ಚೈತನ್ಯವು) ಇರುವದು, ಇಲ್ಲದಿರುವದು – ಇದರ ಅಪೇಕ್ಷೆಯಿಂದಲೇ ಅಲ್ಲವೆ, ಆತ್ಮಾನಾತ್ಮಗಳು ಸ್ವಾರ್ಥಪರಾರ್ಥವಾಗಿರುವದೆಂದು ಸಿದ್ಧಿಸುವದು?[1] ಆದ್ದರಿಂದ ಆತ್ಮನು ಮತ್ತೊಂದನ್ನು ಬಯಸದೆಯೇ ನಿತ್ಯಚೈತನ್ಯಜ್ಯೋತಿಯಾಗಿರುವನೆಂದು ಸಿದ್ಧವಾಯಿತು.

ಆತ್ಮನಲ್ಲಿರುವ ಪ್ರಮಾತೃತ್ವವು ಔಪಚಾರಿಕ

(ಮೂಲ)

ನನು ಏವಂ ಸತಿ, ಅಸತಿ ಪ್ರಮಾಶ್ರಯತ್ವೇ ಕಥಂ ಪ್ರಮಾತುಃ ಪ್ರಮಾತೃತ್ವಮ್ ? ಉಚ್ಯತೇ। ಪ್ರಮಾಯಾಃ ನಿತ್ಯತ್ವೇ ಅನಿತ್ಯತ್ವೇ ಚ ರೂಪವಿಶೇಷಾಭಾವಾತ್। ಅವಗತಿರ್ಹಿ ಪ್ರಮಾ। ತಸ್ಯಾಃ ಸ್ಮೃತೀಚ್ಛಾದಿ ಪೂರ್ವಿಕಾಯಾಃ ಅನಿತ್ಯಾಯಾಃ ಕೂಟಸ್ಥನಿತ್ಯಾಯಾ ವಾ ನ ಸ್ವರೂಪವಿಶೇಷೋ ವಿದ್ಯತೇ। ಯಥಾ ಧಾತ್ವರ್ಥಸ್ಯ ತಿಷ್ಠತ್ಯಾದೇಃ ಫಲಸ್ಯ ಗತ್ಯಾದಿಪೂರ್ವಕಸ್ಯ ಅನಿತ್ಯಸ್ಯ ಅಪೂರ್ವಸ್ಯ ನಿತ್ಯಸ್ಯ ವಾ ರೂಪವಿಶೇಷೋ ನಾಸ್ತಿ ಇತಿ ತುಲ್ಯೋ ವ್ಯಪದೇಶೋ ದೃಷ್ಟಃ 'ತಿಷ್ಠನ್ತಿ ಮನುಷ್ಯಾಃ', 'ತಿಷ್ಠನ್ತಿ ಪರ್ವತಾಃ' ಇತ್ಯಾದಿ, ತಥಾ, ನಿತ್ಯಾವಗತಿಸ್ವರೂಪೇಽಪಿ ಪ್ರಮಾತರಿ ಪ್ರಮಾತೃತ್ವವ್ಯಪದೇಶೋ ನ ವಿರುಧ್ಯತೇ। ಫಲಸಾಮಾನ್ಯಾತ್ ಇತಿ ॥ ೬೧ ॥

(ಅರ್ಥ)

(ಶಿಷ್ಯ):– ಹಾಗಾದರೆ ಪ್ರಮೆಗೆ ಆಶ್ರಯನಲ್ಲದೆ ಇದ್ದರೆ (ಈ) ಪ್ರಮಾತೃವು ಪ್ರಮಾತೃವೆಂಬುದು ಹೇಗೆ?[2]

---

1. ಆತ್ಮನಿಗೆ ಚೈತನ್ಯವಿರುವದರಿಂದ ಅವನು ಸ್ವಾರ್ಥನು, ಅದು ಇಲ್ಲದ್ದರಿಂದಲೇ ಅನಾತ್ಮವು ಪರಾರ್ಥವು. ಹೀಗಿರುವದರಿಂದ ಆತ್ಮನಿಗೂ ಚೈತನ್ಯವಿಲ್ಲದಿರುವದೂ ಉಂಟು ಎಂದಾದರೆ ಅವನೂ ಪರಾರ್ಥನೆಂದಾಗುವದು. ಇವೆಲ್ಲ ತರ್ಕವು. ಆತ್ಮನಿಗೆ ಚೈತನ್ಯವಿಲ್ಲ ವೆಂಬುದು ಅನುಭವವಿರುದ್ಧವೆಂಬುದನ್ನು ಮುಖ್ಯವಾಗಿ ನೆನಪಿಡಬೇಕು.

2. ಪ್ರಮೆಗೆ ವಿಷಯನಲ್ಲದೆ ಪ್ರಮಾತೃವನ್ನು ಅರಿತನೆಂಬುದೇ ಇಲ್ಲವಾಗುವದಲ್ಲ! –ಎಂಬ ಆಕ್ಷೇಪಕ್ಕೆ ಸಮಾಧಾನವಾಯಿತು. ಅರಿಯುವನೆಂಬ ಕ್ರಿಯೆ ಹೊಸದಾಗಿ ಹುಟ್ಟಿದಿದ್ದರೆ ಪ್ರಮಾತೃ, ಅರಿಯುವವನು, ಎಂದು ಕರೆಯುವನು ಹೇಗೆ? –ಎಂಬ ಆಕ್ಷೇಪಕ್ಕೆ ಈಗ ಸಮಾಧಾನವನ್ನು ಹೇಳುವದಕ್ಕೆ ತೊಡಗಿರುತ್ತಾರೆ.

(ಗುರು):– (ಅದನ್ನು) ಹೇಳುತ್ತೇನೆ, (ಕೇಳು). ಪ್ರಮೆಯು ನಿತ್ಯವಾಗಲಿ ಅನಿತ್ಯವಾಗಲಿ (ಅದರ) ರೂಪದಲ್ಲಿ (ಯಾವ) ವಿಶೇಷವೂ ಇರುವದಿಲ್ಲ. ಹೇಗೆಂದರೆ, ಅರಿವೇ ಪ್ರಮೆಯೆಂಬುದು. ಆ (ಅರಿವು) ಸ್ಮೃತಿ, ಇಚ್ಛೆ – ಮುಂತಾದವುಗಳು ಉಂಟಾದಮೇಲೆ (ಹುಟ್ಟುವ) ಅನಿತ್ಯ(ಪದಾರ್ಥ)ವೇ ಆಗಲಿ, ಕೂಟಸ್ಥ ನಿತ್ಯ(ಪದಾರ್ಥವೇ) ಆಗಲಿ, (ಅರಿವೆಂಬ ಅದರ) ಸ್ವರೂಪದಲ್ಲಿ ಯಾವ ಹೆಚ್ಚು ಕಡಿಮೆಯೂ ಇರುವದಿಲ್ಲ. ಹೇಗೆ ನಿಲ್ಲು ಮುಂತಾದ ಧಾತುವಿನ ಅರ್ಥವು ಓಡಾಡಿದಮೇಲೆ (ನಿಲ್ಲುವದೆಂಬ) ಹೊಸ(ದಾಗಿ ಹುಟ್ಟುವ) ಅನಿತ್ಯಫಲವೇ ಆಗಲಿ, ಯಾವಾಗಲೂ (ನಿಂತಿರುವದೆಂಬುದಾಗಲಿ) (ಅದರ) ರೂಪದಲ್ಲಿ ವಿಶೇಷವಿರುವದಿಲ್ಲವಾದ್ದರಿಂದ 'ಮನುಷ್ಯರು ನಿಂತಿದ್ದಾರೆ', 'ಪರ್ವತಗಳು ನಿಂತಿವೆ' ಎಂದು ಮುಂತಾಗಿ ಸಮವಾಗಿಯೇ (ವಾಕ್ಯ)ವ್ಯವಹಾರವು ಕಂಡುಬರುತ್ತದೆಯೋ ಹಾಗೆ ನಿತ್ಯಾನಗತಿಯ ಸ್ವರೂಪವಾಗಿರುವ[1] ಪ್ರಮಾತೃವಿನಲ್ಲಿಯೂ ಪ್ರಮಾತೃತ್ವವ್ಯವಹಾರ(ವನ್ನು ಮಾಡುವದು) ವಿರುದ್ಧವಲ್ಲ; ಏಕೆಂದರೆ (ನಿತ್ಯವಾಗಲಿ ಅನಿತ್ಯವಾಗಲಿ ಅರಿವಿನ ರೂಪವು) ಫಲವು (ಎರಡಕ್ಕೂ) ಸಮಾನವಾಗಿರುತ್ತದೆ.

ಪ್ರಮಾತೃವಿಷಯದಲ್ಲಿ ಆಕ್ಷೇಪಸಮಾಧಾನಗಳು

(ಮೂಲ)

ಅತ್ರಾಪರಿಶಿಷ್ಯತೇ — ನಿತ್ಯಾನಗತಿಸ್ವರೂಪಸ್ಯಾತ್ಮನಃ ಅವಿಕ್ರಿಯತ್ವಾತ್ ಕಾರ್ಯಕರಣೈಃ ಅಸಂಹತ್ಯ ತಕ್ಷಾದೀನಾಮಿವ ವಾಸ್ಯಾದಿಭಿಃ ಕರ್ತೃತ್ವಂ ನೋಪಪದ್ಯತೇ। ಅಸಂಹತಸ್ವಭಾವಸ್ಯ ಚ ಕಾರ್ಯಕರಣೋಪಾದಾನೇ ಅನವಸ್ಥಾ ಪ್ರಸಜ್ಯತೇ। ತಕ್ಷಾದೀನಾಂ ತು ಕಾರ್ಯಕರಣೈಃ ನಿತ್ಯಮೇವ ಸಂಹತತ್ವಮ್ ಇತಿ ವಾಸ್ಯಾದ್ಯುಪಾದಾನೇ ನಾನವಸ್ಥಾ ಸ್ಯಾತ್[2]। ಇಹ ತು ಅಸಂಹತಸ್ವಭಾವಸ್ಯ ಕರಣಾನುಪಾದಾನೇ ಕರ್ತೃತ್ವಂ ನೋಪಪದ್ಯತೇ ಇತಿ ಕರಣಮ್ ಉಪಾದೇಯಮ್। ತದುಪಾದಾನಮಪಿ ಕ್ರಿಯೈವ[3] ಇತಿ ತತ್ಕರ್ತೃತ್ವೇ

---

1. ನಿತ್ಯಚೈತನ್ಯಸ್ವಭಾವವುಳ್ಳ ಎಂದರ್ಥ. ಆತ್ಮನಲ್ಲಿ ಹೊಸದಾಗಿ ಅರಿವು ಬಂದು ಸೇರಿಕೊಂಡೇ ಪ್ರಮಾತೃವೆನಿಸಬೇಕಾದವೆನೂ ಇಲ್ಲ ಎಂದು ಭಾವ.

2. ಇಲ್ಲಿ 'ಇತಿ' ಎಂಬ ಪೂತು ಅಚ್ಚಿನ ಪಾಠದಲ್ಲಿದ್ದರೂ ಲೇಖಕರ ಕೈತಪ್ಪಿನಿಂದ ಬಿದ್ದಿದೆ ಎಂದು ಅದನ್ನು ಬಿಟ್ಟಿದೆ.

3. 'ಅವಿಕ್ರಿಯೈವ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ಕರಣಾನ್ತರಮ್ ಉಪಾದೇಯಮ್, ತದುಪಾದಾನೇಽಪಿ ಅನ್ಯತ್ ಇತಿ ಪ್ರಮಾತುಃ ಸ್ಯಾತ್ತನ್ತ್ರ್ಯೇ ಅನವಸ್ಥಾ ಅಪರಿಹಾರ್ಯಾ ಸ್ಯಾತ್ ಇತಿ[1] ॥ ೬೨ ॥

(ಅರ್ಥ)

(ಶಿಷ್ಯ):– ನಿತ್ಯಾವಗತಿಸ್ವರೂಪನಾಗಿರುವ ಆತ್ಮನು ನಿರ್ವಿಕಾರನಾದ್ದರಿಂದ ಬಡಗಿ ಮುಂತಾದವರು ಬಾಚಿ ಮುಂತಾದವುಗಳೊಡನೆ ಸೇರಿಕೊಳ್ಳದೆ ಇದ್ದರೆ ಹೇಗೆ (ಕೆತ್ತುವದೇ ಮುಂತಾದ ಕ್ರಿಯೆಗೆ ಕರ್ತೃವಾಗಲಾರರೋ ಹಾಗೆ) ಕಾರ್ಯ ಕರಣಗಳೊಡನೆ ಸಂಹತನಾಗದೆ ಇದ್ದರೆ ಆತ್ಮನು ಕರ್ತೃವೆಂಬುದೇ ಹೊಂದುವದಿಲ್ಲ – ಮತ್ತು ಸಂಹತನಲ್ಲದಿರುವದೇ ಸ್ವಭಾವವಾಗಿರುವ ಆತ್ಮನು ಕಾರ್ಯ ಕರಣಗಳನ್ನು ಸ್ವೀಕರಿಸಿದರೆ ಅನವಸ್ಥಾ(ದೋಷವು) ಬಂದೊದಗುವದು. ಬಡಗಿ ಮುಂತಾದವರು ಯಾವಾಗಲೂ ಕಾರ್ಯಕರಣಗಳೊಡನೆ ಸಂಹತರಾಗಿರುವದರಿಂದ ಅವರು ಬಾಚಿಯೇ ಮುಂತಾದವನ್ನು ತೆಗೆದುಕೊಳ್ಳುವಾಗ ಯಾವ ಅನವಸ್ಥೆಯೂ ಆಗುವದಿಲ್ಲ. ಆದರೆ ಇಲ್ಲಿಯೋ ಎಂದರೆ, ಅಸಂಹತಸ್ವಭಾವವ (ಆತ್ಮನು) ಕರಣವನ್ನು ತೆಗೆದುಕೊಳ್ಳದೆ ಇದ್ದರೆ (ಅವನಿಗೆ) ಕರ್ತೃತ್ವವು ಹೊಂದಲಾರದಾದ್ದರಿಂದ (ಕರ್ತೃವಾಗುವದಕ್ಕೆ) ಕರಣವನ್ನು ಸ್ವೀಕರಿಸಬೇಕಾಗುವದು. ಆ (ಕರಣವನ್ನು) ತೆಗೆದುಕೊಳ್ಳುವದೆಂಬುದೂ (ಒಂದು) ಕ್ರಿಯೆಯೇ ಆದ್ದರಿಂದ ಆ (ಕ್ರಿಯೆಗೆ)[3] ಕರ್ತೃವಾಗುವದಕ್ಕೆ ಮತ್ತೊಂದು ಕರಣವನ್ನು ತೆಗೆದುಕೊಳ್ಳಬೇಕಾಗುವದು, ಅದನ್ನು ತೆಗೆದುಕೊಳ್ಳುವದಕ್ಕೂ ಮತ್ತೊಂದನ್ನು (ತೆಗೆದುಕೊಳ್ಳಬೇಕಾಗುವದು) –ಹೀಗೆ ಪ್ರಮಾತೃವು ಕರ್ತೃವಾಗುವ (ವಿಷಯ)ದಲ್ಲಿ[4] ಅನವಸ್ಥೆಯನ್ನು ತಪ್ಪಿಸಿಕೊಳ್ಳುವದಕ್ಕೆ ಆಗಲಾರದಲ್ಲ !

(ಮೂಲ)

[ನೈವಂ ಸ್ಯಾತ್ । ನಿತ್ಯಾವಗತಿಸ್ವರೂಪಸ್ಯೈವ ಆತ್ಮನಃ ಪ್ರಮಾತೃತ್ವಾಭ್ಯುಪಗಮಾತ್ ತತ್ಕರ್ತೃತ್ವಸ್ಯಾಪಿ ಉಪಚರಿತತ್ವೋಪ

1. 'ಇಹ ತು' ಎಂಬಲ್ಲಿಂದ ಇಲ್ಲಿಯವರೆಗಿನ ಭಾಗವನ್ನು ಗುರುವಿನ ವಾಕ್ಯಕ್ಕೆ ಸೇರಿದಂತೆ ವಿಭಾಗಿಸಿರುವ ವ್ಯಾಖ್ಯಾನಕಾರರ ವಿಂಗಡವು ಸರಿಯಲ್ಲ. ಮುಂದಿನ ಖಂಡದ ಮೂಲವನ್ನೂ ಅನುವಾದವನ್ನೂ ಅವರ ಟಿಪ್ಪಣಿಯನ್ನೂ ನೋಡಿರಿ.

2. ಪ್ರಮಾತೃ ಎಂದರೆ ಪ್ರಮಾಕರ್ತೃ; ಪ್ರಮಾಣವಾದ ಕರಣವನ್ನು ವ್ಯಾಪಾರಗೊಳಿಸದೆ ಇದ್ದರೆ ಆತ್ಮನು ಪ್ರಮಾತೃವಾಗಲಾರನು ಎಂದು ಭಾವ.

3. ಕರಣವನ್ನು ತೆಗೆದುಕೊಳ್ಳುವದೆಂಬ ಕ್ರಿಯೆಗೆ.

4. ಕರಣವನ್ನು ವ್ಯಾಪಾರಮಾಡಿಸುವ ಕ್ರಿಯೆಯನ್ನು ಮಾಡಿಸುವ ವಿಷಯದಲ್ಲಿ.

ಪತ್ತೇಃ। ಯದಿ ಹಿ ಆತ್ಮನಃ ಮುಖ್ಯಮೇವ ಕರ್ತೃತ್ವಮ್ ಅಭ್ಯುಪಗಮ್ಯೇತ, ತದಾ ಅಸ್ಯ ಕರ್ತೃತ್ವಂ ಸ್ವಭಾವತ ಏವ ಸ್ಯಾತ್, ಕ್ರಿಯೈವ ವಾ ತಂ ಪ್ರೇರಯೇತ್, ಅನ್ಯದೇವ ವಾ ತಮುಪೇತ್ಯ ಕ್ರಿಯಾಂ ಕಾರಯೇತ್। ನ ತಾವತ್ ಅಸ್ಯ ನಿತ್ಯಕರ್ತೃತ್ವಂ ಸಂಭವತಿ। ಕೂಟಸ್ಥಾವಗತಿಸ್ವರೂಪತ್ವಾತ್।]¹ ನ ಚ ಕ್ರಿಯೈವ ಆತ್ಮಾನಂ ಕಾರಯತಿ। ಅನಿರ್ವರ್ತಿತಾಯಾಃ ಸ್ವರೂಪಾಭಾವಾತ್। ಅಥ ಅನ್ಯತ್ ಆತ್ಮಾನಮ್ ಉಪೇತ್ಯ ಕ್ರಿಯಾಂ ಕಾರಯತಿ ಇತಿ ಚೇತ್। ನ। ಅನ್ಯಸ್ಯ ಸ್ವತಃಸಿದ್ಧತ್ವಾದ್ವಿಷಯಾತ್ವಾದ್ಯನುಪಪತ್ತೇಃ। ನ ಹಿ ಆತ್ಮನಃ ಅನ್ಯತ್ ಅಚೇತನಂ ವಸ್ತು ಸ್ವಪ್ರಮಾಣಕಂ ವೃಷ್ಟವ್ಯಮ್। ಶಬ್ದಾದಿಸರ್ವಮೇವ ಅವಗತಿಫಲಾವಸಾನಪ್ರತ್ಯಯಪ್ರಮಿತಂ ಸಿದ್ಧಂ ಸ್ಯಾತ್, ಅವಗತಿಶ್ಚೇತ್ ಆತ್ಮನೋಽನ್ಯಸ್ಯ ಸ್ಯಾತ್ ಸೋಽಪಿ ಆತ್ಮೈವ ಅಸಂಹತಃ ಸ್ವಾರ್ಥಃ ಸ್ಯಾತ್, ನ ಪರಾರ್ಥಃ। ನ ಚ ದೇಹೇನ್ದ್ರಿಯವಿಷಯಾಣಾಂ ಸ್ವಾರ್ಥತಾಮ್ ಅವಗನ್ತುಂ ಶಕ್ನುಮಃ। ಅವಗತ್ಯವಸಾನಪ್ರತ್ಯಯಾಪೇಕ್ಷಸಿದ್ಧಿದರ್ಶನಾತ್ ॥ ೬೩ ॥

(ಅರ್ಥ)

[ಹಾಗಲ್ಲ. ಏಕೆಂದರೆ ನಿತ್ಯಾವಗತಿಸ್ವರೂಪನಾಗಿರುವ ಆತ್ಮನೇ ಪ್ರಮಾತೃ ವೆಂದು ಒಪ್ಪಿರುವದರಿಂದ ಅವನು ಕರ್ತೃವೆಂಬುದು ಉಪಚಾರದ (ಮಾತೇ) ಎಂದಾಗಬಹುದು. ಆತ್ಮನು ಮುಖ್ಯವಾದ (ಅರ್ಥದಲ್ಲಿಯೇ) ಕರ್ತೃ ಎಂದು ಇಟ್ಟುಕೊಳ್ಳುವದಾದರೆ, ಆಗ ಅವನ ಕರ್ತೃತ್ವವು ಸ್ವಭಾವದಿಂದಲೇ ಇರಬೇಕು; ಅಥವಾ ಕ್ರಿಯೆಯೇ ಆ (ಆತ್ಮನನ್ನು) ಪ್ರೇರಿಸುತ್ತದೆ (ಎನ್ನಬೇಕು); ಅಥವಾ ಮತ್ತೆ (ಯಾವದೋ ಒಂದು) ಅವನನ್ನು ಸೇರಿ ಕ್ರಿಯೆಯನ್ನು ಮಾಡಿಸುತ್ತದೆ ಎನ್ನಬೇಕು. ಮೊದಲನೆಯದಾಗಿ ಇವನಿಗೆ ನಿತ್ಯಕರ್ತೃತ್ವವು ಸಂಭವಿಸುವದಿಲ್ಲ ; ಏಕೆಂದರೆ (ಇವನು) ಕೂಟಸ್ಥವಾದ ಅವಗತಿಯ ಸ್ವರೂಪವನಾಗಿರುತ್ತಾನೆ.]² ಕ್ರಿಯೆಯೇ ಆತ್ಮನನ್ನು ಮಾಡಿಸುತ್ತದೆ (ಎಂಬುದೂ

1. ಕಂಸದಲ್ಲಿರುವಷ್ಟು ಭಾಗವು ಮೂಲದಲ್ಲಿಲ್ಲ. ಆಚಾರ್ಯರು ಈ ಖಂಡದಲ್ಲಿ ಬರೆದಿರುವ ವಿಚಾರವನ್ನೂ ಬೃ. ಭಾ. ೪-೩-೭; ಸೂ. ಭಾ. ೧-೧-೫, ೨-೩-೪೦ ; ಗೀ. ಭಾ. ೧೮-೪೪ ಈ ಭಾಗಗಳಲ್ಲಿ ಇದೇ ವಿಷಯದಲ್ಲಿ ಬರೆದಿರುವದನ್ನು ನೋಡಿ ಈ ಭಾಗದಲ್ಲಿರಬೇಕಾದದ್ದನ್ನು ಕಲ್ಪಿಸಿ ಬರೆದಿರುತ್ತದೆ.

2. ಇಪ್ಪು ಭಾಗವು ಗುರುವಿನ ಉತ್ತರದಲ್ಲಿದ್ದರೇ ಪ್ರಕೃತಸಂದರ್ಭವು ಹೊಂದುತ್ತದೆ ಎಂಬುದು ಸ್ಪಷ್ಟವು. ವ್ಯಾಖ್ಯಾನಕಾರರು ಇದಿಲ್ಲದೆ ಹೊಂದಿಸುವದಕ್ಕೆ ಮಾಡಿರುವ ಪ್ರಯತ್ನವು ಸಫಲವಾಗಿಲ್ಲ.

ಸರಿಯಲ್ಲ); ಏಕೆಂದರೆ (ತಾನೆ) ಹುಟ್ಟದಿರುವ (ಕ್ರಿಯೆಗೆ) ಸ್ವರೂಪವೇ ಇರುವದಿಲ್ಲ[1]. ಇನ್ನು ಮತ್ತೊಂದು (ವಸ್ತು) ಆತ್ಮನ ಬಳಿಗೆ ಬಂದು (ಸೇರಿ ಅವನಿಂದ) ಕೆಲಸವನ್ನು ಮಾಡಿಸುತ್ತದೆ ಎಂದರೆ, (ಅದೂ) ಸರಿಯಲ್ಲ. ಏಕೆಂದರೆ (ಆ) ಮತ್ತೊಂದು ಸ್ವತಃಸಿದ್ಧವಾಗಿ ವಿಷಯವಲ್ಲದ್ದಾಗಿ (ಇದೇ) ಮುಂತಾದ (ಸ್ವಭಾವದ್ದಾಗಿರುವದೆಂಬುದು) ಹೊಂದುವದಿಲ್ಲ. ಆತ್ಮನಿಗಿಂತ ಬೇರೆಯಾದ ವಸ್ತು ಅಚೇತನವು, (ಅದು) ತನಗೆತಾನೇ ಪ್ರಮಾಣವಾಗಿರುವದನ್ನು (ಯಾರೂ) ಕಂಡಿರುವದಿಲ್ಲವಷ್ಟೆ. ಶಬ್ದವೇ ಮುಂತಾದದ್ದೆಲ್ಲವೂ ಅರಿವೆಂಬ ಫಲದಲ್ಲಿ ಕೊನೆಗಾಣುವ ಪ್ರತ್ಯಯಗಳಿಂದಲೇ ಗೊತ್ತಾಗಿ ಸಿದ್ಧವಾಗುತ್ತದೆ. ಆ ವಸ್ತುವಿಗಿಂತ ಬೇರೆ ಮತ್ತೊಂದಕ್ಕೆ ಅರಿವು ಇರುವದಾದರೆ ಆ (ಬೇರೆ ವಸ್ತುವೂ) ಮತ್ತೆ ಯಾವದರೊಡನೆಯೂ ಸೇರಿಕೊಳ್ಳದ ತನಗೋಸ್ಕರವಾಗಿಯೇ ಇರುವ ಆತ್ಮನೆಂದಾಗುವದೇ ಹೊರತು, ಮತ್ತೊಂದಕ್ಕಾಗಿರುವದೆಂದಾಗುವದಿಲ್ಲ. ದೇಹ, ಇಂದ್ರಿಯ, ವಿಷಯಗಳು– ಇವು ಯಾವವೂ ತಮಗಾಗಿ ತಾವು ಇವೆ ಎಂದು (ನಾವು) ನಿರ್ಣಯಿಸುವದಕ್ಕಾಗುವದಿಲ್ಲ; ಏಕೆಂದರೆ ಅರಿವಿನಲ್ಲಿ ಕೊನೆಗಾಣುವ ಪ್ರತ್ಯಯಗಳ ಅಪೇಕ್ಷೆಯಿಂದಲೇ (ಅವು) ಸಿದ್ಧಿಯಾಗುವದು ಕಂಡುಬರುತ್ತದೆ[2].

ದೇಹಾದಿಗಳು ಪ್ರಮಾಣಸಿದ್ಧವೇ

(ಮೂಲ)

ನನು ದೇಹಸ್ಯಾವಗತೌ ನ ಕಶ್ಚಿತ್ ಪ್ರತ್ಯಕ್ಷಾದಿಪ್ರತ್ಯಯಾನ್ತರಮ್ ಅಪೇಕ್ಷತೇ। ಬಾಢಮ್, ಜಾಗ್ರತಿ ಏವಂ ಸ್ಯಾತ್। ಮೃತಿಸುಷುಪ್ತ್ಯೋಸ್ತು ದೇಹಸ್ಯಾಪಿ ಪ್ರತ್ಯಕ್ಷಾದಿಪ್ರಮಾಣಾಪೇಕ್ಷೈವ ಸಿದ್ಧಿಃ। ತಥೈವ ಇನ್ದ್ರಿಯಾಣಾಮ್। ಬಾಹ್ಯಾ ಏವ ಹಿ ಶಬ್ದಾದಯಃ ದೇಹೇನ್ದ್ರಿಯಾಕಾರಪರಿಣತಾಃ ಇತಿ ಪ್ರತ್ಯಕ್ಷಾದಿಪ್ರಮಾಣಾಪೇಕ್ಷೈವ ಹಿ ಸಿದ್ಧಿಃ। 'ಸಿದ್ಧಿಃ' ಇತಿ ಚ ಪ್ರಮಾಣಫಲಮ್ ಅವಗತಿಮ್ ಅವೋಚಾಮ। ಸಾ ಚ ಅವಗತಿಃ ಕೂಟಸ್ಥಾ, ಸ್ವಯಂಸಿದ್ಧಾತ್ಮಜ್ಯೋತಿಃಸ್ವರೂಪಾ ಇತಿ ಚ ॥ ೬೪ ॥

(ಅರ್ಥ)

(ಶಿಷ್ಯ):– ದೇಹವನ್ನು ಅರಿಯುವದಕ್ಕೆ ಯಾರಿಗೂ ಪ್ರತ್ಯಕ್ಷವೇ ಮುಂತಾದ ಬೇರೊಂದು ಪ್ರತ್ಯಯವು ಬೇಕಾಗಿರುವದಿಲ್ಲವಲ್ಲ!

---

1. ಇನ್ನು ಅದು ಆತ್ಮನನ್ನು ತೊಡಗಿಸುವದು ಹೇಗೆ?
2. ಆದ್ದರಿಂದ ಅದು ಆತ್ಮನಿಗೆ ಅರಿವನ್ನು ಕೊಡಲಾರದು.

(ಗುರು):– ನಿಜ, ಎಚ್ಚರದಲ್ಲಿ ಹೀಗೆ ಆಗಬಹುದು. ಆದರೆ ಮರಣ, ಸುಷುಪ್ತಿ– ಇವುಗಳಲ್ಲಾದರೆ ದೇಹವೂ ಪ್ರತ್ಯಕ್ಷಾದಿಪ್ರಮಾಣಗಳ ಅಪೇಕ್ಷೆಯಿಂದಲೇ ಸಿದ್ಧಿ(ಯಾಗತಕ್ಕ)ದ್ದೆಂದು ನಿಶ್ಚಯವಾಗುತ್ತದೆ)[1]. ಇಂದ್ರಿಯಗಳೂ ಹಾಗೆಯೇ (ಸಿದ್ಧಿಯಾಗತಕ್ಕವಾಗಿವೆ). ಏಕೆಂದರೆ ಹೊರಗಿನ ಶಬ್ದಾದಿಗಳೇ ದೇಹೇಂದ್ರಿಯಗಳ ಆಕಾರದಲ್ಲಿ ಪರಿಣಮಿಸಿರುತ್ತವೆಯಾದ್ದರಿಂದ ಪ್ರತ್ಯಕ್ಷಾದಿ ಪ್ರಮಾಣಗಳ ಅಪೇಕ್ಷೆಯಿಂದಲೇ (ಅವುಗಳ) ಸಿದ್ಧಿಯು (ಆಗಬೇಕಾಗಿರುತ್ತದೆ). 'ಸಿದ್ಧಿ' ಎಂದರೆ ಪ್ರಮಾಣದ ಫಲವಾದ ಅರಿವೆಂದೂ, ಆ ಅರಿವು ಕೂಟಸ್ಥವಾಗಿ ಸ್ವಯಂಸಿದ್ಧವಾಗಿ ಆತ್ಮಚೈತನ್ಯರೂಪವಾಗಿರುವದೆಂದೂ (ಹಿಂದೆಯೇ) ಹೇಳಿರುತ್ತೇವೆ[2].

ಅರಿವು ಪ್ರಮಾಣದ ಫಲವೆನ್ನುವದು ಹೇಗೆ?

(ಮೂಲ)

ಅತ್ರಾಹ ಚೋದಕಃ— ಅವಗತಿಃ ಪ್ರಮಾಣಾನಾಂ ಫಲಮ್, ಕೂಟಸ್ಥನಿತ್ಯಾತ್ಮಜ್ಯೋತಿಃಸ್ವರೂಪಾ ಇತಿ ಚ ವಿಪ್ರತಿಷಿದ್ಧಮ್। ಇತ್ಯುಕ್ತವನ್ತಮ್ ಆಹ– ನ ವಿಪ್ರತಿಷಿದ್ಧಮ್। ಕಥಂ ತರ್ಹಿ? ಕೂಟಸ್ಥನಿತ್ಯಾಪಿ[3] ಸತೀ ಪ್ರತ್ಯಕ್ಷಾದಿಪ್ರತ್ಯಯಾನ್ತೇ ಲಕ್ಷ್ಯತೇ। ತಾದರ್ಥ್ಯಾತ್। ಪ್ರತ್ಯಕ್ಷಾದಿಪ್ರತ್ಯಯಸ್ಯ[4] ಅನಿತ್ಯತ್ವೇ ಅನಿತ್ಯೇವ ಭವತಿ। ತೇನ ಪ್ರಮಾಣಾನಾಂ ಫಲಮ್ ಇತಿ ಉಪಚರ್ಯತೇ ॥ ೬೫ ॥

(ಅರ್ಥ)

ಇಲ್ಲಿ ಆಕ್ಷೇಪಕನು ಹೇಳುತ್ತಾನೆ:– ಅರಿವು ಪ್ರಮಾಣಗಳ ಫಲವೂ (ಆಗಿದೆ). ಕೂಟಸ್ಥನಿತ್ಯವಾಗಿರುವ ಆತ್ಮಜ್ಯೋತಿಯ ಸ್ವರೂಪವೂ ಆಗಿದೆ

1. ದೇಹವು ಸ್ವಪ್ರಮಾಣಕವಾಗಿ ತಾನೇ ಇದ್ದುಕೊಂಡಿದ್ದರೆ ಸುಷುಪ್ತಿಯಲ್ಲಿಯೂ ಮರಣದಲ್ಲಿಯೂ ಕಾಣಬೇಕಾಗಿತ್ತು; ಆದರೆ ಹಾಗಿಲ್ಲ. ಆದ್ದರಿಂದ ಅದು ಪ್ರಮಾಣಸಿದ್ಧವೇ.

2. ದೇಹ, ಇಂದ್ರಿಯ– ಮುಂತಾದವುಗಳು ಯಾವ ಅರಿವಿನ ಬಲದಿಂದ ಸಿದ್ಧವಾಯಿತೆನ್ನುವೆವೋ ಆ ಅರಿವೇ ಸಿದ್ಧಿ. ಆದ್ದರಿಂದ ಅದಕ್ಕೆ ಮತ್ತೊಂದು ಸಿದ್ಧಿ ಬೇಕಿಲ್ಲ. ತಲೆಯ ಖಂಡವನ್ನು ನೋಡಿ.

3. 'ಕೂಟಸ್ಥಾ ನಿತ್ಯಾಪಿ' ಎಂಬ ಅಚ್ಚಿನ ಪಾಠವನ್ನು ಹಿಂದಿನ ವಾಕ್ಯಕ್ಕೆ ಅನುಗುಣವಾಗಿ ತಿದ್ದಿಕೊಂಡಿದೆ.

4. 'ತಾದರ್ಥ್ಯಾತ್ ಪ್ರತ್ಯಕ್ಷಾದಿಪ್ರತ್ಯಯಸ್ಯ। ಪ್ರತ್ಯಯಸ್ಯ ಅನಿತ್ಯತ್ವೇ' ಎಂದು ಪಾಠವಿದ್ದರೆ ಕಷ್ಟವಿಲ್ಲದೆ ಅನ್ವಯವಾಗುವದು.

ಎಂಬುದು ವಿರುದ್ಧವಲ್ಲವೆ? ಹೀಗೆನ್ನಲು (ಶಿಷ್ಯನನ್ನು ಕುರಿತು ಗುರು) ವಿಂತೆಂದನು:– ವಿರುದ್ಧವಲ್ಲ. ಮತ್ತೆ ಹೇಗೆಂದರೆ ಕೂಟಸ್ಥನಿತ್ಯವೇ ಆಗಿದ್ದರೂ (ಅರಿವು) ಪ್ರತ್ಯಕ್ಷನೇ ಮುಂತಾದ ಅರಿವಿನ ಕೊನೆಯಲ್ಲಿ ಕಾಣಿಸಿಕೊಳ್ಳುತ್ತದೆ. ಏಕೆಂದರೆ (ಪ್ರತ್ಯಕ್ಷನೇ ಮುಂತಾದ ಪ್ರತ್ಯಯಗಳು) ಅದಕ್ಕಾಗಿಯೇ (ಉಂಟಾಗುತ್ತವೆ)[1]. ಪ್ರತ್ಯಕ್ಷನೇ ಮುಂತಾದ ಪ್ರತ್ಯಯವು ಅನಿತ್ಯವಾಗಿರುವದರಿಂದ (ತಾನೂ) ಅನಿತ್ಯವಾಗಿರುವಂತೆ ತೋರುವದು. ಆದ್ದರಿಂದ ಪ್ರಮಾಣಗಳ ಫಲವೆಂದು ಉಪಚಾರಕ್ಕಾಗಿ ಕರೆಯುತ್ತಾರೆ[2].

ಉಪಸಂಹಾರ

(ಮೂಲ)

ಯದ್ಯೇವಂ ಭಗವನ್, ಕೂಟಸ್ಥನಿತ್ಯಾ ಅವಗತಿಃ ಆತ್ಮಜ್ಯೋತಿಃ ಸ್ವರೂಪೈವ ಸ್ವಯಂಸಿದ್ಧಾ ಆತ್ಮನಿ। ಪ್ರಮಾಣನಿರಪೇಕ್ಷತ್ವಾತ್। ತತೋಽನ್ಯತ್ ಅಚೇತನಂ ಸಂಹತ್ಯ ಕಾರಿತ್ವಾತ್ ಪರಾರ್ಥಮ್। ಯೇನ ಚ ಸುಖದುಃಖಮೋಹಪ್ರತ್ಯಯಾವಗತಿರೂಪೇಣ ಸಾರಾರ್ಥ್ಯಮ್, ತೇನೈವ ಸ್ವರೂಪೇಣ ಅನಾತ್ಮನಃ ಅಸ್ತಿತ್ವಮ್, ನಾನ್ಯೇನ ರೂಪಾನ್ತರೇಣ। ಅತೋ ನಾಸ್ತಿತ್ವಮೇವ ಪರಮಾರ್ಥತಃ। ಯಥಾ ಹಿ ಲೋಕೇ ರಜ್ಜುಸರ್ಪಮರೀಚ್ಯಾದ್ಯಾಕಾರಾದೀನಾಂ ತದವಗತಿವ್ಯತಿರೇಕೇಣ ಅಭಾವೋ ದೃಷ್ಟಃ, ಏವಂ ಜಾಗ್ರತ್ಸ್ವಪ್ನಸುಷುಪ್ತ್ಯಾದ್ಯವಸ್ಥಾಭಾವಸ್ಯಾಪಿ ತದವಗತಿವ್ಯತಿರೇಕೇಣ ಅಭಾವೋ ಯುಕ್ತಃ। ಏವಮೇವ ಪರಮಾರ್ಥತಃ, ಭಗವನ್, ಅವಗತೇಃ ಆತ್ಮಜ್ಯೋತಿಷಃ ನೈರನ್ತರ್ಯಾಭಾವಾತ್ ಕೂಟಸ್ಥನಿತ್ಯತಾ ಅದ್ವೈತಭಾವಶ್ಚ। ಸರ್ವಪ್ರತ್ಯಯಭೇದೇಷು ಅವ್ಯಭಿಚಾರಾತ್। ಪ್ರತ್ಯಯಭೇದಾಶ್ಚ ಅವಗತಿಂ ವ್ಯಭಿಚರನ್ತಿ। ಯಥಾ ಸ್ವಪ್ನೇ ನೀಲಪೀತಾದ್ಯಾಕಾರಭೇದರೂಪಾಃ

---

1. ಪ್ರತ್ಯಕ್ಷನೇ ಮುಂತಾದ ಪ್ರತ್ಯಯಗಳು ತಾನೇ ಪ್ರಮಾಣವಲ್ಲ; ಅವು ಚಿದ್ವ್ಯಾಪ್ತವಾಗಿ ಚಿದಾಭಾಸವಾಗಿ ಉಂಟಾಗುತ್ತವೆ. ಆಗ ಸ್ವತಃಸಿದ್ಧವಾದ ಚೈತನ್ಯದ ಅರಿವು ಉಂಟಾಗುತ್ತದೆ. ಮೋಡವು ಮರೆಯಾಗಲು ಕಾಣುವ ಚಂದ್ರನಂತೆ ಅದು ನಿತ್ಯಸಿದ್ಧವಾದರೂ ಪ್ರತ್ಯಯದ ಮೂಲಕನೇ ಅಭಿವ್ಯಕ್ತವಾಗುವದರಿಂದ ಪ್ರತ್ಯಯಗಳು ಪ್ರಮಾಣಗಳು, ಪ್ರಮೆಯ ಕರಣಗಳು, ಎನಿಸುತ್ತವೆ.

2. ನಿಜವಾಗಿ ಪ್ರತ್ಯಯಗಳು ಕಾರಣವೂ ಅಲ್ಲ, ಅರಿವು ಫಲವೂ ಅಲ್ಲ.

ಪ್ರತ್ಯಯಾಃ ತದವಗತಿಂ ವ್ಯಭಿಚರನ್ತಃ ಪರಮಾರ್ಥತೋ ನ ಸನ್ತಿ ಇತ್ಯುಚ್ಯನ್ತೇ, ಏವಂ ಜಾಗ್ರತ್ಯಪಿ ನೀಲಪೀತಾದಿಪ್ರತ್ಯಯಭೇದಾಃ ತಾಮೇವ ಅವಗತಿಂ ವ್ಯಭಿಚರನ್ತಃ ಅಸತ್ಯರೂಪಾ ಭವಿತುಮರ್ಹನ್ತಿ। ತಸ್ಯಾಶ್ಚ ಅವಗತೇಃ ಅನ್ಯೋಽವಗನ್ತಾ ನಾಸ್ತಿ ಇತಿ ನ ಸ್ವೇನ ಸ್ವರೂಪೇಣ ಸ್ವಯಮ್ ಉಪಾದಾತುಂ ಹಾತುಂ ವಾ ಶಕ್ಯತೇ ಅನ್ಯಸ್ಯ ಚ ಅಭಾವಾತ್ ॥ ೬೭ ॥

(ಅರ್ಥ)

(ಶಿಷ್ಯ):– ಪೂಜ್ಯರೆ, ಹಾಗಾದರೆ ಕೂಟಸ್ಥನಿತ್ಯವಾದ ಅರಿವು ಆತ್ಮ ಜ್ಯೋತಿಯ ಸ್ವರೂಪವಾಗಿಯೇ ಇದ್ದುಕೊಂಡು ಆತ್ಮನಲ್ಲಿ ತಾನೇ ಸಿದ್ಧವಾಗಿರುವದು[1] ; ಏಕೆಂದರೆ (ಅದಕ್ಕೆ) ಪ್ರಮಾಣದ ಅಪೇಕ್ಷೆಯಿರುವದಿಲ್ಲ. ಅದಕ್ಕಿಂತ ಬೇರೆಯಾಗಿರುವ ಅಚೇತನ(ವಸ್ತುವೆಲ್ಲ) ಒಂದಕ್ಕೊಂದು ಸೇರಿಕೊಂಡೇ ಕೆಲಸ ಮಾಡುತ್ತಿರುವದರಿಂದ ಮತ್ತೊಂದಕ್ಕಾಗಿರತಕ್ಕದ್ದು[2]. ಅನಾತ್ಮವು ಸುಖ, ದುಃಖ, ಮೋಹ– ಎಂಬ ಪ್ರತ್ಯಯಗಳ ಯಾವ ಅರಿವಿನ ರೂಪದಿಂದ ಮತ್ತೊಂದಕ್ಕಾಗಿರುವದೋ ಅದೇ ರೂಪದಿಂದಲೇ (ಅದು) ಇರುವದು, ಮತ್ತೊಂದು ಬೇರೆಯ ರೂಪದಿಂದ (ಇದಕ್ಕೆ ಇರವು) ಇಲ್ಲ[3]. ಆದ್ದರಿಂದ ಪರಮಾರ್ಥವಾಗಿ (ಅದಕ್ಕೆ) ಇರವೇ ಇಲ್ಲ. ಹೇಗೆ ಲೋಕದಲ್ಲಿ ಹಗ್ಗದ ಹಾವು, ಬಿಸಿಲುಕುದುರೆಯ ನೀರು– ಮುಂತಾದವುಗಳು ತಮ್ಮ ಅರಿವಿಗಿಂತ ಬೇರೆಯಾಗಿ ಇರುವದಿಲ್ಲ ವೆಂಬುದು ಕಂಡುಬಂದಿದೆಯೋ[4] ಇದರಂತೆಯೇ ಜಾಗ್ರತ್ಸ್ವಪ್ನಗಳೆಂಬ ದ್ವೈತವೂ ತನ್ನ ಅರಿವನ್ನು ಬಿಟ್ಟು ಇರುವದಿಲ್ಲ ಎಂಬುದೇ ಯುಕ್ತವು[5].

1. ಆತ್ಮನೇ ಅವಗತಿಯು, ಅರಿವು; ಅದಕ್ಕೆ ಮತ್ತೊಂದರ ಅಪೇಕ್ಷೆಯಿಲ್ಲ. ಅದರ ಅಪೇಕ್ಷೆಯಿಂದಲೇ ಮಿಕ್ಕದ್ದು ಸಿದ್ಧವಾಗುತ್ತದೆ.

2. ಸಂಹತವಾಗಿ ಕೆಲಸಮಾಡುವ ಅಚೇತನವೆಲ್ಲ ಸ್ವಾರ್ಥವಾಗಿ ತನಗಾಗಿ ತಾನು ಇರುವ ಚೈತನ್ಯರೂಪನಾದ ಆತ್ಮನ ಪ್ರಯೋಜನಕ್ಕಾಗಿ ಕೆಲಸಮಾಡುತ್ತದೆ.

3. ಶಬ್ದಸ್ಪರ್ಶಾದಿಗಳು ಆಯಾ ಪ್ರತ್ಯಯಗಳಿಗಿಂತ, ಆ ಪ್ರತ್ಯಯಗಳು ಅವನ್ನು ಬೆಳಗುವ ಚೈತನ್ಯಕ್ಕಿಂತ, ಬೇರೆಯಾಗಿಲ್ಲ. ಇವು ಪರಾರ್ಥವಾಗಿರುವವೆಂಬದು ಚೈತನ್ಯಕ್ಕೆ ವಿಷಯವಾಗುವದರಿಂದಲೇ ಗೊತ್ತಾಗುತ್ತದೆ. ಆದ್ದರಿಂದ ಚೈತನ್ಯರೂಪದಿಂದಲೇ ಅವು ಇವೆ, ಶಬ್ದಪ್ರತ್ಯಯಾದಿರೂಪದಿಂದ ಇಲ್ಲ.

4. ಪ್ರಾತಿಭಾಸಿಕವಸ್ತುಗಳು ಆಗ ಉತ್ಪನ್ನವಾಗಿರುವವೆಂದು ಈಗಿನ ವೇದಾಂತಿಗಳು ಕೆಲವರು ಹೇಳುವರು, ಆದರೆ ಆ ವಾದವು ಭಾಷ್ಯದಲ್ಲಿಲ್ಲ.

5. ಈ ಖಂಡದಲ್ಲೆಲ್ಲ ಅವಗತಿ, ಅರಿವು ಎಂದಿರುವದು ಆತ್ಮಚೈತನ್ಯವೇ. ಎಚ್ಚರ ಕನಸುಗಳು ಅವನ್ನು ಬೆಳಗುವ ಸಾಕ್ಷಿಚೈತನ್ಯಕ್ಕಿಂತ ಬೇರೆಯಾಗಿಲ್ಲ ಎಂದರ್ಥ.

ಪೂಜ್ಯರೆ, ಹಾಗೆಯೇ ಪರಮಾರ್ಥದಿಂದ, ಆತ್ಮನ ಬೆಳಕಾಗಿರುವ ಅರಿವು ಕಡಿಮೆಯಿಲ್ಲದೆ ಇರುವದರಿಂದ (ಅದು) ಕೂಟಸ್ಥನಿತ್ಯವಾದದ್ದು, ಮತ್ತು ಅದ್ವೈತಸ್ವರೂಪವಾದದ್ದು; ಏಕೆಂದರೆ ಬೇರೆಬೇರೆಯಾಗಿ (ಉಂಟಾಗುವ) ಪ್ರತ್ಯಯಗಳಲ್ಲಿಲ್ಲ (ಅವುಗಳನ್ನು) ಬಿಟ್ಟುಹೋಗದೆ ಇರುತ್ತದೆ. ಆದರೆ (ಆ) ಬೇರೆಬೇರೆಯ ಪ್ರತ್ಯಯಗಳು ಅರಿವನ್ನು ಬಿಟ್ಟುಹೋಗುತ್ತಿರುವವು. ಹೇಗೆ ಸ್ವಪ್ನದಲ್ಲಿ (ಕಾಣುವ) ಕಪ್ಪು, ಹಳದಿ– ಮುಂತಾದ ಆಕಾರದ ರೂಪದ ಪ್ರತ್ಯಯಗಳು ತಮ್ಮ ಅರಿವನ್ನು ಬಿಟ್ಟುಹೋಗುತ್ತಿರುವದರಿಂದ ಪರಮಾರ್ಥವಾಗಿ ಇಲ್ಲ ವೆನ್ನುತ್ತಾರೋ, ಹಾಗೆಯೇ ಎಚ್ಚರದಲ್ಲಿಯೂ ಕಪ್ಪು, ಹಳದಿ– ಮುಂತಾದ ಬೇರೆಬೇರೆಯ ಪ್ರತ್ಯಯಗಳೂ ಅದೇ ಅರಿವನ್ನು ಬಿಟ್ಟುಹೋಗುತ್ತಿರುವದರಿಂದ (ಅವೂ) ಅಸತ್ಯರೂಪವಾಗಿ ಇರಬೇಕು[1]. ಮತ್ತು ಆ ಅರಿವಿಗೆ ಮತ್ತೊಬ್ಬ ಅರಿಯುವಾತನು ಇಲ್ಲವಾದ್ದರಿಂದ[2] ತನ್ನ ರೂಪದಿಂದ ತಾನು ತೆಗೆದುಕೊಳ್ಳುವ ದಕ್ಕಾಗಲಿ ಬಿಡುವದಕ್ಕಾಗಲಿ ಆಗುವದಿಲ್ಲ; (ಮತ್ತು ತನಗಿಂತ) ಬೇರೆಯೊಂದು (ವಸ್ತುವೂ) ಇಲ್ಲದ್ದರಿಂದಲೂ (ಹೀಗೆಂದು ತಿಳಿಯಬೇಕು)[3].

(ಮೂಲ)

ತಥೈವ ಇತಿ। ಏಷಾ ಅವಿದ್ಯಾ ಯನ್ನಿಮಿತ್ತಃ ಸಂಸಾರೋ ಜಾಗ್ರತ್ಸ್ವಪ್ನಲಕ್ಷಣಃ। ತಸ್ಯಾಃ ಅವಿದ್ಯಾಯಾಃ ವಿದ್ಯಾ ನಿವರ್ತಿಕಾ ಇತಿ। ಏವಂ ತ್ವಂ ಅಭಯಂ ಪ್ರಾಪ್ತೋಽಸಿ। ನಾತಃಪರಂ ಜಾಗ್ರತ್ಸ್ವಪ್ನ ದುಃಖಮ್ ಅನುಭವಿಷ್ಯಸಿ, ಸಂಸಾರದುಃಖಾನ್ಮುಕ್ತೋಽಸಿ ಇತಿ ।

ಓಮಿತಿ ॥ ೬೭ ॥

(ಅರ್ಥ)

(ಗುರು):– ಹಾಗೆಯೇ ಸರಿ. ಜಾಗ್ರತ್ಸ್ವಪ್ನರೂಪವಾಗಿರುವ ಸಂಸಾರಕ್ಕೆ ನಿಮಿತ್ತವೆಂದು (ಹೇಳಿದೆ)ನಲ್ಲ, (ಆ) ಅವಿದ್ಯೆಯು ಇದೇ. ಆ ಅವಿದ್ಯೆಗೆ ವಿದ್ಯೆಯು ನಿವರ್ತಕವು. ಈ ರೀತಿಯಿಂದ ನೀನು ಅಭಯವನ್ನು ಹೊಂದುವೆ; ಇನ್ನುಮೇಲೆ ಜಾಗ್ರತ್ಸ್ವಪ್ನದುಃಖವನ್ನು ಅನುಭವಿಸುವದಿಲ್ಲ, ಸಂಸಾರದುಃಖ ದಿಂದ ಬಿಡುಗಡೆಯನ್ನು ಹೊಂದಿದ್ದೀಯೆ.

(ಶಿಷ್ಯ):– ಹೌದು, ಸ್ವಾಮಿ.

---

1. ಪ್ರತ್ಯಯರೂಪದಿಂದ ಅಸತ್ಯ, ಚೈತನ್ಯರೂಪದಿಂದ ಸತ್ಯ.
2. ಅರಿವು, ಅರಿಯುವಾತನು– ಇವೆರಡೂ ಕೂಟಸ್ಥನಿತ್ಯಚೈತನ್ಯವೇ.
3. ಅದ್ವಿತೀಯವಸ್ತುವಿನಲ್ಲಿ ಹಾನೋಪಾದಾನಗಳಿರುವದಿಲ್ಲ.

ಎರಡನೆಯ ಪ್ರಕರಣದ ಸಾರ

೫೦-೫೫. ನಮ್ಮಲ್ಲಿರ ಆತ್ಮನು ಸಂಸಾರವ ಸೊಂಕೇ ಇಲ್ಲವ ಪರಮಾತ್ಮನಾದರೂ ನಮಗೆ ಆ ಆತ್ಮನು ಇಲ್ಲವೆಂದೂ ನಾವು ಸಂಸಾರಿಗಳು, ಕರ್ತೃಭೋಕ್ತೃಸ್ವಭಾವದವರು ಎಂದೂ ಜನರು ಭಾವಿಸಿಕೊಂಡಿರುವರು. ಈ ತಪ್ಪು ತಿಳಿವಳಿಕೆಗೆ **ಅವಿದ್ಯೆ** ಎಂದು ಹೆಸರು. ಆತ್ಮಸ್ವರೂಪವನ್ನು ಸರಿಯಾಗಿ ತಿಳಿದುಕೊಳ್ಳುವ **ವಿದ್ಯೆ**ಯಿಂದ ಈ ಅವಿದ್ಯೆಯನ್ನು ತೊಲಗಿಸಿಕೊಳ್ಳಬಹುದು.

೫೬-೫೯. ಪ್ರತ್ಯಕ್ಷಾದಿಪ್ರಮಾಣಗಳಿಂದ ನಾವು ಸಂಸಾರಿಗಳೆಂದು ನಿಶ್ಚಯವಾಗಿರುತ್ತದೆ; ನಿತ್ಯಮುಕ್ತಸ್ವರೂಪನಾದ ಪರಮಾತ್ಮನೇ ನಮ್ಮ ಆತ್ಮನೆಂದು ನಮಗೆ ಯಾರಿಗೂ ತಿಳಿದಿರುವದಿಲ್ಲ. ಹೀಗಿರುವಲ್ಲಿ ಅಪ್ರಸಿದ್ಧವಾದ ಪರಮಾತ್ಮರೂಪದಲ್ಲಿ ಅನಾತ್ಮರೂಪವನ್ನಾಗಲಿ, ಅಪ್ರಸಿದ್ಧವಾದ ಆತ್ಮರೂಪವನ್ನು ಅನಾತ್ಮರೂಪವಲ್ಲಾಗಲಿ ಅಧ್ಯಾರೋಪಮಾಡಿಕೊಂಡಿರುವೆವೆನ್ನುವದು ಸರಿಯಲ್ಲ– ಎಂದು ಕೆಲವರು ವಾದಿಗಳು ಭಾವಿಸುವರು. ಆದರೆ ದೇಹಾತಿರಿಕ್ತನಾದ ಆತ್ಮನಲ್ಲಿ ದೇಹವನ್ನು ಜನರು ಅಧ್ಯಾಸಮಾಡಿಕೊಂಡಿರುತ್ತಾರೆಂದು ಅದೇ ವಾದಿಗಳು ಹೇಳುತ್ತಿರುತ್ತಾರೆ; ಆತ್ಮನೂ ದೇಹವೂ ಬೇರೆಬೇರೆಯಾಗಿ ಪ್ರಸಿದ್ಧವಾಗಿಲ್ಲದಿದ್ದರೂ ಒಂದರ ಲ್ಲಿ ಒಂದನ್ನು ಕಲ್ಪಿಸುವದುಂಟೆಂದು ಅವರೇ ಒಪ್ಪಿ ನಮ್ಮ ಮತದಲ್ಲಿ ಮಾತ್ರ ದೋಷವನ್ನು ಹೇಳುವದು ಸರಿಯಲ್ಲ.

೬೦-೬೩. ಕಪ್ಪೆಯ ಚಿಪ್ಪಿನಲ್ಲಿ ಹುಟ್ಟುಗಬ್ಬಿರುವ ಬೆಳ್ಳಿಯು ನಿಜವಾಗಿ ಅದರಲ್ಲಿರುವದಿಲ್ಲ. ಅದರಂತೆ ಯಾವಯಾವದನ್ನು ಹುಟ್ಟುಗಬ್ಬಿಸ್ತಾತ್ತಾರೋ ಅದು ಅದರಲ್ಲಿರುವದಿಲ್ಲ. ಆದ್ದರಿಂದ ಆತ್ಮನಲ್ಲಿ ಅನಾತ್ಮನನ್ನೂ ಅನಾತ್ಮದಲ್ಲಿ ಆತ್ಮನನ್ನೂ ಹುಟ್ಟುಗಬ್ಬಿದ್ದರೆ ಎರಡೂ ಅಸತ್ತೆಂದಾಗಬೇಕು– ಎಂದು ಕೆಲವರು ವಾದಿಸುತ್ತಾರೆ. ಬಿದಿರುಗಳು, ಕಂಬ– ಮುಂತಾದವುಗಳಂತೆ ದೇಹಾತ್ಮರುಗಳು ಪರಸ್ಪರವಾಗಿ ಸೇರಿಕೊಂಡಿರುತ್ತಾರೆಂದು ಅವರ ಅಭಿಪ್ರಾಯವಿರುತ್ತದೆ. ಈ ಅಭಿಪ್ರಾಯವೂ ಸರಿಯಲ್ಲ. ಏಕೆಂದರೆ ಹಾಗೆ ಸೇರಿಕೊಂಡಿದ್ದರೆ ದೇಹವೂ ಆತ್ಮನೂ ಅಚೇತನವೆಂದೂ ಇವೆರಡೂ ಸೇರಿಕೊಂಡು ಚೇತನವಾದ ಮತ್ತೊಬ್ಬನಿಗೋಸ್ಕರ ಇರುವವೆಂದೂ ಒಪ್ಪಬೇಕಾಗುವದು. ಆಗ ಅಚೇತನವಸ್ತುವೇ ನಿಜವಾದ ಆತ್ಮನೆಂದಾಗುವದರಿಂದ ಕಲ್ಪಿತವಾದ ದೇಹಾತ್ಮರುಗಳು ಅಸತ್ಯರಾದರೂ ಅಸಂಹತನಾದ ಆತ್ಮನೊಬ್ಬನು ಇದಾನೆಂದೇ ಸಿದ್ಧವಾಗುತ್ತದೆ. ಅಸಂಹತನಾದ ಆ ಆತ್ಮನು ಸ್ವತಃಸಿದ್ಧನಾಗಿರುವದರಿಂದ ಅವನು ಇಲ್ಲವೆಂದು ಹೇಳುವದಕ್ಕೆ ಯಾರಿಂದಲೂ ಆಗಲಾರದು. ದೇಹವು ಆತ್ಮನಲ್ಲಿರುವದು ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿದೆ ಎಂಬುದು ಸುಳ್ಳು; ಏಕೆಂದರೆ ಆತ್ಮನು ಪ್ರತ್ಯಕ್ಷಾದಿಸಿದ್ಧನಲ್ಲ. ಈ ಆತ್ಮನು ಪ್ರಮಾಣಸಿದ್ಧನಲ್ಲದಿದ್ದರೂ ಸ್ವಭಾವಸಿದ್ಧನಾಗಿರುವದರಿಂದ ಅವನಲ್ಲಿ ಅನಾತ್ಮವನ್ನು ಅಧ್ಯಾರೋಪಮಾಡಿರುತ್ತಾರೆಂದು ಹೇಳುವದು ಯುಕ್ತಿವಿರುದ್ಧವೂ ಅಲ್ಲ.

೬೪-೬೬. ದೇಹಾತ್ಮರುಗಳನ್ನು ಅಧ್ಯಾರೋಪಮಾಡಿರುವವರು ಯಾರು? ಎಂದರೆ ಯಾರು ಈ ಪ್ರಶ್ನೆಯನ್ನು ಕೇಳುವರೋ ಅವರೇ. "ನಾನು ಮಾಡಿದ್ದರೆ ಅದನ್ನು ತಪ್ಪಿಸಿಕೊಳ್ಳುವ ನನ್ನಿಂದಾಗುವದಿಲ್ಲವಲ್ಲ!" ಎಂದು ಕೆಲವರು ಕೇಳುವದುಂಟು. ಹಾಗಿದ್ದರೆ

ಆವರು ಅಚೇತನಸ್ವರೂಪವು; ಈ ಅಧ್ಯಾರೋಪವನ್ನು ಮಾಡುವದಕ್ಕೆ ಅವರನ್ನು ಯಾವನು ಪ್ರೇರಿಸುವನೋ ಅವನೇ ಆತ್ಮನು ಎಂದಾಗುವದು. ಆದರೆ ನಾನು ಅಚೇತನನು ಎಂಬುದನ್ನು ಯಾರೂ ಒಪ್ಪುವದಿಲ್ಲ; ಏಕೆಂದರೆ ಅವರು ಸುಖದುಃಖಾದಿಗಳನ್ನು ಅರಿಯುತ್ತಿದಾನೆ. ಅವನು ಅಚೇತನರಾದರೆ ಪರಾರ್ಥರಾಗಿರುತ್ತಾರೆನ್ನಬೇಕು; ಆದರೆ ಹಾಗಿಲ್ಲ. ಎಲ್ಲವೂ ನನಗಾಗಿ ಇವೆ ಎನ್ನುತ್ತಿದಾನೆ. ಆದ್ದರಿಂದ ಅವನು ಚೇತನಸ್ವರೂಪನೇ. ಚೇತನವಾದದ್ದು ಅಚೇತನಕ್ಕಾಗಿ ಆಥವಾ ಮತ್ತೊಂದು ಚೇತನಕ್ಕಾಗಿ ಕೆಲಸಮಾಡುವದೆಂಬುದು ಎಂದಿಗೂ ಒಪ್ಪತಕ್ಕದ್ದಲ್ಲ.

೪೭-೪೯. ಆಳು ಧಣಿಗಾಗಿ ದುಡಿಯುವದರಿಂದ ಚೇತನವೂ ಪರಾರ್ಥವಾಗಿರಬಹುದು ಎಂದು ಕೆಲವರು ಎನ್ನುವರು. ಆದರೆ ಅಚೇತನವಾದ ಶರೀರವು ಅಲ್ಲಿ ಪರಾರ್ಥವಾಗಿದೆ; ಮೆಂಕಿಯ ಬಿಸಿಯಂತೆ ಚೇತನವು ನಮ್ಮಗಳ ಸ್ವರೂಪವೇ ಆಗಿದೆ. ಈ ಚೇತನವು ಮಿಕ್ಕದ್ದೆಲ್ಲವನ್ನು ಒಂದೇಸಮನೆ ನೋಡುತ್ತಿರುವದರಿಂದ ನಮ್ಮಗಳ ಆತ್ಮನು ಕೂಟಸ್ಥನಿತ್ಯಚೈತನ್ಯ ಸ್ವರೂಪವಾಗಿದಾನೆ. ಶಬ್ದಾದಿಗಳನ್ನು ನೋಸುವ ಪ್ರತ್ಯಯಗಳೂ ಆಯಾ ಶಬ್ದಾದಿಗಳ ಆಕಾರವನ್ನು ತಳೆಯುತ್ತಾ ಬೇರೆಬೇರೆಯಾಗಿದ್ದರೂ ಆ ಪ್ರತ್ಯಯಗಳನ್ನು ಬೆಳಗುವ ಚೈತನ್ಯವು ಯಾವಾಗಲೂ ಚೈತನ್ಯರೂಪವಾಗಿಯೇ ಇದ್ದುಕೊಂಡು ಎಲ್ಲಾ ಪ್ರತ್ಯಯಗಳನ್ನೂ ಬೆಳಗುತ್ತಿರುತ್ತದೆ. ಅವನ್ನು ಬೆಳಗುವಾಗ ಪ್ರತ್ಯಯಗಳಲ್ಲಾಗುವಂತೆ ಚೈತನ್ಯದಲ್ಲಿ ಯಾವ ವಿಶೇಷವೂ ಆಗುತ್ತಿರುವದಿಲ್ಲ; ಯಾವ ಕಾಲದ ಕಟ್ಟುಪಾಡಿಲ್ಲದೆ ಎಲ್ಲವನ್ನೂ ಒಂದೇ ನಲಕ್ಕೆ ಬೆಳಗುತ್ತಿರುತ್ತದೆ. ಆದ್ದರಿಂದ ಎಲ್ಲವನ್ನೂ ಅರಿಯುವ ಕೂಟಸ್ಥನಿರ್ವಿಶೇಷಚೈತನ್ಯವೇ ನಮ್ಮಗಳ ಆತ್ಮನು.

೫೦-೫೨. ಆತ್ಮನು ಅರಿಯುವನೆಂದದ್ದರಿಂದ ಅರಿಯುವದೆಂಬ ಧಾತ್ವರ್ಥವು ಆತ್ಮನಲ್ಲಿ ಉಂಟಾಗುವದೆಂದು ತಿಳಿಯಬಾರದು. 'ಕಟ್ಟಿಗೆಯನ್ನು ಕಡಿದನು' ಎಂಬಲ್ಲಿ ಎರಡು ತುಂಡಾಗುವ ಫಲದಂತೆ, 'ಆತ್ಮನು ಅರಿತನು' ಎಂಬಲ್ಲಿಯೂ ವಿಷಯದ ಆಕಾರದ ಪ್ರತ್ಯಯವು ಚಿದಾಭಾಸದಿಂದ ಕೂಡಿ ಉತ್ಪನ್ನವಾಗುತ್ತದೆ. ಇಂಥ ಪ್ರತ್ಯಯಗಳನ್ನೆಲ್ಲ ಬೆಳಗುತ್ತಿರುವದರಿಂದ ಆತ್ಮನು ಕೂಟಸ್ಥಚೈತನ್ಯರೂಪನೇ ಆಗಿರುತ್ತಾನೆ.

೫೩-೫೪. ಅಂತಃಕರಣದ ಪ್ರತ್ಯಯಗಳು ಹೀಗೆ ವಿಷಯಾಕಾರವಾಗಿ ಉಂಟಾಗುವಾಗಲೆಲ್ಲ ಆತ್ಮನು ಕೂಟಸ್ಥನಾಗಿಯೇ ಇರುತ್ತಾನೆ. ಎಚ್ಚರಕನಸುಗಳೆಂಬ ಅವಸ್ಥೆಗಳೂ ಬಂದುಹೋಗಿ ಮಾಡುತ್ತಿದ್ದರೂ ಅವನ್ನೂ ಬೆಳಗುತ್ತಾ ಕೂಟಸ್ಥನಾಗಿರುತ್ತಾನೆ; ಆ ಅವಸ್ಥೆಗಳು ಆತ್ಮನ ಧರ್ಮವಲ್ಲ.

೫೫-೫೬. ಆತ್ಮನ ಚೈತನ್ಯವೂ ಸುಷುಪ್ತಿಯಲ್ಲಿರುವದಿಲ್ಲವಾದ್ದರಿಂದ ಅದೂ ಆತ್ಮನ ಆಗಂತುಕರೂಪನೆಂದು ಕೆಲವರು ವಾದಿಸಬಹುದು. ಇದು ಸರಿಯಲ್ಲ. ಏಕೆಂದರೆ ಸುಷುಪ್ತಿಯಲ್ಲಿ ಇಂಥದ್ದನ್ನು ಅರಿಯುವದೆಂಬ ವಿಶೇಷಜ್ಞಾನವಿಲ್ಲದಿದ್ದರೂ ಅರಿಯುವ ತನ್ನ ಸ್ವರೂಪವು ಇದ್ದೇ ಇರುತ್ತದೆ. ಆ ಸ್ವರೂಪಚೈತನ್ಯದ ಬಲದಿಂದಲೇ ನಾನು ಸುಷುಪ್ತಿಯಲ್ಲಿ ಏನನ್ನೂ ಅರಿಯಲಿಲ್ಲ ಎಂದು ಜನರೆನ್ನುತ್ತಿರುವರು.

೫೭-೬೧. ಈ ಆತ್ಮಚೈತನ್ಯವು ಮತ್ತೊಂದು ಪ್ರಮಾಣವನ್ನು ಬಯಸದೆ ಸ್ವತಃಸಿದ್ಧವಾಗಿರುತ್ತದೆ, ನಿತ್ಯವಾಗಿರುತ್ತದೆ. ಆ ನಿತ್ಯವಾದ ಅರಿವೇ ವ್ಯವಹಾರದಲ್ಲಿ ಪ್ರಮೆಯೆನಿಸು

ತ್ತದೆ. ಆದೇ ಪ್ರಮಾತೃವೂ ತಗಿನುತ್ತದೆ. ಸ್ಮಮಾತೃವು ಪ್ರಮಾಣಸಿದ್ಧನೆನ್ನಬಾರದು; ಏಕೆಂದರೆ ಆಗ ಅವನನ್ನು ಅರಿಯುವದಕ್ಕೆ ಮತ್ತೊಬ್ಬ ಪ್ರಮಾತೃ, ಅವನಿಗೆ ಅರಿಯಬೇಕೆಂಬ ಇಚ್ಛೆ, ಪ್ರಯತ್ನ ಮುಂತಾದವು ಬೇಕಾಗಿ ಅನವಸ್ಥೆಯಾಗುವದು. ಪ್ರಮಾತೃವಾದ ಆತ್ಮನು ತನಗೆ ತಾನು ವ್ಯವಹಿತನಲ್ಲವಾದ್ದರಿಂದಲೂ ಅವನು ಸ್ವತಃಸಿದ್ಧನೆನ್ನುವದೇ ಸರಿ. ಪ್ರಮಾತೃವಿನ ವಿಷಯವಾದ ಅರಿವು ಉಂಟಾಗದೆ ಇದ್ದರೆ ಅವನನ್ನು ಅರಿತಂತೆಯೇ ಆಗುವದಲ್ಲ !- ಎಂದು ಶಂಕಿಸಬಾರದು. ಏಕೆಂದರೆ ಇವನ್ನು ಅರಿಯಬೇಕು ಎಂದು ಪ್ರಮೇಯದ ವಿಷಯದಲ್ಲಿ ಆಕಾಂಕ್ಷೆಯುಂಟಾದೀತೇ ಹೊರತು ಪ್ರಮಾತೃವಿನ ವಿಷಯದಲ್ಲಿ ಉಂಟಾಗದು. ಅರಿವು ಸ್ವಮಾತೃವಾದ ಚೈತನ್ಯ ಸ್ವರೂಪವೇ ಆಗಿ ನಿತ್ಯಸಿದ್ಧವಾಗಿರುವದರಿಂದ ಆತ್ಮನು ಪರಾರ್ಥನಲ್ಲದೆ ಇರುತ್ತಾನೆ. ಹಾಗಿಲ್ಲದೆ ಇರುವದರಿಂದಲೇ ಅನಾತ್ಮನು ಪರಾರ್ಥನಾಗಿರುತ್ತದೆ. ಪ್ರಮಾತೃವಿನಲ್ಲಿ ಪ್ರಮೆಯು ಬೇರೆಯಾಗಿರಬೇಕೆಂಬ ನಿರ್ಬಂಧವೂ ಇಲ್ಲ. ಸೂರ್ಯನಲ್ಲಿ ಬೆಳಕಿರುವಂತೆ ನಿತ್ಯವಾಗಿ ಸ್ವರೂಪವಾಗಿರುವ ಸ್ಮಮೆಯಿದ್ದರೂ ಅವನು ಪ್ರಮಾತೃವೆನಿಸಬಹುದಾಗಿದೆ.

೬೨-೬೪. ಪ್ರಮಾತೃವು ನಿತ್ಯಾವಗತಿಸ್ವರೂಪನೇ ಆಗಿದ್ದರೆ ಪ್ರಮಾಣಗಳನ್ನು ತೆಗೆದು ಕೊಳ್ಳುವದೆಂಬ ಕ್ರಿಯೆಗೆ ಅವನು ಕರ್ತೃ ಹೇಗಾದಾನು ? ಬಡಗಿಗೆ ಕೈಯಿರುವದರಿಂದ ಅವನು ಕೈಯಿಂದ ಬಾಚಿಯನ್ನು ತೆಗೆದುಕೊಂಡು ಮರವನ್ನು ಕೆತ್ತುತ್ತಾನೆ. ನಿತ್ಯಚೈತನ್ಯ ಸ್ವರೂಪನಾದ ಆತ್ಮನಿಗೆ ಸ್ವತಃ ಕರಣವಿಲ್ಲದ್ದರಿಂದ ಚಕ್ಷುರಾದಿಗಳನ್ನು ಸ್ವೀಕರಿಸುವದಕ್ಕೆ ಬರುವದಿಲ್ಲ ; ಅವನ್ನು ಸ್ವೀಕರಿಸದಿದ್ದರೆ ಅವನು ಪ್ರಮಾತೃವೇ ಆಗುವದಿಲ್ಲ. ಈ ದೋಷವನ್ನು ತಪ್ಪಿಸಿಕೊಳ್ಳುವದಕ್ಕೆ ಬೇರೆಯ ಕರಣಗಳನ್ನು ಕಲ್ಪಿಸಿದರೂ ಆವುಗಳನ್ನು ಸ್ವೀಕರಿಸುವದಕ್ಕೆ ಮತ್ತೆ ಬೇರೆಯ ಕರಣಗಳು ಬೇಕಾಗಿ ಅನವಸ್ಥೆಯುಂಟಾಗುತ್ತದೆ- ಎಂಬ ಆಕ್ಷೇಪಕ್ಕೆ ಇಲ್ಲಿ ಅವಕಾಶವಿಲ್ಲ. ಏಕೆಂದರೆ ನಿತ್ಯಚೈತನ್ಯಸ್ವರೂಪದಿಂದಲೇ ಆತ್ಮನು ಸ್ವಮಾತೃನೆನಿಸುತ್ತಾನೆಂದು ನಾವು ಹೇಳಿರುತ್ತೇವೆ. ಆತ್ಮನಿಗೆ ಈ ಔಪಚಾರಿಕಕರ್ತೃತ್ವವಲ್ಲದೆ ನಿಜವಾಗಿಯೂ ಕರ್ತೃತ್ವವುಂಟೆಂದು ಒಪ್ಪಿದರೆ ಸ್ವತಃ ಅವನಿಗೆ ಕರ್ತೃತ್ವವಿಲ್ಲದ್ದರಿಂದ ಕ್ರಿಯೆಯಾಗಲಿ ಮತ್ತೊಂದಾಗಲಿ ಆತ್ಮನನ್ನು ಹೊಂದಿಸುತ್ತದೆ ಎನ್ನಬೇಕಾಗುವದು. ಕ್ರಿಯೆಯು ಮುಟ್ಟುವ ಮೊದಲು ಅದು ಫಲವಾಗಿಲ್ಲವಾದ್ದರಿಂದ ಕ್ರಿಯೆಯು ಕಾರಕವಲ್ಲ ; ಮತ್ತೊಂದು ಸ್ವತಃಸಿದ್ಧವಾದ ವಸ್ತುವೂ ಇಲ್ಲ. ಆತ್ಮನಲ್ಲದೆ ಮತ್ತೆ ಯಾವದರಲ್ಲಿಯೂ ಚೈತನ್ಯವಿಲ್ಲದ್ದರಿಂದ ಅದು ಆತ್ಮನಿಗೆ ಅರಿವನ್ನು ತಂದುಕೊಡುತ್ತದೆ ಎಂದು ಕಲ್ಪಿಸುವದಕ್ಕೂ ಬರುವದಿಲ್ಲ. ದೇಹೇಂದ್ರಿಯಗಳಂತೂ ಸ್ವತಃಸಿದ್ಧವಲ್ಲವೇ ಅಲ್ಲ, ಏಕೆಂದರೆ ಸುಷುಪ್ತಿಮರಣಾದಿಗಳಲ್ಲಿ ಅವು ಕಾಣುವದೇ ಇಲ್ಲ. ಆದ್ದರಿಂದ ಆತ್ಮನ ಪ್ರಮಾತೃತ್ವವು ಔಪಚಾರಿಕವೇ.

೬೫. ಆತ್ಮನಲ್ಲಿ ಅರಿವು ನಿತ್ಯವಾಗಿ ಅವನ ಸ್ವರೂಪವಾಗಿಯೇ ಇದ್ದರೆ ಅದು ಪ್ರಮಾಣದ ಫಲವೆಂಬ ವ್ಯವಹಾರವು ಹೇಗೆ ?- ಎಂದು ಯಾರಾದರೂ ಕೇಳಬಹುದು. ಪ್ರಮಾತೃತ್ವದಂತೆ ಅದೂ ಔಪಚಾರಿಕವೆಂದೇ ತಿಳಿಯಬೇಕು. ಪ್ರತ್ಯಕ್ಷಾದಿಪ್ರತ್ಯಯಗಳುಂಟಾದಾಗ ಕೊನೆಯಲ್ಲಿ ತೋರುವ ಅದನ್ನು ಔಪಚಾರಿಕವಾಗಿ ಪ್ರಮಾಣದ ಫಲವೆಂದು ಕರೆಯುತ್ತಾರೆ. ಅಸ್ಟೆ.

೬೬-೬೭. ಈ ರೀತಿಯಲ್ಲಿ ಕೂಟಸ್ಥನಿತ್ಯನಿರ್ವಿಶೇಷವಾದ ಚೈತನ್ಯಸ್ವರೂಪನಾದ ಆತ್ಮನಲ್ಲಿ ಪರಾರ್ಥವಾದ ಶಬ್ದಾದಿಪ್ರತ್ಯಯಗಳಿಂದ ಪ್ರಮಾತೃತ್ವವೂ ಪ್ರಮಾತೃತ್ವವೂ ತೋರುತ್ತಿರು

ನವು. ಈ ಪ್ರತ್ಯಯಗಳು ಆ ಚೈತನ್ಯಕ್ಕಿಂತ ಬೇರೆಯಾಗಿ ಇರುವದೇ ಇಲ್ಲ. ಹಗ್ಗದ ಹಾವು ಹಗ್ಗವೇ ಆಗಿರುವಂತೆ ಇವು ಪರಮಾರ್ಥವಾಗಿ ಆತ್ಮಚೈತನ್ಯವೇ ಆಗಿರುತ್ತವೆ. ಎಚ್ಚರದಲ್ಲಾಗಲಿ ಕನಸಿನಲ್ಲಾಗಲಿ ಯಾವದೊಂದು ಪ್ರತ್ಯಯವೂ ಈ ಚೈತನ್ಯಸ್ವರೂಪನಾದ ಆತ್ಮನಿಗಿಂತ ಬೇರೆಯಾಗಿರುವದೇ ಇಲ್ಲ. ಆತ್ಮನು ಹೀಗೆ ನಿತ್ಯವಾಗಿ ನಿರ್ವಿಶೇಷನಾಗಿ ಚಿನ್ಮಾತ್ರನಾಗಿರುತ್ತಾನೆ. ಆತ್ಮನು ಅರಿವು ಎಂಬಲ್ಲಿ ಮತ್ತೊಬ್ಬ ಅರಿಯುವಾತನಾಗಲಿ ಮತ್ತೊಂದು ಅರಿಯಲ್ಪಡುವ ವಸ್ತುವಾಗಲಿ ಇರುವದೇ ಇಲ್ಲ. ಹೀಗೆಂದು ತಿಳಿಯುವದೇ ವಿದ್ಯೆ. ಈ ವಿದ್ಯೆಯಿಂದ ಜಾಗ್ರತ್ಸ್ವಪ್ನದ್ರೈಷ್ಟೃತ್ವಹೇತುವಾದ ಅವಿದ್ಯೆಯು ತೊಲಗುವದು. ಹೀಗೆಂದು ತಿಳಿದವನು ನಿತ್ಯಮುಕ್ತನು.

—·—:—

೩. ಪರಿಸಂಖ್ಯಾನ

(ಮೂಲ)

ಮುಮುಕ್ಷೂಣಾಮ್ ಉಪಾತ್ತಪುಣ್ಯಾಪುಣ್ಯಕ್ಷಪಣಪರಾಣಾಮ್ ಅಪೂರ್ವಾನುಪಚಯಾರ್ಥಿನಾಂ ಪರಿಸಜ್ಯಾನಮಿದಮ್ ಉಚ್ಯತೇ। ಅವಿದ್ಯಾಹೇತವೋ ದೋಷಾಃ ವಾಙ್ಮನಃಕಾಯಪ್ರವೃತ್ತಿಹೇತವಃ। ಪ್ರವೃತ್ತೇಶ್ಚ ಇಷ್ಟಾನಿಷ್ಟಮಿಶ್ರಫಲಾನಿ ಕರ್ಮಾಣಿ ಉಪಚೀಯನ್ತೇ ಇತಿ ತನ್ಮೋಕ್ಷಾರ್ಥಮ್ ॥ ೩೮ ॥

(ಅರ್ಥ)

(ಇದುವರೆಗೆ ತಾವು) ಕೂಡಿಹಾಕಿಕೊಂಡಿರುವ ಪುಣ್ಯಪಾಪಗಳನ್ನು ನಾಶಗೊಳಿಸುವದರಲ್ಲಿ ತತ್ಪರರಾಗಿಯೂ ಹೊಸದಾಗಿ (ಇವುಗಳನ್ನು) ಕೂಡಿಹಾಕಬಾರದೆಂದು ಬಯಸುವವರಾಗಿಯೂ (ಇರುವ) ಮುಮುಕ್ಷುಗಳಿಗಾಗಿ ಈ ಪರಿಸಂಖ್ಯಾನವನ್ನು[1] ಹೇಳಲಾಗುತ್ತದೆ. ಅವಿದ್ಯೆಯೆಂಬ ಹೇತುವಿನಿಂದುಂಟಾದ ದೋಷಗಳು ವಾಕ್ಕು, ಮನಸ್ಸು, ಶರೀರ– ಇವುಗಳ ಪ್ರವೃತ್ತಿಗೆ ಕಾರಣವಾಗಿರುತ್ತವೆ. ಮತ್ತು (ಆ) ಪ್ರವೃತ್ತಿಯಿಂದ ಬೇಕಾದ, ಬೇಡವಾದ, (ಮತ್ತು) (ಇವೆರಡೂ) ಮಿಶ್ರವಾದ ಫಲಗಳನ್ನು ಕೊಡುವ ಕರ್ಮಗಳು ರಾಶಿಯಾಗುತ್ತವೆಯಾದ್ದರಿಂದ (ಈ ಕರ್ಮಗಳಿಂದ) ಬಿಡುಗಡೆಯಾಗುವದಕ್ಕೆ (ಈ **ಪರಿಸಂಖ್ಯಾನ**ವನ್ನು ಹೇಳಿರುತ್ತದೆ).

ವಿಷಯವಿಷಯಿಗಳ ವಿಂಗಡ

(ಮೂಲ)

ತತ್ರ ಶಬ್ದಸ್ಪರ್ಶರೂಪರಸಗನ್ಧಾನಾಂ ವಿಷಯಾಣಾಂ ಶ್ರೋತ್ರಾದಿಗ್ರಾಹ್ಯತ್ವಾತ್ ತು ಸ್ವಾತ್ಮನಿ ಪರೇಷು ವಾ ವಿಜ್ಞಾನಾಭಾವಃ। ತೇಷಾಮೇವ ಚ[2] ಪರಿಣತಾನಾಂ ಯಥಾ ಲೋಷ್ಟಾದೀನಾಮ್। ಶ್ರೋತ್ರಾದಿದ್ವಾರೈಶ್ಚ ಜ್ಞಾಯನ್ತೇ। ಯೇನ ಚ ಜ್ಞಾಯನ್ತೇ ಸಃ ಜ್ಞಾತೃತ್ವಾತ್ ಅತಜ್ಜಾತೀಯಃ। ತೇ ಹಿ ಶಬ್ದಾದಯಃ ಅನ್ಯೋನ್ಯ

1. ಪರಿಸಂಖ್ಯಾನವೆಂದರೆ ಶಾಸ್ತ್ರಶ್ರವಣವನ್ನು ಮಾಡಿ ಯುಕ್ತಿಯಿಂದ ನೋಡಿದ್ದನ್ನಿಲ್ಲ ಅನುಭವಕ್ಕೆ ಹೊಂದಿಸಿಕೊಳ್ಳುವದು. ಇದನ್ನು **ನಿದಿಧ್ಯಾಸನ**ವೆಂದೂ **ವಿಜ್ಞಾನ**ವೆಂದೂ ಕರೆಯುತ್ತಾರೆ.

2. ಮುದ್ರಿತಪುಸ್ತಕಗಳಲ್ಲಿಲ್ಲದಿದ್ದರೂ ಇಲ್ಲಿ ಒಂದು **ಚ** ಬೇಕೆಂದು ಸೇರಿಸಿಕೊಂಡಿದೆ.

ಸಂಸರ್ಗಿತ್ವಾತ್ ಜನ್ಮವೃದ್ಧಿವಿಪರಿಣಾಮಾಪಕ್ಷಯನಾಶಸಂಯೋಗ ವಿಯೋಗಾವಿರ್ಭಾವತಿರೋಭಾವವಿಕಾರವಿಕಾರಿಕ್ಷೇತ್ರ ಬೀಜಾದ್ಯನೇಕಧರ್ಮಾಣಃ ಸಾಮಾನ್ಯೇನ ಚ ಸುಖದುಃಖಾದ್ಯನೇಕಕರ್ಮಾಣಃ। ತದ್ವಿಜ್ಞಾತೃತ್ವಾದೇವ ತದ್ವಿಜ್ಞಾತಾ ಸರ್ವಶಬ್ದಾದಿಧರ್ಮವಿಲಕ್ಷಣಃ ॥ ೬೯ ॥

(ಅರ್ಥ)

ಇಲ್ಲಿ ಶ್ರೋತ್ರವೇ ಮುಂತಾದ (ಇಂದ್ರಿಯಗಳಿಂದ) ಗ್ರಾಹ್ಯವಾಗಿರುವದರಿಂದ ವಿಷಯಗಳೆನಿಸಿರುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ– ಇವುಗಳಿಗೆ ತಮ್ಮ ತಮ್ಮ (ವಿಷಯದ)ಲ್ಲಾಗಲಿ (ತಮಗಿಂತ) ಬೇರೆಯಾದ (ಪದಾರ್ಥಗಳ ವಿಷಯ)ದಲ್ಲಾಗಲಿ ಜ್ಞಾನವುಂಟಾಗುವದಿಲ್ಲ. ಇವುಗಳೇ (ಶರೀರಾದಿರೂಪದಿಂದ) ಪರಿಣಾಮ(ವನ್ನು ಹೊಂದುವದರಿಂದ) ಮಣ್ಣಿನ ಹೆಂಟೆಯೇ ಮುಂತಾದವುಗಳಿಗೆ ಪೇಗೆ (ತಮ್ಮ ವಿಷಯದಲ್ಲಾಗಲಿ ಬೇರೆಯ ವಸ್ತುಗಳ ವಿಷಯದಲ್ಲಾಗಲಿ ಜ್ಞಾನವುಂಟಾಗುವದಿಲ್ಲವೋ, ಹಾಗೆ ಈ ಶರೀರಾದಿಗಳಾಗಿ ಪರಿಣತವಾದ ಶಬ್ದಾದಿಗಳಿಗೇ ಆಗುವದಿಲ್ಲ).

(ಈ ವಿಷಯಗಳು) ಶ್ರೋತ್ರವೇ ಮುಂತಾದ ದ್ವಾರಗಳಿಂದ ಅರಿಯಬರುತ್ತವೆ. (ಹಾಗೆ) ಯಾವಾತನಿಗೆ ಅರಿಯುತ್ತವೆಯೋ ಆತನು ಅರಿಯುವವನಾದ್ದರಿಂದ (ಅರಿಯಲ್ಪಡುವ) ಇವುಗಳ ಜಾತಿಗೆ ಸೇರಿದವನಲ್ಲ. ಹೇಗೆಂದರೆ ಈ ಶಬ್ದವೇ ಮುಂತಾದವುಗಳು ಒಂದಕ್ಕೊಂದು ಸೇರಿಕೊಂಡಿರುವದರಿಂದ ಹುಟ್ಟುವದು, ಬೆಳೆಯುವದು, ಮಾರ್ಪಡುವದು, ಸೊರಗುವದು, ಹಾಳಾಗುವದು, (ಮತ್ತೊಂದರೊಡನೆ) ಸೇರಿಕೊಳ್ಳುವದು, (ಅದನ್ನು) ಬಿಟ್ಟಗಲುವದು, ತೋರಿಕೊಳ್ಳುವದು, ಮರೆಯಾಗುವದು, ವಿಕಾರವಿಕಾರಿ(ಭಾವವನ್ನು ಪಡೆಯುವದು), ಕ್ಷೇತ್ರಬೀಜ(ಭಾವವನ್ನು ಪಡೆಯುವದು) – ಮುಂತಾದ ಅನೇಕ ಧರ್ಮಗಳುಳ್ಳವಾಗಿಯೂ ಸಾಮಾನ್ಯವಾಗಿ ಸುಖ, ದುಃಖ– ಮುಂತಾದ ಅನೇಕ (ಫಲಗಳನ್ನು ಕೊಡುವ) ಕರ್ಮಗಳುಳ್ಳವಾಗಿಯೂ (ಇರುತ್ತವೆ). ಇವುಗಳನ್ನು ಅರಿಯುವವನೆಂಬ ಕಾರಣದಿಂದಲೇ ಇವುಗಳ ವಿಜ್ಞಾತೃವು ಈ ಶಬ್ದವೇ ಮುಂತಾದ ಯಾವ ಧರ್ಮವೂ ಇಲ್ಲದವನಾಗಿ ಬೇರೆಯ ಸ್ವಭಾವದವನಾಗಿರುತ್ತಾನೆ[1].

---

1. ಆದ್ದರಿಂದ ವಿಷಯಗಳ ಧರ್ಮವು ವಿಷಯಿಯಾದ ಆತ್ಮನಿಗೆ ಸೇರಿದವುಗಳಲ್ಲ.

ಬಾಹ್ಯಪರಿಸಂಖ್ಯಾನಕ್ರಮ

(ಮೂಲ)

ತತ್ರ ಶಬ್ದಾದಿಭಿಃ ಉಪಲಭ್ಯಮಾನೈಃ ಪೀಡ್ಯಮಾನೋ ವಿದ್ವಾನ್ ಏವಂ ಪರಿಸಂಚಕ್ಷೀತ— ಶಬ್ದಸ್ತು ಧ್ವನಿಸಾಮಾನ್ಯಮಾತ್ರೇಣ ವಿಶೇಷಧರ್ಮೈರ್ವಾ ಷಡ್ಜಾದಿಭಿಃ ಪ್ರಿಯೈಃ ಸ್ತುತ್ಯಾದಿಭಿಃ ಇಷ್ಟೈಶ್ಚ ಅನಿಷ್ಟೈಶ್ಚ ಅಸತ್ಯಭೀಭತ್ಸಪರಿಭವಾಕ್ರೋಶಾದಿಭಿರ್ವಚನೈಃ ಮಾಂ ವೈಕ್ಲವ್ಯಭಾವನಮ್ ಅಸಂಸರ್ಗಿಣಮ್, ಅವಿಕ್ರಿಯಮ್, ಅಚಲನಮ್, ಅನಿಧನಮ್, ಅಭಯಮ್, ಅತ್ಯನ್ತಸೂಕ್ಷ್ಮಮ್ ಅವಿಷಯಂ ಗೋಚರೀಕೃತ್ಯ ಸ್ಪ್ರಷ್ಟುಂ ನೈವಾರ್ಹತಿ। ಅಸಂಸರ್ಗಿತ್ವಾದೇವ[1]। ಅತ ಏವ ನ ಶಬ್ದನಿಮಿತ್ತಾ ಹಾನಿರ್ವೃದ್ಧಿರ್ವಾ (ಮಮ)[2]। ಅತೋ ಮಾಂ ಕಿಂ ಕರಿಷ್ಯತಿ ಸ್ತುತಿನಿನ್ದಾದಿಪ್ರಿಯಾಪ್ರಿಯತ್ವಾದಿಲಕ್ಷಣಃ ಶಬ್ದಃ? ಅವಿವೇಕಿನಂ ಹಿ ಶಬ್ದಮಾತ್ಮತ್ವೇನ ಗತಂ ಪ್ರಿಯಃ ಶಬ್ದೋ ವರ್ಧಯೇತ್, ಅಪ್ರಿಯಶ್ಚ ಕ್ಷಪಯೇತ್। ಅವಿವೇಕಿತ್ವಾತ್। ನ ತು ಮಮ ವಿವೇಕಿನೋ ವಾಲಾಗ್ರಮಾತ್ರಮಪಿ ಕರ್ತುಮುತ್ಸಹತೇ ಇತಿ। ಏವಮೇವ ಸ್ಪರ್ಶಸಾಮಾನ್ಯೇನ ತದ್ವಿಶೇಷೈಶ್ಚ ಶೀತೋಷ್ಣಮೃದುಕರ್ಕಶಾದಿಜ್ವರೋದರಶೂಲಾದಿಲಕ್ಷಣೈಶ್ಚ ಅಪ್ರಿಯೈಃ ಪ್ರಿಯೈಶ್ಚ ಕೈಶ್ಚಿತ್ ಶರೀರಸಮವಾಯಿಭಿಃ ಬಾಹ್ಯಾಗನ್ತುಕನಿಮಿತ್ತೈಶ್ಚ ನ ಮಮ ಕಾಚಿತ್ ವಿಕ್ರಿಯಾಂ ವೃದ್ಧಿಹಾನಿಲಕ್ಷಣಾಂ ಅಸ್ಪರ್ಶತ್ವಾತ್ ಕ್ರಿಯತೇ। ವ್ಯೋಮ್ನ ಇವ ಮುಷ್ಟಿಘಾತಾದಿಭಿಃ। ತಥಾ ರೂಪಸಾಮಾನ್ಯೇನ ತದ್ವಿಶೇಷೈಶ್ಚ ಪ್ರಿಯಾಪ್ರಿಯೈಃ ಸ್ತ್ರೀವ್ಯಞ್ಜನಾದಿಲಕ್ಷಣೈಃ, ಅರೂಪತ್ವಾತ್ ನ ಮಮ ಕಾಚಿತ್ ಹಾನಿಃ ವೃದ್ಧಿರ್ವಾ ಕ್ರಿಯತೇ। ತಥಾ ರಸಸಾಮಾನ್ಯೇನ ತದ್ವಿಶೇಷೈಶ್ಚ ಪ್ರಿಯಾಪ್ರಿಯೈಃ ಮಧುರಾಮ್ಲಲವಣಕಟುತಿಕ್ತಕಷಾಯೈಃ ಮೂಢಬುದ್ಧಿಭಿಃ ಪರಿಗೃಹೀತೈಃ ಅರಸಾತ್ಮಕಸ್ಯ ಮಮ ನ ಕಾಚಿತ್ ಹಾನಿರ್ವೃದ್ಧಿರ್ವಾ ಕ್ರಿಯತೇ। ತಥಾ ಗನ್ಧಸಾಮಾನ್ಯೇನ

---

1. ಇಲ್ಲಿ 'ಮಾಮ್' ಎಂಬುದು ಅಚ್ಚಿನ ಪುಸ್ತಕಗಳಲ್ಲಿ ಹೆಚ್ಚಾಗಿದೆ.
2. ಇಲ್ಲಿ 'ಮಮ' ಎಂಬ ಮಾತು ಇರಬೇಕೆಂತ ಕಾಣುತ್ತದೆ.

ತದ್ವಿಶೇಷೈಃ ಪ್ರಿಯಾಪ್ರಿಯೈಃ ಪುಷ್ಪಾನುಲೇಪನಾದಿಲಕ್ಷಣೈಃ[1] ಅಗನ್ಧಾತ್ಮಕಸ್ಯ ನ ಮಮ ಕಾಚಿತ್ ಹಾನಿರ್ವೃದ್ಧಿರ್ವಾ ಕ್ರಿಯತೇ। "ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾರಸಂ ನಿತ್ಯಮಗನ್ಧವಚ್ಚ ಯತ್" (ಕ. ೧-೩-೧೫) ಇತಿ ಶ್ರುತೇಃ ॥ ೭೦ ॥

(ತರ್ಜ)

ಇದರಲ್ಲಿ ಶಬ್ದವೇ ಮುಂತಾದವುಗಳ ಅನುಭವದಿಂದ ತೊಂದರೆಯಾದರೆ ವಿವೇಕಿಯಾದವನು ಈ ರೀತಿಯಾಗಿ ಚಿಂತಿಸಿಕೊಳ್ಳಬೇಕು:–

ಶಬ್ದವು ಬರಿಯ ಧ್ವನಿಯಿಂದಲಾಗಲಿ, ಷಡ್ಜವೇ ಮುಂತಾದ ಇಂಪಿನ (ಶಬ್ದಗಳು) ಹೊಗಳಿಕೆಯೇ ಮುಂತಾದ ಇಷ್ಟವಾದ (ಶಬ್ದಗಳು), ಸುಳ್ಳು(ಮಾತು), ಅಸಹ್ಯವಾದ (ಮಾತು), ತಿರಸ್ಕಾರದ(ಮಾತು), ಸಿಟ್ಟಿನ(ಮಾತು)- ಮುಂತಾದ ಮಾತುಗಳು – ಎಂಬ (ತನ್ನ) ವಿಶೇಷಧರ್ಮಗಳಿಂದಲಾಗಲಿ ಅರಿಯುವ ಸ್ವಭಾವವುಳ್ಳವನೂ ಅಸಂಸಾರಿಯೂ ಅವಿಕಾರಿಯೂ ಅಚಲನೂ ಅನಾದಿಯೂ ಅಭಯನೂ ಅತ್ಯಂತಸೂಕ್ಷ್ಮನೂ ಅವಿಷಯನೂ ಆಗಿರುವ ನನ್ನನ್ನು ವಿಷಯೀಕರಿಸಿ ಮುಟ್ಟಲೇ ಆರದು. (ನಾನು ಯಾವರ) ಸಂಬಂಧವೂ ಇಲ್ಲದವನೆಂಬದರಿಂದಲೇ (ಅದು ಮುಟ್ಟಲಾರದು). ಆದ್ದರಿಂದಲೇ (ನನಗೆ) ಶಬ್ದದ ನಿಮಿತ್ತದಿಂದ ಹಾನಿಯಾಗಲಿ ವೃದ್ಧಿಯಾಗಲಿ (ಆಗುವು)ತಿಲ್ಲ. ಆದ್ದರಿಂದ ನನ್ನನ್ನು ಹೊಗಳುವದು ಮುಂತಾದ ಪ್ರಿಯವಾದ ಅಥವಾ ಹೀಯಾಳಿಸುವದೇ ಮುಂತಾದ ಅಪ್ರಿಯವಾವ, (ಇದೇ) ಮುಂತಾದ ರೂಪದ ಶಬ್ದವು ನನ್ನನ್ನು ಏನು ಮಾಡೀತು ? ಶಬ್ದವೇ ತಾನೆಂದು ತಿಳಿದುಕೊಂಡಿರುವ ಅವಿವೇಕಿಯನ್ನು (ಮಾತ್ರ) ಪ್ರಿಯವಾದ ಶಬ್ದವು ಹಿಗ್ಗಿಸೀತು, ಅಪ್ರಿಯವಾದದ್ದು ಕುಗ್ಗಿಸೀತು. ಏಕೆಂದರೆ (ಅವನು) ವಿವೇಕವಿಲ್ಲದಿರುತ್ತಾನೆ. ಆದರೆ ವಿವೇಕಿಯಾದ ನನಗೆ (ಅದು) ಕೂದಲೆಳೆಯಷ್ಟೂ ಏನನ್ನೂ ಮಾಡಲಾರದು.

ಇದರಂತೆಯೇ ಸ್ಪರ್ಶಸಾಮಾನ್ಯದಿಂದಲೂ ಶೀತ, ಉಷ್ಣ, ಮೆದು, ಗಟ್ಟಿ –ಮುಂತಾದ, ಜ್ವರ ಹೊಟ್ಟಿನೋವು ಮುಂತಾದ ಅದರ ವಿಶೇಷರೂಪಗಳಿಂದಲೂ (ಅವು) ಪ್ರಿಯವಾಗಲಿ ಅಪ್ರಿಯವಾಗಲಿ, ಶರೀರಕ್ಕೆ ಸಂಬಂಧಪಟ್ಟರಲಿ ಹೊರಗಿನ (ನಡುವೆ) ಬಂದ ನಿಮಿತ್ತಗಳಿಂದಾಗಲಿ – ಯಾವವುಗಳಿಂದಲೂ, ಮುಷ್ಟಿಯಿಂದ ಗುದ್ದುವದೇ ಮುಂತಾದವುಗಳಿಂದ ಆಕಾಶಕ್ಕೆ (ಏನೇನೂ ಆಗದಿರು

1. 'ಪುಷ್ಪಾದ್ಯನುಲೇಪನಾದಿ' ಎಂಬ ಅಚ್ಚಿನಪಾಠದಲ್ಲಿ ಮೊದಲನೆಯ 'ಆದಿ' ಹೆಚ್ಚಿಂದು ಬಿಟ್ಟಿದೆ.

ವಂತೆ) ನನಗೇ ಹೆಚ್ಚು ಅಥವಾ ಕುಂದಿನ ರೂಪದ ಯಾವ ವಿಕಾರವೂ ಆಗಲಾರದು. ಏಕೆಂದರೆ ನಾನು ಸ್ಪರ್ಶವಿಲ್ಲದವನಾಗಿರುತ್ತೇನೆ.

ಹೀಗೆಯೇ ರೂಪಸಾಮಾನ್ಯದಿಂದಲೂ ಸ್ತ್ರೀಯರ ಆಕಾರನೇ ಮುಂತಾದ ಪ್ರಿಯಾಪ್ರಿಯಗಳಾದ ಅದರ ವಿಶೇಷಗಳಿಂದಲೂ ನನಗೆ ಯಾವ ಹಾನಿಯಾಗಲಿ ವೃದ್ಧಿಯಾಗಲಿ ಆಗಲಾರದು. ಏಕೆಂದರೆ ನಾನು ರೂಪವಿಲ್ಲದವನಾಗಿರುತ್ತೇನೆ.

ಹೀಗೆಯೇ ರಸಸಾಮಾನ್ಯದಿಂದಲೂ ಮೂಢಬುದ್ಧಿಯುಳ್ಳವರು ಗ್ರಹಿಸುವ ಸಿಹಿ, ಹುಳಿ, ಉಪ್ಪು, ಕಾರ, ಕಹಿ, ಒಗರು –ಎಂಬ ಅದರ ವಿಶೇಷಗಳಿಂದಲೂ ರಸಸ್ವರೂಪನಲ್ಲದ ನನಗೆ ಯಾವ ಹಾನಿಯಾಗಲಿ ವೃದ್ಧಿಯಾಗಲಿ ಆಗುವಂತಿಲ್ಲ.

ಹೀಗೆಯೇ ಗಂಧಸಾಮಾನ್ಯದಿಂದಲೂ ಬೇಕುಬೇಡವಾಗಿರುವ ಹೂಗಂಧ –ಮುಂತಾದ ಅದರ ವಿಶೇಷಗಳಿಂದಲೂ ಗಂಧಸ್ವರೂಪನಲ್ಲದ ನನಗೆ ಯಾವ ಹಾನಿಯಾಗಲಿ ವೃದ್ಧಿಯಾಗಲಿ ಆಗುವಂತಿಲ್ಲ.

"ಯಾವ (ಆತ್ಮತತ್ತ್ವವಲ್ಲಿ) ಶಬ್ದವಿಲ್ಲವೋ, ಸ್ಪರ್ಶವಿಲ್ಲವೋ, ರೂಪವಿಲ್ಲವೋ, ಯಾವದು ನಾಶವಿಲ್ಲದ್ದೋ ಮತ್ತು ಯಾವದರಲ್ಲಿ ರಸವಿಲ್ಲವೋ ಯಾವದು ನಿತ್ಯವಾಗಿ ಗಂಧವಿಲ್ಲದ್ದೋ (ಅದನ್ನು ಅರಿತುಕೊಂಡರೆ ಮೃತ್ಯುವಿನ ಮುಖದಿಂದ ಬಿಡುಗಡೆಯನ್ನು ಹೊಂದುತ್ತಾನೆ)" ಎಂಬ (ಕ. ೧-೩-೧೫) ಶ್ರುತಿಯಿಂದ[1] (ಇದು ಸಿದ್ಧವಾಗುತ್ತದೆ).

ಅಧ್ಯಾತ್ಮಿಕಪರಿಸಂಖ್ಯಾನ

(ಮೂಲ)

ಕಿಂ ಚ ಯ ಏವ ಬಾಹ್ಯಾಃ ಶಬ್ದಾದಯಃ ತೇ ಶರೀರಾಕಾರೇಣ ಸಂಸ್ಥಿತಾಃ ತದ್ಗ್ರಾಹಕೈಶ್ಚ[2] ಶ್ರೋತ್ರಾದ್ಯಾಕಾರೈಃ, ಅನ್ತಃಕರಣದ್ವಯತದ್ವಿಷಯಾಕಾರೇಣ ಚ। ಅನ್ಯೋನ್ಯಸಂಸರ್ಗಾತ್ಸರ್ವಂ ಸಂಹತತ್ವಾಚ್ಚ ಸರ್ವಕ್ರಿಯಾಸು ॥ ೭೧ ॥

(ಅರ್ಥ)

ಇದಲ್ಲದೆ ಹೊರಗೆ ಶಬ್ದವೇ ಮುಂತಾದವುಗಳಿವೆಯಲ್ಲ, ಅವೇ ಶರೀರದ ಆಕಾರವಾಗಿಯೂ ಅವುಗಳನ್ನು ಗ್ರಹಿಸುವ ಶ್ರೋತ್ರವೇ ಮುಂತಾದ ಇಂದ್ರಿಯಗಳ ಆಕಾರವಾಗಿಯೂ (ಮನಸ್ಸು, ಬುದ್ಧಿ ಎಂಬ) ಎರಡು ಅಂತಃಕರಣಗಳ

---

1. ಶ್ರುತಿಯಲ್ಲಿ ಹೇಳಿರುವ ಪರಮಾತ್ಮ ಸ್ವರೂಪವೇ ನನ್ನ ಆತ್ಮನು ಎಂದು ಅಭಿಪ್ರಾಯ.

2. 'ತತ್ಪರಿಮಾಣಾಶ್ಚೈಃ ತದ್ಗ್ರಾಹಕೈಶ್ಚ' ಎಂಬ ವಾ॥ ಪಾಠವು ತಪ್ಪು.

ಆಕಾರವಾಗಿಯೂ ಅವುಗಳ ವಿಷಯಗಳ ಆಕಾರವಾಗಿಯೂ[1] ಇರುತ್ತದೆ. ಏಕೆಂದರೆ (ಇವು) ಒಂದಕ್ಕೊಂದು ಸೇರಿಕೊಂಡೇ ಇರುತ್ತವೆ, ಎಲ್ಲಾ ಕ್ರಿಯೆಗಳಲ್ಲಿಯೂ ಸಂಹತವಾಗಿಯೂ ಇರುತ್ತವೆ[2].

ಅವಿಕಾರ್ಯತ್ವಪರಿಸಂಖ್ಯಾನ

(ಮೂಲ)

ತತ್ರ ಏವಂ ಸತಿ ವಿದುಷೋ ನ ಮಮ ಕಶ್ಚಿತ್ ಶತ್ರುಃ, ಮಿತ್ರಮ್, ಉದಾಸೀನೋ ವಾ ಅಸ್ತಿ। ತತ್ರ ಯದಿ ಕಶ್ಚಿತ್ ಮಿಥ್ಯಾಜ್ಞಾನಾಭಿಮಾನೇನ ಪ್ರಿಯಮ್, ಅಪ್ರಿಯಂ ವಾ ಪ್ರಯುಯುಜ್ಕ್ಷೀತ ಕ್ರಿಯಾಫಲಲಕ್ಷಣಮ್, ತನ್ಮೃಷೈವ ಪ್ರಯುಯುಜ್ಕ್ಷತೇ ಸಃ। ತಸ್ಯ ಅವಿಷಯತ್ವಾತ್ ಮಮ। "ಅವ್ಯಕ್ತೋಽಯಮಚಿನ್ತ್ಯೋಽಯಮ್" (ಗೀ. ೨-೨೫) ಇತಿ ಸ್ಮೃತೇಃ। ತಥಾ ಸರ್ವೇಷಾಂ ಪರಾಜ್ಞಾನಾಮಪಿ ಭೂತಾನಾಮ್ ಅವಿಕಾರ್ಯಃ। ಅವಿಷಯತ್ವಾತ್। "ಅಚ್ಛೇದ್ಯೋಽಯಮದಾಹ್ಯೋಽಯಮ್" (ಗೀ. ೨-೨೪) ಇತಿ ಸ್ಮೃತೇಃ। ಯಾಪಿ ಶರೀರೇನ್ದ್ರಿಯಸಂಘಾತಮಾತ್ರಮ್ ಉಪಲಕ್ಷ್ಯ ಮದ್ಭಕ್ತಾನಾಂ ವಿಪರೀತಾನಾಂ ಚ ಪ್ರಿಯಾಪ್ರಿಯಾದಿಪ್ರಯುಯುಕ್ಷಾ, ತಜ್ಜಾ ಚ ಧರ್ಮಾಧರ್ಮಾದಿಸಾಪ್ತಿಃ, ಸಾ ತೇಷಾಮೇವ। ನ ತು ಮಯಿ "ಅಜರೋಽಮೃತೋಽಭಯೋ" (ಬೃ. ೪-೪-೨೫)[4] "ನೈನಂ ಕೃತಾಕೃತೇ ತಪತಃ" (ಬೃ. ೪-೪-೨೨), "ನ ಕರ್ಮಣಾ ವರ್ಧತೇ ನೋ ಕನೀಯಾನ್" (ಬೃ. ೪-೪-೨೩), ಸ ಬಾಹ್ಯಾಭ್ಯನ್ತರೋ ಹ್ಯಜಃ" (ಮುಂ. ೨-೧-೨), "ನ ಲಿಪ್ಯತೇ ಲೋಕದುಃಖೇನ ಬಾಹ್ಯಃ" (ಕ. ೨-೨-೧೫) ಇತ್ಯಾದಿಶ್ರುತಿಭ್ಯಃ[5]। ಅನಾತ್ಮವಸ್ತುನಶ್ಚ

---

1. ಮನಸ್ಸಿಗೆ ಸಂಕಲ್ಪವಿಕಲ್ಪಗಳೂ ಬುದ್ಧಿಗೆ ನಿಶ್ಚಯವೂ ವಿಷಯವು.

2. ಆದ್ದರಿಂದ ಇವೂ ಅಚೇತನವೇ ಆಗಿದ್ದು ಚೇತನರೂಪವಾಗಿರುವ ಆತ್ಮನಿಗೋಸ್ಕರವಾಗಿರುತ್ತವೆ. ಇದನ್ನು ಹಿಂದಿನ ಪ್ರಕರಣದಲ್ಲಿ ೫೫ರಲ್ಲಿ ತಿಳಿಸಿಕೊಟ್ಟಿರುತ್ತದೆ.

3. 'ಕ್ರಿಯಾಕ್ರಿಯಾದಿ' ಎಂಬ ಮೈ॥ ನಿ॥ ಪಾಠವು ಅಚ್ಚಿನ ತಪ್ಪು.

4. ಇದು ಶ್ರುತಿಯ ಅಭಿಪ್ರಾಯದ ಅನುವಾದ ಮಾತ್ರ.

5. 'ಸ್ಮೃತಿಭ್ಯಃ' ಎಂಬುದು ಹೆಚ್ಚಿಂದು ಬಿಟ್ಟಿದೆ.

ಅಸತ್ತ್ವಾತ್ ಇತಿ ಪರಮೋ ಹೇತುಃ। ಆತ್ಮನಶ್ಚ ಅವ್ಯಯತ್ವಸ್ಯ ವಿಷಯಾಣಾಂ[1] ದ್ವಯಸ್ಯ ಅಸತ್ತ್ವಾತ್, ಯಾನಿ ಸರ್ವಾಣಿ ಉಪನಿಷದ್ವಾಕ್ಯಾನಿ ವಿಸ್ತರಶಃ ಸಮಾಪ್ತಿತವ್ಯಾನಿ ಸಮಾಪ್ತಿತವ್ಯಾನಿ ॥ ೭೨ ॥

(ಅರ್ಥ)

ಇದು ಹೀಗಿರುವಲ್ಲಿ (ಪರಮಾರ್ಥವನ್ನು) ಬಲ್ಲ ನನಗೆ ಶತ್ರುವಾಗಲಿ, ಮಿತ್ರನಾಗಲಿ, ಉದಾಸೀನನಾಗಲಿ, ಯಾವನೂ ಇರುವದಿಲ್ಲ. (ಹೀಗಿರು)ವಲ್ಲಿ ಯಾವನಾದರೂ ಮಿಥ್ಯಜ್ಞಾನದಿಂದಾದ ಅಭಿಮಾನದಿಂದ ಕ್ರಿಯಾಫಲರೂಪವಾದ ಪ್ರಿಯನನ್ನೋ ಅಪ್ರಿಯನನ್ನೋ (ನನ್ನ ಮೇಲೆ) ಪ್ರಯೋಗಮಾಡಲೆಳಸಿದರೆ ಅದನ್ನು ಅವನು ವ್ಯರ್ಥವಾಗಿಯೇ ಪ್ರಯೋಗಿಸಲೆಳಸಿದಂತೆ; ಏಕೆಂದರೆ ಈ (ಆತ್ಮನು) ಅನ್ಯಕ್ತನು, ಇವನು ಅಚಿಂತ್ಯನು" (ಗೀ. ೨-೨೫) ಎಂದು ಸ್ಮೃತಿಯಿದೆ. ಇದರಂತೆ (ನಾನು) ಪಂಚಭೂತಗಳು ಯಾವವುಗಳಿಂದಲೂ ವಿಕಾರವನ್ನು ಪಡೆಯುತಕ್ಕವನಲ್ಲ; ಏಕೆಂದರೆ (ಅವುಗಳಿಗೆ) ವಿಷಯವಲ್ಲ.[2] ಏಕೆಂದರೆ "ಈ (ಆತ್ಮನು) ಕರ್ತರಿಸುವದಕ್ಕೆ ಆಗದವನು" (ಗೀ. ೨-೨೪) ಎಂದು ಸ್ಮೃತಿಯಿದೆ.

ಇನ್ನು ಶರೀರೇಂದ್ರಿಯಗಳ ಆಕಾರಮಾತ್ರವನ್ನು ಕಂಡು[3] ನನ್ನಲ್ಲಿ ಪ್ರೇಮವಿರುವವರೂ ಇದಕ್ಕೆ ವಿಪರೀತವಾಗಿರುವವರೂ (ನನಗೆ) ಪ್ರಿಯ, ಅಪ್ರಿಯ-ಮುಂತಾದದ್ದನ್ನು ಮಾಡಬೇಕೆಂದು ಬಯಸುವದೂ ಇದರಿಂದಾದ ಪುಣ್ಯಾಪುಣ್ಯಗಳೇ ಮುಂತಾದದ್ದನ್ನು ಪಡೆಯುವದಿದೆಯಲ್ಲ, ಅದು ಅವರಿಗೇ ಹೊರತು ಮುಪ್ಪಿಲ್ಲದವನೂ ಮರಣವಿಲ್ಲದವನೂ ಭಯವಿಲ್ಲದವನೂ (ಬೃ. ೪-೪-೨೫) ಆಗಿರುವ ನನಗಲ್ಲ. (ಪಾಪವನ್ನು) ಮಾಡಿರುವದು, (ಪುಣ್ಯವನ್ನು) ಮಾಡದೆ ಇರುವದು- ಇವು ಇವನನ್ನು 'ಸಂಕಟಗೊಳಿಸುವದಿಲ್ಲ" (ಬೃ. ೪-೪-೨೨), "ಇವನು ಕರ್ಮದಿಂದ ಬೆಳೆಯುವದೂ ಇಲ್ಲ, ಬಡವಾಗುವದೂ ಇಲ್ಲ" (ಬೃ ೪-೪-೨೩), "ಒಳಗೂ ಹೊರಗೂ ಇರುವವನು, ಜನ್ಮರಹಿತನಾಗಿರುವವನು" (ಮುಂ. ೨-೧-೨) "ಲೋಕದುಃಖಕ್ಕೆ ಹೊರಚ್ಚಾಗಿರುವ (ಆತನಿಗೆ ಅದು) ಅಂಟುವದಿಲ್ಲ" (ಕ. ೨-೨-೧೫)- ಇವೇ ಮುಂತಾದ ಶ್ರುತಿಗಳಿಂದ[4] (ಇದು

---

1. 'ಅವ್ಯಯತ್ವೇ' ಎಂಬ ವಾ॥ ಪಾಠವು ಸರಿಯಲ್ಲ.

2. ವಿಷಯದಿಂದ ವಿಷಯಿಗೆ ಯಾವ ವಿಕಾರವೂ ಆಗುವದಿಲ್ಲ ಎಂದು ಅಭಿಪ್ರಾಯ.

3. ಆತ್ಮಸ್ವರೂಪವನ್ನು ನೋಡದೆಯೆಂದುಕೊಳ್ಳದೆ ಎಂದರ್ಥ.

4. ಇಲ್ಲಿ 'ಸ್ಮೃತಿಭ್ಯಃ' ಎಂಬ ಪಾಠವು ಮೂಲದಲ್ಲಿರುವದು ಬೇಕಿಲ್ಲ; ಏಕೆಂದರೆ ಇಲ್ಲಿ ಸ್ಮೃತಿಗಳನ್ನು ಉದಾಹರಿಸಿಲ್ಲ.

ಸಿದ್ಧವಾಗುತ್ತದೆ). **ಅನಾತ್ಮನಸ್ತುವು ಇಲ್ಲದಿರುವದರಿಂದಲೂ (ನನಗೆ ಯಾವ ವಿಕಾರವೂ ಆಗುವದಿಲ್ಲ, ಎಂಬುದು ಮುಖ್ಯಹೇತುವು[1].** ಹೀಗೆ ದ್ವೈತವು ಇಲ್ಲದಿರುವದರಿಂದ ಆತ್ಮನು ಅದ್ವಿತೀಯನು ಎಂಬುದನ್ನು ತಿಳಿಸುವ ಉಪನಿಷದ್ವಾಕ್ಯಗಳಿರುವವಷ್ಟೆ, (ಅವನ್ನು) ವಿಸ್ತಾರವಾಗಿ ಚೆನ್ನಾಗಿ ನೋಡುತ್ತಿರಬೇಕು, ಚೆನ್ನಾಗಿ ನೋಡುತ್ತಿರಬೇಕು[2].

ಇತಿ ಶ್ರೀಮಚ್ಛಙ್ಕರಭಗವತ್ಪಾದಕೃತೌ ಉಪದೇಶಸಾಹಸ್ರ್ಯಾಂ
ಗದ್ಯಪ್ರಬನ್ಧಃ ಸಮಾಪ್ತಃ

1. ಅದ್ವಿತೀಯನಾದವನಿಗೆ ವಿಕಾರಹೇತುವೇ ಇರುವದಿಲ್ಲವೆಂದು ಭಾವ.
2. ಈ ದ್ವಿರುಕ್ತಿಯು ಗ್ರಂಥಸಮಾಪ್ತಿಯನ್ನು ಸೂಚಿಸುವದು.

ಮೂರನೆಯ ಪ್ರಕರಣದ ಸಾರ

೬೪. ಅವಿದ್ಯೆಯಿಂದ ರಾಗಾದಿಮೋಷಗಳೂ ಅವುಗಳಿಂದ ತ್ರಿಕರಣದ ಪ್ರವೃತ್ತಿಯೂ ಅದರಿಂದ ಸಂಸಾರವೂ ಆಗಿರುತ್ತವೆ. ಆದ್ದರಿಂದ ಅವಿದ್ಯೆಯ ಪರಿಹಾರದ ಮೂಲಕ ಸಂಸಾರಾನರ್ಥವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಈ ಪರಿಸಂಖ್ಯಾನಕ್ರಮವನ್ನು ಅನುಸರಿಸಬೇಕು.

೬೯-೭೦. ಪ್ರಪಂಚವೆಲ್ಲ ಶಬ್ದಸ್ಪರ್ಶರೂಪರಸಗಂಧಗಳ ಪರಿಣಾಮವಾಗಿರುತ್ತವೆ. ಇವು ಅಚೇತನವಾಗಿಯೂ ಚೇತನನಾದ ಆತ್ಮನಿಗೋಸ್ಕರ ಸಂಘತವಾಗಿ ಕೆಲಸಮಾಡುವ ರೀತಿಯಲ್ಲಿಯೂ ಇರುತ್ತವೆ. ಅವುಗಳನ್ನು ಅರಿಯುತ್ತಿರುವದರಿಂದ ಆತ್ಮನು ಅವುಗಳಿಗಿಂತ ವಿಲಕ್ಷಣಸ್ವರೂಪನಾಗಿರುತ್ತಾನೆ. ಆದ್ದರಿಂದ ಶಬ್ದಾದಿಗಳಿಂದ ತನಗೆ ತೊಂದರೆಯಾಗುತ್ತಿದೆಯೆಂದು ತೋರಿದಾಗಲೆಲ್ಲ, "ಶಬ್ದಾದಿಗಳು ಸಾಮಾನ್ಯರೂಪದಿಂದಲಾಗಲಿ ಷಡ್ಜಾದಿವಿಶೇಷರೂಪದಿಂದಾಗಲಿ ನನ್ನನ್ನು ಏನೂ ಮಾಡುವದಿಲ್ಲ; ಏಕೆಂದರೆ ಇವು ವಿಷಯವು, ನಾನು ಅವುಗಳಿಗೆ ಗೋಚರನಲ್ಲದವನು, ನನ್ನಲ್ಲಿ ಯಾವ ಶಬ್ದಸ್ಪರ್ಶರೂಪರಸಗಂಧವೂ ಇಲ್ಲ" ಎಂಬುದನ್ನು ಮನಸ್ಸಿನಲ್ಲಿ ಹೊರಳಾಡಿಸಬೇಕು.

೭೧-೭೨. ಒಳಗೆ ಶರೀರ, ಇಂದ್ರಿಯ, ಅಂತಃಕರಣ – ಎಂಬ ರೂಪದಿಂದಲೂ ಅದೇ ಶಬ್ದಾದಿಗಳೇ ಪರಿಣತವಾಗಿರುವದರಿಂದ ಅವುಗಳ ಸಂಬಂಧವೂ ಆತ್ಮನಿಗಿಲ್ಲ. ಆದರಿಂದ "ಶತ್ರುಮಿತ್ರಾದಿಗಳು ಮಾಡುವ ತಿರಸ್ಕಾರ, ಪೂಜೆ – ಮುಂತಾದವುಗಳು ಯಾವವೂ ನನಗೆ ಅಂಟುವದಿಲ್ಲ. ನಾನು ಅವಿಕಾರ್ಯನು, ಯಾವ ಸುಖದುಃಖಗಳೂ ಅಂಟದವನು. ಏಕೆಂದರೆ ಏತಕ್ಕೂ ನಾನು ವಿಷಯನಲ್ಲ" ಎಂದು ಚಿಂತಿಸುತ್ತಿರಬೇಕು. ನಿಜವಾಗಿ ನೋಡಿದರೆ ಯಾವ ವಿಷಯವೂ ಇಲ್ಲವೇ ಇಲ್ಲ. ಆತ್ಮನು ಅದ್ವಿತೀಯನಾಗಿರುತ್ತಾನೆ. ಇದನ್ನು ತಿಳಿಸುವ ಉಪನಿಷದ್ವಾಕ್ಯಗಳನ್ನು ಚಿಂತಿಸುತ್ತಿರಬೇಕು.



ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಗ್ರಂಥದ ಭಾಗವನ್ನು ಸೂಚಿಸುವವು.

೧. ಅಕ್ರೋಧಾದಯಃ—

ತತ್ತ್ವವನ್ನು ತಿಳಿಯದೆ ಇರುವದಕ್ಕೆ ಕಾರಣವಾದ ಆಡಿಗಳು, ಆಪಸ್ತಂಬ ಧರ್ಮಸೂತ್ರದಲ್ಲಿ ಹೇಳಿರುವವು, ೪.

೨. ಅಗ್ರಹಣೇ ಹೇತವಃ—

ತತ್ತ್ವವನ್ನು ತಿಳಿಯದೆ ಇರುವ ಕಾರಣಗಳು, ೪.

೩. ಅಚಿತಿಮತ್, ಅಚೇತನ—

ಚೈತನ್ಯವಿಲ್ಲದ, ಅರಿವಿಲ್ಲದ ೪೫,೪೬,೪೮.

೪. ಅಚಿನ್ಮಾತ್ರಶಕ್ತಿಃ—

ಇಂಥದ್ದೆಂದು ತರ್ಕಿಸುವದಕ್ಕೆ ಆಗದ ಶಕ್ತಿಯುಳ್ಳ ಪರಮಾತ್ಮ, ೧೩.

೫. ಅಜ್ಞಾನಮ್—

ತಿಳಿಯದೆ ಇರುವದು, ತಪ್ಪಾಗಿ ತಿಳಿದುಕೊಂಡಿರುವದು, ೨೪.

೬. ಅದ್ವಯತ್ವಮ್, ಅದ್ವೈತಭಾವಃ—

ತನಗೆ ಎರಡನೆಯದು ಇಲ್ಲದಿರುವಿಕೆ, ಆತ್ಮಸ್ವಭಾವ, ೬೬, ೭೨.

೭. ಅಧ್ಯಾರೋಪಣ, ಅಧ್ಯಾರೋಪಣಾ, ಆರೋಪಣಾ—

ಒಂದರಮೇಲೆ ಅದರಲ್ಲಿಲ್ಲದ್ದನ್ನು ಹಾಕಿ ಹುಟ್ಟುಗಟ್ಟುವದು, ಅಧ್ಯಾಸ, ೩೬, ೩೭, ೪೩, ೪೪.

೮. ಅಧ್ಯಾರೋಪಿತ—

ಒಂದರಲ್ಲಿ ಹುಟ್ಟುಗಟ್ಟಿದ ಕಸ್ಪೆಯ ಚಿಪ್ಪಿನ ಬೆಳ್ಳಿಯಂಥ ವಸ್ತು, ೪೦.

೯. ಅನರ್ಥಬೀಜಭೂತ—

ತೊಂದರೆಗಳಿಗೆಲ್ಲ ಕಾರಣವಾಗಿರುವ (ಅಧ್ಯಾರೋಪ), ೪೪, ೪೫.

೧೦. ಅನವಸ್ಥಾ—

ಹಿಂದುಹಿಂದಿನದು ಸಿದ್ಧಿಯಾಗದೆ ಇರುವದರಿಂದ ಮುಂದುಮುಂದಿನದು ಸಿದ್ಧವಾಗದೆ ಇರುವದು ಎಂಬ ತರ್ಕದೋಷ, ೫೯, ೬೨.

೧೧. ಅನಾತ್ಮಾ—

ಆತ್ಮನಲ್ಲದ್ದು, ವಿಷಯ, ೩೬, ೩೯, ೬೦, ೭೨.

೧೨. ಅನ್ತಃಕರಣದ್ವಯಮ್—

ಮನಸ್ಸು, ಬುದ್ಧಿ- ಎಂಬ ಮನಸ್ಸಿನ ಎರಡು ವೃತ್ತಿಗಳು, ೭೧.

೧೩. ಅನ್ಯೋನ್ಯಾರ್ಥತ್ವಮ್—

ಎರಡು ಪದಾರ್ಥಗಳಲ್ಲಿ ಪ್ರತಿಯೊಂದೂ ಇನ್ನೊಂದಕ್ಕಾಗಿರುವದು, ೪೬, ೪೭.

೧೪. ಅಭೇದದರ್ಶನಮ್, ಅಭೇದಪ್ರತಿಪತ್ತಿಃ, ಅಭೇದವಿಜ್ಞಾನಮ್—

ಆತ್ಮನೂ ಬ್ರಹ್ಮವೂ ಒಂದೇ ಎಂದು ಅರಿತುಕೊಳ್ಳುವದು, ೨೦, ೨೧.

೧೫. ಅಭೇದದರ್ಶನಮ್—

ತಾನೂ ಪರಮಾತ್ಮನೂ ಒಬ್ಬನೇ ಎಂದು ಅರಿತುಕೊಳ್ಳುವಿಕೆ, ೪೬.

೧೬. ಅಭ್ಯುದಯನಿಃಶ್ರೇಯಸ ಸಾಧನಾನಿ—

ಸ್ವರ್ಗಾದಿಫಲಕ್ಕೂ ಪರಮಪುರುಷಾರ್ಥಕ್ಕೂ ಸಾಧನಗಳು, ೨೩.

೧೭. ಅಮಾನಿತ್ವಾದಿಗಣಃ—

ಅಮಾನಿತ್ವವೇ ಮುಂತಾದ ಜ್ಞಾನಸಾಧನಗಳ ಗುಂಪು, ೪.

೧೮. ಅವಗತಿಃ—

ಪ್ರಮಾಣದ ಫಲವಾದ ಅರಿವು, ೫೮, ೫೯, ೬೦, ೬೧, ೬೨, ೬೩, ೬೪, ೬೫.

೧೯. ಅವಗತ್ಯವಸಾನಪ್ರತ್ಯಯಃ–

ವಸ್ತುವಿನ ಅರಿವಿನಲ್ಲಿ ಕೊನೆಗಾಣುವ ಅಂತಃಕರಣದ ವೃತ್ತಿ, ೬೩.

೨೦. ಅವಗನ್ತಾ—

ಅರಿತುಕೊಳ್ಳುವವನು, ೬೦.

೨೧. ಅವಿದ್ಯಾ—

ತಪ್ಪು ತಿಳಿವಳಿಕೆ, ಆತ್ಮನ ಸ್ವರೂಪವನ್ನು ತಪ್ಪಾಗಿ ತಿಳಿದುಕೊಂಡಿರುವವನು, ೧೬, ೨೭, ೨೮, ೨೯, ೩೩, ೩೪, ೩೬, ೪೦, ೫೩, ೬೭.

೨೨. ಅವಿದ್ಯಾಧ್ಯಾರೋಪಿತ, ಅವಿದ್ಯಾಕಾರ್ಯ, ಅವಿದ್ಯಾಕೃತ—

ಆತ್ಮನನ್ನು ತಪ್ಪಾಗಿ ತಿಳಿದುಕೊಂಡದ್ದರಿಂದ ಕಲ್ಪಿಸಿಕೊಂಡಿರುವ, ೨೭, ೨೯, ೪೦.

೨೩. ಅವ್ಯಾಕೃತ—

ನಾಮರೂಪಗಳೆಂದು ವಿಂಗಡವಾಗದ, (ಜಗದ್ಬೀಜ), ೧೩, ೧೪, ೧೫.

೨೪. ಅಶನಾಯಾದಿವರ್ಜಿತ—

ಹಸಿವು ಬಾಯಾರಿಕೆ, ಮುಪ್ಪು ಮರಣ, ಶೋಕಮೋಹ– ಇವುಗಳಿಲ್ಲದ ಪರಮಾತ್ಮ, ೧೩.

೨೫. ಅಸಂಸರ್ಗಿ—

ಯಾವದರ ಸಂಬಂಧವೂ ಇಲ್ಲದ, ಅಸಂಗನಾದ, ೭೦.

೨೬. ಅಸಂಸಾರೀ—

ಜನನಮರಣಾದಿಸಂಸಾರವಿಲ್ಲದ ಪರಮಾತ್ಮ, ೧೯.

೨೭. ಅಸಂಹತ—

ಮತ್ತೊಂದರೊಡನೆ ಸೇರಿಕೊಂಡು ತಮಗಿಂತ ಬೇರೆಯಾದವನ ಪ್ರಯೋಜನಕ್ಕಾಗಿ ಕೆಲಸಮಾಡದ ಆತ್ಮ, ೪೧, ೪೪, ೬೨.

೨೮. ಅಸತ್ತ್ವಮ್. ನಾಸ್ತಿತ್ವಮ್—

ನಿಜವಾಗಿಲ್ಲದ, ತೋರಿಕೆಯ, ೬೨, ೬೬, ೭೨.

೨೯. ಅಹಂಪ್ರತ್ಯಯವಿಷಯಃ–

ನಾನು ಎಂಬ ಅರಿವಿನಿಂದ ತಿಳಿಯಬರುವ ಆತ್ಮ, ೩೭, ೩೮.

೩೦. ಅಹಂಪ್ರತ್ಯಯಃ—

ಅಂತಃಕರಣದ ವೃತ್ತಿಗಳಾದ ನೀಲ ಪೀತಾದಿಪ್ರತ್ಯಯಗಳು, ೪೮.

೩೧. ಅಹಿಂಸಾದಯಃ—

ಯೋಗಸೂತ್ರದಲ್ಲಿ ಹೇಳಿರುವ ಅಹಿಂಸೆಯೇ ಮುಂತಾದ ಯಮಗಳು, ೪.

೩೨. ಆಕಾಶಃ—

[೧] ಪಂಚಭೂತಗಳಲ್ಲಿ ಒಂದು, ೧೪.
[೨] ಪರಮಾತ್ಮ, ೭, ೧೩.

೩೩. ಆಗನ್ತುಕ—

ಸಹಜವಲ್ಲದ, ನಡುವೆ ಬಂದಿರುವ, ೫೪, ೫೫.

೩೪. ಆಚಾರ್ಯಃ—

ತತ್ತ್ವವನ್ನು ತಾನೂ ತಿಳಿದುಕೊಂಡು ಶಾಸ್ತ್ರಕ್ಕನುಗುಣವಾಗಿ ಬೋಧಿಸಬಲ್ಲ ಗುರು, ೫, ೯, ೧೧, ೨೭.

೩೫. ಆತ್ಮಾ—

ಜೀವರ ಸ್ವರೂಪ, ಪರಮಾತ್ಮ, ೨೫, ೨೭, ೩೬, ೩೯.

೩೬. ಆತ್ಮೈಕ್ಯಮ್—

ಆತ್ಮನು ಒಬ್ಬನೇ ಎಂಬುದು, ೬.

೩೭. ಆವಿರ್ಭಾವತಿರೋಭಾವವರ್ಜಿತ—

ತೋರಿಕೊಳ್ಳುವದು, ಮರೆಯಾಗುವದು– ಎಂಬ ವಿಕಾರವಿಲ್ಲದ (ಆತ್ಮ), ೧೩.

೩೮. ಇತರೇತರಾಧ್ಯಾರೋಪಣಾ–

ಎರಡು ವಸ್ತುಗಳನ್ನು ಒಂದರಲ್ಲೊಂದನ್ನು ಕಲ್ಪಿಸುವದು, ಆತ್ಮನನ್ನೂ ಅನಾತ್ಮನನ್ನೂ ಒಂದರಲ್ಲೊಂದನ್ನು ಹುಟ್ಟುಗಟ್ಟುವ ಅಧ್ಯಾಸ, ೩೮, ೪೦, ೪೪.

೩೯. ಇನ್ದ್ರಿಯಾಣಿ—

ಶ್ರೋತ್ರಾದಿ ಕರಣಗಳು, ಮತ್ತು ವಾಗಾದಿಕರಣಗಳು, ೧೪.

೪೦. ಇಷ್ಟಾನಿಷ್ಟಪ್ರಾಪ್ತಿಪರಿಹಾರೋಪಾಯಃ—

ಬೇಕಾದವನ್ನು ಪಡೆದುಕೊಳ್ಳುವದಕ್ಕೂ ಬೇಡವಾದದ್ದನ್ನು ತೊಲಗಿಸಿಕೊಳ್ಳುವದಕ್ಕೂ ಸಾಧನ, ೨೪.

೪೧. ಉಪಸನ್ನಃ—

ಶಾಸ್ತ್ರದಲ್ಲಿ ವಿಹಿತವಾಗಿರುವಂತೆ ಗುರುವಿನಬಳಿಗೆ ಶಿಷ್ಯನಾಗಿ ಬಂದವನು, ೨.

೪೨. ಏಕರಸಃ—

ಮತ್ತೊಂದರ ಮಿತ್ರವಿಲ್ಲದೆ ಒಂದೇ ಜಾತಿಯಾಗಿರುವ, ೨೭.

೪೩. ಏಕದೇಶೋಪಲಬ್ಧಿಃ—

ಸ್ವಲ್ಪಭಾಗವನ್ನು ಮಾತ್ರ ಅರಿಯುವದು, ೪೯.

೪೪. ಏಷಣಾ—

ಪುತ್ರ, ವಿತ್ತ, ಲೋಕ– ಇವುಗಳ ಬಯಕೆ, ೨, ೨೯.

೪೫. ಕರ್ಮಸಾಧನಾನಿ—

ಯಜ್ಞೋಪವೀತಾದಿಗಳು, ೫, ೨೧, ೨೨, ೨೩, ೨೯.

೪೬. ಕರ್ಮೋಪಾದಾನಮ್—

ಕರ್ಮವನ್ನು ಸ್ವೀಕರಿಸುವದು, ಕರ್ಮವನ್ನು ಮಾಡುವದು, ೨೧.

೪೭. ಕಾದಾಚಿತ್ಕಸಿದ್ಧಿಃ—

ಯಾವಾಗಲೂ ಇಲ್ಲದೆ ಯಾವಾಗಲೋ ಪ್ರಮಾಣದಿಂದ ಸಿದ್ಧವಾಗತಕ್ಕದ್ದು, ೪೩.

೪೮. ಕಾರ್ಯಕರಣಾನಿ—

ದೇಹವೂ ಇಂದ್ರಿಯಗಳೂ, ೫೯, ೬೨.

೪೯. ಕೂಟಸ್ಥ—

ಯಾವ ವಿಕಾರವೂ ಇಲ್ಲದೆ ಇದ್ದಂತಿರುವ, ೪೬, ೪೮, ೪೯, ೫೯, ೫೧, ೫೩, ೫೩.

೫೦. ಕೂಟಸ್ಥನಿತ್ಯ—

ಮಾರ್ಪಡದೆಯೂ ನಾಶವಾಗದೆಯೂ ಇರುವ, ೪೯, ೫೩, ೬೫.

೫೧. ಕ್ಷೇತ್ರಮ್—

ಅನಾತ್ಮವಾದ ದೇಹಾದಿವಿಷಯ, ೨೫.

೫೨. ಘಟೀಯನ್ತ್ರಮ್—

ನೀರಿನ ಪಾತ್ರೆಯನ್ನು ಭಾವಿಗೆ ಬಿಡುವದಕ್ಕೂ ಎತ್ತುವದಕ್ಕೂ ಉಪಯೋಗಿಸುವ ರಾಟೆ, (ಸಂಸಾರಚಕ್ರಕ್ಕೆ ದೃಷ್ಟಾಂತ), ೧೦.

೫೩. ಚಿತಿಮತ್, ಚೈತನ್ಯಮ್—

ಚೈತನ್ಯವುಳ್ಳದ್ದು, ಆತ್ಮ, ೪೫, ೪೬, ೫೪, ೫೫, ೫೬, ೬೦.

೫೪. ಚಿತ್ತಪ್ರಚಾರಾಃ—

ಮನಸ್ಸಿನ ವೃತ್ತಿಗಳು, ೪೯, ೫೨.

೫೫. ಜಗದ್ಬೀಜಭೂತೇ—

ನಾಮರೂಪಗಳಿಂದ ವಿಂಗಡವಾಗಿರುವ ಜಗತ್ತಿಗೇ ಉಪಾದಾನಕಾರಣವಾಗಿರುವ ಅವ್ಯಕ್ತನಾಮರೂಪಗಳು, ೧೩.

೫೬. ಜಾತ್ಯನ್ವಯಸಂಸ್ಕಾರವರ್ಜಿತಃ—

ಜಾತಿ, ವಂಶ, ಬ್ರಹ್ಮಚರ್ಯಾದ್ಯಾಶ್ರಮಸಂಸ್ಕಾರ– ಇವುಗಳಿಲ್ಲದ ಆತ್ಮ, ೧೧, ೧೨, ೧೪.

೫೭. ಜ್ಞಾನಮ್—

ಆತ್ಮನನ್ನು ಅರಿತುಕೊಳ್ಳುವದು, ೨, ೩, ೪.

೫೮. ತತ್ತ್ವನ್ಯತ್ವಾಭ್ಯಾಮ್ ಅನಿರ್ವಚನೀಯೇ—

ಪರಮಾತ್ಮನೆಂದಾಗಲಿ ಅವನಿಗಿಂತ ಬೇರೆಯೆಂದಾಗಲಿ ಗೊತ್ತುಪಡಿಸಿ ಹೇಳುವದಕ್ಕಾಗದ್ದು, ೧೪.

೫೯. ತಲಮಲಿನತ್ವಮ್—

ಆಕಾಶದಲ್ಲಿ ಕಲ್ಪಿಸಿದ ತಳದ ಕಪ್ಪು, (ಅನಾತ್ಮದ ಹುಸಿತೋರಿಕೆಗೆ ದೃಷ್ಟಾಂತ), ೪೦.

೬೦. ತಿಮಿರದೃಷ್ಟಿಃ—

ಪರೆಗಣ್ಣಿನವನು (ಅವನು ನೋಡುವ

ಅನೇಕ ಚಂದ್ರರು ದ್ವೈತಕ್ಕೆ ದೃಷ್ಟಾಂತ), ೨೭.

೬೧. ದೃಷ್ಟಾದೃಷ್ಟಭೋಗಾಃ—
ಕಾಣಬಹುದಾದ (ಈ ಲೋಕದ), ಕಾಣುವದಕ್ಕಾಗದ (ಪರಲೋಕದ) ಭೋಗಗಳು, ೫.

೬೨. ದೇವಃ—
ಪರಮಾತ್ಮ, ೧೯.

೬೩. ಧರ್ಮಾಧರ್ಮೌ—
ಬೇರೆಬೇರೆಯ ಶರೀರಕ್ಕೆ ಕಾರಣವಾಗಿರುವ ಪುಣ್ಯಪಾಪಗಳು, ೧೦.

೬೪. ನಾಮರೂಪೇ—
ಆಕಾಶವೇ ಮುಂತಾದ ಜಗತ್ತಿನ ಮೂಲರೂಪವಾದ ನಾಮ ಮತ್ತು ರೂಪಗಳು, ೧೩, ೧೪, ೧೫, ೧೮, ೧೯.

೬೫. ನಿತ್ಯಾವಗತಿಸ್ವರೂಪಃ, ಚೈತನ್ಯಸ್ವರೂಪಃ—
ನಿತ್ಯವಾಗಿರುವ ಅರಿವಿನ ಸ್ವರೂಪವಾದ ಆತ್ಮನು, ೫೪, ೫೫, ೬೨.

೬೬. ನಿರ್ವಿಶೇಷತ್ವಮ್—
ಇಂಥದ್ದು, ಅಂಥದ್ದು— ಎಂಬ ವಿಶೇಷವಿಲ್ಲದಿರುವದು, ೪೭.

೬೭. ಪಞ್ಚಮಹಾಭೂತಾನಿ—
ಆಕಾಶಾದಿಸೂಕ್ಷ್ಮಭೂತಗಳು, ೧೫, ೧೬.

೬೮. ಪರ ಆತ್ಮಾ, ಪರಮಾತ್ಮಾ, ಪರಂ ಬ್ರಹ್ಮ—
ಪರಮಾರ್ಥವಾಗಿರುವ ಅಪರಿಚ್ಛಿನ್ನಚೈತನ್ಯರೂಪನಾದ ಆತ್ಮನು, ೬, ೧೦, ೧೩, ೧೪, ೧೫, ೨೦, ೨೧, ೨೨, ೪೫, ೪೬.

೬೯. ಪರಮಾರ್ಥದರ್ಶನಮ್
ನಿಜವಾಗಿರುವ ಜ್ಞಾನವು, ಅದ್ವೈತ ಜ್ಞಾನವು, ೨೯.

೭೦. ಪರಮಾರ್ಥದರ್ಶೀ—
ನಿಜವಾದ ಜ್ಞಾನವುಳ್ಳವನು, ಅದ್ವೈತ ಜ್ಞಾನಿ, ೨೪.

೭೧. ಪರಾರ್ಥ—
ಮತ್ತೊಂದಕ್ಕಾಗಿರುವ, ಸ್ವತಂತ್ರವಲ್ಲದ ಅನಾತ್ಮ, ೪೧, ೫೫, ೬೦, ೬೬.

೭೨. ಪರಿಚ್ಛಿತ್ತಿಃ—
ಗೊತ್ತುಪಡಿಸಿ ಅರಿತುಕೊಳ್ಳುವದು, ೫೭.

೭೩. ಪರಿವ್ರಾಟ್—
ಸಂನ್ಯಾಸಿ. ಸಕಲಕರ್ಮಗಳನ್ನೂ ಕರ್ಮಸಾಧನಗಳನ್ನೂ ತೊರೆದ ಮುಮುಕ್ಷು, ೧೭.

೭೪. ಪರಿಸಂಖ್ಯಾನಮ್—
ತತ್ತ್ವವನ್ನು ಮನಸಲ್ಲಿಯೇ ಚಿಂತಿಸಿಕೊಳ್ಳುವದು, ೬೮.

೭೫. ಪ್ರತ್ಯಕ್ಷ—
ಎದುರಿಗಿರುವ, ಅನುಭವಕ್ಕೆ ಗೋಚರವಾಗಿರುವ, ೨೩, ೨೪.

೭೬. ಪ್ರತ್ಯಕ್ಷಾದೀನಿ—
ಪ್ರತ್ಯಕ್ಷ, ಅನುಮಾನ— ಮುಂತಾದ ಶಬ್ದೇತರ ಪ್ರಮಾಣಗಳು, ೨೬, ೪೬, ೪೦, ೪೩, ೬೩, ೬೪.

೭೭. ಪ್ರತ್ಯಯಃ—
ಅಂತಃಕರಣದ ವೃತ್ತಿಗಳು, ೪೮, ೪೯, ೫೦.

೭೮. ಪ್ರಮಾಣಮ್—
ಅರಿಯುವದಕ್ಕೆ ಸಾಧನವಾದ ಪ್ರತ್ಯಕ್ಷವೇ ಮುಂತಾದದ್ದು, ೫೭, ೫೯, ೬೫.

೭೯. ಪ್ರಮಾಣನಿರಪೇಕ್ಷ—
ಪ್ರಮಾಣವನ್ನು ಬಯಸದೆ ಸಿದ್ಧವಾಗುವ, ೫೮, ೬೬.

೮೦. ಪ್ರಮಾಣಾಪೇಕ್ಷ—
ಪ್ರಮಾಣಗಳಿಂದಲೇ ಸಿದ್ಧವಾಗುವ, ೫೭, ೫೯, ೬೪.

೮೧. ಪ್ರಮಾ—
ಪ್ರಮಾಣದಿಂದಾಗುವ ಅರಿವು, ಸರಿಯಾದ ಅರಿವು, ಅವಗತಿ, ೫೮, ೬೦, ೬೧.

೮೨. ಪ್ರಮೇಯಮ್—
ಪ್ರಮಾಣಕ್ಕೆ ಗೋಚರವಾದದ್ದು, ವಿಷಯ, ೫೭, ೭೯.

೮೩. ಪ್ರಸಿದ್ಧ—
ಪ್ರಮಾಣದಿಂದ, ಆಥವಾ ತಾನೇ ಸಿದ್ಧವಾಗಿರುವ, ೩೬, ೩೭, ೩೮, ೩೮,

೮೪. ಫಲಮ್, ಪ್ರಮಾಣಫಲಮ್
ಪ್ರಮಾಣದ ವ್ಯಾಪಾರದ ಕೊನೆಯಲ್ಲಿ ಕಾಣಿಸಿಕೊಳ್ಳುವ ಅರಿವು ೫೨, ೬೧, ೬೪, ೬೫,

೮೫. ಭೇನಸ್ಥಾನೀಯೇ
ನೀರಿಗಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳುವದಕ್ಕೆ ಬಾರದಿರುವ ಸೊರೆಯಂತ್ಪರಮಾತ್ಮನಿಂದ ಬೇರೆಯೆಂದು ಆಥವಾ ಬೇರೆಯಲ್ಲವೆಂದು ಹೇಳುವದಕ್ಕಾಗದಿರುವ ಸಾಮಾನ್ಯರೂಪಗಳು, ೧೫.

೮೬. ಬಲ್ಯುಪಹಾರನಮುಸ್ಕಾರಾದಯಃ—
ತನಗಿಂತ ಬೇರೆಯೆಂದು ಭಾವಿಸಿದ ಪರಮೇಶ್ವರನ ಆರಾಧನೆಗೆ ಉಪಯೋಗಿಸುವ ಬಲಿಯೇ ಮುಂತಾದ ಸಾಧನಗಳು, ೧೯.

೮೭. ಬಾಧ್ಯ—
ಜ್ಞಾನದಿಂದ ಅಸತ್ಯವಾಗಿ ತೋರುವ, ೫೪.

೮೮. ಬೌದ್ಧಪ್ರತ್ಯಯಃ—
ಅಂತಃಕರಣದಲ್ಲಾಗುವ ವೃತ್ತಿ, ೫೦, ೫೧, ೫೩.

೮೯. ಬ್ರಹ್ಮ—
ಪರಮಾತ್ಮ, ೭.

೯೦. ಬ್ರಹ್ಮವಿತ್—
ಬ್ರಹ್ಮಜ್ಞಾನಿ, ೫.

೯೧. ಬ್ರಹ್ಮವಿದ್ಯಾ—
ಬ್ರಹ್ಮದ ಜ್ಞಾನ, ೨.

೯೨. ಬ್ರಹ್ಮಣಿ ಸ್ಥಿತಃ—
ಬ್ರಹ್ಮವೇ ತಾನೆಂಬ ಬುದ್ಧಿಯಿಂದ ಅದರಲ್ಲಿ ನೆಲೆಸಿಂತವನು, ೫.

೯೩. ಭಾವರೂಪ—
ಕ್ರಿಯಾರೂಪವಾದ, ೨೫.

೯೪. ಭಿನ್ನಜಾತ್ಯನ್ವಯ ಸಂಸ್ಕಾರಮ್—
ಬೇರೆಬೇರೆಯ ಜಾತಿ, ವಂಶ, ಕರ್ಮದಿಂದಾಗುವ ಸಂಸ್ಕಾರ_ ಇವುಗಳುಳ್ಳ ಶರೀರ, ೧೧,೧೩,೧೭,೧೮.

೯೫. ಭೇದದರ್ಶನಮ್, ಭೇದಪ್ರತಿಪತ್ತಿಃ—
ಭೇದವನ್ನು ಸತ್ಯವೆಂದು ತಿಳಿಯುವ ತಪ್ಪುತಿಳಿವಳಿಕೆ, ೧೯, ೨೦, ೨೧, ೨೨, ೨೯.

೯೬. ಮನಃ—
ಅಂತಃಕರಣ, ೧೮.

೯೭. ಮಿಥ್ಯಾಜ್ಞಾನಮ್—
ತಪ್ಪುತಿಳಿವಳಿಕೆ, ೭೨.

೯೮. ಮಿಥ್ಯಾಧ್ಯಾರೋಪಣಾ—
ಹುಸಿವಸ್ತುವನ್ನೇ ಕಲ್ಪಿಸಿಕೊಳ್ಳುವದು, ೪೫.

೯೯. ಮುಮುಕ್ಷುಃ—
ಮೋಕ್ಷವನ್ನೇ ಬಯಸುವವನು, ೧, ೨೨, ೬೮.

೧೦೦. ಮೋಕ್ಷಃ—
ಸಂಸಾರಭಯದಿಂದ ಬಿಡುಗಡೆ, ೩೦.

೧೦೧. ಲಬ್ಧಾಗಮಃ—
ಸಾಂಪ್ರದಾಯಿಕವಾದ ಉಪದೇತವನ್ನು ಪಡೆದವನು, ೫.

೧೦೨. ವಿದ್ಯಾ–

ತಿಳಿವಳಿಕೆ, ಬ್ರಹ್ಮಜ್ಞಾನ, ೩, ೬೭.

೧೦೩. ವಿದ್ಯಾಸನ್ತತಿಃ–

ವಿದ್ಯೆಯು ಗುರುಶಿಷ್ಯಪರಂಪರೆಯಿಂದ ಒಂದೇ ಸಮನೆ ಮುಂದೆ ಸಾಗುವದು, ೩.

೧೦೪. ವಿಷಯಾಃ–

ಶಬ್ದಾದಿ ಇಂದ್ರಿಯಾರ್ಥಗಳು, ೬೯.

೧೦೫. ಶಾಸ್ತ್ರಮ್–

ವೇದ, ೨೯.

೧೦೬. ಶುಕ್ತಿಕಾಯಾಂ ರಜತಮ್

ಕಪ್ಪೆಯ ಚಿಪ್ಪಿನಲ್ಲಿ ಹುಟ್ಟುಗಟ್ಟಿದ ಬೆಳ್ಳಿ, ೪೬.

೧೦೭. ಸಂಸಾರಃ–

ಹುಟ್ಟುಸಾವುಗಳು, ಎಚ್ಚರಕನಸುಗಳು, ೧೦,೨೬,೪೦,೪೩,೪೬,೬೭.

೧೦೮. ಸಂಸಾರಗಮನಮ್–

ಸಂಸಾರವನ್ನು ಹೊಂದುವದು, ೨೦.

೧೦೯. ಸಂಸಾರೀ–

ಸಂಸಾರದಲ್ಲಿ ತೊಳಲುತ್ತಿರುವ ಜೀವ, ೧೯, ೨೦, ೨೧, ೨೩, ೪೫.

೧೧೦. ಸಂಸ್ಕಾರಃ–

[೧] ಮಂತ್ರದಿಂದಲೂ ಕರ್ಮದಿಂದ ಆಗುವ ಗುಣವಿಶೇಷ, ೧೬,೧೭,೧೮. [೨] ವೇದನಾದಿಗಳಿಂದ ಮನಸ್ಸಿನಲ್ಲಿ ಉಂಟಾಗುವ ವಾಸನೆ,೨೫,೨೬,

೧೧೧. ಸಂಹತ–

ಮತ್ತೊಂದರೊಡನೆ ಸೇರಿಕೊಂಡು ತನಗಿಂತ ಬೇರೆಯಾದವರ ಪ್ರಯೋಜನಕ್ಕಾಗಿರುವ (ವಸ್ತು) ೪೧, ೪೪, ೫೫, ೬೦, ೬೨, ೭೧.

೧೧೨. ಸಜಿಜ್ಞಾತಃ–

ಸಂಹತವಾದ ಪರತಂತ್ರವಾದ ದೇಹ, ಇಂದ್ರಿಯಾದಿಗಳ ಗುಂಪು, ೪೪, ೪೫,೫೯.

೧೧೩. ಸಮ್ಯಗ್ಜ್ಞಾನಮ್, ಸಮ್ಯಕ್ಪ್ರತ್ಯಯಃ–

ಸರಿಯಾದ ತಿಳಿವಳಿಕೆ, ಆತ್ಮಜ್ಞಾನ, ೩, ೨೯.

೧೧೪. ಸರ್ವಾತ್ಮಾ–

ಎಲ್ಲರಿಗೂ ಆತ್ಮನಾಗಿರುವ ಪರಮಾತ್ಮ, ೧೩.

೧೧೫. ಸಾಧನಸಾಧ್ಯ–

ಸಾಧನದಿಂದ ಪಡೆಯತಕ್ಕ ಅನಿತ್ಯಫಲ, ೨.

೧೧೬. ಸಾಧ್ಯಸಾಧನೇ–

ಪುತ್ರ, ಕರ್ಮ, ಉಪಾಸನೆ– ಎಂಬ ಸಾಧನೆ, ಮನುಷ್ಯಲೋಕ, ಪಿತೃಲೋಕ ಮತ್ತು ದೇವಲೋಕ ಎಂಬ ಸಾಧನ, ೨೭, ೨೮.

೧೧೭. ಸಿದ್ಧಿಃ–

ಪ್ರಮಾಣದ ಫಲವಾದ ಅರಿವು, ೬೪.

೧೧೮. ಸುಷುಪ್ತಿಃ–

ಕನಸಿಲ್ಲದ ಗಾಢನಿದ್ರೆ, ೫೪,೫೫,೫೬.

೧೧೯. ಸ್ಮೃತಿಃ–

[೧] ಶ್ರುತ್ಯರ್ಥವನ್ನು ತಿಳಿಸುವ ಹೌರುಷೇಯ ಗ್ರಂಥವಿಶೇಷ, ೩, ೭, ೧೪, ೨೫, ೨೬. [೨] ಅಂತಃಕರಣ ಧರ್ಮವಾದ ನೆನಪು, ೫೯,೬೦,೬೧.

೧೨೦. ಸ್ವತಃಸಿದ್ಧ, ಸ್ವಯಂಸಿದ್ಧ, ಪ್ರಮಾಣಕ–

ಪ್ರಮಾಣವನ್ನು ಬಯಸದೆ ತಾನೇ ಸಿದ್ಧವಾಗಿರುವ [ಆತ್ಮ] ೫೭, ೫೮, ೬೩, ೬೪, ೬೬.

೧೨೧. ಸ್ವತಃಸಿದ್ಧಿಃ ನಿತ್ಯಸಿದ್ಧಿಃ–

ಪ್ರಮಾಣವನ್ನು ಬಯಸದೆ ತಾನೇ ಸಿದ್ಧವಾಗುವಿಕೆ, ೪೩, ೪೮, ೫೫, ೫೮.

೧೨೨. ಸ್ವಭಾವಃ–

ತನ್ನ ಸ್ವರೂಪ, ೩೧,೩೨,೩೪,೪೬,೪೭.

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಸಂಖ್ಯೆ ೫೨

ಶ್ರೀ ಶಂಕರಾಚಾರ್ಯವಿರಚಿತ

ಉಪದೇಶಸಾಹಸ್ರಿ

(ಪದ್ಯಪ್ರಬಂಧ)

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು:
ಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರು

ಅಧ್ಯಾತ್ಮಗ್ರಂಥಾವಳಿಯ ಕ್ರಮಾಂಕ ೨೨

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ
೧೯೪೯

ಮೊದಲನೆಯ ಸಂಸ್ಕರಣ ೧೯೪೯
(೧೦೦೦ ಪ್ರತಿಗಳು)

ಇವರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯ
All Rights Reserved

ಮುದ್ರಣಕಾರರು:
ವೈ. ನರಸಪ್ಪ
ಅಧ್ಯಾತ್ಮಪ್ರಕಾಶ ಮುದ್ರಣಾಲಯ
ಹೊಳೆನರಸೀಪುರ

ಮೊದಲ ಮಾತು

—ಂ—

ಉಪದೇಶಸಾಹಸ್ರಿಯ ಪದ್ಯಭಾಗವು ಶ್ಲೋಕ, ಶ್ಲೋಕಾರ್ಥ, ಅನ್ವಯ, ಸಂಕ್ಷಿಪ್ತಟಿಪ್ಪಣಿ ಮತ್ತು ವಿಸ್ತಾರವಾದ ಕನ್ನಡವ್ಯಾಖ್ಯಾನಪಾಠ– ಇಷ್ಟು ಪರಿಕರಗಳೊಡನೆ ಕಾರ್ಯಾಲಯದ "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯಲ್ಲಿ ಭಾಗಭಾಗವಾಗಿ ಅಚ್ಚಾಗಿರುತ್ತದೆ. ಅದರ ಸ್ವಲ್ಪಭಾಗವು ಇನ್ನೂ ಪ್ರಕಟವಾಗದೆ ಇರುತ್ತದೆ. ಗ್ರಂಥಕ್ಕೆ ಹೆಚ್ಚಿನ ವಿವರವು ಬೇಕೆನ್ನುವವರು ಆ ಸಂಸ್ಕರಣವನ್ನೇ ಓದಬೇಕು.

ಆದರೆ ಮೂಲಸಮೇತವಾಗಿ ಗದ್ಯಪದ್ಯಭಾಗಗಳೆರಡನ್ನೂ ಹೋಲಿಸಿಕೊಂಡು ಓದಬೇಕೆನ್ನುವವರಿಗೆ ಈ ಸಂಪುಟವು ಹೆಚ್ಚು ಉಪಯುಕ್ತವಾಗಿರುತ್ತದೆ. ಪಾಠಗಳನ್ನು ಶೋಧನೆಮಾಡಿ ಟಿಪ್ಪಣಿಗಳನ್ನು ಅಲ್ಲಲ್ಲಿ ಹಿಗ್ಗಿಸಿ ಶ್ಲೋಕಾನುಕ್ರಮಣಿಕೆಯನ್ನೂ ವಿಚಾರಪ್ರಧಾನವಾದ ಪೀಠಿಕೆಯನ್ನೂ ಶಬ್ದಕೋಶವನ್ನೂ ಸೇರಿಸಿರುವದು ಈ ಪ್ರಕಟನೆಯ ವಿಶೇಷವು. ಈ ಗ್ರಂಥವು ಸಂಗ್ರಹಾಪೇಕ್ಷಿಗಳಿಗೆ ಪ್ರಯೋಜನಕರವಾಗಿರುವದೆಂದು ನಮ್ಮ ಆಶೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
13—10—49

ಪ್ರಕಾಶಕರು

ಪೀಠಿಕೆ

ಗ್ರಂಥಕರ್ತೃ ವಿಚಾರ

ಈ ಗ್ರಂಥರತ್ನಮಾಲೆಯ ಉಪದೇಶಸಾಹಸ್ರೀ ಗದ್ಯಭಾಗದ ಪೀಠಿಕೆಯಲ್ಲಿ ನಾವು ಹೇಳಿರುವಂತೆ ಉಪದೇಶಸಾಹಸ್ರಿಯ ಪದ್ಯಭಾಗವು ಶ್ರೀ ಶಂಕರಾಚಾರ್ಯರವರ ಕೃತಿಯೇ ಎಂದು ನಿಶ್ಚಯಿಸುವದಕ್ಕೆ ಮುಖ್ಯವಾಗಿ ನೈಷ್ಕರ್ಮ್ಯ ಸಿದ್ಧಿಯಲ್ಲಿಯೂ ಬೃಹದಾರಣ್ಯಕದಲ್ಲಿಯೂ ಶ್ರೀ ಸುರೇಶ್ವರಾಚಾರ್ಯರವರು ಈ ಗ್ರಂಥದ ಶ್ಲೋಕಗಳನ್ನು ಭಗವತ್ಪಾದರವರ ಉಕ್ತಿಯೆಂದೇ ಸ್ಪಷ್ಟೋಕ್ತಿಗಳಿಂದ ತಿಳಿಸಿ ಉದಾಹರಿಸಿರುವದೊಂದು ಪ್ರಬಲವಾದ ಬಾಹ್ಯಪ್ರಮಾಣವಾಗಿರುತ್ತದೆ. ಈ ಗ್ರಂಥದ ಶ್ಲೋಕಾನುಕ್ರಮಣಿಕೆಯಲ್ಲಿ ಇಂಥ ಶ್ಲೋಕಪ್ರತೀಕಗಳ ಕೊನೆಯಲ್ಲಿ ನಾವು 'ಸ್ಯೈ.' ಅಥವಾ 'ವಾ.' ಎಂಬ ಸಂಕೇತದಿಂದ ಕೆಲವು ಉದಾಹರಣೆಗಳನ್ನು ಸೂಚಿಸಿರುತ್ತೇವೆ. ಗ್ರಂಥದಲ್ಲಿ ಪ್ರಸ್ಥಾನತ್ರಯಭಾಷ್ಯದಲ್ಲಿ ಪ್ರಮಾಣವೆಂದು ಹಿಡಿದಿರುವ ಮುಖ್ಯೋಪನಿಷತ್ತುಗಳನ್ನೂ ಅವರ ಗ್ರಂಥಗಳನ್ನೂ ಮಾತ್ರವೇ ಉದಾಹರಿಸಿರುವದು, ವಿಚಾರಸರಣಿಯಲ್ಲಿ ಉಚ್ಚಕೋಟಿಯ ಯುಕ್ತಿಗಳನ್ನು ಬಳಸಿರುವದು, ಭಾಷೆಯು ಪ್ರಸನ್ನ ಗಂಭೀರವಾಗಿರುವದು – ಮುಂತಾದ ಕಾರಣಗಳಿಂದಲೂ ಇದು ಈ ಆಚಾರ್ಯರ ಕೃತಿಯೇ ಎಂದು ನಾವು ಕಲ್ಪಿಸಬಹುದಾಗಿರುತ್ತದೆ.

ಗ್ರಂಥದ ಪ್ರಕರಣಗಳೂ ವ್ಯಾಖ್ಯಾತೃಗಳೂ

ಪದ್ಯಭಾಗದಲ್ಲಿ ಹತ್ತೊಂಬತ್ತು ಪ್ರಕರಣಗಳಿವೆ. ಇವು ಈಗ ಅಚ್ಚಾಗಿರುವ ಅನುಕ್ರಮದಲ್ಲಿಯೇ ಆಚಾರ್ಯರಿಂದ ರಚಿತವಾದವೆ, ಅಥವಾ ಅವು ಆಗಾಗ್ಗೆ ರಚಿತವಾಗಿದ್ದು ಇವೆಲ್ಲವನ್ನೂ ಯಾರೋ ಒಬ್ಬರು ಕೂಡಿಸಿ 'ಉಪದೇಶಸಾಹಸ್ರಿ' ಎಂಬ ಹೆಸರನ್ನಿಟ್ಟರೆ ? – ಎಂಬುದು ವಿಚಾರಣೀಯವಾಗಿದೆ. ಪ್ರಕರಣಗಳಲ್ಲಿ ಕೆಲವು ಶ್ಲೋಕಪರಿಮಾಣದಿಂದ ಬಹು ಸಣ್ಣವಾಗಿವೆ ; ಕೆಲವು ಬಹು ದೊಡ್ಡವು. ಒಂದು ಪ್ರಕರಣದಲ್ಲಿರುವ ವಿಷಯಕ್ಕೂ ಅದರ ಮುಂದಿನ ಪ್ರಕರಣದ ವಿಷಯಕ್ಕೂ ಅಷ್ಟು ನಿಕಟಸಂಬಂಧವೇನೂ ಇರುವಂತೆ ಕಾಣುವದಿಲ್ಲ. ಒಂದರಲ್ಲಿದ್ದ ವಿಷಯವು ಮಿಕ್ಕ ಪ್ರಕರಣಗಳಲ್ಲಿಯೂ ರೂಪಾಂತರದಿಂದ ಬಂದಿರುತ್ತದೆ.

ಪ್ರಕರಣಗಳಿಗೆ ವ್ಯಾಖ್ಯಾನಕಾರರು ಕೊಟ್ಟಿರುವ ಹೆಸರುಗಳು ಬೇರೆಬೇರೆಯಾಗಿರುತ್ತವೆ. ಅನೇಕ ವೇಳೆಗಳಲ್ಲಿ ಪ್ರಕರಣದ ಆದ್ಯಶ್ಲೋಕದ ಒಂದೊಂದು

ಮಾತಿನ ಅವಲಂಬನೆಯಿಂದ ಪ್ರಕರಣದ ಹೆಸರನ್ನು ಕಲ್ಪಿಸಿರುವಂತೆ ತೋರುತ್ತದೆ. ಅಂಥ ಸಂದರ್ಭಗಳಲ್ಲಿ ನಾವು ಪ್ರಕರಣದ ಒಟ್ಟರ್ಥವನ್ನು ಸೂಚಿಸುವ ಹೊಸ ಹೆಸರನ್ನು ಕಲ್ಪಿಸಿ, ವ್ಯಾಖ್ಯಾನಕಾರರು ಕೊಟ್ಟಿರುವ ಹೆಸರನ್ನೂ ಅಲ್ಲಲ್ಲಿ ತಿಳಿಸುತ್ತಾ ಹೋಗಿರುತ್ತೇವೆ.

ಪ್ರಕರಣಗಳಲ್ಲಿರುವ ಶ್ಲೋಕಗಳಿಗೆ ಸಂಖ್ಯೆಯನ್ನು ಕೊಟ್ಟಿರುವ ಪದ್ಧತಿಯೂ ವ್ಯಾಖ್ಯಾನಗಳಲ್ಲಿ ಏಕರೂಪವಾಗಿರುವದಿಲ್ಲ. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಮಹದೇವಶಾಸ್ತ್ರಿಗಳು ಅಚ್ಚುಮಾಡಿಸಿರುವ **ರಾಮತೀರ್ಥರ ವ್ಯಾಖ್ಯಾನ**ವೊಂದು, ಅದೇ ಲೈಬ್ರರಿಯಲ್ಲಿರುವ ಕೈಬರಹದ **ಬೋಧನಿಧಿಯ ವ್ಯಾಖ್ಯಾನ**ವೊಂದು, **ಆನಂದಜ್ಞಾನಯತಿಗಳ ವ್ಯಾಖ್ಯಾನ**ವೊಂದು– ಹೀಗೆ ಮೂರು ವ್ಯಾಖ್ಯಾನಗಳನ್ನು ನಾವು ನೋಡಿರುತ್ತೇವೆ. ಮೊದಲನೆಯ ವ್ಯಾಖ್ಯಾನದಲ್ಲಿ ಗದ್ಯವನ್ನು ಖಂಡಗಳಾಗಿ ಬರೆದು ಸಂಖ್ಯೆಗಳನ್ನು ಕೊಟ್ಟಿದೆ; ಪದ್ಯಕ್ಕೆ ಆಯಾ ಶ್ಲೋಕದ ಸಂಖ್ಯೆಗಳನ್ನು ಕೊಟ್ಟಿದೆ. ಬೋಧನಿಧಿಯ ವ್ಯಾಖ್ಯಾನದಲ್ಲಿ ಶ್ಲೋಕಸಂಖ್ಯೆಗಳನ್ನು ಉದ್ದಕ್ಕೆ ಅನುಕ್ರಮವಾಗಿ ಕೊಟ್ಟಿರುತ್ತದೆ. ಆನಂದಜ್ಞಾನವ್ಯಾಖ್ಯಾನದಲ್ಲಿ ಸಂಖ್ಯೆಗಳೇ ಇರುವದಿಲ್ಲ. ಇದೂ ಅಲ್ಲದೆ ವ್ಯಾಖ್ಯಾನಗಳಲ್ಲಿ ಶ್ಲೋಕಗಳ ಪೂರ್ವಾರ್ಧಕ್ಕೂ ಉತ್ತರಾರ್ಧಕ್ಕೂ ಸಂಬಂಧವು ಅಷ್ಟು ಸ್ಫುಟವಾಗಿಲ್ಲದಿದ್ದರೂ ಎರಡು ಸಾಲುಗಳಿಗೆ ಒಂದು ಶ್ಲೋಕವೆಂದು ಲೆಕ್ಕ ಹಾಕಿ ಸಂಖ್ಯೆಯನ್ನು ಕೊಟ್ಟಿರುವದೂ ವಾಚಕರಿಗೆ ಸ್ವಲ್ಪ ಕ್ಲೇಶವನ್ನು ತಂದೊಡ್ಡಿರುತ್ತದೆ. ಆದ್ದರಿಂದ ನಾವು ಅರ್ಥಾನುಗುಣವಾಗಿ ಒಂದು, ಎರಡು ಅಥವಾ ಹೆಚ್ಚು ಶ್ಲೋಕಗಳನ್ನು ಒಂದೊಂದು ಉಂಡೆಯಾಗಿ ಭಾವಿಸಿ ಪ್ರಕರಣಗಳನ್ನು ಖಂಡಗಳಾಗಿ ಬರೆದುಕೊಂಡು ಶ್ಲೋಕಗಳ ಸಂಖ್ಯೆಯನ್ನು ಅವಶ್ಯಬಿದ್ದಂತೆ ಬದಲಾಯಿಸಿಕೊಂಡಿರುವದಲ್ಲದೆ, ಕೆಲವು ಸಂದರ್ಭಗಳಲ್ಲಿ ಅರ್ಧಶ್ಲೋಕಗಳನ್ನೇ ಒಂದೆಂತ ಭಾವಿಸಿ ಅರ್ಥಸ್ಫೂರ್ತಿಗೆ ತಕ್ಕಂತೆ ವಿಂಗಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ತೆಗೆದುಕೊಂಡಿರುತ್ತೇವೆ. ಈ ಕಾರಣದಿಂದ ಮೈಸೂರು, ನಿರ್ಣಯಸಾಗರ, ಆಷ್ಟೇಕರ್, ವಾಣೀವಿಲಾಸ ಮುದ್ರಣಾಲಯಗಳಲ್ಲಿ ಆಚ್ಚಾಗಿರುವ ಪಾಠಗಳಿಗಿಂತ ನಮ್ಮ ಶ್ಲೋಕಗಳ ಪಾಠವೂ ಅನುಕ್ರಮವೂ ಅಲ್ಲಲ್ಲಿ ಭಿನ್ನವಾಗಿರುತ್ತವೆ. ಆದರೂ ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಶ್ಲೋಕಾನುಕ್ರಮಣಿಕೆಯಿಂದ ಬೇಕಾದ ಶ್ಲೋಕವನ್ನು ಕಂಡುಹಿಡಿಯಬಹುದಾದ್ದರಿಂದ ಈ ಅನುಕ್ರಮಭೇದದಿಂದ ಹೆಚ್ಚಿನ ತೊಡಕೇನೂ ಆಗಿರುವದಿಲ್ಲ.

ರಾಮತೀರ್ಥರ ವ್ಯಾಖ್ಯಾನವು ವಿದ್ವತ್ತಾಪೂರ್ಣವಾಗಿರುತ್ತದೆ; ಬೋಧನಿಧಿಯ ವ್ಯಾಖ್ಯಾನವು ಸರಳವಾಗಿ ಅಕ್ಷರಾರ್ಥವನ್ನು ತಿಳಿಸಿ ವಾಕ್ಯಾರ್ಥವನ್ನು ವಿಶದಗೊಳಿಸುವದಾಗಿದೆ. ಆನಂದಜ್ಞಾನವ್ಯಾಖ್ಯಾನದಲ್ಲಿ ವಿಶೇಷವೇನೂ

ಇರುವದಿಲ್ಲ ; ಅದು ಸಂಕ್ಷಿಪ್ತವಾಗಿರುತ್ತದೆ. ಅನೇಕಕಡೆಗಳಲ್ಲಿ – ವಿಶೇಷವಾಗಿ ಹದಿನೆಂಟನೆಯ ತತ್ತ್ವಮಸಿಪ್ರಕರಣದಲ್ಲಿ – ಬೋಧನಿಧಿಯ ಪಾಠವೇ ಉತ್ತಮವೆಂತ ನಮಗೆ ತೋರಿಬಂದಿರುತ್ತದೆ. ಇಂಥ ಸಂದರ್ಭಗಳಲ್ಲಿ ಟಿಪ್ಪಣಿಯಲ್ಲಿ ಪಾಠಭೇದಗಳನ್ನು ತಿಳಿಸಿಕೊಂಡೇ ಹೋಗಿರುತ್ತೇವೆ. ಇಷ್ಟೆಲ್ಲಾ ಆದ ಮೇಲೂ ವ್ಯಾಖ್ಯಾನಗಳ ಸಹಾಯದಿಂದಲೂ ಮೂಲಗ್ರಂಥದ ಆಶಯವು ಸ್ಪಷ್ಟವಾಗದ ಕೆಲವು ಗ್ರಂಥಗ್ರಂಥಿಗಳು ಉಳಿದುಕೊಂಡಿರುತ್ತವೆ. ಕೆಲವು ಕಡೆಗಳಲ್ಲಿ ವ್ಯಾಖ್ಯಾನಕಾರರುಗಳಲ್ಲಿ ಮತಭೇದವುಂಟಾಗಿದೆ ; ಒಂದೇ ಅಭಿಪ್ರಾಯವನ್ನು ತೆಗೆದಿದ್ದರೂ ಗ್ರಂಥದ ಆಶಯವು ಅದಾಗಿರಲಾರದೆಂದು ವಾಚಕರಿಗೆ ಅತೃಪ್ತಿಯಾಗುವ ಸ್ಥಲಗಳೂ ಉಂಟು. ಇಂಥ ಸಂದರ್ಭಗಳಲ್ಲಿ ಪ್ರಸ್ಥಾನತ್ರಯ ಭಾಷ್ಯಗಳ ಆಧಾರವನ್ನು ತೆಗೆದುಕೊಂಡು ವಿಮರ್ಶಿಸುವದು, ಉಪದೇಶ ಸಾಹಸ್ರಿಯ ಗದ್ಯಪದ್ಯಭಾಗಗಳನ್ನು ಹೋಲಿಸುವದು – ಹೀಗೆ ಸಮಾಖ್ಯಾಬಲದಿಂದ ಶಂಕರಾಚಾರ್ಯರ ಅಭಿಪ್ರಾಯವನ್ನು ಶಂಕರಾಚಾರ್ಯರ ಗ್ರಂಥಗಳಿಂದಲೇ ತಿಳಿದುಕೊಳ್ಳುವದೇ ಉತ್ತಮವೆಂಬ ತತ್ತ್ವವನ್ನು ನಾವು ಅನುಸರಿಸಿರುತ್ತೇವೆ. ಈ ಪ್ರಯತ್ನದ ಗುಣದೋಷಗಳನ್ನು ವಿದ್ವಾಂಸರ ಸಮಾಲೋಚನೆಗೆ ಬಿಟ್ಟಿರುತ್ತೇವೆ.

ಗ್ರಂಥದಲ್ಲಿರುವ ಮನನೀಯಾಂಶಗಳು

ಪದ್ಯಭಾಗದಲ್ಲಿ ಪ್ರತಿಪಾದಿತವಾಗಿರುವ ಕೆಲವು ವಿಷಯಗಳನ್ನು ಭಾಷ್ಯಗಳಿಗೆ ಹೋಲಿಸುವದರಿಂದ ಆಚಾರ್ಯಕೃತಿವಾಙ್ಮಯದಲ್ಲಿ ಈ ಗ್ರಂಥದ ಸ್ಥಾನವು ವ್ಯಕ್ತವಾಗುವದಲ್ಲದೆ ಅವರ ಪ್ರಕ್ರಿಯೆಯ ಕೆಲವು ಭಾಗಗಳನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳುವದಕ್ಕೂ ಸಹಾಯವಾಗುತ್ತದೆ. ಇಂಥ ವಿಚಾರಗಳಲ್ಲಿ ವಾಕ್ಯಜ್ಞಾನ, ಆತ್ಮಾನುಭವ, ಸಾಕ್ಷ್ಯಹಂಕಾರಗಳ ಸಂಬಂಧ, ಅವಸ್ಥಾತ್ರಯ, ಜ್ಞಾನಕರ್ಮಗಳ ಸಂಬಂಧ – ಇವುಗಳು ಮುಖ್ಯವಾಗಿರುತ್ತವೆ.

ವಾಕ್ಯಜನ್ಯಜ್ಞಾನ

ವಾಕ್ಯಜನ್ಯಜ್ಞಾನವನ್ನು ಈ ಗ್ರಂಥದಲ್ಲಿ ಪ್ರತಿಪಾದಿಸಿರುವ ರೀತಿಯು ಮನನೀಯವಾಗಿರುತ್ತದೆ. ದಶರಥರಾಮನಿಗೆ ಮೊದಲೇ ಇದ್ದ ವಿಷ್ಣುತ್ವವನ್ನು ಬ್ರಹ್ಮನು ತಿಳಿಸಿಕೊಟ್ಟಂತೆಯೂ (೧೮–೯), ಮೊದಲೇ ಇದ್ದ ಹತ್ತನೆಯವನೆಂಬ ವಿಷಯವನ್ನು ನೀನು ಹತ್ತನೆಯವನು ಎಂಬ ದಶಮವಾಕ್ಯವು ತಿಳಿಸಿಕೊಟ್ಟಂತೆಯೂ (೧೮–೧೬ರಿಂದ ೧೮) ತತ್ತ್ವಮಸಿ ಎಂಬ ವಾಕ್ಯವು ಮೊದ

ಲೇ ಸಿದ್ಧವಾಗಿದ್ದ ಬ್ರಹ್ಮಾತ್ಮೈಕತ್ವವನ್ನು ತಿಳಿಸುವದು. ನಾನು, ಇದು– ಎಂಬ ಪ್ರತ್ಯಯಗಳಿಗೆ ಅಸಾಧಾರಣವಾದ ಅರ್ಥವನ್ನು ವಿಂಗಡಿಸಿ ತಿಳಿದುಕೊಳ್ಳದೆ ಇರುವವನಿಗೆ ವಾಕ್ಯದ ಜ್ಞಾನವಾಗದು (೧೮–೮೭). ತತ್ತ್ವಮಸಿವಾಕ್ಯದಲ್ಲಿ ತ್ವಂಪದಾರ್ಥವನ್ನು ವಿಂಗಡಿಸಿ ಅರಿತುಕೊಳ್ಳುವದಕ್ಕಾಗಿ ಅನ್ವಯವ್ಯತಿರೇಕ ಗಳನ್ನು ಮಾಡಿಕೊಳ್ಳಬೇಕು ; ಅದರಿಂದ ವಾಕ್ಯಾರ್ಥವು ಸ್ಫುಟವಾಗಿ ಅರಿಯ ಬರುವದು (೧೮–೧೬೧ರಿಂದ ೧೭೫, ೧೮೨ರಿಂದ ೧೮೩). ಈ ವಾಕ್ಯದಲ್ಲಿ ತತ್ತ್ವಂಪದಗಳು ಸಮಾನಾಧಿಕರಣವಾಗಿರುವದರಿಂದ ಸಂಸಾರಿತ್ವವನ್ನು ಅಲ್ಲಗಳೆದು ಸರ್ವಧರ್ಮವಿಯುಕ್ತವಾದ ಪರಮಾರ್ಥವನ್ನು ವಾಕ್ಯವು ತಿಳಿಸು ವದು (೧೮–೧೮೬$\frac{೧}{೨}$ ಯಿಂದ ೧೮೮$\frac{೧}{೨}$). ನಾನು ನಿತ್ಯಮುಕ್ತನು ಎಂಬುದೇ ಈ ವಾಕ್ಯದಿಂದಾಗುವ ಜ್ಞಾನವು (೧೮–೩) – ಎಂದು ಇಲ್ಲಿ ನಿರೂಪಿತವಾಗಿರುತ್ತದೆ.

ಆತ್ಮಾನುಭವ

ಆತ್ಮಜ್ಞಾನವು ವೇದಾಂತವಾಕ್ಯದಿಂದ ಆದರೂ ಶಾಸ್ತ್ರಯುಕ್ತಿಗಳ ಅಭ್ಯಾಸ, ಅಥವಾ ಸಮಾಧಿಪ್ರಾಪ್ತಿ - ಇವುಗಳಿಂದಲೇ ಆತ್ಮನ ವಿಶೇಷಾನು ಭವವು ಉಂಟಾಗಬೇಕು – ಎಂಬ ಅಭಿಪ್ರಾಯವನ್ನು ಕೆಲವರು ವಾದಿಗಳು ಆಚಾರ್ಯರ ಕಾಲಕ್ಕೇ ಇಟ್ಟುಕೊಂಡಿದ್ದರು. ಈಗಲೂ ಕೆಲವರು ಈ ಅಭಿಪ್ರಾಯವುಳ್ಳವರಾಗಿರುವದರಿಂದ ಪ್ರಸಂಖ್ಯಾನವಾದಖಂಡನರೂಪವಾದ ಹದಿನೆಂಟನೆಯ ಪ್ರಕರಣವು ಈ ವಿಷಯದಲ್ಲಿ ಜಿಜ್ಞಾಸುಗಳ ಸಂಶಯವನ್ನೆಲ್ಲ ತೊಲಗಿಸುವದಕ್ಕೆ ಉತ್ತಮಸಹಕಾರಿಯಾಗಿರುತ್ತದೆ. ಆತ್ಮನು ಅಂತಃಕರಣದ ವೃತ್ತಿಗಳಿಗೂ ಸಾಕ್ಷಿಯಾಗಿರುತ್ತಾನೆ (೭–೨, ೧೧–೧೨ರಿಂದ ೩, ೧೩–೬, ೧೩–೧೯, ೧೪–೭), ನಿತ್ಯಾಪರೋಕ್ಷನಾಗಿರುತ್ತಾನೆ (೧೬–೭). ಜ್ಞಾನರೂಪನಾದ ಆತ್ಮನೂ ಜ್ಞೇಯನೆಂದರೆ ಅವನನ್ನರಿಯುವದಕ್ಕೆ ಬೇರೆಯ ಜ್ಞಾತೃಜ್ಞಾನಗಳನ್ನು ಸಾಲಾಗಿ ಕಲ್ಪಿಸುವದೆಂಬ ಅನವಸ್ಥಾದೋಷವು ಬರುತ್ತದೆ (೧೭–೫೬). ಆತ್ಮನು ಯಾವ ಅನುಭವಕ್ಕೂ ಕರ್ಮವಾಗುವಂತಿಲ್ಲ (೧೨–೧೨, ೧೬–೧೦) ; ಅವನು ಅನುಭವ ಸ್ವರೂಪನೇ ಆಗಿರುತ್ತಾನೆ (೧೨–೯, ೧೫–೫೦, ೧೬–೩, ೧೭–೪೧, ೧೪–೧೧೧). ಈ ಕಾರಣಗಳಿಂದ ವಾಕ್ಯಾರ್ಥಜ್ಞಾನವಾದ ಬಳಿಕ ಅನುಭವಕ್ಕಾಗಿ ಕರ್ತವ್ಯ ಉಳಿದಿರುತ್ತದೆ ಎಂಬುದು ತಪ್ಪು, ಅಂಥ ಅನುಭವವೇ ಇಲ್ಲ (೧೨–೪ ೧೪–೨೧೦) ನೀನು ನಿತ್ಯಮುಕ್ತನಾಗಿರುವ ಬ್ರಹ್ಮವೇ ಎಂದು ಹೇಳುವ ವಾಕ್ಯ ಗಳು ನಿನಗೆ ಶ್ರವಣಾದಿಕರ್ತವ್ಯವಿದೆ ಎಂದು ಹೇಳುತ್ತದೆ ಎನ್ನುವದು ವಾಕ್ಯಕ್ಕೇ ಅಪ್ರಾಮಾಣ್ಯವನ್ನು ತಂದಂತೆ ಆಗುವದು. (೧೪–೧೯೬) ; ಇನ್ನು ಮುಂದೆ ನೀನು ಮುಕ್ತನಾಗುವೆ ಎಂದು ಈ ವಾಕ್ಯವನ್ನು ತಿರಿಚಿ ಅರ್ಥಮಾಡಿದ

ರೂ ಮೋಕ್ಷವು ಅನಿತ್ಯವೆಂದಾಗುವದು (೧೮-೧೯೭). ವಾಕ್ಯಜನ್ಯಜ್ಞಾನವು ಪ್ರತ್ಯಕ್ಷಾದಿಗಳಿಗೆ ವಿರುದ್ಧವೆಂದೂ ಪ್ರತ್ಯಕ್ಷಾದಿಜನ್ಯಜ್ಞಾನದಿಂದ ಅದು ಬಾಧಿತವಾಗುವದೆಂದೂ ಹೇಳುವ ಪ್ರಸಂಖ್ಯಾನವಾದಿಗಳ ಮತವು ಸರಿಯಲ್ಲ. ಏಕೆಂದರೆ 'ಕೃಷ್ಣಲಗಳನ್ನು ಬೇಯಿಸಬೇಕು' ಎಂಬ ವೇದವಾಕ್ಯಜ್ಞಾನದಂತೆ ಈ ವಾಕ್ಯಜ್ಞಾನವು ನಿರೂಪಿತಪ್ರತ್ಯಕ್ಷಕ್ಕೆ ವಿರುದ್ಧವಲ್ಲ, ಪ್ರತ್ಯಕ್ಷಾದಿಜ್ಞಾನವು ಆಭಾಸಮಾತ್ರವಾಗಿರುವದರಿಂದ ಅದೇ ಈ ಜ್ಞಾನದಿಂದ ಬಾಧಿತವಾಗುವದು (೨-೨, ೩ ; ೧೮-೧೭೭, ೧೮೬, ೨೦೫ರಿಂದ ೨೦೮) ಆತ್ಮನಿಗೆ ಆಗಿರುವ ಸಂಸಾರಿತ್ವವು ಅಧ್ಯಾಸಮಾತ್ರವಾಗಿರುವದರಿಂದ 'ನೇತಿನೇತಿ','ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ಬಾಧಿತವಾಗುತ್ತದೆ ; ಮತ್ತೆ ಅಧ್ಯಾಸವನ್ನು ಮಾಡಿಕೊಳ್ಳಿಂದು ವಾಕ್ಯವು ವಿಧಿಸುತ್ತದೆ ಎಂದು ಕಲ್ಪಿಸುವದು ಸರ್ವಥಾ ಸರಿಯಲ್ಲ (೩-೨ರಿಂದ ೩ ; ೧೮-೧೯ರಿಂದ ೨೩) ಎಂದು ಇಲ್ಲಿ ವಾಕ್ಯಜ್ಞಾನದ ಪ್ರಾಬಲ್ಯವನ್ನೂ ಅದಕ್ಕಿಂತ ವ್ಯತಿರಿಕ್ತವಾದ ಆತ್ಮಾನುಭವದ ಅಭಾವವನ್ನೂ ಪ್ರತಿಪಾದಿಸಿರುತ್ತದೆ. ಆತ್ಮಸ್ವರೂಪದಲ್ಲಿ ವಿಕ್ಷೇಪವಿಲ್ಲದ್ದರಿಂದ ವಾಕ್ಯಜ್ಞಾನವಾದಬಳಿಕ ಸಮಾಧಿಯೂ ಅವಶ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ (೧೩-೧೪, ೧೭ ; ೧೪-೩೫).

ಸಾಕ್ಷ್ಯಹಂಕಾರಗಳ ವಿಂಗಡ

ಸಾಕ್ಷ್ಯವಾದ ಅಹಂಕಾರದಿಂದ ಸಾಕ್ಷಿಯಾದ ಆತ್ಮನನ್ನು ವಿಂಗಡಿಸುವದಕ್ಕಾಗಿ ಚಿದಾಭಾಸನಿರೂಪಣವನ್ನು ; ಈ ಗ್ರಂಥದಲ್ಲಿರುವಷ್ಟು ವಿಸ್ತಾರವಾಗಿ ಆಚಾರ್ಯರ ಮತ್ತೆ ಯಾವ ಗ್ರಂಥದಲ್ಲಿಯೂ ಮಾಡಿರುವದು ಕಂಡುಬರುವದಿಲ್ಲ. ಶ್ರುತಿಯಲ್ಲಿ ಹೇಳಿರುವ ಗಾಂಧಾರದೇಶದವನಂತೆ ಆತ್ಮನಲ್ಲಿ ಅಧ್ಯಸ್ತನಾದ ಇದಂವನವನ್ನು ನೇತಿನೇತಿವಾಕ್ಯದಿಂದ ಅಲ್ಲಗಳೆದು ದಾಟಿ ಸ್ವಯಂಸಿದ್ಧನಾದ ಆತ್ಮನನ್ನು ಪಡೆದುಕೊಳ್ಳಬೇಕು (೨-೧ರಿಂದ ೪). ಅಹಂಕಾರವು ಆತ್ಮ ಚೈತನ್ಯದಿಂದ ಬೆಳಗುವದು, ಚೈತನ್ಯಾರ್ಥವಾಗಿರುವದು – ಎಂದು ಅದರಲ್ಲಿರುವ ಇದಮಂಶವನ್ನು ಕಳೆದು ಆತ್ಮನನ್ನು ಅರಿತುಕೊಳ್ಳಬೇಕು (೫-೫, ೬೬). ಆತ್ಮನು ಬುದ್ಧಿಪ್ರತ್ಯಯಗತವಾಗಿರುವದೆಲ್ಲವನ್ನೂ ತನ್ನಲ್ಲಿ ಯಾವ ವಿಕಾರವೂ ಇಲ್ಲದೆ ನೋಡುತ್ತಿರುತ್ತಾನೆ ; ಬುದ್ಧಿಯಂತೆ ತನ್ನ ವಿಷಯದ ಆಕಾರವಾಗಿ ಪರಿಣಮಿಸಿ ನೋಡುವದಿಲ್ಲ (೭-೧ರಿಂದ ೩, ೧೧-೩, ೧೪-೪೩, ೧೬-೫೫, ೧೭-೬೫, ೧೭-೩೭) ಆತ್ಮನು ಎಲ್ಲಾ ಬುದ್ಧಿಗಳನ್ನೂ ಕೂಟಸ್ಥನಾಗಿದ್ದು ನೋಡುತ್ತಿರುವದರಿಂದ ಸರ್ವಜ್ಞನೂ ಎಲ್ಲರ ಆತ್ಮನೂ ಆಗಿರುತ್ತಾನೆ (೭-೨, ೧೪-೭, ೧೫-೧೭). ದೃಶ್ಯವಾಗಿರುವ ಅಂತಃಕರಣದ ಪ್ರತ್ಯಯವನ್ನೂ ದೃಗ್ರೂಪನಾದ ಆತ್ಮನನ್ನೂ ವಿಂಗಡಿಸಿಕೊಳ್ಳದೆ ಇರುವದರಿಂದ ಆತ್ಮಚೈತನ್ಯವೂ ಅನಿತ್ಯವೆಂದೂ ಅವಿಶುದ್ಧ

ವೆಂದೂ ಭ್ರಾಂತಿಯುಂಟಾಗಿರುತ್ತದೆ (೧೩-೯). ಆತ್ಮನು ಜ್ಞಾತೃವೆಂದರೆ ಜ್ಞಾನಕರ್ತೃವೆಂದು ಅರ್ಥವಲ್ಲ, ಸೂರ್ಯನಂತೆ ಜ್ಞಾನಪ್ರಕಾಶರೂಪನೇ ಅವನು (೧೫-೪೭) – ಎಂದು ಈ ಗ್ರಂಥದಲ್ಲಿ ಕೂಟಸ್ಥಚೈತನ್ಯರೂಪನಾದ ಆತ್ಮನನ್ನೂ ಆ ಚೈತನ್ಯದಿಂದ ಬೆಳಗುವ ವಿಕಾರಿಯಾದ ಅಹಂಕಾರವನ್ನೂ ಅಲ್ಲಲ್ಲಿ ವಿಂಗಡಿಸಿ ಹೇಳಿರುತ್ತದೆ.

ಈ ಸಾಕ್ಷ್ಯಹಂಕಾರಗಳನ್ನು ಜನರು ವಿಂಗಡಿಸಿ ಅರಿತುಕೊಳ್ಳದೆ ಇವೆರಡನ್ನೂ ಒಂದೆಂದು ತಿಳಿದಿರುವದಕ್ಕೆ ಕಾರಣವೇನು ? – ಎಂದರೆ ಅಹಂಕಾರವು ಚಿದಾಭಾಸಯುಕ್ತವಾಗಿರುವದೇ ಇದಕ್ಕೆ ಮುಖ್ಯಕಾರಣವು. ವ್ಯಾಪಕವಾದ ಚಿತ್ತನ್ನೂ ವ್ಯಾಪ್ಯವಾದ ಚಿದಾಭಾಸಯುಕ್ತವಾದ ಅಹಂಕಾರವನ್ನೂ ವಿಂಗಡಿಸಿ ತಿಳಿಸುವದೇ ಶಾಸ್ತ್ರದ ಕೃತ್ಯವು ಎಂಬುದನ್ನು ಈ ಗ್ರಂಥದಲ್ಲಿ ಮತ್ತೆಮತ್ತೆ ತಿಳಿಸಿರುತ್ತದೆ. ಚೈತನ್ಯಪ್ರತಿಬಿಂಬದಿಂದ ವ್ಯಾಪ್ತವಾಗಿ ಬುದ್ಧಿಯ ಪ್ರತ್ಯಯವು ಉಂಟಾಗುತ್ತದೆ ; ಆದ್ದರಿಂದ ಜನರು ಭ್ರಾಂತರಾಗಿರುತ್ತಾರೆ (೫-೪). ಬೆಳಕಿನಲ್ಲಿರುವ ದೇಹವನ್ನೇ ದೇಹವೆಂದು ವ್ಯವಹರಿಸುವಂತೆ ದ್ರಷ್ಟ್ರಾಭಾಸವಾಗಿರುವ ಚಿತ್ತವನ್ನು ದ್ರಷ್ಟೃವೆಂದೇ ತಪ್ಪಾಗಿ ವ್ಯವಹರಿಸುತ್ತಾರೆ (೧೨-೧, ೧೨-೬). ನಾನು ಜ್ಞಾತೃವು, ಜ್ಞೇಯನಲ್ಲ –ಎಂಬ ವಿವೇಕಪ್ರತ್ಯಯವುಕೂಡ ದೃಶ್ಯವು, ವಿನಾಶಿಯು ; ಅದನ್ನು ನೋಡುತ್ತಿರುವ ಆತ್ಮನ ದೃಷ್ಟಿಯಾದ ಚೈತನ್ಯವು ಪ್ರತ್ಯಯದಂತೆ ಹುಟ್ಟತಕ್ಕದ್ದಲ್ಲ (೧೨-೧೫). ಆತ್ಮನು ಚೈತನ್ಯಸ್ವರೂಪನೇ ಆಗಿರುತ್ತಾನೆ ; ಅವನ ಸನ್ನಿಧಿಯಲ್ಲಿ ಅಹಂಕಾರವು ಚೈತನ್ಯದಂತೆ ತೋರುತ್ತಿರುತ್ತದೆ (೧೪-೨೭). ಆಭಾಸಯುಕ್ತವಾದ ಶಬ್ದಪ್ರವೃತ್ತಿನಿಮಿತ್ತವುಳ್ಳ ಅಹಂಕಾರಕ್ಕೇ ಶಬ್ದಾದಿಗಳು ವಾಚಕಗಳಾಗಿದ್ದು ಚೈತನ್ಯವನ್ನು ಲಕ್ಷಣೆಯಿಂದ ತಿಳಿಸುತ್ತವೆ (೧೪-೨೯, ೩೦). ಮುಖ, ಕನ್ನಡಿ – ಇವುಗಳ ಸಂಬಂಧದಿಂದ ಕನ್ನಡಿಯಲ್ಲಿ ತೋರುವ ಮುಖಾಭಾಸದಂತೆ ಚಿದಾಭಾಸವು ಅಹಂಕಾರದಲ್ಲಿ ತೋರುತ್ತದೆ (೧೪-೩೧, ೩೨). ಚೈತನ್ಯವು ಅವಿಕಾರಿಯಾದ್ದರಿಂದಲೂ ಆಭಾಸವು ಅಸತ್ಯವಾದ್ದರಿಂದಲೂ ಅಹಂಕಾರವು ಅಚೇತನವಾಗಿರುವದರಿಂದಲೂ ಸಂಸಾರವು ನಿಜವಾಗಿ ಯಾರಿಗೂ ಇಲ್ಲ ; ಅದು ಅವಿದ್ಯಾಮಾತ್ರವೇ (೧೪-೪೨, ೪೩). ಆತ್ಮನು ಅರಿಯುತ್ತಾನೆ ಎಂದು ತಿಳಿಯುವಾಗ ಕ್ರಿಯಾವಿಭಕ್ತಿಗೆ ವಾಚ್ಯವು ಆಭಾಸವು, ಧಾತ್ವರ್ಥವು ಬುದ್ಧಿಯ ಪ್ರತ್ಯಯವು ; ಆತ್ಮನು ಚೈತನ್ಯಸ್ವರೂಪವು. ಇವನ್ನು ವಿಂಗಡಿಸಿಕೊಳ್ಳಲಾರದೆ ಅರಿಯುತ್ತಾನೆ ಎಂಬ ಪ್ರಯೋಗವಾಗುತ್ತದೆ (೧೪-೫೧, ೫೨). ಜ್ಞಾನವು ಉಂಟಾಗುವದೆಂದು ತಾರ್ಕಿಕರು ತಿಳಿಯುವದೂ ಪ್ರತ್ಯಯಗಳು ತಾವುತಾವೇ ಅರಿಯುವವೆಂದು

ಬೌದ್ಧರು ಭ್ರಾಂತರಾಗಿರುವದೂ ಆಭಾಸವನ್ನು ತಿಳಿಯದ್ದರಿಂದಲೇ (೧೮-೬೬, ೬೯).

ಆಭಾಸವನ್ನು ಒಪ್ಪದಿದ್ದರೆ ವಾಕ್ಯೋಪದೇಶವು ಯಾರಿಗೆಂಬುದೇ ಸಿದ್ಧವಾಗುವದಿಲ್ಲ (೧೮-೭೬), ಸಾಕ್ಷಿಸಾಕ್ಷ್ಯವಾದ ಆತ್ಮಾಹಂಕಾರಗಳಿಗೆ ಸಂಬಂಧವೂ ಸಿದ್ಧವಾಗುವದಿಲ್ಲ (೧೮-೭೭). ಆಭಾಸವನ್ನೊಪ್ಪಿದರೆ ದೃಷ್ಟೃದೃಶ್ಯತ್ವ ಸಂಬಂಧವು ಆಧ್ಯಾಸಿಕವೆಂದು ಸಿದ್ಧವಾಗುವದು (೧೮-೮೦, ೧೮-೧೫೦); ಚೈತನ್ಯಕ್ಕೇ ವಾಕ್ಯಾರ್ಥಜ್ಞಾನವೆಂಬ ಫಲವೆಂದೂ ಸಿದ್ಧವಾಗುತ್ತದೆ (೧೮-೧೦೪, ೧೦೫, ೧೫೫ರಿಂದ ೧೫೭); ಸಾಕ್ಷಿಯೇ ಅವಿವೇಕದಿಂದ ಶ್ರೋತೃವಾಗಿರುವದೆಂದೂ ಆಗುತ್ತದೆ (೧೮-೧೦೪). ಶಿಷ್ಯಬೋಧನೆಗೆ ಆಭಾಸಯುಕ್ತವಾದ ಜ್ಞಾನರೂಪಪ್ರತ್ಯಯವು ಪ್ರಮಾಣವೆಂದೂ ಏರ್ಪಡುತ್ತದೆ (೧೮-೧೨೧ರಿಂದ ೧೩೫). ಆತ್ಮನಿಗೆ ಆಧ್ಯಾಸಿಕದುಃಖವೆಂದೂ ಸಿದ್ಧವಾಗುತ್ತದೆ (೧೮-೧೫೦ರಿಂದ ೧೬೪). ಶ್ರುತಿಯಲ್ಲಿ ಆಭಾಸವನ್ನು ಹೇಳಿದೆ; ಆಭಾಸವು ಯುಕ್ತಿಸಿದ್ಧವೂ ಆಗಿದೆ; ಆತ್ಮನೂ ಆಭಾಸವೂ ಬೇರೆಬೇರೆಯಾಗಿ ಸ್ವಪ್ನದಲ್ಲಿ ಅನುಭವದಲ್ಲಿಯೂ ತೋರುತ್ತವೆ (೧೮-೧೧೦, ೧೧೩ರಿಂದ ೧೧೭) ಎಂಬುದು ಚಿದಾಭಾಸ ನಿರೂಪಣದ ಸಾರವು.

ಅವಸ್ಥಾತ್ರಯ

ಆಭಾಸವಿಚಾರಕ್ಕೆ ಎರಡನೆಯದಾಗಿದ್ದರೂ ಅವಸ್ಥಾತ್ರಯನಿರೂಪಣೆಗೂ ಈ ಗ್ರಂಥದಲ್ಲಿ ಒಂದು ಮುಖ್ಯಸ್ಥಾನವಿದೆ. ಅವಸ್ಥಾತ್ರಯದಲ್ಲಿ ಆತ್ಮನಿಗೆ ಸಂಬಂಧಪಟ್ಟದ್ದು ಯಾವದೂ ಇರುವದಿಲ್ಲ; ದೃಶ್ಯಗಳು ತಮ್ಮ ದೃಷ್ಟಿಯಿಂದಲೂ ಆತ್ಮದೃಷ್ಟಿಯಿಂದಲೂ ಅಸತ್ತೇ ಆಗಿರುತ್ತವೆ (೧೧-೪). ಸುಷುಪ್ತಿಯಲ್ಲಿ ಏನನ್ನೂ ಕಾಣದಿರುವಂತೆ ಎಚ್ಚರದಲ್ಲಿ ದ್ವಿತೀಯವಸ್ತುವನ್ನು ಕಂಡರೂ ಕಾಣದೆ ಇರುವವನೂ, ಸುಷುಪ್ತಿಯಲ್ಲಿ ಏನನ್ನೂ ಮಾಡದಿರುವಂತೆ ಎಚ್ಚರದಲ್ಲಿ ಮಾಡುತ್ತಿದ್ದರೂ ಮಾಡದೆ ಇರುವವನೂ, ಆತ್ಮಜ್ಞನು (೧೦-೧೩). ಕನಸು ಎಚ್ಚರವಾಗುವವರೆಗೆ ಸತ್ಯವಾಗಿರುವಂತೆ ಆತ್ಮಜ್ಞಾನವಾಗುವವರೆಗೂ ದೇಹಾತ್ಮಭಾವವು ಸತ್ಯವಾಗಿರುವದು, ಪ್ರತ್ಯಕ್ಷಾದಿಗಳೂ ಪ್ರಮಾಣವಾಗಿರುವವು (೧೧-೫). ಆತ್ಮನು ಅವಸ್ಥಾತ್ರಯಸಾಕ್ಷಿಯು (೧೫-೨೧ರಿಂದ ೨೬, ೩೩ರಿಂದ ೩೪). ಎಚ್ಚರಕನಸುಗಳಿಗೆ ಬೀಜವಾದ ಸುಷುಪ್ತಿ ಎಂಬ ಅಜ್ಞಾನವನ್ನು ಆತ್ಮಜ್ಞಾನದಿಂದ ಸುಟ್ಟುಹಾಕಿದರೆ ಹುಟ್ಟಿಲ್ಲವಾಗುತ್ತದೆ (೧೭-೨೬). ಆ ಒಂದೇ ಬೀಜವು ಮೂರು ಬಗೆಯಾಗಿರುವದು; ಆತ್ಮನೂ ಆ ಉಪಾಧಿಗಳಿಂದ ಮೂರು ಬಗೆಯಾಗಿ ತೋರುತ್ತಿರುವನು; ಆದರೆ ಜ್ಞಾನದೃಷ್ಟಿಯಿಂದ ಆ

ಮಾಯಾಬೀಜವಾಗಲಿ ಮಾಯಾವಿಯಾಗಲಿ ಇರುವದೇ ಇಲ್ಲ (೧೭–೨೭ರಿಂದ ೩೧). ಜಾಗ್ರತ್ತನ್ನು ಸ್ವಪ್ನದಲ್ಲಿಯೂ ಸ್ವಪ್ನವನ್ನು ಸುಷುಪ್ತಿಯಲ್ಲಿಯೂ ಲಯ ಮಾಡಿ ಆ ಬಳಿಕ ಆತ್ಮಜ್ಞಾನದ ಕಣ್ಣನ್ನು ತೆರೆದರೆ ಬ್ರಹ್ಮಪ್ರಾಪ್ತಿಯಾಗುವದು (೧೭–೫೭, ೫೮). ಸುಷುಪ್ತಿಯಲ್ಲಿ ಏನನ್ನೂ ಸ್ವಲ್ಪವೂ ಅರಿಯಲಿಲ್ಲ ಎಂಬ ನೆನಪಿನಲ್ಲಿ ತನ್ನ ಸ್ವರೂಪವಾದ ದೃಷ್ಟಿಯನ್ನೂ ಇಲ್ಲವೆನ್ನುವದಿಲ್ಲ, ಪ್ರತ್ಯಯವು ಇರಲಿಲ್ಲವೆಂದು ಗೊತ್ತಾಗುತ್ತದೆ; ಶ್ರುತಿಯಲ್ಲಿ ಹೀಗೆಂದೇ ಹೇಳಿರುತ್ತದೆ (೧೮-೯೪, ೯೫). ಕನಸಿನಲ್ಲಿ ಸಾಕ್ಷಿಯೂ ಪ್ರತ್ಯಯವೂ ಬೇರೆಬೇರೆಯಾಗಿರುತ್ತವೆ (೧೮–೧೧೪).

ಈ ಮೇಲಿನ ವಾಕ್ಯಗಳನ್ನು ಮನದಂದರೆ ಅವಸ್ಥಾತ್ರಯನಿರೂಪಣದಿಂದ ಈ ಗ್ರಂಥದಲ್ಲಿ ಎಂಥ ಅಮೂಲ್ಯಸಿದ್ಧಾಂತವನ್ನು ತೆಗೆದಿದೆ ಎಂಬುದು ಸ್ಪಷ್ಟವಾಗುತ್ತದೆ.

ಜ್ಞಾನಕರ್ಮಗಳ ಸಂಬಂಧ

ಅಜ್ಞಾನವೇ ಕರ್ಮಕ್ಕೂ ಸಂಸಾರಕ್ಕೂ ಮೂಲವಾಗಿರುವದರಿಂದ ಜ್ಞಾನದಿಂದ ಅಜ್ಞಾನದ ನಾಶವಾದಬಳಿಕ ಮತ್ತೆ ಕರ್ಮವು ಎದ್ದುಕೊಳ್ಳುವ ಹಾಗಿಲ್ಲ. ಜ್ಞಾನವು ಮತ್ತೆ ಯಾವ ಸಹಾಯವನ್ನೂ ಬಯಸದೆ ಅಜ್ಞಾನವನ್ನು ನಾಶಮಾಡಿ ಮೋಕ್ಷವನ್ನು ಕೊಟ್ಟುಬಿಡುವದು. ಮೋಕ್ಷವು ನಿತ್ಯಸಿದ್ಧವಾದ್ದರಿಂದ ಅದನ್ನು ವಾಕ್ಯವು ತಿಳಿಸಿದಮೇಲೆ ಮಾಡಬೇಕಾದ ಕರ್ಮವು ಯಾವದೂ ಉಳಿದಿರುವದಿಲ್ಲ. ವ್ಯವಹಾರದೃಷ್ಟಿಯಿಂದ ಪ್ರಾರಬ್ಧಕರ್ಮವು ಫಲವನ್ನು ಕೊಡುತ್ತಿದ್ದರೂ ಅಜ್ಞಾನವನ್ನು ಬಾಧಿಸುವ ಜ್ಞಾನಕ್ಕೆ ಅದು ವಿರುದ್ಧವಲ್ಲ (೧, ೪, ೧೧, ೧೪) ಎಂದು ಈ ಗ್ರಂಥದಲ್ಲಿ ಪ್ರತಿಪಾದಿಸಿರುತ್ತದೆ. ಕರ್ಮವೂ ಜ್ಞಾನಕ್ಕೆ ಸಹಾಯವಾಗಿರಬೇಕು– ಎಂಬ ಸಮುಚ್ಚಯವಾದದಲ್ಲಿ ಜ್ಞಾನವೆಂದರೆ ಉಪಾಸನೆಯು; ಸಿದ್ಧಾಂತದಲ್ಲಿ ಜ್ಞಾನವೆಂದರೆ ನಿರ್ವಿಶೇಷನಾದ ಆತ್ಮನಲ್ಲಿ ಅಧ್ಯಾಸವಾಗಿರುವ ಸಂಸಾರಿತ್ವವನ್ನು ನೇತಿನೇತಿ ಎಂದು ಅಲ್ಲಗಳೆಯುವದರಿಂದಾಗುವ ಜ್ಞಾನವು. ಈ ವಿಷಯವನ್ನು ಉಪೋದ್ಘಾತಪ್ರಕರಣದಲ್ಲಿಯೇ ಸ್ಪಷ್ಟಪಡಿಸಿರುತ್ತದೆ.

ಬಂಧಮೋಕ್ಷವ್ಯವಹಾರವು ಕೂಡ ಅವಿದ್ಯಕವಾಗಿರುವದರಿಂದ (೧೫–೪೯) ನಿಜವಾಗಿ ಮೋಕ್ಷವು ಹೊಸದಾಗಿ ಆಗಬೇಕೆನ್ನುವವರ ಮತವು ಶ್ರುತಿಯುಕ್ತಿಗಳಿಗೆ ವಿರುದ್ಧ ಎಂಬುದನ್ನು– ಜೈನಮತ, (೧೭–೨೨) ವಿಜ್ಞಾನವಾದ, ಶೂನ್ಯವಾದ (೧೬–೨೩ರಿಂದ ೩೮), ಮೋಕ್ಷವು ಅವಸ್ಥಾಂತರ, ದುಃಖವಿಯೋಗ, ಆನಂದದ ಸಂಯೋಗ ಎಂಬ ವಾದಗಳ (೧೬–೩೯, ೪೦) ಸಾಂಖ್ಯ

ವೈಶೇಷಿಕರ ಮತಗಳು (೧೬–೪೫ರಿಂದ ೫೦, ೧೬–೫೧ರಿಂದ ೫೬½) ಇವುಗಳ ಖಂಡನೆಯ ಮೂಲಕ – ತಿಳಿಸಿ ಅಂತಃಕರಣದಲ್ಲಿರುವ ಅನಾದಿಭ್ರಾಂತಿಯೇ ಬಂಧವು, ಅದರ ನಾಶವೇ ಮೋಕ್ಷವು (೧೬–೫೮ರಿಂದ ೬೧½) ಎಂದು ಇಲ್ಲಿ ಸಿದ್ಧಪಡಿಸಿರುತ್ತದೆ.

ಹೀಗೆ ಜ್ಞಾನಕರ್ಮಸಮುಚ್ಚಯವನ್ನು ಖಂಡಿಸಿದ್ದರೂ ಕರ್ಮಕ್ಕೆ ಚಿತ್ತ ಶುದ್ಧಿಯು ಪ್ರಯೋಜನವಾಗಿರುವದರಿಂದ ಅವಶ್ಯವಾಗಿ ಮುಮುಕ್ಷುವು ಅವನ್ನು ಜ್ಞಾನಕ್ಕೆ ಪೂರ್ವದಲ್ಲಿ ಮಾಡಲೇ ಬೇಕು (೧೭–೨೨ರಿಂದ ೨೪) ಎಂದು ಸ್ಪಷ್ಟವಾಗಿ ಇಲ್ಲಿ ಹೇಳಿರುತ್ತದೆ.

ಉಪಸಂಹಾರ

ಶಾಸ್ತ್ರದ ಒಂದು ಭಾಗವನ್ನು ತೆಗೆದುಕೊಂಡು ಶಾಸ್ತ್ರದಿಂದ ಆಗದೆ ಇರುವ ಕಾರ್ಯವನ್ನು ಮಾಡಿಕೊಡುವ ಗ್ರಂಥವಿಶೇಷಕ್ಕೆ **ಪ್ರಕರಣ**ವೆಂದು ಹೆಸರು. ಪ್ರಕೃತವಾದ ಉಪದೇಶಸಾಹಸ್ರಿಯಲ್ಲಿ ವೇದಾಂತದ ಅತ್ಯಂತಮುಖ್ಯಭಾಗವಾದ ಆತ್ಮಜ್ಞಾನದ ಸ್ವರೂಪವನ್ನೂ ಅದಕ್ಕೆ ಸಾಧನವನ್ನೂ ಫಲವನ್ನೂ ಚಿದಾಭಾಸಸಹಿತಾಹಂಕಾರದಿಂದ ಸಾಕ್ಷಿಯನ್ನು ವಿಂಗಡಿಸಿಕೊಡುವ ಮೂಲಕವೂ 'ತತ್ತ್ವಮಸಿ', 'ನೇತಿನೇತಿ'– ಮುಂತಾದ ವೇದಾಂತಮಹಾವಾಕ್ಯಗಳ ನಿರೂಪಣೆಯ ಮೂಲಕವೂ ತಿಳಿಸಿಕೊಡುವದರಿಂದ ಇದೊಂದು ಅಮೋಘ ವೇದಾಂತಪ್ರಕರಣವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಗ್ರಂಥದಲ್ಲಿರುವ ವಿಚಾರಸರಣಿಯು ಭಾಷ್ಯಗ್ರಂಥಗಳ ಪ್ರೌಢಸರಣಿಯನ್ನೇ ಹೋಲುತ್ತದೆ ; ಭಾಷ್ಯಗಳ ಸಾರವನ್ನೇ ಇಲ್ಲಿ ಹಿಂಡಿಟ್ಟಿರುತ್ತದೆ ಎಂದರೂ ಸಲ್ಲುವಂತೆ ಇದೆ. ಇಲ್ಲಿ ಕೊಟ್ಟಿರುವ ಯುಕ್ತಿಗಳು ಕೆಲವು ಅನಿತರಸಾಧಾರಣವಾಗಿವೆ. ಸುಪ್ರಸಿದ್ಧವಾದ ದಶೋಪನಿಷತ್ತುಗಳು ಮತ್ತು ಭಗವದ್ಗೀತೆ – ಇವುಗಳಿಂದಲೇ ಇಲ್ಲಿ ಪ್ರಮಾಣವಚನಗಳನ್ನು ಉದಾಹರಿಸಿರುತ್ತದೆ. ಈ ಎಲ್ಲಾ ಕಾರಣಗಳಿಂದ ಈ ಗ್ರಂಥವು ಶ್ರೀ ಶಂಕರಾಚಾರ್ಯರ ಉಚ್ಚತರಗತಿಯ ಗ್ರಂಥಗಳ ಸಾಲಿಗೆ ಸೇರುವದಕ್ಕೆ ಎಲ್ಲಾ ಬಗೆಯಿಂದಲೂ ಅರ್ಹವಾಗಿರುತ್ತದೆ. ನಮ್ಮ ದೇಶದ ಜಿಜ್ಞಾಸುಗಳು ಈ ಕನ್ನಡದ ಅನುವಾದದಿಂದ ಗ್ರಂಥದ ಮಹಿಮೆಯನ್ನು ಮನವರಿಕೆಮಾಡಿಕೊಂಡು ಇದರ ಶ್ರವಣಮನನನಿಧಿಧ್ಯಾಸನಗಳಿಂದ ಕೃತಾರ್ಥರಾಗುವಂತೆ ಅನುಗ್ರಹಿಸಬೇಕೆಂದು ಆ ಜಗದ್ಗುರುಗಳನ್ನು ಪ್ರಾರ್ಥಿಸಿ ಈ ಪೀಠಿಕೆಯನ್ನು ಇಲ್ಲಿಗೆ ಉಪಸಂಹಾರಮಾಡುವೆವು.

ಅಧ್ಯಾತ್ಮಪ್ರಕಾಶ ಕಾರ್ಯಾಲಯ,
ವಿರೋಧಿ ಸಂವತ್ಸರದ ಆಶ್ವಿನ ಬ. ೩ ಅನುವಾದಕ

ವಿಷಯಾನುಕ್ರಮಣಿಕೆ



ಇಲ್ಲಿ ಕಂಸದಲ್ಲಿ ಕೊಟ್ಟಿರುವದು ಶ್ಲೋಕಗಳ ಸಂಖ್ಯೆ

೧. ಉಪೋದ್ಘಾತ

ಮಂಗಲ (೧)- ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ಸಂಬಂಧ (೨-೫)- ಮೋಕ್ಷಕ್ಕೆ ಜ್ಞಾನವೇ ಬೇಕು (೬-೧೦) - ಕರ್ಮವು ವಿದ್ಯೆಗೆ ಪ್ರತಿಕೂಲವಾಗಿರುತ್ತದೆ (೧೧-೧೫) ವಿದ್ಯೆಗೆ ಸಹಾಯವು ಬೇಕಿಲ್ಲ (೧೬-೧೯)- ಸಂನ್ಯಾಸವನ್ನು ಶ್ರುತಿಯಲ್ಲಿ ವಿಧಿಸಿದೆ (೨೦)- ವಿದ್ಯೆಯು ಅಗ್ನಿಹೋತ್ರಮದಂತೆ ಅಲ್ಲ (೨೧-೨೩)- ಜ್ಞಾನಿಗೆ ಪ್ರತ್ಯವಾಯವಿಲ್ಲ (೨೪) ಉಪಸಂಹಾರ (೨೫-೨೬). ಪುಟ ೧-೭

ಉಪೋದ್ಘಾತಪ್ರಕರಣದ ಸಾರ ಪುಟ ೮-೯

೨. ಆತ್ಮಜ್ಞಾನೋತ್ಪತ್ತಿ

ಶಾಸ್ತ್ರದಿಂದ ಆತ್ಮನನ್ನು ಅರಿಯುವ ರೀತಿ (೧)- ಶಾಸ್ತ್ರಜನ್ಯಜ್ಞಾನವು ಪ್ರತ್ಯಕ್ಷ ಬಾಧಿತವಲ್ಲ (೨-೩) - ಅನಾತ್ಮಬಂಧದಿಂದ ಬಿಡುಗಡೆ (೪). ಪುಟ ೧೦-೧೫

ಆತ್ಮಜ್ಞಾನೋತ್ಪತ್ತಿಪ್ರಕರಣದ ಸಾರ ಪುಟ ೧೫

೩. ಈಶ್ವರಾತ್ಮ

ಈಶ್ವರನು ಆತ್ಮನಲ್ಲವೆಂದರೆ ದೋಷ (೧)- ಅಸ್ಥೂಲಾದಿಶ್ರುತಿಯು ಅಧ್ಯಾಸವನ್ನು ಕಳೆಯುತ್ತದೆ (೨-೩)- ಅಪ್ರಮಾಣಾದಿಶ್ರುತಿಯೂ ಪ್ರತ್ಯಗಾತ್ಮನಿಗೆ ಹೊಂದುತ್ತದೆ (೪). ಪುಟ ೧೫-೧೩

ಈಶ್ವರಾತ್ಮಪ್ರಕರಣದ ಸಾರ ಪುಟ ೧೪

೪. ತತ್ತ್ವಜ್ಞಾನಸ್ವಭಾವ

ಜ್ಞಾನವುಂಟಾದಬಳಿಕ ಕರ್ಮವು ಫಲನನ್ನು ಕೊಡಲಾರದು (೧)- ಪ್ರಾರಬ್ಧಕರ್ಮಕ್ಕೂ ಮಿಕ್ಕ ಕರ್ಮಕ್ಕೂ ತಾರತಮ್ಯವಿದೆ (೨-೪)- ಜ್ಞಾನದಿಂದ ಕರ್ಮವು ಬಾಧಿತವಾಗುತ್ತದೆ (೫). ಪುಟ ೧೫-೧೬

ತತ್ತ್ವಜ್ಞಾನಸ್ವಭಾವಪ್ರಕರಣದ ಸಾರ ಪುಟ ೧೬

೫. ಬುದ್ಧ್ಯಪರಾಧ

ಕರ್ಮಿಗಳು ಜ್ಞಾನಕ್ಕೆ ಹೆದರುವದೇಕೆ ? (೧)– ಆತ್ಮನಲ್ಲಿ ಕರ್ತೃತ್ವವು ಭ್ರಾಂತಿಯಿಂದ ತೋರುತ್ತದೆ (೨–೩)– ಆತ್ಮನಲ್ಲಿ ಜ್ಞಾನಕರ್ತೃತ್ವವು ತೋರುವದು ಅಜ್ಞಾನದಿಂದ (೪)– ಆತ್ಮಚೈತನ್ಯದ ಅನುಭವ (೫). ಪುಟ ೧೮–೧೯

ಬುದ್ಧ್ಯಪರಾಧಪ್ರಕರಣದ ಸಾರ ಪುಟ ೨೦

೬. ವಿಶೇಷಾಪೋಹ

ಆತ್ಮನಲ್ಲಿ ತೋರಿಬರುವ ವಿಶೇಷಣವೆಲ್ಲವೂ ಅಧ್ಯಸ್ತ (೧–೬)– ಜ್ಞೇಯವಾದ ಅಹಂಕಾರವು ಆತ್ಮನಿಗೆ ಸೇರಿದ್ದಲ್ಲ (೪–೫)– ಅಹಂ ಬ್ರಹ್ಮಾಸ್ಮಿ ಎಂಬಲ್ಲಿ ಅಹಂಪದಕ್ಕೆ ಅರ್ಥ (೬). ಪುಟ ೨೧–೨೩

ವಿಶೇಷಾಪೋಹಪ್ರಕರಣದ ಸಾರ ಪುಟ ೨೩

೭. ಬುದ್ಧಿಸಾಕ್ಷಿ
(ಬುದ್ಧ್ಯಾರೂಢಪ್ರಕರಣ)

ಆತ್ಮನು ಸರ್ವಜ್ಞವಾದ ಬ್ರಹ್ಮವೇ (೧–೨)– ಆತ್ಮನಿಗೂ ಅಂತಃಕರಣಕ್ಕೂ ತಾರತಮ್ಯ (೩)– ಆತ್ಮನ ಸರ್ವಜ್ಞತೆಗೆ ದೃಷ್ಟಾಂತ (೫)– ಆತ್ಮನು ಪರಮಾರ್ಥವಾಗಿ ಅದ್ವಿತೀಯಬ್ರಹ್ಮವೇ (೫). ಪುಟ ೨೪–೨೬

ಬುದ್ಧಿಸಾಕ್ಷಿಪ್ರಕರಣದ ಸಾರ ಪುಟ ೨೬

೮. ಚಿತಿಮತಿಸಂವಾದ
(ಮತಿವಿಲಾಪನಪ್ರಕರಣ)

ಆತ್ಮನು ನಿರ್ವಿಶೇಷನು (೧)– ಆತ್ಮನು ನಿತ್ಯಮುಕ್ತಬ್ರಹ್ಮಸ್ವರೂಪನು (೨–೩)– ಆತ್ಮನು ಅಸಂಗನು, ಅದ್ವಿತೀಯನು (೪)– ಆತ್ಮಜ್ಞಾನದಿಂದ ಧರ್ಮಾಧರ್ಮಗಳ ಕಟ್ಟು ಹೋಗುವದು (೫)– ಆತ್ಮಜ್ಞಾನದಿಂದ ಅವಿದ್ಯಾಕಾಮಗಳು ನಾಶವಾಗುವವು (೬).

ಪುಟ ೨೭–೨೯

ಚಿತಿಮತಿಸಂವಾದಪ್ರಕರಣದ ಸಾರ ಪುಟ ೩೦

೯. ಸೂಕ್ಷ್ಮತಾವ್ಯಾಪಿತಾಪ್ರಕರಣ

ಆತ್ಮನು ಪರಮಸೂಕ್ಷ್ಮನು, ಸರ್ವವ್ಯಾಪಿಯು (೧–೩)– ಆತ್ಮನು ಏಕನು, ಅಸಂಗನು (೪–೬)- ಆತ್ಮನು ಅದ್ವಿತೀಯನು (೭–೯). ಪುಟ ೩೧–೩೪

ಸೂಕ್ಷ್ಮತಾವ್ಯಾಪಿತಾಪ್ರಕರಣದ ಸಾರ ಪುಟ ೩೫

೧೦. ಪರಮಾರ್ಥದರ್ಶನ

(ದೃಶಿಸ್ವರೂಪಪರಮಾರ್ಥದರ್ಶನಪ್ರಕರಣ)

ಆತ್ಮನು ಅದ್ವಿತೀಯಚಿನ್ಮಾತ್ರನು (೧–೩)- ಆತ್ಮನು ನಿತ್ಯನಿರವದ್ಯನು (೪–೫)– ಆತ್ಮನು ನಿರ್ವಿಕಾರನು (೬–೭)- ಆತ್ಮನು ಪುರುಷೋತ್ತಮನು (೮)- ಆತ್ಮನು ಅವಿದ್ಯಾಕಾಮಕರ್ಮರಹಿತನು (೯–೧೦)– ಆತ್ಮನು ನಿರ್ವಿಕಲ್ಪನು, ಅಕರ್ತೃ, ನಿಷ್ಪ್ರಪಂಚನು (೧೧–೧೩)- ಪರಮಾರ್ಥದರ್ಶನದ ಫಲ (೧೪) ಪುಟ ೩೬–೪೨

ಪರಮಾರ್ಥದರ್ಶನಪ್ರಕರಣದ ಸಾರ ಪುಟ ೪೩

೧೧. ಈಕ್ಷಿತೃತ್ವ

ಶುದ್ಧಚೈತನ್ಯರೂಪವು ಜೀವರಿಗೆ ಸ್ವತಃಸಿದ್ಧ (೧–೨)- ಜೀವನು ಚಿನ್ಮಾತ್ರನೆಂಬುದು ಹೇಗೆ? (೩-೪) ಪ್ರತ್ಯಕ್ಷಾದಿಗಳಿಂದ ತೋರುವ ಜೀವತ್ವವು ವ್ಯಾವಹಾರಿಕವು (೫–೭)- ಜೀವತ್ವವು ಪಾರಮಾರ್ಥಿಕವಲ್ಲ (೮)– ಅದ್ವೈತಜ್ಞಾನವು ಶಾಸ್ತ್ರಸಿದ್ಧ (೯)– ಅಕರ್ಮಸಂಬಂಧಿಯಾದ ಆತ್ಮನ ಸಿದ್ಧಿ (೧೦–೧೩)– ಆತ್ಮನಿಗೆ ಕರ್ಮವಿಲ್ಲ (೧೪) ಕರ್ಮವು ಮೋಕ್ಷಕ್ಕೆ ಹೇತುವಲ್ಲ (೧೫–೧೬). ಪುಟ ೪೪–೪೯

ಈಕ್ಷಿತೃತ್ವಪ್ರಕರಣದ ಸಾರ ಪುಟ ೫೦

೧೨. ದೃಗ್ದೃಶ್ಯವಿವೇಕ

(ಪ್ರಕಾಶಪ್ರಕರಣ)

ಆತ್ಮಜ್ಞಾನಕ್ಕಿರುವ ಅಡ್ಡಿ (೧–೩)– ಅಧ್ಯಾಸವನ್ನು ಕಳೆಯುವ ಜ್ಞಾನ (೪–೯)– ಆತ್ಮನಿಗೆ ದುಃಖಿತ್ವವಿಲ್ಲವೆಂಬುದಕ್ಕೆ ಯುಕ್ತಿ (೧೦–೧೨)– ಉಪಸಂಹಾರ (೧೩–೧೯) ಪುಟ ೫೧–೫೬

ದೃಗ್ದೃಶ್ಯವಿವೇಕಪ್ರಕರಣದ ಸಾರ ಪುಟ ೫೭-೪೮

೧೩. ನಿರ್ವಿಕಲ್ಪಾತ್ಮ
(ಅಚಕ್ಷುಷ್ಟ್ವಪ್ರಕರಣ)

ಆತ್ಮನಲ್ಲಿ ದೃಷ್ಟ್ಯಾದಿಧರ್ಮಗಳಿಲ್ಲ (೧-೫)- ಆತ್ಮನಲ್ಲಿ ಸ್ವಾಭಾವಿಕವಾದ ದೃಷ್ಟ್ಯಾದಿಗಳಿವೆ (೬-೮)- ಆತ್ಮನ ದೃಷ್ಟಿಯು ಅನಿತ್ಯವೆಂಬ ಭ್ರಾಂತಿಗೆ ಕಾರಣ (೯-೧೦)- ನಿರ್ವಿಕಲ್ಪಾತ್ಮನ ಅನುಸಂಧಾನ (೧೦-೨೩)- ಆತ್ಮಸ್ವರೂಪಜ್ಞಾನಕ್ಕೆ ಫಲ (೨೫-೨೬)- ವೇದಾಂತಕ್ಕೆ ಅಧಿಕಾರಿಗಳು (೨೭). ಪುಟ ೫೯-೬೫

ನಿರ್ವಿಕಲ್ಪಾತ್ಮಪ್ರಕರಣದ ಸಾರ ಪುಟ ೬೫-೬೬

೧೪. ಕೂಟಸ್ಥಾತ್ಮ
(ಸ್ವಪ್ನಸ್ಮೃತಿಪ್ರಕರಣ)

ಆತ್ಮನು ದ್ರಷ್ಟೃ, ಅಂತಃಕರಣವು ದೃಶ್ಯ (೧-೬)- ಎಲ್ಲಾ ಜೀವರುಗಳಿಗೂ ಒಬ್ಬನೇ ಆತ್ಮನು (೭)- ಆತ್ಮನು ಕ್ರಿಯಾಕಾರಕಫಲ ವಿಲಕ್ಷಣನು (೮)- ಆತ್ಮನು ಹೇಯೋಪಾದೇಯರಹಿತನು (೯-೧೦)- ಆತ್ಮಜ್ಞಾನಿಗೆ ಕರ್ತವ್ಯವಿಲ್ಲ (೧೧-೨೨)- ಆತ್ಮನು ಅಪಂ ಕರ್ತೃವಲ್ಲದ್ದರಿಂದ ನಿಷ್ಕ್ರಿಯನು (೨೩-೨೬)- ಆತ್ಮಜ್ಞನಿಗೆ ಕಾರ್ಯವಿಲ್ಲವೆಂಬುದಕ್ಕೆ ಕೆಲವು ಕಾರಣಗಳು (೨೭-೪೦)- ಪ್ರಕರಣಾರ್ಥಸಂಕ್ಷೇಪ (೪೧-೫೦). ಪುಟ ೬೭-೭೨

ಕೂಟಸ್ಥಾತ್ಮಪ್ರಕರಣದ ಸಾರ ಪುಟ ೭೩-೭೪

೧೫. ನಿಷ್ಕ್ರಿಯಾತ್ಮಪ್ರಕರಣ
(ನಾನ್ಯದನ್ಯತ್ವಪ್ರಕರಣ)

ಆತ್ಮಕ್ಕಿಂತ ಬೇರೆಯಾದದ್ದನ್ನು ಚಿಂತಿಸಬಾರದು (೧)- ಆತ್ಮನು ಮನಸ್ಸಿಗಿಂತ ಭಿನ್ನನು (೨-೪)- ಆತ್ಮನಿಗೆ ಜಾತ್ಯಾದಿಗಳಿಲ್ಲದ್ದರಿಂದ ಕ್ರಿಯೆಗಳನ್ನು ಬಿಡಬೇಕು (೫)- ಸಶರೀರತ್ವವು ಕರ್ಮದಿಂದಾದದ್ದಾದ್ದರಿಂದ ಕರ್ಮವನ್ನು ಬಿಡಬೇಕು (೬-೮)- ಆತ್ಮಸ್ವರೂಪ (೯-೧೮)- ಜ್ಞಾತೃವಾದ್ದರಿಂದ ಜ್ಞೇಯಕ್ಕಿಂತಲೂ ಕರಣಕ್ಕಿಂತಲೂ ಬೇರೆ (೧೯-೨೦)- ಅವಸ್ಥಾತ್ರಯಸಾಕ್ಷಿ (೨೧-೨೬)- ಆತ್ಮನು ಬುದ್ಧಿವ್ಯಾಪಾರಗಳ ಕರ್ತೃವಲ್ಲ (೨೭-೨೮)- ಆತ್ಮನ ನಿರುಪಾಧಿಕಸ್ವರೂಪ (೨೯-೩೬)- ಆತ್ಮನು ಜ್ಞೇಯನಲ್ಲ (೩೮-೪೯)- ಆತ್ಮಜ್ಞಾನವು ನಿತ್ಯಸಿದ್ಧ (೪೦-೫೦)- ಆತ್ಮಜ್ಞಾನದ ಫಲ (೫೧-೫೪). ಪುಟ ೭೫-೧೦೨

ನಿಷ್ಕ್ರಿಯಾತ್ಮಪ್ರಕರಣದ ಸಾರ ಪುಟ ೧೦೩

೧೬. ಸ್ವಯಂಜ್ಯೋತಿ
(ಪಾರ್ಥಿವಪ್ರಕರಣ)

ಸ್ವಯಂಜ್ಯೋತಿಯಾದ ಆತ್ಮನು ಅನಾತ್ಮವನ್ನು ಬೆಳಗುತ್ತಿದಾನೆ (೧-೩)- ಆತ್ಮನಿಗೆ ಅಂತಃಕರಣಧರ್ಮಗಳ ಸಂಬಂಧವಿಲ್ಲ (೫-೯)- ಆತ್ಮನು ತನಗೆ ತಾನೇ ವಿಷಯವಲ್ಲ

(೧೨-೧೩)- ಬಾಹ್ಯರ ಪಕ್ರಿಯೆಯು ವಿಮರ್ಶೆಯಿಂದಲೂ ಆತ್ಮಜ್ಞೆತನ್ಯವು ಸಿದ್ಧವಾಗುತ್ತವೆ (೧೪-೧೮)- ಆತ್ಮನಲ್ಲಿ ಕರ್ತೃತ್ವದ ಅಧ್ಯಾಸವಾಗಿರುವ ರೀತಿ (೧೯-೨೧)- ಆತ್ಮನ ವಿಷಯದಲ್ಲಿ ವಾದವಿವಿಪ್ರತಿಪತ್ತಿಗಳು (೨೨-೨೮)- ಆತ್ಮನು ಇಲ್ಲವೆಂಬುದು ಸರಿಯಲ್ಲ (೨೯-೩೬)- ಆತ್ಮನಿಗೆ ಅಜ್ಞಾನವಿಲ್ಲ (೩೭-೩೮)- ಮೋಕ್ಷವು ನಿತ್ಯಸಿದ್ಧವಾದ ಆತ್ಮಸ್ವರೂಪವೇ (೩೯-೪೪)- ಸಾಂಖ್ಯಶಾಸ್ತ್ರದಂತೆ ಬಂಧಮೋಕ್ಷವ್ಯವಸ್ಥೆ ಇಲ್ಲ (೪೫-೫೦)- ವೈಶೇಷಿಕ ಮತದಂತೆಯೂ ಬಂಧಮೋಕ್ಷವ್ಯವಸ್ಥೆಯಿಲ್ಲ (೫೧-೫೭)- ಸಿದ್ಧಾಂತದಲ್ಲಿ ಬಂಧಮೋಕ್ಷಗಳ ವ್ಯವಸ್ಥೆ ಹೇಗೆ? (೫೮-೬೩)- ವೇದಾಂತಸಮ್ಮತವಾದದ್ದೇ ಸರಿಯಾದ ಬಂಧಮೋಕ್ಷಗಳ ವ್ಯವಸ್ಥೆ (೬೪-೬೭)- ಉಪಸಂಹಾರ (೬೮-೭೪). ಪುಟ ೧೦೪-೧೨೭

ಸ್ವಯಂಜ್ಯೋತಿಷ್ಪ್ರಕರಣದ ಸಾರ ಪುಟ ೧೨೮-೧೩೦

೧೭. ಸಮ್ಯಙ್ಮತಿ

ಮಂಗಲ (೧-೩)- ಆತ್ಮಲಾಭದ ಹೆಚ್ಚುಗಾರಿಕೆ (೪-೫)- ಆತ್ಮಜ್ಞಾನದಿಂದಲೇ ಆತ್ಮಲಾಭ (೬-೭$\frac{1}{2}$)- ಆತ್ಮಜ್ಞಾನವು ವೇದಪ್ರಮಾಣದಿಂದಾಗತಕ್ಕದ್ದು (೮-೯)- ದ್ವೈತವು ಆತ್ಮನಲ್ಲಿ ಕಲ್ಪಿತ (೧೦-೧೨)- ಪ್ರಮಾಣಜ್ಞಾನವೆಲ್ಲ ನಿಜವಾಗಿ ಆತ್ಮನೇ (೧೩-೧೪$\frac{1}{2}$) ದ್ವೈತವು ಆವಿದ್ಯಕ (೧೫-೨೦)- ಜ್ಞಾನವನ್ನು ಸಾಧನಗಳಿಂದ ಸಂಪಾದಿಸಿಕೊಳ್ಳಬೇಕು (೨೧-೨೪)- ಅವಸ್ಥಾತ್ರಯಪರೀಕ್ಷೆಯಿಂದ ಜ್ಞಾನ (೨೫-೩೨)- ಆತ್ಮನು ಅವಿಷಯನಾದರೂ ಅವನನ್ನು ಅರಿತುಕೊಳ್ಳುಬಹುದು (೩೩-೪೨)- ಆತ್ಮಜ್ಞಾನದ ಫಲ (೪೩)- ಜ್ಞಾನಿಗೆ ಕರ್ಮವಿಲ್ಲ (೪೪-೪೯)- ಮುಮುಕ್ಷುವು ವೈರಾಗ್ಯಯುಕ್ತನಾಗಿ ಗುರುವನ್ನಾಶ್ರಯಿಸಬೇಕು (೫೦-೫೩)- ಜ್ಞಾನದಿಂದಾಗುವ ಬ್ರಹ್ಮಪ್ರಾಪ್ತಿ (೫೪-೫೮)- ಬ್ರಹ್ಮಜ್ಞಾನಿಗೆ ಜನ್ಮವಿಲ್ಲ (೫೯-೬೧)- ಬ್ರಹ್ಮಾತ್ಮೈಕ್ಯಜ್ಞಾನಕ್ಕೆ ಉಪನಿಷತ್ಪ್ರಮಾಣ (೬೨-೭೯)- ಉಪಸಂಹಾರ (೮೦-೮೭)- ಮಂಗಲ (೮೮-೮೯). ಪುಟ ೧೩೧-೧೫೫

ಸಮ್ಯಙ್ಮತಿಪ್ರಕರಣದ ಸಾರ ಪುಟ ೧೫೬-೧೫೮

೧೮. ತತ್ತ್ವಮಸಿ

ಮಂಗಲ (೧-೨)- ತತ್ತ್ವಮಸಿ ಎಂಬ ಶ್ರುತಿಯ ತಾತ್ಪರ್ಯ (೩-೮)- ಪ್ರಸಂಖ್ಯಾನವಾದಿಗಳ ಮತ (೯-೧೮)- ಸಿದ್ಧಾಂತ: ಮೋಕ್ಷವು ನಿತ್ಯಸಿದ್ಧವಾದ್ದರಿಂದ ಶಾಸ್ತ್ರವು ಅಧ್ಯಾಸವನ್ನು ನಿಷೇಧಮಾಡಿದರೆ ಸಾಕು (೧೯-೨೩)- ಆತ್ಮನು ಶಬ್ದಪ್ರತ್ಯಯಗೋಚರನಲ್ಲ (೨೪-೩೦)- ಚಿದಾಭಾಸಕ್ಕೆ ಮುಖಾಭಾಸದ ದೃಷ್ಟಾಂತ (೩೧-೩೨)- ಸಂಸಾರಿ ಯಾರೆಂಬ ಬಗ್ಗೆ ವಾದಿಗಳ ಮತಭೇದ (೩೩-೩೫)- ಆಭಾಸವು ಸತ್ಯವೆ? (೩೬$\frac{1}{2}$-೪೧)- ಸಂಸಾರವು ಆವಿದ್ಯಾಮಾತ್ರ (೪೨-೪೬)- ಆತ್ಮನಲ್ಲಿ ಜ್ಞಾತೃಜ್ಞಾನಜ್ಞೇಯತ್ವವಿಲ್ಲ (೪೮-೫೩)- ಜ್ಞಾನರಜ್ಜುಗಳ ಗತಿ (೫೪-೬೮)- ಪ್ರತ್ಯಯಗಳೇ ಅರಿಯುವವೆಂದು ತಿಳಿಯುವವಕ್ಕೆ ಆಭಾಸದ ಅಜ್ಞಾನ

ವೇ ಕಾರಣ (೬೯-೭೩)- ಅಭಾಸವನ್ನೊಪ್ಪದಿದ್ದರೆ ವಾಕ್ಯೋಪದೇಶವು ಯಾರಿಗೆ ? (೭೪. ೭೬)- ಅಭಾಸವನ್ನೊಪ್ಪದಿದ್ದರೆ ಅಹಂಕಾರಕ್ಕೂ ಸಾಕ್ಷಿಗೂ ಸಂಬಂಧವಿಲ್ಲ (೭೭-೭೯)- ಅಭಾಸವನ್ನೊಪ್ಪಿದರೇ ಯಾವ ದೋಷವೂ ಇರುವದಿಲ್ಲ (೮೦-೮೬)- ಆತ್ಮಾನಾತ್ಮವಿವೇಕ ವುಳ್ಳವನಿಗೇ ವಾಕ್ಯಾರ್ಥಜ್ಞಾನ (೮೭-೯೨)- ಅನ್ವಯವ್ಯತಿರೇಕದಿಂದ ತ್ವಂಪದಾರ್ಥಜ್ಞಾನ (೯೩-೯೬)- ಅಧಿಕಾರಿಗೆ ವಾಕ್ಯಾರ್ಥಶ್ರವಣಮಾತ್ರದಿಂದ ಜ್ಞಾನ (೯೭-೧೧೧)- ಸಾಕ್ಷಿ ಪ್ರತ್ಯಯಗಳ ವಿಂಗಡ (೧೧೨-೧೨೦)- ಶಿಷ್ಯಬೋಧನೆಗೆ ಅಭಾಸಯುಕ್ತಪ್ರಮಾಣವು ಬೇಕು (೧೨೧-೧೩೭)- ಕ್ಷಣಿಕವಿಜ್ಞಾನವಾದದಲ್ಲಿ ದೋಷ (೧೩೮-೧೪೭)- ಸಾಕ್ಷಿಸಾಕ್ಷ್ಯಗಳ ಸಂಬಂಧ (೧೪೮-೧೫೪)- ಜ್ಞಾನಫಲವು ಆತ್ಮನಿಗೇ (೧೫೫-೧೫೭)- ಆತ್ಮನಿಗೆ ಅಧ್ಯಾಸದಿಂದ ದುಃಖಿತ್ವ (೧೫೮-೧೬೪)- ತತ್ತ್ವಮಸಿವಾಕ್ಯದ ಅರ್ಥವು ತಿಳಿಯುವ ರೀತಿ (೧೬೪½-೧೬೯)- ವಾಕ್ಯಾರ್ಥಜ್ಞಾನಕ್ಕೆ ಉಪಾಯ (೧೭೦-೧೭೫½)- ವಾಕ್ಯಜ್ಞಾನವು ಪ್ರತ್ಯಕ್ಷಬಾಧಿತವಲ್ಲ (೧೭೬-೧೮೬)- ತತ್ತ್ವಮಸಿವಾಕ್ಯದಲ್ಲಿ ಪದಗಳ ಕೃತ್ಯ (೧೮೭-೧೯೪½)- ಅನುಭವಕ್ಕಾಗಿ ಪ್ರಸಂಖ್ಯಾನವಿಧಿ ಎಂಬುದು ಸರಿಯಲ್ಲ (೧೯೯-೨೦೪)- ಸಂಸಾರಿತ್ವಾನುಭವಕ್ಕೆ ಗತಿ (೨೦೫-೨೧೦)- ಸಿದ್ಧಾಂತದಲ್ಲಿ ಸಂನ್ಯಾಸದ ವಿನಿಯೋಗ (೨೧೧-೨೧೩)- ವಾಕ್ಯಜ್ಞಾನವಾದಬಳಿಕ ಯಾವ ವಿಧಿಯೂ ಇಲ್ಲ (೨೧೪-೨೧೬)- ಜ್ಞಾನಿಯೂ ಮುಮುಕ್ಷುವೂ ಮತ್ತೆ ಕರ್ತೃತ್ವವನ್ನು ಬಯಸರು (೨೧೭-೨೨೦)- ಮಂಗಲ (೨೨೦). ಪುಟ ೧೫೯-೨೩೪

ತತ್ತ್ವಮಸಿಪ್ರಕರಣದ ಸಾರ ಪುಟ ೨೩೫-೨೪೦

೧೯. ಭೇದಗ್ರಹನಾಶ

(ಭೇಷಜಯೋಗಪ್ರಕರಣ)

ಪ್ರಕರಣಾರ್ಥದ ಸಂಕ್ಷೇಪ (೧-೨)- ಪರಮಾತ್ಮನಿಗೂ ಆತ್ಮನಿಗೂ ಭೇದವಿಲ್ಲ (೩-೪)- ಮನಸ್ಸು ಶಾಂತವಾದರೆ ದ್ವೈತವಿಲ್ಲ (೫)- ಜ್ಞಾನಿಯು ತಾನು ನಿತ್ಯಮುಕ್ತನೆಂದು ತಿಳಿದಿರುವನು (೬-೧೯)- ಕಾರ್ಯಕಾರಣಭಾವವು ಪರಮಾರ್ಥವಲ್ಲ (೨೦-೨೨)- ಮನಸ್ಸಿನ ವ್ಯಾಪಾರದಿಂದ ಆತ್ಮನಲ್ಲಿ ಅತಿಶಯವಿಲ್ಲ (೨೩-೨೪)- ಉಪಸಂಹಾರ (೨೫-೨೭)- ಕೊನೆಯ ಮಂಗಲ (೨೮). ಪುಟ ೨೪೧-೨೫೫

ಭೇದಗ್ರಹನಾಶಪ್ರಕರಣದ ಸಾರ ಪುಟ ೨೫೬-೨೫೭

ಶ್ಲೋಕಗಳ ವರ್ಣಾನುಕ್ರಮಣಿಕೆ ಪುಟ ೨೫೮-೨೬೭

ಶಬ್ದಾನುಕ್ರಮಣಿಕೆ ಪುಟ ೨೬೮-೨೭೭

ಸಂಕೇತಗಳ ವಿವರಣೆ

ಉಪನಿಷತ್ತುಗಳನ್ನು ಮೊದಲನೆಯ ಅಕ್ಷರದಿಂದ ತಿಳಿಸಿದೆ ಉದಾಹರಣೆಗೆ

ಈ.= ಈಶಾವಾಸ್ಯೋಪನಿಷತ್ತು ಛಾಂ.= ಛಾಂದೋಗ್ಯೋಪನಿಷತ್ತು,
ಶ್ವೇ.= ಶ್ವೇತಾಶ್ವತರೋಪನಿಷತ್ತು ಇತ್ಯಾದಿ.

ಭಾ. ಎಂಬಕ್ಷರವನ್ನು ಸೇರಿಸಿದ್ದರೆ ಭಾಷ್ಯವೆಂದರ್ಥ. ಉದಾಹರಣೆಗೆ
ಈ. ಭಾ.= ಈಶಾವಾಸ್ಯೋಪನಿಷದ್ಭಾಷ್ಯ, ಗೀ. ಭಾ.= ಗೀತಾಭಾಷ್ಯ,
ಸೂ. ಭಾ.= ಸೂತ್ರಭಾಷ್ಯ ಇತ್ಯಾದಿ.

ಭಾ. ಭಾ. ಎಂದರೆ ಈ ಗ್ರಂಥರತ್ನಮಾಲೆಯಲ್ಲಿ ಅಚ್ಚಾಗಿರುವ ಪುಸ್ತಕದಲ್ಲಿರುವ ಭಾಷ್ಯ.

ಸುಮ್ಮನೆ ಹಾಕಿರುವ ಸಂಖ್ಯೆಗಳು ಈ ಗ್ರಂಥದ ಪ್ರಕರಣ ಮತ್ತು ಶ್ಲೋಕಗಳನ್ನು ಸೂಚಿಸುವವು.

ಸಂಕೇತ	ವಿವರಣೆ
ಉ. ಸಾ. ಗ ಉ. ಸಾ. ಗದ್ಯ ಉಪ. ಗದ್ಯ	ಈ ಗ್ರಂಥರತ್ನಮಾಲೆಯಲ್ಲಿ ಪ್ರಕಟವಾಗಿರುವ ಉಪದೇಶಸಾಹಸ್ರೀ ಗದ್ಯಪ್ರಬಂಧದ ಖಂಡಗಳು
ಗೌ. ಕಾ.	ಗೌಡಪಾದೀಯ ಕಾರಿಕೆ
ತೈ. ಸಂ.	ತೈತ್ತಿರೀಯ ಸಂಹಿತೆ
ನೈ. ಸಿ.	ನೈಷ್ಕರ್ಮ್ಯಸಿದ್ಧಿ
ಬೋ. ಅ.	ಬೋಧನಿಧಿಯ ಮತ್ತು ಆನಂದಜ್ಞಾನಯತಿಯ ಪಾಠ
ಬೋ. ನಿ.	ಬೋಧನಿಧಿ

ಮಿಕ್ಕ ಸಂಕೇತಗಳನ್ನು ಉಪದೇಶಸಾಹಸ್ರಿಯ ಗದ್ಯಪ್ರಬಂಧದಂತೆ ತಿಳಿಯಬೇಕು.

——:o:——

ತಿದ್ದುಪಡಿ

ಸಂಸ್ಕೃತಶ್ಲೋಕಗಳಲ್ಲಿ ಈ ಕೆಳಗಿನ ತಪ್ಪುಗಳನ್ನು ಹೀಗೆ ತಿದ್ದಿಕೊಂಡು ಓದಬೇಕಾಗಿ ಪ್ರಾರ್ಥನೆ:

ಪುಟ	ಶ್ಲೋಕ	ಇರಬೇಕಾದದ್ದು
೧೧	೪	ಇದಂವನಮತಿಕ್ರಮ್ಯ
೧೪	೧	ಆತ್ಮಜ್ಞಾನಾ
೩೧	೨	ಬಾಹ್ಯಾಪ್ರಮಾಣತಃ
೫೫	೧೫	ಆತ್ಮನೋ ದೃಷ್ಟಿ
೬೧	೧೧	ಚಾಹ್ಯಾಭ್ಯನ್ತರಂ
,,	೧೩	ಧ್ಯಮನಾ ಯಸ್ಮಾ
೪೪	೧೧	ಆತ್ಮಾನಂ ಸಮಂ ಸ ಬ್ರಹ್ಮನಿತ್ತಮ
೧೬	೧೬	ಮಿತ್ಯೇಷ
,,	,,	ದೋಷಾಶ್ಚಾತ್ಮಾಮಲೋ
೯೬	೩೪	ವಿಜಾನೀಯಾತ್
೧೦೧	೫೩	ಶ್ರುತೇಃ
೧೧೧	೨೬	ಆಧಾರಸ್ಯಾಪ್ಯಸತ್ಯಾ್ವಚ್ಚ
೧೨೧	೫೬	ಸ್ಯಾನ್ಮಾಲಾಪರಿಹಾರ್ಯ
,,	೫೭॥	ಸೂಕ್ಷ್ಮೈಕಾ
೧೪೦	೩೭	ಹೀತ್ಯತಃ
೧೫೫	೪೪	ದನ್ಯನ್ನ ವಿದ್ಯತೇ
೧೭೭	೬೧	ಆದರ್ಶ
೧೪೩	೪೦	ಯೋವಿಸ್ಫುಲಿಙ್ಗ
೧೪೭	೯೧	ಸಾಹಜ್ಯತೈ
೧೯೪	೧೨೪	ಚೇತನಸ್ಯಾ
೨೦೨	೧೩೫	ಸಿದ್ಧಿರ್ಜ್ಞೇ
೨೩೩	೨೧೪	ಚರಣ
೨೪೫	೧೧	ದೃಷ್ಟತೋ

॥ ಓಂ ॥

ಉಪದೇಶಸಾಹಸ್ರಿ

(ಪದ್ಯಪ್ರಬಂಧ)

೧. ಉಪೋದ್ಘಾತ

ಮಂಗಲ

ಚೈತನ್ಯಂ ಸರ್ವಗಂ ಸರ್ವಂ ಸರ್ವಭೂತಗುಹಾಶಯಮ್
ಯತ್ಸರ್ವವಿಷಯಾತೀತಂ ತಸ್ಮೈ ಸರ್ವವಿದೇ ನಮಃ ॥ ೧ ॥

೧. ಎಲ್ಲವನ್ನೂ ವ್ಯಾಪಿಸಿಕೊಂಡಿರುವ, ಎಲ್ಲವೂ (ತಾನೇ) ಆಗಿರುವ, ಸರ್ವಭೂತಗಳ (ಹೃದಯ)ಗುಹೆಯಲ್ಲಿಯೂ ಇರುವ[1] ಸರ್ವವಿಷಯಗಳನ್ನೂ ಮೀರಿರುವ ಚೈತನ್ಯವು ಯಾವದುಂಟೋ ಅಂಥ ಸರ್ವಜ್ಞತತ್ತ್ವಕ್ಕೆ[2] ನಮಸ್ಕಾರ!

ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ಸಂಬಂಧ

ಸಮೂಪಯ್ಯ ಕ್ರಿಯಾಃ ಸರ್ವಾಃ ದಾರಾಗ್ನ್ಯಾಧಾನಪೂರ್ವಿಕಾಃ।
ಬ್ರಹ್ಮವಿದ್ಯಾಮುಥೇದಾನೀಂ ವಕ್ತುಂ ವೇದಃ ಪ್ರಚಕ್ರಮೇ ॥ ೨ ॥
ಕರ್ಮಾಣಿ ದೇಹಯೋಗಾರ್ಥಂ ದೇಹಯೋಗೇ ಪ್ರಿಯಾಪ್ರಿಯೇ।
ಧ್ರುವೇ ಸ್ಯಾತಾಂ ತತೋ ರಾಗೋ ದ್ವೇಷಶ್ಚೈವ ತತಃ ಕ್ರಿಯಾಃ ॥ ೩ ॥
ಧರ್ಮಾಧರ್ಮೌ ತತೋಽಜ್ಞಸ್ಯ ದೇಹಯೋಗಸ್ತಥಾ ಪುನಃ।
ಏವಂ ನಿತ್ಯಪ್ರವೃತ್ತೋಽಯಂ ಸಂಸಾರಶ್ಚಕ್ರವದ್ ಭೃಶಮ್ ॥ ೪ ॥
ಅಜ್ಞಾನಂ ತಸ್ಯ ಮೂಲಂ ಸ್ಯಾದಿತಿ ತದ್ಧಾನಮಿಷ್ಯತೇ।
ಬ್ರಹ್ಮವಿದ್ಯಾತ ಆರಬ್ಧಾ ತತೋ ನಿಃಶ್ರೇಯಸಂ ಭವೇತ್ ॥ ೫ ॥

೨. ಹೆಂಡತಿಯನ್ನು (ಮಾಡಿಕೊಳ್ಳುವದು), ಅಗ್ನಿಯನ್ನಿಟ್ಟುಕೊಳ್ಳುವದು ಮುಂತಾದ ಕರ್ಮಗಳೆಲ್ಲವನ್ನೂ (ಹೇಳಿ)ಮುಗಿಸಿದ ಬಳಿಕ ಇನ್ನು ಈಗ

---

1. ಒಬ್ಬನೇ ಆತ್ಮನು ಎಲ್ಲರ ಅಂತಃಕರಣಕ್ಕೂ ಸಾಕ್ಷಿಯಾಗಿಯುತ್ತಾನೆ.

2. ಎಲ್ಲವೂ ತಾನೇ ಆಗಿ ಜ್ಞಾನಸ್ವರೂಪವಾಗಿರುವ; ಅಥವಾ ವಿಶೇಷರೂಪದಿಂದ ಅರಿಯುವವರೆಲ್ಲರೂ ತಾನೇ ಆಗಿರುವ.

ವೇದವು ಬ್ರಹ್ಮವಿದ್ಯೆಯನ್ನು ಹೇಳುವದಕ್ಕೆ ಮೊದಲುಮಾಡಿರುತ್ತದೆ

೩-೪. ಕರ್ಮಗಳು ದೇಹಸಂಬಂಧಕ್ಕೆ (ಕಾರಣವು). ದೇಹಸಂಬಂಧವಾದರೆ ಪ್ರಿಯಾಪ್ರಿಯಗಳು ಅವಶ್ಯವಾಗಿ ಆಗುವವು. ಅವುಗಳಿಂದ ರಾಗವೂ ದ್ವೇಷವೂ (ಉಂಟಾಗುವವು). ಅವುಗಳಿಂದ ಕರ್ಮಗಳೂ ಪಾಪಪುಣ್ಯಗಳೂ (ಆಗುವವು). ಅಜ್ಞಾನಾದವನಿಗೆ[1] ಅದರಿಂದ ಮತ್ತೆ ಹಾಗೆಯೇ ದೇಹಸಂಬಂಧವಾಗುವದು. ಹೀಗೆ ಚಕ್ರದಂತೆ ಈ ಸಂಸಾರ(ದ ತೊಳಲು) ಯಾವಾಗಲೂ ಬಲವಾಗಿ ಸುತ್ತಿಕೊಂಡು ಬರುತ್ತಿರುವದು.

೫. ಇದಕ್ಕೆ **ಅಜ್ಞಾನವು**[2] ಮೂಲವಾಗಿರುತ್ತದೆ. ಆದ್ದರಿಂದ ಅದನ್ನು ನಾಶಗೊಳಿಸುವದು ಇಷ್ಟವಾಗಿರುತ್ತದೆ. ಆದ್ದರಿಂದ ಬ್ರಹ್ಮವಿದ್ಯೆಯನ್ನು ಆರಂಭಿಸಿರುತ್ತದೆ : ಅದರಿಂದ ಮೋಕ್ಷಪುಂಟಾಗುವದು.

ಮೋಕ್ಷಕ್ಕೆ ಜ್ಞಾನವೇ ಬೇಕು

ವಿದ್ಯೈವಾಜ್ಞಾನಹಾನಾಯ ನ ಕರ್ಮಾಪ್ರತಿಕೂಲತಃ ।
ನಾಜ್ಞಾನಸ್ಯಾಪ್ರಹಾಣೇ ಹಿ ರಾಗದ್ವೇಷಕ್ಷಯೋ ಭವೇತ್ ॥ ೬ ॥
ರಾಗದ್ವೇಷಕ್ಷಯಾಭಾವೇ ಕರ್ಮ ದೋಷೋದ್ಭವಂ ಧ್ರುವಮ್ ।
ತಸ್ಮಾನ್ನಿಃಶ್ರೇಯಸಾರ್ಥಾಯ ವಿದ್ಯೈವಾತ್ರ ವಿಧೀಯತೇ ॥ ೭ ॥

೬-೭. ಅಜ್ಞಾನವು ನಾಶವಾಗುವದಕ್ಕೆ ವಿದ್ಯೆಯೇ ಬೇಕು, ಕರ್ಮವಲ್ಲ; ಏಕೆಂದರೆ (ಅದು ಅಜ್ಞಾನಕ್ಕೆ) ವಿರುದ್ಧವಾಗಿರುವದಿಲ್ಲ[2]. ಅಜ್ಞಾನವು ನಾಶವಾಗದಿದ್ದರೆ ರಾಗದ್ವೇಷಗಳು ಕ್ಷಯವಾಗಲಾರವು. ರಾಗದ್ವೇಷಗಳು ಕ್ಷಯವಾಗದಿದ್ದರೆ ದೋಷಗಳಿಂದ ಉಂಟಾಗುವ ಕರ್ಮವು ಅವಶ್ಯವಾಗಿ (ಹುಟ್ಟುವದು). ಆದ್ದರಿಂದ ಮೋಕ್ಷವೆಂಬ ಪ್ರಯೋಜನಕ್ಕಾಗಿ ಇಲ್ಲಿ ವಿದ್ಯೆಯನ್ನೇ ತಿಳಿಸಿರುತ್ತದೆ.

ಪೂರ್ವಪಕ್ಷ: ಜ್ಞಾನಕರ್ಮಸಮುಚ್ಚಯವು ಮುಕ್ತಿಗೆ ಸಾಧನ

ಸನು ಕರ್ಮ ತಥಾ ನಿತ್ಯಂ ಕರ್ತವ್ಯಂ ಜೀವನೇ ಸತಿ ।
ವಿದ್ಯಾಯಾಃ ಸಹಕಾರಿತ್ವಂ ಮೋಕ್ಷಂ ಪ್ರತಿ ಹಿ ತದ್ ವ್ರಜೇತ್ ॥ ೮ ॥

---

1. ಆತ್ಮಸ್ವರೂಪವನ್ನು ಅರಿಯದವನಿಗೆ ಕಾಮ, ಕರ್ಮ, ಶರೀರಗ್ರಹಣ – ಇವು ತಪ್ಪುವಂತಿಲ್ಲ.

2. ಅಜ್ಞಾನ, ಅವಿದ್ಯೆ, ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸ – ಇವೆಲ್ಲ ಒಂದೇ ಅರ್ಥದ ಮಾತುಗಳು.

ಯಥಾ ವಿದ್ಯಾ ತಥಾ ಕರ್ಮ ಚೋದಿತತ್ವಾವಿಶೇಷತಃ ।
ಪ್ರತ್ಯವಾಯಿಸ್ಮೃತೇಶ್ಚೈವ ಕಾರ್ಯಂ ಕರ್ಮ ಮುಮುಕ್ಷುಭಿಃ ॥ ೯ ॥
ನನು ಧ್ರುವಫಲಾ ವಿದ್ಯಾ ನಾನ್ಯತ್ ಕಂಚಿದಪೇಕ್ಷತೇ ।
ನಾಗ್ನಿಷ್ಟೋಮೋ ಯಥೈವಾನ್ಯದ್ಧ್ರುವಕಾರ್ಯೋಽಪ್ಯಪೇಕ್ಷತೇ[1] ।೧೦।
ತಥಾ ಧ್ರುವಫಲಾ ವಿದ್ಯಾ ಕರ್ಮ ನಿತ್ಯಮುಪೇಕ್ಷತೇ।

೮-೯. (ಪೂರ್ವಪಕ್ಷಿ) ಹಾಗೆಯೇ ನಿತ್ಯಕರ್ಮವನ್ನೂ ಬದುಕಿರುವ ವರೆಗೂ[2] ಮಾಡಬೇಕು. ಏಕೆಂದರೆ ಮೋಕ್ಷ(ಫಲವನ್ನು ಕೊಡುವ)ದಕ್ಕೆ ಅದು ವಿದ್ಯೆಗೆ ಸಹಕಾರಿಯಾದೀತು. ವಿದ್ಯೆಯು ಹೇಗೋ ಹಾಗೆಯೇ ಕರ್ಮವೂ (ಶಾಸ್ತ್ರದಲ್ಲಿ) ವಿಹಿತವಾಗಿದೆ ಎಂಬುದು ಸಮಾನವಾಗಿರುವದರಿಂದಲೂ[3] (ಅದನ್ನು ಮಾಡದಿದ್ದರೆ) ಪ್ರತ್ಯವಾಯವು[4] (ಉಂಟಾಗುವದೆಂದು) ಸ್ಮೃತಿ (ಯಲ್ಲಿ ಹೇಳಿರು)ವದರಿಂದಲೂ ಮುಮುಕ್ಷುಗಳು (ಅದನ್ನು) ಮಾಡಬೇಕು.

೧೦-೧೧. (ಸಿದ್ಧಾಂತಿಯ ಆಕ್ಷೇಪ):- ವಿದ್ಯೆಯು ಅವಶ್ಯವಾಗಿ (ತನ್ನ) ಫಲವನ್ನು (ಕೊಟ್ಟೇತೀರುವದ)ರಿಂದ (ಅದು) ಮತ್ತೆ ಯಾವ (ಸಹಾಯ) ವನ್ನೂ ಅಪೇಕ್ಷಿಸುವದಿಲ್ಲ.

(ಪೂರ್ವಪಕ್ಷಿ):- ಹಾಗಲ್ಲ. ಅವಶ್ಯವಾಗಿ ಫಲವನ್ನು ಕೊಡುವ ಅಗ್ನಿಷ್ಟೋಮವೂ ಹೇಗೆ ಮತ್ತೊಂದನ್ನು ಬಯಸುತ್ತದೆಯೋ ಹಾಗೆಯೇ ಅವಶ್ಯವಾಗಿ ಫಲವನ್ನು ಕೊಡುವ ವಿದ್ಯೆಯೂ ನಿತ್ಯಕರ್ಮವನ್ನು[5] ಅಪೇಕ್ಷಿಸುತ್ತದೆ.

ಸಿದ್ಧಾಂತ: ಕರ್ಮವು ವಿದ್ಯೆಗೆ ಪ್ರತಿಕೂಲವಾಗಿರುತ್ತದೆ

ಇತ್ಯೇವಂ ಕೇಚಿದಿಚ್ಛನ್ತಿ ನ ಕರ್ಮಪ್ರತಿಕೂಲತಃ । ॥ ೧೧ ॥
ವಿದ್ಯಾಯಾಃ ಪ್ರತಿಕೂಲಂ ಹಿ ಕರ್ಮ ಸ್ಯಾತ್ ಸಾಭಿಮಾನತಃ
ನಿರ್ವಿಕಾರಾತ್ಮಬುದ್ಧಿಶ್ಚ ವಿದ್ಯೇತೀಹ ಪ್ರಕೀರ್ತಿತಾ ॥ ೧೨ ॥

---

1. 'ಪ್ಯ' ಎಂಬ ಪೈ॥ ಪಾಠಕ್ಕಿಂತ ಇದು ಉತ್ತಮ.

2. ಸಾಯುವವರೆಗೂ ಕರ್ಮವನ್ನು ಮಾಡುತ್ತಲೇ ಇರಬೇಕೆಂದು ವೇದದಲ್ಲಿ ವಿಧಿಸಿದೆ.

3. ಇಲ್ಲಿ ವಿದ್ಯೆ ಎಂದರೆ ಉಪಾಸನೆ; ಉಪಾಸನೆಯನ್ನು ಮಾಡಬೇಕೆಂದು ವಿಧಿಸಿರುವಂತೆ ಕರ್ಮವನ್ನೂ ವಿಧಿಸಿದೆ ಎಂದು ಪೂರ್ವಪಕ್ಷಿಯ ಅಭಿಪ್ರಾಯ. ಎರಡನ್ನೂ ಸೇರಿಸಿ ಅನುಷ್ಠಾನಮಾಡಬೇಕೆಂಬ ವಾದಕ್ಕೆ ಸಮುಚ್ಚಯವಾದವೆಂದು ಹೆಸರು.

4. ಮಣಿಯನ್ನು ಕೊಡುವ ದೋಷವು.

5. ಕಾಮ್ಯನಿಷಿದ್ಧಕರ್ಮಗಳನ್ನು ಬಿಡಬೇಕಾದರೂ ಮುಮುಕ್ಷುವು ನಿತ್ಯಕರ್ಮವನ್ನು ಮಾತ್ರ ತ್ಯಜಿಸಬೇಕು ಎಂದು ಭಾವ.

ಅಹಂ ಕರ್ತಾ ಮಮೇದಂ ಸ್ಯಾದಿತಿ ಕರ್ಮ ಪ್ರವರ್ತತೇ ।
ವಸ್ತ್ವಧೀನಾ ಭವೇದ್ವಿದ್ಯಾ ಕರ್ತ್ರಧೀನೋ ಭವೇದ್ವಿಧಿಃ ॥ ೧೩ ॥
ಕಾರಕಾಣ್ಯುಪಮೃದ್ನಾತಿ ವಿದ್ಯಾ ಬುದ್ಧಿಮಿವೋಷರೇ ।
ತತ್ಸತ್ಯಮಿತಿಮಾದಾಯ[1] ಕರ್ಮ ಕರ್ತುಂ ವ್ಯವಸ್ಯತಿ ॥ ೧೪ ॥
ವಿರುದ್ಧತ್ವಾದತಃ ಶಕ್ಯಂ ಕರ್ಮ ಕರ್ತುಂ ನ ವಿದ್ಯಯಾ ।
ಸಹೈವ ವಿದುಷಾ ತಸ್ಮಾತ್ ಕರ್ಮ ಹೇಯಂ ಮುಮುಕ್ಷುಣಾ ॥೧೫॥

೧೩–೧೫ ಹೀಗೆಂದು ಕೆಲವರು ಅಭಿಪ್ರಾಯಪಡುತ್ತಾರೆ. (ಇದು) ಸರಿಯಲ್ಲ. ಏಕೆಂದರೆ ಕರ್ಮವು ಪ್ರತಿಕೂಲವಾಗಿರುತ್ತದೆ. (ಇದರ ವಿವರ): ವಿದ್ಯೆಗೆ ಕರ್ಮವು ಪ್ರತಿಕೂಲವಾಗಿರುತ್ತದೆ. ಹೇಗೆಂದರೆ, (ಕರ್ಮವು) ಅಭಿಮಾನದಿಂದ[2] ಕೂಡಿ(ದವರಿಗೆ ಆಗತಕ್ಕದ್ದು). ಯಾವ ವಿಕಾರವೂ ಇಲ್ಲದ ಆತ್ಮನು (ನಾನು) ಎಂಬ ಬುದ್ಧಿಯನ್ನು ಇಲ್ಲಿ **ವಿದ್ಯೆ** ಎಂದು ಕರೆದಿರುತ್ತದೆ. 'ನಾನು ಕರ್ತೃವು, ನನಗೆ ಈ (ಫಲವು) ಆಗಬೇಕು' ಎಂಬ (ಬುದ್ಧಿಯಿಂದ) ಕರ್ಮವು ಸಾಗುತ್ತದೆ.

ವಿದ್ಯೆಯು ವಸ್ತುವಿಗೆ (ಅಧೀನವಾಗಿರುತ್ತದೆ), ವಿಧಿಯು ಕರ್ತೃವಿಗಧೀನವಾಗಿರುತ್ತದೆ[3]. ಮರುಭೂಮಿಯಲ್ಲಿ (ನೀರೆಂಬ) ತಿಳಿವಳಿಕೆಯನ್ನು (ಮರುಭೂಮಿ ಎಂಬ ತಿಳಿವಳಿಕೆಯು ಕಳೆಯು)ವಂತೆ, ವಿದ್ಯೆಯು ಕಾರಕಗಳನ್ನು ಇಲ್ಲವಾಗಿಸುತ್ತದೆ;[4] ಅವುಗಳು ಸತ್ಯವೆಂಬ ತಿಳಿವಳಿಕೆಯನ್ನು ಸ್ವೀಕರಿಸಿ ಕರ್ಮವನ್ನು ಮಾಡುವದಕ್ಕೆ ನಿಶ್ಚಯಿಸುತ್ತಾನೆ. (ಹೀಗೆ ಕರ್ಮವು ಜ್ಞಾನಕ್ಕೆ) ವಿರುದ್ಧವಾಗಿರುವದರಿಂದ ವಿವೇಕಿಯಾದವನು ಜ್ಞಾನದೊಡನೆಯೇ ಕರ್ಮವನ್ನು ಮಾಡುವದು ಆಗಲಾರದು.

ಆದ್ದರಿಂದ ಮುಮುಕ್ಷುವು ಕರ್ಮವನ್ನು ತ್ಯಾಗಮಾಡಬೇಕು[5].

---

1. 'ಇತಿ ತತ್ಸತ್ಯಮಾದಾಯ' ಎಂಬ ಮೈ॥ ಅ॥ ನಿ॥ ಪಾಠಕ್ಕಿಂತ ಈ ಬೋಧ ನಿಧಿಯ ಪಾಠವೇ ಮೇಲು.

2. ನಾನು ದೇಹಾದಿಗಳಿಂದ ಕೂಡಿದವನು, ಕರ್ಮವನ್ನು ಮಾಡುವವನು, ಎಂಬ ತಿಳಿವಳಿಕೆಯಿಂದ.

3. ಆದ್ದರಿಂದ ಕರ್ತೃವಿಗೆ ಅಧೀನವಲ್ಲದ ವಿದ್ಯೆಯನ್ನು ವಿಧಿಸಿವೆ ಎನ್ನುವದು ತಪ್ಪು; ಕರ್ಮದೊಡನೆ ಅದು ಇರುವದೂ ಸಾಧ್ಯವಿಲ್ಲ.

4. ಆದ್ದರಿಂದ ಜ್ಞಾನವುಂಟಾದಾಗ ಕರ್ತೃತ್ವಬುದ್ಧಿಯಿರುವದಿಲ್ಲ.

5. ಕರ್ಮವು ಕರ್ತೃತ್ವಬುದ್ಧಿಯನ್ನು ಬಯಸುತ್ತದೆ; ಆದರೆ ಮುಮುಕ್ಷುವು ಅಕರ್ತೃತ್ವಬುದ್ಧಿಯನ್ನು ಸಂಪಾದಿಸಿಕೊಳ್ಳಲು ಬಯಸುತ್ತಾನೆ. ಆದ್ದರಿಂದ ಮುಮುಕ್ಷುವು ಕರ್ಮವನ್ನು ತ್ಯಾಗಮಾಡುವದೇ ಜ್ಞಾನಪ್ರಾಪ್ತಿಗೆ ಅನುಕೂಲವಾಗಿರುತ್ತದೆ.

ವಿದ್ಯೆಗೆ ಸಹಾಯವು ಬೇಕಿಲ್ಲ

ದೇಹಾದ್ಯೈರವಿಶೇಷೇಣ ದೇಹಿನೋ ಗ್ರಹಣಂ ನಿಜಮ್ ।
ಪ್ರಾಣಿನಾಂ ತದವಿದ್ಯೋತ್ಥಂ ತಾವತ್ ಕರ್ಮವಿಧಿರ್ಭವೇತ್ ॥೧೬॥
ನೇತಿ ನೇತೀತಿ ದೇಹಾದೀನಪೋಹ್ಯಾತ್ಮಾವಶೇಷಿತಃ ।
ಅವಿಶೇಷಾತ್ಮಬೋಧಾರ್ಥಂ ತೇನಾವಿದ್ಯಾ ನಿವರ್ತಿತಾ ॥ ೧೭ ॥
ನಿವೃತ್ತಾ ಸಾ ಕಥಂ ಭೂಯಃ ಪ್ರಸೂಯೇತ ಪ್ರಮಾಣತಃ ।
ಅಸತ್ಯೇವಾವಿಶೇಷೇಽಪಿ ಪ್ರತ್ಯಗಾತ್ಮನಿ ಕೇವಲೇ ॥ ೧೮ ॥
ನ ಚೇದ್ಭೂಯಃ ಪ್ರಸೂಯೇತ ಕರ್ತಾ ಭೋಕ್ತೇತಿ ಧೀಃ ಕಥಮ್ ।
ಸದಸ್ಮೀತಿ ಚ ವಿಜ್ಞಾತೇ[1] ತಸ್ಮಾದ್ ವಿದ್ಯಾಸಹಾಯಿತಾ ॥ ೧೯ ॥

೧೬-೧೯. ದೇಹಿಯಾದ ಆತ್ಮನನ್ನು ದೇಹವೇ ಮುಂತಾದವುಗಳಿಗಿಂತ ಬೇರೆಯಲ್ಲವೆಂದು ತಿಳಿಯುವದು ಪ್ರಾಣಿಗಳಿಗೆ ಸ್ವಾಭಾವಿಕವು. ಆ (ತಿಳಿವಳಿಕೆಯು) ಅಜ್ಞಾನದಿಂದ ಉಂಟಾಗಿರುತ್ತದೆ. ಅಲ್ಲಿಯವರೆಗೂ[2] ಕರ್ಮವಿಧಿಯಿರಬಹುದು. ಆತ್ಮನಲ್ಲಿ ಯಾವ ವಿಶೇಷವೂ ಇಲ್ಲವೆಂದು ತಿಳಿಸಿಕೊಡುವದಕ್ಕಾಗಿ 'ಇದಲ್ಲ, ಇದಲ್ಲ' (ಬೃ. ೨-೩-೬) ಎಂದು ದೇಹಾದಿಗಳನ್ನು ಅಲ್ಲಗಳೆದು ಆತ್ಮನನ್ನು ಉಳಿಸಿಕೊಂಡಿರುತ್ತದೆ. ಆ (ತಿಳಿವಳಿಕೆ)ಯಿಂದ ಅಜ್ಞಾನವು ಬಾಧಿತವಾಗಿರುತ್ತದೆ. ನಿರ್ವಿಶೇಷನಾದ ಅದ್ವಿತೀಯಪ್ರತ್ಯಗಾತ್ಮನಲ್ಲಿ ಇಲ್ಲದೆಯೇ ಇರುವ[3], ಪ್ರಮಾಣದಿಂದ[4] ಬಾಧಿತವಾಗಿರುವ ಆ (ಅವಿದ್ಯೆಯು) ಮತ್ತೆ ಹೇಗೆ ಹುಟ್ಟೀತು? ಮತ್ತೆ ಹುಟ್ಟದೆ ಇದ್ದರೆ, 'ಸದ್ರೂಪವಾದ ಬ್ರಹ್ಮವು ನಾನಾಗಿರುತ್ತೇನೆ' ಎಂದೂ ತಿಳಿವು ಉಂಟಾದಮೇಲೆ[5], '(ನಾನು) ಕರ್ತೃ, ಭೋಕ್ತೃ ಎಂಬ ಬುದ್ಧಿ ಹೇಗೆ (ಉಂಟಾದೀತು)? ಆದ್ದರಿಂದ ವಿದ್ಯೆಗೆ (ತನ್ನ ಫಲವನ್ನು ಕೊಡುವದಕ್ಕೆ ಯಾವದರ) ಸಹಾಯವೂ ಬೇಕಿಲ್ಲ[6].

---

1. 'ವಿಜ್ಞಾನೇ' ಎಂದು ಅಚ್ಚಿನ ಪಾಠ.
2. ಅವಿದ್ಯೆಯಿರುವವರೆಗೂ.
3. ಹುಸಿಯಾಗಿ ತೋರುತ್ತಿರುವ.
4. ನೀನು ನಿರ್ವಿಶೇಷವಾದ ಬ್ರಹ್ಮವು ಎಂಬ ವಾಕ್ಯದಿಂದ ಉಂಟಾದ ಜ್ಞಾನದಿಂದ.
5. 'ತತ್ತ್ವಮಸಿ' (ಆ ಸದ್ಬ್ರಹ್ಮನೇ ನೀನು) ಎಂಬ ವಾಕ್ಯದಿಂದಾದ ಜ್ಞಾನವೇ ಇದು.
6. ಜ್ಞಾನವುಂಟಾದ ಬಳಿಕ ನಾನು ಕರ್ತೃಭೋಕ್ತೃವೆಂಬ ಜ್ಞಾನವು ಇರುವಂತಿಲ್ಲವಾದ್ದರಿಂದ ಜ್ಞಾನವನ್ನೂ ಕರ್ಮವನ್ನೂ ಸಮುಚ್ಚಯಮಾಡಿಕೊಂಡು ಅನುಷ್ಠಾನಮಾಡುವದಾಗಲಾರದು ಎಂದು ಭಾವ, ಕರ್ತೃಭೋಕ್ತೃಜ್ಞಾನವಿರುವವರೆಗೆ ಆತ್ಮಜ್ಞಾನವಿರುವದಿಲ್ಲ ಎಂಬ ಹೇತುವನ್ನು ಇದಕ್ಕೆ ಜೋಡಿಸಿಕೊಳ್ಳಬೇಕು.

ಸಂನ್ಯಾಸವನ್ನು ಶ್ರುತಿಯಲ್ಲಿ ವಿಧಿಸಿದೆ

ಅತ್ಯರೇಚಯದಿತ್ಯುಕ್ತೋ ನ್ಯಾಸಃ ಶ್ರುತ್ಯಾತ ಏವ ಹಿ ।
ಕರ್ಮಭ್ಯೋ ಮಾನಸೇಭ್ಯಸ್ತೇಭ್ಯ ಏತಾವದಿತಿ ವಾಜಿನಾಮ್ ॥ ೨೦ ॥
ಅಮೃತತ್ವಂ ಶ್ರುತಂ ಯಸ್ಮಾತ್ ತ್ಯಾಜ್ಯಂ ಕರ್ಮ ಮುಮುಕ್ಷುಭಿಃ ।

೨೦. ಆದ್ದರಿಂದಲೇ ಅಲ್ಲವೆ, ಮಾನಸಕರ್ಮದವರೆಗೂ ಇರುವ[1] ಕರ್ಮಗಳಿಗಿಂತಲೂ ಸಂನ್ಯಾಸವೇ ಹೆಚ್ಚಿನದೆಂದು (ತೈ. ನಾ ೭೮) ಶ್ರುತಿಯಲ್ಲಿ ಹೇಳಿರುತ್ತದೆ? 'ಇಷ್ಟೇ ಅಮೃತತ್ವವು' (ಬೃ. ೪-೫-೧೫) ಎಂದು ವಾಜಸನೇಯ (ಶಾಖೆಯವರ ಉಪನಿಷದ್ವಾಕ್ಯ)ವೂ ಹೇಳುತ್ತದೆ. ಆದ್ದರಿಂದ ಮುಮುಕ್ಷುಗಳು ಕರ್ಮವನ್ನು ಬಿಡತಕ್ಕದ್ದು.

ವಿದ್ಯೆಯು ಅಗ್ನಿಷ್ಟೋಮದಂತೆ ಅಲ್ಲ

ಅಗ್ನಿಷ್ಟೋಮವದಿತ್ಯುಕ್ತಂ ತಶ್ರೇದವಮಭಿಧೀಯತೇ ॥ ೨೧ ॥
ನೈಕಕಾರಕಸಾಧ್ಯತ್ವಾತ್ ಫಲಾನ್ಯತ್ವಾಚ್ಚ ಕರ್ಮಣಃ ।
ವಿದ್ಯಾ ತದ್ವಿಪರೀತಾತೋ ದೃಷ್ಟಾನ್ತೋ ವಿಷಮೋ ಭವೇತ್ ॥ ೨೨ ॥
ಕೃಷ್ಯಾದಿವತ್ ಫಲಾರ್ಥತ್ವಾದನ್ಯಕರ್ಮೋಪಬೃಂಹಣಮ್ ।
ಅಗ್ನಿಷ್ಟೋಮಸ್ತ್ವಪೇಕ್ಷೇತ ವಿದ್ಯಾನ್ಯತ್ ಕಿಮಪೇಕ್ಷತೇ ॥ ೨೩ ॥

೨೧-೨೩. ಅಗ್ನಿಷ್ಟೋಮದಂತೆ (ಜ್ಞಾನಕ್ಕೂ ಸಹಕಾರಿಸಾಧನವು ಬೇಕು) ಎಂದು (೧೮ರಲ್ಲಿ) ಹೇಳಿದ್ದಿರಷ್ಟೆ, ಅದಕ್ಕೆ ಈ (ಉತ್ತರವನ್ನು) ಹೇಳುತ್ತೇವೆ. ಕರ್ಮವು ಅನೇಕ ಕಾರಕಗಳಿಂದ ಆಗತಕ್ಕದ್ದು, ಫಲಕ್ಕಿಂತ ತಾನು ಬೇರೆಯಾಗಿಯೂ ಇದೆ[2]; ಆದ್ದರಿಂದ (ಅದಕ್ಕೆ ಬೇರೊಂದು ಸಹಾಯವು ಬೇಕಾಗಬಹುದು). ವಿದ್ಯೆಯು ಅದಕ್ಕೆ ವಿರುದ್ಧವಾಗಿರುತ್ತದೆ[3]. ಆದ್ದರಿಂದ ದೃಷ್ಟಾಂತವು ಸರಿಯಾಗುವದಿಲ್ಲ. ಅಗ್ನಿಷ್ಟೋಮವು ಕೃಷ್ಯಾದಿಗಳಂತೆ ಫಲಕ್ಕಾಗಿ (ಮಾಡತಕ್ಕದ್ದು); ಆದ್ದರಿಂದ ಮತ್ತೊಂದು ಕರ್ಮದಿಂದ ಅದು ಪುಷ್ಟಿಯನ್ನು ಬಯಸಬಹುದು. ವಿದ್ಯೆಯು ಮತ್ತೇನನ್ನು ಬಯಸೀತು[4] ?

---

1. ಸತ್ಯ, ತಪಸ್ಸು, ದಮ, ಶಮ, ದಾನ, ಧರ್ಮ, ಪ್ರಜನನ, ಅಗ್ನಿಹೋತ್ರ, ಯಜ್ಞ, ಮಾನಸ.

2. ಕರ್ಮವು ಬೇರೆ, ಫಲವು ಬೇರೆ.

3. ವಸ್ತುವನ್ನನುಸರಿಸಿ ಪ್ರಮಾಣದಿಂದ ಆಗತಕ್ಕದ್ದೇ ಹೊರತು ಮತ್ತೆ ಅನೇಕ ಕಾರಕಗಳನ್ನು ಬಯಸತಕ್ಕ ಕ್ರಿಯೆಯಲ್ಲ.

4. ಜ್ಞಾನವು ಪದಾರ್ಥವನ್ನು ತೋರಿಸುವದಲ್ಲದೆ ಮತ್ತೇನನ್ನೂ ಮಾಡಬೇಕಾಗಿರುವದಿಲ್ಲ.

ಜ್ಞಾನಿಗೆ ಪ್ರತ್ಯವಾಯವಿಲ್ಲ

ಪ್ರತ್ಯವಾಯಸ್ತು ತಸ್ಯೈವ ಯಸ್ಯಾಹಙ್ಕಾರ ಇಷ್ಯತೇ ।
ಅಹಙ್ಕಾರಫಲಾರ್ಥಿತ್ವೇ ವಿದ್ಯೇತೇ ನಾತ್ಮವೇದಿನಃ ॥ ೨೪ ॥

೨೪. ಪ್ರತ್ಯವಾಯವೋ ಎಂದರೆ ಯಾವಾತನಿಗೆ ಅಹಂಕಾರವಿರುತ್ತದೆಯೋ ಅವನಿಗೇ ಎಂದು ಒಪ್ಪಬೇಕು. (ಆದರೆ) ಆತ್ಮಜ್ಞಾನಿಗೆ ಅಹಂಕಾರವಾಗಲಿ ಫಲಾಪೇಕ್ಷೆಯಾಗಲಿ ಇರುವದಿಲ್ಲ[1].

ಉಪಸಂಹಾರ

ತಸ್ಮಾದಜ್ಞಾನಹಾನಾಯ ಸಂಸಾರವಿನಿವೃತ್ತಯೇ ।
ಬ್ರಹ್ಮವಿದ್ಯಾವಿಧಾನಾಯ ಪ್ರಾರಬ್ಧೋಽನಿಷತ್ತ್ವಯಮ್ ॥ ೨೫ ॥
ಸದೇರುಪನಿಪೂರ್ವಸ್ಯ ಕ್ವಿಪಿ ಚೋಪನಿಷದ್ಭವೇತ್ ।
ಮನ್ದೀಕರಣಭಾವಾಚ್ಚ ಗರ್ಭಾದೇಃ ಶಾತನಾತ್ತಥಾ ॥ ೨೬ ॥

೨೫-೨೬. ಆದ್ದರಿಂದ ಸಂಸಾರವನ್ನು ಹೋಗಲಾಡಿಸುವದಕ್ಕಾಗಿ ಅಜ್ಞಾನವನ್ನು ಕಳೆಯುವದಕ್ಕೋಸ್ಕರ ಬ್ರಹ್ಮವಿದ್ಯೆಯನ್ನು ತಿಳಿಸುವದಕ್ಕೇ ಈ ಉಪನಿಷತ್ತು ಪ್ರಾರಂಭವಾಗಿರುತ್ತದೆ.[2] ಉಪ, ನಿ- (ಎಂಬ ಉಪಸರ್ಗಗಳು) ಮೊದಲಿರುವ ಸದ್ (ಎಂಬ ಧಾತುವಿಗೆ) ಕ್ವಿಪ್ ಪ್ರತ್ಯಯವು ಪರವಾದರೆ 'ಉಪನಿಷತ್' (ಎಂಬ ರೂಪ)ವಾಗುತ್ತದೆ. ಗರ್ಭ(ವಾಸವೇ) ಮುಂತಾದವುಗಳನ್ನು ಸಡಿಲಿಸುವದರಿಂದಲೂ ನಾಶಗೊಳಿಸುವದರಿಂದಲೂ ಈ ವಿದ್ಯೆಗೆ 'ಉಪನಿಷತ್ತು'[3] ಎಂದು ಹೆಸರು.

—:◯:—

---

1. ಅಹಂಕಾರವಾಗಲಿ ಫಲಾಪೇಕ್ಷೆಯಾಗಲಿ ಇಲ್ಲವೆ ಕರ್ಮವಿಲ್ಲ; ಆದ್ದರಿಂದ ಜ್ಞಾನ ಕರ್ಮಸಮುಚ್ಚಯವು ಅಸಾಧ್ಯ. ಮುಮುಕ್ಷುವಿಗೆ ಜ್ಞಾನವುಂಟಾಗಿಲ್ಲವಾವರೂ ಕರ್ಮ ಸಂನ್ಯಾಸವನ್ನು ವಿಧಿಸುವ ಶ್ರುತಿಯಿಂದ ಅವನು ಕರ್ಮವನ್ನು ತ್ಯಜಿಸುತ್ತಾನೆ. ಈ ಕಾರಣದಿಂದ ಜ್ಞಾನಿಯಂತೆ ಅವನಿಗೂ ಪ್ರತ್ಯವಾಯಕ್ಕೆ ಅವಕಾಶವಿಲ್ಲ –ಎಂದು ಭಾವ.

2. ಬ್ರಹ್ಮವಿದ್ಯೆಯನ್ನು ತಿಳಿಸುವ ಉಪನಿಷದ್ರೂಪವಾದ ಗ್ರಂಥವೂ ಉಪನಿಷತ್ತಿನ ಸಾರವನ್ನು ತಿಳಿಸುವ ಈ ಪ್ರಕರಣವೂ ಎಂದರ್ಥ.

3. ವಿದ್ಯೆಗೆ 'ಉಪನಿಷತ್ತು' ಎಂಬ ಹೆಸರು ಮುಖ್ಯಾರ್ಥದಲ್ಲಿ ಬಂದಿರುತ್ತದೆ. ವಿದ್ಯೆಯನ್ನು ತಿಳಿಸುವ ಗ್ರಂಥಕ್ಕೂ ಗೌಣವಾಗಿ ಆ ಹೆಸರು ಬಂದಿದೆ ಎಂಬು ಭಾವ.

ಉಪೋದ್ಘಾತಪ್ರಕರಣದ ಸಾರ

೧. ವೇದಾಂತವೇದ್ಯನಾವ ಪರಮಾತ್ಮನು ಶುದ್ಧಚೈತನ್ಯರೂಪನಾದರೂ ಚೇತನಾಚೇತನರೂಪನಾದ ಸರ್ವವೂ ಆಗಿರುತ್ತಾನೆ. ಹೀಗೆ ಸರ್ವವಿಷಯಾತ್ಮಕನೂ ಸರ್ವವಿಷಯಾತೀತನೂ ಆಗಿರುವ ಆ ಪರಮಾತ್ಮನಿಗೆ ನಮಸ್ಕಾರ.

೨–೫. ಅಜ್ಞಾನ ಮೂಡುವ ಕರ್ಮದಿಂದ ಧೇಹಾಧಾರಣೆಯುಂಟಾಗುವದು. ದೇಹಿಯಾದವನಿಗೆ ಪ್ರಿಯಾಪ್ರಿಯಗಳು ತಪ್ಪದೆ ಉಂಟಾಗುವವು. ಅದರಿಂದ ರಾಗದ್ವೇಷಗಳೂ ಧರ್ಮಾಧರ್ಮಗಳೂ ಅವುಗಳಿಗನುಗುಣವಾದ ಹೊಸ ದೇಹವೂ ಉಂಟಾಗುತ್ತಿರುವವು. ಚಕ್ರದಂತೆ ತಿರುಗುತ್ತಿರುವ ಈ ಸಂಸಾರವನ್ನು ತಪ್ಪಿಸಿಕೊಳ್ಳುವದಕ್ಕೆ ಅಜ್ಞಾನವು ತೊಲಗಬೇಕು. ಆದ್ದರಿಂದ ಕರ್ಮಕಾಂಡವಾದ ಬಳಿಕ ಮುಂದಿನ ವೇದಭಾಗದಲ್ಲಿ ಬ್ರಹ್ಮವಿದ್ಯೆಯನ್ನು ಹೇಳುವದಕ್ಕೆ ಪ್ರಾರಂಭಿಸಿರುತ್ತದೆ.

೬–೭. ಮೋಕ್ಷಕ್ಕೆ ಜ್ಞಾನವೇ ಬೇಕು; ಏಕೆಂದರೆ ಜ್ಞಾನವಿಲ್ಲದೆ ಅಜ್ಞಾನವು ನಾಶವಾಗುವದಿಲ್ಲ, ಅಜ್ಞಾನನಾಶವಿಲ್ಲದೆ ರಾಗದ್ವೇಷಗಳಾಗಲಿ ಕರ್ಮವಾಗಲಿ ದೇಹಪ್ರಾಪ್ತಿಯಾಗಲಿ ಹೋಗುವದಿಲ್ಲ.

೮–೧೦. ಆದರೆ ಕೆಲವರು ಕರ್ಮವೂ ಮುಕ್ತಿಗೆ ಬೇಕೆಂದು ವಾದಿಸುತ್ತಾರೆ. ಬದುಕಿರುವವರೆಗೆ ನಿತ್ಯಕರ್ಮವನ್ನು ಮಾಡಲೇಬೇಕೆಂದು ಶ್ರುತಿಯಲ್ಲಿದೆ; ಅದನ್ನು ಮಾಡದೆ ಇದ್ದರೆ ಪ್ರತ್ಯವಾಯವೂ ಉಂಟಾಗುತ್ತದೆ. ಜ್ಞಾನವು ಅವಶ್ಯವಾಗಿ ಫಲವನ್ನು ಕೊಡತಕ್ಕದ್ದೇ ಆದರೂ ಅಗ್ನಿಷ್ಟೋಮದಂತೆ ಅದಕ್ಕೂ ಮತ್ತೊಂದರ ಸಹಾಯವು ಬೇಕಾಗಬಹುದು ಎಂದು ಅವರ ವಾದ.

೧೧–೧೫. ಆದರೆ ಈ ಅಭಿಪ್ರಾಯವು ಸರಿಯಿಲ್ಲ. ಏಕೆಂದರೆ ಕರ್ಮವು ಜ್ಞಾನಕ್ಕೆ ವಿರುದ್ಧವಾಗಿರುತ್ತದೆ. ಜ್ಞಾನವೆಂದರೆ ಯಾವ ಪ್ರಕಾರವೂ ಇಲ್ಲದವನು ನಾನು ಎಂಬ ತಿಳಿವಳಿಕೆ; ಕರ್ಮದಂತೆ ಕರ್ತೃಭೋಕ್ತೃರೂಪನು ನಾನು ಎಂಬ ತಿಳಿವಳಿಕೆಯು ಅದರಲ್ಲಿರುವದಿಲ್ಲ. ಆದು ವಸ್ತುವಿಗೆ ಅಧೀನವಾಗಿರುವದರಿಂದ ಕರ್ತೃವಿಗೆ ಅಧೀನವಾಗಿರುವ ಕರ್ಮದಂತೆ ಅಲ್ಲ. ಜ್ಞಾನದಲ್ಲಿ ಕಾರಕಗಳು ಸತ್ಯವೆಂಬ ತಿಳಿವಳಿಕೆಯುಂಟಾಗಿರುವದು; ಕಾರಕಗಳು ಸತ್ಯವೆಂಬ ಬುದ್ಧಿಯಿಂದಲೇ ಕರ್ಮವನ್ನು ಮಾಡುವದು. ಹೀಗೆ ಕರ್ಮವು ಜ್ಞಾನಕ್ಕೆ ಎಲ್ಲಾ ಬಗೆಯಿಂದಲೂ ವಿರುದ್ಧವಾಗಿರುತ್ತದೆ. ಆದ್ದರಿಂದ ಮುಮುಕ್ಷುವಾದವನು ಕರ್ಮವನ್ನೆಲ್ಲ ತ್ಯಾಗಮಾಡಬೇಕು.

೧೬–೧೯. ಇದಲ್ಲದೆ ದೇಹವೇ ಮುಂತಾದವುಗಳು ತಾನೆಂಬ ಅಭಿಮಾನದ ರೂಪವಾಗಿರುವ ಅವಿದ್ಯೆಯಿಂದ ಕರ್ಮ ಉಂಟಾಗುತ್ತದೆ. ದೇಹಾದಿಗಳು ಯಾವವೂ ತಾನಲ್ಲವೆಂಬ ತಿಳಿವಳಿಕೆಯೇ ವಿದ್ಯೆಯಾದ್ದರಿಂದ ಅದು ಉಂಟಾದಕೂಡಲೆ ಅವಿದ್ಯೆಯು ನಾಶವಾಗಿಬಿಡುತ್ತದೆ, ಆತ್ಮನು ಅದ್ವಿತೀಯನು ನಿತ್ಯನಿರ್ವಿಶೇಷನು ಎಂಬ ತಿಳಿವಳಿಕೆಯುಂಟಾಗಿ

ಬಿಡುತ್ತವೆ. ಅವಿದ್ಯೆಯು ನಾಶವಾದಬಳಿಕ ಮತ್ತೆ ಹುಟ್ಟಲಾರದಾದ್ದರಿಂದ ಕರ್ತೃತ್ವಭೋಕ್ತೃತ್ವ ಬುದ್ಧಿಯೂ ಉಂಟಾಗುವದಿಲ್ಲ; ಆದ್ದರಿಂದ ಜ್ಞಾನಕ್ಕೆ ಕರ್ಮವು ಸಹಾಯವಾಗಿರುತ್ತದೆ ಎಂಬ ಮಾತೂ ಸಲ್ಲುವದಿಲ್ಲ.

೨೦. ಸತ್ಯ, ತಪಸ್ಸು– ಮುಂತಾದವುಗಳೆಲ್ಲಕ್ಕಿಂತಲೂ ಕರ್ಮಸಂನ್ಯಾಸವೇ ಹೆಚ್ಚಿನ ದೆಂದು ತೈತ್ತಿರೀಯೋಪನಿಷತ್ತಿನ ನಾರಾಯಣಪನ್ನದಲ್ಲಿ ಹೇಳಿರುತ್ತದೆ. ಮೋಕ್ಷಕ್ಕೆ ಜ್ಞಾನವೊಂದೇ ಸಾಕೆಂದು ಬೃಹದಾರಣ್ಯಕದಲ್ಲಿ ಹೇಳಿದೆ. ಆದ್ದರಿಂದಲೂ ಮುಮುಕ್ಷುಗಳು ಕರ್ಮವನ್ನು ತ್ಯಾಗಮಾಡಬೇಕು.

೨೧–೨೩. ಅಗ್ನಿಹೋತ್ರವೇನುದಂತೆ ವಿದ್ಯೆಯು ಮತ್ತೊಂದು ಸಹಾಯವನ್ನು ಬಯಸ ಬಹುದು ಎಂದು ಹೇಳುವದು ಸರಿಯಲ್ಲ, ಏಕೆಂದರೆ ಅಗ್ನಿಹೋತ್ರವು ಕರ್ಮವಾಗಿರುತ್ತವೆ. ಕ್ರಿಯೆಗೆ ಅನೇಕ ಕಾರಕಗಳು ಬೇಕಾಗಿರುತ್ತವೆ, ಮತ್ತು ಕ್ರಿಯೆಯು ಫಲವನ್ನುಂಟುಮಾಡುವ ಸಾಧನವಾಗಿರುತ್ತವೆ; ಆದ್ದರಿಂದ ಅಗ್ನಿಹೋತ್ರಕ್ಕೆ ಮತ್ತೊಂದರ ಸಹಾಯವು ಬೇಕಾಗ ಬಹುದು. ಆದರೆ ವಿದ್ಯೆಯೆಂದರೆ ವಿಷಯವನ್ನು ತಿಳಿಸತಕ್ಕದ್ದೇ ಹೊರತು ಉಂಟುಮಾಡ ತಕ್ಕದ್ದಲ್ಲ; ಅದು ಕ್ರಿಯೆಯೂ ಅಲ್ಲ. ಆದ್ದರಿಂದ ಅವಕ್ಕೆ ವಸ್ತುವನ್ನು ತಿಳಿಸಿಕೊಡು ವದಕ್ಕೆ ಮತ್ತೆ ಯಾವ ಸಹಾಯವೂ ಬೇಕಿರುವದಿಲ್ಲ.

೨೪. ನಿತ್ಯಕರ್ಮವನ್ನು ಬಿಟ್ಟರೆ ಪ್ರತ್ಯವಾಯವಾಗುವದರಿಂದ ಬದುಕಿರುವವರೆಗೂ ಕರ್ಮಗಳನ್ನು ಮಾಡುತ್ತಲೇ ಇರಬೇಕು ಎಂಬುದು ಸರಿಯಲ್ಲ. ಏಕೆಂದರೆ ಅಹಂಕಾರವೂ ಫಲೇಚ್ಛೆಯೂ ಇರುವವನೇ ಕರ್ಮವನ್ನು ಮಾಡುವವನು; ಅವನು ನಿತ್ಯಕರ್ಮವನ್ನು ಬಿಟ್ಟರೆ ಪ್ರತ್ಯವಾಯವಾದರೂ ಆಗಬಹುದು. ಆದರೆ ಅಹಂಕಾರವಾಗಲಿ ಫಲೇಚ್ಛೆಯಾಗಲಿ ಇಲ್ಲದ ಜ್ಞಾನಿಗೆ ಕರ್ಮವಾಗಲಿ ಅದನ್ನು ಬಿಟ್ಟದ್ದರಿಂದ ಪ್ರತ್ಯವಾಯವಾಗಲಿ ಆಗಲಾರದು.

೨೫. ಆದ್ದರಿಂದ ಅಜ್ಞಾನವನ್ನು ನಾಶಮಾಡುವದರ ಮೂಲಕ ಸಂಸಾರವನ್ನು ತೊಲಗಿಸುವದಕ್ಕೆಂದೇ ಬ್ರಹ್ಮವಿದ್ಯೆಯನ್ನು ತಿಳಿಸುವ ಉಪನಿಷತ್ತು ಪ್ರಾರಂಭವಾಗಿರುತ್ತದೆ. ಸಂಸಾರವನ್ನು ನಾಶಮಾಡುವದರಿಂದಲೇ ಬ್ರಹ್ಮವಿದ್ಯೆಗೆ ಉಪನಿಷತ್ತು ಎಂಬ ಹೆಸರು ಬಂದಿರುತ್ತವೆ. ಕರ್ಮದ ಗೋಜು ವಿದ್ಯೆಗೆ ಎಳ್ಳಷ್ಟೂ ಇಲ್ಲ ಎಂಬುದೇ ಸಿದ್ಧಾಂತವು.

೨. ಆತ್ಮಜ್ಞಾನೋತ್ಪತ್ತಿ

ಶಾಸ್ತ್ರದಿಂದ ಆತ್ಮನನ್ನು ಅರಿಯುವ ರೀತಿ

ಪ್ರತಿಷೇದ್ಧುಮಶಕ್ಯತ್ವಾನ್ನೇತಿ ನೇತೀತಿ ಶೇಷಿತಮ್ |
ಇದಂ ನಾಹಮಿದಂ ನಾಹಮಿತ್ಯದ್ಧಾ ಪ್ರತಿಪದ್ಯತೇ ॥ ೧ ॥

೧. 'ಇದಲ್ಲ, ಇದಲ್ಲ' (ಬೃ. ೨-೩-೬) ಎಂದು ಉಳಿಸಿಕೊಂಡಿರುವ (ಆತ್ಮನನ್ನು) ಅಲ್ಲಗಳೆಯುವದಕ್ಕೆ ಆಗದೆ ಇರುವದರಿಂದ[1] 'ಇದು ನಾನಲ್ಲ, ಇದು ನಾನಲ್ಲ' ಎಂದು ಸರಿಯಾಗಿ ತಿಳಿದುಕೊಳ್ಳುತ್ತಾನೆ[2].

ಶಾಸ್ತ್ರಜನ್ಯಜ್ಞಾನವು ಪ್ರತ್ಯಕ್ಷಬಾಧಿತವಲ್ಲ

ಅಹಂಧೀರಿದಮಾತ್ಮೋತ್ಥಾ ವಾಚಾರಮ್ಭಣಗೋಚರಾ |
ನಿಷಿದ್ಧಾತ್ಮೋದ್ಭವತ್ವಾತ್ ಸಾ ನ ಪುನರ್ಮಾನತಾಂ ವ್ರಜೇತ್ ॥ ೨ ॥
ಪೂರ್ವಬುದ್ಧಿಮಬಾಧಿತ್ವಾ ನೋತ್ತರಾ ಜಾಯತೇ ಮತಿಃ |
ದೃಶಿರೇಕಃ ಸ್ವಯಂಸಿದ್ಧಃ ಫಲತ್ವಾತ್ ಸ ನ ಬಾಧ್ಯತೇ ॥ ೩ ॥

೨-೩. ನಾನೆಂಬ ಬುದ್ಧಿಯು ಇದು ಎಂಬ ಆತ್ಮನಿಂದ ಉಂಟಾದದ್ದು[3], ಬರಿಯ ಮಾತಿನ ಕಾರ್ಯವೇ (ಅದರ) ವಿಷಯವು[4]. ಬಾಧಿತವಾದ ಆತ್ಮನಿಂದ ಉಂಟಾಗಿರುವದರಿಂದ ಮತ್ತೆ ಅದು ಪ್ರಾಮಾಣ್ಯವನ್ನು ಹೊಂದಲಾರದು. ಹಿಂದಿನ ಬುದ್ಧಿಯನ್ನು ಬಾಧಿಸದೆ ಮುಂದಿನ ಬುದ್ಧಿಯು ಉಂಟಾಗುವದಿಲ್ಲ[5].

---

1. ಅನಾತ್ಮವೆಲ್ಲವನ್ನೂ ನಾನಲ್ಲವೆಂದು ಅಲ್ಲಗಳೆದ ಬಳಿಕ ಉಳಿಯುವ ಆತ್ಮನನ್ನು ನಾನಲ್ಲವೆಂದು ಅಲ್ಲಗಳೆಯುವದಕ್ಕೆ ಆಗುವದಿಲ್ಲ; ಏಕೆಂದರೆ ಅಲ್ಲಗಳೆಯುವದಕ್ಕೆ ಒಬ್ಬನು ಬೇಕು. ಅವನೇ ನಿಜವಾದ ಆತ್ಮನು.

2. ಸ್ಥೂಲಸೂಕ್ಷ್ಮವಾದ ಅನಾತ್ಮದಲ್ಲಿ ಆತ್ಮಬುದ್ಧಿಯನ್ನು ನೀಗಿಕೊಳ್ಳುವದರಿಂದಲೇ ನಿಜವಾದ ಆತ್ಮನನ್ನು ಅರಿತುಕೊಳ್ಳಬೇಕು. ಅನಾತ್ಮದಂತೆ ಅವನನ್ನು ವಿಷಯೀಕರಿಸುವ ದಕ್ಕಾಗುವದಿಲ್ಲ.

3. ವಿಷಯವಾದ ಅನಾತ್ಮವಾದ ಅಹಂಕಾರದಿಂದಲೇ ಅಹಂಬುದ್ಧಿಯು ಉಂಟಾಗಿರುತ್ತದೆ.

4. ಕಾರ್ಯವು ಕಾರಣಕ್ಕಿಂತ ಬೇರೆಯಾಗಿಲ್ಲ; ಬರಿಯ ಮಾತೇ ಹೊರತು ಕಾರ್ಯವೆಂಬ ಸ್ವತಂತ್ರಪದಾರ್ಥವಿಲ್ಲ. ಛಾಂ. ೬-೧-೪ ರ ಸೂಚನೆ.

5. ಇದು ಬೆಳ್ಳಿ ಎಂಬ ಭ್ರಾಂತಿಯನ್ನು ಹೊಡೆದುಹಾಕಿಯೇ ಇದು ಕಪ್ಪೆಯಚಿಪ್ಪೆಂಬ ಸರಿಯಾದ ಬುದ್ಧಿಯುಂಟಾಗುವದು.

ಸಾಕ್ಷಿಯು ಒಬ್ಬನೇ, ಸ್ವಯಂಸಿದ್ಧನಾಗಿರುತ್ತಾನೆ. ಅವನು ಫಲರೂಪವಾಗಿರುವದರಿಂದ ಬಾಧಿತನಾಗುವದಿಲ್ಲ[1].

ಅನಾತ್ಮಬಂಧದಿಂದ ಬಿಡುಗಡೆ

ಇದಂವನವನುತಿಕ್ರಮ್ಯ ಶೋಕಮೋಹಾದಿದೂಷಿತಮ್।
ವನಾದ್ಗಾನ್ಧಾರಕೋ ಯದ್ವತ್ ಸ್ವಾತ್ಮಾನಂ ಪ್ರತಿಪದ್ಯತೇ ॥ ೪ ॥

೪. ಶೋಕಮೋಹಾದಿಗಳೆಂಬ ದೋಷವುಳ್ಳ ಇದೆಂಬ ಕಾಡನ್ನು ದಾಟಿ ಗಾಂಧಾರದೇಶದವನಂತೆ ತನ್ನ ಆತ್ಮನನ್ನು ಸೇರಿಕೊಳ್ಳುತ್ತಾನೆ[2].

—+·:·+—

ಆತ್ಮಜ್ಞಾನೋತ್ಪತ್ತಿಪ್ರಕರಣದ ಸಾರ

೧. ಶಾಸ್ತ್ರವು ಆತ್ಮನನ್ನು ಹೊಸದಾಗಿ ಉಂಟುಮಾಡುವದಿಲ್ಲ. ಅನಾತ್ಮವನ್ನು ಆತ್ಮನಲ್ಲವೆಂದು ತಿಳಿಸಿಕೊಡುತ್ತದೆ. ಇದರಿಂದ ಆತ್ಮಜ್ಞಾನದ ನಿಶ್ಚಯವಾಗುತ್ತದೆ.

೨-೩. ದೇಹಾದಿಗಳು ನಾನು ಎಂಬ ಬುದ್ಧಿಯುಂಟಾಗಿದ್ದರೂ ಆ ದೇಹಾದಿಗಳು ಬರಿಯ ಮಾತಿನಿಂದ ಹೇಳುವ ಅಸತ್ಪದಾರ್ಥಗಳು. ಇವುಗಳು ನಾನೆಂಬುದು ಸುಳ್ಳೆಂದು ತೋರಿಸಿದ ಹೊರತು ಶಾಸ್ತ್ರಜನ್ಯವಾದ ಆತ್ಮಜ್ಞಾನವು ಉಂಟಾಗುವದಿಲ್ಲ. ಆತ್ಮನು ಅದ್ವಿತೀಯನೂ ಸ್ವಯಂಪ್ರಕಾಶಕನೂ ಅನಾತ್ಮ ವಸ್ತುಗಳ ಜ್ಞಾನದ ಫಲವಾದ ಚೈತನ್ಯವೂ ಆಗಿರುವದರಿಂದ ಆತ್ಮಜ್ಞಾನವನ್ನು ಬಾಧಿಸುವದಕ್ಕೆ ಯಾವದೂ ಇರುವಂತಿಲ್ಲ.

೪. ಗಾಂಧಾರದೇಶದವನು ಕಾಡನ್ನು ದಾಟಿ ಊರನ್ನು ಸೇರಿದಂತೆ ಅಜ್ಞಾನಕಲ್ಪಿತವಾದ ವಿಷಯಪ್ರಪಂಚವನ್ನು ಶಾಸ್ತ್ರೋಪದೇಶದಿಂದ ಮೀರಿ ಆತ್ಮಸ್ವರೂಪವನ್ನು ತಿಳಿದುಕೊಳ್ಳಬಹುದು.

---

1. ಆತ್ಮನು ಅದ್ವಿತೀಯನು; ಆದ್ದರಿಂದ ಆತ್ಮನು ಹುಸಿ ಎಂದು ತೋರಿಸುವ ಪ್ರಮಾಣವಿಲ್ಲ. ಆತ್ಮನು ಸ್ವಯಂಸಿದ್ಧನು; ಆದ್ದರಿಂದ ಆತ್ಮನು ಇದಾನೆಂದು ಸಾಧಿಸುವ ಅಥವಾ ಇಲ್ಲನೆಂದು ಬಾಧಿಸುವ ಪ್ರಮಾಣವಿಲ್ಲ. ಆತ್ಮನು ಜ್ಞಾನದ ಫಲವಾಗಿರುವ ಚೈತನ್ಯವು; ಆದ್ದರಿಂದ ಅದರಿಂದ ಮುಂದಕ್ಕೆ ಸಾಧಕವಾಗಲಿ ಬಾಧಕವಾಗಲಿ ಇರುವ ಸಂಭವವಿಲ್ಲ.

2. ಗಾಂಧಾರದೇಶದವನೊಬ್ಬನನ್ನು ಕಳ್ಳರು ಕಣ್ಣುಕಟ್ಟಿ ಕಾಡಿನೊಳಗೆ ಬಿಟ್ಟಿದ್ದರು. ದಾರಿಹೋಕನೊಬ್ಬನು ಅವನ ಕಣ್ಣುಕಟ್ಟನ್ನು ಬಿಚ್ಚಿ ಈ ದಿಕ್ಕಿನಲ್ಲಿ _ಗಾಂಧಾರದೇಶವಿದೆ ಎಂದು ಹೇಳಿಕೊಟ್ಟನು. ಆಗ ಅವನು ಕಾಡನ್ನು ದಾಟಿಹೋಗಿ ಊರನ್ನು ಸೇರಿಕೊಂಡನು. ಇದರಂತೆ ಶಾಸ್ತ್ರೋಪದೇಶದಿಂದ 'ಇದಂವನವನ್ನು' ಎಂದರೆ ವಿಷಯರೂಪವಾಗಿರುವ ದುಃಖರೂಪವಾದ ಅನಾತ್ಮವನ್ನೆಲ್ಲ ಅಲ್ಲಗಳೆದು ತನ್ನ ಸ್ವರೂಪವಾದ ಆತ್ಮನನ್ನು ಜಿಜ್ಞಾಸುವು ಅರಿತುಕೊಳ್ಳುತ್ತಾನೆ ಎಂದರ್ಥ. ಈ ದೃಷ್ಟಾಂತವು ಛಾಂ. ೬-೧೪-೧ರಲ್ಲಿದೆ.

೩. ಈಶ್ವರಾತ್ಮ

ಈಶ್ವರನು ಆತ್ಮನಲ್ಲವೆಂದರೆ ದೋಷ

ಈಶ್ವರಶ್ಚೇದನಾತ್ಮಾ ಸ್ಯಾನ್ನಾಸಾವಸ್ಮೀತಿ ಧಾರಯೇತ್ |
ಆತ್ಮಾ ಚೇದೀಶ್ವರೋಽಸ್ಮೀತಿ ವಿದ್ಯಾ ಸಾನ್ಯನಿವರ್ತಿಕಾ ॥ ೧ ॥

೧. ಈಶ್ವರನು ತಾನಲ್ಲದೆ ಇದ್ದರೆ 'ಅವನೇ ನಾನಾಗಿರುವೆನು' ಎಂದು ಚಿಂತಿಸಬಾರದಾಗುವದು[1]. ತಾನೇ ಆದರೆ 'ಈಶ್ವರನಾಗಿರುವೆನು' ಎಂಬುದು ವಿದ್ಯೆಯಾಗುವದು; ಅದು (ತನಗಿಂತ) ಬೇರೆಯಾದ ಅವಿದ್ಯೆಯನ್ನು ನಿವೃತ್ತಿ ಗೊಳಿಸುತ್ತದೆ (ಎಂದಾಗುವದು)[2].

ಅಸ್ಥೂಲಾದಿಶ್ರುತಿಯು ಅಧ್ಯಾಸವನ್ನು ಕಳೆಯುತ್ತದೆ

ಆತ್ಮನೋಽನ್ಯಸ್ಯ ಚೇದ್ಧರ್ಮಾ ಅಸ್ಥೂಲತ್ವಾದಯೋ ಮತಾಃ |
ಅಜ್ಞೇಯತ್ವೇಽಸ್ಯ ಕಿಂ ತೈಃ ಸ್ಯಾದಾತ್ಮತ್ವೇ ಹ್ಯನ್ಯಧೀಹ್ಮತಿಃ ॥ ೨ ॥
ಮಿಥ್ಯಾಧ್ಯಾಸನಿಷೇಧಾರ್ಥಂ ತತೋಽಸ್ಥೂಲಾದಿ ಗೃಹ್ಯತಾಮ್ |
ಪರತ್ರ ಚೇನ್ನಿಷೇಧಾರ್ಥಂ ಶೂನ್ಯತಾವರ್ಣನಂ ಹಿ ತತ್ ॥ ೩ ॥

೨-೩. ಅಸ್ಥೂಲತ್ವವೇ ಮುಂತಾದವುಗಳು ತನಗಿಂತ ಬೇರೆಯಾದ (ಈಶ್ವರನ) ಧರ್ಮಗಳಿಂದಾದರೆ ಅವನು ಅಜ್ಞೇಯನಾಗಿರುವದರಿಂದ ಅವು ಗಳಿಂದ ಏನು ಪ್ರಯೋಜನವಾದೀತು[3] ? ಈಶ್ವರನು (ತನ್ನ) ಆತ್ಮನೇ ಆದರೆ ಅನ್ಯಬುದ್ಧಿಯನ್ನು ಅಲ್ಲಗಳೆದಂತಾಗುವದು[4]. ಆ ದ್ದ ರಿ ಂ ದ ಅಸ್ಥೂಲವೇ ಮುಂತಾದ (ವಾಕ್ಯವು) ತಪ್ಪಾಗಿ ಆಗಿರುವ ಅಧ್ಯಾಸವನ್ನು ಕಳೆಯುವದಕ್ಕಾಗಿ ಎಂದು ಗ್ರಹಿಸಬೇಕು. (ತಾನಲ್ಲದ) ನುತ್ತೊಂದು ವಸ್ತುವಿನಲ್ಲಿ (ಸ್ಥೂಲತ್ವಾದಿ

---

1. ನಾನು ಬ್ರಹ್ಮವೆಂದು ತಿಳಿದರೆ ಸರ್ವಾತ್ಮನಾಗುವನು (ಬೃ. ೧-೪-೧೦) ಎಂದು ಶ್ರುತಿಯಲ್ಲಿ ಹೇಳಿರುವದು ಹೊಂದುವದಿಲ್ಲ.

2. ತಾನೇ ಬ್ರಹ್ಮವಾಗಿದ್ದರೆ ಶ್ರುತಿಯಲ್ಲಿ ಅದನ್ನು ಉಪದೇಶಿಸುವದೇಕೆ ? -ಎಂದರೆ ತಾನಲ್ಲದ್ದನ್ನು ತಾನೆಂದು ತಪ್ಪಾಗಿತಿಳಿದುಕೊಂಡಿರುವದನ್ನು ತಿದ್ದುವದಕ್ಕೆ.

3. ಜಿಜ್ಞಾಸುವು ಅರಿಯದೆ ಇರುವ ಈಶ್ವರನಲ್ಲಿ ಸ್ಥೂಲತ್ವಾದಿಧರ್ಮಗಳನ್ನು ತಪ್ಪಾಗಿ ತಿಳಿದುಕೊಳ್ಳುವ ಸಂಭವವಿಲ್ಲದ್ದರಿಂದ ಅವನು ಅಸ್ಥೂಲನು ಎಂದು ಮುಂತಾಗಿ ಶ್ರುತಿ ಯಲ್ಲಿ ಉಪದೇಶಿಸಿದ ಅವಶ್ಯಕತೆ ಯಿರುವದಿಲ್ಲ.

4. ತಾನು ಸ್ಥೂಲನು ಎಂದು ಮುಂತಾಗಿ ತಪ್ಪಾಗಿತಿಳಿದುಕೊಂಡಿರುವದನ್ನು ಕಳೆಯುವದಕ್ಕೆ ಶ್ರುತಿಯಲ್ಲಿ ಅಸ್ಥೂಲತ್ವಾದಿಧರ್ಮಗಳನ್ನುಪದೇಶಿಸಿದೆ ಎಂಬ ಪ್ರಯೋ ಜನವು ವಾಕ್ಯಕ್ಕೆ ಬರುತ್ತದೆ.

ಧರ್ಮಗಳನ್ನು) ಅಲ್ಲಗಳೆಯುವದಕ್ಕಾಗಿ (ಅಸ್ಥೂಲತ್ವಾದಿಗಳನ್ನು ಹೇಳಿದೆ) ಎಂದರೆ ಅದು ಶೂನ್ಯದ ವರ್ಣನೆಯೇ (ಆಗುವದು)[1].

ಅಪ್ರಾಣಾದಿಶ್ರುತಿಯೂ ಪ್ರತ್ಯಗಾತ್ಮನಿಗೇ ಹೊಂದುತ್ತದೆ

ಬುಭುತ್ಸೋರ್ಯದಿ ಚಾನ್ಯತ್ರ ಪ್ರತ್ಯಗಾತ್ಮನ ಇಷ್ಯತೇ ।
ಅಪ್ರಾಣೋ ಹ್ಯಮನಾಃ ಶುಭ್ರ ಇತಿ ಚಾನರ್ಥಕಂ ವಚಃ ॥ ೪ ॥

೪. ಜಿಜ್ಞಾಸುವಿನ ಪ್ರತ್ಯಗಾತ್ಮನಿಗಿಂತ ಬೇರೆಯಾಗಿರುವ (ಈಶ್ವರನ ವಿಷಯವು ಎಂದು) ಒಪ್ಪುವದಾದರೆ "ಅಪ್ರಾಣೋ ಹ್ಯಮನಾಃ ಶುಭ್ರಃ" (ಪ್ರಾಣವಿಲ್ಲದವನು, ಮನಸ್ಸಿಲ್ಲದವನು, ಶುಭ್ರನು) ಎಂಬ (ಮುಂ. ೨-೧-೨) ವಾಕ್ಯವೂ ವ್ಯರ್ಥವಾಗುತ್ತದೆ[2].

—:o:—

1. ಆತ್ಮನಿಗಿಂತ ಬೇರೆಯಾಗಿರುವ ವಸ್ತುವಿನಲ್ಲಿ ಸ್ಥೂಲತ್ವ, ಅಣುತ್ವ ಮುಂತಾದ ಧರ್ಮಗಳೆಲ್ಲವನ್ನೂ ಅಲ್ಲಗಳೆದರೆ ಅದು ಯಾವ ವಸ್ತುವೆಂದು ಹೇಳುವದಕ್ಕೆ ಆಗುವದೇ ಇಲ್ಲವಾದ್ದರಿಂದ ಶ್ರುತಿಯಲ್ಲಿ ಶೂನ್ಯವನ್ನೇ ಹೇಳಿದೆ ಎಂದು ಆಕ್ಷೇಪವು ಬಂದೊದಗುತ್ತದೆ. ಅದರ ಬದಲು ಆತ್ಮಸ್ವರೂಪದಲ್ಲಿ ಅಧ್ಯಸ್ತವಾಗಿರುವ ಸ್ಥೂಲತ್ವಾದಿಗಳನ್ನು ನಿಷೇಧಿಸಿದೆ ಎಂದು ತಿಳಿದರೆ ಆತ್ಮನು ನಿರ್ಧರ್ಮಕನೆಂಬುದು ಶ್ರುತಿಯ ತಾತ್ಪರ್ಯವಾಗುವದು. ಆತ್ಮನೆಂದರೆ ತನ್ನ ಸ್ವರೂಪವೇ ಆಗಿರುವದರಿಂದ ತನ್ನನ್ನು ತಾನು ಇಲ್ಲವೆಂದು ಕಲ್ಪಿಸುವದು ಆಗದೆ ಇರುವದರಿಂದ ಶೂನ್ಯವಾದಪ್ರಸಕ್ತಿಯೂ ಬರುವದಿಲ್ಲ.

2. ಪ್ರಾಣ, ಮನಸ್ಸು -ಮುಂತಾದವುಗಳು ನಮ್ಮಗಳ ಆತ್ಮನಲ್ಲಿ ಪ್ರಸಕ್ತವಾಗಿರುವದರಿಂದ ಅವನ್ನು ಪುನಃತೋರಿಕೆ ಎಂದು ತಿಳಿಸುವದಕ್ಕೆ ಶ್ರುತಿಯು ಇವನ್ನು ಅಲ್ಲಗಳೆದಿದೆ ಎಂದು ನಿಷೇಧವು ಸಾರ್ಥಕವಾಗುವದು; ಹಾಗಿಲ್ಲದಿದ್ದರೆ ಅಪ್ರಾಪ್ತನಿಷೇಧವಾಗುವದರಿಂದ ಶ್ರುತಿಗೆ ಪ್ರಾಮಾಣ್ಯವಿಲ್ಲದೆ ಹೋಗುವದು. ನಿಷೇಧವಾಕ್ಯಗಳಿಗೆಲ್ಲ ಹೀಗೆಯೇ ಅಧ್ಯಾಸವನ್ನು ಅಲ್ಲಗಳೆಯುವದರಲ್ಲಿ ತಾತ್ಪರ್ಯವನ್ನು ಕಲ್ಪಿಸಬೇಕು.

ಈಶ್ವರಾತ್ಮಪ್ರಕರಣದ ಸಾರ

೧. ಶ್ರುತಿಯಲ್ಲಿ ಈಶ್ವರನೇ ನಾನೆಂದು ತಿಳಿಯಬೇಕೆಂದು ಬೋಧಿಸಿದೆ. ಈಶ್ವರನು ನಮ್ಮ ಆತ್ಮನಲ್ಲದಿದ್ದರೆ ಈ ಶ್ರುತಿಯು ಅಪ್ರಮಾಣವಾಗುತ್ತದೆ. ಈಶ್ವರನು ನಮ್ಮ ಆತ್ಮನೇ ಆದರೆ ಆತ್ಮನಲ್ಲಿ ಅನಿತ್ಯೆಯಿಂದ ಆರೋಪಿತವಾಗಿರುವ ಸಂಸಾರಿತ್ವವನ್ನು ಈ ಶ್ರುತಿಯು ಅಲ್ಲಗಳೆಯುತ್ತದೆ ಎಂದು ವಾಕ್ಯಕ್ಕೆ ಪ್ರಾಮಾಣ್ಯವು ಬರುತ್ತದೆ. ಆದ್ದರಿಂದ ಜೀವೇಶ್ವರೈಕ್ಯವನ್ನು ತಿಳಿಸುವ ವಾಕ್ಯದ ಪ್ರಾಮಾಣ್ಯಕ್ಕಾಗಿ ಆತ್ಮೈಕತ್ವವೇ ಪರಮಾರ್ಥವೆಂದು ಒಪ್ಪಬೇಕು.

೨-೪. ಇದರಂತೆ ನಿಷೇಧವಾಕ್ಯಗಳ ಪ್ರಾಮಾಣ್ಯಕ್ಕಾಗಿಯೂ ಆತ್ಮೈಕತ್ವವನ್ನು ಒಪ್ಪಬೇಕು. ಹೇಗೆಂದರೆ ಆತ್ಮನಲ್ಲಿ ಅಸ್ಥೂಲತ್ವಾದಿಗಳನ್ನು ಉಪದೇಶಿಸಿರುವದು ತಪ್ಪು ತಿಳಿವಳಿಕೆಯಿಂದ ಅಧ್ಯಸ್ತವಾಗಿರುವ ಸ್ಥೂಲತ್ವಾದಿಧರ್ಮಗಳನ್ನು ಅಲ್ಲಗಳೆಯುವದಕ್ಕೆ ಎಂದು ನಿಷೇಧವಾಕ್ಯಗಳಿಗೆ ಪ್ರಾಮಾಣ್ಯವನ್ನು ಕಲ್ಪಿಸಬಹುದು. ಹಾಗಿಲ್ಲದಿದ್ದರೆ ತನಗಿಂತ ಬೇರೆಯಾಗಿರುವ ವಸ್ತುವನ್ನು ನಿರ್ಧರ್ಮಕವೆಂದು ಶಾಸ್ತ್ರವು ತಿಳಿಸಿದರೆ ಅದು ಶೂನ್ಯವೆಂದೇ ಆಗುವದರಿಂದ ನಿಷೇಧವಾಕ್ಯಕ್ಕೆ ಪ್ರಾಮಾಣ್ಯವಿಲ್ಲದೆ ಹೋಗುತ್ತದೆ. ಇದರಂತೆ ಜೀವನಲ್ಲಿ ಕಲ್ಪಿತವಾಗಿರುವ ಪ್ರಾಣನನ್ನೂ ಮನಸ್ಸನ್ನೂ ಅಲ್ಲಗಳೆಯುವದಕ್ಕೆ ಅಪ್ರಾಣಾದಿವಾಕ್ಯಗಳು ಬಂದಿವೆ ಎಂದರೆ ಅವುಗಳಿಗೆ ಪ್ರಾಮಾಣ್ಯವು ಬರುತ್ತದೆ; ಹಾಗಿಲ್ಲದಿದ್ದರೆ ಅಪ್ರಸಕ್ತವಾದದ್ದನ್ನು ಪ್ರತಿಷೇಧಮಾಡುತ್ತವೆ ಎಂದು ಆ ವಾಕ್ಯಗಳು ವ್ಯರ್ಥವೆಂದೇ ಆಗುತ್ತದೆ. ಆದ್ದರಿಂದ ಶ್ರುತಿಪ್ರಾಮಾಣ್ಯಕ್ಕಾಗಿ ಈಶ್ವರನು ನಮ್ಮಗಳ ಆತ್ಮನೆಂದೇ ತಿಳಿಯಬೇಕು.

—o—

೪. ತತ್ತ್ವಜ್ಞಾನಸ್ವಭಾವ

ಜ್ಞಾನವುಂಟಾದಬಳಿಕ ಕರ್ಮವು ಫಲವನ್ನು ಕೊಡಲಾರದು

ಅಹಂಪ್ರತ್ಯಯಬೀಜಂ ಯದಹಂಪ್ರತ್ಯಯವತ್ಸ್ಥಿತಮ್ |
ನಾಹಂಪ್ರತ್ಯಯವಹ್ನ್ಯಷ್ಟಂ ಕಥಂ ಕರ್ಮ ಪ್ರರೋಹತಿ || ೧ ||

೧. ಯಾವದು ಅಹಂಪ್ರತ್ಯಯವೆಂಬ ಬೀಜವುಳ್ಳದ್ದಾಗಿ[1] ಅಹಂ ಪ್ರತ್ಯಯವುಳ್ಳವನಲ್ಲಿಯೇ ಇದ್ದುಕೊಂಡಿರುವದೋ (ಅಂಥ) ಕರ್ಮವು ನಾನಲ್ಲ ಎಂಬ ಪ್ರತ್ಯಯವೆಂಬ ಬೆಂಕಿಯಿಂದ ಸುಟ್ಟುಹೋದಬಳಿಕ[2] (ಮತ್ತೆ) ಹೇಗೆ ಮೊಳೆಯುವದು ?

ಪ್ರಾರಬ್ಧಕರ್ಮಕ್ಕೂ ಮಿಕ್ಕ ಕರ್ಮಕ್ಕೂ ತಾರತಮ್ಯವಿದೆ

ದೃಷ್ಟವಚ್ಚೇತ್ ಪ್ರರೋಹಃ ಸ್ಯಾನ್ನಾನ್ಯಕರ್ಮಾ ಸ ಇಷ್ಯತೇ |
ತನ್ನಿರೋಧೇ ಕಥಂ ತತ್ ಸ್ಯಾತ್ ಪೃಚ್ಛಾಮೋ ವಸ್ತದುಚ್ಯತಾಮ್

೨. ಕಂಡಿರುವ (ಪ್ರಾರಬ್ಧಕರ್ಮ)ದಂತೆಯೇ (ಅದೂ) ಮೊಳೆಯುವದೂ ಆಗಬಹುದು ಎನ್ನುವದಾದರೆ ಹಾಗಲ್ಲ. ಅದು ಮತ್ತೊಂದು ಕರ್ಮದಿಂದ ಆದದ್ದು ಎಂದು (ನಾವು) ಒಪ್ಪಿರುತ್ತೇವೆ[3]. ಅದು ನಾಶವಾದಮೇಲೆ ಆ (ಕರ್ಮವು) ಹೇಗೆ ಉಂಟಾದೀತು[4] ? –(ಎಂದು) ನಿಮ್ಮನ್ನು ಕೇಳುತ್ತಿದೇವೆ. ಅದನ್ನು ಹೇಳಿರಿ.

---

1. ನಾನೆಂಬ ಅರಿವೇ ಕರ್ಮಕ್ಕೆ ಕಾರಣವು.
2. ನಾನೆಂಬ ಅರಿವುಳ್ಳಾತನೇ ಕರ್ಮಕ್ಕೆ ಕರ್ತೃ. ಪ್ರ. ೧–೧೬ರನ್ನು ನೋಡಿರಿ.
3. ಪ್ರಾರಬ್ಧಕರ್ಮವು ಈಗ ಫಲವನ್ನು ಕೊಟ್ಟುರುತ್ತದೆ; ಆ ಕರ್ಮವನ್ನು ಮಾಡಿದಾಗ ಅಹಂಕಾರವಿತ್ತು. ಅದ್ದರಿಂದ ಅದು ಅಹಂಕಾರದ ಕಾರ್ಯವು.
4. ಅಹಂಕಾರವು 'ನಾನು ಆಕರ್ತ್ರಾತ್ಮನು' ಎಂಬ ಅರಿವಿನಿಂದ ಬಾಧಿತವಾದ ಮೇಲೆ ಕರ್ಮವು ಉಂಟಾಗಲಾರದು ಎಂದರ್ಥ. ಜ್ಞಾನಿಗೆ ಅಹಂಕಾರವಿಲ್ಲದ್ದರಿಂದ ಅವನಿಗೆ ಸಂಚಿತಾಗಾಮಿಕರ್ಮಗಳ ಫಲವುಂಟಾಗಲಾರದು ಎಂದು ಅಭಿಪ್ರಾಯ.

ದೇಹಾದ್ಯಾರಬ್ಧಸಾಮರ್ಥ್ಯಾಜ್ಜ್ಞಾನಂ ಸದ್ವಿಷಯಂ ತ್ವಪಿ[1] ।
ಅಭಿಭೂಯ ಫಲಂ ಕುರ್ಯಾತ್ ಕರ್ಮಾನ್ತ್ಯೇ ಜ್ಞಾನಮುದ್ಭವೇತ್
ಆರಬ್ಧಸ್ಯ ಫಲೇ ಹ್ಯೇತೇ ಭೋಗೋ ಜ್ಞಾನಂ ಚ ಕರ್ಮಣಃ ।
ಅವಿರೋಧಸ್ತಯೋರ್ಯುಕ್ತೋ ವೈಧಸ್ಯಂ ಚೇತರಸ್ಯ ತು ॥ ೪ ॥

೩-೪. ದೇಹವೇ ಮುಂತಾದವನ್ನು ಉಂಟುಮಾಡಿರುವ ಸಾಮರ್ಥ್ಯದಿಂದ (ಪ್ರಾರಬ್ಧ)ಕರ್ಮವು ಪರಮಾರ್ಥವಿಷಯವಾದ ಜ್ಞಾನವನ್ನುಕೂಡ ಮರೆಮಾಡಿ ಫಲವನ್ನು ಕೊಡುತ್ತದೆ[2]. ಕೊನೆಯಲ್ಲಿ ಜ್ಞಾನವು ತೋರಿಕೊಳ್ಳುತ್ತದೆ[3]. ಭೋಗ, ಜ್ಞಾನ – ಈ ಎರಡೂ ಆರಬ್ಧಕರ್ಮಕ್ಕೇ ಫಲಗಳು. ಆದ್ದರಿಂದ ಅವುಗಳೆರಡಕ್ಕೂ ವಿರೋಧವಿಲ್ಲವೆಂಬುದು ಯುಕ್ತವಾಗಿರುತ್ತದೆ[4]. ಆದರೆ ಮಿಕ್ಕ ಕರ್ಮವು (ಹೀಗಲ್ಲ), ಬೇರೆಯ ಸ್ವಭಾವವಾಗಿರುತ್ತದೆ[5].

ಜ್ಞಾನದಿಂದ ಕರ್ಮವು ನಾಶವಾಗದು, ಬಾಧಿತವಾಗುತ್ತದೆ

ದೇಹಾತ್ಮಜ್ಞಾನವಜ್ಜ್ಞಾನಂ ದೇಹಾತ್ಮಜ್ಞಾನಬಾಧಕಮ್ ।
ಆತ್ಮನ್ಯೇವ ಭವೇದ್ಯಸ್ಯ ಸ ನೇಚ್ಛನ್ನಪಿ ಮುಚ್ಯತೇ[6] ॥ ೫ ॥

೫. (ಅಜ್ಞಾನಿಗೆ ಇರುವ) ದೇಹವೇ ನಾನೆಂಬ ಜ್ಞಾನದಂತೆ ದೇಹವೇ ತಾನೆಂಬ ಜ್ಞಾನವನ್ನು ಬಾಧಿಸುವ ಜ್ಞಾನವು ಯಾವನಿಗೆ (ತನ್ನ) ಆತ್ಮನಲ್ಲಿಯೇ ಉಂಟಾಗುವದೋ ಅವನು ಒಲ್ಲೆನೆಂದರೂ ಮುಕ್ತನಾಗುತ್ತಾನೆ[7].

---

1. 'ತ್ವಯಿ' ಎಂಬ ಪೈಠಾಪಕ್ಕಿಂತ ಇದೇ ಉತ್ತಮ.

2. ಶರೀರವನ್ನು ಪ್ರಾರಬ್ಧಕರ್ಮವು ಕೊಟ್ಟುಬಿಟ್ಟಿರುತ್ತದೆ; ಆದ್ದರಿಂದ ಜ್ಞಾನವು ಆವಿದ್ಯೆಯಲ್ಲಿ ಕರ್ಮದ ಸಾಮರ್ಥ್ಯವನ್ನು ತಪ್ಪಿಸಲಾರದು.

3. ಶರೀರವುಂಟಾದ ಮೇಲೆಯೇ ಜ್ಞಾನವುಂಟಾಗಿರುತ್ತದೆ.

4. ಜ್ಞಾನವು ಎಲ್ಲಾ ಕರ್ಮಕ್ಕೂ ವಿರೋಧಿಯಲ್ಲ; ಮುಂದೆ ಆಗಬೇಕಾಗಿರುವ ಅವಿದ್ಯಾಕಾರ್ಯವಾದ ಕರ್ಮಫಲಕ್ಕೇ ಅದು ವಿರೋಧಿ. ಜ್ಞಾನವುಂಟಾದಬಳಿಕ ಯಾವ ಕರ್ಮವೂ ಮೊಳೆಯಲಾರದು.

5. ಸಂಚಿತಕರ್ಮವು ತನ್ನ ಫಲವನ್ನು ಕೊಡುವದಕ್ಕೆ ಮೊದಲು ಶರೀರವನ್ನುಂಟುಮಾಡಿಕೊಳ್ಳಬೇಕು. ಆದರೆ ಶರೀರಗ್ರಹಣಕ್ಕೆ ಅವಶ್ಯವಾದ ಅವಿದ್ಯೆಯೂ ಕಾಮವೂ ಜ್ಞಾನಿಗೆ ಇರುವದಿಲ್ಲವಾದ್ದರಿಂದ ಅದು ಫಲವನ್ನು ಕೊಡಲಾರದು. ಪ್ರಾರಬ್ಧಕರ್ಮವು ಫಲವನ್ನು ಕೊಟ್ಟದ್ದು ಆಗಿದೆ, ಸಂಚಿತವು ಕೊಡಬೇಕಾಗಿದೆ – ಎಂಬುದೇ ಈ ಎರಡು ಕರ್ಮಗಳಿಗೂ ಇರುವ ವೈಧರ್ಮ್ಯವು. ಇದನ್ನು ಪೂರ್ಣಪಕ್ಷಿಯು ಕಡೆಗಣಿಸಿರುತ್ತಾನೆ.

6. ಇದರ ಮುಂದೆ "ತತಃ ಸರ್ವಮಿದಂ ಸಿದ್ಧಂ ಪ್ರಯೋಗೋಽಸ್ಯಾಭಿರೀರಿತಃ ॥" ಎಂಬ ಅರ್ಧಶ್ಲೋಕವು ಕೆಲವು ಪುಸ್ತಕಗಳಲ್ಲಿ ಮಾತ್ರ ಇದೆ. ಇದು ಇಲ್ಲದಿದ್ದರೂ ಪ್ರಕರಣವು ಪೂರ್ಣವಾಗುವದರಿಂದ ಅದನ್ನು ಕೈಬಿಟ್ಟಿದೇನೆ.

7. ನಿತ್ಯಮುಕ್ತನಾಗಿಯೇ ಇರುತ್ತಾನಾದ್ದರಿಂದ ಅವನಿಗೆ ಬಂಧದ ಪ್ರಸಕ್ತಿಯೇ ಇಲ್ಲವಾದ್ದರಿಂದ.

ತತ್ತ್ವಜ್ಞಾನಸ್ವಭಾವಪ್ರಕರಣದ ಸಾರ

೧. ದೇಹಾದಿಗಳು ತಾನು ಎಂದು ಅರಿಯುವದೇ ಕರ್ಮಕ್ಕೆ ಕಾರಣವು. ಈ ಅರಿವು ಯಾವನಿಗಿರುವದೋ ಅವನಿಗೇ ಕರ್ಮವು ಇರುತ್ತದೆ; ನಾನು ದೇಹವಲ್ಲ ಎಂಬ ಬುದ್ಧಿಯುಂಟಾದಕೂಡಲೆ ಅದು ಹೋಗಿಬಿಡುತ್ತದೆ, ಮತ್ತೆ ಫಲವನ್ನು ಕೊಡುವದಿಲ್ಲ.

೨-೪. ದೇಹಾಭಿಮಾನವಿರುವಾಗ ಮಾಡಿದ ಕರ್ಮದ ಫಲವಾಗಿ ಹೊಸ ದೇಹವು ಉಂಟಾಗಿಬಿಟ್ಟಿರುತ್ತದೆ. ಆ ದೇಹದಲ್ಲಿ ಜ್ಞಾನವುಂಟಾದ ಮೇಲೆ ಕರ್ತೃಭೋಕ್ತೃಬುದ್ಧಿಯಿರುವದಿಲ್ಲವಾದ್ದರಿಂದ ಇನ್ನು ಮುಂದೆ ಸಂಚಿತಾಗಾಮಿಕರ್ಮಗಳು ಫಲವನ್ನು ಕೊಡಲಾರವು.

೫. ಜ್ಞಾನವು ಕರ್ಮವನ್ನು ನಾಶಮಾಡುವದಿಲ್ಲ, ದೇಹಾತ್ಮಬುದ್ಧಿಯನ್ನು ಅಸತ್ಯವೆಂದು ತಿಳಿಸಿ ಬಾಧಿಸುವ ಮೂಲಕ ಕರ್ಮಫಲದ ಅಂಜಿಕೆಯನ್ನು ತಪ್ಪಿಸುವದು. ಆದರಿಂದ ದೇಹಾತ್ಮಜ್ಞಾನದಿಂದಲೇ ಬಂಧವು, ಪರಮಾತ್ಮನೇ ನಾನು ಎಂಬ ಜ್ಞಾನದಿಂದಲೇ ಮುಕ್ತಿಯು.

——•–:0:–•——

೫. ಬುದ್ಧ್ಯಪರಾಧ

ಕರ್ಮಿಗಳು ಜ್ಞಾನಕ್ಕೆ ಹೆದರುವದೇಕೆ?

ಮೂತ್ರಾಶಜಿಹ್ಮೋ ಯಥೋದಜಿಹ್ಮೋ ನಾಗ್ರಹೀದಮೃತಂ ಯಥಾ ।
ಕರ್ಮನಾಶಭಯಾಜ್ಜ್ಞಾನ್ನೋರಾತ್ಮಾ ಜ್ಞಾನಾಗ್ರಹಸ್ತಥಾ ॥ ೧ ॥

೧. ಹೇಗೆ ಉದಂಕನು ಉಚ್ಚೆ ಎಂಬ ಶಂಕೆಯಿಂದ ನಿಜವಾದ ಅಮೃತವನ್ನು ಕೂಡ ತೆಗೆದುಕೊಳ್ಳಲಿಲ್ಲವೋ[1] ಹಾಗೆ ಕರ್ಮನಾಶದ ಅಂಜಿಕೆಯಿಂದ ಜೀವನು ಆತ್ಮಜ್ಞಾನವನ್ನು ಸ್ವೀಕರಿಸುವದಿಲ್ಲ[2].

ಆತ್ಮನಲ್ಲಿ ಕರ್ತೃತ್ವವು ಭ್ರಾಂತಿಯಿಂದ ತೋರುತ್ತದೆ

ಬುದ್ಧಿಸ್ಥಶ್ಚಲತೀವಾತ್ಮಾ ಧ್ಯಾಯತೀವ ಚ ವೃಶ್ಯತೇ ।
ನೌಗತಸ್ಯ ಯಥಾ ವೃಕ್ಷಾಸ್ತದ್ವತ್ಸಂಸಾರಿಭ್ರಮಃ ॥ ೨ ॥
ನೌಸ್ಥಸ್ಯ ಹ್ಯಾತಿಲೋಮ್ಯೇನ ನಗಾನಾಂ ಗಮನಂ ಯಥಾ ।
ಆತ್ಮನಃ ಸಂಸೃತಿಸ್ತದ್ವದ್ ಧ್ಯಾಯತೀವೇತಿ ಹಿ ಶ್ರುತಿಃ ॥ ೩ ॥

೨-೩. ಆತ್ಮನು ಬುದ್ಧಿಯಲ್ಲಿರುವದರಿಂದ[3] ಓಡಾಡುತ್ತಿರುವಂತೆಯೂ ಆಲೋಚನೆಮಾಡುತ್ತಿರುವಂತೆಯೂ ಕಾಣುಬರುತ್ತಾನೆ[4]. ಹಡಗಿನಲ್ಲಿರುವವ

---

1. ಉದಂಕನೆಂಬ ಋಷಿಗೆ ಭಗವಂತನನ್ನು ನೆನಸಿಕೊಂಡಕೂಡಲೆ ನೀರು ಜೊತೆಯುವದೆಂಬ ವರವನ್ನು ಶ್ರೀಕೃಷ್ಣನು ಕೊಟ್ಟಿದ್ದನು. ಒಮ್ಮೆ ಅವನು ಭಗವಂತನನ್ನು ಸ್ಮರಿಸಿಕೊಂಡಾಗ ಶ್ರೀಕೃಷ್ಣನು ಅವನಿಗೆ ಅಮೃತವನ್ನು ಕೊಡೆಂದು ಇಂದ್ರನಿಗೆ ಆಪ್ಪಣೆ ಮಾಡಿದನು. ಆದರೆ ಇಂದ್ರನು ಚಂಡಾಲವೇಷದಿಂದ ಅಮೃತಕಲಶವನ್ನು ತಂದು ಕೆಳಗಿಡಲು ಆ ಋಷಿಯು ಅದನ್ನು ಮೂತ್ರವೆಂಬ ಭ್ರಾಂತಿಯಿಂದ ಕುಡಿಯದೆ ಹೋದನು– ಎಂದು ಭಾರತದಲ್ಲಿ ಒಂದು ಕಥೆಯಿದೆ.

2. ಉದಂಕನಿಗೆ ಮೂತ್ರಶಂಕೆಯಿದ್ದರೂ ನಿಜವಾಗಿ ಇಂದ್ರನು ಕೊಟ್ಟದ್ದು ಅಮೃತವೇ. ಇದರಂತೆ ಜನರಿಗೆ ತಮ್ಮ ಕರ್ಮವು ಅಕರ್ತೃತ್ವಜ್ಞಾನದಿಂದ ನಾಶವಾಗುವದೆಂಬ ಅಂಜಿಕೆಯಿದ್ದರೂ ನಿಜವಾಗಿ ಅವರು ಯಾವಾಗಲೂ ಅಕರ್ತೃಸ್ವಭಾವದವರೇ. ಕರ್ಮದ ಫಲವು ತಮಗೆ ಆಗುವದು ನಿಜ; ಆದು ಜ್ಞಾನದಿಂದ ತಪ್ಪಿಹೋಗುತ್ತದೆ –ಎಂದು ಅಜ್ಞರು ತಿಳಿದುಕೊಂಡಿರುವದು ಭ್ರಾಂತಿಯಿಂದಲೇ.

3. ಅಂತಃಕರಣವೆಂಬ ಉಪಾಧಿಯು ನಿಮಿತ್ತದಿಂದ ಎಂದರ್ಥ. ನಿಜವಾಗಿ ಆತ್ಮನು ಅಂತಃಕರಣದಲ್ಲಿರುವನೆಂದು ತಿಳಿಯಬಾರದು.

4. ಆತ್ಮನು ಇದ್ದಂತೆ ಇರುವವನು, ಕೂಟಸ್ಥನು; ಆದರೂ ಕರ್ಮೇಂದ್ರಿಯಗಳ ಮುತ್ತು ಜ್ಞಾನೇಂದ್ರಿಯಗಳ ವ್ಯಾಪಾರವು ಅವನಲ್ಲಿ ತೋರುವದು ಅಂತಃಕರಣರೂಪವಾದ ಉಪಾಧಿಯಿಂದ.

ನಿಗೆ ಹೇಗೆ ಮರಗಳು (ಚಲಿಸುತ್ತಿರುವಂತೆ ಕಾಣುವವೋ) ಹಾಗೆಯೇ (ಆತ್ಮನಲ್ಲಿ) ಸಂಸಾರಭ್ರಾಂತಿ (ಯಾಗಿರುತ್ತದೆ). ಹೇಗೆ ಹಡಗಿನಲ್ಲಿರುವನನಿಗೆ ವಿರುದ್ಧವಾದ ಕಡೆಗೆ ಮರಗಳು ಹೋಗುತ್ತಿರುವಂತೆ ಕಾಣಿಸುತ್ತಿರುವವೋ ಇದರಂತೆ ಆತ್ಮನಿಗೆ ಸಂಸಾರವೂ (ಕಾಣಿಸುತ್ತಿರುವದು)[1]. "ಧ್ಯಾಯತೀವ" (ಆಲೋಚನೆ ಮಾಡುತ್ತಿರುವಂತೆ ಇರುತ್ತಾನೆ) ಎಂದಲ್ಲನೆ, (ಬೃ. ೪-೩-೭) ಶ್ರುತಿ (ಯಿರುವದು)[2] ?

ಆತ್ಮನಲ್ಲಿ ಜ್ಞಾನಕರ್ತೃತ್ವವು ತೋರುವದು ಅಜ್ಞಾನದಿಂದ

ಚೈತನ್ಯಪ್ರತಿಬಿಮ್ಬೇನ ವ್ಯಾಪ್ತೋ ಬೋಧೋ ಹಿ ಜಾಯತೇ ।
ಬುದ್ಧೇಃ ಶಬ್ದಾದಿನಿರ್ಭಾಸಸ್ತೇನ ಮೋಮುಹ್ಯತೇ ಜಗತ್ ॥ ೪ ॥

೪. ಬುದ್ಧಿಯಲ್ಲಿ ಚೈತನ್ಯಪ್ರತಿಬಿಂಬದಿಂದ ವ್ಯಾಪ್ತವಾಗಿಯೇ ಶಬ್ದಾದಿಗಳಂತೆ ತೋರುವ ಅರಿವು ಉಂಟಾಗುತ್ತದೆ. ಅದರಿಂದ ಲೋಕವು ಮತ್ತೆಮತ್ತೆ ಮರುಳಾಗುತ್ತಿರುವದು[3].

ಆತ್ಮಚೈತನ್ಯವ ಅನುಭವ

ಚೈತನ್ಯಭಾಸ್ಯತಾಹಮಸ್ತಾದರ್ಥ್ಯಂ ಚ ತದಸ್ಯ ಯತ್ ।
ಇದಮಂಶಪ್ರಹಾಣೇನ ಪರಃ ಸೋಽನುಭವೋ ಭವೇತ್ ॥ ೫ ॥

೫. ಅಹಂಕಾರವು ಚೈತನ್ಯದಿಂದ ಬೆಳಗಲ್ಪಡತಕ್ಕದ್ದು, ಅದು ಆ (ಚೈತನ್ಯ)ಕ್ಕಾಗಿರತಕ್ಕದ್ದು ಆಗಿರುವದಲ್ಲ, ಆ (ಕಾರಣ)ದಿಂದ, ಇದು ಎಂಬ ಅಂಶವನ್ನು ಬಿಟ್ಟುಬಿಡುವದರಿಂದ[4] ಅದು ಪರಮಾನುಭವವಾಗುವದು.

——:o:——

1. ಮರಗಳು ಚಲಿಸುವದಿಲ್ಲ, ಹಡಗು ಚಲಿಸುತ್ತಿರುವದು; ಆದರೂ ಮರಗಳು ಚಲಿಸುವಂತೆ ಕಾಣುತ್ತವೆ. ಇದರಂತೆ ಅಂತಃಕರಣದಲ್ಲಿ ಆಗುವ ವಿಕಾರವು ಆತ್ಮನಲ್ಲಿಯೇ ಆಗುತ್ತಿರುವಂತೆ ಕಾಣುತ್ತದೆ.

2. ಅಂತಃಕರಣದಿಂದಲೇ ಜೀವನು ಸಂಸಾರಧರ್ಮವುಳ್ಳವನಂತೆ ತೋರುತ್ತಿರುವನು ಎಂದು ಶ್ರುತಿಯ ಅರ್ಥ.

3. ಶಬ್ದವೇ ಮುಂತಾದ ವಿಷಯಗಳನ್ನು ನಾವು ಅರಿಯುವಾಗ ಅಂತಃಕರಣದ ವೃತ್ತಿಗಳು ಶಬ್ದವೇ ಮುಂತಾದ ಆಕಾರವನ್ನು ತಳೆಯುತ್ತವೆ. ಅವುಗಳು ಚೈತನ್ಯದಿಂದ ವ್ಯಾಪ್ತವಾಗಿಯೇ ಉಂಟಾಗುತ್ತವೆ; ಅವುಗಳಲ್ಲಿ ಚೈತನ್ಯದ ಪ್ರತಿಬಿಂಬವೂ ಉಂಟಾಗಿರುತ್ತವೆ. ಈ ವೃತ್ತಿಗಳನ್ನೇ ಜ್ಞಾನ, ಅರಿವು -ಎಂದು ಆಜ್ಞರು ಭಾವಿಸುತ್ತಾರೆ. ತೈ. ಭಾ. ದಲ್ಲಿ 'ಸತ್ಯಂ ಜ್ಞಾನಮನಸ್ತ ಮ್' ಎಂಬ ವಾಕ್ಯದಲ್ಲಿ ಜ್ಞಾನಶಬ್ದವಿವರಣೆಯನ್ನು (ಭಾ. ಭಾ. ೧೦೬) ನೋಡಿ.

4. ವಿಷಯವಾಗಿರುವ ಅಹಂಕಾರವು ಆತ್ಮನಲ್ಲವೆಂದು ಬಿಟ್ಟು ಚೈತನ್ಯವೇ ಆತ್ಮನೆಂದು ನಿಶ್ಚಯಿಸಿದರೆ.

ಬುದ್ಧ್ಯಪರಾಧಪ್ರಕರಣದ ಸಾರ

೧. ದೇವೇಂದ್ರನು ತನಗೆ ಕೊಡುವದಕ್ಕೆ ಬಂದ ಅಮೃತವನ್ನು ಉದಂಕನು ಅದು ಮೂತ್ರವೆಂಬ ಶಂಕೆಯಿಂದ ತೆಗೆದುಕೊಳ್ಳಲೊಲ್ಲದೆ ಹೋದಂತೆ, ಜೀವನು ಅಮೃತತ್ವಕ್ಕೆ ಕಾರಣವಾದ ಜ್ಞಾನವನ್ನು ಕರ್ಮಫಲನಾಶಕವೆಂಬ ಶಂಕೆಯಿಂದ ಒಲ್ಲದೆ ಇರುವನು.

೨-೩. ಚಲಿಸುತ್ತಿರುವ ಹಡಗಿನಲ್ಲಿರುವಾತನು ದಡದಲ್ಲಿರುವ ಮರಗಳು ಚಲಿಸುತ್ತಿರುವವೆಂದು ತಪ್ಪಾಗಿ ಎಣಿಸಿಕೊಳ್ಳುವಂತೆ ಅಂತಃಕರಣದ ಉಪಾಧಿಯ ಚಲನೆಯಿಂದಲೂ ಜ್ಞಾನವೃತ್ತಿಯಿಂದಲೂ ಆತ್ಮನೇ ಕರ್ಮವನ್ನು ಮಾಡುತ್ತಿರುವನೆಂತಲೂ ಬೇರೆಬೇರೆಯ ವಿಶೇಷಜ್ಞಾನವುಳ್ಳವನಾಗಿರುವನೆಂತಲೂ ಜನರು ತಪ್ಪಾಗಿ ಎಣಿಸಿರುತ್ತಾರೆ.

೪. ಅಂತಃಕರಣದಲ್ಲಿ ವೃತ್ತಿಯುಂಟಾಗುವಾಗ ಆಮು ಚೈತನ್ಯದ ಆಭಾಸದಿಂದೊಡಗೂಡಿ ಉಂಟಾಗುತ್ತಿರುವದು. ಇದರಿಂದ ಜನರು ವೃತ್ತಿಯನ್ನೇ ಜ್ಞಾನವೆಂದು ಭ್ರಾಂತರಾಗುತ್ತಿರುವರು.

೫. ನಾನು ಎಂಬ ವಸ್ತುವಿನಲ್ಲಿ ಚೈತನ್ಯದಿಂದ ಬೆಳಗುವ ವಿಷಯವೂ ಚೈತನ್ಯಕ್ಕಾಗಿರುವ ಪರಾರ್ಥವೂ ಆದ ಅಹಂಕಾರವೆಂಬ ಅಂಶವನ್ನು ಬಿಟ್ಟು ತಾನೇ ಬೆಳಗುವ ಸ್ವತಂತ್ರವಾದ ಚೈತನ್ಯವೇ ಆತ್ಮನೆಂದು ನಿಶ್ಚಯಿಸುವದೇ ಉತ್ತಮವಾದ ಆತ್ಮಾನುಭವವು.

——:o:——

೬. ವಿಶೇಷಾಪೋಹ

ಛಿತ್ತ್ವಾ ತ್ಯಕ್ತೇನ ಹಸ್ತೇನ ಸ್ವಯಂ ನಾತ್ಮಾ ವಿಶೇಷ್ಯತೇ ।
ತಥಾ ಶಿಷ್ಟೇನ ಸರ್ವೇಣ ಯೇನ ಯೇನ ವಿಶೇಷ್ಯತೇ ॥ ೧ ॥
ತಸ್ಮಾತ್ ತ್ಯಕ್ತೇನ ಹಸ್ತೇನ ತುಲ್ಯಂ ಸರ್ವಂ ವಿಶೇಷಣಮ್ ।
ಅನಾತ್ಮತ್ವೇನ ತಸ್ಮಾಜ್ಜ್ಞೋ ಮುಕ್ತಃ ಸರ್ವವಿಶೇಷಣೈಃ ॥ ೨ ॥

೧-೨. ಕತ್ತರಿಸಿ (ಒಗೆದು)ಬಿಟ್ಟ ಕೈಗೆ ಆತ್ಮನು ತಾನು ವಿಶೇಷ್ಯನಾಗಿರುವದಿಲ್ಲ[1]. ಇದರಂತೆ ಉಳಿದ ಯಾವಯಾವ ವಿಶೇಷಣದಿಂದ ಕೂಡಿ(ದಂತಿ)ರುವನೋ (ಅದನ್ನು ಬಿಟ್ಟಮೇಲೆ ಅದಕ್ಕೂ ವಿಶೇಷ್ಯನಾಗಿರುವದಿಲ್ಲ). ಆದ್ದರಿಂದ ವಿಶೇಷಣವೆಲ್ಲವೂ ಅನಾತ್ಮವಾಗಿರುವದರಿಂದ ತೆಗೆದುಬಿಟ್ಟ ಕೈಗೆ ಸಮಾನವಾಗಿರುತ್ತದೆ[2]. ಆದ್ದರಿಂದ ಆತ್ಮನು ಯಾವ ವಿಶೇಷಣಗಳೂ ಇಲ್ಲದವನು.

ಆತ್ಮನಲ್ಲಿ ತೋರಿಬರುವ ವಿಶೇಷಣವೆಲ್ಲವೂ ಅಧ್ಯಸ್ತ

ವಿಶೇಷಣಮಿದಂ ಸರ್ವಂ ಸಾಧ್ವಲಙ್ಕರಣಂ ಯಥಾ ।
ಅವಿದ್ಯಾಧ್ಯಾಸತಃ ಸರ್ವಂ ಜ್ಞಾತೇ ಆತ್ಮನ್ಯಸದ್ಭವೇತ್ ॥ ೩ ॥

೩. ಈ ವಿಶೇಷಣವೆಲ್ಲವೂ ಚೆನ್ನಾಗಿ ಮಾಡಿದ ಅಲಂಕಾರದಂತೆ.[3] ಎಲ್ಲವೂ ಅವಿದ್ಯೆಯ ಅಧ್ಯಾಸದಿಂದ (ವಿಶೇಷಣವಾಗಿರುತ್ತದೆ); ಆತ್ಮನನ್ನು ಅರಿತುಕೊಂಡರೆ ಹುಸಿಯಾಗಿರುವದು[4].

---

1. ಕೈಯು ಶರೀರಕ್ಕೆ ಸೇರಿಕೊಂಡಿರುವಾಗ ಅದೂ ತಾನೆಂಬ ತಿಳಿವಳಿಕೆಯಿದ್ದರೂ ಅದನ್ನು ಕತ್ತರಿಸಿಹಾಕಿದ ಬಳಿಕ ಅದರಲ್ಲಿ ತಾನೆಂಬ ಭಾವನೆಯಿರುವದಿಲ್ಲ.

2. ವಿವೇಕದಿಂದ ಅದನ್ನು ಬೇರ್ಪಡಿಸಿನೋಡಿದರೆ ಅದು ಆತ್ಮನ ವಿಶೇಷಣವಾಗಿರುವದಿಲ್ಲ.

3. ಇಂದ್ರವಿರೋಚನರು ಕ್ಷೌರಮಾಡಿಸಿಕೊಂಡು ಚೆನ್ನಾಗಿ ಅಲಂಕಾರಮಾಡಿಕೊಂಡು ನೀರಿನ ಶ್ರಾವೆಯಲ್ಲಿ ನೋಡಲು ಪ್ರತಿಬಿಂಬವು ಹಾಗೆಯೇ ಕಾಣಿಸಿತು. (ಛಾ. ೮-೮-೩, ೮-೯-೧). ಅಲಂಕಾರವು ಮೊದಲು ಇರಲಿಲ್ಲ, ಆಮೇಲೆ ಹಾಕಿಕೊಂಡಾಗ ದೇಹದ ವಿಶೇಷಣವಾಯಿತು. ಹೀಗೆಯೇ ವಿಶೇಷಣವು ಮಾರ್ಪಡುತ್ತಿರುವದು; ಅದು ಆತ್ಮನ ವಿಶೇಷಣವಲ್ಲ.

4. ಏಕೆಂದರೆ ಅದು ನಿಜವೆಂದು ತೋರುವಾಗಲೂ ಆತ್ಮನಿಗಿಂತ ಬೇರೆಯಾಗಿರುತ್ತದೆ; ಅದು ಇಲ್ಲದಾಗಲೂ ಆತ್ಮನು ಹಾಗೆಯೇ ಇರುತ್ತಾನೆ.

ಜ್ಞೇಯವಾದ ಅಹಂಕಾರವು ಆತ್ಮನಿಗೆ ಸೇರಿದ್ದಲ್ಲ

ಜ್ಞಾತೈವಾತ್ಮಾ ಸದಾ ಗ್ರಾಹ್ಯೋ ಜ್ಞೇಯಮುತ್ಸೃಜ್ಯ ಕೇವಲಃ ।
ಅಹಮಿತ್ಯಪಿ ಯದ್ಗ್ರಾಹ್ಯಂ ವ್ಯನೇತಾಜ್ಞಸಮಂ ಹಿ ತತ್ ॥ ೪ ॥
ಯಾವಾನ್ ಸ್ಯಾದಿದಮಂಶೋ ಯಃ ಸ ಸ್ವತೋಽನ್ಯೋ ವಿಶೇಷಮ್
ವಿಶೇಷಪ್ರಕ್ಷಯೋ ಯತ್ರ ಸಿದ್ಧೋ ಜ್ಞಶ್ಚಿತ್ರಗುರ್ಯಥಾ ॥ ೫ ॥

೪–೫. ಜ್ಞೇಯವನ್ನು ಬಿಟ್ಟು ಬರಿಯ ಜ್ಞಾತೃವನ್ನೇ ಆತ್ಮನೆಂದು ಅರಿತುಕೊಳ್ಳಬೇಕು. ನಾನು ಎಂಬುದನ್ನೆಯಲ್ಲ, ಅದೂ ಜ್ಞೇಯವೇ ; ಏಕೆಂದರೆ ಅದೂ ತೆಗೆದುಹಾಕಿದ ಅವಯವಕ್ಕೆ ಸಮನಾಗಿರುತ್ತದೆ[1]. ಯಾವದು ಎಷ್ಟರಮಟ್ಟಿಗೆ ಇದನುಂಶವಾಗಿರುವದೋ[2] ಅದು (ಅಷ್ಟರಮಟ್ಟಿಗೆ) ಆತ್ಮನಿಗಿಂತ ಬೇರೆಯಾಗಿರುವ ವಿಶೇಷಣವಾಗಿರುತ್ತದೆ[3]. ಯಾವ (ಆತ್ಮ)ನಲ್ಲಿ ವಿಶೇಷಗಳು (ಎಲ್ಲವೂ) ನಾಶವಾಗಿರುವವೋ (ಆ) ಆತ್ಮನು ಚಿತ್ರಗುವಿನಂತೆ (ಸ್ವತಃ)ಸಿದ್ಧನಾಗಿರುತ್ತಾನೆ[4].

ಅಹಂ ಬ್ರಹ್ಮಾಸ್ಮಿ ಎಂಬಲ್ಲಿ ಅಹಂಪದಕ್ಕೆ ಅರ್ಥ

ಇದಮಂಶೋಽಹಮಿತ್ಯತ್ರ ತ್ಯಾಜ್ಯೋಽನಾತ್ಮೇತಿ ಪಣ್ಡಿತೈಃ ।
ಅಹಂ ಬ್ರಹ್ಮೇತಿ ಶಿಷ್ಟೋಽಂಶೋ ಭೂತಪೂರ್ವಗತೇರ್ಭವೇತ್ ॥೬॥

---

1. ಕರ್ತೃವಿಸಿಹಾಕಿದ ಕ್ರಿಯಾಪದದಲ್ಲಿ ಹೇಗೆ ತಾನೆಂಬ ಅಭಿಮಾನವಿರುವದಿಲ್ಲವೋ ಹೇಗೆ ಅದು ನಿಜವಾಗಿ ತನ್ನ ವಿಶೇಷಣವಲ್ಲವೋ ಹಾಗೆಯೇ ಜ್ಞೇಯವಾದ ಅಹಂಕಾರವೂ ಆತ್ಮನ ವಿಶೇಷಣವಲ್ಲ. ಅದನ್ನು ಅರಿಯುವಷ್ಟನೇ ಆತ್ಮನು.

2. ವಿಷಯವಾಗಿರುವಮೋ.

3. ಆತ್ಮನಿಗೆ ವಿಶೇಷಣವಾಗಿ ಕಂಡರೂ ಆತ್ಮನ ಸ್ವರೂಪಕ್ಕೆ ಸೇರಿದ್ದಲ್ಲ ; ಅಲಂಕಾರದ ವಸ್ತುವಿನಂತೆ ಆಗಂತುಕವಾಗಿ ಬಂದಿದ್ದು, ಅಧ್ಯಾಸದಿಂದ ಆತ್ಮನ ವಿಶೇಷಣವಾಗಿ ತೋರತಕ್ಕದ್ದು.

4. ಚಿತ್ರಗು (ಹಂಡೆ ಹಸುಗಳುಳ್ಳವನು) ಎಂಬ ಪ್ರಯೋಗದಲ್ಲಿ ವಿಶೇಷಣವಾದ ಹಸುಗಳು ಮನುಷ್ಯನ ಸ್ವರೂಪದಲ್ಲಿ ಸೇರಿರುವದಿಲ್ಲ ; ಆದರೂ ಅವನ ಸ್ವರೂಪವನ್ನು ತಿಳಿಯುವದಕ್ಕೆ ಸಾಧನವಾಗಿರುತ್ತವೆ. ಇದರಂತೆ ವಿಶೇಷಣಗಳೆಲ್ಲವೂ ಜ್ಞೇಯವಾಗಿರುವದರಿಂದ ಆತ್ಮನಲ್ಲವಾದರೂ ಇವನ್ನು ಅರಿಯುವ ನಿರ್ವಿಶೇಷಚಿದಾತ್ಮನು ಇದಾನೆಂದು ಅರಿತುಕೊಳ್ಳುವದಕ್ಕೆ ಸಾಧನವಾಗಿರುತ್ತವೆ.

೬ ನಾನು ಎಂಬಲ್ಲಿ ಇದಮಂಶವು, ಅನಾತ್ಮವು ಎಂದು ವಿವೇಕಿಗಳಾದವರು (ಅದನ್ನು) ಬಿಟ್ಟುಬಿಡಬೇಕು.[1] ಉಳಿದ ಅಂಶವು[2] "ನಾನು ಬ್ರಹ್ಮವು" ಎಂದು ಭೂತಪೂರ್ವಗತಿಯಿಂದ (ವ್ಯವಹಾರ)ವಾಗುತ್ತದೆ.

——o——

ವಿಶೇಷಾಪೋಹಪ್ರಕರಣದ ಸಾರ

೧–೨. ಒಬ್ಬ ಮನುಷ್ಯನ ಕೈಯನ್ನು ಕತ್ತರಿಸಿಹಾಕಿದರೆ ಆ ಕೈಯಲ್ಲಿದ್ದ ನಾನು ಎಂಬ ಅಭಿಮಾನವು ಹೋಗಿಬಿಡುತ್ತದೆ. ಇದರಂತೆ ಯಾವಯಾವದು ತನ್ನ ಸ್ವರೂಪಕ್ಕೆ ಸೇರಿದ ವಿಶೇಷಣವೆಂದು ಜನರು ತಿಳಿದುಕೊಂಡಿರುವರೋ ಅದು ಅವರನ್ನು ಬಿಟ್ಟಗಲಿದಾಗ ಅವರಲ್ಲಿ ತಾನೆಂಬ ಅಭಿಮಾನವು ಇಲ್ಲವಾಗುತ್ತದೆ.

೩. ಆದ್ದರಿಂದ ಆತ್ಮನಲ್ಲಿ ಕಾಣುವ ವಿಶೇಷಣಗಳೆಲ್ಲವೂ ದೇಹಕ್ಕೆ ಹಾಕಿಕೊಳ್ಳುವ ಅಲಂಕಾರದ ಒಡವೆಗಳಂತೆ ಅವನ ಸ್ವರೂಪಕ್ಕಿಂತ ಹೊರಚ್ಚಾಗಿಯೇ ಇರುತ್ತವೆ. ಆದ್ದರಿಂದ ಅವು ಆತ್ಮನ ಸ್ವರೂಪವೆಂಬುದು ತಪ್ಪುತಿಳಿವಳಿಕೆಯ ಅಧ್ಯಾಸದಿಂದ. ಆತ್ಮನು ನಿಜವಾಗಿ ನಿರ್ವಿಶೇಷನಾಗಿರುತ್ತಾನೆ.

೪–೫. ಆದ್ದರಿಂದ ಜ್ಞೇಯವಾಗಿರುವದನ್ನೆಲ್ಲ ಬಿಟ್ಟು ಬರಿಯ ಜ್ಞಾತೃವನ್ನೇ ಆತ್ಮನೆಂದು ಅರಿತುಕೊಳ್ಳಬೇಕು. ನಾನು ಎಂದು ಜ್ಞೇಯವಾಗಿರುವದೂ ಕತ್ತರಿಸಿದ ಕೈಯಿನಂತೆ ಆತ್ಮಸ್ವರೂಪಕ್ಕೆ ಹೊರಚ್ಚಾದದ್ದೇ. ಜ್ಞೇಯವಾದದ್ದು ಯಾವದೂ ಆತ್ಮನ ವಿಶೇಷಣವಲ್ಲ.

೬. 'ನಾನು ಬ್ರಹ್ಮವು' (ಬೃ. ೧–೪–೧೦) ಎಂಬ ಶ್ರುತಿವಾಕ್ಯದಲ್ಲಿ ಜ್ಞೇಯವಾಗಿರುವ ಅಹಂಕಾರವನ್ನು ಬಿಟ್ಟೇ ಉಳಿದ ಚೈತನ್ಯವನ್ನು ಹೇಳಿರುತ್ತದೆ. ಇಲ್ಲಿ 'ನಾನು' ಎಂಬ ಶಬ್ದದ ಪ್ರಯೋಗವು ಭೂತಪೂರ್ವಗತಿಯಿಂದ; ಎಂದರೆ ಮೊದಲು ಅಹಂಕಾರದ ಅಧ್ಯಾಸವಾಗಿದ್ದಾಗ 'ನಾನು' ಎಂದು ಕರೆಯಿಸಿಕೊಳ್ಳುತ್ತಿದ್ದ ಆತ್ಮನೇ ಪರಮಾರ್ಥವಾಗಿ ನಿರ್ವಿಶೇಷವಾದ ಆತ್ಮನು ಎಂದು ತಿಳಿಯಿಸುವದಕ್ಕೆ ಹೀಗೆ ವ್ಯವಹರಿಸಿರುತ್ತದೆ.

——o——

1. ಅದು ಆತ್ಮನಲ್ಲವೆಂದು ತಿಳಿಯಬೇಕು.
2. ವಿಷಯವನ್ನಲ್ಲದ ಬರಿಯ ಚೈತನ್ಯವು

೭. ಬುದ್ಧಿಸಾಕ್ಷಿ[1]

ಆತ್ಮನು ಸರ್ವಜ್ಞವಾದ ಬ್ರಹ್ಮವೇ

ಬುದ್ಧ್ಯಾರೂಢಂ ಸದಾ ಸರ್ವಂ ದೃಶ್ಯತೇ ಯತ್ರ ತತ್ರ ವಾ ।
ಮಯಾ ತಸ್ಮಾತ್ ಪರಂ ಬ್ರಹ್ಮ ಸರ್ವಜ್ಞಶ್ಚಾಸ್ಮಿ ಸರ್ವಗಃ ॥ ೧ ॥
ಯಥಾತ್ಮಬುದ್ಧಿಚಾರಾಣಾಂ ಸಾಕ್ಷೀ ತದ್ವತ್ ಪರೇಷ್ವಪಿ ।
ನೈವಾಪೋಢುಂ ನ ವಾದಾತುಂ ಶಕ್ಯಸ್ತಸ್ಮಾತ್ ಪರೋ ಹ್ಯಹಮ್ ॥೨॥

೧–೨. ನನಗೆ ಎಲ್ಲವೂ, (ಅದು)ಎಲ್ಲಿಯೇ ಇರಲಿ, ಬುದ್ಧಿಗೆ ಹತ್ತಿಕೊಂಡೇ ಯಾವಾಗಲೂ ಕಾಣಿಸುತ್ತಿರುತ್ತದೆ.[2] ಆದ್ದರಿಂದ ನಾನು ಪರಬ್ರಹ್ಮವೂ ಸರ್ವಜ್ಞನೂ ಸರ್ವಗತನೂ ಆಗಿರುತ್ತೇನೆ. ಹೇಗೆ ನನ್ನ ಬುದ್ಧಿವೃತ್ತಿಗಳಿಗೆ ಸಾಕ್ಷಿಯಾಗಿರುವೆನೋ ಹಾಗೆಯೇ ಮತ್ತೊಬ್ಬರಲ್ಲಿಯೂ (ಸಾಕ್ಷಿಯಾಗಿರುವೆನು).[3] ತೆಗೆದುಹಾಕುವದಕ್ಕಾಗಲಿ ತೆಗೆದುಕೊಳ್ಳುವದಕ್ಕಾಗಲಿ (ನಾನು)ಶಕ್ಯನಲ್ಲ.[4] ಆದ್ದರಿಂದ ನಾನು ಪರಮಾತ್ಮನೇ.

ಆತ್ಮನಿಗೂ ಅಂತಃಕರಣಕ್ಕೂ ತಾರತಮ್ಯ

ವಿಕಾರಿತ್ವಮಶುದ್ಧತ್ವಂ ಭೌತಿಕತ್ವಂ ನ ಚಾತ್ಮನಃ ।
ಅಶೇಷಬುದ್ಧಿಸಾಕ್ಷಿತ್ವಾದ್ಬುದ್ಧಿವಚ್ಚಾಲ್ಪವೇದನಾ ॥ ೩ ॥

೩. ಆತ್ಮನಿಗೆ (ಬುದ್ಧಿಗೆ ಇರುವಂತೆ) ವಿಕಾರಿತ್ವವೂ ಅಶುದ್ಧತ್ವವೂ ಭೌತಿಕತ್ವವೂ ಇರುವದಿಲ್ಲ.[4] (ಆತ್ಮನು) ಎಲ್ಲಾ ಬುದ್ಧಿಗಳಿಗೂ ಸಾಕ್ಷಿಯಾಗಿ

---

1. 'ಬುದ್ಧ್ಯಾರೂಢಪ್ರಕರಣ' ಎಂದು ವ್ಯಾಖ್ಯಾನದಲ್ಲಿ ಹೆಸರು ಕೊಟ್ಟಿದೆ.

2. ಯಾವ ವಸ್ತುವಾದರೂ ಯಾವ ಪ್ರಮಾಣದಿಂದ ತಿಳಿದುಬಂದರೂ ಅಂತಃಕರಣದ ಮೂಲಕವೇ ತಿಳಿಯಬೇಕು; ಅದು ಚೈತನ್ಯಕ್ಕೆ ಸಂಬಂಧಪಟ್ಟೇ ತಿಳಿಯಬೇಕು.

3. ಒಂದೊಂದು ಬುದ್ಧಿಗೆ ಒಬ್ಬೊಬ್ಬ ಸಾಕ್ಷಿಯಲ್ಲ; ಎಲ್ಲಾ ಬುದ್ಧಿವೃತ್ತಿಗಳನ್ನೂ ಬೆಳಗುವವನು ಆತ್ಮನೊಬ್ಬನೇ.

4. ಅಂತಃಕರಣವು ವಿಷಯವನ್ನು ಬೆಳಗುವದಕ್ಕೆ ವಿಷಯದ ಆಕಾರವಾಗಿ ಮಾರ್ಪಡಬೇಕು, ವಿಷಯದ ಅನುಭವದಿಂದ ರಾಗಾದಿವಾಸನೆಗಳನ್ನು ಪಡೆಯಬೇಕು, ಅದು ಭೌತಿಕವಾದ್ದೆಂದೂ ಶ್ರುತಿಯಲ್ಲಿ ಹೇಳಿದೆ. ಆತ್ಮನಿಗೆ ಈ ದೋಷಗಳಿಲ್ಲ.

ರುವದರಿಂದ [1] ಬುದ್ಧಿಯಂತೆ ಅಲ್ಪವನ್ನೇ ತಿಳಿಯುವದೆಂಬುದೂ (ಅವನಿಗೆ) ಇಲ್ಲ.[2]

ಆತ್ಮನ ಸರ್ವಜ್ಞತೆಗೆ ದೃಷ್ಟಾಂತ

ಮಣೌ ಪ್ರಕಾಶ್ಯತೇ ಯದ್ವದ್ರಕ್ತಾದ್ಯಾಕಾರತಾತಪೇ।
ಮಯಿ ಸಂದೃಶ್ಯತೇ ಸರ್ವಮಾತಪೇನೇವ ತನ್ಮಯಾ ॥ ೪ ॥

ಬುದ್ಧೌ[3]—

೪. ಬಿಸಿಲಿನ (ಸನ್ನಿಧಿ)ಯಲ್ಲಿ ಹೇಗೆ (ಸ್ಫಟಿಕ)ಮಣಿಯಲ್ಲಿ ಕೆಂಪು ಮುಂತಾದ ಆಕಾರವು ಕಾಣಬರುವದೋ[3] ಹಾಗೆ ನನ್ನ (ಸನ್ನಿಧಿ)ಯಲ್ಲಿರುವ ಬುದ್ಧಿಯಲ್ಲಿ ಎಲ್ಲವೂ ಕಾಣಿಸುತ್ತದೆ. ಆದ್ದರಿಂದ ಬಿಸಿಲಿನಿಂದ (ಎಲ್ಲವೂ ಹೊಳೆಯುವ ಹಾಗೆ ಎಲ್ಲವೂ ನನ್ನಿಂದಲೇ ಹೊಳೆಯುತ್ತದೆ)[4].

ಆತ್ಮನು ಪರಮಾರ್ಥವಾಗಿ ಅದ್ವಿತೀಯಬ್ರಹ್ಮವೇ

—[5] **ದೃಶ್ಯಂ ಭವೇದ್ಬುದ್ಧೌ ಸತ್ಯಾಂ ನಾಸ್ತಿ ವಿಪರ್ಯಯೋ।**
ದೃಷ್ಟಾ ಯಸ್ಮಾತ್ ಸದಾ ದೃಷ್ಟಾ ತಸ್ಮಾದ್ದ್ವೈತಂ ನ ವಿದ್ಯತೇ ॥ ೫ ॥

೫. ಬುದ್ಧಿಯು ಇದ್ದರೆ ದೃಶ್ಯವಿರುವದು, ಹಾಗಿಲ್ಲದಿದ್ದರೆ (ಅದೂ) ಇರುವದಿಲ್ಲ. ದೃಷ್ಟೃವಾದ ಆತ್ಮನು ಮಾತ್ರ ಯಾವಾಗಲೂ ದೃಷ್ಟೃವೇ ಆಗಿರುತ್ತಾನೆ. ಆದ್ದರಿಂದ ದ್ವೈತವು ಇರುವದಿಲ್ಲ[6].

---

1. ಅಂತಃಕರಣವು ವಿಷಯದ ಆಕಾರವನ್ನು ಹೊಂದಿಯೇ ಅರಿಯಬೇಕಾಗಿರುವದರಿಂದ ಅಷ್ಟಷ್ಟನ್ನೇ ಅರಿಯಬೇಕಾಗಿರುವದು. ಆದರೆ ಸಾಕ್ಷಿಯು ಇದ್ದಂತೆಯೇ ಎಲ್ಲವನ್ನೂ ಬೆಳಗುವದರಿಂದ ಸರ್ವಜ್ಞನು.

2. ಈ ಹೇತುವು ಇಲ್ಲಿ ಹೇಳಿರುವ ಸಾಧ್ಯಗಳೆಲ್ಲಕ್ಕೂ ಹೊಂದುತ್ತದೆ; ಏಕೆಂದರೆ ಸಾಕ್ಷಿಗೆ ಸಾಕ್ಷ್ಯದ ಧರ್ಮಗಳು ಯಾವವೂ ಅಂಟುವದಿಲ್ಲ. ಅಂತಃಕರಣವು ಒಂದೊಂದು ವಿಷಯವನ್ನೇ ವೃತ್ತಿಯ ಮೂಲಕ ಅರಿಯಬೇಕು; ಆತ್ಮನಿಗೆ ಈ ಪರಿಚ್ಛೇದವಿಲ್ಲ.

3. ಸ್ಫಟಿಕದಲ್ಲಿ ಪತ್ತಿರವಿರುವ ದಾಸಿವಾಳದ ಹೂವೇ ಮುಂತಾದವುಗಳ ಕೆಂಪು ಮುಂತಾದ ಬಣ್ಣವು ಕಾಣುತ್ತದೆ; ಆದರೆ ಸ್ಫಟಿಕವನ್ನೂ ಹೂವನ್ನೂ ಬೆಳಗುವ ಬಿಸಿಲು ಇರುವಾಗಲೇ ಹಾಗೆ ಆದು ಕಾಣುತ್ತದೆ.

4. ವಿಷಯಗಳಿಂದ ಅಂತಃಕರಣದಲ್ಲಿ ಆಯಾ ಆಕಾರದ ವೃತ್ತಿಗಳುಂಟಾಗುವದು. ಅಂತಃಕರಣವನ್ನೂ ವಿಷಯಗಳನ್ನೂ ಬೆಳಗುವ ಆತ್ಮಚೈತನ್ಯದ ಸನ್ನಿಧಿಯಲ್ಲಿಯೇ.

5. ಈ ಶ್ಲೋಕದ ಮೊದಲಿನಲ್ಲಿರುವ 'ಬುದ್ಧೌ' ಎಂಬ ಮಾತು ಹಿಂದಿನ ಶ್ಲೋಕಕ್ಕೆ ಅನ್ವಿತವಾಗಿದೆ.

6. ಅಂತಃಕರಣವೂ ವಿಷಯಗಳೂ ಜೊತೆಯಲ್ಲಿಯೇ ಕಾಣುವವು, ಜೊತೆಯಲ್ಲಿಯೇ ಸುಷುಪ್ತ್ಯಾದಿಗಳಲ್ಲಿ ಮರೆಯಾಗುವವು. ಸಾಕ್ಷಿಯಾದ ಆತ್ಮನು ದ್ವೈತ ವಿರುವಾಗಲೂ ಇಲ್ಲದಾಗಲೂ ಇದ್ದೇ ಇರುತ್ತಾನೆ. ಆದ್ದರಿಂದ ನಿಜವಾದ ಇರವು ಆತ್ಮನಿಗೆ ಮಾತ್ರ ಇರುತ್ತದೆ; ದ್ವೈತಕ್ಕೆ ಸ್ವತಂತ್ರವಾದ ಇರವು ಇಲ್ಲ.

ಅವಿವೇಕಾತ್ ಪರಾಭಾವಂ ಯಥಾ ಬುದ್ಧಿರವೈತ್ ತಥಾ।
ವಿವೇಕಾತ್ತು ಪರಾದನ್ಯಃ ಸ್ವಯಂ ಚಾಪಿ ನ ವಿದ್ಯತೇ ॥ ೬ ॥

೬. ಹೇಗೆ ಬುದ್ಧಿಯು ಅವಿವೇಕದಿಂದ ಪರಮಾತ್ಮನು ಇಲ್ಲವೆಂದು ತಿಳಿದುಕೊಂಡಿತ್ತೋ ಅದರಂತೆ ವಿವೇಕವುಂಟಾದ ಮೇಲೆ ಪರಮಾತ್ಮನಿಗಿಂತ ಬೇರೆಯಾಗಿ ಮತ್ತೆ ಯಾರೂ ಇರುವದಿಲ್ಲ, ತಾನೂ ಇರುವದಿಲ್ಲ[1].

—·—o—·—

ಬುದ್ಧಿಸಾಕ್ಷಿಪ್ರಕರಣದ ಸಾರ

೧-೨. ಎಲ್ಲಿ ಏನಿದ್ದರೂ ಅಂತಃಕರಣದ ವೃತ್ತಿಯ ಮೂಲಕ ಚೈತನ್ಯರೂಪನಾದ ಆತ್ಮನಿಗೆ ತಿಳಿಯುತ್ತದೆ. ಸಾಕ್ಷಿಯೇ ನಮ್ಮ ಸ್ವರೂಪವು; ಅದಕ್ಕೆ ಪರಿಚ್ಛೇದವಿಲ್ಲದಿರುವದರಿಂದಲೂ ಸಾಕ್ಷಿಗಳು ಅನೇಕನೆಂಬುದು ಅನುಭವವಿರುದ್ಧವಾಗಿರುವದರಿಂದಲೂ ತೆಗೆದುಕೊಳ್ಳುವದಕ್ಕಾಗಲಿ ಬಿಡುವದಕ್ಕಾಗಲಿ ಬರದೆ ಇರುವ ಈ ಸಾಕ್ಷಿಚೈತನ್ಯವೇ ಸರ್ವಜ್ಞವಾದ ಬ್ರಹ್ಮವು.

೩-೪. ಅಂತಃಕರಣಕ್ಕೂ ಸಾಕ್ಷಿಯಾಗಿರುವ ಚೈತನ್ಯಕ್ಕೂ ತಾರತಮ್ಯವಿದೆ. ಅಂತಃಕರಣವು ವೃತ್ತಿಗಳ ರೂಪವನ್ನು ಪಡೆಯುತ್ತಿರುತ್ತದೆ, ವಿಷಯಗಳಿಂದ ವಾಸಿತವಾಗುತ್ತಿರುತ್ತದೆ, ಭೂತಗಳ ಕಾರ್ಯವಾಗಿರುತ್ತದೆ, ವಿಷಯಗಳನ್ನು ಒಂದೊಂದಾಗಿ ಅರಿಯುತ್ತಿರುತ್ತದೆ. ಸಾಕ್ಷಿಚೈತನ್ಯವು ನಿರ್ವಿಕಾರವು, ಸ್ವಚ್ಛವು, ಅಭೌತಿಕವು, ಎಲ್ಲವನ್ನೂ ಒಂದೇ ಕಾಲದಲ್ಲಿ ಅರಿಯತಕ್ಕದ್ದು. ಸೂರ್ಯನ ಬೆಳಕಿನಿಂದ ಕಾಣುವ ಸ್ಫಟಿಕವೂ ಅದರಲ್ಲಿ ಉಪಾಧಿಗಳಿಂದ ತೋರುವ ಕೆಂಪು ಮುಂತಾದ ಬಣ್ಣಗಳೂ ಆ ಬೆಳಕಿಗೆ ಸೇರದೆ ಇರುವಂತೆ ಸಾಕ್ಷಿಚೈತನ್ಯದ ಬೆಳಕಿನಿಂದ ಕಾಣಬರುವ ವಿಷಯಗಳೂ ಮನಸ್ಸಿನ ಮಾರ್ಪಾಡುಗಳೂ ಆ ಚೈತನ್ಯಕ್ಕೆ ಒಂದಿಷ್ಟೂ ತಟ್ಟುವದಿಲ್ಲ.

೫-೬. ಅಂತಃಕರಣವೂ ಬಾಹ್ಯದ್ವೈತವೂ ಜೊತೆಯಲ್ಲಿಯೇ ಇರುತ್ತವೆ, ಸುಷುಪ್ತ್ಯಾದಿಗಳಲ್ಲಿ ಜೊತೆಯಲ್ಲಿಯೇ ಕಾಣದೆಹೋಗುತ್ತವೆ. ಆತ್ಮನು ಯಾವಾಗಲೂ ಇದ್ದಂತೆ ಇರುತ್ತಾನೆ. ದ್ವೈತವು ತೋರುವದೂ ತೋರದಿರುವದೂ ಅಂತಃಕರಣಧರ್ಮಗಳೇ ಹೊರತು ಅದರಿಂದ ಅದ್ವಿತೀಯನಾದ ಆತ್ಮನಲ್ಲಿ ಯಾವ ವಿಶೇಷವೂ ಆಗಿರುವದಿಲ್ಲ.

—·—·—o—·—·—

1. ತಾನೂ ಎಂದರೆ ಅಂತಃಕರಣವೂ ಇರುವದಿಲ್ಲ. ತಾನೂ ಇರುವದಿಲ್ಲ ಎಂಬ ವಿವೇಕವೂ ಅಂತಃಕರಣಕ್ಕೇ ಸೇರಿದ್ದು.

೮. ಚಿತಿಮತಿಸಂವಾದ[1]

ಆತ್ಮನು ನಿರ್ವಿಶೇಷನು

ಚಿತಿಸ್ವರೂಪಂ[2] ಸ್ವತ ಏವ ಮೇ ಮತೇ
ರಸಾದಿಯೋಗಸ್ತವ ಮೋಹಕಾರಿತಃ ।।
ಅತೋ ನ ಕಿಂಚಿತ್ ತವ ಚೇಷ್ಟಿತೇನ ಮೇ ||
ಫಲಂ ಭವೇತ್ ಸರ್ವವಿಶೇಷಹಾನತಃ ||೧||

೧. ಎಲೆ ಮನಸ್ಸೆ, ನನಗೆ ಚೈತನ್ಯಸ್ವರೂಪವು ತಾನಾಗಿಯೇ[3] ಇರತಕ್ಕದ್ದು; ಅನ್ನರಸಮಯಾದಿಗಳ[4] ಸಂಬಂಧವು ನಿನ್ನ ಭ್ರಾಂತಿಯಿಂದ ಆದದ್ದು. ಆದ್ದರಿಂದ ನಿನ್ನ ವ್ಯಾಪಾರದಿಂದ ನನಗೆ ಯಾವ ಪ್ರಯೋಜನವೂ ಆಗಬೇಕಾದದ್ದಿಲ್ಲ[5]; ಏಕೆಂದರೆ (ನಾನು) ಯಾವ ವಿಶೇಷವೂ ಇಲ್ಲದವನಾಗಿರುತ್ತೇನೆ.

ಆತ್ಮನು ನಿತ್ಯಮುಕ್ತಬ್ರಹ್ಮಸ್ವರೂಪನು

ವಿಮುಚ್ಯ ಮಾಯಾಮಯಕಾರ್ಯತಾಮಿಹ
ಪ್ರಶಾನ್ತಿಮಾಯೋಹ್ಯಸದೀಹಿತಾತ್ ಸದಾ ।
ಅಹಂ ಪರಂ ಬ್ರಹ್ಮ ಸದಾ ವಿಮುಕ್ತವತ್
ತಥಾಜನೋಽಕಂ ದ್ವಯವರ್ಜಿತಂ ಯತಃ ||೨||

---

1. 'ಮತಿವಿಲಾಪನ'ನೆಂದು ಒಂದು ವ್ಯಾಖ್ಯಾನದಲ್ಲಿ 'ಚಿತಿಸ್ವರೂಪ' ಎಂದು ನುತ್ತೊಂದರಲ್ಲಿ ಹೆಸರುಕೊಟ್ಟಿದೆ. ಉಪಸಂಹಾರದಲ್ಲಿ 'ಸಂವಾದ' ಎಂಬ ಹೆಸರನ್ನು ಆಚಾರ್ಯರು ಕೊಟ್ಟಿರುವದನ್ನು ಅನುಸರಿಸಿ ನಾವು 'ಚಿತಿಮತಿಸಂವಾದ'ವೆಂದು ಕರೆದಿವೇನೆ.

2. 'ಚಿತಿಸ್ವರೂಪೇ' ಎಂಬ ಮೈ॥ ಪಾಠಕ್ಕಿಂತ ಈ ಬೋ॥ ಆ॥ ಪಾಠವು ಮೇಲು

3. ಮತ್ತೊಂದು ಉಪಾಧಿಯಿಂದ ಬಂದದ್ದಲ್ಲ.

4. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ-ಇವುಗಳು ರಸಾದಿ ಎಂಬ ಪ್ರಯೋಗಕ್ಕೆ ಗಾ. ಕಾ. ೩-೧೧ ನೋಡಿ.

5. ಅನಾತ್ಮವಾದ ಅನ್ನಮಯಾದಿಗಳ ಸಂಬಂಧವು ಭ್ರಾಂತಿಕೃತವಾದದ್ದರಿಂದ ನಿಜವಾಗಿ ಹೋಗಬೇಕಾದದ್ದಿಲ್ಲ. ಭ್ರಾಂತಿಯೂ ಅಂತಃಕರಣಕ್ಕೆ ಸಂಬಂಧಪಟ್ಟದ್ದಾದ್ದರಿಂದ ಭ್ರಾಂತಿ, ಅಭ್ರಾಂತಿ -ಎಂಬ ವಿಶೇಷವೂ ಆತ್ಮನಿಗಿಲ್ಲ ಎಂದು ಭಾವ. ೭-೩ನ್ನು ನೋಡಿ,

ಸದಾ ಚ ಭೂತೇಷು ಸಮೋಽಸ್ಮಿ ಕೇವಲೋ
ಯಥಾ ಚ ಖಂ ಸರ್ವಗಮಕ್ಷರಂ ಶಿವಮ್ ।
ನಿರನ್ತರಂ ನಿಷ್ಕಲಮಕ್ರಿಯಂ ಪರಂ
ತತೋ ನ ಮೇಽಸ್ತೀಹ ಫಲಂ ತವೇಹಿತೈಃ ॥ ೩ ॥

೨-೩. ಮಾಯಾಮಯವಾದ ಕಾರ್ಯ(ಗಳನ್ನು ಸೃಷ್ಟಿಮಾಡುತ್ತಾ) ಯಾವಾಗಲೂ ನಿರರ್ಥಕವಾದ ವ್ಯಾಪಾರವನ್ನು ಮಾಡುತ್ತಿರುವದನ್ನು ಬಿಟ್ಟು ಇಲ್ಲಿ ಪ್ರಶಾಂತಿಯನ್ನು ಹೊಂದು. ನಾನು ಯಾವಾಗಲೂ ಮುಕ್ತವೂ ಜನ್ಮರಹಿತವೂ ಏಕವೂ ದ್ವೈತಶೂನ್ಯವೂ ಆಗಿರುವ ಬ್ರಹ್ಮವಾಗಿರುವದರಿಂದಲೂ ಯಾವಾಗಲೂ ಸರ್ವಪ್ರಾಣಿಗಳಲ್ಲಿಯೂ ಸಮವಾಗಿರುವ ಒಬ್ಬನೇ ಒಬ್ಬನಾಗಿ ಆಕಾಶದಂತೆ ಸರ್ವವ್ಯಾಪಿಯೂ ನಾಶರಹಿತವೂ ಮಂಗಲಕರವೂ ಯಾವ ವ್ಯವಧಾನವೂ ಇಲ್ಲದ, ಅವಯವಗಳಿಲ್ಲದ, ಯಾವ ಕ್ರಿಯೆಯೂ ಇಲ್ಲದ ಪರ(ಬ್ರಹ್ಮವೇ ಆಗಿರುವದರಿಂದಲೂ) ನಿನ್ನ ವ್ಯಾಪಾರಗಳಿಂದ ನನಗೆ ಆಗಬೇಕಾದ ಫಲವು (ಯಾವದೂ) ಇರುವದಿಲ್ಲ[1].

ಆತ್ಮನು ಅಸಂಗನು, ಅದ್ವಿತೀಯನು

ಅಹಂ ಮಮೈಕೋ ನ ತದನ್ಯದಿಷ್ಯತೇ
ತಥಾ ನ ಕಸ್ಯಾಪ್ಯಹಮಸ್ಮ್ಯಸಙ್ಗತಃ ।
ಅಸಙ್ಗರೂಪೋಽಹಮತೋ ನ ಮೇ ತ್ವಯಾ
ಕೃತೇನ ಕಾರ್ಯಂ ತವ ಚಾದ್ವಯತ್ವತಃ ॥ ೪ ॥

೪. ನಾನು ಒಬ್ಬನೇ, ನನಗೆ ಸೇರಿದ ಮತ್ತೊಂದು ಇಲ್ಲವೇ ಇಲ್ಲ; ಮತ್ತು ನಾನು ಮತ್ತೆ ಯಾವದೊಂದಕ್ಕೂ ಸೇರಿದವನಲ್ಲ. ಏಕೆಂದರೆ (ನಾನು) ಅಸಂಗನಾಗಿರುತ್ತೇನೆ. ನಾನು ಅಸಂಗರೂಪನಾಗಿರುವದರಿಂದ ನನಗೆ ನಿನ್ನ ಕೆಲಸದಿಂದ ಏನೂ ಆಗತಕ್ಕದ್ದಿರುವದಿಲ್ಲ, ನಿನಗೂ ಏನೂ ಆಗತಕ್ಕದ್ದಿರುವದಿಲ್ಲ[2]. ಏಕೆಂದರೆ (ನಾನು) ಅದ್ವಯನಾಗಿರುತ್ತೇನೆ.

---

1. ಮನಸ್ಸಿನ ವ್ಯಾಪಾರದಿಂದ ಆಗುವ ಕಾರ್ಯಗಳು ಎಲ್ಲವೂ ಅಸತ್ತು; ಆತ್ಮನು ಯಾವಾಗಲೂ ಜನ್ಮಾದಿವಿಕಾರರಹಿತವಾದ ನಿತ್ಯಮುಕ್ತವಾದ ಪರಮಾರ್ಥವಸ್ತು. ಮಾಯಿಕವಾದ ಮನೋವ್ಯಾಪಾರದ ಫಲವು ಕೂಟಸ್ಥವಾದ ಬ್ರಹ್ಮವಲ್ಲಿ ಎಂದಿಗೂ ಆಗಲಾರದು.

2. ಅಸಂಗನೂ ಅದ್ವಯನೂ ಆದ ಆತ್ಮನಿಗೆ ಮನೋವ್ಯಾಪಾರದಿಂದ ಯಾವ ಪ್ರಯೋಜನವೂ ಆಗುವಹಾಗಿಲ್ಲ; ಅಚೇತನವಾದ ಮನಸ್ಸಿಗಂತೂ ಯಾವ ಪ್ರಯೋಜನವೂ ಆಗಬೇಕಾದದ್ದಿಲ್ಲ.

ಆತ್ಮಜ್ಞಾನದಿಂದ ಧರ್ಮಾಧರ್ಮಗಳ ಕಟ್ಟು ಹೋಗುವದು

ಫಲೇ ಚ ಹೇತೌ ಚ ಜನೋ ವಿಷಕ್ತವಾ
ನಿತಿ ಪ್ರಚಿನ್ತ್ಯಾಹಮತೋ ವಿಮೋಕ್ಷಣೇ।
ಜನಸ್ಯ ಸಂವಾದಮಿಮಂ ಪ್ರಕ್ಲಿಪ್ತವಾನ್
ಸ್ವರೂಪತತ್ತ್ವಾರ್ಥವಿಬೋಧಕಾರಣಮ್ ॥ ೫ ॥

೫. ಫಲದಲ್ಲಿಯೂ ಹೇತುವಿನಲ್ಲಿಯೂ ಜನವು ಆಸಕ್ತವಾಗಿರುತ್ತದೆ[1] – ಎಂಬುದನ್ನು ಆಲೋಚಿಸಿ ಇದರಿಂದ ಜನರನ್ನು ಬಿಡುಗಡೆಮಾಡಿಸುವದಕ್ಕಾಗಿ ನಾನು ಸ್ವರೂಪದ ತತ್ತ್ವಾರ್ಥವನ್ನು ಸರಿಯಾಗಿ ಅರಿತುಕೊಳ್ಳುವದಕ್ಕೆ ಕಾರಣವಾಗಿರುವ ಈ ಸಂವಾದವನ್ನು ರಚಿಸಿರುತ್ತೇನೆ.

ಆತ್ಮಜ್ಞಾನದಿಂದ ಅವಿದ್ಯಾಕಾಮಗಳು ನಾಶವಾಗುವವು

ಸಂವಾದಮೇತಂ ಯದಿ ಚಿನ್ತಯೇನ್ನರೋ
ವಿಮುಚ್ಯತೇಽಜ್ಞಾನಮಹಾಭಯಾಗಮಾತ್ ।
ವಿಮುಕ್ತಕಾಮಶ್ಚ ತಥಾ ಜನಃ ಸದಾ
ಚರತ್ಯಶೋಕಃ ಸಮ ಆತ್ಮವಿತ್ ಸುಖೀ ॥ ೬ ॥

೬. ಮನುಷ್ಯನು ಈ ಸಂವಾದವನ್ನು (ಮನಸ್ಸಿನಲ್ಲಿ) ಚಿಂತಿಸಿಕೊಳ್ಳುತ್ತಿದ್ದರೆ ಅಜ್ಞಾನದಿಂದಾಗುವ ಹಿರಿಯ ಅಂಜಿಕೆಯ ಧಾಳಿಯಿಂದ ಬಿಡುಗುಡೆಯನ್ನು ಹೊಂದುತ್ತಾನೆ. (ಅಂಥ) ಮನುಷ್ಯನು ಕಾಮಗಳಿಂದ ಬಿಡುಗಡೆಯನ್ನು ಹೊಂದಿ ಯಾವಾಗಲೂ ಶೋಕವಿಲ್ಲದೆ ಸಮನಾಗಿರುವ ಆತ್ಮಜ್ಞಾನಿಯಾಗಿ ಸುಖದಿಂದ ಬಾಳುತ್ತಾನೆ.[2]

——o——

1. ಹೇತುವೆಂದರೆ ಧರ್ಮಾಧರ್ಮಗಳು, ಫಲವೆಂದರೆ ಶರೀರವು. ಇದನ್ನು ಮಾಡಿ ಈ ಫಲವನ್ನು ಅನುಭವಿಸಬೇಕು, ಅಥವಾ ತಪ್ಪಿಸಿಕೊಳ್ಳಬೇಕು – ಎಂದು ಕರ್ಮದಲ್ಲಿಯೇ ಮುಳುಗಿರುತ್ತಾರೆ.

2. ಅಜ್ಞಾನದಿಂದಲೇ ಕಾಮವೂ ಅಂಜಿಕೆಯೂ ಉಂಟಾಗುತ್ತವೆ; ಕಾಮವನ್ನು ನೆರವೇರಿಸಿಕೊಳ್ಳುವದಕ್ಕೂ ಅಂಜಿಕೆಯನ್ನು ತೊಲಗಿಸಿಕೊಳ್ಳುವದಕ್ಕೂ ಜನರು ಹವಣಿಸುತ್ತಿರುವರು. ಅಜ್ಞಾನವು ಜ್ಞಾನದಿಂದ ತೊಲಗಿದರೆ ಕಾಮವೂ ಅಂಜಿಕೆಯೂ ಕರ್ಮಗಳೂ ನಾಶವಾಗುವವು. ಅದೇ ಮುಕ್ತಿಯು.

ಚಿತಿಮತಿಸಂವಾದಪ್ರಕರಣದ ಸಾರ

೧. ಆತ್ಮನಿಗೆ ಶುದ್ಧಚೈತನ್ಯಸ್ವರೂಪವು ಸ್ವಾಭಾವಿಕವಾದದ್ದು; ಶರೀರಾದಿಗಳು ಮನಸ್ಸಿನ ಭ್ರಾಂತಿಯಿಂದ ಬಂದವುಗಳು. ಆದ್ದರಿಂದ "ನಾನು ನಿರ್ವಿಶೇಷಚಿನ್ಮಾತ್ರನು; ಮನೋವ್ಯಾಪಾರದಿಂದ ನನಗೆ ಆಗಬೇಕಾದದ್ದು ಏನೂ ಇರುವದಿಲ್ಲ" ಎಂದು ನಿಶ್ಚಯಿಸಬೇಕು.

೨-೩. ಮನಸ್ಸಿನ ವ್ಯಾಪಾರದಿಂದಾಗುವ ಸುಖದುಃಖಗಳು ಮಾಯಾಮಯವಾಗಿರುತ್ತವೆ. ಆದ್ದರಿಂದ ಮನಸ್ಸಿನ ವೃಥಾಯಾಸದಿಂದ ಆತ್ಮನಿಗೆ ಆಗಬೇಕಾದದ್ದು ಏನೂ ಇರುವದಿಲ್ಲ. ಆದಕಾರಣ "ನಾನು ನಿತ್ಯಮುಕ್ತನಾಗಿ ನಿರ್ವಿಕಾರನಾಗಿ ಅದ್ವಿತೀಯನಾಗಿ ಸರ್ವಭೂತಗಳಲ್ಲಿಯೂ ಸಮನಾಗಿರುವ ನುಂಗಲಕರವಾದ ನಿರಂತರ ನಿಷ್ಕಲ ನಿಷ್ಕ್ರಿಯ ಪರಬ್ರಹ್ಮವೇ. ಮನಸ್ಸಿನ ವ್ಯಾಪಾರದಿಂದ ನನ್ನಲ್ಲಿ ಯಾವ ಹೆಚ್ಚುಕಡಿಮೆಯೂ ಆಗುವಂತಿಲ್ಲ" ಎಂದು ಚಿಂತಿಸುತ್ತಿರಬೇಕು.

೪. ನಮ್ಮ ಆತ್ಮನು ಅಸಂಗನು ಅದ್ವಿತೀಯನೂ ಆಗಿರುತ್ತಾನೆ. ಅವನು ಮತ್ತೊಂದಕ್ಕಾಗಲಿ ಮತ್ತೊಂದು ಅವನಿಗಾಗಲಿ ಸಂಬಂಧಿಸಿಕೊಂಡಿರುವದಿಲ್ಲ. ಆದ್ದರಿಂದ ಆತ್ಮನಿಗೆ ಅಸತ್ಯವಾದ ಮನಸ್ಸಿನ ವ್ಯಾಪಾರದಿಂದ ಆಗಬೇಕಾದದ್ದು ಏನೂ ಇರುವದಿಲ್ಲ. ಅಚೇತನವಾದ ಮನಸ್ಸಿಗಂತೂ ಆಗಬೇಕಾದದ್ದೇ ಏನೂ ಇರುವದಿಲ್ಲ.

೫-೬. ಜನರು ತಾವು ಧರ್ಮಾಧರ್ಮಗಳನ್ನು ಮಾಡಿ ಅವುಗಳ ಫಲವನ್ನು ಶರೀರಾಂತರದಲ್ಲಿ ಅನುಭವಿಸುತ್ತೇವೆಂದು ನಂಬಿಕೊಂಡಿರುವರು. ಇದಕ್ಕೆ ಅಜ್ಞಾನವೇ ಕಾರಣವು. ಆತ್ಮಸ್ವರೂಪಯಾಥಾತ್ಮ್ಯವನ್ನು ಮನಗಂಡವರಿಗೆ ಅಜ್ಞಾನವೂ ಅವಿದ್ಯಾವಾಗುವ ಕಾಮವೂ ಅಂಜಿಕೆಯೂ ಧರ್ಮಾಧರ್ಮಗಳೂ ಸಂಪೂರ್ಣವಾಗಿ ಇಲ್ಲವಾಗುವವು. ಇದೇ ಮೋಕ್ಷವು.

——o——

೯. ಸೂಕ್ಷ್ಮತಾವ್ಯಾಪಿತಾಪ್ರಕರಣ

ಆತ್ಮನು ಪರಮಸೂಕ್ಷ್ಮನು, ಸರ್ವವ್ಯಾಪಿಯು

ಸೂಕ್ಷ್ಮತಾವ್ಯಾಪಿತೇ ಜ್ಞೇಯೇ ಗನ್ಧಾದೇರುತ್ತರೋತ್ತರಮ್ ।
ಪ್ರತ್ಯಗಾತ್ಮವಸಾನೇಷು ಪೂರ್ವಪೂರ್ವಪ್ರಹಾಣತಃ ॥ ೧ ॥

೧. ಗಂಧವೇ ಮುಂತಾದವುಗಳಲ್ಲಿ ಹಿಂದುಹಿಂದಿನ (ಗುಣವನ್ನು) ಬಿಡುವದರಿಂದ ಪ್ರತ್ಯಗಾತ್ಮನಲ್ಲಿ ಕೊನೆಗಾಣುವ (ಭೂತ)ಗಳಲ್ಲಿ ಮುಂದುಮುಂದಿನವುಗಳಲ್ಲಿ ಸೂಕ್ಷ್ಮತ್ವವನ್ನೂ ವ್ಯಾಪಿತ್ವವನ್ನೂ ಅರಿಯಬೇಕು.[1]

ಶಾರೀರಾ ಪೃಥವೀ ತಾವದ್ಯಾವದ್ಬಾಹ್ಯಾ ಸ್ಯಮಾಣತಃ ।
ಅಮ್ಬ್ವಾದೀನಿ ಚ ತತ್ತ್ವಾನಿ ತಾವಜ್ಜ್ಞೇಯಾನಿ ಕೃತ್ಸ್ನಶಃ ॥ ೨

೨. ಹೊರಗಿನ ಪೃಥ್ವಿಯು ಎಷ್ಟು ಪ್ರಮಾಣವುಳ್ಳದ್ದೋ ಶರೀರದಲ್ಲಿರುವ ಪೃಥ್ವಿಯೂ ಅಷ್ಟು ಪ್ರಮಾಣವುಳ್ಳದ್ದೇ.[2] (ಇದರಂತೆ) ಅಪ್ಪು ಮುಂತಾದ ತತ್ತ್ವಗಳೆಲ್ಲವೂ ಅಷ್ಟಷ್ಟು ಪ್ರಮಾಣದವುಗಳೇ ಎಂದು ಪೂರ್ಣವಾಗಿ ಅರಿಯಬೇಕು.

ವಾಯ್ವಾದೀನಾಂ ಯಥೋತ್ಪತ್ತೇಃ ಪೂರ್ವಂ ಖಂ ಸರ್ವಗಂ ತಥಾ ।
ಅಹಮೇಕಃ ಸದಾ ಸರ್ವಶ್ಚಿನ್ಮಾತ್ರಃ ಸರ್ವಗೋಽವ್ಯಯಃ ॥ ೩ ॥

---

1. ಬೃಹದಾರಣ್ಯಕವಾರ್ತಿಕ ೨-೪-೨೯ರಲ್ಲಿ ಈ ಶ್ಲೋಕವನ್ನು ಉದಾಹರಿಸಿರುವಲ್ಲಿ 'ಗನ್ಧಾದೇಃ' ಎಂಬುದರ ಬದಲು 'ಭೂಮ್ಯಾದೇಃ' ಎಂದು ಪಾಠವಿದೆ. ಆ ಪಾಠವಿಲ್ಲದಿದ್ದರೂ ಗಂಧಾದಿ ಎಂದರೆ ಪೃಥ್ವ್ಯಾದಿ ಎಂದೇ ಅರ್ಥ. ಪೃಥ್ವಿಗಿಂತ ಅಪ್ಪು ಸೂಕ್ಷ್ಮ, ಅಪ್ಪಿಗಿಂತ ತೇಜಸ್ಸು ಸೂಕ್ಷ್ಮ, ತೇಜಸ್ಸಿಗಿಂತ ವಾಯು ಸೂಕ್ಷ್ಮ, ವಾಯುವಿಗಿಂತ ಆಕಾಶವು ಸೂಕ್ಷ್ಮ; ಆತ್ಮನು ಎಲ್ಲಕ್ಕಿಂತಲೂ ಸೂಕ್ಷ್ಮ. ಪೃಥಿವ್ಯಾದಿಭೂತಗಳಲ್ಲಿ ಒಂದೊಂದು ಗುಣವು ಕಡಿಮೆ; ಆತ್ಮನು ನಿರ್ಗುಣನು. ಗುಣವು ಕಡಿಮೆಯಾದಂತೆಲ್ಲ ಸೂಕ್ಷ್ಮತ್ವವೂ ವ್ಯಾಪಿತ್ವವೂ ಹೆಚ್ಚುತ್ತದೆ.

2. ಆಧ್ಯಾತ್ಮಿಕವಾದ ಪೃಥಿವಿಯೂ ಬಾಹ್ಯಪೃಥಿವಿಯೂ ಸೇರಿ ಒಂದೇ ಪೃಥ್ವಿ. ಹೀಗೆಯೇ ಅಬಾದಿಗಳನ್ನು ತಿಳಿಯಬೇಕು. ಹೀಗೆ ತಿಳಿದುಕೊಂಡರೆ ಒಂದೊಂದು ಗುಣವನ್ನು ಬಿಟ್ಟಂತೆ ಮುಂದುಮುಂದಿನ ವಸ್ತುವು ಸೂಕ್ಷ್ಮವೂ ವ್ಯಾಪಿಯೂ ಆಗಿರುವದು. ಆದ್ದರಿಂದ ಆತ್ಮನು ಎಲ್ಲಕ್ಕಿಂತಲೂ ಸೂಕ್ಷ್ಮನೂ ವ್ಯಾಪಿಯೂ ಆಗಿರುತ್ತಾನೆಂದು ಸಿದ್ಧವಾಗುತ್ತದೆ.

೩. ವಾಯುವೇ ಮುಂತಾದವುಗಳು ಹುಟ್ಟುವದಕ್ಕಿಂತ ಮುಂಚೆ(ಯೂ) ಸರ್ವಗತವಾದ ಆಕಾಶ ಹೇಗೆ (ಇದ್ದುಕೊಂಡಿರುವದೋ)[1] ಹಾಗೆ ಸರ್ವನೂ ಚಿನ್ಮಾತ್ರನೂ ಸರ್ವಗತನೂ ಅವ್ಯಯನೂ ಆಗಿರುವ ನಾನು ಯಾವಾಗಲೂ (ಇರುವೆನು)[2]

ಆತ್ಮನು ಏಕನು, ಅಸಂಗನು

ಬ್ರಹ್ಮಾದ್ಯಾಃ ಸ್ಥಾವರಾನ್ತಾ ಯೇ ಪ್ರಾಣಿನೋ ಮಮ ಪೂಃ ಸ್ಮೃತಾಃ।
ಕಾಮಕ್ರೋಧಾದಯೋ ದೋಷಾ ಜಾಯೇರನ್ ಮೇ ಕುತೋಽನ್ಯತಃ॥

೪. ಬ್ರಹ್ಮನು ಮೊದಲಾಗಿ ಸ್ಥಾವರದವರೆಗಿನ ಪ್ರಾಣಿಗಳಿರುವವಲ್ಲ ಅವೆಲ್ಲವೂ ನನ್ನ ಪುರವಾಗಿರುವದೆಂದು ಸ್ಮೃತಿಯಿರುವದು.[3] (ಹೀಗಿರುವಲ್ಲಿ) ನನಗೆ ಮತ್ತೊಬ್ಬರಿಂದ ಕಾಮಕ್ರೋಧವೇ ಮುಂತಾದ ದೋಷಗಳು ಹೇಗೆ ಉಂಟಾಗುವವು ?[4]

ಭೂತದೋಷೈಃ ಸದಾಽಸ್ಪೃಷ್ಟಂ ಸರ್ವಭೂತಸ್ಥಮೀಶ್ವರಮ್ ।
ನೀಲಂ ವ್ಯೋಮವು ಯಥಾ ಬಾಲೋ ದುಷ್ಟಂ ಮಾಂ ವೀಕ್ಷತೇ ಜನಃ ॥

೫. ಆಕಾಶವು ನೀಲವಾಗಿದೆ ಎಂದು ಹೇಗೆ ಅವಿವೇಕಿಯು (ತಿಳಿಯುವನೋ ಹಾಗೆ)[5] ಎಂದೆಂದಿಗೂ ಭೂತಗಳ ದೋಷಗಳ ಸೋಂಕಿಲ್ಲದೆ ಸರ್ವ ಭೂತಗಳಲ್ಲಿರುವ ಈಶ್ವರನಾದ ನನ್ನನ್ನು ದೋಷಗಳಿಂದ ಕೂಡಿದವನೆಂದು ಜನರು ತಿಳಿಯುತ್ತಿರುವರು.[6]

---

1. ಆಕಾಶವೇ ವಾಯ್ವಾದಿಗಳ ರೂಪದಲ್ಲಿ ಕಾಣುತ್ತಿರುತ್ತದೆ; ವಾಯ್ವಾದಿಗಳು ಈಗಲೂ ಮುಟ್ಟುವ ಮುಂಚೆಯೂ ಆಕಾಶವೇ ಆಗಿರುತ್ತವೆ.

2. ಇದರಂತೆ ಎಲ್ಲವೂ ಆತ್ಮನೇ, ಆತ್ಮನಿಗಿಂತ ವ್ಯತಿರಿಕ್ತವಾಗಿ ಇಲ್ಲ. ಆತ್ಮನಲ್ಲಿಯೇ ಎಲ್ಲವೂ ಕಲ್ಪಿತವಾಗಿರುತ್ತದೆ. ಕಲ್ಪಿತವಾದ ಅನಾತ್ಮದ ಅಪೇಕ್ಷೆಯಿಂದಲೇ ಆತ್ಮನನ್ನು ಸರ್ವಗತನೆನ್ನುವದು.

3. ಅ. ಧ. ಸೂ. ೧-೪-೨೨-೪. ಪ್ರಾಣಿಗಳೆಲ್ಲರೂ ಪರಮಾತ್ಮನಿಗೆ ಪುರ ಎಂದರೆ ಎಲ್ಲಾ ದೇಹಗಳಲ್ಲಿಯೂ ಒಬ್ಬನೇ ಆತ್ಮನಿರುವನು ಎಂದರ್ಥ.

4. ಎರಡನೆಯ ಆತ್ಮನಿದ್ದರಲ್ಲವೆ, ಒಬ್ಬರಲ್ಲೊಬ್ಬರಿಗೆ ಪ್ರೀತಿ, ದ್ವೇಷ- ಮುಂತಾದವುಗಳು ಆಗುವದು? ಆದರೆ ಆತ್ಮನು ಒಬ್ಬನೇ; ಆದ್ದರಿಂದ ಕಾಮಾದಿದೋಷಗಳು ಇಲ್ಲವೇಇಲ್ಲ.

5. ನೀಲವಾಗಿ ತೋರುವಾಗಲೂ ಆಕಾಶವು ಯಾವ ಬಣ್ಣವೂ ಇಲ್ಲದೆ ಇರುವದು ಎಂಬುದೇ ಇಲ್ಲಿ ವಿವಕ್ಷಿತಾಂಶ.

6. ಭೂತಗಳಿಂದಾಗಿರುವ ಸ್ಥೂಲದೇಹಧರ್ಮಗಳಾಗಲಿ, ಪ್ರಾಣಮಯಾದಿಕೋಶಗಳ ಧರ್ಮಗಳಾಗಲಿ, ಆತ್ಮನಲ್ಲಿಲ್ಲದಿದ್ದರೂ ಅವನಲ್ಲಿ ಸಂಸಾರಿತ್ವದೋಷವನ್ನು ಮೂಢರೆ ಅಧ್ಯಾರೋಪಮಾಡಿರುತ್ತಾರೆ ಎಂದರ್ಥ.

ಮಚ್ಚೈತನ್ಯಾವಭಾಸ್ಯತ್ವಾತ್ ಸರ್ವಪ್ರಾಣಿಧಿಯಾಂ ಸದಾ ।
ಪೂರ್ವಮು ಪ್ರಾಣಿನಃ ಸರ್ವೇ ಸರ್ವಜ್ಞಸ್ಯ ವಿಸಾಹ್ಮನಃ ॥ ೬ ॥

೬. ಸರ್ವಪ್ರಾಣಿಗಳ ಬುದ್ಧಿಗಳೂ ಯಾವಾಗಲೂ ನನ್ನ ಚೈತನ್ಯದಿಂದಲೇ ಬೆಳಗುತ್ತಿರುವವರಿಂದ ಸರ್ವಜ್ಞನೂ ಪಾಪರಹಿತನೂ ಆಗಿರುವ[1] ನನಗೆ ಪುರ ವಾಗಿರುತ್ತವೆ.

ಆತ್ಮನು ಅದ್ವಿತೀಯನು

ಜನಿಮಜ್ಞಾನವಿಜ್ಞೇಯಂ ಸ್ವಪ್ನಜ್ಞಾನವದಿಷ್ಯತೇ ।
ನಿತ್ಯಂ ನಿರ್ವಿಷಯಂ ಜ್ಞಾನಂ ತಸ್ಮಾದ್ ದ್ವೈತಂ ನ ವಿದ್ಯತೇ ॥ ೭ ॥

೭. ಜ್ಞಾನದ ವಿಷಯವು ಜನ್ಮವುಳ್ಳದ್ದು. ಜ್ಞಾನವು ಸ್ವಪ್ನಜ್ಞಾನದಂತೆ ಯಾವಾಗಲೂ ನಿರ್ವಿಷಯವಾಗಿಯೇ ಇರುತ್ತದೆ.[2] ಆದ್ದರಿಂದ ದ್ವೈತವು ಇರುವದಿಲ್ಲ.[3]

ಜ್ಞಾತುಜ್ಞಾತಿರ್ಹಿ ನಿತ್ಯೋಕ್ತಾ ಸುಷುಪ್ತೇ ತ್ವನ್ಯಶೂನ್ಯತಃ ।
ಜಾಗ್ರಜ್ಜ್ಞಾತಿಸ್ತ್ವವಿದ್ಯಾತಸ್ತದ್ಗ್ರಾಹ್ಯಂ ಚಾಸದಿಷ್ಯತಾಮ್ ॥ ೮ ॥

೮. ಸುಷುಪ್ತಿಯಲ್ಲಿ ಮತ್ತೊಂದು (ಯಾವದೂ) ಇಲ್ಲದ್ದರಿಂದ ಅರಿಯು ವಾತನ ಅರಿವು ನಿತ್ಯವೇ ಎಂದು (ಶ್ರುತಿಯಲ್ಲಿ) ಉಕ್ತವಾಗಿರುತ್ತದೆಯಲ್ಲವೆ ?[4]

1. ಬುದ್ಧಿಸಾಕ್ಷಿಸ್ವರೂಪದ (೭-೧,೨,೩) ಶ್ಲೋಕಗಳಲ್ಲಿಯೂ ಟಿಪ್ಪಣಿಗಳಲ್ಲಿಯೂ ಬರೆದಿರುವದನ್ನು ನೋಡಿರಿ. ಸಾಕ್ಷಿಯು ಕೂಟಸ್ಥನಾಗಿರುವದರಿಂದ ಸರ್ವಜ್ಞನೂ ಬುದ್ಧ್ಯಾದಿ ಸಾಕ್ಷ್ಯದ ಧರ್ಮದ ಸೋಂಕಿಲ್ಲದವನೂ ಆಗಿರುತ್ತಾನೆ ಎಂದರ್ಥ.

2. ಇಲ್ಲಿ ಜ್ಞಾನವೆಂದರೆ ಆತ್ಮಚೈತನ್ಯವು. ಸ್ವಪ್ನಜ್ಞಾನದಂತೆ ಎಚ್ಚರದ ಜ್ಞಾನವೂ ನಿರ್ವಿಷಯನಾಗಿರಬೇಕು ಎಂಬುದು ವಿಜ್ಞಾನವಾದಿಗಳನ್ನನುಸರಿಸುವ ಅನುಮಾನವಲ್ಲ. ಇದು ಅನುಭವಕ್ಕೆ ಅನುಸಾರವಾದ ಹೇಳಿಕೆ. ಕಠ ೩-೧೫ ನೋಡಿ.

3. ಆತ್ಮಚೈತನ್ಯವ್ಯತಿರಿಕ್ತವಾದ ಅಂತಃಕರಣವೂ ವಿಷಯಗಳೂ ಎಲ್ಲವೂ ಬರಿಯ ತೋರಿಕೆ; ಆದ್ದರಿಂದ ತಮ್ಮ ರೂಪದಿಂದ ಅಸತ್ತು, ಪರಮಾರ್ಥವಲ್ಲ ಎಂದರ್ಥ. ವಿಜ್ಞಾನವೇ ವಿಷಯಾಕಾರವಾಗುತ್ತದೆ ಎಂಬ ಕ್ಷಣಿಕವಿಜ್ಞಾನವಾದವಿದಲ್ಲ.

4. ಬೃ. ೪-೩-೩೦ರಲ್ಲಿ ಹೇಳಿರುವದರ ಸಾರವಿದು. "ಅಲ್ಲಿ ಅರಿಯುವದಿಲ್ಲವಲ್ಲ, ಆಗ ಅರಿಯುವವನಾಗಿಯೇ ಅರಿಯುವದಿಲ್ಲ. ಅವನಿಗಿಂತ ಬೇರೆಯಾದ ಎರಡನೆಯದಿರುವದಿಲ್ಲ; ಹಾಗಿದ್ದರೆ ಅರಿಯಬಹುದಿತ್ತು" ಎಂಬುದು ವಾಕ್ಯದ ಪೂರ್ಣಾರ್ಥವು.

ಜಾಗ್ರದವಸ್ಥೆಯಲ್ಲಾಗುವ (ವಿಷಯ)ದರಿವು ಅವಿದ್ಯೆಯಿಂದಾದದ್ದು; ಆದ್ದರಿಂದ ಅದರ ವಿಷಯವೂ ಅಸತ್ತೆಂದು ಒಪ್ಪಬೇಕು.[1]

ರೂಪವತ್ತ್ವಾದ್ಯಸತ್ತ್ವನ್ನ ದೃಷ್ಟ್ಯಾದೇಃ ಕರ್ಮತಾ ಯಥಾ ।
ಏವಂ ವಿಜ್ಞಾನಕರ್ಮತ್ವಂ ಭೂಮ್ನೋ ನಾಸ್ತೀತಿ ಗಮ್ಯತೇ ॥ ೯ ॥

೯. ರೂಪವೇ ಮುಂತಾದವುಗಳಿಲ್ಲದ್ದರಿಂದ ಭೂ ಮ ರೂ ಪ ನಾ ದ (ಆತ್ಮನು)[2] ನೋಟವೇ ಮುಂತಾದದ್ದಕ್ಕೆ ವಿಷಯನೆಂಬುದು ಹೇಗೆ (ಸರಿಯಲ್ಲವೋ) ಹಾಗೆಯೇ ವಿಜ್ಞಾನಕ್ಕೂ ವಿಷಯನಲ್ಲ ಎಂದು ನಿಶ್ಚಯಿಸಬೇಕಾಗಿರುತ್ತದೆ.[3]

---

1. ಎಚ್ಚರದಲ್ಲಿ ಎರಡನೆಯದನ್ನು ಕಂಡರೂ ಅದು ಪರಮಾರ್ಥವಲ್ಲ; ಏಕೆಂದರೆ ಅಲ್ಲಿ ಆಗುವ ಅರಿವು ಕಾರಕಾಪೇಕ್ಷವಾಗಿರುವದರಿಂದ ಅವಿದ್ಯಕ. ಅಲ್ಲಿರುವ ವಿಶೇಷಜ್ಞಾನವೂ ವಿಷಯವೂ ಎರಡೂ ಕಣ್ಣು ಪರೆಯಾದವನಿಗೆ ಕಾಣುವ ಎರಡನೆಯ ಚಂದ್ರನಂತೆ ಹುಸಿತೋರಿಕೆಯೇ. ತೈ. ಭಾ. ೨–೮ (ಭಾ. ಭಾ. ೨೧೪) ನೋಡಿ.

2. ಭೂಮವು ಎಂದರೆ ಎಲ್ಲಕ್ಕೂ ದೊಡ್ಡದು; ಆತ್ಮನಿಗಿಂತ ಬೇರೆಯ ವಸ್ತು ಇಲ್ಲವೇ ಇಲ್ಲವಾದ್ದರಿಂದ ಆತ್ಮನು ಭೂಮವು, ಅವನೇ ಸರ್ವವು. ಛಾಂ. ೭–೨೪–೧.

3. ಛಾಂದೋಗ್ಯೋಪನಿಷತ್ತಿನಲ್ಲಿ ಭೂಮನನ್ನು ವರ್ಣಿಸುವಾಗ "ಎಲ್ಲಿ ಮತ್ತೊಂದನ್ನು ಕಾಣುವದಿಲ್ಲವೋ ಕೇಳುವದಿಲ್ಲವೋ ಅರಿಯುವದಿಲ್ಲವೋ ಅದೇ ಭೂಮವು" ಎಂದು ಹೇಳಿದೆ. ಅಲ್ಲಿ ಮತ್ತೊಂದನ್ನು ಕಾಣುವದಿಲ್ಲ ಎಂದರೆ ತನ್ನನ್ನು ಕಾಣುತ್ತಾನೆ, ಮತ್ತೊಂದನ್ನು ಕೇಳುವದಿಲ್ಲ ಎಂದರೆ ತನ್ನನ್ನು ಕೇಳುತ್ತಾನೆ ಎಂದೇನೂ ಅರ್ಥವಲ್ಲ; ಏಕೆಂದರೆ ಆತ್ಮ ಸ್ವರೂಪದಲ್ಲಿ ರೂಪವೂ ಇಲ್ಲ, ಶಬ್ದವೂ ಇಲ್ಲ. ಇದರಂತೆ ವಿಷಯತ್ವವೂ ಇಲ್ಲವಾದ್ದರಿಂದ ತನ್ನನ್ನು ಅರಿಯುತ್ತಾನೆ ಎಂಬ ಅಭಿಪ್ರಾಯವೂ ಇಲ್ಲ, ಆತ್ಮನು ಅದ್ವಿತೀಯನೆಂದು ಶ್ರುತಿಯ ಅಭಿಪ್ರಾಯ.

ಸೂಕ್ಷ್ಮತಾವ್ಯಾಪಿತಾಪ್ರಕರಣದ ಸಾರ

೧-೩. ಪೃಥ್ವಿಯೇ ಮುಂತಾದ ಭೂತಗಳು, ಅವು ಆಧ್ಯಾತ್ಮಿಕವಾಗಿರಲಿ ಆಧಿಭೌತಿಕವಾಗಿರಲಿ, ಒಂದಕ್ಕಿಂತ ಒಂದು ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಇರುತ್ತವೆ. ಏಕೆಂದರೆ ಇವುಗಳಲ್ಲಿ ಹಿಂದುಹಿಂದಿನ ಭೂತಕ್ಕಿಂತ ಮುಂದುಮುಂದಿನ ಭೂತದಲ್ಲಿ ಗುಣಗಳ ಸಂಖ್ಯೆಯು ಒಂದೊಂದು ಕಡಿಮೆಯಾಗಿರುತ್ತವೆ; ಇವು ಒಂದಕ್ಕೊಂದು ಕಾರಣವಾಗಿರುತ್ತವೆ. ಆತ್ಮನಲ್ಲಿ ಈ ಯಾವ ಗುಣಗಳೂ ಇಲ್ಲದಿರುವದರಿಂದಲೂ ಆಕಾಶಾದಿಗಳೆಲ್ಲಕ್ಕೂ ಕಾರಣನಾಗಿರುವದರಿಂದಲೂ ಅವನು ಎಲ್ಲಕ್ಕಿಂತಲೂ ಸೂಕ್ಷ್ಮನೂ ವ್ಯಾಪಕನೂ ಆಗಿರುತ್ತಾನೆ.

೪-೬. ಆತ್ಮನು ಬ್ರಹ್ಮಾದಿಸ್ತಂಬಪರ್ಯಂತವಾದ ಭೂತಗಳೆಲ್ಲೆಲ್ಲ ಇರುತ್ತಾನೆ. ಆವುಗಳಲ್ಲಿರುವ ಬುದ್ಧಿಗಳೆಲ್ಲಕ್ಕೂ ಸಾಕ್ಷಿಯಾಗಿದ್ದುಕೊಂಡು ತನ್ನ ಕೂಟಸ್ಥಚೈತನ್ಯದಿಂದ ಬೆಳಗುತ್ತಿರುತ್ತಾನೆ. ಆದ್ದರಿಂದ ಸಾಕ್ಷ್ಯವಾದ ಅವುಗಳ ದೋಷವು ಯಾವದೂ ಸಾಕ್ಷಿಯಾದ ಅವನಿಗೆ ಅಂಟುವದಿಲ್ಲ. ಆದರೂ ಅವನಲ್ಲಿ ಸಂಸಾರಿತ್ವವಿನೆಯೆಂದು ಮೂಢರು ತಿಳಿಯುತ್ತಿರುವರು. ಆಕಾಶದಲ್ಲಿ ತಲಮಲನತ್ವವನ್ನು ಆರೋಪಿಸುವಂತೆ ತಪ್ಪು ತಿಳಿವಳಿಕೆಯ ಫಲವಾಗಿದೆ.

೭-೮. ಕನಸಿನಲ್ಲಿ ಹೇಗೆ ಆತ್ಮನು ಒಬ್ಬನೇ ಇದ್ದರೂ ಹುಸಿಯಾದ ಅಂತಃಕರಣವೂ ಬಹಿಃಪ್ರಪಂಚವೂ ಕಾಣುತ್ತಿರುವವೋ ಹಾಗೆಯೇ ಎಚ್ಚರದಲ್ಲಿಯೂ ಆತ್ಮನಿಗೆ ತೋರುವನೆಂಬ ದ್ವೈತಪ್ರಪಂಚವೆಲ್ಲವೂ ಹುಸಿಯೇ. ಆತ್ಮನಿಗೆ ಈ ಎರಡವಸ್ಥೆಗಳಲ್ಲಿಯೂ ಆಗುತ್ತಿರುವ ಜ್ಞಾನವು ಎರಡನೆಯದನ್ನು ಬಯಸಿ ಆಗುತ್ತಿರುವದರಿಂದ ಅವಿದ್ಯೆಯೇ. ಆದರೆ ಆರಿಯುವ ಆತ್ಮನ ಚೈತನ್ಯರೂಪವಾದ ಅರಿವು ನಿತ್ಯವಾಗಿಯೇ ಇರುತ್ತದೆ. ಸುಷುಪ್ತಿಯಲ್ಲಿ ಎರಡನೆಯ ವಸ್ತು ವಿಲ್ಲದ್ದರಿಂದ ಆತ್ಮನು ಅರಿಯುವದಿಲ್ಲವೇ ಹೊರತು ಅರಿವಿಲ್ಲದ್ದರಿಂದಲ್ಲ ಎಂದು ಶ್ರುತಿ ಹೇಳುತ್ತದೆ. ಈ ಕಾರಣದಿಂದ ಆತ್ಮನು ಅದ್ವಿತೀಯನೆಂದು ನಿರ್ಣಯಿಸುತ್ತದೆ.

೯. ಆತ್ಮನು ತನ್ನನ್ನು ತಾನು ನೋಡುವದಿಲ್ಲ, ಕೇಳುವದಿಲ್ಲ, ಮೂಸುವದಿಲ್ಲ, ಮುಟ್ಟುವದಿಲ್ಲ, ಸವಿಯುವದಿಲ್ಲ; ಏಕೆಂದರೆ ಆತ್ಮನಲ್ಲಿ ರೂಪಾದಿಗಳಿರುವದಿಲ್ಲ. ಇದರಂತೆ ಯಾವ ಪರಿಚ್ಛೇದವೂ ಇಲ್ಲದ ಚೈತನ್ಯವೇ ಆತ್ಮಸ್ವರೂಪವಾಗಿರುವದರಿಂದ ಭೂಮುವೆನಿಸುವ ಆತನು ತನ್ನನ್ನು ಅರಿತುಕೊಳ್ಳುವದೂ ಇಲ್ಲ. ಹೀಗೆಂದು ನಿಶ್ಚಯಿಸುವದೇ ಆತ್ಮವಿಜ್ಞಾನವು.

—·-:0:-·—

೧೦. ಪರಮಾರ್ಥದರ್ಶನ

ಆತ್ಮನು ಅದ್ವಿತೀಯಚಿನ್ಮಾತ್ರನು

ದೃಶಿಸ್ವರೂಪಂ ಗಗನೋಪಮಂ ಪರಂ
ಸಕೃದ್ವಿಭಾತಂ ತ್ವಜಮೇಕಮಕ್ಷರಮ್ ।
ಅಲೇಪಕಂ ಸರ್ವಗತಂ ಯದದ್ವಯಂ
ತದೇವ ಚಾಹಂ ಸತತಂ ವಿಮುಕ್ತ ಓಮ್ ॥ ೧ ॥

೧. ದೃಗ್ರೂಪವಾಗಿಯೂ ಆಕಾಶದಂತೆ ಇರುವದಾಗಿಯೂ (ಎಲ್ಲಕ್ಕೂ) ಹೆಚ್ಚಿನದಾಗಿಯೂ ಯಾವಾಗಲೂ ಚೆನ್ನಾಗಿ ಹೊಳೆಯುತ್ತಿರುವದಾಗಿಯೂ ಜನ್ಮರಹಿತವಾಗಿಯೂ ಏಕವಾಗಿಯೂ ನಾಶರಹಿತವಾಗಿಯೂ (ದೋಷದ) ಸೋಂಕಿಲ್ಲದ್ದಾಗಿಯೂ ಸರ್ವಗತವಾಗಿಯೂ ಅದ್ವಯವಾಗಿಯೂ (ಇರುವ) ಯಾವ (ತತ್ತ್ವವುಂಟೋ) ಅದೇ ನಾನು; ಎಂದಿಗೂ ವಿಮುಕ್ತನು. ನಿಶ್ಚಯವು.

ದೃಶಿಸ್ತು ಶುದ್ಧೋಽಹಮವಿಕ್ರಿಯಾತ್ಮಕೋ
ನ ಮೇಽಸ್ತಿ ಕಶ್ಚಿದ್ವಿಷಯಃ ಸ್ವಭಾವತಃ ।
ಪುರಸ್ತಿರಶ್ಚೋರ್ಧ್ವಮಧಶ್ಚ ಸರ್ವತಃ
ಸುಪೂರ್ಣಭೂಮಾ[1] ತ್ವಜ ಆತ್ಮನಿ ಸ್ಥಿತಃ ॥ ೨ ॥

೨. ನಾನಾದರೆ ಯಾವ ವಿಕಾರವೂ ಇಲ್ಲದ ಸ್ವಭಾವದವನು, ಶುದ್ಧ ದೃಗ್ರೂಪನು. ಸ್ವಭಾವದಿಂದಲೇ ನನಗೆ ಯಾವದೊಂದು ವಿಷಯವೂ ಇರುವದಿಲ್ಲ. ಏಕೆಂದರೆ ಮುಂದೆ, ಅಡ್ಡಡ್ಡಲಾಗಿ, ಕೆಳಗೆ, ಮೇಲೆ, ಎಲ್ಲೆಲ್ಲಿಯೂ ತುಂಬಿರುವ ಭೂಮವೇ ಆಗಿರುತ್ತೇನೆ. ನನ್ನಲ್ಲಿ ನಾನಿರುವ ಅಜನು.[2]

ಅಜೋಽಮರಶ್ಚೈತ ತಥಾಜರೋಽಮೃತಃ
ಸ್ವಯಂಪ್ರಭಃ ಸರ್ವಗತೋಽಹಮದ್ವಯಃ ।
ನ ಕಾರಣಂ ಕಾರ್ಯಮತೀವ ನಿರ್ಮಲಃ
ಸದೈಕತೃಪ್ತಶ್ಚ ತತೋ ವಿಮುಕ್ತ ಓಮ್ ॥ ೩ ॥

---

1. 'ಸಂಪೂರ್ಣಭೂಮಾ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು; ಛಂದಸ್ಸಿಗೆ ಅನುಗುಣವಾಗಿದೆ.

2. ಇಲ್ಲಿರುವ ವಿಶೇಷಣಗಳಲ್ಲಿ ಪುನರುಕ್ತಿಯಿದ್ದರೂ ದೋಷವಿಲ್ಲ. ಅತ್ಯಂತ ನಿರ್ವಿಶೇಷವಾಗಿರುವ ತತ್ತ್ವವನ್ನು ಮತ್ತೆಮತ್ತೆ ನೆನಪಿಗೆ ತರುವದು ಅವಶ್ಯ.

೩. ನಾನು ಅಜನು, ಅಮರನು, ಮತ್ತು ಅಜರನು, ಅಮೃತನು ಸ್ವಯಂಪ್ರಕಾಶನು, ಸರ್ವಗತನು, ಅದ್ವಯನು, (ನನಗೆ) ಕಾರಣವಿಲ್ಲ, ಕಾರ್ಯವಿಲ್ಲ.[1] ಆದ್ದರಿಂದ ನಾನು ಯಾವಾಗಲೂ ತೃಪ್ತನಾಗಿರುವವನು, ವಿಮುಕ್ತನು, ನಿರ್ದ್ವಯವು.[2]

ಆತ್ಮನು ನಿತ್ಯನಿರವಸ್ಥನು

ಸುಷುಪ್ತಜಾಗ್ರತ್ಸ್ವಪತಶ್ಚ ದರ್ಶನಂ
ನ ಮೇಽಸ್ತಿ ಕಿಂಚಿತ್ ಸ್ವಮಿವೇಹ ಮೋಹನಮ್ |
ಸ್ವತಶ್ಚ ತೇಷಾಂ ಪರತೋಽಪ್ಯಸತ್ತ್ವತ–
ಸ್ತುರೀಯ ಏವಾಸ್ಮಿ ಸದಾ ದೃಗದ್ವಯಃ ||೪||

೪. ತನಸಿಪ್ರೆಯನ್ನು ಅನುಭವಿಸುವಾಗಲೂ ಎಚ್ಚೆತ್ತಿರುವಾಗಲೂ ಕನಸನ್ನು ಕಾಣುತ್ತಿರುವಾಗಲೂ ನನ್ನದೆಂಬುದು ಯಾವದೂ ಇರುವದಿಲ್ಲ. ಇಲ್ಲಿ ನನ್ನದೆಂಬಂತೆ ತೋರುತ್ತಿರುವದು ಭ್ರಾಂತಿಯು. ಅವು ತಮ್ಮ (ದೃಷ್ಟಿ)ಯಿಂದಲೂ ಮತ್ತೊಬ್ಬನಾದ ಆತ್ಮನ (ದೃಷ್ಟಿ)ಯಿಂದಲೂ ಅಸತ್ತೇ ಆಗಿರುವದರಿಂದ[3] ನಾನು ಯಾವಾಗಲೂ ದೃಗ್ರೂಪನಾದ ಅದ್ವಿತೀಯ ತುರೀಯನೇ ಆಗಿರುವೆನು.

ಶರೀರಬುದ್ಧೀನ್ದ್ರಿಯದುಃಖಸನ್ತತಿ–
ರ್ನ ಮೇ ನ ಚಾಹಂ ಮಮು ನಿರ್ವಿಕಾರತಃ |
ಅಸತ್ತ್ವಹೇತೋಶ್ಚ ತಥೈವ ಸನ್ತತೇ–
ರಸತ್ತ್ವಮಸ್ಯಾಃ ಸ್ವಪತೋ ಹಿ ದೃಶ್ಯವತ್ ||೫||

೫. ಶರೀರ, ಅಂತಃಕರಣ, ಇಂದ್ರಿಯಗಳು, ದುಃಖ– ಇವುಗಳ ಪ್ರವಾಹವು ನನಗಿಲ್ಲ, ನಾನೂ (ಅದಕ್ಕೆ ಸೇರಿದವ)ನಲ್ಲ. ಏಕೆಂದರೆ ನಾನು ಯಾವ ವಿಕಾರವೂ ಇಲ್ಲದವನಾಗಿರುತ್ತೇನೆ. ಮತ್ತು ಪ್ರವಾಹವು ಅಸತ್ತಾಗಿದೆ ಎಂಬ

---

1. ಏಕೆಂದರೆ ಕಾರ್ಯವು ಕಾರಣವಾಗಿರುವ ಆತ್ಮನಿಗಿಂತ ಸ್ವತಂತ್ರವಾಗಿ ಬೇರೆ ಇಲ್ಲ.

2. (ನಾಮರೂಪಾತೀತವಾದ) ಓಂಕಾರವು (ನಾನು)–– ಎಂದೂ ಇದನ್ನು ಕನ್ನಡಿಸಬಹುದು.

3. ಅವಸ್ಥೆಗಳು ಅವಸ್ಥಾರೂಪದಿಂದ ನಿಜವಾಗಿ ಇರುವದಿಲ್ಲ; ಏಕೆಂದರೆ ಹಗ್ಗದಲ್ಲಿ ಕಲ್ಪಿಸಿದ ಹಾವು, ನೀರಿನ ಕೋಡಿ, ಕೋಲು– ಇವುಗಳಂತೆ ಪರಸ್ಪರವ್ಯಭಿಚರಿತವಾಗಿರುತ್ತವೆ. ಆತ್ಮನ ದೃಷ್ಟಿಯಿಂದಲಂತೂ ಅವು ಇಲ್ಲವೇ ಇಲ್ಲ.

ಕಾರಣದಿಂದಲೂ[1] (ಹೀಗೆ). ಕನಸುಕಾಣುವವನಿಗೆ ಕಾಣುವದರಂತೆ ಅದಕ್ಕೂ ಅಸತ್ತ್ವವು (ಯುಕ್ತವು).[2]

ಆತ್ಮನು ನಿರ್ವಿಕಾರನು

ಇದಂ ತು ಸತ್ಯಂ ಮಮ ನಾಸ್ತಿ ವಿಕ್ರಿಯಾ
ವಿಕಾರಹೇತುರ್ನ ಹಿ ಮೇಽದ್ವಯತ್ವತಃ. |
ನ ಪುಣ್ಯಪಾಪೇ ನ ಚ ನೋಕ್ಷಬನ್ಧನೇ
ನ ಚಾಸ್ತಿ ವರ್ಣಾಶ್ರಮತಾಶರೀರತಃ ॥ ೬ ॥

೬. ನನಗೆ ವಿಕಾರವಿಲ್ಲ. ನಾನು ಅದ್ವಯನಾಗಿರುವದರಿಂದ ನನ್ನಲ್ಲಿ ವಿಕಾರವನ್ನುಂಟುಮಾಡುವ ಹೇತುವೂ ಇರುವದಿಲ್ಲ. ಪುಣ್ಯಪಾಪಗಳಿಲ್ಲ. ಮೋಕ್ಷ ಬಂಧಗಳೂ ಇರುವದಿಲ್ಲ, ವರ್ಣಾಶ್ರಮಗಳೂ ಇರುವದಿಲ್ಲ; ಏಕೆಂದರೆ (ನಾನು ಅಶರೀರನಾಗಿರುವೆನು.[3] ಇದೇ ಸತ್ಯವು.

ಆತ್ಮನಿಗೆ ಕರ್ಮವೂ ಇಲ್ಲ, ಕರ್ಮಫಲವೂ ಇಲ್ಲ.

ಅನಾದಿತೋ ನಿರ್ಗುಣತೋ ನ ಕರ್ಮ ಮೇ
ಫಲಂ ಚ ತಸ್ಮಾತ್[5] ಪರನೋಽಹಮದ್ವಯಃ[4] ।
ಯಥಾ ನಭಃ ಸರ್ವಗತಂ ನ ಲಿಪ್ಯತೇ
ತಥಾ ಹ್ಯಹಂ ದೇಹಗತೋಽಪಿ ಸೂಕ್ಷ್ಮತಃ ॥ ೭ ॥

೭. ಅನಾದಿಯಾಗಿರುವದರಿಂದಲೂ ನಿರ್ಗುಣನಾಗಿರುವದರಿಂಲೂ ನನಗೆ ಕರ್ಮವೂ ಅದರ ಫಲವೂ ಇರುವದಿಲ್ಲ.[6] ಆದ್ದರಿಂದ ನಾನು ಅದ್ವಿತೀಯನಾದ ಪರಮಾತ್ಮನು. ಸರ್ವಗತನಾಗಿದ್ದರೂ ಸೂಕ್ಷ್ಮವಾಗಿರುವದರಿಂದ ಆಕಾಶವು (ಮತ್ತೊಂದರ) ಅಂಟಿಲ್ಲದೆ ಇರುವದೋ ಹಾಗೆಯೇ ನಾನೂ ದೇಹದಲ್ಲಿದ್ದರೂ (ಅದರ ದೋಷದ ಅಂಟಿಲ್ಲದೆ ಇರುವೆನು.)[6]

---

1. ಶರೀರಾದಿಪ್ರಪಾಪವು ನಿಜವೆಂದರೂ ದೃಶ್ಯವಾಗಿರುವದರಿಂದ ದೃಗ್ರೂಪನಾದ ಆತ್ಮನಿಗಿಲ್ಲ; ಅವು ಅಸತ್ತೇ ಆವರೆ ಹೇಳುವದೇನು ?

2. ಅದು ಬರಿಯ ತೋರಿಕೆಯು. ಸುಷುಪ್ತಿಯೇ ಮುಂತಾದ್ವರಲ್ಲಿಲ್ಲನೇ ಇಲ್ಲ.

3. ಶರೀರವು ಆತ್ಮನಿಗೆ ಇವೆ ಎಂಬುದು ಮಿಥ್ಯಾಭಿಮಾನವು. ಕ. ೧–೨–೨೨.

4. ಗೀ. ೧೩–೩೧ರ ಅಭಿಪ್ರಾಯ. ಅನಾದಿಯಾಗಿರುವದಕ್ಕೆ ಹೊಸದಾಗಿ ವಿಕಾರವಾಗುವಂತಿಲ್ಲ. ನಿರ್ಗುಣವಾದದ್ದಕ್ಕೂ ವಿಕಾರವಿಲ್ಲ.

5. 'ಅವ್ಯಯಃ' ಎಂಬ ಪಾಠವೂ ಇರಬಹುದೆಂದು ತೋರುತ್ತದೆ. ಇದ್ದರೆ ಗೀತೆಗೆ ಅನುಗುಣವಾಗುವದು.

6. ಗೀ. ೧೩–೩೨ರ ಅಭಿಪ್ರಾಯ.

ಆತ್ಮನು ಪುರುಷೋತ್ತಮನು

ಸದಾ ಚ ಭೂತೇಷು ಸಮೋಽಹಮೀಶ್ವರಃ
ಕ್ಷರಾಕ್ಷರಾಭ್ಯಾಂ ಪರಮೋ ಹ್ಯಥೋತ್ತಮಃ ।
ಪರಾತ್ಮತತ್ತ್ವಶ್ಚ ತಥಾವ್ಯಯೋಽಪಿ ಸನ್
ವಿಪರ್ಯಯೇಣಾಭಿಮತಸ್ತ್ವವಿದ್ಯಯಾ ॥ ೮ ॥

೮. ನಾನು ಯಾವಾಗಲೂ ಎಲ್ಲಾ ಪ್ರಾಣಿಗಳಲ್ಲಿಯೂ ಸಮವಾಗಿಯೇ ಇರುವ ಈಶ್ವರನು.[1] ಮತ್ತು ಕ್ಷರ, ಅಕ್ಷರ– (ಇವೆರಡ)ಕ್ಕಿಂತಲೂ ಹೆಚ್ಚಿನ ಉತ್ತಮಪುರುಷನಾಗಿರುತ್ತೇನೆ. ಪರಮಾತ್ಮತತ್ತ್ವ(ಸ್ವರೂಪ)ನೂ ಅವ್ಯಯನೂ ಆಗಿರುವೆನಾದರೂ[2] ಅವಿದ್ಯೆಯಿಂದ (ಇದಕ್ಕೆ) ವಿಪರೀತವಾದ (ಸ್ವರೂಪ ವುಳ್ಳವನೆಂದು) ಎಣಿಸಲ್ಪಟ್ಟಿರುವೆನು.[3]

ಆತ್ಮನು ಅವಿದ್ಯಾಕಾಮಕರ್ಮರಹಿತನು

ಅವಿದ್ಯಯಾ ಭಾವನಯಾ ಚ ಕರ್ಮಭಿ-
ರ್ವಿವಿಕ್ತ ಆತ್ಮಾವ್ಯವಧಿಃ ಸುನಿರ್ಮಲಃ ।
ದೃಗಾದಿಶಕ್ತಿಪ್ರಚಿತೋಽಹಮುದ್ವಯಃ
ಸ್ಥಿತಃ ಸ್ವರೂಪೇ ಗಗನಂ ಯಥಾಮಲಮ್ ॥ ೯ ॥

೯. ನಾನು ಅವಿದ್ಯೆಯಿಂದಲೂ ಕಾಮದಿಂದಲೂ ಕರ್ಮಗಳಿಂದಲೂ ರಹಿತನಾಗಿ[4] ಯಾವ ನಡುವಣ ಮರೆಯೂ ಇಲ್ಲದವನಾಗಿ ಅತ್ಯಂತನಿರ್ಮಲನಾಗಿರುವ ಆತ್ಮನು. ದೃಷ್ಟಿಯೇ ಮುಂತಾದ ಶಕ್ತಿಗಳಿಂದ[5] ಬೆಳೆದುಕೊಂಡಿರು

---

1. ಗೀ. ೧೩–೨೭ರ ಅಭಿಪ್ರಾಯವಿದು. ಪರಮಾತ್ಮನು ಒಂಬೊಂದು ಪ್ರಾಣಿಯಲ್ಲಿಯೂ ಅವಕ್ಕೆ ತಕ್ಕಷ್ಟೇ ಪರಿಮಾಣದಿಂದ ಇರುತ್ತಾನೆಂದು ಭಾವಿಸಬಾರದು.

2. ಗೀ. ೧೫–೧೭,೧೮ ಈ ಶ್ಲೋಕಗಳ ಅಭಿಪ್ರಾಯವು; ವ್ಯಾಕೃತಾವ್ಯಾಕೃತಗಳಿಗಿಂತ ಭಿನ್ನನಾಗಿರುವದರಿಂದ ಪರಮಾತ್ಮಸ್ವರೂಪವೇ,

3. ಮಿಥ್ಯಾಜ್ಞಾನದಿಂದಲೇ ಆತ್ಮನು ನಿಜವಾಗಿರುವದಕ್ಕಿಂತ ಬೇರೆಯಾವ ರೂಪದಲ್ಲಿ ಕಾಣುತ್ತಿರುವನು.

4. ಅವಿದ್ಯೆಯಿಂದ ಬೇರೆಯಾಗಿ ತೋರುತ್ತಾನೆಂದದ್ದರಿಂದ ಅವಿದ್ಯೆಯು ಆತ್ಮನಲ್ಲಿ ನಿಜವಾಗಿರುತ್ತದೆ ಎಂದು ಯಾರಾದರೂ ಭಾವಿಸಬಹುದು; ಅದು ಸರಿಯಲ್ಲವೆಂದು ತಿಳಿಸುವದಕ್ಕೆ ಅವಿದ್ಯಾಕಾಮಗಳನ್ನು ಅಲ್ಲಗಳೆದಿದೆ. ಇವುಗಳನ್ನೂ ಕ್ಷೇತ್ರಧರ್ಮಗಳೆಂದು ಗೀತೆ ೧೩ರಲ್ಲಿ ಹೇಳಿದೆ.

5. ದೃಷ್ಟಿ, ಶ್ರುತಿ, ಮತಿ, ವಿಜ್ಞಾತಿ– ಮುಂತಾದ ಶಕ್ತಿವಿಶೇಷಗಳಿಂದ.

ವನಾಗಿ ಅದ್ವಯನಾಗಿ ನಿರ್ಮಲವಾದ ಗಗನದಂತೆ ಸ್ವರೂಪದಲ್ಲಿಯೇ ಇದ್ದು ಕೊಂಡಿರುವೆನು.

ಅಹಂ ಪರಂ ಬ್ರಹ್ಮ ವಿನಿಶ್ಚಯಾತ್ಮದೃಕ್
'ನ ಜಾಯತೇ ಭೂಯ' ಇತಿ ಶ್ರುತೇರ್ವಚಃ ।
ನ ಚೈವ ಬೀಜೇ ತ್ವಸತಿ ಪ್ರಜಾಯತೇ
ಫಲಂ ನ ಜನ್ಮಾಸ್ತಿ ತತೋಽಸ್ಯನೋಹತಾ ॥ ೧೦ ॥

೧೦. ನಾನು ಪರಬ್ರಹ್ಮವು. ಅತ್ಯಂತನಿಶ್ಚಯರೂಪವಾದ[1] ಆತ್ಮ ದರ್ಶನವುಳ್ಳವನು. ಮತ್ತೆ ಹುಟ್ಟುವದಿಲ್ಲ ಎಂದು ಶ್ರುತಿಯ ವಚನವಿದೆ.[2] ಬೀಜವಿಲ್ಲದಿದ್ದರೆ ಫಲವು ಹುಟ್ಟುವದಿಲ್ಲ.[3] ಆದ್ದರಿಂದ ಊಹೆಯೇ ಇಲ್ಲದ್ದರಿಂದ ಜನ್ಮವೂ ಇಲ್ಲ.[4]

ಆತ್ಮನು ನಿರ್ವಿಕಲ್ಪನು, ಅಕರ್ತೃ, ನಿಷ್ಪ್ರಪಂಚನು

ಮಮೇದಮಿತ್ಥಂ ನ ತವೇದಮಿದೃಶಂ[5]
ತಥಾಹಮೇವಂ ನ ಪರೋ ನ ವಾನ್ಯಥಾ ।
ವಿಮೂಢತೈವಾಸ್ಯ ಜನಸ್ಯ ಕಲ್ಪನಾ
ಸದಾ ಸನೋ ಬ್ರಹ್ಮಣಿ ಚಾದ್ವಯೇ ಶಿವೇ ॥ ೧೧ ॥

೧೧. 'ಇದು ನನ್ನದು, ಹೀಗಿರುತ್ತದೆ; ಇದು ನಿನ್ನದಲ್ಲ, ಹೀಗಿರುವದಿಲ್ಲ' ಎಂದೂ 'ನಾನು ಹೀಗಿರುವೆನು, ಮತ್ತೊಬ್ಬನು (ಹೀಗಿರುವದಿಲ್ಲ); (ನಾನು) ಬೇರೆ ರೀತಿಯಲ್ಲಿಲ್ಲವೇ ಇಲ್ಲ' ಎಂದೂ ಈ ಜನವು ಯಾವಾಗಲೂ ಸಮವಾಗಿರುವ ಅದ್ವಯವಾಗಿರುವ ಶಿವಸ್ವರೂಪವಾಗಿರುವ ಬ್ರಹ್ಮನಲ್ಲಿ ಕಲ್ಪಿಸುತ್ತಿರುವದು ವಿಶೇಷಮೂಢತನವೇ ಸರಿ.[6]

---

1. ಯಾವ ಸಂಶಯವೂ ಇಲ್ಲದ ಎಂದರ್ಥ. ಆತ್ಮಜ್ಞಾನವಾದಾಗ ಸಂಶಯಗಳು ಕತ್ತರಿಸಿಹೋಗುವವು.

2. ಕ. ೧-೩-೮ರ ಸೂಚನೆಯಿದು.

3. ಧರ್ಮಾಧರ್ಮಗಳು ಬೀಜವು; ಫಲವು ಶರೀರವು,

4. ಅಜ್ಞಾನವಿಲ್ಲದೆ ಕಾಮಕರ್ಮಗಳಿರುವದಿಲ್ಲ; ಅವಿಲ್ಲದಿದ್ದರೆ ಜನ್ಮವೂ ಇಲ್ಲ.

5. 'ಚ ತಥೇದಮಿದೃಶಂ' ಮೈ॥ ಪಾಠ; 'ನ ತವಾತ ಈದೃಂಶ' ಎಂಬ ಬೋಧ ನಿಧಿಯ ಪಾಠ- ಈ ಎರಡನ್ನು ಕೂಡಿಸಿ ಹೀಗೆ ಮಾರ್ಪಡಿಸಿಕೊಂಡಿದೆ.

6. ಒಂದೇ ಹಗ್ಗವನ್ನು ಹಾವು, ನೀರಿನಕೋಡಿ- ಎಂದು ಮುಂತಾಗಿ ಭ್ರಾಂತರು ಕಲ್ಪಿಸುವಂತೆ ಒಬ್ಬ ಪರಮಾತ್ಮನಲ್ಲಿಯೇ ವಿಚಿತ್ರವಾದ ದ್ವೈತವನ್ನು ಜನರು ಕಲ್ಪಿಸಿಕೊಂಡಿರುತ್ತಾರೆ.

ಯದದ್ವಯಂ ಜ್ಞಾನಮತೀವ ನಿರ್ಮಲಂ
ಮಹಾತ್ಮನಾಂ ತತ್ರ ನ ಶೋಕಮೋಹತಾ ।
ತಯೋರಭಾವೇ ನ ಹಿ ಕರ್ಮ ಜನ್ಮ ವಾ
ಭವೇದಯಂ ವೇದವಿದಾಂ ವಿನಿಶ್ಚಯಃ ॥ ೧೨ ॥

೧೨. ಮಹಾತ್ಮರ ಅತಿನಿರ್ಮಲವಾಗಿರುವ ಅದ್ವಿತೀಯಜ್ಞಾನವಿದೆಯಲ್ಲ, ಅದರಲ್ಲಿ ಶೋಕಮೋಹಗಳಿರುವದಿಲ್ಲ[1]. ಅವುಗಳು ಇಲ್ಲದಿದ್ದರೆ ಕರ್ಮವಾಗಲೆ ಜನ್ಮವಾಗಲಿ (ಉಂಟಾಗ)ಲಾರದು[2]. ಇದು ವೇದವನ್ನು ಬಲ್ಲವರ ನಿಶ್ಚಯವು.

ಸುಷುಪ್ತವಜ್ಜಾಗ್ರತಿ ಯೋ ನ ಪಶ್ಯತಿ
ದ್ವಯಂ ತು ಪಶ್ಯನ್ನಪಿ ಚಾದ್ವಯತ್ವತಃ ।
ತಥಾ ಚ ಕುರ್ವನ್ನಪಿ ನಿಷ್ಕ್ರಿಯಶ್ಚ ಯಃ
ಸ ಆತ್ಮವಿನ್ನಾನ್ಯ ಇತೀಹ ನಿಶ್ಚಯಃ ॥ ೧೩ ॥

೧೩. ಯಾವನು ಅದ್ವಯನಾಗಿರುವದರಿಂದ ಸುಷುಪ್ತಿಯಲ್ಲಿ ಹೇಗೋ ಹಾಗೆ ಎಚ್ಚರ(ದವಸ್ಥೆ)ಯಲ್ಲಿಯೂ ದ್ವೈತವನ್ನು ಕಾಣುತ್ತಿದ್ದರೂ (ನಿಜವಾಗಿ) ಕಾಣದೆ ಇರುವನೋ, ಮತ್ತು (ಕರ್ಮವನ್ನು) ಮಾಡುತ್ತಿದ್ದರೂ ನಿಷ್ಕ್ರಿಯನಾಗಿರುವನೋ ಅವನೇ ಆತ್ಮಜ್ಞಾನಿಯು[3], ಮತ್ತೊಬ್ಬನಲ್ಲ[4] ಎಂದು ಇಲ್ಲಿ ನಿಶ್ಚಯವು.

ಪರಮಾರ್ಥದರ್ಶನದ ಫಲ

ಇತೀದಮುಕ್ತಂ ಪರಮಾರ್ಥದರ್ಶನಂ
ಮಯಾ ಹಿ ವೇದಾನ್ತವಿನಿಶ್ಚಿತಂ ಪರಮ್ ।

---

1. ಏಕೆಂದರೆ ಶೋಕಮೋಹಗಳಿಗೆ ದ್ವೈತಜ್ಞಾನವು ಬೇಕು. ಅದ್ವಿತೀಯಾತ್ಮಜ್ಞಾನಿಗೆ ಅವು ಹೇಗೆ ಇದ್ದಾವು? ಈ. ಪ.

2. ಶೋಕಮೋಹಗಳಿಂದಲೇ ಕರ್ಮವನ್ನು ಮಾಡುವದು, ಕರ್ಮದಿಂದಲೇ ಫಲಾನುಭವಕ್ಕಾಗಿ ಮತ್ತೊಂದು ಜನ್ಮವನ್ನು ಪಡೆಯಬೇಕಾಗುವದು.

3. ಗಾಢನಿದ್ರೆಯಲ್ಲಿ ಎರಡನೆಯ ವಸ್ತುವಿನ ದರ್ಶನವಿಲ್ಲ, ಯಾವ ಕರ್ಮವೂ ಇರುವದಿಲ್ಲ; ಆದ್ದರಿಂದ ಅಲ್ಲಿ ಯಾವ ಸಂಸಾರದುಃಖವೂ ಇರುವದಿಲ್ಲ. ಇದು ಸ್ವಾಭಾವಿಕವಾಗಿ ಎಲ್ಲರ ಅನುಭವದಲ್ಲಿಯೂ ಇದೆ. ಇದರಂತೆ ತಾನು ಅದ್ವಿತೀಯನೆಂಬ ಜ್ಞಾನವುಂಟಾದವನು ಎಚ್ಚರದಲ್ಲಿ ಕಾಣುವ ದ್ವೈತವು ಅಸತ್ಯವೆಂದೂ ಮಾಡುವಂತೆ ಕಾಣುವ ಕರ್ಮವು ಅಕರ್ಮವೆಂದೂ ತಿಳಿಯುತ್ತಾನೆ.

4. ದ್ವೈತವು ಸತ್ಯವೆಂದೂ ತಾನು ಮಾಡುವ ಕರ್ಮವು ನಿಜವಾಗಿ ಫಲವನ್ನು ಕೊಡುವದೆಂದೂ ತಿಳಿದವನು ಆತ್ಮಜ್ಞಾನಿಯಲ್ಲ.

ವಿಮುಚ್ಯತೇಽಸ್ಮಿನ್ ಯದಿ ನಿಶ್ಚಿತೋ ಭವೇ-
ನ್ನ ಲಿಪ್ಯತೇ ವ್ಯೋಮವದೇವ ಕರ್ಮಭಿಃ ॥ ೧೪ ॥

೧೪. ಹೀಗೆ ಉಪನಿಷತ್ತುಗಳಲ್ಲಿ ಸಿದ್ಧವಾಗಿರುವ ಈ ಹೆಚ್ಚಿನ ಪರ ಮಾರ್ಥದರ್ಶನವು ನನ್ನಿಂದ ಹೇಳಲ್ಪಟ್ಟಿರುತ್ತದೆ. ಇದರಲ್ಲಿ ನಿಶ್ಚಯವನ್ನು ಹೊಂದಿದನಾದರೆ ವಿಮುಕ್ತನಾಗುತ್ತಾನೆ, ಆಕಾಶದಂತೆಯೇ ಕರ್ಮಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

——:o:——

ಪರಮಾರ್ಥದರ್ಶನಪ್ರಕರಣದ ಸಾರ

೧-೩. ಆತ್ಮಚೈತನ್ಯವು ಸ್ವಯಂಪ್ರಕಾಶವಾಗಿ ಆಕಾಶದಂತೆ ತನಗಿಂತ ಬೇರೆಯಾದ ಎರಡನೆಯ ವಸ್ತು ವಿಲ್ಲದೆ, ಜನ್ಮನಾಶಗಳಿಲ್ಲದ್ದಾಗಿ, ಸರ್ವಗತವಾಗಿ, ಮತ್ತೊಂದರ ಲೇಪ ವಿಲ್ಲದೆ ನಿರ್ವಿಕಾರವಾಗಿ ಎಲ್ಲೆಲ್ಲಿಯೂ ತಾನೇ ಆಗಿ ತನ್ನಲ್ಲಿ ತಾನು ಇದ್ದುಕೊಂಡಿರುವದು. ಅದು ಅಜವೂ ಅಮರವೂ ಅಮೃತವೂ ಕಾರ್ಯಕಾರಣವರ್ಜಿತವೂ ಆಗಿರುವ ನಿತ್ಯಶುದ್ಧ ಬುದ್ಧಮುಕ್ತಸ್ವಭಾವದ್ದಾಗಿರುತ್ತದೆ.

೪-೫. ಜಾಗ್ರದಾದಿಯಾವ ಅವಸ್ಥೆಗಳು ಒಂದನ್ನೊಂದು ಬಿಟ್ಟು ಹೋಗುತ್ತಿರುವದರಿಂದಲೇ ಅಸತ್ತು, ಪರಮಾರ್ಥವಾಗಿ ಆತ್ಮನೇ ಆಗಿರುವದರಿಂದಲೂ ಅಸತ್ತು. ಆವ್ದರಿಂದ ಚೈತನ್ಯವು ನಿತ್ಯನಿರವಸ್ಥವು. ನಿರ್ವಿಕಾರವಾದ ಅದಕ್ಕೆ ದೇಹೇಂದ್ರಿಯಾದಿಗಳ ಗೋಜು ಇಲ್ಲವೇ ಇಲ್ಲ ; ಅವು ಕನಸಿನ ತೋರಿಕೆಗಳಂತೆ ಅಸತ್ತಾಗಿರುವವು.

೬-೭. ಅದ್ವಿತೀಯನಾಗಿರುವದರಿಂದ ಆತ್ಮನು ನಿರ್ವಿಕಾರನು. ಅಶರೀರನಾಗಿರುವದರಿಂದ ವರ್ಣಾಶ್ರಮಗಳಾಗಲಿ ಪುಣ್ಯಪಾಪಗಳಾಗಲಿ ಬಂಧಮೋಕ್ಷಗಳಾಗಲಿ ಅವನಿಗೆ ಇಲ್ಲ. ಅನಾದಿಯೂ ನಿರ್ಗುಣನೂ ಸೂಕ್ಷ್ಮನೂ ಆಗಿರುವದರಿಂದ ದೇಹವಲ್ಲಿದ್ದರೂ ಆತ್ಮನು ಆಕಾಶದಂತೆ ನಿಷ್ಕ್ರಿಯನೂ ನಿರ್ದೇಹನೂ ಆಗಿರುತ್ತಾನೆ.

೮. ಆತ್ಮನು ಒಬ್ಬನೇ ಎಲ್ಲಾ ಭೂತಗಳಲ್ಲಿಯೂ ಸಮನಾಗಿರುತ್ತಾನೆ. ಕ್ಷರಾಕ್ಷರಗಳೆರಡನ್ನೂ ಮೀರಿರುವ ಅವ್ಯಯನಾದ ಪುರುಷೋತ್ತಮನೇ ಆಗಿದ್ದರೂ ಅವನಿಗೆಯಿಂದ ಬೇರೆಯಾಗಿ ತಿಳಿದುಕೊಂಡಿರುತ್ತಾರೆ.

೯-೧೦. ಆತ್ಮನು ಅವಿದ್ಯಾಕಾಮಕರ್ಮರಹಿತನು. ದೃಷ್ಟ್ಯಾದಿಗಳ ಶಕ್ತಿರೂಪವಾದ ಚೈತನ್ಯಸ್ವರೂಪನು, ನಿತ್ಯವಾಗಿ ಸ್ವರೂಪದಲ್ಲಿಯೇ ಇರುವವನು. ಆವ್ದರಿಂದ ಅಜನು.

೧೧-೧೪. ಆತ್ಮನು ಅದ್ವಿತೀಯನಾಗ್ತಿಯಾವಾಗಲೂ ಒಂದೇ ರೂಪದಲ್ಲಿರುತ್ತಿದ್ದರೂ ಜನರು ಅವನಲ್ಲಿ ಬಗೆಬಗೆಯಾದ ವಿಕಲ್ಪಗಳನ್ನು ಮಾಡಿಕೊಂಡಿರುವರು. ಅದ್ವಿತೀಯಜ್ಞಾನವುಂಟಾದವರಿಗೆ ಶೋಕಮೋಹಗಳಾಗಲಿ ಕರ್ಮವಾಗಲಿ ಜನ್ಮವಾಗಲಿ ಇರುವದಿಲ್ಲ. ಸರಿಯಾಗಿ ತಿಳಿದುಕೊಂಡಿರುವವರ ದೃಷ್ಟಿಯಲ್ಲಿ ಆತ್ಮನು ಸುಷುಪ್ತಿಯಲ್ಲಿರುವಂತೆ ಎಚ್ಚರವಲ್ಲಿಯೂ ನಿರ್ದ್ವಯನೂ ನಿಷ್ಕ್ರಿಯನೂ ಆಗಿರುತ್ತಾನೆ ; ಅಜ್ಞರಿಗೆ ಮಾತ್ರವೇ ಎಚ್ಚರವಲ್ಲಿರುವ ದ್ವೈತವೂ ಕರ್ಮವೂ ಸತ್ಯವಾಗಿರುತ್ತವೆ.

೧೪. ಈ ಪರಮಾರ್ಥದರ್ಶನವುಳ್ಳವರು ಕರ್ಮಶೇಷವಿಲ್ಲದೆ ಮುಕ್ತರಾಗುವರು.

೧೧. ಈಕ್ಷಿತೃತ್ವ

ಶುದ್ಧಚೈತನ್ಯರೂಪವು ಜೀವರಿಗೆ ಸ್ವತಃಸಿದ್ಧ

ಈಕ್ಷಿತೃತ್ವಂ ಸ್ವತಃಸಿದ್ಧಂ ಜನ್ತೂನಾಂ ಚ ತಥೋನ್ಯತಾ ।
ಅಜ್ಞಾನಾದಿತ್ಯತೋನ್ಯತ್ವಂ ಸದಸೀತಿ ನಿವರ್ತ್ಯತೇ ॥ ೧ ॥

೧. ನೋಡುವವರಾಗಿರುವದೆಂಬುದು ಜೀವರಿಗೆ ತಾನೇ ಸಿದ್ಧವಾಗಿರುತ್ತದೆ; ಅದಕ್ಕಿಂತ ಬೇರೆಯಾಗಿರುವದೆಂಬುದು ಅಜ್ಞಾನದಿಂದ. ಆದ್ದರಿಂದ ಹೀಗೆ ಬೇರೆಯಾಗಿರುವದನ್ನು 'ಸತ್ತೇ ಆಗಿರಲಿ'[1] (ಛಾಂ. ೬-೮-೭) ಎಂಬ (ವಾಕ್ಯದಿಂದ) ಅಲ್ಲಗಳೆದಿದೆ.

ಏತಾವದ್ಧ್ಯಮೃತತ್ವಂ ನ ಕಂಚಿದನ್ಯತ್ ಸಹಾಯಕಮ್ ।
ಜ್ಞಾನಸ್ಯೇತಿ ಬ್ರುವಚ್ಛಾಸ್ತ್ರಂ ಸಲಿಙ್ಗಂ ಕರ್ಮ ಬಾಧತೇ ॥ ೨ ॥

೨. ಇಷ್ಟೇ ಅಮೃತತ್ವವು[2], (ಅದಕ್ಕೆ) ಮತ್ತೊಂದು ಯಾವದೂ ಸಹಾಯಕವಲ್ಲ ಎಂದು ಶಾಸ್ತ್ರವು ಹೇಳುವದರಿಂದ ಲಿಂಗಸಹಿತವಾಗಿ[3] ಕರ್ಮವನ್ನು ಬಾಧಿಸುತ್ತದೆ.

ಜೀವನು ಚಿನ್ಮಾತ್ರನೆಂಬುದು ಹೇಗೆ?

ಸರ್ವೇಷಾಂ ಮನಸೋ ವೃತ್ತಮವಿಶೇಷೇಣ ಪಶ್ಯತಃ ।
ತಸ್ಯ ಮೇ ನಿರ್ವಿಕಾರಸ್ಯ ವಿಶೇಷಃ ಸ್ಯಾತ್ ಕಥಂಚನ ॥ ೩ ॥

---

1. ಸ ತ್ತೊಂದೇ ಇತ್ತು, ಅದು ಆಲೋಚಿಸಿ ನೋಡಿತು, ತೇಜಸ್ಸನ್ನು ಸೃಷ್ಟಿಮಾಡಿತು; ಅದು ಸತ್ಯ, ಅದೇ ಆತ್ಮನು, ನೀನೇ ಅದಾಗಿರುವೆ- ಎಂದು ಛಾಂದೋಗ್ಯದಲ್ಲಿ ಹೇಳಿರುವದು ಚಿನ್ಮಾತ್ರವಾಗಿರುವ ಪರಮಾತ್ಮನಿಗಿಂತ ಜೀವನು ಭಿನ್ನನಲ್ಲ ಎಂದು ತಿಳಿಸುವದಕ್ಕೆ.

2. ವಾಕ್ಯವನ್ನು ಕೇಳಿದ ಮೇಲೆ ಚೈತನ್ಯವಾಗುವದಿಲ್ಲ, ಚಿದ್ಭಿನ್ನತ್ವವು ನಿವೃತ್ತಿಯಾಗುತ್ತದೆ.

3. ಅಮೃತತ್ವಕ್ಕೆ ಸಾಧನವು. ಬೃ. ೪-೪-೨೬. ಈ ಜ್ಞಾನವೊಂದೇ ಅಮೃತತ್ವಕ್ಕೆ ಸಾಕು, ಮತ್ತೇನೂ ಬೇಡ -ಎಂದು ಕರ್ಮರಹಿತಳಾದ ಮೈತ್ರೇಯಿಗೆ ಯಾಜ್ಞವಲ್ಕ್ಯನು ಹೇಳಿರುತ್ತಾನೆ.

4. ಆಶ್ರಮಾಂತರಸಹಿತವಾಗಿ ಎಂದರ್ಥ. ಯಾಜ್ಞವಲ್ಕ್ಯನು ಜ್ಞಾನವೊಂದೇ ಸಾಕು ಎಂದು ಹೇಳಿ ಪರಮಹಂಸಪರಿವ್ರಾಜಕನಾದನು ಎಂದವ್ವರಿಂದ ಮಿಕ್ಕ ಆಶ್ರಮಕರ್ಮಗಳು ಮೋಕ್ಷಕ್ಕೆ ಸಾಧನವಲ್ಲವೆಂದಂತೆ ಆಯಿತು ಎಂದು ಭಾವ.

ಮನೋವೃತ್ತಂ ಮನಶ್ಚೈವ ಸ್ವಪ್ನವಜ್ಜಾಗ್ರತೀಕ್ಷಿತುಃ ।
ಸಂಪ್ರಸಾದೇ ದ್ವಯಾಸತ್ತ್ವಾಚ್ಚಿನ್ಮಾತ್ರಃ ಸರ್ವಗೋಽವ್ಯಯಃ ॥ ೪ ॥

೩-೪. ಎಲ್ಲರ ಮನಸ್ಸಿನ ವ್ಯಾಪಾರಗಳನ್ನೂ ಸಮಾನವಾಗಿ ನೋಡುತ್ತಿರುವ ನಿರ್ವಿಕಾರನಾದ ನನಗೆ ಹೇಗೆ ತಾನೆ ವಿಶೇಷವುಂಟಾದೀತು[1] ? ಕನಸಿನಲ್ಲಿ ಹೇಗೋ ಹಾಗೆ ಎಚ್ಚರದಲ್ಲಿಯೂ ಮನಸ್ಸಿನ ವ್ಯಾಪಾರಗಳನ್ನೂ ಮನಸ್ಸನ್ನೂ ನೋಡುತ್ತಿರುವ ನನಗೆ (ಹೇಗೆತಾನೆ ವಿಶೇಷವುಂಟಾದೀತು) ? ಸಂಪ್ರಸಾದದಲ್ಲಿ[2] ದ್ವೈತವಿಲ್ಲದಿರುವದರಿಂದ[3] (ನಾನು) ಚಿನ್ಮಾತ್ರನು, ಸರ್ವಗತನು, ಅವ್ಯಯನು[4].

ಪ್ರತ್ಯಕ್ಷಾದಿಗಳಿಂದ ತೋರುವ ಜೀವತ್ವವು ವ್ಯಾವಹಾರಿಕವು

ಸ್ವಪ್ನಃ ಸತ್ಯೋ ಯಥಾಬೋಧಾದ್ದೇಹಾತ್ಮತ್ವಂ ತಥೈವ ಚ ।
ಪ್ರತ್ಯಕ್ಷಾದೇಃ ಪ್ರಮಾಣತ್ವಂ ಜಾಗ್ರತ್ಸ್ಯಾದಾತ್ಮನೇದನಾತ್ ॥ ೫ ॥

೫. ಕನಸು ಹೇಗೆ ಎಚ್ಚರವಾಗುವವರೆಗೆ ಸತ್ಯವೋ ಮತ್ತು ದೇಹಾತ್ಮತ್ವವು ಹೇಗೆ (ದೇಹವ್ಯತಿರಿಕ್ತಾತ್ಮಜ್ಞಾನವಾಗುವವರೆಗೆ ಸತ್ಯವಾಗಿರುವದೋ) ಹಾಗೆಯೇ ಎಚ್ಚರದ ಪ್ರತ್ಯಕ್ಷವೇ ಮುಂತಾದವುಗಳು ಆತ್ಮಜ್ಞಾನವುಂಟಾಗುವವರೆಗೂ[5] ಪ್ರಮಾಣವಾಗಿರುವವು.

ವ್ಯೋಮವತ್ಸರ್ವಭೂತಸ್ಥೋ ಭೂತದೋಷೈರ್ವಿವರ್ಜಿತಃ ।
ಸಾಕ್ಷೀ ಚೇತಾಗುಣಃ ಶುದ್ಧೋ ಬ್ರಹ್ಮೈವಾಸ್ಮೀತಿ ಕೇವಲಃ ॥ ೬ ॥

೬. ಆಕಾಶದಂತೆ ಸರ್ವಭೂತಗಳಲ್ಲಿಯೂ ಇರುವವನೂ (ಆ) ಭೂತಗಳ ದೋಷಗಳ ಸಂಬಂಧವಿಲ್ಲದವನೂ ಸಾಕ್ಷಿಯೂ ಚೈತನ್ಯರೂಪನೂ ನಿರ್ಗುಣನೂ ಶುದ್ಧನೂ ಆಗಿ ನಾನೇನಾನಾಗಿರುವದರಿಂದ ಬ್ರಹ್ಮವೇ ಆಗಿರುವೆನು[6].

---

1. ಇದನ್ನು ೭-೨, ೯-೬, ೭-೨ಇವುಗಳಲ್ಲಿಯೂ ತಿಳಿಸಿದೆ. ಮನಸ್ಸೆಂದರೆ ಅಂತಃಕರಣವೇ.

2. ಅತ್ಯಂತಪ್ರಸನ್ನವಾಗಿರುವ ತನಿಸಿದ್ರೆಯಲ್ಲಿ.

3. ಸ್ವಪ್ನದಲ್ಲಿಯೂ ಎಚ್ಚರದಲ್ಲಿಯೂ ಬರಿಯ ತೋರಿಕೆಯಾಗಿದ್ದು ತನಿಸಿದ್ರೆಯಲ್ಲಿ ಅದೂ ಇಲ್ಲವಾಗುವದರಿಂದ.

4. ಇದರಿಂದ ಚೈತನ್ಯರೂಪವು ಸ್ವತಃಸಿದ್ಧವೆಂಬುದನ್ನು ಸ್ಪಷ್ಟಪಡಿಸಿದಂತೆ ಆಯಿತು.

5. ಆದ್ವೈತಾತ್ಮಜ್ಞಾನವಾಗುವವರೆಗೂ.

6. ಶ್ಲೋ. ೬-೧೧ರ ಅಭಿಪ್ರಾಯವಿದು.

ನಾಮರೂಪಕ್ರಿಯಾಭ್ಯೋಽನ್ಯೋ ನಿತ್ಯಮುಕ್ತಸ್ವರೂಪವಾನ್ |
ಅಹಮಾತ್ಮಾ ಪರಂ ಬ್ರಹ್ಮ ಚಿನ್ಮಾತ್ರೋಽಹಂ ಸದಾದ್ವಯಃ ॥ ೬ ॥

೬. ನಾನು ನಾಮರೂಪಕರ್ಮಗಳಿಗಿಂತ ಬೇರೆಯಾಗಿರುವವನು, ನಿತ್ಯಮುಕ್ತವಾದ ಸ್ವರೂಪವುಳ್ಳವನು, ಆತ್ಮನು, ಪರಬ್ರಹ್ಮವು, ಚಿನ್ಮಾತ್ರನು, ಯಾವಾಗಲೂ ಅದ್ವಯನು.

ಜೀವತ್ವವು ಪಾರಮಾರ್ಥಿಕವಲ್ಲ

ಅಹಂ ಬ್ರಹ್ಮಾಸ್ಮಿ ಕರ್ತಾ ಚ ಭೋಕ್ತಾ ಚಾಸ್ಮೀತಿ ಯೇ ವಿದುಃ ।
ತೇ ನಷ್ಟಾ ಜ್ಞಾನಕರ್ಮಭ್ಯಾಂ ನಾಸ್ತಿಕಾಃ ಸ್ಯುರ್ನ ಸಂಶಯಃ ॥ ೮ ॥

೮. 'ನಾನು ಬ್ರಹ್ಮವೂ ಆಗಿದೇನೆ, ಕರ್ತೃವೂ ಭೋಕ್ತೃವೂ ಆಗಿದೇನೆ' ಎಂದು ಯಾರು ತಿಳಿದಿರುವರೋ ಅವರು ಜ್ಞಾನಕರ್ಮಗಳೆರಡನ್ನೂ ಕಳೆದುಕೊಂಡು[1] ನಾಸ್ತಿಕರಾಗುವರೆಂಬುದಕ್ಕೆ ಸಂಶಯವಿಲ್ಲ[2].

ಅಪ್ರೇತಜ್ಞಾನವು ಶಾಸ್ತ್ರಸಿದ್ಧ

ಧರ್ಮಾಧರ್ಮಫಲೈರ್ಯೋಗ ಇಷ್ಟೋಽದೃಷ್ಟೋ ಯಥಾತ್ಮನಃ |
ಶಾಸ್ತ್ರಾದ್ ಬ್ರಹ್ಮತ್ವಮಸ್ಯಸ್ಯ ನೋಕ್ಷೋ ಜ್ಞಾನಾತ್ ತಥೇಷ್ಯತಾಮ್॥

೯. ಆತ್ಮನಿಗೆ ಅದೃಷ್ಟವಾದ ಧರ್ಮಾಧರ್ಮಗಳ ಫಲಗಳ ಸಂಬಂಧವಾಗುವದೆಂದು ಶಾಸ್ತ್ರ(ಪ್ರಮಾಣ)ದಿಂದ ಹೇಗೆ ಒಪ್ಪಿಗಿರುವದೋ ಹಾಗೆಯೇ ಅದೇ ಶಾಸ್ತ್ರಪ್ರಮಾಣದಿಂದ ಈ ಆತ್ಮನಿಗೆ ಬ್ರಹ್ಮತ್ವವನ್ನೂ ಜ್ಞಾನದಿಂದ ಮೋಕ್ಷವು ಆಗುವದೆಂಬುದನ್ನೂ ಒಪ್ಪಬೇಕು[2].

---

1. ಬ್ರಹ್ಮವಾದರೆ ಕರ್ತೃತ್ವವಿಲ್ಲ; ಕರ್ತೃವಾದರೆ ಬ್ರಹ್ಮತ್ವವಿಲ್ಲ. ಆದ್ದರಿಂದ ಈ ಎರಡೂ ವಿರುದ್ಧವಾದ ಜ್ಞಾನಗಳನ್ನು ಸಂಪಾದಿಸಿಕೊಂಡರೆ ಕರ್ತೃತ್ವದಿಂದಾಗಬೇಕಾದ ಕರ್ಮವೂ ಇಲ್ಲವೆ, ಅಕರ್ತೃತ್ವಜ್ಞಾನದಿಂದ ಆಗುವ ಬ್ರಹ್ಮಜ್ಞಾನವೂ ಇಲ್ಲದೆಹೋಗುವದು. ಆಗ ವೇದಪ್ರಮಾಣವನ್ನೇ ಒಪ್ಪದ ನಾಸ್ತಿಕನಾಗುವರು.

2. ಅಕರ್ತೃಭೋಕ್ತೃವಾದ ಚಿನ್ಮಾತ್ರಬ್ರಹ್ಮವೇ ನಾನು ಎಂದು ಜ್ಞಾನವುಂಟಾಗಿ ಯಾರಿಗೂ ಮೋಕ್ಷವಾಗುವದಿಲ್ಲವೆಂದರೆ ಶಾಸ್ತ್ರವೇ ಅಪ್ರಮಾಣವೆಂದಾಗುತ್ತದೆ. ಧರ್ಮಾಧರ್ಮಗಳಿಂದ ಸ್ವರ್ಗಾದಿಗಳುಂಟಾಗುವವೆಂಬ ಜ್ಞಾನವು ಶಾಸ್ತ್ರದಿಂದ ಉಂಟಾಗುವದೆಂಬುದನ್ನು ಹೇಗೆ ನಂಬುತ್ತೇವೋ, ಅಪ್ರೇತಾತ್ಮಜ್ಞಾನದಿಂದ ಮೋಕ್ಷವಾಗುವದೆಂಬ ಜ್ಞಾನವೂ ಹಾಗೆಯೇ ಅವಶ್ಯವಾಗಿ ಉಂಟಾಗುವದೆಂದು ನಂಬಬೇಕು. ಗೀ.ಭಾ. ೨.೨೧ ನೋಡಿ.

ಅಕರ್ಮಸಂಬಂಧಿಯಾದ ಆತ್ಮನ ಸಿದ್ಧಿ

ಯಾ ಮಾಹಾರಜನಾದ್ಯಾಸ್ತಾ ವಾಸನಾಃ ಸ್ವಪ್ನದರ್ಶಿಭಿಃ ।
ಅನುಭೂಯನ್ತ ಏವೇಹ ತತೋಽನ್ಯಃ ಕೇವಲೋ ದೃಶಿಃ ॥ ೧೦ ॥

೧೦. ಕನಸನ್ನು ಕಾಣುವವರು ಅರಿತಿನದ ಬಟ್ಟೆಯೇ ಮುಂತಾದವು ಗಳಂತಿರುವ[1] ಯಾವ ವಾಸನೆಗಳನ್ನು ಅನುಭವಿಸುತ್ತಲೇ ಇರುವರೋ ಅವುಗಳಿಗಿಂತಲೂ ಆತ್ಮನು ಇಲ್ಲಿ ಬೇರೆಯಾಗಿಯೇ ಇರುತ್ತಾನೆ, ತಾನೇ ತಾನಾಗಿರುತ್ತಾನೆ[2].

ಕೋಶಾದಿವ ವಿನಿಷ್ಕೃಷ್ಟಃ ಕಾರ್ಯಕಾರಣವರ್ಜಿತಃ ।
ಯಥಾಸಿರ್ದೃಶ್ಯತೇ ಸ್ವಪ್ನೇ ತದ್ವದ್ಬೋದ್ಧಾ ಸ್ವಯಂಪ್ರಭಃ ॥ ೧೧ ॥

೧೧. ಒರೆಯಿಂದ ಹಿರಿದ ಕತ್ತಿಯು ಹೇಗೆ ತಾನೇ ಥಳಥಳಿಸುತ್ತಿರುವದೋ ಅದರಂತೆ ಕಾರ್ಯಕಾರಣಗಳಿಲ್ಲದ[3] ಅರಿಯುವ (ಆತ್ಮನು) ಕನಸಿನಲ್ಲಿ ಸ್ವಯಂಪ್ರಭನಾಗಿರುವನು[4].

ಆಪೇಷಾತ್ ಪ್ರತಿಬುದ್ಧಸ್ಯ ಜ್ಞಸ್ಯ ಸ್ವಾಭಾವಿಕಂ ಪದಮ್ ।
ಉಕ್ತಂ ನೇತ್ಯಾದಿವಾಕ್ಯೇನ ಕಲ್ಪಿತಸ್ಯಾಪನೇತೃಣಾ ॥ ೧೨ ॥

೧೨. ಚೆನ್ನಾಗಿ ಹೊರಳಾಡಿಸಿ[5] (ಎಬ್ಬಿಸಿದ್ದರಿಂದ) ಎಚ್ಚತ್ತ ಜೀವನ ಸ್ವಾಭಾವಿಕಸ್ಥಾನವನ್ನು ಕಲ್ಪಿತವಾದದ್ದನ್ನು ಅಲ್ಲಗಳೆಯುವ 'ನೇತಿ' ಮುಂತಾದ ವಾಕ್ಯವು[6] ಹೇಳಿರುತ್ತದೆ.

---

1. ಬೃ. ೨–೬–೬ ರಲ್ಲಿ ವಾಸನೆಗಳನ್ನು ಅರಿತಿನದ ಬಟ್ಟೆಯೇ ಮುಂತಾದವುಗಳಿಗೆ ಹೋಲಿಸಿದೆ. ಬಿಳಿಯ ಬಟ್ಟೆಗೆ ಯಾವ ಬಣ್ಣವನ್ನು ಪಾಕಿದರೆ ಅದು ಆ ಬಣ್ಣದ್ದಾಗಿ ತೋರುವಂತೆ ವಾಸನೆಗಳು ಆಯಾ ವಿಷಯಾನುಭವಕ್ಕೆ ತಕ್ಕಂತೆ ತೋರುವವು.

2. ವಾಸನೆಗಳು ಬರಿಯ ತೋರಿಕೆಯಾದ್ದರಿಂದ ತಾನೊಬ್ಬನೇ ಇರುತ್ತಾನೆ.

3. ಕಾರ್ಯಕಾರಣಗಳು ಎಂದರೆ ಕಾರ್ಯಕರಣಗಳು, ದೇಹೇಂದ್ರಿಯಗಳು.

4. ಶರೀರ, ಇಂದ್ರಿಯಗಳು, ಬೆಳಕು ಮುಂತಾದ ಹೊರಗಿನ ಸಾಧನ–ಒಂದನ್ನೂ ಬಯಸದೆ ತನ್ನ ಬೆಳಕಿನಿಂದಲೇ ವ್ಯವಹರಿಸುತ್ತಿರುವದರಿಂದ ಆಗ ಆತ್ಮನು ಸ್ವಯಂ ಪ್ರಕಾಶನು.

5. ಬೃ. ೨–೧–೧೫ರಲ್ಲಿ ಅಜಾತಶತ್ರು ಗಾರ್ಗ್ಯನಿಗೆ ಭೋಕ್ತೃಸ್ವರೂಪವನ್ನು ತಿಳಿಸಿ ಕೊಡುವದಕ್ಕೆ ಸುಪ್ತಪುರುಷನನ್ನು ಹೊರಳಾಡಿಸಿ ಎಬ್ಬಿಸಿರುತ್ತಾನೆ.

6. ಬೃ. ೨–೩–೬ರಲ್ಲಿ 'ಅಥಾತ ಆದೇಶೋ ನೇತಿನೇತಿ' ಎಂಬ ವಾಕ್ಯವು ಕಲ್ಪಿತವಾದ ಮೂರ್ತಾಮೂರ್ತಗಳಿಗಿಂತ ಮತ್ತು ಅವುಗಳ ವಾಸನೆಗಳಿಗಿಂತ ಬೇರೆಯಾದ ಜೀವನ ಪರಮಾರ್ಥಸ್ವರೂಪವನ್ನು ತಿಳಿಸಿದೆ. ಸುಷುಪ್ತಿಯಲ್ಲಿ ಜೀವನು ಈ ಪರಮಾತ್ಮರೂಪದಲ್ಲಿಯೇ ಇರುತ್ತಾನೆ.

ಮಹಾರಾಜಾದಯೋ ಲೋಕಾ ಮಯಿ ಯನ್ವತ್ ಪ್ರಕಲ್ಪಿತಾಃ |
ಸ್ವಪ್ನೇ ತದ್ವದ್ದ್ವಯಂ ವಿದ್ಯಾದ್ರೂಪಂ ವಾಸನಯಾ ಸಹ ॥ ೧೩ ॥

೧೩. ಕನಸಿನಲ್ಲಿ ತೋರುವ ಮಹಾರಾಜತ್ವವೇ ಮುಂತಾದ[1] ಲೋಕಗಳು[2] ಹೇಗೆ ನನ್ನಲ್ಲಿ ಕಲ್ಪಿತವಾಗಿರುತ್ತವೆಯೋ ಅದರಂತೆ ವಾಸನಾಸಹಿತವಾದ (ಮೂರ್ತಾಮೂರ್ತಗ)ಳೆರಡೂ (ಎಚ್ಚರದಲ್ಲಿಯೂ) ಕಲ್ಪಿತವೆಂದು ತಿಳಿಯಬೇಕು.

ಆತ್ಮನಿಗೆ ಕರ್ಮವಿಲ್ಲ

ದೇಹಲಿಙ್ಗಾತ್ಮನಾ ಕಾರ್ಯಾ ವಾಸನಾರೂಪಿಣಾ ಕ್ರಿಯಾಃ |
ನೇತಿ ನೇತ್ಯಾತ್ಮರೂಪತ್ವಾನ್ನ ಮೇ ಕಾರ್ಯಾ ಕ್ರಿಯಾ ಕ್ವಚಿತ್ ॥ ೧೪ ॥

೧೪. ಕರ್ಮಗಳು (ಸ್ಥೂಲ)ದೇಹಲಿಂಗ(ದೇಹ)ಗಳ ಸ್ವರೂಪನಾಗಿಯೂ ವಾಸನಾರೂಪಿಯಾಗಿಯೂ ಇರುವನು[3] ಮಾಡತಕ್ಕವುಗಳಾಗಿವೆ. ಆದರೆ ನಾನು 'ನೇತಿ, ನೇತಿ'[4] ಎಂಬ ಶ್ರುತಿಯಲ್ಲಿ ಹೇಳಿರುವ ಆತ್ಮರೂಪನಾದ್ದರಿಂದ ಎಂದಿಗೂ ಯಾವ ಕ್ರಿಯೆಯನ್ನೂ ಮಾಡತಕ್ಕದ್ದಿರುವದಿಲ್ಲ.

ಕರ್ಮವು ಮೋಕ್ಷಕ್ಕೆ ಹೇತುವಲ್ಲ

ನ ತತೋಽಮೃತತಾಶಾಸ್ತಿ ಕರ್ಮಣೋಽಜ್ಞಾನಹೇತುತಃ |
ಮೋಕ್ಷಸ್ಯ ಜ್ಞಾನಹೇತುತ್ವಾನ್ನ ತದನ್ಯದಪೇಕ್ಷತೇ ॥ ೧೫ ॥

೧೫. ಆದ್ದರಿಂದ ಕರ್ಮದಿಂದ ಅಮೃತತ್ವದ ಆಶೆಯಿರುವದಿಲ್ಲ[5]; ಏಕೆಂದರೆ (ಅದು) ಅಜ್ಞಾನಮೂಲಕವಾಗಿರುತ್ತದೆ. ಮೋಕ್ಷಕ್ಕೆ ಜ್ಞಾನವೇ ಕಾರಣವಾಗಿರುವದರಿಂದ ಅದು ನುತ್ತೇನನ್ನೂ ಬಯಸುವದಿಲ್ಲ.

---

1. ಬೃ. ೨-೧-೧೪ರ ಸೂಚನೆಯಿದು. ಮಹಾರಾಜನಂತೆಯೂ ಮಹಾಬ್ರಾಹ್ಮಣನಂತೆಯೂ ಹೆಚ್ಚಿನ ಕೀಳಿನ ರೂಪಗಳನ್ನು ತಾಳಿದವನಂತೆ ಕನಸಿನಲ್ಲಿ ಕಾಣುತ್ತಾನೆ -ಎಂದು ಕನಸಿನ ಕಲ್ಪಿತರೂಪಗಳನ್ನೂ ಅಲ್ಲಿ 'ಅಂತೆ' ಎಂಬ ಶಬ್ದದಿಂದ ಹೇಳಿದೆ.

2 ಕರ್ಮಫಲಗಳು.

3. ಮೂರ್ತಾಮೂರ್ತಗಳ ಮತ್ತು ಅವುಗಳ ವಾಸನೆಗಳ ಧರ್ಮಗಳನ್ನು ತನ್ನಲ್ಲಿ ಆರೋಪಿಸಿಕೊಂಡಿರುವವನು ಕರ್ಮವನ್ನು ಮಾಡುವ ಕರ್ತೃ. ಯಾವ ದೇಹೇಂದ್ರಿಯಗಳ ಆಧ್ಯಾರೋಪವನ್ನೂ ಮಾಡಿಕೊಳ್ಳದವನು ಕರ್ತೃವಾಗಲಾರನು.

4. ಬೃ. ೨-೩-೬.

5. 'ವಿತ್ತದಿಂದ ಅಮೃತತ್ವದ ಆಶೆಯಿಲ್ಲ' ಎಂಬ ಬೃ. ೨-೪-೧೨ರ ವಾಕ್ಯದ ಸೂಚನೆ. ವಿತ್ತವು ಕರ್ಮದ ಮೂಲಕ ಈ ಲೋಕದ ಮತ್ತು ಪರಲೋಕದ ಫಲಗಳನ್ನು ಕೊಡಬಹುದು; ಮೋಕ್ಷವನ್ನು ಕೊಡಲಾರದು ಎಂದು ಅಲ್ಲಿ ಯಾಜ್ಞವಲ್ಕ್ಯನು ಹೇಳಿರುತ್ತಾನೆ.

ಅಮೃತಂ ಚಾಭಯಂ ನಾರ್ತಂ ನೇತೀತ್ಯಾತ್ಮಾ ಪ್ರಿಯೋ ಮಮ ।
ವಿಪರೀತಮತೋಽನ್ಯದ್ಯತ್ ತ್ಯಜೇತ್ತತ್ ಸಕ್ರಿಯಂ ತತಃ ॥ ೧೬ ॥

೧೬. (ಬ್ರಹ್ಮವು) ಅಮೃತವಾದದ್ದು, ಅಭಯವು, ನಾಶವಿಲ್ಲದ್ದು, ನೇತಿನೇತಿ (ಇದಲ್ಲ. ಇದಲ್ಲ ಎಂಬ) ನನ್ನ ಪ್ರಿಯನಾದ ಆತ್ಮನು[1]. ಇದಕ್ಕಿಂತ ಬೇರೆಯಾದದ್ದು ಯಾವದಿರುವದೋ (ಅದು ಇದಕ್ಕೆ) ವಿರುದ್ಧವಾಗಿರುತ್ತದೆ[2]. ಆದ್ದರಿಂದ ಅದನ್ನು ಕರ್ಮಸಹಿತವಾಗಿ ಬಿಡಬೇಕು[3].

---

1. ಮೋಕ್ಷವು ನಿತ್ಯಸಿದ್ಧನಾದ ನಮ್ಮ ಆತ್ಮನೇ ಆಗಿರುವದರಿಂದ ಅಜ್ಞಾನದಿಂದಲೇ ಅಪ್ರಾಪ್ತವಾಗಿರುತ್ತದೆ ಎಂದರ್ಥ. ಈ ವಾಕ್ಯವನ್ನು ಹಿಂದಿನ ವಾಕ್ಯಕ್ಕೆ ಅನ್ವಯಿಸಿದರೆ ಕರ್ಮಕ್ಕೆ ಅಜ್ಞಾನವೇ ಕಾರಣವಾಗಿ ಮೋಕ್ಷಕ್ಕೆ ಜ್ಞಾನವು ಕಾರಣವಾಗಿರುವದರಿಂದ ಅದು ಜ್ಞಾನಕ್ಕಿಂತ ಬೇರೆಯಾದ ಅಜ್ಞಾನಮೂಲಕವಾದ ಕರ್ಮವನ್ನು ಬಯಸುವದಿಲ್ಲ ಎಂಬ ಅಭಿಪ್ರಾಯವನ್ನು ಕಲ್ಪಿಸಬಹುದು. ಇಲ್ಲಿರುವ ವಿಶೇಷಣಗಳಿಗೆ ಬೃ. ೪-೪-೨೫, ೨೬ ೪-೫-೬ ಈ ವಾಕ್ಯಗಳು ಮೂಲವಾಗಿರುವವು.

2. ಎಂದರೆ ಮರ್ತ್ಯವು, ಸಭಯವು, ನಾಶವುಳ್ಳದ್ದು, ಇಂಥದ್ದೆಂಬ ವಿಶೇಷವುಳ್ಳದ್ದು ಅಪ್ರಿಯವಾದದ್ದು -ಎಂದರ್ಥ.

3. ಮರ್ತ್ಯನೇ ಮುಂತಾದ ವಿಶೇಷಣಗಳಿಂದ ಕೂಡಿದ ಫಲವನ್ನೂ ಅದಕ್ಕೆ ಕಾರಣವಾಗಿರುವ ಕರ್ಮವನ್ನೂ ಬಿಡಬೇಕು ಎಂದರ್ಥ.

ಈಕ್ಷಿತೃತ್ವಪ್ರಕರಣದ ಸಾರ

೧-೩. ಈಕ್ಷಿತೃತ್ವವು ಎಂದರೆ ಶುದ್ಧಚೈತನ್ಯಸ್ವರೂಪವು ಜೀವರಿಗೆ ಸ್ವಾಭಾವಿಕವು; ಕರ್ತೃತ್ವವು ಅಜ್ಞಾನದಿಂದ ಆಗಿರುತ್ತದೆ. ಆದ್ದರಿಂದ 'ತತ್ತ್ವಮಸಿ' ಎಂಬ ವಾಕ್ಯವು ಆ ಕರ್ತೃತ್ವವನ್ನು ಬಾಧಿಸುತ್ತದೆ. ಆದ್ದರಿಂದ 'ಜ್ಞಾನವೊಂದೇ ಅಮೃತತ್ವಕ್ಕೆ ಸಾಧನವು' ಎಂದು ಯಜ್ಞೋಪವೀತಾದಿಗಳೊಡನೆ ಕೂಡಿಪ ಕರ್ಮವನ್ನು ಶ್ರುತಿಯು ಬೇಕಿಲ್ಲವೆಂದಿದೆ.

೩-೪. ಕನಸಿನಲ್ಲಿಯೂ ಎಚ್ಚರದಲ್ಲಿಯೂ ಮನಸ್ಸಿನ ಮನಸ್ಸಿನ ವೃತ್ತಿಗಳಿಗೂ ನಾವು ಸಾಕ್ಷಿಯಾಗಿರುವದರಿಂದಲೂ ತಸಿನಿದ್ರೆಯಲ್ಲಿ ಅದ್ವೈತವೇ ಇಲ್ಲವ್ದರಿಂದಲೂ ಶುದ್ಧಚೈತನ್ಯವೇ ನಮ್ಮ ಸ್ವರೂಪವೆಂದು ಗೊತ್ತಾಗುತ್ತದೆ.

೫-೮. ಎಚ್ಚರವಾಗುವವರೆಗೂ ಕನಸಿನ ವ್ಯವಹಾರವು ಸತ್ಯವಾಗಿರುವಂತೆ, ದೇಹ ವ್ಯತಿರಿಕ್ತನಾದ ಆತ್ಮಜ್ಞಾನವುಂಟಾಗುವವರೆಗೂ ದೇಹಾತ್ಮವಾದವು ಸತ್ಯವಾಗಿರುವಂತೆ "ಆಕಾಶದಂತೆ ಎಲ್ಲಾ ಭೂತಗಳಲ್ಲಿಯೂ ಇರುವ ನಿರ್ದೋಷವಾದ ಸಾಕ್ಷಿಚೈತನ್ಯವೇ ನಾನು, ನಾಮರೂಪಕರ್ಮಗಳಿಗಿಂತ ಭಿನ್ನವಾಗಿ ನಿತ್ಯಮುಕ್ತವಾದ ಅದ್ವಿತೀಯ ಬ್ರಹ್ಮವೇ ನಾನು" ಎಂಬ ಪರಮಾರ್ಥಜ್ಞಾನವಾಗುವವರೆಗೂ ಈ ಪ್ರತ್ಯಕ್ಷಾದಿಗಳು ಪ್ರಮಾಣವಾಗಿರುವವು; ಕರ್ತೃತ್ವವೂ ಸತ್ಯವಾಗಿರುವದು. ಆದ್ದರಿಂದ ಪರಸ್ಪರವಿರುದ್ಧವಾದ ಬ್ರಹ್ಮತ್ವವೂ ಕರ್ತೃ ಭೋಕ್ತೃತ್ವವೂ ಒಬ್ಬನೇ ಆತ್ಮನಲ್ಲಿ ಒಂದೇ ಕಾಲದಲ್ಲಿರಲಾರವು.

೯. ಶಾಸ್ತ್ರವಚನದಿಂದ ಕರ್ಮಫಲಗಳ ಸಂಬಂಧವು ಹೇಗೆ ತಿಳಿಯುವದೋ ಆತ್ಮಜ್ಞಾನಕ್ಕೂ ಮೋಕ್ಷಕ್ಕೂ ಇರುವ ಸಂಬಂಧವೂ ಹಾಗೆಯೇ ತಿಳಿಯಬರುತ್ತದೆ. ವಚನವು ಎರಡಕ್ಕೂ ಪ್ರಮಾಣವಾಗಿರುತ್ತದೆ.

೧೦-೧೩. ಕನಸಿನಲ್ಲಿರುವ ವಾಸನಾಮಯವಾದ ವೃಶ್ಯಗಳು ಅನುಭವಿಸಲ್ಪಡುವದರಿಂದ ಅವುಗಳನ್ನು ಅನುಭವಿಸುವ ಚೈತನ್ಯವು ಒರೆಯಿಂದ ಹಿರಿಪ ಕತ್ತಿಯಂತೆ ಕಾರ್ಯ-ಕರಣಸಂಘಾತಕ್ಕಿಂತ ಬೇರೆಯಾಗಿ ಸ್ವಯಂಪ್ರಕಾಶವಾಗಿರುವದೆಂದು ಗೊತ್ತಾಗುತ್ತದೆ-ಎಂದು ಶ್ರುತಿಯು ತಿಳಿಸುತ್ತದೆ. ಇದರಂತೆ ಮನುಷ್ಯನು ಮಲಗಿದ್ದಾಗ ಹೊರಗಿನ ಅರಿವಿಲ್ಲದೆ ಇರುತ್ತಾನೆ; ಅವನನ್ನು ಹೊರಳಾಡಿಸಿ ಎಬ್ಬಿಸಿದರೆ ಎಚ್ಚರುತ್ತಾನೆ. ಹೀಗೆ ಗಾಢ ನಿದ್ರೆಯಲ್ಲಿರುವಾಗ ಯಾವ ಕಲ್ಪಿತವಾದ ಉಪಾಧಿಗಳೂ ಇಲ್ಲದ ನಿರ್ವಿಶೇಷಾತ್ಮನಾಗಿರುತ್ತಾನೆ ಎಂದೂ ಶ್ರುತಿವಾಕ್ಯವಿದೆ. ಕನಸಿನಲ್ಲಿರುವ ನಮ್ಮರೂಪವು ಹೇಗೆ ಕಲ್ಪಿತವಾಗಿರುವದೋ ಹಾಗೆಯೇ ಎಚ್ಚರದಲ್ಲಿಯೂ ಕಲ್ಪಿತವಾಗಿರುತ್ತದೆ- ಎಂದು ಶಾಸ್ತ್ರವಚನವಿದೆ.

೧೪-೧೬. ಆದ್ದರಿಂದ ಆತ್ಮನಲ್ಲಿ ಸ್ಥೂಲದೇಹವಾಗಲಿ ಲಿಂಗದೇಹವಾಗಲಿ ಯಾವ ವಾಸನೆಯಾಗಲಿ ಇರುವದಿಲ್ಲ. ಅವನಿಗೆ ಯಾವ ಕರ್ಮಗಳೂ ಇರುವದಿಲ್ಲ. ಅಜ್ಞಾನದಿಂದಾಗಿರುವ ಕರ್ಮದಿಂದ ಅಮೃತತ್ವದ ಆಶೆಯೂ ಇರುವದಿಲ್ಲ; ಏಕೆಂದರೆ ಅಮೃತತ್ವವು ಜ್ಞಾನದಿಂದಲೇ ದೊರಕತಕ್ಕದ್ದು. ಜ್ಞಾನವು ವಸ್ತುವನ್ನು ತಿಳಿಸುವದಕ್ಕೆ ಕರ್ಮವನ್ನು ಬಯಸುವ ಹಾಗೆಯೇ ಇಲ್ಲ, ಜ್ಞಾನದಿಂದ ದೊರಕುವ ಮೋಕ್ಷವು ಬ್ರಹ್ಮರೂಪವಾಗಿರುತ್ತದೆ. ಅದು ಅಮೃತವೂ ಅಭಯವೂ ಅವಿನಾಶಿಯಾಗಿಯೂ 'ಅದಲ್ಲ, ಅದಲ್ಲ' ಎಂದು ತಿಳಿಯತಕ್ಕ ಆತ್ಮನಾಗಿಯೂ ಎಲ್ಲಕ್ಕಿಂತಲೂ ಪ್ರಿಯವಾಗಿಯೂ ಇರುತ್ತದೆ. ಕರ್ಮದ ಫಲವು ಈ ಜ್ಞಾನಫಲಕ್ಕಿಂತ ವಿಪರೀತಸ್ವಭಾವವುಳ್ಳದ್ದಾಗಿರುತ್ತದೆ. ಆದ್ದರಿಂದ ಮುಮುಕ್ಷುವಾದವನು ಕರ್ಮವನ್ನೂ ಕರ್ಮಫಲವನ್ನೂ ತ್ಯಜಿಸಬೇಕು.

—+++++++—

೧೨. ದೃಗ್ದೃಶ್ಯವಿವೇಕ[1]

ಆತ್ಮಜ್ಞಾನಕ್ಕಿರುವ ಅಡ್ಡಿ

ಪ್ರಕಾಶಸ್ಥಂ ಯಥಾ ದೇಹಂ ಸಾಲೋಕಮಭಿಮನ್ಯತೇ ।
ದೃಷ್ಟಾಽಭಾಸಂ ತಥಾ ಚಿತ್ತಂ ದೃಷ್ಟಾಹಮಿತಿ ಮನ್ಯತೇ ॥ ೧ ॥

೧. ಬೆಳಕಿನಲ್ಲಿರುವ ದೇಹವನ್ನು ಹೇಗೆ ಬೆಳಕಿನಿಂದ ಕೂಡಿರುವದೆಂದು ಎಣಿಸುವರೋ ಹಾಗೆ ಚಿತ್ತಿನಂತಿರುವ ಚಿತ್ತವನ್ನು 'ನಾನು ದ್ರಷ್ಟೃ' ಎಂದು ತಿಳಿಯುತ್ತಾರೆ[2].

ಯದೇವ ದೃಶ್ಯತೇ ಲೋಕೇ ತೇನಾಭಿನ್ನತ್ವಮಾತ್ಮನಃ ।
ಪ್ರಪದ್ಯತೇ ತತೋ ಮೂಢಸ್ತೇನಾತ್ಮಾನಂ ನ ವಿನ್ದತಿ ॥ ೨ ॥

೨. ಅದರಿಂದ ಮೂಢನಾಗಿ ಲೋಕದಲ್ಲಿ ಯಾವ (ಯಾವದು) ಕಾಣುವದೋ ಅದೇ ತಾನೆಂದು ತಿಳಿಯುತ್ತಿರುವನು. ಅದರಿಂದ[3] ತನ್ನ ಆತ್ಮನನ್ನು ಅರಿತುಕೊಳ್ಳದೆ ಇರುವನು.

ದಶಮಸ್ಯ ನವಾತ್ಮತ್ವಪ್ರತಿಪತ್ತಿವದಾತ್ಮನಃ ।
ದೃಶ್ಯೇಷು ತದ್ವದೇವಾಯಂ ಮೂಢೋ ಲೋಕೋ ನ ಚಾನ್ಯಥಾ ॥

೩. ಹತ್ತನೆಯವನಿಗೆ ತಾನು ಒಂಬತ್ತು (ಜನರಲ್ಲಿ ಒಬ್ಬ)ನೆಂಬ ಅರಿವು ಹೇಗೆ ಉಂಟಾಗಿರುವದೋ[4] ಹಾಗೆಯೇ ದೃಶ್ಯಗಳಲ್ಲಿಯೂ (ಆತ್ಮನೆಂಬ ಬುದ್ಧಿಯಿಂದ) ಈ ಜನವು ಮೂಢವಾಗಿರುತ್ತದೆಯೇ ಹೊರತು ಮತ್ತೆ ಬೇರೆಯಿಲ್ಲ.

---

1. ವ್ಯಾಖ್ಯಾನಕಾರರು ಮೊದಲನೆಯ ಶ್ಲೋಕದಲ್ಲಿರುವ 'ಪ್ರಕಾಶ' ಎಂಬ ಮೊದಲನೆಯ ಮಾತನ್ನೇ ಈ ಪ್ರಕರಣದ ಹೆಸರೆಂದು ಬರೆದಿರುತ್ತಾರೆ. ನಾವು ಕೊಟ್ಟಿರುವ ಹೆಸರು ವಿಷಯಕ್ಕೆ ಅನುಗುಣವಾಗಿದೆ.

2. ಚೈತನ್ಯದ ಸನ್ನಿಧಿಯಿಂದ ಚಿತ್ತವೂ ಚೈತನ್ಯವೆಂದಂ ತೋರುತ್ತಿರುವದು. ; ಆದ್ದರಿಂದ ಚಿತ್ತವೇ ಚೈತನ್ಯವೆಂದೂ ತಮ್ಮ ಆತ್ಮನೆಂದೂ ಜನರು ತಪ್ಪಾಗಿ ತಿಳಿದುಕೊಂಡಿರುತ್ತಾರೆ.

3. ದೃಶ್ಯವಾದ ಚಿತ್ತವನ್ನೇ ಚೈತನ್ಯವೆಂದು ತಿಳಿದುಕೊಳ್ಳುತ್ತಿರುವದರಿಂದ.

4. ಹತ್ತು ಜನ ಮಂಕರು ಹೊರಗಿನ ಒಂಬತ್ತು ಜನಗಳನ್ನೇ ಮಾತ್ರ ಎಣಿಸಿಕೊಂಡು ತಮ್ಮಲ್ಲಿ ಒಬ್ಬನು ಹೇಗೋ ಇಲ್ಲವಾಗಿರುವನೆಂದು ನಂಬಿ ದುಃಖಿಸುತ್ತಿದ್ದರು. ಹತ್ತನೆಯವನು ತಾನೇ ಎಂಬುದು ಅವರಲ್ಲಿ ಒಬ್ಬನಿಗೂ ತಿಳಿಯದೆ ಇತ್ತು.

ಅಧ್ಯಾಸವನ್ನು ಕಳೆಯುವ ಜ್ಞಾನ

ತ್ವಂ ಕುರು ತ್ವಂ ತದೇವೇತಿ ಪ್ರತ್ಯಯಾವೇಕಕಾಲಿಕೌ ।
ಏಕನೀಡೌ ಕಥಂ ಸ್ಯಾತಾಂ ವಿರುದ್ಧೌ ನ್ಯಾಯತೋ ವದ ॥ ೪ ॥

೪. 'ನೀನು (ಕರ್ಮವನ್ನು) ಮಾಡು, 'ನೀನು ಅದೇ' ಎಂಬ (ಒಂದಕ್ಕೊಂದು) ವಿರುದ್ಧವಾದ ಜ್ಞಾನಗಳು[1] ಒಂದೇ ಒಬ್ಬನನ್ನೇ ಆಶ್ರಯಿಸಿ ಹೇಗೆ ಉಂಟಾದಾವು ?" ನ್ಯಾಯದಿಂದ ಹೇಳು[2].

ದೇಹಾಭಿಮಾನಿನೋ ದುಃಖಂ ನಾದೇಹಸ್ಯ ಸ್ವಭಾವತಃ ।
ಸ್ವಾಪವತ್ ತತ್ಪ್ರಹಾಣಾಯ ತತ್ತ್ವಮಿತ್ಯುಚ್ಯತೇ ದೃಶೇಃ ॥ ೫ ॥

೫. ದೇಹಾಭಿಮಾನವುಳ್ಳವನಿಗೇ ದುಃಖವು ; ನಿದ್ರೆಯಲ್ಲಿರುವಂತೆ ಸ್ವಭಾವದಿಂದ ಅದೇಹನಾಗಿರುವವನಿಗೆ[3] (ದುಃಖ)ವಿಲ್ಲ. ದೃಗ್ರೂಪನಾದ ಆತ್ಮನಿಗೆ ಆ (ಅಭಿಮಾನ)ವನ್ನು ಕಳೆಯುವದಕ್ಕಾಗಿ[4] 'ಅದೇ ನೀನು' ಎಂದು ಹೇಳಿರುತ್ತದೆ.

ದೃಶೇಶ್ಛಾಯಾ ಯದಾರೂಢಾ ಮುಖಚ್ಛಾಯೇವ ದರ್ಶನೇ ।
ಪಶ್ಯಂಸ್ತಂ ಪ್ರತ್ಯಯಂ ಯೋಗೀ ದೃಷ್ಟ ಆತ್ಮೇತಿ ಮನ್ಯತೇ ॥೬॥
ತಂ ಚ ಮೂಢಂ ಚ ಯದ್ಯನ್ಯಂ ಪ್ರತ್ಯಯಂ ವೇತ್ತಿ ನೋ ದೃಶೇಃ ।
ಸ ಏವ ಯೋಗಿನಾಂ ಶ್ರೇಷ್ಠೋ[5] ನೇತರಃ ಸ್ಯಾನ್ನ ಸಂಶಯಃ ॥ ೭ ॥

೬-೭. ಕನ್ನಡಿಯಗೆ[6] ಮುಖದ ಪ್ರತಿಬಿಂಬದಂತೆ ದೃಗ್ರೂಪವಾದ ಚೈತನ್ಯದ ಪ್ರತಿಬಿಂಬವು ಯಾವದರಲ್ಲಿ ಏರಿಕೊಂಡು (ತೋರುವದೋ) ಆ ಪ್ರತ್ಯಯವನ್ನು ಕಂಡ ಯೋಗಿಯು ಆತ್ಮನನ್ನು ಕಂಡೆನೆಂದು ತಿಳಿದುಕೊಳ್ಳು

---

1. ಅಕರ್ತೃವಾದ ಆತ್ಮನೇ ನಾನೆಂಬ ಜ್ಞಾನವು ನಾನು ಕರ್ತೃ ಎಂಬ ಜ್ಞಾನವನ್ನು ಬಾಧಿಸದೆ ಹುಟ್ಟುವದಿಲ್ಲ.

2. ವಿರುದ್ಧವಾದ ಎರಡು ಜ್ಞಾನಗಳು ಒಬ್ಬನಿಗೇ ಒಟ್ಟಿಗೆ ಇರಲಾರವು ಎಂಬುದೇ ನ್ಯಾಯ.

3. ಸುಷುಪ್ತಿಯಲ್ಲಿ ದೇಹದ ಅಭಿಮಾನವಿಲ್ಲದ್ದರಿಂದ ದುಃಖವೂ ಇಲ್ಲ ; ಆದ್ದರಿಂದ ನಾನು ಅದೇಹನು ಎಂಬ ಅರಿವು ಉಂಟಾದರೆ ದುಃಖವಿರದು.

4. ದೇಹಿಯು ನಾನು ಎಂಬ ತಪ್ಪು ತಿಳಿವನ್ನು ಕಳೆಯುವದಕ್ಕಾಗಿ.

5. 'ಪ್ರೇಷ್ಠೋ' ಎಂಬ ಪಾಠಕ್ಕಿಂತ ಈ ಬೋಧನಿಧಿಪಾಠವೇ ಮೇಲು.

6. ಇದು 'ದರ್ಶನೇ' ಎಂಬುದರ ಅರ್ಥ , 'ದರ್ಪಣೇ' ಎಂದೇ ಮೂಲಪಾಠ ವಿದ್ದಿರಬಹುದೆಂದು ಕಾಣುತ್ತದೆ.

ವನು[1], ಅದನ್ನೂ ಅದನ್ನರಿತು ಮೋಹಗೊಂಡಿರುವ ಪ್ರತ್ಯಯವನ್ನೂ ದೃಗ್ರೂಪ ಚೈತನ್ಯಕ್ಕಿಂತ ಬೇರೆಯಲ್ಲವೆಂದು ಯಾವನು ಅರಿತುಕೊಳ್ಳುವನೋ[2] ಅವನೇ ಯೋಗಿಗಳಲ್ಲೆಲ್ಲ ಶ್ರೇಷ್ಠನು, ಮಿಕ್ಕವನು (ಯೋಗಿಶ್ರೇಷ್ಠ)ನಾಗಲಾರನು. ಇದಕ್ಕೆ ಸಂಶಯವಿಲ್ಲ.

ವಿಜ್ಞಾತೇರ್ಯಸ್ತು ವಿಜ್ಞಾತಾ ಸ ತ್ವಮಿತ್ಯುಚ್ಯತೇ ಯತಃ ।
ಸ ಏವಾನುಭವಸ್ತಸ್ಯ[3] ತತೋಽನ್ಯೋಽನುಭವೋ ಮೃಷಾ ॥ ೮ ॥

೮. ಅರಿವನ್ನು ಅರಿಯುವಾತನು ಯಾವನೋ 'ಅವನು ನೀನು' ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆಯಾದ್ದರಿಂದ ಅದೇ ಆ ಆತ್ಮನ ಅನುಭವವಾಗಿರುವದು; ಅದಕ್ಕಿಂತ ಬೇರೆಯ ಅನುಭವವೆಂಬುದು ಸುಳ್ಳು.

ದೃಶಿರೂಪೇ ಸದಾ ನಿತ್ಯೇ ದರ್ಶನಾದರ್ಶನೇ ಮಯಿ ।
ಕಥಂ ಸ್ಯಾತಾಂ ತತೋ ನಾನ್ಯ ಇಷ್ಯತೇಽನುಭವಸ್ತತಃ ॥೯॥

೯. ಯಾವಾಗಲೂ ದೃಗ್ರೂಪನಾಗಿರುವ ನಿತ್ಯನಾದ ನನ್ನಲ್ಲಿ ದರ್ಶನಾದರ್ಶನಗಳು– ಹೇಗೆ ಆದಾವು[4] ? ಆದ್ದರಿಂದ ಇದಕ್ಕಿಂತ ಬೇರೆಯಾದ ಅನುಭವವನ್ನು (ನಾವು) ಒಪ್ಪುವದಿಲ್ಲ.

---

1. ಪ್ರತ್ಯಯದಲ್ಲಿ ಉಂಟಾದ ಚಿದಾಭಾಸವನ್ನು ಕಂಡು ಆತ್ಮನನ್ನು ಕಂಡೆನು, ಆತ್ಮಾನುಭವವಾಯಿತು– ಎಂದು ಅನುಭವವಾದಿಯು ಹೇಳುತ್ತಾನೆ. ಆತ್ಮನ ಸಾಕ್ಷಾತ್ಕಾರವಾಗುವ ಒಂದು ಪ್ರತ್ಯಯವುಂಟಾಗಬೇಕು ಎಂಬುದು ಅವನ ವಾದವು.

2. ಚಿದಾಭಾಸಪ್ರತ್ಯಯವು ಹೇಗೆ ಚೈತನ್ಯರೂಪನಾದ ಆತ್ಮನಿಗಿಂತ ಬೇರೆಯಾಗಿಲ್ಲವೋ ಹಾಗೆ ಅದನ್ನೇ ಆತ್ಮನೆಂದು ತಪ್ಪಾಗಿ ತಿಳಿಯುವ ಪ್ರತ್ಯಯವೂ ಬೇರೆಯಿಲ್ಲ. ಇವೆರಡೂ ಆತ್ಮನಲ್ಲಿಯೇ ಕಲ್ಪಿತವಾಗಿರುವವು.

3. 'ಸ ಸ್ಯಾದನುಭವಃ' ಎಂಬ ಮೈ॥ ಪಾಠಕ್ಕಿಂತ ಈ ಬೋ॥ ಪಾಠವೇ ಮೇಲು.

4. ಆತ್ಮನ ವಿಷಯದಲ್ಲಿ ಆತ್ಮನಿಗೆ ಈಗ ದರ್ಶನವಿಲ್ಲ, ಇನ್ನು ಮುಂದೆ ದರ್ಶನವಾಗುವದು- ಎಂಬ ಭೇದವಿಲ್ಲ. ಏಕೆಂದರೆ ಅವನು ಯಾವಾಗಲೂ ಚೈತನ್ಯರೂಪನೇ ಆಗಿರುತ್ತಾನೆ. ಬೆಳಕಿನ ರೂಪದ ಸೂರ್ಯನಿಗೆ ಹಗಲುರಾತ್ರಿಗಳಿಲ್ಲದಂತೆ ದೃಗ್ರೂಪನಿಗೆ ಕಾಣುವದು, ಕಾಣದಿರುವದು– ಎಂಬ ಭೇದಗಳಿರುವದಿಲ್ಲ.

ಆತ್ಮನಿಗೆ ದುಃಖಿತ್ವವಿಲ್ಲವೆಂಬುದಕ್ಕೆ ಯುಕ್ತಿ

ಯತ್ಸ್ಥಸ್ತಾಪೋ ರವೇರ್ದೇಹೇ ದೃಶೇಃ ಸ ವಿಷಯೋ ಯಥಾ ।
ಸತ್ತ್ವಸ್ಥಸ್ತದ್ವದೇವೇಹ ದೃಶೇಃ ಸ ವಿಷಯಸ್ತಥಾ ॥ ೧೦ ॥

೧೦. ಸೂರ್ಯನಿಂದಾಗುವ (ಬಿಸಿಲಿನ) ತಾಪವು ದೇಹದಲ್ಲಿ ಎಲ್ಲಿರುವದೋ ಆ (ದೇಹಭಾಗವು) ದೃಗ್ರೂಪನಾದ (ಆತ್ಮನಿಗೆ) ಹೇಗೆ ವಿಷಯವಾಗಿರುವದೋ[1] ಅದರಂತೆಯೇ ಇಲ್ಲಿಯೂ ಅಂತಃಕರಣದಲ್ಲಿರುವ ಆ (ತಾಪವೂ)[2] ದೃಗ್ರೂಪನಾದ ಆತ್ಮನಿಗೆ ವಿಷಯವಾಗಿರುವದು.

ಪ್ರತಿಷಿದ್ಧೋದಮುಂಶೋ ಜ್ಞಃ ಖಮಿವೈಕರಸೋಽದ್ವಯಃ ।
ನಿತ್ಯಮುಕ್ತಸ್ತಥಾ ಶುದ್ಧಃ ಸೋಽಹಂ ಬ್ರಹ್ಮಾಸ್ಮಿ ಕೇವಲಃ ॥ ೧೧ ॥

೧೧. ಇದಮುಂಶವೇ ಇಲ್ಲದ ಚೈತನ್ಯಸ್ವರೂಪನಾದ (ಆತ್ಮನೂ) ಆಕಾಶದಂತೆ ಏಕರಸನೂ[3] ಅದ್ವಯನೂ ನಿತ್ಯಮುಕ್ತನೂ ಮತ್ತು (ನಿತ್ಯ) ಶುದ್ಧನೂ ಆಗಿರುವ ಆ ನಾನು ಕೇವಲ ಬ್ರಹ್ಮವಾಗಿರುತ್ತೇನೆ.[4]

ವಿಜ್ಞಾತುರ್ನೈವ ವಿಜ್ಞಾತಾ ಪರೋಽನ್ಯಃ ಸಂಭವತ್ಯತಃ ।
ವಿಜ್ಞಾತಾಹಂ ಪರೋ ಮುಕ್ತಃ ಸರ್ವಭೂತೇಷು ಸರ್ವದಾ ॥ ೧೨ ॥

೧೨. ಅರಿಯುವವನಿಗಿಂತ ಹೆಚ್ಚಿನ ಅರಿಯುವಾತನು ಮತ್ತೊಬ್ಬನು ಇರಲಾರನು. ಆದ್ದರಿಂದ ವಿಜ್ಞಾತೃವಾದ ನಾನೇ ಪರಮಾತ್ಮನು, ಸರ್ವಭೂತಗಳಲ್ಲಿಯೂ ಸರ್ವದಾ ಮುಕ್ತನಾಗಿರುವವನು.

---

1. ದೇಹವೂ ಬಿಸಿಲಿನಿಂದಾಗುವ ಬೇಗೆಯೂ ವಿಷಯವಾಗಿರುವದರಿಂದ ಅದನ್ನು ಕಾಣುವ ಆತ್ಮನಿಗಿಲ್ಲ ಎಂಬುದು ದೃಷ್ಟಾಂತವು. ದೇಹಕ್ಕಿಂತ ಬೇರೆಯಾಗಿರುವ ಆತ್ಮನನ್ನು ಒಪ್ಪುವವರೆಲ್ಲರೂ ಇದನ್ನು ಒಪ್ಪಿರುತ್ತಾರೆ.

2. ಅಂತಃಕರಣವೂ ಅದರಲ್ಲಿ ಆಗುವ ದುಃಖದ ಬೇಗೆಯೂ ಆತ್ಮನಿಗೆ ವಿಷಯವೇ ಆಗಿರುತ್ತದೆಯೆಂಬುದು ಅನುಭವದಲ್ಲಿದೆ. ಆದ್ದರಿಂದ ದೃಷ್ಟಾಂತದಂತೆ ಇಲ್ಲಿಯೂ ವಿಷಯಿಯಾದ ಆತ್ಮನಿಗೆ ಈ ದುಃಖವಿಲ್ಲ ಎಂದು ಒಪ್ಪಬೇಕು.

3. ವಿಷಯವಾದ ಭಾಗವಿಲ್ಲದ. ಯಾವಯಾವದು ವಿಷಯವೋ ಅದು ವಿಷಯಿಗೆ ಸೇರಿದ ಅಂಶವಲ್ಲವೆಂದು ನಿಶ್ಚಯಿಸಬೇಕು.

4. ವಿಷಯಗಳನ್ನೆಲ್ಲ ತನ್ನ ಚೈತನ್ಯದಿಂದ ವ್ಯಾಪಿಸಿಕೊಂಡಿರುವ ಆತ್ಮನಲ್ಲಿ ನಾನಾರಸವು, ವೈಚಿತ್ರ್ಯವು ಇರುವದಿಲ್ಲ. ಅವನಿಗೆ ವಿಷಯದ ಸಂಗವಿಲ್ಲ. ಆದ್ದರಿಂದ ಅವನು ಪರಿಚ್ಛಿನ್ನ ಚೈತನ್ಯವಾದ ಬ್ರಹ್ಮವೇ.

ಉಪಸಂಹಾರ

ಯೋ ವೇದಾಲುಪ್ತದೃಷ್ಟಿತ್ವಮಾತ್ಮನೋಽಕರ್ತೃತಾಂ ತಥಾ।
ಬ್ರಹ್ಮವಿತ್ತ್ವಂ ತಥಾ ಮುಕ್ತ್ವಾ ಸ ಆತ್ಮಜ್ಞೋ ನ ಚೇತರಃ ॥ ೧೩ ॥

೧೩. ಯಾವನು (ತಾನು) ಬ್ರಹ್ಮಜ್ಞಾನಿ ಎಂಬ (ಅಭಿಮಾನವನ್ನು ಕೂಡ) ಬಿಟ್ಟು ಆತ್ಮನು ದೃಷ್ಟಿಲೋಪವಿಲ್ಲದವನೆಂದೂ **ಅಕರ್ತೃ**ವೆಂದೂ ಅರಿತಿರುವನೋ ಅವನೇ ಆತ್ಮಜ್ಞಾನಿಯು, ಮತ್ತೊಬ್ಬನಲ್ಲ[1].

ಜ್ಞಾತೈವಾಹಮವಿಜ್ಞೇಯಃ ಶುದ್ಧೋ ಮುಕ್ತಃ ಸದೇತ್ಯಪಿ।
ವಿವೇಕೀ ಪ್ರತ್ಯಯೋ ಬುದ್ಧೇರ್ದೃಶ್ಯತ್ವಾನ್ನಾಶವಾನ್ ಯತಃ ॥ ೧೪ ॥
ಅಲುಪ್ತಾ ತ್ವಾತ್ಮನೋದೃಷ್ಟಿರ್ನೋತ್ಪಾದ್ಯಾ ಕಾರಕೈರ್ಯತಃ।
ದೃಶ್ಯಯಾ ಚಾನ್ಯಯಾ ದೃಷ್ಟ್ಯಾ ಜನ್ಯತಾಸ್ಯಾಃ ಪ್ರಕಲ್ಪಿತಾ ॥ ೧೪ ॥

೧೪–೧೫. ನಾನು ಜ್ಞಾತೃವೇ, ಜ್ಞೇಯವಲ್ಲ; ಯಾವಾಗಲೂ ಶುದ್ಧನು, ಮುಕ್ತನು– ಎಂದೆಂಬ ಬುದ್ಧಿಯ ವಿವೇಕರೂಪವಾದ ಪ್ರತ್ಯಯವುಕೂಡ ದೃಶ್ಯವಾಗಿರುವದರಿಂದ ನಾಶವುಳ್ಳದ್ದಾಗಿರುವದರಿಂದಲೂ **ಆದರೆ** ಆತ್ಮನ ದೃಷ್ಟಿಯು ಅಳಿವಿಲ್ಲದ್ದಾಗಿಯೂ ಕಾರಕಗಳಿಂದುಂಟಾಗದ್ದಾಗಿಯೂ ಇರುವದರಿಂದಲೂ ದೃಶ್ಯವಾದ (ಆ) ಇನ್ನೊಂದು ದೃಷ್ಟಿಯಿಂದ **ಈ** (ದೃಷ್ಟಿಗೂ) ಹುಟ್ಟುವಿಕೆಯು ಕಲ್ಪಿತವಾಗಿರುತ್ತದೆ[2].

ದೇಹಾತ್ಮಬುದ್ಧ್ಯಪೇಕ್ಷತ್ವಾದಾತ್ಮನಃ ಕರ್ತೃತಾ ಮೃಷಾ।
ನೈವ ಕಿಂಚಿತ್ ಕರೋಮೀತಿ ಸತ್ಯಾ ಬುದ್ಧಿಃ ಪ್ರಮಾಣಜಾ ॥ ೧೬ ॥
ಕರ್ತೃತ್ವಂ ಕಾರಕಾಪೇಕ್ಷಮಕರ್ತೃತ್ವಂ ಸ್ವಭಾವತಃ।
ಕರ್ತಾ ಭೋಕ್ತೇತಿ ವಿಜ್ಞಾನಂ ಮೃಷೈವೇತಿ ಸುನಿಶ್ಚಿತಮ್ ॥ ೧೭ ॥

೧೬–೧೭. ಆತ್ಮನು ಕರ್ತೃವೆಂಬುದು ದೇಹವೇ ತಾನೆಂಬ ಬುದ್ಧಿಯನ್ನವಲಂಬಿಸಿರುವದರಿಂದ ಹುಸಿಯಾಗಿರುವದು, "ನಾನು ಏನನ್ನೂ ಮಾಡು

---

1. ನಾನು ಆತ್ಮನನ್ನು ಅರಿತುಕೊಂಡು **ಈಗ** ಜ್ಞಾನಿಯಾಗಿರುವೆನು –ಎಂದು ಭಾವಿಸಿಕೊಂಡವನು ಆತ್ಮನಲ್ಲಿ ಜ್ಞಾನಕರ್ತೃತ್ವವನ್ನೂ ಜ್ಞಾನಕ್ಕೆ ಜನ್ಮವನ್ನೂ ಆಂಗೀಕರಿಸಿರುತ್ತಾನೆ. ಆದ್ದರಿಂದ ಅವನು ನಿಜವಾದ ಜ್ಞಾನಿಯಲ್ಲ.

2. ಆತ್ಮಸ್ವರೂಪವೇ ಆಗಿರುವ ಚೈತನ್ಯವು ಹುಟ್ಟ ನಾಶವಾಗುವದಿಲ್ಲ; ಆದರೆ ಪ್ರತ್ಯಯರೂಪವಾದ ಜ್ಞಾನವು ಹುಟ್ಟ ನಾಶವಾಗತಕ್ಕದ್ದು. ವೃತ್ತಿರೂಪವಾದ ಜ್ಞಾನದಿಂದಲೇ ಆತ್ಮನ ಸ್ವರೂಪವಾದ ಜ್ಞಾನಕ್ಕೂ ಜನ್ಮನಾಶಗಳುಂಟೆಂಬ ಭ್ರಾಂತಿಯುಂಟಾಗುತ್ತದೆ.

ವದಿಲ್ಲ' ಎಂಬ ತಿಳಿವಳಿಕೆಯು ಪ್ರಮಾಣದಿಂದ ಹುಟ್ಟಿದ್ದಾದ್ದರಿಂದ ಸತ್ಯವಾಗಿರುತ್ತದೆ. ಕರ್ತೃತ್ವವು ಕಾರಕಗಳನ್ನು ಅವಲಂಬಿಸಿರುತ್ತದೆ, ಅಕರ್ತೃತ್ವವು ಸ್ವಭಾವದಿಂದ ಇರುತ್ತದೆ. (ಆದ್ದರಿಂದ ಆತ್ಮನು) "ಕರ್ತೃ, ಭೋಕ್ತೃ' ಎಂಬ ತಿಳಿವಳಿಕೆಯು ತಪ್ಪು ತಿಳಿವಳಿಕೆಯೇ ಎಂದು ಚೆನ್ನಾಗಿ ನಿಶ್ಚಯವಾಯಿತು[1].

ಏವಂ ಶಾಸ್ತ್ರಾನುಮಾನಾಭ್ಯಾಂ ಸ್ವರೂಪೇಽವಗತೇ ಸತಿ ।
ನಿಯೋಜ್ಯೋಽಹಮಿತಿ ಹ್ಯೇಷಾ ಸತ್ಯಾ ಬುದ್ಧಿಃ ಕಥಂ ಭವೇತ್ ॥ ೧೮ ॥

೧೮. ಹೀಗೆ ಶಾಸ್ತ್ರದಿಂದಲೂ ಅನುಮಾನದಿಂದಲೂ[2] ಸ್ವರೂಪವನ್ನು ನಿಶ್ಚಯಿಸಿಕೊಂಡಮೇಲೆ "ನಾನು ಶಾಸ್ತ್ರದ ಕಟ್ಟಳೆಗೆ ಒಳಪಟ್ಟವನು" ಎಂಬ ಬುದ್ಧಿಯು ಸತ್ಯವೆಂದು ಹೇಗೆ ಆದೀತು[3] ?

ಯಥಾ ಸರ್ವಾನ್ತರಂ ವ್ಯೋಮ ವ್ಯೋಮ್ನೋಽಪ್ಯಭ್ಯನ್ತರೋ ಹ್ಯಹಮ್ ।
ನಿರ್ವಿಕಾರೋಽಚಲಃ ಶುದ್ಧೋಽಜರೋ ಮುಕ್ತಃ ಸದಾದ್ವಯಃ ॥ ೧೯ ॥

೧೯. ಹೇಗೆ ಆಕಾಶವು ಎಲ್ಲಕ್ಕೂ ಒಳಗಿರುವದೋ ಹಾಗೆ ನಾನು ಆಕಾಶಕ್ಕೂ ಒಳಗಿರುವವನು. (ನಾನು) ನಿರ್ವಿಕಾರನು, ಅಚಲನು, ಶುದ್ಧನು, ಅಜರನು, ನಿತ್ಯಮುಕ್ತನು, ಅದ್ವಯನು.

——:o:——

---

1. ಯಾವದು ಮತ್ತೊಂದರ ಅಪೇಕ್ಷೆಯಿಂದ ತೋರುವದೋ ಅದು ವಸ್ತುವಿನ ಸ್ವಭಾವಕ್ಕೆ ಸೇರಿದ್ದಲ್ಲ. ಉದಾಹರಣೆಗೆ ಸ್ಫಟಿಕವು ಹತ್ತಿರವಿರುವ ದಾಸಿವಾಳದ ಹೂವಿನ ಕಾರಣದಿಂದ ಕೆಂಪಾಗಿ ತೋರಿದರೂ ಕೆಂಪು ಸ್ಫಟಿಕದ ಸ್ವಭಾವಕ್ಕೆ ಸೇರಿದ್ದಲ್ಲ.

2. ಶ್ರವಣಮನನಗಳಿಂದ ಎಂದರ್ಥ. ಅನುಮಾನವು ಸ್ವತಂತ್ರವಾಗಿ ಪ್ರಮಾಣವೆಂಬ ಅಭಿಪ್ರಾಯವಿಲ್ಲಿಲ್ಲ.

3. ಆತ್ಮನು ಅಕರ್ತೃ, ಅಭೋಕ್ತೃ –ಎಂಬ ನಿಶ್ಚಯಜ್ಞಾನವು ಶಾಸ್ತ್ರಪ್ರಮಾಣದಿಂದ ಆದಮೇಲೂ ಶಾಸ್ತ್ರವು ಇಂಥಿಂಥ ಕರ್ಮವನ್ನು ಮಾಡಬೇಕೆಂದು ನನಗೆ ಕಟ್ಟುಮಾಡುತ್ತದೆ. ಎಂಬ ಬುದ್ಧಿಯುಂಟಾಗುವದು ಅಸಂಭವ. ಶಾಸ್ತ್ರದ ಅಪ್ಪಣೆಯನ್ನು ಪಾಲಿಸಬೇಕು ಎಂದು ಭಾವಿಸುವದು ಅಕರ್ತ್ರಾತ್ಮಜ್ಞಾನಕ್ಕೆ ಮುಂಚಿಯೇ ಆಗಿರಬೇಕಲ್ಲದೆ ಆಮೇಲಲ್ಲ.

ದೃಗ್ದೃಶ್ಯವಿವೇಕಪ್ರಕರಣದ ಸಾರ

೧-೩. ದೃಗ್ರೂಪನಾದ ಆತ್ಮನನ್ನು ದೃಶ್ಯವಾದ ಸಾಭಾಸಾಂತಃಕರಣದಿಂದ ವಿಂಗಡಿಸಿ ಕೊಳ್ಳಲಾರದೆ ಅಂತಃಕರಣವನ್ನೇ ತಾನೆಂದು ತಿಳಿದುಕೊಳ್ಳುತ್ತಾ ದೃಶ್ಯವನ್ನು ತಾನೆಂದು ಕೊಳ್ಳುತ್ತಿರುವ ಅಧ್ಯಾಸವೇ ಆತ್ಮಜ್ಞಾನವಿಲ್ಲದಿರುವದಕ್ಕೆ ಕಾರಣ. ದಶಮನ ಕಥೆಯಲ್ಲಿ ಹತ್ತನೆಯವನು ಹೊರಗಿನ ಒಂಬತ್ತು ಜನರಲ್ಲೇ ತಾನೊಬ್ಬನೆಂದು ತಿಳಿದಂತೆ ಆಜ್ಞಾನು ಅನಾತ್ಮವೇ ತಾನೆಂದು ತಿಳಿದುಕೊಂಡಿರುತ್ತಾರೆ.

೪-೯. ಕರ್ತೃತ್ವಜ್ಞಾನವೂ ಅಕರ್ತೃತ್ವಜ್ಞಾನವೂ ಒಬ್ಬನಿಗೇ ಏಕಕಾಲದಲ್ಲಿ ಇರಲಾರವು. ಆದ್ದರಿಂದ ಶಾಸ್ತ್ರದಲ್ಲಿರುವ ಕರ್ಮವಿಧಿಯೂ ಆತ್ಮಜ್ಞಾನೋಪದೇಶವೂ ಒಬ್ಬನಿಗೇ ಇಲ್ಲ. ದೇಹಾಭಿಮಾನಿಯಾದವನಿಗೆ ದುಃಖವಿರುವದೂ ಅವಿದ್ವಾಂಸನಿಗೆ ದುಃಖವಿಲ್ಲದಿರುವದೂ ಅನುಭವಾತ್ರಯಪರೀಕ್ಷೆಯಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ತತ್ತ್ವಮಸಿ ಎಂಬ ಉಪದೇಶವು ದೇಹಾಭಿಮಾನದಿಂದಾಗಿರುವ ದುಃಖವನ್ನು ಕಳೆಯುವ ಜ್ಞಾನಕ್ಕಾಗಿಯೇ. ವಾಕ್ಯಜ್ಞಾನಕ್ಕಿಂತ ಬೇರೆಯಾಗಿ ಆತ್ಮದರ್ಶನರೂಪವಾದ ಬೇರೊಂದು ಜ್ಞಾನವೂ ಆಗಬೇಕೆಂದು ಕೆಲವರು ವಾದಿಸುತ್ತಾರೆ; ಆದರೆ ಅವರು ಹೇಳುವ ಅನುಭವಕ್ಕೆ ವಿಷಯವಾಗಿರುವದು ಚಿದಾಭಾಸದಿಂದ ಕೂಡಿದ ಅಂತಃಕರಣಪ್ರತ್ಯಯವು, ಆತ್ಮನಲ್ಲ. ಆದಕಾರಣ ಆತ್ಮನು ಅರಿವನ್ನೂ ಅರಿಯುವವನು ಅವನೇ ನೀನು ಎಂದು ಶಾಸ್ತ್ರವು ಬೋಧಿಸುತ್ತಿರುವದರಿಂದ ಉಂಟಾಗುವ ಅವಿದ್ಯಾನಾಶಕವಾದ ಅರಿವೇ ಆತ್ಮನ ಅನುಭವವಲ್ಲದೆ ಆತ್ಮದರ್ಶನರೂಪವಾದ ಮತ್ತೊಂದು ಅನುಭವವಿಲ್ಲ. ನಿತ್ಯದೃಗ್ರೂಪನಾಗಿರುವ ಆತ್ಮನ ವಿಷಯದಲ್ಲಿ ಅನಿತ್ಯವಾದ ದರ್ಶನವಾಗಲಿ ಅದರ್ಶನವಾಗಲಿ ಹೇಗೆ ಉಂಟಾದಾವು?

೧೦-೧೨. ಆತ್ಮನಲ್ಲಿ ಅಧ್ಯಸ್ತವಾದ ದುಃಖವೇ ಹೊರತು ಪರಮಾರ್ಥವಾಗಿ ದುಃಖವಿರುವದಿಲ್ಲ. ಏಕೆಂದರೆ ದುಃಖವೂ ಅದಕ್ಕೆ ಆಶ್ರಯವಾಗಿರುವ ಅಂತಃಕರಣವೂ ಆತ್ಮನಿಗೆ ವಿಷಯವಾಗಿರುತ್ತದೆ; ವಿಷಯವಾಗಿರುವ ದುಃಖವು ವಿಷಯಿಯ ಧರ್ಮವಾಗಲಾರದು. ಇದರಂತೆ ವಿಷಯವಾದ್ಯಾವದೂ ಆತ್ಮನಿಗೆ ಧರ್ಮವಾಗಲಾರದಾದ್ದರಿಂದ ಆತ್ಮನು ನಿತ್ಯ ಶುದ್ಧಬುದ್ಧಮುಕ್ತವಾದ ಬ್ರಹ್ಮವೇ ಆಗಿರುತ್ತಾನೆ. ಆತ್ಮನು ಅರಿಯುವವನಾದ್ದರಿಂದ ಅವನನ್ನು ಅರಿಯುವ ಮತ್ತೊಬ್ಬನು ಇರುವದಿಲ್ಲ. ಆದ್ದರಿಂದ ಇವನೇ ಪರಮಾತ್ಮನು, ಶಾಸ್ತ್ರವಾಕ್ಯದಿಂದ ಆಗುವ ಜ್ಞಾನವೇ ಇದು.

೧೩-೧೭. ಆತ್ಮನ ಜ್ಞಾನರೂಪವಾದ ದೃಷ್ಟಿಗೆ ಎಂದಿಗೂ ಲೋಪವಿಲ್ಲ, ಅವನು ಕರ್ತೃವೆಂಬುದು ಎಂದಿಗೂ ಸಲ್ಲದು. ನಾನು ಬ್ರಹ್ಮವನ್ನು ಅರಿತೆನು ಎಂಬ ಅರಿವಿನ ಕರ್ತೃತ್ವವೂ ತನಗಿಲ್ಲವೆಂದು ತಿಳಿದವನೇ ನಿಜವಾದ ಆತ್ಮಜ್ಞಾನಿಯು; ಏಕೆಂದರೆ ನಾನು ಜ್ಞಾತೃವೇ, ಜ್ಞೇಯನಲ್ಲ -ಎಂದು ಮುಂತಾಗಿ ತಿಳಿಯುವ ಪ್ರತ್ಯಯವೂ ನಾಶವಾಗುವದರಿಂದ ಅದೂ ಆತ್ಮನ ಧರ್ಮವಲ್ಲ. ಆತ್ಮಜ್ಞಾನವುಂಟಾಯಿತು ಎಂಬಾಗಲೂ ಚೈತನ್ಯಕ್ಕೆ

ಅಂತಃಕರಣಾಧ್ಯಾಸದಿಂದಲೇ ಜನ್ಯತ್ವವು ಕಲ್ಪಿತವಾಗಿರುತ್ತದೆ. ಆತ್ಮನಿಗೆ ಯಾವ ಕರ್ತೃತ್ವವೇ ಆಗಲಿ ದೇಹಾತ್ಮಬುದ್ಧಿಯ ಅಪೇಕ್ಷೆಯಿಂದ ತೋರತಕ್ಕದ್ದು ; ಯಾವ ಕರ್ತೃತ್ವವೂ ಇಲ್ಲ ಎಂಬುದು ಶಾಸ್ತ್ರಪ್ರಮಾಣದಿಂದುಂಟಾಗತಕ್ಕದ್ದು. ಕರ್ತೃತ್ವವು ಕಾರಕಾಪೇಕ್ಷವಾಗಿ ಉಂಟಾಗತಕ್ಕದ್ದು, ಅಕರ್ತೃತ್ವವು ಆತ್ಮನಿಗೆ ಸ್ವಭಾವದಿಂದಲೇ ಇರತಕ್ಕದ್ದು. ಆದ್ದರಿಂದ ಸತ್ಯವಾಗಿರುವ ಈ ಅಕರ್ತೃತ್ವವನ್ನೇ ಶಾಸ್ತ್ರವು ತಿಳಿಸುತ್ತದೆ.

೧೪-೧೯. ಹೀಗೆ ಶಾಸ್ತ್ರದಿಂದಲೂ ಯುಕ್ತಿಯಿಂದಲೂ ಆತ್ಮನು ಅಕರ್ತೃವಾದ ಚೈತನ್ಯಸ್ವರೂಪನೇ ಎಂಬ ನಿಶ್ಚಯವಾದ ಬಳಿಕ ಮತ್ತೆ ಶಾಸ್ತ್ರನಿರೋಧಕ್ಕೆ ಕಟ್ಟುಬಿದ್ದು ಅನುಭವಕ್ಕಾಗಿ ಏನಾದರೂ ಮಾಡತಕ್ಕದ್ದಿದೆ ಎಂದು ಭಾವಿಸುವದು ಎಂದಿಗೂ ಆಗಲಾರದು. ಆದ್ದರಿಂದ ಆತ್ಮನು ಸರ್ವಾಂತರನು, ನಿಷ್ಕ್ರಿಯನು, ಅಸಂಗನು, ನಿತ್ಯಶುದ್ಧನು, ನಿತ್ಯಮುಕ್ತನು, ಅದ್ವಿತೀಯಚೈತನ್ಯಸ್ವರೂಪನು.



೧೩. ನಿರ್ಗುಣಾತ್ಮ[1]

ಆತ್ಮನಲ್ಲಿ ದೃಷ್ಟ್ಯಾದಿಧರ್ಮಗಳಿಲ್ಲ

ಅಚಕ್ಷುಷ್ಟ್ವಾನ್ನ ದೃಷ್ಟಿರ್ಮೇ ತಥಾಶ್ರೋತ್ರಸ್ಯ ಕಾ ಶ್ರುತಿಃ ।
ಅವಾಕ್ತ್ವಾನ್ನ ತು ವಕ್ತೃಃ ಸ್ಯಾದಮನಸ್ತ್ವಾನ್ಮತಿಃ ಕುತಃ ॥ ೧ ॥
ಅಪ್ರಾಣಸ್ಯ ನ ಕರ್ಮಾಸ್ತಿ ಬುದ್ಧ್ಯಭಾವೇ ನ ವೇದಿತಾ ।
ವಿದ್ಯಾವಿದ್ಯೇ ತತೋ ನಸ್ತಶ್ಚಿನ್ಮಾತ್ರಜ್ಯೋತಿಷೋ ಮಮ ॥ ೨ ॥
ನಿತ್ಯಮುಕ್ತಸ್ಯ ಶುದ್ಧಸ್ಯ ಕೂಟಸ್ಥಸ್ಯಾವಿಚಾಲಿನಃ ।
ಅಮೃತಸ್ಯಾಕ್ಷರಸ್ಯೈವಮಶರೀರಸ್ಯ ಸರ್ವದಾ ॥ ೩ ॥
ಜಿಘತ್ಸಾ ವಾ ಪಿಪಾಸಾ ವಾ ಶೋಕಮೋಹೌ ಜರಾಮೃತೀ ।
ನ ವಿದ್ಯನ್ತೇಽಶರೀರತ್ವಾದ್ ವ್ಯೋಮವದ್ ವ್ಯಾಪಿನೋ ಮಮ ॥ ೪ ॥
ಅಸ್ಪರ್ಶತ್ವಾನ್ನ ಮೇ ಸ್ಪೃಷ್ಟಿರ್ನಾ ಜಿಹ್ವತ್ವಾದ್ರಸಜ್ಞತಾ ।
ನಿತ್ಯವಿಜ್ಞಾನರೂಪಸ್ಯ ಜ್ಞಾನಾಜ್ಞಾನೇ ನ ಮೇ ಸದಾ ॥ ೫ ॥

೧-೫. ಚಕ್ಷುರಿಂದ್ರಿಯವಿಲ್ಲದ್ದರಿಂದ ನನಗೆ ನೋಟವಿಲ್ಲ. ಶ್ರೋತ್ರವಿಲ್ಲದ (ನನಗೆ) ಕೇಳುವಿಕೆ ಯಾವದು ? ವಾಗಿಂದ್ರಿಯವಿಲ್ಲದ್ದರಿಂದ ವಚನವಿಲ್ಲ. ಮನಸ್ಸಿಲ್ಲದವನಾದ್ದರಿಂದ ಮನನವೆಲ್ಲಿಯದು ? ಪ್ರಾಣವಿಲ್ಲದ (ನನಗೆ) ಕರ್ಮ ವಿಲ್ಲ, ಬುದ್ಧಿಯಿಲ್ಲದ್ದರಿಂದ ನಾನು ಅರಿಯುವವನಲ್ಲ. ಆದ್ದರಿಂದ ಚಿನ್ಮಾತ್ರ ಜ್ಯೋತಿಯಾದ ನನಗೆ ವಿದ್ಯಾವಿದ್ಯೆಗಳೂ ಇಲ್ಲ. ನಿತ್ಯಮುಕ್ತನೂ ಶುದ್ಧನೂ ಕೂಟಸ್ಥನೂ ಅಚಲನೂ ಅಮೃತನೂ ಅಕ್ಷರನೂ ಮತ್ತು ಅಶರೀರನೂ ಆಗಿರುವ ನನಗೆ ಹಸಿವಾಗಲಿ ಬಾಯಾರಿಕೆಯಾಗಲಿ ಶೋಕಮೋಹಗಳಾಗಲಿ ಮುಪ್ಪು ಸಾವುಗಳಾಗಲಿ ಇರುವದಿಲ್ಲ. ಶರೀರವಿಲ್ಲದ್ದರಿಂದ ಆಕಾಶದಂತೆ (ಎಲ್ಲೆಲ್ಲಿಯೂ) ವ್ಯಾಪಿಸಿಕೊಂಡಿರುವ ನನಗೆ ಸ್ಪರ್ಶೇಂದ್ರಿಯವಿಲ್ಲದ್ದರಿಂದ ಮುಟ್ಟುವಿಕೆ ಯಿಲ್ಲ. ಜಿಹ್ವೇಂದ್ರಿಯವಿಲ್ಲದ್ದರಿಂದ ಸವಿಯನ್ನರಿಯುವಿಕೆಯಿಲ್ಲ. ನಿತ್ಯಚೈತನ್ಯ ಸ್ವರೂಪನಾಗಿರುವದರಿಂದ ನನಗೆ ಅರಿಯುವದು, ಅರಿಯದಿರುವದು –ಎಂಬಿವು ಎಂದಿಗೂ ಇಲ್ಲ[2].

---

1. ಪ್ರಾರಂಭದ ಶಬ್ದದಮೇಲಿನಿಂದ ವ್ಯಾಖ್ಯಾನಗಳು ಇದನ್ನು 'ಅಚಕ್ಷುಷ್ಟ್ವ ಪ್ರಕರಣ'ವೆಂದು ಕರೆದಿವೆ.

2. ಶರೀರ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ –ಎಂಬ ಉಪಾಧಿಗಳಿಂದಲೇ ಆತ್ಮನಿಗೆ ದೃಷ್ಟ್ಯಾದಿಗಳ ಧರ್ಮವೆಂಬ ಭ್ರಾಂತಿಯಾಗಿರುವದು. ಆದರೆ ಈ ಉಪಾಧಿಗಳು ಅವಿದ್ಯಾಕೃತನಾಗಿರುವದರಿಂದ ಈ ದೃಷ್ಟ್ಯಾದಿಗಳು ಆತ್ಮನ ಧರ್ಮನಲ್ಲವೇ ಅಲ್ಲ.

ಆತ್ಮನಲ್ಲಿ ಸ್ವಾಭಾವಿಕವಾದ ನಿತ್ಯದೃಷ್ಟ್ಯಾದಿಗಳಿವೆ

ಯಾ ತು ಸ್ಯಾನ್ಮಾನಸೀ ವೃತ್ತಿಶ್ಚಾಕ್ಷುಷ್ಯಾ ರೂಪರಞ್ಜಿತಾ ।
ನಿತ್ಯಮೇವಾತ್ಮನೋ ದೃಷ್ಟ್ಯಾ ನಿತ್ಯಯಾ ದೃಶ್ಯತೇ ಹಿ ಸಾ ॥ ೬ ॥
ತಥಾನ್ಯೇನ್ದ್ರಿಯಯುಕ್ತಾ ಯಾ ವೃತ್ತಯೋ ವಿಷಯಾಞ್ಜಿತಾಃ ।
ಸ್ಮೃತೀ ರಾಗಾದಿರೂಪಾ ಚ ಕೇವಲಾನ್ತರ್ಮನಸ್ಯಪಿ ॥ ೭ ॥
ಮಾನಸ್ಯಸ್ತದ್ವದನ್ಯಸ್ಯ ದೃಶ್ಯನ್ತೇ ಸ್ವಪ್ನವೃತ್ತಯಃ ।
ದ್ರಷ್ಟುರ್ದೃಷ್ಟಿಸ್ತತೋ ನಿತ್ಯಾ ಶುದ್ಧಾನನ್ತಾ ಚ ಕೇವಲಾ ॥ ೮ ॥

೬-೮. ಚಕ್ಷುರಿನ್ದ್ರಿಯದ (ಮೂಲಕ ಹೊರಟು) ರೂಪರಂಜಿತವಾಗುವ ಮನೋವೃತ್ತಿಯಿದೆಯಲ್ಲ, ಅದು ಆತ್ಮನ ನಿತ್ಯವಾದ ದೃಷ್ಟಿಯಿಂದ[1] ಯಾವಾಗಲೂ ನೋಡಲ್ಪಡುತ್ತಿರುವದು. ಇದರಂತೆ ಮಿಕ್ಕ ಇಂದ್ರಿಯಗಳ ಮೂಲಕ ವಿಷಯಗಳ ಬಳಿತದಿಂದೊಡಗೂಡಿ (ಹೊರಕ್ಕೆ ಬರುವ) ವೃತ್ತಿಗಳಿರುವವಲ್ಲ, (ಅವೂ) ಸ್ಮೃತಿಯೂ ರಾಗವೇ ಮುಂತಾದ ಬರಿಯ ಮನಸ್ಸಿನೊಳಗೇ ಆಗುವ ವೃತ್ತಿಗಳೂ (ಆತ್ಮನ ನಿತ್ಯದೃಷ್ಟಿಗೆ ವಿಷಯವಾಗಿಯೇ ಇರುವವು). ಇದೇ ರೀತಿಯಲ್ಲಿ ಸ್ವಪ್ನದಲ್ಲಿ (ಆಗುವ) ವೃತ್ತಿಗಳೂ (ತಮಗಿಂತ) ಬೇರೆಯಾದ[2] (ಆತ್ಮನಿಗೆ) ದೃಶ್ಯವಾಗಿಯೇ ಇರುತ್ತವೆ. ಆದ್ದರಿಂದ ದ್ರಷ್ಟೃವಾದ ಆತ್ಮನ ದೃಷ್ಟಿಯು[3] ನಿತ್ಯವಾದದ್ದು, ಶುದ್ಧವಾದದ್ದು, ಅನಂತವಾದದ್ದು, ತಾನೇ ತಾನಾಗಿರುವಂಥದ್ದು.

ಆತ್ಮನ ದೃಷ್ಟಿಯು ಅನಿತ್ಯವೆಂಬ ಭ್ರಾಂತಿಗೆ ಕಾರಣ

ಅನಿತ್ಯಾ ಸಾऽವಿಶುದ್ಧೇತಿ ಗೃಹ್ಯತೇऽತ್ರಾವಿವೇಕತಃ ।
ಸುಖೀ ದುಃಖೀ ತಥಾ ಚಾಹಂ ದೃಶ್ಯಯೋಸಾಧಿಭೂತಯಾ ॥ ೯ ॥
ಮೂಢಯಾ ಮೂಢ ಇತ್ಯೇವಂ ಶುದ್ಧಯಾ ಶುದ್ಧ ಇತ್ಯಪಿ ।
ಮನ್ಯತೇ ಸರ್ವಲೋಕೋऽಯಂ ಯೇನ ಸಂಸಾರಮೃಚ್ಛತಿ ॥ ೧೦ ॥

---

1. ಚೈತನ್ಯರೂಪವನ್ನೇ ಇಲ್ಲಿ ದೃಷ್ಟಿಯೆಂದು ಕರೆದಿದೆ.

2. 'ತದ್ಭವಪಶ್ಯಸ್ಯ' ಎಂಬ ಪಾಠವಿದ್ದರೆ 'ಈ ಆತ್ಮನ ಕನಸಿನಲ್ಲಾಗುವ ಮಾನಸ ವೃತ್ತಿಗಳು ಕೂಡ' ಎಂದು ಕನ್ನಡಿಸಬೇಕಾಗುವದು.

3. ಆತ್ಮನ ಸ್ವರೂಪವಾದ ಚೈತನ್ಯರೂಪದೃಷ್ಟಿಯು ಎಂದರ್ಥ. ಆತ್ಮನಿಗೆ ಅನಿತ್ಯವಾದ ದೃಷ್ಟಿರೂಪವಾದ ಧರ್ಮವು ನಿಜವಾಗಿಲ್ಲವೆಂದು ಹಿಂದೆ ತಿಳಿಸಿಯೇ ಇರುತ್ತದೆ. ಹೀಗೆ ದೃಷ್ಟಿ ಮುಂತಾದ ಶಬ್ದಗಳನ್ನು ಎರಡೆರಡರ್ಥದಲ್ಲಿ ಉಪಯೋಗಿಸಿರುವದನ್ನು ಐತರೇಯ ಒಂದನೆಯ ಅಧ್ಯಾಯದ ಉಪಸಂಹಾರಭಾಷ್ಯದಲ್ಲಿಯೂ ಬೃ. ೩-೪-೨ರ ಭಾಷ್ಯದಲ್ಲಿಯೂ ಸ್ಪಷ್ಟಗೊಳಿಸಿದೆ.

೯-೧೦. ಇಲ್ಲಿ ದೃಶ್ಯವಾಗಿ (ಆತ್ಮನಿಗೆ) ಉಪಾಧಿಯಾಗಿರುವ (ದೃಷ್ಟಿಯಿಂದ)[1] ವಿಂಗಡಿಸಿಕೊಳ್ಳಲಾರದೆ ಇರುವದರಿಂದ ಆ (ಜೈತನ್ಯದೃಷ್ಟಿಯು) ಅನಿತ್ಯವೆಂದೂ ಅಶುದ್ಧವಾಗಿರುವದೆಂದೂ ಗ್ರಹಿಸಲ್ಪಡುತ್ತಿದೆ. ಹೀಗೆಯೇ[2] ನಾನು ಸುಖಿಯು ದುಃಖಿಯು' ಎಂದೂ ಮೂಢವಾದ (ದೃಷ್ಟಿಯಿಂದ ವಿಂಗಡಿಸಿಕೊಳ್ಳಲಾರದೆ ನಾನು) 'ಮೂಢನು' ಎಂದೂ ಶುದ್ಧವಾದ (ದೃಷ್ಟಿಯಿಂದ ವಿಂಗಡಿಸಿಕೊಳ್ಳಲಾರದೆ ನಾನು) 'ಶುದ್ಧನು' ಎಂದೂ ಈ ಜನವೆಲ್ಲವೂ ಭಾವಿಸುತ್ತಿರುವದು[3]. ಇದರಿಂದ ಸಂಸಾರವನ್ನು ಪಡೆಯುತ್ತಿರುವದು.

ನಿರ್ವಿಕಲ್ಪಾತ್ಮನ ಅನುಸಂಧಾನ

ಅಚಕ್ಷುಷ್ಕಾದಿಶಾಸ್ತ್ರೋಕ್ತಂ ಸ ಬಾಹ್ಯಾನ್ತರಂ ತ್ವಜಮ್ |
ನಿತ್ಯಮುಕ್ತಮಿಹಾತ್ಮಾನಂ ಮುಮುಕ್ಷುಶ್ಚೇತ್ ಸದಾ ಸ್ಮರೇತ್ ॥ ೧೧ ॥

ಈ (ಲೋಕ)ದಲ್ಲಿ ಮುಮುಕ್ಷುವೆಯುಳ್ಳವನಾಗಿದ್ದರೆ 'ಅಚಕ್ಷುಷ್ಕಮ್' (ಚಕ್ಷುರಿಂದ್ರಿಯವಿಲ್ಲದವನು. ಬೃ. ೩-೮-೮) ಮುಂತಾದ ಶಾಸ್ತ್ರದಲ್ಲಿ ಹೇಳಿರುವ 'ಒಳಗೂ ಹೊರಗೂ ಜನ್ಮರಹಿತವಾಗಿರುವ' (ಮುಂ. ೨-೧-೨) ನಿತ್ಯಮುಕ್ತನಾದ ಆತ್ಮನನ್ನು ಯಾವಾಗಲೂ ಸ್ಮರಿಸುತ್ತಿರಬೇಕು.

ಅಚಕ್ಷುಷ್ಕಾದಿಶಾಸ್ತ್ರಾಚ್ಚ ನೇನ್ದ್ರಿಯಾಣಿ ಸದಾ ಮನು |
ಅಪ್ರಾಣೋ ಹ್ಯಮನಾಃ ಶುಭ್ರ ಇತಿ ಚಾಥರ್ವಣೇ ವಚಃ ॥ ೧೨ ॥
ಕಬ್ಬಾದೀನಾಮಭಾವಶ್ಚ ಶ್ರೂಯತೇ ಮನು ಕಾಠಕೇ |
ಅಪ್ರಾಣೋ ಹ್ಯಮನಾಃ ಯಸ್ಮಾದವಿಕಾರೀ ಸದಾ ಹ್ಯಹಮ್ ॥ ೧೩ ॥

೧೨-೧೩. "ಅಚಕ್ಷುಷ್ಕಾದಿಶಾಸ್ತ್ರ(ಪ್ರಮಾಣ)ದಿಂದ ನನಗೆ ಎಂದಿಗೂ ಇಂದ್ರಿಯಾದಿಗಳು ಇರುವದೇ ಇಲ್ಲ. "ಅಪ್ರಾಣೋ ಹ್ಯಮನಾಃ ಶುಭ್ರಃ" (ಮುಂ. ೨-೧-೨ ಪ್ರಾಣವಿಲ್ಲದವನು, ಮನಸ್ಸಿಲ್ಲದವನು, ಶುಭ್ರನು) ಎಂದು

---

1. ಇಲ್ಲಿ ದೃಷ್ಟಿ ಎಂದರೆ ಚಕ್ಷುರಿಂದ್ರಿಯಸಂಬಂಧದಿಂದ ಆಗಿರುವ ಮಾನಸವೃತ್ತಿ. ಈ ಅನಿತ್ಯದೃಷ್ಟಿಯನ್ನೂ ಆತ್ಮನ ಸ್ವರೂಪವಾಗಿರುವ ನಿತ್ಯದೃಷ್ಟಿಯನ್ನೂ ವಿಂಗಡಿಸಿಕೊಳ್ಳದೆ ಅನ್ಯೋನ್ಯಾಧ್ಯಾಸವನ್ನು ಮಾಡಿಕೊಂಡು ವಿಷಯಸಂಬಂಧದಿಂದ ನನಗೆ ಅಶುದ್ಧವಾದ ದೃಷ್ಟಿಯು ಹುಟ್ಟಿತು –ಎಂದು ಭಾವಿಸಿಕೊಳ್ಳುತ್ತಾರೆ.

2. ಸುಖಿತ್ವದುಃಖಿತ್ವವೃತ್ತಿಗಳಿಂದ ವಿಂಗಡಿಸಿಕೊಳ್ಳದ ನಿಮಿತ್ತದಿಂದ ಆದ ಅಧ್ಯಾಸದಿಂದ ಎಂದರ್ಥ.

3. ತಪ್ಪಾಗಿ ತಿಳಿದುಕೊಳ್ಳುತ್ತಿರುವದು. ಅವಿವೇಕದಿಂದ ಅಭ್ಯಾಸವಾಗಿರುವದರಿಂದ ವಿವೇಕವೇ ಇವನ್ನು ತೊಲಗಿಸುವದು ಎಂದು ಭಾವ.

ಆಥರ್ವಣ(ಶ್ರುತಿಯ) ವಚನವೂ ಇವೆ. ಶಬ್ದವೇ ಮುಂತಾದವುಗಳು ನನ್ನಲ್ಲಿ ಇಲ್ಲವೆಂದೂ ಕಾಠಕ(ಶ್ರುತಿಯಲ್ಲಿ) ಹೇಳಿದೆ[1]. ಅಪ್ರಾಣನೂ ಅಮನನೂ ಆಗಿರುವದರಿಂದ ನಾನು ಯಾವಾಗಲೂ ವಿಕಾರರಹಿತನಾಗಿರುತ್ತೇನೆ[2].

ವಿಕ್ಷೇಪೋ ನಾಸ್ತಿ ತಸ್ಮಾನ್ಮೇ ನ ಸಮಾಧಿಸ್ತತೋ ಮಮ।
ವಿಕ್ಷೇಪೋ ವಾ ಸಮಾಧಿರ್ವಾ ಮನಸಃ ಸ್ಯಾದ್ವಿಕಾರಿಣಃ ॥ ೧೪ ॥

ಅಮನಸ್ಕಸ್ಯ ಶುದ್ಧಸ್ಯ ಕಥಂ ಸ್ಯಾತ್ ತದ್ದ್ವಯಂ ಮಮ।
ಅಮನಸ್ತ್ವಾವಿಕಾರಿತ್ವೇ ವಿದೇಹವ್ಯಾಪಿನೋ ಮಮ ॥ ೧೫ ॥

ಇತ್ಯೇವದ್ಯಾವದಜ್ಞಾತಂ ತಾವತ್ಕಾರ್ಯಂ ಮಮಾಭವತ್ ॥ ೧೫½

ನಿತ್ಯಮುಕ್ತಸ್ಯ ಶುದ್ಧಸ್ಯ ಬುದ್ಧಸ್ಯ ಚ ಸದಾ ಮಮ।
ಸಮಾಧಿರ್ವಾಸಮಾಧಿರ್ವಾ ಕಾರ್ಯಂ ಚಾನ್ಯತ್ ಕುತೋ ಭವೇತ್ ॥
ಮಾಂ ಹಿ ಧ್ಯಾತ್ವಾ ಚ ಬುದ್ಧ್ವಾ ಚ ಮನ್ಯನ್ತೇ ಕೃತಕೃತ್ಯತಾಮ್ ॥೧೬॥

೧೪-೧೬. "ಆದ್ದರಿಂದ ನನಗೆ ವಿಕ್ಷೇಪವಿಲ್ಲ; ಆದ್ದರಿಂದ ನನಗೆ ಸಮಾಧಿಯೂ ಇಲ್ಲ. ವಿಕ್ಷೇಪವಾಗಲಿ ಸಮಾಧಿಯಾಗಲಿ ವಿಕಾರವುಳ್ಳ ಮನಸ್ಸಿಗೆ ಆಗಬಹುದು. ಅಮನಸ್ಕನೂ ಶುದ್ಧನೂ ಆಗಿರುವ ನನಗೆ ಆ ಎರಡೂ ಹೇಗೆ ಆದೀತು? ಶರೀರರಹಿತನೂ ವ್ಯಾಪಿಯೂ ಆಗಿರುವದರಿಂದ ನಾನು ಅಮನಸ್ಕನೂ ಅವಿಕಾರಿಯೂ (ಆಗಿರುವೆನು)[3]. ಇಂತೆಂದು ಎಲ್ಲಿಯವರೆಗೆ ತಿಳಿದಿರಲಿಲ್ಲವೋ ಅಲ್ಲಿಯವರೆಗೆ ನನಗೆ ಕಾರ್ಯವು ಇದ್ದಿತು[4]. ನಿತ್ಯಮುಕ್ತನೂ ಯಾವಾಗಲೂ ಶುದ್ಧನೂ ಬುದ್ಧನೂ ಆಗಿರುವ ನನಗೆ ಸಮಾಧಿಯಾಗಲಿ ಅಸಮಾಧಿಯಾಗಲಿ ಮತ್ತೆ ಬೇರೆಯ ಕಾರ್ಯವಾಗಲಿ ಎಲ್ಲಿಂದ ಉಂಟಾದೀತು?

---

1. ಕ. ೧-೩-೫ರಲ್ಲಿ ಶಬ್ದಾದಿಗಳು ಆತ್ಮನಿಗಿಲ್ಲವೆಂದಿದೆ. ಶಬ್ದಾದಿಗಳು ಹೆಚ್ಚು ವದರಿಂದ ಸ್ಥೂಲತ್ವವೂ ಕಾರ್ಯತ್ವವೂ ಅನಿತ್ಯತ್ವವೂ ಉಂಟಾಗುವವು.

2. ಜ್ಞಾನಕೃತವಿಕಾರಗಳಾಗಲಿ ಕರ್ಮಕೃತವಿಕಾರಗಳಾಗಲಿ ನನಗೆ ಇರುವದಿಲ್ಲ ಎಂದರ್ಥ.

3 ಮನಸ್ಸಿನಿಂದ ವಿಕ್ಷೇಪವನ್ನು ಅನುಭವಿಸುವವನು ಸಮಾಧಾನಕ್ಕಾಗಿ ಪ್ರಯತ್ನಿಸ ಬೇಕು. ಮನಸ್ಸೇ ಇಲ್ಲದ್ದರಿಂದ ಅದು ಜ್ಞಾನಿಗೆ ಏತಕ್ಕೆ ಬೇಕು?

4. ಅಜ್ಞಾನದಿಂದಲೇ ಮನಸ್ಸಿನ ನಿಕ್ಷೇಪವು ಕಾಣುತ್ತದೆ; ಸಮಾಧಾನಕ್ಕಾಗಿ ಪ್ರಯತ್ನ ಮಾಡುವ ಕರ್ತೃತ್ವವೂ ಅಜ್ಞಾನದೃಷ್ಟಿಯಿಂದಲೇ ಇರುತ್ತದೆ.

ನನ್ನನ್ನು ಧ್ಯಾನಮಾಡಿ ಅರಿತುಕೊಂಡೇ ಅಲ್ಲವೆ, (ಜನರು) ಕೃತಕೃತ್ಯರಾದೆವೆಂದು ಎಣಿಸಿಕೊಳ್ಳುತ್ತಾರೆ?[1]

ಅಹಂ ಬ್ರಹ್ಮಾಸ್ಮಿ ಸರ್ವೋಽಸ್ಮಿ ಶುದ್ಧೋ ಬುದ್ಧೋಽಸ್ಮ್ಯತಃ ಸದಾ ।
ಅಜಃ ಸರ್ವತ ಏವಾಹಮಜರಶ್ಚಾಕ್ಷಯೋಽಮೃತಃ ॥ ೧೪ ॥

೧೪. ನಾನು ಬ್ರಹ್ಮವಾಗಿರುತ್ತೇನೆ, ಎಲ್ಲವೂ ಆಗಿರುತ್ತೇನೆ. ಆದ್ದರಿಂದ ಯಾವಾಗಲೂ ಶುದ್ಧನೂ ಬುದ್ಧನೂ ಆಗಿರುತ್ತೇನೆ. ನಾನು ಎಲ್ಲೆಲ್ಲಿಯೂ ಜನ್ಮರಹಿತನು, ಮುಪ್ಪಿಲ್ಲದವನು, ನಾಶರಹಿತನು, ಅಮೃತ(ಸ್ವಭಾವ)ನು.

ಮದನ್ಯಃ ಸರ್ವಭೂತೇಷು ಜೋದ್ಧಾ ಕಶ್ಚಿನ್ನ ವಿದ್ಯತೇ ।
ಕರ್ಮಾಧ್ಯಕ್ಷಶ್ಚ ಸಾಕ್ಷೀ ಚ ಚೇತಾ ನಿತ್ಯೋಽಗುಣೋಽದ್ವಯಃ ॥

೧೫. ನನಗಿಂತ ಮತ್ತೊಬ್ಬ ವಿಜ್ಞಾತೃವು ಯಾವ ಪ್ರಾಣಿಗಳಲ್ಲಿಯೂ ಇರುವದಿಲ್ಲ. ನಾನೇ (ಅಲ್ಲೆಲ್ಲ) ಕರ್ಮಗಳಿಗೆ ಒಡೆಯನೂ ಸಾಕ್ಷಿಯೂ ಚೈತನ್ಯಸ್ವರೂಪನೂ ನಿತ್ಯನೂ ನಿರ್ಗುಣನೂ[2] ಅದ್ವಿತೀಯನೂ (ಆಗಿರುತ್ತೇನೆ.)

ನ ಸಚ್ಚಾಹಂ ನ ಚಾಸಚ್ಚ ನೋಭಯಂ ಕೇವಲಃ ಶಿವಃ ।
ನ ಮೇ ಸನ್ಧ್ಯಾ ನ ರಾತ್ರಿರ್ವಾ ನಾಹರ್ವಾ ಸರ್ವದಾ ದೃಶೇಃ ॥ ೧೦ ॥

೧೦. "ನಾನು ಸತ್ತಲ್ಲ, ಅಸತ್ತೂ ಅಲ್ಲ, ಎರಡೂ ಅಲ್ಲ; ಕೇವಲ ಶಿವನು. ನನಗೆ ಸಂಧ್ಯಾಕಾಲ(ದ ಕರ್ತವ್ಯ)ವಿಲ್ಲ. ಯಾವಾಗಲೂ ದೃಗ್ರೂಪನಾಗಿರುವ (ನನಗೆ) ರಾತ್ರಿಯೂ ಇಲ್ಲ, ಹಗಲೂ ಇಲ್ಲ.[3]

ಸರ್ವಮೂರ್ತಿವಿಯುಕ್ತಂ ಯದ್ಯಥಾ ಖಂ ಸೂಕ್ಷ್ಮಮದ್ವಯಮ್ ।
ತೇನಾಸ್ಮಿ ವಿನಾಭೂತಂ ಬ್ರಹ್ಮೈವಾಹಂ ತಥಾದ್ವಯಮ್ ॥ ೧೧

೧೧. " ಯಾವ ಆಕಾರವೂ ಇಲ್ಲದ ಆಕಾಶವು ಹೇಗೆ ಸೂಕ್ಷ್ಮವೂ ಅದ್ವಯವೂ ಆಗಿರುವದೋ ಹಾಗೆ ನಾನು ಆ (ಆಕಾಶವು)ಕೂಡ ಇಲ್ಲದ[4] ಅದ್ವಿತೀಯಬ್ರಹ್ಮವೇ ಆಗಿರುವೆನು.

ಮಮಾತ್ಮಾ ಸ್ವತ ಆತ್ಮೇತಿ ಭೇದೋ ವ್ಯೋಮ್ನೋ ಯಥಾ ಭವೇತ್ ।
ಏಕಸ್ಯ ಸುಷಿಭೇದೇನ ತಥಾ ಮಮ ವಿಕಲ್ಪಿತಃ ॥ ೧೨ ॥

---

1. ಯಾವನಲ್ಲಿ ಮನಸ್ಸನ್ನು ನಿಲ್ಲಿಸಿದರೆ ಸಮಾಧಿಯಾಗುವದೋ ಅವನು ನಿತ್ಯ ಸಮಾಧಿಸ್ವರೂಪನು; ಯಾವನ ಜ್ಞಾನವನ್ನು ಸಂಪಾದಿಸಿಕೊಂಡರೆ ಮುಕ್ತಿಯಾಗುವದೋ ಅವನು ನಿತ್ಯಮುಕ್ತನು. ಅಂಥ ಈಶ್ವರಸ್ವರೂಪವು ನನ್ನದು ಎಂದು ಭಾವ.

2. ಶ್ಲೋ. ೬–೧೧ರ ಅಭಿಪ್ರಾಯವಿದು.

3. ರಾತ್ರಿಯೂ ಇಲ್ಲದೆ ಹಗಲೂ ಇಲ್ಲದೆ ಸಂಧ್ಯಾಕಾಲವೆಲ್ಲಿದ್ದೀತು?

4. ಅದಕ್ಕಿಂತಲೂ ಸೂಕ್ಷ್ಮವಾದ

೨೨. "ನನ್ನ ಆತ್ಮನು ಸ್ವರೂಪದಿಂದಲೇ ಆತ್ಮನಾದ್ದರಿಂದ ಒಂದೇ ಆಕಾಶಕ್ಕೆ ಭಿದ್ರಭೇದದಿಂದ ಹೇಗೆ ಭೇದವಾಗಿರುವದೋ ಹಾಗೆ ನನಗೂ ವಿಕಲ್ಪಿತವಾಗಿರುತ್ತದೆ.[1]

ಭೇದೋಽಭೇದಸ್ತಥಾ ಚೈಕೋ ನಾನಾ ಚೇತಿ ವಿಕಲ್ಪಿತಃ ।
ಜ್ಞೇಯಂ ಜ್ಞಾತಾ ಗತಿರ್ಗನ್ತಾ ಮಯ್ಯೇಕಸ್ಮಿನ್ ಕುತೋ ಭವೇತ್ ॥

೨೩. ಭೇದ, ಅಭೇದ; ಒಬ್ಬನು, ಅನೇಕರು; ಅರಿಯಲ್ಪಡತಕ್ಕದ್ದು, ಅರಿಯುವವನು; ಹೋಗುವಿಕೆ, ಹೋಗುವವನು– ಎಂದು ವಿಕಲ್ಪಿತವಾಗಿರುವ (ದ್ವೈತವು) ನನ್ನೊಬ್ಬನಲ್ಲಿ ಹೇಗೆ ಇದ್ದೀತು ?

ನ ಮೇ ಹೇಯಂ ನಚಾದೇಯಮವಿಕಾರೀ ಯತೋ ಽಹಮ್ ।
ಸದಾ ಮುಕ್ತಸ್ತಥಾ ಶುದ್ಧಃ ಸದಾ ಬುದ್ಧೋಽಗುಣೋಽದ್ವಯಃ ॥ ೨೪

೨೪. "ನನಗೆ ಬಿಡತಕ್ಕದ್ದಾಗಲಿ ತೆಗೆದುಕೊಳ್ಳತಕ್ಕದ್ದಾಗಲಿ ಇರುವದಿಲ್ಲ ಏಕೆಂದರೆ ನಾನು ಅವಿಕಾರಿಯಾಗಿರುತ್ತೇನೆ; ಯಾವಾಗಲೂ ಮುಕ್ತನು, ಶುದ್ಧನು, ಯಾವಾಗಲೂ ಚೈತನ್ಯಸ್ವರೂಪನು, ನಿರ್ಗುಣನು, ಅದ್ವಯನು.[2]"

ಆತ್ಮಸ್ವರೂಪಜ್ಞಾನಕ್ಕೆ ಫಲ

ಇತ್ಯೇವಂ ಸರ್ವದಾತ್ಮಾನಂ ವಿದ್ಯಾತ್ಸರ್ವಂ ಸಮಾಹಿತಃ ।
ವಿದಿತ್ವಾ ಮಾಂ ಸ್ವದೇಹಸ್ಥಂ ಋಷಿಸರ್ಮುಕ್ತೋ ಧ್ರುವೋ ಭವೇತ್ ॥
ಕೃತಕೃತ್ಯಶ್ಚ ಸಿದ್ಧಶ್ಚ ಯೋಗೀ ಬ್ರಾಹ್ಮಣ ಏವ ಚ ।
ಯ ಏವಂ ವೇದ ತತ್ತ್ವಾರ್ಥಮನ್ಯಥಾ ಹ್ಯಾತ್ಮಹಾ ಭವೇತ್ ॥ ೨೬ ॥

---

1. ಆಕಾಶದಲ್ಲಿ ಭೇದವೆಂಬುದು ಬರಿಯ ವಿಕಲ್ಪವೇ; ಏಕೆಂದರೆ ಎಲ್ಲಾ ಭೂತಗಳೂ ಆಕಾಶವಯವಾಗಿರುವದರಿಂದ ಆಕಾಶಕ್ಕೆ ಭೇದಕವಾದ ಮತ್ತೊಂದು ವಸ್ತುವೇ ನಿಜವಾಗಿರುವದಿಲ್ಲ. ಇದರಂತೆ ಆತ್ಮನಿಂದಲೇ ಆಕಾಶಾದಿಗಳುಂಟಾಗಿರುವದರಿಂದ ಆತ್ಮ ಭೇದವೂ ಬರಿಯ ವಿಕಲ್ಪವೇ. ಆಕಾಶದಲ್ಲಿ ಭೇದವಿರುವಂತೆ ವ್ಯವಹಾರದಲ್ಲಿ ಉಪಾಧಿವಶದಿಂದೆ ಕಲ್ಪಿಸಿರುತ್ತಾರೆ; ಆತ್ಮನಲ್ಲಿಯೂ ಹಾಗೆಯೇ.

2. ತನಗೆ ಎಡತನೆಯದೆನಿಸಿರುವ ವಸ್ತುವೇ ಇಲ್ಲವ್ದರಿಂದ ಬಿಡತಕ್ಕದ್ದು ಮುಂತಾದವುಗಳಿಲ್ಲ. ತನ್ನನ್ನು ವಿಕಾರವನ್ನು ಹೊಡುವ ಅಂಥ ಕಟ್ಟಿಗೆ ಸಿಕ್ಕಿಸುವ, ಅದನ್ನು ಬೆಳಗುವ, ಫಲ ಅದರ ಗುಣವೆನಿಸುವ ಪದಾರ್ಥವಿಲ್ಲ.

೩೫-೩೬. ಹೀಗೆಂದು ಯಾವಾಗಲೂ ಆತ್ಮನನ್ನು ಸರ್ವವೂ ಎಂದು ಸಮಾಧಾನಚಿತ್ತದಿಂದ ತಿಳಿದುಕೊಳ್ಳಬೇಕು. ತನ್ನ ದೇಹದಲ್ಲಿರುವ ನನ್ನನ್ನು ಅರಿತುಕೊಂಡು ಋಷಿಯೂ[1] ಮುಕ್ತನೂ[2] ಧ್ರುವನೂ[3] ಆಗುವನು. ಯಾವನು ಹೀಗೆಂದು ತತ್ತ್ವಾರ್ಥವನ್ನು ಅರಿತುಕೊಂಡಿರುವನೋ ಅವನು ಕೃತಕೃತ್ಯನೂ ಸಿದ್ಧನೂ ಯೋಗಿಯೂ ಬ್ರಾಹ್ಮಣನೂ[4] (ಆಗಿರುತ್ತಾನೆ). ಹಾಗಿಲ್ಲದವನು ಆತ್ಮಹತ್ಯೆಯನ್ನೇ ಮಾಡಿದವನಾಗುವನು[5]

ವೇದಾಂತಕ್ಕೆ ಅಧಿಕಾರಿಗಳು

ವೇದಾರ್ಥೋ ನಿಶ್ಚಿತೋ ಹ್ಯೇಷ ಸಮಾಸೇನ ಮಯೋದಿತಃ |
ಸಂನ್ಯಾಸಿಭ್ಯಃ ಪ್ರವಕ್ತವ್ಯಃ ಶಾನ್ತೇಭ್ಯಃ ಶಿಷ್ಟಬುದ್ಧಿನಾ ॥ ೨೭ ॥

೨೭. ನಾನು ಸಂಗ್ರಹವಾಗಿ ಹೇಳಿರುವ ಇದೇ ನಿಶ್ಚಿತವಾದ ವೇದಾರ್ಥವು. ಇದನ್ನು ಶಿಷ್ಟಬುದ್ಧಿಯಾದವನು ಶಾಂತರಾದ ಸಂನ್ಯಾಸಿಗಳಿಗೆ ಹೇಳಬೇಕು.

——:೦:——

ನಿರ್ವಿಕಲ್ಪಾತ್ಮಪ್ರಕರಣದ ಸಾರ

೧-೫. ಆತ್ಮನಿಗೆ ಚಕ್ಷುರಾದೀಂದ್ರಿಯಗಳಿಲ್ಲದ್ದರಿಂದ ಅವನಿಗೆ ನೋಟ, ಕೇಳುವಿಕೆ-ಮುಂತಾದ ಧರ್ಮಗಳಿಲ್ಲ ; ಪ್ರಾಣವಿಲ್ಲದ್ದರಿಂದ ಕರ್ಮಸಾಮಾನ್ಯವೇ ಇಲ್ಲ ; ಮನಸ್ಸಿಲ್ಲದ್ದರಿಂದ ಜ್ಞಾನಸಾಮಾನ್ಯವೂ ಇಲ್ಲ. ಅವನು ಅಶರೀರನು, ಅಪ್ರಾಣನು, ಅಮನಸ್ಕನು ; ಆದ್ದರಿಂದ ಮುಪ್ಪು ಸಾವು, ಹಸಿವು ಬಾಯಾರಿಕೆ, ಶೋಕ ಮೋಹ-ಎಂಬ ದೋಷಗಳು ಅವನಲ್ಲಿಲ್ಲ. ನಿತ್ಯವಿಜ್ಞಾನಸ್ವರೂಪನಾಗಿರುವದರಿಂದ ಅವನು ಮನಸ್ಸಿನ ಧರ್ಮಗಳಿಂದ ಜ್ಞಾನಾಜ್ಞಾನಗಳಿಗೆ ಆಶ್ರಯನೂ ಆಲ್ಲ, ವಿಷಯನೂ ಆಲ್ಲ.

೬-೮. ಆತ್ಮನಲ್ಲಿ ಅನಿತ್ಯವಾದ ದೃಷ್ಟಿಯೇ ಮುಂತಾದ ಧರ್ಮಗಳಿಲ್ಲದಿದ್ದರೂ ನಿತ್ಯವಾದ ದೃಷ್ಟಿ ಮುಂತಾದವುಗಳ ಸ್ವರೂಪವೇ ಅವನು. ಆ ನಿತ್ಯದೃಷ್ಟಿಸ್ವರೂಪನಾದ ಅವನಿಗೆ ಅನಿತ್ಯವಾದ ದೃಶ್ಯಾದಿಗಳು ತಮ್ಮತಮ್ಮ ವಿಷಯಸಮೇತವಾಗಿಯೇ ವಿಷಯವಾಗಿರುತ್ತವೆ. ಕನಸಿನಲ್ಲಿರುವ ವಾಸನಾಮಯವಾದ ವೃತ್ತಿಗಳೂ ಹೀಗೆಯೇ ಅವನಿಗೆ ವಿಷಯವಾಗಿರುತ್ತವೆ. ಆದ್ದರಿಂದ ಆತ್ಮನು ಜಾಗ್ರತ್ಸ್ವಪ್ನಗಳ ಸಂಪರ್ಕವಿಲ್ಲದ ನಿತ್ಯಶುದ್ಧವಾದ ಚೈತನ್ಯರೂಪನೂ ಅದ್ವಿತೀಯನೂ ಆಗಿರುತ್ತಾನೆ.

---

1. ತತ್ತ್ವವನ್ನು ಬಲ್ಲವನು.
2. ಅವಿದ್ಯಾಕೃತಬಂಧಗಳಿಲ್ಲದವನು.
3. ನಿತ್ಯವಾದ ಆತ್ಮತತ್ತ್ವವು.
4. ಬ್ರಹ್ಮವನ್ನು ಬಲ್ಲವನು.
5. ಈ. ಭಾ. ೩ನ್ನು ನೋಡಿ.

೯-೧೦. ಆತ್ಮನ ದೃಷ್ಟಿಯು ಹೀಗೆ ನಿತ್ಯವಾಗಿದ್ದರೂ ಅನಿತ್ಯವಾದ ಮನಸ್ಸಿನ ವೃತ್ತಿಗಳಿಂದ ಆ ಸ್ವರೂಪವನ್ನು ವಿಂಗಡಿಸಿಕೊಳ್ಳದೆ ಇರುವದರಿಂದ ಜನರಿಗೆ ತಾವು ಅನಿತ್ಯವಾದ ದೃಷ್ಟಿಯುಳ್ಳವರೆಂಬೂ ಸಂಸಾರಿಗಳೆಂದೂ ತಪ್ಪುತಿಳಿವಳಿಕೆಯುಂಟಾಗಿರುತ್ತದೆ.

೧೧-೨೪. ಆದ್ದರಿಂದ ಮುಮುಕ್ಷುವಾದವನು ಶ್ರುತ್ಯುಕ್ತವಾದ ಆತ್ಮನ ನಿತ್ಯಶುದ್ಧ ಬುದ್ಧಮುಕ್ತಸ್ವಭಾವವನ್ನು ಹೀಗೆಂದು ಯಾವಾಗಲೂ ಅನುಸಂಧಾನಮಾಡುತ್ತಿರಬೇಕು: "ನನಗೆ ಚಕ್ಷುರಾದಿಗಳು ಇಲ್ಲವೆಂದು ಬೃಹದಾರಣ್ಯಕದಲ್ಲಿ ಹೇಳಿದೆ. ನಾನು ಹುಟ್ಟಿಲ್ಲದವನೆಂದೂ ಪ್ರಾಣಮನಸ್ಸುಗಳಿಲ್ಲದವನೆಂದೂ ಮುಂಡಕದಲ್ಲಿದೆ. ಶಬ್ದಾದಿಗಳು ಯಾವವೂ ನನ್ನ ಧರ್ಮವಲ್ಲವೆಂದು ಕಾಠಕದಲ್ಲಿದೆ. ಆದ್ದರಿಂದ ನನ್ನ ಸ್ವರೂಪದಲ್ಲಿ ಯಾವದೊಂದು ವಿಕಾರವೂ ಇರುವದಿಲ್ಲ. ಮನಸ್ಸಿನ ಚಾಂಚಲ್ಯವನ್ನು ಕಳೆಯುವದಕ್ಕಾಗಿ ಮಾಡಬೇಕಾದ ಯೋಗಾದಿಗಳೂ ನನ್ನ ನಿಜವಾದ ಸ್ವರೂಪದ ದೃಷ್ಟಿಯಿಂದ ನೋಡಿದಾಗ ಬೇಕಾಗುವದಿಲ್ಲ. ಯಾವ ತತ್ತ್ವವನ್ನು ಧ್ಯಾನಮಾಡಿದರೆ ಜನರು ಕೃತಕೃತ್ಯರಾಗುವರೋ ಆ ತತ್ತ್ವವೇ ನನ್ನ ನಿಜವಾದ ಸ್ವರೂಪವು. ನಾನು ಅಜವೂ ಅಜರವೂ ಅಮೃತವೂ ಆಗಿರುವ ಬ್ರಹ್ಮವೇ; ಸರ್ವಭೂತಗಳಲ್ಲಿರುವ ಜ್ಞಾತೃವಿನ ನಿಜಸ್ವರೂಪವೂ ನಾನೇ. ನಾನು ಸರ್ವಸಾಕ್ಷಿಯೂ ನಿರ್ಗುಣವೂ ಆಗಿರುವ ಚೈತನ್ಯಸ್ವರೂಪನು. ಆಕಾಶವು ಮಿಕ್ಕ ಎಲ್ಲಾ ಭೂತಗಳನ್ನೂ ವ್ಯಾಪಿಸಿಕೊಂಡಿರುವ ಸೂಕ್ಷ್ಮವಸ್ತುವಷ್ಟೆ, ನಾನು ಅದಕ್ಕಿಂತಲೂ ಸೂಕ್ಷ್ಮನೂ ವ್ಯಾಪಕನೂ ಆಗಿರುತ್ತೇನೆ. ನನ್ನ ಸ್ವರೂಪವೇ ಆತ್ಮನೆಂಬುದು; ಮಿಕ್ಕದ್ದೆಲ್ಲವೂ ಉಪಾಧಿಯ ಆಪೇಕ್ಷೆಯಿಂದ ಈ ನನ್ನ ಸ್ವರೂಪದಲ್ಲಿ ಕಲ್ಪಿತವಾಗಿರುತ್ತದೆ. ಇದು ಇದಕ್ಕಿಂತ ಭಿನ್ನವು, ಅಥವಾ ಅಭಿನ್ನವು; ತತ್ತ್ವವು ಒಂದು, ಅಥವಾ ಅನೇಕವು; ಇದು ಜ್ಞೇಯವು, ನಾನು ಜ್ಞಾತೃವು; ಇದು ಗತಿ, ನಾನು ಗಂತೃ- ಮುಂತಾಗಿರುವ ದ್ವೈತವು ಯಾವದೂ ಪರಮಾರ್ಥವಾಗಿರುವದಿಲ್ಲ. ನಾನು ಹಾನೋಪಾದಾನರಹಿತನಾದ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಅದ್ವಿತೀಯಪರಮಾತ್ಮನು."

೨೫-೨೭. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನೇ ಕೃತಕೃತ್ಯನು, ಸಿದ್ಧನು, ಯೋಗಿಯು. ಇದನ್ನು ಅರಿತುಕೊಳ್ಳದೆ ಇರುವವನು ಆತ್ಮಹತ್ಯೆಯನ್ನು ಮಾಡಿಕೊಂಡವನಾಗುತ್ತಾನೆ. ಇದೇ ಸರ್ವವೇದಾಂತಸಿದ್ಧಾಂತಸಂಗ್ರಹವು. ಶಮಾದಿಗುಣಸಂಪನ್ನರಾದ ಸಂನ್ಯಾಸಿಗಳು ಇದಕ್ಕೆ ಮುಖ್ಯಾಧಿಕಾರಿಗಳು.

೧೪. ಕೂಟಸ್ಥಾತ್ಮ*

ಆತ್ಮನು ದ್ರಷ್ಟೃ, ಅಂತಃಕರಣವು ದೃಶ್ಯ

ಸ್ವಪ್ನಸ್ಮೃತ್ಯೋರ್ಘಟಾದೇರ್ಹಿ ರೂಪಾಭಾಸಃ ಪ್ರದೃಶ್ಯತೇ ।
ಪುರಾ ನೂನಂ ತದಾಕಾರಾ ಧೀರ್ದೃಷ್ಟೇತ್ಯನುಮೀಯತೇ ॥ ೧ ॥

೧. ಕನಸುನೆನಹುಗಳಲ್ಲಿ ಗಡಿಗೆಯೇ ಮುಂತಾದವುಗಳ ರೂಪದಂತಿರುವ (ವೃತ್ತಿಯು) ಕಾಣಬರುತ್ತದೆ. (ಆದ್ದರಿಂದ) ಮುಂಚೆ[1] ಆ ಆಕಾರವಾಗಿರುವ ಬುದ್ಧಿ(ವೃತ್ತಿ)ಯನ್ನು ನೋಡಿದ್ದೆವು ಎಂದು ಅನುಮಾನಿಸಬಹುದಾಗಿದೆ.

ಭಿಕ್ಷಾಮಟನ್ ಯಥಾ ಸ್ವಪ್ನೇ ದೇಹೋ ನ ಸ ಸ್ವಯಮ್ ।
ಜಾಗ್ರದ್ದೃಶ್ಯಾತ್ ತಥಾ ದೇಹಾದ್ ದ್ರಷ್ಟೃತ್ವಾದನ್ಯ ಏವ ಸಃ ॥ ೨ ॥

೨. ಕನಸಿನಲ್ಲಿ ಭಿಕ್ಷಾಟನೆಮಾಡುತ್ತಿರುವ ಆ ದೇಹವು ಹೇಗೆ ತಾನಲ್ಲವೋ, ಅದರಂತೆ ಎಚ್ಚರದಲ್ಲಿ ಕಾಣುವ ದೇಹಕ್ಕಿಂತ ತಾನು (ಅದನ್ನು) ನೋಡುವವನಾಗಿರುವದರಿಂದ ಬೇರೆಯೇ.

ಮೂಷಾಸಿಕ್ತಂ ಯಥಾ ತಾಮ್ರಂ ತನ್ನಿಭಂ ಜಾಯತೇ ತಥಾ ।
ರೂಪಾದೀನ್ ವ್ಯಾಪ್ನುವಚ್ಚಿತ್ತಂ ತನ್ನಿಭಂ ದೃಶ್ಯತೇ ಧ್ರುವಮ್ ॥ ೩ ॥
ವ್ಯಜ್ಞ್ಜಕೋ ವಾ ಯಥಾಲೋಕೋ ವ್ಯಜ್ಯಸ್ಯಾಕಾರತಾಮಿಯಾತ್ ।
ಪದಾರ್ಥವ್ಯಞ್ಜಕತ್ವಾದ್ಧೀರರ್ಥಾಕಾರಾ ಪ್ರದೃಶ್ಯತೇ ॥ ೪ ॥

೩–೪. (ಕರಗಿಸಿ) ಮೂಸೆಯಲ್ಲಿ ಹೊಯ್ದ ತಾಮ್ರವು ಹೇಗೆ ಅದರಂತೆ[2] ಆಗುವದೋ (ಹಾಗೆ) ರೂಪವೇ ಮುಂತಾದವುಗಳನ್ನು ವ್ಯಾಪಿಸುವ ಚಿತ್ತವು ಅವುಗಳಂತೆಯೇ ಕಾಣುತ್ತಿರುವದೆಂಬುದು ನಿಶ್ಚಯವು[3]. ಅಥವಾ (ವಸ್ತುವನ್ನು) ವ್ಯಕ್ತಗೊಳಿಸುವ ಬೆಳಕು ಹೇಗೆ (ತಾನು) ಬೆಳಗಿಸುವ (ವಸ್ತುವಿನ) ಆಕಾರವನ್ನು ತಳೆಯುವದೋ, ಹಾಗೆ ಸರ್ವವಸ್ತುಗಳನ್ನೂ ತೋರಿಸುವದರಿಂದ

---

* ಇದನ್ನು ವ್ಯಾಖ್ಯಾನಕಾರರು ಸ್ವಪ್ನಸ್ಮೃತಿಪ್ರಕರಣವೆಂದು ಕರೆದಿರುತ್ತಾರೆ.

1. ಎಚ್ಚರದಲ್ಲಿ, ಅಥವಾ ಅನುಭವದಲ್ಲಿ ಎಂದರ್ಥ. ಸ್ಮೃತಿಯನ್ನು ಇಲ್ಲಿ ಮನೋರಥಕ್ಕೂ ಭ್ರಾಂತಿಗೂ ಉಪಲಕ್ಷಣವಾಗಿ ಉಪಯೋಗಿಸಿದೆ.

2. ಮೂಸೆಯಂತೆ.

3. ಕಾಣುತ್ತಿದೆ ಎಂದು ಅನುಮಾನಿಸಬಹುದು –ಎಂದು ಅಭಿಪ್ರಾಯ. 'ಧ್ರುವಮ್' ಎಂಬುದು ಇದು ಅನುಮಾನವೆಂಬುದನ್ನು ಸೂಚಿಸುವ ಮಾತು.

ಅಂತಃಕರಣವು ಎಲ್ಲಾ ವಸ್ತುಗಳನ್ನೂ ವ್ಯಕ್ತಪಡಿಸತಕ್ಕದ್ದಾದ್ದರಿಂದ (ಆಯಾ) ವಸ್ತುವಿನ ಆಕಾರವುಳ್ಳದ್ದಾಗಿ ತೋರುತ್ತದೆ[1].

ಧೀರೇವಾರ್ಥಸ್ವರೂಪಾ ಹಿ ಪುಂಸಾ ದೃಷ್ಟಾ ಪುರಾಪಿ ಚ ।
ನ ಚೇತ್ ಸ್ವಪ್ನೇ ಕಥಂ ಪಶ್ಯೇತ್ ಸ್ಮರತೋ ವಾಕೃತಿಃ ಕುತಃ ॥ ೫ ॥

೫. ಅಂತಃಕರಣವೇ ಮೊದಲೂ ವಿಷಯದ ರೂಪವಾಗಿ ಮನುಷ್ಯನಿಗೆ ತೋರಿರಬೇಕು. ಇಲ್ಲದಿದ್ದರೆ ಕನಸಿನಲ್ಲಿ ಹೇಗೆ ಕಂಡಾನು ? ನೆನಸಿಕೊಂಡವನಿಗೆ ಆಕಾರವಾದರೂ ಎಲ್ಲಿಂದ (ಬರಬೇಕು)[2] ?

ವ್ಯಞ್ಜಕತ್ವಂ ತದೇವಾಸ್ಯಾ ರೂಪಾದ್ಯಾಕಾರದೃಶ್ಯತಾ ।
ದ್ರಷ್ಟೃತ್ವಂ ಚ ದೃಶೇಸ್ತದ್ವದ್ವ್ಯಾಪ್ತಿಃ ಸ್ಯಾದ್ಧಿಯ ಉದ್ಭವೇ ॥ ೬ ॥

೬. ಆ ಅಂತಃಕರಣವು ರೂಪವೇ ಮುಂತಾದವುಗಳ ಆಕಾರವನ್ನು ತಳೆಯುವದೇ ಇದರ ವ್ಯಂಜಕತ್ವವು[3]. ಮತ್ತು (ಈ) ಅಂತಃಕರಣದ ವೃತ್ತಿಯು ಹುಟ್ಟುವಾಗ ಅದನ್ನು ವ್ಯಾಪಿಸಿಕೊಳ್ಳುವದೇ ಆತ್ಮನ ದ್ರಷ್ಟೃತ್ವವು[4].

ಎಲ್ಲಾ ಜೀವರುಗಳಿಗೂ ಒಬ್ಬನೇ ಆತ್ಮನು

ಚಿನ್ಮಾತ್ರಜ್ಯೋತಿಷಾ ಸರ್ವಾಃ ಸರ್ವದೇಹೇಷು ಬುದ್ಧಯಃ ।
ಮಯಾ ಯಸ್ಮಾತ್ ಪ್ರಕಾಶ್ಯನ್ತೇ ಸರ್ವಸ್ಯಾತ್ಮಾ ತತೋ ಹ್ಯಹಮ್ ॥

---

1. ಅಂತಃಕರಣವು ವ್ಯಂಜಕವಾಗುತ್ತದೆ, ವಸ್ತುಗಳನ್ನು ತಿಳಿಸುತ್ತದೆ ಎನ್ನುವಾಗ ಆಯಾ ವಿಷಯದ ಆಕಾರವನ್ನು ತಾಳಿಯೇ ತಿಳಿಸುತ್ತದೆ.

2. ಕನಸುನೆನಸುಗಳಲ್ಲಿ ವಿಷಯವಿಲ್ಲದಿದ್ದರೂ ವಿಷಯದ ಆಕಾರದಲ್ಲಿ ತೋರುವದರಿಂದ ವಿಷಯದ ಜ್ಞಾನವಾಗುವಾಗಲೂ ಅಂತಃಕರಣವು ವಿಷಯಾಕಾರವಾಗಿ ಪರಿಣಮಿಸಿರಬೇಕು ಎಂದು ಅನುಮಾನಮಾಡಬಹುದು. ಆದ್ದರಿಂದ ಪ್ರತ್ಯಕ್ಷಪರೋಕ್ಷಜ್ಞಾನಗಳಿಗೆ ಅಂತಃಕರಣದ ಪರಿಣಾಮಭೇದವೇ ಕಾರಣವೆನ್ನಬೇಕಾಯಿತು.

3. ವಸ್ತುವನ್ನು ನೇರಾಗಿ ಬೆಳಗುವದೇನೂ ಅದರ ಕಾರ್ಯವಲ್ಲ ಎಂದು ಭಾವ. ಅಂತಃಕರಣದಲ್ಲಿ ಚಿದಾಭಾಸವಿರುತ್ತಿದ್ದರೂ ಅದು **ಚಿತ್ತಿ**ನ ಅಭಾಸವೇ ಆಗಿರುವದರಿಂದ ಅದನ್ನು ಇಲ್ಲಿ ಲೆಕ್ಕಕ್ಕೆ ಹಿಡಿದಿಲ್ಲ.

4. ನೋಡುವದೆಂಬ ವ್ಯಾಪಾರರೂಪವಾದ ಕ್ರಿಯೆಯೇನೂ ಆತ್ಮನಲ್ಲಿ ಆಗುವದಿಲ್ಲ. ಆದ್ದರಿಂದ ಆತ್ಮನು ಕೂಟಸ್ಥನೇ. ಅಂತಃಕರಣವು ಚಿದ್ವ್ಯಾಪ್ತವಾಗಿ ಚಿದಾಭಾಸವಾಗಿ ವಸ್ತುವನ್ನು ಬೆಳಗುತ್ತದೆಯಾದರೂ ಅದಕ್ಕೆ ವಸ್ತುವಿನಾಕಾರವಾಗಿ ಪರಿಣಮಿಸುವ ವ್ಯಾಪಾರವೇ ಮುಖ್ಯವಾದ ಕೆಲಸ.

೭. ಕೇವಲ ಚಿದ್ರೂಪವಾದ ಬೆಳಕಿನಿಂದ ಎಲ್ಲಾ ದೇಹಗಳಲ್ಲಿಯೂ ಇರುವ ಬುದ್ಧಿಗಳೆಲ್ಲವನ್ನೂ ನಾನೇ ಬೆಳಗುತ್ತಿರುವೆನಷ್ಟೆ[1] ; ಆದ್ದರಿಂದ ನಾನು ಎಲ್ಲರಿಗೂ ಆತ್ಮನೇ.

ಆತ್ಮನು ಕ್ರಿಯಾಕಾರಕಫಲವಿಲಕ್ಷಣನು

ಕರಣಂ ಕರ್ಮ ಕರ್ತಾ ಚ ಕ್ರಿಯಾ ಸ್ವಪ್ನೇ ಫಲಂ ಚ ಧೀಃ ।
ಜಾಗ್ರತ್ಯೇವಂ ಯತೋ ದೃಷ್ಟಾ ದ್ರಷ್ಟಾ ತಸ್ಮಾದತೋ ಹ್ಯಹಮ್ ॥ ೮ ॥

೮. ಸ್ವಪ್ನದಲ್ಲಿ, ಕರಣವು, ಕರ್ಮ, ಕರ್ತೃ, ಕ್ರಿಯೆ, ಫಲ[2]– ಎಲ್ಲವೂ ಅಂತಃಕರಣವೇ. ಎಚ್ಚರದಲ್ಲಿಯೂ (ಅದು) ಹೀಗೆಯೇ ಕಾಣುತ್ತದೆಯಷ್ಟೆ ; ಆದ್ದರಿಂದ ದೃಷ್ಟೃವಾದ[3] ಆತ್ಮನು ಅದಕ್ಕಿಂತ ನಿಲಕ್ಷಣನು.

ಆತ್ಮನು ಹೇಯೋಪಾದೇಯರಹಿತನು

ಬುದ್ಧ್ಯಾದೀನಾಮನಾತ್ಮತ್ವಂ ಹೇಯೋಪಾದೇಯರೂಪತಃ ।
ಹಾನೋಪಾದಾನಕರ್ತಾತ್ಮಾ ನ ತ್ಯಾಜ್ಯೋ ನ ಚ ಗೃಹ್ಯತೇ ॥ ೯ ॥

೯. ಬುದ್ಧಿಯೇ ಮುಂತಾದವುಗಳು ಬಿಡಲ್ಪಡುವ ಮತ್ತು ತೆಗೆದುಕೊಳ್ಳಲ್ಪಡುವ ರೂಪವಾಗಿರುವದರಿಂದ ಅನಾತ್ಮವೆನಿಸಿರುವವು. ಆದರೆ ಬಿಡುವದು, ತೆಗೆದುಕೊಳ್ಳುವದು– (ಇವೆರಡಕ್ಕೂ) ಕರ್ತೃವಾಗಿರುವದರಿಂದ ಆತ್ಮನು ಬಿಡಲ್ಪಡತಕ್ಕವನೂ ಅಲ್ಲ, ತೆಗೆದುಕೊಳ್ಳಲ್ಪಡುವವನೂ ಅಲ್ಲ.

ಸಬಾಹ್ಯಾಭ್ಯನ್ತರೇ ಶುದ್ಧೇ ಪ್ರಜ್ಞಾನೈಕರಸೇ ಘನೇ ।
ಬಾಹ್ಯಮಭ್ಯನ್ತರಂ ಚಾನ್ಯತ್ ಕಥಂ ಹೇಯಂ ಪ್ರಕಲ್ಪ್ಯತೇ ॥ ೧೦ ॥

೧೦. ಒಳಗೂ ಹೊರಗೂ ಶುದ್ಧನಾಗಿ ಪ್ರಜ್ಞಾನೈಕರಸವಾದ ಗಟ್ಟಿಯಾದ ಆತ್ಮದಲ್ಲಿ ಒಳಗಿನ ಅಥವಾ ಹೊರಗಿನ ಹೇಯವನ್ನು ಹೇಗೆ ಕಲ್ಪಿಸುವದು ?

---

1. ಅಂತಃಕರಣವನ್ನು ಬೆಳಗುವ ಸಾಕ್ಷಿಸ್ವರೂಪವಾದ ಚೈತನ್ಯವು ಒಂದೊಂದು ಅಂತಃಕರಣಕ್ಕೆ ಒಂದೊಂದು ಇರುವದೆಂಬುದನ್ನು ಕಲ್ಪಿಸುವದಕ್ಕೂ ಆಗುವದಿಲ್ಲ.

2. ಫಲವೆಂದರೆ ಕೊನೆಯಲ್ಲಿ ಅರಿತೆನೆಂಬಾಕಾರದ ವೃತ್ತಿಯಾಗುವದು ; ಅದು ಚೈತನ್ಯವ್ಯಾಪ್ತವಾಗಿರುವದರಿಂದ ಚಿದಾಭಾಸವಾಗಿರುತ್ತದೆ. ಆದರೆ ನಿಜವಾಗಿ ಅರಿವಿನ ರೂಪದ ಫಲವೆಂದರೆ ಕೂಟಸ್ಥವಾದ ಆತ್ಮಚೈತನ್ಯವೇ. ಉಪ. ಗದ್ಯ. ೫೧, ೫೩, ೫೮ ನೋಡಿ.

3. ಕ್ರಿಯಾಕಾರಕಫಲಗಳೆಲ್ಲವನ್ನೂ ಬೆಳಗುವ ಸಾಕ್ಷಿಯಾದ.

ಆತ್ಮಜ್ಞಾನಿಗೆ ಕರ್ತವ್ಯವಿಲ್ಲ

ಯ ಆತ್ಮಾ ನೇತಿ ನೇತೀತಿ ಪರಾಪೋಹೇನ ಶೇಷಿತಃ ।
ಸ ಚೇದ್ಬ್ರಹ್ಮವಿದಾತ್ಮೇಷ್ಟೋ ಯತೇತಾತಃ ಪರಂ ಕಥಮ್ ॥ ೧೧ ॥

೧೧. 'ನೇತಿ ನೇತಿ' (ಅದಲ್ಲ, ಅದಲ್ಲ) ಎಂದು ಮಿಕ್ಕದ್ದೆಲ್ಲವನ್ನೂ ತಳ್ಳಿ ಹಾಕಿ ಉಳಿಸಿಕೊಂಡಿರುವ ಆತ್ಮನೇ ಬ್ರಹ್ಮಜ್ಞಾನಿಯ ಆತ್ಮನೆಂದಾದಮೇಲೆ ಅಲ್ಲಿಂದ ಮುಂದಕ್ಕೆ ಅವನು ಹೇಗೆತಾನೆ (ಕರ್ಮವನ್ನು ಮಾಡುವದಕ್ಕೆ) ಯತ್ನಿಸುವನು[1] ?

ಅಶನಾಯಾದ್ಯತಿಕ್ರಾನ್ತಂ ಬ್ರಹ್ಮೈವಾಸ್ಮಿ ನಿರನ್ತರಮ್ ।
ಕಾರ್ಯವಾನ್ ಸ್ಯಾಂ ಕಥಂ ಚಾಹಂ ವಿಮೃಶೇದೇವಮಞ್ಜಸಾ॥೧೨॥

೧೨. "ಹಸಿವು ಮುಂತಾವವುಗಳನ್ನು[2] ಮೀರಿರುವ ನಿರಂತರವಾದ[3] ಬ್ರಹ್ಮನೇ ನಾನಾಗಿರುವೆನು. (ಹೀಗಿರುವಲ್ಲಿ) ಕಾರ್ಯವುಳ್ಳವನು ಹೇಗಾದೇನು?" ಎಂದೀ ಪರಿಯಲ್ಲಿ ಚೆನ್ನಾಗಿ ವಿಮರ್ಶೆಮಾಡಬೇಕು[4].

ಪಾರಗಸ್ತು ಯಥಾ ನದ್ಯಾಸ್ತತ್ಸ್ಥಃ ಪಾರಂ ಯಿಯಾಸತಿ ।
ಆತ್ಮಜ್ಞಶ್ಚೇತ್ ತಥಾ ಕಾರ್ಯಂ ಕರ್ತುಮನ್ಯದಿಹೇಚ್ಛತಿ ॥ ೧೩ ॥

೧೩. ನದಿಯ ದಡವನ್ನು ಮುಟ್ಟಿದವನು ಅಲ್ಲಿಯೇ ಇದ್ದುಕೊಂಡು ದಡವನ್ನು ಬಯಸುವನೆಂಬುದು ಹೇಗೋ ಆತ್ಮಜ್ಞನೆನಿಸಿಕೊಂಡವನಾದರೆ ಮತ್ತೇನಾದರೂ ಕಾರ್ಯವನ್ನು ಮಾಡಬೇಕೆಂದು ಇಚ್ಛಿಸುತ್ತಾನೆಂಬುದೂ ಹಾಗೆಯೇ[5].

ಆತ್ಮಜ್ಞಸ್ಯಾಪಿ ಯಸ್ಯ ಸ್ಯಾದ್ದಾನೋಪಾದಾನತಾ ಯದಿ ।
ನ ಮೋಕ್ಷಾರ್ಹಃ ಸ ವಿಜ್ಞೇಯೋ ವಾನ್ತೋಽಸೌ ಬ್ರಹ್ಮಣಾ ಧ್ರುವಮ್॥

---

1. ಕರ್ತೃತ್ವಾದಿಕಾರಕರೂಪವಾದ ವಿಶೇಷಗಳಿಲ್ಲದವನು ಕರ್ಮವನ್ನು ಮಾಡುವದಕ್ಕೆ ಯತ್ನಿಸಬಹುದು. ನಿರ್ವಿಶೇಷನಿಗೆ ಕರ್ಮವು ಎಲ್ಲಿಂದ ಬಂದೀತು ?

2. ಹಸಿವು, ಬಾಯಾರಿಕೆ, ಮುಪ್ಪು, ಮರಣ, ಶೋಕ, ಮೋಹ ಇವುಗಳನ್ನು.

3. ಭೇದವಿಲ್ಲವ ಎಂಬರ್ಥ ; ಬ್ರಹ್ಮಕ್ಕೂ ಜೀವನಿಗೂ ಎಳ್ಳಷ್ಟೂ ಭೇದವಿಲ್ಲ.

4. ದೋಷವುಳ್ಳವನು ಅದನ್ನು ಹೋಗಲಾಡಿಸಿಕೊಳ್ಳುವದಕ್ಕೆ ಯತ್ನಿಸಬಹುದು.

5. ತಾನು ಪಡೆಯಬೇಕಾಗಿರುವ ಫಲವು ಹೊಸದಾಗಿ ಸಿಕ್ಕತಕ್ಕದ್ದಾಗಿರಬೇಕು; ಅದು ಪ್ರಾಪ್ತವಾಗಿಯೇ ಇದ್ದರೆ ಅದಕ್ಕಾಗಿ ಮಾಡತಕ್ಕದ್ದು ಏನೂ ಉಳಿದಿರುವದಿಲ್ಲ. ಅದ್ವಿತೀಯನಾವ ಪರಮಾತ್ಮನು ನಿತ್ಯಪ್ರಾಪ್ತನಾಗಿ ತನ್ನ ಸ್ವರೂಪನೇ ಆಗಿರುವದರಿಂದ ಅವನ ಪ್ರಾಪ್ತಿಗಾಗಿ ಪ್ರಯತ್ನವನ್ನು ಮಾಡತಕ್ಕದ್ದು ಏನೂ ಇರುವದಿಲ್ಲ.

೧೪. ಆತ್ಮಜ್ಞನಾದರೂ ಯಾವನಿಗೆ ಬಿಡತಕ್ಕದ್ದೂ ತೆಗೆದುಕೊಳ್ಳತಕ್ಕದ್ದೂ ಇರುವದೆಂದಾಗುವದೋ ಅವನು ಮೋಕ್ಷಕ್ಕೆ ತಕ್ಕವನಲ್ಲವೆಂದು ತಿಳಿಯಬೇಕು[1]; ಅವನು ನಿಶ್ಚಯವಾಗಿಯೂ ಬ್ರಹ್ಮನು ಓಕರಿಸಿದವನು[2].

ಸಾದಿತ್ಯಂ ಹಿ ಜಗತ್ಪ್ರಾಣಸ್ತಸ್ಮಾನ್ನಾಹರ್ನಿಶೈವ ವಾ ।
ಪ್ರಾಣಜ್ಞಸ್ಯಾಪಿ ನ ಸ್ಯಾತಾಂ ಕುತೋ ಬ್ರಹ್ಮವಿದೋಽದ್ವಯೇ ॥ ೧೫ ॥

೧೫. ಸೂರ್ಯಸಹಿತವಾದ ಜಗತ್ತೆಲ್ಲವೂ ಪ್ರಾಣನಾಗಿರುವದು. ಆದ್ದರಿಂದ ಪ್ರಾಣೋಪಾಸಕನಿಗೆ ಕೂಡ ಹಗಲಾಗಲಿ ರಾತ್ರಿಯಾಗಲಿ ಇರುವದಿಲ್ಲ. ಹೀಗಿರುವಲ್ಲಿ ಬ್ರಹ್ಮಜ್ಞಾನಿಗೆ ಅದ್ವಯನಾದ (ಅವನ ಆತ್ಮ)ನಲ್ಲಿ ಅವು ಹೇಗೆ ಇದ್ದಾವು[3] ?

ನ ಸ್ಮರತ್ಯಾತ್ಮನೋ ಹ್ಯಾತ್ಮಾ ವಿಸ್ಮರೇದ್ವಾಪ್ಯಲುಪ್ತಚಿತ್ ।
ಮನೋಽಪಿ ಸ್ಮರತೀತ್ಯೇತಜ್ಜ್ಞಾನಮಜ್ಞಾನಹೇತುಜಮ್ ॥ ೧೬ ॥

೧೬. ಲೋಪವಿಲ್ಲದ ಚೈತನ್ಯರೂಪನಾದ ಆತ್ಮನು ತನ್ನ ಸ್ವರೂಪವನ್ನು ನೆನಪಿಗೆ ತಂದುಕೊಳ್ಳುವದೆಂಬುದಾಗಲಿ ಮರೆಯುವದೆಂಬುದಾಗಲಿ ಇಲ್ಲ. ಮನಸ್ಸು ಆತ್ಮನನ್ನು ಸ್ಮರಿಸುತ್ತದೆ ಎಂಬ ತಿಳಿವಳಿಕೆಯೂ ತಪ್ಪುತಿಳಿವಳಿಕೆ ಎಂಬ ಕಾರಣದಿಂದಾದದ್ದು[4].

ಜ್ಞಾತುರ್ಜ್ಞೇಯಃ ಪರೋ ಹ್ಯಾತ್ಮಾ ಸೋಽವಿದ್ಯಾಕಲ್ಪಿತಃ ಸ್ಮೃತಃ ।
ಅಪೋಢೇ ವಿದ್ಯಯಾ ತಸ್ಮಿನ್ ರಜ್ವ್ಯಾಂ ಸರ್ಪ ಇವಾದ್ವಯಃ ॥೧೭॥

---

1. ಕರ್ತೃತ್ವವು ಸದಾ ಇರುವದಾದರೆ ದುಃಖದಿಂದ ಬಿಡುಗಡೆಯು ಎಂದಿಗೂ ಆಗಲಾರದು.

2. ನರಕದೊಳಗೆ ತೊಳಲುತ್ತಿರಲೆಂದು ಬ್ರಹ್ಮನು ಓಕರಿಸಿದ ಕ್ರಿಮಿಯೇ.

3. ಸೂರ್ಯಾಂತರ್ಗತನಾದ ಪ್ರಾಣನನ್ನು ಎಂದರೆ ಹಿರಣ್ಯಗರ್ಭನನ್ನು ಉಪಾಸನೆ ಮಾಡುವವನೇ ಕಾಲಾತೀತನಾಗಿರುವನು. ಅದ್ವಿತೀಯನಾದ ಬ್ರಹ್ಮವು ತನ್ನ ಆತ್ಮನೆಂದು ಅರಿತುಕೊಂಡಿರುವ ಜ್ಞಾನಿಗೆ ಕಾಲದ ಸೋಂಕು ಎಲ್ಲಿಂದ ಬರುವದು ?

4. ಆತ್ಮನು ಮನಸ್ಸಿಗೆ ವಿಷಯನಲ್ಲವಾದ್ದರಿಂದ ಆದು ಆತ್ಮನನ್ನು ಚಿಂತಿಸಲಾರದು. ಆತ್ಮನು ತನಗೆ ತಾನು ಪರೋಕ್ಷನಾಗಲಾರನಾದ್ದರಿಂದ ಆತ್ಮನನ್ನು ಚಿಂತಿಸದೇಕಾದ ಆವಶ್ಯಕತೆಯಿರುವದಿಲ್ಲ. ಆದ್ದರಿಂದ ಜ್ಞಾನಿಗೆ ಆತ್ಮಚಿಂತನೆಯ ಆವಶ್ಯಕತೆಯೂ ಇಲ್ಲ ಎಂದು ಭಾವ.

೧೭. ಅರಿಯುವಾತನಿಗೆ ಜ್ಞೇಯನೆನಿಸುವ ಪರಮಾತ್ಮನೆಂಬವನು ಅವಿದ್ಯಾಕಲ್ಪಿತನೆನಿಸಿರುವನು. ಹಗ್ಗದಲ್ಲಿ ಹಾವಿನಂತಿರುವ ಆ (ಕಲ್ಪಿತರೂಪ) ವನ್ನು ಜ್ಞಾನದಿಂದ ಕಳೆಯಲಾಗಿ ಅದ್ವಯನೇ ಆಗಿರುತ್ತಾನೆ[1].

ಕರ್ತೃಕರ್ಮಫಲಾಭಾವಾತ್ ಸಬಾಹ್ಯಾಭ್ಯನ್ತರಂ ಹ್ಯಜಮ್ |
ನಮೋಹಂ ವೇತಿ[2] ಯೋ ಭಾವಃ ಕಸ್ಮಿನ್[3] ಕಸ್ಯ ಕುತೋ ಭವೇತ್‌॥

೧೮. ಕರ್ತೃ, ಕರ್ಮ, ಫಲ– (ಯಾವದೂ) ಇಲ್ಲದ್ದರಿಂದ ಒಳಗೂ ಹೊರಗೂ ಜನ್ಮರಹಿತವಾದ (ಆತ್ಮತತ್ತ್ವವೊಂದೇ ಇರುತ್ತದೆ). ನಾನು ನನ್ನದು ಎಂಬ ಭಾವವಿದೆಯಲ್ಲ, (ಅದು) ಯಾರಲ್ಲಿ ಯಾರಿಗೆ ಏತರಿಂದ ಆದೀತು[4] ?

ಆತ್ಮಾ ಹ್ಯಾತ್ಮೀಯ ಇತ್ಯೇಷ ಭಾವೋಽವಿದ್ಯಾಪ್ರಕಲ್ಪಿತಃ ।
ಆತ್ಮೈಕತ್ವೇ ಹ್ಯಸೌ ನಾಸ್ತಿ ಬೀಜಾಭಾವೇ ಕುತಃ ಫಲಮ್ ॥ ೧೯ ॥

೧೯. ಏಕೆಂದರೆ ತಾನು ತನ್ನದು ಎಂಬೀ ಭಾವವು ಅವಿದ್ಯೆಯಿಂದ ಕಲ್ಪಿತವಾಗಿರುತ್ತದೆ. ಆತ್ಮನು ಒಬ್ಬನೇ ಆಗಿದ್ದರೆ ಅದು[5] ಇರುವದಿಲ್ಲ. ಬೀಜವೇ ಇಲ್ಲದಿದ್ದರೆ ಫಲವು ಎಲ್ಲಿಂದ ಬರಬೇಕು[6] ?

ದ್ರುಷ್ಟೃ ಶ್ರೋತೃ ತಥಾ ಮನ್ತೃ ವಿಜ್ಞಾತ್ರೇವ ತದಕ್ಷರಮ್ |
ದ್ರುಷ್ಟಾದ್ಯನ್ಯನ್ನ ತದ್ಯಸ್ಮಾತ್ ತಸ್ಮಾದ್ದ್ರಷ್ಟಾಹಮಕ್ಷರಮ್ ॥ ೨೦ ॥

1. ಆತ್ಮನನ್ನು ಅರಿಯಬೇಕು, ಉಪಾಸನೆಮಾಡಬೇಕು- ಎಂಬ ಭಾವನೆಯು ಅವಿದ್ಯೆಯಿಂದಾದದ್ದು; ಏಕೆಂದರೆ ತನಗಿಂತ ಬೇರೆಯಾಗಿರುವ ಜ್ಞೇಯ ಅಥವಾ ಉಪಾಸ್ಯವು ನಿಜವಾಗಿ ಇರುವದಿಲ್ಲ. ಆದ್ದರಿಂದ ಜ್ಞಾನದಿಂದ ಅಜ್ಞಾನವು ಹೋದರೆ ಜ್ಞೇಯತ್ವವಾಗಲಿ ಉಪಾಸ್ಯತ್ವವಾಗಲಿ ಉಳಿದುಕೊಳ್ಳುವದಿಲ್ಲ.

2. 'ವೇತ್ತಿ' ಎಂಬ ಮೈ॥ ನಿ॥ ಪಾಠವು ತಪ್ಪು.

3. 'ತಸ್ಮಿನ್' ಎಂಬುದನ್ನು ಹೀಗೆಂದು ತಿದ್ದಿಕೊಂಡಿದೆ.

4. ಭಾವಸ್ತಸ್ಮಿನ್ ಎಂದಿದ್ದರೆ 'ಆ ಆತ್ಮತತ್ತ್ವದಲ್ಲಿ ಯಾರಿಗೆ ಏತರಿಂದ ಆಗುವದು?' ಎಂದು ಅರ್ಥಮಾಡಬಹುದು. ವ್ಯಾಖ್ಯಾನದಲ್ಲಿ 'ಭಾವೋಽತಸ್ಮಿನ್' ಎಂಬ ಪಾಠವನ್ನಿಟ್ಟುಕೊಂಡು 'ಹಾಗಿಲ್ಲದ ಆತ್ಮನಲ್ಲಿ' ಎಂದು ಅರ್ಥವನ್ನು ಮಾಡಿದೆ. ಇಲ್ಲಿ ತತ್ ಎಂಬ ಶಬ್ದದಿಂದ ಯಾವದನ್ನು ಪರಾಮರ್ಶಿಸಿದೆ ಎಂಬುದು ಸ್ಪಷ್ಟವಾಗುವದಿಲ್ಲ.

5. ಅದು ಎಂದರೆ ಅವಿದ್ಯೆ ಎಂದಾಗಲಿ ಆತ್ಮಾತ್ಮೀಯಭಾವವೆಂದಾಗಲಿ ಅರ್ಥವನ್ನು ಮಾಡಬಹುದು.

6. ಬೀಜವಾದ ಅವಿದ್ಯೆಯಿಲ್ಲದಾಗ ನಾನು ನನ್ನದು–ಎಂಬ ಫಲವು ಹೇಗಾದೀತು ?

೨೦. ಆ ಅಕ್ಷರವು[1] ದ್ರಷ್ಟೃ, ಶ್ರೋತೃ, ಮಂತೃ, ವಿಜ್ಞಾತೃವೇ.[2] ಅದಕ್ಕಿಂತ ಬೇರೆಯಾಗಿ ದ್ರಷ್ಟೃವೇ ಮುಂತಾದದ್ದು ಬೇರೊಂದು ಇರುವದಿಲ್ಲ. ಆದ್ದರಿಂದ ದ್ರಷ್ಟೃವಾದ ನಾನು ಅಕ್ಷರವೇ ಆಗಿರುತ್ತೇನೆ.[3]

ಸ್ಥಾವರಂ ಜಙ್ಗಮಂ ಚೈವ ದ್ರಷ್ಟೃತ್ವಾದಿಕ್ರಿಯಾಯುತಮ್ ।
ಸರ್ವಮುಕ್ಷರಮೇವಾತಃ ಸರ್ವಸ್ಯಾತ್ಮಾಕ್ಷರಂ ತ್ವಹಮ್ ॥ ೨೧ ॥

೨೧. ದ್ರಷ್ಟೃತ್ವವೇ ಮುಂತಾದ ಕ್ರಿಯೆಯಿಂದ ಕೂಡಿದ ಸ್ಥಾವರವೂ ಜಂಗಮವೂ ಎಲ್ಲವೂ ಅಕ್ಷರವೇ[4] ಆದ್ದರಿಂದ ನಾನು ಎಲ್ಲಕ್ಕೂ ಆತ್ಮನಾದ ಅಕ್ಷರವೇ ಆಗಿರುತ್ತೇನೆ.

ಅಕಾರ್ಯಶೇಷಮಾತ್ಮಾನಮಕ್ರಿಯಾತ್ಮಕ್ರಿಯಾಫಲಮ್ ।
ನಿರ್ಮಮಂ ನಿರಹಙ್ಕಾರಂ ಯಃ ಪಶ್ಯತಿ ಸ ಪಶ್ಯತಿ ॥ ೨೨ ॥

೨೨. ಆತ್ಮನು ಕಾರ್ಯಶೇಷನಲ್ಲವೆಂದೂ[5] ಕ್ರಿಯಾಕಾರಕಫಲರಹಿತನೂ ನಾನುನನ್ನದೆಂಬುದಿಲ್ಲದವನೂ ಆದ (ಪರಮಾತ್ಮನನ್ನು) ಯಾವನು ಒಲ್ಲನೋ ಅವನೇ ಬಲ್ಲವನು.[6]

ಆತ್ಮನು ಅಪಂಕರ್ತೃವಲ್ಲದ್ದರಿಂದ ನಿಷ್ಕ್ರಿಯನು

ಮಯೀಹಜ್ಞಾಕಾರಯತ್ನೇಚ್ಛಾಃ ಶೂನ್ಯ ಏವ ಸ್ವಭಾವತಃ ।
ಆತ್ಮನೀತಿ ಯದಿ ಜ್ಞಾತವಾಧ್ವಂ ಸ್ವಸ್ಥಾಃ ಕಿಮೀಹಿತೈಃ ॥ ೨೩ ॥

೨೩. ಆತ್ಮನಲ್ಲಿ ನಾನು, ನನ್ನದು, ಯತ್ನ, ಇಚ್ಛೆ–(ಇವು ಯಾವವೂ) ಸ್ವಭಾವದಿಂದ ಇಲ್ಲವೆಂದು ತಿಳಿಯಿತಾದರೆ ಸ್ವಸ್ಥರಾಗಿ ಕುಳಿತುಕೊಳ್ಳಿ. ಕರ್ಮಗಳಿಂದ ಏನು ?

---

1. ನಿರ್ವಿಶೇಷವಾದ ಪರಮಾತ್ಮತತ್ತ್ವವು.

2. ದ್ರಷ್ಟವ್ಯವಲ್ಲ, ಶ್ರೋತವ್ಯವಲ್ಲ, ಮಂತವ್ಯವಲ್ಲ, ವಿಜ್ಞಾತವ್ಯವಲ್ಲ. (ಬೃ. ೩–೮–೧೧)

3. ಪರಮಾತ್ಮನಿಗಿಂತ ಬೇರೆಯಾದ ದ್ರಷ್ಟೃವಿಲ್ಲವೆಂದು ಶ್ರುತಿ (ಬೃ. ೩–೮–೧೧) ಹೇಳುತ್ತಿದೆಯಾದ್ದರಿಂದ ದ್ರಷ್ಟೃವಾದ ನಾನು ಪರಮಾತ್ಮನೇ ಆಗಿರಬೇಕು. ಇಲ್ಲದಿದ್ದರೆ ಒಂದೊಂದು ದೇಹದಲ್ಲಿಯೂ ಇಬ್ಬರು ದ್ರಷ್ಟೃಗಳಿರುವರೆಂದಾಗುತ್ತದೆ ಎಂದರ್ಥ.

4. ಅಕ್ಷರನಾದ ಪರಮಾತ್ಮನಲ್ಲಿಯೇ ಕಲ್ಪಿತವಾಗಿರುತ್ತದೆ.

5. ಕಾರ್ಯಕ್ಕೆ ಅಂಗವಾಗಿ ಉಪಯೋಗಿಸುವ ವಸ್ತುವಲ್ಲ.

6. ಆತ್ಮನಿಗೂ ಕರ್ತೃತ್ವವುಂಟೆಂಬು ತಿಳಿದವನು ನಿಜವಾಗಿ ತಿಳಿದವನಲ್ಲವೆಂದರ್ಥ. ಗೀ ೩–೧೯, ೨–೨೧.

ಯೋಽಹಙ್ಕರ್ತಾರಮಾತ್ಮನಂ ತಥಾ ವೇತ್ತಾರಮೇವ ಚ ।
ವೇತ್ತಿ ನಾತ್ಮಜ್ಞ ಏವಾಸೌ ಯೋಽನ್ಯಥಾಜ್ಞಃ ಸ ಆತ್ಮವಿತ್ ॥ ೨೪ ॥

೨೪. ಆತ್ಮನು ಅಹಂಕರ್ತೃವೆಂದೂ ಜ್ಞಾತೃವೆಂದೂ ಯಾವನು ತಿಳಿದುಕೊಂಡಿರುವನೋ ಅವನು ಆತ್ಮಜ್ಞಾನಿಯೇ ಅಲ್ಲ ಯಾವನು ಇದಕ್ಕೆ ಬೇರೆಯಾಗಿ[1] ತಿಳಿದಿರುವನೋ ಅವನೇ ಆತ್ಮಜ್ಞಾನಿಯು.

ಯಥಾನ್ಯತ್ವೇಽಪಿ ತಾದಾತ್ಮ್ಯಂ ದೇಹಾದಿಷ್ವಾತ್ಮನೋ ಮತಮ್ ।
ತಥಾ ಕರ್ತುರವಿಜ್ಞಾನಾತ್ ಫಲಕರ್ಮಾತ್ಮತಾತ್ಮನಃ ॥ ೨೫ ॥

೨೫. ಹೇಗೆ ಆತ್ಮನು (ದೇಹಾದಿಗಳಿಗಿಂತ) ಬೇರೆಯಾಗಿದ್ದರೂ ದೇಹಾದಿಗಳಲ್ಲಿ ಅವೇ ತಾನೆಂಬ (ಬುದ್ಧಿ)ಯುಂಟಾಗಿರುವದೋ ಅದರಂತೆ ಅಕರ್ತೃವಾದ (ಪರಮಾತ್ಮಸ್ವರೂಪವನ್ನು) ತಿಳಿಯದ್ದರಿಂದ[2] ಆತ್ಮನು ಕ್ರಿಯಾಫಲಾತ್ಮನೆಂಬ (ತಿಳಿವಳಿಕೆಯುಂಟಾಗಿರುತ್ತದೆ).

ದೃಷ್ಟಿಃ ಶ್ರುತಿರ್ಮತಿರ್ಜ್ಞಾತಿಃ ಸ್ವಪ್ನೇ ದೃಷ್ಟಾ ಜನೈಃ ಸದಾ ।
ತಾಸಾಮಾತ್ಮಸ್ವರೂಪತ್ವಾದತಃ ಪ್ರತ್ಯಕ್ಷತಾತ್ಮನಃ ॥ ೨೬ ॥

೨೬. ನೋಡುವದು, ಕೇಳುವದು, ಆಲೋಚಿಸುವದು, ಅರಿಯುವದು, ಇವೆಲ್ಲವನ್ನೂ ಸ್ವಪ್ನದಲ್ಲಿ ಜನರು ಯಾವಾಗಲೂ ನೋಡುತ್ತಿರುವರು. ಅವುಗಳ ಸ್ವರೂಪವೇ ಆಗಿರುವದರಿಂದ ಆತ್ಮನು ಪ್ರತ್ಯಕ್ಷನಾಗಿರುತ್ತಾನೆ[3].

---

1. ಅಹಂಕರ್ತೃವಲ್ಲ, ಜ್ಞಾತೃವಲ್ಲ, ತತ್ಸಾಕ್ಷಿಯು- ಎಂದು ಆತ್ಮನನ್ನು ತಿಳಿದವನೇ ನಿಜವಾದ ಜ್ಞಾನಿಯು. ಅವನಿಗೆ ಕರ್ತವ್ಯವಿರಲಾರದು.

2. ದೇಹವೇ ತಾನೆಂದು ವ್ಯವಹರಿಸುವಾಗಲೂ ದೇಹಕ್ಕಿಂತ ವ್ಯತಿರಿಕ್ತನಾದ ಆತ್ಮನಿರುವನೆಂದು ಕರ್ತೃರೂಪನಾದ ಆತ್ಮನನ್ನು ಒಪ್ಪಿರುವವರು ಹೇಳುತ್ತಾರೆ. ಅದರಂತೆ ಕರ್ತೃಭೋಕ್ತೃವು ತಾನೆಂದು ವ್ಯವಹರಿಸುವಾಗಲೂ ಪರಮಾರ್ಥವಾಗಿ ಆತ್ಮನು ಅಕರ್ತೃವೇ ಆಗಿರುತ್ತಾನೆ. ಅದನ್ನು ಅರಿತವನಿಗೆ ಕರ್ತವ್ಯವಿರಲಾರದು.

3. ಯಾವ ದೃಷ್ಟಿಯಿಂದ ಆತ್ಮನು ದ್ರಷ್ಟೃವೆನಿಸುವನೋ ಆ ದೃಷ್ಟಿಯು ವಿಷಯವಾಗಿ ಕನಸಿನಲ್ಲಿ ಬಿಳಗುತ್ತದೆ. ಆ ದೃಷ್ಟಿಯ ತಿರುಳೇ ಆಗಿರುವ ಆತ್ಮಚೈತನ್ಯವು ಆತ್ಮನ ಸ್ವರೂಪವಾಗಿಯೂ ಕಾಣಬರುತ್ತದೆ. ಆದ್ದರಿಂದ ಜ್ಞಾತೃವಿಗಿಂತ ಬೇರೆಯಾಗಿರುವ ಆತ್ಮ ಸ್ವರೂಪವಿಲ್ಲವೆಂಬ ಮಾತು ಅನುಭವವಿರುದ್ಧ. ಅಕರ್ತೃವೂ ಅಜ್ಞಾತೃವೂ ಆದ ಆತ್ಮನನ್ನು ಬಲ್ಲವನಿಗೆ ಯಾವ ಕರ್ತವ್ಯವೂ ಇಲ್ಲವೆಂದು ಇದರಿಂದ ಏರ್ಪಡುತ್ತದೆ.

ಆತ್ಮಜ್ಞನಿಗೆ ಕಾರ್ಯವಿಲ್ಲವೆಂಬುದಕ್ಕೆ ಕೆಲವು ಕಾರಣಗಳು

ಪರಲೋಕಭಯಂ ಯಸ್ಯ ನಾಸ್ತಿ ಮೃತ್ಯುಭಯಂ ತಥಾ ।
ತಸ್ಯಾತ್ಮಜ್ಞಸ್ಯ ಶೋಚ್ಯಾಃ ಸ್ಯುಃ ಸಬ್ರಹ್ಮೇನ್ದ್ರಾ ಅಪೀಶ್ವರಾಃ ॥ ೨೭ ॥

೨೭. ಯಾವನಿಗೆ ಪರಲೋಕದ ಅಂಜಿಕೆಯಿಲ್ಲವೋ ಮರಣದ ಅಂಜಿಕೆಯೂ (ಇಲ್ಲವೋ), ಆ ಆತ್ಮಜ್ಞಾನಿಗೆ ಬ್ರಹ್ಮೇಂದ್ರರೇ ಮುಂತಾದ ಈಶ್ವರರು ಕೂಡ[1] ಶೋಚನೀಯರಾಗಿರುವರು.

ಈಶ್ವರತ್ವೇನ ಕಿಂ ತಸ್ಯ ಬ್ರಹ್ಮೇನ್ದ್ರತ್ವೇನ ವಾ ಪುನಃ ।
ತೃಷ್ಣಾ ಚೇತ್ ಸರ್ವತಶ್ಛಿನ್ನಾ ಸರ್ವದೈನ್ಯೋದ್ಭವಾಶುಭಾ ॥ ೨೮ ॥

೨೮. ಎಲ್ಲಾ ಬಗೆಯ ದೈನ್ಯವುಂಟಾಗುವದಕ್ಕೂ ಕಾರಣವಾಗಿರುವ ಅಮಂಗಲವಾದ ಬಯಕೆ ಎಂಬುದೊಂದು ಎಲ್ಲಾ ವಿಧದಿಂದಲೂ ಕತ್ತರಿಸಿ ಹೋದರೆ[2] ಅಂಥವನಿಗೆ ಈಶ್ವರತ್ವದಿಂದ ಆಗಬೇಕಾದದ್ದೇನು, ಬ್ರಹ್ಮೇಂದ್ರರ ಸ್ಥಾನದಿಂದಾದರೂ ಆಗಬೇಕಾದದ್ದೇನು ?

ಅಹಮಿತ್ಯಾತ್ಮಧೀರ್ಯಾ ಚ ಮಮೇತ್ಯಾತ್ಮೀಯಧೀರಪಿ ।
ಅರ್ಥಶೂನ್ಯೇ ಯದಾ ಯಸ್ಯ ಸ ಆತ್ಮಜ್ಞೋ ಭವೇತ್ ತದಾ ॥ ೨೯ ॥

೨೯. ನಾನು ಎಂಬ ಆತ್ಮಬುದ್ಧಿಯೆಂಬುದೂ ನನ್ನದು ಎಂಬ ಆತ್ಮೀಯ ಬುದ್ಧಿಯೆಂಬುದೂ ಯಾವಾಗ ಯಾವನಿಗೆ ಅರ್ಥವಿಲ್ಲದವುಗಳೆಂದಾಗುವವೋ[3] ಆಗಲೇ ಅವನು ಆತ್ಮಜ್ಞನಾಗುವನು.

ಬುದ್ಧ್ಯಾದೌ ಸತ್ಯುಪಾಧೌ ಚ ತಥಾ ಸತ್ಯವಿಶೇಷತಾ ।
ಯಸ್ಯ ಚೇದಾತ್ಮನೋ ಜ್ಞಾತಾ ತಸ್ಯ ಕಾರ್ಯಂ ಕಥಂ ಭವೇತ್ ॥೩೦॥

---

1. ಬ್ರಹ್ಮ, ಇಂದ್ರ -ಮುಂತಾದವರು ಈಶ್ವರರು, ಧರ್ಮಜ್ಞಾನವೈರಾಗ್ಯಗಳ ಮುಂತಾದವುಗಳಿಂದ ಸ್ವತಂತ್ರರೆನಿಸಿಕೊಂಡವರು. ಆದರೆ ಅವರಿಗೂ ತಮ್ಮ ಪದವಿಯು ಯಾವಾಗ ನಾಶವಾಗುವದೋ ಎಂಬ ಆಂಜಿಕೆಯುಂಟು. ಆತ್ಮಜ್ಞನಿಗೆ ಧರ್ಮಾಧರ್ಮಗಳ ಫಲದ ವಿಷಯದಿಂದಲಾಗಲಿ ಮರಣನಿಮಿತ್ತದಿಂದಲಾಗಲಿ ಆಂಜಿಕೆಯಿರುವದಿಲ್ಲ.

2. ತೃಷ್ಣೆಯೇ ಕರ್ಮಕ್ಕೆ ನಿಮಿತ್ತವು. ಜ್ಞಾನಿಗೆ ಯಾವ ಉತ್ತಮಪದವಿಯು ಆಶೆಯೂ ಇರುವದಿಲ್ಲ.

3. ನಾನು, ನನ್ನದು- ಎಂಬ ಪದಾರ್ಥಗಳೇ ಇಲ್ಲ, ಅದ್ವಿತೀಯನಾದ ಆತ್ಮನು ನಾನು- ಎಂಬ ಅರಿವೇ ಆತ್ಮಜ್ಞಾನವು. ೧೯ನೆಯ ಶ್ಲೋಕವನ್ನು ನೋಡಿ.

೩೦. ಬುದ್ಧಿಯೇ ಮುಂತಾದ ಉಪಾಧಿಯು ಇದ್ದರೂ ಇಲ್ಲದಿದ್ದರೂ ಆತ್ಮನಲ್ಲಿ ಯಾವ ವಿಶೇಷವೂ ಇಲ್ಲವೆಂದು[1] ಯಾವನಿಗೆ ತಿಳಿದಿತೋ ಅವನಿಗೆ ಕಾರ್ಯವೆಂಬುದು ಹೇಗೆ ಇದ್ದೀತು ?

ಪ್ರಸನ್ನೇ ವಿಮಲೇ ವ್ಯೋಮ್ನಿ ಪ್ರಜ್ಞಾನೈಕರಸೇऽದ್ವಯೇ ।
ಉತ್ಪನ್ನಾತ್ಮಧಿಯೋ ಬ್ರೂತ ಕಿಮನ್ಯತ್ಕಾರ್ಯಮಿಷ್ಯತೇ ॥ ೩೧ ॥

೩೧. ಸ್ವಚ್ಛವಾದ ಯಾವ ಕಲ್ಮಷವೂ ಇಲ್ಲದ ಆಕಾಶದಂತಿರುವ ಪ್ರಜ್ಞಾನೈಕರಸವಾದ ಅದ್ವಯ(ತತ್ತ್ವವೇ) ತಾನೆಂಬ ಬುದ್ಧಿಯು ಯಾವನಿಗೆ ಉಂಟಾಗಿರುವದೋ ಅವನಿಗೆ[2] ಮತ್ತೆ ಯಾವ ಕಾರ್ಯವನ್ನು ಒಪ್ಪಬೇಕು ? ಹೇಳಿರಿ.

ಆತ್ಮಾನಂ ಸರ್ವಭೂತಸ್ಥಮಮಿತ್ರಂ ಚಾತ್ಮನೋऽಪಿ ಯಃ ।
ಪಶ್ಯನ್ನಿಚ್ಛತ್ಯಸೌ ನೂನಂ ಶೀತೀಕರ್ತುಂ ವಿಭಾವಸುಮ್ ॥ ೩೨ ॥

೩೨. ತಾನು ಸರ್ವಭೂತಗಳಲ್ಲಿಯೂ ಇರುವವನೆಂದೂ ತನಗೆ ಶತ್ರುವು ಇರುವನೆಂದೂ ಯಾವನು ಕಾಣುವನೋ ಅವನು ನಿಜವಾಗಿ ಸೂರ್ಯನನ್ನು ತಣ್ಣಗೆಮಾಡುವದಕ್ಕೆ ಹಾರೈಸುತ್ತಾನೆ[3].

ಪ್ರಜ್ಞಾಪ್ರಾಣಾನುಕಾರ್ಯಾತ್ಮಾ ಛಾಯೇವಾಕ್ಷಾದಿಗೋಚರಃ ।
ಧ್ಯಾಯತೀವೇತಿ ಚೋಕ್ತೋ ಹಿ ಶುದ್ಧೋ ಮುಕ್ತಃ ಸ್ವತೋ ಹಿ ಸಃ ॥
ಅಪ್ರಾಣಸ್ಯಾಮನಸ್ಕಸ್ಯ ತಥಾಸಂಸರ್ಗಿಣೋ ದೃಶೇಃ ।
ವ್ಯೋಮವದ್ವ್ಯಾಪಿನೋ ಹ್ಯಸ್ಯ ಕಥಂ ಕಾರ್ಯಂ ಭವೇನ್ಮಮ ॥ ೩೪ ॥

೩೩–೩೪. ಪ್ರಜ್ಞೆ, ಪ್ರಾಣ –ಇವುಗಳನ್ನು ಅನುಸರಿಸುವ[4] ಆತ್ಮನು ಪ್ರತಿಬಿಂಬದಂತೆ ಪ್ರತ್ಯಕ್ಷಾದಿಗಳಿಗೆ ಗೋಚರನಾಗಿರುತ್ತಾನೆ. "ಧ್ಯಾಯತೀವ"

---

1. ಬುದ್ಧ್ಯಾದ್ಯುಪಾಧಿಗಳಿರುವಾಗ ಕರ್ತೃತ್ವವಿದ್ದು ಅವು ಇಲ್ಲದಾಗ ಅದು ಹೋಗುವದಿಲ್ಲ. ಉಪಾಧಿಯಿಂದ ತೋರುವ ಕೆಂಪು ಬಣ್ಣವು ಸ್ಫಟಿಕದಲ್ಲಿ ಯಾವಾಗಲೂ ನಿಜವಾಗಿರುವದೇ ಇಲ್ಲ ; ಇದರಂತೆ ಆತ್ಮನಲ್ಲಿ ಕರ್ತೃತ್ವವು ನಿಜವಾಗಿ ಇರುವದೇ ಇಲ್ಲ.

2. ಕಲ್ಮಷವಿದ್ದವನು ಅದನ್ನು ಕಳೆದುಕೊಳ್ಳುವದಕ್ಕೆ ಯತ್ನಿಸಬೇಕು. ಅಜ್ಞಾನವಿದ್ದವನು ಅದನ್ನು ಕಳೆದುಕೊಳ್ಳುವದಕ್ಕೆ ಯತ್ನಿಸಬೇಕು. ಆತ್ಮನಲ್ಲಿ ಇವೆರಡೂ ಇಲ್ಲ.

3. ಶತ್ರುಮಿತ್ರಾದಿಭಾವನಿರುವವನಿಗೆ ಸರ್ವರ ಆತ್ಮನೂ ತಾನೆಂಬ ಭಾವನೆಯಿರುವದಿಲ್ಲ ; ಆ ಭಾವನೆಯಿರುವವನಿಗೆ ಶತ್ರುಮಿತ್ರಾದಿಕಲ್ಪನೆಗೆ ಅವಕಾಶವಿರುವದಿಲ್ಲ.

4. ಜ್ಞಾನ, ಕ್ರಿಯೆ- ಎಂಬ ಅಂತಃಕರಣಶಕ್ತಿಗಳನ್ನು ಅನುಸರಿಸುವ, ಆ ಉಪಾಧಿಗಳುಳ್ಳ.

(ಯೋಚಿಸುವಂತೆ ಕಾಣುತ್ತಾನೆ) ಎಂದು (ಶ್ರುತಿಯಲ್ಲಿ) ಹೇಳಿರುವಾತನು[1] ತಾನೇ ಶುದ್ಧನೂ ಮುಕ್ತನೂ ಆಗಿರುತ್ತಾನಲ್ಲವೆ ? ಪ್ರಾಣವಿಲ್ಲದವನೂ ಮನಸ್ಸಿಲ್ಲದವನೂ ಮತ್ತೊಂದರ ಸಂಬಂಧವಿಲ್ಲದವನೂ ಆಗಿ ಆಕಾಶದಂತೆ ವ್ಯಾಪಿಯೂ ಆಗಿರುವ ಚೈತನ್ಯರೂಪನಾದ ಈ ನನಗೆ ಕಾರ್ಯವು ಹೇಗೆ ಇದ್ದೀತು ?

ಅಸಮಾಧಿಂ ನ ಪಶ್ಯಾಮಿ ನಿರ್ವಿಕಾರಸ್ಯ ಸರ್ವದಾ ।
ಬ್ರಹ್ಮಣೋ ಮೇ ವಿಶುದ್ಧಸ್ಯ ಶೋಧ್ಯಂ ನಾನ್ಯದ್ವಿಪಾಪ್ಮನಃ ॥ ೩೫ ॥
ಗನ್ತವ್ಯಂ ಚ ತಥಾ ನೈವ ಸರ್ವಗಸ್ಯಾಚಲಸ್ಯ ಚ ।
ನೋಧರ್ವ್ಯಂ ನಾಧಸ್ತಿರೋ ವಾಪಿ ನಿಷ್ಕಲಸ್ಯಾಗುಣತ್ವತಃ ॥ ೩೬ ॥
ಚಿನ್ಮಾತ್ರಜ್ಯೋತಿಷೋ ನಿತ್ಯಂ ತಮಸ್ತಸ್ಮಾನ್ನ[2] ವಿದ್ಯತೇ ।
ಕಥಂ ಕಾರ್ಯಂ ಮಮೈವಾದ್ಯ ನಿತ್ಯಮುಕ್ತಸ್ಯ ಶಿಷ್ಯತೇ ॥ ೩೭॥

೩೫-೩೭. ಯಾವಾಗಲೂ ನಿರ್ವಿಕಾರನಾಗಿರುವ ನನಗೆ ವಿಕ್ಷೇಪವೆಂಬುದೇ ಕಾಣಿಸುವದಿಲ್ಲ. ಪಾಪರಹಿತವಾದ ಬ್ರಹ್ಮವೇ ಆಗಿರುವ ಅತಿಶುದ್ಧನಾದ ನನಗೆ ಆಗಬೇಕಾಗಿರುವ ಮತ್ತೊಂದು ಶೋಧ್ಯ(ಮಲ)ವನೂ (ಕಾಣೆನು)[3]. ಎಲ್ಲವನ್ನೂ ವ್ಯಾಪಿಸಿಕೊಂಡು ಅಚಲನಾಗಿರುವ (ನನಗೆ) ಹೋಗಿ ಸೇರಬೇಕಾದದ್ದು ಇರುವದೇ ಇಲ್ಲ. ನಿರವಯವನಾಗಿರುವ (ನಾನು) ನಿರ್ಗುಣನಾಗಿರುವದರಿಂದ (ನನಗೆ) ಮೇಲೆ, ಕೆಳಗೆ, ಅಥವಾ ಅಡ್ಡಡ್ಡಲಾಗಿ (ಏನೊಂದೂ ಇರುವ)ದಿಲ್ಲ[4]. ಚಿನ್ಮಾತ್ರಜ್ಯೋತಿಯಾಗಿರುವ (ನನಗೆ) ಆದ್ದರಿಂದ ಅಜ್ಞಾನವು ಇರುವದಿಲ್ಲ[5]. (ಹೀಗಿರುವಲ್ಲಿ) ನಿತ್ಯಮುಕ್ತನಾಗಿರುವ ನನಗೆ ಈ ಕಾರ್ಯವು ಹೇಗೆ ಉಳಿದುಕೊಂಡಿದ್ದೀತು ?

---

1. "ಧ್ಯಾಯತೀವ ಲೇಲಾಯತೀವ" (ಬೃ. ೪-೩-೭) ಎಂಬ ಶ್ರುತಿಯಲ್ಲಿ ಆತ್ಮನಿಗೆ ಜ್ಞಾನೇಂದ್ರಿಯದ ಮತ್ತು ಕರ್ಮೇಂದ್ರಿಯದ ವ್ಯಾಪಾರವು ಇರುವಂತೆ ಉಪಾಧಿವಶದಿಂದ ತೋರುತ್ತದೆ ಎಂದು ಹೇಳಿದೆ.

2. 'ತಸ್ಮಿನ್' ಎಂಬ ಪಾಠವು ಅಚ್ಚಿನ ತಪ್ಪು.

3. ಮಲವೆನ್ನು ಕಳೆಯುವದಕ್ಕೆ ನಿಷ್ಕಾಮಕರ್ಮವೂ ವಿಕ್ಷೇಪವನ್ನು ಕಳೆದುಕೊಳ್ಳುವದಕ್ಕೆ ಧ್ಯಾನವೂ ಸಾಧನಗಳು ; ಮಲವಿಕ್ಷೇಪಗಳಿಲ್ಲದ ಆತ್ಮನಿಗೆ ಆ ಸಾಧನಗಳೂ ಬೇಕಿರುವದಿಲ್ಲ.

4. ಛಾಂ. ೭.೨೫-ರ ಅಭಿಪ್ರಾಯವಿದು.

5. ಅನಂತವಾದ ಜ್ಞಾನಸ್ವರೂಪಕ್ಕೆ ಅಜ್ಞಾನವೆಲ್ಲಿಯದು ?

ಅಮನಸ್ಕಸ್ಯ ಕಾ ಚಿನ್ತಾ ಕ್ರಿಯಾ ವಾನಿನ್ದ್ರಿಯಸ್ಯ ಕಾ ।
ಅಪ್ರಾಣೋ ಹ್ಯಮನಾಃ ಶುಭ್ರ ಇತಿ ಸತ್ಯಂ ಶ್ರುತೇರ್ವಚಃ ॥ ೩೮ ॥
ಅಕಾಲತ್ವಾದದೇಶತ್ವಾದದಿಕ್ತ್ವಾದನಿಮಿತ್ತತಃ ।
ಆತ್ಮನೋ ನೈವ ಕಾಲಾದೇರಪೇಕ್ಷಾ ಧ್ಯಾಯತಃ ಸದಾ ॥ ೩೯ ॥

೩೮-೩೯. ಮನಸ್ಸಿಲ್ಲದವನಿಗೆ ಧ್ಯಾನವೆಂದರೆ ಯಾವದು ? ಇಂದ್ರಿಯಗಳಿಲ್ಲದವನಿಗೆ ಕ್ರಿಯೆ ಯಾವದು ? "ಅಪ್ರಾಣೋ ಹ್ಯಮನಾಃ ಶುಭ್ರಃ" (ಪ್ರಾಣವಿಲ್ಲದವನು, ಮನಸ್ಸಿಲ್ಲದವನು, ಶುಭ್ರನು ಮುಂ. ೨-೧-೨) ಎಂಬ ಶ್ರುತಿಯ ವಚನವು ಸತ್ಯವಾಗಿರುತ್ತದೆ[1]. ಕಾಲವಿಲ್ಲದವನಾದ್ದರಿಂದಲೂ, ದೇಶವಿಲ್ಲದವನಾದ್ದರಿಂದಲೂ ದಿಕ್ಕುಗಳಿಲ್ಲದವನಾದ್ದರಿಂದಲೂ ನಿಮಿತ್ತಗಳಿಲ್ಲದವನಾದ್ದರಿಂದಲೂ ಯಾವಾಗಲೂ ಧ್ಯಾನಮಾಡುತ್ತಿರುವ ಆತ್ಮನಿಗೆ ಕಾಲಾದಿಗಳ ಅಪೇಕ್ಷೆ ಇರುವದಿಲ್ಲ[2].

ಯಸ್ಮಿನ್ ದೇವಾಶ್ಚ ವೇದಾಶ್ಚ ಪವಿತ್ರಂ ಕೃತ್ಸ್ನಮೇಕತಾಮ್ ।
ವ್ರಜೇತ್ತನ್ಮಾನಸಂ ತೀರ್ಥಂ ಯಸ್ಮಿನ್ ಸ್ನಾತ್ವಾಮೃತೋ ಭವೇತ್ ॥೪೦

೪೦. ಯಾವ ತೀರ್ಥದಲ್ಲಿ ದೇವತೆಗಳೂ ವೇದಗಳೂ ಎಲ್ಲವೂ ಒಂದಾಗುವವೋ ಆ ಮಾನತೀರ್ಥಕ್ಕೆ ಹೋಗಬೇಕು. ಅವರಲ್ಲಿ ಸ್ನಾನಮಾಡಿದರೆ ಅಮೃತನಾಗುತ್ತಾನೆ.

ಪ್ರಕರಣಾರ್ಥಸಂಕ್ಷೇಪ

ನ ಚಾಸ್ತಿ ಶಬ್ದಾದಿರನನ್ಯವೇದನಃ
ಪರಸ್ಪರೇಣಾಪಿ ನ ಚೈವ ದೃಶ್ಯತೇ ।
ಪರೇಣ ದೃಶ್ಯಾಸ್ತು ಯಥಾ ರಸಾದಯಃ
ತಥೈವ ದೃಶ್ಯತ್ವತ ಏವ ದೈಹಿಕಾಃ ॥ ೪೧ ॥

---

1. ಒಂದೊಂದು ದೇಹದಲ್ಲಿಯೂ ಪ್ರಾಣಮನಸಇಂದ್ರಿಯವಿಷಯಗಳಿಂದ ಕೂಡಿರುವಂತೆ ಕಾಣುತ್ತಿದ್ದರೂ ಪರಮಾರ್ಥವಸ್ತುವಿಷ್ಟಿಯಲ್ಲಿ ಹಾಗಿಲ್ಲ. ಆದ್ದರಿಂದ ಆತ್ಮನಿಗೆ ಕ್ರಿಯೆಯಿಲ್ಲ.

2. ಇಲ್ಲಿ ಧ್ಯಾನವೆಂದರೆ ಜ್ಞಾನಪೂರ್ವಕವಾದ ಚಿಂತನೆ. ಕರ್ಮಗಳಿಗೆ ಕಾಲಾದಿಗಳ ಆವಶ್ಯಕತೆಯಿದೆ; ಅವುಗಳನ್ನು ಕರ್ತವ್ಯವು ಯಾವಾಗಲೂ ಮಾಡುತ್ತಿರುವದಿಲ್ಲ. ಆದರೆ ಬ್ರಹ್ಮಜ್ಞಾನವು ಯಾವ ಕಾಲಾದಿಗಳಿಗೂ ಕಟ್ಟುಬಿದ್ದಿರುವದಿಲ್ಲ. ಆದ್ದರಿಂದ ಆ ಜ್ಞಾನವಿಲ್ಲದ ಕಾಲದಲ್ಲಿ ಕರ್ತವ್ಯವುಂಟಾಗಬಹುದು ಎನ್ನುವದಕ್ಕೆ ಆಗುವದಿಲ್ಲ.

೪೧. ಮತ್ತೊಂದರಿಂದ ಅರಿಯಲ್ಪಡದ ಶಬ್ದಾದಿಗಳು ಇಲ್ಲ[1]. ಅವು ಒಂದರಿಂದೊಂದು ಅರಿಯಲ್ಪಡುವದೂ ಇಲ್ಲ. ಹೊರಗಿನ ಪೃಥ್ವಿಯೇ ಮುಂತಾದವು ಹೇಗೆ ಮತ್ತೊಂದಕ್ಕೆ ಕಾಣುವವಾಗಿರುವವೋ, ಅದರಂತೆಯೇ ದೇಹದಲ್ಲಿರುವ (ಪೃಥ್ವ್ಯಾದಿಗಳೂ) ದೃಶ್ಯವಾಗಿರುವದರಿಂದ (ಮತ್ತೊಂದಕ್ಕೆ ಕಾಣತಕ್ಕವಾಗಿವೆ)[2].

ಅಹಂಮಮೇತ್ಯೇಷಣಯತ್ನವಿಕ್ರಿಯಾ-
ಸುಖಾದಯಸ್ತದ್ವದಿಹ ಪ್ರದೃಶ್ಯತಃ |
ದೃಶ್ಯತ್ವಯೋಗಾಚ್ಚ ಪರಸ್ಪರೇಣ ತೇ
ನ ದೃಶ್ಯತಾಂ ಯಾನ್ತಿ ತತಃ ಪರೋ ಭವಾನ್ ॥ ೪೨ ॥

೪೨. ಇಲ್ಲಿ ನಾನು[3], ನನ್ನದು –ಎಂದು ತೋರುವ ಬಯಕೆ, ಯತ್ನ, ಕ್ರಿಯೆ, ಸುಖ –ಮುಂತಾದವುಗಳೂ, ದೃಶ್ಯವಾಗಿರುವದರಿಂದ ಇವುಗಳಂತೆಯೇ (ಮತ್ತೊಂದಕ್ಕೆ ಕಾಣತಕ್ಕವುಗಳಾಗಿವೆ). ದೃಶ್ಯತ್ವವಿರುವದರಿಂದಲೇ ಅವು ಒಂದಕ್ಕೊಂದು ದೃಶ್ಯವಾಗಿರಲಾರವು. (ಆದ್ದರಿಂದ) ಅವುಗಳಿಗಿಂತ ನೀವು ಬೇರೆಯೇ.

ಅಹಂಕ್ರಿಯಾದ್ಯಾ ಹಿ ಸಮಸ್ತವಿಕ್ರಿಯಾ
ಸಕರ್ತೃಕಾ ಕರ್ಮಫಲೇನ ಸಂಹತಾ |
ಚಿತಿಸ್ವರೂಪೇಣ ಸಮಸ್ತತೋಽರ್ಕವತ್
ಪ್ರಕಾಶ್ಯಮಾನಾಽಸಿತತಾಽತ್ಮನೋ ಹ್ಯತಃ ॥ ೪೩ ॥

೪೩. ಅಹಂಕಾರವೇ ಮುಂತಾದ ಕರ್ತೃವಿನಿಂದೊಡಗೂಡಿದ ಕ್ರಿಯಾ ಫಲಗಳೆಂದೊಡಗೂಡಿರುವ ಸಮಸ್ತವಿಕಾರವೂ ಜ್ಞೈತನ್ಯರೂಪನಾದ (ಆತ್ಮ) ನಿಂದ – ಸೂರ್ಯನಿಂದ (ಎಲ್ಲವೂ ಬೆಳಗುವ ಹಾಗೆ) –ಎಲ್ಲೆಲ್ಲಿಯೂ ಬೆಳಗಲ್ಪಡುತ್ತದೆಯಲ್ಲವೆ[4]? ಆದ್ದರಿಂದ ಆತ್ಮನು ಬದ್ಧನಲ್ಲವೆಂದೇ ಆಯಿತು.

---

1. ಅವು ಸ್ವತಃಸಿದ್ಧವಲ್ಲ,

2. ಪೃಥ್ವಿಯೇ ಮುಂತಾದ ಭೂತಗಳು ದೇಹದಲ್ಲಿ ಮಾಂಸವೇ ಮುಂತಾದ ರೂಪದಿಂದ ಇದ್ದಮಾತ್ರಕ್ಕೆ ಅವು ಸ್ವತಃಸಿದ್ಧವೆನ್ನುವದಕ್ಕೆ ಬರುವದಿಲ್ಲ ; ಅವೂ ಆತ್ಮದೃಶ್ಯಗಳೇ.

3. ಅಹಂಕಾರವು. ಈ ಪದ್ಯದ ಮೂರನೆಯ ಪಾದದ ಭಂದಸ್ಸು ಸರಿಯಾಗಿಲ್ಲ ನಿಮು ಕಾಣುತ್ತದೆ.

4. ನನ್ನದು ಎಂದು ತೋರುವ ದೃಶ್ಯಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಿದೆ.

5. ಅಹಂಕಾರವೇ ಮುಂತಾದದ್ದು ಸಂಹತವಾಗಿರುವದಲ್ಲದೆ, ಆತ್ಮನಿಂದ ಪ್ರಕಾಶ್ಯವೂ ಆಗಿರುತ್ತದೆ. ಆದ್ದರಿಂದ ಆತ್ಮನು ಅವುಗಳಿಗಿಂತ ವಿಲಕ್ಷಣನು.

ದೃಶಿಸ್ವರೂಪೇಣ ಹಿ ಸರ್ವದೇಹಿನಾಂ
ವಿಯದ್ಯಥಾ ವ್ಯಾಪ್ಯ ಮನಾಂಸ್ಯವಸ್ಥಿತಃ।
ಅತೋ ನ ತಸ್ಮಾದಪರೋಽಸ್ತಿ ವೇದಿತಾ
ಪರೋಽಪಿ ತಸ್ಮಾದತ ಏಕ ಈಶ್ವರಃ ॥ ೪೪ ॥

೪೪. ಆತ್ಮನು ದೃಗ್ರೂಪದಿಂದ ಶರೀರಿಗಳೆಲ್ಲರ ಮನಸ್ಸನ್ನೂ ಆಕಾಶದಂತೆ ವ್ಯಾಪಿಸಿಕೊಂಡು ಇರುತ್ತಾನೆ. ಆದ್ದರಿಂದ ಅವನಿಗಿಂತ ಹೆಚ್ಚಿನ ಅರಿಯು ವಾತನಾಗಲಿ, ಕಡಿಮೆಯ ಅರಿವಾತನಾಗಲಿ, ಇಲ್ಲವೇ ಇಲ್ಲ[1]. ಆದ್ದರಿಂದ ಅವನು ಒಬ್ಬನು, ಈಶ್ವರನು[2].

ಶರೀರಬುದ್ಧ್ಯೇರ್ಯದಿ ಚಾನ್ಯದೃಶ್ಯತಾ
ನಿರಾತ್ಮವಾದಾಃ ಸುನಿರಾಕೃತಾ ಮಯಾ।
ಪರಶ್ಚ ಸಿದ್ಧೋ[3] ಹ್ಯವಿಶುದ್ಧಿಕರ್ಮತಃ
ಸುನಿರ್ಮಲಃ ಸರ್ವಗತೋಽಸಿತೋಽದ್ವಯಃ ॥ ೪೫ ॥

೪೫. ಶರೀರ, ಅಂತಃಕರಣ –ಇವೆರಡೂ (ತಮಗಿಂತ) ಬೇರೆಯಾಗಿರುವನಿಗೆ ದೃಶ್ಯನೆಂಬುದು (ನಿಜ)ವಾದರೆ ನಿರಾತ್ಮವಾದಗಳನ್ನೆಲ್ಲ[4] ನಾನು ಸುಲಭವಾಗಿಯೇ ನಿರಾಕರಿಸಿದಂತಾಯಿತು. ಅಶುದ್ಧಿಯಾಗಲಿ ಕರ್ಮವಾಗಲಿ ಇಲ್ಲದೆ ಅತ್ಯಂತನಿರ್ಮಲನಾಗಿ, ಸರ್ವಗತನಾಗಿ, ಬಂಧರಹಿತನಾಗಿ, ಅದ್ವಯನಾಗಿರುವ ಆ ಮತ್ತೊಬ್ಬನಾದ ಆತ್ಮನೂ ಸಿದ್ಧನಾದನು[5].

ಘಟಾದಿರೂಪಂ ಯದಿ ತೇನ ಗೃಹ್ಯತೇ
ಮನಃಪ್ರವೃತ್ತಂ ಬಹುಧಾ ಸ್ವವೃತ್ತಿಭಿಃ।
ಅಶುದ್ಧ್ಯಚಿದ್ರೂಪವಿಕಾರದೋಷತಾ
ಮತೇರ್ಯಥಾ ವಾರಯಿತುಂ ನ ಪಾರ್ಯತೇ ॥ ೪೬ ॥

---

1. ಎಲ್ಲವನ್ನೂ ಬೆಳಗುತ್ತಿರುವ ಸಾಕ್ಷಿಯು ಒಬ್ಬನೇ, ಇದನ್ನು ೭–೨೮ರಲ್ಲಿ ತಿಳಿಸಿದ್ದಾಗಿದೆ.

2. ಪರಮೇಶ್ವರನಿಗಿಂತ ಬೇರೆಯಾದ ದೃಷ್ಟೃವಿಲ್ಲ ಎಂಬ ಬೃ. ೩–೭–೨೩ರ ಅರ್ಥವನ್ನು ಇಲ್ಲಿ ಸೂಚಿಸಿದೆ.

3. 'ಶುದ್ಧೋ' ಎಂಬ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

4. ಚಾರ್ವಾಕ, ಬೌದ್ಧ ಮುಂತಾದವರ ವಾದಗಳನ್ನೆಲ್ಲ.

5 ನಿರ್ವಿಶೇಷಾತ್ಮನೂ ಸಿದ್ಧನಾಗುವನು ಎಂದಭಿಪ್ರಾಯ. ಸ್ಥೂಲಸೂಕ್ಷ್ಮದೇಹಗಳಿಗಿಂತ ಬೇರೆಯಾದ ಸಾಕ್ಷಿಯೇ ಪರಮಾತ್ಮನು.

೪೬. ಗಡಿಗೆಯೇ ಮುಂತಾದವುಗಳ ರೂಪದಲ್ಲಿ ಬಲುಬಗೆಯಾಗಿ ಪ್ರವರ್ತಿಸುತ್ತಿರುವ ಮನಸ್ಸನ್ನು ಆ (ಆತ್ಮನು) ತನ್ನ ವೃತ್ತಿಗಳಿಂದಲೇ ಅರಿಯುವ ನೆಂದರೆ.[1] ಮನಸ್ಸಿನಂತೆಯೇ (ಆತ್ಮನಿಗೂ) ಅಶುದ್ಧಿ, ಅಚಿದ್ರೂಪ, ವಿಕಾರ –ಎಂಬ ದೋಷಗಳು (ಇರಬೇಕಾಗುವದರಿಂದ ಅದನ್ನು) ನಿವಾರಿಸುವದಕ್ಕೆ ಆಗುವದೇ ಇಲ್ಲ[2].

ಯಥಾ ವಿಶುದ್ಧಂ ಗಗನಂ ನಿರನ್ತರಂ
ನ ಸಜ್ಜತೇ ನಾಪಿ ಚ ಲಿಪ್ಯತೇ ತಥಾ।
ಸಮಸ್ತಭೂತೇಷು ಸದೈವ ತೇಷ್ವಯಂ
ಸಮಃ ಸದಾತ್ಮಾ ಹ್ಯಜರೋಽಮರೋಽಭಯಃ ॥ ೪೭ ॥

೪೭. ಅತಿಶುದ್ಧವಾಗಿ ಕಡಿವಡೆಯದೆ ವ್ಯಾಪಿಸಿಕೊಂಡಿರುವ ಆಕಾಶವು ಹೇಗೆ ಒಂದರ ಸಂಗವೂ ಇಲ್ಲದಿರುವದೋ ಏತರ ಅಂಟೂ ಇಲ್ಲದೆ ಇರುವದೋ, ಅದರಂತೆ ಸದ್ರೂಪನಾಗಿ, ಮುಪ್ಪಿಲ್ಲದೆ, ಸಾವಿಲ್ಲದೆ, ಅಂಜಿಕೆಯಿಲ್ಲದೆ ಇರುವ ಈ (ಆತ್ಮನು) ಯಾವಾಗಲೂ ಸಮಸ್ತಭೂತಗಳಲ್ಲಿಯೂ ಒಂದೇ ಸಮನಾಗಿರುವನು[3].

ಅಮೂರ್ತಮೂರ್ತಾನಿ ಚ ಕರ್ಮವಾಸನಾ
ದೃಶಿಸ್ವರೂಪಸ್ಯ ಬಹಿಃ ಪ್ರಕಲ್ಪಿತಾ।
ಅವಿದ್ಯಯಾ ಹ್ಯಾತ್ಮನಿ ಮೂಢದೃಷ್ಟಿಭಿ-
ರ್ಯಪೋಹ್ಯ ನೇತೀತ್ಯವಶೇಷಿತೋ ದೃಶಿಃ ॥ ೪೮ ॥

೪೮. ಮೂರ್ತಾಮೂರ್ತಗಳೆರಡೂ ಕರ್ಮವಾಸನೆಯೂ ದೃಗ್ರೂಪನಾದ ಆತ್ಮನಿಗೆ ಹೊರಚ್ಚಾಗಿದ್ದರೂ ಮೂಢದೃಷ್ಟಿಯ (ಜನ)ರು (ಅವನ್ನು) ಆತ್ಮನಲ್ಲಿ ಅವಿದ್ಯೆಯಿಂದ ಕಲ್ಪಿಸಿರುವರು. (ಶ್ರುತಿಯು) "ನೇತಿ" (ಬೃ. ೨-೩-೬) ಎಂದು (ಅವನ್ನು) ಅಲ್ಲಗಳೆದು ದೃಗ್ರೂಪ(ನಾದ ಆತ್ಮ)ನನ್ನೇ ಉಳಿಸಿರುತ್ತದೆ[4].

---

1. ಮನಸ್ಸು ಗಡಿಗೆಯೇ ಮುಂತಾದ ಆಕಾರವನ್ನು ಪಡೆದುಕೊಂಡೇ ಆಯಾ ವೃತ್ತಿಯಿಂದ ಆ ಗಡಿಗೆಯೇ ಮುಂತಾದವನ್ನು ಗ್ರಹಿಸುತ್ತವೆಯಷ್ಟೆ. ಹಾಗೆಯೇ ಆಯಾ ವೃತ್ತಿಗಳ ಆಕಾರವನ್ನು ಪಡೆದೇ ಆತ್ಮನು ಅವನ್ನು ಗ್ರಹಿಸುತ್ತಾನೆ ಎಂದಾದರೆ ಎಂದರ್ಥ.

2. ಇದನ್ನು ೭-೩ರಲ್ಲಿ ತೋರಿಸಿಕೊಟ್ಟಿದೆ.

3. ಈ ಅಭಿಪ್ರಾಯವು ಹಿಂದೆ ೯-೫, ೧೧-೬ _ಮುಂತಾದ ಕಡೆಗಳಲ್ಲಿ ಆಗಲೇ ಬಂದಿದೆ.

4. ಅಜ್ಞಾನದಿಂದ ಕಲ್ಪಿತವಾಗಿರುವದನ್ನೇ ಶಾಸ್ತ್ರವು ಅಲ್ಲಗಳೆದಿರುತ್ತದೆ. ದೃಗ್ರೂಪನಾದ ಆತ್ಮನು ಯಾವಾಗಲೂ ಅದ್ವಿತೀಯನೇ.

ಪ್ರಬೋಧರೂಪಂ ಮನಸೋಽರ್ಥಯೋಗಜಂ
ಸ್ಮೃತೌ ಚ ಸುಪ್ತಸ್ಯ ಚ ದೃಶ್ಯತೇಽರ್ಥವತ್ ॥
ತಥೈವ ದೇಹಪ್ರತಿಮಾ ತತಃ[1] ಪೃಥಗ್
ವ್ಯಶೇಃ ಶರೀರಂ ಚ ಮನಶ್ಚ ದೃಶ್ಯತಃ ॥ ೪೯ ॥

೪೯. ಇಂದ್ರಿಯಾರ್ಥಸಂಬಂಧದಿಂದಾಗುವ ಮನಸ್ಸಿನ ಎಚ್ಚರದ (ವೃತ್ತಿಯ) ರೂಪವು ಸ್ಮೃತಿಯಲ್ಲಿಯೂ ಸ್ವಪ್ನದಲ್ಲಿಯೂ ವಿಷಯದಂತೆ ಕಾಣಿಸುತ್ತದೆ[2]. ಮತ್ತು ದೇಹದ ವಾಸನಾರೂಪವೂ ಹಾಗೆಯೇ ಕಾಣುತ್ತದೆ. ಆದ್ದರಿಂದ ಶರೀರವೂ ಮನಸ್ಸೂ ದೃಶ್ಯವಾಗಿರುವದರಿಂದ ದೃಗ್ರೂಪನಾದ ಆತ್ಮನಿಗಿಂತ ಬೇರೆಯೇ[4].

ಸ್ವಭಾವಶುದ್ಧೇ ಗಗನೇ ಘನಾದಿಕೇ।
ಮಲೇಽಪಯಾತೇ ಸತಿ ಚಾವಿಶೇಷತಾ ॥
ಯಥಾ ಚ ತದ್ವಚ್ಛ್ರುತಿವಾರಿತದ್ವಯೇ।
ಸದಾವಿಶೇಷೋ ಗಗನೋಪಮೇ ದೃಶೌ ॥ ೫೦ ॥

೫೦. ಹೇಗೆ ಸ್ವಭಾವದಿಂದಲೇ ಶುದ್ಧವಾಗಿರುವ ಆಕಾಶದಲ್ಲಿ ಮೋಡವೇ ಮುಂತಾದ ಮಲವಿದ್ದರೂ ಹೋದರೂ ಯಾವ ವಿಶೇಷವೂ ಉಂಟಾಗುವದಿಲ್ಲವೋ ಅದರಂತೆ ಆಕಾಶಸಮಾನವಾಗಿರುವ ದೃಗ್ರೂಪಾತ್ಮನಲ್ಲಿ (ದ್ವೈತವಿದ್ದರೂ) ಶ್ರುತಿಯು ದ್ವೈತವನ್ನು ಅಲ್ಲಗಳೆದರೂ ಯಾವಾಗಲೂ ಯಾವ ವಿಶೇಷವೂ ಉಂಟಾಗಿರುವದಿಲ್ಲ[5].

---

1. ಇಲ್ಲಿ "ಪ್ರತಿಮಾನತಃ" ಎಂಬ ಮೈ॥ ಪಾಠಕ್ಕಿಂತ 'ದೇಹಪ್ರತಿಮಾ' (ದೇಹ ವಾಸನಾ) – ಎಂಬ ಬೋಧನಿಧಿಯ ಪಾಠವೇ ಮೇಲು. ಆ ಪಾಠವನ್ನು ಅನುಸರಿಸಿ 'ತತಃ' ಎಂದೂ ತಿದ್ದಿಕೊಂಡಿದೆ.

2. ಎಚ್ಚರದಲ್ಲಿ ವಿಷಯವಿರುವದು, ಕನಸುನೆನಸುಗಳಲ್ಲಿ ಇಲ್ಲದಿರುವದು – ಎಂಬ ಹೆಚ್ಚುಕಡಿಮೆಯಿದ್ದರೂ ಮನಸ್ಸು ಎರಡರಲ್ಲಿಯೂ ಸವಿಷಯವಾಗಿಯೇ ಕಾಣುತ್ತದೆ.

3. ದೇಹದಂತೆ ಕಾಣುವ ವಾಸನೆಯನ್ನೇ 'ದೇಹಪ್ರತಿಮಾ' ಎಂದಿದೆ. ಎಚ್ಚರದ ದೇಹ, ಮನಸ್ಸು, ಇಂದ್ರಿಯ, ವಿಷಯ– ಎಲ್ಲವನ್ನೂ ಬಿಟ್ಟು ವಾಸನಾಮಯವಾದ ದೇಹಾದಿಗಳನ್ನು ನೋಡುವದೂ ಅದೇ ಆತ್ಮನು.

4. ಆದ್ದರಿಂದ ನಿಜವಾದ ದೇಹಾದಿಗಳಿಗಿಂತಲೂ ವಾಸನಾಮಯವಾದ ದೇಹಾದಿಗಳಿಗಿಂತಲೂ ಬೇರೆಯೇ.

5. ಈಗ ನಿಜವಾಗಿ ದ್ವೈತವಿರುವವೆಂದೂ ಶ್ರುತಿವಾಕ್ಯದ ಜ್ಞಾನವಾದಬಳಿಕ ಅದ್ವೈತ ಸ್ಥಿತಿಯು ಬರುವದೆಂದೂ ತಿಳಿಯಬಾರದು. ಆತ್ಮನು ಯಾವಾಗಲೂ ನಿರ್ವಿಶೇಷನೇ ಎಂದರ್ಥ.

ಕೂಟಸ್ಥಾತ್ಮಪ್ರಕರಣದ ಸಾರ

೧-೬. ಸ್ವಪ್ನದಲ್ಲಿಯೂ ಸೃಷ್ಟಿಯಲ್ಲಿಯೂ ವಿಷಯಗಳಿಲ್ಲದಿದ್ದರೂ ಎಚ್ಚರದಲ್ಲಿರುವ ವಿಷಯಗಳ ಆಕಾರವಾಗಿಯೇ ಮನಸ್ಸಿನ ವೃತ್ತಿಗಳು ಉಂಟಾಗುತ್ತವೆ ಎಂಬುದು ನಮ್ಮ ಅನುಭವದಲ್ಲಿದೆ. ಆದ್ದರಿಂದ ಎಚ್ಚರದಲ್ಲಿಯೂ ವಿಷಯಾಕಾರವಾದ ವೃತ್ತಿಗಳು ಆತ್ಮನಿಗೆ ವಿಷಯವಾಗಿರುವವೆಂದು ಹೇಳಬೇಕು. ಮನಸ್ಸು ವಿಷಯಗಳನ್ನು ತೋರಿಸಿಕೊಡುವ ದೆಂದರೆ ವಿಷಯಾಕಾರವಾದ ವೃತ್ತಿಗಳನ್ನು ಪಡೆಯುವವೇ; ಆತ್ಮನು ದ್ರಷ್ಟೃವೆಂದರೆ ಆ ವೃತ್ತಿಗಳನ್ನು ವ್ಯಾಪಿಸಿಕೊಂಡಿರುವದೇ.

೭-೧೭. ಚಿನ್ಮಾತ್ರನಾಗಿರುವ ಆತ್ಮನು ಸಮಸ್ತಅಂತಃಕರಣಗಳನ್ನೂ ಬೆಳಗುತ್ತಿರುವದರಿಂದ ಎಲ್ಲರಿಗೂ ಅವನೊಬ್ಬನೇ ಆತ್ಮನು. ಮನಸ್ಸು ಕನಸಿನಂತೆ ಎಚ್ಚರದಲ್ಲಿಯೂ ಕರ್ತೃಕರಣಕರ್ಮಫಲಗಳಾಗಿ ಪರಿಣಮಿಸುತ್ತಿರುವದರಿಂದ ಅದನ್ನು ಬೆಳಗುವ ಆತ್ಮನು ಈ ಯಾವ ಸ್ವರೂಪದವನೂ ಅಲ್ಲ; ಅವನು ಅಂತಃಕರಣದಂತೆ ಹೇಯನಲ್ಲ, ಉಪದೇಯನಲ್ಲ. ಹೊರಗೂ ಒಳಗೂ ನಿರ್ವಿಕಾರನಾಗಿರುವದರಿಂದ ಅವನಲ್ಲಿ ಹೇಯವಾದದ್ದು ಅಥವಾ ಉಪಾದೇಯವಾದದ್ದು ಯಾವದೂ ಇರುವಂತಿಲ್ಲ.

೧೮-೨೩. ಇಂಥ ಆತ್ಮನನ್ನು ಅರಿತುಕೊಂಡವನು ಹಸಿವು ಮುಂತಾದ ದೋಷಗಳಿಲ್ಲದ ಆತ್ಮನು ತಾನೆಂದು ಅರಿತಿರುವದರಿಂದ ಅವನಿಗೆ ಯಾವ ಕರ್ತವ್ಯವೂ ಇರುವದಿಲ್ಲ. ತನ್ನನ್ನು ತಾನು ಅರಿತುಕೊಳ್ಳಬೇಕಾದದ್ದಾಗಲಿ ಚಿಂತಿಸುತ್ತಿರಬೇಕಾದದ್ದಾಗಲಿ ಇರುವದಿಲ್ಲ; ಜ್ಞೇಯವಾದದ್ದೆಲ್ಲ ತನಗಿಂತ ಭಿನ್ನವಾಗಿರುವದರಿಂದ ಅವಿದ್ಯಾಕಲ್ಪಿತವಾಗಿರುತ್ತವೆ. ಜ್ಞಾನಿಗೆ ಅವಿದ್ಯೆಯಿಲ್ಲದ್ದರಿಂದ ನಾನು, ನನ್ನದು – ಎಂಬ ಭಾವನೆಯೂ ಇರುವದಿಲ್ಲ. ಈ ಆತ್ಮನಿಗಿಂತ ಬೇರೆಯಾಗಿ ದ್ರಷ್ಟೃವಾದವನು ಮತ್ತೊಬ್ಬನು ಇರುವದಿಲ್ಲವೆಂದು ಶ್ರುತಿಯಲ್ಲಿದೆ; ಆದ್ದರಿಂದ ಆತ್ಮಜ್ಞಾನಿಯು ದ್ರಷ್ಟೃವಾದ ಎಲ್ಲಾ ಪ್ರಾಣಿಗಳಿಗೂ ಆತ್ಮನು. ಅಂತೂ ನನ್ನ ಆತ್ಮನು ಕ್ರಿಯಾಕಾರಕಫಲಗಳಿಗಿಂತ ಬೇರೆ, ನಾನುನನ್ನದೆಂಬುದಿಲ್ಲದವನು" ಎಂದು ಯಾವನು ಅರಿತುಕೊಂಡಿರುವನೋ ಅವನೇ ನಿಜವಾಗಿ ಅರಿತವನು.

೨೪-೪೦. ಆತ್ಮಜ್ಞಾನಿಗೆ ಯಾವ ಕರ್ತವ್ಯವೂ ಇಲ್ಲವೆಂಬುದಕ್ಕೆ ಆತ್ಮನು ನಿಷ್ಕ್ರಿಯನೆಂಬುದೇ ಕಾರಣ. ನಿತ್ಯಾಪರೋಕ್ಷವಾಗಿರುವ ಚೈತನ್ಯವೇ ತನ್ನ ಆತ್ಮನೆಂದು ಅವನು ಅರಿತುಕೊಂಡಿರುತ್ತಾನೆ. ಪರಲೋಕದಲ್ಲಿ ತನಗಾಗುವ ಮಃಖದ ಅಂಜಿಕೆಯಾಗಲಿ ಪಡೆದುಕೊಳ್ಳಬೇಕಾಗಿರುವ ಬ್ರಹ್ಮತ್ವ, ಇಂದ್ರತ್ವ – ಮುಂತಾದವುಗಳ ಆಶೆಯಾಗಲಿ ಅವರಿಗೆ ಇರುವದಿಲ್ಲ. ನಾನು, ನನ್ನದು –ಎಂಬ ಮಾತುಗಳಿಗೆ ಅವನ ಪಾಲಿಗೆ ಅರ್ಥವೇ ಇರುವದಿಲ್ಲ. ಅಂತಃಕರಣವು ಇದ್ದರೂ ಇಲ್ಲದಿದ್ದರೂ ತನ್ನ ಸ್ವರೂಪವು ಒಂದೇ ಆಗಿರುವವೆಂದೂ ತಾನು ಅದ್ವಿತೀಯಚಿದ್ಘೆಕರಸವಾಗಿರುವೆನೆಂದೂ ಅರಿತಿರುವನು. ತನ್ನ ಆತ್ಮನು ಸರ್ವಭೂತಗಳಲ್ಲಿಯೂ ಸಕಲಭೂತಗಳೂ ತನ್ನಲ್ಲಿಯೂ ಇರುವವೆಂದು ನಿಶ್ಚಯಿಸಿಕೊಂಡಿರುವದರಿಂದ ಅವನು ಕೃತಕೃತ್ಯನು, ಆವಾಪ್ತಕಾಮನು, ನಿತ್ಯಶುದ್ಧಮುಕ್ತಸ್ವಭಾವವವನು. ಪ್ರಾಣ

ವಾಗಲಿ ಮನಸ್ಸಾಗಲಿ ಇಲ್ಲದ ಆತ್ಮನೇ ತಾನೆಂದು ಅರಿತುಕೊಂಡಿರುವದರಿಂದ ಅವನು ಮಾಡ ತಕ್ಕ ಕ್ರಿಯೆಯಾಗಲಿ ಪಡೆಯತಕ್ಕ ಜ್ಞಾನವಾಗಲಿ ಸಮಾಧಿಯಾಗಲಿ ಕಳೆದುಕೊಳ್ಳತಕ್ಕ ದೋಷವಾಗಲಿ ಇರುವದಿಲ್ಲ. ಅವನು ಮನೋರಹಿತನಾದ್ದರಿಂದ ಮಾಡಬೇಕಾದ ಧ್ಯಾನವಿಲ್ಲ, ಅಪ್ರಾಣನಾದ್ದರಿಂದ ಕ್ರಿಯೆಯಿಲ್ಲ. ಅವನು ದೇವತೆಗಳಿಗೂ ವೇದಗಳಿಗೂ ಮೂಲವಾದ ಆತ್ಮನೆಂಬ ಮಾನಸತೀರ್ಥದಲ್ಲಿ ಮಿಂದಿರುವದರಿಂದ ನಿತ್ಯಶುದ್ಧನೂ ಅಮೃತನೂ ಆಗಿರುವನು.

೪೧–೫೦. ಶಬ್ದಾದಿಗಳೂ ಅಹಂಕಾರಮಮಕಾರಗಳೂ ದೃಶ್ಯವಾಗಿರುವದರಿಂದ ಸ್ವತಃಸಿದ್ಧವಲ್ಲ; ಅವುಗಳನ್ನು ಬೆಳಗುವ ಆತ್ಮನು ಸ್ವತಃಸಿದ್ಧನು. ಆದ್ದರಿಂದಲೇ ನಿತ್ಯ ಮುಕ್ತನು, ಅದ್ವಿತೀಯನು; ಶೂನ್ಯರೂಪನಲ್ಲ. ಅವನು ನಿರ್ವಿಕಾರನು, ಎಲ್ಲೆಲ್ಲಿಯೂ ಸಮವಾಗಿ ನಿರ್ದೋಷನಾಗಿರುವನು –ಎಂದು ತಿಳಿಯಬೇಕು. ಈ ಆತ್ಮರೂಪದಲ್ಲಿ ಕಲ್ಪಿತವಾದ ದ್ವೈತವನ್ನೇ ಶ್ರುತಿಯು ಅಲ್ಲಗಳೆಯುತ್ತದೆ. ಆತ್ಮಸ್ವರೂಪದಲ್ಲಿ ದ್ವೈತಕಲ್ಪನೆಯಿಂದ ಲಾಗಲಿ ಜ್ಞಾನದಿಂದ ದ್ವೈತವನ್ನು ತೊಲಗಿಸಿಕೊಳ್ಳುವದರಿಂದಾಗಲಿ ಯಾವ ವಿಶೇಷವೂ ಆಗುವದಿಲ್ಲ. ಆಕಾಶಕ್ಕೆ ಯಾವ ಕಲ್ಮಷವೂ ಅಂಟದೆ ಇರುವಂತೆ ಆತ್ಮನ ಶುದ್ಧರೂಪಕ್ಕೆ ಎಂದಿಗೂ ಯಾವ ದೋಷವೂ ಹತ್ತುವಂತೆ ಇಲ್ಲ.

——:೦:——

೧೫. ನಿಷ್ಕ್ರಿಯಾತ್ಮಪ್ರಕರಣ[1]

ಆತ್ಮಕ್ಕಿಂತ ಬೇರೆಯಾದದ್ದನ್ನು ಚಿಂತಿಸಬಾರದು

ನಾನ್ಯದನ್ಯದ್ಭವೇದ್ ಯಸ್ಮಾನ್ನಾನ್ಯತ್ ಕಂಚಿದ್ವಿಚಿನ್ತಯೇತ್ |
ಅನ್ಯಸ್ಯಾನ್ಯಭಾವೇ ಹಿ ನಾಶಸ್ತಸ್ಯ ಧ್ರುವೋ ಭವೇತ್ ॥ ೧ ॥

೧. ಒಂದು (ವಸ್ತು) ಮತ್ತೊಂದಾಗಲಾರದಾದ್ದರಿಂದ[2] ಮತ್ತೊಂದನ್ನು (ತಾನೆಂದು) ಧ್ಯಾನಿಸಬಾರದು. ಏಕೆಂದರೆ ಒಂದು ಮತ್ತೊಂದಾಗುವದಾದರೆ ಅವಕ್ಕೆ ನಾಶವು ತಪ್ಪದೆ ಆಗುವದು.

ಆತ್ಮನು ಮನಸ್ಸಿಗಿಂತ ಭಿನ್ನನು

ಸ್ಮರತೋ ದೃಶ್ಯತೇ ದೃಷ್ಟಂ ಪಟೇ ಚಿತ್ರಮಿವಾರ್ಪಿತಮ್ |
ಯತ್ರ ಯೇನ ಚ ತೌ ಜ್ಞೇಯೌ ಸತ್ತ್ವಕ್ಷೇತ್ರಜ್ಞಸಂಜ್ಞಕೌ ॥ ೨ ॥

೨. ಹಿಂದೆ ಕಂಡದ್ದನ್ನು ಸ್ಮರಿಸಿಕೊಳ್ಳುವವನಿಗೆ[3] ಬಟ್ಟೆಯಲ್ಲಿ ತೋರಿಸಿರುವ ಚಿತ್ರವಂತೆ (ಅದು) ಎಲ್ಲಿ[4] ಯಾವಾತನಿಗೆ[5] ಕಾಣುವದೋ ಆ ಸತ್ತ್ವ ಕ್ಷೇತ್ರಜ್ಞರನ್ನು (ವಿಂಗಡಿಸಿ) ತಿಳಿದುಕೊಳ್ಳಬೇಕು.

ಫಲಾನ್ತಂ ಚಾನುಭೂತಂ ಯದ್ಯುಕ್ತಂ[6] ಕರ್ತ್ರಾದಿಕಾರಕೈಃ |
ಸ್ಮರ್ಯಮಾಣಂ ಹಿ ಕರ್ಮಸ್ಥಂ ಪೂರ್ವಂ ಕರ್ಮೈವ ತಚ್ಚಿತ್ತಃ[7] ॥೩॥

---

1. ಇದಕ್ಕೆ ವ್ಯಾಖ್ಯಾನದಲ್ಲಿ ನಾನ್ಯದನ್ಯತ್ವಕರಣವೆಂಬ ಹೆಸರು ; ಈಗಿನ ಹೆಸರು ನಾವು ಕೊಟ್ಟದ್ದು.

2. ಮತ್ತೊಂದು ವಸ್ತುವಾಗಿ ಪರಿಣಮಿಸಲಾರದು. ವಸ್ತುವಿನ ನಿಜವಾದ ಸ್ವರೂಪವೆಂದರೆ ಇದ್ದಂತೆಯೇ ಇರತಕ್ಕದ್ದು.

3. ಕನಸುಕಾಣುವನವರಿಗೆ ಎಂಬೂ ಸೇರಿಸಿಕೊಳ್ಳಬೇಕು. ಹಿಂದಿನ ಪ್ರಕರಣದ ಒಂದನೆಯ ಶ್ಲೋಕವನ್ನು ನೋಡಿ.

4. ಅಂತಃಕರಣದಲ್ಲಿ.

5. ಆತ್ಮನಿಗೆ ಎಂದರ್ಥ. ಕನಸುನೆನಸುಗಳಲ್ಲಿಯೂ ಎಚ್ಚರದಲ್ಲಿಯೂ ಅಂತಃಕರಣವು ವಿಷಯವೇ ಆಗಿರುತ್ತದೆ - ಎಂಬುದನ್ನು ಹಿಂದಿನ ಪ್ರಕರಣದಲ್ಲಿಯೇ ತಿಳಿಸಿದ್ದಾಗಿದೆ.

6. 'ಯದ್ಯುತಂ' ಎಂಬ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

7. 'ತತ್ತತಃ' ಎಂಬ ಬೋಧನಿಧಿಯ ಪಾಠಕ್ಕಿಂತ ಇದೇ ಮೇಲು.

೩. ಕರ್ತೃ ಮುಂತಾದ ಕಾರಕಗಳಿಂದೊಡಗೂಡಿ ಫಲಾಂತವಾಗಿ ಯಾವದು ಅನುಭವಿಸಲ್ಪಟ್ಟು ನೆನಸಿಕೊಂಡಾಗ ಯಾವದು ಕರ್ಮರೂಪವಾಗಿರುವದೋ ಅದು ಮೊದಲು ಚೈತನ್ಯಕ್ಕೆ ಕರ್ಮವೇ ಆಗಿರುತ್ತದೆ[1].

ದ್ರಷ್ಟುಶ್ಚಾನ್ಯದ್ಭವೇದ್ದೃಶ್ಯಂ ದೃಶ್ಯತ್ವಾದ್ ಘಟವತ್ ಸದಾ।
ದೃಶ್ಯಾದ್ ದ್ರಷ್ಟಾಸಜಾತೀಯೋ ನ ಧೀವತ್ ಸಾಕ್ಷಿತಾऽನ್ಯಥಾ ॥ ೪ ॥

೪. ದ್ರಷ್ಟೃವಿಗಿಂತ ದೃಶ್ಯವು ಬೇರೆಯಾಗಿರಬೇಕು[2]; ಏಕೆಂದರೆ ಅದು ಗಡಿಗೆಯಂತೆ ಯಾವಾಗಲೂ ದೃಶ್ಯವಾಗಿರುತ್ತದೆ. ದೃಶ್ಯಕಿಂತ ದ್ರಷ್ಟೃವೂ ವಿಲಕ್ಷಣಸ್ವರೂಪನಾಗಿರುತ್ತಾನೆ; ಹಾಗಿಲ್ಲದೆ ಇದ್ದರೆ ಅಂತಃಕರಣದಂತೆ ಅವನಿಗೂ ಸಾಕ್ಷಿತ್ವವು ಇರಬಾರದಾಗುವದು[3].

ಆತ್ಮನಿಗೆ ಜಾತ್ಯಾದಿಗಳಿಲ್ಲದ್ದರಿಂದ ಕ್ರಿಯೆಗಳನ್ನು ಬಿಡಬೇಕು

ಸ್ವಾತ್ಮಬುದ್ಧಿಮಪೇಕ್ಷ್ಯಾಸೌ ವಿಧೀನಾಂ ಸ್ಯಾತ್ ಪ್ರಯೋಜಕಃ।
ಜಾತ್ಯಾದಿಃ ಶವವತ್ ತೇನ ತದ್ವನ್ನಾನಾತ್ಮತಾऽನ್ಯಥಾ ॥ ೫ ॥

೫. ತಾನು ತನ್ನದು ಎಂಬ ಬುದ್ಧಿಯನ್ನು ಅಪೇಕ್ಷಿಸಿಕೊಂಡೇ ಈ ಜಾತಿ ಮುಂತಾದದ್ದು ಶವದಂತೆ ವಿಧಿಗಳಿಗೆ ಪ್ರವರ್ತಕವಾಗಿರುತ್ತದೆ[4]. ಆದ್ದರಿಂದ (ಇದೂ) ಅದರಂತೆ (ಅನಾತ್ಮನೇ). ಇಲ್ಲದಿದ್ದರೆ ನಾನಾತ್ಮವಾದವು (ಉಂಟಾದೀತು)[5].

---

1. ಕರ್ತೃ, ಕ್ರಿಯಾ, ಕರ್ಮ, ಫಲ -- ಇದಿಷ್ಟು ಸ್ಮೃತಿಯ ಕಾಲಕ್ಕೆ ಕರ್ಮವು; ಆದ್ದರಿಂದ ಮೊದಲು ಅನುಭವಕಾಲಕ್ಕೂ ಕರ್ಮವೇ.

2. ವಿಲಕ್ಷಣವಾಗಿರಬೇಕೆಂದು ಅರ್ಥ; ಸ್ವತಂತ್ರವಾಗಿ ಬೇರೆಯಾಗಿದೆ ಎಂದಲ್ಲ.

3. ಅಂತಃಕರಣದಂತೆಯೇ ಪರಿಣಾಮಿತ್ವಾದಿಗಳು ಇದ್ದರೆ ಸಾಕ್ಷಿಯಾಗಲಾರದು; ಏಕೆಂದರೆ ಸಾಕ್ಷಿಯು ಪರಿಣಾಮಿಯಾದರೆ ಆ ಪರಿಣಾಮವು ನಿಸ್ಸಾಕ್ಷಿಕವಾಗುವದು.

4. ಶವವು ನನ್ನ ತಂದೆಯದು, ಮಗನದು -ಎಂದು ಮುಂತಾದ ಅಭಿಮಾನದಿಂದ ಅದರ ಉತ್ತರಕ್ರಿಯೆಗೆ ಪ್ರವರ್ತಿಸುತ್ತಾರೆ. ಇದರಂತೆ ಜಾತಿ, ಆಶ್ರಮ -ಮುಂತಾದದ್ದು ನನ್ನದು ಎಂಬ ಅಭಿಮಾನವೇ ಕರ್ಮದಲ್ಲಿ ತೊಡಗುವದಕ್ಕೆ ಕಾರಣ.

5. ಹಾಗಿಲ್ಲದೆ ಆತ್ಮನಿಗೇ ಜಾತ್ಯಾದಿಗಳು ಸೇರಿವೆ ಎಂದರೆ ಆತ್ಮರು ಅನೇಕವೆಂದಾಗುವದು. ಅದು ಶ್ರುತಿವಿರುದ್ಧ ಎಂದಧಿಕ್ಕರ್ಣಯ. 'ಅನಾತ್ಮತೋऽನ್ಯಥಾ' ಎಂಬ ಬೋಧನಿಧಿಯ ಪಾಠಕ್ಕೆ ಕಾರಣವಿಲ್ಲ.

ಸಶರೀರತ್ವವು ಕರ್ಮದಿಂದಾದದ್ದಾದ್ದರಿಂದ ಕರ್ಮವನ್ನು ಬಿಡಬೇಕು

ನ ಪ್ರಿಯಾಪ್ರಿಯ ಇತ್ಯುಕ್ತೇರ್ನಾದೇಹತ್ವಂ ಕ್ರಿಯಾಫಲಮ್ ।
ದೇಹಯೋಗಃ ಕ್ರಿಯಾಹೇತುಸ್ತಸ್ಮಾದ್ವಿದ್ವಾನ್ ಕ್ರಿಯಾಸ್ತ್ಯಜೇತ್ ॥

೪. "ಪ್ರಿಯಾಪ್ರಿಯಗಳು (ಸೋಂಕುವದಿಲ್ಲ)" (ಛಾಂ. ೮-೧೨-೧) ಎಂದು (ಶ್ರುತಿಯಲ್ಲಿ) ಹೇಳಿರುವದರಿಂದ ಅದೇಹತ್ವವು ಕ್ರಿಯಾಫಲವಲ್ಲ[1]. ದೇಹಸಂಬಂಧಕ್ಕೆ ಕ್ರಿಯೆಯೇ ಕಾರಣವು[2]. ಆದ್ದರಿಂದ ತಿಳಿದವನು ಕ್ರಿಯೆಗಳನ್ನು ಬಿಡಬೇಕು.

ಕರ್ಮಸ್ವಾತ್ಮಾ ಸ್ವತಸ್ತ್ರಶ್ಚೇನ್ನಿವೃತ್ತೌ ಚ ತಥೇಷ್ಯತಾಮ್ ।
ಅದೇಹತ್ವೇ ಫಲೇಽಕಾರ್ಯೇ ಜ್ಞಾತೇ ಕುರ್ಯಾತ್ ಕಥಂ ಕ್ರಿಯಾಃ॥

೭. ಆತ್ಮನು ಕರ್ಮಗಳನ್ನು (ಮಾಡುವ)ದರಲ್ಲಿ ಸ್ವತಂತ್ರನಾದರೆ ನಿವೃತ್ತಿಯಲ್ಲಿಯೂ ಹಾಗೆಯೇ (ಸ್ವತಂತ್ರ)ನೆಂದು ಒಪ್ಪಬೇಕು. ಅದೇಹತ್ವವೆಂಬ ಫಲವು ಕಾರ್ಯವಲ್ಲವೆಂದು[3] ತಿಳಿದಮೇಲೆ ಕರ್ಮಗಳನ್ನು ಹೇಗೆತಾನೆ ಮಾಡಿಯಾನು ?

ಜಾತ್ಯಾದೀನ್ ಸಂಪರಿತ್ಯಜ್ಯ ನಿಮಿತ್ತಂ ಕರ್ಮಣಾಂ ಬುಧಃ ।
ಕರ್ಮಹೇತುವಿರುದ್ಧಂ ಯತ್ ಸ್ವರೂಪಂ ಶಾಸ್ತ್ರತಃ ಸ್ಮರೇತ್ ॥ ೮ ॥

೮. ವಿವೇಕಿಯಾದವನು ಕರ್ಮಗಳಿಗೆ ನಿಮಿತ್ತವಾಗಿರುವ ಜಾತಿಯೇ ಮುಂತಾದವುಗಳನ್ನು[4] ಬಿಟ್ಟು ಕರ್ಮಹೇತುವಿಗೇ ವಿರುದ್ಧವಾಗಿರುವ[5] ಶಾಸ್ತ್ರಸಿದ್ಧವಾದ ಸ್ವರೂಪವನ್ನು ಸ್ಮರಿಸುತ್ತಿರಬೇಕು.

---

1. ದೇಹವಿದ್ದರೆ ಪ್ರಿಯಾಪ್ರಿಯಗಳು ಇವ್ವೇ ಇರುವವು; ಅದೇಹವಾಗಿರುವ ಜ್ಞಾನಿಗೆ ಪ್ರಿಯಾಪ್ರಿಯಗಳು ಸೋಂಕುವದಿಲ್ಲ - ಎಂದು ಶ್ರುತಿಯು ಹೇಳುತ್ತಿರುವದರಿಂದ ಅದೇಹತ್ವವು ಸ್ವಾಭಾವಿಕವಾಗಿರುತ್ತದೆ.

2. ಅಜ್ಞಾನದಿಂದ ಕರ್ಮವನ್ನುಮಾಡಿದರೆ ಕರ್ಮಫಲವಾದ ದೇಹವನ್ನು ಪಡೆಯುವನು.

3. ಅಜ್ಞಾನದಿಂದ ಮಾತ್ರವೇ ದೇಹವು ತೋರುವದರಿಂದ ಅದೇಹತ್ವವು ಸ್ವಾಭಾವಿಕವೆಂದು.

4. ವರ್ಣಾಶ್ರಮಾದ್ಯಭಿಮಾನವನ್ನು ಎಂದರ್ಥ. ಕರ್ಮಸಂನ್ಯಾಸವನ್ನು ಮಾಡಬೇಕು ಎಂದಭಿಪ್ರಾಯ.

5. ಕರ್ಮಕ್ಕೆ ಕಾರಣವಾಗಿ ಅವಿದ್ಯಾಕಾಮಗಳು ಇರುವದಕ್ಕೆ ಅವಕಾಶವೇ ಇಲ್ಲದ.

ಆತ್ಮಸ್ವರೂಪ

ಆತ್ಮೈಕಃ ಸರ್ವಭೂತೇಷು ತಾನಿ ತಸ್ಮಿಂಶ್ಚ ಹೇ ಯಥಾ |
ಪರ್ಯಗಾದ್ ವ್ಯೋಮವತ್ ಸರ್ವಂ ಶುಕ್ರಂ ದೀಪ್ತಿಮದಿಷ್ಯತೇ ||೯||
ವ್ರಣಸ್ನಾಯ್ವೋರಭಾವೇನ ಸ್ಥೂಲಂ ದೇಹಂ ನಿವಾರಯೇತ್ |
ಶುದ್ಧಾಪಾಪತಯಾ ರೂಪಂ ಲಿಙ್ಗಂ ಚಾಕಾಯಮಿತ್ಯುತ ||೧೦||

೯-೧೦. ಒಬ್ಬನೇ ಆತ್ಮನು ಸರ್ವಭೂತಗಳಲ್ಲಿಯೂ (ಇರುತ್ತಾನೆ) : ಅವುಗಳೂ ಅವನಲ್ಲಿ ಆಕಾಶದಲ್ಲಿರುವಂತೆ[1] ಇರುತ್ತವೆ. ಆಕಾಶದಂತೆ ಎಲ್ಲವನ್ನೂ (ಅವನು) ವ್ಯಾಪಿಸಿಕೊಂಡಿರುತ್ತಾನೆ, ಶುಕ್ರನಾಗಿರುತ್ತಾನೆ ಎಂದರೆ ಪ್ರಕಾಶಯುಕ್ತನಾಗಿರುತ್ತಾನೆ. ವ್ರಣ, ಸ್ನಾಯು –ಇವುಗಳಿಲ್ಲವೆಂದಿರುವದರಿಂದ ಸ್ಥೂಲದೇಹವನ್ನು ಅಲ್ಲಗಳೆಯಬೇಕು. 'ಶುದ್ಧ', 'ಅಪಾಪ' – ಎಂದಿರುವದರಿಂದ ಯಾವ (ವಾಸನೆಯೂ) ಲೇಪವೂ (ಇಲ್ಲವೆಂದು ಭಾವಿಸಬೇಕು). ಮತ್ತು 'ಅಕಾಯ'ನೆಂದಿರುವದರಿಂದ ಲಿಂಗಶರೀರವನ್ನು (ಅಲ್ಲಗಳೆಯಬೇಕು)[2].

ವಾಸುದೇವೋ ಯಥಾಶ್ವತ್ಥೇ ಸ್ವದೇಹೇ ಚಾಬ್ರವೀತ್ ಸಮಮ್ ||
ತದ್ವದ್ವೇತ್ತಿ ಯ ಆತ್ಮಾನಂ ಸ ಬ್ರಹ್ಮವಿದುತ್ತಮಃ ||೧೧||

೧೧. ವಾಸುದೇವನು ಅಶ್ವತ್ಥದಲ್ಲಿಯೂ ತನ್ನ ದೇಹದಲ್ಲಿಯೂ ತಾನು ಸಮನಾಗಿರುವೆನೆಂದು ಹೇಗೆ ಹೇಳಿರುವನೋ ಅದರಂತೆ ತಾನೂ (ಇರುವೆನೆಂದು)[3] ಯಾವನು ಅರಿತುಕೊಂಡಿರುವನೋ ಅವನೇ ಬ್ರಹ್ಮಜ್ಞಾನಿಗಳಲ್ಲಿ ಉತ್ತಮನು.

---

1. ಆಕಾಶದಲ್ಲಿ ಏನಿದ್ದರೂ ಅದರ ಲೇಪವು ಆಕಾಶಕ್ಕಿರುವದಿಲ್ಲ ; ಅದರಂತೆ ಭೂತಗಳು ಆತ್ಮನಲ್ಲಿದ್ದರೂ ಅವನಿಗೆ ಅವುಗಳ ದೋಷವು ಸೋಂಕುವದಿಲ್ಲ ಎಂದು ಭಾವ.

2. ಹಿಂದಿನ ಶ್ಲೋಕದಲ್ಲಿ ಪೂರ್ವಾರ್ಧ ಈಶಾವಾಸ್ಯ ಒನೆಯ ಮಂತ್ರದ ಅರ್ಥವನ್ನು ಹೇಳಿ ಉತ್ತರಾರ್ಧದಲ್ಲಿಯೂ ಈ ಶ್ಲೋಕದಲ್ಲಿಯೂ **"ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಂ ಶುದ್ಧಮಪಾಪವಿದ್ಧಮ್"** ಎಂಬ ಈಶಾವಾಸ್ಯ (ಲ) ವಾಕ್ಯದ ಅರ್ಥವನ್ನು ವಿವರಿಸಿದೆ. ಇಂಥ ಶಾಸ್ತ್ರಸಿದ್ಧವಾದ ಸ್ವರೂಪವನ್ನು ಸ್ಮರಿಸುತ್ತಿರಬೇಕು. ಈ ಸ್ವರೂಪದ ಜ್ಞಾನವು ಕರ್ಮಕ್ಕೆ ಅತ್ಯಂತವಿರುದ್ಧವಾಗಿರುತ್ತದೆ.

3. ಬ್ರಹ್ಮಾದಿಸ್ತಂಬಪರ್ಯಂತನಾದ ಭೂತಗಳೆಲ್ಲೆಲ್ಲ ಸಮನಾಗಿರುವನೆಂದು.

ಯಥಾ ಹ್ಯನ್ಯಶರೀರೇಷು ಮಮಾಹನ್ತಾ ನ ಚೇಷ್ಯತೇ ।
ಅಸ್ಮಿಂಶ್ಚಾಪಿ ತಥಾ ದೇಹೇ ಧೀಸಾಕ್ಷಿತ್ವಾವಿಶೇಷತಃ ॥ ೧೩ ॥

೧೩. ಮಿಕ್ಕ ಶರೀರಗಳಲ್ಲಿ ನನಗೆ ಹೇಗೆ ನಾನು ಎಂಬ ಭಾವವು ಇರುವದಿಲ್ಲವೋ, ಅದರಂತೆ ಈ ದೇಹದಲ್ಲಿಯೂ ಇರುವದಿಲ್ಲ. ಏಕೆಂದರೆ (ಇಲ್ಲಿಯೂ) ಅಂತಃಕರಣಕ್ಕೆ ಸಾಕ್ಷಿಯಾಗಿರುತ್ತೇನೆ[1].

ರೂಪಸಂಸ್ಕಾರತುಲ್ಯಾಧೀ ರಾಗದ್ವೇಷೌ ಭಯಂ ಚ ಯತ್ ।
ಗೃಹ್ಯತೇ ಧೀಶ್ರಯಂ ತಸ್ಮಾಜ್ಜ್ಞಾತಾ ಶುದ್ಧೋಽಭಯಃ ಸದಾ ॥ ೧೪ ॥

೧೪. ರೂಪದ ಸಂಸ್ಕಾರವು ಯಾವ ಉಪಾಧಿಯಲ್ಲಿರುವದೋ ಆ ಉಪಾಧಿಯಾದ ಅಂತಃಕರಣದಲ್ಲಿಯೇ ರಾಗದ್ವೇಷಾದಿಗಳ ಭಯವೂ ಕಾಣ ಬರುತ್ತದೆಯಾದ್ದರಿಂದ ಜ್ಞಾತೃವಾದ ಆತ್ಮನು ಯಾವಾಗಲೂ ಶುದ್ಧನಾಗಿಯೂ ಭಯರಹಿತನಾಗಿಯೂ (ಇರುವನು)[2].

ಯನ್ಮನಾಸ್ತನ್ಮಯೋಽನ್ಯತ್ವೇ ನಾತ್ಮತ್ವಾಪ್ತೌ ಕ್ರಿಯಾತ್ಮನಿ ।
ಆತ್ಮತ್ವೇ ಜ್ಞಾನಸೇಕ್ಷತ್ವಾತ್ ಸಾಪೇಕ್ಷಂ ಹಿ ನ ತತ್ಸ್ವಯಮ್ ॥ ೧೫ ॥

೧೫. (ಪಡೆಯತಕ್ಕದ್ದು,) ಮತ್ತೊಂದಾದರೆ, ಯಾವದರ ಮನಸ್ಸುಳ್ಳವನಾಗಿರುವನೋ ಆ ಸ್ವರೂಪದವನಾಗುತ್ತಾನೆ[3]. ಆದರೆ ಆತ್ಮತ್ವವನ್ನು ಪಡೆಯುವದಕ್ಕೆ ತನ್ನಲ್ಲಿ ಯಾವ ಕ್ರಿಯೆಯೂ ಬೇಕಿರುವದಿಲ್ಲ ; ಏಕೆಂದರೆ ತಾನು ತಾನೇ

---

1. ಮತ್ತೊಬ್ಬರ ಶರೀರವನ್ನು ನಾನು ಎಂದು ಯಾರೂ ತಿಳಿದುಕೊಳ್ಳುವದಿಲ್ಲ. ಎಲ್ಲಾ ಶರೀರಗಳೂ ಸಾಕ್ಷಿಗೆ ವಿಷಯವಾಗಿರುವಂತೆ ತಮ್ಮತಮ್ಮ ಶರೀರವೂ ವಿಷಯವಾಗಿರುತ್ತವೆ. ಆದ್ದರಿಂದ ಅದೂ ತಾನಲ್ಲವೆಂದು ತಿಳಿಯಬೇಕು ಎಂದರ್ಥ.

2. ಈ ಶ್ಲೋಕವು ಉ. ಸಾ. ಗದ್ಯ ೨೫ರಲ್ಲಿಯೂ ಉದಾಹೃತವಾಗಿರುತ್ತದೆ. ಇದು ಯಾವ ಗ್ರಂಥದಿಂದ ತೆಗೆದುಕೊಂಡದ್ದೆಂಬುದು ತಿಳಿಯದು. ಅಂತಃಕರಣದ ಧರ್ಮವು ಯಾವದೊಂದೂ ಆತ್ಮನಿಗೆ ಸೇರಿದ್ದಲ್ಲವಾದ್ದರಿಂದ ಆತ್ಮನು ನಿರ್ಗುಣನೂ ಅದ್ವಯನೂ ಆಗಿರುತ್ತಾನೆ ಎಂಬುದನ್ನು ಪ್ರತಿಪಾದಿಸುವದೇ ಶ್ಲೋಕದ ಗುರಿ.

3. ಸಾಧಕನು ಯಾವ ಭಾವನೆಯಿಂದ ಕೂಡಿರುವನೋ ಆ ಸ್ವರೂಪವನ್ನು ಪಡೆಯುತ್ತಾನೆ —ಎಂಬ ನಿಯಮವಿದೆ, ಭಾಂ. ಶಿ-೧೪-೧ ನೋಡಿ.

ಆಗುವದಕ್ಕೆ ಮತ್ತೊಂದರ ಅಪೇಕ್ಷೆಯಿರುವದಿಲ್ಲ. ಸಾಪೇಕ್ಷವಾಗಿದ್ದರೆ[1] ಅದು ತಾನೇ ಆಗಲಾರದು.

ಖಮಿವೈಕರಸಾ ಜ್ಞಪ್ತಿರವಿಭಕ್ತಾಜರಾಮಲಾ ।
ಚಕ್ಷುರಾದ್ಯುಪಧಾನಾ ಸಾ ವಿಪರೀತಾ ವಿಭಾವ್ಯತೇ ॥ ೧೫ ॥

೧೫. ಚೈತನ್ಯವು ಆಕಾಶದಂತೆ ಒಂದೇ ತೆರನಾಗಿ, ವಿಭಾಗವಿಲ್ಲದೆ, ಮುಪ್ಪಿಲ್ಲದೆ ನಿರ್ಮಲನಾಗಿರುತ್ತದೆ[2]. ಚಕ್ಷುರಿಂದ್ರಿಯವೇ ಮುಂತಾದ ಉಪಾಧಿಗಳಿಂದ ಅದು ಇದಕ್ಕಿಂತ ವಿಪರೀತವಾಗಿರುವಂತೆ ತೋರುತ್ತದೆ[3].

ದೃಶ್ಯತ್ವಾದಹಮಿತ್ಯೇಷೋ ನಾತ್ಮಧರ್ಮೋ ಘಟಾದಿವತ್ ।
ತಥಾನ್ಯೇ ಪ್ರತ್ಯಯಾ ಜ್ಞೇಯಾ ದೋಷಾಶ್ಚಾಮಲೋ ಹ್ಯತಃ ॥ ೧೬ ॥

೧೬. ನಾನು ಎಂಬುದು ಘಟಾದಿಗಳಂತೆ ದೃಶ್ಯವಾಗಿರುವದರಿಂದ ಆತ್ಮನ ಧರ್ಮವಲ್ಲ. ಇದರಂತೆ ಮಿಕ್ಕ ಪ್ರತ್ಯಯಗಳನ್ನೂ ದೋಷಗಳನ್ನೂ ತಿಳಿಯಬೇಕು[4]. ಆದ್ದರಿಂದ ಆತ್ಮನು ನಿರ್ಮಲನಾಗಿರುತ್ತಾನೆ.

ಸರ್ವಪ್ರತ್ಯಯಸಾಕ್ಷಿತ್ವಾದವಿಕಾರೀ ಚ ಸರ್ವಗಃ ।
ವಿಕ್ರಿಯೇತ ಯದಿ ದ್ರಷ್ಟಾ ಬುದ್ಧ್ಯಾದೀನಾಲ್ಪವಿದ್ ಭವೇತ್ ॥ ೧೭ ॥

೧೭. ಎಲ್ಲಾ ಪ್ರತ್ಯಯಗಳಿಗೂ ಸಾಕ್ಷಿಯಾಗಿರುವದರಿಂದ ಸರ್ವವ್ಯಾಪಿಯಾಗಿರುವ (ಆತ್ಮನು) ವಿಕಾರರಹಿತನೂ ಆಗಿರುತ್ತಾನೆ. ದ್ರಷ್ಟೃವೂ ವಿಕಾರವನ್ನು ಹೊಂದುವದಾದರೆ ಬುದ್ಧಿ ಮುಂತಾದದ್ದರಂತೆ ಅಲ್ಪಜ್ಞನಾಗಬೇಕಾದೀತು[5].

---

1. ಮತ್ತೊಂದು ಕ್ರಿಯೆಯ ಫಲವಾಗಿ ಪಡೆಯತಕ್ಕದ್ದಾಗಿದ್ದರೆ.

2. ಇಲ್ಲಿ 'ಅಜರಾಮರಾ' ಎಂಬ ಪಾಠವಿದ್ದರೆ 'ಮುಪ್ಪಿಲ್ಲದೆ, ಸಾವಿಲ್ಲದೆ' ಎಂದು ಕನ್ನಡಿಸಿಕೊಳ್ಳಬೇಕಾಗುವದು.

3. "ಮಾಯೆಯಿಂದ, ಎಂದರೆ ಇಂದ್ರಿಯಜ್ಞಾನಗಳಿಂದ ಆತ್ಮನು ಬಹುರೂಪನಾಗಿ ಕಾಣುತ್ತಾನೆ" ಎಂದು (ಬೃ. ೨-೫-೧೯) ಶ್ರುತಿಯಿದೆ. ಇಂದ್ರಿಯಗಳಿಂದ ನೋಡುವಾಗ ಆತ್ಮನು ವಿವಿಧವಾಗಿರುವಂತೆಯೂ, ಬೇರೆಬೇರೆಯಾಗಿ ವಿಂಗಡವಾಗಿಯೂ, ಮುಪ್ಪು ಸಾವುಗಳಿರುವುದಾಗಿಯೂ ಕಾಣುತ್ತದೆ. ಆದರೆ ಅದು ಪರಮಾರ್ಥವಲ್ಲ.

4. ಎಲ್ಲವೂ ದೃಶ್ಯವಾಗಿರುವದರಿಂದ ಆತ್ಮಧರ್ಮವಲ್ಲವೆಂದೇ ತಿಳಿಯಬೇಕು ಎಂದರ್ಥ.

5. ಅಂತಃಕರಣವೂ ಇಂದ್ರಿಯಗಳೂ ವಿಷಯವನ್ನು ಅರಿಯುವದಕ್ಕೆ ವಿಕಾರವನ್ನು ಹೊಂದುವಂತೆ ಆತ್ಮನು ಹೊಂದುವದಿಲ್ಲ; ಆದ್ದರಿಂದಲೇ ಅವನ ಜ್ಞಾನವು ಪರಿಚ್ಛಿನ್ನವಲ್ಲ.

ನ ದೃಷ್ಟಿರ್ಲುಪ್ಯತೇ ದ್ರಷ್ಟುರ್ದೃಷ್ಟೇರ್ಯಥೈವ ತತ್ ।
ನ ಹಿ ದ್ರಷ್ಟುರಿತಿ ಹ್ಯುಕ್ತಂ ತಸ್ಮಾದ್ ದ್ರಷ್ಟಾ ಸದೈವ ದೃಕ್ ॥ ೧೫ ॥

೧೫. ಚಕ್ಷುರಾದಿಗಳ ನೋಟಕ್ಕೆ ಲೋಪವಿರುವಂತೆ[1] ದ್ರಷ್ಟೃವಾದ ಆತ್ಮನ ದೃಷ್ಟಿಗೆ (ಎಂದಿಗೂ) ಲೋಪವಿರುವದಿಲ್ಲ[2]. "ದ್ರಷ್ಟೃವಿನ ದೃಷ್ಟಿಗೆ ಲೋಪವಿರುವದಿಲ್ಲ"[3] (ಬೃ. ೪-೩-೨೩) ಎಂದು (ಶ್ರುತಿಯಲ್ಲಿ) ಹೇಳಿದೆಯಲ್ಲವೆ? ಆದ್ದರಿಂದ ದ್ರಷ್ಟೃವು ಯಾವಾಗಲೂ ದೃಗ್ರೂಪನೇ.

ಜ್ಞಾತೃವಾದ್ದರಿಂದ ಜ್ಞೇಯಕ್ಕಿಂತಲೂ ಕರಣಕ್ಕಿಂತಲೂ ಬೇರೆ

ಸಙ್ಘಾತೋ ವಾಸ್ಮಿ ಭೂತಾನಾಂ ಕರಣಾನಾಂ ತಥೈವ ಚ ।
ವ್ಯಸ್ತಂ ವಾನ್ಯತಮಂ ವಾಸ್ಮಿ ಕೋ ವಾಸ್ಮೀತಿ ವಿಚಾರಯೇತ್ ॥ ೧೯ ॥

೧೯. ನಾನು ಭೂತಗಳ ಮತ್ತು ಕರಣಗಳ ಸಂಘಾತವೊ ಅಥವಾ ಅವುಗಳಲ್ಲಿ ಒಂದೊಂದಾಗಿರುವ ಬಿಡಿಯೊ[4] ಯಾರಾದೇನು? –ಎಂದು ವಿಚಾರ ಮಾಡಬೇಕು.

ವ್ಯಸ್ತಂ ನಾಹಂ ಸಮುಸ್ತಂ ವಾ ಭೂತಮಿನ್ದ್ರಿಯಮೇವ ವಾ ।
ಜ್ಞೇಯತ್ವಾತ್ ಕರಣತ್ವಾಚ್ಚ ಜ್ಞಾತಾನ್ಯೋಽಸ್ಮಾದ್ ಘಟಾದಿವತ್ ॥

೨೦. ನಾನು ಬಿಡಿಯಾದ ಅಥವಾ ಒಟ್ಟಾದ ಭೂತವೂ ಅಲ್ಲ, ಇಂದ್ರಿಯವೂ ಅಲ್ಲ. ಏಕೆಂದರೆ (ಭೂತವೂ ಕರಣವೂ) ಗಡಿಗೆಯೇ ಮುಂತಾದವು ಜ್ಞೇಯವಾಗಿವೆ, ಮತ್ತು ಕರಣವಾಗಿವೆ. ಇದಕ್ಕಿಂತ ಬೇರೆಯಾಗಿರುವ[5] ಜ್ಞಾತೃವೇ ನಾನು[6].

---

1. ಒಂದು ಸಲ ನೋಡುವದು ಇನ್ನೊಂದು ಸಲ ನೋಡದಿರುವದು –ಇದೇ ಚಕ್ಷುರಾದಿಗಳ ಸ್ವಭಾವ.

2. ಸುಷುಪ್ತಿಯಲ್ಲಿ ಕೂಡ ಸಾಕ್ಷಿಚೈತನ್ಯವು ಹಾಗೆಯೇ ಇರುತ್ತವೆ.

3. ಸುಷುಪ್ತಿಯಲ್ಲಿ ಎರಡನೆಯದಿಲ್ಲವಾದ್ದರಿಂದ ಅರಿವಾಗುವದಿಲ್ಲವೇ ಹೊರತು ಚೈತನ್ಯಶಕ್ತಿಯ ಲೋಪದಿಂದಲ್ಲ ಎಂಬುದು ಶ್ರುತಿಯ ಅಭಿಪ್ರಾಯ.

4. ದೇಹಕರಣಗಳ ಒಟ್ಟೂ, ಅಥವಾ ಅವುಗಳಲ್ಲಿ ಒಂದೊ, ಅಥವಾ ಮತ್ತೊಬ್ಬನೊ, –ಎಂಬುದನ್ನು ವಿಚಾರಮಾಡಿದರೆ ಇವೆಲ್ಲಕ್ಕಿಂತಲೂ ಬೇರೆಯಾದವನು ಎಂಬುದು ಸಿದ್ಧವಾಗುತ್ತದೆ –ಎಂದು ಭಾವ.

5. ಭೂತ, ಭೌತಿಕಶರೀರ, ಇಂದ್ರಿಯಗಳು –ಇವುಗಳಿಗಿಂತ ವಿಲಕ್ಷಣನಾಗಿರುವ.

6. ಶರೀರಾದಿಗಳು ಜ್ಞೇಯ; ಇಂದ್ರಿಯಗಳು ಜ್ಞೇಯ ಮತ್ತು ಕರಣ. ಗಡಿಗೆಗಿಂತ ಅದನ್ನು ಅರಿಯುವವನು ವಿಲಕ್ಷಣನಾಗಿರುವಂತೆ ಇವೆರಡನ್ನೂ ಅರಿಯುವ ನಾನು ಇವುಗಳಿಗಿಂತ ವಿಲಕ್ಷಣನು.

ಅವಸ್ಥಾತ್ರಯಸಾಕ್ಷಿ

ಆತ್ಮಾಗ್ನೇರಿನ್ಧನಾ ಬುದ್ಧಿರವಿದ್ಯಾಕಾಮಕರ್ಮಭಿಃ ।
ದೀಪಿತಾ ಪ್ರಜ್ವಲತ್ಯೇಷಾ ದ್ವಾರೈಃ ಶ್ರೋತ್ರಾದಿಭಿಃ ಸದಾ ॥ ೨೧ ॥

೨೧. ಆತ್ಮನೆಂಬ ಬೆಂಕಿಗೆ ಕಟ್ಟಿಗೆಯಾಗಿರುವ ಈ ಬುದ್ಧಿಯು ಅವಿದ್ಯಾ ಕಾಮಕರ್ಮಗಳಿಂದ ಶ್ರೋತ್ರಾದಿದ್ವಾರಗಳಿಂದ ಹೊತ್ತಿಕೊಂಡು ಯಾವಾಗಲೂ ಧಗಧಗಿಸುತ್ತಿರುವದು[1].

ದಕ್ಷಿಣಾಕ್ಷಿಪ್ರಧಾನೇಷು ಯದಾ ಬುದ್ಧಿರ್ವಿಚೇಷ್ಟತೇ ।
ವಿಷಯೈರ್ಹವಿಷಾ ದೀಪ್ತಾ ಆತ್ಮಾಗ್ನಿಃ ಸ್ಥೂಲಭುಕ್ತದಾ ॥ ೨೨ ॥

೨೨. ಬಲಗಣ್ಣೇ ಮುಂತಾದ (ಇಂದ್ರಿಯಗಳಲ್ಲಿ) ಅಂತಃಕರಣವು ವಿಷಯಗಳೆಂಬ ಹವಿಸ್ಸಿನಿಂದ ಹೊತ್ತಿಕೊಂಡು ಯಾವಾಗ ವ್ಯಾಪಾರಮಾಡುವದೋ ಆಗ ಆತ್ಮಾಗ್ನಿಯು ಸ್ಥೂಲಭೋಕ್ತೃ(ವೆನಿಸುತ್ತದೆ)[2].

ಹೂಯನ್ತೇ ತು ಹವೀಂಷೀತಿ ರೂಪಾದಿಗ್ರಹಣೇ ಸ್ಮರನ್ ।
ಅರಾಗದ್ವೇಷ ಆತ್ಮಾಗ್ನೌ ಜಾಗ್ರದ್ದೋಷೈರ್ನ ಲಿಪ್ಯತೇ ॥ ೨೩ ॥

೨೩. ರೂಪವೇ ಮುಂತಾದದ್ದನ್ನು ಗ್ರಹಿಸುವಾಗ ಹವಿಸ್ಸುಗಳು ಆತ್ಮಾಗ್ನಿಯಲ್ಲಿ ಹೋಮವಾಗುತ್ತಿವೆ ಎಂದು ಸ್ಮರಿಸುತ್ತಾ ರಾಗದ್ವೇಷಗಳಿಲ್ಲದೆ ಇರುವವನು ಜಾಗ್ರದ್ದೋಷಗಳಿಂದ[3] ಲಿಪ್ತನಾಗುವದಿಲ್ಲ.

ಮಾನಸೇ ತು ಗೃಹೇ ವ್ಯಕ್ತಃ ಸೋಽವಿದ್ಯಾಕರ್ಮವಾಸನಾಮ್ ।
ಪಶ್ಯಂಸ್ತೈಜಸ ಆತ್ಮೋಕ್ತಃ ಸ್ವಯಂಜ್ಯೋತಿಃ ಪ್ರಕಾಶಿತಾ[4] ॥ ೨೪ ॥

---

1. ಅಂತಃಕರಣವು ಚಿದ್ವ್ಯಾಪ್ತವಾಗಿ ಚಿದಾಭಾಸವಾಗಿ ಕಾಣುತ್ತಿರುತ್ತದೆ. ನಿಜವಾದ ಚೈತನ್ಯವು ಆತ್ಮನೇ.

2. ಮಾಂಡೂಕ್ಯೋಪನಿಷತ್ತಿನ ೩ನೆಯ ಮಂತ್ರದ ಅಭಿಪ್ರಾಯವಿದು.

3. ಇಂದ್ರಿಯಗಳಿಂದ ವಿಷಯಭೋಗಗಳನ್ನು ಮಾಡುವದರಿಂದಾಗುವ ದೋಷಗಳಿಂದ.

4. ಪೂರ್ವಾರ್ಧದಲ್ಲಿ 'ಕರ್ಮವಾಸನಾಃ' ಎಂದೂ ಉತ್ತರಾರ್ಧದಲ್ಲಿ 'ಪ್ರಕಾಶಿತಾಃ' ಎಂದೂ ಬೋಧನಿಧಿಯ ಪಾಠ. ಆಗ 'ಬೆಳಗಿದ ವಾಸನೆಗಳನ್ನು ಕಾಣುವವನಾಗಿ' ಎಂದು ಕನ್ನಡಿಸಬೇಕಾಗುವದು.

೨೪. ಆತ್ಮನು ಮಾನಸವೆಂಬ ಗೃಹದಲ್ಲಿ ತೋರುವಾಗಲಾದರೆ ಅವಿದ್ಯಾ ಕಾಮಕರ್ಮವಾಸನೆಯನ್ನು ನೋಡುವವನಾಗಿ ಸ್ವಯಂಜ್ಯೋತಿಯಾಗಿ[1] ಬೆಳಗುತ್ತಾ ತೈಜಸನೆನಿಸುತ್ತಾನೆ[2].

ವಿಷಯಾ ವಾಸನಾ ವಾಪಿ ಚೋದ್ಯಂತೇ ನೈವ ಕರ್ಮಭಿಃ |
ಯದಾ ಬುದ್ಧೌ ತದಾ ಜ್ಞೇಯಃ ಪ್ರಾಜ್ಞ ಆತ್ಮಾ ಹ್ಯನನ್ಯದೃಕ್ ||೨೫||

೨೫. ವಿಷಯಗಳಾಗಲಿ ವಾಸನೆಗಳಾಗಲಿ ಅಂತಃಕರಣದಲ್ಲಿ ಯಾವಾಗ ಕರ್ಮಗಳಿಂದ ಪ್ರೇರಿತವಾಗುವದಿಲ್ಲವೊ[3], ಆಗ ಆತ್ಮನು ಮತ್ತೊಂದನ್ನು ಕಾಣದ[4] ಪ್ರಾಜ್ಞನು ಎಂದರಿಯಬೇಕು.

ಮನೋಬುದ್ಧೀಂದ್ರಿಯಾಣಾಂ ಯಾ ಅವಸ್ಥಾಃ ಕರ್ಮಚೋದಿತಾಃ |
ಚೈತನ್ಯೇನೈವ ಭಾಸ್ಯಂತೇ ರವಿಣೇವ ಘಟಾದಯಃ || ೨೬ ||

೨೬. ಮನಸ್ಸು, ಬುದ್ಧಿ, ಇಂದ್ರಿಯಗಳು –ಇವುಗಳ ಕರ್ಮಚೋದಿತವಾದ ಅವಸ್ಥೆಗಳುಂಟಷ್ಟೆ, ಅವು ಸೂರ್ಯನಿಂದ ಘಟಾದಿಗಳು ಬೆಳಗುವಂತೆ ಚೈತನ್ಯದಿಂದಲೇ ಬೆಳಗುತ್ತಿರುವವು.

ಆತ್ಮನು ಬುದ್ಧಿವ್ಯಾಪಾರಗಳ ಕರ್ತೃವಲ್ಲ

ತತ್ರೈವಂ ಸತಿ ಬುದ್ಧೀಜ್ಞ ಆತ್ಮಭಾಸಾವಭಾಸಯನ್ |
ಕರ್ತಾ ತಾಸಾಂ ಯದರ್ಥಾಸ್ತಾ ಮೂಢೈರೇವಾಭಿಧೀಯತೇ ॥ ೨೭ ॥

೨೭. ಇಲ್ಲಿ ಹೀಗಿರುವಲ್ಲಿ ಬುದ್ಧಿ(ವೃತ್ತಿ)ಗಳು ಯಾವ (ಆತ್ಮನಿ)ಗಾಗಿರುವವೋ[5] (ಆ) ಜ್ಞಾತೃವಾದ[6] (ಆತ್ಮನು) ತನ್ನ ಬೆಳಕಿನಿಂದ (ಅವುಗಳನ್ನು) ಬೆಳಗಿಸುತ್ತಿರುವಲ್ಲಿ, ಅವುಗಳ ಕರ್ತೃವೆಂದು ಮೂಢರಿಂದ ಮಾತ್ರ ಹೇಳಲ್ಪಡುತ್ತಾನೆ[7].

---

1. ಹೊರಗಿನ ಸೂರ್ಯಾದಿಗಳ ಸಹಾಯವಿಲ್ಲದ್ದರಿಂದ ಇಲ್ಲಿ ಸ್ವಯಂಜ್ಯೋತಿಷ್ಪ್ವವು ಸ್ಫುಟವಾಗಿ ತೋರುತ್ತದೆ ಎಂದು ಭಾವ.

2. ಇದು ಮಾಂಡೂಕ್ಯದ ಖನೆಯ ಮಂತ್ರದ ಅಭಿಪ್ರಾಯ.

3. ಜಾಗ್ರತ್ಸ್ವಪ್ನಗಳಲ್ಲಿ ಆಗುವ ವಿಷಯಭೋಗವೂ ವಾಸನಾಭೋಗವೂ ಧರ್ಮಾಧರ್ಮಗಳ ಫಲವು – ಎಂದು ಭಾವ.

4. ತಾನೊಬ್ಬನೇ ಚೈತನ್ಯದಿಂದಿರುವ, ವಿಶೇಷಜ್ಞಾನವಿಲ್ಲದ.

5. ಅಂತಃಕರಣವೃತ್ತಿಗಳು ಒಂದಕ್ಕೊಂದು ಸೇರಿ ಆತ್ಮನಿಗೋಸ್ಕರವಾಗಿ ಕೆಲಸ ಮಾಡುವ ಅಚೇತನವಸ್ತುಗಳಾಗಿರುತ್ತದೆ. ಉ. ಸಾ. ಗ. ೪೧, ೪೬, ೬೬.

6. ಆತ್ಮನು ಜ್ಞಾತೃವೆಂದರೆ ಜ್ಞಾನಸ್ವರೂಪನೇ, ಜ್ಞಾನವೆಂಬ ಕ್ರಿಯೆಯೇನೂ ಅವನಲ್ಲಿ ಆಗುವದಿಲ್ಲ, ಜ್ಞಾನವೆಂಬುದು ಅವನ ಧರ್ಮವಲ್ಲ. ಉ. ಸಾ. ಗ. ೫೧.

7. ಅಂತಃಕರಣದ ಧರ್ಮಗಳನ್ನು ಆತ್ಮನಲ್ಲಿ ಅಧ್ಯಾಸಮಾಡಿ ಆತ್ಮನೇ ಅವುಗಳ ಕರ್ತೃ ಎಂದು ಅಜ್ಞರು ಎಣಿಸುತ್ತಾರೆ.

ಸರ್ವಜ್ಞೋಽಪ್ಯತ ಏವ ಸ್ಯಾತ್ ಸ್ವೇನ ಭಾಸಾವಭಾಸಯನ್ ।
ಸರ್ವಂ ಸರ್ವಕ್ರಿಯಾಹೇತೋಃ ಸರ್ವಕೃತ್ತ್ವಂ ತಥಾತ್ಮನಃ ॥ ೨೮ ॥

೨೮. ಆದ್ದರಿಂದಲೇ ಎಲ್ಲವನ್ನೂ ತನ್ನ ಬೆಳಕಿನಿಂದ ಬೆಳಗುವ ಆತ್ಮನು ಸರ್ವಜ್ಞನಾಗಿರುವನು[1]. ಸರ್ವಕ್ರಿಯೆಗಳಿಗೂ ಕಾರಣನಾಗಿರುವವರಿಂದ ಆತ್ಮನಿಗೆ ಸರ್ವಕರ್ತೃತ್ವವೂ ಹೊಂದುತ್ತದೆ[2].

ಆತ್ಮನ ನಿರುಪಾಧಿಕಸ್ವರೂಪ

ಸೋಽಪಾಧಿಶ್ಚೈವಮಾತ್ಮೋಕ್ತೋ ನಿರುಪಾಖ್ಯೋಽನುಪಾಧಿಕಃ ।
ನಿಷ್ಕಲೋ ನಿರ್ಗುಣಃ ಶುದ್ಧಸ್ತಂ ಮನೋ ವಾಕ್ಚ ನಾಪ್ನುತಃ ॥೨೯॥

೨೯. ಈ ರೀತಿಯಲ್ಲಿ ಸೋಪಾಧಿಕನಾದ[3] ಆತ್ಮನನ್ನು ತಿಳಿಸಿದ್ದಾಯಿತು. ನಿರುಪಾಧಿಕನಾದ ಆತ್ಮನು ಹೀಗೆಂದು ವರ್ಣಿಸುವದಕ್ಕೆ ಆಗುವಪನಲ್ಲ. (ಅವನು) ನಿಷ್ಕಲನು[4], ನಿರ್ಗುಣನು[5], ಶುದ್ಧನು. ಅವನನ್ನು ಮನಸ್ಸೂ ವಾಕ್ಕೂ ಮುಟ್ಟಲಾರವು[6].

ಚೇತನೋಽಚೇತನೋ ವಾಪಿ ಕರ್ತಾಕರ್ತಾ ಗತೋಽಗತಃ ।
ಬದ್ಧೋ ಮುಕ್ತಸ್ತಥಾ ಚೈಕೋ ನೈತಃ ಶುದ್ಧೋಽನ್ಯಥೇತಿ ವಾ ॥೩೦॥
ಅಪ್ರಾಪ್ಯೈವ ನಿವರ್ತಂತೇ ವಾಚೋ ಧೀಭಿಃ ಸಹೈವ ತು ।
ನಿರ್ಗುಣತ್ವಾತ್ ಕ್ರಿಯಾಭಾವಾದ್ವಿಶೇಷಾಜ್ಞಾನಮಭಾವತಃ ॥ ೩೧ ॥

---

1. ಕರ್ತೃವಲ್ಲದ್ದರಿಂದ ವಿಕಾರವಿಲ್ಲದೆ ಎಲ್ಲಾ ವೃತ್ತಿಗಳನ್ನೂ ಬೆಳಗುತ್ತಿರುವನಾಗಿ ಸರ್ವಜ್ಞನು.

2. ಆತ್ಮನ ಸನ್ನಿಧಿಯಲ್ಲಿ ಅಂತಃಕರಣದ ಎಲ್ಲಾ ಕ್ರಿಯೆಗಳೂ ಆಗುವದರಿಂದ ಸರ್ವಕರ್ತೃವು. ಆತ್ಮನಲ್ಲಿ ಜ್ಞಾನೇಂದ್ರಿಯಧರ್ಮಗಳಾಗಲಿ ಕರ್ಮೇಂದ್ರಿಯಧರ್ಮಗಳಾಗಲಿ ಇರುವದಿಲ್ಲವೆಂಬುದನ್ನು ಹಿಂದೆ ಅನೇಕ ಸಲ ಪ್ರತಿಪಾದಿಸಿದೆ. ಇಲ್ಲಿ ಜಾಗ್ರತ್ಸ್ವಪ್ನಗಳಲ್ಲಿ ಮನೋಬುದ್ಧೀಂದ್ರಿಯಗಳ ಸಂಬಂಧವು ಆತ್ಮನಿಗೆ ಇಲ್ಲವೆಂಬುದನ್ನು ತಿಳಿಸುವದಕ್ಕಾಗಿ ಮತ್ತೆ ಇದನ್ನು ಪ್ರಸ್ತಾಪಿಸಿದೆ.

3. ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ –ಮುಂತಾದ ಉಪಾಧಿಗಳಿಂದ ಹೇಳುವ ಆತ್ಮನ ಸ್ವರೂಪವನ್ನು ಹಿಂದೆ ಹೇಳಿದೆ.

4. ಯಾವ ಉಪಾಧಿಯೂ ಇಲ್ಲದ ಆತ್ಮನ ರೂಪವನ್ನು ವರ್ಣಿಸುವದಕ್ಕೆ ಏತಕ್ಕೆ ಆಗುವದಿಲ್ಲ ? –ಎಂಬುದಕ್ಕೆ ಈಗ ಕಾರಣವನ್ನು ಕೊಡುತ್ತಾರೆ. ನಿಷ್ಕಲನು ಎಂದರೆ ಪ್ರಾಣ, ಶ್ರದ್ಧೆ –ಮುಂತಾದ (ಪ್ರ. ೬–೪) ಕಲೆಗಳು ಯಾವವೂ ಇಲ್ಲದವನು. ಕಲೆಗಳೆಲ್ಲ ಅನಾತ್ಮ.

5. ಯಾವ ಧರ್ಮವೂ ಇಲ್ಲದವನು. ಧರ್ಮಗಳೆಲ್ಲ ಉಪಾಧಿಗಳಿಗೆ ಸೇರಿದವು.

6. ಮನಸ್ಸಾಗಲಿ ಇಂದ್ರಿಯಗಳಾಗಲಿ ವಿಷಯೀಕರಿಸಲಾರವು. ತೈ. ಭಾ. ೨–೯ನ್ನು ನೋಡಿ.

೩೦-೩೧. ಚೇತನನು, ಅಚೇತನನು; ಕರ್ತನು, ಅಕರ್ತನು; ವ್ಯಾಪಕನು, ಅವ್ಯಾಪಕನು; ಬದ್ಧನು, ಮುಕ್ತನು; ಹಾಗೆಯೇ ಒಬ್ಬನು, ಅನೇಕರು[1]; ಶುದ್ಧನು, ಅಥವಾ ಬೇರೆ ಸ್ವರೂಪದವನು –ಎಂಬುದೇ ಮುಂತಾದ ಮಾತುಗಳು ಬುದ್ಧಿಗಳೊಡನೆಯೇ (ಆ ಆತ್ಮನನ್ನು) ಮುಟ್ಟಲಾರದೆ ಹಿಂದಿರುಗುತ್ತವೆ. ಏಕೆಂದರೆ ಆತ್ಮನು ನಿರ್ಗುಣನು, ಅವನಲ್ಲಿ ಕ್ರಿಯೆಯಿಲ್ಲ; ಯಾವ ವಿಶೇಷಗಳೂ ಇಲ್ಲ[2].

ವ್ಯಾಪಕಂ ಸರ್ವತೋ ವ್ಯೋಮ ಮೂರ್ತೈಃ ಸರ್ವೈರ್ವಿಯೋಜಿತಮ್
ಯಥಾ ತನ್ವದಿಹಾತ್ಮಾನಂ ವಿದ್ಧ್ಯಚ್ಛುದ್ಧಂ ಪರಂ ಪದಮ್ ॥೩೨॥

೩೨. ಸರ್ವಗತವಾದ ಆಕಾಶವು ಹೇಗೆ ಯಾವ ಮೂರ್ತ(ವಸ್ತುಗಳ) ಧರ್ಮಗಳ ಸಂಬಂಧವೂ ಇಲ್ಲದಿರುವದೋ[3] ಅದರಂತೆ ಇಲ್ಲಿಯೂ ಆತ್ಮನು ಶುದ್ಧನೆಂದೂ ಪರಮಪದವೆಂದೂ ತಿಳಿಯಬೇಕು.

ದೃಷ್ಟಂ ಹಿತ್ವಾ ಸ್ಮೃತಿಂ ತಸ್ಮಿನ್ ಸರ್ವಗ್ರಶ್ಚ ತನುಸ್ಮೃಜೇತ್ ।
ಸರ್ವದೃಗ್ಜ್ಯೋತಿಷಾ ಯುಕ್ತೋ ದಿನಕೃಚ್ಛಾರ್ವರಂ ಯಥಾ ॥೩೩॥

೩೩. ಅನುಭವವನ್ನು ಬಿಟ್ಟು[4], ಅದರಲ್ಲಿ ನೆನಪನ್ನೂ ಬಿಟ್ಟು[5], ಎಲ್ಲವನ್ನೂ ನೋಡುತ್ತಿರುವ ಜ್ಯೋತಿಯಿಂದ ಕೂಡಿದವನಾಗಿ ಸೂರ್ಯನು ಕತ್ತಲೆಯನ್ನು ನುಂಗುವಂತೆ ಎಲ್ಲವನ್ನೂ ನುಂಗಿ ಅಜ್ಞಾನವನ್ನು ಬಿಟ್ಟುಬಿಡಬೇಕು[6].

ರೂಪಸ್ಯೈತ್ಯನ್ಧಕಾರಾರ್ಥಾಃ ಪ್ರತ್ಯಯಾ ಯಸ್ಯ ಗೋಚರಾಃ ।
ಸ ಏವಾತ್ಮಾ ಸನೋ ದ್ರಷ್ಟಾ ಸರ್ವಭೂತೇಷು ಸರ್ವಗಃ ॥೩೪॥

---

1. ಇವೆಲ್ಲ ವಾದಿಗಳು ಆತ್ಮನಲ್ಲಿ ಮಾಡುತ್ತಿರುವ ವಿಕಲ್ಪಗಳು.

2. ಜಾತಿ, ದ್ರವ್ಯ, ಗುಣ, ಕ್ರಿಯಾ, ಸಂಬಂಧವೇ ಮುಂತಾದ ವಿಶೇಷಗಳೇ ವಾಕ್ಯಕ್ಕೆ ವಿಷಯ. ಅವು ಯಾವವೂ ಆತ್ಮನಲ್ಲಿಲ್ಲ.

3. ಗೀ. ೧೩-೩೨ರ ಅಭಿಪ್ರಾಯವಿದು.

4. ಇಂದ್ರಿಯಗಳಿಂದಾಗಲಿ ಅನುಭವವು, ಎಂದರೆ ಜಾಗ್ರದವಸ್ಥೆಯು, ತನ್ನದಲ್ಲವೆಂದು ಅರಿತುಕೊಂಡು.

5. ಕನಸಿನಲ್ಲಿ ಆಗುವ ವಾಸನಾನುಭವವನ್ನು ಬಿಟ್ಟು ಎಂದರೆ ತನ್ನ ಸ್ವರೂಪಕ್ಕೆ ಸೇರಿದ್ದಲ್ಲವೆಂದು ಎಂದರ್ಥ. ಕನಸಿನ ನೆನಪು ಎಚ್ಚರದಲ್ಲಾಗುವದರಿಂದ ಅದನ್ನು 'ಸ್ಮೃತಿ' ಎಂದಿದೆ.

6. ತನ್ನಿದ್ರೆಯಲ್ಲಿ ಏನೂ ಅರಿಯಲಿಲ್ಲ ಎಂದು ಅಜ್ಞಾನವನ್ನು ಜನರು ಕಲ್ಪಿಸುತ್ತಾರೆ. ಅಲ್ಲಿ ಏನೂ ಅರಿಯಲಿಲ್ಲವೆಂಬುದನ್ನು ಏತರಿಂದ ಅರಿತೆವೋ ಆ ಚೈತನ್ಯಪ್ರಕಾಶವೇ ತನ್ನ ಸ್ವರೂಪವೆಂದು ತಿಳಿದು ಅಜ್ಞಾನರೂಪವಾದ ಸುಷುಪ್ತಿಯೂ ತನ್ನ ಧರ್ಮವಲ್ಲವೆಂದು ತಿಳಿಯಬೇಕು ಎಂದರ್ಥ. ಉ. ಸಾ. ಗ. ೫೬.

೩೪. ರೂಪ, ಸ್ಮೃತಿ, ಅಂಧಕಾರ- ಎಂಬ ಪ್ರತ್ಯಯಗಳು[1] ಯಾವನಿಗೆ ವಿಷಯವಾಗಿರುವವೋ ಅವನೇ ಆತ್ಮನು, ಸರ್ವಭೂತಗಳಲ್ಲಿಯೂ ಸಮನಾಗಿರುವ ಸರ್ವವ್ಯಾಪಿಯಾಗಿರುವ ದ್ರಷ್ಟೃ[2].

ಆತ್ಮಬುದ್ಧಿಮನಶ್ಚಕ್ಷುರ್ವಿಷಯಾಲೋಕಸಙ್ಗಮಾತ್।
ವಿಚಿತ್ರೋ ಜಾಯತೇ ಬುದ್ಧೇಃ ಪ್ರತ್ಯಯೋ ಜ್ಞಾನಲಕ್ಷಣಃ ॥೩೫॥
ವಿವಿಚ್ಯಾಸ್ಮಾತ್ ಸ್ವಮಾತ್ಮಾನಂ ವಿನಾ ದೃಶ್ಯಚ್ಛುದ್ಧಂ ಪರಂ ಪದಮ್।
ದ್ರಷ್ಟಾರಂ ಸರ್ವಭೂತಸ್ಥಂ ಸಮಂ ಸರ್ವಭಯಾತಿಗಮ್ ॥೩೬॥
ಸಮಸ್ತಂ ಸರ್ವಗಂ ಶಾನ್ತಂ ವಿಮಲಂ ವ್ಯೋಮವತ್ ಸ್ಥಿತಮ್।
ನಿಷ್ಕಲಂ ನಿಷ್ಕ್ರಿಯಂ ಸರ್ವಂ ನಿತ್ಯಂ ದ್ವಂದ್ವೈರ್ವಿವರ್ಜಿತಮ್॥೩೭॥

೩೫–೩೭. ಆತ್ಮ, ಬುದ್ಧಿ, ಮನಸ್ಸು, ಚಕ್ಷುರಿಂದ್ರಿಯ, ವಿಷಯ, ಬೆಳಕು –ಇವುಗಳ ಸೇರುವಿಕೆಯಿಂದ ಜ್ಞಾನದಂತಿರುವ[3] ವಿಚಿತ್ರವಾದ ಬುದ್ಧಿಯ ಪ್ರತ್ಯಯವು ಉಂಟಾಗುತ್ತಿರುವದು. ಶುದ್ಧ ಪರಮಪದವೂ ಸರ್ವಭೂತಗಳಲ್ಲಿಯೂ ಇರುವವನೂ ಸಮನೂ ಸರ್ವಭಯಗಳನ್ನು ನಿವಾರಿಸುವವನೂ ಆದ ದ್ರಷ್ಟೃವಾದ, ಎಲ್ಲದರ ಒಟ್ಟಾಗಿರುವ, ಸರ್ವವ್ಯಾಪಿಯಾದ, ಶಾಂತನಾದ, ನಿರ್ಮಲನಾದ, ಆಕಾಶದಂತಿರುವ, ನಿಷ್ಕಲನಾದ, ನಿಷ್ಕ್ರಿಯನಾದ ಎಲ್ಲವೂ ಆಗಿರುವ, ನಿತ್ಯನಾಗಿರುವ ದ್ವಂದ್ವಗಳಿಂದ ಬಿಡಲ್ಪಟ್ಟಿರುವ[4] ತನ್ನ ಆತ್ಮನನ್ನು ನಿಂಗಡಿಸಿಕೊಂಡು ಅರಿಯಬೇಕು.

ಆತ್ಮನು ಜ್ಞೇಯನಲ್ಲ

ಸರ್ವಪ್ರತ್ಯಯಸಾಕ್ಷೀ ಜ್ಞಃ ಕಥಂ ಜ್ಞೇಯೋ ಮಯೇತ್ಯುತ।
ವಿಮೃಶ್ಯೈವಂ ವಜಾನೀಯಾತ್ ಜ್ಞಾನಕರ್ಮ ನ ವೇತಿ ವಾ ॥೩೮॥

---

1. ಜಾಗ್ರತ್ ಸ್ವಪ್ನಸುಷುಪ್ತಿಗಳು. ಇವುಗಳನ್ನು ಹಿಂದಿನ ಶ್ಲೋಕದಲ್ಲಿ "ದೃಷ್ಟ, ಸ್ಮೃತಿ, ತಮಃ" ಎಂದು ಕರೆದಿದೆ. ಆತ್ಮನು ಈ ಮೂರೂ ಅಲ್ಲದ ತುರೀಯನು; ಅವೇ ನಿರುಪಾಧಿಕರೂಪವು,

2 ಅವಸ್ಥೆಗಳು ದೃಶ್ಯವಾಗಿರುವದರಿಂದ ದ್ರಷ್ಟೃವಾದ ಆತ್ಮನ ಸ್ವರೂಪವಲ್ಲ.

3. ಚೈತನ್ಯದ ಆಭಾಸದಿಂದೊಡಗೂಡಿರುವದರಿಂದ ಪ್ರತ್ಯಯವು ಜ್ಞಾನದಂತೆ ತೋರುತ್ತಿರುವದು ಎಂದು ಭಾವ. 'ಅಜ್ಞಾನಲಕ್ಷಣಃ' ಎಂದು ವ್ಯಾಖ್ಯಾನದಲ್ಲಿ ಬಿಡಿಸಿರುವದು ಸರಿಯಲ್ಲ.

4. ಶೀತೋಷ್ಣ ಸುಖದುಃಖ ಮುಂತಾದ ದ್ವಂದ್ವಗಳಿಲ್ಲದ ಎಂದರ್ಥ. ಇದುವರೆಗೆ ಹೇಳಿರುವ ವಿಶೇಷಣಗಳು ಅಂತಃಕರಣದಲ್ಲಿ ಆಗುವ ಜ್ಞಾನದಂತಿರುವ ಪ್ರತ್ಯಯಕ್ಕೂ ಜ್ಞಾನಸ್ವರೂಪವೇ ಆಗಿರುವ ಆತ್ಮನಿಗೂ ಇರುವ ವೈಲಕ್ಷಣ್ಯವನ್ನು ಸೂಚಿಸುವವು.

೩೮. ಎಲ್ಲಾ ಪ್ರತ್ಯಯಗಳಿಗೂ ಸಾಕ್ಷಿಯಾಗಿರುವ ಜ್ಞಾನನ್ನು[1] ನಾನು ಹೇಗೆ ಅರಿತೇನು[2]? ಎಂದು ಹೀಗೆ ವಿಮರ್ಶೆಮಾಡಿ ಅವನು ಜ್ಞಾನಕ್ಕೆ ಕರ್ಮವೊ ಅಲ್ಲವೊ ಎಂಬುದನ್ನು ಅರಿತುಕೊಳ್ಳಬೇಕು[3].

ಅದೃಷ್ಟಂ ದ್ರಷ್ಟೃನಿಜ್ಞಾತಂ ದಭ್ರಮಿತ್ಯಾದಿಶಾಸನಾತ್ ।
ನೈವ ಜ್ಞೇಯಂ ಮಯಾನ್ಯೈರ್ವಾ ಪರಂ ಬ್ರಹ್ಮ ಕಥಂಚನ ॥ ೩೯ ॥

೩೯. "ನೋಡಲ್ಪಡದೆ ಇರತಕ್ಕದ್ದು, ನೋಡತಕ್ಕದ್ದು; ಅರಿಯಲ್ಪಡದೆ ಇರತಕ್ಕದ್ದು, (ತಾನು ಅರಿಯತಕ್ಕದ್ದು)" (ಬೃ. ೩-೪-೧೧) "ಸ್ವಲ್ಪವೇ (ನೀನು ಅರಿತಿರುವೆ)" (ಕೇ. ೨-೧)-ಎಂದು ಮುಂತಾಗಿರುವ ಶಾಸ್ತ್ರವಿರುವದರಿಂದ ಪರಬ್ರಹ್ಮನನ್ನು ಅರಿಯುವದು ನನ್ನಿಂದಾಗಲಿ ಮತ್ತೊಬ್ಬರಿಂದಾಗಲಿ[4] ಹೇಗೂ ಆಗಲೇ ಆರದು.

ಆತ್ಮಜ್ಞಾನವು ನಿತ್ಯಸಿದ್ಧ

ಸ್ವರೂಪಾನ್ಯವಧಾನಾಭ್ಯಾಂ ಜ್ಞಾನಾಲೋಕಸ್ವಭಾವತಃ ।
ಅನ್ಯಜ್ಞಾನಾನಪೇಕ್ಷತ್ವಾತ್ ಜ್ಞಾತಂ ಚೈವ[5] ಸದಾ ಮಯಾ ॥ ೪೦ ॥

---

1. ನಿತ್ಯಚೈತನ್ಯಸ್ವರೂಪನನ್ನು ಎಂದರ್ಥ. ಸೂ. ಭಾ. ೨-೩-೧೮ ನ್ನು ನೋಡಿ.

2. ಎಲ್ಲವನ್ನೂ ಅರಿಯುವ ಚೈತನ್ಯರೂಪನಾದ ಆತ್ಮನನ್ನು ಏತರಿಂದ ಅರಿತಾನು? ಎಂಬ ಬೃ. ೨-೪-೧೪ರ ಅಭಿಪ್ರಾಯವಿದು.

3. ಇಲ್ಲಿ "ಜ್ಞಾತಂ ಬ್ರಹ್ಮ" ಎಂಬ ಬೋಧನಿಧಿಯ ಪಾಠವು ಬೇಕಿಲ್ಲ. ಜ್ಞೇಯನೆಂದು ನನಗೆ ತೋರಿದರೂ ಜ್ಞೇಯನಲ್ಲವೆಂದೇ ನಿಶ್ಚಯಿಸಬೇಕು- ಎಂದು ಅಭಿಪ್ರಾಯ. ಪ್ರಕರಣದಿಂದ ವಾಕ್ಯಾರ್ಥವು ಇವೇ ಎಂದು ನಿಶ್ಚಯವಾಗುತ್ತದೆ.

4. ನಾನು ಅರಿಯಲಾರೆ ಎಂದರೆ ಜ್ಞಾತೃವಿನ ಅಶಕ್ತಿಯನ್ನು ತಿಳಿಸಿದಂತೆ ಆದೀತು ಎಂದು "ಮತ್ತೊಬ್ಬರಿಂದಾಗಲಿ" ಎಂದಿದೆ. ಆತ್ಮಸ್ವರೂಪವು ಎಲ್ಲವನ್ನೂ ಬೆಳಗತಕ್ಕದ್ದು ನಿತ್ಯಚೈತನ್ಯವು; ಅದನ್ನು ಬೆಳಗತಕ್ಕದ್ದು ಮತ್ತೊಂದಿಲ್ಲ, ಮತ್ತೊಂದು ಬೆಳಕಿನಿಂದ ಆಗತಕ್ಕ ಅತಿಶಯವೂ ಇಲ್ಲ ಎಂದು ಭಾವ.

5. ಇಲ್ಲಿ 'ಜ್ಞಾತಂ ಬ್ರಹ್ಮ' ಎಂಬ ಬೋಧನಿಧಿಯ ಪಾಠವೂ ಇರಬಹುದು.

೪೦. ಸ್ವರೂಪವೇ ಆಗಿರುವದರಿಂದ ವ್ಯವಧಾನವು[1] ಇಲ್ಲದಿರುವ ದರಿಂದಲೂ ಜ್ಞಾನಪ್ರಕಾಶದ ಸ್ವಭಾವದ್ದಾದ್ದರಿಂದ ಮತ್ತೊಂದು ಜ್ಞಾನವನ್ನು ಬಯಸುವದಿಲ್ಲವಾದ್ದರಿಂದಲೂ (ಬ್ರಹ್ಮವು) ಯಾವಾಗಲೂ ನನಗೆ ಜ್ಞಾತವೇ ಆಗಿರುತ್ತದೆ[2].

ನಾನ್ಯೇನ ಜ್ಯೋತಿಷಾ ಕಾರ್ಯಂ ರವೇರಾತ್ಮಪ್ರಕಾಶನೇ।
ಸ್ವಬೋಧಾನ್ನಾನ್ಯಬೋಧೇಚ್ಛಾ ಬೋಧಸ್ಯಾತ್ಮಪ್ರಕಾಶನೇ ॥ ೪೧ ॥

೪೧. ಸೂರ್ಯನಿಗೆ ತನ್ನನ್ನು ಬೆಳಗುವದಕ್ಕೆ ಮತ್ತೊಂದು ಬೆಳಕಿನಿಂದಾಗಬೇಕಾದದ್ದು ಇರುವದಿಲ್ಲ. ಜ್ಞಾನಕ್ಕೆ ತನ್ನನ್ನು ಬೆಳಗುವದಕ್ಕೆ ತನ್ನ ಜ್ಞಾನಸ್ವರೂಪಕ್ಕಿಂತ ಬೇರೊಂದು ಜ್ಞಾನದ ಬಯಕೆಯಿರುವದಿಲ್ಲ.

ನ ತಸ್ಯೈವಾನ್ಯತೋsಪೇಕ್ಷಾ ಸ್ವರೂಪಂ ಯಸ್ಯ ಯದ್ಭವೇತ್ |
ಪ್ರಕಾಶಾನ್ತರದೃಶ್ಯೋ ನ ಪ್ರಕಾಶೋ ಹ್ಯಸ್ತಿ ಕಶ್ಚನ ॥ ೪೨ ॥

೪೨. ಯಾವದಕ್ಕೆ ಯಾವದು ಸ್ವರೂಪವೋ ಅದಕ್ಕೇ ಮತ್ತೊಂದರ ಬಯಕೆಯಿರುವದಿಲ್ಲ. ಏಕೆಂದರೆ ಮತ್ತೊಂದು ಬೆಳಕಿನಿಂದ ಕಾಣಬೇಕಾಗಿರುವ ಬೆಳಕು ಯಾವದೊಂದೂ ಇರುವದಿಲ್ಲ.

ಆತ್ಮಜ್ಞಾನಕ್ಕೆ ಆತ್ಮನು ಕರ್ತನೆಂಬುದೂ ಸರಿಯಲ್ಲ

ವ್ಯಕ್ತಿಃ ಸ್ಯಾದಪ್ರಕಾಶಸ್ಯ ಪ್ರಕಾಶಾತ್ಮಸಮಾಗಮಾತ್ |
ಪ್ರಕಾಶಸ್ತ್ವರ್ಕಕಾರ್ಯಃ ಸ್ಯಾದಿತಿ ಮಿಥ್ಯಾ ವಚೋ ಹ್ಯತಃ ॥ ೪೩ ॥

೪೩. ಬೆಳಕಿಲ್ಲದ ವಸ್ತುವಿಗೆ ಬೆಳಕಿನ ಸ್ವರೂಪದ ವಸ್ತುವಿನ ಸಂಬಂಧದಿಂದ (ಅದು) ತೋರಿಕೊಳ್ಳುವದಾಗಬಹುದು. ಆದ್ದರಿಂದ ಬೆಳಕೆಂಬುದು ಸೂರ್ಯನ ಕಾರ್ಯವಾಗಿದೆ ಎಂಬುದು ಸುಳ್ಳುಮಾತು[3].

---

1. ಜ್ಞಾತೃವಿಗೂ ಜ್ಞೇಯಕ್ಕೂ ನಡುವೆಯಿದ್ದು ಜ್ಞೇಯವನ್ನು ಮರೆಮಾಡಿರುವದು.

2. ನಿತ್ಯಸಿದ್ಧವಾಗಿರುತ್ತದೆ ; ಅದರ ಮರೆಯನ್ನು ತೆಗೆದುಹಾಕಿ ಅದಕ್ಕೆ ಮತ್ತೊಂದು ಜ್ಞಾನದ ಸಂಬಂಧವನ್ನು ಮಾಡಿ ಅರಿಯಬೇಕಾದದ್ದಿಲ್ಲ ಎಂಬ ಭಾವ. ಆತ್ಮನು ಪ್ರಮೆಯ ಸ್ವರೂಪವೇ ಹೊರತು ಪ್ರಮಾಣದಿಂದಾಗುವ ಪ್ರಮೆಗೆ ಆಶ್ರಯನಲ್ಲ ಎಂದು ಉ. ಸಾ. ಗದ್ಯ ೫೮, ೫೯, ೬೦ರಲ್ಲಿ ಹೇಳಿದ್ದರ ಅಭಿಪ್ರಾಯವು ಇದೇ.

3. ಸೂರ್ಯನು ಬೆಳಕೆಂಬುದನ್ನು ಉಂಟುಮಾಡಿರುವದಿಲ್ಲ, ಬೆಳಕೇ. ಇದರಂತೆ ಆತ್ಮನು ಜ್ಞಾನಸ್ವರೂಪನೇ, ಜ್ಞಾನವೆಂಬ ಕ್ರಿಯೆಗೆ ಕರ್ತೃವಲ್ಲ. ಉ. ಸಾ. ಗದ್ಯ ೫೪.

ಯತೋಽಭೂತ್ವಾ ಭವೇದ್ಯಚ್ಚ ತಸ್ಯ ತೆತ್ ಕಾರ್ಯಮಿಷ್ಯತೇ ।
ಸ್ವರೂಪತ್ವಾದಭೂತ್ವಾ ನ ಪ್ರಕಾಶೋ ಜಾಯತೇ ರವೇಃ ॥ ೪೪ ॥

೪೪. ಯಾವದು ಮೊದಲು ಇಲ್ಲದಿದ್ದು[1] ಯಾವದರಿಂದ ಉಂಟಾಗುವದೋ ಅದು ಅದರ ಕಾರ್ಯವೆನಿಸುತ್ತದೆ. ಪ್ರಕಾಶವು (ಸೂರ್ಯನ) ಸ್ವರೂಪವೇ ಆಗಿರುವದರಿಂದ ಪ್ರಕಾಶವು ಮೊದಲು ಇಲ್ಲದಿದ್ದು ಸೂರ್ಯನಿಂದ (ಹೊಸದಾಗಿ) ಉಂಟಾಗುವದಿಲ್ಲ[2].

ಸತ್ತಾಮಾತ್ರೇ ಪ್ರಕಾಶಸ್ಯ ಕರ್ತಾದಿತ್ಯಾದಿರಿಷ್ಯತೇ ।
ಘಟಾದಿವ್ಯಕ್ತತೋ ಯದ್ವತ್ ತದ್ವದ್ಬೋಧಾತ್ಮನೀಷ್ಯತಾಮ್ ॥ ೪೫ ॥

೪೫. ಕೇವಲ ತನ್ನ ಇರುವಿಕೆಯಿಂದಲೇ ಗಡಿಗೆಯೇ ಮುಂತಾದವು ತೋರಿಕೊಳ್ಳುವದರಿಂದ ಹೇಗೆ ಸೂರ್ಯನೇ ಮುಂತಾದದ್ದು ಬೆಳಕಿನ ಕರ್ತೃವೆನಿಸುವದೋ[3] ಅದರಂತೆ ಜ್ಞಾನಸ್ವರೂಪನಾದ ಆತ್ಮನಲ್ಲಿಯೂ (ಜ್ಞಾನ ಕರ್ತೃತ್ವವನ್ನು) ತಿಳಿಯಬೇಕು.

ಬಿಲಾತ್ ಸರ್ಪಸ್ಯ ನಿರ್ಯಾಣೇ ಸೂರ್ಯೋ ಯದ್ವತ್ ಪ್ರಕಾಶಕಃ ।
ಪ್ರಯತ್ನೇನ ವಿನಾ ತದ್ವಜ್ಜ್ಞಾತಾತ್ಮಾ ಬೋಧರೂಪತಃ ॥ ೪೬ ॥
ದಗ್ಧೃತ್ವಮುಷ್ಣಃ ಸತ್ತಾಯಾಂ ತದ್ವದ್ಬೋಧಾತ್ಮನೀಷ್ಯತಾಮ್ ।
ಸತ್ಯೇವ ಯದುಪಾಧೌ ತು ಜ್ಞಾತೇ ಸರ್ಪ ಇವೋತ್ಥಿತೇ ॥ ೪೭ ॥
ಜ್ಞಾತಾಯತ್ನೋಽಪಿ ತದ್ವಜ್ಜ್ಞಃ ಕರ್ತಾ ಭ್ರಾಮುಕವದ್ಭವೇತ್ ॥೪೭½॥

೪೬-೪೭½. ಬಿಲದಿಂದ ಹಾವು ಹೊರಕ್ಕೆ ಬಂದರೆ ಸೂರ್ಯನು ಹೇಗೆ ಯಾವ ಪ್ರಯತ್ನವೂ ಇಲ್ಲದೆ (ಅದನ್ನು) ಬೆಳಗುವವನಾಗುತ್ತಾನೋ ಅದರಂತೆ

1. ಕಾಣಿಸಿದ್ದು, ಅವ್ಯಕ್ತವಾಗಿದ್ದು ಎಂದರ್ಥ; ಆದ್ದರಿಂದ ಸತ್ಕಾರ್ಯವಾದಕ್ಕೆ ಇದು ವಿರುದ್ಧವಲ್ಲ.

2. ಆದ್ದರಿಂದ ಬೆಳಕು ಸೂರ್ಯನ ಕಾರ್ಯವಲ್ಲ; ಅದರಂತೆ ಜ್ಞಾನವೂ ಆತ್ಮನ ಕಾರ್ಯವಲ್ಲ – ಎಂದು ಭಾವ.

3. ಸೂರ್ಯನು ತಾನು ಇದ್ದಂತೆಯೇ ಇದ್ದು ಪ್ರಕಾಶಕರ್ತನೆನಿಸುವಂತೆ ಆತ್ಮನೂ ಇದ್ದಂತೆ ಇದ್ದು ಗೌಣವೃತ್ತಿಯಿಂದ ಜ್ಞಾತೃವೆನಿಸುತ್ತಾನೆ ಎಂದರ್ಥ. ಮುಂದಿನ ಶ್ಲೋಕವಲ್ಲಿ ಇದನ್ನೇ ವಿವರಿಸಿದೆ. ಉ. ಸಾ. ಗದ್ಯವಲ್ಲಿಯೂ ಇದನ್ನು ತಿಳಿಸಿದೆ.

ಆತ್ಮನು ಜ್ಞಾನರೂಪನಾಗಿರುವದರಿಂದ ಜ್ಞಾತೃವೆನಿಸುತ್ತಾನೆ. ಹೇಗೆ ಬಿಸಿಯಾದ (ಬೆಂಕಿಯು)[1] ತನ್ನ ಇರುವಿಕೆಯಿಂದಲೇ ಸುಡುವದೆನಿಸುವದೋ ಅದರಂತೆ ಜ್ಞಾನರೂಪಾತ್ಮನಲ್ಲಿಯೂ (ಜ್ಞಾನಕರ್ತೃತ್ವವನ್ನು) ತಿಳಿಯಬೇಕು. ಏಕೆಂದರೆ ಸರ್ಪವು ಮೇಲಕ್ಕೆ ಬಂದಂತೆ ಉಪಾಧಿಯು ಜ್ಞಾತವಾದರೇ ಆ (ಸೂರ್ಯನಂತೆ) ಆತ್ಮನು ಯಾವ ಪ್ರಯತ್ನವೂ ಇಲ್ಲದವನಾದರೂ ಜ್ಞಾತೃವಾಗುತ್ತಾನೆ[2], ಸೂಜಿಕಲ್ಲಿನಂತೆ ಕರ್ತೃವಾಗುತ್ತಾನೆ[3].

ಸ್ವರೂಪೇಣ ಸ್ವಯಂ ನಾತ್ಮಾ ಜ್ಞೇಯೋಽಜ್ಞೇಯೋಽಥವಾ ತತಃ ।
ವಿದಿವಿದಿತಾಭ್ಯಾಂ ತದನ್ಯದೇವೇತಿ ಶಾಸನಾತ್ ।
ಬನ್ಧಮೋಕ್ಷಾದಯೋ ಭಾವಾಸ್ತದ್ವದಾತ್ಮನಿ ಕಲ್ಪಿತಾಃ ॥ ೪೯ ॥

೪೮–೪೯. ಆದ್ದರಿಂದ ಆತ್ಮನು ತನ್ನ ಸ್ವರೂಪದಿಂದ ಜ್ಞೇಯನೂ ಅಲ್ಲ ಅಜ್ಞೇಯನೂ ಅಲ್ಲ[4]. ಆ (ಬ್ರಹ್ಮವು) ವಿದಿತ, ಅವಿದಿತ –ಈ ಎರಡಕ್ಕಿಂತಲೂ ಬೇರೆಯ (ಸ್ವಭಾವದ್ದೇ) ಎಂದು (ಕೇ. ೧–೪) ಶ್ರುತಿಯಲ್ಲಿ ಹೇಳಿರುವದರಿಂದ (ಹೀಗೆಂದು ತಿಳಿಯಬೇಕು). ಇದರಂತೆ ಬಂಧ, ಮೋಕ್ಷ –ಮುಂತಾದ ಧರ್ಮಗಳೂ ಆತ್ಮನಲ್ಲಿ ಕಲ್ಪಿತವಾಗಿರುತ್ತವೆ[5].

ನಾಹೋರಾತ್ರೇ ಯಥಾ ಸೂರ್ಯೇ ಪ್ರಭಾರೂಪಾವಿಶೇಷತಃ ।
ಬೋಧರೂಪಾವಿಶೇಷಾನ್ನ ಬೋಧಾಬೋಧೌ ತಥಾತ್ಮನಿ ॥ ೫೦ ॥

---

1. ಬೆಂಕಿಯು ಎಂದು ವ್ಯಾಖ್ಯಾನದಂತೆ ಅಧ್ಯಾಹಾರಮಾಡಿಕೊಳ್ಳಬೇಕು. ಸೂರ್ಯನು ಎಂದು ಹಿಂದಿನ ವಾಕ್ಯದಿಂದ ಸೇರಿಸಿಕೊಂಡರೂ ಸಾಗುತ್ತದೆ. ಏಕೆಂದರೆ ಸೂರ್ಯನು ಸುಡುತ್ತಾನೆ.

2. ಜ್ಞಾನವೆಂಬ ಕ್ರಿಯೆಯನ್ನುಂಟುಮಾಡುವ ಪ್ರಯತ್ನವಿಲ್ಲದಿದ್ದರೂ ಸ್ವರೂಪದಿಂದಲೇ ಜ್ಞಾನಾತ್ಮಕನಾಗಿ ಜ್ಞಾತೃವೆನಿಸುತ್ತಾನೆ. ಜ್ಞೇಯವಾದ ಆ ನಾ ತ್ಮ ವಿ ರು ವ ಜಾಗ್ರತ್ಸ್ವಪ್ನಗಳಲ್ಲಿ ಜ್ಞಾತೃವೆಂದೂ ಸುಷುಪ್ತಿಯಲ್ಲಿ ಅಜ್ಞಾತೃವೆಂದೂ ಕರೆಯಿಸಿಕೊಳ್ಳುತ್ತಾನೆ.

3. ಯಾವ ವ್ಯಾಪಾರವೂ ಇಲ್ಲದೆ ಗೌಣವಾಗಿ ಕರ್ತೃವೆನಿಸಬಹುದು ಎಂದರ್ಥ.

4. ಸ್ವಯಂಪ್ರಕಾಶಸ್ವರೂಪನಾಗಿರುವದರಿಂದ ಅವನಲ್ಲಿ ಜ್ಞಾತೃತ್ವವೆಂಬ ಧರ್ಮವಿಲ್ಲದಿರುವಂತೆ ಜ್ಞೇಯತ್ವವೂ ಇರುವದಿಲ್ಲ.

5. ಜ್ಞೇಯವಾದ ನಾಮರೂಪಗಳನ್ನು ಸಂಬಂಧಿಸದೆ ಆತ್ಮನಿಗೆ ಬಂಧಾದಿಗಳನ್ನೂ ಕಲ್ಪಿಸುವದಕ್ಕೆ ಬರುವದಿಲ್ಲ ಎಂದು ಭಾವ.

೫೦. ಯಾವಾಗಲೂ ಪ್ರಕಾಶರೂಪವೇ ಆಗಿರುವ ಸೂರ್ಯನಲ್ಲಿ ಹಗಲು ರಾತ್ರಿಗಳು ಹೇಗೆ ಇರುವದಿಲ್ಲವೋ ಹಾಗೆ ಜ್ಞಾನಸ್ವರೂಪವೇ ಆಗಿರುವ ಆತ್ಮನಲ್ಲಿ ಜ್ಞಾನಾಜ್ಞಾನಗಳಿರುವದಿಲ್ಲ[1].

ಆತ್ಮಜ್ಞಾನದ ಫಲ

ಯಥೋಕ್ತಂ ಬ್ರಹ್ಮ ಯೋ ವೇದ ಹಾನೋಪಾದಾನವರ್ಜಿತಮ್ ।
ಯಥೋಕ್ತೇನ ವಿಧಾನೇನ ಸ ಸತ್ಯಂ ನೈವ ಜಾಯತೇ ॥ ೫೧ ॥

೫೧. ಬಿಡುವದಾಗಲಿ ತೆಗೆದುಕೊಳ್ಳುವದಾಗಲಿ (ಯಾವದೂ) ಇಲ್ಲದ[2] ಈ ಮೇಲೆ ಹೇಳಿದ ಬ್ರಹ್ಮನನ್ನು ಮೇಲೆ ಹೇಳಿದ ರೀತಿಯಿಂದ[3] ಯಾವನು ಅರಿತುಕೊಳ್ಳುವನೋ ಅವನು ನಿಜವಾಗಿಯೂ ಹುಟ್ಟುವದಿಲ್ಲ[4].

ಜನ್ಮಮೃತ್ಯುಪ್ರವಾಹೇಷು ಪತಿತೋ ನೈವ ಶಕ್ನುಯಾತ್ ।
ಇತ ಉದ್ಧರ್ತುಮಾತ್ಮಾನಂ ಜ್ಞಾನಾದನ್ಯೇನ ಕೇನಚಿತ್ ॥ ೫೨ ॥

೫೨. ಹುಟ್ಟುಸಾವುಗಳ ಪ್ರವಾಹದಲ್ಲಿ ಬಿದ್ದಿರುವಾತನು ಇದಕ್ಕಿಂತ ಬೇರೆ ಯಾವ ಜ್ಞಾನದಿಂದಲೂ[5] ತನ್ನನ್ನು (ತಾನು) ಉದ್ಧಾರಮಾಡಿಕೊಳ್ಳಲಾರನು.

ಬಿಧ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಇತಿ ಶ್ರುತೇ ॥ ೫೩ ॥

---

1. ಆತ್ಮನು ನಿತ್ಯಜ್ಞಾನಸ್ವರೂಪನು; ಆವನಲ್ಲಿ ಅಂತಃಕರಣದ ಧರ್ಮಗಳಾವ ಜ್ಞಾನಾಜ್ಞಾನಗಳಿಲ್ಲ.

2. ಅನಾತ್ಮವಾದರೆ ಬಿಡುವದಕ್ಕಾಗಲಿ ತೆಗೆದುಕೊಳ್ಳುವದಕ್ಕಾಗಲಿ ಶಕ್ಯವಾಗಿರುತ್ತದೆ. ಆದರೆ ತನ್ನನ್ನು ತಾನು ಬಿಡುವದೂ ಆಗುವದಿಲ್ಲ, ತೆಗೆದುಕೊಳ್ಳುವದೂ ಆಗುವದಿಲ್ಲ. ಏಕೆಂದರೆ ಮೊದಲೇ ತಾನು ಸಿದ್ಧವಾಗಿದ್ದರೆ ಬಿಡುವದೂ ತೆಗೆದುಕೊಳ್ಳುವದೂ ಆಗುತ್ತದೆ.

3. ಆತ್ಮನಲ್ಲಿ ಜ್ಞಾನಾಜ್ಞಾನಗಳಿಲ್ಲ, ಜ್ಞೇಯತ್ವಾಜ್ಞೇಯತ್ವಗಳಿಲ್ಲ, ಜ್ಞಾತೃತ್ವಾಜ್ಞಾತೃತ್ವಗಳೂ ಇಲ್ಲ; ಅವನು ನಿತ್ಯಶುದ್ಧಚೈತನ್ಯಸ್ವರೂಪನಾಗಿರುತ್ತಾನೆ –ಎಂದು.

4. ಅವನದು ಹುಟ್ಟುವದೇ ಮುಂತಾದ ವಿಕಾರಗಳಿಲ್ಲದ ಸ್ವಭಾವವಾಗಿರುತ್ತದೆ. ಅವನು ಹುಟ್ಟುವದಿಲ್ಲ ಎಂದರೆ ಅಜ್ಞಾನವನ್ನು ಕಳೆದುಕೊಂಡು ತನಗೆ ಹುಟ್ಟೇ ಇಲ್ಲವೆಂದು ಅರಿತುಕೊಳ್ಳುತ್ತಾನೆ ಎಂದರ್ಥ.

5. ಆದ್ವೈತಜ್ಞಾನವನ್ನು ಬಿಟ್ಟು ಮಿಕ್ಕ ಜ್ಞಾನದಿಂದ ಎಂದರ್ಥ.

೫೩. "ಆ (ಪರಾವರನಾದ ಪರಮಾತ್ಮನನ್ನು) ಕಂಡುಕೊಂಡರೆ ಹೃದಯಗ್ರಂಥಿಗಳು ಬಿಚ್ಚಿಕೊಳ್ಳುವವು[1], ಸಂಶಯಗಳೆಲ್ಲ ಕತ್ತರಿಸಿಹೋಗುವವು; ಈತನ ಕರ್ಮಗಳೂ ಕ್ಷಯವಾಗುವವು" (ಮುಂ. ೨-೨-೮) ಎಂಬ ಶ್ರುತಿಪ್ರಮಾಣದಿಂದ (ಇದು ಸಿದ್ಧವಾಗುತ್ತದೆ)[2].

ಮಮಾಹಮಿತ್ಯೇತದಪೋಹ್ಯ ಸರ್ವತೋ
ವಿಮುಕ್ತದೇಹಂ ಪದಮಮ್ಬರೋಪಮಮ್ ॥
ಸುದೃಷ್ಟಶಾಸ್ತ್ರಾನುಮಿತಿಭ್ಯ ಈರಿತಂ
ವಿಮುಚ್ಯತೇಽಸ್ಮಿನ್ ಯದಿ ನಿಶ್ಚಿತೋ ನರಃ ॥ ೫೪ ॥

೫೪. ಯಾವ ದೇಹವೂ ಇಲ್ಲದ[3], ಆಕಾಶದಂತಿರುವ[4] ಸ್ಥಾನವನ್ನು[5] ಚೆನ್ನಾಗಿ ವಿಚಾರಮಾಡಿದ ಶಾಸ್ತ್ರ ಮತ್ತು ಅನುಮಾನ –ಇವುಗಳ (ಬಲ)ದಿಂದ[6] ಹೇಳಿರುತ್ತದೆ. ಎಲ್ಲದರಲ್ಲಿಯೂ[7] ನಾನುನನ್ನದೆಂಬಿದನ್ನು ಬಿಟ್ಟು ಈ (ಆತ್ಮತತ್ತ್ವ)ದಲ್ಲಿಯೇ ಮನುಷ್ಯನು ನಿಶ್ಚಯವುಳ್ಳವನಾದರೆ[8] ವಿಮುಕ್ತನಾಗುವನು.

---

1. ಗಂಟುಹಾಕಿಕೊಂಡಿರುವ ಕಾಮುಗಳು ಬಿಚ್ಚಿಕೊಳ್ಳುವವು.
2. ಆತ್ಮಜ್ಞಾನದಿಂದ ಅವಿದ್ಯಾಕಾಮಕರ್ಮಗಳು ನಾಶವಾಗುವವು ಎಂದು ಶ್ರುತಿ ಹೇಳಿರುವದರಿಂದ ಜನ್ಮಮರಣನಾಶಕ್ಕೆ ಈ ಜ್ಞಾನವೇ ಉಪಾಯವೆಂದು ಏರ್ಪಡುತ್ತದೆ.
3. ಸ್ಥೂಲಸೂಕ್ಷ್ಮದೇಹರಹಿತವಾದ.
4. ಸರ್ವಗತವೂ ಸೂಕ್ಷ್ಮವೂ ನಿತ್ಯವೂ ಆದ.
5. ಬ್ರಹ್ಮವನ್ನು.
6. ಅನುಮಾನವು ಸ್ವತಂತ್ರಪ್ರಮಾಣವಲ್ಲ; ಶಾಸ್ತ್ರಪ್ರಮಾಣದಿಂದಲೂ ಅದಕ್ಕನುಸಾರವಾದ ಯುಕ್ತಿಯಿಂದಲೂ ಎಂದರ್ಥ.
7. ಅನಾತ್ಮದಲ್ಲೆಲ್ಲ.
8. ನಾನೇ ಆದೆಂಬ ನಿಶ್ಚೆಯನ್ನು ಪಡೆದುಕೊಂಡರೆ.

ನಿಷ್ಕ್ರಿಯಾತ್ಮಪ್ರಕರಣದ ಸಾರ

೧. ಮುಕ್ತನಾಗುವದಕ್ಕೆ ತಾನು ಮತ್ತೊಂದು ತತ್ತ್ವವಾಗಿ ಪರಿಣಮಿಸಬೇಕೆಂದು ಭಾವಿಸಬಾರದು. ಒಂದು ವಸ್ತು ಮತ್ತೊಂದಾಗಲಾರದು, ಅದರೂ ಅದರ ಸ್ವರೂಪಕ್ಕೆ ನಾಶವುಂಟಾಗಬೇಕಾಗುವದು. ಆದ್ದರಿಂದ ಮೋಕ್ಷಕ್ಕಾಗಿ ಸ್ವರೂಪಜ್ಞಾನವನ್ನೇ ಸಂಪಾದಿಸಿಕೊಳ್ಳಬೇಕು.

೨-೯. ಆತ್ಮನು ಎಚ್ಚರದಲ್ಲಿಯೂ ಕನಸಿನಲ್ಲಿಯೂ ತನಗೆ ವಿಷಯವಾಗಿ ಕಾಣಿಸುವ ಮನಸ್ಸಿಗಿಂತ ಭಿನ್ನನು; ವರ್ಣಾಶ್ರಮಗಳಿಲ್ಲದವನು. ಆದ್ದರಿಂದ ಅಜ್ಞಾನದಿಂದ ಕರ್ಮವನ್ನು ಮಾಡಿ ಶರೀರವನ್ನು ಧರಿಸುವದನ್ನು ಬಿಟ್ಟು ಆತ್ಮಜ್ಞಾನವನ್ನು ಸಂಪಾದಿಸಿಕೊಂಡು ಮುಕ್ತನಾಗಬೇಕು.

೧೦–೧೩. ಆತ್ಮನು ಸರ್ವಭೂತಗಳಲ್ಲಿಯೂ ಒಬ್ಬನೇ ಎಂದೂ ಸ್ಥೂಲಸೂಕ್ಷ್ಮ ದೇಹಗಳಿಲ್ಲದವನೆಂದೂ ಶ್ರುತಿಸ್ಮೃತಿಗಳಿಂದ ಸಿದ್ಧವಾಗಿರುತ್ತವೆ. ಆದ್ದರಿಂದ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ನಾನೆಂಬ ಅಭಿಮಾನವನ್ನು ಬಿಟ್ಟು ಆತ್ಮಸ್ವರೂಪದಲ್ಲಿ ನಿಲ್ಲಬೇಕು.

೧೪–೩೮. ಆತ್ಮಸ್ವರೂಪವು ಮತ್ತೊಂದು ಕರ್ಮದ ಅಪೇಕ್ಷೆಯಿಂದ ಬರತಕ್ಕದ್ದಲ್ಲ. ಅದು ನಿತ್ಯಸಿದ್ಧವಾಗಿರುತ್ತದೆ. ಆ ಸ್ವರೂಪವು ಆಕಾಶದಂತೆ ಅಖಂಡೈಕರಸವಾಗಿ ಸರ್ವಭೂತಗಳಲ್ಲಿಯೂ ಅವಿಭಕ್ತವಾಗಿದ್ದರೂ ಇಂದ್ರಿಯಜ್ಞಾನಗಳಿಂದ ಬೇರೆಬೇರೆಯಾಗಿ ಅನೇಕವಾಗಿರುವಂತೆ ಕಾಣಿಸುತ್ತಿರುವದು. ನಾನು ಎಂಬುದಾಗಲಿ ಮತ್ತೆ ಯಾವ ಪ್ರತ್ಯಯಗಳಾಗಲಿ ರಾಗದ್ವೇಷಾದಿಗಳಾಗಲಿ ಆತ್ಮಧರ್ಮವಲ್ಲ; ಏಕೆಂದರೆ ಅದು ದೃಶ್ಯವಾಗಿರುತ್ತದೆ. ಆತ್ಮನು ಈ ಎಲ್ಲವನ್ನೂ ನೋಡುತ್ತಿರುವ ಸಾಕ್ಷಿಯಾಗಿರುವದರಿಂದ ನಿರ್ವಿಕಾರನಾಗಿರುತ್ತಾನೆ. ಅವನಿಗೆ ದೇಹ, ಕರಣ, ಇವುಗಳ ಸಂಘಾತ, ಮನೋಬುದ್ಧಿಗಳು, ಇವುಗಳ ಅವಸ್ಥೆಗಳು –ಇವು ಯಾವವೂ ಸೇರಿರುವದಿಲ್ಲ; ಅವೆಲ್ಲವೂ ದೃಶ್ಯವೇ. ಆತ್ಮನನ್ನು ಸರ್ವಜ್ಞನೆಂದೂ ಸರ್ವಕರ್ತೃವೆಂದೂ ಹೇಳುವದು ಈ ಉಪಾಧಿಗಳಿಂದಲೇ.

೩೯–೫೦. ಆತ್ಮನ ನಿರುಪಾಧಿಕವಾದ ಸ್ವರೂಪವು ವಾಙ್ಮನಸ್ಸುಗಳಿಗೆ ಅಗೋಚರವಾಗಿರುತ್ತದೆ. ಅದನ್ನು ಚೇತನ, ಅಚೇತನ –ಎಂದು ಮುಂತಾಗಿ ವಿಕಲ್ಪಿಸುವದಕ್ಕೆ ಆಗುವದಿಲ್ಲ. ಅವನು ಅವಸ್ಥಾತ್ರಯರಹಿತನು, ಅವಸ್ಥಾತ್ರಯಸಾಕ್ಷಿಯು, ಅಂತಃಕರಣದಲ್ಲುಂಟಾಗುವ ಯಾವ ಪ್ರತ್ಯಯಕ್ಕೂ ವಿಷಯನಲ್ಲ. ಅವನನ್ನು ಅರಿಯಬೇಕಾದದ್ದಿರುವದಿಲ್ಲ, ನಿತ್ಯಸಿದ್ಧಚೈತನ್ಯರೂಪನಾಗಿರುತ್ತಾನೆ. ಆತ್ಮನು ಜ್ಞಾನಕರ್ತೃವೂ ಅಲ್ಲ, ಸೂರ್ಯನು ಪ್ರಕಾಶಕನೆನ್ನುವಂತೆಯೂ ಅಗ್ನಿಯು ದಗ್ಧೃವೆನ್ನುವಂತೆಯೂ ಅವನನ್ನು ಜ್ಞಾತೃವೆಂದು ಗೌಣವೃತ್ತಿಯಿಂದ ಕರೆಯಬಹುದು. ಆತ್ಮನಲ್ಲಿ ಜ್ಞಾನಾಜ್ಞಾನಗಳಿಲ್ಲ; ಅವನು ಜ್ಞೇಯವೂ ಅಲ್ಲ, ಅಜ್ಞೇಯನೂ ಅಲ್ಲ.

೫೧–೪೪. ಇಂಥ ನಿರುಪಾಧಿಕಬ್ರಹ್ಮನೇ ತಾನೆಂದು ಯಾವನು ಅರಿತುಕೊಳ್ಳುವನೋ ಅವನಿಗೆ ಜನನಮರಣಗಳ ಸಂಸಾರವಿಲ್ಲ. ಏಕೆಂದರೆ ಅವಿದ್ಯಾಕಾಮಕರ್ಮಗಳಿಲ್ಲ ಆ ಜ್ಞಾನದಿಂದ ನಾಶವಾಗಿಬಿಡುತ್ತವೆ. ಈ ಉಪದೇಶವು ಶಾಸ್ತ್ರಯುಕ್ತ್ಯನುಭವಗಳಿಗೆ ಹೊಂದುಗಡೆಯಾಗಿರುವದರಿಂದ ಇಲ್ಲಿ ಹೇಳಿದ ಆತ್ಮಸ್ವರೂಪದಲ್ಲಿ ನೆಲೆನಿಂತವನು ಮುಕ್ತನಾಗುವನು.

೧೬. ಸ್ವಯಂಜ್ಯೋತಿ[1]

ಸ್ವಯಂಜ್ಯೋತಿಯಾದ ಆತ್ಮನು ಅನಾತ್ಮವನ್ನು ಬೆಳಗುತ್ತಿದಾನೆ

ಪಾರ್ಥಿವಃ ಕಠಿನೋ ಧಾತುರ್ದ್ರವೋ ದೇಹೇ ಸ್ಮೃತೋಽಮ್ಮಯಃ।
ಪಕ್ತಿ ಚೇಷ್ಟಾವಕಾಶಾಃ ಸ್ಯುರ್ವಹ್ನಿವಾಯ್ವಮ್ಬರೋದ್ಭವಾಃ ॥ ೧ ॥

೧. ದೇಹದಲ್ಲಿ ಗಟ್ಟಿಯಾಗಿರುವ ಧಾತು ಪೃಥ್ವಿಯ ವಿಕಾರವು; ನೀರಾಗಿರುವದು ಅಪ್ಪಿನ ವಿಕಾರವೆನಿಸುವದು. ಪಚನ, ಚಲನ, ಅವಕಾಶ –ಇವು (ಕ್ರಮವಾಗಿ) ಅಗ್ನಿ, ವಾಯು, ಆಕಾಶ –ಇವುಗಳಿಂದಾಗಿರುತ್ತವೆ[2].

ಘ್ರಾಣಾದೀನಿ ತದರ್ಥಾಶ್ಚ ಪೃಥಿವ್ಯಾದಿಗುಣಾಃ ಕ್ರಮಾತ್।
ರೂಪಾಲೋಕವದಿಷ್ಟಂ ಹಿ ಸಜಾತೀಯಾರ್ಥಮಿನ್ದ್ರಿಯಮ್ ॥ ೨ ॥

೨. ಘ್ರಾಣವೇ ಮುಂತಾದವು ಕ್ರಮವಾಗಿ ಪೃಥಿವಿಯೇ ಮುಂತಾದವುಗಳ ಗುಣವುಳ್ಳವಾಗಿರುತ್ತವೆ. ರೂಪವನ್ನು (ತೋರುವ) ಬೆಳಕಿನಂತೆ[3] ಇಂದ್ರಿಯವು ಸಜಾತೀಯವಾದ ವಿಷಯವುಳ್ಳದ್ದು ಎಂಬುದೇ ಇಷ್ಟವಾಗಿರುತ್ತದೆ.

ಬುದ್ಧ್ಯರ್ಥಾನ್ಯಾಹುರೇತಾನಿ ವಾಕ್ಪಾಣ್ಯಾದೀನಿ ಕರ್ಮಣೇ।
ತದ್ವಿಕಲ್ಪಾರ್ಥಮನ್ತಃಸ್ಥಂ ಮನ ಏಕಾದಶಂ ಭವೇತ್ ॥ ೩ ॥
ನಿಶ್ಚಯಾರ್ಥಾ ಭವೇದ್ ಬುದ್ಧಿಸ್ತಾಂ ಸರ್ವಾರ್ಥಾನುಭಾವಿನೀಮ್।
ಜ್ಞಾತಾತ್ಮೋಕ್ತಃ ಸ್ವರೂಪೇಣ ಜ್ಯೋತಿಷಾ ವ್ಯಞ್ಜಯನ್ ಸದಾ ॥ ೪

೩–೪. ಇವು ಜ್ಞಾನಕ್ಕಾಗಿರುವ ಇಂದ್ರಿಯಗಳೆನ್ನುವರು. ವಾಕ್ಕು, ಪಾಣಿ –ಮುಂತಾದವು ಕರ್ಮಕ್ಕಾಗಿ (ಇರುವ ಇಂದ್ರಿಯಗಳು). ಅವುಗಳನ್ನು ವಿಕಲ್ಪಿಸುವದಕ್ಕೆ ಒಳಗಿರುವ ಮನಸ್ಸು ಹನ್ನೊಂದನೆಯದಾಗಿರುವದು. ನಿಶ್ಚಯಕ್ಕಾಗಿರುವದು ಬುದ್ಧಿಯು[4]. ಎಲ್ಲಾ ವಿಷಯಗಳನ್ನೂ ಅನುಭವಿಸುವ ಆ ಬುದ್ಧಿಯನ್ನು ಯಾವಾಗಲೂ ತನ್ನ ಸ್ವರೂಪವಾವ ಬೆಳಕಿನಿಂದ[5] ತೋರಿಸುತ್ತಿರುವ ಆತ್ಮನೇ ಜ್ಞಾತೃವೆನಿಸುತ್ತಾನೆ.

---

1. ಇದನ್ನು ವ್ಯಾಖ್ಯಾನದಲ್ಲಿ ಪಾರ್ಥಿವ ಪ್ರಕರಣವೆಂದು ಕರೆದಿದೆ.
2. 'ವೈಶಿಕರಸಾದಿಗಳು' ಎಂದು ೧೪-ಳಂಠರಲ್ಲಿ ಹೇಳಿರುವ ಪೃಥಿವ್ಯಾದಿವಿಕಾರಗಳಿವು.
3. ಆಯಾ ಇಂದ್ರಿಯವು ಆಯಾ ವಿಷಯದ ಜಾತಿಗೇ ಸೇರಿದ್ದು –ಎಂದು ತಿಳಿಸುವದಕ್ಕೆ ರೂಪಾಲೋಕದ – ರೂಪವನ್ನು ತೋರಿಸುವ ಬೆಳಕಿನ – ದೃಷ್ಟಾಂತ.
4. ಬುದ್ಧ್ಯಂತವಾಗಿರುವದೆಲ್ಲವೂ ಭೌತಿಕವೇ, ಅನಾತ್ಮವೇ.
5. ಯಾವ ವಿಕಾರವನ್ನೂ ಮೊಂದಿ ಇರುವ ಚೈತನ್ಯಪ್ರಕಾಶದಿಂದ ಎಂದರ್ಥ.

ಆತ್ಮನಿಗೆ ಅಂತಃಕರಣಧರ್ಮಗಳ ಸಂಬಂಧವಿಲ್ಲ

ವ್ಯಜ್ಯಮಾನಸ್ತು ಯಥಾಲೋಕೋ ವ್ಯಜ್ಯಸ್ಯಾಕಾರತಾಂ ಗತಃ ।
ವ್ಯತಿಕೀರ್ಣೋಽಪ್ಯಸಙ್ಕೀರ್ಣಸ್ತದ್ವಜ್ಜ್ಞಃ ಪ್ರತ್ಯಯೈಃ ಸದಾ ॥ ೫ ॥

೫. ತೋರಿಸುವ ಬೆಳಕು ತೋರಿಸಲ್ಪಡುವ (ವಿಷಯದ) ಆಕಾರವನ್ನು ಹೊಂದಿ ಅದರೊಡನೆ ಬೆರೆತುಕೊಂಡಿದ್ದರೂ ಹೇಗೆ (ನಿಜವಾಗಿ) ಬೆರೆತುಕೊಂಡಿರುವದಿಲ್ಲವೋ[1] ಹಾಗೆ ಆತ್ಮನು ಪ್ರತ್ಯಯಗಳೊಡನೆ ಯಾವಾಗಲೂ (ಬೆರೆತುಕೊಂಡಿದ್ದರೂ ಬೆರೆತುಕೊಂಡಿರುವದಿಲ್ಲ).

ಸ್ಥಿತೋ ದೀಪೋ ಯಥಾಯತ್ನಃ ಪ್ರಾಪ್ತಂ ಸರ್ವಂ ಪ್ರಕಾಶಯೇತ್ ।
ಶಬ್ದಾದ್ಯಾಕಾರಬುದ್ಧೀಜ್ಞಃ ಪ್ರಾಪ್ತಾಸ್ತದ್ವತ್[2] ಪ್ರಪಶ್ಯತಿ ॥ ೬ ॥

೬. ದೀಪವು ಇನ್ನಂತೆ ಇದ್ದುಕೊಂಡು ಯಾವ ಪ್ರತ್ಯಯವೂ ಇಲ್ಲದೆ[3] (ಎದುರಿಗೆ) ಬಂದೊದಗಿದ್ದೆಲ್ಲವನ್ನೂ ಹೇಗೆ ಬೆಳಗುತ್ತದೆಯೋ ಅದರಂತೆ[4] ಶಬ್ದವೇ ಮುಂತಾದ ಆಕಾರವಲ್ಲಿರುವ ಬುದ್ಧಿಗಳು ಎದುರಿಗೆ ಬಂದಂತೆ ಆತ್ಮನು (ಅವುಗಳನ್ನು) ನೋಡುತ್ತಿರುತ್ತಾನೆ.

ಶರೀರೇನ್ದ್ರಿಯಸಙ್ಘಾತೇ ಆತ್ಮತ್ವೇನ ಗತಾಂ ಧಿಯಮ್ ।
ನಿತ್ಯಾತ್ಮಜ್ಯೋತಿಷಾ ದೀಪ್ತಾಂ ವಿಶಿಂಷನ್ತಿ ಸುಖಾದಯಃ ॥೭॥

೭. ಶರೀರೇಂದ್ರಿಯಗಳ ಗುಂಪಿನಲ್ಲಿ ತಾನೆಂಬ ಬುದ್ಧಿಯು ಉಂಟಾಗಿರಲು ನಿತ್ಯವಾದ ಆತ್ಮಜ್ಯೋತಿಯಿಂದ ಬೆಳಗಲ್ಪಟ್ಟ ಆ (ಅಂತಃಕರಣಕ್ಕೆ) ಸುಖವೇ ಮುಂತಾದವು ವಿಶೇಷಣವಾಗಿರುತ್ತವೆ[5].

---

1. ವಿಷಯವನ್ನು ಬೆಳಗುವ ಬೆಳಕು ಅವನ್ನೆಲ್ಲ ಮುತ್ತಿಕೊಂಡಿದ್ದರೂ ಅದಕ್ಕಿಂತ ವ್ಯತಿರಿಕ್ತವಾಗಿ ತನ್ನ ಸ್ವರೂಪದಲ್ಲಿಯೇ ಇರುವಂತೆ ಚೈತನ್ಯಪ್ರಕಾಶವು ಅಂತಃಕರಣ ಪ್ರತ್ಯಯಗಳನ್ನು ಬೆಳಗುತ್ತಿದ್ದರೂ ಅವುಗಳಿಗಿಂತ ಬೇರೆಯೇ ಆಗಿರುತ್ತದೆ. ಆದರಲ್ಲಿ ಯಾವ ವಿಕಾರವೂ ಆಗಿರುವದಿಲ್ಲ.

2. 'ಪ್ರಾಪ್ತಾಃ ಸರ್ವಾಃ' ಎಂದು ಬೋಧನಿಧಿಯ ಪಾಠ.

3. ಸನ್ನಿಧಿಮಾತ್ರದಿಂದ ಎಂದರ್ಥ.

4. ಬೋಧನಿಧಿಯ ಪಾಠದಲ್ಲಿ 'ಎಲ್ಲಾ ಬುದ್ಧಿವೃತ್ತಿಗಳನ್ನೂ' ಎಂದು ಕನ್ನಡಿಸಬೇಕು. ಆಗ ತಥಾ ಎಂಬ ಪದವು ಅಧ್ಯಾಹೃತವಾಗಿರುತ್ತದೆ. ಆತ್ಮನಿಗೆ ವೃತ್ತಿಗಳ ಆಕಾರ ಪಾಗಬೇಕಾದ ಪ್ರಯತ್ನವು ಅವಶ್ಯವಾಗುವದಿಲ್ಲ ಎಂದರ್ಥ.

5. ಚಿದಾಭಾಸಯುಕ್ತವಾದ ಅಂತಃಕರಣದಲ್ಲಿ ಸುಖಾದಿವೃತ್ತಿಗಳು ಉಂಟಾಗುತ್ತವೆ.

ಶಿರೋದುಃಖಾದಿನಾತ್ಮಾನಂ ದುಃಖ್ಯಸ್ಮೀತಿ ಹಿ ಪಶ್ಯತಿ।
ದ್ರಷ್ಟಾನ್ಯೋ ದುಃಖಿನೋ ದೃಶ್ಯಾದ್ ದ್ರಷ್ಟೃತ್ವಾಚ್ಚ ನ ದುಃಖ್ಯಸೌ ॥

೮. ತಲೆನೋವೇ ಮುಂತಾದವುಗಳಿಂದ[1] ತಾನೇ ದುಃಖಿ ಎಂದಲ್ಲನೆ, ತಿಳಿದುಕೊಳ್ಳುತ್ತಾನೆ? ದೃಶ್ಯನಾದ ದುಃಖಿಗಿಂತ ದ್ರಷ್ಟೃವಾದವನು ಬೇರೆಯೇ; ಅವನು ದ್ರಷ್ಟೃವಾಗಿರುವದರಿಂದ ದುಃಖಿಯಲ್ಲ.

ದುಃಖೀ ಸ್ಯಾದ್ ದುಃಖ್ಯಹಂಮಾನಾದ್ ದುಃಖಿನೋ ದರ್ಶನಾನ್ನ ವಾ।
ಸಂಹತೇಽಜ್ಞಾದಿಭಿರ್ದೃಷ್ಟಾ ದುಃಖೀ ದುಃಖಸ್ಯ ನೈವ ಸಃ ॥ ೯ ॥

೯. ದುಃಖಿಯು ನಾನು ಎಂಬ ಅಭಿಮಾನದಿಂದ ದುಃಖಿಯಾಗುತ್ತಾನೆ, ದುಃಖಿಯನ್ನು ನೋಡುವದರಿಂದ ಆಗುವದೇ ಇಲ್ಲ. ಶರೀರಾದಿಗಳೊಡನೆ ಸಂಹತವಾಗಿರುವ ದುಃಖವನ್ನು ನೋಡುವಾತನು ದುಃಖಿಯಲ್ಲವೇ ಅಲ್ಲ[2].

ಆತ್ಮನು ತನಗೆ ತಾನೇ ವಿಷಯವಲ್ಲ

ಚಕ್ಷುರ್ವತ್ ಕರ್ಮಕರ್ತೃತ್ವಂ ಸ್ಯಾಚ್ಚೇನ್ನಾನೇಕಮೇವ ತತ್।
ಸಂಹತಂ ಚ ತತೋ ನಾತ್ಮಾ ದ್ರಷ್ಟೃತ್ವಾತ್ ಕರ್ಮತಾಂ ವ್ರಜೇತ್ ॥

೧೦. ಕಣ್ಣಿನಂತೆ[3] ಕರ್ಮಕರ್ತೃತ್ವವಾಗಬಹುದು ಎಂದರೆ ಹಾಗಲ್ಲ; ಏಕೆಂದರೆ ಅದು ಅನೇಕವೇ[4] ಆಗಿರುತ್ತದೆ, (ಮತ್ತೊಂದರೊಡನೆ) ಸಂಹತವಾಗಿಯೂ ಇರುತ್ತದೆ. ಆದ್ದರಿಂದ ದ್ರಷ್ಟೃವಾಗಿರುವದರಿಂದ ಆತ್ಮನು (ತನಗೆ ತಾನೇ) ಕರ್ಮವಾಗಲಾರನು[5].

---

1. ದೃಶ್ಯವಾದ ತಲೆಯೇ ಮುಂತಾದವುಗಳಲ್ಲಿರುವ ನೋವನ್ನು ತನ್ನಲ್ಲಿ ನೋವಿದೆ ಎಂದು ತಿಳಿಯುವದು ಅಧ್ಯಾರೋಪವು, ಪರಮಾರ್ಥವಲ್ಲ. ಉ. ಸಾ. ಗದ್ಯ ೨೪ನ್ನು ನೋಡಿ.

2. ದುಃಖಿಯನ್ನೂ ದುಃಖವನ್ನೂ ನೋಡುವ ಸಾಕ್ಷಿಯು ಅವುಗಳಿಗಿಂತ ಬೇರೆಯಾಗಿರುತ್ತಾನೆ.

3. ಕಣ್ಣು ಹೇಗೆ ತನಗಿಂತ ಬೇರೆಯಾದ ವಸ್ತುವನ್ನೂ ಅರಿಯುವದೋ ತನ್ನೊಳಗಿನ ನೋವನ್ನೂ ಅರಿಯುವದೋ ಹಾಗೆ.

4. ಸಾವಯವವೇ ಎಂದರ್ಥ.

5. ಕಣ್ಣು ದ್ರಷ್ಟೃವೆಂಬುದು ಉಪಚಾರಕ್ಕೆ; ಅದು ಸಾವಯವವೂ ಸಂಹತವೂ ಆಗಿರುವದರಿಂದ ದೃಶ್ಯವಾದ ಅನಾತ್ಮವಾಗಿರುತ್ತದೆ. ಆತ್ಮನು ಏಕನು, ಅಸಂಹತನು, ನಿತ್ಯದೃಗ್ರೂಪನು; ಆದ್ದರಿಂದ ಅವನು ತನಗಾಗಲಿ ಮತ್ತೊಂದಕ್ಕಾಗಲಿ ಕರ್ಮವಲ್ಲ.

ಜ್ಞಾನಯತ್ನಾದ್ಯನೇಕತ್ವಮಾತ್ಮನೋಽಪಿ ಮತಂ ಯದಿ ।
ನೈಕಜ್ಞಾನಗುಣತ್ವಾತ್ತು ಜ್ಯೋತಿರ್ವತ್ತಸ್ಯ ಕರ್ಮತಾ ॥ ೧೧ ॥
ಜ್ಯೋತಿಷೋ ದ್ಯೋತಕತ್ವೇಽಪಿ ಯದ್ವನ್ನಾತ್ಮಪ್ರಕಾಶನಮ್ ।
ಭೇದೇಽಪ್ಯೇವಂ ಸಮತ್ವಾಜ್ಜ್ಞ ಆತ್ಮಾನಂ ನೈವ ಪಶ್ಯತಿ ॥ ೧೨ ॥

೧೧–೧೨. ಜ್ಞಾನ, ಯತ್ನ – ಮುಂತಾದ ಗುಣಗಳಿಂದ ಆತ್ಮನೂ ಅನೇಕವಾಗಿರುತ್ತಾನೆಂದು ನಿಮ್ಮ ಮತವಾದರೆ[1] (ಅದು) ಸರಿಯಲ್ಲ. ಏಕೆಂದರೆ ಬೆಳಕಿನಂತೆ ಜ್ಞಾನವೆಂಬುದೊಂದೇ ಅವನ ಗುಣವಾದ್ದರಿಂದ ಅವನು ಕರ್ಮವಾಗಲಾರನು[2]; ಬೆಳಕು (ಪದಾರ್ಥಗಳನ್ನು) ಬೆಳಗತಕ್ಕದ್ದಾದರೂ ಹೇಗೆ ತನ್ನನ್ನು (ತಾನು) ಬೆಳಗದಿರುವದೋ ಅದರಂತೆ[3] ಆತ್ಮನಲ್ಲಿ ಭೇದವಿದ್ದರೂ (ಎರಡೂ) ಸಮವಾಗಿರುವದರಿಂದ ಆತ್ಮನು ತನ್ನನ್ನು ತಾನು ಬೆಳಗಲಾರನು[4].

ಯದ್ಧರ್ಮಾ ಯಃ ಪದಾರ್ಥೋ ನ ತಸ್ಯೈವೇಯಾತ್ ಸ ಕರ್ಮತಾಮ್
ನ ಹ್ಯಾತ್ಮಾನಂ ದಹತ್ಯಗ್ನಿಸ್ತಥಾ ನೈವ ಪ್ರಕಾಶಯೇತ್ ॥ ೧೩ ॥

೧೩. ಯಾವ ಪದಾರ್ಥವು ಯಾವ ಧರ್ಮವುಳ್ಳದ್ದೋ ಆ ಧರ್ಮಕ್ಕೇ ಅದು ವಿಷಯವಾಗಲಾರದು. ಬೆಂಕಿಯು ತನ್ನನ್ನೇ ತಾನು ಸುಡಲಾರದು, ಬೆಳಗಲೂ ಆರದು. ಅಲ್ಲವೆ[5] ?

---

1. ಜ್ಞಾನಾದ್ಯನೇಕಗುಣಗಳು ಆತ್ಮನ ಧರ್ಮಗಳೆಂದು ವೈಶೇಷಿಕರು ಮತ.

2. ಮಿಕ್ಕದ್ದೆಲ್ಲವೂ ಅಂತಃಕರಣಧರ್ಮವೆಂದು ಭಾವ. ಜ್ಞಾನವು ಆತ್ಮನ ಗುಣವೆಂಬುದೂ ಸ್ವರೂಪವಾದ ಧರ್ಮವೆಂಬ ಅಭಿಪ್ರಾಯದಿಂದ. ಉ. ಸಾ. ಗದ್ಯ ೫೧.

3. ಬೆಳಕಿಗೆ ಬೆಳಕಿನ ಅವಶ್ಯಕತೆಯಿಲ್ಲದಿರುವಂತೆ ಆತ್ಮಚೈತನ್ಯಕ್ಕೆ ಜ್ಞಾನದಿಂದ ಆಗಬೇಕಾದ ಆತಿಶಯವಿರುವದಿಲ್ಲ.

4. ಎರಡು ದೀಪಗಳು ಒಂದನ್ನೊಂದು ಬೆಳಗುವವೆಂದು ಹೇಳುವದಕ್ಕೆ ಬರುವದಿಲ್ಲ; ಅದರಂತೆ ಆತ್ಮನಲ್ಲಿ ಅಂಶಗಳಿದ್ದರೂ ಅಥವಾ ಆತ್ಮರು ಇಬ್ಬರುಮೂವರಿದ್ದರೂ ಒಬ್ಬರ ಸ್ನೂಬ್ಬರು ಅರಿಯುವಹಾಗಿಲ್ಲ. ಉ. ಸಾ. ಗದ್ಯ ೪೬.

5. ಇದರಂತೆ ಚೈತನ್ಯಸ್ವಭಾವನಾದ ಆತ್ಮನು ತನ್ನನ್ನು ತಾನೇ ಅರಿಯಲಾರನು. ಹಿಂದೆ ಹೇಳಿದ್ದು ಆತ್ಮನಿಗೆ ಜ್ಞಾನದ ಆವಶ್ಯಕತೆಯಿಲ್ಲವೆಂದು; ಈಗ ಹೇಳಿದ್ದು ಆತ್ಮನು ಜ್ಞಾನಕ್ಕೆ ವಿಷಯನಾಗುವ ಪಾಡೆಯೇ ಇಲ್ಲವೆಂದು.

ಬೌದ್ಧರ ಪ್ರಕ್ರಿಯೆಯ ವಿಮರ್ಶೆಯಿಂದಲೂ ಆತ್ಮಚೈತನ್ಯವು ಸಿದ್ಧವಾಗುತ್ತದೆ

ಏತೇನೈವಾತ್ಮನಾತ್ಮಾನೋ[1] ಗ್ರಹೋ ಬುದ್ಧೇರ್ನಿರಾಕೃತಃ ।
ಅಂಶೇಽಪ್ಯೇವಂ[2] ಸಮತ್ವಾದ್ಧಿ ನಿರ್ಭೇದತ್ವಾನ್ನ ಯುಜ್ಯತೇ ॥ ೧೪ ॥

೧೪. ವಿಜ್ಞಾನವು ತನ್ನನ್ನು ತಾನೇ ಗ್ರಹಿಸುವದೆಂಬ ವಾದವನ್ನು ಇದರಿಂದಲೇ ತಳ್ಳಿಹಾಕಿದಂತೆ (ಆಯಿತು)[5]. (ವಿಜ್ಞಾನದಲ್ಲಿ) ಅಂಶ(ವಿಷಯೆಂಬ ಪಕ್ಷ)ದಲ್ಲಿಯೂ ಸಮವಾಗಿರುವದರಿಂದ ಯಾವ ಭೇದವೂ ಇಲ್ಲದ್ದರಿಂದ (ಅವು ಒಂದಕ್ಕೊಂದು ವಿಷಯವೆಂಬುದು) ಯುಕ್ತವಾಗುವದಿಲ್ಲ[4].

ಶೂನ್ಯತಾಪಿ ನ ಯುಕ್ತ್ಯೈವಂ ಬುದ್ಧೇರನ್ಯೇನ ದೃಶ್ಯತಾ ।
ಯುಕ್ತಾತೋ ಘಟವತ್ ತಸ್ಯಾಃ ಪ್ರಾಕ್ ಸಿದ್ಧೇಶ್ಚ ವಿಕಲ್ಪತಃ ॥ ೧೫ ॥
ಅವಿಕಲ್ಪಂ ತದಸ್ತ್ಯೇವ ಯತ್ ಪೂರ್ವಂ ಸ್ಯಾದ್ವಿಕಲ್ಪತಃ ।
ವಿಕಲ್ಪೋತ್ಪತ್ತಿಹೇತುತ್ವಾದ್ಯದ್ಯಸ್ಯೈವ ತು ಕಾರಣಮ್ ॥ ೧೬ ॥

೧೫–೧೬. ಬುದ್ಧಿಯು ಶೂನ್ಯವೆಂಬುದೂ ಹೀಗೆಯೇ ಅಯುಕ್ತವು[5]. ಅದು ಘಟದಂತೆ ಮತ್ತೊಬ್ಬನಿಗೆ ವಿಷಯವೆಂಬುದೇ ಯುಕ್ತವು[6]. ಅದನ್ನು ವಿಕಲ್ಪಿಸುವ ಮೊದಲೇ (ಆ ಮತ್ತೊಬ್ಬನು) ಸಿದ್ಧವಾಗಿರುವದರಿಂದಲೂ (ಅದೇ ಯುಕ್ತ)[7]. ಯಾವ ಅವಿಕಲ್ಪವು ಯಾವ (ವಿಕಲ್ಪಕ್ಕೇ) ಕಾರಣವಾಗಿರು

---

1. ಆತ್ಮನೋ ಎಂಬುದಕ್ಕೆ ಆತ್ಮಾನೋ ಎಂದು ಬರೆದಿರುವದು ಛಂದಸ್ಸಿಗಾಗಿ.

2. 'ಅಂಶೋ' ಎಂಬುದು ತಪ್ಪು ; 'ಅಂಶೇಽಭ್ಯುಪಗಮ್ಯಮಾನೇಽಪಿ' ಎಂದು ಬೋಧಸಿದ್ಧಿಯ ವ್ಯಾಖ್ಯಾನ.

3. ತನ್ನನ್ನು ತಾನೇ ಗ್ರಹಿಸುವದೆಂಬುದು ಆತ್ಮನಿಗೆ ಹೇಗೆ ಅಯುಕ್ತವೋ ಹಾಗೆಯೇ ವಿಜ್ಞಾನಕ್ಕೂ ಅಯುಕ್ತ.

4. ಅಂಶಗಳೆರಡೂ ವಿಜ್ಞಾನವೇ ಆಗಿರುವದರಿಂದ ಅವುಗಳಲ್ಲಿ ಒಂದಕ್ಕಿಂತ ಮತ್ತೊಂದರಲ್ಲಿ ಯಾವ ಭೇದವೂ ಇರುವದಿಲ್ಲ. ಅದ್ದರಿಂದ ಅವುಗಳಲ್ಲಿ ಒಂದನ್ನೊಂದು ಬೆಳಗುವದೆಂಬುದು ಸರಿಯಲ್ಲ.

5. ಬುದ್ಧಿಯು ತನ್ನ ಶೂನ್ಯತ್ವವನ್ನು ತಾನೇ ಗ್ರಹಿಸಲಾರದು.

6. ಗಡಿಗೆಗೆ ಹೇಗೆ ತನಗಿಂತ ಬೇರೆಯಾದ ನೇತ್ರಾದಿಗಳು ವಿಷಯಿಯಾಗಿರುವವೋ ಹಾಗೆಯೇ ಬುದ್ಧಿಗಿಂತಲೂ ಅನ್ಯವಾದ ಆತ್ಮನೇ ಅದನ್ನು ಅರಿಯುವ ವಿಷಯಿ ಎಂಬುದು ಯುಕ್ತ.

7. ಬುದ್ಧಿಯು ಕ್ಷಣಿಕವು, ಶೂನ್ಯವು; ಅಥವಾ ಮತ್ತೊಂದು ಬಗೆ –ಎಂದು ವಿಕಲ್ಪಿಸುವವನು ಮೊದಲು ಸಿದ್ಧನಾಗಿದ್ದರೇ ಅಲ್ಲವೆ, ಶೂನ್ಯತ್ವಾದಿವಿಕಲ್ಪವು ಹೊಂದುವದು? –ಎಂದು ಭಾವ.

ತ್ತದೆಯೋ ಆ ವಿಕಲ್ಪಕ್ಕಿಂತ ಮೊದಲೇ ಇರಬೇಕಾಗಿರುವ ಆ ಅವಿಕಲ್ಪವು ಇದ್ದೇ ಇರುತ್ತದೆ[1].

ಅಜ್ಞಾನಂ ಕಲ್ಪನಾಮೂಲಂ ಸಂಸಾರಸ್ಯ ನಿಯಾಮಕಮ್ ।
ಹಿತ್ವಾತ್ಮಾನಂ ಪರಂ ಬ್ರಹ್ಮ ವಿನ್ಮಾತ್ರಮ್ಮುಕ್ತಂ ಸದಾಭಯಮ್ ॥ ೧೭ ॥

೧೭. ಕಲ್ಪನೆಗೆ ಮೂಲವಾಗಿ ಸಂಸಾರವನ್ನು ಗೊತ್ತುಪಡಿಸುತ್ತಿರುವ ಅಜ್ಞಾನವನ್ನು ಬಿಟ್ಟು[2], ಆತ್ಮನು ನಿತ್ಯಮುಕ್ತವೂ ನಿರ್ಭಯವೂ ಆಗಿರುವ ಪರಬ್ರಹ್ಮವೆಂದು ಅರಿತುಕೊಳ್ಳಬೇಕು.

ಜಾಗ್ರತ್ಸ್ವಪ್ನೌ ತಯೋರ್ಬೀಜಂ ಸುಷುಪ್ತಾಖ್ಯಂ ತಮೋಮಯಮ್।
ಅನ್ಯೋನ್ಯಸ್ಮಿನ್ನಸತ್ತ್ವಚ್ಚ ನಾಸ್ತೀತ್ಯೇತತ್ತ್ರಯಂ ತ್ಯಜೇತ್ ॥ ೧೮ ॥

೧೮. ಎಚ್ಚರಕನಸುಗಳೂ ಅವಕ್ಕೆ ಕಾರಣವಾಗಿರುವ ತಮೋಮಯವಾದ[3] ತನಿನಿದ್ರೆಯೆಂಬುದೂ ಒಂದರಲ್ಲೊಂದು ಇಲ್ಲದ್ದರಿಂದ[4] ಇವು ಮೂರೂ ಇಲ್ಲವೆಂದು ಬಿಡಬೇಕು[5].

ಆತ್ಮನಲ್ಲಿ ಕರ್ತೃತ್ವದ ಅಧ್ಯಾಸವಾಗಿರುವ ರೀತಿ

ಆತ್ಮಬುದ್ಧಿರನಶ್ಚಕ್ಷುರಾಲೋಕಾರ್ಥಾದಿಸಙ್ಕರಾತ್ ।
ಭ್ರಾನ್ತಿಃ ಸ್ಯಾದಾತ್ಮಕರ್ಮೇತಿ ಕ್ರಿಯಾಣಾಂ ಸನ್ನಿಪಾತತಃ ॥ ೧೯ ॥
ನಿಮೀಲೋನ್ಮೀಲನೇ ಸ್ಥಾನೇ ವಾಯವ್ಯೇ ತೇ ನ ಚಕ್ಷುಷಃ ।
ಪ್ರಕಾಶತ್ವಾನ್ಮನಸ್ಯೇವಂ ಬುದ್ಧೌ ನ ಸ್ತಃ ಪ್ರಕಾಶತಃ ॥ ೨೦ ॥

---

1. ಕಾರಣವು ಕಾರ್ಯಕ್ಕಿಂತ ಮೊದಲೇ ಇರಬೇಕು. ಇದರಂತೆ ವಿಕಲ್ಪಕ್ಕೆ ಕಾರಣವಾಗಿರುವ ಆತ್ಮನು ವಿಕಲ್ಪಕ್ಕಿಂತ ಮೊದಲೇ ಇರಬೇಕು. ಅವಿಕಲ್ಪಿತವಾದ ಆಸ್ಪದವು ಇಲ್ಲದಿದ್ದರೆ ವಿಕಲ್ಪಗಳೇ ಇರುವದಿಲ್ಲ ಎಂದು ಭಾವ.

2. ವಿಕಲ್ಪಗಳಿಲ್ಲ ಅಜ್ಞಾನದಿಂದ, ಎಂದರೆ ತಪ್ಪುತಿಳಿವಳಿಕೆಯಿಂದ, ತೋರುತ್ತವೆ.

3. ತನಿನಿದ್ರೆಯು ಅಜ್ಞಾನಮಯ, ಎಚ್ಚರಕನಸುಗಳು ಅನ್ಯಥಾಜ್ಞಾನಮಯ.

4. ಎಚ್ಚರದಲ್ಲಿ ಇನ್ನೆರಡು ಅವಸ್ಥೆಗಳಿಲ್ಲ ; ಕನಸಿನಲ್ಲಿಯೂ ಇನ್ನೆರಡು ಅವಸ್ಥೆಗಳಿಲ್ಲ ; ಸುಷುಪ್ತಿಯಲ್ಲಿಯೂ ಹೀಗೆಯೇ. ಒಂದಿರುವಾಗ ಮಿಕ್ಕವು ಎಲ್ಲಿಯೂ ಇಲ್ಲ.

5. ಇಲ್ಲ ಎಂದರೆ ಬರಿಯತೋರಿಕೆಯೇ, ತಮ್ಮ ರೂಪದಿಂದ ನಿಜವಲ್ಲ ಎಂದರ್ಥ. ಆತ್ಮನು ಈ ಮೂರು ವಿಕಲ್ಪಗಳಿಗೂ ಆಧಾರವಾಗಿರುವದರಿಂದ ಅವಶ್ಯವಾಗಿರುತ್ತಾನೆ ಎಂದು ೧೬ನೆಯ ಶ್ಲೋಕದಲ್ಲಿಯೇ ಹೇಳಿರುತ್ತದೆ. ಹೀಗೆ ಚೈತನ್ಯರೂಪನಾದ ಆತ್ಮನು ತನಗೆ ತಾನು ವಿಷಯನಲ್ಲದೆ ಇದ್ದರೂ ಸ್ವಯಂಜ್ಯೋತಿಯಾಗಿ ಸಿದ್ಧನಾಗುತ್ತಾನೆ ಎಂದಾಯಿತು.

ಸಙ್ಕಲ್ಪಾಧ್ಯವಸಾಯೌ ತು ಮನೋಬುದ್ಧ್ಯೋರ್ಯಥಾ ಕ್ರಮಾತ್।
ನೇತರೇತರಧರ್ಮತ್ವಂ ಸರ್ವಂ ಚಾತ್ಮನಿ ಕಲ್ಪಿತಮ್ ॥ ೨೧ ॥

೧೯–೨೧. ದೇಹ, ಬುದ್ಧಿ, ಮನಸ್ಸು, ಚಕ್ಷುರಿಂದ್ರಿಯ, ಬೆಳಕು, ವಿಷಯ –ಇವೇ ಮುಂತಾದವುಗಳ ಸೇರುವಿಕೆಯಿಂದ ಕ್ರಿಯೆಗಳು ಒಟ್ಟು ಸೇರಿಕೊಂಡು (ಇದು) 'ಆತ್ಮನ ಕ್ರಿಯೆ' ಎಂಬ ಭ್ರಾಂತಿಯಾಗುವದು[1]. (ಒಂದಾನೊಂದು) ಸ್ಥಾನದಲ್ಲಿ ಕಣ್ಣುತೆರೆಯುವದು, ಮುಚ್ಚುವದು – (ಎಂಬ ಕ್ರಿಯೆಗಳಾಗುವವಲ್ಲ), ಅವು ಪ್ರಾಣದ (ಧರ್ಮನೇ ಹೊರತು) ಚಕ್ಷುರಿಂದ್ರಿಯದ (ಧರ್ಮ)ವಲ್ಲ; ಏಕೆಂದರೆ (ಆ ಇಂದ್ರಿಯವು) ಪ್ರಕಾಶ(ರೂಪ)ವಾಗಿರುತ್ತದೆ. ಇದರಂತೆ ಮನಸ್ಸಿನಲ್ಲಿಯೂ ಬುದ್ಧಿಯಲ್ಲಿಯೂ (ಇವು) ಇರುವದಿಲ್ಲ; ಏಕೆಂದರೆ (ಇವೂ) ಪ್ರಕಾಶ (ರೂಪ)ವಾಗಿರುತ್ತವೆ. ಸಂಕಲ್ಪ, ನಿಶ್ಚಯ – (ಇವು)ಗಳಾದರೋ ಯಥಾ ಕ್ರಮವಾಗಿ ಮನಸ್ಸು, ಬುದ್ಧಿ – ಇವುಗಳಿಗೆ ಸೇರಿದವುಗಳು; (ಅವಕ್ಕೆ ಒಂದರ ಧರ್ಮವು ಮತ್ತೊಂದಕ್ಕೆ ಇಲ್ಲ. ಇದೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿರುತ್ತದೆ[2].

ಆತ್ಮನ ವಿಷಯದಲ್ಲಿ ವಾದಿವಿಕಲ್ಪಗಳು

ಸ್ಥಾನಾವಚ್ಛೇದದೃಷ್ಟಿಃ ಸ್ಯಾದಿನ್ದ್ರಿಯಾಣಾಂ ತದಾತ್ಮತಾಮ್ ।
ಗತಾ ಧೀಸ್ತಾಂ ಹಿ ಪಶ್ಯನ್ತೀ ಜ್ಞೋ ದೇಹಮಾತ್ರ ಇವೇಷ್ಯತೇ ॥ ೨೨ ॥

೨೨. ಇಂದ್ರಿಯಗಳಿಗೆ ಒಂದೊಂದು ಸ್ಥಾನಕ್ಕೆ ಕಟ್ಟುಬಿದ್ದ ದೃಷ್ಟಿ ಇರುತ್ತದೆ. ಬುದ್ಧಿಯು ಅವುಗಳ ತಾದಾತ್ಮ್ಯವನ್ನು ಹೊಂದಿರುತ್ತದೆ. ಆ ಬುದ್ಧಿಯನ್ನು ನೋಡುವ ಆತ್ಮನು ದೇಹಪರಿಮಾಣವುಳ್ಳವನಾಗಿಯೇ ತೋರುತ್ತಾನೆ[3].

ಕ್ಷಣಿಕಂ ಹಿ ತದತ್ಯರ್ಥಂ ಧರ್ಮಮಾತ್ರಂ ನಿರನ್ತರಮ್ ।
ಸಾದೃಶ್ಯಾದ್ ದೀಪವತ್ತದ್ಧೀಸ್ತಚ್ಛಾನ್ತಿಃ ಪುರುಷಾರ್ಥತಾ ॥ ೨೩ ॥

---

1. ಗೀ. ಭಾ. ೧೮-೨೪ರಿಂದ ೨೬ರವರೆಗಿನ ಗ್ರಂಥವನ್ನು ನೋಡಿರಿ.

2. ಇಲ್ಲಿ ಪ್ರಾಣ, ಚಕ್ಷುರಿಂದ್ರಿಯ, ಆಲೋಕ, ಮನಸ್ಸು, ಬುದ್ಧಿ –ಇವುಗಳಿಗೆಲ್ಲ ಒಂದೊಂದು ಕೆಲಸವಿವೆ. ಆತ್ಮನಿಗೆ ಯಾವ ಕೆಲಸವೂ ಇಲ್ಲ. ಆದರೂ ಕಣ್ಣುಬಿಟ್ಟೆನು, ವಿಷಯವನ್ನು ಕಂಡೆನು, ಸಂಕಲ್ಪಿಸಿದೆನು, ನಿಶ್ಚಯಿಸಿದೆನು –ಎಂದು ಎಲ್ಲಾ ಧರ್ಮಗಳನ್ನೂ ಆತ್ಮನಲ್ಲಿ ಅಧ್ಯಾಸಮಾಡಿಕೊಳ್ಳುತ್ತಾರೆ ಎಂದು ಅರ್ಥ.

3. ಇಂದ್ರಿಯಜ್ಞಾನವು ಪರಿಚ್ಛಿನ್ನವಾಗಿದ್ದು ಅಂತಃಕರಣವು ಅದರ ತಾದಾತ್ಮ್ಯವನ್ನು ಅಧ್ಯಾಸಮಾಡಿಕೊಳ್ಳುತ್ತದೆ; ಅದನ್ನು ನೋಡುವ ಆತ್ಮನು ದೇಹಪರಿಮಾಣದವನು ಎಂಬಂತೆ ಈ ಕಾರಣದಿಂದ ಭ್ರಾಂತಿಯಾಗಿರುತ್ತದೆ. ಇದು ಜೈನಮತಖಂಡನೆ.

ಸ್ವಾಕಾರಾನ್ಯಾವಭಾಸಂ ಚ ಯೇಷಾಂ ರೂಪಾದಿ ವಿದ್ಯತೇ ।
ಯೇಷಾಂ ನಾಸ್ತಿ ತತಶ್ಚಾನ್ಯತ್ ಪೂರ್ವಾಸಜ್ಞಿತಿರುಚ್ಯತೇ ॥ ೨೪ ॥

೨೩-೨೪. ವಸ್ತುಸಾಮಾನ್ಯವೇ ಅತ್ಯಂತಕ್ಷಣಿಕವಾಗಿದೆ. ಎಡೆಬಿಡದೆ ಉಂಟಾಗುತ್ತಿರುವದರಿಂದ ದೀಪದಲ್ಲಾಗುವಂತೆ ಸಾದೃಶ್ಯದಿಂದ ಅದೇ ಎಂಬ ಬುದ್ಧಿಯುಂಟಾಗುತ್ತದೆ ; ಅದರ ನಾಶವೇ ಪುರುಷಾರ್ಥವು (ಎಂಬುದು ಬೌದ್ಧರ ಮತವು). ತನ್ನ ಆಕಾರವಾದ ಮತ್ತೊಂದರಿಂದ ತೋರುವ ರೂಪಾದಿಗಳು ಯಾರ ಮತದಲ್ಲಿ ಉಂಟೋ, ಯಾರ ಮತದಲ್ಲಿ ಅದಕ್ಕಿಂತ ಬೇರೆಯಾದದ್ದು ಇಲ್ಲವೋ[1], ಅವರಿಬ್ಬರ ಮತದಲ್ಲಿಯೂ ಹಿಂದೆ ಹೇಳಿದ್ದು ಹೊಂದುವದಿಲ್ಲವೆಂಬುದನ್ನು ತಿಳಿಸಲಾಗುತ್ತದೆ.

ಬಾಹ್ಯಾಕಾರತ್ವತೋ ಜ್ಞಪ್ತೇಃ ಸ್ಮೃತ್ಯಭಾವಃ ಸದಾ ಕ್ಷಣಾತ್ ।
ಕ್ಷಣಿಕತ್ವಾಚ್ಚ ಸಂಸ್ಕಾರಂ ನೈವಾಧತ್ತೇ ಕ್ವಚಿತ್ತು ಧೀಃ ॥ ೨೫ ॥

ಆಧಾರಸ್ಯಾಸತ್ತ್ವಾಚ್ಚ ತುಲ್ಯತಾ ನಿರ್ನಿಮಿತ್ತತಃ ।
ಸ್ಥಾನೇ ವಾ ಕ್ಷಣಿಕತ್ವಸ್ಯ ಹಾನಂ ಸ್ಯಾನ್ನ ತದಿಷ್ಯತೇ ॥ ೨೬ ॥

೨೫-೨೬. ವಿಜ್ಞಾನವು ಹೊರಗಿನ ವಿಷಯದ ಆಕಾರವಾಗಿರುವದರಿಂದಲೂ (ಅದು) ಯಾವಾಗಲೂ ಕ್ಷಣಿಕವೇ ಆಗಿರುವದರಿಂದಲೂ ಸ್ಮೃತಿಯೆಂಬುದಿಲ್ಲವಾಗುತ್ತದೆ. ಮತ್ತು ಕ್ಷಣಿಕವಾಗಿರುವದರಿಂದ ವಿಜ್ಞಾನವು ಎಲ್ಲಿಯೂ ಸಂಸ್ಕಾರವನ್ನುಂಟುಮಾಡಲಾರದು ; ಆಧಾರವೂ ಅಸತ್ಯವಾಗಿರುವದರಿಂದಲೂ (ಸಂಸ್ಕಾರವನ್ನುಂಟುಮಾಡಲಾರದು). ಆದ್ದರಿಂದ ಸಾದೃಶ್ಯವು ಯಾವ ನಿಮಿತ್ತವೂ ಇಲ್ಲದೆ ಆಗುವದೆಂದಾಯಿತು[2]. (ಅದು) ಸ್ಥಿರವಾಗಿದೆ ಎಂದರೋ ಕ್ಷಣಿಕವೆಂಬ (ಪ್ರತಿಜ್ಞೆಯನ್ನು) ಬಿಡಬೇಕಾಗುವದು ; ಅದನ್ನು (ನೀವು) ಒಪ್ಪುವದಿಲ್ಲ[3].

---

1. ಬೌದ್ಧರಲ್ಲಿ ಬಾಹ್ಯವಸ್ತು ಸತ್ಯತ್ವವಾದಿಗಳೆಂದೂ ಬಾಹ್ಯವಸ್ತು ಅಸತ್ತೆಂಬ ವಾದಿಗಳೆಂದೂ ಎರಡು ಪಂಗಡವವರಿದಾರೆ. ಇಬ್ಬರ ಮತದಲ್ಲಿಯೂ ಮುಂದೆ ಹೇಳುವ ದೋಷವಿದೆ ಎಂದರ್ಥ.

2. ಬಾಹ್ಯವಸ್ತು ಇದ್ದರೆ ಅದೂ ಕ್ಷಣಿಕ, ವಿಜ್ಞಾನವೂ ಕ್ಷಣಿಕ ; ವಿಜ್ಞಾನದಿಂದಾದ ಅನುಭವವು ವಾಸನಾರೂಪವಾಗಿ ನಿಲ್ಲುವದಕ್ಕೆ ಆಧಾರವಾಗಿ ಯಾವ ಅಂತಃಕರಣವೂ ಇಲ್ಲ. ಆದ್ದರಿಂದ ಬೌದ್ಧಮತದಲ್ಲಿ ಅದೇ ಇದು ಎಂಬ ಸಾದೃಶ್ಯಜ್ಞಾನಕ್ಕೆ ಯಾವ ಕಾರಣವೂ ಇಲ್ಲ.

3. ಬಾಹ್ಯವಸ್ತು, ಅದರ ವಿಜ್ಞಾನ, ಅದರ ಆಧಾರ –ಇವು ಸ್ಥಿರವಾಗಿರುವವು ; ಆದ್ದರಿಂದ ಅಂತಃಕರಣದಲ್ಲಿ ವಾಸನೆಯುಂಟಾಗಬಹುದು ಎಂದರೆ ಎಲ್ಲವೂ ಕ್ಷಣಿಕವೆಂಬ ಮತವನ್ನೇ ಬಿಡಬೇಕಾಗುವದು.

ಶಾನ್ತೇಶ್ಚಾಯತ್ನಸಿದ್ಧತ್ವಾತ್ ಸಾಧನೋಕ್ತಿರನರ್ಥಿಕಾ ।
ಏಕೈಕಸ್ಮಿನ್ ಸಮಾಪ್ತತ್ವಾಚ್ಚಾನ್ತೇರನ್ಯಾನಪೇಕ್ಷತಾ ॥ ೨೭ ॥

ಅಪೇಕ್ಷಾ ಯದಿ ಭಿನ್ನೇಽಪಿ ಪರಸನ್ತಾನ ಇಷ್ಯತಾಮ್ ।
ಸರ್ವಾರ್ಥೇ ಕ್ಷಣಿಕೇ ಕಸ್ಮಿಂಸ್ತಥಾಪ್ಯನ್ಯಾನಪೇಕ್ಷತಾ ॥ ೨೮ ॥

ತುಲ್ಯಕಾಲಸಮುದ್ಭೂತಾವಿತರೇತರಯೋಗಿನೌ ।
ಯೋಗಾಚ್ಚ ಸಂಸ್ಕೃತೋ ಯಸ್ತು ಸೋಽನ್ಯಂ ಹೀಕ್ಷಿತುಮರ್ಹತಿ ॥

೨೭–೨೯. ಶಾಂತಿಯು (ಯಾವ) ಪ್ರಯತ್ನವೂ ಇಲ್ಲದೆ ಸಿದ್ಧವಾಗಿರುವದರಿಂದ[1] ಸಾಧನವನ್ನು ಹೇಳುವದು ವ್ಯರ್ಥವು. ಏಕೆಂದರೆ ಒಂದೊಂದು (ವಿಜ್ಞಾನದಿಂದಲೂ) ಶಾಂತಿಯು ಸಮಾಪ್ತವಾಗಿರುವದರಿಂದ ಅದಕ್ಕೆ ಮತ್ತೊಂದರ ಬಯಕೆಯಿರುವದಿಲ್ಲ. ತನಗಿಂತ ಬೇರೆಯಾದದ್ದರ ಬಯಕೆ ಇದೆ ಎಂದರೆ ಮತ್ತೊಂದು ವಿಜ್ಞಾನಸಂತಾನದ ಬಯಕೆಯಿದೆಯೆಂದೂ ಆಗಲಿ[2] ! ಎಲ್ಲಾ ವಸ್ತುಗಳೂ ಕ್ಷಣಿಕವಾಗಿರುವಲ್ಲಿ (ಬಯಕೆ) ಏತರಲ್ಲಿ? ಆ ರೀತಿಯಿಂದಲೂ ಮತ್ತೊಂದರ ಬಯಕೆ ಇಲ್ಲವೆಂದೇ ಹೇಳಬೇಕು[3]. ಒಂದೇ ಕಾಲದಲ್ಲಿ ಉಂಟಾಗಿ ಒಂದಕ್ಕೊಂದು ಸಂಬಂಧಪಟ್ಟಿರುವ (ಎರಡು)ರಲ್ಲಿ ಯಾವದು ಮತ್ತೊಂದರ ಸಂಬಂಧದ ಸಂಸ್ಕೃತವಾಗಿರುವದೋ ಅದೇ ಅಲ್ಲವೆ, ಮತ್ತೊಂದನ್ನು ಬಯಸಬಹುದು[4] ?

---

1. ವಿಜ್ಞಾನವು ಕ್ಷಣಿಕವಾಗಿರುವದರಿಂದ ತಾನೇ ನಾಶವನ್ನು ಹೊಂದುವದರಿಂದ ಎಂದರ್ಥ.

2. ತೃಷ್ಣಾತ್ಯಾಗರೂಪವಾದ ಒಂದು ವಿಜ್ಞಾನಕ್ಕೆ ಸಾಧನಾನುಷ್ಠಾನರೂಪವಾದ ಮತ್ತೊಂದು ವಿಜ್ಞಾನವು ಬೇಕು –ಎನ್ನುವದು ಸರಿಯಲ್ಲ; ಏಕೆಂದರೆ ಬೌದ್ಧಮತದಲ್ಲಿ ಎಲ್ಲೂ ಕ್ಷಣಿಕವಾಗಿರುವದರಿಂದ ಅವು ಒಂದೇ ಕಾಲದಲ್ಲಿರಲಾರವು. ಒಂದು ವಿಜ್ಞಾನದ ಸಂತಾನವು ಮತ್ತೊಂದರ ಸಂತಾನವನ್ನು ಬಯಸಬಹುದು; ವಿಜ್ಞಾನವು ಕ್ಷಣಿಕವಾದರೂ ಸಂತಾನವು ಕ್ಷಣಿಕವಲ್ಲ –ಎನ್ನುವದಾದರೆ ಬೌದ್ಧಮತದಲ್ಲಿ ಇಂಥ ಕಾರ್ಯಕ್ಕೆ ಇಂಥ ಕಾರಣವೇ ಬೇಕೆನ್ನುವ ನಿಯಮಕ್ಕೆ ಅವಕಾಶವಿಲ್ಲ. ಮೊಸರಾಗುವದಕ್ಕೆ ಹಾಲೇ ಬೇಕು, ಮರಳು ಬೀಡ – ಎಂಬ ನಿಯಮವು ಏಕೆ ? ಮರಳೆಂಬ ಮತ್ತೊಂದು ವಿಜ್ಞಾನಸಂತಾನವು ಏತಕ್ಕೆ ಕಾರಣವಾಗಬಾರದು ? –ಎಂಬ ಪ್ರಶ್ನೆಗೆ ಬೌದ್ಧರಲ್ಲಿ ಉತ್ತರವಿಲ್ಲ ಎಂದರ್ಥ.

3. ಒಂದರೊಡನೆ ಸಂಬಂಧವಾಗುವದರೊಳಗೇ ಮತ್ತೊಂದು ನಾಶವಾಗುವದರಿಂದ ಒಂದರ ಮತ್ತೊಂದರ ಬಯಕೆ ಇದೆ ಎನ್ನುವದಕ್ಕೇ ಅವಕಾಶವಿಲ್ಲ ಎಂದರ್ಥ.

4. ಆದರೆ ಕ್ಷಣಿಕವಿಜ್ಞಾನವಾದದಲ್ಲಿ ಯಾವ ಎರಡಕ್ಕೂ ಸಂಬಂಧವಿರುವ ಹಾಗಿಲ್ಲ.

ಮೃಷಾಧ್ಯಾಸಸ್ತು ಯತ್ರ ಸ್ಯಾತ್ತನ್ನಾಶಸ್ತತ್ರ ನೋ ಮತಃ ।
ಸರ್ವನಾಶೋ ಭವೇದ್ಯಸ್ಯ ಮೋಕ್ಷಃ ಕಸ್ಯ ಫಲಂ ವದ ॥ ೩೦ ॥

೩೦. ಮಿಥ್ಯಾರೂಪವಾದ ಅಧ್ಯಾಸವು ಯಾವದರಲ್ಲಿ ಆಗಿರುವದೋ ಅದರಲ್ಲಿ ಅದರ ನಾಶವಾಗಬೇಕೆಂಬುದು ನಮ್ಮ ಮತವು[1]. ಯಾವನ ಮತದಲ್ಲಿ ಎಲ್ಲವೂ ನಾಶವಾಗುವದೋ ಅವನ ಮತದಲ್ಲಿ ಮೋಕ್ಷವು ಯಾರಿಗೆ ಫಲವು[2] ? ಹೇಳು.

ಆತ್ಮನು ಇಲ್ಲವೆಂಬುದು ಸರಿಯಲ್ಲ

ಅಸ್ತಿ ತಾವತ್ ಸ್ವಯಂ ನಾಮ ಜ್ಞಾನಂ ವಾತ್ಮಾನ್ಯದೇವ ವಾ ।
ಭಾವಾಭಾವಜ್ಞತಸ್ತಸ್ಯ ನಾಭಾವಸ್ತ್ವಧಿಗಮ್ಯತೇ ॥ ೩೧ ॥

೩೧. ಆತ್ಮನು ಜ್ಞಾನರೂಪನಾಗಲಿ ಮತ್ತೊಂದೇ ಆಗಲಿ[3], ತಾನು ಎಂಬವನೊಬ್ಬನಂತೂ ಇರುತ್ತಾನೆ. ಇರುವದು, ಇಲ್ಲದ್ದು– ಎರಡನ್ನೂ ಅರಿಯುವದರಿಂದ ಅವನು ಇಲ್ಲವೆಂದೆಣಿಸುವದಕ್ಕೆ ಆಗುವದಿಲ್ಲ[4].

ಯೇನಾಧಿಗಮ್ಯತೇಽಭಾವಸ್ತತ್ ಸತ್ಸ್ಯಾತ್ ತನ್ನ ಚೇದ್ ಭವೇತ್ ।
ಭಾವಾಭಾವಾನಭಿಜ್ಞತ್ವಂ ಲೋಕಸ್ಯ ಸ್ಯಾನ್ನ ಚೇಷ್ಯತೇ ॥ ೩೨ ॥

೩೨. ಅಭಾವವು ಏತರಿಂದ ಅರಿಯಲ್ಪಡುತ್ತದೆಯೋ ಅದು ಇರಬೇಕು. ಅದು ಇಲ್ಲದಿದ್ದರೆ ಜನರು ಭಾವಾಭಾವಗಳನ್ನು ಅರಿಯದೆ ಇರಬೇಕಾಗುವದು. ಇದು (ಯಾರಿಗೂ) ಇಷ್ಟವಿಲ್ಲ.

ಸದಸತ್ಸದಸಚ್ಚೇತಿ ವಿಕಲ್ಪಾತ್ ಪ್ರಾಗ್ಯದಿಷ್ಯತೇ ।
ತದದ್ವೈತಂ ಸಮತ್ವಾತ್ತು ನಿತ್ಯಂ ಚಾನ್ಯದ್ವಿಕಲ್ಪಿತಾತ್ ॥೩೩॥

---

1. ನಾಶವಾಗುವ ತೋರಿಕೆಯ ವಸ್ತು, ಅದಕ್ಕೆ ಆಧಾರವಾಗಿರುವ ಸತ್ಯವಸ್ತುವಿನಲ್ಲಿ ನಾಶವಾಗುತ್ತದೆ– ಎಂಬುದು ವೇದಾಂತಿಗಳ ಮತ; ಆದ್ದರಿಂದ ಅಧ್ಯಸ್ತವಾದ ಬಂಧವು ನಾಶವಾಗಬಹುದು.

2. ಎಲ್ಲವೂ ಕ್ಷಣಿಕವು ಅಥವಾ ಶೂನ್ಯವು ಎಂಬ ಮತದಲ್ಲಿ ಬದ್ಧನೂ ಕ್ಷಣಿಕನು, ಅಥವಾ ಶೂನ್ಯವು ಎಂದಾಗುವದು; ಆದ್ದರಿಂದ ಬಂಧಮೋಕ್ಷಗಳ ವ್ಯವಸ್ಥೆಯಿಲ್ಲದೆಹೋಗುವದು.

3. ಜ್ಞಾನಗುಣವುಳ್ಳವನೇ ಆಗಲಿ ಎಂದರ್ಥ.

4. ಅರಿಯುವದು ಜ್ಞಾನಸ್ವರೂಪನಾದ ಆತ್ಮನಿಗೂ ಜ್ಞಾತೃವಾದ ಆತ್ಮನಿಗೂ ಸಮಾನವು; ಅರಿವು ಆತ್ಮನ ಅಸ್ತಿತ್ವಕ್ಕೆ ಹೇತುವೆಂಬುದು ಎರಡಕ್ಕೂ ಸಮಾನ. ಜ್ಞಾತೃವಾದ ಆತ್ಮನು ಕಲ್ಪಿತನೆಂಬ ಸಿದ್ಧಾಂತವನ್ನನುಸರಿಸಿ ಇಲ್ಲಿ ಎರಡನ್ನೂ ಹೇಳಿದೆ.

೩೫. ಇದೆ, ಇಲ್ಲ, ಇದ್ದೂ ಇಲ್ಲ– ಎಂಬ ವಿಕಲ್ಪಕ್ಕಿಂತ ಮೊದಲು ಯಾವದನ್ನು ಒಪ್ಪುವೆವೋ[1] ಅದು ಅದ್ವೈತವಾಗಿರಬೇಕು, ನಿತ್ಯವಾಗಿರಬೇಕು, ವಿಕಲ್ಪಿತವಾಗಿರುವದಕ್ಕಿಂತ ವಿಲಕ್ಷಣವಾಗಿರಬೇಕು; ಏಕೆಂದರೆ ಅದು ಸನು ವಾಗಿರುತ್ತದೆ[2].

ವಿಕಲ್ಪೋದ್ಭವತೋಽಸತ್ತ್ವಂ ಸ್ವಪ್ನದೃಶ್ಯವದಿಷ್ಯತಾಮ್ ।
ದ್ವೈತಸ್ಯ ಸ್ಯಾಗಸತ್ತ್ವಚ್ಚ ಸದಸತ್ತ್ವಾದಿಕಲ್ಪನಾತ್ ॥ ೩೪ ॥
ವಾಚಾರಂಭಣಶಾಸ್ತ್ರಾಚ್ಚ ವಿಕಾರಾಣಾಂ ಹ್ಯಭಾವತಾ ।
ಮೃತ್ಯೋಃ ಸ ಮೃತ್ಯುಮಿತ್ಯಾದೇರ್ಮಮ ಮಾಯೇತಿ ಚ ಸ್ಮೃತೇಃ ॥
ವಿಶುದ್ಧಿಶ್ಚಾತ ಏವಾಸ್ಯ ವಿಕಲ್ಪಾಚ್ಚ ವಿಲಕ್ಷಣಃ ।
ಉಪಾದೇಯೋ ನ ಹೇಯೋಽತ ಆತ್ಮಾ ನಾನ್ಯೈರಕಲ್ಪಿತಃ ॥ ೩೬ ॥

೩೪–೩೬. ದ್ವೈತವು ವಿಕಲ್ಪವಾಗಿ ಹುಟ್ಟುವದರಿಂದಲೂ[3], ಇದೆ, ಇಲ್ಲ- ಎಂದು ಕಲ್ಪಿಸುವ ಮೊದಲು ಇಲ್ಲದ್ದರಿಂದಲೂ ಸ್ವಪ್ನದ ತೋರಿಕೆಯಂತೆ ಅದು ಮಿಥ್ಯೆಯೇ ಎಂದು ಒಪ್ಪಬೇಕು[4]. ವಾಚಾರಂಭಣಹೆಂದು ಶಾಸ್ತ್ರದಲ್ಲಿ (ಛಾಂ.೬–೧–೪) ಹೇಳಿರುವದರಿಂದಲೂ "(ಯಾವನು ನಾನಾತ್ವವಿರುವಂತೆ ಕಾಣುತ್ತಾನೋ) ಅವನು ಮೃತ್ಯುವಿನ ಮೇಲೆ ಮೃತ್ಯುವನ್ನು ಸೇರುತ್ತಾನೆ" (ಬೃ. ೪–೪–೧೯) ಎಂದು ಮುಂತಾದ (ಶ್ರುತಿವಚನವಿರುವದರಿಂದಲೂ), "ನನ್ನ ಮಾಯೆಯು ದಾಟಲಶಕ್ಯವಾದದ್ದು" .(ಗೀ. ೭–೧೪) ಎಂಬ ಸ್ಮೃತಿಯಿಂದಲೂ ಕಾರ್ಯಗಳು ಇಲ್ಲವೆಂದು (ಏರ್ಪಡುತ್ತದೆ)[5]. ಆದ್ದರಿಂದಲೇ ಈ ಆತ್ಮನು

---

1. ವಿಕಲ್ಪಗಳು ಅಸ್ಪದವಿಲ್ಲವೆ ಆಗಲಾರವಾದ್ದರಿಂದ ಆ ಅಸ್ಪದರೂಪವಾದ ವಸ್ತು ಇದೆಯೆಂದು ಒಪ್ಪಬೇಕು – ಎಂಬುದು ಸಿದ್ಧಾಂತ.

2. ಎಲ್ಲಾ ವಿಕಲ್ಪಗಳಿಗೂ ಆಧಾರವಾದದ್ದನ್ನು ಮೂರ್ಪಡಿಸುವ ದ್ವಿತೀಯವಸ್ತು ವಿಲ್ಲದ್ದರಿಂದ ಅದು ಅದ್ವೈತವು, ನಿತ್ಯವು; ಆದ್ದರಿಂದ ಅನಿತ್ಯವಾದ ದ್ವೈತಕ್ಕಿಂತ ವಿಲಕ್ಷಣವು.

3. ನಿಜವಾಗಿ ಹುಟ್ಟುವದಿಲ್ಲ, ಅದು ಮಾಯೆಯಿಂದಾವ ಹುಸಿತೋರಿಕೆ.

4. ಸ್ವಪ್ನದ ತೋರಿಕೆಗಳು ತಾವು ಹುಟ್ಟುವದಕ್ಕೆ ಮೊದಲೂ ಆಮೇಲೂ ಇರುವ ದಿಲ್ಲ. ದ್ವೈತವೆಲ್ಲ ಹಾಗೆಯೇ.

5. ಈ ವಚನಗಳೆಲ್ಲ ದ್ವೈತವು ಹುಸಿತೋರಿಕೆ ಎಂದು ಹೇಳುತ್ತವೆ. ಇವುಗಳಿಗೆ ಬೆಂಬಲವಾದ ಯುಕ್ತಿಯನ್ನು ಹೇಳಿದ್ದಾಗಿದೆ.

ಪರಿಶುದ್ಧನೆಂದೂ (ಸಿದ್ಧವಾಗುತ್ತದೆ); ವಿಕಲ್ಪಕ್ಕಿಂತ ವಿಲಕ್ಷಣನಾಗಿರುವದರಿಂದ ಮತ್ತೊಬ್ಬರು ತೆಗೆದುಕೊಳ್ಳತಕ್ಕವನೂ ಅಲ್ಲ, ಬಿಡತಕ್ಕವನೂ ಅಲ್ಲ.

ಆತ್ಮನಿಗೆ ಅಜ್ಞಾನವಿಲ್ಲ

ಅಪ್ರಕಾಶೋ ಯಥಾದಿತ್ಯೇ ನಾಸ್ತಿ ಜ್ಯೋತಿಃಸ್ವಭಾವತಃ ।
ನಿತ್ಯಬೋಧಸ್ವರೂಪತ್ವಾನ್ನಾಜ್ಞಾನಂ ತದ್ವದಾತ್ಮನಿ ॥ ೩೭ ॥
ತಥಾ ವಿಕ್ರಿಯರೂಪತ್ವಾನ್ನಾವಸ್ಥಾನ್ತರವಾನಾತ್ಮನಃ ।
ಅವಸ್ಥಾನ್ತರವತ್ತ್ವೇ ಹಿ ನಾಶೋಽಸ್ಯ ಸ್ಯಾನ್ನ ಸಂಶಯಃ ॥ ೩೮ ॥

೩೭-೩೮. ಸೂರ್ಯನು ಪ್ರಕಾಶಸ್ವರೂಪನೇ ಆಗಿರುವದರಿಂದ ಹೇಗೆ (ಅವನಲ್ಲಿ) ಅಪ್ರಕಾಶವೆಂಬುದಿರುವದಿಲ್ಲವೋ, ಅದರಂತೆ ನಿತ್ಯಚೈತನ್ಯಸ್ವರೂಪನಾಗಿರುವದರಿಂದ ಆತ್ಮನಲ್ಲಿ ಅಜ್ಞಾನವೆಂಬುದು ಇರುವದಿಲ್ಲ[1]. ಇದರಂತೆ ಆತ್ಮನು ಯಾವ ವಿಕಾರವೂ ಇಲ್ಲದವನಾದ್ದರಿಂದ (ಅವನಿಗೆ) ಮತ್ತೊಂದು ಅವಸ್ಥೆಯುಂಟೆಂದರೆ ಅವನಿಗೆ ನಾಶವೇ ಆಗಬೇಕಾಗುವದು, (ಇದರಲ್ಲಿ) ಸಂಶಯವಿಲ್ಲ[2].

ಮೋಕ್ಷವು ನಿತ್ಯಸಿದ್ಧವಾದ ಆತ್ಮಸ್ವರೂಪವೇ

ಮೋಕ್ಷೋಽವಸ್ಥಾನ್ತರಂ ಯಸ್ಯ ಕೃತಕಃ ಸ ಚಲೋ ಹ್ಯತಃ ।
ನ ಸಂಯೋಗೋ ವಿಯೋಗೋ ವಾ ಮೋಕ್ಷೋ ಯುಕ್ತಃ ಕಥಂಚನ ॥
ಸಂಯೋಗಸ್ಯಾಪ್ಯನಿತ್ಯತ್ವಾದ್ವಿಯೋಗಸ್ಯ ತಥೈವ ಚ ।
ಗಮನಾಗಮನೇ ಚೈವ ಸ್ವರೂಪಂ ತು ನ ಹೀಯತೇ ॥ ೪೦ ॥

೩೯-೪೦. ಯಾವನ (ಮತದ)ಲ್ಲಿ ಮೋಕ್ಷವೆಂಬುದು ಮತ್ತೊಂದು ಅವಸ್ಥೆಯೋ (ಅವನ ಮತದಲ್ಲಿ) ಅದು ಕೃತಕವಾಗಿಯೂ ಆದ್ದರಿಂದ ಅನಿತ್ಯವಾಗಿಯೂ (ಇರಬೇಕಾಗುತ್ತದೆ)[3]. ಮೋಕ್ಷವು (ಯಾವದಾದರೊಂದರ)

---

1. ಬಂಧವು ಅಜ್ಞಾನಕೃತವೆಂದರೆ ಜ್ಞಾನಾಜ್ಞಾನಗಳಿಂದ ಆತ್ಮನಲ್ಲಿ ವಿಶೇಷಗಳುಂಟಾಗುವದಿಲ್ಲವೆ? -ಎಂಬವರಿಗೆ ಇದು ಉತ್ತರ. ಅಜ್ಞಾನವು ಆತ್ಮನ ಧರ್ಮವೆಂಬುದೂ ಅಜ್ಞಾನವೇ; ಏಕೆಂದರೆ ಅ ಜ್ಞಾ ನ ವ ನ್ನು ಆತ್ಮನು ಬೆಳಗುತ್ತಿರುತ್ತಾನೆ. ಬೃ. ಭಾ. ೪-೪-೬, ಗೀ. ಭಾ. ೧೩-೨.

2. ಆತ್ಮನಿಗೆ ಅಜ್ಞಾನಾವಸ್ಥೆ, ಜ್ಞಾನಾವಸ್ಥೆ -ಎಂಬ ಎರಡು ಅವಸ್ಥೆಗಳನ್ನು ಕಲ್ಪಿಸಿದರೆ ಆತ್ಮನೇ ವಿಕಾರಿಯು, ನಾಶವುಳ್ಳವನು- ಎಂದಾಗುತ್ತದೆ.

3. ಮೋಕ್ಷವು ಅವಸ್ಥಾಂತರವಲ್ಲವೆಂಬ ವಿಷಯಕ್ಕೆ ಸೂ. ಭಾ. (೪-೩-೧೪) ನ್ನು ನೋಡಿ.

ಸಂಯೋಗವೆಂದಾಗಲಿ ವಿಯೋಗವೆಂದಾಗಲಿ ಹೇಳುವದು ಸರಿಯಲ್ಲ; ಏಕೆಂದರೆ ಸಂಯೋಗವೂ ವಿಯೋಗವೂ ಅನಿತ್ಯವಾಗಿರುತ್ತವೆ[1]. ಹೋಗುವದು ಅಥವಾ ಬರುವದು – ಇವೆರಡರಲ್ಲಿಯೂ ಸ್ವರೂಪವು ಬಿಟ್ಟುಹೋಗಲಾರದು[2].

ಸ್ವರೂಪಸ್ಯಾನಿಮಿತ್ತತ್ವಾತ್ ಸನಿಮಿತ್ತಾ ಹಿ ಚಾಪರೇ ।
ಅನುಪಾತ್ತಂ ಸ್ವರೂಪಂ ಹಿ ಸ್ವೇನಾತ್ಯಕ್ತಂ ತಥೈವ ಚ ॥ ೪೧ ॥
ಸ್ವರೂಪತ್ವಾನ್ನ ಸರ್ವಸ್ಯ ತ್ಯಕ್ತುಂ ಶಕ್ಯೋ ಹ್ಯನನ್ಯತಃ ।
ಗೃಹೀತುಂ ವಾ ತತೋ ನಿತ್ಯೋ [ವಿಷಯತ್ವಾತ್ ಪೃಥಕ್ತ್ವತಃ][3] ॥೪೨॥

೪೧–೪೨. ಏಕೆಂದರೆ ಸ್ವರೂಪವು ನಿಮಿತ್ತದಿಂದಾಗಿರುವದಿಲ್ಲ, ನಿಮಿತ್ತದಿಂದಾಗಿದ್ದರೆ ಬೇರೆಯಾಗಿರುತ್ತವೆ. ಸ್ವರೂಪವೆಂಬುದು ತಾನು ತೆಗೆದುಕೊಂಡದ್ದೂ ಅಲ್ಲ, ಬಿಟ್ಟದ್ದೂ ಅಲ್ಲ[4]. ಆದ್ದರಿಂದ ನಿತ್ಯವಾಗಿರುವ (ಆತ್ಮನು) ಸ್ವರೂಪವಾಗಿರುವದರಿಂದಲೇ (ತನಗಿಂತ) ಬೇರೆಯಲ್ಲವಾಗಿ ಯಾರೊಬ್ಬರೂ ಬಿಡುವದಕ್ಕಾಗಲಿ ತೆಗೆದುಕೊಳ್ಳುವದಕ್ಕಾಗಲಿ ಆಗುವದಿಲ್ಲ[5].

.... **ವಿಷಯತ್ವಾತ್ ಪೃಥಕ್ತ್ವತಃ ।**
ಆತ್ಮಾರ್ಥತ್ವಾಚ್ಚ ಸರ್ವಸ್ಯ ನಿತ್ಯ ಆತ್ಮೈವ ಕೇವಲಃ ।
ತ್ಯಜೇತ್ ತಸ್ಮಾತ್ ಕ್ರಿಯಾಃ ಸರ್ವಾಃ ಸಾಧನೈಃ ಸಹ ಮೋಕ್ಷವಿತ್ ॥

೪೩. ಎಲ್ಲವೂ ವಿಷಯವಾಗಿರುವದರಿಂದಲೂ ಬೇರೆಯಾಗಿರುವದರಿಂದಲೂ ಆತ್ಮನಿಗಾಗಿಯೇ ಇರುವದರಿಂದಲೂ[6] ಆತ್ಮನೊಬ್ಬನೇ ನಿತ್ಯನು. ಆದ್ದರಿಂದ **ಮೋಕ್ಷಸ್ವರೂಪವನ್ನು** ಬಲ್ಲವನು[7] ಎಲ್ಲಾ ಕರ್ಮಗಳನ್ನೂ ಅವುಗಳ **ಸಾಧನಗಳೊಡನೆ** ಬಿಟ್ಟುಬಿಡಬೇಕು.

---

1. ಸಂಯೋಗವು ವಿಯೋಗವಾಗುವವರೆಗೆ ಇರುತ್ತದೆ, ವಿಯೋಗವೂ ಸಂಯೋಗವಾಗುವವರೆಗೆ ಇರುತ್ತದೆ. ಆದ್ದರಿಂದ ಯಾವದಾದರೊಂದು ಗುಣದ ಸಂಯೋಗದಿಂದ ಅಥವಾ ದೋಷದ ವಿಯೋಗದಿಂದ ಮುಕ್ತಿಯಾಗಬೇಕೆನ್ನುವದು ಸರಿಯಲ್ಲ; ಏಕೆಂದರೆ ಆಗ ಅದು ಅನಿತ್ಯವೆಂದಾಗುವದು. ಸೂ. ಭಾ. ೧-೧-೪.

2. ಬರುವದನ್ನೂ ಹೋಗುವದನ್ನೂ ಆತ್ಮನು ನೋಡುತ್ತಿರುವದರಿಂದ ನಿತ್ಯನು.

3. ಈ ಪಾದವು ಮುಂದಿನ ವಾಕ್ಯಕ್ಕೆ ಅನ್ವಯಿಸುತ್ತದೆ. 'ಅವಿಷಯತ್ವಾತ್' ಎಂದು ಪದಚ್ಛೇದಮಾಡಿ ವ್ಯಾಖ್ಯಾನಕಾರರು ಆತ್ಮನಿಗೇ ಹೊಂದಿಸುವದಕ್ಕೆ ಪ್ರಯತ್ನಿಸಿರುತ್ತಾರೆ; 'ಪೃಥಕ್ತ್ವತಃ' ಎಂಬ ವಿಶೇಷಣವನ್ನು ಅವರು ಕೈಬಿಡಬೇಕಾಗಿ ಬಂದಿದೆ.

4. ತೆಗೆದುಕೊಳ್ಳುವದು ಅಥವಾ ಬಿಡುವದು ಸ್ವರೂಪವೇ ಅಲ್ಲ.

5. ಮತ್ತೊಂದನ್ನಲ್ಲವೆ ತೆಗೆದುಕೊಳ್ಳಬಹುದು; ಅಥವಾ ಬಿಡಬಹುದು?

6. ವಿಷಯವಾಗಿ, ತನಗಿಂತ ಬೇರೆಯಾಗಿ, ತನ್ನ ಪ್ರಯೋಜನಕ್ಕಾಗಿ ಇರುವದು ತನ್ನಷ್ಟು ನಿತ್ಯವಾಗಲಾರವೆಂದು ಭಾವ.

7. ಮೋಕ್ಷವು ನಿತ್ಯಸಿದ್ಧವಾಗಿರಬೇಕೆಂಬುದನ್ನು ಬಲ್ಲವನು.

ಆತ್ಮಲಾಭಃ ಪರೋ ಲಾಭ ಇತಿ ಶಾಸ್ತ್ರೋಪಪತ್ತಯಃ ।
ಅಲಾಭೋಽನ್ಯಾತ್ಮಲಾಭಸ್ತು ತ್ಯಜೇತ್ತಸ್ಮಾದನಾತ್ಮತಾಮ್ ॥ ೪೪ ॥

೪೪. ಆತ್ಮಲಾಭವೇ ಹೆಚ್ಚಿನ ಲಾಭವೆಂದು ಶಾಸ್ತ್ರಯುಕ್ತಿಗಳು ತಿಳಿಸುತ್ತವೆ; ಮತ್ತೊಂದು ರೂಪದ ಲಾಭವು ಲಾಭವೇ ಅಲ್ಲ[1]. ಆದ್ದರಿಂದ ಅನಾತ್ಮಸ್ವರೂಪ(ಚಿಂತೆಯನ್ನು) ಬಿಡಬೇಕು[2].

ಸಾಂಖ್ಯಶಾಸ್ತ್ರದಂತೆ ಬಂಧಮೋಕ್ಷನ್ಯವಸ್ಥೆ ಇಲ್ಲ

ಗುಣಾನಾಂ ಸಮಭಾವಸ್ಯ ಭ್ರಂಶೋ ನ ಹ್ಯುಪಪದ್ಯತೇ ।
ಅವಿದ್ಯಾದೇಃ ಪ್ರಸುಪ್ತತ್ವಾನ್ನ ಚಾನ್ಯೋ ಹೇತುರುಚ್ಯತೇ ॥ ೪೫ ॥

೪೫. ಗುಣಗಳ ಸಮತೆಯು ತಪ್ಪುವದೆಂಬುದು ಹೊಂದುವದೇ ಇಲ್ಲ. ಏಕೆಂದರೆ ಅವಿದ್ಯೆಯೇ ಮುಂತಾದದ್ದು ನಿದ್ರಿಸಿರುತ್ತದೆ[3]; ಸಾಂಖ್ಯಸಿದ್ಧಾಂತದಲ್ಲಿ ಮತ್ತೊಂದು ಹೇತುವನ್ನು ಹೇಳಿಯೂ ಇಲ್ಲ[4].

ಇತರೇತರಹೇತುತ್ವೇ ಪ್ರವೃತ್ತಿಃ ಸ್ಯಾತ್ ಸದಾ ನ ವಾ ।
ನಿಯಮೋ ನ ಪ್ರವೃತ್ತೀನಾಂ ಗುಣೇಷ್ವಾತ್ಮನಿ ವಾ ಭವೇತ್ ॥ ೪೬ ॥

೪೬. ಒಂದಕ್ಕೊಂದು ಕಾರಣವೆಂದರೆ ಯಾವಾಗಲೂ ಪ್ರವೃತ್ತಿಯಾಗಬೇಕು, ಅಥವಾ ಆಗಬಾರದು. ಗುಣಗಳಲ್ಲಾಗಲಿ ಆತ್ಮನಲ್ಲಾಗಲಿ ಪ್ರವೃತ್ತಿಗಳಿಗೆ ನಿಯಮವಿರಲಾರದು[5].

---

1. ಅ. ಥ. ಸೂ. ೧-೨೨-೨, ಛಾಂ. ೮-೬-೭ ಮುಂತಾದ ಶಾಸ್ತ್ರಗಳು ಮಿಕ್ಕದ್ದೆಲ್ಲವೂ ಅನಿತ್ಯವಾದ್ದರಿಂದ ಅದರ ಲಾಭವು ನಿಜವಾದ ಲಾಭವಲ್ಲವೆಂಬ ಯುಕ್ತಿ.

2. ಏಕೆಂದರೆ ಕ್ಷಯ, ತನಗಿಂತ ಅತಿಶಯವುಳ್ಳದ್ದಾಗಿರುವಿಕೆ- ಇವುಗಳ ನಿಮಿತ್ತದಿಂದ ಅದು ದುಃಖಕ್ಕೆ ಕಾರಣವಾಗಿರುತ್ತದೆ.

3. ಆತ್ಮವಿಚಾರವನ್ನೇ ಮಾಡಬೇಕು.

4. ಸತ್ತ್ವ, ರಜಸ್ಸು, ತಮಸ್ಸು –ಎಂಬ ಗುಣಗಳ ಸಾಮ್ಯಾವಸ್ಥೆಯೇ ಪ್ರಧಾನವು; ಅದರ ಸಾಮ್ಯಾವಸ್ಥೆಯು ತಪ್ಪಿದರೆ ಮಹದಾದಿಪ್ರಪಂಚದ ಸೃಷ್ಟಿಯಾಗುತ್ತದೆ ಎಂಬುದು ಸಾಂಖ್ಯರ ಪ್ರಕ್ರಿಯೆ. ಸೃಷ್ಟಿಕಾಲದಲ್ಲಿ ನಿಮಿತ್ತವಾಗಬಹುದಾದ ಅವಿದ್ಯೆ, ಧರ್ಮಾಧರ್ಮಗಳು– ಯಾವವೂ ಪ್ರಲಯದಲ್ಲಿ ಕೆಲಸಮಾಡುತ್ತಿರುವದಿಲ್ಲವಾದ್ದರಿಂದ ಆಗ ಸಾಮ್ಯಾವಸ್ಥೆಯನ್ನು ತಪ್ಪಿಸುವ ಹೇತು ಯಾವದು? –ಎಂದು ಆಕ್ಷೇಪ.

5. ಪುರುಷನು ಉದಾಸೀನನು, ಗುಣಗಳು ಅಚೇತನ. ತೊಡಗುವದು ಯಾವದು?

ವಿಶೇಷೋ ಮುಕ್ತಬದ್ಧಾನಾಂ ತಾದರ್ಥ್ಯೇ ನ ಚ ಯುಜ್ಯತೇ |
ಅರ್ಥಾರ್ಥಿನೋಸ್ತ್ವಸಂಬನ್ಧೋ ನಾರ್ಥೀ ಜ್ಞೋ ನೇತರೋಽಪಿ ವಾ ॥

೪೭. (ಪ್ರಧಾನವು) ಆ (ಆತ್ಮನಿ)ಗಾಗಿ ಕೆಲಸಮಾಡುವದೆಂಬ (ಪಕ್ಷ) ದಲ್ಲಿ ಮುಕ್ತರಿಗೂ ಬದ್ಧರಿಗೂ ವಿಶೇಷವಿರುವದೆಂಬುದು ಹೊಂದುವದಿಲ್ಲ[1]. ಅರ್ಥ, ಅರ್ಥಿ –ಇವುಗಳಿಗೆ ಸಂಬಂಧವೇ ಇಲ್ಲ; ಏಕೆಂದರೆ ಆತ್ಮನು ಅರ್ಥಿಯಲ್ಲ, ಇನ್ನೊಂದೂ ಅಲ್ಲ[2].

ಪ್ರಧಾನಸ್ಯ ಚ ಪಾರಾರ್ಥ್ಯಂ ಪುರುಷಸ್ಯಾವಿಕಾರತಃ |
ನ ಯುಕ್ತಂ ಸಾಙ್ಖ್ಯಶಾಸ್ತ್ರೇಽಪಿ ವಿಕಾರೇಽಪಿ ನ ಯುಜ್ಯತೇ ॥೪೮ ।
ಸಮ್ಬನ್ಧಾನುಪಪತ್ತೇಶ್ಚ ಪ್ರಕೃತೇಃ ಪುರುಷಸ್ಯ ಚ |
ಮಿಥೋಽಯುಕ್ತಂ ತದರ್ಥತ್ವಂ ಪ್ರಧಾನಸ್ಯಾಚಿತಿತ್ವತಃ ॥ ೪೯ ॥

೪೮–೪೯. ಸಾಂಖ್ಯಶಾಸ್ತ್ರದಲ್ಲಿಯೂ ಪುರುಷನು ವಿಕಾರರಹಿತನಾಗಿರುವ ದರಿಂದ ಪುರುಷನಿಗಾಗಿ ಪ್ರಧಾನವು ತೊಡಗುವದೆಂಬುದು ಹೊಂದುವದಿಲ್ಲ. ಪುರುಷನು ವಿಕಾರವನ್ನು ಹೊಂದುವನೆಂದರೂ (ಪ್ರಧಾನವು ಮತ್ತೊಬ್ಬರಿಗಾಗಿ ತೊಡಗುವದೆಂಬುದು) ಹೊಂದುವದಿಲ್ಲ. ಏಕೇದರೆ ಪ್ರಧಾನಕ್ಕೂ ಪುರುಷನಿಗೂ ಒಂದಕ್ಕೊಂದಕ್ಕೆ ಸಂಬಂಧವು ಹೊಂದುವದಿಲ್ಲವಾದ್ದರಿಂದಲೂ ಪ್ರಧಾನವು ಅಚೇತನವಾಗಿರುವದರಿಂದಲೂ ಆ (ಆತ್ಮ)ನಿಗಾಗಿ (ಕೆಲಸಮಾಡುತ್ತದೆ) ಎಂಬುದು ಸರಿಯಲ್ಲ[3].

ಕ್ರಿಯೋತ್ಪತ್ತ್ಯೌವಿನಾಶಿತ್ವಂ ಜ್ಞಾನವಾತ್ರೇ ಚ ಪೂರ್ವವತ್ |
ನಿರ್ನಿಮಿತ್ತೇ ತ್ವನಿರ್ಮೋಕ್ಷಃ ಪ್ರಧಾನಸ್ಯ ಪ್ರಸಜ್ಯತೇ ॥ ೫೦ ॥

---

1. ಪ್ರಧಾನವು ಪುರುಷನಿಗೆ ಬಂಧಮೋಕ್ಷಗಳನ್ನುಂಟುಮಾಡುವದಕ್ಕಾಗಿ ಪ್ರವರ್ತಿಸುತ್ತದೆ– ಎಂಬ ಸಾಂಖ್ಯಪ್ರಕ್ರಿಯೆಯನ್ನು ಇನ್ನು ಮುಂದಿನ ನಾಲ್ಕು ಶ್ಲೋಕಗಳಲ್ಲಿ ಖಂಡಿಸಿದೆ. ಪ್ರಧಾನವು ಅಚೇತನವಾದ್ದರಿಂದ ಬದ್ಧಮುಕ್ತವಿಶೇಷವು ಅದಕ್ಕೆ ತಿಳಿಯದು, ಪುರುಷನು ನಿರ್ವಿಶೇಷನಾದ್ದರಿಂದಲೂ ಬದ್ಧಮುಕ್ತವಿಶೇಷವಿಲ್ಲ.

2. ಪುರುಷಾರ್ಥವು ಉದಾಸೀನನಾದ ಪುರುಷನಿಗಲ್ಲ, ಪ್ರಧಾನಕ್ಕೂ ಅಲ್ಲ.

3. ಚೇತನಾಚೇತನಗಳಿಗೆ ಸಂಬಂಧವು ಚೇತನವಲ್ಲ, ಅಚೇತನವೂ ಅಲ್ಲ. ಅಚೇತನವಾದ ಪ್ರಧಾನವು ಚೇತನವಾದ ಪುರುಷನನ್ನು ಮುಟ್ಟದೆ ಅವನಿಗಾಗಿ ಕೆಲಸಮಾಡುತ್ತದೆ– ಎಂಬ ಮಾತಿಗೆ ಅರ್ಥವೂ ಇಲ್ಲ.

೫೨. (ಪುರುಷನಲ್ಲಿ) ವಿಕ್ರಿಯೆಯುಂಟಾದರೆ[1] (ಅವನು) ನಾಶವಾಗುವನೆಂದಾಗುತ್ತದೆ. (ಪುರುಷನು) ಜ್ಞಾನಮಾತ್ರಸ್ವರೂಪನೆಂದರೆ ಹಿಂದೆ (ಹೇಳಿರುವಂತೆ (ದೋಷವು ಬರುತ್ತದೆ)[2]. ಪ್ರಧಾನದ (ವ್ಯಾಪಾರಕ್ಕೆ) ನಿಮಿತ್ತವೇ ಇಲ್ಲವೆಂದರಂತೂ ಮೋಕ್ಷವೇ ಇಲ್ಲವೆಂದಾಗುತ್ತದೆ[3].

ವೈಶೇಷಿಕಮತದಂತೆಯೂ ಬಂಧಮೋಕ್ಷವ್ಯವಸ್ಥೆಯಿಲ್ಲ

ನ ಪ್ರಕಾಶ್ಯಂ ಯಥೋಷ್ಣತ್ವಂ ಜ್ಞಾನೇಸ್ಯೈವಂ ಸುಖಾದಯಃ ।
ಏಕನೀಡತ್ವತೋಽಗ್ರಾಹ್ಯಾಃ ಸ್ಯುಃ ಕಣಾದಾದಿವರ್ತ್ಮನಾಮ್ ॥ ೫೧ ॥

೫೧. ಕಣಾದನೇ ಮೊದಲಾದವರ ಮಾರ್ಗವನ್ನನುಸರಿಸುವವರ ಮತದಲ್ಲಿ ಜ್ಞಾನಸುಖಾದಿಗಳು) ಒಂದೇ ಆಶ್ರಯದಲ್ಲಿರುವದರಿಂದ[4] ಬಿಸಿಯು ಬೆಳಕಿಗೆ ವಿಷಯವಲ್ಲದಿರುವಂತೆ ಸುಖಾದಿಗಳು ಜ್ಞಾನದಿಂದ ಬೆಳಗುವಹಾಗಿಲ್ಲ[5].

ಯುಗಪತ್ಸಮವೇತತ್ವಂ ಸುಖವಿಜ್ಞಾನಯೋರಪಿ ।
ಮನೋಯೋಗೈಕಹೇತುತ್ವಾದಗ್ರಾಹ್ಯತ್ವಂ ಸುಖಸ್ಯ ಚ ॥ ೫೨ ॥

೫೨. ಸುಖಜ್ಞಾನಗಳೆರಡೂ ಒಂದೇ ಸಲಕ್ಕೆ ಸಮವೇತವಾಗಿವೆ ಎಂಬುದೂ (ಹೊಂದುವದಿಲ್ಲ)[6]. ಏಕೆಂದರೆ (ಇವೆರಡೂ) ಮನಸ್ಸಂಯೋಗ

---

1. ಪ್ರಧಾನವ್ಯಾಪಾರದಿಂದ ಭೋಕ್ತೃತ್ವವೆಂಬ ವಿಕಾರವುಂಟಾಗುವದಾದರೆ ಎಂದರ್ಥ.

2. ಪ್ರಧಾನವು ಪುರುಷನಿಗಾಗಿ ವ್ಯಾಪಾರಮಾಡುವದೆಂಬುದು ಸುಳ್ಳಾಗುತ್ತದೆ.

3. ಏಕೆಂದರೆ ಪುರುಷನಿಗೆ ಬಂಧನವನ್ನುಂಟುಮಾಡುವದಕ್ಕೆ ತೊಡಗಿದ್ದ ಪ್ರಧಾನವು ನಿಲ್ಲುವದಕ್ಕೆ ಕಾರಣವೇ ಇರುವದಿಲ್ಲ ಎಂದರ್ಥ. ಈ ಶ್ಲೋಕದಲ್ಲಿ ಸಾಂಖ್ಯಮತದ ಖಂಡನೆಯನ್ನು ಸಂಗ್ರಹಿಸಿರುತ್ತದೆ.

4. ಆತ್ಮನೇ ಜ್ಞಾನಕ್ಕೂ ಸುಖಾದಿಗಳಿಗೂ ಆಶ್ರಯವಾಗಿರುವದರಿಂದ ಎಂದರ್ಥ.

5. ಬೆಂಕಿಯ ಬಿಸಿಯನ್ನು ಬೆಳಕು ತೋರಿಸುವದಿಲ್ಲ ; ಬೆಳಕನ್ನು ಬಿಸಿಯು ಸುಡುವದೂ ಇಲ್ಲ. ಆತ್ಮನ ಗುಣವಾದ ಜ್ಞಾನವು ಆತ್ಮನ ಗುಣವಾದ ಸುಖಾದಿಗಳನ್ನು ತಿಳಿಸುತ್ತದೆ ಎಂಬುದು ಹೇಗೆ ಸರಿಯಾದೀತು ?

6. ಸುಖಜ್ಞಾನಗಳೆರಡೂ ಆತ್ಮನಲ್ಲಿ ಸಮವಾಯಸಂಬಂಧದಿಂದ ಇರುವದರಿಂದ ಆ ಸುಖಜ್ಞಾನಗಳು ನಿತ್ಯವಾಗಿರಬೇಕಾಗುವದು, ದುಃಖವು ಜ್ಞಾನನೊಡನೆ ಇರಬಾರದಾಗುವದು.

ವೆಂಬ ಒಂದೇ ಕಾರಣದಿಂದ (ಉಂಟಾಗುತ್ತವೆ)[1]. ಸುಖವೂ ಅಗ್ರಾಹ್ಯ ವಾಗುತ್ತದೆ[2].

ತಥಾನ್ಯೇಷಾಂ ಚ ಭಿನ್ನತ್ವಾದ್ಯುಗಪಜ್ಜನ್ಮ ನೇಷ್ಯತೇ ।
ಗುಣಾನಾಂ ಸಮವೇತತ್ವಂ ಜ್ಞಾನಂ ಚೇನ್ನ ವಿಶೇಷಣಾತ್ ॥ ೫೩ ॥

ಜ್ಞಾನೇನೈವ ವಿಶೇಷ್ಯತ್ವಾಜ್ಜ್ಞಾನಾಪ್ಯತ್ವಂ ಸ್ಮೃತೇಸ್ತಥಾ ।
ಸುಖಂ ಜ್ಞಾತಂ ಮಯೇತ್ಯೇವಂ ತವಾಜ್ಞಾನಾತ್ಮಕತ್ವತಃ ॥ ೫೪ ॥

೫೩-೫೪. ಇದರಂತೆ ಮಿಕ್ಕವುಗಳೂ[3] ಬೇರೆಬೇರೆಯಾಗಿರುವದರಿಂದ ಒಂದೇ ಕಾಲದಲ್ಲಿ ಹುಟ್ಟುವದನ್ನು ಒಪ್ಪಲಾಗುವದಿಲ್ಲ. ಗುಣಗಳು ಆತ್ಮನೊಡನೆ ಸಮವಾಯಸಂಬಂಧವನ್ನು ಪಡೆಯುವದೇ ಜ್ಞಾನವು ಎಂದರೆ (ಅದೂ ಸರಿ) ಯಲ್ಲ. ಏಕೆಂದರೆ ವಿಶೇಷಣವಾಗುತ್ತದೆ; (ಅವುಗಳು) ಜ್ಞಾನದಿಂದ ಕೂಡಿ ಯೇ (ಹುಟ್ಟುವ)ದರಿಂದಲೂ[4] 'ಸುಖವನ್ನು ನಾನು ಅರಿತೆನು' ಎಂದಿಂತು ಜ್ಞಾನವ್ಯಾಪ್ತವಾಗಿ ಸ್ಮೃತಿಯಾಗುವದರಿಂದಲೂ[5] ನಿನ್ನ ಮತದಲ್ಲಿ ಆತ್ಮನು ಜ್ಞಾನಾತ್ಮಕನಲ್ಲದ್ದರಿಂದಲೂ[6] (ಈ ಅಭಿಪ್ರಾಯವು ಸರಿಯಲ್ಲ).

ಸುಖಾದೇರ್ನಾತ್ಮಧರ್ಮತ್ವಮಾತ್ಮನಸ್ತೇಽವಿಕಾರತಃ ।
ಭೇದಾದನ್ಯಸ್ಯ ಕಸ್ಮಾನ್ನ ಮನಸೋ ವಾಽವಿಶೇಷತಃ ॥ ೫೫ ॥

---

1. ಆತ್ಮಮನಃಸಂಯೋಗದಿಂದ ಜ್ಞಾನಸುಖಗಳೆರಡೂ ಹುಟ್ಟುವದರೆ ಮಿಕ್ಕ ಗುಣಗಳು ಏಕೆ ಹುಟ್ಟುವದಿಲ್ಲ?

2. ಏಕೆಂದರೆ ಹಿಂದೆ ಹೇಳಿದಂತೆ ಜ್ಞಾನಸುಖಗಳೆರಡೂ ಒಂದೇ ಕಾಲದಲ್ಲಿ ಉಂಟಾಗಿರುವ ಆತ್ಮಗುಣಗಳು.

3. ಮಣಿಖ, ಇಚ್ಛೆ -ಮುಂತಾದ ಗುಣಗಳೂ.

4. ಸುಖವ ಸಂಬಂಧವೇ ಜ್ಞಾನವಲ್ಲ; ಏಕೆಂದರೆ ಸುಖವನ್ನು ಅರಿಯುತ್ತೇನೆ ಎಂದು ಜ್ಞಾನವ್ಯಾಪ್ತವಾಗಿಯೇ ಸುಖವು ತೋರುತ್ತದೆ.

5. ಸುಖವಿಲ್ಲದಾಗಲೂ ಜ್ಞಾನವಿರುವದರಿಂದಲೂ ಸುಖದ ಸಂಬಂಧವೇ ಜ್ಞಾನ ವಲ್ಲ.

6. ಆತ್ಮನು ಜ್ಞಾನಸ್ವರೂಪನೇ ಆಗಿದ್ದರೆ ಆತ್ಮನ ಸಂಬಂಧವೇ ಸುಖದ ಜ್ಞಾನ ವೆಂದು ಹೇಳಲೂ ಬಹುದಾಗಿತ್ತು.

೫೫. ಸುಖಾದಿಗಳು ಆತ್ಮನ ಧರ್ಮವಲ್ಲ, ಏಕೆಂದರೆ ನಿನ್ನ (ಮತದಲ್ಲಿ) ಆತ್ಮನು ಅವಿಕಾರಿಯಾಗಿರುತ್ತಾನೆ[1]. ಬೇರೆಬೇರೆಯಾಗಿರುವದರಿಂದ ಮತ್ತೊಬ್ಬನ ಧರ್ಮವೇಕಲ್ಲ[2] ? ಅಥವಾ ಮನಸ್ಸಿನ ಧರ್ಮವೇಕಲ್ಲ ? (ಆತ್ಮನಲ್ಲಿ) ಯಾವ ವಿಶೇಷವೂ ಇಲ್ಲವಲ್ಲ ![3]

ಸ್ಯಾನ್ಮಾಲಾ ಅಪರಿಹಾರ್ಯಾ ತು ಜ್ಞಾನಂ ಚೇಜ್ಜ್ಞೇಯತಾಂ ವ್ರಜೇತ್
ಯುಗಪದ್ವಾಪಿ ಚೋತ್ಪತ್ತಿರಭ್ಯುಪೇತಾತ ಇಷ್ಯತೇ ॥ ೫೬ ॥

೫೬. ಜ್ಞಾನವು ಜ್ಞೇಯತ್ವವನ್ನು ಹೊಂದಿದರೆ ಅನವಸ್ಥೆಯು ಅಪರಿಹಾರ್ಯವಾಗುವದು[4]. (ಎರಡು ಜ್ಞಾನಗಳೂ) ಒಂದೇ ಕಾಲದಲ್ಲಿ ಈ (ಆತ್ಮನಿಂದ) ಹುಟ್ಟುವವೆಂದು ಒಪ್ಪಿದಂತಾಗುವದು[5].

ಅನವಸ್ಥಾನ್ತರತ್ವಾಚ್ಚ ಬನ್ಧೋ ನಾತ್ಮನಿ ವಿದ್ಯತೇ ।
ನಾಶುದ್ಧಿಶ್ಚಾಪ್ಯಸಙ್ಗತ್ವಾದಸಙ್ಗೋ ಹೀತಿ ಚ ಶ್ರುತೇಃ ॥ ೫೭ ॥

ಸೂಕ್ಷ್ಮೈವಾಗೋಚರೇಭ್ಯಶ್ಚ ನ ಲಿಪ್ಯತ ಇತಿ ಶ್ರುತೇಃ ॥ ೫೭½ ॥

---

1. ವಿಭುವೂ ವ್ಯಾಪಕನೂ ನಿತ್ಯನೂ ಆಗಿರುವನೆಂದು ವೈಶೇಷಿಕರು ಒಪ್ಪಿರುವ ಆತ್ಮನಲ್ಲಿ ಯಾವ ವಿಕಾರವೂ ಆಗುವಂತಿಲ್ಲ. ಅವನಲ್ಲಿ ಸುಖಾದಿಗಳು ಬಂದುಹೋಗುತ್ತಿದ್ದರೆ ವಿಕಾರವು ಆಗಿಯೇತೀರಬೇಕು ; ಆದ್ದರಿಂದ ಸುಖಾದಿಗಳು ಆತ್ಮನ ಧರ್ಮವಲ್ಲ.

2. ಆತ್ಮನು ಬೇರೆ, ಗುಣಗಳು ಬೇರೆ, ಆತ್ಮರು ಬೇರೆಬೇರೆ, ಆತ್ಮರೆಲ್ಲರೂ ವಿಭು- ಎಂಬ ಮತದಲ್ಲಿ ಇಮ ಇಂಥ ಆತ್ಮನ ಗುಣವು ಆ ಮತ್ತೊಬ್ಬನದಲ್ಲ- ಎಂಬುದಕ್ಕೆ ಗಮುಕ ವೇನೂ ಇಲ್ಲ.

3. ಆತ್ಮಮನಃಸಂಯೋಗದಿಂದ ಹುಟ್ಟುವ ಜ್ಞಾನವು ಮನಸ್ಸಿನದಲ್ಲ, ಆತ್ಮನದೇ ಎನ್ನುವದಕ್ಕೆ ಆತ್ಮನಲ್ಲಿ ಯಾವ ವಿಶೇಷವಿದೆ ?

4. ಜ್ಞಾನವು ಮತ್ತೊಂದು ಜ್ಞಾನಕ್ಕೆ ವಿಷಯವೆಂದರೆ ಅದೂ ಮತ್ತೊಂದಕ್ಕೆ ವಿಷಯವಾಗಬೇಕಾಗುವದು.

5. ಅನವಸ್ಥಾದೋಷವನ್ನು ತಪ್ಪಿಸಿಕೊಳ್ಳುವದಕ್ಕೆ ವಿಷಯಜ್ಞಾನವೂ ವಿಷಯಿ ಜ್ಞಾನವೂ ಒಂದೇ ಸಮಯಕ್ಕೆ ಆತ್ಮನಿಂದ ಹುಟ್ಟುವವು ಎನ್ನಬೇಕಾಗುವದು. ಆಗ ಆತ್ಮ ಮನಸ್ಸುಗಳಿಗೆ ಎರಡು ಸಂಯೋಗಗಳು ಏಕಕಾಲಕ್ಕೆ ಆಗುವವೆನ್ನಬೇಕಾಗುವದು ; ಅಥವಾ ಒಂದೇ ಸಂಯೋಗದಿಂದ ಎಲ್ಲಾ ಜ್ಞಾನಗಳೂ ಒಂದೇ ಕಾಲಕ್ಕೆ ಉಂಟಾಗುವವೆಂದು ಒಪ್ಪವ ಅನಿಷ್ಟವು ಬಂದೊದಗುವದು.

೫೭–೫೭½. ಆತ್ಮನಿಗೆ ಮತ್ತೊಂದು ಅವಸ್ಥೆಯಿಲ್ಲದ್ದರಿಂದ[1] ಬಂಧವೆಂಬುದೇ ಇಲ್ಲ. ಆತ್ಮನಲ್ಲಿ ಅಶುದ್ಧಿಯೂ ಇಲ್ಲ[2]; ಏಕೆಂದರೆ "**ಅಸಂಗನೇ**" (ಬೃ. ೪–೩–೧೫) ಎಂಬ ಶ್ರುತಿ(ಪ್ರಮಾಣ)ದಿಂದ (ಆತ್ಮನು) ಅಸಂಗನಾಗಿರುತ್ತಾನೆ. ಸೂಕ್ಷ್ಮನಾಗಿರುವದರಿಂದಲೂ ಒಬ್ಬನೇ ಆಗಿರುವದರಿಂದಲೂ ಅವಿಷಯನಾಗಿರುವದರಿಂದಲೂ (ಅವನಲ್ಲಿ ಅಶುದ್ಧಿಯಿರುವದಿಲ್ಲ)[3] (**ಅವನಿಗೆ**) "ಅಂಟುವದಿಲ್ಲ" (ಕ. ೨–೨–೧೧) ಎಂಬ ಶ್ರುತಿಯಿಂದಲೂ (ಅಶುದ್ಧಿಯಿಲ್ಲ).

ಸಿದ್ಧಾಂತದಲ್ಲಿ ಬಂಧಮೋಕ್ಷಗಳ ವ್ಯವಸ್ಥೆ ಹೇಗೆ?

ಏವಂ ತರ್ಹಿ ನ ಮೋಕ್ಷೋಽಸ್ತಿ ಬನ್ಧಾಭಾವಾತ್ ಕಥಞ್ಚನ ॥ ೫೮ ॥
ಶಾಸ್ತ್ರಾನರ್ಥಕ್ಯಮೇವ ಸ್ಯಾನ್ನ ಬುದ್ಧೇರ್ಭ್ರಾನ್ತಿರಿಷ್ಯತೇ ।
ಬನ್ಧೋ ಮೋಕ್ಷಶ್ಚ ತನ್ನಾಶಃ ಸ ಯಥೋಕ್ತೋ ನ ಚಾನ್ಯಥಾ ॥ ೫೯ ॥

೫೮–೫೯. (ಆಕ್ಷೇಪ): ಹಾಗಾದರೆ ಬಂಧವೇ ಇಲ್ಲದ್ದರಿಂದ ಹೇಗೂ ಮೋಕ್ಷವೂ ಇಲ್ಲ. (ಆಗ) ಶಾಸ್ತ್ರವು ವ್ಯರ್ಥವೇ ಆಗುವದು. (ಪರಿಹಾರ): ಹಾಗಲ್ಲ. ಬುದ್ಧಿಯ ಭ್ರಾಂತಿಯೇ ಬಂಧವೆಂದು (ನಾವು) ಒಪ್ಪುತ್ತೇವೆ. ಮೋಕ್ಷವೆಂದರೆ ಅದರ ನಾಶವು. ಆದು ಹಿಂದೆ ಹೇಳಿದ (ರೀತಿಯದೇ ಹೊರತು) ಬೇರೆಯ ಪ್ರಕಾರದ್ದಲ್ಲ[4].

ಬೋಧಾತ್ಮಜ್ಯೋತಿಷಾ ದೀಪ್ತಾ ಬೋಧಮಾತ್ಮನಿ ಮನ್ಯತೇ ।
ಬುದ್ಧಿರ್ನಾನ್ಯೋಽಸ್ತಿ ಬೋದ್ಧೇತಿ ಸೇಯಂ ಭ್ರಾನ್ತಿರ್ಹಿ ಧೀಗತಾ ॥
ಬೋಧಸ್ಯಾತ್ಮಸ್ವರೂಪತ್ವಾನ್ನಿತ್ಯಂ ತತ್ಪ್ರೋಪಚರ್ಯತೇ ॥ ೬೦½ ॥

---

1. ಜ್ಞಾನದಿಂದ ಮೋಕ್ಷವಾಗುವದು ಎಂಬ ಸಿದ್ಧಾಂತವನ್ನು ಖಂಡಿಸುವದಕ್ಕಾಗಿ ಜ್ಞಾನವು ಆತ್ಮನ ಧರ್ಮವಲ್ಲ ಎಂದು ತೋರಿಸಿಕೊಟ್ಟಿದ್ದಾಯಿತು. ಆತ್ಮನು ಬಂಧಾವಸ್ಥೆಯಿಂದ ಮೋಕ್ಷಾವಸ್ಥೆಗೆ ಮಾರ್ಪಡುವದೇ ಬಂಧಮೋಕ್ಷಗಳ ವ್ಯವಸ್ಥೆ ಎಂಬ ಮತವನ್ನು ಈಗ ಖಂಡಿಸುವದಕ್ಕೆ ಹೊರಟಿದೆ. ನಿರ್ವಿಕಾರನಾದ ಆತ್ಮನಿಗೆ ಅವಸ್ಥೆಯಿಲ್ಲ.

2. ಅಶುದ್ಧಿಯನ್ನು ತೆಗೆದುಹಾಕುವದೇ ಮೋಕ್ಷವು ಎಂದರೆ ಆ ಪಕ್ಷವು ಶ್ರುತಿವಿರುದ್ಧ.

3. ಸೂಕ್ಷ್ಮನಾಗಿರುವ ಆತ್ಮನಿಗೆ ಸ್ಥೂಲವಾದ ದ್ವೈತದ ಕಲಂಕವು ಹೊದ್ದಲಾರದು. ಅದ್ವಿತೀಯನಾದ್ದರಿಂದ ಅನೇಕಾತ್ಮಕವಾದ ದ್ವೈತಕಲಂಕವು ಅವನಿಗೆ ಹತ್ತಲಾರದು. ಯಾವ ದೋಷಕ್ಕೂ ವಿಷಯನಲ್ಲವಾದ್ದರಿಂದ ಎಲ್ಲವನ್ನೂ ನೋಡುವ ಸಾಕ್ಷಿಯಾದ್ದರಿಂದಲೂ ಅವನಲ್ಲಿ ಕಲಂಕವಿಲ್ಲ. ಹೀಗೆ ಬಂಧವೇ ಇಲ್ಲದ್ದರಿಂದ ಮೋಕ್ಷವೂ ಹೊಂದುವದಿಲ್ಲ ಎಂದರ್ಥ.

4. ಅಜ್ಞಾನದಿಂದ ಕಲ್ಪಿತ ಬಂಧವು, ಜ್ಞಾನದಿಂದ ಮೋಕ್ಷವು– ಎಂದು ೧೬ನೇ ಶ್ಲೋಕದಲ್ಲಿ ಹೇಳಿರುವದು ಎಂದರ್ಥ.

೬೦–೬೧½. ಚೈತನ್ಯರೂಪನಾದ ಆತ್ಮನ ಬೆಳಕಿನಿಂದ ಹೊಳೆಯುವ ಬುದ್ಧಿಯು ತನ್ನಲ್ಲಿ ಅರಿವಿದೆ, ಮತ್ತೊಬ್ಬ ಅರಿಯುವಾತನಿಲ್ಲ– ಎಂದು ತಿಳಿದುಕೊಂಡಿರುತ್ತದೆ.[1] ಈ ಭ್ರಾಂತಿಯು ಬುದ್ಧಿಗೇ ಸೇರಿದ್ದು; (ಆದರೂ) ಜ್ಞಾನವು ಯಾವಾಗಲೂ ಆತ್ಮನ ಸ್ವರೂಪವೇ ಆಗಿರುವದರಿಂದ, ಅವನಲ್ಲಿ (ಇದೆಯೆಂದು) ವ್ಯವಹರಿಸುತ್ತಾರೆ.[2]

ಅವಿವೇಕೋಽಪ್ಯನಾದ್ಯೋಽಯಂ ಸಂಸಾರೋ ನಾನ್ಯ ಇಷ್ಯತೇ ॥೬೧॥
ಮೋಕ್ಷಸ್ತನ್ನಾಶ ಏವ ಸ್ಯಾನ್ನಾನ್ಯಥಾನುಪಪತ್ತಿತಃ ॥೬೧½॥

೬೧–೬೧½. ಈ ಅನಾದ್ಯವಿವೇಕವೇ ಸಂಸಾರವೇ ಹೊರತು ಮತ್ತೆ ಬೇರೆ ಇಲ್ಲ. ಮೋಕ್ಷವು ಇದರ ನಾಶವೇ ಹೊರತು ಮತ್ತೊಂದು ರೀತಿಯಿಂದ ಹೊಂದುವದಿಲ್ಲ.[1]

ಯೇಷಾಂ ವಸ್ತ್ವನ್ತರಾಪತ್ತಿರ್ಮೋಕ್ಷೋ ನಾಶಸ್ತು ತೈರ್ಮತಃ ॥೬೨॥
ಅವಸ್ಥಾಸ್ತರಮಪ್ಯೇವಮವಿಕಾರಾನ್ನ ಯುಜ್ಯತೇ।
ವಿಕಾರೇಽವಯವಿತ್ವಂ ಸ್ಯಾತ್ತತೋ ನಾಶೋ ಘಟಾದಿವತ್ ॥ ೬೩ ॥

೬೨-೬೩. ಯಾರ (ಮತದಲ್ಲಿ) ಮೋಕ್ಷವೆಂದರೆ ಮತ್ತೊಂದು ವಸ್ತುವಾಗಿ ಪರಿಣಮಿಸುವದೋ ಅವರ ಮತದಲ್ಲಿ ಮೋಕ್ಷವೆಂದರೆ (ಆತ್ಮನ) ನಾಶವೇ ಎಂದು ಅಭಿಪ್ರಾಯಪಟ್ಟಂತೆ (ಆಗುತ್ತದೆ). ಹೀಗೆಯೇ ಮತ್ತೊಂದು ಅವಸ್ಥೆ (ಯನ್ನು ಪಡೆಯುವ)ದೊಂದೂ (ಆತ್ಮನು) ಅವಿಕಾರಿಯಾಗಿರುವದರಿಂದ ಯುಕ್ತವಾಗುವದಿಲ್ಲ. (ಆತ್ಮನಲ್ಲಿ) ವಿಕಾರ(ವಿದ್ದರೆ ಅವನು) ಅವಯವಗಳುಳ್ಳವನೆಂದೂ ಆಗುತ್ತದೆ, ಆದರಿಂದ ಗಡಿಗೆಯೇ ಮುಂತಾದವುಗಳಂತೆ (ಆತ್ಮನಿಗೆ) ನಾಶವೂ (ಉಂಟೆಂದಾಗುತ್ತದೆ).[5]

---

1. ಚಿದ್ರೂಪನಾದ ಆತ್ಮನು ನಿತ್ಯ, ಚಿದಾಭಾಸನಾದ ಅಂತಃಕರಣದ ವೃತ್ತಿರೂಪ ಜ್ಞಾನವು ಅನಿತ್ಯ. ಅಂತಃಕರಣವು ತಾನು ಜ್ಞಾತೃ ಎಂದು ತಿಳಿದುಕೊಂಡಿರುವ ಭ್ರಾಂತಿಯೇ ಬಂಧಕ್ಕೆ ಕಾರಣ.

2. ಭ್ರಾಂತಿಯೂ ಜ್ಞಾನರೂಪವಾಗಿಯೇ ತೋರುವದರಿಂದ ಆತ್ಮನ ಧರ್ಮವು ಎಂದು ಜನರು ತಪ್ಪಾಗಿ ತಿಳಿದುಕೊಳ್ಳುತ್ತಿದಾರೆ. ಹೀಗೆ ಆತ್ಮನಲ್ಲಿ ಕಲ್ಪಿತಬಂಧನವಿರುತ್ತವೆ.

3. ಆತ್ಮನಲ್ಲಿ ಭ್ರಾಂತಿಯಿಲ್ಲ, ಅಂತಃಕರಣದಲ್ಲಿ ಚೈತನ್ಯವಿಲ್ಲ– ಎಂಬುದನ್ನು ವಿಂಗಡಿಸಿ ತಿಳಿದುಕೊಳ್ಳುವದರಿಂದ ಆತ್ಮಾನಾತ್ಮರ ಅವಿವೇಕವು ನಾಶವಾಗುವದು.

4. ವಿಕಾರೋ ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿವೆ.

5. ಆದ್ದರಿಂದ ಮೋಕ್ಷವು ಅವಸ್ಥಾಂತರವೆಂಬುದನ್ನು ಎಂದಿಗೂ ಒಪ್ಪತಕ್ಕದ್ದಲ್ಲ.

ವೇದಾಂತಸಮ್ಮತವಾದದ್ದೇ ಸರಿಯಾದ ಬಂಧಮೋಕ್ಷಗಳ ವ್ಯವಸ್ಥೆ

ತಸ್ಮಾದ್ಭ್ರಾನ್ತಿರತೋಽನ್ಯಾ ಹಿ ಬನ್ಧಮೋಕ್ಷಾದಿಕಲ್ಪನಾಃ ।
ಸಾಙ್ಖ್ಯಕಾಣಾದಬೌದ್ಧಾನಾಂ ವಿಮಾಮಾಂಸಾರ್ಹತಕಲ್ಪನಾಃ ॥ ೬೪ ॥
ಶಾಸ್ತ್ರಯುಕ್ತಿವಿಹೀನತ್ವಾನ್ನಾದರ್ತವ್ಯಾಃ ಕದಾಚನ ।
ಶಕ್ಯನ್ತೇ ಶತಶೋ ವಕ್ತುಂ ದೋಷಾಸ್ತಾಸಾಂ ಸಹಸ್ರಶಃ ॥ ೬೫ ॥

೬೪-೬೫. ಆದ್ದರಿಂದ ಭ್ರಾಂತಿಯೇ (ಬಂಧಮೋಕ್ಷಗಳು). ಇದಕ್ಕಿಂತ ಬೇರೆಯಾಗಿ ಸಾಂಖ್ಯರು, ಕಾಣಾದರು, ಬೌದ್ಧರು, ವಿಮಾಮಾಂಸಕರು, ಜೈನರು[1]– ಇವರುಗಳು ಮಾಡಿಕೊಂಡಿರುವ ಬಂಧಮೋಕ್ಷಾದಿಕಲ್ಪನೆಗಳು ಶಾಸ್ತ್ರಯುಕ್ತಿಗಳಿಲ್ಲದ್ದರಿಂದ ಎಂದಿಗೂ ಅದನ್ನು ಒಪ್ಪಬಾರದು. ಅವುಗಳಲ್ಲಿ ನೂರಾರು ಸಾವಿರಾರು ದೋಷಗಳನ್ನು ಹೇಳಬಹುದಾಗಿರುತ್ತದೆ.

ಅಪಿ ನಿನ್ದೋಪಪತ್ತೇಶ್ಚ ಯಾನ್ಯತೋಽನ್ಯಾನಿ ಚೇತ್ಯತಃ ।
ತ್ಯಕ್ತ್ವಾತೋ ಹ್ಯನ್ಯಶಾಸ್ತ್ರೋಕ್ತೀರ್ಮತಿಂ ಕುರ್ಯಾದ್ದೃಢಾಂ ಬುಧಃ
ಶ್ರದ್ಧಾಭಕ್ತೀ ಪುರಸ್ಕೃತ್ಯ ಹಿತ್ವಾ ಸರ್ವಮನಾರ್ಜವಮ್ ।
ವೇದಾನ್ತಸ್ಯೈವ ತತ್ತ್ವಾರ್ಥೇ ವ್ಯಾಸಸ್ಯಾಭಿಮತೌ ತಥಾ ॥ ೬೬ ॥

೬೬-೬೭. "ಯಾನ್ಯತೋಽನ್ಯಾನಿ"[2] (?) ಇದಕ್ಕಿಂತ ಬೇರೆಯಾಗಿರುವ ಶಾಸ್ತ್ರಗಳನ್ನು (ಶಂಕೆಮಾಡಬೇಕು) ಎಂಬ ನಿಂದೆಯು ಹೊಂದುವದ

---

1. ಸಾಂಖ್ಯರು ನಿರ್ವಿಕಾರವಾದ ಆತ್ಮನಲ್ಲಿ ಭೋಕ್ತೃತ್ವವನ್ನೂ ಅಚೇತನವಾದ ಪ್ರಧಾನದಲ್ಲಿ ಕರ್ತೃತ್ವವನ್ನೂ ಒಪ್ಪಿರುವದು ಮುಖ್ಯದೋಷ. ಕಾಣಾದರು ಜ್ಞಾನವನ್ನೂ ಸುಖದುಃಖಗಳನ್ನೂ ಆತ್ಮನ ಗುಣವೆಂದು ಒಪ್ಪಿ ದುಃಖಾಭಾವವೇ ಮೋಕ್ಷವೆಂದು ಹೇಳುವದು ಮುಖ್ಯ ದೋಷ. ಬೌದ್ಧರು ಕ್ಷಣಿಕವಿಜ್ಞಾನವು ತನ್ನನ್ನು ತಾನೇ ಅರಿಯುವದೆಂದೂ ವಿಜ್ಞಾನದಲ್ಲಿರುವ ಕಲ್ಮಷವು ನಾಶವಾಗುವದು ಅಥವಾ ಶೂನ್ಯವಾಗುವದೇ ಮೋಕ್ಷವೆಂದೂ ಒಪ್ಪಿರುವದು ದೋಷ. ವಿಮಾಮಾಂಸಕರು ಆತ್ಮನಲ್ಲಿ ಕರ್ತೃತ್ವಭೋಕ್ತೃತ್ವಗಳು ಪರಮಾರ್ಥವಾಗಿರುವವೆಂದು ಒಪ್ಪಿರುವದು ದೋಷ. ಇವೆಲ್ಲ ಶ್ರುತಿಯುಕ್ತಿವಿರುದ್ಧವಾಗಿವೆ.

2. ಈ ವಾಕ್ಯವು ಅಚ್ಚಿನ ಮನುಸ್ಮೃತಿಯಲ್ಲಿ ಕಾಣಬರುವದಿಲ್ಲ. ಪೂರ್ಣವಾಕ್ಯವನ್ನು ವ್ಯಾಖ್ಯಾನದಲ್ಲಿ ಹೀಗೆ ಕೊಟ್ಟಿದೆ :

ಯಾನ್ಯತೋಽನ್ಯಾನಿ ಶಾಸ್ತ್ರಾಣಿ ಪೃಥಿವ್ಯಾಂ ವಿವಿಧಾನಿ ವೈ ।
ಶಙ್ಕನೀಯಾನಿ ವಿದ್ವದ್ಭಿರ್ಧರ್ಮಬುದ್ಧಿಮಭೀಪ್ಸುಭಿಃ ॥

ರಿಂದಲೂ[1] ಇತರ ಮತಗಳನ್ನು ಒಪ್ಪತಕ್ಕದ್ದಲ್ಲ. ಆದ್ದರಿಂದ ವಿವೇಕಿಯಾದವನು ಮಿಕ್ಕ ಶಾಸ್ತ್ರವಚನಗಳನ್ನು ಬಿಟ್ಟು ವೇದಾಂತತತ್ತ್ವಾರ್ಥದಲ್ಲಿಯೇ[2] ಮತ್ತು ವ್ಯಾಸರ ಅಭಿಪ್ರಾಯದಲ್ಲಿಯೇ[3] ಶ್ರದ್ಧಾಭಕ್ತಿಪುರಸ್ಸರವಾಗಿ ಕೌಟಿಲ್ಯವನ್ನೆಲ್ಲ ಬಿಟ್ಟು[4] ಗಟ್ಟಿಮನಸ್ಸನ್ನು ಮಾಡಬೇಕು.

ಉಪಸಂಹಾರ

ಇತಿ ಪ್ರಣುನ್ನಾದ್ವಯವಾದಕಲ್ಪನಾ
ನಿರಾತ್ಮವಾದಾಶ್ಚ ತಥಾ ಹಿ ಯುಕ್ತಿತಃ ।
ವ್ಯಪೇತಶಙ್ಕಾಃ ಪರವಾದತಃ ಸ್ಥಿರಾ
ಮುಮುಕ್ಷವೋ ಜ್ಞಾನಪಥೇ ಸ್ಯುರಿತ್ಯುತ ॥ ೬೪ ॥

೬೪. ಮುಮುಕ್ಷುಗಳು ಬೇರೆ ವಾದಗಳ ಶಂಕೆಯಿಲ್ಲದೆ ಜ್ಞಾನಮಾರ್ಗದಲ್ಲಿಯೇ ಸ್ಥಿರವಾಗಿ ಇರಲಿ ಎಂದು, ಈ ರೀತಿಯಲ್ಲಿ ದ್ವೈತವಾದಗಳ ಕಲ್ಪನೆಗಳನ್ನು ಮತ್ತು ನಿರಾತ್ಮವಾದಗಳನ್ನೂ ಯುಕ್ತಿಯಿಂದ ಖಂಡಿಸಲಾಗಿದೆ.[5]

ಸ್ವಸಾಕ್ಷಿಕಂ ಜ್ಞಾನಮತೀವ ನಿರ್ಮಲಂ
ವಿಕಲ್ಪನಾಭ್ಯೋ ವಿಪರೀತಮದ್ವಯಮ್
ಅವಾಪ್ಯ ಸಮ್ಯಗ್ಯದಿ ನಿಶ್ಚಿತೋ ಭವೇ-
ನ್ನಿರನ್ವಯೋ ನಿರ್ವೃತಿಮೇತಿ ಶಾಶ್ವತೀಮ್ ॥ ೬೯ ॥

೬೯. ಸ್ವಸಾಕ್ಷಿಕವಾದ, ಅತಿಶುದ್ಧವಾದ, ಯಾವ ವಿಕಲ್ಪನೆಗಳೂ ಇಲ್ಲದ ಅದ್ವಯವಾದ ಜ್ಞಾನವನ್ನು ಪಡೆದು ಅದರಲ್ಲಿಯೇ ಚೆನ್ನಾಗಿ ನಿಶ್ಚಿತನಾದರೆ (ಅಜ್ಞಾನದ) ಸಂಬಂಧವೇ ಇಲ್ಲದ ಶಾಶ್ವತವಾದ ಆನಂದವನ್ನು ಹೊಂದುತ್ತಾನೆ.

---

1. ಶ್ರುತಿಗಳಿಗೂ ಶ್ರುತ್ಯನುಸಾರವಾದ ಸ್ಮೃತಿಗಳಿಗೂ ಯುಕ್ತಿಗಳಿಗೂ ವಿರುದ್ಧವಾಗಿರುವ ಸಾಂಖ್ಯಾದಿಮತಗಳನ್ನು ತಳ್ಳಿಹಾಕಬೇಕು ಎಂದು ಭಾವ.

2. ವೇದಾಂತತತ್ತ್ವಾರ್ಥವೆಂದರೆ ಆತ್ಮೈಕ್ಯವು; ಆತ್ಮನು ನಿತ್ಯಶುದ್ಧಬುದ್ಧಮುಕ್ತ ಸ್ವಭಾವನು ಎಂಬುದು.

3. ವ್ಯಾಸಪ್ರಣೀತವಾದ ವೇದಾಂತಸೂತ್ರಗಳಲ್ಲಿ ವೇದಾಂತತತ್ತ್ವವು ನಿರ್ಣೀತವಾಗಿದೆ; ಅವರು ಬರೆದಿರುವ ಗೀತೆಯಲ್ಲಿಯೂ ಇದೇ ಅಭಿಪ್ರಾಯವಿದೆ. ಆದ್ದರಿಂದ ಪ್ರಸ್ಥಾನತ್ರಯಕ್ಕೂ ಈ ವಿಷಯದಲ್ಲಿ ಏಕವಾಕ್ಯತೆಯಿದೆ ಎಂದು ಭಾವ.

4. ನಿರ್ವಂಚನೆಯಿಂದ ತತ್ತ್ವದಲ್ಲಿಯೇ ಆದರವುಳ್ಳದಾಗಿ.

5. ಅದ್ವೈತವನ್ನು ಶ್ರುತಿಯುಕ್ತ್ಯನುಭವಗಳಿಂದ ಸ್ಥಾಪಿಸಿದರೆ ದ್ವೈತವನ್ನು ಖಂಡಿಸಬೇಕಾದದ್ದೇ ಇಲ್ಲವಾದ್ದರಿಂದ ಪರಮತಖಂಡನೆಯು ಅಷ್ಟೇನೂ ಅವಶ್ಯವಲ್ಲ. ಆದರೂ ಅದ್ವೈತಗ್ರಂಥವನ್ನು ಓದುವದಕ್ಕೆ ಪರವಾದಗಳು ಯುಕ್ತಿಗಾಢವಾಗಿವೆ ಎಂದು ಅಜ್ಞಾನವು ಅಡ್ಡಿಯಾಗಿದ್ದರೆ ಮುಮುಕ್ಷುಗಳಿಗಾಗಿ ಆ ವಾದಗಳ ಅಸಾರತೆಯನ್ನು ಆಯಾ ಪ್ರಕ್ರಿಯೆಯನ್ನೇ ಅನುಸರಿಸಿ ಖಂಡಿಸುವದು ಪ್ರಯೋಜನಕರವಾಗಿರುತ್ತದೆ. ಈ ದೃಷ್ಟಿಯಿಂದ ಇಲ್ಲಿ ಸಾಂಖ್ಯಾದಿಮತಗಳನ್ನು ಖಂಡಿಸಿದೆ ಎಂದು ಭಾವ.

ಇದಂ ರಹಸ್ಯಂ ಪರಮಂ ಪರಾಯಣಂ
ವ್ಯಪೇತದೋಷೈರಭಿಮಾನವರ್ಜಿತೈಃ ।
ಸವಿಶೇಷ್ಯ ಕಾರ್ಯಾ ಮತಿರಾರ್ಜವೇ ಸದಾ
ನ ತತ್ತ್ವದೃಕ್ ಸ್ವಾನ್ಯಮತಿರ್ಹಿ ಕಶ್ಚನ ॥ ೭೦ ॥

೭೦. ಉತ್ಕೃಷ್ಟವಾದ ಪರಮಗತಿಯಾಗಿರುವ ಈ ರಹಸ್ಯವನ್ನು ದೋಷಗಳನ್ನು ಕಳೆದುಕೊಂಡವರೂ ಅಭಿಮಾನವಿಲ್ಲದವರೂ ಚೆನ್ನಾಗಿ ಪರೀಕ್ಷಿಸಿ (ಸರ್ವತ್ರ)ಸಮವಾಗಿರುವ (ಬ್ರಹ್ಮ.)ದಲ್ಲಿಯೇ ಯಾವಾಗಲೂ ಮನಸ್ಸನ್ನಿಡಬೇಕು. ಏಕೆಂದರೆ (ತನ್ನ) ಆತ್ಮನಿಗಿಂತ ಬೇರೆಯಾದದ್ದನ್ನು ಚಿಂತಿಸುವವನು ಯಾವನೂ ತತ್ತ್ವದರ್ಶಿಯಲ್ಲವೇ ಅಲ್ಲ.

ಅನೇಕಜನ್ಮಾಂತರಸಞ್ಚಿತೈರ್ನರೋ
ವಿಮುಚ್ಯತೇಽಜ್ಞಾನನಿಮಿತ್ತಪಾತಕೈಃ ।
ಇದಂ ವಿದಿತ್ವಾ ಪರಮಂ ಹಿ ಪಾವನಂ
ನ ಲಿಪ್ಯತೇ ವ್ಯೋಮ ಇವೇಹ ಕರ್ಮಭಿಃ ॥ ೭೧ ॥

೭೧. ಈ ಪವಿತ್ರ(ತತ್ತ್ವ)ವನ್ನು ತಿಳಿದುಕೊಂಡರೆ ಹಿಂದಿನ ಅನೇಕ ಜನ್ಮಗಳಿಂದಲೂ ಕೂಡಿಹಾಕಿಕೊಂಡಿದ್ದ ಅಜ್ಞಾನದಿಂದಾದ ಪಾತಕಗಳಿಂದ ಮನುಷ್ಯನು ಬಿಡುಗಡೆಹೊಂದುತ್ತಾನೆ. ಆಕಾಶವು ಹೇಗೆ (ಕಲ್ಮಷಗಳ ಸೋಂಕಿಲ್ಲದೆ ಇರುವಮೋ) ಹಾಗೆ ಕರ್ಮಗಳ ಅಂಟಿಲ್ಲದೆ ಇರುತ್ತಾನೆ.

ಪ್ರಶಾನ್ತಚಿತ್ತಾಯ ಜಿತೇನ್ದ್ರಿಯಾಯ ಚ
ಪ್ರಹೀಣದೋಷಾಯ ಯಥೋಕ್ತಕಾರಿಣೇ ।
ಗುಣಾನ್ವಿತಾಯಾನುಗತಾಯ ಸರ್ವದಾ
ಪ್ರದೇಯಮೇತತ್ ಸತತಂ ಮುಮುಕ್ಷವೇ ॥ ೭೨ ॥

೭೨. ಹೆಚ್ಚಿನ ಶಾಂತಿಯಿಂದ ಕೂಡಿದ ಚಿತ್ತವುಳ್ಳವನೂ ಇಂದ್ರಿಯಗಳನ್ನು ಗೆದ್ದುಕೊಂಡವನೂ ದೋಷಗಳನ್ನು[1] ನಾಶಗೊಳಿಸಿಕೊಂಡಿರುವಾತನೂ (ಶಾಸ್ತ್ರದಲ್ಲಿ) ಹೇಳಿರುವಂತೆ ನಡೆಯುವವನೂ ಗುಣಗಳಿಂದ[2] ಕೂಡಿದವನೂ ಯಾವಾಗಲೂ (ಗುರುವನ್ನು) ಅನುಸರಿಸಿರುವವನೂ ಆಗಿರುವ ಮುಮುಕ್ಷುವಿಗೆ ಇದನ್ನು ಕೊಡಬೇಕು[3].

1. ರಾಗದ್ವೇಷಮೋಹಾದಿಗಳನ್ನು.
2. ಅಮಾನಿತ್ವ, ಅದಂಭಿತ್ವ_ ಮುಂತಾದವುಗಳಿಂದ.
3. ಇಲ್ಲಿ ಹೇಳಿರುವ ಜ್ಞಾನವನ್ನು ಉಪದೇಶಿಸಬೇಕು.

ಪರಸ್ಯ ದೇಹೇ ನ ಯಥಾಭಿಮಾನಿತಾ
ಪರಸ್ಯ ತದ್ವತ್ ಪರಮಾರ್ಥಮಿಾಕ್ಷ್ಯ ಚ ।
ಇದಂ ಹಿ ವಿಜ್ಞಾನಮತೀವ ನಿರ್ಮಲಂ
ಸಂಪ್ರಾಪ್ಯ ಮುಕ್ತೋಽಥ ಭವೇಚ್ಚ ಸರ್ವತಃ ॥ ೭೩ ॥

೭೩. ಒಬ್ಬನ ದೇಹದಲ್ಲಿ ಮತ್ತೊಬ್ಬನಿಗೆ ಹೇಗೆ ಅಭಿಮಾನವಿಲ್ಲವೋ ಹಾಗೆ (ನಿರಭಿಮಾನದಿಂದ) ಪರಮಾರ್ಥವನ್ನು ಕಂಡುಕೊಂಡು[1] ಈ ಅತಿಶುದ್ಧವಾದ ವಿಜ್ಞಾನವನ್ನು ಪಡೆದುಕೊಂಡರೆ ಕೂಡಲೇ ಎಲ್ಲದರಿಂದಲೂ ಮುಕ್ತನಾಗುವನು.

ನ ಹೀಹ ಲಾಭೋಽಭ್ಯಧಿಕೋಸ್ತಿ ಕಶ್ಚನ
ಸ್ವರೂಪಲಾಭಾತ್ ಸ ಇತೋ ಹಿ ನಾನ್ಯತಃ ।
ನ ದೇಯಮೈನ್ದ್ರಾದಪಿ ರಾಜ್ಯತೋಽಧಿಕಂ
ಸ್ವರೂಪಲಾಭಂ ತ್ವಪರೀಕ್ಷ್ಯ ಯೆತ್ನತಃ ॥ ೭೪ ॥

೭೪. ಸ್ವರೂಪದ ಲಾಭಕ್ಕಿಂತ ಹೆಚ್ಚಿನ ಲಾಭವೆಂಬುದು ಈ ಲೋಕದಲ್ಲಿ ಯಾವದೂ ಇಲ್ಲ. ಆ ಲಾಭವು ಈ (ಜ್ಞಾನದಿಂದಲೇ) ಹೊರತು ಮತ್ತೊಂದರಿಂದ (ಆಗುವಹಾ)ಗಿಲ್ಲ. ಆದ್ದರಿಂದ ಶಿಷ್ಯನನ್ನು ಪರೀಕ್ಷೆಮಾಡದೆ ಇಂದ್ರನ ರಾಜ್ಯಕ್ಕಿಂತಲೂ ಹೆಚ್ಚಾಗಿರುವ ಸ್ವರೂಪಲಾಭವನ್ನು ಕೊಡತಕ್ಕದ್ದಲ್ಲ.

—:◯:—

1. ತನ್ನ ದೇಹದಲ್ಲಿಯೂ ತಾನೆಂಬ ಬುದ್ಧಿಯನ್ನು ಬಿಟ್ಟು ಪರಮಾತ್ಮನೇ ನಾನೆಂದು ಅರಿತುಕೊಂಡು.

ಸ್ವಯಂಜ್ಯೋತಿಃಪ್ರಕರಣದ ಸಾರ

೧–೪. ಪಂಚಭೂತಮಯವಾಗಿರುವ ಶರೀರವನ್ನೂ ದಶೇಂದ್ರಿಯಗಳನ್ನೂ ಮನೋಬುದ್ಧಿಗಳನ್ನು ತನ್ನ ಸ್ವರೂಪವಾವ ಜ್ಯೋತಿಯಿಂದಲೇ ಬೆಳಗುತ್ತಿರುವದರಿಂದ ಆತ್ಮನು ಜ್ಞಾತೃನೆನಿಸಿರುತ್ತಾನೆ.

೫–೧೬. ಪ್ರಕಾಶವು ತಾನು ಬೆಳಗುವ ಎಲ್ಲವನ್ನೂ ಬೆರೆತಿದ್ದರೂ ಬೆರೆಯದೆ ಇರುವಂತೆ, ದೀಪವು ಎಲ್ಲವನ್ನೂ ಯಾವ ವಿಶೇಷವ್ಯಾಪಾರವೂ ಇಲ್ಲದೆ ಬೆಳಗುವಂತೆ, ಆತ್ಮನು ಎಲ್ಲವನ್ನೂ ತಿಳಿಯುತ್ತಿರುತ್ತಾನೆ. ಶರೀರೇಂದ್ರಿಯಗಳಲ್ಲಿ ಅಭಿಮಾನವುಳ್ಳ ಚಿದ್ವ್ಯಾಪ್ತವಾದ ಚಿದಾಭಾಸವಾದ ಅಂತಃಕರಣಕ್ಕೇ ಸುಖಾದಿಗಳು ಸೇರಿರುತ್ತವೆ. ತತ್ತಿನೋವು ಮುಂತಾದವು ವಿಶೇಷಸ್ಥಾನಗಳಲ್ಲಿರುವದರಿಂದ ಅವನ್ನು ಕಾಣುತ್ತಿರುವ ಆತ್ಮನಿಗೆ ಸೇರಿದವಲ್ಲ. ಕಣ್ಣು ತನ್ನ ನೋವನ್ನು ತಾನೇ ಅರಿಯುವಂತೆ ಆತ್ಮನು ತನ್ನ ದುಃಖವನ್ನು ತಾನೇ ಅರಿಯಲಿ, ಎಂದರೆ ಸಾವಯವನೆಂದಾಗುವದು, ಆತ್ಮನಲ್ಲಿ ಜ್ಞಾನವೊಂದೇ ಸ್ವಭಾವವಾಗಿರುತ್ತದೆ; ಮಿಕ್ಕವುಗಳೆಲ್ಲ ಆ ಜ್ಞಾನಕ್ಕೆ ವಿಷಯವಾಗಿರುತ್ತವೆ. ಅಂತಃಕರಣವು ಕೂಡ ತನ್ನನ್ನು ತಾನು ಅರಿಯಲಾರದು. ವಿಜ್ಞಾನವಾದವೂ ಶೂನ್ಯವಾದವೂ ಈ ಕಾರಣದಿಂದಲೇ ಸರಿಯಲ್ಲ; ಏಕೆಂದರೆ ವಿಜ್ಞಾನದ ವಿಕಲ್ಪಗಳನ್ನೂ ಶೂನ್ಯವನ್ನೂ ಅರಿಯುವದಕ್ಕೆ ನಿರ್ವಿಕಲ್ಪವಾದ ಆತ್ಮಚೈತನ್ಯವು ಬೇಕಾಗಿರುತ್ತದೆ.

೧೭–೨೪. ಅಜ್ಞಾನವೇ ಸರ್ವಕಲ್ಪನೆಗಳಿಗೂ ಮೂಲವು. ಜಾಗ್ರತ್ಸ್ವಪ್ನಸುಷುಪ್ತಿಗಳುಕೂಡ ಬಂದರೆಲ್ಲಿಂದಿಲ್ಲದ ಕಲ್ಪನೆಗಳೇ. ಆದ್ದರಿಂದ ಇವೆಲ್ಲವನ್ನೂ ನೋಡುತ್ತಿರುವ ಆತ್ಮನೇ ಬ್ರಹ್ಮವೆಂದು ತಿಳಿಯಬೇಕು.

೨೯–೩೨. ಜ್ಞಾನವು ಆತ್ಮನ ಕ್ರಿಯೆಯೆಂಬುದು ದೇಹ, ಬುದ್ಧಿ, ಮನಸ್ಸು, ಇಂದ್ರಿಯ-ಮುಂತಾದವುಗಳನ್ನು ವಿಂಗಡಿಸಿ ಅರಿತುಕೊಳ್ಳದೆ ಇರುವದರಿಂದಾಗುವ ಭ್ರಾಂತಿಯು. ಅವುಗಳಲ್ಲಿ ಒಂದರ ಧರ್ಮವು ಮತ್ತೊಂದಕ್ಕಿಲ್ಲ. ಅವೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿರುತ್ತವೆ. ಇಂದ್ರಿಯಗಳು ಶರೀರದಲ್ಲಿ ಕೆಲವು ಸ್ಥಾನವನ್ನು ಆಶ್ರಯಿಸಿಕೊಂಡು ಕೆಲಸ ಮಾಡುತ್ತವೆ; ಅಂತಃಕರಣದಿಂದ ಸಹಾಯವಿಲ್ಲದೆ ಅವುಗಳ ಜ್ಞಾನವಾಗುವಂತಿಲ್ಲ; ಅಂತಃಕರಣದ ಅಧ್ಯಾಸದಿಂದಲೇ ಆತ್ಮನು ಜ್ಞಾತೃವೆಂದೂ ದೇಹಕ್ಕೆ ಕಟ್ಟುಬಿದ್ದಿರುವನೆಂದೂ ತೋರುತ್ತದೆ.

೩೩–೩೬. ಬೌದ್ಧರು ವಸ್ತುಮಾತ್ರವೇ ಕ್ಷಣಿಕವೆನ್ನುವರು. ಅದೇ ಇದು ಎಂಬ ಬುದ್ಧಿಯು ಸಾದೃಶ್ಯದಿಂದ ಉಂಟಾಗುವದೆಂದೂ, ತನ್ನ ಆಕಾರವಾಗಿಯೂ ಮತ್ತೊಂದು ವಸ್ತುವಿನ ಆಕಾರವಾಗಿಯೂ ಇರುವ ಬುದ್ಧಿಯು ಶಾಂತವಾಗುವದೇ ಮೋಕ್ಷವೆಂದೂ ಅವರ ಮತವು. ಆದರೆ ಸ್ಮೃತಿಗೂ ಸಾದೃಶ್ಯಕ್ಕೂ ಸಂಸ್ಕಾರವು ನಿಮಿತ್ತವಾಗಿರುತ್ತದೆ; ಬೌದ್ಧಮತದಲ್ಲಿ ಎಲ್ಲವೂ ಕ್ಷಣಿಕವಾಗಿರುವದರಿಂದ ಎಲ್ಲಿಯೂ ಸಂಸ್ಕಾರವುಂಟಾಗುವದಕ್ಕೆ ಅವಕಾಶವಿಲ್ಲ. ಸಂಸ್ಕಾರದ ಅಧಾರವನ್ನು ಸ್ಥಿರವೆಂದರೆ ಸಿದ್ಧಾಂತಕ್ಕೆ ಹಾನಿ ಬರುತ್ತದೆ.

೨೬-೩೦. ವಿಜ್ಞಾನದೆ ಶಾಂತಿಯು ಪುರುಷಾರ್ಥವೆಂಬುದೂ ಸರಿಯಲ್ಲ ; ಏಕೆಂದರೆ ಪ್ರತಿಯೊಂದು ವಿಜ್ಞಾನವೂ ಕ್ಷಣಿಕವಾಗಿರುವದರಿಂದ ತನಗೆತಾನೇ ಶಾಂತವಾಗುತ್ತಿರುತ್ತದೆ, ಅದಕ್ಕಾಗಿ ಯಾವ ಸಾಧನವೂ ಬೇಕಾಗಿರುವದಿಲ್ಲ. ವಿಜ್ಞಾನಕ್ಕಿಂತ ಬೇರೆಯಾಗಿ ವಿಜ್ಞಾನ ಸಂತಾನವಿವೆ ಎಂದು ಒಪ್ಪಿದರೂ ಎಲ್ಲವೂ ವಿಜ್ಞಾನಸಂತಾನವೇ ಆಗಿರುವಾಗ ಒಂದು ಕಾರ್ಯಕ್ಕೆ ಇಂಥ ಒಂದು ಕಾರಣವೇ ಬೇಕು ಎಂಬ ನಿಯಮವು ಸಿದ್ಧವಾಗುವದಿಲ್ಲ. ಎಲ್ಲವೂ ನಾಶವಾಗುವದೆಂಬ ಈ ಮತದಲ್ಲಿ ಪುರುಷಾರ್ಥವು ಯಾರಿಗೆ ?- ಎಂಬ ಪ್ರಶ್ನೆಗೂ ಉತ್ತರವಿರುವದಿಲ್ಲ.

೩೧-೩೮. ಎಲ್ಲವೂ ಶೂನ್ಯವೆಂದರೂ ಅದನ್ನು ಅರಿಯುವ ಆತ್ಮನನ್ನು ಒಪ್ಪಬೇಕಾಗುತ್ತದೆ. ಸದಸದಾದಿವಿಕಲ್ಪಗಳಿಗೆ ಆಧಾರವಾಗಿ ಅವಿಕಲ್ಪಿತವೊಂದು ಇರಲೇಬೇಕಾಗುವದರಿಂದ ಶೂನ್ಯವಾದಿಗಳೂ ಅದ್ವೈತವನ್ನು ಒಪ್ಪಬೇಕು. ವಿಕಲ್ಪಗಳು ಅದ್ಯಂತದಲ್ಲಿಲ್ಲ ವಾದ್ದರಿಂದಲೂ ವಾಚಾರಂಭಣಶ್ರುತಿಯಿಂದಲೂ ಅವು ಅಸತ್ತೆಂದೂ ಅವುಗಳಿಂದ ಅಸಂಗವಾದ ಆತ್ಮನಿಗೆ ಯಾವ ಕಲ್ಮಷವೂ ಆಗುವಂತಿಲ್ಲವೆಂದೂ ಒಪ್ಪಬೇಕು. ಆ ಆತ್ಮನು ಯಾವಾಗಲೂ ಚೈತನ್ಯಸ್ವರೂಪವೇ ಆಗಿರುವದರಿಂದಲೂ ಅವಿಕಾರನಾಗಿರುವದರಿಂದಲೂ ಅವನು ನಿತ್ಯಬುದ್ಧಸ್ವರೂಪನೆಂದೂ ನಿತ್ಯಮುಕ್ತಸ್ವರೂಪನೆಂದೂ ಒಪ್ಪಬೇಕು.

೩೯-೪೪. ಮೋಕ್ಷವು ಅವಸ್ಥಾಂತರವೆಂದಾಗಲಿ ಮತ್ತೊಂದು ವಸ್ತುವಿನ ಸಂಯೋಗವೆಂದಾಗಲಿ ಹೇಳಿದರೆ ಅದು ಕೃತಕವೂ ನಾಶವುಳ್ಳದ್ದೂ ಆಗುವದು. ಅದು ಆತ್ಮನ ಸ್ವರೂಪವೇ ಆದರೆ ಈಗಲೂ ಆ ಮುಕ್ತಿಯು ಇದ್ದೇ ಇರಬೇಕೆಂದು ಏರ್ಪಡುತ್ತದೆ. ಅದು ಸ್ವರೂಪವಾಗಿರುವದರಿಂದಲೇ ಅದನ್ನು ಮತ್ತೊಂದು ಸಾಧನದಿಂದ ಸಂಪಾದಿಸಿಕೊಳ್ಳಬೇಕಾದ್ದು ಇರುವದಿಲ್ಲ ; ಅದು ತೆಗೆದುಕೊಳ್ಳತಕ್ಕದ್ದೂ ಅಲ್ಲ. ಬಿಡತಕ್ಕದ್ದೂ ಅಲ್ಲ. ಮಿಕ್ಕೆದ್ದೆಲ್ಲವೂ ಆತ್ಮನಿಗಾಗಿಯೇ ಇರುವದರಿಂದಲೂ ಆತ್ಮನು ತನಗಾಗಿ ತಾನು ಇರುವದರಿಂದಲೂ ಮುಮುಕ್ಷುವಾದವನು ಎಲ್ಲಾ ಕರ್ಮಗಳನ್ನೂ ಕರ್ಮಸಾಧನಗಳನ್ನೂ ಬಿಟ್ಟು ಆತ್ಮಜ್ಞಾನವನ್ನೇ ಸಂಪಾದಿಸಿಕೊಳ್ಳಬೇಕು. ಏಕೆಂದರೆ ಆತ್ಮಲಾಭವೇ ಎಲ್ಲಕ್ಕೂ ಹೆಚ್ಚಿನ ಲಾಭವು; ಮತ್ತೊಂದರ ಲಾಭವು ನಿಜವಾಗಿ ಲಾಭವೇ ಅಲ್ಲ.

೪೫-೫೦. ಪ್ರಧಾನವು ಪುರುಷನಿಗಾಗಿ ಪ್ರವರ್ತಿಸಿ ಭೋಗಮೋಕ್ಷಗಳನ್ನು ಮಾಡುತ್ತದೆ ಎಂಬ ಸಾಂಖ್ಯಮತವೂ ಸರಿಯಲ್ಲ. ಏಕೆಂದರೆ ಗುಣಸಾಮ್ಯವನ್ನು ಬಿಟ್ಟು ಪ್ರಧಾನವು ವೈಷಮ್ಯವನ್ನು ಪಡೆದಲ್ಲದೆ ಪ್ರವೃತ್ತಿಯಿಲ್ಲ ; ಆ ವೈಷಮ್ಯಕ್ಕೆ ಕಾರಣವು ಪುರುಷನಲ್ಲಿಯೂ ಇಲ್ಲ, ಪ್ರಧಾನದಲ್ಲಿಯೂ ಇಲ್ಲ. ಪ್ರಧಾನವು ಪುರುಷನಿಗಾಗಿ ಕೆಲಸಮಾಡುತ್ತದೆ ಎಂಬುದೇ ಸರಿಯಲ್ಲ. ಏಕೆಂದರೆ ಪುರುಷನು ನಿರ್ವಿಕಾರನಾಗಿರುವದರಿಂದ ಅವನಿಗೆ ಪ್ರಧಾನದಿಂದಾಗಬೇಕಾದದ್ದೇ ಏನೂ ಇರುವದಿಲ್ಲ. ಈ ಸಿದ್ಧಾಂತದಲ್ಲಿ ಚಿದಚಿದ್ರೂಪರಾದ ಪ್ರಕೃತಿಪುರುಷರಿಗೆ ಸಂಬಂಧವೇ ಯಾವದೂ ಇರುವದಿಲ್ಲ ; ಪ್ರಧಾನವು ಪುರುಷನಿಗೋಸ್ಕರ ಪ್ರವರ್ತಿಸುವದೆಲ್ಲಿ ಬಂತು ? ಪ್ರಧಾನದಿಂದ ಪುರುಷನಲ್ಲಿ ಯಾವದಾವರೂ ವಿಕಾರವಾಗುವದೆಂದರೆ ಆತ್ಮನು ನಾಶವಾಗುವನೆಂದೂ ಕೂಟಸ್ಥಚೈತನ್ಯಸ್ವರೂಪನೆಂದರೆ ಹೊದಲೇ ಹೇಳಿರುವಂತೆ ಪ್ರಧಾನವು ಪುರುಷನಿಗಾಗಿ ಕೆಲಸಮಾಡುವದಕ್ಕೆ ಕಾರಣವಿಲ್ಲವೆಂದೂ ಪ್ರಧಾನವು ನಿಮಿತ್ತವನ್ನೇ ಬಯಸದಿದ್ದರೆ ಯಾವಾಗಲೂ ಪ್ರವರ್ತಿಸುತ್ತಲೇ ಇರುವದರಿಂದ ಬಂಧನಾಶಕ್ಕೆ ಕಾರಣವೇ ಇಲ್ಲವೆಂದೂ ಆಗುತ್ತದೆ.

೫೧-೫೭. ಆತ್ಮನಿಗೆ ಜ್ಞಾನಸುಖಾದಿಗಳು ಧರ್ಮವೆಂದು ಹೇಳುವ ತಾರ್ಕಿಕರ ಮತದಲ್ಲಿ ಸುಖದುಃಖಾದಿಗಳನ್ನು ಜ್ಞಾನವು ಅರಿಯುವದಕ್ಕೆ ಕಾರಣವಿಲ್ಲ; ಏಕೆಂದರೆ ಇವೆಲ್ಲ ಒಂದೇ ಧರ್ಮಿಗೆ ಸೇರಿರುತ್ತವೆ. ಆತ್ಮಮನಃಸಂಯೋಗದಿಂದಲೇ ಇವೆಲ್ಲವೂ ಉಂಟಾಗಬೇಕಾದ್ದರಿಂದ ಒಂದೇ ಕಾಲದಲ್ಲಿ ಎಲ್ಲವೂ ಉಂಟಾಗಬೇಕಾಗುವದು. ಜ್ಞಾನವು ಸುಖಾದಿಗಳಲ್ಲಿ ಒಂದೊಂದನ್ನು ಒಂದೊಂದು ಸಲ ಅರಿಯಬೇಕೆಂಬ ನಿಯಮಕ್ಕೆ ಕಾರಣವಿಲ್ಲದೆ ಹೋಗುವದು. ಸುಖಾದಿಗಳ ಸಂಬಂಧವೇ ಜ್ಞಾನವು ಎನ್ನುವದಕ್ಕೂ ಬರುವದಿಲ್ಲ; ಏಕೆಂದರೆ 'ಸುಖವನ್ನು ಅರಿಯುತ್ತೇನೆ' ಎಂಬ ಅನುಭವವೂ 'ಸುಖವನ್ನು ಅನುಭವಿಸಿದೆನು' ಎಂಬ ಸ್ಮೃತಿಯೂ ಜ್ಞಾನವೂ ಸುಖಾದಿಗಳೂ ಬೇರೆಬೇರೆ ಎಂದು ತೋರಿಸುತ್ತವೆ. ಆತ್ಮನೇ ಜ್ಞಾನವು ಎಂಬುದು ಈ ತಾರ್ಕಿಕರಿಗೆ ಒಪ್ಪಿಲ್ಲವಾದ್ದರಿಂದ ಅವರು ಆತ್ಮನೇ ಸುಖಾದಿಗಳನ್ನು ಬೆಳಗುತ್ತಾನೆ ಎನ್ನುವದಕ್ಕೆ ಬರುವದಿಲ್ಲ. ಇದಲ್ಲದೆ ಸುಖಾದಿಗಳು ಆತ್ಮನ ಧರ್ಮವಲ್ಲವೆಂಬುದಕ್ಕೆ ಯುಕ್ತಿಯೂ ಇದೆ. ಏಕೆಂದರೆ ಆತ್ಮನು ನಿರ್ವಿಕಾರಿಯು. ಆತ್ಮರು ವಿಭುವಾಗಿ ಅನೇಕರಾಗಿರುವದರಿಂದ ಇಂಥ ಸುಖವು ಇಂಥವನದು ಎಂಬ ನಿಯಮವೂ ಆಗುವಂತಿಲ್ಲ; ಆತ್ಮಮನಃಸಂಯೋಗದಿಂದಾಗುವ ಸುಖವು ಆತ್ಮನದೇ. ಮನಸ್ಸಿನದಲ್ಲ ಎಂಬುದಕ್ಕೆ ಹೇತುವೂ ಇಲ್ಲ. ಇನ್ನು ಜ್ಞಾನವೂ ಸುಖಾದಿಗಳಂತೆ ಜ್ಞೇಯವೆಂದರೆ ಜ್ಞಾನಗಳ ಪರಂಪರೆಯನ್ನು ಒಪ್ಪಬೇಕಾಗುವದು. ಆತ್ಮನಿಗೆ ಅವಸ್ಥೆಯನ್ನಾಗಲಿ ಅಶುದ್ಧಿಯನ್ನಾಗಲಿ ಒಪ್ಪುವದು ಶ್ರುತಿವಿರುದ್ಧವಾಗಿರುವದರಿಂದಲೂ ಬಂಧಮೋಕ್ಷಗಳು ಸತ್ಯವೆಂದು ಒಪ್ಪಿರುವ ಈ ಮತವು ಸರಿಯಲ್ಲ.

೫೮-೭೪. ಹಾಗಾದರೆ ಬಂಧಮೋಕ್ಷಗಳ ವ್ಯವಸ್ಥೆ ಹೇಗೆ? ಎಂದರೆ ಅಂತಃಕರಣ ಮತ್ತು ಆತ್ಮ- ಇವರನ್ನು ವಿಂಗಡಿಸದೆ ಅಂತಃಕರಣದಲ್ಲುಂಟಾಗುವ ಭ್ರಾಂತಿಯೇ ಬಂಧವು, ಅದರ ನಾಶವೇ ಮೋಕ್ಷವು. ಬಂಧಮೋಕ್ಷಗಳು ನಿಜವಾಗಿರುವವೆಂಬ ಮತಗಳೆಲ್ಲ ಶ್ರುತಿಗೂ ಯುಕ್ತಿಗೂ ವಿರುದ್ಧವಾಗಿರುತ್ತವೆ. ಆದ್ದರಿಂದ ಅಜ್ಞಾನದಿಂದಾಗಿರುವ ಸ್ವರೂಪದ ಅಲಾಭವನ್ನು ಜ್ಞಾನದಿಂದ ಹೋಗಲಾಡಿಸಿಕೊಂಡು ಸ್ವರೂಪಲಾಭವೆಂಬ ಮೋಕ್ಷವನ್ನು ಪಡೆದುಕೊಳ್ಳುವದಕ್ಕೇ ಮುಮುಕ್ಷುಗಳು ತಕ್ಕ ಸಾಧನಗಳನ್ನು ಅಳವಡಿಸಿಕೊಂಡು ಪ್ರಯತ್ನಿಸಬೇಕು. ಈ ಪರಮರಹಸ್ಯವನ್ನು ಯೋಗ್ಯರಾದ ಶಿಷ್ಯರಿಗೇ ಆಚಾರ್ಯರು ಉಪದೇಶಿಸಬೇಕು.

೧೭. ಸಮ್ಯಜ್ಞಾತಿ

ಮಂಗಲ

ಆತ್ಮಾ ಜ್ಞೇಯಃ ಪರೋ ಹ್ಯಾತ್ಮಾ ಯಸ್ಮಾದನ್ಯನ್ನ ವಿದ್ಯತೇ :
ಸರ್ವಜ್ಞಃ ಸರ್ವದೃಕ್ ಶುದ್ಧಸ್ತಸ್ಮೈ ಜ್ಞೇಯಾತ್ಮನೇ ನಮಃ ॥ ೧ ॥

೧. ಆತ್ಮನೇ ತಿಳಿಯಲ್ಪಡತಕ್ಕವನು ; ಏಕೆಂದರೆ ಆತ್ಮನು ತನಗಿಂತ ಬೇರೊಂದಿಲ್ಲದ ಸರ್ವಜ್ಞನೂ ಸರ್ವದೃಗ್ರೂಪನೂ[1] ಶುದ್ಧನೂ ಆದ ಪರಮಾತ್ಮನೇ[2]. ಆ ಜ್ಞೇಯಾತ್ಮನಿಗೆ ನಮಸ್ಕಾರ !

ಪದವಾಕ್ಯಪ್ರಮಾಣಜ್ಞೈರ್ದೀಪಭೂತೈಃ ಪ್ರಕಾಶಿತಮ್ ।
ಬ್ರಹ್ಮ ವೇದರಹಸ್ಯಂ ಯೈಸ್ತಾನ್ನಿತ್ಯಂ ಪ್ರಣತೋಽಸ್ಮ್ಯಹಮ್ ॥ ೨ ॥

೨. ಪದವಾಕ್ಯಪ್ರಮಾಣಗಳನ್ನು[3] ಬಲ್ಲ, ಯಾರು ದೀಪದಂತೆ ವೇದ ರಹಸ್ಯವಾದ ಬ್ರಹ್ಮನನ್ನು ಬೆಳಗಿರುವರೋ ಅವರನ್ನು ನಾನು ನಿತ್ಯವೂ ನಮಸ್ಕರಿಸುತ್ತೇನೆ.

ಯದ್ವಾಕ್ಸೂರ್ಯಾಂಶುಸಂಪಾತಪ್ರಣಷ್ಟಧ್ವಾನ್ತಕಲ್ಮಷಃ ।
ಪ್ರಣಮ್ಯ ತಾನ್ ಗುರೂನ್ ವಕ್ಷ್ಯೇ ಬ್ರಹ್ಮವಿದ್ಯಾವಿನಿಶ್ಚಯಮ್ ॥ ೩ ॥

೩. ಯಾರ ವಾಕ್ಕೆಂಬ ಸೂರ್ಯನ ಕಿರಣಗಳು ಬಿದ್ದದ್ದರಿಂದ (ನನ್ನ) ಅಜ್ಞಾನದ ಕಲ್ಮಷವೆಲ್ಲವೂ ತೊಲಗಿತೋ[4] ಆ ಗುರುಗಳನ್ನು ನಮಸ್ಕರಿಸಿ ಬ್ರಹ್ಮವಿದ್ಯಾವಿನಿಶ್ಚಯವನ್ನು ಹೇಳುವೆನು.

---

1. ಸಾಕ್ಷಿರೂಪದಿಂದ ಎಲ್ಲವನ್ನೂ ಕಾಣುತ್ತಿರುವದರಿಂದ ಸರ್ವದೃಕ್ಕು ; ಎಲ್ಲವನ್ನೂ ಜ್ಞಾತೃವಾಗಿ ಅರಿಯುತ್ತಿರುವದರಿಂದ ಸರ್ವಜ್ಞನು– ಎಂದು ಈ ಎರಡು ವಿಶೇಷಣಗಳಿಗೆ ವಿಶೇಷವನ್ನು ಕಲ್ಪಿಸಬೇಕು.

2. ಪರಮಾತ್ಮನೇ ನಮ್ಮ ಆತ್ಮನು ; ಅವನಲ್ಲಿಯೇ ಎಲ್ಲವೂ ಕಲ್ಪಿತವಾಗಿರುವದು.

3. ವ್ಯಾಕರಣ, ಮಿಮಾಂಸ, ನ್ಯಾಯ– ಇವುಗಳನ್ನು **ಎಂದರ್ಥ.** ವೇದಾಂತ ವಾಕ್ಯಗಳ ಸರಿಯಾದ ಅರ್ಥವನ್ನು ಮಾಡುವದಕ್ಕೆ ಈ ಎಲ್ಲಾ **ಶಾಸ್ತ್ರಗಳ** ರಹಸ್ಯವೂ ತಿಳಿದಿರಬೇಕು.

4. ಸೂರ್ಯನ ಬೆಳಕಿನಿಂದ ಕತ್ತಲೆಯು ತೊಲಗಿದಂತೆ ಅಜ್ಞಾನವೆಂಬ ಕಲ್ಮಷವೂ ಅಜ್ಞಾನದಿಂದಾದ ಸಂಸಾರಕಲ್ಮಷವೂ ಹೋಯಿತೆಂದದ್ದರಿಂದ ಸಂಸಾರಬಂಧವು ಪರಮಾರ್ಥವಲ್ಲವೆಂದಂತೆ ಆಯಿತು.

ಆತ್ಮಲಾಭದ ಹೆಚ್ಚುಗಾರಿಕೆ

ಆತ್ಮಲಾಭಾತ್ ಪರೋ ನಾನ್ಯೋ ಲಾಭಃ ಕಶ್ಚನ ವಿದ್ಯತೇ ।
ಯದರ್ಥಾ ವೇದವಾದಾಶ್ಚ ಸ್ಮಾರ್ತಾಶ್ಚಾಪಿ ತು ಯಾಃ ಕ್ರಿಯಾಃ ॥೪॥

೪. ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವು ಮತ್ತೆ ಯಾವದೂ ಇರುವದಿಲ್ಲ. ಈ ಆತ್ಮಲಾಭಕ್ಕಾಗಿಯೇ ವೇದವಾದಗಳೂ ಸ್ಮಾರ್ತವಾದಗಳೂ (ಶ್ರೌತಸ್ಮಾರ್ತ) ಕರ್ಮಗಳೂ (ಹೊರಟಿರುತ್ತವೆ).[1]

ಆತ್ಮಾರ್ಥೋಽಪಿ ಹಿ ಯೋ ಲಾಭಃ ಸುಖಾಯೇಷ್ಟೋ ವಿಪರ್ಯಯಃ।
ಆತ್ಮಲಾಭಃ ಪರಃ ಪ್ರೋಕ್ತೋ ನಿತ್ಯತ್ವಾದ್ಬ್ರಹ್ಮವೇದಿಭಿಃ ॥ ೫ ॥

೫. ಯಾವ ಲಾಭವು ಸುಖಕ್ಕೆಂದು ಇಷ್ಟವಾಗಿರುವದೋ, (ನಿಜವಾಗಿ ಸುಖ)ವಿರುದ್ಧ(ಫಲವುಳ್ಳದ್ದೂ ಆಗಿರುವದೋ, ಅದೂ)[2] ಆತ್ಮನಿಗಾಗಿಯೇ ಅಲ್ಲವೆ, (ಇಷ್ಟವಾಗಿರುವದು)? ಆತ್ಮಲಾಭವು ನಿತ್ಯವಾಗಿರುವದರಿಂದ ಹೆಚ್ಚಿನ ದೆಂದು ಬ್ರಹ್ಮಜ್ಞಾನಿಗಳು ಹೇಳುವರು.[3]

ಆತ್ಮಜ್ಞಾನದಿಂದಲೇ ಆತ್ಮಲಾಭ

ಸ್ವಯಂಲಬ್ಧಸ್ವಭಾವತ್ವಾಲ್ಲಾಭಸ್ತಸ್ಯ ನ ಚಾನ್ಯತಃ ।
ಅನ್ಯಾಪೇಕ್ಷಸ್ತು ಯೋ ಲಾಭಃ ಸೋಽನ್ಯದೃಷ್ಟಿಸಮುದ್ಭವಃ ॥ ೬ ॥
ಅನ್ಯದೃಷ್ಟಿಸ್ತ್ವವಿದ್ಯಾ ಸ್ಯಾತ್ ತನ್ನಾಶೋ ನೋಕ್ಷ ಉಚ್ಯತೇ ।
ಜ್ಞಾನೇನೈವ ತು ಸೋಽಪಿ ಸ್ಯಾದ್ವಿರೋಧಿತ್ವಾನ್ನ ಕರ್ಮಣಾ ॥ ೭ ॥
ಕರ್ಮಕಾರ್ಯಸ್ತ್ವನಿತ್ಯಃ ಸ್ಯಾದವಿದ್ಯಾಕಾಮಕಾರಣಃ ॥ ೭½ ॥

೬–೭. ಆತ್ಮನೇ ಲಬ್ಧಸ್ವಭಾವವಾಗಿರುವದರಿಂದ[4] ಆ ವ ನ ಲಾಭವು ಮತ್ತೊಂದರಿಂದಾಗುವದಿಲ್ಲ. ಮತ್ತೊಂದರ ಬಯಕೆಯಿಂದ ಆಗುವ ಲಾಭ

---

1. ಕ. ೧–೨–೧೫, ಗೀ. ೧೮–೪೬– ಇವುಗಳ ಭಾಷ್ಯವನ್ನು ನೋಡಿರಿ.

2. ಬೃ. ೨–೪–೫, ಬೃ. ೧–೪–೮– ಇವುಗಳ ಭಾಷ್ಯವನ್ನು ನೋಡಿರಿ. ಮಿಕ್ಕದ್ದೆಲ್ಲವೂ ಆತ್ಮನಿಗಾಗಿ ಬೇಕು, ಆತ್ಮನು ತನಗಾಗಿ ಬೇಕು; ಮಿಕ್ಕದ್ದೆಲ್ಲವೂ ದುಃಖಕ್ಕೂ ಕಾರಣವಾಗಬಹುದು, ಆತ್ಮನಲ್ಲಿ ದುಃಖಹೇತುತ್ವವಿಲ್ಲ. ಆದ್ದರಿಂದ ಆತ್ಮಲಾಭವೇ ಹೆಚ್ಚಿನದು.

3. ಆತ್ಮನು ಸ್ವರೂಪವೇ ಆಗಿರುವದರಿಂದ ಆತ್ಮಲಾಭವು ನಿತ್ಯ, ಮಿಕ್ಕದ್ದು ಕರ್ಮಪ್ರಾಪ್ಯವಾದ್ದರಿಂದ ಅನಿತ್ಯ.

4. ನಿತ್ಯಪ್ರಾಪ್ತನಾಗಿರುವದರಿಂದ.

ವಿದೆಯಲ್ಲ, ಅದು ಅನ್ಯದೃಷ್ಟಿಯಿಂದ ಆದದ್ದು; ಆದರೆ ಅನ್ಯದೃಷ್ಟಿಯು ಅವಿದ್ಯೆಯಾಗಿರುತ್ತದೆ, ಅದರ ನಾಶವೇ ಮೋಕ್ಷವೆನಿಸುತ್ತದೆ[1]. ಆ (ನಾಶವು) ಕೂಡ ಜ್ಞಾನದಿಂದಲೇ ಆಗುವದು, ಏಕೆಂದರೆ (ಜ್ಞಾನವೇ ಆದಕ್ಕೆ) ವಿರೋಧಿಯಾಗಿರುತ್ತದೆ. ಕರ್ಮದಿಂದ ಆಗಲಾರದು[2]. ಕರ್ಮದಿಂದಾದದ್ದಾದರೊ, ಅನಿತ್ಯವಾಗಿರುತ್ತದೆ. (ಅದು) ಅವಿದ್ಯಾಕಾಮಗಳೆಂಬ ಕಾರಣದಿಂದಾಗಿರುತ್ತದೆ[3].

ಆತ್ಮಜ್ಞಾನವು ವೇದಪ್ರಮಾಣದಿಂದಾಗತಕ್ಕದ್ದು

ಪ್ರಮಾಣಂ ವೇದ ಏವಾತ್ರ ಜ್ಞಾನಸ್ಯಾಧಿಗಮೇ ಸ್ಮೃತಃ ॥ ೮ ॥
ಜ್ಞಾನೈಕಾರ್ಥಪರತ್ವಾತ್ ತಂ ವಾಕ್ಯಮೇಕಂ ತತೋ ವಿದುಃ |
ಏಕತ್ವಂ ಹ್ಯಾತ್ಮನೋ ಜ್ಞೇಯಂ ವಾಕ್ಯಾರ್ಥಪ್ರತಿಪತ್ತಿತಃ ॥ ೯ ॥

೮–೯. ಈ ಜ್ಞಾನಪ್ರಾಪ್ತಿಗೆ ವೇದವೇ ಪ್ರಮಾಣವೆನಿಸುವದು[4]. ಆದ್ದರಿಂದ ಜ್ಞಾನವೆಂಬ ಒಂದೇ ಅರ್ಥವನ್ನು ತಾತ್ಪರ್ಯದಿಂದ (ತಿಳಿಸುವದ)ದರಿಂದ ಅದನ್ನು ಒಂದು ವಾಕ್ಯವೆಂದು (ಬಲ್ಲವರು) ಎಣಿಸುತ್ತಾರೆ[5]. ವಾಕ್ಯಾರ್ಥಜ್ಞಾನದಿಂದ ಆತ್ಮನ ಏಕತ್ವವನ್ನೇ ತಿಳಿಯಬೇಕಾಗಿದೆ.

ದ್ವೈತವು ಆತ್ಮನಲ್ಲಿ ಕಲ್ಪಿತ

ವಾಚ್ಯಭೇದಾತ್ತು ತದ್ಭೇದಃ ಕಲ್ಪ್ಯೋ ವಾಚ್ಯೋಽಪಿ ತಚ್ಛೃತೇಃ |
ತ್ರಯಂ ತ್ವೇತತ್ತ್ರತಃ ಪ್ರೋಕ್ತಂ ರೂಪಂ ನಾಮ ಚ ಕರ್ಮ ಚ ||೧೦||

---

1. ಎರಡನೆಯದಾಗಿ ಪಡೆಯತಕ್ಕದ್ದೊಂದಿದೆ ಎಂಬ ತಿಳಿವಳಿಕೆಯೇ ಅವಿದ್ಯೆ; ವಿದ್ಯೆಯಿಂದ ಅದನ್ನು ತೊಲಗಿಸಿಕೊಳ್ಳುವದೇ ಮೋಕ್ಷ.

2. ಕರ್ಮವು ಅಜ್ಞಾನದಿಂದಾಗಿರುವದರಿಂದ ಅಜ್ಞಾನಕ್ಕೆ ವಿರೋಧಿಯಲ್ಲ.

3. ಅವಿದ್ಯೆಯಿಂದ ಎರಡನೆಯ ವಸ್ತು ಕಾಣಿಸುತ್ತದೆ; ಆ ಬಳಿಕ ಅದರಲ್ಲಿ ಕಾಮುವುಂಟಾಗಿ ಅದರ ಪ್ರಾಪ್ತಿಗಾಗಿ ಕರ್ಮವನ್ನು ಮಾಡುತ್ತಾರೆ.

4. ಪ್ರತ್ಯಕ್ಷಾದಿಗಳಿಂದ ಆತ್ಮಯಾಥಾತ್ಮ್ಯಜ್ಞಾನವಾಗಲಾರದು.

5. ಕರ್ಮಕಾಂಡದಲ್ಲಿ ಕ್ರಿಯಾಕಾರಕಫಲಗಳು ಸತ್ಯವೆಂದು ಹೇಳಿಲ್ಲ; ಫಲಕ್ಕೆ ಉಪಾಯವನ್ನು ಮಾತ್ರ ಹೇಳಿದೆ. ಕರ್ಮದಿಂದ ಚಿತ್ತಶುದ್ಧಿಯನ್ನು ಹೊಂದಿದವನಿಗೆ ಜ್ಞಾನದಿಂದಲೇ ಮೋಕ್ಷವಾಗುತ್ತದೆ. ಆದ್ದರಿಂದ ಆತ್ಮಜ್ಞಾನವನ್ನು ತಿಳಿಸುವದರಿಂದ ಕರ್ಮಕಾಂಡವಚನಗಳಿಗೂ ಉಪನಿಷದ್ವಚನಗಳಿಗೂ ಏಕವಾಕ್ಯತೆಯನ್ನು ಹೇಳಬೇಕೆಂದು ವೇದಾಂತಿಗಳ ಮತವು.

ಅಸದೇತತ್ತ್ರಯಂ ತಸ್ಮಾದನ್ಯೋನ್ಯೇನ ಹಿ ಕಲ್ಪಿತಮ್ ।
ಕೃತೋ ವರ್ಣೋ ಯಥಾ ಶಬ್ದಾಚ್ಛ್ರುತೋಽನ್ಯತ್ರ ಧಿಯಾ ಬಹಿಃ ॥೧೧
ದೃಷ್ಟಂ ಚಾಪಿ ಯಥಾ ರೂಪಂ ಬುದ್ಧೇಃ ಶಬ್ದಾಯ ಕಲ್ಪತೇ ।
ಏವಮೇತಜ್ಜಗತ್ಸರ್ವಂ ಭ್ರಾನ್ತಿಬುದ್ಧಿವಿಕಲ್ಪಿತಮ್ ॥ ೧೨ ॥
ಅಸದೇತತ್ ತತೋ ಯುಕ್ತಂ ಸಚ್ಚಿನ್ಮಾತ್ರಂ ನ ಕಲ್ಪಿತಮ್ ।

೧೦–೧೨. ವಾಚ್ಯಭೇದದಿಂದ ಆ (ಆತ್ಮನಲ್ಲಿ) ಭೇದವನ್ನು ಕಲ್ಪಿಸಬೇಕು. ವಾಚ್ಯವನ್ನು ಕೂಡ ಅದನ್ನು ಹೇಳುವ ಶಬ್ದದಿಂದ (ಕಲ್ಪಿಸಬೇಕು). ಆದ್ದರಿಂದ ನಾಮ, ರೂಪ, ಕರ್ಮ – ಎಂಬೀ ಮೂರೂ (ಇಮೊಂದೇ) ಎಂದು (ಬೃ. ೧–೬–೧,೩) ಹೇಳಿದೆ[1]. ಆದ್ದರಿಂದ ಒಂದರಿಂದೊಂದು ಕಲ್ಪಿತವಾಗಿರುವ ಈ ಮೂರೂ ಸಟೆಯೇ ಆಗಿರುತ್ತದೆ. ಶಬ್ದದಿಂದ ಕೇಳಿದ ವರ್ಣವು ಹೇಗೆ ಬುದ್ಧಿಯಿಂದ ಹೊರಗೆ ಮತ್ತೊಂದು ಕಡೆಯಲ್ಲಿ ಕಲ್ಪಿತವಾಗುವದೋ ನೋಡಿದ ರೂಪವೂ ಹೇಗೆ ಬುದ್ಧಿಗೆ ಶಬ್ದವಾಗಿ ಪರಿಣಮಿಸುವದೋ[2] ಹಾಗೆಯೇ ಈ ಜಗತ್ತೆಲ್ಲ ಭ್ರಾಂತಿಬುದ್ಧಿಯಿಂದ ಕಲ್ಪಿತವಾಗಿರುತ್ತದೆ. ಆದ್ದರಿಂದ ಇವು ಮೂರೂ ಮಿಥ್ಯೆಯೇ ಎಂಬುದು ಯುಕ್ತವು, ಸಚ್ಚಿನ್ಮಾತ್ರ(ವಾದ ತತ್ತ್ವವು) ಕಲ್ಪಿತವಲ್ಲ[3].

ಪ್ರಮಾಣಜ್ಞಾನವೆಲ್ಲ ನಿಜವಾಗಿ ಆತ್ಮನೇ

ವೇದಶಾಸ್ತ್ರಾಪಿ ಸ ಏವಾದ್ಯೋ ವೇದ್ಯಂ ಚಾನ್ಯತ್ತು ಕಲ್ಪಿತಮ್ ;
ಯೇನ ವೇತ್ತಿ ನ ವೇದಃ ಸ್ಯಾತ್ ಸ್ವಪ್ನೇ ಸರ್ವಂ ತು ಮಾಯಯಾ ॥

---

1. ಶಬ್ದಭೇದದಿಂದ ವಸ್ತುಭೇದವನ್ನೂ ವಸ್ತುಭೇದದಿಂದ ಶಬ್ದಭೇದವನ್ನೂ ಕಲ್ಪಿಸಬೇಕಾಗುತ್ತದೆ; ನಾಮವಿಲ್ಲದ ರೂಪವಾಗಲಿ ರೂಪವಿಲ್ಲದ ನಾಮವಾಗಲಿ ಇರುವದಿಲ್ಲ. ಹೀಗೆ ಸ್ವತಂತ್ರವಾಗಿ ಯಾವ ಉಪಾಧಿಭೇದವೂ ಸಿದ್ಧವಾಗುವದಿಲ್ಲವಾಗಿ ಆತ್ಮನಲ್ಲಿ ಉಪಾಧಿಯಿಂದ ಭೇದವು ಸಿದ್ಧವಾಗುವ ಸಂಭವವಿಲ್ಲ.

2. ಧ್ವನ್ಯಾತ್ಮಕವಾದ ವರ್ಣದಿಂದ ಚಿಹ್ನಾತ್ಮಕವಾದ ಲಿಖಿತವರ್ಣವನ್ನು ಗುರುತಿಸುವದರಿಂದಲೂ ಚಿಹ್ನದಿಂದ ಧ್ವನ್ಯಾತ್ಮಕವಾದ ವರ್ಣವನ್ನು ಗುರುತಿಸುವದರಿಂದಲೂ ನಾಮರೂಪಗಳ ಸಂಬಂಧವು ಸತ್ಯವಸ್ತುಗಳಿಂದಾಗಿರಬೇಕೆಂದು ಹೇಳುವದಕ್ಕೆ ಬರುವದಿಲ್ಲ.

3. ನಾಮರೂಪಕರ್ಮಗಳೇ ಕಲ್ಪಿತವಾಗಿರುವದರಿಂದ ಅವುಗಳಿಂದ ಆತ್ಮಭೇದ ಹಾಗಿರಲಿ ಎಂಬುದು ಹೇಗೆ ಸಿದ್ಧವಾಗುವದಿಲ್ಲವೋ ಹಾಗೆ ವಿಕಲ್ಪಗಳಿಗೆ ಆಸ್ಪದವಾಗಿರುವ ಆತ್ಮನು ಕಲ್ಪಿತನೆಂಬುದೂ ಸಿದ್ಧವಾಗುವದಿಲ್ಲ.

ಯೇನ ಪಶ್ಯತಿ ತಚ್ಚಕ್ಷುಃ ಶೃಣೋತಿ ಶ್ರೋತ್ರಮುಚ್ಯತೇ ।
ಯೇನ ಸ್ವಪ್ನಗತೋ ವಕ್ತಿ ಸಾ ವಾಕ್ ಘ್ರಾಣಂ ತಥೈವ ಚ ।
ರಸನಸ್ಪರ್ಶನೇ ಚೈವ ಮನಶ್ಚಾನ್ಯತ್ತಥೇನ್ದ್ರಿಯಮ್ ॥ ೧೫ ॥
ಕಲ್ಪ್ಯೋಪಾಧಿಭಿರೇವೈತದ್ಭಿನ್ನಂ ಜ್ಞಾನಮನೇಕಧಾ ।
ಆಧಿಭೇದಾದ್ ಯಥಾ ಭೇದೋರ್ಮಣೇರೇಕಸ್ಯ ಜಾಯತೇ ॥೧೬॥
ಜಾಗ್ರತಶ್ಚ ತಥಾ[1] ಭೇದೋ ಜ್ಞಾನಸ್ಯಾಸ್ಯ ವಿಕಲ್ಪಿತಃ ॥ ೧೬$\frac{೧}{೨}$ ॥

೧೩–೧೬$\frac{೧}{೨}$. ಅದೇ ಮೊದಲಿನ ವೇದವು, ಮಿಕ್ಕದ್ದು ವೇದ್ಯವಾದ್ದರಿಂದ ಕಲ್ಪಿತವಾಗಿರುತ್ತದೆ[2]. ಕನಸಿನಲ್ಲಿ ಯಾವದರಿಂದ ಎಲ್ಲವನ್ನೂ ಮಾಯೆಯಿಂದ ತಿಳಿಯುತ್ತಾನೋ ಅದು ವೇದವು; ಯಾವದರಿಂದ ಕಾಣುತ್ತಾನೋ ಅದು ಚಕ್ಷುಸ್ಸು; ಯಾವದರಿಂದ ಕೇಳುತ್ತಾನೋ ಅದು ಶ್ರೋತ್ರವು. ಕನಸಿನಲ್ಲಿರುವವನು ಯಾವದರಿಂದ ಮಾತನಾಡುತ್ತಾನೋ ಅದು ವಾಕ್ಕು; ಘ್ರಾಣ, ರಸನ, ಸ್ಪರ್ಶನ– ಮುಂತಾದ ಮಿಕ್ಕ ಇಂದ್ರಿಯವೂ ಮನಸ್ಸೂ ಹಾಗೆಯೇ[3]. ಉಪಾಧಿಯ ಭೇದದಿಂದ ಹೇಗೆ ಒಂದೇ (ಸ್ಫಟಿಕ)ಮಣಿಗೆ ಭೇದವುಂಟಾಗುವದೋ[4] ಹಾಗೆ ಈ ಜ್ಞಾನವೂ ಅನೇಕವೆಂದು ಉಪಾಧಿಗಳಿಂದಲೇ ಕಲ್ಪಿಸಬೇಕಾಗಿರುತ್ತದೆ. ಎಚ್ಚರವಾಗಿರುವವನ ಈ ಜ್ಞಾನಕ್ಕೂ ಹಾಗೆಯೇ ಭೇದವು ವಿಕಲ್ಪಿತವಾಗಿರುತ್ತದೆ[5].

ದ್ವೈತವು ಅವಿದ್ಯಕ

ಬುದ್ಧಿಸ್ಥಂ ವ್ಯಾಕರೋತ್ಯರ್ಥಂ ಭ್ರಾನ್ತ್ಯಾ ತೃಷ್ಣೋದ್ಭವಕ್ರಿಯಃ ॥೧೭॥
ಸ್ವಪ್ನೇ ತದ್ವತ್ ಪ್ರಬೋಧೇ ಯೋ ಬಹಿಶ್ಚಾನ್ತಸ್ತಥೈವ ಚ ।
ಆಲೇಖ್ಯಾಧ್ಯಯನೇ ಯದ್ವತ್ತದನ್ಯೋಽನ್ಯಧಿಯೋದ್ಭವಮ್ ॥ ೧೮ ॥

---

1. 'ಯಥಾ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2. ವೇದವೆಂದು ಜನರು ಕರೆಯುವ ಶಬ್ದವು ಕಲ್ಪಿತವು; ಪರಮಾರ್ಥವಾದ ವೇದವು ಆತ್ಮನೇ.

3. ಕನಸಿನಲ್ಲಿ ಯಾವ ಆತ್ಮನಿಂದ ನೋಡುವದು, ಕೇಳುವದು– ಮುಂತಾದವುಗಳಾಗುತ್ತವೆಯೋ ಆ ಆತ್ಮನೇ ಚಕ್ಷುಸ್ಸು ಮುಂತಾದ ಹೆಸರಿಗೆ ತಕ್ಕವನು.

4. ಉಂಟಾದಂತೆ ತೋರುವದೋ.

5. ಕನಸಿನಲ್ಲಿ ಆಯಾ ವ್ಯಾಪಾರದಿಂದ ಒಂದೇ ಜ್ಞಾನಕ್ಕೆ ಬೇರೆಬೇರೆಯ ಹೆಸರುಗಳು ಬಂದರೂ ಹೇಗೆ ಅದು ಒಂದೇ ಆಗಿರುವದೋ ಹಾಗೆಯೇ ಎಚ್ಚರದಲ್ಲಿಯೂ ಆತ್ಮಚೈತನ್ಯವೊಂದೇ ಬೇರೆಬೇರೆಯ ಹೆಸರುಗಳನ್ನು ಪಡೆಯುತ್ತದೆ. ಒಂದನ್ನೇ ಅನೇಕವೆಂದು ವಿಕಲ್ಪಿಸಿರುತ್ತಾರೆ.

೧೭–೧೮. ಕಾಮನಿಂದ ಉಂಟಾಗುವ ಕರ್ಮದಿಂದ ಅಂತಃಕರಣದಲ್ಲಿರುವ ಅರ್ಥವನ್ನೇ ಭ್ರಾಂತಿಯಿಂದ ವಿಂಗಡವಾಗಿ ಮಾಡಿಕೊಳ್ಳುತ್ತಾನೆ[1]. ಕನಸಿನಲ್ಲಿಯೂ ಅದರಂತೆ ಎಚ್ಚರವಲ್ಲಿಯೂ ಹೊರಗೂ ಒಳಗೂ ಯಾವ ಯಾವದು (ಇರುವದೋ ಅದು) ಬರೆದದ್ದು, ಓದುವದು – ಇವುಗಳಂತೆ ಒಂದರ ಬುದ್ಧಿಯಿಂದೊದು ಆದದ್ದಾಗಿರುತ್ತದೆ[2].

ಯದಾಯಂ ಕಲ್ಪಯೇದ್ಭೇದಂ ತತ್ಕಾಮಃ ಸನ್ ಯಥಾಕೃತುಃ ।
ಯತ್ಕಾಮಸ್ತತ್ಕೃತುರ್ಭೂತ್ವಾ ಕೃತಂ ಯತ್ ತೆತ್ಪ್ರಪದ್ಯತೇ ॥ ೧೯ ॥

೧೯. ಯಾವಾಗ ಇವನು (ತನ್ನ) ಮನೋನಿಶ್ಚಯಕ್ಕನುಗುಣವಾಗಿ ಅದೇ ಬಯಕೆಯಿಂದ ಭೇದವನ್ನು ಕಲ್ಪಿಸುವನೋ ಆಗ ಬಯಕೆಯಿದ್ದಂತೆ ನಿಶ್ಚಯವುಳ್ಳವನಾಗಿ ಮಾಡಿದ್ದನ್ನು ಪಡೆದುಕೊಳ್ಳುತ್ತಾನೆ[3].

ಅವಿದ್ಯಾಪ್ರಭವಂ ಸರ್ವಮಸತ್ತಸ್ಮಾದಿದಂ ಜಗತ್ ।
ತದ್ಧತಾ ದೃಶ್ಯತೇ ಯಸ್ಮಾತ್ ಸುಷುಪ್ತೇ ನ ಚ ಗೃಹ್ಯತೇ ॥ ೨೦ ॥

೨೦. ಆದ್ದರಿಂದ ಈ ಜಗತ್ತೆಲ್ಲವೂ ಅವಿದ್ಯೆಯುಂಟಾಗಿರುವದರಿಂದ ಅಸತ್ತಾಗಿರುತ್ತದೆ. ಏಕೆಂದರೆ ಅವಿದ್ಯಾವಂತನಿಗೇ ಅದು ಕಾಣಿಸುತ್ತದೆ, ಆದರೆ ತನ್ನ ದೈಯಲ್ಲಿ ಕಾಣಿಸುವದಿಲ್ಲ[4].

ಜ್ಞಾನವನ್ನು ಸಾಧನಗಳಿಂದ ಸಂಪಾದಿಸಿಕೊಳ್ಳಬೇಕು

ವಿದ್ಯಾವಿದ್ಯೇ ಶ್ರುತಿಪ್ರೋಕ್ತೇ ಏಕತ್ವಾನ್ಯಧಿಯೌ ಹಿ ನಃ ।
ತಸ್ಮಾತ್ ಸರ್ವಪ್ರಯತ್ನೇನ ಶಾಸ್ತ್ರೇ ವಿದ್ಯಾ ವಿಧೀಯತೇ ॥ ೨೧ ॥

---

1. ಅಂತಃಕರಣದಲ್ಲಿ ವಾಸನಾತ್ಮಕವಾಗಿರುವದೂ ಹೊರಗೆ ವಸ್ತುವಾಗಿ ಕಾಣುವದೂ ಎರಡೂ ಕಲ್ಪಿತವೇ.

2. ಕಲ್ಪಿತವಾದ ಹೊರಗಿನ ಪದಾರ್ಥವೂ ಕಲ್ಪಿತವಾದ ವಾಸನೆಯೂ ಓದುಬರಹಗಳಂತೆ ಒಂದನ್ನೊಂದು ಅವಲಂಬಿಸಿಕೊಂಡಿರುತ್ತವೆ; ಕನಸು, ಎಚ್ಚರ – ಈ ಎರಡವಸ್ಥೆಗಳಲ್ಲಿಯೂ ಇದು ಸಮಾನವಾಗಿರುತ್ತದೆ. ಮಾಂ. ಕಾ. ಭಾ. ೨–೯ರಿಂದ ೧೫ರ ವರೆಗಿನ ಗ್ರಂಥವನ್ನು ನೋಡಿ.

3. ಬೃ. ೪–೪–೫. ಅವಿದ್ಯಾಕಾಮಕರ್ಮಗಳಿಂದಲೇ ದ್ವೈತವು ತೋರುತ್ತದೆ ಎಂದರ್ಥ.

4. ಜಗತ್ತು ನಾಮರೂಪಕರ್ಮಾತ್ಮಕವಾಗಿದ್ದು ಅನ್ಯೋನ್ಯಾಶ್ರಿತವಾಗಿರುವದರಿಂದಲೂ ಅವಿದ್ಯಾವಾಸನೆಯೂ ಕಾಮಕರ್ಮಗಳೂ ಒಂದನ್ನಾಶ್ರಯಿಸಿ ಒಂದು ಎಚ್ಚರಕನಸುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರೂ ಸುಷುಪ್ತಿಯಲ್ಲಿ ಕಾಣದೆ ಇರುವದರಿಂದಲೂ ಅಸತ್ತು, ಹುಸಿತೋರಿಕೆ.

೨೧. ಶ್ರುತಿಯಲ್ಲಿ ಹೇಳಿರುವ ವಿದ್ಯಾವಿದ್ಯೆಗಳೆಂದರೆ ಏಕತ್ವಬುದ್ಧಿ, ಮತ್ತೊಂದೆಂಬ ಬುದ್ಧಿ – ಇನೇ ಎಂಬುದು ನಮ್ಮ (ಮತವು). ಆದ್ದರಿಂದ[1] ಸರ್ವಪ್ರಯತ್ನದಿಂದಲೂ ಶಾಸ್ತ್ರದಲ್ಲಿ ವಿದ್ಯೆಯನ್ನು ಉಪದೇಶಿಸಿರುತ್ತದೆ.

ಚಿತ್ತೇ ಹ್ಯಾದರ್ಶವದ್ಯಸ್ಮಾಚ್ಛುದ್ಧೇ ವಿದ್ಯಾ ಪ್ರಕಾಶತೇ ।
ಯಮೈರ್ನಿತ್ಯೈಶ್ಚ ಯಜ್ಞೈಶ್ಚ ತಪೋಭಿಸ್ತಸ್ಯ ಶೋಧನಮ್ ॥

೨೨. ಚಿತ್ತವು ಕನ್ನಡಿಯಂತೆ ಶುದ್ಧವಾದರೆ ವಿದ್ಯೆಯು ತೋರಿಕೊಳ್ಳುತ್ತದೆ. ಆದ್ದರಿಂದ ಯಮಗಳಿಂದಲೂ ನಿತ್ಯಕರ್ಮಗಳಾದ ಯಜ್ಞಗಳಿಂದಲೂ ತಪಸ್ಸುಗಳಿಂದಲೂ ಆ (ಚಿತ್ತದ) ಶುದ್ಧಿ(ಯನ್ನು ಮಾಡಿಕೊಳ್ಳಬೇಕು)[2].

ಶಾರೀರಾದಿತಪಃ ಕುರ್ಯಾತ್ ತದ್ವಿಶುದ್ಧ್ಯರ್ಥಮುತ್ತಮಮ್ ।
ಮನಆದಿ ಸಮಾಧಾನಂ ತತ್ತದ್ದೇಹವಿಶೋಷಣಮ್ ॥ ೨೩ ॥
ಮನಸಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ ।
ತಜ್ಜ್ಞಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ ॥ ೨೪ ॥

೨೩–೨೪. ಅದರ ವಿಶುದ್ಧಿಗಾಗಿ ಆಯಾ ದೇಹವನ್ನು ಸೊರಗಿಸುವ ಉತ್ತಮವಾದ ಶಾರೀರಾದಿತಪಸ್ಸನ್ನೂ[3] ಮನಸ್ಸೇ ಮುಂತಾದವುಗಳ ಸಮಾಧಾನವನ್ನೂ ಮಾಡಬೇಕು. ಮನಸ್ಸಿನ ಮತ್ತು ಇಂದ್ರಿಯಗಳ ಏಕಾಗ್ರತೆಯೇ ಹೆಚ್ಚಿನ ತಪಸ್ಸು; ಅದು ಸರ್ವಧರ್ಮಗಳಿಗಿಂತಲೂ ಹೆಚ್ಚಿನದು. ಅದೇ ಪರಮಧರ್ಮವೆನಿಸುತ್ತದೆ[4].

ಅವಸ್ಥಾತ್ರಯಪರೀಕ್ಷೆಯಿಂದ ಜ್ಞಾನ

ದೃಷ್ಟಂ ಜಾಗರಿತಂ ವಿದ್ಯಾತ್ ಸ್ಮೃತಂ ಸ್ವಪ್ನಂ ತದೇವ ತು ।
ಸುಷುಪ್ತಂ ತದಭಾವಂ ಚ ಸ್ವಮಾತ್ಮಾನಂ ಪರಂ ಪದಮ್ ॥ ೨೫ ॥
ಸುಷುಪ್ತ್ಯಾಖ್ಯಂ ತಮೋಽಜ್ಞಾನಂ ಬೀಜಂ ಸ್ವಪ್ನಪ್ರಬೋಧಯೋಃ ।
ಸ್ವಾತ್ಮಬೋಧಪ್ರದಗ್ಧಂ ಸ್ಯಾದ್ಬೀಜಂ ದಗ್ಧಂ ಯಥಾಭವನ್ ॥೨೬॥

---

1. ಅನಿತ್ಯೆಯಿಂದಲೇ ವ್ಯೆತಾನರ್ಥವು ತೋರುತ್ತಿರುವದರಿಂದ ಮತ್ತು ಏಕತ್ವ ಬುದ್ಧಿಯಿಂದ ಎಲ್ಲವೂ ನಾಶವಾಗುವದರಿಂದ.

2. ಸಾಧನಗಳೆಲ್ಲ ಚಿತ್ತ ಶುದ್ಧಿಯ ಮೂಲಕ ಜ್ಞಾನೋತ್ಪತ್ತಿಗಾಗಿಯೇ ಹೊರತು ಮೋಕ್ಷಕ್ಕೆ ನೇರಾದ ಸಾಧನವೆಂದಲ್ಲ ಎಂದು ಅಭಿಪ್ರಾಯ.

3. ಗೀತೆಯು ಪದಿನೇಳನೆಯ ಅಧ್ಯಾಯದಲ್ಲಿ ಇವನ್ನು ವಿವರಿಸಿದೆ. ಸಾತ್ತ್ವಿಕವಾದ ತಪಸ್ಸಿನಿಂದ ಸ್ಥೂಲದೇಹವನ್ನೂ ಸೂಕ್ಷ್ಮದೇಹವನ್ನೂ ಶುದ್ಧಿಗೊಳಿಸಿಕೊಳ್ಳಬೇಕು.

4. ಮೋಕ್ಷಧರ್ಮ ೨೪೯–೪ರಲ್ಲಿ ಇಂದ್ರಿಯಗಳ ಮತ್ತು ಮನಸ್ಸಿನ ಸಮಾಧಾನವೇ ಹೆಚ್ಚಿನ ತಪಸ್ಸು ಎಂದು ಹೇಳಿವೆ. ಅದನ್ನು ಇಲ್ಲಿ ಉದಾಹರಿಸಿವೆ.

೨೫–೨೬. ನೋಡಿದ್ದನ್ನು ಎಚ್ಚರವೆಂದು ತಿಳಿಯಬೇಕು. ನೆನಸಿಕೊಂಡ ಅದನ್ನೇ ಕನಸೆಂದು ತಿಳಿಯಬೇಕು. ಅವುಗಳ ಅಭಾವವನ್ನು[1] ತನಿನಿದ್ರೆ ಎಂದು ತಿಳಿಯಬೇಕು. ತನ್ನ ಆತ್ಮನನ್ನು[2] ಪರಮಪದವೆಂದು ತಿಳಿಯಬೇಕು. ಕನಸು, ಎಚ್ಚರ – ಇವೆರಡಕ್ಕೂ ಕಾರಣವಾಗಿರುವ ತನಿನಿದ್ರೆ ಎಂಬ ಕತ್ತಲೆಯ ಅಜ್ಞಾನವು ಆತ್ಮಜ್ಞಾನದಿಂದ ಸುಟ್ಟುಹೋದರೆ ಸುಟ್ಟ ಬೀಜದಂತೆ ಹುಟ್ಟಿಲ್ಲವಾಗುವದು[3].

ತದೇವೈಕಂ ತ್ರಿಧಾ ಜ್ಞೇಯಂ ಮಾಯಾಬೀಜಂ ಪುನಃ ಕ್ರಮಾತ್ ।
ಮಾಯಾವ್ಯಾತ್ಮಾವಿಕಾರೋಽಪಿ ಬಹುಧೈಕೋ ಜಲಾರ್ಕವತ್ ॥೨೭॥
ಬೀಜಂ ಚೈಕಂ ಯಥಾಭಿನ್ನಂ ಪ್ರಾಣಸ್ವಪ್ನಾದಿಭಿಸ್ತಥಾ ।
ಸ್ವಪ್ನಜಾಗ್ರಚ್ಛರೀರೇಷು ತದ್ವದಾತ್ಮಾ ಜಲೇನ್ದುವತ್ ॥ ೨೮ ॥

೨೭–೨೮. ಮತ್ತು ಆವೊಂದು ಮಾಯಾಬೀಜವೇ ಕ್ರಮವಾಗಿ ಮೂರು ಬಗೆಯಾಗಿರುವದೆಂದು ತಿಳಿಯಬೇಕು[4]. ಮಾಯಾವಿಯಾದ ಆತ್ಮನು ಯಾವ ವಿಕಾರವೂ ಇಲ್ಲದವನಾದರೂ (ನೀರಿನಲ್ಲಿ ಕಾಣಿಸುವ) ಜಲಚಂದ್ರನಂತೆ ಒಬ್ಬನೇ ಅನೇಕರೂಪನಾಗಿ ಕಾಣುತ್ತಾನೆ. ಒಂದೇ ಬೀಜವು ಸುಷುಪ್ತಿ, ಸ್ವಪ್ನ – ಮುಂತಾದ ರೂಪಗಳಿಂದ ಹೇಗೆ ಬೇರ್ಪಡುತ್ತಿರುವದೋ ಹಾಗೆಯೇ ಕನಸು, ಎಚ್ಚರಗಳ ಶರೀರಗಳಲ್ಲಿ ಆತ್ಮನು ಜಲಚಂದ್ರನಂತೆ (ಬೇರೆಬೇರೆ ರೂಪವನ್ನು ಹೊಂದುತ್ತಿರುವನು)[5].

---

1. ದರ್ಶನಸ್ಮರಣಗಳ ಅಭಾವವನ್ನು ಎಂದರ್ಥ.

2. ದರ್ಶನಸ್ಮರಣಗಳ ಅಭಾವಕ್ಕೂ ಸಾಕ್ಷಿಯಾಗಿರುವವನೇ ತನ್ನ ಆತ್ಮನು; ಇವನನ್ನು ತುರೀಯನು ಎಂದು ಮಾಂಡೂಕ್ಯದಲ್ಲಿ ಕರೆದಿದೆ.

3. ನಿದ್ರೆಯೆಂಬುದು ಎರಡನೆಯ ವಸ್ತುವಿಲ್ಲದ್ದರಿಂದ ಅರಿಯದಿರುವದು ಎಂದು ಅರಿತುಕೊಂಡರೆ ಅವಸ್ಥೆಯಲ್ಲವೆ ಹೋಗುವದು. ಆಗ ಅಜ್ಞಾನವು ಹೋದಂತೆ. ಇದು ಮುಂದೆ ಸ್ಪುಟವಾಗುವದು.

4. ಅವಿದ್ಯಾಕಲ್ಪಿತವಾಯಾಬೀಜವೇ ಅವಸ್ಥಾತ್ರಯವಾಗಿ ತೋರುವದು.

5. ಅಭಿನ್ನನಾದರೂ ಪರಮಾತ್ಮನು ಉಪಾಧಿವಶದಿಂದ ಜಲಾಶಯದಲ್ಲಿ ಅನೇಕವಾಗಿ ಕಾಣುವ ಚಂದ್ರಪ್ರತಿಬಿಂಬಗಳಂತೆ ಬೇರೆಬೇರೆಯಾಗಿ ಕಾಣುತ್ತಿರುವನು – ಎಂಬ ಪುರಾಣವಾಕ್ಯದ ಅಭಿಪ್ರಾಯವನ್ನು ಇಲ್ಲಿ ಸಂಗ್ರಹಿಸಿದೆ. ಆತ್ಮನು ಮಾಯಾವಿ ಎಂದದ್ದರಿಂದ ಪರಮಾರ್ಥವಾಗಿ ಅನೇಕವಾಗಿಲ್ಲ ಎಂಬ ಅಭಿಪ್ರಾಯವು ಸೂಚಿತವಾಗಿದೆ. ಮುಂದಿನ ನಾಲ್ಕು ಶ್ಲೋಕಗಳಲ್ಲಿ ಇದು ಸ್ಪುಟವಾಗುವದು.

ಮಾಯಾಹಸ್ತಿಸಮಾರುಹ್ಯ ಮಾಯಾವ್ಯೇಕೋ ಯಥಾ ವ್ರಜೇತ್ ।
ಆಗಚ್ಛಂ ಸ್ತದ್ವದೇವಾತ್ಮಾ ಪ್ರಾಣಸ್ವಪ್ನಾದಿಗೋ ಚಲಃ ॥ ೩೯॥

ನ ಹಸ್ತೀ ನ ತದಾರೂಢೋ ಮಾಯಾವ್ಯನ್ಯೋ ಯಥಾ ಸ್ಥಿತಃ ।
ನ ಪ್ರಾಣಾದಿ ನ ತದ್ದ್ರಷ್ಟಾ ತಥಾ ಜ್ಞೋಽನ್ಯಃ ಸದಾ ದೃಶಿಃ ॥ ೪೦ ॥

ಅಬದ್ಧಚಕ್ಷುಷೋ ನಾಸ್ತಿ ಮಾಯಾ ಮಾಯಾವಿನೋಽಪಿ ವಾ ।
ಬದ್ಧಾಕ್ಷಸ್ಯೈವ ಸಾ ಮಾಯಾ ಮಾಯಾವ್ಯೇವ ತತೋ ಭವೇತ್॥೪೧॥

ಸಾಕ್ಷಾದ್ದೇವಃ ಸ ವಿಜ್ಞೇಯಃ ಸಾಕ್ಷಾದಾತ್ಮೇತಿ ಚ ಶ್ರುತೇಃ ।
ಭಿದ್ಯತೇ ಹೃದಯಗ್ರನ್ಥಿರ್ನ ಚೇದಿತ್ಯಾದಿತಃ ಶ್ರುತೇಃ ॥ ೪೨ ॥

೩೯-೪೨. ಮಾಯೆಯು ಆನೆಯನ್ನೇರಿ ಮಾಯಾವಿಯೊಬ್ಬನೇ ಹೇಗೆ ಹೋಗಿಬಂದೂ ಮಾಡುತ್ತಿರುವನೋ ಅದರಂತೆ ಆತ್ಮನು ಪ್ರಾಣಸ್ವಪ್ನಾದಿಗಳನ್ನು ಪಡೆಯುತ್ತಾ ಸಂಚರಿಸುತ್ತಿರುವನು. (ಬೇರೆ) ನಿಂತಿರುವ ಮಾಯಾವಿಯು ಹೇಗೆ ಆನೆಯೂ ಅಲ್ಲದೆ, ಅದನ್ನು ಏರಿದವನೂ ಅಲ್ಲದೆ ಬೇರೆಯಾಗಿಯೇ ಇರುವನೋ ಅದರಂತೆ ನಿತ್ಯದೃಗ್ರೂಪನಾದ ಜ್ಞೈತನ್ಯ(ರೂಪನಾದ ಆತ್ಮನು) ಪ್ರಾಣಾದ್ಯವಸ್ಥೆಗಳೂ[1] ಅಲ್ಲ, ಅವುಗಳನ್ನು ನೋಡುವವನೂ ಅಲ್ಲ, ಬೇರೆಯಾಗಿಯೇ ಇರುತ್ತಾನೆ[2]. ಕಣ್ಣುಕಟ್ಟು ಇಲ್ಲದವನಿಗೆ ಮಾಯೆಯಿಲ್ಲ, ಮಾಯಾವಿಗೂ ಇಲ್ಲ; ಕಣ್ಣುಕಟ್ಟಿದ್ದವನಿಗೆ ಮಾತ್ರವೇ ಆ ಮಾಯೆಯಿರುತ್ತದೆ. ಆದ್ದರಿಂದ ಅವಿದ್ಯಾಮಯವೇ ಆಗಿರುತ್ತಾನೆ[3]. ಆ (ಆತ್ಮನು) ಸಾಕ್ಷಾತ್ತಾಗಿಯೇ ತಿಳಿಯಬೇಕು. "ಸಾಕ್ಷಾತ್" (ಬೃ. ೩-೪-೧), 'ಆತ್ಮಾ' (ಬೃ. ೩-೪-೧, ೩-೫-೧) "ಹೃದಯಗ್ರಂಥಿಗಳು ಬಿಚ್ಚಿಕೊಳ್ಳುತ್ತವೆ"

---

1. ಸುಷುಪ್ತಾವಸ್ಥೆಯಲ್ಲಿ ಇಂದ್ರಿಯಗಳು ಸುಪ್ತವಾಗಿರುವಲ್ಲಿ ಪ್ರಾಣವು ಕೆಲಸ ಮಾಡುತ್ತಿರುವದರಿಂದಲೂ ಸುಷುಪ್ತದಲ್ಲಿರುವ ಆತ್ಮನನ್ನು ಪ್ರಾಣನೆಂದು ಶ್ರುತಿಯಲ್ಲಿ ಕರೆದಿರುವದರಿಂದಲೂ ಪ್ರಾಣನಂಬದ್ಧವಾದ ಈ ಅವಸ್ಥೆಯನ್ನೇ ಇಲ್ಲಿ 'ಪ್ರಾಣ' ಎಂದು ಕರೆದಿದೆ.

2. ಅವಸ್ಥೆಗಿಂತಲೂ ಅವಸ್ಥೆಯನ್ನು ಅನುಭವಿಸುವ ರೂಪಕ್ಕಿಂತಲೂ ಬೇರೆಯಾದ ಸಾಕ್ಷಿಯೇ ಆಗಿರುತ್ತಾನೆ.

3. ಅವಿದ್ಯೆಯುಳ್ಳವನಿಗೆ ಅವಸ್ಥೆಗಳಿರುತ್ತವೆ. ಆತ್ಮನಿಗಾಗಲಿ, ಆತ್ಮಜ್ಞಾನದಿಂದ ಅವಿದ್ಯೆಯನ್ನು ಕಳೆದುಕೊಂಡವನಿಗಾಗಲಿ ಅವಸ್ಥೆಗಳು ನಿಜವಾಗಿರುವದಿಲ್ಲ – ಎಂಬರ್ಥವನ್ನು ಈ ದೃಷ್ಟಾಂತದಿಂದ ಗ್ರಹಿಸಬೇಕು.

(ಮುಂ. ೨-೨-೪), "(ಅರಿತು)ಕೊಳ್ಳಲಿಲ್ಲವಾದರೆ" (ಬೃ. ೪-೪-೧೪) -ಎಂಬುದೇಮುಂತಾದ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ)[1].

ಆತ್ಮನು ಅವಿಷಯನಾದರೂ ಅವನನ್ನು ಅರಿತುಕೊಳ್ಳಬಹುದು

ಅಶಬ್ದಾದಿತ್ವತೋ ನಾಸ್ಯ ಗ್ರಹಣಂ ಚೇನ್ದ್ರಿಯೈರ್ಭವೇತ್ ।
ಸುಖಾದಿಭ್ಯಸ್ತಥಾನ್ಯತ್ವಾದ್ಬುದ್ಧ್ಯಾ ವಾಪಿ ಕಥಂ ಭವೇತ್ ॥ ೩೩ ॥
ಅದೃಶ್ಯೋಽಪಿ ಯಥಾ ರಾಹುಶ್ಚನ್ದ್ರೇ ಬಿಮ್ಬಂ ಯಥಾಮ್ಭಸಿ ।
ಸರ್ವಗೋಽಪಿ ತಥೈವಾತ್ಮಾ ಬುದ್ಧಾವೇವ ಸ ಗೃಹ್ಯತೇ ॥ ೩೪ ॥

೩೩-೩೪. ಶಬ್ದವೇ ಮುಂತಾದವುಗಳಿಲ್ಲದ್ದರಿಂದ[2] ಅವನನ್ನು ಇಂದ್ರಿಯಗಳಿಂದ ಅರಿಯುವದು ಆಗಲಾರದು. ಸುಖಾದಿಗಳಿಗಿಂತ ಬೇರೆಯಾಗಿರುವದರಿಂದ[3] ಬುದ್ಧಿಯಿಂದಲೂ ಗ್ರಹಿಸುವದು ಹೇಗೆ ಆದೀತು ? ರಾಹುವು ಅದೃಶ್ಯನಾದರೂ ಚಂದ್ರನಲ್ಲಿ ಕಾಣುವಂತೆಯೂ (ಚಂದ್ರಾದಿಗಳ) ಪ್ರತಿಬಿಂಬವು ನೀರಿನಲ್ಲಿ ಕಾಣುವಂತೆಯೂ ಆ ಆತ್ಮನು ಸರ್ವಗತನಾಗಿದ್ದರೂ ಬುದ್ಧಿಯಲ್ಲಿಯೇ ಕಾಣಿಸುತ್ತಾನೆ[4].

ಭಾನೋರ್ಬಿಮ್ಬಂ ಯಥಾ ಚೌಷ್ಣ್ಯಂ ಜಲೇ ದೃಷ್ಟಂ ನ ಚಾಮ್ಭಸಃ ।
ಬುದ್ಧೌ ಬೋಧೋ ನ ತದ್ಧರ್ಮಸ್ತಥೈವ ಸ್ಯಾದ್ವಿಧರ್ಮತಃ ॥ ೩೫ ॥
ಚಕ್ಷುರ್ಯುಕ್ತಾ ಧಿಯೋವೃತ್ತಿರ್ಯಾ ತಾಂ ಪಶ್ಯನ್ನಲುಪ್ತದೃಕ್ ।
ದೃಷ್ಟೇರ್ದ್ರಷ್ಟಾ ಭವೇದಾತ್ಮಾ ಶ್ರುತೇಃ ಶ್ರೋತಾ ತಥಾ ಭವೇತ್ ॥
ಕೇವಲಾಂ ಮನಸೋ ವೃತ್ತಿಂ ಪಶ್ಯನ್ ಮನ್ತಾ ಮತೇರಜಃ ।
ವಿಜ್ಞಾತಾಲುಪ್ತಶಕ್ತಿತ್ವಾತ್ ತಥಾ ಶಾಸ್ತ್ರಂ ನ ಹೀತರ್ತ್ಯಃ ॥ ೩೭ ॥

---

1. ಆತ್ಮನು ನಮಗೆ ವ್ಯವಹಿತನಲ್ಲ, ನಮ್ಮ ಸ್ವರೂಪವೇ ; ಅವನನ್ನು ಅರಿತುಕೊಂಡರೆ ಎಲ್ಲಾ ಅನರ್ಥಗಳೂ ನಾಶವಾಗುತ್ತವೆ, ಇಲ್ಲದಿದ್ದರೆ ಅನರ್ಥಗಳು ತಪ್ಪುವದಿಲ್ಲ - ಎಂಬೀ ಅರ್ಥಗಳು ಕ್ರಮವಾಗಿ ಶ್ರುತಿವಚನಗಳಲ್ಲಿ ಉಕ್ತವಾಗಿವೆ. ಈ ಆತ್ಮಸ್ವರೂಪವನ್ನು ಹೇಗೆ ಕಂಡುಕೊಳ್ಳಬೇಕೆಂಬುದನ್ನೂ ಆತ್ಮಜ್ಞಾನದ ಫಲವನ್ನೂ ಮುಂದಿನ ಹನ್ನೊಂದು ಶ್ಲೋಕಗಳಲ್ಲಿ ತಿಳಿಸಲಾಗುವದು.

2. ಕ. ೧-೩-೧೫ ನ್ನು ನೋಡಿ.

3. ಹಿಂದಿನ ಪ್ರಕರಣದಲ್ಲಿ ವೈಶೇಷಿಕಮತವಿಮರ್ಶೆಯಲ್ಲಿ ಇದು ಸಿದ್ಧವಾಗಿರುತ್ತದೆ.

4. ವಿಷಯನಾಗಿ ಎಂದೇನೂ ಅರ್ಥವಲ್ಲ ; ಇದರ ವಿವರವನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿದೆ. ಆತ್ಮನಿಗೆ ನಿಜವಾಗಿ ಪ್ರತಿಬಿಂಬವುಂಟೆಂದೂ ಅರ್ಥವಲ್ಲ.

೩೫–೩೭. ನೀರಿನಲ್ಲಿ ಕಾಣುವ ಸೂರ್ಯನ ಪ್ರತಿಬಿಂಬವೂ, ಬಿಸಿಯೂ ಹೇಗೆ ನೀರಿನಲ್ಲಿಲ್ಲವೋ ಅದರಂತೆ ಬುದ್ಧಿಯಲ್ಲಿ ಕಾಣುವ ಅರಿವೂ[1] ಅದರ ಧರ್ಮವಾಗಲಾರದು. ಏಕೆಂದರೆ ಅದು ವಿರುದ್ಧವಾದ ಧರ್ಮವುಳ್ಳದ್ದಾಗಿದೆ[2]. ಚಕ್ಷುರಿಂದ್ರಿಯಸಹಿತವಾದ ಅಂತಃಕರಣವಿದೆಯಲ್ಲ, ಅದನ್ನು ನೋಡುವ ಅಲುಪ್ತದೃಷ್ಟಿಯ ಆತ್ಮನು ದೃಷ್ಟಿಗೆ ದ್ರಷ್ಟೃವಾಗಿರುವನು, ಹಾಗೆಯೇ ಶ್ರುತಿಗೆ ಶ್ರೋತೃವಾಗುವನು ; ಬರಿಯ ಮನಸ್ಸಿನ ವೃತ್ತಿಯನ್ನು ಅರಿಯುವ ಜನ್ಯರಹಿತನಾದ ಆತ್ಮನು ಮತಿಯ ಮಂತೃವಾಗುವನು. ಹಾಗೆಯೇ ಎಂದಿಗೂ ನಾಶವಾಗದ ಅರಿವಿನ ಶಕ್ತಿಯುಳ್ಳಾತನಾದ್ದರಿಂದ (ವಿಜ್ಞಾತಿಯ) ವಿಜ್ಞಾತೃವೆನಿಸುವನು[3]. "ನ ಹಿ" (ಇಲ್ಲವೇ ಇಲ್ಲ, ಬೃ. ೪-೩-೨೩ರಿಂದ ೩೦) ಎಂಬ ಶಾಸ್ತ್ರ(ವಚನ)ವಿರುವದರಿಂದ (ಹೀಗೆಂದು ತಿಳಿಯಬೇಕು.)

ಧ್ಯಾಯತೀತ್ಯವಿಕಾರಿತ್ವಂ[4] ತಥಾ ಲೇಲಾಯತೀತ್ಯಪಿ।
ಅತ್ರ ಸ್ತೇನೇತಿ[5] ಶುದ್ಧತ್ವಂ ತಥಾಽನನ್ವಾಗತಂ ಶ್ರುತೇಃ ॥ ೩೮ ॥
ಶಕ್ತ್ಯಲೋಪಾತ್ ಸುಷುಪ್ತೇ ಜ್ಞಸ್ತಥಾ ಬೋಧೇಽವಿಕಾರತಃ।
ಜ್ಞೇಯಸ್ಯೈವ ವಿಶೇಷಸ್ತು ಯತ್ರವೇತಿ ಶ್ರುತೇರ್ವಚಃ ॥ ೩೯ ॥

೩೮–೩೯. 'ಯೋಚಿಸುವಂತಿರುತ್ತಾನೆ' (ಧ್ಯಾಯತೀವ ಬೃ. ೪-೩-೭) ಎಂದೂ 'ಸಂಚರಿಸುವಂತಿರುತ್ತಾನೆ' (ಲೇಲಾಯತೀವ ಬೃ. ೪–೪–೭) ಎಂದೂ (ಶ್ರುತಿಯಲ್ಲಿ ಹೇಳಿರುವದರಿಂದ) ಅವಿಕಾರಿತ್ವವೂ, ಇಲ್ಲಿ ಕಳ್ಳನು ಕಳ್ಳನಲ್ಲದೆ

---

1. ಇದು ಚಿದಾಭಾಸವು. ಅಂತಃಕರಣವೃತ್ತಿಗಳು ಚಿತ್ತಿನಂತೆ ಬೆಳಗುತ್ತಾ ಚಿದ್ವ್ಯಾಪ್ತವಾಗಿಯೇ ಹುಟ್ಟುವವು.

2. ಅಂತಃಕರಣವು ಅಚೇತನವಾಗಿರುತ್ತದೆ ; ಆದರಲ್ಲಿ ಜ್ಞಾನವು ಎಲ್ಲಿಂದ ಬಂದೀತು? ಕನ್ನಡಿಯಲ್ಲಿ ಹೊಳಪು ಹೇಗೆ ಸೂರ್ಯನದೋ ಹಾಗೆ ಅಲ್ಲಿ ತೋರುವ ಜ್ಞಾನವು ಆತ್ಮನದೇ.

3. ಅಂತಃಕರಣದ ವೃತ್ತಿಗಳೂ ಇಂದ್ರಿಯದ ವ್ಯಾಪಾರಗಳೂ ಆದ ವಿಜ್ಞಾನ, ದೃಷ್ಟಿ ಮುಂತಾದವುಗಳನ್ನೂ ಬೆಳಗುವ ಚೈತನ್ಯವನ್ನೇ ಇಲ್ಲಿ ದೃಷ್ಟಿಯ ದ್ರಷ್ಟೃ ಎಂದು ಮುಂತಾಗಿ ಕರೆದಿದೆ.

4. 'ಧ್ಯಾಯತೀವ' ಎಂಬುದನ್ನು 'ಇವ' ಬಿಟ್ಟು ಉದಾಹರಿಸಿರುವದು ಛಂದಸ್ಸಿಗಾಗಿ ; 'ಲೇಲಾಯತಿ' ಎಂಬುದನ್ನೂ ಹೀಗೆಯೇ ಅರಿಯಬೇಕು.

5. 'ಅತ್ರ ಸ್ತೇನೋಽಸ್ತೇನಃ' ಎಂಬ ಶ್ರುತಿಯನ್ನು ಛಂದಸ್ಸಿಗಾಗಿ ಹೀಗೆ ಉದಾಹರಿಸಿದೆ. ಆತ್ಮನು ನಿತ್ಯಶುದ್ಧಮುಕ್ತಸ್ವಭಾವನು ಎಂಬುದನ್ನು ಇಲ್ಲಿ ಶ್ರುತಿಪ್ರಮಾಣದಿಂದ ಸಿದ್ಧಪಡಿಸಿರುತ್ತದೆ.

ಹೋಗುತ್ತಾನೆ, (ತತ್ರ ಸ್ತ್ಯೇನೋಽಸ್ತ್ಯೇನೋ ಭವತಿ ಬೃ. ೪-೩-೨೨) ಮತ್ತು "ಪುಣ್ಯದಿಂದ ಹಿಂಬಾಲಿಸ್ಪಡನು" (ಅನನ್ವಾಗತಂ ಪುಣ್ಯೇನ.... ಬೃ. ೪-೩-೨೨) ಎಂದು ಶುದ್ಧತ್ವವೂ ಸುಷುಪ್ತಿಯಲ್ಲಿ (ಚೈತನ್ಯ)ಶಕ್ತಿಯು ಲೋಪವಾಗದೆ ಇರುವದರಿಂದಲೂ (ಬೃ. ೪-೩-೨೩) ಜ್ಞಾನದಲ್ಲಿ ಯಾವ ವಿಕಾರವೂ ಇಲ್ಲದ್ದರಿಂದಲೂ ಚೈತನ್ಯಸ್ವರೂಪವೂ (ಇವನಿಗೆ ಸಿದ್ಧವಾಗುತ್ತದೆ). ವಿಶೇಷವಾದರೊ, ಜ್ಞೇಯಕ್ಕೇ ಸೇರಿದ್ದು.[1] "ಎಲ್ಲಿಯಾದರೆ (ಮತ್ತೊಂದಿರುವದೋ ಅಲ್ಲಿ ಒಬ್ಬನು ಮತ್ತೊಂದನ್ನು ಕಾಣುತ್ತಾನೆ (ಬೃ. ೪-೩-೪೧) ಎಂಬ ಶ್ರುತಿವಾಕ್ಯವು (ಇದಕ್ಕೆ ಪ್ರಮಾಣವು)[2].

ವ್ಯವಧಾನಾದ್ಧಿ ಪಾರೋಕ್ಷ್ಯಂ ಲೋಕವದ್ಭಷ್ಟೇರನಾತ್ಮನಃ ।
ದೃಷ್ಟೇರಾತ್ಮಸ್ವರೂಪತ್ವಾತ್ ಪ್ರತ್ಯಕ್ಷಂ ಬ್ರಹ್ಮ ತತ್ ಸ್ಮೃತೇಮ್ ॥೪೦॥
ನ ಹಿ ದೀಪಾನ್ತರಾಪೇಕ್ಷಾ ಯದ್ವದ್ದೀಪಪ್ರಕಾಶನೇ ।
ಬೋಧಸ್ಯಾತ್ಮಸ್ವರೂಪತ್ವಾನ್ನ ಬೋಧೋಽನ್ಯಸ್ತಥೇಷ್ಯತೇ ॥ ೪೧ ॥

೪೦–೪೧. ಅನಾತ್ಮ(ವಸ್ತು) ಜನರ ದೃಷ್ಟಿಗೆ ಮರೆಯಾಗಿರುವದರಿಂದ ಲ್ಲವೆ,[3] ಪರೋಕ್ಷವಾಗಿರುತ್ತದೆ ? (ಆತ್ಮನ) ದೃಷ್ಟಿಯು ಆತ್ಮಸ್ವರೂಪವೇ ಆಗಿರುವದರಿಂದ ಆ ಬ್ರಹ್ಮವು ಪ್ರತ್ಯಕ್ಷವೆನಿಸುವದು[4]. ದೀಪವನ್ನು ಬೆಳಗುವದಕ್ಕೆ ಮತ್ತೊಂದು ದೀಪವ ಅಪೇಕ್ಷೆಯಿರುವದಿಲ್ಲವಷ್ಟೆ. ಅದರಂತೆ ಜ್ಞಾನವು ಆತ್ಮಸ್ವರೂಪವೇ ಆಗಿರುವದರಿಂದ ಮತ್ತೊಂದು ಜ್ಞಾನವು ಬೇಕಿರುವದಿಲ್ಲ[5].

ವಿಷಯತ್ವಂ ವಿಕಾರಿತ್ವಂ ನಾನಾತ್ವಂ ವಾ ನ ಹೀಷ್ಯತೇ ।
ನ ಹೇಯೋ ನಾಪ್ಯುಪಾದೇಯೋ ಆತ್ಮಾ ನಾನ್ಯೇನ ವಾ ತತಃ ॥೪೨॥

೪೨. (ಆತ್ಮನಲ್ಲಿ) ವಿಷಯತ್ವವನ್ನಾಗಲಿ ವಿಕಾರಿತ್ವವನ್ನಾಗಲಿ ನಾನಾತ್ವವನ್ನಾಗಲಿ ಒಪ್ಪುವಹಾಗೇ ಇಲ್ಲವಷ್ಟೆ ? ಆದ್ದರಿಂದ ಆತ್ಮನು ಮತ್ತೊಬ್ಬರಾಗಲಿ (ತಾನಾಗಲಿ) ಬಿಡತಕ್ಕವನಲ್ಲ, ತೆಗೆದುಕೊಳ್ಳತಕ್ಕವನೂ ಅಲ್ಲ.

---

1. ವಿಷಯವಾದ ಅಂತಃಕರಣಾದಿಗಳಿಗೇ ಸೇರಿದ್ದು.

2. ಈ ಶ್ರುತಿಯಲ್ಲಿ ಆತ್ಮನೊಬ್ಬನೇ ಇರುವಲ್ಲಿ ಯಾವ ವಿಶೇಷನನ್ನೂ ಕಾಣುವ ಹಾಗಿಲ್ಲವೆಂಬ ಪಾತ್ಯಶೇಷಿಕಿದೆ.

3. ದೇಶ, ಕಾಲ, ಇನ್ನೊಂದು ವಸ್ತು- ಇವುಗಳು ನಡುವೆ ಬಂದು ಮರೆಯಾಗಿರುವದರಿಂದ.

4. ಪರೋಕ್ಷವಲ್ಲ ಎಂದರ್ಥ ; ವಿಷಯವೆಂದು ಅರ್ಥವಲ್ಲ.

5. ಆತ್ಮನಿಗೆ ಯಾವ ಮರೆಯೂ ಇಲ್ಲವೆಂಬುದು ಹೇಗೋ, ಅವನು ಅಜ್ಞಾನಕ್ಕೆ ವಿಷಯನಲ್ಲವಾದ್ದರಿಂದ ಜ್ಞಾನದಿಂದ ಪ್ರಕಾಶ್ಯನಲ್ಲವೆಂಬುದೂ ಹಾಗೆಯೇ. ಇವೆರಡೂ ಆತ್ಮನು ಜ್ಞಾನಸ್ವರೂಪನೆಂಬ ಹೇತುವಿನಿಂದಲೇ ಸಿದ್ಧವಾಗುವವು.

ಆತ್ಮಜ್ಞಾನದ ಫಲ

ಸಬಾಹ್ಯಾಭ್ಯನ್ತರೋಽಜೀರ್ಣೋ ಜನ್ಮಮೃತ್ಯುಜರಾತಿಗಃ ।
ಅಹಮಾತ್ಮೇತಿ ಯೋ ವೇದ ಕುತೋ ನ್ವೇವ ಬಿಭೇತಿ ಸಃ ॥ ೪೩ ॥

೪೩. ಒಳಗೂ ಹೊರಗೂ ಜೀರ್ಣನಾಗದ ಹುಟ್ಟು, ಹೊಂದು, ಮುಪ್ಪು – ಇವುಗಳನ್ನು ಮೀರಿದ ಆತ್ಮನೇ ನಾನು ಎಂದು ಯಾವನು ತಿಳಿದುಕೊಳ್ಳುವನೋ ಅವನು ಏತಕ್ಕೆ ತಾನೆ ಅಂಜಿಯಾನು[1] ?

ಜ್ಞಾನಿಗೆ ಕರ್ಮವಿಲ್ಲ

ಪ್ರಾಗೇವೈತದ್ವಿಧೇಃ ಕರ್ಮ ವರ್ಣಿತ್ವಾದೇರಪೋಹನಾತ್ ।
ತದಸ್ಥೂಲಾದಿಶಾಸ್ತ್ರೇಭ್ಯಸ್ತತ್ತ್ವಮೇವೇತಿ ನಿಶ್ಚಯಾತ್ ॥ ೪೪ ॥

೪೪. ಏಕೆಂದರೆ "ಅದು ಅಸ್ಥೂಲವು." (ಬೃ. ೩-೮-೮) ಎಂದು ಮುಂತಾಗಿರುವ ಶಾಸ್ತ್ರಗಳಿಂದ ವರ್ಣಿತ್ವವೇ ಮುಂತಾದವುಗಳನ್ನು ನಿಷೇಧ ಮಾಡಿರುವದರಿಂದಲೂ[2] 'ಅದೇ ನೀನು' (ಛಾಂ. ೬-೮-೭)ಎಂದು ನಿಶ್ಚಯವಾಗಿರುವದರಿಂದಲೂ ಈ ಜ್ಞಾನಕ್ಕಿಂತಲೂ[3] ಮೊದಲೇ ಕರ್ಮವು.

ಪೂರ್ವದೇಹಪರಿತ್ಯಾಗೇ ಜಾತ್ಯಾದೀನಾಂ ವ್ಯಪಾಣತಃ ।
ದೇಹಸ್ಯೈವ ತು ಜಾತ್ಯಾದಿಸ್ತಸ್ಯಾಪ್ಯೇವಂ ಹ್ಯನಾತ್ಮತಾ ॥ ೪೫ ॥

೪೫. ಹಿಂದಿನ ದೇಹವನ್ನು ಬಿಟ್ಟರೆ ಜಾತಿಯೇ ಮುಂತಾದವು ಹೋಗಿ ಬಿಡುವದರಿಂದ ದೇಹಕ್ಕೇ ಜಾತ್ಯಾದಿಗಳು, ಆ ದೇಹವೂ ಹೀಗೆಯೇ ಅನಾತ್ಮವು.

ಮಮಾಹಂ ಚೇತ್ಯತೋಽವಿದ್ಯಾ ಶರೀರಾದಿಷ್ವನಾತ್ಮಸು ।
ಆತ್ಮಜ್ಞಾನೇನ ಹೇಯಾ ಸ್ಯಾದಸುರಾಣಾಮಿತಿ ಶ್ರುತೇಃ ॥ ೪೬ ॥

೪೬. ಆದ್ದರಿಂದ ಶರೀರವೇ ಮುಂತಾದ ಅನಾತ್ಮಗಳಲ್ಲಿ ನಾನು, ನನ್ನದು – ಎಂಬ ತಿಳಿವಳಿಕೆಯೇ ಅವಿದ್ಯೆ. ಅದನ್ನು ಆತ್ಮಜ್ಞಾನದಿಂದ ನಾಶಗೊಳಿಸ

---

1. ಅದ್ವಿತೀಯಜ್ಞಾನಕ್ಕೆ ಅಭಯನೇ ಫಲ.

2. ಅಸ್ಥೂಲಶ್ರುತಿಯಲ್ಲಿ ಸ್ಥೂಲತ್ವಾದಿಗಳನ್ನು ನಿಷೇಧಿಸಿದೆ ; ಬೃ. ೪-೫-೭ರಲ್ಲಿ ವರ್ಣಿತ್ವವನ್ನು ನಿಷೇಧಿಸಿದೆ ; ಬೃ. ೪-೩-೨೨ರಲ್ಲಿ ಸಂನ್ಯಾಸಾದ್ಯಾಶ್ರಮಧರ್ಮವನ್ನು ನಿಷೇಧಿಸಿದೆ.

3. ವಿಧಿ ಎಂಬ ಶಬ್ದಕ್ಕೆ ಇಲ್ಲಿ ಜ್ಞಾನೋಪದೇಶವೆಂದು ಅರ್ಥಮಾಡಬೇಕು, ಏಕೆಂದರೆ ಜ್ಞಾನವನ್ನು ವಿಧಿಸುವದಕ್ಕೆ ಆಗುವದಿಲ್ಲ.

ಬೇಕು. "(ಇದು) ಅಸುರರ (ಉಪನಿಷತ್ತು)" (ಛಾಂ. ೮-೮-೫) ಎಂಬ ಶ್ರುತಿಯಿಂದ[1] (ಇದು ಸಿದ್ಧವಾಗುತ್ತದೆ).

ದಶಾಹಾಶೌಚಕಾರ್ಯಾಣಾಂ ಪಾರಿವ್ರಾಜ್ಯೇ ನಿವರ್ತನಮ್ ।
ಯಥಾ ಜ್ಞಾನಸ್ಯ ಸಂಪ್ರಾಪ್ತೌ ತದ್ವಜ್ಜಾತ್ಯಾದಿಕರ್ಮಣಾಮ್ ॥ ೪೭ ॥

೪೭. ಸಂನ್ಯಾಸಾಶ್ರಮದಲ್ಲಿ ಹೇಗೆ ಹತ್ತುದಿನಗಳ ಆಶೌಚ(ನಿಮಿತ್ತವಾದ) ಕಾರ್ಯಗಳು ತೊಲಗುವವೋ ಹಾಗೆ ಜ್ಞಾನವು ಬರಲು ಜಾತ್ಯಾದಿ ನಿಮಿತ್ತವಾದ ಕರ್ಮಗಳೂ (ಇಲ್ಲವಾಗುವವು).

ಯತ್ಕಾನುಸ್ತಕೃತುಭೂರ್ತ್ವಾ ಕೃತಂ ತ್ವಜ್ಞಃ ಪ್ರಪದ್ಯತೇ ।
ಯದಾ ಸ್ವಾತ್ಮದೃಶಃ ಕಾಮಾಃ ಪ್ರಮುಚ್ಯನ್ತೇಽಮೃತಸ್ತದಾ ॥ ೪೮ ॥

೪೮. ಯಾವವರ ಬಯಕೆಯಿರುವದೋ ಅದರಲ್ಲಿ ಮನೋನಿಶ್ಚಯವುಳ್ಳವನಾಗಿ ಅಜ್ಞನು ಕರ್ಮವನ್ನು ಮಾಡಿ (ಅದರ ಫಲವನ್ನು) ಪಡೆಯುತ್ತಾನೆ. ತನ್ನ ಆತ್ಮನನ್ನು ಕಂಡುಕೊಂಡವನಿಗೆ ಯಾವಾಗ ಕಾಮಗಳೆಲ್ಲವೂ ಬಿಡುಗಡೆಯಾಗುವವೋ ಆಗ ಅಮೃತನಾಗುತ್ತಾನೆ[2].

ಆತ್ಮರೂಪವಿಧೇಃ ಕಾರ್ಯಂ ಕ್ರಿಯಾದಿಭ್ಯೋ ನಿವರ್ತನಮ್ ।
ನ ಸಾಧ್ಯಂ ಸಾಧನಂ ವಾತ್ಮಾನಿತ್ಯತೃಪ್ತಸ್ಮೃತೇರ್ಮತಃ ॥ ೪೯ ॥

೪೯. ಆತ್ಮಸ್ವರೂಪವನ್ನು ಉಪದೇಶಿಸಿದ್ದರ ಫಲವೇನೆಂದರೆ ಕ್ರಿಯೆಯೇ ಮುಂತಾದವುಗಳನ್ನು ತೊಲಗಿಸಿಕೊಳ್ಳುವದೇ. ಆತ್ಮನು ಸಾಧ್ಯವೆಂದಾಗಲಿ ಸಾಧನವೆಂದಾಗಲಿ ಎನಿಸುವದಿಲ್ಲ. ಇದಕ್ಕೆ ನಿತ್ಯತೃಪ್ತಸ್ಮೃತಿಯು (ಗೀ. ೪-೨೦) (ಪ್ರಮಾಣವು).

ಉತ್ಪಾದ್ಯಾಪ್ಯವಿಕಾರ್ಯಾಣಿ ಸಂಸ್ಕಾರ್ಯಂ ಚ ಕ್ರಿಯಾಫಲಮ್ ।
ನಾತೋಽನ್ಯತ್ಕರ್ಮಣಾಂ ಕಾರ್ಯಂ ತ್ಯಜೇತ್ತಸ್ಮಾತ್ಸಸಾಧನಮ್ ॥೫೦

೫೦. ಹುಟ್ಟಿಸತಕ್ಕದ್ದು, ಪಡೆಯತಕ್ಕದ್ದು, ಮಾರ್ಪಡಿಸಿಕೊಳ್ಳತಕ್ಕದ್ದು: (ಇವು) ಸಂಸ್ಕಾರ್ಯವೂ ಕರ್ಮದ ಫಲವು. ಕರ್ಮಗಳಿಗೆ ಇವಕ್ಕಿಂತ

---

1. ದೇಹಾಭಿಮಾನವುಳ್ಳವರು ಮಿಥ್ಯಾಭಿಮಾನವುಳ್ಳ ಅಸುರರು ಎಂದು ಈ ಶ್ರುತಿಯಲ್ಲಿ ಹೇಳಿದೆ.

2 ಕ. ೨-೩-೧೪, ಬೃ. ೪-೪-೬ ಇವುಗಳ ಅರ್ಥ.

ಬೇರೆಯ ಫಲವಿಲ್ಲ[1]. ಆದ್ದರಿಂದ ಕರ್ಮವನ್ನು ಸಾಧನಸಹಿತ ಬಿಟ್ಟುಬಿಡ ಬೇಕು[2].

ಮುಮುಕ್ಷುವು ವೈರಾಗ್ಯಯುಕ್ತನಾಗಿ ಗುರುವನ್ನಾಶ್ರಯಿಸಬೇಕು

ತಾಪಾನ್ತತ್ವಾದನಿತ್ಯತ್ವಾದಾತ್ಮಾರ್ಥತ್ವಾಚ್ಚ ಯಾ ಬಹಿಃ ।
ಸಂಹೃತ್ಯಾತ್ಮನಿ ತಾಂ ಪ್ರೀತಿಂ ಸತ್ಯಾರ್ಥೀ ಗುರುಮಾಶ್ರಯೇತ್ ॥೫೧॥

ಶಾನ್ತಂ ಪ್ರಾಜ್ಞಂ ತಥಾ ಮುಕ್ತಂ ನಿಷ್ಕ್ರಿಯಂ ಬ್ರಹ್ಮಣಿ ಸ್ಥಿತಮ್ ।
ಶ್ರುತೇರಾಚಾರ್ಯವಾನ್ ವೇದ ತದ್ವಿದ್ಧೀತಿ ಸ್ಮೃತೇಸ್ತಥಾ ॥ ೫೨ ॥

೫೧-೫೨. ಹೊರಗಿನ (ವಿಷಯದ) ಪ್ರೀತಿಯು ಸಂತಾಪದಲ್ಲಿ ಕೊನೆ ಗಾಣುವದರಿಂದಲೂ ಅನಿತ್ಯವಾಗಿರುವದರಿಂದಲೂ ಆತ್ಮನಿಗಾಗಿಯೇ ಇರುವದಾ ದ್ದರಿಂದಲೂ ಆ ಪ್ರೀತಿಯನ್ನು ಆತ್ಮನಲ್ಲಿಯೇ ಸೆಳೆದಿಟ್ಟುಕೊಂಡು[3] ಸತ್ಯಾರ್ಥಿ ಯಾದವನು ಶಾಂತನೂ ಪ್ರಾಜ್ಞನೂ ಮುಕ್ತನೂ ಕ್ರಿಯಾರಹಿತನೂ ಬ್ರಹ್ಮ ನಿಷ್ಠನೂ ಆಗಿರುವ ಗುರುವನ್ನಾಶ್ರಯಿಸಬೇಕು. "ಆಚಾರ್ಯವಂತನಾದ ಪುರುಷನು ಅರಿತುಕೊಳ್ಳುವನು" (ಛಾಂ. ೬-೧೪-೨), ಎಂಬ ಶ್ರುತಿಯಿಂದಲೂ (ಪ್ರಣಿಪಾತಾದಿಗಳಿಂದ) "ಅದನ್ನು ಅರಿತುಕೊ" (ಗೀ. ೪-೩೪) ಎಂಬ ಸ್ಮೃತಿ ಯಿಂದಲೂ (ಇದು ಸಿದ್ಧವಾಗುತ್ತದೆ)[4]

ಸ ಗುರುಸ್ತಾರಯೇದ್ ಯುಕ್ತಂ ಶಿಷ್ಯಂ ಶಿಷ್ಯಗುಣಾನ್ವಿತಮ್ ।
ಬ್ರಹ್ಮವಿದ್ಯಾಪ್ಲವೇನಾಶು ಸ್ವಾನ್ತಧ್ವಾನ್ತಮಹೋದಧಿಮ್ ॥ ೫೩ ॥

---

1. ಸೂ. ಭಾ. ೧-೧-೪ರಲ್ಲಿ ಇವುಗಳ ವರ್ಣನೆಯಿದೆ.

2. ಯಜ್ಞೋಪವೀತಾದಿಗಳನ್ನೂ ಅವುಗಳಿಂದ ಮಾಡಬೇಕಾಗಿರುವ ಕರ್ಮ ವನ್ನೂ ಎಂದರ್ಥ. ಚಿತ್ತ ಶುದ್ಧಿಯಾದವರಿಗೆ ಅವುಗಳಿಂದ ಮತ್ತೆ ಆಗಬೇಕಾದದ್ದು ಏನೂ ಇಲ್ಲ.

3. ಆತ್ಮನು ಆನಂದರೂಪನಾಗಿ ನಿತ್ಯನಾಗಿ ಸ್ವಪ್ರಧಾನನಾಗಿರುವದರಿಂದ ಆತ್ಮ ನಲ್ಲಿಯೇ ಪ್ರೀತಿಯನ್ನು ಮಾಡಬೇಕು. ಬೃ. ೧-೪-೮, ೪-೫-೬.

4. ಎಂಥ ವಿದ್ವಾಂಸನಾದರೂ ತಾನೇ ಶಾಸ್ತ್ರಾರ್ಥವನ್ನು ವಿಚಾರಮಾಡಿ ತಿಳಿದು ಕೊಳ್ಳುವೆನೆಂದು ಎಣಿಸಿಕೊಳ್ಳಬಾರದು.

೫೩. ಆ ಗುರುವು ಶಿಷ್ಯಗುಣಗಳಿಂದ ಕೂಡಿ ಸಮಾಹಿತಚಿತ್ತನಾಗಿರುವ ಶಿಷ್ಯನನ್ನು ಹೃದಯದ ಅಜ್ಞಾನವೆಂಬ ಮಹಾಸಾಗರವನ್ನು ಬ್ರಹ್ಮವಿದ್ಯೆ ಎಂಬ ಹಡಗಿನಿಂದ ದಾಟಿಸುವನು[1].

ಜ್ಞಾನದಿಂದಾಗುವ ಬ್ರಹ್ಮಪ್ರಾಪ್ತಿ

ದೃಷ್ಟಿಃ ಸ್ಪೃಷ್ಟಿಃ ಶ್ರುತಿಘ್ರ್ಯಾತಿರ್ಮತಿರ್ವಿಜ್ಞಾತಿರೇವ ಚ |
ಶಕ್ತಯೋಽನ್ಯಾಶ್ಚ ಭಿದ್ಯನ್ತೇ ಚಿದ್ರೂಪತ್ವೇಽಪ್ಯುಪಾಧಿಭಿಃ || ೫೪ ||

೫೪. ದೃಷ್ಟಿ, ಸ್ಪರ್ಶ, ಘ್ರಾಣ, ಮನನ, ವಿಜ್ಞಾನ – (ಇವೂ) ಇನ್ನೂ ಬೇರೆಯ ಶಕ್ತಿಗಳೂ (ತಾವು) ಚೈತನ್ಯರೂಪವೇ ಆಗಿದ್ದರೂ ಉಪಾಧಿಗಳಿಂದ ಬೇರೆಬೇರೆಯಾಗಿರುತ್ತವೆ.

ಅಪಾಯೋದ್ಭೂತಿಹೀನಾಭಿರ್ನಿತ್ಯಂ ದೀಪ್ಯನ್ ರವಿರ್ಯಥಾ |
ಸರ್ವಜ್ಞಃ ಸರ್ವದೃಕ್ ಶುದ್ಧಃ ಸರ್ವಂ ಜಾನಾತಿ ಸರ್ವದಾ || ೫೫ ||

೫೫. ನಾಶವಾಗಲಿ ಹುಟ್ಟಾಗಲಿ ಇಲ್ಲದ[2] (ಈ ಶಕ್ತಿಗಳಿಂದ) ಸರ್ವಜ್ಞನೂ ಸರ್ವದೃಗ್ರೂಪನೂ ಶುದ್ಧನೂ (ಆಗಿರುವ ಆತ್ಮನು) ಸೂರ್ಯನಂತೆ ಯಾವಾಗಲೂ ಬೆಳಗುತ್ತಿರುವದರಿಂದ ಯಾವಾಗಲೂ ಎಲ್ಲವನ್ನೂ ನೋಡುತ್ತಿರುತ್ತಾನೆ.

ಅನ್ಯದೃಷ್ಟಿಃ ಶರೀರಸ್ಥಸ್ತಾವನ್ಮಾತ್ರೋ ಹ್ಯವಿದ್ಯಯಾ |
ಜಲೇನ್ದ್ವಾದ್ಯುಪಮಾಭಿಸ್ತು ತದ್ಧರ್ಮಾ ಚ ವಿಭಾವ್ಯತೇ || ೫೬ ||

೫೬. ಆದರೆ ಅವಿದ್ಯೆಯಿಂದ ಮತ್ತೊಂದನ್ನು ಕಾಣುತ್ತಾ ಶರೀರದಲ್ಲಿದ್ದು ಕೊಂಡು ಅಷ್ಟೇ ಪ್ರಮಾಣದವನಾಗಿಯೂ ಅದರ ಧರ್ಮಗಳುಳ್ಳವನಾಗಿಯೂ ಆಗಿರುವಂತೆ ತೋರುತ್ತಾನೆ. ಜಲಚಂದ್ರನೇ ಮುಂತಾದ ಉಪಮಾನಗಳಿಂದ (ಹೀಗೆಂದು ತಿಳಿದುಕೊಳ್ಳಬೇಕು).

ದೃಷ್ಟ್ವಾ ಬಾಹ್ಯಂ ನಿರ್ಮಾಲ್ಯಾಥ ಸ್ಮೃತ್ವಾ ತತ್ಪ್ರವಿಹಾಯ ಚ |
ಆಥೋನ್ಮೀಲ್ಯಾತ್ಮನೋ ದೃಷ್ಟಿಂ ಬ್ರಹ್ಮ ಪ್ರಾಪ್ನೋತ್ಯನಧ್ವಗಃ || ೫೭ ||

---

1. ಶಿಷ್ಯಗುಣಗಳಿಂದ ಕೂಡಿರುವ ಅಧಿಕಾರಿಗೆ ತತ್ತ್ವಜ್ಞಾನದಿಂದ ಗುರುವು ಹೇಳಿದ ಉಪದೇಶವು ಅವಶ್ಯವಾಗಿ ಅಜ್ಞಾನವನ್ನು ಕಳೆಯುವದು; ಅನಧಿಕಾರಿಗಳಿಗೆ ಅಥವಾ ಬರಿಯ ಪುಸ್ತಕಜ್ಞಾನವುಳ್ಳವರ ಉಪದೇಶದಿಂದ ಈ ಫಲವಾಗಲಾರದು. ಉಪ. ಗದ್ಯ ೨೦ರಿಂದ ೫೦ರವರೆಗಿನ ಖಂಡಗಳನ್ನು ನೋಡಿ.

2. ತನ್ನ ಸ್ವರೂಪವೇ ಆಗಿರುವ.

೫೭. ಹೊರಗನ್ನು ನೋಡಿ ಆಮೇಲೆ (ಕಣ್ಣು)ಮುಚ್ಚಿಕೊಂಡು[1] ಬಳಿಕ ನೆನಪಿಗೆ ತಂದುಕೊಂಡು[2] ಅದನ್ನು ಬಿಟ್ಟು[3] ಆಮೇಲೆ ಆತ್ಮನ ದೃಷ್ಟಿಯನ್ನು ತೆರೆದರೆ[4] ಯಾವ ದಾರಿಯನ್ನೂ ನಡೆಯದೆ ಬ್ರಹ್ಮವನ್ನು ಪಡೆಯುತ್ತಾನೆ[5].

ಪ್ರಾಣಾದ್ಯೇವಂ ತ್ರಿಕಂ ಹಿತ್ವಾ ತೀರ್ಣೋಽಜ್ಞಾನಮಹೋದಧಿಮ್ ।
ಸ್ವಾತ್ಮಸ್ಥೋ ನಿರ್ಗುಣಃ ಶುದ್ಧೋ ಬುದ್ಧೋ ಮುಕ್ತಃ ಸ್ವತೋ ಹಿ ಸಃ॥

೫೮. ಹೀಗೆ ಪ್ರಾಣನೇ ಮುಂತಾದ ಮೂರನ್ನೂ ಬಿಟ್ಟು[6] ಅಜ್ಞಾನ ಮಹಾಸಾಗರವನ್ನು ದಾಟಿದವನು ತನ್ನ ಆತ್ಮನಲ್ಲಿಯೇ ನಿಲ್ಲುವನು. ಆ (ಆತ್ಮನು) ಸ್ವತಃ ನಿರ್ಗುಣನು, ಶುದ್ಧನು, ಮುಕ್ತನು.

ಬ್ರಹ್ಮಜ್ಞಾನಿಗೆ ಜನ್ಮವಿಲ್ಲ

ಅಜೋಽಹಂ ಚಾಮರೋಽನ್ಯತ್ಯುರಜರೋಽಭಯ ಏವ ಚ ।
ಸರ್ವಜ್ಞಃ ಸರ್ವದೃಕ್ ಶುದ್ಧ ಇತಿ ಬುದ್ಧೋ ನ ಜಾಯತೇ ॥ ೫೯ ॥

೫೯. ನಾನು ಜನ್ಮರಹಿತನು, ಮರಣರಹಿತನು, ಮೃತ್ಯುವಿಲ್ಲದವನು[7], ಮುಪ್ಪಿಲ್ಲದವನು, ಸರ್ವಜ್ಞನು, ಸರ್ವದೃಕ್ಕು, ಶುದ್ಧನು – ಎಂದು ತಿಳಿದುಕೊಂಡವನು ಹುಟ್ಟುವದಿಲ್ಲ[8].

ಪೂರ್ವೋಕ್ತಂ ಯತ್ ತಮೋಬೀಜಂ ತನ್ನಾಸ್ತೀತಿ ವಿನಿಶ್ಚಯಃ ।
ತದಭಾವೇ ಕುತೋ ಜನ್ಮ ಬ್ರಹ್ಮೈಕತ್ವಂ ವಿಜಾನತಃ ॥ ೬೦ ॥

೬೦. ಹಿಂದೆ ಹೇಳಿದ ತಮೋಬೀಜವೆಂಬುದಿದೆಯಲ್ಲ, ಅದು ಇಲ್ಲವೆಂದೇ (ಅವನ) ನಿಶ್ಚಯವಾಗಿರುತ್ತದೆ. ಅದಿಲ್ಲದಿದ್ದರೆ, ಬ್ರಹ್ಮವೊಂದೇ (ಸತ್ಯವೆಂದು) ತಿಳಿದುಕೊಂಡ ಅವನಿಗೆ ಜನ್ಮವೆಲ್ಲಿಂದ (ಬಂದೀತು)[9] ?

---

1. ಎಚ್ಚತ್ತಬಳಿಕ ನಿದ್ರೆಗೈದು. 2. ಕನಸನ್ನು ಕಂಡು
3. ಕನಸಿಲ್ಲದ ನಿದ್ರೆಯನ್ನು ಅನುಭವಿಸಿ.
4. ಅವಸ್ಥೆಗಳನ್ನೆಲ್ಲ ನೋಡುವ ಚೈತನ್ಯದಲ್ಲಿ ನಿಂತರೆ.
5. ತನ್ನ ಸ್ವರೂಪದಲ್ಲಿಯೇ ಬ್ರಹ್ಮವನ್ನು ಕಾಣುತ್ತಾನೆ. ಅವಸ್ಥಾತ್ರಯಕ್ಕೆ ಅತೀತವಾಗಿರುವ ಆತ್ಮನೇ ಬ್ರಹ್ಮವು ಎಂದರ್ಥ.
6. ಪ್ರಾಜ್ಞ, ತೈಜಸ, ವಿಶ್ವ – ಎಂಬ ಮೂರು ಅಭಿಮಾನವನ್ನೂ ಬಿಟ್ಟು.
7. ಪರಮಾತ್ಮನು ಅದ್ವಿತೀಯನಾದ್ದರಿಂದ ಮೃತ್ಯುವು ಅವನಿಗೆ ಇಲ್ಲ.
8. ಅವನಿಗೆ ಹುಟ್ಟುವದಕ್ಕೆ ಕಾರಣವಾದ ಧರ್ಮಾಧರ್ಮಗಳಿರುವದಿಲ್ಲ.
9. ಅಜ್ಞಾನವೇ ಕಾಮಕರ್ಮಗಳ ಮೂಲಕ ಜನ್ಮಕ್ಕೆ ಕಾರಣವು.

ಕ್ಷೀರಾತ್ಸರ್ಪಿರ್ಯಥೋದ್ಧೃತ್ಯ ಕ್ಷಿಪ್ತಂ ತಸ್ಮಿನ್ನ ಪೂರ್ವವತ್ |
ಬುದ್ಧ್ಯಾದ್ಯಜ್ಞಸ್ತಥಾಽಸತ್ಯಾನ್ನ ದೇಹೀ ಪೂರ್ವವದ್ಭವೇತ್ ||೬೧||

೬೧. ಹಾಲಿನಿಂದ ತೆಗೆದು ಅದರಲ್ಲಿ ಹಾಕಿದ ಬೆಣ್ಣೆಯು ಹೇಗೆ ಮೊದಲಿನಂತೆ ಅದರಲ್ಲಿರಲಾರದೋ ಅದರಂತೆ ಅಸತ್ಯವಾದ ಬುದ್ಧಿಯೇ ಮುಂತಾದವುಗಳಿಂದ (ತೆಗೆದುಹಾಕಿದಂತೆ ಆದ) ಆತ್ಮನು ಮೊದಲಿನಂತೆ ದೇಹಿಯಾಗಿರಲಾರನು[1].

ಬ್ರಹ್ಮಾತ್ಮೈಕ್ಯಜ್ಞಾನಕ್ಕೆ ಉಪನಿಷತ್ಪ್ರಮಾಣ್ಯ

ಸತ್ಯಂ ಜ್ಞಾನಮನನ್ತಂ ಚ ರಸಾದೇಃ ಪಞ್ಚಕಾತ್ ಪರಮ್ |
ಸ್ಯಾನ್ಮದೃಶ್ಯಾದಿಶಾಸ್ತ್ರೋಕ್ತಮಹಂ ಬ್ರಹ್ಮೇತಿ ನಿರ್ಭಯಃ ॥ ೬೨ ॥
ಯಸ್ಮಾದ್ ಭೀತಾಃ ಪ್ರವರ್ತನ್ತೇ ವಾಙ್ಮನಃಪಾನಕಾವಯಃ |
ತದಾತ್ಮಾನನ್ದತತ್ತ್ವಜ್ಞೋ ನ ಬಿಭೇತಿ ಕುತಶ್ಚನ ॥ ೬೩ ॥

೬೨-೬೩. ಸತ್ಯವೂ ಜ್ಞಾನವೂ ಅನಂತವೂ ಆಗಿ (ತೈ. ೨-೧) ಅನ್ನರಸಮಯವೇ ಮುಂತಾದ ಐದು ಕೋಶಗಳಿಗಿಂತಲೂ ಬೇರೆಯಾಗಿರುವ (ತೈ. ೨-೨ರಿಂದ ೫) ಅದೃಶ್ಯಾದಿಶಾಸ್ತ್ರದಿಂದ ಉಕ್ತವಾಗಿರುವ (ತೈ. ೨-೭) ನಿರ್ಭಯಬ್ರಹ್ಮವೇ ನಾನು. ವಾಕ್ಕು, ಮನಸ್ಸು, ಅಗ್ನಿ- ಮುಂತಾದವರು ಯಾವದಕ್ಕೆ ಅಂಜಿಕೊಂಡು (ತಮ್ಮ ಕೆಲಸದಲ್ಲಿ) ತೊಡಗುವರೋ (ತೈ. ೨-೮, ೨-೯, ಕೇ. ೧-೧), ಆ ಆತ್ಮಾನಂದತತ್ತ್ವವನ್ನು ಬಲ್ಲಾತನು ಏತಕ್ಕೂ ಅಂಜುವದಿಲ್ಲ (ತೈ. ೩-೯).

ನಾಮಾದಿಭ್ಯಃ ಪರೇ ಭೂಮ್ನಿ ಸ್ವಾರಾಜ್ಯೇ ಚೇತ್ಸ್ಥಿತೋಽದ್ವಯೇ |
ಪ್ರಣಮೇತ್ ಕಂ ತದಾತ್ಮಜ್ಞೋ ನ ಕಾರ್ಯಂ ಕರ್ಮಣಾ ತದಾ ॥೬೪॥

೬೪. ನಾಮಾದಿಗಳಿಗಿಂತ ಆಚಿನದಾದ ಅದ್ವಿತೀಯವಾದ ಭೂಮವೆಂಬ (ಛಾಂ. ೭-೧೫ರಿಂದ ೨೩) ಸ್ವಾರಾಜ್ಯದಲ್ಲಿ (ಛಾಂ. ೭-೨೫) ಇದ್ದುಕೊಂಡಿರುವ ನಾದರೆ ಆತ್ಮಜ್ಞನು ಯಾರನ್ನು ತಾನೆ ನಮಸ್ಕರಿಸಿಯಾನು ? ಆಗ ಕರ್ಮದಿಂದ ಆಗಬೇಕಾದದ್ದು (ಏನೂ) ಇರುವದಿಲ್ಲ.

ವಿರಾಡ್ವೈಶ್ವಾನರೋ ಬಾಹ್ಯಃ ಸ್ಮರನ್ನನ್ತಃ ಪ್ರಜಾಪತಿಃ |
ಪ್ರವಿಲೀನೇ ತು ಸರ್ವಸ್ಮಿನ್ ಪ್ರಾಜ್ಞೋಽವ್ಯಾಕೃತಮುಚ್ಯತೇ ॥೬೫॥

---

1. ಶರೀರವಿರುವಂತೆ ಕಂಡರೂ ಅದು ಅಜ್ಞಾನದೃಷ್ಟಿಯಿಂದ ; ನಿಜವಾಗಿ ಅವನು ಅಶರೀರಿಯೇ.

ವಾಚಾರಮ್ಭಣಮಾತ್ರತ್ವಾತ್ ಸುಷುಪ್ತಾದಿತ್ರಿಕಂ ತ್ವಸತ್ |
ಸತ್ಯೋ ಜ್ಞಶ್ಚಾಹಮಿತ್ಯೇವಂ ಸತ್ಯಸನ್ಧೋ ವಿಮುಚ್ಯತೇ ॥ ೬೪ ॥

೬೫–೬೪. ಹೊರಗೆ (ಆರಿಯುವಾಗ) ವಿರಾಡ್ರೂಪನಾದ ವೈಶ್ವಾನರನು, ಒಳಗೆ ಸ್ಮರಿಸುವಾಗ ಪ್ರಜಾಪತಿ[1]; ಎಲ್ಲವೂ ಅಡಗಿದರೆ ಅವ್ಯಾಕೃತನಾದ ಪ್ರಾಜ್ಞನೆನಿಸುವನು. ಸುಷುಪ್ತಿಯೇ ಮುಂತಾದ ಮೂರೂ ಬರಿಯ ವಾಚಾರಂಭಣ[2] (ಛಾಂ. ೬–೪) ರೂಪವಾಗಿರುವದರಿಂದ ಅಸತ್ಯವಾಗಿರುತ್ತವೆ. ಸತ್ಯವಾಗಿರುವ ಚೈತನ್ಯ(ರೂಪನಾದ ಆತ್ಮನೇ) ನಾನು ಎಂದು ಸತ್ಯಸಂಧನಾದವನು ವಿಮುಕ್ತನಾಗುತ್ತಾನೆ.

ಭಾರೂಪತ್ವಾದ್ಯಥಾ ಭಾನೋರ್ನಾಹೋರಾತ್ರೇ ತಥೈವ ಚ |
ಜ್ಞಾನಾಜ್ಞಾನೇ ನ ಮೇ ಸ್ಯಾತಾಂ ಚಿದ್ರೂಪತ್ವಾವಿಶೇಷತಃ ॥ ೬೨ ॥

೬೨. ಪ್ರಕಾಶರೂಪನಾಗಿರುವದರಿಂದ ಹೇಗೆ ಸೂರ್ಯನಿಗೆ ಹಗಲು ರಾತ್ರಿಗಳು ಇರುವದಿಲ್ಲವೋ ಹಾಗೆಯೇ ಚಿದ್ರೂಪನಾಗಿರುವದು (ಯಾವಾಗಲೂ) ಸಮಾನವಾಗಿರುವದರಿಂದ ನನಗೆ ಜ್ಞಾನಾಜ್ಞಾನಗಳು ಆಗುವಾರವು[3].

ಶಾಸ್ತ್ರಸ್ಯಾನತಿಶಙ್ಕ್ಯತ್ವಾದ್ಬ್ರಹ್ಮೈವ ಸ್ಯಾಮಹಂ ಸದಾ |
ಬ್ರಹ್ಮಣೋ ಮೇ ನ ಹೇಯಂ ಸ್ಯಾದ್ಗ್ರಾಹ್ಯಂ ನೇತಿ ಚ ಸಂಸ್ಮರೇತ್‌॥

೬೮. ಶಾಸ್ತ್ರವನ್ನು ಮೀರಿ ಶಂಕಿಸುವದಕ್ಕಿಲ್ಲವಾದ್ದರಿಂದ ನಾನು ಯಾವಾಗಲೂ ಬ್ರಹ್ಮವೇ ಆಗಿರುವೆನು. ಬ್ರಹ್ಮವಾದ ನನಗೆ ಬಿಡತಕ್ಕದ್ದಾಗಲಿ ತೆಗೆದುಕೊಳ್ಳತಕ್ಕದ್ದಾಗಲಿ ಇರುವದಿಲ್ಲ ಎಂದೂ ಸ್ಮರಿಸಿಕೊಳ್ಳಬೇಕು[4].

ಅಹಮೇವ ಚ ಭೂತೇಷು ಸರ್ವೇಷ್ವೇಕೋ ನಭೋ ಯಥಾ |
ಮಯಿ ಸರ್ವಾಣಿ ಭೂತಾನಿ ಪಶ್ಯನ್ನೇವಂ ನ ಜಾಯತೇ ॥ ೬೯ ॥

---

1. ಹಿರಣ್ಯಗರ್ಭನು.

2. ಬರಿಯ ಮಾತಿನಿಂದ ಆಡಿದ್ದು, ನಿಜವಾಗಿ ವಸ್ತು ವಿಲ್ಲದ್ದು.

3. ಛಾಂ. ೩-೧೧-೫ನ್ನು ನೋಡಿ. ಅಲ್ಲಿ ಉಪಾಸನೆಯ ವಿಷಯವನ್ನು ಹೇಳಿದೆಯಾದರೂ ಜ್ಞಾನದ ವಿಷಯಕ್ಕೆ ಭಾಷ್ಯದಲ್ಲಿ ಹೇಳಿರುವದು ಇನ್ನೂ ಚೆನ್ನಾಗಿ ಹೊಂದುತ್ತದೆ.

4. 'ಅದೇ ನೀನು' ಎಂಬ ಶಾಸ್ತ್ರವು ಅಗ್ನಿಹೋತ್ರಾದಿಪ್ರಕಾಶಕಶಾಸ್ತ್ರದಂತೆಯೇ ಪ್ರಮಾಣವಾಗಿರುವದರಿಂದ ಅದರಿಂದುಂಟಾದ ಜ್ಞಾನವನ್ನು ಶಂಕಿಸುವದಕ್ಕಾಗುವದಿಲ್ಲ. ಆದ್ದರಿಂದ ನಮ್ಮ ಪ್ರತ್ಯಗಾತ್ಮನು ನಿತ್ಯವೂ ಬ್ರಹ್ಮವೇ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು.

೧೯. ನಾನೊಬ್ಬನೇ ಎಲ್ಲಾ ಪ್ರಾಣಿಗಳಲ್ಲಿಯೂ ಆಕಾಶದಂತೆ ಇರುತ್ತೇನೆ, ನನ್ನಲ್ಲಿ ಎಲ್ಲಾ ಭೂತಗಳೂ ಇರುತ್ತವೆ ಹೀಗೆಂದು ಕಂಡುಕೊಂಡವನು (ಮತ್ತೆ) ಹುಟ್ಟುವದಿಲ್ಲ[1].

ನ ಬಾಹ್ಯಂ ಮಧ್ಯತೋ ವಾಸ್ತ್ವಿದ್ಯತೇಽನ್ಯತ್ ಸ್ವತಃ ಕ್ವಚಿತ್ ।
ಅಬಾಹ್ಯಾನ್ತಃಶ್ರುತೇಃ ಕಂಚಿತ್ ತಸ್ಮಾಚ್ಛುದ್ಧಃ ಸ್ವಯಂಪ್ರಭಃ ॥೨೦॥

೨೦. ತನ್ನ (ಆತ್ಮ)ನಿಗಿಂತ ಹೊರಗೆ, ನಡುವೆ, ಅಥವಾ ಒಳಗೆ ಯಾವದೂ ಒಂದಿಷ್ಟೂ ಎಲ್ಲಿಯೂ ಇರುವದಿಲ್ಲ. ಏಕೆಂದರೆ "ಹೊರಗಿಲ್ಲ, ಒಳಗಿಲ್ಲ"[2] (ಬೃ. ೩-೪-೪) ಎಂದು ಶ್ರುತಿಯಿದೆ. ಆದ್ದರಿಂದ (ಆತ್ಮನು) ಶುದ್ಧನು, ಸ್ವಯಂಪ್ರಕಾಶನು[3].

ನೇತಿನೇತ್ಯಾದಿಶಾಸ್ತ್ರೇಭ್ಯಃ ಪ್ರಪಞ್ಚೋಽಪಶಮೋಽದ್ವಯಃ ।
ಅವಿಜ್ಞಾತಾದಿಶಾಸ್ತ್ರಾಚ್ಚ ನೈವ ಜ್ಞೇಯೋ ಹ್ಯತೋಽನ್ಯಥಾ ॥ ೨೧ ॥

೨೧. "ಇದಲ್ಲ, ಇದಲ್ಲ" (ಬೃ. ೨-೩-೬) ಎಂದು ಮುಂತಾಗಿ ಶಾಸ್ತ್ರ (ಪಚನ)ಗಳಿರುವದರಿಂದಲೂ "ಅರಿಯಲ್ಪಡದಿರುವವನು" (ಬೃ. ೩-೯-೨೧, ೩-೭-೨೩) ಎಂದು ಮುಂತಾಗಿ ಶಾಸ್ತ್ರವಿರುವದರಿಂದಲೂ "ಪ್ರಪಂಚೋಪಶಮನೂ ಅದ್ವಯನೂ" (ಮಾಂ. ೭) ಆಗಿರುವ ಆತ್ಮನು ಇನ್ನು ಬೇರೆ ರೀತಿಯಿಂದ[4] ತಿಳಿಯುವದಕ್ಕೆ ಶಕ್ಯನಲ್ಲ.

ಸರ್ವಸ್ಯಾತ್ಮಾಹಮೇವೇತಿ ಬ್ರಹ್ಮ ಚೇದ್ವಿದಿತಂ ಪರಮ್ ।
ಸ ಆತ್ಮಾ ಸರ್ವಭೂತಾನಾಮಾತ್ಮಾ ಹ್ಯೇಷಾಮಿತಿ ಶ್ರುತೇಃ ॥ ೨೨ ॥

೨೨. ಎಲ್ಲಕ್ಕೂ ನಾನೇ ಆತ್ಮನು ಎಂದು ಪರಬ್ರಹ್ಮವನ್ನು ಅರಿತುಕೊಂಡರೆ ಅವನು ಸರ್ವಭೂತಗಳಿಗೂ ಆತ್ಮನಾಗುವನು. "ಇವರಿಗೆ ಆತ್ಮನೇ (ಆಗುವ)ನಲ್ಲವೆ ?" (ಬೃ. ೧-೪-೧೦) ಎಂಬ ಶ್ರುತಿ ಇದಕ್ಕೆ ಪ್ರಮಾಣವು[5].

---

1. ಈ. ೭ರ ಅಭಿಪ್ರಾಯವಿದು.

2. ಶ್ರುತಿಯ ಅರ್ಥವಿದು ; ಆದ್ದರಿಂದ ಅವೇ ಅನುಕ್ರಮವಲ್ಲಿಲ್ಲ.

3. ಎರಡನೆಯ ವಸ್ತುವಿನಿಂದ ಅಶುದ್ಧಿಯು ಬರಬೇಕು, ಆದರಿಂದ ಇದು ಬೆಳಗುವದೆಂಬ ಶಂಕೆಯುಂಟಾಗಬೇಕು. ಅದ್ವಿತೀಯವಾಗಿರುವದರಿಂದಲೇ ಶುದ್ಧನು, ಸ್ವಯಂಪ್ರಕಾಶನು ಎಂದು ಏರ್ಪಡುತ್ತದೆ.

4. ಜ್ಞಾನಕ್ಕೆ ವಿಷಯವಾಗಿ ಮಾಡಿಕೊಂಡು.

5. ದೇವತೆಗಳೂ ಬ್ರಹ್ಮಜ್ಞಾನಿಯ ಸರ್ವಭಾವಕ್ಕೆ ಅಡ್ಡಿಯಾಗಲಾರರು ; ಏಕೆಂದರೆ ಅವರಿಗೂ ಇವನು ಆತ್ಮನಾಗಿರುವನು ಎಂದು ಶ್ರುತಿಯ ಅರ್ಥ. ಜ್ಞಾನವಂದ ಬಳಿಕವೂ ಯಾವದಾದರೊಂದು ಅಡ್ಡಿ ಬರಬಹುದೆಂಬ ಪ್ರಸಂಖ್ಯಾನವಾದಿಗಳೇ ಮುಂತಾದವರ ಶಂಕೆಯು ಶ್ರುತಿವಿರುದ್ಧವೆಂದು ತಿಳಿಸಿದಂತೆ ಆಯಿತು.

ಜೀವಶ್ಚೇತ್ಪರಮಾತ್ಮಾನಂ ಸ್ವಾತ್ಮಾನಂ ದೇವಮಞ್ಜಸಾ ।
ವೇದೋಪಾಸ್ಯಃ ಸ ದೇವಾನಾಂ ಪಶುತ್ವಾಚ್ಚ ನಿವರ್ತತೇ ॥ ೭೩ ॥

೭೩. ಜೀವನು ಪರಮಾತ್ಮನನ್ನು ತನ್ನ ಆತ್ಮನಾದ ದೇವನೆಂದು ಸ್ಪಷ್ಟವಾಗಿ ಅರಿತುಕೊಂಡರೆ ಅವನು ದೇವತೆಗಳಿಗೂ ಉಪಾಸ್ಯನಾಗುವನು (ಬೃ. ೪–೪–೧೫, ತೈ. ೧–೫), ಪಶುತ್ವದಿಂದಲೂ ತಪ್ಪಿಸಿಕೊಳ್ಳುವನು[1].

ಅಹಮೇವ ಸದಾತ್ಮಾ ಜ್ಞಃ[2] ಶೂನ್ಯಸ್ತ್ವನ್ಯೋ ಯಥಾಮ್ಬರಮ್ ।
ಇತ್ಯೇವಂ ಸತ್ಯಸನ್ಧತ್ವಾದಸದ್ಧಾತಾ ನ ಬಧ್ಯತೇ ॥ ೭೪ ॥

೭೪. ನಾನೇ ಸದ್ರೂಪನಾದ ಆತ್ಮನು, ಚೈತನ್ಯಸ್ವರೂಪನು, ಆಕಾಶದಂತೆ ಮಿಕ್ಕ (ಭೂತಗಳಿಂದ) ರಹಿತನಾದವನು[3] –ಎಂದು ಅಸತ್ತಾದದ್ದನ್ನು ಬಿಟ್ಟವನು ಸತ್ಯಸಂಧನು[4], (ಅವನು) ಬದ್ಧನಾಗುವದಿಲ್ಲ.

ಕೃಪಣಾಸ್ತೇಽನ್ಯಥೈವಾತೋ ವಿದುರ್ಬ್ರಹ್ಮ ಪರಂ ಹಿ ಯೇ ।
ಸ್ವರಾಡ್ಯೋಽನನ್ಯದೃಕ್ ಸ್ವಸ್ಥಸ್ತಸ್ಯ ದೇವಾ ಅಸನ್ ವಶೇ ॥ ೭೫ ॥

೭೫. ಇದಕ್ಕೆಂತ ಬೇರೆಯಾಗಿಯೇ ಬ್ರಹ್ಮವನ್ನು ಅರಿಯುವರೋ ಅವರು ಕೃಪಣರು. (ಅದು) ತನಗಿಂತ ಬೇರೆಯಲ್ಲವೆಂದು ಕಂಡುಕೊಂಡು ತನ್ನ ರೂಪದಲ್ಲಿಯೇ ಯಾವನು ಇದ್ದುಕೊಂಡಿರುವನೋ ಅವನು ಸ್ವರಾಜನಾಗಿರುವನು. (ಛಾಂ. ೭–೨೫–೨), ಅವನಿಗೆ ದೇವತೆಗಳೂ ವಶದಲ್ಲಿರುತ್ತಾರೆ. (ತೈ. ಆ. ೩–೧೩).

---

1. ಭೂತಭವ್ಯಗಳೊಡೆಯನಾದ ಪರಮಾತ್ಮನೇ ನನ್ನ ಆತ್ಮನೆಂದು ತಿಳಿದುಕೊಂಡವನು ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಹೋಗುವದಿಲ್ಲ, ಅಥವಾ ಮತ್ತೊಂದನ್ನು ನಿಂದಿಸುವದಿಲ್ಲ –ಎಂಬುದು ಬೃಹದಾರಣ್ಯಕವಾಕ್ಯದ ಅರ್ಥವು. ನಾನೇ ಬ್ರಹ್ಮವು ಎಂದು ತಿಳಿದುಕೊಂಡವನು ದೇವತೆಗಳಿಗೂ ಆತ್ಮನಾಗುವದರಿಂದ ಅವನು ಪಶುವಿನಂತೆ ಕರ್ಮವನ್ನು ಮಾಡುವದು ತಪ್ಪುವದು ಎಂಬರ್ಥವು ಬೃ. ೧–೪–೧೦ರಲ್ಲಿದೆ.

2. 'ಸದಾತ್ಮಜ್ಞಃ' ಎಂಬ ಆಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

3. ಆಕಾಶವೇ ವಾಯ್ವಾದಿಗಳ ರೂಪವನ್ನು ತಾಳಿರುವದರಿಂದ ಅದ್ವಿತೀಯವಾಗಿರುತ್ತದೆ. ಆತ್ಮನು ಆಕಾಶಾದಿಭೂತಗಳಿಂದ ರಹಿತನಾಗಿರುವದೂ ಹಾಗೆಯೇ.

4. ಸತ್ಯಸಂಧನು ಕಾದ ಕೊಡಲಿಯನ್ನು ಮುಟ್ಟಿದರೂ ಅವನನ್ನು ಅದು ಸುಡದಿರುವಂತೆ ಸತ್ಯಸ್ವರೂಪನಾದ ಆತ್ಮನನ್ನು ಅರಿತುಕೊಂಡವನನ್ನು ಅಸದ್ರೂಪವಾದ ಸಂಸಾರವು ಬಂಧಿಸುವದಿಲ್ಲ –ಎಂದು ಛಾಂ. ೬–೧೬–೧ರಿಂದ ಕಿರಲ್ಲಿ ತಿಳಿಸಿದೆ.

ಹಿತ್ವಾ ಜಾತ್ಯಾದಿಸಂಬನ್ಧಾನ್ ವಾಚ್ಯೋಽನ್ಯಾಃ ಸಹ ಕರ್ಮಭಿಃ ।
ಓಮಿತ್ಯೇವಂ ಸದಾತ್ಮಾನಂ ಸರ್ವಂ ಶುದ್ಧಂ ಪ್ರಪದ್ಯಥ ॥ ೭೬ ॥
ಸೇತುಂ ಸರ್ವವ್ಯವಸ್ಥಾನಾಮಹೋರಾತ್ರಾದಿವರ್ಜಿತಮ್ ।
ತಿರ್ಯಗೂರ್ಧ್ವಮಧಃ ಸರ್ವಂ ಸಕೃಜ್ಜ್ಯೋತಿರನಾಮಯಮ್ ॥೭೭॥

೭೬-೭೭. ಸರ್ವವೂ ತಾನೇ ಆಗಿರುವ, ಶುದ್ಧನಾಗಿರುವ ಎಲ್ಲಾ ವ್ಯವಸ್ಥೆಗಳಿಗೂ ಸೇತುವಾಗಿರುವ (ಮುಂ. ೨-೨-೫) ಹಗಲು, ರಾತ್ರಿ –ಮುಂತಾದವುಗಳಿಲ್ಲದ (ಛಾಂ. ೪-೪-೧) ಅಡ್ಡಲಾಗಿಯೂ ಮೇಲೆಯೂ ಕೆಳಗೂ ತಾನೇ ಎಲ್ಲವೂ ಆಗಿರುವ (ಮುಂ. ೨-೨-೧೧) ನಿತ್ಯಜ್ಯೋತಿಃಸ್ವರೂಪನಾಗಿರುವ (ಮುಂ. ೨-೨-೧೧) ನಿರ್ದೋಷನಾದ ಆತ್ಮನನ್ನು ಜಾತಿಯೇ ಮುಂತಾದ ಸಂಬಂಧಗಳನ್ನೂ ಮಿಕ್ಕ ಮಾತುಗಳನ್ನೂ ಕರ್ಮಗಳೊಡನೆ ಬಿಟ್ಟು ಓಂ ಎಂದಿಂತು ಧ್ಯಾನಿಸಿರಿ (ಮುಂ. ೨-೨-೬).

ಧರ್ಮಾಧರ್ಮವಿನಿರ್ಮುಕ್ತಂ ಭೂತಭವ್ಯಾತ್ ಕೃತಾಕೃತಾತ್ ।
ಸ್ವಮಾತ್ಮಾನಂ ಪರಂ ವಿದ್ಯಾದ್ವಿಮುಕ್ತಂ ಸರ್ವಬನ್ಧನೈಃ ॥ ೭೮ ॥

೭೮. ಧರ್ಮಾಧರ್ಮಗಳಿಲ್ಲದ ಹಿಂದಿನ ಕಾಲ, ಮುಂದಿನ ಕಾಲ-(ಯಾವದೂ) ಇಲ್ಲದ, ಕಾರ್ಯಕರಣಗಳಿಲ್ಲದ (ಕ. ೧-೩-೧೪) ಯಾವ ಬಂಧನಗಳೂ ಇಲ್ಲದ ವಿಮುಕ್ತಪರಮಾತ್ಮನೇ ತನ್ನ ಆತ್ಮನೆಂದು ಅರಿತುಕೊಳ್ಳಬೇಕು.

ಅಕುರ್ವನ್ ಸರ್ವಕೃಚ್ಛುದ್ಧಸ್ತಿಷ್ಠನ್ನತ್ಯೇತಿ ಧಾವತಃ ।
ಮಾಯಯಯಾ ಸರ್ವಶಕ್ತಿತ್ವಾದಜಃ ಸನ್ ಬಹುಧಾ ಮತಃ ॥ ೭೯ ॥

೭೯. ಎಲ್ಲಾ ಶಕ್ತಿಗಳೂ ಉಳ್ಳವನಾದ್ದರಿಂದ (ಏನೂ) ಮಾಡದೆ ಮಾಯೆಯಿಂದ ಎಲ್ಲವನ್ನೂ ಮಾಡುತ್ತಾನೆ; ಶುದ್ಧನಾಗಿರುತ್ತಾನೆ; ನಿಂತುಕೊಂಡಿದ್ದರೂ ಓಡುವವರನ್ನು ಮೀರಿಹೋಗುತ್ತಾನೆ; (ಈ. ೪) ಹುಟ್ಟದೆ ಬಹುಪ್ರಕಾರವಾಗಿ ತೋರುತ್ತಾನೆ (ತೈ. ಆ. ೩-೧೩).

ಉಪಸಂಹಾರ

ರಾಜವತ್ ಸಾಕ್ಷಿವನ್ಮಾತ್ರತ್ವಾತ್ ಸಾನ್ನಿಧ್ಯಾದ್ ಭ್ರಾಮುಕೋ ಯಥಾ ।
ಭ್ರಾಮಯನ್ ಜಗದಾತ್ಮಾಹಂ ನಿಷ್ಕ್ರಿಯೋಽಕಾರಕೋಽದ್ವಯಃ।ಲಂ

೮೦. ರಾಜನಂತೆ ಬರಿಯ ಸಾಕ್ಷಿಯಾಗಿರುವದರಿಂದ, ಸೂಜಿಗಲ್ಲಿನಂತೆ ಸಮೀಪದಲ್ಲಿರುವದರಿಂದಲೇ, ಜಗತ್ತನ್ನು ಚಲಿಸುವಂತೆ ಮಾಡುತ್ತಿರುವ ನಿಷ್ಕ್ರಿಯನಾದ ಕಾರಕಗಳಿಲ್ಲದ ಅದ್ವಯನಾದ ಆತ್ಮನು ನಾನು.

ನಿರ್ಗುಣಂ ನಿಷ್ಕ್ರಿಯಂ ನಿತ್ಯಂ ನಿರ್ದ್ವಂದ್ವಂ ಯನ್ನಿರಾಮಯಮ್ |
ಶುದ್ಧಂ ಬುದ್ಧಂ ತಥಾ ಮುಕ್ತಂ ತದ್ಬ್ರಹ್ಮಾಸ್ಮೀತಿ ಧಾರಯೇತ್ ॥೮೧

೮೧. (ಯಾವ) ಗುಣವೂ ಇಲ್ಲದ, (ಯಾವ) ಕ್ರಿಯೆಯೂ ಇಲ್ಲದ, ನಿತ್ಯವಾದ ದ್ವಂದ್ವಗಳೇ ಇಲ್ಲದ, (ಯಾವ) ದೋಷವೂ ಇಲ್ಲದ ಶುದ್ಧವೂ ಬುದ್ಧವೂ ಮುಕ್ತವೂ ಆಗಿರುವದಲ್ಲ, ಆ ಬ್ರಹ್ಮನೇ ಆಗಿರುವೆನು ಎಂದು ತಿಳಿಯಬೇಕು.

ಬನ್ಧಂ ಮೋಕ್ಷಂ ಚ ಸರ್ವಂ ಯತ ಇದಮುಭಯಂ ಹೇಯಮೇಕಂ ದ್ವಯಂ ಚ
ಜ್ಞೇಯಂ ಜ್ಞೇಯಾಭ್ಯತೀತಂ ಪರಮಧಿಗತಂ ತತ್ತ್ವಮೇಕಂ ವಿಶುದ್ಧಮ್ |
ವಿಜ್ಞಾಯೈತದ್ ಯಥಾವಚ್ಛ್ರುತಿಮುನಿಗದಿತಂ ಶೋಕಮೋಹಾವತೀತಃ
ಸರ್ವಜ್ಞಃ ಸರ್ವಕೃತ್ ಸ್ಯಾದ್ ಭವಭಯರಹಿತೋ ಬ್ರಾಹ್ಮಣೋಽವಾಪ್ತಕೃತ್ಯಃ ॥೮೨॥

೮೨. ಬಂಧ, ಮೋಕ್ಷ – ಈ ಎರಡೂ ಸಂಪೂರ್ಣವಾಗಿ ಏತರಿಂದಾಗುವವೋ ಆ ಒಂದು[1] ಬಿಡತಕ್ಕದ್ದು ಎಂದು ಅರಿತುಕೊಂಡು, ಜ್ಞೇಯವಾಗಿರುವ ದ್ವೈತವನ್ನೂ ಜ್ಞೇಯಾತೀತವಾದ ವಿಶುದ್ಧವಾದ ಪರಮತತ್ತ್ವವೆನಿಸಿರುವ ಒಂದನ್ನೂ ಶ್ರುತಿಮುನಿಗಳು ಹೇಳುವಂತೆ ಯಥಾವತ್ತಾಗಿ ಅರಿತುಕೊಂಡರೆ[2] ಶೋಕಮೋಹಗಳನ್ನು ದಾಟಿ, ಸರ್ವಜ್ಞನೂ ಸರ್ವಕರ್ತನೂ ಭವಭಯರಹಿತನೂ ಕೃತಕೃತ್ಯನೂ ಬ್ರಾಹ್ಮಣನೂ ಆಗುವನು[3].

ನ ಸ್ವಯಂ ಸ್ವಸ್ಯ ನಾನ್ಯಶ್ಚ ನಾನ್ಯಸ್ಯಾತ್ಮಾ ಚ ಹೇಯಗಃ |
ಉಪಾದೇಯೋ ನ ಚಾಪ್ಯೇವಂ ಇತಿ ಸಮ್ಯಙ್ಮತಿಃ ಸ್ಮೃತಾ ॥ ೮೩ ॥

---

1. ಅಜ್ಞಾನವೇ ಬಂಧಮೋಕ್ಷಗಳಿಗೆ ಕಾರಣವು. ಆತ್ಮಾನಾತ್ಮಗಳ ಅಧ್ಯಾಸವೇ ಅಜ್ಞಾನವೆಂಬುದನ್ನು ಅರಿತುಕೊಳ್ಳಬೇಕು.

2. ದ್ವೈತವು ಬರಿಯ ಹುಸಿತೋರಿಕೆಯೆಂದೂ ಜ್ಞೇಯಾತೀತವಾಗಿರುವ ಪರಮಾತ್ಮತತ್ತ್ವವು ಸ್ವರೂಪವನ್ನು ವೇರ್ಪಡಿಸದ ಪರಮಾರ್ಥವೆಂದೂ ಇದ್ದದ್ದು ಇದ್ದಂತೆ ಅರಿತುಕೊಂಡರೆ.

3. ಶೋಕಮೋಹಗಳಿಲ್ಲವೆಂದು ಈ. ೭ ; ಅಭಯವುಂಟಾಗುವವೆಂದು ತೈ.೨-೭ ; ಸರ್ವಜ್ಞನೂ ಕೃತಕೃತ್ಯನೂ ಆಗುವನೆಂದು ಗೀ. ೧೫–೨೦ ; ಬ್ರಾಹ್ಮಣನಾಗುವನೆಂದು ಬೃ. ೩–೫–೧.

೮೩. ಆತ್ಮನು ತಾನು ತನಗಾಗಲಿ[1], ಒಬ್ಬನು ಮತ್ತೊಬ್ಬನಿಗಾಗಲಿ[2] ಹೇಯನೂ ಅಲ್ಲ, ಹಾಗೆಯೇ ಉಪಾದೇಯನೂ ಅಲ್ಲ – ಇಂತೆಂಬುದೇ ಸಮ್ಯಜ್ಞಾತಿಯೆನಿಸುವದು[3].

ಆತ್ಮಪ್ರತ್ಯಯಿಕಾ[4] ಹ್ಯೇಷಾ ಸರ್ವವೇದಾನ್ತಗೋಚರಾ ।
ಜ್ಞಾತ್ವೈತಾಂ ಹಿ ವಿಮುಚ್ಯನ್ತೇ ಸರ್ವಸಂಸಾರಬನ್ಧನೈಃ ॥ ೮೪ ॥

೮೪. ಸರ್ವವೇದಾಂತಗಳಿಗೂ ವಿಷಯವಾದ (ಈ ಮತಿಯು) ತನ್ನ ಅನುಭವಕ್ಕೆ ಗೊತ್ತಾಗತಕ್ಕದ್ದು[5]. ಇದನ್ನು ಅರಿತುಕೊಂಡರೆ ಎಲ್ಲಾ ಸಂಸಾರ ಬಂಧಗಳಿಂದಲೂ ವಿಮುಕ್ತರಾಗುತ್ತಾರೆ[6].

ರಹಸ್ಯಂ ಸರ್ವವೇದಾನಾಂ ದೇವಾನಾಂ ಚಾಪಿ ಯತ್ಪರಮ್ ।
ಪವಿತ್ರಂ ಪರಮಂ ಹ್ಯೇತತ್ ತದೇತತ್ ಸಂಪ್ರಕಾಶಿತಮ್ ॥ ೮೫ ॥

೮೫. ಎಲ್ಲಾ ವೇದಗಳಿಗೂ ಮತ್ತು ಎಲ್ಲಾ ದೇವತೆಗಳಿಗೂ ಪರಮ ರಹಸ್ಯವು ಯಾವದೋ ಆ ಪರಮಪವಿತ್ರವಾದ ಇದನ್ನು ಚೆನ್ನಾಗಿ ಬೆಳಕಿಗೆ ಹಿಡಿಯಲಾಗಿದೆ[7].

---

1. ತಾನು ತನಗೆ ವಿಷಯನೆಂದರೆ ಆತ್ಮಾಶ್ರಯದೋಷವು; ತಾನೇ ಕರ್ತೃವಾಗಿಯೂ ಕರ್ಮವಾಗಿಯೂ ಇರುವದು ಅನುಭವವಿರುದ್ಧವು.

2. ಆತ್ಮನೊಬ್ಬನಿಗೆ ಮತ್ತೊಬ್ಬನು ವಿಷಯನೆಂದರೆ ಅವರಿಬ್ಬರಲ್ಲಿ ಏನಾದರೂ ಹೆಚ್ಚು ಕಡಿಮೆಯಿರಬೇಕಾಗುವದು, ಅದಿಲ್ಲ; ಆದ್ವಿತೀಯ ಚೈತನ್ಯದಲ್ಲಿ ಮತ್ತೊಬ್ಬನೆಂಬುದೇ ಇಲ್ಲ.

3. ಹೇಯೋಪಾದೇಯರಹಿತಚೈತನ್ಯವೇ ಆತ್ಮನೆಂಬುದು ತತ್ತ್ವಜ್ಞಾನವು.

4. 'ಆತ್ಮಪ್ರತ್ಯಾಯಿಕಾ' ಎಂಬ ಪಾಠವನ್ನು ಹೀಗೆ ತಿದ್ದಿ ಕೊಂಡಿದೆ.

5. 'ಆತ್ಮಪ್ರತ್ಯಯಿಕ' ಎಂಬದರ ಅರ್ಥವಿದು. ಶಾಸ್ತ್ರಾಚಾರ್ಯರು ತಿಳಿಸಿ ಕೊಡುವ ಜ್ಞಾನವು 'ಆತ್ಮಪ್ರತ್ಯಯಿಕ'ವೆಂದು ಗೀತೆಯ ೧೩-೩ಳಿರ ಭಾಷ್ಯದಲ್ಲಿ ಹೇಳಿದೆ. 'ಆತ್ಮಪ್ರತ್ಯಾಯಿಕಾ' ಎಂಬ ಪಾಠಕ್ಕೆ ವ್ಯಾಖ್ಯಾನದಲ್ಲಿ 'ಆತ್ಮನನ್ನು ಬ್ರಹ್ಮವೆಂದು ತಿಳಿಸುವ' ಜ್ಞಾನವೆಂದು ಅರ್ಥವನ್ನು ಬರೆದಿವೆ; ಆದರೆ ಈ ಶಬ್ದವು ಭಾಷ್ಯದಲ್ಲಿ ಎಲ್ಲಿಯೂ ಪ್ರಯುಕ್ತವಾಗಿರುವಂತೆ ಕಾಣಲಿಲ್ಲ.

6. ಏಕೆಂದರೆ ಬಂಧಗಳೆಲ್ಲವೂ ಅವಿದ್ಯಕವಾಗಿವೆ.

7. ವೇದಗಳಿಗೆ ರಹಸ್ಯವೆಂದರೆ ಮನೋವಾಕ್ಕಾಯಗಳಿಗೆ ಅಗೋಚರವಾದ ತತ್ತ್ವವು; ದೇವತೆಗಳಿಗೂ ಇದು ತಿಳಿಯದ್ದರಿಂದ ದೇವತೆಗಳಿಗೂ ರಹಸ್ಯವು. ತೈ. ೨-೯; ಕ. ೧-೧-೨೧ ನೋಡಿ; ಜ್ಞಾನವು ಎಲ್ಲಕ್ಕಿಂತಲೂ ಪಾಪನಾಶಕವಾದ ಪವಿತ್ರವೆಂದು ಗೀ. ೪-೩ಳಿರಲ್ಲಿ ಹೇಳಿದೆ.

ನೈತದ್ದೇಯಮಶಾನ್ತಾಯ ರಹಸ್ಯಂ ಜ್ಞಾನಮುತ್ತಮಮ್ ।
ವಿರಕ್ತಾಯ ಪ್ರದಾತವ್ಯಂ ಶಿಷ್ಯಾಯಾನುಗತಾಯ ಚ ॥ ೮೪ ॥

೮೪. ಶಾಂತನಲ್ಲದವನಿಗೆ ಈ ರಹಸ್ಯವಾದ ಉತ್ತಮಜ್ಞಾನವನ್ನು ಕೊಡಬಾರದು. ವಿರಕ್ತನಾಗಿ (ತನ್ನನ್ನೇ) ಅನುಸರಿಸಿಕೊಂಡಿರುವ ಶಿಷ್ಯನಿಗೆ ಇದನ್ನು ಕೊಡಬೇಕು.

ದದತಶ್ಚಾತ್ಮನೋ ಜ್ಞಾನಂ ನಿಷ್ಕ್ರಯೋಽನ್ಯೋ ನ ವಿದ್ಯತೇ ॥
ಜ್ಞಾನಮಿಚ್ಛಂ ಸ್ತರೇತ್ ತಸ್ಮಾದ್ಯುಕ್ತಃ ಶಿಷ್ಯಗುಣೈಃ ಸದಾ ॥ ೮೫ ॥

೮೫. ಆತ್ಮಜ್ಞಾನವನ್ನು ಕೊಟ್ಟವನಿಗೆ ಇನ್ನು ಬೇರೆ ನಿಷ್ಕ್ರಯವಿರುವದಿಲ್ಲ, ಆದ್ದರಿಂದ ಜ್ಞಾನವನ್ನು ಬಯಸುವವನು ಯಾವಾಗಲೂ ಶಿಷ್ಯಗುಣಗಳಿಂದ ಕೂಡಿದವನಾಗಿ (ಸಂಸಾರವನ್ನು) ದಾಟಬೇಕು[1].

ಮಂಗಲ

ಜ್ಞಾನಂ ಜ್ಞೇಯಂ ತಥಾ ಜ್ಞಾತಾ ಯಸ್ಮಾದನ್ಯೋ ನ ವಿದ್ಯತೇ ।
ಸರ್ವಜ್ಞಃ ಸರ್ವಶಕ್ತಿರ್ಯಸ್ತಸ್ಮೈ ಜ್ಞಾನಾತ್ಮನೇ ನಮಃ ॥ ೮೬ ॥

೮೬. ಜ್ಞಾನ, ಜ್ಞೇಯ, ಜ್ಞಾತೃ- ಇವು ಯಾವೂ ಯಾವ (ಆತ್ಮನಿಗಿಂತ) ಬೇರೆಯಾಗಿ ಇರುವದಿಲ್ಲವೋ ಅಂಥ ಸರ್ವಜ್ಞನೂ ಸರ್ವಶಕ್ತಿಯುಳ್ಳವನೂ ಆದ ಜ್ಞಾನಾತ್ಮನಿಗೆ[2] ನಮಸ್ಕಾರ !

ವಿದ್ಯಯಾ ತಾರಿತಾಃ ಸ್ಮೋ ಯೈರ್ಜನ್ಮಮೃತ್ಯುಮಹೋದಧಿಮ್ ।
ಸರ್ವಜ್ಞೇಭ್ಯೋ ನಮಸ್ತೇಭ್ಯೋ ಗುರುಭ್ಯೋಽಜ್ಞಾನಸಜ್ಯುಲಮ್ ॥

೮೭. ಜನ್ಮ, ಮರಣ- ಇವುಗಳ ಅಜ್ಞಾನಪೂರ್ಣಮಹಾಸಾಗರವನ್ನು ಯಾರು ವಿದ್ಯೆಯಿಂದ ದಾಟಿಸಿದರೋ ಅಂಥ ಸರ್ವಜ್ಞರಾದ ಗುರುಗಳಿಗೆ ನಮಸ್ಕಾರ !

1. ಗದ್ಯಬಂಧ ಖಂಡ ೨೧೨ ನೋಡಿ.
2. ಗದ್ಯಬಂಧ ಅವಗತಿಪ್ರಕರಣವನ್ನು ನೋಡಿ. ಆತ್ಮನು ಜ್ಞಾತೃಜ್ಞಾನಜ್ಞೇಯ ಎಂಬ ನಿಭಾಗವಿಲ್ಲದವನೆಂದು ಅಲ್ಲಿ ಹೇಳಿದೆ.

ಸಮ್ಯಙ್ಮತಿಪ್ರಕರಣದ ಸಾರ

೧–೩. ಸರ್ವಜ್ಞನೂ ಸರ್ವದೃಕ್ಸ್ವರೂಪನೂ ಆಗಿರುವ ಜ್ಞೇಯರೂಪನಾದ ಪರಮಾತ್ಮನನ್ನೂ ಆ ಜ್ಞೇಯವನ್ನು ತಿಳಿಸಿಕೊಟ್ಟಿರುವ ಆಚಾರ್ಯರನ್ನೂ ನಮಸ್ಕರಿಸಿ ಬ್ರಹ್ಮವಿದ್ಯೆಯ ನಿಶ್ಚಯವನ್ನು ತಿಳಿಸುತ್ತೇವೆ.

೪–೭. ಆತ್ಮಲಾಭವೇ ಎಲ್ಲಕ್ಕಿಂತಲೂ ಹೆಚ್ಚಿನ ಲಾಭವು; ಏಕೆಂದರೆ ಅದೊಂದೇ ನಿತ್ಯವಾದ ಲಾಭವು. ಈ ಲಾಭವು ಆತ್ಮಜ್ಞಾನವೊಂದರಿಂದಲೇ ಆಗುವದು; ಏಕೆಂದರೆ ನಮ್ಮ ಆತ್ಮನು ಅಜ್ಞಾನದಿಂದಲೇ ಅಲಬ್ಧನಾಗಿರುತ್ತಾನೆ.

೮–೧೬$\frac{೧}{೨}$. ಆತ್ಮಜ್ಞಾನವು ವೇದಪ್ರಮಾಣದಿಂದ ಉಂಟಾಗತಕ್ಕದ್ದು. ವೇದಕ್ಕೆ ಆತ್ಮಸ್ವರೂಪವನ್ನು ತಿಳಿಸುವದರಲ್ಲಿಯೇ ತಾತ್ಪರ್ಯವು; ಆತ್ಮನು ಒಬ್ಬನೇ, ಅದ್ವಿತೀಯನು – ಎಂಬುದು ವೇದವಾಕ್ಯದಿಂದಲೇ ತಿಳಿಯತಕ್ಕದ್ದು. ಅನಾತ್ಮವೆಲ್ಲವೂ ನಾಮರೂಪಕರ್ಮಾತ್ಮಕವಾಗಿರುತ್ತದೆ; ಇವು ಮೂರೂ ಒಂದನ್ನೊಂದು ಆಶ್ರಯಿಸಿಕೊಂಡೇ ಸಿದ್ಧವಾಗುತ್ತವೆ. ಅವು ಸ್ವಯಂಸಿದ್ಧವಲ್ಲ; ತನಗೆ ತಾನೇ ಇದ್ದುಕೊಂಡಿರುವ ಆತ್ಮನಲ್ಲಿ ಕಲ್ಪಿತವಾಗಿರುತ್ತವೆ – ಎಂಬುದು ವೇದದ ಉಪದೇಶವು. ಸರಿಯಾಗಿ ನೋಡಿದರೆ ವೇದ ವೆಂಬುದೂ ಆತ್ಮನಿಗಿಂತ ಬೇರೆಯಲ್ಲ. ಆತ್ಮಜ್ಞಾನವೊಂದೇ ವೇದಜನಿತಜ್ಞಾನವೆಂದೂ ಇಂದ್ರಿಯಾದಿಜನಿತಜ್ಞಾನವೆಂದೂ ಉಪಾಧಿಭೇದದಿಂದ ವಿಕಲ್ಪಿತವಾಗಿರುತ್ತದೆ. ಸ್ವಪ್ನಜ್ಞಾನದ ವಿಮರ್ಶೆಯಿಂದ ಇದು ಗೊತ್ತಾಗುತ್ತದೆಯೆಂದು ಶ್ರುತಿ ಹೇಳುತ್ತದೆ.

೧೬$\frac{೧}{೨}$–೨೦. ಜಾಗ್ರತ್‌ಸ್ವಪ್ನಗಳಲ್ಲಿ ಜ್ಞಾನವೆಂದೂ ಜ್ಞೇಯವಿವಸ್ತುವೆಂದೂ ಕಾಣುವ ದ್ವೈತವು ಬರಿವಣಿಗೆ, ಓದು – ಇವುಗಳಂತೆ ಒಂದನ್ನೊಂದು ಅವಲಂಬಿಸಿಕೊಂಡು ಪ್ರತೀತವಾಗುತ್ತಿರುತ್ತವೆ. ಈ ದ್ವೈತಕಲ್ಪನೆಯಿಂದ ಕಾಮಕರ್ಮಗಳು ಉಂಟಾಗುತ್ತಿರುವವು. ಈ ಭೇದವೂ ಕಾಮಕರ್ಮಗಳೂ ಅವಿದ್ಯಾಕಲ್ಪಿತವಾದ್ದರಿಂದ ಅಸತ್ತೆಂಬುದು ಅವಿದ್ಯಾರಹಿತವಾದ ಸುಷುಪ್ತಿಯಲ್ಲಿ ಸ್ವಲ್ಪವೂ ಇಲ್ಲದಿರುವದರಿಂದ ಸ್ಪಷ್ಟವಾಗುತ್ತದೆ.

೨೧–೨೪. ಏಕತ್ವಬುದ್ಧಿಯೇ ವಿದ್ಯೆ; ಅನ್ಯತ್ವಬುದ್ಧಿಯೇ ಅವಿದ್ಯೆ. ವಿದ್ಯೆಯು ಶುದ್ಧವಾದ ಅಂತಃಕರಣದಲ್ಲಿ ಉಂಟಾಗುತ್ತದೆ. ಆದ್ದರಿಂದ ಅಂತಃಕರಣಶುದ್ಧಿಗಾಗಿ ಕಾಯಿಕವಾಚನಿಕಮಾನಸಿಕತಪಸ್ಸನ್ನು ಮಾಡಬೇಕು.

೨೫–೩೨. ದೃಷ್ಟವೆಂಬ ಎಚ್ಚರ, ಸ್ಮೃತವೆಂಬ ಕನಸು, ಅವುಗಳ ಅಭಾವವೆಂಬ ತನ್ನಿನಿದ್ರೆ – ಈ ಮೂರರಲ್ಲಿ ತನ್ನಿನಿದ್ರೆಯು ಮಿಕ್ಕ ಎರಡಕ್ಕೆ ಬೀಜವು. ಆತ್ಮಜ್ಞಾನದಿಂದ ಈ ಬೀಜವನ್ನು ಸುಟ್ಟುಹಾಕಿದರೆ ಮತ್ತೆ ದ್ವೈತವು ಹುಟ್ಟುವದಿಲ್ಲ. ಸುಷುಪ್ತಿಯೆಂಬ ಒಂದು ಬೀಜವೇ ಮೂರವಸ್ಥೆಗಳಾಗಿ ತೋರುತ್ತದೆ; ಅದ್ವಿತೀಯಾತ್ಮನೇ ಈ ಮೂರವಸ್ಥೆಗಳಿಂದ ಮೂರು ಬಗೆಯಾಗಿ ತೋರುತ್ತಿರುತ್ತಾನೆ. ಅವಸ್ಥಾತ್ರಯವು ಮಾಯಿಕವೆಂಬುದನ್ನು ಅರಿತುಕೊಂಡರೆ ಆತ್ಮನಿಗೆ ಪ್ರಾಜ್ಞ, ತೈಜಸ, ವಿಶ್ವ – ಎಂಬ ಮೂರು ರೂಪಗಳೂ ಮಾಯಿಕವೆಂಬುದು ತಿಳಿಯಬರುತ್ತದೆ.

೩೩–೪೩. ಆತ್ಮನು ಶಬ್ದಾದಿಗಳಿಲ್ಲದವನಾದ್ದರಿಂದ ಇಂದ್ರಿಯಾದಿಗಳಿಂದಲಾಗಲಿ ಸುಖಾದಿರಹಿತನಾದ್ದರಿಂದ ಅಂತಃಕರಣದಿಂದಲಾಗಲಿ ವಿಷಯೀಕರಿಸುವದಕ್ಕೆ ಬರುವದಿಲ್ಲ. ಆದರೂ ಚಂದ್ರದರ್ಶನದಿಂದ ರಾಹುದರ್ಶನವೂ ಆಗುವಂತೆ ಅಂತಃಕರಣದಲ್ಲಿಯೇ ಆತ್ಮನೂ ಅರಿಯಬರುತ್ತಾನೆ. ಏಕೆಂದರೆ ಅಂತಃಕರಣದಲ್ಲಿ ಕಾಣುವ ಜ್ಞಾನವು ನಿಜವಾಗಿ ಆತ್ಮನದೇ. ಆತ್ಮನು ಇಂದ್ರಿಯಗಳ ಮೂಲಕ ವಿಷಯಗಳನ್ನು ಬೆಳಗುವದಲ್ಲದೆ ದೃಷ್ಟ್ಯಾದಿಗಳನ್ನು ನಿತ್ಯವಾದ ತನ್ನ ಚೈತನ್ಯದಿಂದ ಬೆಳಗುತ್ತಿರುತ್ತಾನೆ. ಸುಷುಪ್ತಿಯಲ್ಲಿಕೂಡ ಅವನ ಚೈತನ್ಯಕ್ಕೆ ಲೋಪವಿರುವದಿಲ್ಲ. ಇಂದ್ರಿಯಗಳ ಅಥವಾ ಅಂತಃಕರಣದ ಯಾವ ಕ್ರಿಯೆಯೂ ಆತ್ಮ ಚೈತನ್ಯಕ್ಕೆ ಸೇರಿದ್ದಲ್ಲ. ಇಂದ್ರಿಯಗಳಿಂದ ಅರಿಯುವ ವಸ್ತುಗಳಿಗೆ ದೇಶಕಾಲಾದಿವ್ಯವಧಾನವಿರುವದರಿಂದ ಅವು ಪರೋಕ್ಷವಾಗಿರುತ್ತವೆ; ಆತ್ಮನು ನಮ್ಮ ಸ್ವರೂಪವೇ ಆಗಿರುವದರಿಂದ ಪ್ರತ್ಯಕ್ಷನಾಗಿರುತ್ತಾನೆ. ಮಿಕ್ಕ ವಸ್ತುಗಳಿಗೆ ಜ್ಞಾನದ ಬೆಳಕು ಬೇಕು; ಆತ್ಮನು ಜ್ಞಾನಸ್ವರೂಪನೇ ಆಗಿರುವದರಿಂದ ಅವನನ್ನು ತಿಳಿದುಕೊಳ್ಳುವದಕ್ಕೆ ಮತ್ತೇತರ ಸಹಾಯವೂ, ಬೇಡ. ಹೀಗೆ ಸರ್ವಗತನಾಗಿರುವ ಸರ್ವವಿಕ್ರಿಯರಹಿತನಾದ ಆತ್ಮನು ತಾನೆಂದು ಅರಿತುಕೊಂಡವನಿಗೆ ಇತರ ಅಂಜಿಕೆಯೂ ಇರುವದಿಲ್ಲ.

೪೪–೫೦. ಈ ಜ್ಞಾನವುಂಟಾಗುವ ಪೂರ್ವದಲ್ಲಿ ವರ್ಣಾಶ್ರಮಾದ್ಯಭಿಮಾನವಿರುವವರಿಗಾಗಿ ಕರ್ಮವನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ಆದರೆ ವರ್ಣಾಶ್ರಮಾದಿಗಳು ಶರೀರಕ್ಕೆ ಸೇರಿದವೇ ಹೊರತು ಆತ್ಮನಿಗೆ ಸೇರಿದವಲ್ಲ. ಶರೀರಾಭಿಮಾನವು ಅವಿದ್ಯೆ, ಇದನ್ನು ಕಳೆಯುವ ತಿಳಿವಳಿಕೆಯು ವಿದ್ಯೆ. ಸಂನ್ಯಾಸಿಗೆ ಹೇಗೆ ಆಶೌಚಾದಿಗಳು ಇರುವದಿಲ್ಲವೋ ಹಾಗೆ ಜ್ಞಾನಿಗೆ ಜಾತ್ಯಾದಿನಿಮಿತ್ತವಾದ ಕರ್ಮಗಳಿರುವದಿಲ್ಲ. ಅಜ್ಞಾನಿಗೆ ಕಾಮದಿಂದ ಕರ್ಮಗಳುಂಟಾಗುತ್ತವೆ; ಜ್ಞಾನಿಗೆ ಕಾಮವಿಲ್ಲದ್ದರಿಂದ ಕರ್ಮವೂ ಇರುವದಿಲ್ಲ. ಕರ್ಮದ ಫಲವು ಉತ್ಪಾದ್ಯ, ಆಪ್ಯ, ವಿಕಾರ್ಯ, ಸಂಸ್ಕಾರ್ಯ – ಈ ನಾಲ್ಕರಲ್ಲಿ ಒಂದಾಗಿರುತ್ತದೆ. ಆದರೆ ಮೋಕ್ಷವು ಈ ನಾಲ್ಕರಲ್ಲಿ ಒಂದೂ ಆಲ್ಲದ್ದರಿಂದ ಮೋಕ್ಷಕ್ಕಾಗಿ ಕರ್ಮವು ಬೇಕಿಲ್ಲ.

೫೧–೫೩. ಅನಾತ್ಮಪ್ರೀತಿಯಿಂದ ತಾಪವುಂಟಾಗುತ್ತದೆ, ಅನಾತ್ಮವು ಅನಿತ್ಯವಾಗಿರುತ್ತದೆ, ಅನಾತ್ಮಪ್ರೀತಿಯೂ ಆತ್ಮಾರ್ಥವಾಗಿರುತ್ತದೆ. ಆದ್ದರಿಂದ ಹೊರಗಿನ ವಿಷಯದ ಪ್ರೀತಿಯನ್ನು ಆತ್ಮನಲ್ಲಿಯೇ ಇಟ್ಟು ಆತ್ಮಜ್ಞಾನಕ್ಕಾಗಿ ನಿಷ್ಕ್ರಿಯನೂ ಮುಕ್ತನೂ ಆಗಿರುವ ಬ್ರಹ್ಮನಿಷ್ಠನಾದ ಗುರುವನ್ನು ಆಶ್ರಯಿಸಬೇಕು. ಆ ಗುರುವು ಶಿಷ್ಯನನ್ನು ಸಂಸಾರದಿಂದ ದಾಟಿಸುವನು.

೫೪–೭೯. ಆತ್ಮನು ಚೈತನ್ಯಸ್ವರೂಪನೇ ಆಗಿದ್ದರೂ ಉಪಾಧಿಯಿಂದ ಆ ಚೈತನ್ಯವು ದೃಷ್ಟ್ಯಾದಿರೂಪಗಳಿಂದ ಬೇರೆಬೇರೆಯಾಗಿ ಕಾಣುತ್ತದೆ. ಈ ನಿತ್ಯಚೈತನ್ಯದಿಂದ ಯಾವಾಗಲೂ ಎಲ್ಲವನ್ನೂ ಆತ್ಮನು ಅರಿಯುತ್ತಿರುತ್ತಾನೆ. ಅನ್ಯದೃಷ್ಟಿಯಿಂದ ಶರೀರಾಭಿಮಾನವುಳ್ಳವನಾಗಿ ತಾನು ಪರಿಚ್ಛಿನ್ನನೆಂಬ ತಪ್ಪು ತಿಳಿವಳಿಕೆಯಿಂದ ಅಯೋ ಶರೀರದ ಧರ್ಮವುಳ್ಳವನಾಗಿ ಕಾಣುತ್ತಿರುತ್ತಾನೆ. ಹಿಂದೆ ಹೇಳಿರುವ ಅವಸ್ಥಾತ್ರಯವಿಮರ್ಶೆಯಿಂದ ತನ್ನ ನಿಜವಾದ ಸ್ವರೂಪದ ಅರಿವಾಗುತ್ತದೆ. ಆತ್ಮನು ಪರಮಾರ್ಥಸತ್ಯಸ್ವರೂಪನು, ಚೈತನ್ಯಸ್ವರೂಪನು, ಪರಿಚ್ಛೇದರಹಿತನು, ಕರ್ತೃತ್ವಾದಿಗಳಿಲ್ಲದವನು, ಜ್ಞಾನಾಜ್ಞಾನಗಳೆಂಬ ವಿಶೇಷಗಳೂ ಇಲ್ಲದವನು, ಹೇಯೋಪಾದೇಯರಹಿತನು, ಹೊರಗು ಒಳಗು ಎಂಬ ಭೇದವಿಲ್ಲದವನು, ನಿರ್ವಿ

ಶೇಷನು, ಅದ್ವಿತೀಯನು – ಎಂದೂ ಇದನ್ನು ಅರಿತುಕೊಂಡವರು ಸರ್ವಸ್ವತಂತ್ರರು, ಉಳಿದವರು ಕೃಪಣರು ; ಆದ್ದರಿಂದ ಆತ್ಮಚೈತನ್ಯದ ಚಿಂತೆಯಲ್ಲಿಯೇ ಕಾಲವನ್ನು ಕಳೆಯಬೇಕು ; ಆತ್ಮನು ಧರ್ಮಾಧರ್ಮ, ಕಾರ್ಯಕರಣ, ಕಾಲತ್ರಯ – ಇವುಗಳ ಸೋಂಕಿಲ್ಲದವನೆಂದು ತಿಳಿದುಕೊಂಡರೆ ಅಮೃತತ್ವವು ದೊರಕುವದು ಎಂದು ಉಪನಿಷತ್ತುಗಳು ಸಾರುತ್ತಿರುವವು.

ಲಂ–ಲಕ್ಷ. ಆತ್ಮನು ಕೂಟಸ್ಥನು, ನಿತ್ಯಚೈತನ್ಯಸ್ವರೂಪನು, ನಿಷ್ಕ್ರಿಯನು ; ಅವನ ಸನ್ನಿಧಿಯಲ್ಲಿ ಜಗತ್ತು ಬಗೆಬಗೆಯ ವಿಕಾರಗಳನ್ನು ಪಡೆಯುತ್ತಿರುವದು. ಬಂಧ ಮೋಕ್ಷಗಳು ಅಜ್ಞಾನಕಾರ್ಯವೆಂದು ತಿಳಿದು ಸರ್ವಜ್ಞೇಯಾತೀತವಾದ ಪರಮಾರ್ಥವನ್ನು ಅರಿತುಕೊಂಡವನು ಶೋಕಮೋಹಾದಿಗಳನ್ನು ದಾಟುವನು. ನಾನು ಅದ್ವಿತೀಯನು, ನನಗಾಗಲಿ ಮತ್ತೊಬ್ಬನಿಗಾಗಿ ವಿಷಯವಲ್ಲದ ನಿತ್ಯಚೈತನ್ಯಸ್ವರೂಪನು – ಎಂಬ ಅರಿವೇ ಸಮ್ಯಗ್ಜ್ಞಾನವು. ಈ ಜ್ಞಾನವನ್ನೇ ಎಲ್ಲಾ ಉಪನಿಷತ್ತುಗಳೂ ತಿಳಿಸುತ್ತವೆ. ಈ ಸರ್ವವೇದಾಂತರಹಸ್ಯವನ್ನು ಸದ್ಗುರುವಿನಿಂದ ಯೋಗ್ಯನಾದ ಶಿಷ್ಯನು ಸಂಪಾದಿಸಿಕೊಳ್ಳಬಹುದು. ದೇವತಾಗುರುಭಕ್ತಿಯೇ ಈ ಜ್ಞಾನಕ್ಕೆ ಮುಖ್ಯಸಾಧನವು.

——:o:——

೧೮. ತತ್ತ್ವಮಸಿ[1]

ಮಂಗಲ

ಯೇನಾತ್ಮನಾ ವಿಲೀಯನ್ತ ಉದ್ಭವನ್ತಿ ಚ ವೃತ್ತಯಃ ।
ನಿತ್ಯಾವಗತಯೇ ತಸ್ಮೈ ನಮೋ ಧೀಪ್ರತ್ಯಯಾತ್ಮನೇ ॥ ೧ ॥

೧. (ಅಂತಃಕರಣದ) ವೃತ್ತಿಗಳು ಯಾವ ಆತ್ಮನ ರೂಪದಿಂದಲೇ ಅಡಗಿ ಹುಟ್ಟುತ್ತಿರುವವೋ ಅಂತಃಕರಣಪ್ರತ್ಯಯಗಳಿಗೆ ಆತ್ಮನಾದ ಆ ನಿತ್ಯ ಚೈತನ್ಯಸ್ವರೂಪನಿಗೆ[2] ನಮಸ್ಕಾರ !

ಪ್ರಮಥ್ಯ ವಜ್ರೋಪಮಯುಕ್ತಿಸಂಭೃತೈಃ
ಶ್ರುತೇರರಾತೀನ್ ಶತಶೋ ವಚೋಽಸಿಭಿಃ ।
ರರಕ್ಷ ವೇದಾರ್ಥನಿಧಿಂ ವಿಶಾಲಧೀ
ರ್ನಮೋ ಯತೀನ್ದ್ರಾಯ ಗುರೋರ್ಗರೀಯಸೇ ॥ ೨ ॥

೨. ವಜ್ರದಂತಿರುವ (ಪ್ರಬಲ)ಯುಕ್ತಿಗಳಿಂದ ರಕ್ಷಿತವಾಗಿರುವ ನೂರಾರು ವಾಗ್ರೂಪವಾದ ಕತ್ತಿಗಳಿಂದ ವೇದಶತ್ರುಗಳನ್ನು ನಾಶಗೊಳಿಸಿ ವೇದಾರ್ಥವೆಂಬ ನಿಧಿಯನ್ನು ರಕ್ಷಿಸಿದ ವಿಶಾಲಬುದ್ಧಿಯ ಯತಿಶ್ರೇಷ್ಠರಾದ ಗುರುಗಳ ಗುರುಗಳಿಗೆ[3] ನಮಸ್ಕಾರ !

---

1. 'ತತ್ತ್ವಮಸಿ' ಎಂಬ ಮೈ॥ ಪಾಠವು ಅಚ್ಚಿನ ತಪ್ಪೆಂದು ಕಾಣುತ್ತದೆ.

2. ಅದ್ವಿತೀಯನಾದ ಆತ್ಮನಿಗಿಂತ ವ್ಯತಿರಿಕ್ತವಾಗಿ ಅಂತಃಕರಣದ ವೃತ್ತಿಗಳಾಗಲಿ ವಿಷಯಗಳಾಗಲಿ ಇರುವದಿಲ್ಲ ; ಹಾಗೆ ಇರುವವೆಂಬ ಅಜ್ಞಾನವನ್ನು ಕಳೆಯುವ ಆತ್ಮ ಜ್ಞಾನವೇ ನಿಜವಾದ ವೇದಾಂತಜ್ಞಾನವು, ವಿಧೇಯವಾದ ಜ್ಞಾನವಲ್ಲ - ಎಂಬ ಸೂಚನೆ ಇಲ್ಲಿದೆ.

3. ಗೌಡಪಾದರು ಅಸಮಾನವಾದ ಯುಕ್ತಿಗಳಿಂದ ಇಲ್ಲಿ ಹೇಳುವ ವೇದಾರ್ಥವನ್ನು ಸ್ಥಾಪಿಸಿದ್ದರು. ಅದ್ವಿತೀಯನಾದ ಆತ್ಮನನ್ನು ಅರಿತುಕೊಂಡಮಾತ್ರದಿಂದ ಪರಮಪುರುಷಾರ್ಥವು ಪ್ರಾಪ್ತವಾಗುವದೆಂಬುದನ್ನು ಅವರು ತಮ್ಮ ಪ್ರಕರಣಚತುಷ್ಟಯರೂಪವಾದ ಮಾಂಡೂಕ್ಯಕಾರಿಕೆಯಲ್ಲಿ ಸ್ಥಾಪಿಸಿರುವ ವೇದಾರ್ಥವೇ ಈ ಪ್ರಕರಣದಲ್ಲಿ ಉಕ್ತವಾಗಿದೆ ಎಂಬ ಸೂಚನೆ ಇಲ್ಲಿರುತ್ತದೆ.

'ತತ್ತ್ವಮಸಿ' ಎಂಬ ಶ್ರುತಿಯ ತಾತ್ಪರ್ಯ

ನಿತ್ಯಮುಕ್ತಃ ಸದೇವಾಸ್ಮೀತ್ಯೇವಂ ಚೇನ್ನ ಭವೇನ್ಮತಿಃ ।
ಕಮರ್ಥಂ ಶ್ರಾವಯತ್ಯೇವಂ ಮಾತೃವಚ್ಛ್ರುತಿರಾದೃತಾ[1] ॥ ೩ ॥

೩. 'ನಿತ್ಯಮುಕ್ತನಾಗಿ ಸದ್ರೂಪ(ಬ್ರಹ್ಮವೇ) ಆಗಿರುವೆನು' ಎಂದಿಂತಿರುವದು (ಸರಿಯಾದ) ಜ್ಞಾನವಾಗಲಾರದಾದರೆ ತಾಯಿಯಂತೆ ಶ್ರುತಿಯು ಆದರದಿಂದ ಹೀಗೇಕೆ ಹೇಳುತ್ತಿದೆ ?

ಸಿದ್ಧಾದೇವಾಹಮಿತ್ಯಸ್ಮಾದ್ ಯುಷ್ಮದ್ಧರ್ಮೋ ನಿಷಿಧ್ಯತೇ ।
ರಜ್ಜ್ವಜ್ಞಾನಮಿವಾಹಿಧೀರ್ಯುಕ್ತ್ಯಾ ತತ್ತ್ವಮಿತ್ಯಾದಿಶಾಸನೈಃ ॥ ೪ ॥

೪. ಹಗ್ಗದಲ್ಲಿ ಹಾವಿನ ಬುದ್ಧಿಯನ್ನು ಯುಕ್ತಿಯಿಂದ ಕಳೆದುಹಾಕುವಂತೆ ಸಿದ್ಧನೇ ಆಗಿರುವ ನಾನೆಂಬುದರಿಂದ ವಿಷಯಧರ್ಮವನ್ನು 'ತತ್ತ್ವಮ್' (ಛಾಂ. ೬-೮-೭) ಮುಂತಾದ ಶಾಸ್ತ್ರಗಳು ಕಳೆಯುತ್ತವೆ[2].

ಶಾಸ್ತ್ರಸ್ಯಾವಾಣ್ಯತೋ ಜ್ಞೇಯಾ ಧರ್ಮಾದೇರಸ್ತಿತಾ ಯಥಾ ।
ವಿಷಾಪೋಹೋ ಯಥಾ ಧ್ಯಾನಾನ್ನ್ಯಾಯತಃ ಸ್ಯಾತ್ ಸಾಹ್ಮನಸ್ತಥಾ ॥೫

೫. ಧರ್ಮಾದಿಗಳು ಇವೆ ಎಂಬುದು ಶಾಸ್ತ್ರಪ್ರಾಮಾಣ್ಯದಿಂದಲೇ ಹೇಗೆ ತಿಳಿಯುವಮೋ, (ಗರುಡ)ಧ್ಯಾನದಿಂದ ವಿಷವು ಹೋಗುವದೆಂಬುದು (ಶಾಸ್ತ್ರಪ್ರಾಮಾಣ್ಯದಿಂದಲೇ ಹೇಗೆ ತಿಳಿಯಬರುವದೋ, (ಆತ್ಮನಲ್ಲಿ) ಪಾಪವನ್ನು ಅಲ್ಲಗಳೆಯುವ (ಜ್ಞಾನವೂ) ಹಾಗೆಯೇ (ಶಾಸ್ತ್ರದಿಂದ ಆಗುತ್ತದೆ)[4].

---

1. 'ಶ್ರುತಿರಾದರಾತ್' ೫॥

2. ಶ್ರುತಿಯು 'ತತ್ತ್ವಮಸಿ' (ಅದೇ ನೀನಾಗಿದ್ದೀಯೆ) ಎಂದು ಮತ್ತೆಮತ್ತೆ ಹೇಳುತ್ತಿರುವದರಿಂದ ವಾಕ್ಯಜ್ಞಾನವಾದ ಬಳಿಕ ಸಾಧನವಿಶೇಷದಿಂದ ಬ್ರಹ್ಮವಾಗಬೇಕೆಂಬುದು ಶ್ರುತ್ಯಭಿಪ್ರಾಯವಲ್ಲವೆಂದು ನಿಶ್ಚಯವಾಗುತ್ತದೆ.

3. 'ತತ್ತ್ವಮಸಿ' ಎಂಬಲ್ಲಿ ಆತ್ಮನಲ್ಲಿ ಹೊಸದೇನನ್ನೂ ವಾಕ್ಯವು ಉಂಟುಮಾಡುವದಿಲ್ಲ ; ಅನಾತ್ಮಧರ್ಮದ ಅಧ್ಯಾಸವನ್ನು ಮಾತ್ರ ತೆಗೆದು ಆತ್ಮನಲ್ಲಿ ಸಂಸಾರಿತ್ವವು ಇಲ್ಲ ಎಂದು ತಿಳಿಸುತ್ತದೆ.

4. ನಾನೇ ಬ್ರಹ್ಮವು ಎಂಬ ಜ್ಞಾನವು ಯಾರಿಗೂ ಆಗುವದೇ ಇಲ್ಲ ; ಏಕೆಂದರೆ ಆ ಜ್ಞಾನಕ್ಕೆ ಸಾಧನವೇ ಇಲ್ಲ - ಎಂಬ ಆಕ್ಷೇಪಕ್ಕೆ ಸಮಾಧಾನವಿದು. ಗೀ. ಭಾ. ೨-೨೧ನ್ನು ನೋಡಿ. ಇಲ್ಲಿ ಪಾಪವೆಂದರೆ ಧರ್ಮಾಧರ್ಮಗಳು.

ಸದ್ಬ್ರಹ್ಮಾಹಂ ಕರೋಮೀತಿ ಪ್ರತ್ಯಯಾವಾತ್ಮಸಾಕ್ಷಿತೌ ।
ತಯೋರಜ್ಞಾನಜಸ್ಯೈವ ಬಾಧೋ[1] ಯುಕ್ತತರೋ ಮತಃ ॥ ೬ ॥

೬. ನಾನು ಸಚ್ಛ್ರಹ್ಮವು, (ನಾನು ಕರ್ಮವನ್ನು) ಮಾಡುತ್ತೇನೆ– ಎಂಬ ಪ್ರತ್ಯಯಗಳು ತನ್ನ ಅನುಭವದಿಂದ (ಸಿದ್ಧವಾಗಿವೆ). ಅವುಗಳಲ್ಲಿ ಅಜ್ಞಾನದಿಂದುಂಟಾಗಿರುವ (ಪ್ರತ್ಯಯಕ್ಕೇ) ಬಾಧೆಯಾಗಬೇಕೆಂಬುದು ಯುಕ್ತ ತರವಾಗಿದೆ[2].

ಸದಸ್ಮೀತಿ ಪ್ರಮಾಣೋತ್ಥಾ ಧೀರನ್ಯಾ ತನ್ನಿಭೋದ್ಭವಾ ।
ಪ್ರತ್ಯಕ್ಷಾದಿನಿಭಾ ವಾಪಿ ಬಾಧ್ಯತೇ ದಿಗ್ಭ್ರಮಾದಿವತ್ ॥ ೭ ॥

೭. 'ನಾನು ಸತ್ತೇ ಆಗಿರುವೆನು' ಎಂಬ ಬುದ್ಧಿಯು ಪ್ರಮಾಣದಿಂದ ಹುಟ್ಟಿದ್ದು. ಇನ್ನೊಂದು ಪ್ರಮಾಣಾಭಾಸದಿಂದ ಹುಟ್ಟಿದ್ದು. ಪ್ರತ್ಯಕ್ಷಾದ್ಯಾ ಭಾಸದಿಂದ ಹುಟ್ಟಿದ್ದರೂ ದಿಗ್ಭ್ರಮೆಯೇ ಮುಂತಾದದ್ದರಂತೆ ಬಾಧಿತವಾಗು ತ್ತದೆ[3].

ಕುರು ಭೋಕ್ತೇತಿ ಯಚ್ಛಾಸ್ತ್ರಂ ಲೋಕಬುದ್ಧ್ಯನುವಾದಿ ತತ್ ।
ಸದಸ್ಮೀತಿ ಶ್ರುತೇರ್ಜಾತಾ ಬಾಧ್ಯತೇಽನ್ಯಾ ತಯೈವ ಧೀಃ ॥ ೮ ॥

೮. 'ಮಾಡು, (ನೀನು) ಭೋಕ್ತೃವು' ಎಂಬ ಶಾಸ್ತ್ರವು[4] (ಇದೆಯಲ್ಲ) ಅದು ಲೋಕಬುದ್ಧಿಯನ್ನು ಅನುವಾದಮಾಡುತ್ತದೆ[5]. 'ಸತ್ತೇ ಆಗಿರುವೆನು' ಎಂಬುದು ಶ್ರುತಿಯಿಂದ ಉಂಟಾದದ್ದು[6]. ಇನ್ನೊಂದು ಬುದ್ಧಿಯು ಅದ ರಿಂದಲೇ ಬಾಧಿತವಾಗುತ್ತದೆ.

---

1. 'ಬಾಧೋ' ಎಂಬುದು 'ತ್ಯಾಗೋ' ಎಂಬ ಪಾಠಕ್ಕಿಂತ ಮೇಲು.

2. ಕರ್ತೃಭೋಕ್ತೃಬುದ್ಧಿಯೇ ಏತಕ್ಕೆ ಬಾಧಕವಲ್ಲ? –ಎಂಬ ಆಕ್ಷೇಪಕ್ಕೆ ಮುಂದಿನ ಮೂರು ಶ್ಲೋಕಗಳಲ್ಲಿ ಉತ್ತರವಿದೆ. ಶ್ರುತಿಪ್ರತ್ಯಕ್ಷಗಳಲ್ಲಿ ನಿರೂಪಿತಪ್ರತ್ಯಕ್ಷ ದಿಂದುಂಟಾದದ್ದು ಬಾಧಕ, ಅಜ್ಞಾನದಿಂದುಂಟಾದದ್ದು ಬಾಧ್ಯ. ರಜ್ಜುಸರ್ಪಜ್ಞಾನವು ರಜ್ಜುಜ್ಞಾನದಿಂದ ಬಾಧಿತವಾಗುವದಕ್ಕೆ ಇದೇ ಕಾರಣ.

3. ಕರ್ತೃಭೋಕ್ತೃಬುದ್ಧಿಯೂ ಪ್ರಮಾಣದಿಂದ ಹುಟ್ಟಿಲ್ಲವೆ ?– ಎಂಬ ಪ್ರಶ್ನೆಗೆ ಉತ್ತರವಿದು. ಭ್ರಾಂತಿಪ್ರತ್ಯಕ್ಷವು ಪ್ರಮಾಣವಲ್ಲ.

4. ಶಾಸ್ತ್ರದಿಂದಲೂ ಕರ್ತೃಭೋಕ್ತೃಬುದ್ಧಿಯುಂಟಾಗುವದಲ್ಲ !– ಎಂಬ ಶಂಕೆಗೆ ಪರಿಹಾರವಿದು. ಕರ್ಮವಿಧಿವಾಕ್ಯವು ಕರ್ತೃತ್ವಭೋಕ್ತೃತ್ವವನ್ನು ಅನುವಾದಮಾಡಿಕೊಂಡು ಹೊರಟಿದೆ. ಜ್ಞಾನವಾಕ್ಯವು ತಾತ್ಪರ್ಯದಿಂದ ಬ್ರಹ್ಮಾತ್ಮೈಕ್ಯವನ್ನು ತಿಳಿಸುತ್ತವೆ. ಆದ್ದ ರಿಂದ ತತ್ಪರವಾದದ್ದೇ ಬಾಧಕವು, ಅತತ್ಪರವಾದದ್ದು ಬಾಧ್ಯವು – ಎಂದರ್ಥ.

5. ಗೊತ್ತಿರುವದನ್ನು ಹೇಳಿಕೊಂಡಿದೆ ; ಅದನ್ನೇ ಪ್ರತಿಪಾದಿಸುವದಕ್ಕೆ ಬಂದಿಲ್ಲ.

6. ಶ್ರುತಿಯು ಅಜ್ಞಾತವಾದದ್ದನ್ನು ತಿಳಿಸುತ್ತದೆಯಾದ್ದರಿಂದ ಈ ವಿಷಯದಲ್ಲೇ ಅದು ಪ್ರಮಾಣ ಎಂದು ಭಾವ.

ಪ್ರಸಂಖ್ಯಾನವಾದಿಗಳ ಮತ

ಶಬ್ದೇವ ತ್ವಮಸೀತ್ಯುಕ್ತೇ ನಾತ್ಮನೋ ಮುಕ್ತತಾ ಸ್ಥಿರಾ ।
ಪ್ರವರ್ತತೇ ಪ್ರಸಞ್ಚ್ಯಾವತೋ ಯುಕ್ತ್ಯಾನುಚಿನ್ತಯೇತ್ ॥ ೯ ॥

೯. 'ಸತ್ತೇ ನೀನು' ಎಂದ ಮಾತ್ರದಿಂದ ಆತ್ಮನು ಮುಕ್ತನೆಂಬುದು ನೆಲೆಯಾಗಿ ಇರುವದಿಲ್ಲ. ಆದ್ದರಿಂದ ಯುಕ್ತಿಯೊಡನೆ ಪ್ರಸಂಖ್ಯಾನವನ್ನು ಅನುಚಿಂತನಮಾಡಬೇಕು[1].

ಸಕೃದುಕ್ತಂ ನ ಗೃಹ್ಣಾತಿ ವಾಕ್ಯಾರ್ಥಜ್ಞೋಽಪಿ ಯೋ ಭವೇತ್ ।
ಅಪೇಕ್ಷತೇಽತ ಏವಾನ್ಯದವೋಚಾಮ ದ್ವಯಂ ಹಿ ತತ್ ॥ ೧೦ ॥

೧೦. ವಾಕ್ಯಾರ್ಥವನ್ನು ತಿಳಿದುಕೊಂಡವನುಕೂಡ ಒಂದು ಸಲ ಹೇಳಿದ್ದನ್ನು ತಿಳಿದುಕೊಳ್ಳಲಾರನು. ಆದ್ದರಿಂದಲೇ ಅವನಿಗೆ ಮತ್ತೊಂದು ಬೇಕು. ಆ ಎರಡನ್ನೂ ಹೇಳಿಯೇ ಇರುತ್ತೇವೆ[2].

ನಿಯೋಗೋಽಪ್ರತಿಪನ್ನತ್ವಾತ್ ಕರ್ಮಣಾಂ ಸ ಯಥಾ ಭವೇತ್ ।
ಅವಿರುದ್ಧೋ ಭವೇತ್ತಾವದ್ ಯಾವತ್ಸಂವೇದ್ಯತಾದೃಢಾ ॥೧೧॥

೧೧. ಎಲ್ಲಿಯವರೆಗೆ ಅನುಭವಕ್ಕೆ ವಿಷಯವಾಗುವದೆಂಬುದು ದೃಢವಾಗಿರುವದಿಲ್ಲವೋ ಅಲ್ಲಿಯವರೆಗೆ, ಕರ್ಮಗಳನ್ನು ತಿಳಿಯದ್ದರಿಂದ ವಿಧಿಯಿರಬಹುದಾಗಿರುವಂತೆ (ಪ್ರಸಂಖ್ಯಾನವಿಧಿಯಿರುವದೂ) ಅವಿರುದ್ಧವಾಗಿರುತ್ತದೆ[3].

---

1. ವಾಕ್ಯದಿಂದ ಒಂದೇ ಸಲಕ್ಕೆ ಜ್ಞಾನವಾಗದ್ದರಿಂದ ಮತ್ತೆಮತ್ತೆ ಶ್ರುತಿಯು ಯುಕ್ತಿಸಹಿತವಾಗಿ ತಿಳಿಸಿಕೊಟ್ಟಿದೆ ಎಂದು ಭಾವ.

2. ವಾಕ್ಯಯುಕ್ತಿಗಳ ಅಭ್ಯಾಸವೇ ಪ್ರಸಂಖ್ಯಾನವು; ಒಂದು ಸಲ ಹೇಳಿದ ಮಾತ್ರದಿಂದ ಜ್ಞಾನವಾಗುವದಿಲ್ಲವಾದ್ದರಿಂದ ಪ್ರಸಂಖ್ಯಾನವು ಬೇಕು.

3. ಕರ್ಮಗಳಿಗೂ ಫಲಕ್ಕೂ ಇರುವ ಸಂಬಂಧವು ಗೊತ್ತಿಲ್ಲದವರಿಗೆ ಇಂಥ ಫಲಕ್ಕಾಗಿ ಈ ಕರ್ಮವನ್ನು ಮಾಡು ಎಂದು ಶಾಸ್ತ್ರವು ಕಟ್ಟುಮಾಡುವಂತೆ, ಬ್ರಹ್ಮಾತ್ಮೈಕ್ಯ ಜ್ಞಾನವಾಗದವರಿಗಾಗಿ ಪ್ರಸಂಖ್ಯಾನವನ್ನು ಮಾಡು ಎಂದು ಕಟ್ಟುಮಾಡುವದು ವಿರುದ್ಧವಲ್ಲ ಎಂದರ್ಥ. ಪೂರ್ವಪಕ್ಷಿಯೂ ಆವೃತಿಯೇ ಆದರೂ ಒಂದೇ ಸಲಕ್ಕೆ ವಾಕ್ಯದಿಂದ ಜ್ಞಾನವಾಗುವದಿಲ್ಲ ಎಂಬ ಮತದವನು; ವಾಕ್ಯಶ್ರವಣವಾದ ಮೇಲೂ ವಾಕ್ಯಜ್ಞಾನಾಭ್ಯಾಸದ ವಿಧಿಯನ್ನು ಒಪ್ಪುವವನು.

ಚೇಷ್ಟಿತಂ ಚ ತಥಾ ಮಿಥ್ಯಾ ಸ್ವಚ್ಛನ್ದಃ ಪ್ರತಿಪದ್ಯತೇ ।
ಪ್ರಸಜ್ಯ್ಯಾನಮತಃ ಕಾರ್ಯಂ ಯಾವದಾತ್ಮಾನುಭೂಯತೇ ॥ ೧೨ ॥

೧೨. ಮತ್ತು ಸ್ವೇಚ್ಛೆಯಿಂದ ನಡೆಯುವವನು[1] ಮಿಥ್ಯಾವ್ಯಾಪಾರವನ್ನೂ ಪಡೆಯಬಹುದು[2]. ಆದ್ದರಿಂದ ಆತ್ಮನು ಅನುಭವಕ್ಕೆ[3] ಬರುವವರೆಗೂ ಪ್ರಸಂಖ್ಯಾನವನ್ನು ಮಾಡಬೇಕು.

ಸದಸ್ಮೀತಿ ಚ ವಿಜ್ಞಾನಮುಕ್ಷಜೋ ಬಾಧತೇ ಧ್ರುವಮ್ ।
ಶಬ್ದೋತ್ಥಂ ದೃಢಸಂಸ್ಕಾರೋ ದೋಷೈಶ್ಚಾಕೃಷ್ಯತೇ ಬಹಿಃ ॥ ೧೩ ॥

೧೩. 'ಸದ್ಬ್ರಹ್ಮನಾಗಿರುವೆನು' ಎಂಬ ಶಬ್ದದಿಂದುಂಟಾಗಿರುವ ವಿಜ್ಞಾನವನ್ನು ಪ್ರತ್ಯಕ್ಷದಿಂದುಂಟಾಗಿರುವ ಗಟ್ಟಿಯಾದ ಸಂಸ್ಕಾರವು ಅವಶ್ಯವಾಗಿ ಬಾಧಿಸುತ್ತದೆ[4]. ದೋಷಗಳಿಂದ ಹೊರಕ್ಕೂ ಸೆಳೆಯಲ್ಪಡುತ್ತಾನೆ[5].

ಶ್ರುತಾನುಮಾನಜನ್ಮಾನೌ ಸಾಮಾನ್ಯವಿಷಯೌ ಯತಃ ।
ಪ್ರತ್ಯಯಾವಕ್ಷಜೋಽವಶ್ಯಂ ವಿಶೇಷಾರ್ಥೋ ನಿವಾರಯೇತ್ ॥ ೧೪ ॥

೧೪. ಶಬ್ದ, ಅನುಮಾನ – ಇವುಗಳಿಂದಾದ ಜ್ಞಾನಗಳು ಸಾಮಾನ್ಯ ವಿಷಯಕವಾದ (ಜ್ಞಾನಗಳಾ)ಗಿರುವುದರಿಂದ ಪ್ರತ್ಯಕ್ಷದಿಂದ ಹುಟ್ಟಿದ ವಿಶೇಷ ವಿಷಯಕವಾದ (ಜ್ಞಾನವು) ಅವಶ್ಯವಾಗಿ (ಅವನ್ನು) ಬಾಧಿಸುವದು[6].

---

1. ಶಾಸ್ತ್ರವಿಧಿಯಿಲ್ಲದೆ ನಡೆಯುವನವನು.

2. ನಿಷಿದ್ಧಕರ್ಮವನ್ನು ಮಾಡಬಹುದು. ಆದ್ದರಿಂದ ಜ್ಞಾನಾಭ್ಯಾಸರೂಪವಾದ ಪ್ರಸಂಖ್ಯಾನದ ವಿಧಿ ಬೇಕು ಎಂದು ಭಾವ.

3. ವಾಕ್ಯದಿಂದ ಅನುಭವವಾಗುವದಿಲ್ಲ, ಪ್ರಸಂಖ್ಯಾನದಿಂದ ಆಗುತ್ತದೆ ಎಂದು ಭಾವ.

4. ಶಬ್ದಜ್ಞಾನವು ಹೊಸದಾಗಿ ಹುಟ್ಟಿರುವುದರಿಂದ ಅದು ಪ್ರತ್ಯಕ್ಷಜ್ಞಾನದಷ್ಟು ದೃಢವಾಗಿರಲಾರದು ಎಂದು ಭಾವ.

5. ರಾಗಾದಿಗಳಿಂದ ಆನಾತ್ಮದ ಕಡೆಗೂ ಸೆಳೆಗುತ್ತಾನೆ.

6. ಶಬ್ದದಿಂದ ಪರೋಕ್ಷಜ್ಞಾನವಾಗುವದೇ ಹೊರತು ಅಪರೋಕ್ಷಜ್ಞಾನವಾಗಲಾರದು; ಪ್ರತ್ಯಕ್ಷದಿಂದ ನಾನು ಕರ್ತೃಭೋಕ್ತೃ ಎಂಬ ಜ್ಞಾನವಾಗುತ್ತಿರುವಲ್ಲಿ ಪರೋಕ್ಷವಾಗಿರುವ ನಾನು ಅಕರ್ತೃ ಎಂಬ ಶಬ್ದಜ್ಞಾನವು ಏನುಮಾಡೀತು? –ಎಂದು ಭಾವ. ಈ ಪ್ರಕರಣದಲ್ಲಿರುವ ಪೂರ್ವಪಕ್ಷಸಿದ್ಧಾಂತಗಳನ್ನು ಸೂ. ಭಾ. ೪-೧-೩ರಲ್ಲಿ ಸಂಗ್ರಹವಾಗಿ ಕೊಟ್ಟಿರುತ್ತದೆ.

ವಾಕ್ಯಾರ್ಥಪ್ರತ್ಯಯೀ ಕಶ್ಚಿನ್ನಿರ್ದುಃಖೋ ನೋಪಲಭ್ಯತೇ ।
ಯದಿ ವಾ ದೃಶ್ಯತೇ ಕಶ್ಚಿದ್ವಾಕ್ಯಾರ್ಥಶ್ರುತಿಮಾತ್ರತಃ ॥ ೧೫ ॥
ನಿರ್ದುಃಖೋಽತೀತದೇಹೇಷು ಕೃತಭಾವೋಽನುಮೀಯತೇ ।
ಚರ್ಯಾ ನೋ ಶಾಸ್ತ್ರಸಂವೇದ್ಯಾ[1] ಸ್ಯಾದನಿಷ್ಟಂ ತಥಾ ಸತಿ ॥ ೧೬ ॥

೧೫-೧೬. ವಾಕ್ಯಾರ್ಥಜ್ಞಾನವುಳ್ಳವನು ಯಾವನೂ ದುಃಖರಹಿತನಾಗಿರುವದು ಕಂಡುಬರುವದಿಲ್ಲ[2]. ಅಥವಾ ವಾಕ್ಯಾರ್ಥಶ್ರವಣಮಾತ್ರದಿಂದ ಯಾವನಾದರೂ ನಿರ್ದುಃಖನಾದವನು ಕಂಡುಬಂದರೆ, ಹಿಂದಿನ (ಜನ್ಮದ) ದೇಹಗಳಲ್ಲಿ ಪ್ರಸಂಖ್ಯಾನವನ್ನು ಮಾಡಿದವನೆಂದು ಅನುಮಾನಿಸಬೇಕಾಗುತ್ತದೆ[3]. (ಪ್ರಸಂಖ್ಯಾನವಿಧಿಯಿಲ್ಲದೆ ಇದ್ದರೆ ಪರಮಹಂಸ)ಚರ್ಯೆಯು ಶಾಸ್ತ್ರದಿಂದ ತಿಳಿಯಬಂದದ್ದೆಂದು ಆಗಲಾರದು; ಹಾಗಾದರೆ ಅನಿಷ್ಟವಾಗುವದು[4].

ಸದಸೀತಿ ಫಲಂ ಚೋಕ್ತ್ವಾ ವಿಧೇಯಂ ಸಾಧನಂ ಯತಃ ।
ನ ತದನ್ಯತ್ ಪ್ರಸಂಖ್ಯಾನಾತ್ ಪ್ರಸಿದ್ಧಾರ್ಥಮಿಹೇಷ್ಯತೇ ॥ ೧೭ ॥
ತಸ್ಮಾದನುಭವಾಯೈವ ಪ್ರಸಂಚಕ್ಷೀತ ಯತ್ನತಃ ।
ತ್ಯಜನ್ ಸಾಧನತಾಸ್ಯಧ್ಯವಿರುದ್ಧಂ ಶಮನಾದಿವಾನ್ ॥ ೧೮ ॥

೧೭-೧೮. 'ನೀನು ಸದ್ಬ್ರಹ್ಮವಾಗಿರುವೆ' ಎಂದು ಫಲವನ್ನು ಹೇಳಿ[5] ಸಾಧನವನ್ನು ವಿಧಿಸಬೇಕಷ್ಟೆ[6]. ಅಂಥ ಪ್ರಸಿದ್ಧಾರ್ಥವಾದ ಸಾಧನವು[7]

---

1. 'ನೋಽಶಾಸ್ತ್ರಸಂವೇದ್ಯಾ' ಎಂಬ ಪಾಠವು ಬೇಕಿಲ್ಲ; ಈಗಿರುವಂತೆಯೇ ಅರ್ಥವಾಗುತ್ತದೆ. 'ನೋ' ಎಂಬುದೇ ನಿಷೇಧಾರ್ಥಕವು.

2. ಇಲ್ಲದಿದ್ದರೆ 'ತತ್ತ್ವಮಸಿ' ಎಂಬ ವಾಕ್ಯವು ಕಿವಿಗೆ ಬಿದ್ದವರೆಲ್ಲರೂ ಮುಕ್ತರಾಗಬೇಕಾದೀತು.

3. ಏಕೆಂದರೆ ಕಾರಣವಿಲ್ಲದೆ ಕಾರ್ಯವಾಗಲಾರದು; ಅನುಭವವು ಪ್ರಸಂಖ್ಯಾನ ಕಾರ್ಯವಾಗಿರುತ್ತದೆ.

4. ಸಂನ್ಯಾಸವನ್ನು ಸ್ವೀಕರಿಸಿದವನು ಸ್ವೇಚ್ಛೆಯಿಂದ ಮತ್ತೆ ಗೃಹಸ್ಥನೂ ಆಗಬಹುದೆಂದಾಗುವದು. ಶಾಸ್ತ್ರವಿಧಿಯಿಂದ ಸಂನ್ಯಾಸವನ್ನು ತೆಗೆದುಕೊಂಡರೆ ಹಿಂತಿರುಗುವದಕ್ಕೆ ಆಗುವದಿಲ್ಲ.

5. ಇದು ಫಲವೇ ಹೊರತು ಈಗಲೆ ಸಿದ್ಧವಾಗಿರುವದನ್ನು ಹೇಳುವದಿಲ್ಲವೆಂದು ಪೂರ್ವಪಕ್ಷಿಯ ಮತ.

6. ಸ್ವರ್ಗಕಾಮನಿಗೆ ಯಾಗವನ್ನು ವಿಧಿಸಿರುವಂತೆ ಬ್ರಹ್ಮಸ್ವರೂಪಕಾಮನಿಗೆ ಪ್ರಸಂಖ್ಯಾನವನ್ನು ವಿಧಿಸಿದೆ ಎಂದು ಭಾವ.

7. ಅನುಭವವೆಂಬ ಪ್ರಯೋಜನವನ್ನು ಕೊಡುವ ಸಾಧನವು.

ಪ್ರಸಂಖ್ಯಾನವನ್ನು ಬಿಟ್ಟರೆ ಬೇರೆ ಇಲ್ಲ[1] ಆದ್ದರಿಂದ (ಈ) ಸಾಧನ ಮತ್ತು ಇದರ ಸಾಧ್ಯ[2] –ಇವುಗಳಿಗೆ ವಿರುದ್ಧವಾದ (ಕರ್ಮಾದಿಗಳನ್ನು) ಬಿಟ್ಟು ಅನುಭವಕ್ಕಾಗಿಯೇ ಶಾಂತ್ಯಾದಿಗಳೊಡಗೂಡಿ ಯತ್ನಪೂರ್ವಕವಾಗಿ ಪ್ರಸಂಖ್ಯಾನವನ್ನು ಮಾಡಬೇಕು[3].

ಸಿದ್ಧಾಂತ : ಮೋಕ್ಷವು ನಿತ್ಯಸಿದ್ಧವಾದ್ದರಿಂದ ಶಾಸ್ತ್ರವು ಅಧ್ಯಾಸವನ್ನು ನಿಷೇಧಮಾಡಿದರೆ ಸಾಕು

ನೈತದೇವಂ ರಹಸ್ಯಾನಾಂ ನೇತಿನೇತ್ಯವಸಾನತಃ ।
ಕ್ರಿಯಾಸಾಧ್ಯಂ ಪುರಾ ಶಾಸ್ತ್ರಾತ್ಯಂ ನ ಮೋಕ್ಷೋ ನಿತ್ಯಸಿದ್ಧತಃ ॥ ೧೯ ॥

೧೯. ಇದು ಹೀಗಲ್ಲ. ಏಕೆಂದರೆ ಉಪನಿಷತ್ತುಗಳು "ನೇತಿ ನೇತಿ" ಹೀಗಲ್ಲ, ಹೀಗಲ್ಲ – ಎಂದು (ಹೇಳುವದರಲ್ಲಿಯೇ) ಸರ್ಯವಸಾನವಾಗಿರುತ್ತವೆ. ಕ್ರಿಯೆಯಿಂದ ಸಾಧ್ಯವಾಗಿರುವದನ್ನು ಪೂರ್ವಕಾಂಡದಲ್ಲಿ ಹೇಳಬೇಕು[4]. ಮೋಕ್ಷವು ನಿತ್ಯಸಿದ್ಧವಾಗಿರುವದರಿಂದ (ಕ್ರಿಯಾಸಾಧ್ಯ)ವಲ್ಲ.

ಪುತ್ರದುಃಖಂ ಯಥಾಧ್ಯಸ್ತಂ ಪಿತ್ರಾದುಃಖೇ ಸ್ವ ಆತ್ಮನಿ ।
ಅಹಂಕರ್ತಾ ತಥಾಧ್ಯಸ್ತೋ ನಿತ್ಯಾದುಃಖೇ ಸ್ವ ಆತ್ಮನಿ ॥ ೨೦ ॥

೨೦. ತಂದೆಯು ಮಗನ ದುಃಖವನ್ನು ದುಃಖವಿಲ್ಲದ ತನ್ನ ಆತ್ಮನಲ್ಲಿ ಆರೋಪಿಸಿಕೊಳ್ಳುವಂತೆ ಅಹಂಕಾರವನ್ನು ಅಧ್ಯಾಸಮಾಡಿಕೊಂಡಿರುತ್ತಾರೆ[5].

---

1. ಜ್ಞಾನಾಭ್ಯಾಸದಿಂದ ಅನುಭವವಾಗುವದು ಲೋಕದಲ್ಲಿ ಪ್ರಸಿದ್ಧವಾಗಿದೆ ಎಂದು ಭಾವ.

2. ಶಾಂತ್ಯಾದಿಗಳೂ ಪ್ರಸಂಖ್ಯಾನವೂ ಸಾಧನ, ಮೋಕ್ಷವು ಸಾಧ್ಯ.

3. ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕು ಎಂದು ಶ್ರುತಿ (ಬೃ. ೪-೪-೨೩) ಯಲ್ಲಿ ಹೇಳಿರುವದರಿಂದ ಶಮಾದಿಯುಕ್ತನಾಗಿ ಅನುಭವಕ್ಕಾಗಿ ಪ್ರಸಂಖ್ಯಾನಮಾಡಬೇಕು ಎಂಬುದು ಶಾಸ್ತ್ರವಿಹಿತವಾಗಿರುತ್ತದೆ.

4. ಕರ್ಮಕಾಂಡವು ಸಾಧ್ಯಸಾಧನವನ್ನೂ ಜ್ಞಾನಕಾಂಡವು ಸಿದ್ಧವಸ್ತುವಿನ ಜ್ಞಾನವನ್ನೂ ತಿಳಿಸುತ್ತವೆ. ಸಿದ್ಧವಸ್ತುವಿನ ಪ್ರಕರಣದಲ್ಲಿ ವಿಧಿಗೆ ಅವಕಾಶವೆಲ್ಲಿ?

5. ಮೋಕ್ಷವು ನಿತ್ಯಸಿದ್ಧವಾದರೆ ಅದಕ್ಕಾಗಿ ಯತ್ನವೇಕೆ? –ಎಂಬ ಆಕ್ಷೇಪಕ್ಕೆ ಉತ್ತರವಿದು. ಮೋಕ್ಷವು ಆತ್ಮಸ್ವರೂಪವೇ ಆಗಿದ್ದರೂ ಅಧ್ಯಸ್ತವಾಗಿರುವ ಅಹಂಕಾರವನ್ನು ವಿಂಗಡಿಸಿ ಅರಿತುಕೊಳ್ಳುವದು ಅವಶ್ಯ ಎಂದು ಅಭಿಪ್ರಾಯ.

ಸೋಽಧ್ಯಾಸೋ ನೇತಿನೇತೀತಿ ಪ್ರಾಪ್ತವತ್ ಪ್ರತಿಷಿಧ್ಯತೇ ।
ಭೂಯೋಽಧ್ಯಾಸವಿಧಿಃ ಕಶ್ಚಿತ್ ಕುತಶ್ಚಿನ್ನೋಪಪದ್ಯತೇ ॥ ೨೧ ॥

೨೧. ಆ ಅಧ್ಯಾಸವನ್ನು 'ನೇತಿ ನೇತಿ' ಹೀಗಲ್ಲ, ಹೀಗಲ್ಲ ಎಂದು (ನಿಜವಾಗಿ) ಬಂದೊದಗಿದ್ದಂತೆ[1] (ಅದನ್ನು) ಅಲ್ಲಗಳೆಯಲಾಗಿರುತ್ತದೆ. ಮತ್ತೆ ಅಧ್ಯಾಸಮಾಡಬೇಕೆಂಬ ವಿಧಿಯು ಯಾವ ಕಾರಣದಿಂದಲೂ ಹೊಂದುವದಿಲ್ಲ[2].

ಆತ್ಮನೀಹ ತಥಾಧ್ಯಾಸಃ[3] ಪ್ರತಿಷೇಧಸ್ತಥೈವ ಚ ।
ಮಲಾಧ್ಯಾಸನಿಷೇಧೌ ಹಿ ಕ್ರಿಯೇತೇ ಚ ಯಥಾಬುಧೈಃ ॥ ೨೨ ॥

೨೨. ಅಜ್ಞಾನಿಗಳು ಆಕಾಶದಲ್ಲಿ ಕಲ್ಮಷವನ್ನು ಹೇಗೆ ಅಧ್ಯಾಸಮಾಡಿ ಅಲ್ಲಗಳೆಯುವರೋ[4] ಇಲ್ಲಿ ಆತ್ಮನಲ್ಲಿ ಅಧ್ಯಾಸಮಾಡುವದೂ ಹಾಗೆಯೇ, ಅಲ್ಲಗಳೆಯುವದೂ ಹಾಗೆಯೇ[5].

ಪ್ರಾಪ್ತಶ್ಚೇತ್ ಪ್ರತಿಷಿಧ್ಯೇತ ಮೋಕ್ಷೋಽನಿತ್ಯೋ ಭವೇದ್ಧ್ರುವಮ್ ।
ಅತೋಽಪ್ರಾಪ್ತನಿಷೇಧೋಽಯಂ ದಿವ್ಯಗ್ನಿಚಯನಾದಿವತ್ ॥ ೨೩ ॥

೨೩. ಪ್ರಾಪ್ತವಾದದ್ದನ್ನೇ ಅಲ್ಲಗಳೆಯುವದಾದರೆ ಮೋಕ್ಷವು ಅವಶ್ಯವಾಗಿ ಅನಿತ್ಯವಾಗುವದು[6], ಆದ್ದರಿಂದ ದ್ಯುಲೋಕದಲ್ಲಿ ಅಗ್ನಿಚಯನವನ್ನು ನಿಷೇಧಿಸಿರುವದೇ ಮುಂತಾದವ್ದರಂತೆ ಇದು ಅಪ್ರಾಪ್ತನಿಷೇಧವೇ[7].

---

1. ಆತ್ಮನ ಧರ್ಮವಲ್ಲದಿದ್ದರೂ ಅವನ ಧರ್ಮವೆಂಬಂತೆ ತೋರುವದರಿಂದ ಎಂದರ್ಥ.

2. ಪ್ರಸಂಖ್ಯಾನವೇ ಮುಂತಾದ ಯಾವ ವಿಧಿಯನ್ನೂ ಜ್ಞಾನವಾದ ಬಳಿಕ ಮಾಡುವದೆಂಬುದು ಆತ್ಮನ ಸ್ವರೂಪವಲ್ಲದ್ದನ್ನು ಸ್ವರೂಪವೆಂದು ಹೇಳಿದಂತೆ ಆಗುತ್ತದೆ ಎಂದರ್ಥ.

3. 'ಯಥಾಧ್ಯಾಸಃ' ಎಂಬ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

4. ಅಧ್ಯಾಸಮಾಡಿಕೊಂಡಾಗಲೂ ಅಲ್ಲಗಳೆದಾಗಲೂ ಆಕಾಶದಲ್ಲಿ ತಲಮಲಿನತ್ವವು ಇರುವದೇ ಇಲ್ಲ.

5. ಆತ್ಮನಲ್ಲಿ ಅಪಂಕಾರವು ಇರುವದೇ ಇಲ್ಲ.

6. ಇರುವದು ಹೋಗುವದಿಲ್ಲ, ಹೋದರೆ ಮತ್ತೆ ಬರುವದು ಖಂಡಿತ.

7. "ಭೂಮಿಯಲ್ಲಾಗಲಿ ಅಂತರಿಕ್ಷದಲ್ಲಾಗಲಿ ಸ್ವರ್ಗಲೋಕದಲ್ಲಾಗಲಿ ಅಗ್ನಿಯನ್ನು ಚಯನಮಾಡಬಾರದು" ಎಂದು (ತೈ. ಸಂ. ೫-೨-೭) ಶಾಸ್ತ್ರವಚನವಿದೆ. ಅಲ್ಲಿ ದ್ಯುಲೋಕದಲ್ಲಿ ಅಗ್ನಿಚಯನವನ್ನು ಮಾಡಬಾರದು ಎಂಬುದು ಹೇಗೆ ಅಪ್ರಾಪ್ತಪ್ರತಿಷೇಧವೋ ಹಾಗೆ ಆತ್ಮನಲ್ಲಿ ಅಪಂಕಾರಪ್ರತಿಷೇಧವೂ ಅಪ್ರಾಪ್ತವೇ.

ಆತ್ಮನು ಶಬ್ದಪ್ರತ್ಯಯಗೋಚರನಲ್ಲ

ಸಂಭಾವ್ಯೋ ಗೋಚರೇ ಶಬ್ದಃ ಪ್ರತ್ಯಯೋ ವಾ ನ ಚಾನ್ಯಥಾ |
ನ ಸಂಭಾವ್ಯೌ ತದಾತ್ಮತ್ವಾದಹಙ್ಕರ್ತುಸ್ತಥೈವ ಚ ॥ ೨೪ ॥

೨೪. ಶಬ್ದವಾಗಲಿ ಪ್ರತ್ಯಯವಾಗಲಿ ವಿಷಯದಲ್ಲಿ (ವ್ಯಾಪಾರವುಳ್ಳ) ದ್ದಾಗಿರಬಹುದು, ಹಾಗಿಲ್ಲದ್ದರಲ್ಲಿ ಆಗಲಾರದು. ಆದರೆ (ಆತ್ಮನು) ಆ ವುಗಳ ಆತ್ಮನಾಗಿರುವದರಿಂದಲೂ ಅಹಂಕಾರಕ್ಕೂ ಆತ್ಮನಾಗಿರುವದರಿಂದಲೂ (ಅವೆ ರಡೂ ಆತ್ಮನಲ್ಲಿ ವರ್ತಿಸ)ಲಾರವು[1].

ಅಹಙ್ಕರ್ತ್ರಾತ್ಮನಿ ನ್ಯಸ್ತಂ ಚೈತನ್ಯೇ ಕರ್ತೃತಾದಿ ಯತ್ ।
ನೇತಿ ನೇತೀತಿ ತತ್ ಸರ್ವಂ ಸಾಹಙ್ಕರ್ತೃ[2] ನಿಷಿಧ್ಯತೇ ॥ ೨೫ ॥

೨೫. ಅಹಂಕಾರವು ಆತ್ಮನಾದ ಚೈತನ್ಯದಲ್ಲಿ ಅಧ್ಯಸಮಾಡಿರುವ ಕರ್ತೃತ್ವವೇ ಮುಂತಾದವುಗಳಿವೆಯಲ್ಲ, ಅದೆಲ್ಲವನ್ನೂ ಅಹಂಕಾರದೊಡನೆ 'ಹೀಗಲ್ಲ, ಹೀಗಲ್ಲ' ಎಂದು ನಿಷೇಧಮಾಡಿರುತ್ತದೆ.

ಉಪಲಬ್ಧಿಃ ಸ್ವಯಂಜ್ಯೋತಿರ್ದೃಶಿಃ ಪ್ರತ್ಯಕ್ಸದಾಕ್ರಿಯಃ |
ಸಾಕ್ಷಾತ್ ಸರ್ವಾನ್ತರಃ ಸಾಕ್ಷೀ ಚೇತಾ ನಿತ್ಯೋಽಗುಣೋಽದ್ವಯಃ ॥
ಸನ್ನಿಧೌ ಸರ್ವದಾ ತಸ್ಯ ಸ್ಯಾತ್ತದಾಭೋಽಭಿಮಾನಕೃತ್ |
ಆತ್ಮಾತ್ಮೀಯಂ ದ್ವಯಂ ಚಾತಃ ಸ್ಯಾದಹಂಮಮಗೋಚರಃ ॥ ೨೭ ॥

೨೬-೨೭. (ಆತ್ಮನು) ಚೈತನ್ಯಸ್ವರೂಪನು, ಸ್ವಯಂಪ್ರಕಾಶನು, (ಎಲ್ಲ ವನ್ನೂ) ನೋಡುವವನು, ಒಳಗಿರುವ (ಆತ್ಮನು), ಯಾವಾಗಲೂ ನಿಷ್ಕ್ರಿಯನು, ನೇರಾಗಿ(ತಿಳಿಯಬರುವವನು), ಎಲ್ಲಕ್ಕೂ ಒಳಗಿರುವವನು, ಸಾಕ್ಷಿಯು, ಅರಿಯು ವವನು, ನಿತ್ಯನು, ನಿರ್ಗುಣನು, ಅದ್ವಿತೀಯನು. ಯಾವಾಗಲೂ ಅವನ ಸನ್ನಿಧಿಯಲ್ಲಿದ್ದುಕೊಂಡು ಅಹಂಕಾರವು ಅವನಂತೆ ತೋರುತ್ತಾ ತಾನೂ ತನ್ನದೂ

---

1. ಆತ್ಮನನ್ನು ಶಬ್ದವು ತಿಳಿಸುವದಕ್ಕೆ ಆಗಲೀ ಆರದಾದ್ದರಿಂದಲೂ ಅದಕ್ಕೂ ಆತ್ಮ ನಾಗಿರುವದರಿಂದಲೂ ಅವನನ್ನು ಅನಾತ್ಮನಿಷೇಧದಿಂದಲೇ ತಿಳಿಸಬೇಕಾಗಿದೆ. ಆತ್ಮನ ಅನುಭವರೂಪವಾದ ಪ್ರತ್ಯಯವೂ ಆಗುವದಿಲ್ಲ; ಏಕೆಂದರೆ ಪ್ರತ್ಯಯಕ್ಕೂ ಆತ್ಮನು ವಿಷಯನಲ್ಲ. ಆದ್ದರಿಂದ ಪ್ರಸಂಖ್ಯಾನಕ್ಕೆ ವಿಷಯವೇ ಇಲ್ಲ ಎಂದು ಭಾವ.

2. 'ಸಾಹಙ್ಕರ್ತೃ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ಎರಡೂ ಆಗಿ ಇದ್ದರಿಂದಲೇ 'ನಾನು', 'ನನ್ನದು' –ಎಂಬ ವ್ಯವಹಾರಕ್ಕೆ ಗೋಚರವಾಗಿರುತ್ತದೆ[1].

ಜಾತಿಕರ್ಮಾದಿಮತ್ತ್ವಾದ್ ಹಿ ತಸ್ಮಿನ್ ಶಬ್ದಾಸ್ತ್ವಹಜ್ಜೃತಿ ।
ನ ಕಶ್ಚಿದ್ವರ್ತತೇ ಶಬ್ದಸ್ತದಭಾವಾತ್ ಸ್ವ ಆತ್ಮನಿ ॥ ೨೮ ॥

ನ ಹ್ಯಜಾತ್ಯಾದಿಮಾನ್ ಕಶ್ಚಿದರ್ಥಃ ಶಬ್ದೈರ್ನಿರೂಪ್ಯತೇ ॥೨೮$\frac{1}{2}$॥[2]

೨೮–೨೮$\frac{1}{2}$. ಜಾತಿ, ಕ್ರಿಯೆ – ಮುಂತಾದವುಗಳಿರುವದರಿಂದ ಆ ಅಹಂಕಾರದಲ್ಲಿ ಶಬ್ದಗಳು (ವರ್ತಿಸುತ್ತವೆ). ಆದರೆ ತನ್ನ (ಸ್ವರೂಪವಾದ) ಆತ್ಮನಲ್ಲಿ ಅವುಗಳಿಲ್ಲದ್ದರಿಂದ ಯಾವ ಶಬ್ದವೂ ವರ್ತಿಸಲಾರದು. ಜಾತಿಯೇ ಮುಂತಾದವುಗಳಿಲ್ಲದ ಯಾವದೊಂದು ವಸ್ತುವನ್ನೂ ಶಬ್ದಗಳು ತಿಳಿಸುವದಕ್ಕೆ ಆಗಲಾರದಷ್ಟೆ[3].

ಆಭಾಸೋ ಯತ್ರ ತತ್ರೈವ ಶಬ್ದಾಃ ಪ್ರತ್ಯಗ್ದೃಶಿಂ ಸ್ಥಿತಾಃ ।
ಲಕ್ಷಯೇಯುರ್ನ ಸಾಕ್ಷಾತ್ತ್ವನುಭಿದಧ್ಯುಃ ಕಥಂಚನ ॥ ೨೯ ॥

೨೯. ಎಲ್ಲಿ ಆಭಾಸವಿರುವದೋ ಅಲ್ಲಿಯೇ[4] ಇದ್ದುಕೊಂಡು ಶಬ್ದಗಳು ಪ್ರತ್ಯಗಾತ್ಮನನ್ನು ಲಕ್ಷಣೆಯಿಂದ ಹೇಳುತ್ತವೆಯೇ[5] ಹೊರತು ಹೇಗೂ ನೇರಾಗಿ ಅವನನ್ನು ಹೇಳಲಾರವು.

---

1. ಆತ್ಮನಲ್ಲಿ ಅಧ್ಯಸ್ತವಾಗಿರುವ ಅಹಂಕಾರವು ಆತ್ಮನಾಗಿದ್ದರೂ ಆತ್ಮನಲ್ಲ ; ಆತ್ಮನು ಸ್ವತಃಸಿದ್ಧನಾಗಿರುವದರಿಂದ ಅವನನ್ನು ತಿಳಿಸುವದಕ್ಕೆ ಯಾವ ಶಬ್ದಪ್ರತ್ಯಯಗಳೂ ಬೇಡ ; ಆಹಂಕಾರವು ಆತ್ಮಾಭಾಸದಿಂದೊಡಗೂಡಿದ್ದರೂ ನಾನು ನನ್ನದು ಎಂಬ ಶಬ್ದಪ್ರತ್ಯಯಗಳಿಗೆ ವಿಷಯವಾಗಿರುತ್ತದೆ.

2. ಅಚ್ಚಿನ ಮೂಲದಲ್ಲಿ ೨೯ ಆದಮೇಲೆ ಈ ಅರ್ಧಶ್ಲೋಕವಿದೆ ; ಆದರೆ ಇಲ್ಲಿಗೇ ಅದು ಹೊಂದುತ್ತದೆ.

3. ಜಾತಿ, ಕ್ರಿಯೆ, ಗುಣ, ಸಂಬಂಧ – ಇವುಗಳೇ ಶಬ್ದಪ್ರವೃತ್ತಿಗೆ ನಿಮಿತ್ತಗಳು. ಇವು ಯಾವವೂ ಇಲ್ಲದ್ದರಿಂದ ೨೬ರಲ್ಲಿ ಹೇಳಿದ ಉಪಲಬ್ಧಿ ಮುಂತಾದ ಶಬ್ದಗಳು ಕೂಡ ಆತ್ಮನಿಗೆ ವಾಚಕಗಳಲ್ಲ.

4. ಅಹಂಕಾರದಲ್ಲಿಯೇ ಎಂದರ್ಥ. ಅಹಂಕಾರವು ಹೊರಗಿನ ಮಿಕ್ಕವಸ್ತುಗಳ ಅಪೇಕ್ಷೆಯಿಂದ ಎಲ್ಲವನ್ನೂ ಅರಿಯುವದು, ಎಲ್ಲಕ್ಕಿಂತಲೂ ಒಳಗಿರುವದು ಮುಂತಾದ ಶಬ್ದಗಳಿಗೆ ತಕ್ಕದ್ದಾಗಿದೆ ; ಆದ್ದರಿಂದ ಉಪಲಬ್ಧ್ಯಾದಿಶಬ್ದಗಳು ಅದಕ್ಕೇ ವಾಚಕಗಳು.

5. 'ಗಂಗೆಯಲ್ಲಿ ಹಳ್ಳಿಯಿದೆ' ಎಂಬಲ್ಲಿ ಗಂಗೆ ಎಂಬ ಶಬ್ದವು ತೀರವನ್ನು ಲಕ್ಷಣೆಯಿಂದ ತಿಳಿಸುವಂತೆ ಸಾಭಾಸಾಹಂಕಾರವಾಚಕಗಳು ಆತ್ಮನನ್ನು ಲಕ್ಷಣೆಯಿಂದ ತಿಳಿಸುತ್ತವೆ.

ಆತ್ಮಾಭಾಸೋ ಯಥಾಹಜ್ಞಕೃದಾತ್ಮಶಬ್ದೈಸ್ತಥೋಚ್ಯತೇ ।
ಉಲ್ಲೂಕಾದೌ ಯಥಾಗ್ನ್ಯರ್ಥಾಃ ಪರಾರ್ಥತ್ವಾನ್ನ ಚಾಜ್ಞಾಸಾ ॥೩೦॥

೩೦. ಅಹಂಕಾರವು ಆತ್ಮನಂತೆಯೇ ತೋರುತ್ತಿರುವದಲ್ಲವೆ[1]? ಅದರಿಂದ ಕೊಳ್ಳಿಯೇ ಮುಂತಾದವುಗಳನ್ನು ಬೆಂಕಿಯನ್ನು ಹೇಳುವ ಶಬ್ದಗಳು ತಿಳಿಸುವಂತೆ ಆತ್ಮನನ್ನು ಹೇಳುವ ಮಾತುಗಳು ಅಹಂಕಾರವನ್ನು ತಿಳಿಸುತ್ತವೆ. ಮುಖ್ಯವಾಗಿ ತಿಳಿಸುವದಿಲ್ಲ; ಏಕೆಂದರೆ ಅದು ಪರಾರ್ಥವಾಗಿರುತ್ತದೆ[2]

ಚಿದಾಭಾಸಕ್ಕೆ ಮುಖಾಭಾಸದ ದೃಷ್ಟಾಂತ

ಮುಖಾದನ್ಯೋ ಮುಖಾಭಾಸೋ ಯಥಾದರ್ಶಾನುಕಾರತಃ ।
ಆಭಾಸಾನ್ಮುಖಮಸ್ಯೇವಮಾದರ್ಶಾನನುವರ್ತನಾತ್ ॥ ೩೧ ॥

೩೧. ಮುಖದ ಪ್ರತಿಬಿಂಬವು ಕನ್ನಡಿಯನ್ನು ಅನುಸರಿಸುತ್ತಿರುವದರಿಂದ ಹೇಗೆ ಮುಖಕ್ಕಿಂತ ಬೇರೆಯಾಗಿರುವದೋ, ಮುಖವು ಕನ್ನಡಿಯನ್ನನುಸರಿಸದೆ ಇರುವದರಿಂದ ಪ್ರತಿಬಿಂಬಕ್ಕಿಂತಲೂ ಹಾಗೆಯೇ ಬೇರೆಯಾಗಿದೆ.

ಆಹಜ್ಞಕೃತ್ಯಾತ್ಮನಿರ್ಭಾಸೋ ಮುಖಾಭಾಸವದಿಷ್ಯತೇ ।
ಮುಖವತ್ ಸ್ಮೃತ ಆತ್ಮಾನ್ಯೋ ವಿವಿಕ್ತೌ[3] ತೌ ತಥೈವ ಚ ॥ ೩೨ ॥

೩೨. ಅಹಂಕಾರದಲ್ಲಿ (ಕಾಣುವ) ಆತ್ಮಾಭಾಸವು ಮುಖಾಭಾಸದಂತೆ ಎಂದು (ನಾವು) ಒಪ್ಪುತ್ತೇವೆ. ಮುಖದಂತೆ ಆತ್ಮನು (ಅದಕ್ಕಿಂತ) ಬೇರೆ ಎನಿಸುವನು. ಆ (ಅಹಂಕಾರ, ಆತ್ಮ) ಇವರಿಬ್ಬರೂ (ಮುಖ, ಮುಖಾಭಾಸ –ಇವು) ಗಳಂತೆಯೇ ವಿಂಗಡವಾಗಿರುತ್ತವೆ.

ಸಂಸಾರಿ ಯಾರೆಂಬ ಬಗ್ಗೆ ವಾದಿಗಳ ಮತಭೇದ

ಸಂಸಾರೀ ಚ ಸ ಇತ್ಯೇಕ ಆಭಾಸೋ ಯಸ್ತ್ವಹಜ್ಞಕೃತಿ[4] ।
ವಸ್ತುಚ್ಛಾಯಾ ಸ್ಮೃತೇರನ್ಯಾ ಧುರ್ಯಾದಿ ಚ ಕಾರಣಮ್ ॥೩೩॥

---

1. ಚಿದಾಭಾಸವಾಗಿ ಚಿದ್ವ್ಯಾಪ್ತವಾಗಿರುವದರಿಂದ ಅದನ್ನು ಆತ್ಮಶಬ್ದಗಳೂ ತಿಳಿಸುತ್ತವೆ; ಆದರೆ ಸಜವಾಗಿ ಅದು ಆತ್ಮನಲ್ಲವೆಂಬುದು ಅನುಭವದಿಂದ ತಿಳಿಯುತ್ತದೆ.
2. ಅಹಂಕಾರವು ಸ್ವತಂತ್ರವಾಗಿರುವ ಚೇತನವಲ್ಲ.
3. 'ಅವಿವಿಕ್ತೌ' ಎಂಬ ವ್ಯಾಖ್ಯಾನದ ಪಾಠಕ್ಕಿಂತ ಇದೇ ಮೇಲು.
4. 'ಅಹಜ್ಞಕೃತಿಃ' ಎಂಬ ಅಚ್ಚಿನ ಪಾಠವು ತಪ್ಪು.

೩೨. ಅಹಂಕಾರದಲ್ಲಿ (ಕಾಣುವ) ಈ ಆಭಾಸವೇ ಸಂಸಾರಿ ಎಂದು ಕೆಲವರೆನ್ನುತ್ತಾರೆ. ನೆರಳೆಂಬುದೂ ವಸ್ತುವೇ, ಏಕೆಂದರೆ ಸ್ಮೃತಿಯು[1] ಹಾಗೆಂಬುದಕ್ಕೆ ಪ್ರಮಾಣವು. ಅದರಲ್ಲಿ ತೋರುವ ಹರ್ಷವೇ ಮುಂತಾದದ್ದು[2] (ಅದು ವಸ್ತುವೆನ್ನುವದಕ್ಕೆ) ಇನ್ನೊಂದು ಕಾರಣವು (ಎಂಬುದು ಅವರ ಮತವು).

ಜ್ಞೈಕದೇಶೋ ವಿಕಾರೋ ವಾ ತದಾಭಾಸಾಶ್ರಯಃ ಪರೇ ।
ಅಹಜ್ಯಾರ್ಥೈವ ಸಂಸಾರೀ ಸ್ವತನ್ತ್ರ ಇತಿ ಕೇಚನ ॥ ೩೪ ॥
ಅಹಜ್ಯಾರಾದಿಸನ್ತಾನಃ ಸಂಸಾರೀ ನಾನ್ವಯೀ ಕ್ವಚಿತ್ ।
ಇತ್ಯೇವಂ ಸೌಗತಾ ಆಹುಸ್ತತ್ರ ನ್ಯಾಯೋ ವಿಚಾರ್ಯತಾಮ್ ॥೩೫॥

೩೪-೩೫. ಆತ್ಮನ ಅಂಶವು, ಅಥವಾ ಕಾರ್ಯವು, (ಸಂಸಾರಿ ಎಂದು ಕೆಲವರು). ಆ (ಆತ್ಮನ) ಆಭಾಸಕ್ಕೆ ಆಶ್ರಯವಾಗಿರುವ ಸ್ವತಂತ್ರವಾಗಿರುವ ಅಹಂಕಾರವು (ಸಂಸಾರಿ) ಎಂದು ಮತ್ತೆ ಕೆಲವರು. ಅಹಂಕಾರವೇ ಮುಂತಾದ (ವಿಜ್ಞಾನ)ಗಳ ಸಂತಾನವೇ ಸಂಸಾರಿಯು, (ಅವುಗಳಲ್ಲಿ) ಅನುಗತವಾಗಿರುವ ಯಾವ ಆತ್ಮನೂ ಇರುವದಿಲ್ಲ– ಎಂದು ಬೌದ್ಧರು ಹೇಳುತ್ತಾರೆ. ಈ (ಪಕ್ಷ)ಗಳಲ್ಲಿ ನ್ಯಾಯವನ್ನು ವಿಚಾರಿಸಬೇಕು[4].

ಆಭಾಸವು ಸತ್ಯವೆ?

ಸಂಸಾರಿಣಾಂ ಕಥಾ ತ್ವಾಸ್ತಾಂ ಪ್ರಕೃತಂ ತ್ವಧುನೋಚ್ಯತೇ ॥ ೩೬ ॥

೩೬. ಸಂಸಾರಿ ಇವರಲ್ಲಿ ಯಾರೆಂಬ ಚರ್ಚೆ ಹಾಗಿರಲಿ. ಪ್ರಕೃತವಾದ (ಆಭಾಸವಿಚಾರವನ್ನೇ) ಈಗ ಹೇಳಲಾಗುವದು.

ಮುಖಾಭಾಸೋ ಯ ಆದರ್ಶೇ ಧರ್ಮೋ ನಾನ್ಯತರಸ್ಯ ಸಃ ।
ದ್ವಯೋರೇಕಸ್ಯ ಚೇದ್ಧರ್ಮೋ ವಿಯುಕ್ತೇ ಚಾನ್ಯತರೇ ಭವೇತ್ ॥೩೭॥
ಮುಖೇನ ವ್ಯಪದೇಶಾತ್ ಸ ಮುಖಸ್ಯೈವೇತಿ ಚೇನ್ಮತಮ್ ।

---

1. ದೊಡ್ಡವರ ನೆರಳನ್ನು ದಾಟಬಾರದು– ಎಂದು ಮುಂತಾಗಿ ಸ್ಮೃತಿಯಿದೆ. (ಮನು. ೪-೧೩೦) ಆದ್ದರಿಂದ ನೆರಳು ವಸ್ತು ವೆಂದು ಭಾವ.

2. ಬಿಸಿಲಿನಲ್ಲಿದ್ದವನು ನೆರಳಿಗೆ ಬಂದರೆ ಹರ್ಷವಾಗುತ್ತದೆ, ಆದ್ದರಿಂದ ನೆರಳು ವಸ್ತು ಎಂದು ಭಾವ.

3. ಸಂತಾನವನ್ನೇ ನಾವು ಸಂಸಾರಿಯೆಂದು ವ್ಯವಹರಿಸುವೆವು.

4. ಇವುಗಳು ಯುಕ್ತಿಶುದ್ಧವಾಗಿಲ್ಲ ಎಂದು ಅಭಿಪ್ರಾಯ.

ನಾದರ್ಶಾನುವಿಧಾನಾಚ್ಚ ಮುಖೇ ಸತ್ಯಪ್ಯಭಾವತಃ[1] ॥ ೩೭ ॥

ದ್ವಯೋರೇವೇತಿ ಚೇತ್ ತನ್ನ ದ್ವಯೋರೇವಾಪ್ಯದರ್ಶನಾತ್ ॥೩೭½॥

೩೬-೩೭½. ಕನ್ನಡಿಯಲ್ಲಿರುವ ಮುಖಾಭಾಸವು ಎರಡರಲ್ಲಿ (ಯಾವ) ದೊಂದರ ಧರ್ಮವೂ ಅಲ್ಲ. ಎರಡರಲ್ಲೊಂದರ ಧರ್ಮವಾಗಿದ್ದರೆ ಅವುಗಳಲ್ಲಿ ಒಂದು ಇಲ್ಲದಿದ್ದರೂ ಇರಬಹುದಾಗುವದು. (ಮುಖದ ಆಭಾಸವೆಂದು) ಮುಖದಿಂದ ಕರೆಯಿಸಿಕೊಳ್ಳುವದರಿಂದ ಅದು ಮುಖದ (ಧರ್ಮವೇ) ಎಂದು (ನಿಮ್ಮ) ಮತವಾದರೆ (ಅದು) ಸರಿಯಲ್ಲ. ಏಕೆಂದರೆ (ಅದು) ಕನ್ನಡಿಯನ್ನು ಅನುಸರಿಸುತ್ತದೆ, ಮುಖವಿದ್ದರೂ[2] ಇರುವದಿಲ್ಲ. ಈ ಎರಡಕ್ಕೂ (ಧರ್ಮವು) ಎಂದರೆ ಅದೂ ಸರಿಯಲ್ಲ ; ಏಕೆಂದರೆ ಎರಡೂ ಇದ್ದರೂ ಕಾಣಿಸುವದಿಲ್ಲ[3].

ಅದೃಶ್ಯಸ್ಯ ಸತೋಽ ದೃಷ್ಟಿಃ ಸ್ಯಾದ್ರಾಹೋಶ್ಚನ್ದ್ರಸೂರ್ಯಯೋಃ |
ರಾಹೋಃ ಪ್ರಾಗೇವ ವಸ್ತುತ್ವಂ ಸಿದ್ಧಂ ಶಾಸ್ತ್ರಪ್ರಮಾಣತಃ ॥ ೩೮ ॥

ಛಾಯಾಪಕ್ಷೇ ತ್ವವಸ್ತುತ್ವಂ ತಸ್ಯ ಸ್ಯಾತ್ ಪೂರ್ವಯುಕ್ತಿತಃ ॥೩೮½॥

೩೮-೩೮½.(ಮೊದಲು) ಕಾಣದೆ ಇರುವ ರಾಹುವು ಚಂದ್ರಸೂರ್ಯರಲ್ಲಿ ಕಾಣಬರಬಹುದು; (ಆದರೆ) ರಾಹುವು ವಸ್ತುವೆಂಬುದು ಮೊದಲೇ ಶಾಸ್ತ್ರ ಪ್ರಮಾಣದಿಂದ ಸಿದ್ಧವಾಗಿರುತ್ತದೆ[4]. ನೆರಳೇ ಎಂಬ ಪಕ್ಷದಲ್ಲಿಯಂತೂ ಹಿಂದಿನ ಯುಕ್ತಿಯಿಂದ ಅದು ವಸ್ತುವಲ್ಲವೆಂದೇ ಆಗುತ್ತದೆ[5].

ಛಾಯಾಕ್ರಾನ್ತೇರ್ನಿಷೇಧೋಽಯಂ ನ ತು ವಸ್ತುತ್ವಸಾಧಕಃ |
ನ ಹ್ಯರ್ಥಾನ್ತರನಿಷ್ಠಂ ಸದ್ವಾಕ್ಯಮರ್ಥಾನ್ತರಂ ವದೇತ್ ॥ ೩೯ ॥

---

1. 'ಸತ್ಯವಿಭಾವತಃ' ಎಂಬ ಮೈ॥ ಪಾತಕ್ಕಿಂತ ಈ ಬೋಧನಿಧಿಯ ಪಾಠವು ಮೇಲು.

2. ಕನ್ನಡಿ ಇಲ್ಲದಿದ್ದರೆ ಎಂದು ಸೇರಿಸಿಕೊಳ್ಳಬೇಕು.

3. ಮುಖವು ಕನ್ನಡಿಯ ಮುಂಗಡೆಯಲ್ಲಿದ್ದಹೊರತು ಕಾಣಿಸುವದಿಲ್ಲ.

4. ಅದ್ದರಿಂದ ನೆರಳು ವಸ್ತುವಾಗಿದ್ದರೂ ರಾಹುವಿನಂತೆ ಕಾಣಿಸದೆ ಇದ್ದು ಅಮೇಲೆ ಕಾಣಿಸಬಹುದು ಎಂಬುದಕ್ಕೆ ಬರುವದಿಲ್ಲ ; ಏಕೆಂದರೆ ನೆರಳು ವಸ್ತುವೆನ್ನುವದಕ್ಕೆ ಯಾವ ಪ್ರಮಾಣವೂ ಇಲ್ಲ ಎಂದು ಭಾವ.

5. ರಾಹುವು ಭೂಮ್ಯಾದಿಗಳ ನೆರಳು ಎಂಬ ಪಕ್ಷದಲ್ಲಿ ಮುಖಾಭಾಸದಂತೆ ಅದೂ ವಸ್ತುವಲ್ಲವೆಂದೇ ಆಗುತ್ತದೆ; ಆಗ ಅದು ದೃಷ್ಟಾಂತವೇ ಆಗುವದಿಲ್ಲ.

ನಾಧುರ್ಯಾದಿ ಚ ಯತ್ಕಾರ್ಯಮುಷ್ಣದ್ರವ್ಯಾದ್ಯಸೇವನಾತ್ ।
ಛಾಯಾಯಾ ನ ತ್ವದೃಷ್ಟತ್ವಾದಪಾನೀವ ಚ ದರ್ಶನಾತ್ ॥ ೪೦ ॥

೪೯–೪೦. ನೆರಳನ್ನು ದಾಟಬಾರದೆಂಬ (ಸ್ಮೃತಿಯ) ನಿಷೇಧವು (ಅದು) ವಸ್ತುವೆಂಬುದನ್ನು ಸಾಧಿಸಲಾರದು. ಏಕೆಂದರೆ ಒಂದು ಅರ್ಥವನ್ನು ತಾತ್ಪರ್ಯದಿಂದ ಹೇಳುವ ವಾಕ್ಯವು ಮತ್ತೊಂದು ಅರ್ಥವನ್ನು ಹೇಳಲಾರದು[1]. ಸಂತೋಷಜನಕತ್ವವೇ ಮುಂತಾದ ಯಾವ ಕಾರ್ಯವುಂಟೋ ಅದು ಉಷ್ಣದ್ರವ್ಯವಾದ (ಬಿಸಿಲು) ಮುಂತಾದದ್ದರ ಸೇವನೆಯಿಲ್ಲದ್ದರಿಂದ (ಆದದ್ದೇ) ಹೊರತು ನೆರಳಿನ (ಧರ್ಮವಲ್ಲ); ಏಕೆಂದರೆ (ಅದರಲ್ಲಿ ಯಾವಾಗಲೂ) ಕಾಣುವದಿಲ್ಲ. (ಅದು) ನೀರಿನ ಧರ್ಮವೇ, ಏಕೆಂದರೆ (ಹಾಗೆ) ಕಂಡಿದೆ[2].

ಆತ್ಮಾಭಾಸಾಶ್ರಯಾಶ್ಚೈವಂ ಮುಖಾಭಾಸಾಶ್ರಯಾ ಯಥಾ ।
ಗಮ್ಯನ್ತೇ ಶಾಸ್ತ್ರಯುಕ್ತಿಭ್ಯಾಮಾಭಾಸಾಸತ್ತ್ವಮೇವ ಚ ॥ ೪೧ ॥

೪೧. ಈ ರೀತಿಯಲ್ಲಿ ಆತ್ಮ, ಆಭಾಸ, ಅದರ ಆಶ್ರಯ– ಇವು ಮುಖ, ಆಭಾಸ, ಅದರ ಆಶ್ರಯ– ಇವುಗಳಂತೆ (ಎಂದೂ) ಆಭಾಸವು ಸತ್ಯವಲ್ಲವೆಂದೂ ಶಾಸ್ತ್ರಯುಕ್ತಿಗಳಿಂದ ನಿಶ್ಚಯವಾಗುತ್ತದೆ[3].

ಸಂಸಾರವು ಅವಿದ್ಯಾಮಾತ್ರ

ನ ದೃಶೇರವಿಕಾರಿತ್ವಾದಾಭಾಸಸ್ಯಾಸ್ಯವಸ್ತುತಃ ।
ನಾಚಿತಿತ್ವಾದಹಙ್ಕರ್ತುಃ ಕಸ್ಯ ಸಂಸಾರಿತಾ ಭವೇತ್ ॥ ೪೨ ॥

೪೨. ಸಾಕ್ಷಿಯು ವಿಕಾರವುಳ್ಳದ್ದಲ್ಲದ್ದರಿಂದ ಅದಕ್ಕೆ (ಸಂಸಾರಿತ್ವ) ವಿಲ್ಲ; ಆಭಾಸವು ಅಸತ್ಯವಾದದ್ದರಿಂದ ಅದಕ್ಕಿಲ್ಲ; ಅಹಂಕಾರವು ಅಚೇತನ

---

1. ದಾಟಕೂಡದೆಂದು ಹೇಳುವದಕ್ಕಾಗಿ ಬಂದಿರುವ ಸ್ಮೃತಿಯು ನೆರಳು ವಸ್ತು ವೆಂಬುದನ್ನೂ ಹೇಳುತ್ತದೆ ಎಂದರೆ ಏಕವಾಕ್ಯತೆ ತಪ್ಪುತ್ತದೆ. ಆದ್ದರಿಂದ ನೆರಳು ವಸ್ತು ವೆಂಬುದು ರಾಹುವಿನಂತೆ ಶಾಸ್ತ್ರಸಿದ್ಧವಲ್ಲ ಎಂದು ಅಭಿಪ್ರಾಯ.

2. ನೆರಳಿನಲ್ಲಿದ್ದಾಗ ತಲೆಲ್ಲ ಹರ್ಷವೂ ತಂಪೂ ಆಗುವದಿಲ್ಲ; ನೆರಳಿನಲ್ಲಿ ಕಾಣುವ ಹರ್ಷವು ಬಿಸಿಲಿನ ಸೆಕೆಯ ತಾಪವಿಲ್ಲದ್ದರಿಂದ ಆದದ್ದು; ತಂಪು ನೀರಿನ ಕಣದಿಂದ ಆದದ್ದು.

3. ಆತ್ಮನು ಮಾಯೆಗಳಿಂದ ಬಹುರೂಪನಾಗಿ ಕಾಣುತ್ತಾನೆ (ಬೃ. ೨–೫–೧೯) ಮುಂತಾದ ಶಾಸ್ತ್ರಗಳು, ಇದುವರೆಗೆ ವರ್ಣಿಸಿರುವಂಥ ಯುಕ್ತಿಗಳು– ಇವುಗಳಿಂದ ಆತ್ಮನು ಕೂಟಸ್ಥನು, ಅಹಂಕಾರವು ಅಚೇತನವಾದ ಉಪಾಧಿಮಾತ್ರ, ಆಭಾಸವು ಅಸತ್ಯ– ಇವೆಲ್ಲವೂ ನಿಶ್ಚಯವಾಗುತ್ತವೆ.

ವಾಗಿರುವದರಿದ ಅದಕ್ಕೂ ಇಲ್ಲ. ಸಂಸಾರಿತ್ವವು ಯಾರಿಗೆ ಆಗಬೇಕು[1]?

ಅವಿದ್ಯಾಮಾತ್ರ ಏವಾತಃ ಸಂಸಾರೋಽಸ್ತ್ವವಿವೇಕತಃ ।
ಕೂಟಸ್ಥೇನಾತ್ಮನಾ ನಿತ್ಯಮಾತ್ಮವಾನಾತ್ಮನೀವ ಸಃ ॥ ೪೩ ॥

೪೩. ಆದ್ದರಿಂದ ಸಂಸಾರವು ಅವಿದ್ಯಾಮಾತ್ರ(ವೆಂದೇ) ಆಗಲಿ. (ಸರಿಯಾಗಿ) ವಿಂಗಡಿಸಿ ಅರಿತುಕೊಳ್ಳದ್ದರಿಂದ ಕೂಟಸ್ಥನಾದ ಆತ್ಮನಿಂದ ಅದು ಯಾವಾಗಲೂ ಇರುವಿಕೆಯುಳ್ಳದ್ದಾಗಿರುತ್ತದೆ, ಆತ್ಮನಲ್ಲಿರುವಂತೆ ತೋರುತ್ತದೆ[2].

ರಜ್ಜುಸರ್ಪೋ ಯಥಾ ರಜ್ಜ್ವಾಸ್ತ್ವಾತ್ಮಕಃ ಸ್ಯಾಗ್ವಿವೇಕತಃ ।
ಅವಸ್ತುಸನ್ನಪಿ ಹ್ಯೇಷ ಕೂಟಸ್ಥೇನಾತ್ಮನಾ ತಥಾ ॥ ೪೪ ॥
ಆತ್ಮಾಭಾಸಾಶ್ರಯಶ್ಚ [ಆತ್ಮಾಪ್ರತ್ಯಯೈಃ ಸ್ವೈರ್ವಿಕಾರವಾನ್][3]

೪೪. ಹಗ್ಗದ ಹಾವು ಹೇಗೆ ವಿವೇಕಕ್ಕಿಂತ ಮೊದಲು ಹಗ್ಗದಿಂದಲೇ ಸ್ವರೂಪವುಳ್ಳದ್ದಾಗಿರುವದೋ, ಹಾಗೆ ಅಸತ್ಯವಾಗಿದ್ದರೂ ಇದು ಕೂಟಸ್ಥನಾದ ಆತ್ಮನಿಂದಲೇ (ಸ್ವರೂಪವುಳ್ಳದ್ದು). ಆತ್ಮಾಭಾಸಕ್ಕೆ ಆಶ್ರಯ(ವಾಗಿರುವ ಅಹಂಕಾರವೂ ಹೀಗೆಯೇ)[4].

.... ಆತ್ಮಾ ಪ್ರತ್ಯಯೈಃ ಸ್ವೈರ್ವಿಕಾರವಾನ್ ।
ಸುಖೀ ದುಃಖೀ ಚ ಸಂಸಾರೀ ನಿತ್ಯಮೇವೇತಿ[5] ಕೇಚನ ॥ ೪೫ ॥
ಆತ್ಮಾಭಾಸಾಪರಿಜ್ಞಾನಾದ್ಯಾಥಾತ್ಮ್ಯೇನ ವಿಮೋಹಿತಾಃ ।
ಅಹಙ್ಕರ್ತಾರಮಾತ್ಮೇತಿ ಮನ್ಯನ್ತೇ ತೇ ನಿರಾಗಮಾಃ ॥ ೪೬ ॥

---

1. ಈ ಪಕ್ಷದಲ್ಲಿ ಸಂಸಾರಿತ್ವವೇ ಇಲ್ಲವೆಂದಾಗುವದಲ್ಲ! ಶಾಸ್ತ್ರೋಪದೇಶವು ವ್ಯರ್ಥವಾಗುವದಲ್ಲ!- ಎಂದು ಆಕ್ಷೇಪ.

2. ಸಂಸಾರವು ಪರಮಾರ್ಥವೂ ಅಲ್ಲ, ಆತ್ಮನಲ್ಲಿ ನಿಜವಾಗಿ ಇಲ್ಲವೂ ಇಲ್ಲ.

3. ಇದು ಮುಂದಿನ ಶ್ಲೋಕಕ್ಕೆ ಸೇರಿದ್ದು.

4. ಈ ಸಂಸಾರವು ಬರಿಯ ತೋರಿಕೆ; ಹಗ್ಗದ ಹಾವಿನ ತತ್ತ್ವವು ಹಗ್ಗವೇ ಆಗಿರುವಂತೆ ಇದರ ತತ್ತ್ವವು ಆತ್ಮನೇ. ಅಹಂಕಾರವೂ ಬರಿಯ ತೋರಿಕೆಯೇ; ಆದ್ದರಿಂದ ಅದಕ್ಕೂ ತತ್ತ್ವವು ಆತ್ಮನೇ. ಆತ್ಮನಲ್ಲಿಯೇ ಅಹಂಕಾರವೂ, ಆಭಾಸವೂ, ಸಂಸಾರವೂ ಕಲ್ಪಿತವಾಗಿರುವವು ಎಂದು ಅಭಿಪ್ರಾಯ.

5. 'ನಿತ್ಯ ಏವ' ಎಂಬ ಆಚ್ಚಿನ ಪಾಠವನ್ನು ಹೀಗೆಂದು ತಿದ್ದಿಕೊಂಡಿದೆ.

ಸಂಸಾರೋ ವಸ್ತುಸಂಸ್ತೇಷಾಂ ಕರ್ತೃಭೋಕ್ತೃತ್ವಲಕ್ಷಣಃ ।
ಆತ್ಮಾಭಾಸಾಶ್ರಯಾಜ್ಞಾನಾತ್ ಸಂಸರನ್ತ್ಯವಿವೇಕತಃ ॥ ೪೭ ॥

೪೫-೪೭. ಆತ್ಮನು ಯಾವಾಗಲೂ ತನ್ನ ಪ್ರತ್ಯಯಗಳಿಂದ ವಿಕಾರವುಳ್ಳವನು, ಸುಖಿಯೂ ದುಃಖಿಯೂ ಆಗಿರುವ ಸಂಸಾರಿಯು– ಎಂದು ಕೆಲವರು (ತಿಳಿಯುತ್ತಾರೆ). ಆತ್ಮ, ಆಭಾಸ– ಇವುಗಳನ್ನು ತತ್ತ್ವದಿಂದ ತಿಳಿಯದೆ ಇರುವದರಿಂದ ಭ್ರಾಂತರಾಗಿ ಅಹಂಕಾರವನ್ನೇ ಆತ್ಮನೆಂದು ತಿಳಿದುಕೊಂಡಿರುತ್ತಾರೆ[1]. ಅವರಿಗೆ (ಯಾವ) ಆಗಮವೂ ಇಲ್ಲ[2]. ಅವರಿಗೆ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ವಸ್ತುತಃ ಸತ್ಯವಾಗಿರುತ್ತದೆ ಆತ್ಮ, ಆಭಾಸ, ಆಶ್ರಯ –ಇವುಗಳನ್ನು (ವಿಂಗಡಿಸಿ) ಅರಿತುಕೊಳ್ಳದೆ ಇರುವ ಅವಿವೇಕದಿಂದ ಅವರು ಸಂಸಾರದಲ್ಲಿ ತೊಳಲುತ್ತಿರುವರು[3].

ಆತ್ಮನಲ್ಲಿ ಜ್ಞಾತೃಜ್ಞಾನಜ್ಞೇಯತ್ವವಿಲ್ಲ

ಚೈತನ್ಯಾಭಾಸತಾ ಬುದ್ಧೇರಾತ್ಮನಸ್ತತ್ಸ್ವರೂಪತಾ ।
ಸ್ಯಾಚ್ಚೇತ್ತಂ ಜ್ಞಾನಶಬ್ದೈಶ್ಚ ವೇದಃ ಶಾಸ್ತೀತಿ ಯುಜ್ಯತೇ ॥ ೪೮ ॥

೪೮. ಬುದ್ಧಿಯು ಚೈತನ್ಯದಂತೆ ತೋರುತ್ತಿರುವದು, ಆತ್ಮನು ಆ (ಚೈತನ್ಯದ) ಸ್ವರೂಪವೇ ಆಗಿರುವದು – ಹೀಗಿದ್ದರೆ ವೇದವು ಆ (ಆತ್ಮನನ್ನು) ಜ್ಞಾನ(ವಾಚಕ)ಶಬ್ದಗಳಿಂದ ತೀಕ್ಷಿಸಿಕೊಡುತ್ತದೆ ಎಂಬುದು ಯುಕ್ತವಾಗುತ್ತದೆ[4].

---

1. ಅಂತಃಕರಣದಲ್ಲಿ ಪ್ರತ್ಯಯಗಳಿಂದ ಆಗುವ ವಿಕಾರಗಳನ್ನು ಆತ್ಮನಲ್ಲಿ ಆಗುತ್ತವೆ ಎಂದು ಹೇಳುತ್ತಿದಾರೆ.

2. ಅವರಿಗೆ ವೇದಾಂತಸಂಪ್ರದಾಯದ ಗುರುಗಳ ಉಪದೇಶವಿಲ್ಲ, ಶಾಸ್ತ್ರದ ಬಲವೂ ಇಲ್ಲ – ಎಂದು 'ಆಗಮವಿಲ್ಲ' ಎಂಬ ವಾಕ್ಯಕ್ಕೆ ಅರ್ಥವನ್ನು ಮಾಡಿಕೊಳ್ಳಬಹುದು. ಅಹಂಕಾರವು ದೃಶ್ಯ, ಆತ್ಮನು ಅದನ್ನು ನೋಡುತ್ತಿರುವ ಸಾಕ್ಷಿ – ಎಂಬ ಆಗಮಸಂಪ್ರದಾಯವನ್ನು ಅರಿತಿದ್ದರೆ ಎಂದಿಗೂ ಹೀಗೆಂದು ತಿಳಿಯುತ್ತಿರಲಿಲ್ಲ ಎಂದು ಭಾವ.

3. ಸಂಸಾರದಲ್ಲಿ ತೊಳಲುತ್ತಿರುವೆನೆಂದು ಭಾವಿಸಿಕೊಂಡಿರುವದು ಎಂದರ್ಥ.

4. ಬೃ. ೨-೪-೧೪, ೩-೭-೨೩– ಇವುಗಳಲ್ಲಿ ಜ್ಞಾತೃವಾಗಿ; ತೈ. ೨-೧, ಬೃ. ೩-೯-೭ ಇವುಗಳಲ್ಲಿ ಜ್ಞಾನವಾಗಿ; ತೈ. ೨-೧, ಮಾಂ. ೭, ಛಾಂ. ೮-೬ ಇವುಗಳಲ್ಲಿ ಜ್ಞೇಯವಾಗಿ ಶ್ರುತಿ ಹೇಳುತ್ತವೆ. ಈ ಜ್ಞಾನಶಬ್ದಗಳು ನೇರಾಗಿ ಚೈತನ್ಯಕ್ಕೆ ಹೊಂದುವದಿಲ್ಲ; ಚಿದಾಭಾಸಯುಕ್ತವಾದ ಅಹಂಕಾರಕ್ಕೆ ವಾಚಕವಾಗಿ ಚಿನ್ಮಾತ್ರವಾದ ಆತ್ಮನನ್ನು ಲಕ್ಷಣೆಯಿಂದ ತಿಳಿಸುತ್ತವೆ.

ಪ್ರಕೃತಿಪ್ರತ್ಯಯಾರ್ಥೌ ಯೌ ಭಿನ್ನಾವೇಕಾಶ್ರಯೌ ಯಥಾ |
ಕರೋತಿ ಗಚ್ಛತೀತ್ಯಾದೌ ನೃಷ್ಟೌ ಲೋಕಪ್ರಸಿದ್ಧಿತಃ ॥ ೪೯ ॥
ನಾನಯೋರ್ದ್ವ್ಯಾಶ್ರಯತ್ವಂ ಚ ಲೋಕೇ ದೃಷ್ಟಂ ಸ್ಮೃತೌ ತಥಾ |
ಜಾನಾತ್ಯರ್ಥೇಷು ಕೋ ಹೇತುರ್ದ್ವ್ಯಾಶ್ರಯತ್ವೇ ನಿಗದ್ಯತಾಮ್ ||

೪೯–೫೦. ಮಾಡುತ್ತಾನೆ, ನಡೆಯುತ್ತಾನೆ –ಮುಂತಾದ (ಕಡೆ)ಯಲ್ಲಿ ಹೇಗೋಹಾಗೆ ಪ್ರಕೃತಿಯ ಅರ್ಥವೂ ಪ್ರತ್ಯಯದ ಅರ್ಥವೂ ಭಿನ್ನವಾಗಿರುವ ವಾದರೂ (ಅವಕ್ಕೆ) ಒಂದೇ ಆಶ್ರಯವಿರುವದು ಲೋಕಪ್ರಸಿದ್ಧಿಯಿಂದ ಕಂಡು ಬಂದಿರುತ್ತದೆ[1] ; ಇವೆರಡಕ್ಕೂ ಎರಡು (ಬೇರೆಬೇರೆ) ಆಶ್ರಯವಿರುವದು ಲೋಕದಲ್ಲಾಗಲಿ ಸ್ಮೃತಿಯಲ್ಲಾಗಲಿ[2] ಕಂಡುಬಂದಿಲ್ಲ. ಅರಿವು ಎಂಬರ್ಥದ (ಧಾತುಗಳಲ್ಲಿ) ಮಾತ್ರ ಎರಡು ಆಶ್ರಯಗಳಿರುವದಕ್ಕೆ ಕಾರಣವೇನು ? ಹೇಳಿರಿ.

ಆತ್ಮಾಭಾಸಸ್ತು ತಿಜ್ಞ್ಯಾಚ್ಯೋ ಧಾತ್ವರ್ಥಶ್ಚ ಧಿಯಃ ಕ್ರಿಯಾ |
ಉಭಯಂ ಚಾವಿವೇಕೇನ ಜಾನಾತೀತ್ಯುಚ್ಯತೇ ಮೃಷಾ ॥ ೫೧ ॥

೫೧. ಆತ್ಮಾಭಾಸವು ತಿಜ್ಞ್ಞತ್ಯಯಕ್ಕೆ ವಾಚ್ಯವು, ಧಾತ್ವರ್ಥವಾದ ಕ್ರಿಯೆಯು ಬುದ್ಧಿಗೆ ಸೇರಿದ್ದು. ಇವೆರಡನ್ನೂ ಬಿಡಿಸಿ ತಿಳಿದುಕೊಳ್ಳದೆ (ಸುಳ್ಳು) ಸುಳ್ಳಾಗಿಯೇ 'ಅರಿಯುತ್ತಾನೆ' ಎನ್ನುತ್ತಾರೆ.

ನ ಬುದ್ಧೇರವಶೋಧೋಽಸ್ತಿ ನಾತ್ಮನೋ ವಿದ್ಯತೇ ಕ್ರಿಯಾ |
ಅತೋ ನಾನ್ಯತರಸ್ಯಾಪಿ ಜಾನಾತೀತಿ ಚ ಯುಜ್ಯತೇ ॥ ೫೨ ॥

೫೨. ಅಂತಃಕರಣಕ್ಕೆ ಜ್ಞಾನವಿಲ್ಲ, ಆತ್ಮನಿಗೆ ವಿಕಾರವಿಲ್ಲ. ಆದ್ದರಿಂದ ಇವೆರಡರಲ್ಲಿ ಒಂದಕ್ಕೂ 'ಅರಿಯುತ್ತಾನೆ' ಎಂಬ ವ್ಯವಹಾರವು ಸಲ್ಲದು[3].

ನಾಪ್ಯತೋ ಭಾವಶಬ್ದೇನ ಜ್ಞಪ್ತಿರಿತ್ಯಪಿ ಯುಜ್ಯತೇ |
ನ ಹ್ಯಾತ್ಮಾ ವಿಕ್ರಿಯಾವಾಮಾತ್ಯೋ ನಿತ್ಯ ಆತ್ಮೇತಿ ಶಾಸನಾತ್ ॥ ೫೩ ॥

೫೩. ಆದ್ದರಿಂದ 'ಅರಿವು' ಎಂಬ ಭಾವಶಬ್ದದಿಂದ (ಹೇಳುವದೂ) ಯುಕ್ತವಾಗುವದಿಲ್ಲ. ಏಕೆಂದರೆ ಆತ್ಮನು ಬರಿಯ ವಿಕಾರರೂಪನಲ್ಲ ; ಆತ್ಮನು ನಿತ್ಯನು ಎಂದು ಶಾಸ್ತ್ರವಿದೆ[4].

---

1. ಮಾಡುತ್ತಾನೆ –ಎಂಬಲ್ಲಿ ಕ್ರಿಯೆಗೂ ಕರ್ತೃತ್ವಕ್ಕೂ ಒಬ್ಬನೇ ಆಶ್ರಯವು.

2. ವ್ಯಾಕರಣದಲ್ಲಾಗಲಿ.

3. ಆತ್ಮನಿಗೆ ಜ್ಞಾತೃತ್ವವು, ಜ್ಞಾನಕರ್ತೃತ್ವವು, ಇಲ್ಲ –ಎಂಬುದಕ್ಕೆ ಕಾರಣವಿದು. ಜ್ಞಾತೃತ್ವವು ಪರಮಾರ್ಥದೃಷ್ಟಿಯಿಂದ ಯಾರಿಗೂ ಇಲ್ಲ ಎಂದು ಪ್ರಸಂಗವಶದಿಂದ ಇಲ್ಲಿ ಹೇಳಿದೆ.

4. ಈ ಆರ್ಥದ ಶ್ರುತಿಗಳಿವೆಯಾದ್ದರಿಂದ ಆತ್ಮನು ಧಾತ್ವರ್ಥರೂಪವಾದ ಕ್ರಿಯೆಯಲ್ಲ.

ನ ಬುದ್ಧೇರ್ಬುದ್ಧಿವಾಚ್ಯತ್ವಂ ಕರಣಂ ನ ಹ್ಯಕರ್ತೃಕಮ್ ।
ನಾಪಿ ಜ್ಞಾಯತ ಇತ್ಯೇವಂ ಕರ್ಮಶಬ್ದೈರ್ನಿರೂಪ್ಯತೇ ॥ ೫೪ ॥

೫೪. ಬುದ್ಧಿಗೆ (ಸಲ್ಲುವ) ಬುದ್ಧಿಶಬ್ದವಾಚ್ಯತ್ವವೂ (ಆತ್ಮನಿ)ಗಿಲ್ಲ. ಏಕೆಂದರೆ ಕರ್ತೃವಿಲ್ಲದ ಕರಣವಿರುವದಿಲ್ಲ[1]. ಅರಿಯಲ್ಪಡುತ್ತದೆ ಎಂದಿಂತು ಕರ್ಮಶಬ್ದಗಳಿಂದಲೂ (ಆತ್ಮನನ್ನು) ತಿಳಿಸುವದಕ್ಕೆ ಆಗುವದಿಲ್ಲ[2].

ನ ಯೇಷಾಮೇಕ ಏವಾತ್ಮಾ ನಿರ್ದುಃಖೋಽವಿಕ್ರಿಯಃ ಸದಾ ।
ತೇಷಾಂ ಸ್ಯಾಚ್ಛಬ್ದವಾಚ್ಯತ್ವಂ ಜ್ಞೇಯತ್ವಂ ಚಾತ್ಮನಃ ಸದಾ ॥ ೫೫ ॥
ಯದಾಹಜ್ಕರ್ತುರಾತ್ಮತ್ವಂ ತದಾ ಶಬ್ದಾರ್ಥಮುಖ್ಯತಾ ।
ನಾಶನಾಯಾದಿನುತ್ವಾತ್ತು ಶ್ರುತೌ ತಸ್ಯಾತ್ಮತೇಷ್ಯತೇ ॥ ೫೬ ॥

೫೫-೫೬. ಯಾರ (ಮತದಲ್ಲಿ) ಆತ್ಮನು ನಿರ್ದುಃಖನೂ ಅವಿಕ್ರಿಯನೂ ಅದ್ವಿತೀಯನೂ ಅಲ್ಲವೊ, ಅವರ (ಮತದಲ್ಲಿ) ಆತ್ಮನು ಯಾವಾಗಲೂ (ಜ್ಞಾತೃ)ಶಬ್ದಕ್ಕೆ ವಾಚ್ಯನೂ ಜ್ಞೇಯನೂ ಆಗಿರುವನು[3]. ಯಾವಾಗ ಅಹಂಕರ್ತೃವೇ ಆತ್ಮನೆಂದಾಗುವದೋ ಆಗ ಶಬ್ದಾರ್ಥವು ಮುಖ್ಯಾರ್ಥವೆಂದಾಗುವದು. ಆದರೆ ಹಸಿವು ಮುಂತಾದವುಗಳಿರುವದರಿಂದ ಅದು ಆತ್ಮನೆಂಬುದನ್ನು (ಶ್ರುತಿಯು) ಒಪ್ಪುವದಿಲ್ಲ[4].

ಜ್ಞಾನಶಬ್ದಗಳ ಗತಿ

ಪನ್ತತರ್ಹಿ ನ ಮುಖ್ಯಾರ್ಥೋ ನಾಪಿ ಗೌಣಃ ಕಥಂಚನ ।
ಜಾನಾತೀತ್ಯಾದಿಶಬ್ದಸ್ಯ ಗತಿರ್ವಾಚ್ಯಾ ತಥಾಪಿ ತು ॥ ೫೭ ॥
ಶಬ್ದಾನಾಮುಭಯಾರ್ಥತ್ವೇ ವೇದಸ್ಯಾಪ್ಯಪ್ರಮಾಣತಾ ।
ಸಾ ಚ ನೇಷ್ಟಾ ತತೋ ಗ್ರಾಹ್ಯಾ ಗತಿರಸ್ಯ ಪ್ರಸಿದ್ಧಿತಃ ॥ ೫೮ ॥

---

1. ಆತ್ಮನು ಕರಣರೂಪವಾದ ಜ್ಞಾನವಾದರೆ, ಎಂದರೆ ಅಂತಃಕರಣದಂತೆ ಕರಣವಾಗಿದ್ದರೆ, ಅವನಿಗೆ ಬೇರೊಬ್ಬ ಕರ್ತೃ ಬೇಕಾಗುವದು. ಆತ್ಮನಿಗಿಂತ ಬೇರೆಯಾದ ಕರ್ತೃವೂ ಪ್ರಸಿದ್ಧನಾಗಿಲ್ಲ.

2. ಆತ್ಮನು 'ಜ್ಞೇಯನು' ಎಂದು ಮುಂತಾಗಿ ಕರ್ಮರೂಪದಲ್ಲಿಯೂ ಹೇಳುವದಕ್ಕೆ ಬರುವದಿಲ್ಲ; ಏಕೆಂದರೆ ಅದು ಅವಿಷಯನಾಗಿರುತ್ತಾನೆ.

3. ಆತ್ಮರು ಅನೇಕ, ಆತ್ಮನು ಸುಖದುಃಖಾದಿಗಳುಳ್ಳವನು, ಕ್ರಿಯೆಗಳನ್ನು ಮಾಡುವದರಿಂದ ವಿಕ್ರಿಯೆಗಳುಳ್ಳವನು -ಎಂದು ಹೇಳುವವರು ಆತ್ಮನನ್ನು ಶಬ್ದವಾಚ್ಯನೆಂದು ಹೇಳಬಹುದು; ಆದರೆ ಅವರ ಮತವು ಶ್ರುತಿವಿರುದ್ಧವಾಗುತ್ತದೆ.

4. ಅಹಂಪ್ರತ್ಯಯಗಮ್ಯನೇ ಆತ್ಮನೆನ್ನುವವರು ಆತ್ಮನಿಗೆ ಹಸಿವುಬಾಯಾರಿಕೆ ಮುಂತಾದವುಗಳಿವೆಯೆಂದು ಒಪ್ಪಬೇಕಾಗುವದು. ಆದರೆ ಬೃ. ೪-೪-೨೦ ಮುಂತಾದ ಶ್ರುತಿಗಳಿಗೆ ವಿರುದ್ಧವಾಗಿರುತ್ತದೆ.

೫೭–೫೮. (ಆಕ್ಷೇಪ):– ಸರಿ, ಹಾಗಾದರೆ 'ಅರಿಯುತ್ತಾನೆ' ಮುಂತಾದ ಶಬ್ದಕ್ಕೆ ಹೇಗೂ ಮುಖ್ಯಾರ್ಥವಾಗಲಿ ಗೌಣಾರ್ಥವಾಗಲಿ ಇಲ್ಲ(ವೆಂದಾಯಿತು). ಆದರೂ (ಅವಕ್ಕೆ) ಗತಿಯನ್ನು ಹೇಳಬೇಕು. ಶಬ್ದಗಳು ಯಥಾರ್ಥವಲ್ಲ ವೆಂದರೆ ವೇದವೂ ಅಪ್ರಮಾಣವಾಗುವದು. ಆದರೆ ಅದು ಇಷ್ಟವಲ್ಲವಲ್ಲ![1] (ಪರಿಹಾರ) :— ಆದ್ದರಿಂದ (ಇದಕ್ಕೆ) ಪ್ರಸಿದ್ಧಿಯಿಂದಲೇ ಗತಿಯನ್ನು ಹೇಳ ಬೇಕು.[2]

ಪ್ರಸಿದ್ಧಿರ್ಮೂಢಲೋಕಸ್ಯ ಯದಿ ಗ್ರಾಹ್ಯಾ ನಿರಾತ್ಮಕಾ ।
ಲೋಕಾಯತಿಕಸಿದ್ಧಾನ್ತಃ ಸಾ ಚಾನಿಷ್ಟಾ ಪ್ರಸಜ್ಯತೇ ॥ ೫೯ ॥
ಅಭಿಯುಕ್ತಪ್ರಸಿದ್ಧಿಶ್ಚೇತ್ ಪೂರ್ವವದ್ದುರ್ವಿವೇಕತಾ |
ಗತಿಶೂನ್ಯಂ ನ ವೇದೋಽಯಂ ಪ್ರಮಾಣಂ ಸಂವದತ್ಯುತ ॥ ೬೦॥

೫೯–೬೦. (ಆಕ್ಷೇಪ) :— ಮೂಢಜನರ ಪ್ರಸಿದ್ಧಿಯಾದರೆ ಆತ್ಮನೇ ಇಲ್ಲ(ವೆಂಬ) ಲೋಕಾಯತಿಕರ ಸಿದ್ಧಾಂತವನ್ನೂ ತೆಗೆದುಕೊಳ್ಳಬೇಕು.[3] ಅದು ಅನಿಷ್ಟವಾಗಿರುತ್ತದೆ. ಬಲ್ಲವರ ಪ್ರಸಿದ್ಧಿಯಾದರೆ ಹಿಂದೆ (ಹೇಳಿ)ದಂತೆ (ಜ್ಞಾತೃ ತ್ವಾದಿಗಳು ಯಾರಿಗೆ ಸೇರಿದವೆಂಬುದನ್ನು) ವಿಂಗಡಿಸುವದು ಆಗುವದಿಲ್ಲ. ಪ್ರಮಾಣವಾದ ವೇದವು (ಯಾವ) ಗತಿಯೂ ಇಲ್ಲದ್ದನ್ನು ಹೇಳಲಾರದು.[4]

ಆದರ್ಶೇ ಮುಖಸಾಮಾನ್ಯಂ ಮುಖಸ್ಯೇಷ್ಟಂ ಹಿ ಮಾನವೈಃ ।
ಮುಖಸ್ಯ ಪ್ರತಿಬಿಮ್ಬೋ ಹಿ ಮುಖಾಕಾರೇಣ ದೃಶ್ಯತೇ ॥ ೬೧ ॥
ಯತ್ರ ಯಸ್ಯಾವಭಾಸಸ್ತು ತಯೋರೇವಾವಿವೇಕತಃ |
ಜಾನಾತೀತಿ ಕ್ರಿಯಾಂ ಸರ್ವೋ ಲೋಕೋ ವಕ್ತಿ ಸ್ವಭಾವತಃ ॥ ೬೨ ॥

---

1. ವೇದವು ಶಬ್ದಾತ್ಮಕವಾಗಿರುವದರಿಂದ ಜಾನಾತಿ (=ಅರಿಯುತ್ತಾನೆ) ಮುಂತಾದ ಶಬ್ದಗಳಿರುವ ವಾಕ್ಯಗಳು ಪ್ರಮಾಣವಾಗಬೇಕಾದರೆ ಈ ಶಬ್ದಗಳಿಗೆ ನಿಜವಾದ ಅರ್ಥವಿರ ಬೇಕು– ಎಂದು ಭಾವ.

2. ವ್ಯವಹಾರಪ್ರಸಿದ್ಧಿಯಿಂದ 'ಜಾನಾತಿ' ಮುಂತಾದ ಶಬ್ದಗಳಿಗೆ ಅರ್ಥವನ್ನು ಹೇಳ ಬೇಕು ; ಪರಮಾರ್ಥವಾಗಿ ಅರ್ಥವಿಲ್ಲದಿದ್ದರೂ ಬಾಧಕವಿಲ್ಲ ಎಂದು ಸಿದ್ಧಾಂತಿಯ ಭಾವ.

3. ಚಾರ್ವಾಕರು ದೇಹವೇ ಆತ್ಮನೆನ್ನುತ್ತಾರೆ ; ಅದೂ ಈ ನ್ಯಾಯದಿಂದ ಪ್ರಮಾಣವಾದೀತು.

4. ವೇದಾತಿಗಳ ಪ್ರಸಿದ್ಧಿಯಂತೆ ಜಾನಾತಿಶಬ್ದಕ್ಕೆ ಗತಿಯೇ ಇಲ್ಲ ; ಆದ್ದರಿಂದ ಶ್ರುತಿಯು ಅದ್ವೈತವನ್ನು ಹೇಳುವದಿಲ್ಲ ಎಂಬುದೇ ಯುಕ್ತ– ಎಂದು ಆಕ್ಷೇಪಕನ ಭಾವ.

೬೧-೬೨. (ಸಮಾಧಾನ) :— ಕನ್ನಡಿಯಲ್ಲಿರುವ ಮುಖದ ಹೋಲಿಕೆಯು ಮುಖಕ್ಕೆ (ಇರುವದೆಂದು) ಜನರು ಒಪ್ಪಿರುತ್ತಾರಲ್ಲವೆ ? ಏಕೆಂದರೆ ಮುಖದ ಪ್ರತಿಬಿಂಬವು ಮುಖದ ಆಕಾರದಲ್ಲಿ ಕಾಣಿಸುತ್ತದೆ ಎಲ್ಲಿ ಯಾವದರ ಆಭಾಸವಿರುವದೋ ಅವೆರಡನ್ನೂ ವಿಂಗಡಿಸಿಕೊಳ್ಳಲಾರದೆ 'ಅರಿಯುತ್ತಾನೆ' ಎಂದು ಕ್ರಿಯೆಯನ್ನು ಜನರೆಲ್ಲರೂ ಸ್ವಭಾವದಿಂದ (ಆತ್ಮನಿಗೆ) ಹೇಳುತ್ತಿದಾರೆ.[1]

ಬುದ್ಧೇಃ ಕರ್ತೃತ್ವಮಧ್ಯಸ್ಯ ಜಾನಾತೀತಿ ಜ್ಞ ಉಚ್ಯತೇ ।
ತಥಾ ಚೈತನ್ಯಮಧ್ಯಸ್ಯ ಜ್ಞತ್ವಂ ಬುದ್ಧೇರಿಹೋಚ್ಯತೇ ॥ ೬೩ ॥

೬೩. ಅಂತಃಕರಣದ ಕರ್ತೃತ್ವವನ್ನು ಅಧ್ಯಾಸಮಾಡಿ ಆತ್ಮನು ಅರಿಯುತ್ತಾನೆ ಎನ್ನುವರು. ಹಾಗೆಯೇ (ಆತ್ಮನ) ಚೈತನ್ಯವನ್ನು ಅಧ್ಯಾಸಮಾಡಿ ಅಂತಃಕರಣವು ಅರಿಯುತ್ತದೆ ಎನ್ನುವರು.

ಸ್ವರೂಪಂ ಚಾತ್ಮನೋ ಜ್ಞಾನಂ ನಿತ್ಯಂ ಜ್ಯೋತಿಃಶ್ರುತೇರ್ಯತಃ ।
ನ ಬುದ್ಧ್ಯಾ ಕ್ರಿಯತೇ ತಸ್ಮಾನ್ನಾತ್ಮನಾನ್ಯೇನ ವಾ ಸದಾ ॥ ೬೪ ॥

೬೪. ಆತ್ಮನ ಜ್ಞಾನವು ಜ್ಯೋತಿಃಶ್ರುತಿಯ (ಪ್ರಮಾಣ)ದಿಂದ ಸ್ವರೂಪವೇ ಆಗಿರುವದರಿಂದ ನಿತ್ಯವಾಗಿರುತ್ತದೆ. ಆದರೆ ಅದು ಅಂತಃಕರಣದಿಂದಲಾಗಲಿ ಆತ್ಮನಿಂದಲಾಗಲಿ ಮತ್ತೊಂದರಿಂದಲಾಗಲಿ ಎಂದಿಗೂ ಮಾಡಲ್ಪಡುವದಿಲ್ಲ.[2]

ದೇಹೇಽಹಂಪ್ರತ್ಯಯೋ ಯದ್ವಜ್ಜಾನಾತೀತಿ ಚ ಲೌಕಿಕಾಃ ।
ವದನ್ತಿ ಜ್ಞಾನಕರ್ತೃತ್ವಂ ತದ್ವದ್ಬುದ್ಧೇಸ್ತಥಾತ್ಮನಃ ॥೬೫॥

---

1. ಚಿಕ್ಕಮಕ್ಕಳೂ ಆಜ್ಞರಾಪವರೂ ಕನ್ನಡಿಯಲ್ಲಿರುವ ಪ್ರತಿಬಿಂಬದ ಧರ್ಮವನ್ನು ಬಿಂಬವಾದ ಮುಖದ್ದು ಎಂತ ವ್ಯವಹರಿಸುವಂತೆ ಅಂತಃಕರಣದಲ್ಲಿ ಆಗುವ ವಿಕಾರವನ್ನೂ ಆಭಾಸವನ್ನೂ ವಿಂಗಡಿಸಿಕೊಳ್ಳಲಾರದೆ ಆತ್ಮನಿಗೇ ಹೇಳುತ್ತಿದಾರೆ. 'ಜಾನಾತಿ' ಅರಿಯುತ್ತಾನೆ ಎಂಬ ವ್ಯವಹಾರಕ್ಕೆ ಭ್ರಾಂತಿಯೇ ಗತಿ ಎಂದು ಭಾವ.

2. ಆತ್ಮನು ಜ್ಞಾತೃವಲ್ಲ, ಅಂತಃಕರಣವೂ ಅಲ್ಲ ; ಎರಡನ್ನೂ ಕಲೆಬೆರಕೆಮಾಡಿ ಅರಿಯುತ್ತಾನೆ ಎಂಬ ವ್ಯವಹಾರವಾಗುತ್ತದೆ ಎಂದು ಅಭಿಪ್ರಾಯ.

೬೫. ದೇಹದಲ್ಲಿ ನಾನು ಎಂಬ ಬುದ್ಧಿಯು ಹೇಗೋ ಅದರಂತೆ ಜನರು 'ಅರಿಯುತ್ತಾನೆ' ಎಂದು ಅಂತಃಕರಣದ ಜ್ಞಾನಕರ್ತೃತ್ವವನ್ನು ಆತ್ಮನಿಗೆ ಹೇಳುತ್ತಾರೆ.[1]

ಬೌದ್ಧೈಸ್ತು ಪ್ರತ್ಯಯೈರೇವಂ ಕ್ರಿಯಮಾಣೈಶ್ಚ ಚಿನ್ಮಿಭೈಃ ।
ನೋಹಿತಾಃ ಕ್ರಿಯತೇ ಜ್ಞಾನಮಿತ್ಯಾಹುಸ್ತಾರ್ಕಿಕಾ ಜನಾಃ ॥೬೬॥

೬೬. ಹೀಗೆ ಬುದ್ಧಿಯ ಚಿದಾಭಾಸಪ್ರತ್ಯಯಗಳು ಉಂಟಾಗುತ್ತಿರುವಲ್ಲಿ ತಾರ್ಕಿಕರು ಭ್ರಾಂತಿಯಿಂದ ಜ್ಞಾನವೇ ಉಂಟಾಗುತ್ತದೆ ಎನ್ನುತ್ತಾರೆ.[2]

ತಸ್ಮಾಜ್ಜ್ಞಾಭಾಸಬುದ್ಧೀನಾನುವಿವೇಕಾತ್ ಪ್ರನರ್ತಿತಾಃ ।
ಜಾನಾತೀತ್ಯಾದಿಶಬ್ದಾಶ್ಚ ಪ್ರತ್ಯಯೋ ಯಾ ಚ ತತ್‌ಸ್ಮೃತಿಃ ॥೬೭॥

೬೭. ಆದ್ದರಿಂದ ಆತ್ಮ, ಆಭಾಸ, ಬುದ್ಧಿ – ಇವುಗಳನ್ನು ವಿಂಗಡಿಸಿಕೊಳ್ಳದೆ ಇರುವದರಿಂದ 'ಅರಿಯುತ್ತಾನೆ' ಮುಂತಾದ ಶಬ್ದ, ಪ್ರತ್ಯಯ, ಅದರಿಂದಾದ ಸ್ಮೃತಿ – (ಇವೆಲ್ಲವೂ) ಪ್ರನರ್ತಿಸುತ್ತವೆ.[3]

ಆದರ್ಶಾನುವಿಧಾಯಿತ್ವಂ ಛಾಯಾಯಾ ಅಸ್ಯತೇ ಮುಖೇ ।
ಬುದ್ಧಿಧರ್ಮಾನುಕಾರಿತ್ವಂ ಜ್ಞಾಭಾಸಸ್ಯ ತಥೇಷ್ಯತೇ ॥೬೮॥

೬೮. ಪ್ರತಿಬಿಂಬವು ಕನ್ನಡಿಯನ್ನನುಸರಿಸುತ್ತಿರುವದನ್ನು ಮುಖದಲ್ಲಿ ಅಧ್ಯಾಸಮಾಡುತ್ತಾರೆ.[4] ಚಿದಾಭಾಸವು ಅಂತಃಕರಣಧರ್ಮವನ್ನು ಅನುಸರಿಸುವದನ್ನೂ ಹಾಗೆಯೇ ತಿಳಿಯಬೇಕು.[5]

---

1. ದೇಹವನ್ನು ನಾನು ಎಂದು ತಿಳಿಯುವದು ತಪ್ಪೆಂದು ದೇಹವ್ಯತಿರಿಕ್ತನಾಗಿರುವ ಆತ್ಮನನ್ನು ಒಪ್ಪುವ ವಾದಿಗಳೆಲ್ಲರೂ ಹೇಳುತ್ತಾರೆ. ಆತ್ಮನ ಅಪಂಪ್ರತ್ಯಯವಿಷಯತ್ವವನ್ನು ಅವಿವೇಕಿಗಳು ದೇಹದಲ್ಲಿ ಆರೋಪಿಸಿರುತ್ತಾರೆಂದು ಅವರು ಹೇಳುತ್ತಾರೆ. ಇದರಂತೆ ಅಂತಃಕರಣದಲ್ಲಿರುವ ವಿಕಾರವನ್ನು ಆತ್ಮನಲ್ಲಿ ಆರೋಪಿಸಿ ಆತ್ಮನು ಜ್ಞಾನಕರ್ತೃವೆಂದು ತಪ್ಪಾಗಿ ತಿಳಿಯುತ್ತಾರೆ ಎಂದು ವೇದಾಂತಿಗಳು ಹೇಳುವರು.

2. ಜ್ಞಾನವು ಚೈತನ್ಯವಾಗಿರುತ್ತದೆ; ಅದು ಹೊಸದಾಗಿ ಉಂಟಾಗತಕ್ಕದ್ದಲ್ಲ. ಆದರೂ ಚಿದಾಭಾಸಪ್ರತ್ಯಯವು ಉಂಟಾದರೆ ಚಿತ್ತೇ ಉಂಟಾಯಿತೆಂದು ತಪ್ಪಾಗಿ ತಿಳಿಯುತ್ತಾರೆ ಎಂದರ್ಥ. ಜ್ಞಾತೃತ್ವವು ನಿರ್ವಿಕಾರವಾದ ಆತ್ಮನಿಗೆ ಹೇಗೆ ಅಧ್ಯಾಸದಿಂದ ಬಂದದ್ದೋ ಜ್ಞಾನತ್ವವೂ ಹಾಗೆಯೇ ಅಧ್ಯಾಸದಿಂದ ಬಂದದ್ದು ಎಂದು ಭಾವ.

3. ಅರಿಯುತ್ತಾನೆ ಮುಂತಾದ ಎಂದರೆ ಜ್ಞಾನ, ಜ್ಞಾತೃ, ಜ್ಞೇಯತ್ವರೂಪವಾದ. ಈ ಶಬ್ದಗಳ ಪ್ರವೃತ್ತಿಯೂ ಈ ಪ್ರತ್ಯಯಸ್ಮೃತಿಗಳ ಪ್ರವೃತ್ತಿಯೂ ಮೇಲೆ ಹೇಳಿದಂತೆ ಅಧ್ಯಾಸದಿಂದಲೇ ಪ್ರವೃತ್ತಿಸುತ್ತವೆ –ಎಂದು ಉಪಸಂಹಾರಮಾಡಿರುತ್ತದೆ.

4. ಪ್ರತಿಬಿಂಬದ ಧರ್ಮವನ್ನು ಬಿಂಬಕ್ಕೆ ಪುಡುಗರು ಹುಟ್ಟುಗಟ್ಟುತ್ತಾರೆ.

5. ಅದನ್ನೂ ಅವಿವೇಕಿಗಳು ಆತ್ಮನಿಗೆ ಹುಟ್ಟುಗಟ್ಟುತ್ತಾರೆಂದು ಅರಿಯಬೇಕು –ಎಂದು ಅಭಿಪ್ರಾಯ.

ಪ್ರತ್ಯಯಗಳೇ ಅರಿಯುವವೆಂದು ತಿಳಿಯುವದಕ್ಕೆ ಆಭಾಸದ ಅಜ್ಞಾನವೇ ಕಾರಣ

ಬುದ್ಧೇಸ್ತು ಪ್ರತ್ಯಯಾಸ್ತಸ್ಮಾದಾತ್ಮಾಭಾಸೇನ ದೀಪಿತಾಃ ।
ಗ್ರಾಹಕಾ ಇವ ಭಾಸನ್ತೇ ದಹನ್ತೀವೋಲ್ಮುಕಾದಯಃ ॥ ೬೯ ॥

೬೯. ಆದ್ದರಿಂದ ಆತ್ಮಾಭಾಸದಿಂದ ಬೆಳಗುತ್ತಿರುವ ಬುದ್ಧಿಪ್ರತ್ಯಯಗಳು ತಾವೇ ಗ್ರಾಹಕಗಳಾಗಿರುವಂತೆ ತೋರುತ್ತವೆ. ಕೊಳ್ಳಿಯೇ ಮುಂತಾದವುಗಳು ಸುಡುವಂತೆ (ತೋರುವದಿಲ್ಲವೆ) ?[1]

ಸ್ವಯಮೇವಾವಭಾಸ್ಯನ್ತೇ ಗ್ರಾಹಕಾಃ ಸ್ವಯಮೇವ ಚ ।
ಇತ್ಯೇವಂ ಗ್ರಾಹಕಾಸ್ತಿತ್ವಂ ಪ್ರತಿಷೇಧನ್ತಿ ಸೌಗತಾಃ ॥ ೭೦ ॥

೭೦. ಬೌದ್ಧರು (ಪ್ರತ್ಯಯಗಳು) ತಾವೇ ಅರಿಯುವವು, ತಾವೇ ಅರಿಯಲ್ಪಡುವವು --ಎಂದಿಂತು ಅರಿಯುವ (ಆತ್ಮನನ್ನು) ಇಲ್ಲಗಳೆಯುತ್ತಾರೆ.[2]

ಯದ್ಯೇವಂ ನಾನ್ಯದೃಶ್ಯಾಸ್ತೇ ಕಂ ತದ್ವಾರಣಮುಚ್ಯತಾಮ್ ।
ಭಾವಾಭಾವೌ ಹಿ ತೇಷಾಂ ಯೌ ನಾನ್ಯಗ್ರಾಹ್ಯೌ ಸತಾ ಯದಿ ॥ ೭೧ ॥

೭೧. ಹೀಗೆ ಅವು ಮತ್ತೊಂದಕ್ಕೆ ದೃಶ್ಯವಲ್ಲವಾದರೆ, ಅವುಗಳ ಭಾವವೂ ಅಭಾವವೂ ಮತ್ತೊಂದು ಇರುವ ವಸ್ತುವಿನಿಂದ ಅರಿಯಲ್ಪಡದೆ ಇದ್ದರೆ ಆ (ಬೌದ್ಧರನ್ನು) ನಿವಾರಿಸುವದು ಹೇಗೆ ? ಹೇಳಿರಿ.[3]

ಅನ್ವಯೀ ಗ್ರಾಹಕಸ್ತೇಷಾಮಿತ್ಯೇತದಪಿ ತತ್ಸಮಮ್ ।
ಅಚೇತಿತ್ವಸ್ಯ ತುಲ್ಯತ್ವಾದನ್ಯಸ್ಮಿನ್ ಗ್ರಾಹಕೇಽಸತಿ ॥ ೭೨ ॥

೭೨. (ಅವುಗಳಲ್ಲಿ) ಅನುಗತವಾಗಿರುವ (ಆಹಂಕಾರವು) ಅವುಗಳನ್ನು ಅರಿಯುವದು ಎಂದು ಹೇಳುವದು ಮತ್ತೊಂದು ಗ್ರಾಹಕವಿಲ್ಲದಿದ್ದರೆ ಅದಕ್ಕೇ

---

1 ಕೊಳ್ಳಿಗಳು ಸುಡುವಂತೆ ಕಂಡರೂ ನಿಜವಾಗಿ ಸುಡುವದು ಬೆಂಕಿಯೇ; ಹಾಗೆ ಪ್ರತ್ಯಯಗಳು ಅರಿಯುವನೆಂಬುದೂ ಹೀಗೆ ಚಿದಾಭಾಸಸಂಪರ್ಕದಿಂದಲೇ.

2. ತನಗೆ ತಾನೇ ವಿಷಯವಾಗಿರುವದೆಂಬ ಆತ್ಮಾಶ್ರಯದೋಷವು ಅವರಿಗೆ ಹತ್ತಿಕೊಂಡಿರುತ್ತದೆ.

3. ಪ್ರತ್ಯಯಗಳು ತಮ್ಮನ್ನು ತಾವಂತೂ ಅರಿಯುವಹಾಗಿಲ್ಲ; ಕ್ಷಣಿಕವಾಗಿರುವದರಿಂದ ಒಂದನ್ನೊಂದು ಅರಿಯುವಂತೆಯೂ ಇಲ್ಲ. ಆದ್ದರಿಂದ ಪ್ರತ್ಯಯಗಳ ಭಾವಾಭಾವಗಳನ್ನು ಅರಿಯುವ ಮತ್ತೊಂದು ಗ್ರಾಹಕವು ಯಾವದು ಎಂಬುದನ್ನು ತಿಳಿಸಿಕೊಟ್ಟೇ ಬೌದ್ಧರನ್ನು ಅಲ್ಲಗಳೆಯಬೇಕು.

ಸಮವಾಗಿರುತ್ತದೆ ಏಕೆಂದರೆ ಅಚೇತನವಾಗಿರುವದೆಂಬುದು ಸಮಾನವಾಗಿರುತ್ತದೆ.[1]

ಅಧ್ಯಕ್ಷಸ್ಯ ಸಮೀಪೇ ತು ಸಿದ್ಧಿಃ ಸ್ಯಾದಿತಿ ಚೇನ್ಮತಮ್ ।
ನಾಧ್ಯಕ್ಷೇಽನುಪಕಾರಿತ್ವಾದನ್ಯತ್ರಾಪಿ ಪ್ರಸಜ್ಯತೇ ॥ ೭೩ ॥

೭೩. ಸಾಕ್ಷಿಯ ಸಮೀಪದಲ್ಲಿ (ಅಹಂಕಾರವು ಗ್ರಾಹಕವಾಗಿ) ಸಿದ್ಧಿಯಾಗಬಹುದು ಎಂಬುದು (ನಿಮ್ಮ) ಮತವಾದರೆ (ಅದು) ಸರಿಯಲ್ಲ. ಏಕೆಂದರೆ (ಸಾಕ್ಷಿಯು) ಸಾಕ್ಷ್ಯಕ್ಕೆ ಯಾವ ಉಪಕಾರವನ್ನೂ ಮಾಡುವದಿಲ್ಲ.[2] ಮತ್ತೊಂದರಲ್ಲಿಯೂ (ಅದು) ಆಗಬಹುದಾಗುವದು.[3]

ಆಭಾಸವನ್ನೊಪ್ಪದಿದ್ದರೆ ಪಾಕ್ಯೋಪದೇಶವು ಯಾರಿಗೆ?

ಅರ್ಥೀ ದುಃಖೀ ಚ ಯಃ ಶ್ರೋತಾ ಸತ್ತ್ವಧ್ಯಕ್ಷೋಽಥವೇತರಃ ।
ಅಧ್ಯಕ್ಷಸ್ಯ ಚ ದುಃಖಿತ್ವಮರ್ಥಿತ್ವಂ ಚ ನ ತೇ ಮತಮ್ ॥ ೭೪ ॥

೭೪. (ಪುರುಷಾರ್ಥವನ್ನು) ಬಯಸುವವನೂ ದುಃಖಿಯೂ ಆಗಿರುವ ಶ್ರೋತೃವೇ ಅಧ್ಯಕ್ಷನೊ, ಬೇರೆ ಇನ್ನೊಬ್ಬನೊ? ಅಧ್ಯಕ್ಷನು ದುಃಖಿಯೂ ಅರ್ಥಿಯೂ ಆಗಿರುವನೆಂಬುದಂತೂ ನಿನ್ನ ಮತವಲ್ಲ.[4]

ಕರ್ತಾಧ್ಯಕ್ಷಃ ಸದಸ್ಮೀತಿ ನೈವ ಸದ್ಗ್ರಹಮರ್ಹತಿ ।
ಸದೇವಾಸೀತಿ ಮಿಥ್ಯೋಕ್ತಿಃ ಶ್ರುತೇರಪಿ ನ ಯುಜ್ಯತೇ ॥ ೭೫ ॥

---

1. ಅಹಂಕಾರವೂ ಪ್ರತ್ಯಯಗಳಂತೆ ಅಚೇತನವಾಗಿರುತ್ತದೆ. ಆದ್ದರಿಂದ ಬಿಡಿಬಿಡಿಯಾದ ಪ್ರತ್ಯಯಗಳು ಅರಿಯುವವೆಂಬುದು ಹೇಗೆ ಸರಿಯಲ್ಲವೋ ಅಹಂಕಾರವು ಪ್ರತ್ಯಯಗಳೆಲ್ಲೆಲ್ಲ ಅನುಗತವಾಗಿದ್ದು ಅರಿಯುವದೆಂಬುದೂ ಹಾಗೇ ಸರಿಯಲ್ಲ.

2. ಸಾಕ್ಷಿಯು ಸಾನ್ನಿಧ್ಯದಿಂದ ಸಾಕ್ಷ್ಯವಾದ ಅಹಂಕಾರಕ್ಕೆ ಯಾವ ಉಪಕಾರವನ್ನೂ ಮಾಡುವದಿಲ್ಲ; ಏಕೆಂದರೆ ಹಾಗೆ ಮಾಡುವದಾದರೆ ಅದು ಪರಿಣಾಮಿ ಎಂದಾಗುವದು.

3. ಯಾವ ಉಪಕಾರವನ್ನೂ ಮಾಡದಿದ್ದರೆ ಕಟ್ಟಿಗೆ, ಗೋಡೆ ಮುಂತಾದವುಗಳೂ ಏಕೆ ಗ್ರಾಹಕವಾಗಬಾರದು? ಆದ್ದರಿಂದ ಗ್ರಾಹಕತ್ವವನ್ನು ಆಭಾಸನನ್ನೊಪ್ಪದೆ ಸಾಧಿಸುವದಕ್ಕೆ ಆಗುವಂತಿಲ್ಲ ಎಂದು ಭಾವ.

4. ಆದ್ದರಿಂದ ದುಃಖಿಯಾದ ಸಂಸಾರಿಗಿಂತ ಬೇರೆಯಾಗಿರುವ ಅಧ್ಯಕ್ಷನನ್ನು ಎಂದರೆ ಸಾಕ್ಷಿಯನ್ನು ಒಪ್ಪಬೇಕಾಗಿದೆ. ಆದರೆ ಸಾಕ್ಷಿಯು ಶ್ರೋತೃವಲ್ಲವಲ್ಲ!

೨೫. ಕರ್ತೃವಾದ ಅಧ್ಯಕ್ಷನು ನಾನು ಸತ್ತಾಗಿರುವೆನು ಎಂದು ಸದ್ಬ್ರಹ್ಮ ಜ್ಞಾನಕ್ಕೆ ಅರ್ಹನಾಗಿರುವದಿಲ್ಲ.[1] ನೀನು ಸತ್ತೇ ಆಗಿರುತ್ತೀಯೆ ಎಂದು ಸುಳ್ಳು ಹೇಳುವದು ಶ್ರುತಿಗೂ ಯುಕ್ತವಾಗುವದಿಲ್ಲ.[2]

ಅವಿವಿಚ್ಯೋಭಯೆಂ ವಕ್ತಿ ಶ್ರುತಿಶ್ಚೇತ್ ಸ್ಯಾದ್ಗ್ರಹಸ್ತಥಾ ।
ಅಸ್ಮದಸ್ತು ವಿವಿಚ್ಯೈವ ತ್ವಮೇವೇತಿ ವದೇದ್ಯದಿ ।
ಪ್ರತ್ಯಯಾನ್ವಯಿನಿಷ್ಠತ್ವಮುಕ್ತದೋಷಃ ಪ್ರಸಜ್ಯತೇ ॥ ೨೬ ॥

೨೬. ಎರಡನ್ನೂ ವಿಂಗಡಿಸದೆ ಶ್ರುತಿಯು ಹೇಳುತ್ತದೆ ಎಂದರೆ ಆಗ ಗ್ರಹಣವು ಆಗಬಹುದಾಗುವದು.[3] ಅಸ್ಮದರ್ಥದಿಂದ ವಿಂಗಡಿಸಿಕೊಂಡೇ 'ನೀನೇ (ಬ್ರಹ್ಮವು)' ಎಂದು ಪ್ರತ್ಯಯಗಳಲ್ಲಿ ಅನುಗತವಾಗಿರುವ (ಅಹಂಕಾರದಲ್ಲಿ) ನಿಲುಗಡೆಯನ್ನೇ ಹೇಳಿದರೆ ಹಿಂದೆ ಹೇಳಿದ ದೋಷವು ಬಂದೊದಗುತ್ತದೆ.[4]

ಆಭಾಸವನ್ನೊಪ್ಪದಿದ್ದರೆ
ಅಹಂಕಾರಕ್ಕೂ ಸಾಕ್ಷಿಗೂ ಸಂಬಂಧವಿಲ್ಲ

ತ್ವಮಿತ್ಯಧ್ಯಕ್ಷನಿಷ್ಠಶ್ಚೇದಹಮಧ್ಯಕ್ಷಯೋಃ ಕಥಮ್ ।
ಸಮ್ಬನ್ಧೋ ವಾಚ್ಯ ಏವಾತ್ರ ಯೇನ ತ್ವಮಿತಿ ಲಕ್ಷಯೇತ್ ॥ ೨೭ ॥

೨೭. ನೀನು ಎಂಬುದು ಅಧ್ಯಕ್ಷನಿಷ್ಠವಾದರೆ[5] ಅಹಂಕಾರ, ಅಧ್ಯಕ್ಷ ಇವೆರಡಕ್ಕೂ ಸಂಬಂಧವು ಹೇಗೆ? ನೀನು ಎಂದು ಲಕ್ಷಣೆಯಿಂದ ಹೇಳ ಬೇಕಾದರೆ (ಆ) ಸಂಬಂಧವನ್ನು ಹೇಳಲೇಬೇಕು.[6]

---

1. ಏಕೆಂದರೆ ಸದ್ರೂಪವಾದ ಬ್ರಹ್ಮವಲ್ಲಿ ಕರ್ತೃತ್ವವಿಲ್ಲ.

2. ಕರ್ತೃವನ್ನು ಬ್ರಹ್ಮವೆಂದು ತಿಳಿಸಿದರೆ ಶ್ರುತಿಗೂ ಆಸ್ಥಾನಾಸ್ಥಾನವು ಬರುತ್ತವೆ.

3. ಹೀಗೆ ಕರ್ತೃವೂ ಬ್ರಹ್ಮವಲ್ಲ, ಸಾಕ್ಷಿಯು ಬ್ರಹ್ಮನಾದರೂ ಶ್ರೋತೃವಲ್ಲ. ಆದ್ದರಿಂದ ಆಪಂಕರ್ತೃವನ್ನೂ ಸಾಕ್ಷಿಯನ್ನೂ ವಿಂಗಡಿಸಿಕೊಳ್ಳದೆ ಇರುವ ದೆಸೆಯಲ್ಲಿಯೇ 'ತತ್ತ್ವಮಸಿ' ಎಂಬ ವಾಕ್ಯದ ಉಪದೇಶವು; ಉಪದೇಶದಿಂದ ಕರ್ತೃತ್ವವು ಬಾಧಿತವಾಗುತ್ತದೆ – ಎಂಬುದೇ ಯುಕ್ತ.

4. ಬರಿಯ ಅಹಂಕಾರವು ಅಚೇತನವಾದ್ದರಿಂದ ಅದಕ್ಕೆ ತತ್ತ್ವಮಸಿ ಎಂಬ ಉಪದೇಶವು ಹೊಂದುವದಿಲ್ಲ – ಎಂದು ಹಿಂದೆ ಹೇಳಿರುವ ದೋಷವೇ ಗಂಟುಬೀಳುತ್ತವೆ.

5. "ನೀನು ಆದಾಗಿರುವೆ" ಎಂಬ ಶ್ರುತಿವಾಕ್ಯದಲ್ಲಿ ನೀನು ಎಂಬ ಮಾತು ಅಹಂಕಾರವನ್ನು ಹೇಳುವದಿಲ್ಲ, ಅಹಂಕಾರವನ್ನು ಹೇಳುವದರಮೂಲಕ ಸಾಕ್ಷಿಯನ್ನು ಹೇಳುತ್ತದೆ ಎಂಬ ಪಕ್ಷವಲ್ಲಿ.

6. 'ಗಂಗೆಯಲ್ಲಿ ಹಳ್ಳಿಯಿದೆ' ಎಂಬಲ್ಲಿ ಗಂಗೆಗೆ ಸಂಬದ್ಧವಾದ ತೀರವನ್ನು 'ಗಂಗೆ' ಎಂಬ ಶಬ್ದವು ಲಕ್ಷಣೆಯಿಂದ ಹೇಳುವಂತೆ ಇಲ್ಲಿ ತ್ವಂ ಶಬ್ದದಿಂದ ಹೇಳಲ್ಪಡುವ ಅಹಂಕಾರಕ್ಕೂ ಸಾಕ್ಷಿಗೂ ಯಾವ ಸಂಬಂಧವಿರುವದರಿಂದ ನೀನು ಎಂಬುದು ಸಾಕ್ಷಿಯನ್ನು ಹೇಳುತ್ತದೆ?

ದೃಷ್ಟೃದೃಶ್ಯತ್ವಸಂಬನ್ಧೋ ಯದ್ಯಧ್ಯಕ್ಷೇಽಕ್ರಿಯೇ ಕಥಮ್ ॥೭೭$\frac{1}{2}$॥
ಅಕ್ರಿಯತ್ವೇಽಪಿ ತಾದಾತ್ಮ್ಯಮುಧ್ಯಕ್ಷಸ್ಯ ಭವೇದ್ಯದಿ ।
ಆತ್ಮಾಧ್ಯಕ್ಷೋ ಮಮಾಸ್ತೀತಿ ಸಂಬನ್ಧಾಗ್ರಹಣೇನ ಧೀಃ ॥ ೭೮ ॥

೭೭$\frac{1}{2}$-೭೮. ದ್ರಷ್ಟೃದೃಶ್ಯತ್ವವೇ ಸಂಬಂಧವಾದರೆ ಕ್ರಿಯೆಯಿಲ್ಲದ ಅಧ್ಯಕ್ಷನಲ್ಲಿ (ಅದು) ಹೇಗೆ (ಇದ್ದೀತು) ?[1] ಅಕ್ರಿಯನಾದರೂ ಅಧ್ಯಕ್ಷನ ತಾದಾತ್ಮ್ಯವಿರಬಹುದು ಎನ್ನುವದಾದರೆ ಸಂಬಂಧವನ್ನು ಅರಿಯದೆ ಇರುವದರಿಂದ 'ನನ್ನ ಆತ್ಮನು ಅಧ್ಯಕ್ಷನಾಗಿರುವನು' ಎಂದು ತಿಳಿವಳಿಕೆಯಾಗಬೇಕು.[2]

ಸಂಬನ್ಧಗ್ರಹಣಂ ಶಾಸ್ತ್ರಾದಿತಿ ಚೇನ್ಮನ್ಯಸೇ ನ ಹಿ ।
ಪೂರ್ವೋಕ್ತಾಸ್ಯುಸ್ತ್ರಿಧಾ ದೋಷಾ ಗ್ರಹೋ ವಾ ಸ್ಯಾನ್ಮಮೇತಿ ಚ ॥

೭೯. ಶಾಸ್ತ್ರದಿಂದ ಸಂಬಂಧದ ಅರಿವಾಗಬಹುದು ಎಂದು (ನೀನು) ತಿಳಿಯುವೆಯಾದರೆ, (ಆ ಪಕ್ಷದಲ್ಲಿ) ಹಿಂದೆ ಹೇಳಿರುವ ಮೂರು ಬಗೆಯ ದೋಷಗಳುಂಟಾಗುವವು ;[3] ಅಥವಾ ನನ್ನ (ಆತ್ಮನು) ಎಂಬ ಅರಿವು ಆಗಬೇಕಾಗುವದು.[4]

ಆಭಾಸವನ್ನೊಪ್ಪಿದರೇ ಯಾವ ದೋಷವೂ ಇರುವದಿಲ್ಲ

ಅದೃಶಿರ್ದೃಶಿರೂಪೇಣ ಭಾತಿ ಬುದ್ಧಿರ್ಯದಾ ತದಾ ।
ಪ್ರತ್ಯಯಾ ಅಪಿ ತಸ್ಯಾಃ ಸ್ಯುಸ್ತಸ್ಯಾಯೋಽವಿಸ್ಫುಲಿಙ್ಗವತ್ ॥ ೮೦ ॥

---

1. ದ್ರಷ್ಟೃತ್ವವೆಂಬ ಧರ್ಮವು ಸಾಕ್ಷಿಯಲ್ಲಿದ್ದರೆ ಸಾಕ್ಷಿಯು ವಿಕಾರಿಯಾಗುವನು ; ಇಲ್ಲದಿದ್ದರೆ ದ್ರಷ್ಟೃದೃಶ್ಯತ್ವವೆಂಬ ಸಂಬಂಧವೇ ಇಲ್ಲ ಎಂದು ಭಾವ.

2. ಅಹಂಕಾರಕ್ಕೂ ಸಾಕ್ಷಿಗೂ ತಾದಾತ್ಮ್ಯಸಂಬಂಧವಾದರೆ ಆ ಸಂಬಂಧದ ಜ್ಞಾನವಿಲ್ಲವಾದ್ದರಿಂದ 'ನಾನು ಸಾಕ್ಷಿಯು' ಎಂಬ ಜ್ಞಾನವುಂಟಾಗಬಾರದು, ನನ್ನ ಆತ್ಮನು ಇದಾನೆ– ಎಂದೇ ಆಗಬೇಕು.

3. ಅರಿಯುವವರು ಯಾರು? ಪ್ರತ್ಯಯವು ಜಡ, ಅಹಂಕಾರವೂ ಜಡ, ಸಾಕ್ಷಿಯ ಸನ್ನಿಧಿಯಿಂದ ಅಹಂಕಾರಕ್ಕೆ ಯಾವ ಉಪಕಾರವೂ ಇಲ್ಲವಲ್ಲ! ೭೩ರಿಂದ ೭೫ನೆಯ ಶ್ಲೋಕಗಳನ್ನು ನೋಡಿ.

4. ಹೇಗೋ ಅಹಂಕಾರಕ್ಕೆ ಆತ್ಮನ ಸನ್ನಿಧಿಯಿಂದ ಅರಿವು ಆಗುತ್ತದೆ ಎಂದರೂ 'ನನ್ನ ಆತ್ಮನು' ಎಂದೇಕೆ ಆಗುವದಿಲ್ಲ? 'ನಾನು' ಎಂದೇ ಆಗುವದಕ್ಕೆ ಕಾರಣವೇನು?

೮೦. ದೃಕ್ಕಲ್ಲದ (ಬುದ್ಧಿಯು) ದೃಗ್ರೂಪದಿಂದ ತೋರುತ್ತದೆ ಎಂಬ (ಸಕ್ಷವನ್ನು) ಯಾವಾಗ (ಒಪ್ಪುವೆವೋ), ಆಗ ಅದರ ಪ್ರತ್ಯಯಗಳೂ ಕಾವ ಕಬ್ಬಿಣದ ಕೆಡಿಗಳಂತೆ (ಚಿದಾಭಾಸವಾಗಿ) ಇರಬಹುದಾಗುವದು.[1]

ಆಭಾಸಸ್ತದಭಾವಶ್ಚ ದೃಶೇಃ ಸೀನ್ನೋ ನ ಚಾನ್ಯಥಾ ।
ಲೋಕಸ್ಯ ಯುಕ್ತಿತಃ ಸ್ಯಾತಾಂ ತದ್ಗ್ರಹಶ್ಚ ತಥಾ ಸತಿ ॥ ೮೧ ॥

೮೧. ಹಾಗಾದರೆ ಜನರಿಗೆ ಆಭಾಸವೂ ಅದರ ಅಭಾವವೂ ಸಾಕ್ಷಿಯ ದೆಸೆಯಿಂದಲೇ[2] ತಿಳಿಯುವವೇ ಹೊರತು ಮತ್ತೊಂದು ರೀತಿಯಿಂದ (ಆಗುವ)ದಿಲ್ಲ ಎಂಬುದು ಯುಕ್ತಿಯಿಂದ (ಏರ್ಪಡುತ್ತದೆ);[3] ಅದರ ಜ್ಞಾನವೂ (ಆಗುತ್ತದೆ).[4]

ನನ್ವೇವಂ ದೃಶಿಸಜ್ಯಾನ್ತರಯಃಪಿಣ್ಡೇಽಗ್ನಿವದ್ ಭವೇತ್ ।
ಮುಖಾಭಾಸವದಿತ್ಯೇತದಾದರ್ಶೇ ತನ್ನಿರಾಕೃತಮ್ ॥ ೮೨ ॥

೮೨. (ಆಕ್ಷೇಪ): ಹೀಗಾದರೆ ಕಬ್ಬಿಣದ ತುಂಡಿನಲ್ಲಿ ಬೆಂಕಿಯಂತೆ ಚೈತನ್ಯವು (ಅಂತಃಕರಣಾದಿಗಳಲ್ಲಿ) ಸೇರಿಕೊಳ್ಳುವದೆಂದಾಯಿತಲ್ಲ! ಮುಖಾಭಾಸದಂತೆ ಎಂದು (ಹೇಳಿದ ದೃಷ್ಟಾಂತದಲ್ಲಿ ಅದನ್ನು ನಿರಾಕರಿಸಿತ್ತಲ್ಲ![5]

---

1. ಅಂತಃಕರಣದಲ್ಲಿ ಚೈತನ್ಯದ ಆಭಾಸವುಂಟಾಗುತ್ತದೆ ಎಂದೊಪ್ಪಿದರೆ ಮೇಲೆ ಹೇಳಿದ ಯಾವ ದೋಷಗಳೂ ಇರುವದಿಲ್ಲ. ಆಗ ಅಹಂಕಾರಕ್ಕೂ ಚೈತನ್ಯಕ್ಕೂ ಆಭಾಸದ ಮೂಲಕ ಅಧ್ಯಾಸಿಕವಾದ ತಾದಾತ್ಮ್ಯಸಂಬಂಧವಿರುತ್ತದೆ. ಆದ್ದರಿಂದ 'ನಾನು' ಎಂಬ ಅರಿವು ಆತ್ಮಾಂತಃಕರಣಗಳ ವಿನೇತನಿಲ್ಲದವನಿಗೆ ಉಂಟಾಗುವದು; ನಿಜವಾಗಿ ಯಾರಿಗೂ ಇಲ್ಲ ಎಂದು ಹೇಳಬಹುದು. ಕಾವ ಕಬ್ಬಿಣದ ವಿಸಿಯು ಅದರಿಂದ ಹಾರಿದ ಕಿಟ್ಟದಲ್ಲಿಯೂ ಕಾಣುವಂತೆ ಪ್ರತ್ಯಯಗಳಲ್ಲಿಯೂ ಚಿದಾಭಾಸವು ಕಾಣಬಹುದಾಗುವದು. ಆದ್ದರಿಂದ ಅಂತಃಕರಣವಲ್ಲಿಯೂ ಪ್ರತ್ಯಯದಲ್ಲಿಯೂ ಆಭಾಸವನ್ನೊಪ್ಪಬೇಕು ಎಂದು ಭಾವ.

2. ಸಾಕ್ಷಿಯನ್ನೂ ಆಭಾಸವನ್ನೂ ಒಪ್ಪಿದರೆ 'ನಾನು' ಎಂಬ ಚಿದಾಭಾಸಯುಕ್ತವಾದ ಅಹಂಕಾರವನ್ನು ಸಾಕ್ಷಿಯು ಅರಿಯುತ್ತಾನೆ ಎಂಬುದು ಯುಕ್ತಿಯಿಂದ ಸಿದ್ಧವಾಗುತ್ತದೆ.

3. ಆಭಾಸವನ್ನು ಒಪ್ಪದಿದ್ದರೆ ಅಂತಃಕರಣವು ತನ್ನನ್ನು ತಾನು ಅರಿಯಲಾರದು, ಅವಕ್ಕಿಂತ ಅತ್ಯಂತವಾಗಿ ವೇರ್ಪಟ್ಟಿರುವ ನಿರ್ವಿಕಾರವಾದ ಸಾಕ್ಷಿಯು ಅರಿಯಲಾರದು –ಎಂದಾಗುತ್ತದೆ.

4. 'ನೀನು ಅದಾಗಿರುವೆ' ಎಂಬ ವಾಕ್ಯದಲ್ಲಿ ಚಿದಾಭಾಸದ ಮೂಲಕ ಸಾಕ್ಷಿಯನ್ನು ಲಕ್ಷಣೆಯಿಂದ ಹೇಳುತ್ತದೆ ಎಂಬುದೂ ಹೊಂದುತ್ತದೆ.

5. ಹಿಂದೆ ೩೬ರಿಂದ ೪೧ರವರೆಗೆ ಮುಖಾಭಾಸದೃಷ್ಟಾಂತದಿಂದ ಆಭಾಸವು ಅಸತ್ಯವೆಂದು ಪ್ರತಿಪಾದಿಸಿದೆ; ಈಗ ಬೆಂಕಿಯ ದೃಷ್ಟಾಂತದಿಂದ ನಿಜವಾದ ಆತ್ಮನ ಸಂಬಂಧವು ಅಂತಃಕರಣದಲ್ಲಿದೆ ಎಂದಂತಾಯಿತಲ್ಲ! –ಎಂದು ಆಕ್ಷೇಪ. ಬೆಂಕಿಯ ದೃಷ್ಟಾಂತದಿಂದ ನಿಜವಾಗಿ ಆತ್ಮಧರ್ಮವು ಅಂತಃಕರಣಕ್ಕೆ ಸೇರಿದ್ದೆಂದು ಆಗುವದಿಲ್ಲವೆ? –ಎಂದಿದ್ದೇ ಆಕ್ಷೇಪನೆಂದೂ ಉಳಿದದ್ದು ಸಮಾಧಾನವೆಂದೂ ಭಾವಿಸುವದಕ್ಕೆ ಬರುತ್ತದೆ.

ದೃಷ್ಟಾನ್ತೋಲೋಹಿತಾಭಾಸಮಿತ್ಯೇತದ್ದೃಷ್ಟಮುಚ್ಯತೇ ।
ದೃಷ್ಟದಾರ್ಷ್ಟಾನ್ತತುಲ್ಯತ್ವಂ ನ ತು ಸರ್ವಾತ್ಮನಾ ಕ್ವಚಿತ್ ॥ ೬೩ ॥
ತಥೈವ ಚೇತನಾಭಾಸಂ ಚಿತ್ತಂ ಚೈತನ್ಯವದ್ ಭವೇತ್ ।
ಮುಖಾಭಾಸೋ ಯಥಾದರ್ಶೇ ಆಭಾಸಶ್ಚೋದಿತೋ ಮೃಷಾ ॥೬೪॥

೬೩. (ಸಮಾಧಾನ): ಕರಿಯ ಕಬ್ಬಿಣವು ಕೆಂಪಗೆ ಕಾಣುತ್ತದೆ ಎಂಬುದನ್ನು ದೃಷ್ಟಾಂತವಾಗಿ ಹೇಳಿರುತ್ತದೆ. ದೃಷ್ಟಾಂತವೂ ದಾರ್ಷ್ಟಾಂತಿಕವೂ ಎಲ್ಲಿಯೂ ಸರ್ವರೂಪದಿಂದಲೂ ಸಮನಾಗಿರುವದಿಲ್ಲ. ಅದರಂತೆಯೇ ಚಿತ್ತವು ಚೇತನದ ಆಭಾಸವುಳ್ಳದ್ದಾಗಿರುವದರಿಂದ ಚೈತನ್ಯದಂತೆಯೇ ಆಗಿರುತ್ತದೆ. ಕನ್ನಡಿಯಲ್ಲಿರುವ ಮುಖಾಭಾಸದಂತೆ (ಈ) ಹೇಳಿದ ಆಭಾಸವು ಹುಸಿಯೂ ಆಗಿರುತ್ತದೆ.[1]

ಚಿತ್ತಂ ಚೇತನವಿತ್ಯೇತಚ್ಛಾಸ್ತ್ರಯುಕ್ತಿವಿವರ್ಜಿತಮ್ ।
ದೇಹಸ್ಯಾಪಿ ಪ್ರಸಙ್ಗಃ ಸ್ಯಾಚ್ಚಕ್ಷುರಾದೇಸ್ತಥೈವ ಚ ॥ ೬೫ ॥

೬೫. ಚಿತ್ತವೇ ಚೇತನವೆಂಬುದು ಶಾಸ್ತ್ರಯುಕ್ತಿರಹಿತವಾಗಿರುತ್ತದೆ[2] (ಹಾಗಿದ್ದರೆ) ದೇಹಕ್ಕೂ (ಚೇತನತ್ವವು) ಇರಬಹುದಾಗುತ್ತದೆ, ಮತ್ತು ಚಕ್ಷುರಿಂದ್ರಿಯವೇ ಮುಂತಾದವುಗಳಿಗೂ (ಇರಬಹುದಾಗುತ್ತದೆ).

ತದಪ್ಯಸ್ತ್ವಿತಿ ಚೇತ್ ತನ್ನ ಲೌಕಾಯತಿಕಸಙ್ಗತೇಃ ।
ನ ಚ ಧೀರ್ದೃಶಿರಸ್ತೀತಿ ಯದ್ಯಾಭಾಸೋ ನ ಚೇತಸಿ ॥ ೬೬ ॥
ಸದಸ್ತೀತಿ ಧಿಯೋಽಭಾನೇ ವ್ಯರ್ಥಂ ಸ್ಯಾತ್ತತ್ತ್ವಮಸ್ಯಪಿ ॥ ೬೬½ ॥

೬೬-೬೬½. 'ಅದೂ ಆಗಲಿ, ಎಂದರೆ ಅದು ಸರಿಯಲ್ಲ; ಏಕೆಂದರೆ ಆಗ ಲೋಕಾಯತ (ಸಿದ್ಧಾಂತದ) ಸಂಬಂಧವಾಗುತ್ತದೆ.[3] ಚಿತ್ತದಲ್ಲಿ ಆಭಾಸವು ಇಲ್ಲದಿದ್ದರೆ 'ನಾನು ದೃಗ್ರೂಪವಾದ ಚೈತನ್ಯವಾಗಿರುವೆನು' ಎಂಬ ಅರಿವೂ

---

1. ಕಾದ ಕರಿಯ ಕಬ್ಬಿಣದಲ್ಲಿ ಕೆಂಪುಬಣ್ಣವು ತೋರುತ್ತಿರುತ್ತದೆ, ಚಿತ್ತದಲ್ಲಿ ಚೈತನ್ಯದ ಸ್ವಭಾವವು ತೋರುತ್ತಿರುತ್ತದೆ. ತೋರಿಕೆಯು ಹುಸಿ ಎಂಬುದು ದೃಷ್ಟಾಂತ ದಾರ್ಷ್ಟಾಂತಿಕಗಳಿಗೆ ಸಮಾನನಾಗಿರುತ್ತದೆ. ಚೈತನ್ಯದ ಧರ್ಮವು ನಿಜವಾಗಿ ಚಿತ್ತದಲ್ಲಿ ಸೇರಿರುವದೆಂಬುದು ವಿವಕ್ಷಿತವಲ್ಲ.

2. ಶಾಸ್ತ್ರದಲ್ಲಿ ಆತ್ಮನಿಂದ ಮನಸ್ಸುಂಟಾಗುತ್ತದೆ, ಆತ್ಮನು ಅಂತಃಕರಣದಿಂದ ಕೂಡಿ ಸ್ವಪ್ನವನ್ನೂ ಕಾಣುತ್ತಾನೆ- ಎಂದು ಮುಂತಾಗಿ ಹೇಳಿದೆ; ಆದ್ದರಿಂದ ಚಿತ್ತವೇ ಚೇತನವೆಂಬುದು ಶಾಸ್ತ್ರಪ್ರಮಾಣರಹಿತ ದೃಶ್ಯವು ದೃಕ್ಕಾಗಲಾರದೆಂಬುದು ಯುಕ್ತಿ.

3. ಚಾರ್ವಾಕಸಿದ್ಧಾಂತವನ್ನು ಒಪ್ಪುವ ಹೊರತು ಅಂತಃಕರಣವೇ ಚೈತನ್ಯವೆಂದು ಅಂಗೀಕರಿಸುವದಕ್ಕೆ ಆಗುವದಿಲ್ಲ.

ಆಗುವದಿಲ್ಲ. ನಾನು ಸದ್ರೂಪನಾದ ಆತ್ಮನು ಎಂಬ ಅರಿವು ಉಂಟಾಗದಿದ್ದರೆ 'ತತ್ತ್ವಮಸಿ' ಎಂಬ ವಾಕ್ಯವೂ ವ್ಯರ್ಥವಾಗುತ್ತದೆ.[1]

ಆತ್ಮಾನಾತ್ಮವಿವೇಕವುಳ್ಳವನಿಗೇ ವಾಕ್ಯಾರ್ಥಜ್ಞಾನ

ಯುಷ್ಮದಸ್ಮದ್ವಿಭಾಗಜ್ಞೇ ಸ್ಯಾದರ್ಥವದಿದಂ ವಚಃ । ॥ ೮೭ ॥
ಮಮೇದಂಪ್ರತ್ಯಯೌ ಜ್ಞೇಯೌ ಯುಷ್ಮದೇವ ನ ಸಂಶಯಃ ।

ಅಹಮಿತ್ಯಸ್ಮದೀಷ್ಟಃ ಸ್ಯಾದಯಮಸ್ಮೀತಿ ಚೋಭಯೋಃ ॥ ೮೮ ॥
ಅನ್ಯೋನ್ಯಾಪೇಕ್ಷಯಾ ತೇಷಾಂ ಪ್ರಧಾನಗುಣತೇಷ್ಯತೇ ।

ವಿಶೇಷಣವಿಶೇಷ್ಯತ್ವಂ ತಥಾ ಗ್ರಾಹ್ಯಂ ಹಿ ಯುಕ್ತಿತಃ ॥ ೮೯ ॥

೮೭–೮೯. ಈ ವಾಕ್ಯವು 'ನೀನು' (ವಿಷಯ), 'ನಾನು' (ವಿಷಯಿ)– ಇವುಗಳನ್ನು ವಿಂಗಡಿಸಿ ತಿಳಿದುಕೊಂಡವನ ವಿಷಯದಲ್ಲಿ ಸಾರ್ಥಕವಾಗುವದು.[2] (ಹೇಗೆಂದರೆ) : 'ನನ್ನದು', 'ಇದು'– ಎಂಬ ಪ್ರತ್ಯಯಗಳೆರಡೂ ಯುಷ್ಮದರ್ಥ (ನೀನೆಂಬ ವಿಷಯ)ದಲ್ಲಿಯೇ (ಆಗುವವೆಂದು) ಸಂಶಯವಿಲ್ಲದೆ ತಿಳಿಯತಕ್ಕದ್ದು.[3] 'ನಾನು' ಎಂಬ (ಪ್ರತ್ಯಯವು) ಅಸ್ಮದರ್ಥ(ವಾದ ಆತ್ಮನಲ್ಲಿಯೇ) ಇಷ್ಟವಾಗಿರುತ್ತದೆ.[4] 'ಇವನಾಗಿರುವೆನು' ಎಂಬುದು ಎರಡರಲ್ಲಿಯೂ (ಆಗುತ್ತದೆ). ಒಂದಕ್ಕೊಂದನ್ನು ಹೋಲಿಸಿದರೆ ಇವಕ್ಕೆ (ಒಂದು ಪ್ರಧಾನವಾಗಿಯೂ ಮತ್ತೊಂದು ಅಪ್ರಧಾನವಾಗಿಯೂ ಇರುವ) ಮುಖ್ಯಗುಣಭಾವವು

---

1. ಆಭಾಸದ ಮೂಲಕವೇ 'ನಾನು ಆತ್ಮನು' ಎಂಬ ಅರಿವು ಆಗಬೇಕಾಗಿರುತ್ತದೆ; ಆದ್ದರಿಂದ ಅದನ್ನು ಒಪ್ಪದಿದ್ದರೆ ಭ್ರಾಂತಿನಾಶರೂಪವಾದ ಜ್ಞಾನವೇ ಆಗದೆಹೋಗಿ ಶ್ರುತಿಪ್ರಾಮಾಣ್ಯವೂ ಇಲ್ಲವಾಗುತ್ತದೆ.

2. 'ಅದು ನೀನು' ಎಂಬ ವಾಕ್ಯದಲ್ಲಿ 'ನೀನು' ಎಂಬ ತ್ವಂಪದದ ಅರ್ಥವನ್ನು ತಿಳಿದಲ್ಲದೆ ವಾಕ್ಯಾರ್ಥವಾಗುವದಿಲ್ಲ; ತ್ವಂಪದದ ಅರ್ಥದಲ್ಲಿ ವಿಷಯಿವಿಷಯಗಳಾದ ಆತ್ಮಾನಾತ್ಮಗಳು ಬೆರೆತಿರುವದರಿಂದ ಇವುಗಳನ್ನು ವಿಂಗಡಿಸಿಕೊಳ್ಳುವದು ಅವಶ್ಯ.

3. ಇದು, ನನ್ನದು– ಎಂದು ಕರೆಯುವದಕ್ಕೆ ಯೋಗ್ಯವಾದ ಹೆಂಡತಿ, ಮಗ, ಮನೆ, ಹೊಲ, ಹಣ– ಮುಂತಾದದ್ದು ಅನಾತ್ಮವೆಂಬುದರಲ್ಲಿ ಸಂಶಯವೇ ಇಲ್ಲ.

4. 'ನಾನು' ಎಂದು ಯಾವಾಗಲೂ ಅನ್ನಿಸಿಕೊಳ್ಳುವದಕ್ಕೆ ಯೋಗ್ಯವಾದದ್ದು ಆತ್ಮನು.

ಒಪ್ಪಿತವಾಗುತ್ತದೆ.[1] ಹಾಗೆಯೇ ಇವುಗಳಿಗೆ ವಿಶೇಷಣವಿಶೇಷ್ಯಭಾವವನ್ನೂ ಯುಕ್ತಿಯಿಂದ ಗ್ರಹಿಸಬೇಕು.[2]

ಮಮೇಽಯಂ ದ್ವಯಮಪ್ಯೇತನ್ಮಧ್ಯಮಸ್ಯ ವಿಶೇಷಣಮ್ ।
ಧನೀ ಗೋಮಾನ್ ಯಥಾ ತದ್ವದ್ದೇಹೋಽಹಙ್ಕರ್ತುರೇವ ಚ ॥೯೦॥

ಬುದ್ಧ್ಯಾರೂಢಂ ಸದಾ ಸರ್ವಂ ಸಾಹಙ್ಕರ್ತ್ರಾ ಚ ಸಾಕ್ಷಿಣಃ ।
ತಸ್ಮಾತ್ ಸರ್ವಾವಭಾಸೋ ಜ್ಞಃ ಕಿಞ್ಚಿದಪ್ಯಸ್ಪೃಶನ್ ಸದಾ ॥೯೧॥

೮೦-೮೧. 'ಹಣವಂತನು', 'ಗೋಗಳುಳ್ಳವನು'– ಎಂಬುದು ಹೇಗೋ ಹಾಗೆ 'ನನ್ನದು', 'ಇದು' ಎಂಬೀ ಎರಡೂ ನಡುವಿನ (ದೇಹಕ್ಕೆ) ವಿಶೇಷಣವು.[3] ಇದರಂತೆ ದೇಹವು ಅಹಂಕರ್ತೃವಿಗೆ ವಿಶೇಷಣವು.[4] ಬುದ್ಧಿಯಲ್ಲಿ ಏರಿ ಕೊಂಡು ಕಾಣುವ (ವಿಷಯ)ವೆಲ್ಲವೂ, ಯಾವಾಗಲೂ ಆ ಅಹಂಕರ್ತೃವಿನೊಡನೆ ಸಾಕ್ಷಿಗೆ (ವಿಶೇಷಣವು).[5] ಆದ್ದರಿಂದ ಜ್ಞೈತನ್ಯ(ರೂಪನಾದ ಆತ್ಮನು)

1. 'ನಾನು ಇಂಥವನು' ಎಂಬ- ಉದಾಹರಣೆಗೆ ನಾನು ಮನುಷ್ಯನು, ಕುರುಡನು, ವಿದ್ವಾಂಸನು – ಮುಂತಾದ ಪ್ರತ್ಯಯವಲ್ಲಿ 'ಇಂಥವನು' ಎಂಬ ವಿಶೇಷಣಭಾಗವು ಅನಾತ್ಮವೆಂದು ತಳ್ಳಿ ವಿಶೇಷ್ಯವನ್ನು ಮಾತ್ರ ಮುಖ್ಯನಾದ ಆತ್ಮನೆಂದು ಉಳಿಸಿಕೊಳ್ಳುವದಕ್ಕೆ ಯತ್ನಿಸಬೇಕು.

2. 'ಇದು ನನ್ನದು' ಎಂಬುದು ಅಪ್ರಧಾನವು, ನಾನು ಎಂಬುದು ಪ್ರಧಾನವು; 'ಇಂಥವನು' ಎಂಬುದು ಅಪ್ರಧಾನವಾದ ವಿಶೇಷಣವು, ನಾನು ಎಂಬುದು ಪ್ರಧಾನವಾದ ವಿಶೇಷ್ಯವು. ಪ್ರಧಾನವೂ ವಿಶೇಷ್ಯವೂ ಆದದ್ದನ್ನೇ ಗ್ರಹಿಸುವದಕ್ಕೆ ಯತ್ನಿಸಬೇಕು.

3. ಮೇಲೆ ಹೇಳಿದ ಪ್ರಧಾನಗುಣಭಾವವನ್ನೂ ವಿಶೇಷಣವಿಶೇಷ್ಯಭಾವವನ್ನೂ ಇಲ್ಲಿ ಸ್ಪಷ್ಟಪಡಿಸಿರುತ್ತದೆ. ಜ್ಞೇಯವನ್ನೆಲ್ಲ ಹೊರಗಿನ ವಿಶೇಷಣವು, ನಡುವಿನ ದೇಹವು, ದೇಹಕ್ಕೆ ಒಳಗಿನದು– ಎಂದು ಮೂರು ವಿಭಾಗಗಳನ್ನು ಮಾಡಿಕೊಂಡರೆ ದೇಹವು ನಡುವಿನದಾಗುವದು. ಅದಕ್ಕೆ ಹಣ, ದನ, ಕರು– ಮುಂತಾದ 'ಇದು', 'ನನ್ನದು' ಎಂದು ತೋರುವದೆಲ್ಲವೂ ವಿಶೇಷಣವು, ಅಪ್ರಧಾನವು. ಅವುಗಳಿಗೆ ಹೋಲಿಸಿದರೆ ದೇಹವೇ ಪ್ರಧಾನವು.

4. ಇಲ್ಲಿ ದೇಹವೆಂಬುದನ್ನು ಇಂದ್ರಿಯಾದಿಗಳಿಗೂ ಉಪಲಕ್ಷಣವಾಗಿ ತೆಗೆದುಕೊಳ್ಳಬೇಕು. 'ನಾನು ಕುಂಟನು, ಕುರುಡನು, ಹಸಿದಿರುವೆನು' ಎಂದು ಮುಂತಾಗಿ ಭಾವಿಸುವಾಗ ದೇಹೇಂದ್ರಿಯಪ್ರಾಣಾದಿಗಳು ವಿಶೇಷಣಗಳು, ಅಪ್ರಧಾನವು; ಅಹಂಕಾರವೇ ಪ್ರಧಾನವಾದ ವಿಶೇಷ್ಯವು.

5. ಇಂದ್ರಿಯಗಳ ಮೂಲಕವಾಗಿ ಅಂತಃಕರಣವಲ್ಲಿ ತೋರುವ ವಿಷಯವೂ ಇವಕ್ಕೆ ವಿಶೇಷ್ಯವಾಗಿರುವ ಸಾಭಾಸವಾದ ಅಹಂಕಾರವೂ ಸಾಕ್ಷಿಗೆ ತಗಲಿಕೊಂಡಿರುತ್ತವೆ.

ಯಾವಾಗಲೂ ಏನನ್ನೂ ಮುಟ್ಟದೆ ಎಲ್ಲವನ್ನೂ ಬೆಳಗುತ್ತಿರುವನು.[1]

ಪ್ರತಿಲೋಮಮಿದಂ ಸರ್ವಂ ಯಥೋಕ್ತಂ ಲೋಕಬುದ್ಧಿತಃ ।
ಅವಿವೇಕಧಿಯಾಮಸ್ತಿ ನಾಸ್ತಿ ಸರ್ವಂ ವಿವೇಕಿನಾಮ್ ॥ ೯೨ ॥

೯೨. ಲೋಕಬುದ್ಧಿಯನ್ನನುಸರಿಸಿ[2] ಈಗಲೇ ಹೇಳಿದ್ದೆಲ್ಲವೂ ವಿಪರೀತವಾಗಿರುತ್ತದೆ.[3] ಅವಿವೇಕಬುದ್ಧಿಯವರಿಗೆ (ಎಲ್ಲವೂ) ಇರುವದು, ವಿವೇಕಿಗಳಿಗೆ ಯಾವದೂ ಇರುವದಿಲ್ಲ.[4]

ಅನ್ವಯವ್ಯತಿರೇಕದಿಂದ ತ್ವಂಪದಾರ್ಥಜ್ಞಾನ

ಅನ್ವಯವ್ಯತಿರೇಕೌ ಹಿ ಪದಾರ್ಥಸ್ಯ ಪದಸ್ಯ ಚ ।
ಸ್ಯಾದೇತದಹಮಿತ್ಯತ್ರ ಯುಕ್ತಿರೇವಾವಧಾರಣೇ ॥ ೯೩ ॥

೯೩. 'ಇದು ನಾನು' ಎಂಬಲ್ಲಿ ಪದದ ಮತ್ತು ಪದಾರ್ಥದ ಅನ್ವಯವ್ಯತಿರೇಕಗಳು (ನಾನು ಎಂಬ ಪದಾರ್ಥವನ್ನು) ನಿರ್ಣಯಿಸುವಡಕ್ಕೆ ಯುಕ್ತಿಯೇ ಆಗುವವು.[5]

ನಾದ್ರಾಕ್ಷಮಹಮಿತ್ಯಸ್ಮಿನ್ ಸುಷುಪ್ತೇಽನ್ಯನ್ನನಾಗಪಿ ।
ನ ವಾರಯತಿ ದೃಷ್ಟಿಂ ಸ್ವಾಂ ಪ್ರತ್ಯಯಂ ತು ನಿಷೇಧತಿ ॥ ೯೪ ॥
ಸ್ವಯಂಜ್ಯೋತಿರ್ನ ಹಿ ದ್ರಷ್ಟುರಿತ್ಯೇವಂ ಸಂವಿದೋಽಸ್ತಿತಾಮ್ ।
ಕೌಟಸ್ಥ್ಯಂ ಚ ತಥಾ ತಸ್ಯಾಃ ಪ್ರತ್ಯಯಸ್ಯ ತು ಲುಪ್ತತಾಮ್ ॥ ೯೫ ॥

---

1. ಸಾಕ್ಷಿಯು ವಿಶೇಷ್ಯವೆಂದಪ್ಪರಿಂದ 'ಕನ್ನೈದಿಲೆ'ಯಲ್ಲಿ ಕಪ್ಪು ಸೇರಿಸಿಕೊಂಡಿರುವಂತೆ ಅಹಂಕಾರಾದಿಗಳು ಸಾಕ್ಷಿಚೈತನ್ಯಕ್ಕೆ ಅಂಟಿಕೊಂಡಿರುವವೆಂದು ಭಾವಿಸಬಾರದು. ಚೈತನ್ಯಕ್ಕೂ ಮಿಕ್ಕ ಅಹಂಕಾರಾದಿಯಾದ ಅನಾತ್ಮಕ್ಕೂ ನಿಜವಾಗಿ ಯಾವ ಸಂಬಂಧವೂ ಇಲ್ಲ.

2. ಲೋಕಬುದ್ಧಿ ಎಂದರೆ ಶಾಸ್ತ್ರದೃಷ್ಟಿಯಿಲ್ಲದವರ ವ್ಯವಹಾರದ ಬುದ್ಧಿ.

3. ವ್ಯವಹಾರದೃಷ್ಟಿಯಿಂದ ನೋಡಿದರೆ ಈವರೆಗೆ ವರ್ಣಿಸಿದ್ದಕ್ಕೆ ವಿಪರೀತವಾಗಿಯೇ ಕಾಣುತ್ತದೆ; ಎಂದರೆ ಹೊರಗಿನ ಪುತ್ರಾದಿಗಳಲ್ಲಿಯೂ ತಾನೆಂಬ ಬುದ್ಧಿಯಿರುತ್ತದೆ, ಅನಾತ್ಮವೇ ವಿಶೇಷ್ಯವಾಗಿರುತ್ತದೆ.

4. ಅವಿವೇಕಬುದ್ಧಿಯವರಿಗೆ ಅನಾತ್ಮವೇ ಪ್ರಧಾನವಾಗಿರುತ್ತವೆ, ಆತ್ಮನು ಅಪ್ರಧಾನನಾಗಿ ಅಥವಾ ಇಲ್ಲವೇ ಇಲ್ಲವೆಂದು ಕಾಣಿಸುತ್ತದೆ. ವಿವೇಕಿಗಳಾದವರಿಗೆ ಅನಾತ್ಮವೇ ಇರುವದಿಲ್ಲ. ಗೀ. ಭಾ. ೨-೬೯ (ಭಾ. ಭಾ. ೧೨೭) ನೋಡಿ.

5. ಪದದ ಅನ್ವಯವಿದ್ದರೂ ಪದಾರ್ಥವು ಬೇರ್ಪಟ್ಟರೆ ಆ ಪದವು ಅದನ್ನು ಹೇಳುವದಿಲ್ಲವೆಂದಾಗುವದು. ಈ ಅನ್ವಯವ್ಯತಿರೇಕಗಳನ್ನು ಮುಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸಿದೆ.

ಸ್ವಯಮೇವಾಬ್ರವೀಚ್ಛಾಸ್ತ್ರಂ ಪ್ರತ್ಯಯಾವಗತೀ ಪೃಥಕ್ ॥೯೫॥

೯೪-೯೫. 'ಸುಷುಪ್ತದಲ್ಲಿ ಬೇರೊಂದನ್ನು ಸ್ವಲ್ಪವೂ ನಾನು ಕಾಣಲಿಲ್ಲ' (ಎಂಬಲ್ಲಿ) ತನ್ನ ದೃಷ್ಟಿಯನ್ನು ಇಲ್ಲವೆನ್ನುವದಿಲ್ಲ. ಪ್ರತ್ಯಯವನ್ನು ಮಾತ್ರ ಇಲ್ಲವೆನ್ನುತ್ತಾನೆ. "ಸ್ವಯಂಜ್ಯೋತಿ"[1] (ಬೃ. ೪-೩-೧೪), "ದ್ರಷ್ಟೃವಿನ (ದೃಷ್ಟಿಗೆ ಲೋಪ)ವಿಲ್ಲವಷ್ಟೆ"[2] (ಬೃ. ೪-೩-೨೩) ಎಂದು ಸಂವಿತ್ತು[3] ಇದೆಯೆಂದೂ ಅದು ಕೂಟಸ್ಥವೆಂದೂ[4] ಆದರೆ ಪ್ರತ್ಯಯವು ಲೋಪವಾಗಿರುವ ದೆಂದೂ[5] ಶಾಸ್ತ್ರವು ಪ್ರತ್ಯಯವನ್ನೂ ಚೈತನ್ಯವನ್ನೂ ತಾನೇ ವಿಂಗಡಿಸಿ ಹೇಳಿರುತ್ತದೆ.

ಏವಂ ವಿಜ್ಞಾತವಾಚ್ಯಾರ್ಥೇ[6] ಶ್ರುತಿಲೋಕಪ್ರಸಿದ್ಧಿತಃ |
ಶ್ರುತಿಸ್ತತ್ತ್ವಮಸೀತ್ಯಾಹ ಶ್ರೋತುರ್ಮೋಹಾಪನುತ್ತಯೇ ॥೯೬॥

೯೬. ಹೀಗೆ ಶ್ರುತಿಯಿಂದಲೂ ಲೋಕಪ್ರಸಿದ್ಧಿಯಿಂದಲೂ ವಾಚ್ಯಾರ್ಥವನ್ನು ತಿಳಿದುಕೊಂಡಿರಲಾಗಿ[7] ಶ್ರುತಿಯು ಶ್ರೋತೃವಿನ ಮೋಹವನ್ನು ಕಳೆಯು

---

1. ಕನಸಿನಲ್ಲಿ ಆತ್ಮನು ಚೈತನ್ಯನಾಗಿಯೇ ಇದ್ದಾನೆಂದು ಈ ಶ್ರುತಿಯಲ್ಲಿ ಹೇಳಿದೆ.

2. ಚೈತನ್ಯರೂಪವಾದ ದೃಷ್ಟಿಗೆ ಲೋಪವಿಲ್ಲವೆಂದರ್ಥ.

3. ಚೈತನ್ಯವು. 4. ವಿಕಾರರಹಿತವೆಂದೂ.

5. ಉದಾಹರಿಸಿದ ಶ್ರುತಿಗಳಲ್ಲಿ ಪ್ರತ್ಯಯವು ಲುಪ್ತವಾಗಿರುವದೆಂಬ ಮಾತಿಲ್ಲ; ಆದರೂ 'ಆತ್ಮನಿಗಿಂತ ವಿಭಕ್ತವಾದ ಎರಡನೆಯದಿಲ್ಲ, ಇದ್ದರೆ ಅರಿಯುತ್ತಿದ್ದನು' (ಬೃ. ೪-೩-೨೩) ಎಂಬ ವಾಕ್ಯಶೇಷದಲ್ಲಿ ಆತ್ಮನೊಬ್ಬನೇ ಇರುತ್ತಾನೆ, ಎರಡನೆಯದಾದ ಅಂತಃಕರಣವು ಇಲ್ಲ ಎಂದು ಹೇಳಿರುತ್ತದೆಯಾದ್ದರಿಂದ 'ನಾನು ಏನನ್ನೂ ಅರಿಯಲಿಲ್ಲ' ಎಂಬುದು ಪ್ರತ್ಯಯನಿಷೇಧವೆಂದು ಸಿದ್ಧವಾಗುತ್ತದೆ.

6. 'ವಿಜ್ಞಾತವಾಕ್ಯಾರ್ಥೇ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಈ ಪಾಠವನ್ನು ನೈಷ್ಕರ್ಮ್ಯಸಿದ್ಧಿಯ ವ್ಯಾಖ್ಯಾನಕಾರರು ಅಂಗೀಕರಿಸಿರುತ್ತಾರೆ.

7. ಉಪದೇಶಸಾಹಸ್ರಿಯ ರಾ॥ತೀ॥ ವ್ಯಾಖ್ಯಾನದಲ್ಲಿ 'ಅವಾಂತರವಾಕ್ಯಾರ್ಥವನ್ನು ತಿಳಿದಿರುವವನಿಗೆ' ಎಂದು ಅರ್ಥವನ್ನು ಕಲ್ಪಿಸಿದೆ. ಆದರೆ ಲೋಕಪ್ರಸಿದ್ಧಿಯಿಂದ ಅವಾಂತರವಾಕ್ಯವನ್ನು ತಿಳಿಯುವದು ಆಗುವದಿಲ್ಲ; ೯೩ನೆಯ ಶ್ಲೋಕದಲ್ಲಿ ಹೇಳಿರುವಂತೆ ನಾನು ಎಂಬುದನ್ನು ಗೊತ್ತುಪಡಿಸುವದಕ್ಕೆ ಇದು ಯುಕ್ತಿಯೂ ಆಗುವದಿಲ್ಲ. ನಾನು ಎಂಬುದು ಚಿದಾಭಾಸವಿಶಿಷ್ಟವಾದ ಅಹಂಕಾರವೇ ವಾಚ್ಯಾರ್ಥವೆಂದೂ ಚೈತನ್ಯವು ಲಕ್ಷ್ಯಾರ್ಥವೆಂದೂ ಮೇಲೆ ಹೇಳಿದ ಸುಷುಪ್ತಿಪರಾಮರ್ಶ ಮತ್ತು ಶ್ರುತಿಗಳಿಂದ ತಿಳಿದುಕೊಂಡವನಿಗೆ ವಾಕ್ಯಾರ್ಥಜ್ಞಾನವಾಗುವದು ಎಂದು ಕಲ್ಪಿಸುವದೇ ಯುಕ್ತವೆಂದು ತೋರುತ್ತದೆ. ಸೂ. ಭಾ. ೪-೧-೩ ನೋಡಿ.

ವದಕ್ಕಾಗಿ 'ತತ್ತ್ವಮಸಿ' (ಅದೇ ನೀನಾಗಿರುವೆ) ಎಂದು ಹೇಳುತ್ತದೆ.[1]

ಅಧಿಕಾರಿಗೆ ವಾಕ್ಯಾರ್ಥಶ್ರವಣಮಾತ್ರದಿಂದ ಜ್ಞಾನ

ಬ್ರಹ್ಮಾ ದಾಶರಥೇರ್ಯದ್ವದುಕ್ತ್ಯೈವ ವಾಪಾನುದತ್ತಮಃ ।
ತಸ್ಯ ವಿಷ್ಣುತ್ವಸಂಬೋಧೇ ನ ಯತ್ನಾನ್ತರಮೂಚಿವಾನ್ ॥ ೯೭ ॥

ಅಹಂಶಬ್ದಸ್ಯ ನಿಷ್ಠಾ ಯಾ ಜ್ಯೋತಿಷಿ ಪ್ರತ್ಯಗಾತ್ಮನಿ ।
ಸೈವೋಕ್ತಾ ಸದಸೀತ್ಯೇವಂ ಫಲಂ ತತ್ರ ವಿಮುಕ್ತತಾ ॥ ೯೮ ॥

೯೭-೯೮. ಬ್ರಹ್ಮನು ದಶರಥರಾಮನ ಅಜ್ಞಾನವನ್ನು ಹೇಗೆ ಉಕ್ತಿ ಮಾತ್ರದಿಂದ ಕಳೆದನೋ ಅವನಿಗೆ (ತಾನು) ವಿಷ್ಣುವೆಂಬ ಜ್ಞಾನವಾಗುವದಕ್ಕೆ ಬೇರೊಂದು ಯತ್ನವನ್ನು (ಮಾಡಬೇಕೆಂದು) ಹೇಳಲಿಲ್ಲವೋ[2] (ಹಾಗ) ನಾನು ಎಂಬ ಶಬ್ದವು ಪ್ರತ್ಯಗಾತ್ಮಜ್ಯೋತಿಯಲ್ಲಿಯೇ ನಿಲುಗಡೆಯನ್ನು ಹೊಂದುವದಷ್ಟೆ,[3] ಆದನ್ನೇ '(ನೀನು) ಸತ್ತಾಗಿರುವೆ' ಎಂದಿಂತು (ಶ್ರುತಿಯಲ್ಲಿ) ಹೇಳಿರುತ್ತದೆ. ಆದಕ್ಕೆ ಫಲವು ಮುಕ್ತಿಯು.[4]

ಶ್ರುತಮಾತ್ರೇಣ ಚೇನ್ನ ಸ್ಯಾತ್ ಕಾರ್ಯಂ ತತ್ರ ಭವೇದ್ಭ್ರವನ್ ।
ವ್ಯವಹಾರಾತ್ ಪುರಾಪೀಷ್ಟಃ ಸದ್ಭಾವಃ ಸ್ವಯಮಾತ್ಮನಃ ॥ ೯೯ ॥

೯೯. ಶ್ರವಣಮಾತ್ರದಿಂದಲೇ (ಮುಕ್ತಿಫಲವಾಗದಿದ್ದರೆ)[5] ಆ (ಫಲ)

---

1. ನಾನು ಬ್ರಹ್ಮವು ಎಂಬ ಜ್ಞಾನವನ್ನುಂಟುಮಾಡಿ ಅಜ್ಞಾನವನ್ನು ನಾಶಗೊಳಿಸುತ್ತದೆ.

2. ರಾಮನು ವಿಷ್ಣುವೇ ಆಗಿದ್ದನು; ಆದ್ದರಿಂದ ಬ್ರಹ್ಮನು 'ನೀನು ಚಕ್ರಧರನಾದ ನಾರಾಯಣನೇ, ನಾಶರಹಿತವಾದ ಬ್ರಹ್ಮವು' ಎಂದು ಹೇಳಿದನೇ ಹೊರತು, 'ನೀನು ವಿಷ್ಣುವೆಂದು ತಿಳಿದುಕೊಳ್ಳುವದಕ್ಕೆ ಈ ವಾಕ್ಯಜ್ಞಾನವನ್ನೂ ಯುಕ್ತಿಯನ್ನೂ ಅಭ್ಯಾಸಮಾಡಬೇಕು' ಎಂದೇನೂ ಹೇಳಲಿಲ್ಲ. ವಾ.ರಾ.ಯು. ೧೧೭ನೆಯ ಸರ್ಗವನ್ನು ನೋಡಿ.

3. ನಾನು ಎಂಬ ಶಬ್ದವು ಗೌಣಾತ್ಮರಾದ ಪುತ್ರಾದಿಗಳಲ್ಲಿಯೂ ಮಿಥ್ಯಾತ್ಮರಾದ ದೇಹಾದಿಗಳಲ್ಲಿಯೂ ಪ್ರಯುಕ್ತವಾಗಿದ್ದರೂ ವಿಚಾರದ ಕೊನೆಯಲ್ಲಿ ಮುಖ್ಯವಾದ ಪ್ರತ್ಯಗಾತ್ಮನಲ್ಲಿಯೇ ನಿಲ್ಲುತ್ತದೆ. ಸೂ.ಭಾ. ೧-೧-೪ರ ಕೊನೆಯಲ್ಲಿರುವ 'ಗೌಣಮಿಥ್ಯಾತ್ಮನೋಃ' ಎಂಬ ಶ್ಲೋಕದ ಅಭಿಪ್ರಾಯವಿದು.

4. ವಾಕ್ಯಜ್ಞಾನದಿಂದಲೇ ಮುಕ್ತಿಯಾಗುವದು; ಆದಕ್ಕೆ ಪ್ರಸಂಖ್ಯಾನಾದಿ ಕಾರ್ಯವು ಬೇಕಿಲ್ಲ.

5. ಈ ಪೂರ್ವಪಕ್ಷವನ್ನು ಹಿಂದೆ ೯-೧೦ನೆಯ ಶ್ಲೋಕಗಳಲ್ಲಿ ಬಿಡಿಸಿತ್ತು.

ಕ್ಕಾಗಿ ಮಾಡತಕ್ಕದ್ದು[1] (ಏನಾದರೂ) ಇದೆ ಎಂದು ಅವಶ್ಯವಾಗಿ ಆಗುವದು. ಆದರೆ (ಈ) ವ್ಯವಹಾರಕ್ಕಿಂತ ಮೊದಲೂ ಆತ್ಮನಿಗೆ ಸದ್ರೂಪತ್ವವು ತಾನೇ (ಇರುವದೆಂಬುದು) ಇಷ್ಟವಾಗಿದೆ.

ಅಶನಾಯಾದಿನಿರ್ಮುಕ್ತ್ಯೈ ತತ್ಕಾಲಾ ಜಾಯತೇ ಪ್ರಮಾ ।
ತತ್ತ್ವಮಸ್ಯಾದಿವಾಕ್ಯಾರ್ಥೇ ತ್ರಿಷು ಕಾಲೇಷ್ವಸಂಶಯಃ ॥ ೧೦೦ ॥
ಪ್ರತಿಬನ್ಧವಿಹೀನತ್ವಾತ್ ಸ್ವಯಂ ಜಾನುಭವಾತ್ಮನಃ ।
ಜಾಯೇತೈವ ಪ್ರಮಾ ತತ್ರ ಸ್ವಾತ್ಮನ್ಯೇವ ನ ಸಂಶಯಃ ॥ ೧೦೧ ॥

೧೦೦–೧೦೧. ಹಸಿವು ಮುಂತಾದವುಗಳಿಂದ ಬಿಡುಗಡೆಯಾಗುವದೆಂಬ[2] (ಫಲವನ್ನು ಕೊಡುವ) ಪ್ರಮೆಯು ತತ್ಕಾಲದಲ್ಲಿಯೇ ಆಗುವದು.[3] ತತ್ತ್ವಮಸಿ ಮುಂತಾದ ವಾಕ್ಯದ ಅರ್ಥದಲ್ಲಿ ಮೂರು ಕಾಲಗಳಲ್ಲಿಯೂ ಸಂಶಯವಿರುವದಿಲ್ಲ[4] (ಹೀಗೆ) ಪ್ರತಿಬಂಧವು (ಯಾವದೂ) ಇಲ್ಲದ್ದರಿಂದ ತಾನೇ ಅನುಭವಸ್ವರೂಪನಾಗಿರುವದರಿಂದಲೂ ಅದರ ವಿಷಯದಲ್ಲಿ ಪ್ರಮೆಯುಂಟಾಗಲೇಬೇಕು; (ತನ್ನ) ಆತ್ಮನ ವಿಷಯದಲ್ಲಿಯೇ ಸಂಶಯ(ವುಂಟಾಗುವಂತಿಲ್ಲ).[5]

---

1. ವಾಕ್ಯಶ್ರವಣಕ್ಕಿಂತ ಮೊದಲೂ ಮುಕ್ತನೇ ಆಗಿರುತ್ತಾನೆ; ಶ್ರವಣವಾದಮೇಲೆ ಮುಕ್ತಿಯಾಗುವದೆಂದೇನೂ ನಮ್ಮ ಅಭಿಪ್ರಾಯವಲ್ಲ. ಆದ್ದರಿಂದಲೇ 'ಅದು ನೀನಾಗಿರುವೆ' ಎಂದು ವಾಕ್ಯದಲ್ಲಿ ಹೇಳಿದೆ; 'ಅದು ನೀನಾಗುವೆ' ಎಂದು ಹೇಳಿಲ್ಲ. ಸೂ. ಭಾ. ೩–೩–೩೨ನ್ನು ನೋಡಿ ಆದ್ದರಿಂದ ಶ್ರವಣವಾದಬಳಿಕ ಪ್ರಸಂಖ್ಯಾನವನ್ನು ಮಾಡಿದಮೇಲೆ ಮುಕ್ತಿಯಾಗುವದೆಂಬುದು ಸರಿಯಲ್ಲ.

2. ಹಸಿವು ಬಾಯಾರಿಕೆ ಮುಂತಾದ ಸಂಸಾರಿಧರ್ಮಗಳನ್ನು ಮೀರುವ.

3. ವಾಕ್ಯಶ್ರವಣಸಮಕಾಲದಲ್ಲಿಯೇ ನಾನು ಸದ್ರೂಪನಾದ ಆತ್ಮನು ಎಂಬ ಅರಿವಾಗುವದು. ಆದ್ದರಿಂದ ವಾಕ್ಯಜ್ಞಾನವು ವಿಪರೀತಜ್ಞಾನವಲ್ಲ. ಛಾಂ. ೬–೧೬–೩.

4. ತಾನು ಹಿಂದೆ ಸದ್ಬ್ರಹ್ಮವಾಗಿದ್ದೆನೊ ಇಲ್ಲವೊ, ಈಗ ಆಗಿದ್ದೇನೆಯೊ ಇಲ್ಲವೊ ? ನಾಳೆ ಆಗಿರುವೆನೊ ಇಲ್ಲವೊ?_ ಎಂಬ ಸಂಶಯವೇನೂ ಇರುವದಿಲ್ಲ; ಯಾವಾಗಲೂ ಕರ್ತೃಭೋಕ್ತೃವಲ್ಲದ ಬ್ರಹ್ಮವೇ ಎಂಬ ನಿಶ್ಚಯವಿರುತ್ತದೆ. ಸೂ. ಭಾ. ೪–೧–೧೩.

5. ಪ್ರತಿಬಂಧವೆಂದರೆ ಪದಾರ್ಥಜ್ಞಾನಕ್ಕೆ ಇರುವ ಅಜ್ಞಾನ, ಸಂಶಯ, ಮಿಥ್ಯಾಜ್ಞಾನರೂಪವಾದ ಅಡ್ಡಿ. ಸೂ. ಭಾ. ೪–೧–೩. 'ಆಕಾಶಕುಸುಮವಿದೆ' ಎಂಬ ವಾಕ್ಯದಂತೆ ಅನುಭವವೇ ಉಂಟಾಗುವದಿಲ್ಲವೆಂದಾಗಲಿ 'ಹುಂ', 'ಫಟ್' ಮುಂತಾದವುಗಳಿಂದ ಯಾವ ಜ್ಞಾನವೂ ಉಂಟಾಗದೆ ಇರುವಂತೆ 'ತತ್ತ್ವಮಸಿ' ಎಂಬ ವಾಕ್ಯದಲ್ಲಿರುವ ಪದಗಳಿಗೆ ಯಾವ ಅರ್ಥದ ಜ್ಞಾನವೂ ಆಗುವದಿಲ್ಲವೆಂದಾಗಲಿ ಹೇಳುವದಕ್ಕಿಲ್ಲ. ಈಗ ಪರೋಕ್ಷವಾಗಿ ಅರಿತಿದ್ದು ಮುಂದೆ ಅಪರೋಕ್ಷವಾಗಿ ಅನುಭವವಾಗಬೇಕೆಂಬುದೂ ಇಲ್ಲ. ಏಕೆಂದರೆ ತಾನೇ ಅನುಭವಸ್ವರೂಪನಾಗಿರುತ್ತಾನೆ; ಆ ಸ್ವರೂಪವನ್ನೇ ವಾಕ್ಯವು ತಿಳಿಸುತ್ತದೆ. ತನ್ನ ಸ್ವರೂಪದ ವಿಷಯದಲ್ಲಿ ಸಂಶಯವುಂಟಾಗಲು ಕಾರಣವೇ ಇಲ್ಲ.

ಕಂ ಸದೇವಾಹಮಸ್ಮೀತಿ ಕಂ ವಾನ್ಯತ್ ಪ್ರತಿಪದ್ಯತೇ ।
ಸದೇವ ಚೇದಹಂಶಬ್ದಃ ಸತಾ ಮುಖ್ಯಾರ್ಥ ಇಷ್ಯತಾಮ್ ॥ ೧೦೨ ॥

ಅನ್ಯಚ್ಚೇತ್ ಸದಹಂಗ್ರಾಹಪ್ರತಿಪತ್ತಿರ್ಮೃಷೈವ ಸಾ ।
ತಸ್ಮಾನ್ಮುಖ್ಯಗ್ರಹೇ ನಾಸ್ತಿ ವಾರಣಾವಗತೇರಿಹ ॥ ೧೦೩ ॥

೧೦೨-೧೦೩. 'ನಾನು (ಅದಾ)ಗಿರುವೆನು' ಎಂದು ಸತ್ತನ್ನೇ ತಿಳಿದುಕೊಳ್ಳುವನೆ, ಅಥವಾ ಮತ್ತೊಂದನ್ನು ತಿಳಿದುಕೊಳ್ಳುವನೆ? ಸತ್ತನ್ನೇ ಎಂದಾದರೆ 'ನಾನು' ಎಂಬ ಮಾತು ಸತ್ತಿನಿಂದ ಮುಖ್ಯಾರ್ಥವುಳ್ಳದ್ದು ಎಂದು ಒಪ್ಪಬೇಕು.[1] ಮತ್ತೊಂದಾದರೆ 'ನಾನು ಸತ್ತು' ಎಂದು ತಿಳಿಯುವ ಆ ಜ್ಞಾನವು ಭ್ರಾಂತಿಯೇ (ಆಗಿರುತ್ತದೆ).[2] ಆದ್ದರಿಂದ ಇಲ್ಲಿ ಮುಖ್ಯಾರ್ಥವನ್ನಿಟ್ಟುಕೊಂಡರೆ ಅರಿವಾಗುವದೆಂಬುದನ್ನು ಅಲ್ಲಗಳೆಯುವದಕ್ಕೆ ಆಗುವದಿಲ್ಲ.[3]

ಪ್ರತ್ಯಯಾ ಪ್ರತ್ಯಯಶ್ಚೈವ ಯದಾಭಾಸೌ ತದರ್ಥತಾ ।
ತಯೋರಚಿತಿಮುತ್ಪಾದ್ಯ ಚೈತನ್ಯೇ ಕಲ್ಪ್ಯತೇ ಫಲಮ್ ॥೧೦೪॥
ಕೂಟಸ್ಥೇಽಪಿ ಫಲಂ ಯೋಗ್ಯಂ ರಾಜನೀವ ಜಯಾದಿಕಮ್ ।

ಶದನಾತ್ಮತ್ವಹೇತುಭ್ಯಾಂ ಕ್ರಿಯಾಯಾಃ ಪ್ರತ್ಯಯಸ್ಯ ಚ ॥ ೧೦೫ ॥
ಅದರ್ಶಸ್ತು ಯದಾಭಾಸೋ ಮುಖ್ಯಾಕಾರಃ ಸ ಏವ ಸಃ ।

ಯಥೈವಂ ಪ್ರತ್ಯಯಾದರ್ಶೋ ಯದಾಭಾಸಸ್ತದಾ ಹ್ಯಹಮ್ ॥೧೦೬॥
ಇತ್ಯೇವಂ ಪ್ರತಿಪತ್ತಿಃ ಸ್ಯಾತ್ ಸದಸ್ಮೀತಿ ಚ ನಾನ್ಯಥಾ ॥೧೦೭॥

---

1. ತನ್ನನ್ನೇ ತಿಳಿದುಕೊಂಡರೆ ಇನ್ನು ಮುಂದೆ ಪ್ರಸಂಖ್ಯಾನವೇಕೆ? ಎಂದರ್ಥ. ನಾನು ಎಂಬ ಶಬ್ದಕ್ಕೆ ಮುಖ್ಯಾರ್ಥವೆಂದರೆ ಶಬ್ದವು ಗುರಿಯಾಗಿಟ್ಟುಕೊಂಡಿರುವ ನಿಜವಾದ ಅರ್ಥ, ವಾಚ್ಯಾರ್ಥವೆಂದೇನೂ ಅಭಿಪ್ರಾಯವಿಲ್ಲ. ಏಕೆಂದರೆ ಹಿಂದೆ ೨೯ನೆಯ ಶ್ಲೋಕದಲ್ಲಿ ಅಹಂಕಾರದಲ್ಲಿರುವ ಅಭಾಸದ ಮೂಲಕ ಆತ್ಮನನ್ನು ಲಕ್ಷಣೆಯಿಂದ ತಿಳಿಸುವದೆಂದೇ ಹೇಳಿದೆ.

2. ಇದುವರೆಗೆ ಪ್ರಮಾಣದೃಷ್ಟಿಯಿಂದ ನೋಡಿ ವಾಕ್ಯದಿಂದ ಅಪರೋಕ್ಷಜ್ಞಾನವಾಗುತ್ತದೆ ಎಂದು ತಿಳಿಸುತ್ತಿತ್ತು. ಈಗ ಪ್ರಮೇಯದ ದೃಷ್ಟಿಯಿಂದ ವಿಚಾರಮಾಡಿರುತ್ತದೆ. 'ನೀನು ಸತ್ತು' ಎಂಬ ತಿಳಿವಳಿಕೆಯಲ್ಲಿ ನಾನು ಎಂಬ ಶಬ್ದದಿಂದ ಬ್ರಹ್ಮಕ್ಕಿಂತ ಬೇರೆಯಾದದ್ದನ್ನು ಅರಿತರೆ ಭ್ರಾಂತಿಯಾಗುತ್ತದೆ.

3. ನಾನು ಎಂಬುದು ಸಚ್ಚಬ್ರಹ್ಮವೇ ಆದರೆ ವಾಕ್ಯಶ್ರವಣದಿಂದಲೇ ಅಪರೋಕ್ಷಜ್ಞಾನವಾದಂತಾಯಿತು.

೧೦೪-೧೦೬ $\frac{1}{2}$. ಪ್ರತ್ಯಯಿಯಾದ (ಅಹಂಕಾರವೂ) ಪ್ರತ್ಯಯವೂ ಯಾವದರ ಆಭಾಸವುಳ್ಳವುಗಳೋ (ಅವು) ಅದಕ್ಕಾಗಿರುವವು.[1] ಅರಿವು ಅಚೇತನವಾಗಿರುವದರಿಂದಲೂ ಚೈತನ್ಯದಲ್ಲಿ ಫಲವನ್ನು ಕಲ್ಪಿಸಬೇಕು.[2] (ಚೈತನ್ಯವು) ಕೂಟಸ್ಥವಾಗಿದ್ದರೂ ಅರಸನಲ್ಲಿ ಜಯವೇ ಮುಂತಾದದ್ದರಂತೆ[3] (ಅದರಲ್ಲಿ) ಫಲವುಂಟಾಗುವದು ಯುಕ್ತವಾಗಿರುತ್ತದೆ. ಅಹಂಕಾರವೂ ಪ್ರತ್ಯಯವೂ ಅದರ ಸ್ವರೂಪವಲ್ಲದ್ದರಿಂದಲೂ ಹೇತುವಾಗಿರುವದರಿಂದಲೂ (ಫಲವನ್ನು ಅದಕ್ಕೆ ಹೇಳುವದು ಯುಕ್ತ).[4] ಹೇಗೆ ಕನ್ನಡಿಯಲ್ಲಿ ಯಾವದರ ಆಭಾಸವಿರುವದೋ ಆ ಮುಖದ ಆಕಾರವು ತಾನು ಅದೇ ಆಗಿರುವದೋ ಹಾಗೆ ಪ್ರತ್ಯಯವೆಂಬ ಕನ್ನಡಿಯಲ್ಲಿ ಯಾವದರ ಆಭಾಸವಿರುವದೋ (ಆ ಚೈತನ್ಯವು ತಾನು ಅದೇ ಆಗಿರುವದು). ಆಗಲೇ 'ನಾನು ಸತ್ತಾಗಿರುವೆನು' ಎಂಬ ಅರಿವು ಉಂಟಾಗುತ್ತದೆ, ಹಾಗಲ್ಲದಿದ್ದರೆ ಆಗಲಾರದು.[5]

ತತ್ತ್ವಮಿತ್ಯುಪದೇಶೋಽಪಿ ದ್ವಾರಾಭಾವಾದನರ್ಥಕಃ ॥ ೧೦೭ ॥
ಶ್ರೋತುಃ ಸ್ಯಾದುಪದೇಶಶ್ಚೇದರ್ಥವತ್ತ್ವಂ ತಥಾ ಭವೇತ್ ।
ಅಧ್ಯಕ್ಷಸ್ಯ ನ ಚೇದಿಷ್ಟಂ ಶ್ರೋತೃತ್ವಂ ಕಸ್ಯ ತದ್ಭವೇತ್ ॥ ೧೦೮ ॥
ಅಧ್ಯಕ್ಷಸ್ಯ ಸಮೀಪೇ ಸ್ಯಾದ್ಬುದ್ಧೇರೇವೇತಿ ಚೇನ್ಮತಮ್ ।

---

1. ಅಹಂಕಾರವೂ ಪ್ರತ್ಯಯಗಳೂ ಚೈತನ್ಯಕ್ಕಾಗಿ ಅನುಭವವನ್ನುಂಟುಮಾಡುತ್ತಿರುವವು. ಉಪ. ಗದ್ಯ. ೨-೪೫, ೪೬ನೆಯ ಪಿಂಡಗಳನ್ನು ನೋಡಿ.

2. ಅಹಂಕಾರವೂ ಪ್ರತ್ಯಯಗಳೂ ಪರಾರ್ಥವಾವ್ದರಿಂದಲೂ ಅಚೇತನವಾಗಿರುವದರಿಂದಲೂ ಅವಕ್ಕೆ ಅಪರೋಕ್ಷಜ್ಞಾನವಾಗುವ ಪಾಗಿಲ್ಲ: ಆವ್ದರಿಂದ ಸಾಕ್ಷಿಗೇ ಈ ಫಲರೂಪವಾದ ಜ್ಞಾನವು ಎಂದು ಕಲ್ಪಿಸಬೇಕು.

3. ನಿರ್ವ್ಯಾಪಾರನಾದ ಸಾಕ್ಷಿಗೆ ಫಲವು ಹೇಗೆ? –ಎಂಬ ಆಕ್ಷೇಪಕ್ಕೆ ಈ ದೃಷ್ಟಾಂತ; ಸೇನಾಧಿಪತಿಯು ಜಯಾಪಜಯಗಳು ಸುಮ್ಮನಿರುವ ರಾಜನಿಗೂ ಆಗುವವು. ಇದರಂತೆ ನಾನು ಸಚ್ಚ್ರಹ್ಮವು ಎಂಬ ಜ್ಞಾನವು ಸಾಕ್ಷಿಚೈತನ್ಯಕ್ಕೇ ಆದಂತಾಯಿತು. ಸೂ. ಭಾ. ೧-೪-೬ (ಭಾ. ಭಾ. ೪೫೧).

4. ಅಹಂಕಾರವೂ ಪ್ರತ್ಯಯವೂ ಚೈತನ್ಯವಲ್ಲ; ಅನುಭವವುಂಟಾಗುವದಕ್ಕೆ ನಿಮಿತ್ತ. ಆವ್ದರಿಂದ ಹೇತುವಿನಿಂದ ಆತ್ಮನಿಗೆ ಫಲವುಂಟಾಗುತ್ತದೆ ಎಂಬುದು ಸರಿ. ಫಲರೂಪವಾದ ಅನುಭವವು ನಿತ್ಯವಾಗಿದ್ದರೂ ಉಪಾಧಿಯಿಂದ ಹುಟ್ಟುವಂತೆ ಕಾಣುವದೆಂಬುದಕ್ಕೆ ಉಪ. ಗದ್ಯ. ೨-೬೫ ನೋಡಿ.

5. ನಾನು ಎಂಬ ಶಬ್ದವು ಆಭಾಸದಮೂಲಕ ಸಚ್ಚ್ರಹ್ಮವಾಗಿರುವ ಚೈತನ್ಯವನ್ನೇ ಹೇಳುತ್ತದೆಯಾವ್ದರಿಂದ 'ನಾನು ಬ್ರಹ್ಮವು' ಎಂಬ ಅರಿವು ಉಂಟಾಗಬಹುದು.

ನ ತತ್ಕೃತೋಪಕಾರೋಽಸ್ತಿ ಕಾಷ್ಠಾದ್ಯದ್ವನ್ನ ಕಲ್ಪ್ಯತೇ ॥ ೧೦೯ ॥
ಬುದ್ಧೌ ಚೇತ್ ತತ್ಕೃತಃ ಕಶ್ಚಿನ್ನೈವಂ ಪರಿಣಾಮಿತಾ ॥ ೧೦೯½ ॥

೧೦೭–೧೦೯½. (ಆಗ) 'ಅದೇ ನಾನು' ಎಂಬ ಉಪದೇಶಕ್ಕೂ ದ್ವಾರವಿಲ್ಲದ್ದರಿಂದ ವ್ಯರ್ಥ(ವಾಗುವದು). ಕೇಳುವವನಿಗೆ ಉಪದೇಶವಾದರೆ, ಹಾಗಾದರೆ ಸಾರ್ಥಕವಾದೀತು.[1] ಸಾಕ್ಷಿಗೆ ಶ್ರೋತೃತ್ವವನ್ನೊಪ್ಪದಿದ್ದರೆ, ಅದು ಮತ್ತೆ ಯಾರಿಗೆ ಆಗಬೇಕು? ಸಾಕ್ಷಿಯ ಸಮೀಪದಲ್ಲಿ ಬುದ್ಧಿಗೇ (ಶ್ರೋತೃತ್ವ)ವಿರಬಹುದು ಎಂದು (ನಿಮ್ಮ) ಮತವಾದರೆ[2] ಕಟ್ಟಿಗೆಯಿಂದ ಹೇಗೆ (ಉಪಕಾರವನ್ನು) ಕಲ್ಪಿಸಲಾಗಲಾರದೋ ಹಾಗೆ ಅದರಿಂದಾಗುವ ಉಪಕಾರವು (ಬುದ್ಧಿಯಲ್ಲಿ ಯಾವದೂ) ಇರುವದಿಲ್ಲ. ಬುದ್ಧಿಯಲ್ಲಿ ಅದರಿಂದಾಗುವ ಯಾವದಾದರೂ ಉಪಕಾರವಿರುತ್ತಿದ್ದರೆ, ಆಗ ಅದಕ್ಕೆ ಪರಿಣಾಮಿತ್ವವುಂಟಾಗುವದಿಲ್ಲವೆ ?[3]

ಆಭಾಸೇಽಪಿ ಚ ಕೋ ದೋಷಃ ಸತಿ ಶ್ರುತ್ಯಾದ್ಯನುಗ್ರಹೇ ॥ ೧೧೦ ॥
ಆಭಾಸೇ ಪರಿಣಾಮುಶ್ಚೇನ್ನ ರಜ್ಜ್ವಾದಿನಿಭತ್ವವತ್ ।
ಸರ್ಪಾದೇಶ್ಚ ತಥಾವೋಚವಮಾದರ್ಶೇ ಚ ಮುಖತ್ವವತ್ ॥ ೧೧೧ ॥

೧೧೦–೧೧೧. ಶ್ರುತ್ಯಾದಿಗಳ ಪ್ರಮಾಣವಿರುವಲ್ಲಿ[4] ಆಭಾಸ(ವನ್ನೊಪ್ಪುವ ಪಕ್ಷ)ದಲ್ಲಾದರೂ ದೋಷವೇನು? ಆಭಾಸವನ್ನೊಪ್ಪಿದರೆ ಪರಿಣಾಮವಾಗು

---

1. ಶ್ರೋತೃವಿಲ್ಲದೆ ಉಪದೇಶವಿಲ್ಲ, ಸಾಕ್ಷಿಯನ್ನು ಬಿಟ್ಟರೆ ಶ್ರೋತೃವೇ ಇಲ್ಲ.

2. ಪ್ರತ್ಯಯಗಳನ್ನು ಗ್ರಹಿಸುವವನು ಯಾರು ?– ಎಂಬ ವಿಚಾರದಲ್ಲಿ ಇದೇ ಶಂಕೆಯನ್ನೂ ಸಮಾಧಾನವನ್ನೂ ೭೩ನೆಯ ಶ್ಲೋಕದಲ್ಲಿ ಕೊಟ್ಟಿರುವದನ್ನು ಹೋಲಿಸಿರಿ. ಇಲ್ಲಿ ಶ್ರೋತೃತ್ವವು ಯಾರಿಗೆ ಎಂಬುದನ್ನು ನಿರ್ಧರಿಸುವದಕ್ಕೆ ಮತ್ತೆ ಇದೇ ಶಂಕಾ ಸಮಾಧಾನಗಳನ್ನು ತಂದಿದೆ.

3. ಅಂತಃಕರಣದಲ್ಲಿ ಆತ್ಮನಿಂದ ಯಾವದಾದರೂ ನಿಜವಾದ ಅತಿಶಯವುಂಟಾಗುವದಾದರೆ ಆತ್ಮನಿಗೆ ಪರಿಣಾಮವುಂಟೆಂಬ ಅನಿಷ್ಟವು ಬಂದೊದಗುತ್ತದೆ. ಆದ್ದರಿಂದ ಶ್ರೋತೃತ್ವವನ್ನು ಅಂತಃಕರಣಕ್ಕೆ ಕಲ್ಪಿಸುವದಕ್ಕಾಗುವದಿಲ್ಲ. ಆಭಾಸದ್ವಾರದಿಂದ ಸಾಕ್ಷಿಯಲ್ಲಿಯೇ ಕಲ್ಪಿಸಬೇಕು.

4. ಶ್ರುತಿ(ಬೃ. ೨-೫-೧೯)ಯಲ್ಲಿ ಆತ್ಮಾಭಾಸವನ್ನು ಹೇಳಿವೆ. ಆಭಾಸವನ್ನೊಪ್ಪದಿದ್ದರೆ 'ತತ್ತ್ವಮಸಿ' ಎಂಬ ವಾಕ್ಯದ ಪ್ರಾಮಾಣ್ಯ, ವಾಕ್ಯದಿಂದ ಅರಿಯಬೇಕಾದ ಪ್ರಮೇಯ, ವಾಕ್ಯೋಪದೇಶದಿಂದಾಗುವ ವಿಜ್ಞಾನ, ಉಪದೇಶದ ಸಾರ್ಥಕ್ಯ– ಯಾವದೂ ಸಿದ್ಧಿಸುವದಿಲ್ಲವೆಂಬ ಯುಕ್ತಿಯನ್ನು ಈವರೆಗೆ ವರ್ಣಿಸಿದೆ.

ವದಲ್ಲ!- ಎಂದರೆ ಇಲ್ಲ. ಏಕೆಂದರೆ ಹಾವು ಮುಂತಾದದ್ದು ಹಗ್ಗವೇ ಮುಂತಾದದ್ದರ ಆಭಾಸವಾಗಿರುವಂತೆ (ಈ ಆಭಾಸವು ಅಸತ್ಯವಾಗಿರುತ್ತದೆ). ಆದ್ದರಿಂದಲೇ ಕನ್ನಡಿಯಲ್ಲಿರುವ ಮುಖದ (ಆಭಾಸ)ದಂತೆ (ಎಂಬ ದೃಷ್ಟಾಂತದಲ್ಲಿ)[1] ಹೇಳಿರುತ್ತೇನೆ.

ಸಾಕ್ಷಿಪ್ರತ್ಯಯಗಳ ವಿಂಗಡ

ನಾತ್ಮಾಭಾಸತ್ವಸಿದ್ಧಿಶ್ಚೇದಾತ್ಮನೋಽಗ್ರಹಣಾತ್ ಪೃಥಕ್ ।
ಮುಖಾದೇಶ್ಚ ಪೃಥಕ್ಸಿದ್ಧಿರಿಹ ತ್ವನ್ಯೋನ್ಯಸಂಶ್ರಯಃ ॥ ೧೧೨ ॥

ಅಧ್ಯಕ್ಷಸ್ಯ ಪೃಥಕ್ಸಿದ್ಧಾವಾಭಾಸಸ್ಯ ತದೀಯತಾ ।
ಆಭಾಸಸ್ಯ ತದೀಯತ್ವೇ ಹ್ಯಧ್ಯಕ್ಷವ್ಯತಿರಿಕ್ತತಾ ॥ ೧೧೩ ॥

ನೈವಂ ಸ್ವಪ್ನೇ ಪೃಥಕ್ಸಿದ್ಧೇಃ ಪ್ರತ್ಯಯಸ್ಯ ದೃಶೇಸ್ತಥಾ ।
ರಥಾದೇಸ್ತತ್ರ ಶೂನ್ಯತ್ವಾತ್ ಪ್ರತ್ಯಯಸ್ಯಾತ್ಮನಾ ಗ್ರಹಃ ॥ ೧೧೪ ॥

ಅವಗತ್ಯಾ ಹಿ ಸಂವ್ಯಾಪ್ತಃ ಪ್ರತ್ಯಯೋ ವಿಷಯಾಕೃತಿಃ ।
ಜಾಯತೇ ಸ ಯದಾಕಾರಃ ಸ ಬಾಹ್ಯೋ ವಿಷಯೋ ಮತಃ ॥೧೧೫॥

೧೧೨-೧೧೪. (ಆಕ್ಷೇಪ):- ಆತ್ಮನನ್ನು ಬೇರೆಯಾಗಿ ಕಾಣದಿರುವದರಿಂದ ಆತ್ಮಾಭಾಸವು ಸಿದ್ಧವಾಗುವದಿಲ್ಲವಲ್ಲ! (ದೃಷ್ಟಾಂತದ) ಮುಖಾದಿಗಳು ಬೇರೆಯಾಗಿ ಸಿದ್ಧವಾಗಿರುತ್ತವೆ; ಆದರೆ ಇಲ್ಲಿ ಅನ್ಯೋನ್ಯಾಶ್ರಯವಾಗಿರುತ್ತದೆ. (ಹೇಗೆಂದರೆ): ಸಾಕ್ಷಿಯು ಬೇರೆಯಾಗಿ ಸಿದ್ಧವಾದರೆ ಆಭಾಸವು ಅವನದು ಎಂದಾಗುತ್ತದೆ; ಆಭಾಸವು ಅವನದಾದರೆ, ಸಾಕ್ಷಿಯು ಬೇರೆ ಎಂದಾಗುತ್ತದೆಯಲ್ಲವೆ?[2] (ಸಮಾಧಾನ): ಹಾಗಲ್ಲ. ಏಕೆಂದರೆ ಕನಸಿನಲ್ಲಿ ಪ್ರತ್ಯಯವೂ ಸಾಕ್ಷಿಯೂ ಬೇರೆಬೇರೆಯಾಗಿ ಸಿದ್ಧವಾಗಿರುತ್ತವೆ. ಅಲ್ಲಿ ರಥಾದಿಗಳು ಇರುವದಿಲ್ಲವಾದ್ದರಿಂದ ಪ್ರತ್ಯಯವನ್ನು ಆತ್ಮನು ಅರಿಯುತ್ತಿರುತ್ತಾನೆ.[3]

1. ಈ ಪ್ರಕರಣದ ಆರನೆಯ ಶ್ಲೋಕದಲ್ಲಿ ಇದನ್ನು ತಿಳಿಸಿದೆ. ಅಸತ್ಯವಾದ ಆಭಾಸದಿಂದ ಆತ್ಮನಿಗೆ ಪರಿಣಾಮವಾಗಲಾರದು.

2. ಸಾಕ್ಷಿಯು ಸ್ವತಃಸಿದ್ಧನೆಂಬುದನ್ನು ಕಡೆಗಣಿಸಿ ಈ ಪೂರ್ವಪಕ್ಷವನ್ನು ತೆಗೆದಿರುತ್ತದೆ. ಆಹಂಕಾರವಲ್ಲಿರುವದು ಚಿದಾಭಾಸವೆಂದು ಏತಕ್ಕೆ ಕರೆಯಬೇಕು? ಬೇರೆ ಚಿತ್ತನ್ನು ನಾವೆಲ್ಲಿ ಕಂಡಿದ್ದೇವೆ?- ಎಂಬುದು ಆಕ್ಷೇಪದ ಸಾರ.

3. ಬೃ. ೪-೩-೧೦೮ ಸೂಚನೆ ಇಲ್ಲಿದೆ. ರಥಾದಿಗಳಿಲ್ಲದೆ ರಥಾದಿರೂಪವಾದ ಪ್ರತ್ಯಯಗಳನ್ನೇ ಕನಸಿನಲ್ಲಿ ನಾವು ರಥಾದಿಗಳೆಂದು ಭಾವಿಸುತ್ತೇವೆ; ಅವುಗಳನ್ನು ನೋಡುವ ನಮ್ಮ ಸ್ವರೂಪವೇ ಸಾಕ್ಷಿ ಎಂದು ಅಭಿಪ್ರಾಯ.

ಕರ್ಮೇಪ್ಸಿತತಮಮುತ್ತಮಾತ್ ಸ ತದ್ವಾನ್ ಕಾರ್ಯೇ ನಿಯುಜ್ಯತೇ ।
ಆಕಾರೋ ಯತ್ರ ಚಾರ್ಪ್ಯತೇ ಕರಣಂ ತದಿಹೋಚ್ಯತೇ ॥ ೧೧೬ ॥

ಯದಾಭಾಸೇನ ಸಂವ್ಯಾಪ್ತಃ ಸ ಜ್ಞಾತೇತಿ ನಿಗದ್ಯತೇ ।
ತ್ರಯಮೇತದ್ ವಿವಿಚ್ಯಾತ್ರ ಯೋ ಜಾನಾತಿ ಸ ಆತ್ಮವಿತ್ ॥೧೧೭॥

೧೧೫-೧೧೭. ಚೈತನ್ಯದಿಂದ ಪೂರ್ಣವಾಗಿ ವ್ಯಾಪ್ತವಾಗಿಯಲ್ಲವೆ ಪ್ರತ್ಯಯವು ವಿಷಯಾಕಾರವುಳ್ಳದ್ದಾಗುತ್ತದೆ?[1] ಅದು ಯಾವದರ ಆಕಾರವುಳ್ಳದ್ದಾಗಿ ಹುಟ್ಟುತ್ತದೆಯೋ ಅದು ಹೊರಗಿನ **ವಿಷಯ**ವೆನಿಸುವದು. ಅದೇ ಪಡೆಯುವದಕ್ಕೆ ಇಷ್ಟತಮವಾಗಿರುವದರಿಂದ **ಕರ್ಮ**ವು.[2] ಆ (ಇಷ್ಟತಮವಾದ ಕರ್ಮ)ವುಳ್ಳವನು ಕಾರ್ಯದಲ್ಲಿ ನಿಯುಕ್ತನಾಗುತ್ತಾನೆ.[3] (ವಿಷಯದ) ಆಕಾರವು ಏತರಲ್ಲಿ ಅಂಟಾಗುವದೋ ಆ (ಪ್ರತ್ಯಯವು) **ಕರಣ**ವೆನಿಸುವದು.[4] ಯಾವದರ ಆಭಾಸದಿಂದ (ಪ್ರತ್ಯಯವು) ಸಂವ್ಯಾಪ್ತವಾಗಿರುವದೋ ಅವನು **ಜ್ಞಾತೃ**ವೆನಿಸುವನು.[5] **ಈ** ಮೂರನ್ನೂ ಇಲ್ಲಿ ವಿಂಗಡಿಸಿಕೊಂಡು ಯಾವನು ಅರಿಯುವನೋ ಅವನೇ **ಆತ್ಮಜ್ಞಾನಿಯು**.[6]

---

1. ಪ್ರತ್ಯಯವು ವಿಷಯಾಕಾರವಾಗಿ ಅದನ್ನು ಬೆಳಗುವದಕ್ಕೆ ಚೈತನ್ಯದ ಆಭಾಸವುಳ್ಳದ್ದಾಗಿರುತ್ತದೆ; ಚೈತನ್ಯವ್ಯಾಪ್ತವಾಗಿಯೂ ಇರುತ್ತದೆ ಎಂದು ಹಿಂದೆ ತಿಳಿಸಿದೆ.

2. ಘಟ, ಘಟಾಕಾರಪ್ರತ್ಯಯ- ಎರಡೂ ಜಾಗ್ರದವಸ್ಥೆಯಲ್ಲಿ ಸಾಕ್ಷಿವಿಷಯವಾಗಿರುತ್ತದೆ ಎಂದು ಭಾವ. ಕರ್ತೃವಿಗೆ ಈಪ್ಸಿತತಮವಾದದ್ದು ಕರ್ಮವು ಎಂದು ವೈಯಾಕರಣರು ಹೇಳುವರು.

3. ಕರ್ಮವಾದ ವಿಷಯವು ಬೇಕೆನ್ನುವವನೇ ಕರ್ಮದಲ್ಲಿ ತೊಡಗುವವನು. ಅವನೇ **ಕರ್ತೃ**.

4. ಅಂತಃಕರಣವು ವಿಷಯಾಕಾರವಾಗಿ ಪರಿಣಮಿಸಿದರೆ ಆದೇ **ಪ್ರಮಾಣವು; ವಿಷಯವು ಪ್ರಮೇಯವು.**

5. ಯಾವ ಸಾಕ್ಷಿಚೈತನ್ಯದ ಆಭಾಸದಿಂದ ಪ್ರತ್ಯಯವು ವ್ಯಾಪ್ತವಾಗಿರುವದೋ ಅದೇ ಜ್ಞಾತೃ ಎಂದರ್ಥ. ಬರಿಯ ಸಾಕ್ಷಿಯು **ಪ್ರಮಾತೃ**ವಲ್ಲ; ಅಂತಃಕರಣದಲ್ಲಿ ಆಭಾಸವನ್ನು ವಿಂಗಡಿಸಿಕೊಳ್ಳದೆ ಇರುವಾಗ ಪ್ರಮೇಯದ ಅಪೇಕ್ಷೆಯಿಂದ **ಪ್ರಮಾತೃ**ವೆನಿಸುತ್ತದೆ. ೧೦೮ನೆಯ ಶ್ಲೋಕದಲ್ಲಿ ಶ್ರೋತೃವು ಸಾಕ್ಷಿಯೇ ಎಂದದ್ದೂ ಹೀಗೆಯೇ. ೭೬ನೆಯ ಶ್ಲೋಕವನ್ನು ನೋಡಿ.

6. ಪ್ರಮಾತೃ, ಪ್ರಮಾಣ, ಪ್ರಮೇಯ -**ಈ ಮೂರನ್ನೂ** ವಿಂಗಡಿಸಿ ಯಾರು ತಿಳಿದುಕೊಳ್ಳುವರೋ ಅವನು **ಆತ್ಮಜ್ಞಾನಿಯು**; ಏಕೆಂದರೆ ಪ್ರಮಾತೃವನ್ನು ವಿಂಗಡಿಸಿಕೊಂಡರೆ ನಿತ್ಯಚೈತನ್ಯಸ್ವರೂಪವೇ ಆಗಿ ನಿಲ್ಲುತ್ತಾನೆ. **ಉಪ.** ಗದ್ಯ. ೨-೬ನ್ನು ನೋಡಿ.

ಸಮ್ಯಕ್ಸಂಶಯಮಿಥ್ಯೋಕ್ತಾಃ ಪ್ರತ್ಯಯಾ ವ್ಯಭಿಚಾರಿಣಃ ।
ಏಕೈವಾವಗತಿಸ್ತೇಷು ಭೇದಸ್ತು ಪ್ರತ್ಯಯಾರ್ಪಿತಃ ॥ ೧೧೬ ॥
ಆಧಿಭೇದಾದ್ಯಥಾ ಭೇದೋ ಮಣೇರವಗತೇಸ್ತಥಾ ।
ಅಶುದ್ಧಿಃ ಪರಿಣಾಮಶ್ಚ ಸರ್ವಂ ಪ್ರತ್ಯಯೆಸಂಶ್ರಯಾತ್ ॥ ೧೧೭ ॥
ಪೃಥಸಂ ಗ್ರಹಣಂ ಸಿದ್ಧಿಃ ಪ್ರತ್ಯಯಾನಾಮಿಹಾನ್ಯತಃ ।
ಆಪರೋಕ್ಷ್ಯಾತ್ ತದೇವೋಕ್ತಮನುಮಾನಂ ಪ್ರದೀಪವತ್ ॥ ೧೨೦ ॥

೧೧೬-೧೨೦. ಸರಿಯಾದದ್ದು, ಸಂಶಯರೂಪವಾದದ್ದು, ತಪ್ಪಾದದ್ದು –ಎಂಬ ಪ್ರತ್ಯಯಗಳು ಬೇರೆಬೇರೆಯಾಗುತ್ತಿರುವವು. ಅವುಗಳಲ್ಲಿರುವ ಅವಗತಿಯು ಒಂದೇ, ಭೇದವಾದರೋ ಪ್ರತ್ಯಯಗಳಿಂದಾದದ್ದು.[1] ಉಪಾಧಿಯ ಭೇದದಿಂದ ಪೇಗೆ (ಸ್ಫಟಿಕ)ಮಣಿಗೆ ಭೇದವುಂಟಾಗುವದೋ ಹಾಗೆ ಅವಗತಿಗೆ ಅಶುದ್ಧಿಯೂ ಪರಿಣಾಮವೂ ಎಲ್ಲವೂ ಪ್ರತ್ಯಯದ ಆಶ್ರಯದಿಂದಲೇ ಆಗುತ್ತದೆ.[2] ಇಲ್ಲಿ ಪ್ರತ್ಯಯಗಳು ಹೊಳೆಯುವದು, ಅರಿಯಲ್ಪಡುವದು, ಇರುವದು –(ಇವೆಲ್ಲವೂ) ಅಪರೋಕ್ಷಸ್ವಭಾವದ ಮತ್ತೊಂದರಿಂದ; ದೊಡ್ಡದೀಪದಂತೆ –ಎಂದು ಹೇಳಿರುವದೇ ಅನುಮಾನವು.[3]

ಶಿಷ್ಯಬೋಧನೆಗೆ ಆಭಾಸಯುಕ್ತ ಪ್ರಮಾಣವು ಬೇಕು

ಕಮಜ್ಞಂ[4] ಗ್ರಾಹಯೇತ್ ಕಶ್ಚಿತ್ ಪ್ರಮಾಣೇನ ತು ಕೇನಚಿತ್ ।
ವಿನೈವ ತು ಪ್ರಮಾಣೇನ ನಿವೃತ್ತ್ಯಾನ್ಯಸ್ಯ ಶೇಷತಃ ॥ ೧೨೧ ॥
ಕಬ್ದೇನೈವ ಪ್ರಮಾಣೇನ ನಿವೃತ್ತಿಶ್ಚೇದಿಹೋಚ್ಯತೇ ।
ಅಧ್ಯಕ್ಷಸ್ಯಾಪ್ರಸಿದ್ಧತ್ವಾಚ್ಛೂನ್ಯತೈವ ಪ್ರಸಜ್ಯತೇ ॥ ೧೨೨ ॥

1. ಸಮ್ಯಗ್ಜ್ಞಾನ, ಸಂಶಯಜ್ಞಾನ, ಮಿಥ್ಯಾಜ್ಞಾನ – ಎಲ್ಲವೂ ಜ್ಞಾನವೇ; ಸಮ್ಯಕ್ತ್ವಾದಿಗಳು ಬೇರೆಬೇರೆ ಪ್ರತ್ಯಯದಿಂದಾದ ಭೇದವು. ಉಪ. ಗದ್ಯ. ೨-೪೮, ೬೬ ನೋಡಿ.

2. ಚೈತನ್ಯವು ಸ್ವತಃ ಅಸಂಗವಾಗಿದೆ, ಕೂಟಸ್ಥವೂ ಆಗಿದೆ; ಪ್ರತ್ಯಯದಿಂದಲೇ ಅದಕ್ಕೆ ವಿಷಯಸಂಪರ್ಕವು ಮತ್ತು ಮಾರ್ಪಾಡುಗಳು.

3. ವಿಷಯವಾದ ಪದಾರ್ಥಗಳು ದೀಪವೇ ಮುಂತಾದ ಬೆಳಕಿನಿಂದ, ಬೆಳಕು ಇಂದ್ರಿಯಗಳ ಬೆಳಕಿನಿಂದ, ಇಂದ್ರಿಯಗಳು ಮನಸ್ಸಿನ ಬೆಳಕಿನಿಂದ ತೋರುತ್ತವೆ. ಅವುಗಳ ಇರವೂ ಅರಿವೂ ಮತ್ತೊಂದರ ಅನಲಂಬನದಿಂದಲೇ. ಪ್ರತ್ಯಯದ ಇರವೂ ಅರಿವೂ ತೋರಿಕೆಯೂ ಏತರಿಂದ ಆಗುವದೋ ಅವೇ ಸಾಕ್ಷಿ.

4. ಅನ್ಯತ್ ಎಂಬ ಮೈ॥ ಪಾಠವನ್ನು ಹೀಗೆಂದು ತಿದ್ದಿಕೊಂಡಿದೆ. ಇದು ಬೋಧನಿಧಿಯ ಪಾಠ.

೧೫೧–೧೫೨. ಯಾವನಾದರೂ (ಗುರುವು) ಅಜ್ಞನಾದವನಿಗೆ ಯಾವ ದಾದರೊಂದು ಪ್ರಮಾಣದಿಂದ ತಿಳಿಸಿಕೊಡಬೇಕೊ, ಅಥವಾ ಪ್ರಮಾಣವಿಲ್ಲದೆ ಮತ್ತೊಂದನ್ನು ನಿಷೇಧಿಸಿ ಉಳಿಸುವದರಿಂದ ತಿಳಿಸಬೇಕೊ?[1] ಶಬ್ದಪ್ರಮಾಣದಿಂದಲೇ ನಿವೃತ್ತಿಯೇ ಇಲ್ಲಿ ಉಕ್ತವಾಗಿದೆ ಎಂದರೆ ಸಾಕ್ಷ್ಯವು ಅಪ್ರಸಿದ್ಧನಾಗಿರುವದರಿಂದ ಶೂನ್ಯತ್ವವೇ ಬಂದೊದಗುತ್ತದೆ.[2]

ಚೇತನಸ್ತ್ವಂ ಕಥಂ ದೇಹ ಇತಿ ಚೇನ್ನಾಪ್ರಸಿದ್ಧಿತಃ ।
ಚೇತನಸ್ಯಾನ್ಯತಃ[3] ಸಿದ್ಧಾನೇವಂ ಸ್ಯಾದನ್ಯಹಾನತಃ ॥ ೧೫೩ ॥

ಅಧ್ಯಕ್ಷಃ ಸ್ವಯಮುಸ್ತ್ಯೇವ ಚೇತನಸ್ಯ ಪರೋಕ್ಷತಃ ।
ತುಲ್ಯ ಏವಂ ಪ್ರಬೋಧಃ ಸ್ಯಾದಜ್ಞಸ್ಯಾ[4]ಸತ್ತ್ವವಾದಿನಾ ॥ ೧೫೪ ॥

೧೫೩–೧೫೪. ಚೇತನನಾದ ನೀನು ದೇಹವು ಹೇಗೆ (ಆದೀಯೆ)?– (ಎಂದು ಶಬ್ದವು ಹೇಳುತ್ತದೆ) ಎಂದರೆ ಹಾಗಲ್ಲ. ಏಕೆಂದರೆ (ಅದು) ಪ್ರಸಿದ್ಧವಾಗಿರುವದಿಲ್ಲ. ಚೇತನವು ಮತ್ತೊಂದರಿಂದ ಸಿದ್ಧವಾಗಿದ್ದಿದ್ದರೆ ಹೀಗೆ

---

1. ಇಲ್ಲಿಂದ ಮುಂದಕ್ಕೆ ಎಂಟು ಶ್ಲೋಕಗಳ ತಾತ್ಪರ್ಯವನ್ನು ಗೊತ್ತುಪಡಿಸುವದು ಬಹಳ ಕಷ್ಟವಾಗಿರುತ್ತದೆ. ಆತ್ಮಸಿದ್ಧಿಯು ಬರಿಯ ನಿಷೇಧಮುಖಪ್ರಮಾಣದಿಂದಲ್ಲ, ವಿಧಿಮುಖಪ್ರಮಾಣದಿಂದಲೂ ಸಿದ್ಧವಾಗುತ್ತದೆ – ಎಂದು ಈ ಪ್ರಕರಣದಲ್ಲಿ ಹೇಳಿದೆ ಎಂತ ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಇದು ಗೀ. ಭಾ. ೭-೧೮,೧೬-೧೭, ಬೃ. ೨-೪-೬, ೪-೪-೨೦, ಮಾಂ. ಕಾ. ಭಾ. ೨-೪೨, ಸೂ. ಭಾ. ೧-೧-೪ ಮುಂತಾವ ಭಾಷ್ಯಗಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ಅಭಾಸವನ್ನೊಪ್ಪಿದರೆ ಸಾಕ್ಷಚ್ಚೈತನ್ಯವನ್ನು ತಿಳಿಸುವದಕ್ಕೆ ಇರುವ ಸೌಕರ್ಯವನ್ನು ತಿಳಿಸುವದಕ್ಕೆ ಈ ಪ್ರಕರಣವು ಬಂದಿದೆ ಎಂದು ನಾವು ವಿವರಿಸಿರುತ್ತೇವೆ.

2. ಪ್ರಮಾಣದಿಂದಲೇ ಗುರುವು ತಿಳಿಸಿಕೊಡುತ್ತಾನೆ; ಶಬ್ದವೇ ಪ್ರಮಾಣವು; ಶಬ್ದವು ವೇಪಾದಿಗಳು ನೀನಲ್ಲ ಎಂದೇ ತಿಳಿಸಿಕೊಡುತ್ತದೆ – ಎಂದರೆ ಬರಿಯ ನಿಷೇಧವು ಶೂನ್ಯದಲ್ಲಿಯೂ ಪರ್ಯವಸಾನವಾಗಬಹುದು – ಎಂದು ಅಭಿಪ್ರಾಯ.

3. 'ಅನ್ಯತಾಸಿದ್ಧೌ' ಎಂದು **ಬೋಧನಿಧಿಯ** ಪಾಠ. ಅಚ್ಚಿನ ಮೈ॥ ಪಾಠದಲ್ಲಿ **'ಅನ್ಯತಃ'** ಎಂದಿನೆ; ಆದರೆ ವ್ಯಾಖ್ಯಾನಕಾರನು ಯಾವ ಪಾಠವನ್ನು ಅನುಸರಿಸುತಾನೆಂಬುದು ಸ್ಪಷ್ಟವಾಗುವದಿಲ್ಲ. ನಾವು 'ಮತ್ತೊಂದು ಪ್ರಮಾಣದಿಂದ' ಎಂಬರ್ಥದಲ್ಲಿ **'ಅನ್ಯತಃ'** ಪ್ರಯೋಗವಾಗಿದೆ ಎಂದು ಹಿಡಿದಿದೇವೆ.

4 'ಅನ್ಯಸ್ಯ' ಎಂಬ ಮೈ॥ ಪಾಠಕ್ಕಿಂತ ಈ **ಬೋಧನಿಧಿಯ** ಪಾಠವೇ ಮೇಲು.

ಮಟ್ಟೊಂದರ ನಿವೃತ್ತಿಯಿಂದ (ಆತ್ಮನನ್ನು ತಿಳಿಸುವದು) ಆಗುತ್ತಿತ್ತು.[1]

(ಪೂರ್ವಪಕ್ಷಿ): ಚೇತನನೆಂಬುದು ಅಪರೋಕ್ಷವಾಗಿರುವದರಿಂದ ಸಾಕ್ಷಿಯು ತಾನೇ ಇದ್ದುಕೊಂಡಿದೆಯಲ್ಲ! (ಸಿದ್ಧಾಂತಿ): ಅಸತ್ತ್ವವಾದಿಯಿಂದಲೂ ಅಜ್ಞನಿಗೆ[2] ಇದಕ್ಕೆ ಸಮಾನವಾದ ಉಪದೇಶವು ಹೀಗೆಯೇ ಆಗಬಹುದು.[3]

ಅಹಮುಜ್ಜಾಸಿಷಂ ಚೇದಮಿತಿ ಲೋಕಸ್ಮೃತೇರಿಹ ।
ಕರಣಂ ಕರ್ಮ ಕರ್ತಾ ಚ ಸಿದ್ಧಾಸ್ತ್ವೇಕಕ್ಷಣೇ ಕಿಲ ॥ ೧೨೫ ॥
ಪ್ರಾಮಾಣ್ಯೇಽಪಿ ಸ್ಮೃತೇಃ ಶೈಘ್ರ್ಯಾದ್ಯೌಗಪದ್ಯಂ ವಿಭಾವ್ಯತೇ ।
ಕ್ರಮೇಣ ಗ್ರಹಣಂ ಪೂರ್ವಂ ಸ್ಮೃತಿಃ ಪಶ್ಚಾತ್ ತಥೈವ ಚ ॥ ೧೨೬ ॥

೧೨೫-೧೨೬. 'ನಾನು ಇದನ್ನು ಅರಿತೆನು' ಎಂದು ಜನಕ್ಕೆ ಆಗುವ ಸ್ಮೃತಿಯ (ಬಲ)ದಿಂದ ಕರಣ, ಕರ್ಮ, ಕರ್ತೃ –(ಇವು ಮೂರೂ) ಒಂದೇ ಕ್ಷಣದಲ್ಲಿ ಸಿದ್ಧವಾಗುವವು (ಎಂದು ಪೂರ್ವಪಕ್ಷದವರ ಅಭಿಪ್ರಾಯ)ವಂತೆ.[4] (ಆದರೆ) ಸ್ಮೃತಿಯು ಪ್ರಮಾಣವೆಂದು (ಒಪ್ಪಿದರೂ) ಶೀಘ್ರವಾಗಿ ಆಗುವದರಿಂದ ಒಂದೇ ಕಾಲದಲ್ಲಿ ಇವು ಆಗುವನೆಂದು ತೋರುವದೇ (ಹೊರತು ನಿಜವಾಗಿ ಒಂದು

---

1. ಚೇತನವು ಬೇರೆ, ಅಚೇತನವು ಬೇರೆ –ಎಂದೂ ಚೇತನತ್ವವೂ ಅಚೇತನತ್ವವೂ ಒಂದಕ್ಕೊಂದು ವಿಲಕ್ಷಣವಾಗಿರುವವು ಅಥವಾ ವಿರುದ್ಧಸ್ವಭಾವದವಾಗಿರುವವು ಎಂದೂ ಬೇರೆ ಪ್ರಮಾಣದಿಂದ ಸಿದ್ಧವಾಗಿಲ್ಲ – ಎಂದರ್ಥ. ಉಪ. ಗದ್ಯ. ೪೦೨ ೯೯ನ್ನು ನೋಡಿ. 'ನಾನು ಅರಿಯುತ್ತೇನೆ' ಎಂಬ ವ್ಯವಹಾರದ ಬಲದಿಂದ ಅಂತಃಕರಣವನ್ನೇ ಅಜ್ಞನು ನಾನು ಎಂದು ತಿಳಿದುಕೊಳ್ಳುವನೆಂಬುದು ಸ್ವಾಭಾವಿಕವಾಗಿದೆ. ಸಿದ್ಧಾಂತದಲ್ಲಿ ಆಭಾಸವನ್ನು ಒಪ್ಪಿರುವದರಿಂದ, ಅಜ್ಞನು ಆಭಾಸವಿಶಿಷ್ಟವಾದ ಅಹಂಕಾರವನ್ನೇ ತಾನೆಂದು ತಿಳಿದುಕೊಂಡಿರುವದರಿಂದ ಅವಸ್ಥಾತ್ರಯವಿಚಾರದಿಂದ ಆತ್ಮನನ್ನು ವಿಂಗಡಿಸಿಕೊಟ್ಟು 'ಇತರ ಆಭಾಸವು ಅಹಂಕಾರದಲ್ಲಿ ತೋರುವಮೋ ಅವೇ ನೀನು' ಎಂದು ಉಪದೇಶಿಸಬಹುದಾಗಿದೆ – ಎಂದು ಭಾವ.

2. ಸಾಕ್ಷಿಯು ಸ್ವತಃಸಿದ್ಧನೆಂದು ಅರಿತುಕೊಂಡಿರುವನನು ಅಹಂಕಾರಾದಿಗಳನ್ನು ತಾನೆಂದು ಭ್ರಮಿಸುವದಿಲ್ಲವಾದ್ದರಿಂದ ಅವನು ಅಜ್ಞನಾಗಲಾರನು. ಆದ್ದರಿಂದ ಪ್ರಕೃತ ಸಂದರ್ಭಕ್ಕೆ ಸ್ವತಃಸಿದ್ಧತ್ವವಾದವನ್ನು ಉಪಯೋಗಿಸುವ ಹಾಗಿಲ್ಲ –ಎಂದು ಭಾವ.

3. ಶೂನ್ಯವಾದಿಯು ಶೂನ್ಯವೂ ಪ್ರಮಾಣವನ್ನು ಬಯಸದೆ ತಾನೇ ಸಿದ್ಧವಾಗಿದೆ ಎಂದು ಅಜ್ಞನಿಗೆ ಬೋಧಿಸಬಹುದು.

4. 'ನಾನು ಇದನ್ನು ಅರಿತೆನು' ಎಂಬ ನೆನಪು ನನಗೆ ಆಗುತ್ತದೆಯಷ್ಟೆ; ಇಲ್ಲಿ ಕರ್ತೃ, ಕರ್ಮ, ಕರಣ – ಈ ಮೂರೂ ಒಂದೇ ಕಾಲದಲ್ಲಿ ತೋರುತ್ತವೆ. ಆದ್ದರಿಂದ ಅನುಭವದಲ್ಲಿಯೂ ಇದಕ್ಕೆ ಅನುಗುಣವಾಗಿ ಮೂರೂ ಒಂದೇ ಕಾಲದಲ್ಲಿ ತೋರಿರಬೇಕು. ಆದ್ದರಿಂದ ಈ ಮೂರನ್ನೂ ಒಂದೇ ಕಾಲದಲ್ಲಿ ಅನುಭವಿಸುವವನೇ ಆತ್ಮನು –ಎಂದು ಸಾಕ್ಷಿಯನ್ನು ಸ್ಮೃತಿಪ್ರಮಾಣದಿಂದ ಸಾಧಿಸಬಹುದು ಎಂದು ಪೂರ್ವಪಕ್ಷಿಯ ಆಶಯ.

ಕಾಲದಲ್ಲಿ ಇವು ಆಗುವದಿಲ್ಲ. ಏಕೆಂದರೆ) ಮೊದಲು ಅನುಭವವೂ ಮತ್ತು ಆ ಮೇಲೆ ಸ್ಮೃತಿಯೂ ಕ್ರಮವಾಗಿಯೇ (ಆಗುತ್ತವೆ).[1]

ಅಜ್ಞಾಸಿಷಮಿದಂ ಮಾಂ ಚೇತ್ಯಪೇಕ್ಷಾ ಜಾಯತೇ ಧ್ರುವಮ್ |
ವಿಶೇಷೋಽಪೇಕ್ಷ್ಯತೇ ಯತ್ರ ತತ್ರ ನೈವೈಕಕಾಲತಾ ||೧೨೭||
ಆತ್ಮನೋ ಗ್ರಹಣೇ ಚಾಪಿತ್ರ ಯಾಣಾಮಿಹ ಸಂಭವಾತ್ |
ಆತ್ಮನ್ಯಾಸಕ್ತಕರ್ತೃತ್ವಂ ನ ಸ್ಯಾತ್ಕರಣಕರ್ಮಣೋಃ ||೧೨೮||

೧೨೭-೧೨೮. 'ಇದನ್ನೂ ನನ್ನನ್ನೂ ಅರಿತುಕೊಂಡೆನು' ಎಂದು ಅನನ್ಯನಾಗಿ (ವಿಶೇಷದ) ಅಪೇಕ್ಷೆಯುಂಟಾಗುತ್ತದೆ. ಎಲ್ಲಿ ವಿಶೇಷದ ಅಪೇಕ್ಷೆಯಿರುವದೋ ಅಲ್ಲಿ ಏಕಕಾಲತ್ವವು ಇರುವದೇ ಇಲ್ಲ.[2] ಆತ್ಮನನ್ನು ಅರಿಯುವದಕ್ಕೂ (ಈ) ಮೂರೂ ಇಲ್ಲಿ ಸಂಭವಿಸುವದರಿಂದ[3] (ಇದು ಸರಿಯಲ್ಲ). ಆತ್ಮನ(ನ್ನರಿಯುವದರ)ಲ್ಲಿ ತೊಡಗಿರುವ ಕರ್ತೃತ್ವವು ಕರಣಕರ್ಮಗಳಲ್ಲಿ ಇಲ್ಲದೆ ಹೋಗುವದು.[4]

ವ್ಯಾಪ್ತುಮಿಷ್ಟಂ ಚ ಯತ್ಕರ್ಮಃ ಕ್ರಿಯಯಾ ಕರ್ಮ ತತ್ ಸ್ಮೃತಮ್|
ಅತೋ ಹಿ ಕರ್ತೃತನ್ತ್ರತ್ವಂ[5] ತಸ್ಯೇಷ್ಟಂ ನಾನ್ಯತೇನ್ದ್ರಿಯಾ ||೧೨೯||

---

1. ಸ್ಮೃತಿಯು ಅನುವಾದಮಾತ್ರವಾದ್ದರಿಂದ ಪ್ರಮಾಣವಲ್ಲ. ಒಂದು ವೇಳೆ ಪ್ರಮಾಣವೆಂದು ಒಪ್ಪಿದರೂ ಒಂದೇ ಕಾಲದಲ್ಲಿ ಸ್ಮರಣೆಯಾಗುವನೆಂಬುದೂ ಸರಿಯಲ್ಲ. ಕರ್ತೃವು ಒಳಗೆ, ಕರ್ಮವು ಹೊರಗೆ; ಎರಡನ್ನೂ ಏಕಕಾಲಕ್ಕೆ ಆಲಿಯುವದು ಹೇಗೆ? ಸ್ಮರಣೆಯು ತಾನೆ ಏಕಕಾಲಕ್ಕೆ ಹೇಗಾದೀತು? ಆದ್ದರಿಂದ ಕ್ರಮವಾಗಿ ಆಗುವ ಎರಡು ಅನುಭವಗಳನ್ನೇ ಒಂದೇ ಕಾಲದಲ್ಲಿ ಆಗುವವೆಂದು ಪೂರ್ವಪಕ್ಷಿಯು ಭ್ರಮಿಸಿರುತ್ತಾನೆ ಎನ್ನಬೇಕಾಯಿತು.

2. ಒಂದೇ ಕಾಲದಲ್ಲಿ ಕರ್ತೃ, ಕರಣ, ಕರ್ಮ- ಮೂರನ್ನೂ ಅರಿಯುವದಾದರೆ ಇವನ್ನು ಅರಿತುಕೊಂಡೆನು, ನನ್ನನ್ನು ಅರಿತುಕೊಂಡೆನು- ಎಂದು ವಿಶೇಷವಾಗಿಯೂ ಅರಿಯಬಹುದಾಗುವದು. ಹೀಗೆ ವಿಶೇಷದ ಆಕಾಂಕ್ಷೆಯಿದ್ದರೆ ಇವುಗಳ ಅನುಭವಕ್ಕೆ ಒಂದೇ ಕಾಲವು ಹೇಗಾದೀತು? ಒಂದೇ ಕಾಲದಲ್ಲಿ ಅನುಭವದಾದದ್ದನ್ನು ಹೀಗೆ ಬಿಡಿಸಿ ಬಿಡಿಸಿ ನೆನಪಿಗೆ ತಂದುಕೊಳ್ಳುವದು ಹೇಗೆತಾನೆ ಸಾಧ್ಯ?

3. ತನ್ನನ್ನೇ ಅರಿಯುವಾಗಲೂ ಕರ್ತೃ, ಕರಣ, ಕರ್ಮ- ಈ ಮೂರನ್ನೂ ಅರಿಯಬೇಕಾಗುವದು. ಹೀಗೆಯೇ ಕರಣವನ್ನು ಅರಿಯುವಾಗಲೂ ಕರ್ಮವನ್ನರಿಯುವಾಗಲೂ ಮೂರೂ ಆಗಬಹುದಾಗುವದು. ಇದೂ ಅನಿಷ್ಟವು. ಆದ್ದರಿಂದ ಏಕಕಾಲದ ಸ್ಮರಣೆಯಿಲ್ಲ.

4. ತನ್ನನ್ನರಿಯುವದಕ್ಕೆ ವ್ಯಾಪಾರಮಾಡುವಾಗಲೇ ಕರಣವನ್ನಾಗಲಿ ಕರ್ಮವನ್ನಾಗಲಿ ಅರಿಯುವದಕ್ಕೆ ಹೇಗೆ ವ್ಯಾಪಾರಮಾಡುವದು? ಇದೂ ಅನುಭವವಿರುದ್ಧ.

5. 'ಕರ್ಮಕರ್ತೃತ್ವಂ' ಎಂಬ ಬೋಧನಿಧಿಯ ಪಾಠಕ್ಕಿಂತ ಇದೇ ಮೇಲು.

೧೭೯. ಕರ್ತೃವು ಕ್ರಿಯೆಯಿಂದ ಯಾವದನ್ನು ಪಡೆಯಲಿಚ್ಛಿಸುವನೋ ಅದು ಕರ್ಮವು ಎಂದು ಸ್ಮೃತಿಯಿರುವದು.[1] ಆದ್ದರಿಂದ ಅದು ಕರ್ತೃವಿಗೆ ಅಧೀನವಾಗಿರುವದೇ ಹೊರತು ಮತ್ತೊಂದಕ್ಕೆ ಅಧೀನವಾಗಿರುವದೆಂಬುದು ಇಷ್ಟವಲ್ಲ.[2]

ಶಬ್ದಾದ್ವಾನುಮಿತೇರ್ವಾಪಿ ಪ್ರಮಾಣಾದ್ವಾ ತತೋಽನ್ಯತಃ |
ಸಿದ್ಧಿಃ ಸರ್ವಪದಾರ್ಥಾನಾಂ ನ್ಯಾಯಜ್ಞಂ ಪ್ರತಿ ನಾನ್ಯಥಾ ॥ ೧೩೦ ॥
ಅಧ್ಯಕ್ಷಸ್ಯಾಪಿ ಸಿದ್ಧಿಃ ಸ್ಯಾತ್ ಪ್ರಮಾಣೇನ ವಿನೈವ ವಾ |
ವಿನಾ ಸ್ವಸ್ಯ ಪ್ರಸಿದ್ಧಿಸ್ತು ನಾಜ್ಞಂ ಪ್ರತ್ಯುಪಯುಜ್ಯತೇ ॥ ೧೩೧ ॥

೧೩೦-೧೩೧. ಆದ್ದರಿಂದ ಅಜ್ಞನಿಗೆ ಯಾವ ಪದಾರ್ಥಗಳ ಸಿದ್ಧಿಯೇ ಆಗಲಿ, ಶಬ್ದದಿಂದ, ಅನುಮಾನದಿಂದ, ಅಥವಾ ಮತ್ತೊಂದು ಪ್ರಮಾಣದಿಂದಲೇ ಆಗಬೇಕು, ಬೇರೆಯ ರೀತಿಯಿಂದ ಆಗಲಾರದು.[3] ಸಾಕ್ಷಿಯ ಸಿದ್ಧಿಯೂ ಪ್ರಮಾಣದಿಂದ ಅಥವಾ ಪ್ರಮಾಣವಿಲ್ಲದೆಯೇ ಆಗಬೇಕಷ್ಟೆ.[4] ಆದರೆ ಪ್ರಮಾಣವಿಲ್ಲದೆ (ಆಗುವ) ಆತ್ಮಸಿದ್ಧಿಯು ಅಜ್ಞನಿಗೆ ಉಪಯೋಗವಾಗುವದಿಲ್ಲ.[5]

ತಸ್ಯೈವಾಜ್ಞತ್ವಮಿಷ್ಟಂ ಚೇಜ್ಜಾಜ್ಞತತ್ವೇಽನ್ಯಾ[6] ಮತಿರ್ಭವೇತ್ |
ಅನ್ಯಸ್ಯೈವಾಜ್ಞತಾಯಾಂ ಚ ತದ್ವಿಜ್ಞಾನೇ ಧ್ರುವಾ ಭವೇತ್ ॥೧೩೨॥

೧೩೨. ಅವನೇ ಅಜ್ಞನೆಂದು ಇಟ್ಟುಕೊಂಡರೆ[7] ಅವನು ಜ್ಞಾನನಾಗುವದಕ್ಕೆ ಮತ್ತೊಂದು ಜ್ಞಾನವು ಬೇಕಾಗುವದು. ಮತ್ತೊಬ್ಬನು ಅಜ್ಞನೆಂದಾ

---

1. ಪಾಣಿನಿ ೧-೪-೪೯ 'ಕರ್ತುರೀಪ್ಸಿತತಮಂ ಕರ್ಮ' ಎಂಬ ಸೂತ್ರದಲ್ಲಿ ಹೀಗೆಂದಿದೆ.

2. ಸಾಕ್ಷಿಗೆ ಅಧೀನವೆನ್ನುವದಕ್ಕೆ ಪ್ರಮಾಣವಿಲ್ಲ; ಏಕೆಂದರೆ ಸಾಕ್ಷಿಗೆ ಕರ್ತೃತ್ವವಿಲ್ಲ. ಆದ್ದರಿಂದ 'ನಾನು ಇದನ್ನು ಆರಿತೆನು' ಎಂಬ ಸ್ಮೃತಿಯ ಬಲದಿಂದ ಸಾಕ್ಷಿಯನ್ನು ಸಾಧಿಸುವದಕ್ಕೆ ಆಗುವದಿಲ್ಲ ಎಂದು ಇಲ್ಲಿಗೆ ಉಪಸಂಹಾರಮಾಡಿಕೊಳ್ಳಬೇಕು.

3. ಸುಮ್ಮನೆ ಇದಲ್ಲವೆಂದು ಅಲ್ಲಗಳೆಯುವದರಿಂದ ಸಿದ್ಧಿಯಾಗಲಾರದು. ಏಕೆಂದರೆ ಅಜ್ಞಾನವು ಪ್ರಮಾಣದಿಂದಲೇ ಹೋಗಬೇಕಾಗಿರುತ್ತದೆ.

4. 'ತತ್ತ್ವಮಸಿ' ಎಂಬ ಶಬ್ದಪ್ರಮಾಣದಿಂದ, ಅಥವಾ ಪ್ರಮಾಣವಿಲ್ಲದೆ ಸ್ವತಃ ಸಿದ್ಧನೆಂಬ ಕಾರಣದಿಂದ.

5. ಏಕೆಂದರೆ ಅಜ್ಞನು ತಾನು ಪ್ರಮಾತೃವೆಂದೇ ತಿಳಿದುಕೊಂಡಿರುತ್ತಾನಾಗಿ ಅವನಿಗೆ ಪ್ರಮಾಣವೇ ಬೇಕು.

6. 'ಜ್ಞಾನತ್ವೇ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೆ ಮೇಲು.

7. ಸಾಕ್ಷಿಯೇ ಅಜ್ಞನೆಂದರೆ ಎಂದರ್ಥ. ಸಾಕ್ಷಿಯೇ ಶ್ರೋತೃವೆಂದು ೧೩೮ರಲ್ಲಿ ಹೇಳಿರುವ ನ್ಯಾಯದಿಂದ ಸಾಕ್ಷಿಯೇ ಅಜ್ಞನೆಂಬ ವ್ಯವಹಾರಕ್ಕೆ ವಿಷಯನೆಂದೇ ಹೇಳಬೇಕಾಗುತ್ತದೆ ಎಂಬುದನ್ನು ಇಲ್ಲಿ ನೆನಪಿಡಬೇಕು.

ದರೂ ಅವನನ್ನು ಅರಿಯುವದಕ್ಕೆ[1] ಮತ್ತೊಂದು ಜ್ಞಾನವು ಅವಶ್ಯವಾಗಿ ಬೇಕಾಗುವದು.

ಜ್ಞಾತತಾ ಸ್ವಾತ್ಮಲಾಭೋ ವಾ ಸಿದ್ಧಿಃ ಸ್ಯಾದನ್ಯದೇವ ವಾ ।
ಜ್ಞಾತತ್ವೇಽನನ್ತರೋಕ್ತೌ ತ್ವಂ ಪಕ್ಷೌ ಸಂಸ್ಮರ್ತುಮರ್ಹಸಿ ॥ ೧೩೩ ॥
ಸಿದ್ಧಿಃ ಸ್ಯಾತ್ ಸ್ವಾತ್ಮಲಾಭಶ್ಚೇದ್ಯತ್ನಸ್ತತ್ರ ನಿರರ್ಥಕಃ ।
ಸರ್ವಲೋಕಪ್ರಸಿದ್ಧತ್ವಾತ್ ಸ್ವಹೇತುಭ್ಯಸ್ತು ವಸ್ತುನಃ ॥ ೧೩೪ ॥
ಜ್ಞಾನಜ್ಞೇಯಾದಿವಾದೇಽತಃ ಸಿದ್ಧಿಜ್ಞಾತತ್ವಮುಚ್ಯತೇ ।
ಅಧ್ಯಕ್ಷಾಧ್ಯಕ್ಷ್ಯಯೋಃ ಸಿದ್ಧಿಜ್ಞೇಯತ್ವಂ ನಾತ್ಮಲಾಭತಾ ॥ ೧೩೫ ॥

೧೩೩–೧೩೫. ಜ್ಞಾತವಾಗುವದೇ ಸಿದ್ಧಿಯೊ, ಹುಟ್ಟುವದೇ ಸಿದ್ಧಿಯೊ" ಇನ್ನುಬೇರೆ ಯಾವದಾದರೂ ಒಂದೊ? ಜ್ಞಾತವಾಗುವದೇ ಎಂದರೆ ಹಿಂದೆ ಹೇಳಿದ ಎರಡು ಪಕ್ಷಗಳನ್ನು ನೀನು ನೆನಪಿಸಿಕೊಳ್ಳಬೇಕು.[2] ಹುಟ್ಟುವದೇ ಸಿದ್ಧಿಯಾದರೆ ಅದಕ್ಕಾಗಿ ಯತ್ನವನ್ನು ಮಾಡುವದು ವ್ಯರ್ಥವು; ಏಕೆಂದರೆ ಆಯಾ ಹೇತುಗಳಿಂದ ವಸ್ತು ಹುಟ್ಟುವದೆಂಬುದು ಎಲ್ಲ ಜನರಿಗೂ ತಿಳಿದೇ ಇದೆ. ಆದ್ದರಿಂದ ಜ್ಞಾನ, ಜ್ಞೇಯ – ಮುಂತಾದವರ ವಿಚಾರದಲ್ಲಿ ಜ್ಞಾತತ್ವವೇ ಸಿದ್ಧಿಯೆನಿಸುತ್ತದೆ.[3] ಸಾಕ್ಷಿಯೂ ಸಾಕ್ಷ್ಯವೂ ಸಿದ್ಧಿಯಾಗುವದೆಂದರೆ ತಿಳಿಯ ಬರುವದೇ ಹೊರತು ಹುಟ್ಟುವದಲ್ಲ.[4]

ಸ್ಪಷ್ಟತ್ವಂ ಕರ್ಮಕರ್ತ್ರಾದೇಃ ಸಿದ್ಧಿತಾ ಯದಿ ಕಲ್ಪ್ಯತೇ ।
ಸ್ಪಷ್ಟತಾಸ್ಪಷ್ಟತೇ ಸ್ಯಾತಾಮನ್ಯಸ್ಯೈವ ನ ಚಾತ್ಮನಃ ॥ ೧೩೬ ॥

---

1. ಸಾಕ್ಷಿಯನ್ನು ಅರಿಯುವದಕ್ಕೆ ಎಂದರ್ಥ. ಪ್ರಮಾಣದ ಹಂಗಿಲ್ಲದೆ ಅಜ್ಞಾನಿಗೆ ಬೋಧೆಯನ್ನು ಮಾಡುವದಕ್ಕೆ ಆಗಲಾರದು; ಆದ್ದರಿಂದ ಶಬ್ದಪ್ರಮಾಣವು ಆಭಾಸದ ಮೂಲಕ ಚೈತನ್ಯವನ್ನು ತಿಳಿಸುತ್ತದೆ ಎಂಬುದೇ ಸಿದ್ಧಾಂತವು ಎಂಬ ಉಪಸಂಹಾರ.

2. ಜ್ಞಾತವಾಗುವದೇ ಸಿದ್ಧಿಯೆಂದೊಪ್ಪಿದರೆ ಆದಕ್ಕೆ ಪ್ರಮಾಣವು ಬೇಕೆಂಬುದನ್ನು ಹಿಂದೆ ೧೩೦ರಿಂದ ೧೩೨ನೆಯ ಶ್ಲೋಕದಲ್ಲಿ ತೋರಿಸಿಯೇ ಇದೆ.

3. ಗಡಿಗೆಯು ಸಿದ್ಧವಾಯಿತು ಎಂದರೆ ಹುಟ್ಟಿತು ಎಂದರ್ಥ; ಈ ಅರ್ಥದ ಸಿದ್ಧಿಗೆ ಕುಂಬಾರ, ಮಣ್ಣು, ದಂಡ ಮುಂತಾದ ಹೇತುಗಳು ಬೇಕು. ಆದರೆ ಸಾಕ್ಷಿಯ ಸಿದ್ಧಿ ಹೇಗಾಗುತ್ತದೆ? –ಎಂಬ ಪ್ರಶ್ನೆಗೆ ಆದು ತಾನೇ ಸಿದ್ಧವಾಗಿದೆ, ಉಂಟಾಗಬೇಕಾದದ್ದಿಲ್ಲ ಎಂಬ– ಉತ್ತರವು ಸಲ್ಲದು. ಪ್ರಕೃತದಲ್ಲಿ ಆತ್ಮಲಾಭ, ಹುಟ್ಟುವದು– ಎಂಬ ಸಿದ್ಧಿಯ ವಿಚಾರವಿಲ್ಲ.

4. ಸಾಕ್ಷಿಯು ಆಜ್ಞಾನಿಗೆ ಜ್ಞೇಯನೇ ಆಗಿರುವದರಿಂದ ಅವನೂ ವೇದಾಂತಪ್ರಮಾಣದಿಂದಲೇ ಸಿದ್ಧವಾಗಬೇಕಾಗಿದೆ.

ಅದ್ರಷ್ಟುರ್ನೈವ ಚಾನ್ಧಸ್ಯ ಸ್ಪಷ್ಟೀಭಾವೋ ಘಟಸ್ಯ ತು ।
ಕರ್ತ್ರಾದೇಃ ಸ್ಪಷ್ಟತೇಷ್ಟಾ ಚೇದ್ದ್ರಷ್ಟೃತಾಧ್ಯಕ್ಷಕರ್ತೃಕಾ ॥ ೧೩೭ ॥

೧೩೬–೧೩೭ ಸಿದ್ಧಿಯಾಗುವದೆಂದರೆ ಸ್ಪಷ್ಟವಾಗುವದು ಎಂದು ಕಲ್ಪಿಸುವದಾದರೆ[1] ಕರ್ಮ, ಕರ್ತೃ – ಮುಂತಾದ ಮತ್ತೊಂದಕ್ಕೆ ಸ್ಪಷ್ಟತೆ, ಅಥವಾ ಅಸ್ಪಷ್ಟತೆ ಆದೀತೇ ಹೊರತು ಆತ್ಮನಿಗೆ ಆಗಲಾರದು.[2] ದ್ರಷ್ಟೃವಲ್ಲದ ಕುರುಡನಿಗೆ ಎಂದಿಗೂ ಗಡಿಗೆಯು ಸ್ಪಷ್ಟವಾಗಲಾರದು.[3] ಕರ್ತೃತ್ವಾದಿಗಳಿಗೆ ಸ್ಪಷ್ಟತ್ವವಾಗಬೇಕಾದರೆ ದ್ರಷ್ಟೃತ್ವವೆಂಬುದು ಸಾಕ್ಷಿಯದಾಗಿರಬೇಕು.[4]

ಕ್ಷಣಿಕವಿಜ್ಞಾನವಾದದಲ್ಲಿ ದೋಷ

ಅನುಭೂತೇಃ ಕಿಮನ್ಯಸ್ಮಿನ್ ಸ್ಯಾತ್ತವಾಪೇಕ್ಷಯಾ ವದ ।
ಅನೂಭವಿತರೀಷ್ಟಾ ಸ್ಯಾತ್ ಸೋಽಪ್ಯನೂಭೂತಿರೇವ ನಃ ॥ ೧೩೮ ॥
"ಅಭಿನ್ನೋಽಪಿ ಹಿ ಬುದ್ಧ್ಯಾತ್ಮಾ ವಿಪರ್ಯಾಸಿತದರ್ಶನೈಃ ।
ಗ್ರಾಹ್ಯಗ್ರಾಹಕಸಂವಿತ್ತಿಭೇದವಾನಿವ ಲಕ್ಷ್ಯತೇ ॥ ೧೩೯ ॥
ಭೂತಿರ್ಯೈಷಾಂ ಕ್ರಿಯಾ ಸೈವ ಕಾರಕಂ ಸೈವ ಚೋಚ್ಯತೇ"[5] ॥೧೩೯ ½

---

1. ಪ್ರಮಾಣನಿಂದ ವಿಷಯದ ಅಸ್ಪಷ್ಟತೆಯು ಹೋಗಿ ಸ್ಪಷ್ಟತೆ ಎಂಬ ಧರ್ಮವು ಆದರಲ್ಲಿ ಉಂಟಾಗುತ್ತದೆ ಎಂಬುದು ಮಿಮಾಂಸಕರ ವಾದವು.

2. ಆತ್ಮನು ಯಾವಾಗಲೂ ಪ್ರಕಾಶಸ್ವರೂಪನು; ಅವನಲ್ಲಿ ಅಸ್ಪಷ್ಟತೆಯೇ ಇಲ್ಲ.

3. ಇದರಂತೆ ಅಚೇತನವಾದ ಅಹಂಕಾರ, ಪ್ರತ್ಯಯಗಳು – ಇವುಗಳಿಗೆ ಯಾವದೂ ಸ್ಪಷ್ಟ ಅಥವಾ ಅಸ್ಪಷ್ಟವಾಗಲಾರದು ಎಂದು ಭಾವ.

4. ಸಾಕ್ಷಿಯಲ್ಲಿ ದ್ರಷ್ಟೃತ್ವವು ಸ್ವಾಭಾವಿಕವಾದರೆ ಅದರ ಆಭಾಸದ ನೆರವಿನಿಂದ ವಿಷಯದ ಸ್ಪಷ್ಟತೆ ಅಥವಾ ಅಸ್ಪಷ್ಟತೆ ಆಗಬಹುದು ಎಂದು ಅಭಿಪ್ರಾಯ.

5. ಇವು ಧರ್ಮಕೀರ್ತಿಯ ವಾಕ್ಯಗಳು. ಈ ಶ್ಲೋಕವೂ ಶ್ಲೋಕಾರ್ಧವೂ ಮೂಲದಲ್ಲಿದ್ದವೋ ಇಲ್ಲವೋ ಹೇಳಲಾಗುವದಿಲ್ಲ. ಮೊದಲನೆಯ ಶ್ಲೋಕವನ್ನು **ಬೋಧನಿಧಿಯ ವ್ಯಾಖ್ಯಾನ**ದೊಳಗೆ ಸೇರಿಸಿಕೊಂಡಿದೆ; ಆಲ್ಲಿ ಮೂಲಗ್ರಂಥಕ್ಕೆ ಇದನ್ನು ಸೇರಿಸಿಲ್ಲ. ಎರಡನೆಯ ಶ್ಲೋಕಾರ್ಧವು ಆ ವ್ಯಾಖ್ಯಾನದಲ್ಲಿ ಇಲ್ಲವೇ ಇಲ್ಲ. ಅವರ ಪೂರ್ವಾರ್ಧವು ಹೀಗಿದೆ: "ಕ್ಷಣಿಕಾಃ ಸರ್ವಸಂಸ್ಕಾರಾ ಅಸ್ಥಿರಾಣಾಂ ಕುತಃ ಕ್ರಿಯಾಃ" ॥ 'ಭೂತಿರ್ಯೈಷಾಮ್' ಎಂಬಲ್ಲಿ ಏಷಾಮ್ (ಇವುಗಳ) ಎಂಬ ಮಾತು ಸಂಸ್ಕಾರಗಳನ್ನು ಪರಾಮರ್ಶಿಸುತ್ತದೆ. ಇದನ್ನು ಮನಸ್ಸಿಗೆ ತಾರದೆ ವ್ಯಾಖ್ಯಾನಕಾರನು 'ಭೂತಿರ್ಯೇಷಾಮ್' ಎಂಬ ಪಾಠವನ್ನು ಇಟ್ಟುಕೊಂಡಿರುತ್ತಾನೆಂದು ತೋರುತ್ತದೆ.

೧೩೮-೧೪೦. (ವಿಜ್ಞಾನವಾದಿ):- ಅನುಭವಕ್ಕೆ ಮತ್ತೊಂದರ ಅಪೇಕ್ಷೆಯಿಂದ ನಿನಗೆ ಆಗಬೇಕಾದದ್ದೇನು? ಹೇಳು. ಅನುಭವಿಸುವವನ ಅಪೇಕ್ಷೆಯಿರಬೇಕು ಎಂದರೆ ಅದೂ ನಮ್ಮ (ಮತದಲ್ಲಿ) ಅನುಭವವೇ.[1] "ಬುದ್ಧ್ಯಾತ್ಮನು ಯಾವ ಭೇದವೂ ಇಲ್ಲದವನಾದರೂ ಮಿಥ್ಯಾದೃಷ್ಟಿಯವರಿಗೆ ಗ್ರಾಹ್ಯ, ಗ್ರಾಹಕ, ಸಂವಿತ್ತಿ – ಎಂಬ ಭೇದವುಳ್ಳವನಂತೆ ಕಾಣುತ್ತಾನೆ.[2] ಇವುಗಳ ಅನುಭವವಿವೆಯಲ್ಲ, ಅದೇ ಕ್ರಿಯೆ, ಅದೇ ಕಾರಣವೆನಿಸುತ್ತದೆ."[3]

ಸತ್ತ್ವಂ ನಾಶಿತ್ವಮಸ್ಯಾಶ್ಚೇತ್ ಸಕರ್ತೃತ್ವಂ ತಥೇಷ್ಯತಾಮ್ |
ನ ಕಶ್ಚಿಚ್ಚೇಷ್ಯತೇ ಧರ್ಮ ಇತಿ ಚೇತ್ ಪಕ್ಷಹಾನತಾ ॥ ೧೪೦ ॥

೧೪೦. (ಸಿದ್ಧಾಂತಿ):- ಇದರ[4] ಸತ್ತ್ವವೆಂಬುದು ನಾಶಿತ್ವವೇ ಆದರೆ[5] ಹಾಗೆಯೇ (ಅದಕ್ಕೆ) ಕರ್ತೃವಿರುವದೆಂಬುದನ್ನೂ ಒಪ್ಪಿರಿ.[6] ಯಾವ ಧರ್ಮವನ್ನೂ ಒಪ್ಪುವದಿಲ್ಲ ಎನ್ನುವದಾದರೆ (ನಿಮ್ಮ) ಪಕ್ಷವನ್ನು ಬಿಟ್ಟಂತಾಗುವದು.[7]

---

1. ಕೆಲವರು ಬೌದ್ಧರು ಕ್ಷಣಿಕಜ್ಞಾನರೂಪವಾದ ಅನುಭವವೇ ಆತ್ಮನೆನ್ನುತ್ತಾರೆ. ಅನುಭವಕ್ಕೆ ಅನುಭವಿಸುವವನೊಬ್ಬನು ಬೇಕಲ್ಲ! -ಎಂದರೆ ಅನುಭವಿಸುವವನು ಎಂಬುದೂ ವಿಜ್ಞಾನವೇ ಎಂದು ಅವರು ಹೇಳುತ್ತಾರೆ.

2. ಕೂಟಸ್ಥಚೈತನ್ಯವೇ ಜ್ಞಾತೃಜ್ಞಾನಜ್ಞೇಯವಾಗಿ ತೋರುವದೆಂದು ವೇದಾಂತಿಗಳು ಹೇಳುವಂತೆಯೇ ಕ್ಷಣಿಕವಿಜ್ಞಾನರೂಪವಾದ ಆತ್ಮನನ್ನೇ ಜ್ಞಾತೃಜ್ಞಾನಜ್ಞೇಯಗಳೆಂದು ಜನರು ವ್ಯವಹರಿಸುತ್ತಾರೆ ಎಂದು ವಿಜ್ಞಾನವಾದಿಗಳೆನ್ನುತ್ತಾರೆ. ಈ ಅರ್ಥಕ್ಕೆ ಧರ್ಮಕೀರ್ತಿಯ ವಾಕ್ಯವನ್ನು ಪ್ರಮಾಣವಾಗಿ ಉದಾಹರಿಸಿದೆ. ಮೂಲಶ್ಲೋಕದ ವಿಷಯಕ್ಕೆ ಅದರ ಟಿಪ್ಪಣಿಯನ್ನು ನೋಡಿ.

3. ಎಲ್ಲಾ ಸಂಸ್ಕಾರಗಳೂ ಕ್ಷಣಿಕವಾಗಿರುವವು; ಅವುಗಳಲ್ಲಿ ಬೇರೆ ಕ್ರಿಯೆಯಿಲ್ಲ, ಅವೇ ಕ್ರಿಯಾಕಾರಕರೂಪವಾಗಿರುತ್ತವೆ -ಎಂಬುದು ವಾಕ್ಯದ ಅರ್ಥ.

4. ವಿಜ್ಞಾನದ.

5. ಕ್ಷಣಿಕವಲ್ಲದ್ದು ಅರ್ಥಕ್ರಿಯೆಯನ್ನುಂಟುಮಾಡಲಾರದಾದ್ದರಿಂದ ಸತ್ತ್ವವೆಂದರೂ ಕ್ಷಣಿಕವೆಂದರೂ ಒಂದೇ; ನಾಶಿತ್ವವೇ ಸತ್ತ್ವವು -ಎಂಬುದು ಕ್ಷಣಿಕವಿಜ್ಞಾನವಾದಿಗಳ ಮತ.

6. ವಿಜ್ಞಾನಕ್ಕೆ ಕ್ಷಣಿಕತ್ವವೆಂಬ ಧರ್ಮದಂತೆ ಸಕರ್ತೃತ್ವವೆಂಬ ಧರ್ಮವನ್ನೂ ಒಪ್ಪಿರಿ, ಎಂದರ್ಥ.

7. ಕ್ಷಣಿಕತ್ವವೂ ಧರ್ಮವಲ್ಲವೆನ್ನುವದಾದರೆ ಎಲ್ಲವೂ ಕ್ಷಣಿಕ ಎಂಬ ಮಾತಿಗೆ ಅರ್ಥವೇನು? ಕ್ಷಣಿಕಸಂಬಂಧವಿಲ್ಲದಿದ್ದರೆ ಕ್ಷಣಿಕತ್ವವಿಲ್ಲವೆಂದಂತಾಗಿ ನಿಮ್ಮ ಪಕ್ಷವೇ ಇಲ್ಲವಾಗುವದು. ಆ ಸಂಬಂಧವಿದೆ ಎಂದರೆ ಕರ್ತೃವಿನ ಸಂಬಂಧವೇತಕ್ಕೆ ಇರಬಾರದು? -ಎಂದು ಆಕ್ಷೇಪ.

ನನ್ವಸ್ತಿತ್ವಾದಯೋ ಧರ್ಮಾ ನಾಸ್ತಿತ್ವಾದಿನಿವೃತ್ತಯಃ ।
ನ ಭೂತೇಸ್ತರ್ಹಿ ನಾಶಿತ್ವಂ ಸ್ವಾಲಕ್ಷಣ್ಯಂ ಮತಂ ಹಿ ತೇ ॥ ೧೪೧ ॥

ಸ್ವಲಕ್ಷಣಾವಧಿರ್ನಾಶೋ ನಾಶೋಽನಾಶನಿವೃತ್ತಿತಾ ।
ಅಗೋರಸತ್ತ್ವಂ ಗೋತ್ವಂ ತೇ ನ ತು ತದ್ಗೋಃ ಸ್ವಲಕ್ಷಣಮ್[1] ॥೧೪೨॥

ಕ್ಷಣವಾಚ್ಯೋಽಪಿ ಯೋಽರ್ಥಃ ಸ್ಯಾತ್ ಸೋಽಸ್ಯನ್ಯಾಭಾವ ಏವ ತೇ॥
ಭೇದಾಭಾವೇಽಪ್ಯಭಾವಸ್ಯ ಭೇದೋ ನಾಮಭಿರಿಷ್ಯತೇ ।
ನಾನುಭೇದ್ಯೈರನೇಕತ್ವಮೇಕಸ್ಯ ಸ್ಯಾತ್ ಕಥಂ ತವ ॥ ೧೪೩ ॥

ಅಪೋಹೋ ಯದಿ ಭಿನ್ನಾನಾಂ ವೃತ್ತಿಸ್ತಸ್ಯ ಕಥಂ ಗವಿ ॥ ೧೪೩ $\frac{1}{2}$ ॥
ನಾಭಾವಾ ಭೇದತಾಃ ಸರ್ವೇ ವಿಶೇಷಾ ವಾ ಕದಾಚನ ।
ನಾನುಜಾತ್ಯಾದಯೋ ಯದ್ವತ್ ಸಂವಿದಸ್ತೇಽವಿಶೇಷತಃ ॥ ೧೪೪ ॥

೧೪೧–೧೪೪. (ವಿಜ್ಞಾನವಾದಿ) :– ಅಸ್ತಿತ್ವಾದಿಧರ್ಮಗಳೂ ನಾಸ್ತಿತ್ವವೇ ಮುಂತಾದವುಗಳ ಅಭಾವಗಳೇ (ಆಗಿರುತ್ತವಲ್ಲ)![2] (ಸಿದ್ಧಾಂತಿ): ಹಾಗಾದರೆ ಅನುಭವಕ್ಕೆ ನಾಶಿತ್ವವಿಲ್ಲ; ಏಕೆಂದರೆ ನಿಮ್ಮ ಮತದಲ್ಲಿ ಅನುಭವವು ಸ್ವಲಕ್ಷಣವಾಗಿರುತ್ತದೆ.[3] ಸ್ವಲಕ್ಷಣದವರೆಗೆ ನಾಶವಿರುವದು, ನಾಶವೆಂದರೆ ಅನಾಶದ ನಿವೃತ್ತಿಯು,[4] ಅಗೋವಿನ ಅಸತ್ತ್ವವೇ ನಿಮ್ಮ ಮತದಲ್ಲಿ ಗೋತ್ವವು; ಆದರೆ ಅದು ಗೋವಿನ ಸ್ವಲಕ್ಷಣವಲ್ಲ.[5] ಕ್ಷಣವೆಂಬ ಶಬ್ದಕ್ಕೆ ವಾಚ್ಯವಾಗಿರು

---

1. 'ಗೋತ್ವಲಕ್ಷಣಮ್' ಎಂಬ ಮೈ॥ ಪಾಠಕ್ಕಿಂತ ಈ ಬೌಧನಿಧಿಯ ಪಾಠವೇ ಮೇಲು.

2. ಅಸ್ತಿತ್ವವೆಂಬ ಧರ್ಮವಾಗಲಿ ಕ್ಷಣಿಕತ್ವವೆಂಬ ಧರ್ಮವಾಗಲಿ ವಿಜ್ಞಾನಕ್ಕೆ ಇರುವದಿಲ್ಲ. ವಿಜ್ಞಾನವು ಇವೆ ಎಂದರೆ ನಾಸ್ತಿತ್ವದ ಅಭಾವವು ಅವರಲ್ಲಿವೆ ಎಂದು ಅರ್ಥ; ಹೀಗೆಯೇ ಕ್ಷಣಿಕತ್ವವೆಂದರೆ ಅಕ್ಷಣಿಕತ್ವದ ಅಭಾವವು – ಎಂದು ಬೌದ್ಧರು ಹೇಳುವುದುಂಟು; ಇದಕ್ಕೆ 'ಅಪೋಹವಾದ'ವೆಂದು ಹೆಸರು.

3. ನಾಶಿತ್ವವು ಅಥವಾ ಕ್ಷಣಿಕತ್ವವು ವಿಜ್ಞಾನದ ಧರ್ಮವಲ್ಲ. ವಿಜ್ಞಾನವು ಸ್ವಲಕ್ಷಣವು, ತನ್ನ ಸ್ವರೂಪವೇ ಆದ ಲಕ್ಷಣವುಳ್ಳದ್ದು, ಎನ್ನುವವರಿಗೆ ಕ್ಷಣಿಕತ್ವವನ್ನು ಹೇಳುವದಕ್ಕೆ ಬರುವದಿಲ್ಲ.

4. ಸ್ವಲಕ್ಷಣದವರೆಗೆ ಎಲ್ಲವೂ ನಾಶವಾಗುವದು; ಆದರೆ ಸ್ವಲಕ್ಷಣಕ್ಕೆ ನಾಶವಿಲ್ಲ; ನಾಶವೂ ಅನಾಶದ ಅಭಾವವೇ ಆದ್ದರಿಂದ ಅದು ವಿಜ್ಞಾನಕ್ಕೆ ಸೇರಿದ್ದಲ್ಲ.

5. ಗೋತ್ವವು ಅಪೋಹಮಾತ್ರವಾಗಿರುವದರಿಂದ ನೈಶೇಷಿಕರಂತೆ ವಿಜ್ಞಾನವಾದಿಗಳು ಗೋತ್ವಕ್ಕೂ ಗೋವಿಗೂ ಸಂಬಂಧವನ್ನು ಹೇಳುವದಕ್ಕೆ ಆಗುವದಿಲ್ಲ.

ವದೂ ನಿನ್ನ ಮತದಲ್ಲಿ ಮತ್ತೊಂದರ ಅಭಾವವೇ ಆಗಿರುತ್ತದೆ.[1] ಅಭಾವಕ್ಕೆ ಭೇದಗಳಿಲ್ಲದಿದ್ದರೂ ಬೇರೆಬೇರೆಯ ಹೆಸರುಗಳಿಂದ ಅದಕ್ಕೆ ಭೇದವನ್ನು ಒಪ್ಪು ತ್ತೀಯೆ, ಹೆಸರು ಬೇರೆಯಾದರೆ ನಿನ್ನ ಮತದಲ್ಲಿ ಒಂದೇ ಅನೇಕವು ಹೇಗೆತಾನೆ ಆಗುವದು ?[2] ಬೇರೆಬೇರೆಯ ಪದಾರ್ಥಗಳ ಅಪೋಹವಾದರೆ ಅದು ಗೋವಿ ನಲ್ಲಿರುವದು ಹೇಗೆ ?[3] ಯಾವ ಅಭಾವಗಳಾಗಲಿ, ನಾಮ, ಜಾತಿ ಮುಂತಾದ (ಯಾವ) ವಿಶೇಷಗಳಾಗಲಿ ಸಂವಿತ್ತಿಗೆ ಭೇದಕಗಳಲ್ಲ; ಏಕೆಂದರೆ (ಅದು) ನಿನ್ನ (ಮತದಲ್ಲಿ) ನಿರ್ವಿಶೇಷವಾಗಿರುತ್ತದೆ.[4]

ಪ್ರತ್ಯಕ್ಷಾನುಮಾನಂ ವಾ ವ್ಯವಹಾರೇ ಯದಿಚ್ಛಸಿ[5] ।
ಕ್ರಿಯಾಕಾರಕಭೇದೈಸ್ತದಭ್ಯುಪೇಯಂ ಧ್ರುವಂ ಭವೇತ್ ॥ ೧೪೫ ॥
ತಸ್ಮಾನ್ನೀಲಂ ತಥಾ ಪೀತಂ ಘಟಾದಿರ್ವಾ ವಿಶೇಷಣವ್ |
ಸಂವಿದಸ್ತದುಪೇಯಂ ಸ್ಯಾದ್ಯೇನ ಚಾಪ್ಯನುಭೂಯತೇ ॥ ೧೪೬ ॥

೧೪೫–೧೪೬. ಪ್ರತ್ಯಕ್ಷವನ್ನೇ ಆಗಲಿ ಅನುಮಾನವನ್ನೇ ಆಗಲಿ ವ್ಯವಹಾರ ದಲ್ಲಿ ಒಪ್ಪುವೆಯಷ್ಟೆ. ಆದ್ದರಿಂದ ಅದನ್ನು ಕ್ರಿಯೆ, ಕಾರಕ– ಇವುಗಳ ಭೇದ ದೊಡನೆ ಅವಶ್ಯವಾಗಿ ಒಪ್ಪಬೇಕಾಗುವದು.[6] ಆದ್ದರಿಂದ ಕಪ್ಪು, ಪಳದಿ, ಅಥವಾ ಗಡಿಗೆ ಮುಂತಾದ ವಿಶೇಷಣವನ್ನು[7] (ವಿಜ್ಞಾನಕ್ಕೆ) ಒಪ್ಪು

---

1. ಕ್ಷಣಿಕವೆಂದರೆ ಕ್ಷಣವ ಸಂಬಂಧವು; ಆದರೆ ಕ್ಷಣವೆಂದರೂ ಅಪೋಹವಾಗು ವಂತೆ ಆ ಕ್ಷಣದ ಅಭಾವವಾಗಿರುವದರಿಂದ ಆದಕ್ಕೂ ವಿಜ್ಞಾನಸ್ವಲಕ್ಷಣಕ್ಕೂ ಸಂಬಂಧವಿಲ್ಲ.

2. ಒಂದು ಗೋವಿನಲ್ಲಿ ಅನೇಕ ಅಪೋಹಗಳನ್ನು – ಉದಾಹರಣೆಗೆ ಅಶ್ವತ್ವ, ಗರ್ದಭತ್ವ– ಮುಂತಾದವುಗಳನ್ನು– ಒಪ್ಪಿದರೆ ಅಗೋತ್ವದ ಅಪೋಹವೇ ಗೋತ್ವವು ಎಂಬ ಮಾತು ಸುಳ್ಳಾಗುವದು. ಏಕೆಂದರೆ ಅಗೋತ್ವವು ಒಂದಲ್ಲ, ಅದರ ಅಪೋಹವೂ ಒಂದಲ್ಲ.

3. ಗೋತ್ವವೆಂಬುದು ಒಂದೆಂಬುದು ಹೇಗೆ ?

4. ವಿಜ್ಞಾನಸ್ವಲಕ್ಷಣವು ನಿರ್ವಿಶೇಷವಾಗಿರುವದರಿಂದ ಅದರಲ್ಲಿ ನಾಮಜಾತ್ಯಾದಿ ವಿಶೇಷಗಳಿರುವದು ಸಾಧ್ಯವಿಲ್ಲ.

5. 'ಯದೀಚ್ಛಸಿ' ಎಂದು ಬೋಧನಿಧಿಯ ಪಾಠ.

6. ಪ್ರತ್ಯಯವಾಗಲಿ ಅನುಮಾನವಾಗಲಿ ಪ್ರಮಾಣವಾಗಿರುವದರಿಂದ ಪ್ರಮಾತೃ ಪ್ರಮೇಯಗಳನ್ನು ಒಪ್ಪಲೇಬೇಕು. ಏಕೆಂದರೆ ವ್ಯವಹಾರದಲ್ಲಿ ಪ್ರಮಾಣಾದಿಗಳು ಮೂರೂ ಸಿದ್ಧವಾಗಿರುತ್ತವೆ. ವಿಜ್ಞಾನವಾದಿಯು ಪ್ರತ್ಯಕ್ಷಾನುಮಾನಗಳನ್ನು ಒಪ್ಪುತ್ತಾನೆ; ಆದ್ದ ರಿಂದ ಅವನು ಪ್ರಮಾತೃವನ್ನೂ ಒಪ್ಪಬೇಕು, ಪ್ರಮೇಯವನ್ನೂ ಒಪ್ಪಬೇಕು ಎಂದು ಹೇಳಿದೆ.

7. ವಿಷಯವನ್ನು ಎಂದರ್ಥ. ನೀಲಪೀತಾದಿಗಳು ನೀಲಪೀತಾ ವಿಜ್ಞಾನಗಳೇ ಎಂಬ ಸಂಪ್ರದಾಯ ಒಪ್ಪತಕ್ಕದ್ದಲ್ಲವೆಂದು ಭಾವ.

ಬೇಕು.[1] ಮತ್ತು ಯಾವನಿಂದ ಅದು ಅನುಭವಿಸಲ್ಪಡುವುದೋ ಅವನನ್ನೂ ಒಪ್ಪಬೇಕು.[2]

ರೂಪಾದೀನಾಂ ಯಥಾನ್ಯಃ ಸ್ಯಾದ್ ಗ್ರಾಹ್ಯತ್ವಾದ್ಗ್ರಾಹಕಸ್ತಥಾ ।
ಪ್ರತ್ಯಯಸ್ಯ ತಥಾನ್ಯಃ ಸ್ಯಾದ್ವ್ಯಞ್ಜಕತ್ವಾತ್ ಪ್ರದೀಪವತ್ ॥೧೪೭॥

೧೪೭. ರೂಪಾದಿಗಳು ಗ್ರಾಹ್ಯವಾಗಿರುವದರಿಂದ ಹೇಗೆ (ಅವುಗಳ) ಗ್ರಾಹಕವಾದ (ಇಂದ್ರಿಯವು) ಬೇರೆಯಾಗಿರುವದೋ, ಹಾಗೆಯೇ ಪ್ರತ್ಯಯವು ದೀಪದಂತೆ ವ್ಯಂಜಕವಾಗಿರುವದರಿಂದ (ಅದಕ್ಕೆ ಗ್ರಾಹಕನು) ಬೇರೆ ಇರಬೇಕು.[3]

ಸಾಕ್ಷಿಸಾಕ್ಷ್ಯಗಳ ಸಂಬಂಧ

ಅಧ್ಯಕ್ಷಸ್ಯ ದೃಶೇಃ ಕೀದೃಕ್ಸಂಬನ್ಧಃ ಸಂಭವಿಷ್ಯತಿ ।
ಅಧ್ಯಕ್ಷೇಣ ತು ದೃಶ್ಯೇನ ಮುಕ್ತ್ವಾನ್ಯೋ ದ್ರಷ್ಟೃದ್ರಶ್ಯತಾಮ್ ।
ಅಧ್ಯಕ್ಷೇಣ ಕೃತಾ ದೃಷ್ಟಿರ್ದೃಶ್ಯಂ ವ್ಯಾಪ್ನೋತ್ಯಥಾಪಿ ವಾ ।
ನಿತ್ಯಾಧ್ಯಕ್ಷಕೃತಃ ಕಶ್ಚಿದುಪಕಾರೋ ಭವೇದ್ಧಿಯಾಮ್ ॥ ೧೪೯ ॥
ಸ ಚೋಕ್ತಸ್ತನ್ನಿಭತ್ವಂ ಪ್ರಾಕ್ಸಂವ್ಯಾಪ್ತಿಶ್ಚ ಘಟಾದಿಷು ।
ಯಥಾಲೋಕಾದಿಸಂವ್ಯಾಪ್ತಿರ್ವ್ಯಞ್ಜಕತ್ವಾದ್ಧಿಯಸ್ತಥಾ ॥ ೧೫೦ ॥
ಆಲೋಕಸ್ಥೋ ಘಟೋ ಯದ್ವದ್ಬುದ್ಧ್ಯಾರೂಢೋ ಭವೇತ್ ತಥಾ ।
ಧೀವ್ಯಾಪ್ತಿಃ ಸ್ಯಾದ್ ಘಟಾರೋಹೋ ಧಿಯೋ ವ್ಯಾಪ್ತೌ ಕ್ರಮೋ
[ಭವೇತ್ ॥ ೧೫೧ ॥
ಪೂರ್ವಂ ಸ್ಯಾದ್ ಪ್ರತ್ಯಯವ್ಯಾಪ್ತಿಸ್ತತೋಽನುಗ್ರಹ ಆತ್ಮನಃ ।
ಕೃತ್ಸ್ನಾಧ್ಯಕ್ಷಸ್ಯ ನೋ ಯುಕ್ತಃ ಕಾಲಾಕಾಶಾದಿವತ್ ಕ್ರಮಃ ॥೧೫೨॥

---

1. ಇಲ್ಲದಿದ್ದರೆ ಬರಿಯ ವಿಜ್ಞಾನದಲ್ಲಿ ನೀಲಪೀತಾದಿವೈಚಿತ್ರ್ಯಗಳಾಗಲು ಕಾರಣವಿಲ್ಲ.

2. ಜ್ಞಾನಕ್ಕೆ ವಿಷಯವು ಹೇಗೆ ವ್ಯವಹಾರದಲ್ಲಿ ತೋರುತ್ತಿರುವುದೋ ಹಾಗೆಯೇ ಜ್ಞಾತೃವೂ ಒಬ್ಬನು ತೋರುತ್ತಿದಾನೆ. ಆದ್ದರಿಂದ ಜ್ಞಾತೃವನ್ನೂ ಒಪ್ಪಬೇಕು. ವಿಜ್ಞಾನವು ಅನುಭವದಲ್ಲಿ ತೋರುವದರಿಂದ ಒಪ್ಪುತ್ತೇನೆ; ವಿಜ್ಞಾನಕ್ಕಿಂತ ಬೇರೆಯಾಗಿರುವ ವಿಷಯವನ್ನು ಒಪ್ಪುವದಿಲ್ಲ ಎಂಬ ವಾದದ ಖಂಡನೆಯಿದು. ಸೂ. ಭಾ. ೨-೨-೨೮ ನೋಡಿ.

3. ಗ್ರಾಹ್ಯಕ್ಕಿಂತ ಗ್ರಾಹಕವು ಭಿನ್ನವಾಗಿರುವದೆಂಬುದು ರೂಪಾದ್ಯಭ್ಯಾಂತದಿಂದ ಸಿದ್ಧವಾಗುತ್ತದೆ. ಆದ್ದರಿಂದ ವಿಜ್ಞಾನಕ್ಕಿಂತ ಬೇರೆಯಾಗಿ ಸಾಕ್ಷಿಯನ್ನು ಒಪ್ಪಬೇಕು ಎಂದು ಅಭಿಪ್ರಾಯ. ಇದೇ ೧೫೦ನೆಯ ಶ್ಲೋಕದಲ್ಲಿ ಉದಾಹರಿಸಿರುವ ಅನುಮಾನವು.

೧೪೬–೧೫೨. ದೃಗ್ರೂಪನಾದ ಸಾಕ್ಷಿಯಾದವನಿಗೆ ದೃಶ್ಯವಾದ ಸಾಕ್ಷ್ಯದೊಡನೆ ದೃಷ್ಟೃದೃಶ್ಯತ್ವವನ್ನು ಬಿಟ್ಟರೆ ಮತ್ತೆ ಯಾವ ಸಂಬಂಧವಿದ್ದೀತು ?[1] ಸಾಕ್ಷಿಯಾದವನು ಉಂಟುಮಾಡುವ ದೃಷ್ಟಿಯು ದೃಶ್ಯವನ್ನು ವ್ಯಾಪಿಸುತ್ತದೆಯೊ, ಅಥವಾ ನಿತ್ಯನಾದ ಸಾಕ್ಷಿಯಿಂದ ಪ್ರತ್ಯಯಗಳಿಗೆ ಯಾವದಾದರೂ ಉಪಕಾರವಾಗುತ್ತದೆಯೊ ? (ಎಂದು ಕೇಳಿದರೆ) ಆ ಸಂಬಂಧವು ಆ (ಸಾಕ್ಷಿ. ಚೈತನ್ಯವು) ಆಗಿರುವದೇ ಎಂದೂ ಗಡಿಗೆ ಮುಂತಾದವುಗಳಲ್ಲಿ (ಚಿದಾಭಾಸಸಹಿತ) ವ್ಯಾಪಿಸುವದೆಂದೂ ಹಿಂದೆ[2] ಹೇಳಲಾಗಿದೆ. ಗಡಿಗೆಯು ಬೆಳಕಿನಲ್ಲಿರುವದೆಂಬುದು ಹೇಗೋ ಬುದ್ಧಿಯನ್ನು ಏರುವದೂ ಹಾಗೆಯೇ.[3] ಬುದ್ಧಿಯು ವ್ಯಾಪಿಸಿಕೊಳ್ಳುವದೆಂಬುದೇ ಗಡಿಗೆಯು (ಬುದ್ಧಿಯನ್ನು) ಏರಿಕೊಳ್ಳುವದಾಗಿದೆ.[4] ಬುದ್ಧಿಯು ವ್ಯಾಪಿಸಿಕೊಳ್ಳುವಲ್ಲಿ ಕ್ರಮವುಂಟು : ಮೊದಲು ಪ್ರತ್ಯಯವು ವ್ಯಾಪಿಸಿಕೊಳ್ಳುವದು ಆಗುತ್ತದೆ ; ಆಮೇಲೆ ಆತ್ಮನ ಅನುಗ್ರಹವಾಗುತ್ತದೆ.[5] (ಆದರೆ) ಎಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮನಿಗೆ ಕಾಲ, ಆಕಾಶ– ಇವುಗಳಂತೆಯೇ ಕ್ರಮವಿರುವದಿಲ್ಲ.[6]

---

1. ಮತ್ತೆ ಯಾವ ಸಂಬಂಧವೂ ಇಲ್ಲ ಎಂದರ್ಥ. ಈ ಸಂಬಂಧವು ಸಿದ್ಧವಾಗುವದಕ್ಕೆ ಆಭಾಸವನ್ನು ಒಪ್ಪಬೇಕು ಎಂಬುದನ್ನು ತೋರಿಸುವದಕ್ಕೆ ಈ ವಿಚಾರವನ್ನು ಪ್ರಾರಂಭಿಸಿರುತ್ತದೆ.

2. ೧೦೬ನೆಯ ಶ್ಲೋಕದಿಂದ ಮುಂದಿನ ಕೆಲವು ಶ್ಲೋಕಗಳಲ್ಲಿ ಸಾಕ್ಷಿಗೂ ಸಾಕ್ಷ್ಯವಾದ ಪ್ರತ್ಯಯಕ್ಕೂ ಚಿದಾಭಾಸವೆಂಬ ಸಂಬಂಧವಿದೆ ಎಂದು ಪ್ರತಿಪಾದಿಸಿರುತ್ತದೆ. ಸಾಕ್ಷಿಯು ದೃಷ್ಟಿಕರ್ತೃವೆಂದರೆ ಅವನಿಗೆ ಅನಿತ್ಯತ್ವವು ಬರುವದು ; ನಿಜವಾದ ಯಾವದಾದರೊಂದು ಉಪಕಾರವು ಆಗುವದೆಂದರೂ ಹಾಗೆಯೇ.

3. ಗಡಿಗೆಯು ನೆಲದಮೇಲಿದ್ದರೂ ಅದನ್ನು ಬೆಳಕು ವ್ಯಾಪಿಸಿಕೊಂಡಿರುವದರಿಂದ ಗಡಿಗೆಯು ಬೆಳಕಿನಲ್ಲಿದೆ ಎಂದು ಹೇಳುವಂತೆ, ಗಡಿಗೆಯು ಬುದ್ಧಿಗೆ ಹತ್ತಿರುತ್ತದೆ ಎಂಬ ಮಾತನ್ನೂ ತಿಳಿಯಬೇಕು.

4. ಬುದ್ಧಿಯು ಗಡಿಗೆಯನ್ನು ವ್ಯಾಪಿಸಿಕೊಳ್ಳುವದನ್ನೇ ಹೀಗೆಂದು ಕರೆಯುತ್ತೇವೆ; ಹೊರಗಿರುವ ಗಡಿಗೆಯು ನಿಜವಾಗಿ ಅಂತಃಕರಣದೊಳಕ್ಕೆ ಬಂದು ಸೇರಿಕೊಳ್ಳುವದೆಂದೇನೂ ಅಭಿಪ್ರಾಯವಿಲ್ಲ.

5. ಬುದ್ಧಿಯು ಒಂದೊಂದು ವಿಷಯದಾಕಾರವಾಗಿ ಪರಿಣಮಿಸಿಯೇ ಅದನ್ನು ವ್ಯಾಪಿಸಿಕೊಂಡು, ತನ್ನಲ್ಲಿರುವ ಚಿದಾಭಾಸದಿಂದ ವಿಷಯವನ್ನು ತಿಳಿಸಬೇಕು. ಆದ್ದರಿಂದ ಅದು ಕ್ರಮಕ್ರಮವಾಗಿಯೇ ವಿಷಯವನ್ನು ತಿಳಿಸಬೇಕು.

6. ಕಾಲಾಕಾಶಗಳಲ್ಲಿ ವಸ್ತುಗಳೆಲ್ಲವೂ ಒಟ್ಟಿಗೆ ಇರುವವು ; ಅವು ವಿಷಯಗಳನ್ನು ಒಂದೊಂದಾಗಿ ವ್ಯಾಪಿಸುವದಿಲ್ಲ. ಆತ್ಮಚೈತನ್ಯವೂ ಹಾಗೆಯೇ. ಆದ್ದರಿಂದಲೇ ಆತ್ಮನು ಸರ್ವಜ್ಞನಿರುತ್ತಾನೆ. ೧೫–೧೬, ೬–೩– ಉಪ. ಸಾ. ಗದ್ಯ ೨–೪ ಇವುಗಳನ್ನು ನೋಡಿ

ವಿಷಯಗ್ರಹಣಂ ಯಸ್ಯ ಕರಣಾಪೇಕ್ಷಯಾ ಭವೇತ್ ।
ಸತ್ಯೇವ ಗ್ರಾಹ್ಯಶೇಷೇ ಚ ಪರಿಣಾಮೀ ಸ ಚಿತ್ತವತ್ ॥ ೧೫೩ ॥
ಅಧ್ಯಕ್ಷೋಽಹಮಿತಿ ಜ್ಞಾನಂ ಬುದ್ಧೇರೇವ ವಿನಿಶ್ಚಯಃ ।
ನಾಧ್ಯಕ್ಷಸ್ಯಾವಿಶೇಷತ್ವಾನ್ನ ತಸ್ಯಾಸ್ತಿ ಪರೋ ಯತಃ ॥ ೧೫೪ ॥

೧೫೩-೧೫೪. ಯಾವನಿಗೆ ವಿಷಯದ ಗ್ರಹಣವು ಕರಣದ ಅಪೇಕ್ಷೆಯಿಂದ ಆಗುವದೋ, ತಿಳಿದುಕೊಳ್ಳಬೇಕಾದ (ವಿಷಯವೂ) ಉಳಿದಿದ್ದರೇ (ಗ್ರಹಣವಾಗುವದೋ) ಅವನು ಪರಿಣಾಮಿಯು; ಉದಾಹರಣೆಗೆ ಚಿತ್ತವು (ಹೀಗಿರುತ್ತದೆ).[1] 'ನಾನು ಸಾಕ್ಷಿಯು' ಎಂಬ ಜ್ಞಾನವು ಬುದ್ಧಿಗೇ ಆಗುವದೆಂಬುದು ನಿಶ್ಚಯವು;[2] (ಇದು) ಸಾಕ್ಷಿಗೆ ಅಲ್ಲ, ಏಕೆಂದರೆ ಅವನಿಗಿಂತ ಬೇರೊಬ್ಬನು (ಗ್ರಾಹಕನು) ಇರುವದಿಲ್ಲವಾಗಿ ಅವನಲ್ಲಿ (ಯಾವ) ವಿಶೇಷವೂ ಆಗುವದಿಲ್ಲ.[3]

ಜ್ಞಾನಫಲವು ಆತ್ಮನಿಗೇ

ಕರ್ತ್ರಾ ಚೇದಹಮಿತ್ಯೇವಮನುಭೂಯೇತ ಮುಕ್ತತಾ ।
ಸುಖದುಃಖವಿನಿರ್ಮೋಕ್ಷೋ[4] ನಾಹಙ್ಕರ್ತರಿ ಯುಜ್ಯತೇ ॥ ೧೫೫ ॥
ದೇಹಾದಾವಭಿಮಾನೋತ್ಥೋ ದುಃಖೀತಿ ಪ್ರತ್ಯಯೋ ಧ್ರುವಮ್ ।
ಕುಣ್ಡಲೀಪ್ರತ್ಯಯೋ ಯದ್ವತ್ ಪ್ರತ್ಯಗಾತ್ಮಾಭಿಮಾನಿನಾ[5] ॥ ೧೫೬ ॥
ಬಾಧ್ಯತೇ ಪ್ರತ್ಯಯೇನೇಹ ವಿವೇಕೇನಾವಿವೇಕವಾನ್ ।
ವಿಷಯ್ಯಯೇಽಸದನ್ತಂ ಸ್ಯಾತ್ ಪ್ರಮಾಣಸ್ಯಾಪ್ರಮಾಣತಃ ॥೧೫೭॥

---

1. ಚಿತ್ತಕ್ಕೆ ನೇತ್ರಾದಿಕರಣಗಳು ಬೇಕು; ಅದು ಯಾವ ವಿಷಯವನ್ನು ತಿಳಿದುಕೊಂಡರೂ ನುತ್ತೂ ತಿಳಿಯಬೇಕಾಗಿರುವ ವಿಷಯಗಳು ಉಳಿದೇ ಇರುತ್ತವೆ. ಅದು ಆಯಾ ವಿಷಯದ ರೂಪವಾಗಿ ಪರಿಣಮಿಸಿಯೇ ತಿಳಿಯಬೇಕಾಗಿರುವದೇ ಇದಕ್ಕೆ ಕಾರಣ. ಆದರೆ ಸಾಕ್ಷಿಯು ಹೀಗಲ್ಲ, ಎಲ್ಲವನ್ನೂ ಕರಣವ ಬಯಕೆಯಿಲ್ಲದೆ ಅರಿಯುತ್ತಾನೆ.

2. ಹಾಗಾದರೆ ನಾನು ಬ್ರಹ್ಮವು ಎಂಬ ಜ್ಞಾನವೂ ಸಾಕ್ಷಿಗೆ ಅಲ್ಲವೆಂದಾಯಿತು; ಏಕೆಂದರೆ ಸಾಕ್ಷಿಯು ಪರಿಣಾಮಿಯಲ್ಲ. ಆದರೆ ಸಾಕ್ಷಿಯಲ್ಲವೆ ಆಜ್ಞನಾದ ಶ್ರೋತೃವೆಂದು ನೀವು ಹಿಂದೆ ೧೦೮, ೧೩೨ರಲ್ಲಿ ಹೇಳಿದ್ದು ?- ಎಂಬ ಶಂಕೆಗೆ ಸಮಾಧಾನವಿದು.

3. ಪರಿಣಾಮವು ಬುದ್ಧಿಗೇ; ಏಕೆಂದರೆ ಆತ್ಮನು ಪರಿಣಾಮಿಯಾದನೆಂದು ಅರಿಯುವ ಮತ್ತೊಬ್ಬನು ಇಲ್ಲ. ಬುದ್ಧಿಯ ಪರಿಣಾಮವನ್ನು ಮಾತ್ರ ಆತ್ಮನು ನಿರ್ವಿಶೇಷನಾಗಿದ್ದುಕೊಂಡು ಅರಿಯುತ್ತಿದಾನೆ. ಆದರೆ ಫಲವು ಮಾತ್ರ ಆತ್ಮನಿಗೇ. ಇದು ಹೇಗೆಂಬುದು ಮುಂದೆ ಸ್ಪಷ್ಟವಾಗುವದು.

4. "ವಿನಿರ್ಮೋಕ್ಷೋ" ಭೋಧನಿಧಿ.

5. 'ಪ್ರತ್ಯಗಾತ್ಮಾಭಿಮಾನಾ' ಎಂದೂ ಪಾಠಾಂತರವಿದೆ. ಅರ್ಥಭೇದವಿಲ್ಲ.

೧೫೫–೧೫೭. ಅಹಂಕಾರವೇ ನಾನು (ಬ್ರಹ್ಮವು) ಎಂದಿಂತು ಮುಕ್ತತ್ವವನ್ನು ಅನುಭವಿಸುವದಾಗಿದ್ದರೆ, ಸುಖದುಃಖಗಳ ಬಿಡುಗಡೆ ಎಂಬುದು ಅಹಂಕಾರಕ್ಕೆ ಹೊಂದುವದಿಲ್ಲ.[1] ದೇಹಾದಿಗಳಲ್ಲಿರುವ 'ದುಃಖಿ' ಎಂಬ ಅವಿವೇಕವುಳ್ಳ ಪ್ರತ್ಯಯವು ಪ್ರತ್ಯಗಾತ್ಮನು ನಾನೆಂಬ ಅಭಿಮಾನವುಳ್ಳ ವಿವೇಕಪ್ರತ್ಯಯದಿಂದ 'ನಾನು ಕುಂಡಲಿಯು' ಎಂಬ ಪ್ರತ್ಯಯದಂತೆ ಅವಶ್ಯವಾಗಿ ಬಾಧಿತವಾಗುತ್ತದೆ.[2] (ಇದಕ್ಕೆ) ವಿಪರೀತವಾದರೆ ಪ್ರಮಾಣವು ಅಪ್ರಮಾಣವಾಗುವದರಿಂದ ಶೂನ್ಯದಲ್ಲಿ ಪರ್ಯವಸಾನವಾಗುವದು.[3]

ಆತ್ಮನಿಗೆ ಅಧ್ಯಾಸದಿಂದ ದುಃಖಿತ್ವ

ದಾಹಚ್ಛೇದವಿನಾಶೇಷು ದುಃಖಿತ್ವಂ ನಾನ್ಯಥಾತ್ಮನಃ ।
ನೈವ ಹ್ಯನ್ಯಸ್ಯ ದಾಹಾದಾವನ್ಯೋ ದುಃಖೀ ಭವೇತ್ ಕ್ವಚಿತ್ ॥೧೫೮॥
ಅಸ್ಪರ್ಶತ್ವಾದದೇಹತ್ವಾನ್ನಾಹಂ ದಾಹ್ಯೋ ಯತಃ ಸದಾ ।
ತಸ್ಮಾನ್ಮಿಥ್ಯಾಭಿಮಾನೋತ್ಥಂ ಮೃತೇ ಪುತ್ರೇ ಪಿತುರ್ಯಥಾ ॥೧೫೯॥
ಕುಣ್ಡಲ್ಯಹಮಿತಿ ಹ್ಯೇತದ್ ಬಾಧ್ಯೇತೈವ ವಿವೇಕಿನಾ ।
ದುಃಖೀತಿ ಪ್ರತ್ಯಯಸ್ತದ್ವತ್ ಕೇವಲಾಹಂಧಿಯಾ ಸದಾ ॥ ೧೬೦ ॥

---

1. ಏಕೆಂದರೆ ಕರ್ತೃವಿನಲ್ಲಿ ಸುಖದುಃಖಗಳು ಪ್ರತ್ಯಕ್ಷವಾಗಿ ಕಾಣುತ್ತಿರುವದರಿಂದ ಅವುಗಳ ಅಭಾವವು ಅನುಭವಕ್ಕೆ ಬರುವಂತೆಯೇ ಇಲ್ಲ. ಬರಿಯ ಅಹಂಕಾರವು ಆಚೆ ತನವೂ ಆಗಿದೆ.

2. ನಾನು ಕುಂಡಲಿ ಎಂಬ ಅಭಿಮಾನವು ಒಂಟಿಯನ್ನು ಹಾಕಿಕೊಂಡಿರುವವನಿಗೆ ಇರುತ್ತದೆ; ಅದನ್ನು ತೆಗೆದುಹಾಕಿದವನಿಗೆ ಇರುವದಿಲ್ಲ. ಇದರಂತೆ ದೇಹಾತ್ಮಜ್ಞಾನವಿರುವವನಿಗೆ ಇರುವ ದುಃಖಿತ್ವಪ್ರತ್ಯಯವು ನಾನು ಅದೇಹನು ಎಂಬ ವಿವೇಕಪ್ರತ್ಯಯವುಂಟಾದರೆ ಬಾಧಿತವಾಗುತ್ತದೆ.

3. ದುಃಖಿತ್ವಪ್ರತ್ಯಯದಿಂದ 'ನಾನು ಅದುಃಖಿಯಾದ ಆತ್ಮನು' ಎಂಬ ಪ್ರತ್ಯಯವೇ ಏತಕ್ಕೆ ಬಾಧಿತವಾಗಬಾರದು? –ಎಂದರೆ ಅದುಃಖಿತ್ವಪ್ರತ್ಯಯವು ಪ್ರಮಾಣವಾದ ವೇದದಿಂದುಂಟಾಗಿರುವದರಿಂದ. ಪ್ರಮಾಣವು ಅಪ್ರಮಾಣದಿಂದ ಬಾಧಿತವಾಗಬಹುದಾದರೆ ಪ್ರತ್ಯಕ್ಷಾದಿವ್ಯವಹಾರವೂ ಬಾಧಿತವಾಗಬಹುದೆಂದಾಗುವದು; ಆಗ ಶೂನ್ಯವಾದವೇ ಕೊನೆಗೆ ನಿಲ್ಲುವದು.

4. 'ಮೃತಿಃ' ಎಂಬುದನ್ನು ಹೀಗೆ ತಿದ್ದಿಕೊಂಡಿವೆ. ಇದೇ ಬೋಧನಿಧಿಗೆ ಒಪ್ಪೆಂತ ಕಾಣುತ್ತದೆ.

5. 'ಸಹ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

೧೫೮–೧೬೦. ಸುಡುವದು, ಕತ್ತರಿಸುವದು, ನಾಶವಾಗುವದು– (ಇವು ಗಳು) ಆಗುವಲ್ಲಿ ಆತ್ಮನಿಗೆ ದುಃಖಿತ್ವವುಂಟಾಗುವದು; ಬೇರೆಯ ಪ್ರಕಾರದಿಂದ ಆಗಲಾರದು. ಏಕೆಂದರೆ ಒಬ್ಬನಿಗೆ ದಾಹಾದಿಗಳಾದರೆ ಮತ್ತೊಬ್ಬನು ಎಂದಿಗೂ ದುಃಖಿಯಾಗಲಾರನಷ್ಟೆ ?[1] ಸ್ಪರ್ಶವಿಲ್ಲದ್ದರಿಂದಲೂ ದೇಹವಿಲ್ಲದ್ದರಿಂದಲೂ ನಾನು ಎಂದಿಗೂ ದಾಹ್ಯನಲ್ಲ. ಆದ್ದರಿಂದ ಮಗನು ಸತ್ತರೆ ತಂದೆಗೆ ಆಗುವಂತೆ ಮಿಥ್ಯಾಭಿಮಾನದಿಂದಲೇ (ದುಃಖಿತ್ವವು) ಉಂಟಾಗುತ್ತದೆ.[2] ನಾನು ಒಂಟಿಯನ್ನಿಟ್ಟುಕೊಂಡಿರುವೆನು ಎಂಬ ಪ್ರತ್ಯಯವು ವಿವೇಕರೂಪವಾದ (ಪ್ರತ್ಯಯದಿಂದ) ಬಾಧಿತವಾಗಿಯೇ ತೀರುತ್ತದೆ; ಅದರಂತೆ ದುಃಖಿ ಎಂಬ ಪ್ರತ್ಯಯವು ಕೇವಲಾಹಂಬುದ್ಧಿಯಿಂದ ನಿತ್ಯವಾಗಿ ಬಾಧಿತವಾಗುತ್ತದೆ.[3]

ಸಿದ್ಧೇ ದುಃಖಿತ್ವ ಇಷ್ಟಂ ಸ್ಯಾತ್ ತಚ್ಛಕ್ತಿತ್ವಂ ಸದಾತ್ಮನಃ |[4]
ಮಿಥ್ಯಾಭಿಮಾನತೋ ದುಃಖೀ ತೇನಾರ್ಥಾಪಾದನಕ್ಷಯುಃ[5] ॥ ೧೬೧ ॥

೧೬೧. ಸದ್ರೂಪನಾದ ಆತ್ಮನಿಗೆ ದುಃಖಿತ್ವವು ಸಿದ್ಧವಾದರೆ ಅದರ ಶಕ್ತಿಯಿದೆ ಎಂಬುದನ್ನು ಒಪ್ಪಬಹುದಾಗುವದು.[6] ಮಿಥ್ಯಾಭಿ

---

1. ಇದರಂತೆ ದೇಹವಲ್ಲಿ ಸುತುವಿಕೆ ಮುಂತಾದವುಗಳಾವರೆ ಅದಕ್ಕಿಂತ ಬೇರೆ ಯಾಗಿರುವ ಆತ್ಮನಿಗೆ ನಿಜವಾಗಿ ದುಃಖವಾಗುವದಕ್ಕೆ ಕಾರಣವಿಲ್ಲ.

2. ಸತ್ತ ಮಗನು ತನಗಿಂತ ಬೇರೆ ಎಂಬುದು ಸ್ಪಷ್ಟವಾಗಿದೆ. ಆದರೂ ಅವನೇ ತಾನೆಂಬ ಅಭಿಮಾನದಿಂದ ತಂದೆಯು ದುಃಖಿಯಾಗುತ್ತಾನೆ. ಗೌಣಾತ್ಮನ ವಿಷಯದಲ್ಲಿರುವಂತೆಯೇ ಮಿಥ್ಯಾತ್ಮನಾದ ದೇಹಾತ್ಮನ ಅಭಿಮಾನದಿಂದಲೇ ದುಃಖಿತ್ವವು ಕಲ್ಪಿತವಾಗಿರುವದೆಂದು ಇದರಿಂದ ಸಿದ್ಧವಾಗುತ್ತದೆ.

3. ಕೇವಲಾಹಂಬುದ್ಧಿ ಎಂದರೆ ಅದ್ವಿತೀಯಾತ್ಮಬುದ್ಧಿ. ಇದು ಪ್ರಮಾಣದಿಂದ ಉಂಟಾದದ್ದಾದುದರಿಂದ ಕುಂಡಲ್ಯಭಿಮಾನದಂತೆ ಮಿಥ್ಯಾಭಿಮಾನದಿಂದ ಆದ ದುಃಖಿತ್ವವನ್ನು ಬಾಧಿಸುತ್ತದೆ.

4. 'ತಚ್ಛಕ್ತಿಶ್ಚನ್ನಸಾತ್ಮನಃ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

5. 'ಅರ್ಥಾಪಾದನಕ್ಷಮಃ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

6. ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರದುಃಖವು ಶಕ್ತಿರೂಪದಿಂದ ನಿಜವಾಗಿಯೇ ಇದ್ದರೂ ಅದರ ಕಾರ್ಯವನ್ನು ಕಳೆದುಕೊಂಡರೆ ಸಾಕಲ್ಲವೆ?– ಎಂಬವರ ಶಂಕೆಗೆ ಪರಿಹಾರವಿದು.

ಮಾನದಿಂದ ದುಃಖಿಯಾಗಿರುತ್ತಾನೆ; ಅದರಿಂದ ಅರ್ಥಾಪತ್ತಿಯು ಕ್ಷಯವಾಗುತ್ತದೆ.[1]

ಅಸ್ಪರ್ಶೋಽಪಿ ಯಥಾ ಸ್ಪರ್ಶಮಚಲಶ್ಚಲನಾದಿ ಚ ।
ಅವಿವೇಕಾತ್ ತಥಾ ದುಃಖಂ ಮಾನಸಂ ಚಾತ್ಮನೀಕ್ಷತೇ ॥ ೧೬೨ ॥
ವಿವೇಕಾತ್ಮಧಿಯಾ ದುಃಖಂ ನುದ್ಯತೇ ಚಲನಾದಿವತ್ ।
ಅವಿವೇಕಸ್ವಭಾವೇನ ಮನೋ ಗಚ್ಛತ್ಯನಿಚ್ಛತಃ ॥ ೧೬೩ ॥
ತದಾ ತು ದೃಶ್ಯತೇ ದುಃಖಂ ನೈಶ್ಚಲ್ಯೇ ನೈವ ತಸ್ಯ ತತ್ ।
ಪ್ರತ್ಯಗಾತ್ಮನಿ ತಸ್ಮಾತ್ ತದ್ದುಃಖಂ ನೈವೋಪಪದ್ಯತೇ ॥ ೧೬೪ ॥

೧೬೨-೧೬೪. ಸ್ಪರ್ಶವಿಲ್ಲದವನಾದರೂ ಸ್ಪರ್ಶವನ್ನೂ ಅಚಲನಾದರೂ ಚಲನೆಯೇ ಮುಂತಾದದ್ದನ್ನೂ ಆತ್ಮನಲ್ಲಿ ಹೇಗೆ ಅವಿವೇಕದಿಂದ ಕಾಣುತ್ತಾನೋ ಹಾಗೆಯೇ ಮನಸ್ಸಿನ ದುಃಖವನ್ನು ತನ್ನಲ್ಲಿ ಕಾಣುತ್ತಾನೆ; ವಿವೇಕರೂಪವಾದ ಬುದ್ಧಿಯಿಂದ ಚಲನಾದಿಗಳಂತೆ ದುಃಖವು ತೊಲಗುತ್ತದೆ.[2] ಅವಿವೇಕಸ್ವಭಾವದಿಂದ ಮನಸ್ಸು ಬೇಡವೆಂದರೂ ಹರಿದಾಡುತ್ತದೆ; ಆಗಲೇ ದುಃಖವು ಉಂಟಾಗುತ್ತದೆ. ಅದು ನಿಶ್ಚಲವಾದರೆ ಅವನಿಗೆ ಅದು (ಕಾಣುವದೇ) ಇಲ್ಲ.[3] ಆದ್ದರಿಂದ ಪ್ರತ್ಯಗಾತ್ಮನಲ್ಲಿ ಆ ದುಃಖವು (ಇದೆಯೆಂಬುದು) ಯುಕ್ತವೇ ಅಲ್ಲ.[4]

---

1. ಅರ್ಥಾಪತ್ತಿಯು ಕ್ಷಯವಾಗುತ್ತದೆ ಎಂದರೆ ದುಃಖಿತ್ವವು ತೋರುತ್ತಿರುವದರಿಂದ ದುಃಖಿತ್ವಶಕ್ತಿಯಿರಲೇ ಬೇಕು ಎಂಬ ಅರ್ಥಾಪತ್ತಿಪ್ರಮಾಣಕ್ಕೆ ಬೇರೆಯ ರೀತಿಯಿಂದಲೇ ಸಮಾಧಾನವನ್ನು ಹೇಳಬಹುದು ಎಂದರ್ಥ.

2. ದೇಹದಲ್ಲಿರುವ ಸ್ಪರ್ಶಚಲನಾದಿಗಳನ್ನು ಆತ್ಮನಲ್ಲಿ ಅಧ್ಯಾಸಮಾಡುತ್ತಾರೆಂಬುದನ್ನು ತಾರ್ಕಿಕಾದಿಗಳೂ ಒಪ್ಪುತ್ತಾರೆ; ಆತ್ಮಸ್ವರೂಪವನ್ನು ತಿಳಿದುಕೊಂಡರೆ ತಾನು ಅಸ್ಪರ್ಶನು, ನಿಶ್ಚಲನು- ಎಂದು ಮುಂತಾದ ಸಮ್ಯಗ್ಜ್ಞಾನದಿಂದ ಆ ಮಿಥ್ಯಾಜ್ಞಾನವು ತೊಲಗುವದೆಂಬುದನ್ನೂ ಒಪ್ಪುತ್ತಾರೆ. ಅದರಂತೆಯೇ ದುಃಖಿತ್ವಾದಿಮಾನಸಧರ್ಮವು ಅಧ್ಯಸ್ತವಾಗಿದೆಯೆಂದೂ ತಾನು ಆನಂದರೂಪನಾದ ಅದ್ವಿತೀಯಾತ್ಮನು ಎಂದೂ ಜ್ಞಾನವಾಗಲು ದುಃಖಿತ್ವವು ತೊಲಗುತ್ತದೆ ಎಂದು ತಿಳಿಯಬೇಕು- ಎಂದರ್ಥ.

3. ಮನಸ್ಸಿನ ಚಲನೆಯಿಂದ ಎಚ್ಚರಕನಸುಗಳಲ್ಲಿ ದುಃಖಿತ್ವವಿರುತ್ತದೆ; ಚಲನೆಯಿಲ್ಲದ ಸುಷುಪ್ತಿಯಲ್ಲಿ ದುಃಖವಿರುವದಿಲ್ಲ.

4. ಪ್ರತ್ಯಗಾತ್ಮನ ಸ್ವಭಾವವೇ ಆಗಿದ್ದರೆ ದುಃಖವು ಯಾವಾಗಲೂ ಇರಬೇಕಿತ್ತು; ಆದರೆ ಹಾಗಿಲ್ಲದ್ದರಿಂದ ಅದು ಆತ್ಮನ ಧರ್ಮವಲ್ಲ ಎಂದರ್ಥ.

ತತ್ತ್ವಮಸಿವಾಕ್ಯದ ಅರ್ಥವು ತಿಳಿಯುವ ರೀತಿ

ತ್ವಂಸತೋಸ್ತುಲ್ಯನೀಡತ್ವಾನ್ನೀಲಾಶ್ವವದಿದಂ ಭವೇತ್ ॥ ೧೬೪½ ॥

ನಿರ್ದುಃಖವಾಚಿನಾ ಯೋಗಾತ್ ತ್ವಂಶಬ್ದಸ್ಯ ತದರ್ಥತಾ ।
ಪ್ರತ್ಯಗಾತ್ಮಾಭಿಧಾನೇನ ತಚ್ಛಬ್ದಸ್ಯ ತದರ್ಥತಾ[1] ॥ ೧೬೫ ॥

೧೬೪½ – ೧೬೫. ನೀನು, ಸತ್ತು, (ಇವುಗಳನ್ನು ಹೇಳುವ ಪದಗಳು) ಸಮಾನಾಶ್ರಯವಾಗಿರುವದರಿಂದ[2] ಈ (ವಾಕ್ಯವು) "ಕುದುರೆಯು ಕರಿಯದು" ಎಂಬಂತೆ ಆಗುವದು.[3] 'ನೀನು' (ತ್ವಮ್) ಎಂಬ ಶಬ್ದವು ನಿರ್ದುಃಖವಾದ (ವಸ್ತುವನ್ನು) ಹೇಳುವ ('ತತ್' ಅದು ಎಂಬ ಪದದೊಡನೆ) ಸಂಬಂಧವುಳ್ಳ ದ್ದಾಗಿರುವದರಿಂದ ಆ ಅರ್ಥವನ್ನು (ಕೊಡುತ್ತದೆ),[4] ಅದು (ತತ್) ಎಂಬ ಶಬ್ದಕ್ಕೆ ಪ್ರತ್ಯಗಾತ್ಮನನ್ನು ಹೇಳುವ ಶಬ್ದದೊಡನೆ (ಸಂಬಂಧವುಳ್ಳದ್ದಾಗಿರುವದರಿಂದ) ಆ ಅರ್ಥವನ್ನು ಹೇಳುತ್ತದೆ.[5]

ದಶಮಸ್ತ್ವಮಸೀತ್ಯೇವಂ ವಾಕ್ಯಂ ಸ್ಯಾತ್ ಪ್ರತ್ಯಗಾತ್ಮನಿ ॥ ೧೬೫½ ॥

ಸ್ವಾರ್ಥಸ್ಯ ಹ್ಯಪ್ರಹಾಣೇನ ವಿಶಿಷ್ಟಾರ್ಥಸಮರ್ಪಕೌ ।
ಪ್ರತ್ಯಗಾತ್ಮವಗತ್ಯನ್ತೌ ನಾನ್ಯೋಽರ್ಥೋಽರ್ಥಾದ್ವಿರೋಧ್ಯತಃ ॥೧೬೬
ನವಬುದ್ಧ್ಯಪಹಾರಾದ್ಧಿ ಸ್ವಾತ್ಮಾನಂ ದಶಪೂರಣಮ್ ।

---

1. 'ಯುತೇಸ್ತಥಾ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

2. ಸಾಮಾನಾಧಿಕರಣ್ಯವುಳ್ಳವಾಗಿರುವದರಿಂದ, ಒಂದೇ ವಸ್ತುವನ್ನು ಹೇಳುವದರಿಂದ ಎಂದರ್ಥ.

3. ಈ ವಾಕ್ಯದಲ್ಲಿ 'ಕುದುರೆಯು' ಎಂಬ ಪದವು ಕರಿಯದಲ್ಲದ್ದನ್ನು ಬಿಟ್ಟು ಕರಿಯದಾದ ಕುದುರೆಯನ್ನೇ ಹೇಳುತ್ತದೆ; 'ಕರಿಯದು' ಎಂಬ ಪದವು ಕುದುರೆಯಲ್ಲದ್ದನ್ನು ಬಿಟ್ಟು ಕುದುರೆಯಲ್ಲಿರುವ ಕಪ್ಪನ್ನೇ ಹೇಳುತ್ತದೆ.

4. ನೀನು ಎಂಬ ಪದವು ಸಂಸಾರಿಯಾದ ಆತ್ಮನನ್ನು ತಿಳಿಸದೆ ನಿರ್ದುಃಖನಾದ ಆತ್ಮನನ್ನೇ ತಿಳಿಸುವದು.

5. ಅದು ಎಂಬ ಶಬ್ದವು ಪರೋಕ್ಷನಾದ ಆತ್ಮನನ್ನು ತಿಳಿಸದೆ ಶ್ರೋತೃವಿನ ಪ್ರತ್ಯಗಾತ್ಮನನ್ನೇ ತಿಳಿಸುತ್ತದೆ. ಆದ್ದರಿಂದ 'ತತ್ತ್ವಮಸಿ' ಎಂಬ ವಾಕ್ಯವು ಅಪರೋಕ್ಷವಾಗಿರುವ ಪ್ರತ್ಯಗಾತ್ಮನು ನಿರ್ದುಃಖನಾದ ಸಚ್ಛಬ್ದದಿಂದ ಹೇಳಿದ ಪರಮಾತ್ಮನೇ ಎಂದು ತಿಳಿಸುತ್ತದೆ ಎಂದು ಭಾವ.

ಅಪಶ್ಯಞ್ಜ್ಞಾ ಜ್ಞಾತುಮೇವೇಚ್ಛೇತ್ ಸ್ವಮಾತ್ಮಾನಂ ಜನಸ್ತಥಾ
ಅವಿದ್ಯಾಬದ್ಧಚಕ್ಷುಷ್ಟ್ವಾತ್ ಕಾಮೂಪಹೃತಧೀಃ ಸದಾ ।
ವಿವಿಕ್ತಂ ದೃಶಿಮಾತ್ಮಾನಂ ನೇಕ್ಷತೇ ದಶಮುಂ ಯಥಾ ॥ ೧೬೪ ॥
ದಶಮಸ್ತ್ವಮಸೀತ್ಯೇವಂ ತತ್ತ್ವಮಸ್ಯಾದಿವಾಕ್ಯತಃ ।
ಸ್ವಮಾತ್ಮಾನಂ ವಿಜಾನಾತಿ ಕೃತ್ಸ್ನಾನ್ತಃಕರಣೇಕ್ಷಣಮ್ ॥ ೧೬೯ ॥

೧೬೫ – ೧೬೪. 'ಹತ್ತನೆಯವನು ನೀನಾಗಿರುವೆ' ಎಂಬಂತೆ[1] ಈ ವಾಕ್ಯವು ಪ್ರತ್ಯಗಾತ್ಮವಿಷಯಕವಾಗಿರುತ್ತದೆ. ಈ ಶಬ್ದಗಳಿರಡೂ ತಮ್ಮ ಅರ್ಥವನ್ನು ಬಿಡದೆ ಒಂದು ವಿಶಿಷ್ಟಾರ್ಥವನ್ನು ಹೇಳುತ್ತಾ[2] ಪ್ರತ್ಯಗಾತ್ಮನ ಜ್ಞಾನದಲ್ಲಿ ಕೊನೆಗಾಣುತ್ತವೆ. ಈ ಅರ್ಥಕ್ಕೆ ವಿರೋಧಿಯಾದ ಮತ್ತೆ ಯಾವ ಅರ್ಥವೂ ವಾಕ್ಯಕ್ಕೆ ಆಗುವದಿಲ್ಲ.[3] ಒಂಬತ್ತು ಎಂಬ ಬುದ್ಧಿಯಿಂದ ಅಪಹೃತವಾಗಿರುವದರಿಂದ ಹತ್ತನೆಯವನಾದ ತನ್ನನ್ನು ಕಾಣದೆ ತನ್ನನ್ನು ತಿಳಿಯಬೇಕೆಂದೇ ಮನುಷ್ಯನು ಬಯಸುತ್ತಾನೆ. ಅಲ್ಲವೆ ? ಹಾಗೆ ಅವಿದ್ಯೆಯಿಂದ ಕಟ್ಟುವಡೆದಿರುವ ಜ್ಞಾನವುಳ್ಳವನಾಗಿರುವದರಿಂದ ಕಾಮದಿಂದ ಜ್ಞಾನವನ್ನು ಕಳೆದುಕೊಂಡು[4] ಯಾವಾಗಲೂ ಶುದ್ಧನಾಗಿರುವ ದೃಕ್ಸ್ವರೂಪನಾದ ತನ್ನ ಸ್ವರೂಪವನ್ನು ಹತ್ತನೆಯವನನ್ನು ಹೇಗೋ ಹಾಗೆ ಕಾಣದೆ ಇರುತ್ತಾನೆ.

---

1. ಮೊದಲೇ ಇರುವ ವಿಷಯಗಳನ್ನು ತಿಳಿಸಿದರೂ ಅಜ್ಞಾನದಿಂದ ಮರೆತಿದ್ದ ತಾನು ಹತ್ತನೆಯವನೆಂಬ ವಿಷಯವನ್ನು ಈ ವಾಕ್ಯವು ತಿಳಿಸಿಕೊಟ್ಟಿತು. ಹತ್ತು ಜನರು ಮುಂಕರು ತಮ್ಮಲ್ಲಿ ಹತ್ತನೆಯವನು ಇಲ್ಲವೆಂದು ಭಾವಿಸಿ ಹೊರಗಿನ ಒಂಬತ್ತು ಜನರನ್ನೇ ಎಣಿಸಿಕೊಳ್ಳುತ್ತಾ ತಮ್ಮನ್ನು ಎಣಿಸವೆ ಕೈಬಿಟ್ಟಾಗ ಒಬ್ಬ ದಾರಿಹೋಕನು ಹೇಳಿದ ವಾಕ್ಯವಿದು.

2. ನೀನು ಎಂಬುದು ಪ್ರತ್ಯಕ್ಷವಾಗಿರುವ ಪ್ರತ್ಯಗಾತ್ಮನನ್ನೂ ಅದು ಎಂಬುದು ನಿರ್ದುಃಖಿಯಾದ ಚೈತನ್ಯವನ್ನೂ ತಿಳಿಸಿತು ; ಎರಡೂ ಪದಗಳು 'ಆಗಿದೀಯೆ' ಎಂಬ ಮಾತಿನೊಡನೆ ಸೇರಿ 'ನಿರ್ದುಃಖಿಪ್ರತ್ಯಗಾತ್ಮಚೈತನ್ಯವನ್ನು' ತಿಳಿಸಿಕೊಟ್ಟವು.

3. ಪೂರ್ವಪಕ್ಷಿಗಳು ಹೇಳುವಂತೆ ಸ್ವಸಂಖ್ಯಾನವನ್ನು ಮಾಡಿದಬಳಿಕ ನೀನು ಬ್ರಹ್ಮವಾಗುವೆ ಎಂದು ಅರ್ಥಮಾಡಿದರೆ ವಾಕ್ಯಾರ್ಥಕ್ಕೆ ವಿರುದ್ಧವಾದ ಅರ್ಥವಾಗುವದು. ಏಕೆಂದರೆ ವಾಕ್ಯಶ್ರವಣದಿಂದ ತಾನು ಸಪ್ಪ್ರಮ್ಯನೆಂದು ತಿಳಿದವನು ಪ್ರಸಂಖ್ಯಾನಮಾಡಬೇಕು ಎನ್ನುವದು ಅದಕ್ಕೆ ವಿರುದ್ಧವಾಗಿರುತ್ತದೆ. ಸಿದ್ಧಾಂತದಲ್ಲಿ ಪದಗಳು ತಮ್ಮ ಲಕ್ಷ್ಯಾರ್ಥವನ್ನೇ ತಿಳಿಸುವದರಿಂದ ತಮ್ಮ ಅರ್ಥಕ್ಕೆ ವಿರುದ್ಧವಾದದ್ದನ್ನು ತಿಳಿಸಿದಂತೆ ಆಗುವದಿಲ್ಲ.

4. ತತ್ತ್ವವನ್ನು ತಿಳಿಯದೆ ತಾನು ಸಂಸಾರಿಯೆಂದು ತಿಳಿದುಕೊಂಡಿರುವದು ಅವಿದ್ಯೆಯು ; ಅವಿದ್ಯೆಯಿಂದ ಹೊರಗಿನ ವಿಷಯಗಳಲ್ಲಿ ಉಂಟಾಗಿರುವ ಇಚ್ಛೆಯು ಕಾಮವು. ಅದು ನಿಜವಾದ ಜ್ಞಾನವನ್ನು ಕಳೆದಿರುವದು ಎಂದು ಭಾವ.

ನೀನು ಹತ್ತನೆಯವನಾಗಿರುವೆ ಎಂದಂತೆ 'ನೀನು ಆ (ಸಚ್ಚಬ್ರಹ್ಮ)ವಾಗಿರುವೆ' ಮುಂತಾದ ವಾಕ್ಯದಿಂದ, ಅಂತಃಕರಣನೆಲ್ಲನನ್ನೂ ನೋಡುತ್ತಿರುವ ತನ್ನ ಆತ್ಮನನ್ನು ಅರಿತುಕೊಳ್ಳುತ್ತಾನೆ.[1]

ವಾಕ್ಯಾರ್ಥಜ್ಞಾನಕ್ಕೆ ಉಪಾಯ

ಇದಂ ಪೂರ್ವಮಿದಂ ಪಶ್ಚಾತ್ ಪದಂ ವಾಕ್ಯೇ ಭವೇದಿತಿ ।
ನಿಯಮೋ ನೈವ ವೇದೇಽಸ್ತಿ ಪದಸಾಙ್ಗತ್ಯಮರ್ಥತಃ ॥೧೭೦॥
ವಾಕ್ಯೇ ಹಿ ಶ್ರೂಯಮಾಣಾನಾಂ ಪದಾನಾಮರ್ಥಸಂಸ್ಮೃತಿಃ ।[2]
ಅನ್ವಯವ್ಯತಿರೇಕಾಭ್ಯಾಂ ತತೋ ವಾಕ್ಯಾರ್ಥಬೋಧನಮ್ ॥೧೭೧॥
ಯದಾ ನಿತ್ಯೇಷು ವಾಕ್ಯೇಷು ಪದಾರ್ಥಸ್ತು ವಿವಿಚ್ಯತೇ ।
ವಾಕ್ಯಾರ್ಥಜ್ಞಾನಸಙ್ಕ್ಲೃನ್ತ್ಯೈ ತದಾ ಪ್ರಶ್ನೋ ನ ಯುಜ್ಯತೇ ॥೧೭೨॥
ಅನ್ವಯವ್ಯತಿರೇಕೋಕ್ತಿಃ ಪದಾರ್ಥಸ್ಮರಣಾಯ ತು ।
ಸ್ಮೃತ್ಯಭಾವೇ ನ ವಾಕ್ಯಾರ್ಥೋ ಜ್ಞಾತುಂ ಶಕ್ಯೋ ಹಿ ಕೇನಚಿತ್ ॥

೧೭೦–೧೭೩. ವಾಕ್ಯದಲ್ಲಿ ಇದು ಮೊದಲು, ಈ ಪದವು ಆಮೇಲೆ ಇರಬೇಕು –ಎಂಬ ನಿಯಮವು ವೇದದಲ್ಲಿಲ್ಲವೇ ಇಲ್ಲ. ಪದಗಳ ಸಂಬಂಧವನ್ನು ಅರ್ಥದಿಂದ ತಿಳಿದುಕೊಳ್ಳಬೇಕು.[2] ವಾಕ್ಯದಲ್ಲಿ ಹೇಳಿರುವ ಪದಗಳ ಅರ್ಥದ ಸ್ಮರಣೆಯು ಅನ್ವಯವ್ಯತಿರೇಕಗಳಿಂದಲೇ (ಆಗುತ್ತದೆ). ಅದರಿಂದ

---

1. ಹತ್ತನೆಯವನು ನೀನು ಎಂಬ ವಾಕ್ಯದ ಶ್ರವಣದಿಂದ ಹತ್ತನೆಯವನಾಗಬೇಕು ಎಂದೇನೂ ಅರ್ಥವಾಗುವುದಿಲ್ಲ; ಇದರಂತೆ 'ಅದು ನೀನಾಗಿರುವೆ' ಎಂಬ ವಾಕ್ಯಕ್ಕೂ ಅದು ನೀನಾಗಬೇಕು ಎಂದು ಅರ್ಥವಾಗುವದಿಲ್ಲ. ಅಂತಃಕರಣವೃತ್ತಿಗಳಿಗೆಲ್ಲ ಸಾಕ್ಷಿಯಾಗಿರುವ ಪ್ರತ್ಯಗಾತ್ಮಚೈತನ್ಯವನ್ನು ತಾನು ಎಂದರಿತವನು ಅಂತಃಕರಣಕೃತ್ಯವಾದ ಪ್ರಸಂಖ್ಯಾನವನ್ನು ಹೇಗೆತಾನೆ ಮಾಡಿಯಾನು?

2. ಮೈ॥ ಪಾಠದಲ್ಲಿ ಈ ಶ್ಲೋಕದ ಪೂರ್ವೋತ್ತರಾರ್ಧಗಳು ವಿಪರೀತಕ್ರಮದಲ್ಲಿವೆ. ಈ ಬೋಧನಿಧಿಯ ಪಾಠವು ಸರಳವಾಗಿ ಅನ್ವಯವನ್ನು ತಿಳಿಸುವಂತಿದೆ.

3. 'ತ್ವಂ' ಎಂಬುದು ಸಂಸಾರಿತ್ವವನ್ನು ಹೇಳುತ್ತದೆ; ಅದನ್ನುದ್ದೇಶಿಸಿ ಸಚ್ಚಬ್ರಹ್ಮತ್ವವನ್ನು ಉಪದೇಶಿಸಿರುತ್ತದೆ. ಆದ್ದರಿಂದ ಮೊದಲು ತ್ವಂಪದವಿವರಬೇಕಲ್ಲವೆ?– ಎಂಬ ಶಂಕೆಗೆ ಉತ್ತರವಿದು. 'ಆಹರ ಪಾತ್ರಮ್', 'ಪಾತ್ರಮಾಹರ' ಈ ಎರಡು ವಾಕ್ಯಗಳಲ್ಲಿ ಪದಗಳ ಅನುಕ್ರಮವು ಬೇರೆಬೇರೆಯಾಗಿದ್ದರೂ ಅರ್ಥವು ಒಂದೇ. ಅರ್ಥಕ್ಕೆ ಅನುಗುಣವಾಗಿ ಅನ್ವಯವನ್ನು ಮಾಡಿಕೊಳ್ಳಬೇಕು. 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯದಂತೆಯೇ ಪ್ರಕೃತವಾಕ್ಯದಲ್ಲಿ ಪದಗಳಿಗೆ ಅರ್ಥಾನುಗುಣವಾಗಿ ಅನ್ವಯವನ್ನು ಮಾಡಿಕೊಳ್ಳಬೇಕು– ಎಂದು ಅಭಿಪ್ರಾಯ.

ವಾಕ್ಯಾರ್ಥದ ಜ್ಞಾನವಾಗುತ್ತದೆ.[1] ಯಾವಾಗ ನಿತ್ಯವಾದ (ವೇದ)ವಾಕ್ಯಗಳಲ್ಲಿ ವಾಕ್ಯಾರ್ಥಜ್ಞಾನದ ಪ್ರಾಪ್ತಿಗಾಗಿ ಪದಾರ್ಥವನ್ನು ವಿವೇಕಮಾಡಿಕೊಂಡು ಅರಿಯುವೆವೋ[2] ಆಗ ಪ್ರಶ್ನೆಯು ಯುಕ್ತವಾಗುವದಿಲ್ಲ.[3] ಅನ್ವಯವ್ಯತಿರೇಕಗಳನ್ನು ಹೇಳಿರುವದು ಪದಾರ್ಥಗಳ ನೆನಪಿಗಾಗಿಯೇ; ಏಕೆಂದರೆ (ಅವುಗಳ) ನೆನಪಿಲ್ಲದೆ ವಾಕ್ಯಾರ್ಥವನ್ನು ಅರಿಯುವದು ಯಾವನಿಂದಲೂ ಆಗಲಾರದು.

ತತ್ತ್ವಮಸ್ಯಾದಿವಾಕ್ಯೇಷು ತ್ವಂಪದಾರ್ಥಾವಿವೇಕತಃ ।
ವ್ಯಜ್ಯತೇ ನೈವ ವಾಕ್ಯಾರ್ಥೋ ನಿತ್ಯಮುಕ್ತೋಽಹಮಿತ್ಯತಃ ॥ ೧೭೪ ॥
ಅನ್ವಯವ್ಯತಿರೇಕೋಕ್ತಸ್ತದ್ವಿವೇಕಾಯ ನಾನ್ಯಥಾ ॥ ೧೭ ೪½ ॥
ತ್ವಂಪದಾರ್ಥವಿವೇಕೇ ಹಿ ಪಾಣಾನರ್ಪಿತಬಿಲ್ವವತ್ ।
ವಾಕ್ಯಾರ್ಥೋ ವ್ಯಜ್ಯತೇ ಚೈವಂ ಕೇವಲಾಹಂಪದಾರ್ಥತಃ[4]॥ ೧೭೫ ॥
ದುಃಖೀತ್ಯೇತದಪೋಹೇನ ಪ್ರತ್ಯಗಾತ್ಮವಿನಿಶ್ಚಯಾತ್ ॥ ೧೭೫½ ॥

೧೭೪–೧೭೫½. 'ತತ್ತ್ವಮಸಿ' ಮುಂತಾದ ವಾಕ್ಯಗಳಲ್ಲಿ ತ್ವಂಪದದ ಅರ್ಥವನ್ನು ವಿಂಗಡಿಸಿ ಅರಿತುಕೊಳ್ಳದೆ ಇರುವದರಿಂದ ನಾನು ನಿತ್ಯಮುಕ್ತನು ಎಂಬ ವಾಕ್ಯಾರ್ಥವು ವ್ಯಕ್ತವಾಗುವದಿಲ್ಲ. ಆದ್ದರಿಂದ ಅನ್ವಯವ್ಯತಿರೇಕಗಳನ್ನು ಹೇಳಿರುವದು ಅದನ್ನು ವಿಂಗಡಿಸಿ ಅರಿತುಕೊಳ್ಳುವದಕ್ಕೇ ಹೊರತು

---

1. ಶ್ರುತಿಯಲ್ಲಿ ಅನ್ವಯವ್ಯತಿರೇಕಗಳನ್ನು ಆಪಸ್ಥಾತ್ರಯಪರೀಕ್ಷೆಯಿಂದ ತಿಳಿಸಿಕೊಟ್ಟಿದೆ. ಇವರಿಂದ ತ್ವಂಪದದ ಅರ್ಥದ ಸ್ಮರಣೆಯುಂಟಾಗುತ್ತದೆ.

2. ಪದಾರ್ಥಜ್ಞಾನವೇ ವಾಕ್ಯಾರ್ಥಜ್ಞಾನಕ್ಕೆ ಉಪಾಯವಾಗಿರುವದರಿಂದ ಅನ್ವಯವ್ಯತಿರೇಕಗಳಿಂದ ಪದಾರ್ಥವಿವೇಕವನ್ನು ಮಾಡಿಕೊಂಡಮೇಲೆ ವಾಕ್ಯಾರ್ಥವು ಗೊತ್ತಾಗುತ್ತದೆ.

3. ಮತ್ತೆ ಯಾವ ಶಂಕೆಯೂ ವಾಕ್ಯಾರ್ಥದಮೇಲೆ ಹುಟ್ಟುವದಿಲ್ಲ– ಎಂದರ್ಥ.

4. 'ಕೇವಲೋಽಹಂ ಪದಾರ್ಥತಃ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು. 'ಕೇವಲಾಹಂ' ಎಂಬ ಮಾತು ಅದ್ವಿತೀಯಾತ್ಮ ಎಂಬರ್ಥದಲ್ಲಿ ೧೬೦ನೆಯ ಶ್ಲೋಕದಲ್ಲಿ ಪ್ರಯುಕ್ತವಾಗಿರುತ್ತದೆ.

ಮತ್ತೆ ಬೇರೆ ಅಲ್ಲ.[1] ಏಕೆಂದರೆ ತ್ವಂಪದಾರ್ಥವನ್ನು ವಿಂಗಡಿಸಿ ಅರಿತುಕೊಂಡರೆ (ನಾನು) ದುಃಖಿ ಎಂಬುದನ್ನು ತೆಗೆದುಹಾಕಿ ಪ್ರತ್ಯಗಾತ್ಮನನ್ನೇ ನಿಶ್ಚಯಿಸಿಕೊಳ್ಳುವದರಿಂದ ಶುದ್ಧಾಹಂಪದಾರ್ಥವೇ ವಾಕ್ಯಾರ್ಥವೆಂಬುದು ಅಂಗೈಯಲ್ಲಿಟ್ಟ ಬಿಲ್ವದಂತೆ ವ್ಯಕ್ತವಾಗುತ್ತದೆ.[2]

ವಾಕ್ಯಜ್ಞಾನವು ಪ್ರತ್ಯಕ್ಷಬಾಧಿತವಲ್ಲ

ತತ್ರೈವಂ ಸಂಭವತ್ಯರ್ಥೇ ಶ್ರುತಹಾನಾಶ್ರುತಾರ್ಥಧೀಃ ।
ನೈವ ಕಲ್ಪಯಿತುಂ ಯುಕ್ತಾ ಪದವಾಕ್ಯಾರ್ಥಕೋವಿದೈಃ ॥ ೧೭೬ ॥

೧೭೬. ಇಲ್ಲಿ ಹೀಗೆ ಅರ್ಥವು ಹೊಂದುತ್ತಿರುವಲ್ಲಿ ಶ್ರುತಿಯಲ್ಲಿ ಹೇಳಿದ್ದನ್ನು ಬಿಟ್ಟು ಅಶ್ರುತವಾದ ಅರ್ಥದ ಜ್ಞಾನವನ್ನು ಕಲ್ಪಿಸುವದು[3] ಪದಾರ್ಥವನ್ನೂ ವಾಕ್ಯಾರ್ಥವನ್ನೂ ಬಲ್ಲವರಿಗೆ ಎಂದಿಗೂ ಯುಕ್ತವಲ್ಲ.[4]

ಪ್ರತ್ಯಕ್ಷಾದೀನಿ ಬಾಧೇರನ್ ಕೃಷ್ಣಲಾದಿಷು ಸಾಕವತ್ ।
ಅಕ್ಷಜಾದಿನಿಭೈರೇತೈಃ ಕಥಂ ಸ್ಯಾದ್ವಾಕ್ಯಬಾಧನಮ್ ॥ ೧೭೭ ॥

೧೭೭. ಕೃಷ್ಣಲಾದಿಗಳನ್ನು ಬೇಯಿಸುವದೆಂಬುದನ್ನು ಹೇಗೋ ಹಾಗೆ

---

1. ವಾಕ್ಯಾರ್ಥವು ಗೊತ್ತಾದಬಳಿಕ ಪ್ರಸಂಖ್ಯಾನವೇ ಮುಂತಾದದ್ದನ್ನು ತಿಳಿಸುವ ಪಕ್ಕಲ್ಲ ಮತ್ತೆ ಮತ್ತೆ ಶ್ವೇತಕೇತುವಿನ ಪ್ರಶ್ನೆಯೂ ಉದ್ದಾಲಕನ ಉತ್ತರವೂ ಬಂದಿರುವದು; ತ್ವಂಪದಾರ್ಥದ ವಿವೇಕಕ್ಕಾಗಿಯೇ ಅದು ಬಂದಿದೆ– ಎಂದರ್ಥ. ಅನ್ವಯವೆಂದರೆ ಆತ್ಮನು ಇದ್ದುಕೊಂಡೇ ಇರುವದು; ವ್ಯತಿರೇಕವೆಂದರೆ ಅನಾತ್ಮವು ಇಲ್ಲದಿರುವದು.

2. ಅನಾತ್ಮಗಳಿಂದೊಡಗೂಡಿದ ಚೈತನ್ಯವೇ ತಾನೆಂದು ಅರಿತುಕೊಂಡವನಿಗೆ ಶುದ್ಧಾಹಂಪದಾರ್ಥವನ್ನು ತಿಳಿಸಿದರೆ 'ನಾನು ನಿತ್ಯಮುಕ್ತನು' ಎಂಬ ವಾಕ್ಯಾರ್ಥವು ಅಪರೋಕ್ಷವಾಗಿ ತಿಳಿಯಬರುತ್ತದೆ. ಆಗ ಪ್ರಸಂಖ್ಯಾನಾದಿಗಳು ಯಾವವೂ ಬೇಕಾಗುವದಿಲ್ಲ; ಏಕೆಂದರೆ ಆಗ 'ನಾನು ದುಃಖಿ' ಎಂಬ ಅರಿವು ಮಿಥ್ಯಾಜ್ಞಾನವಾದ್ದರಿಂದ ಬಾಧಿತವಾಗಿಬಿಟ್ಟಿರುತ್ತದೆ ಎಂದರ್ಥ.

3. ವಾಕ್ಯವು ಬ್ರಹ್ಮಾತ್ಮೈಕ್ಯವನ್ನು ಹೇಳುತ್ತದೆ, ಪ್ರಸಂಖ್ಯಾನವನ್ನು ಹೇಳುವದಿಲ್ಲ. ಅದು ಹೇಳದೆ ಇರುವದನ್ನು ಕಲ್ಪಿಸುವದು ಸರಿಯಲ್ಲ.

4. ಪ್ರಸಂಖ್ಯಾನವಾದಿಗಳು ಪದಾರ್ಥವನ್ನೂ ವಾಕ್ಯಾರ್ಥವನ್ನೂ ಅರಿಯರೆಂಬ ಅಭಿಪ್ರಾಯವು ಇದರಲ್ಲಿ ಅಡಗಿರುತ್ತದೆ.

ಪ್ರತ್ಯಕ್ಷಾದಿ (ಪ್ರಮಾಣ)ಗಳು ವಾಕ್ಯವನ್ನು ಬಾಧಿಸಬಹುದು.[1] (ಆದರೆ) ಈ ಪ್ರತ್ಯಕ್ಷವೇ ಮುಂತಾದವು ಆಭಾಸಗಳಿಂದ[2] ವಾಕ್ಯವನ್ನು ಬಾಧಿಸುವದು ಹೇಗಾದೀತು?[3]

ದುಃಖ್ಯಸ್ಮೀತಿ ಸತಿ ಜ್ಞಾನೇ ನಿರ್ದುಃಖೀತಿ ನ ಜಾಯತೇ ।
ಪ್ರತ್ಯಕ್ಷಾದಿನಿಭತ್ವೇಽಪಿ ವಾಕ್ಯಾನ್ನ ವ್ಯಭಿಚಾರತಃ ॥ ೧೭೪ ॥

ಸ್ವಪ್ನೇ ದುಃಖ್ಯಹಮುಧ್ಯಾಸಂ ದಾಹಚ್ಛೇದಾದಿಹೇತುತಃ ।
ತತ್ಕಾಲಭಾವಿಭಿರ್ವಾಕ್ಯೈರ್ನ ಬಾಧಃ ಕ್ರಿಯತೇ ಯದಿ ॥ ೧೭೫ ॥

ಸಮಾಸ್ತೇ ಸ್ತರ್ಹಿ ದುಃಖಸ್ಯ ಪ್ರಾಕ್ಚ ತದ್ಬಾಧ ಇಷ್ಯತಾಮ್ ।
ನ ಹಿ ದುಃಖಸ್ಯ ಸನ್ತಾನೋ ಭ್ರಾನ್ತೇರ್ವಾ ದೃಶ್ಯತೇ ಕ್ವಚಿತ್॥ ೧೭೬ ॥

೧೭೪–೧೭೬. (ಆಕ್ಷೇಪ): ಪ್ರತ್ಯಕ್ಷಾದಿಗಳ ಆಭಾಸವಾದರೂ 'ದುಃಖಿಯಾಗಿರುವೆನು' ಎಂಬ ಜ್ಞಾನವು ಇರುವಲ್ಲಿ '(ನಾನು) ನಿರ್ದುಃಖಿಯು' ಎಂಬ (ಜ್ಞಾನವು) ವಾಕ್ಯದಿಂದ ಹುಟ್ಟಲಾರದಲ್ಲ![4] (ಪರಿಹಾರ): ಹಾಗಲ್ಲ. ಏಕೆಂದರೆ (ಇದಕ್ಕೆ) ಬದಲಾವಣೆಯುಂಟು. ಸುಡುವದು, ಕತ್ತರಿಸುವದು– ಮುಂತಾದ ಕಾರಣದಿಂದ 'ಕನಸಿನಲ್ಲಿ ನಾನು ದುಃಖಿಯಾಗಿದ್ದೆನು' (ಎಂಬ ಜ್ಞಾನವು ಬಾಧಿತವಾಗುವದು ಕಂಡಿದೆ.[5] (ಆಕ್ಷೇಪ): ಆ ಕಾಲದಲ್ಲಿರುವ ವಾಕ್ಯಗಳಿಂದ

---

1. 'ಕೃಷ್ಣಲ' ಎಂದರೆ ಚಿನ್ನದ ಉದ್ದಿನಕಾಳುಗಳು ಎಂದು ಕೆಲವರು; ಸಣ್ಣ ಕರಿಯ ಕಲ್ಲು ಹರಳುಗಳು ಎಂದು ಮತ್ತೆ ಕೆಲವರು. ಬೃ.ವಾ. ೧–೪–೪೮ರ ಟೀಕೆಯನ್ನು ನೋಡಿ. ಕೃಷ್ಣಲಗಳನ್ನು ಬೇಯಿಸಿ ಮೆತ್ತಗೆ ಮಾಡುವದು ಪ್ರತ್ಯಕ್ಷಕ್ಕೆ ವಿರುದ್ಧವಾಗಿರುವದರಿಂದ 'ಕೃಷ್ಣಲಗಳನ್ನು ಬೇಯಿಸಬೇಕು' ಎಂಬ ವೇದವಾಕ್ಯಕ್ಕೆ ಮೆತ್ತಗೆ ಮಾಡಬೇಕು ಎಂಬ ಅರ್ಥವಲ್ಲ; ಬೇಯಿಸುವದಕ್ಕೆ ಮಾಡುವ ಪ್ರಯತ್ನವನ್ನು ಮಾಡಬೇಕು; ಅದರಿಂದ ಅದೃಷ್ಟವಾದ ಸಂಸ್ಕಾರವಾಗುವದು ಎಂದು ಮೀಮಾಂಸಕರು ಕಲ್ಪಿಸಿರುತ್ತಾರೆ.

2. ನಾನು ದುಃಖಿಯು ಎಂಬುದು ಪ್ರತ್ಯಕ್ಷಫಲ್ಲ, ಪ್ರತ್ಯಕ್ಷಾಭಾಸ; ಏಕೆಂದರೆ ಮನಃಸ್ಪಂದನವಿಲ್ಲದ ಸುಷುಪ್ತ್ಯಾದಿಗಳಲ್ಲಿ ದುಃಖಿತ್ವವಿರುವದಿಲ್ಲ ಎಂದು ಹಿಂದೆ ೧೬೪ರಲ್ಲಿ ತಿಳಿಸಿದ್ದಾಗಿದೆ.

3. ವಾಕ್ಯವು ಪ್ರಮಾಣ; ಆದ್ದರಿಂದ ನಿರ್ದುಃಖಾತ್ಮಜ್ಞಾನವು ಪ್ರಮಾಣಜನ್ಯ. ದುಃಖಿತ್ವಜ್ಞಾನವು ಪ್ರತ್ಯಕ್ಷಾಭಾಸಜನ್ಯ. ಆದ್ದರಿಂದ ಈ ಪ್ರತ್ಯಕ್ಷದಿಂದ ವಾಕ್ಯಾರ್ಥಜ್ಞಾನವು ಬಾಧಿತವಾಗಲಾರದು ಎಂದರ್ಥ. ಇದು ೧೫ನೆಯ ಶ್ಲೋಕದಲ್ಲಿ ಒಡ್ಡಿದ್ದ ಪೂರ್ವಪಕ್ಷದ ಖಂಡನೆ.

4. ದುಃಖಿತ್ವಜ್ಞಾನವು ಪ್ರತ್ಯಕ್ಷಾದ್ಯಾಭಾಸವಾದರೂ ಒಂದು ಜ್ಞಾನವಿರುವಾಗ ಮತ್ತೊಂದು ಉಂಟಾಗುವದು ಹೇಗೆ?– ಎಂದು ಆಕ್ಷೇಪ.

5. ಎಚ್ಚರದಲ್ಲಿ ಆದೆಲ್ಲ ಸುಳ್ಳು ಎಂದು ಗೊತ್ತಾಗುತ್ತದೆ.

ಬಾಧೆಯಾಗುವದಿಲ್ಲವಲ್ಲ![1] (ಪರಿಹಾರ): ಹಾಗಾದರೆ ದುಃಖವು ಮುಗಿದ ಮೇಲೆ ಅಥವಾ ಮೊದಲು ಅದು ಬಾಧಿತವಾಗುತ್ತದೆ ಎಂದು ಒಪ್ಪಬೇಕು.[2] ದುಃಖದ ಅಥವಾ ಭ್ರಾಂತಿಯ ಸಂತಾನವು ಯಾವಾಗಲೂ ಕಂಡುಬಂದಿಲ್ಲ ವಷ್ಟೆ ?[3]

ಪ್ರತ್ಯಗಾತ್ಮನ ಆತ್ಮತ್ವಂ ದುಃಖ್ಯಸ್ಮೀತ್ಯಸ್ಯ ಬಾಧಯಾ |
ದಶಮಂ ನವಮಸ್ಯೇವ ವೇದ ಚೇದವಿರುದ್ಧತಾ ॥ ೧೭೧ ॥

೧೭೧. "ದುಃಖಿಯಾಗಿರುತ್ತೇನೆ" ಎಂಬ (ಜ್ಞಾನವನ್ನು) **ಬಾಧಿಸಿ** ಪ್ರತ್ಯಗಾತ್ಮನೇ ನಾನು ಎಂದು ಒಂಬತ್ತನೆಯವ(ನೆಂಬ ಜ್ಞಾನದ) **ಬಾಧೆಯಿಂದ** ಹತ್ತನೆಯವನನ್ನು (ಅರಿತುಕೊಳ್ಳು)ವಂತೆ ಅರಿತುಕೊಂಡರೆ (**ಯಾವ**) ವಿರೋಧವೂ ಇರುವದಿಲ್ಲ.[4]

ನಿತ್ಯಮುಕ್ತತ್ವೆವಿಜ್ಞಾನಂ ವಾಕ್ಯಾದ್ಭವತಿ ನಾನ್ಯತಃ |
ವಾಕ್ಯಾರ್ಥಸ್ಯಾಪಿ ವಿಜ್ಞಾನಂ ಪದಾರ್ಥಸ್ಮೃತಿಪೂರ್ವಕಮ್ ॥ ೧೭೨ ॥
ಅನ್ವಯವ್ಯತಿರೇಕಾಭ್ಯಾಂ ಪದಾರ್ಥಃ ಸ್ಮರ್ಯತೇ ಧ್ರುವಮ್ |
ಏವಂ ನಿರ್ದುಃಖಮಾತ್ಮಾನಮುಕ್ರಿಯಂ ಪ್ರತಿಪದ್ಯತೇ ॥ ೧೭೩ ॥

೧೭೨-೧೭೩. (ನಾನು) ನಿತ್ಯಮುಕ್ತನೆಂಬ ಅರಿವು ವಾಕ್ಯದಿಂದಲೇ ಆಗುವದೇ ಹೊರತು ಮತ್ತೊಂದರಿಂದ[5] ಆಗುವದಿಲ್ಲ. ವಾಕ್ಯಾರ್ಥದ ಅರಿವು

---

1. ವಾಕ್ಯದಿಂದ ಪ್ರತ್ಯಕ್ಷಾದಿಗಳ ಅಭಾಸಜ್ಞಾನವು ಹೋಗುವದಕ್ಕೆ ಅದು ಹೇಗೆ ದೃಷ್ಟಾಂತವು ?– ಎಂದು ಆಕ್ಷೇಪಕನ ಆಶಯ.

2. ಎಚ್ಚರಕನಸುಗಳಲ್ಲಿ ಅದು ಇರುವದಿಲ್ಲವೆಂದು ನೀವೇ ಒಪ್ಪಿದೀರಷ್ಟೆ– ಎಂದು ಭಾವ. ಕನಸು ಆದ್ಯಂತಗಳಿರುವದರಿಂದ ಮಿಥ್ಯೆಯೆಂದು ವಾಕ್ಯಜ್ಞಾನದಿಂದ ಬಾಧಿತವಾಗಬಹುದಷ್ಟೆ. ಹಾಗೆಯೇ ದುಃಖಿತ್ವಜ್ಞಾನವೂ ಆಗಲಿ ಎಂದು ಭಾವ.

3. ದುಃಖಿತ್ವವಾಗಲಿ ಭ್ರಾಂತಿಯಾಗಲಿ ಸಂತತವಾಗಿ ಇರುವದೇ ಇಲ್ಲ; ಆದ್ದರಿಂದಲೇ ಅದು ಆತ್ಮನ ಧರ್ಮವಲ್ಲವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಆದನ್ನು ವಾಕ್ಯಜ್ಞಾನವು ಬಾಧಿಸಬಹುದಾಗಿನೆ ಎಂದು ಅಭಿಪ್ರಾಯ.

4. ಪ್ರತ್ಯಕ್ಷಾದಿಪ್ರಮಾಣಗಳಿಗೆ ವಿರೋಧವಿಲ್ಲ; ಏಕೆಂದರೆ 'ನಾನು ದುಃಖಿ' ಎಂಬುದು ಪ್ರಮಾಣಜನ್ಯಜ್ಞಾನವಲ್ಲ. ಇದಕ್ಕೆ ವಾಕ್ಯದಿಂದ 'ನಾನು ಸದ್ಬ್ರಹ್ಮವು' ಎಂದು ತಿಳಿದುಕೊಂಡು ಮತ್ತೆ ಪ್ರಸಂಖ್ಯಾನಾದಿಗಳನ್ನು ಮಾಡಬೇಕು ಎಂದು ಕಲ್ಪಿಸಿದರೆ ಹಿಂದೆ ಹೇಳಿದಂತೆ ಶ್ರುತಹಾನಿ, ಅಶ್ರುತಕಲ್ಪನೆ, ವೇದಕ್ಕೆ ಆಪ್ತಾಮಾಣ್ಯ, ಮುಕ್ತಿಗೆ ಅನಿತ್ಯತ್ವ– ಮುಂತಾದ ದೋಷಗಳು ಬರುತ್ತವೆ– ಎಂದು ಭಾವ.

5. ಪ್ರಸಂಖ್ಯಾನಾದಿಗಳಿಂದ.

ಕೂಡ ಪದಾರ್ಥಗಳ ಸ್ಮೃತಿಯು ಮೊದಲಾವುದೇ (ಆಗುತ್ತದೆ). ಅನ್ವಯ ವ್ಯತಿರೇಕಗಳಿಂದ ಅವಶ್ಯವಾಗಿ ಪದಾರ್ಥದ ನೆನಪು ಉಂಟಾಗುತ್ತದೆ. ಈರೀತಿಯಲ್ಲಿ ತಾನು ನಿರ್ದುಃಖನೆಂದೂ ಕರ್ತೃತ್ವರಹಿತನೆಂದೂ ಅರಿತುಕೊಳ್ಳುತ್ತಾನೆ.[1]

ಸದೇವೇತ್ಯಾದಿವಾಕ್ಯೇಭ್ಯಃ ಪ್ರಮಾ ಸ್ಫುಟತರಾ ಭವೇತ್ ।
ದಶಮಸ್ತ್ವಮಸೀತ್ಯಸ್ಮಾದ್ಯಥೈವಂ ಪ್ರತ್ಯಗಾತ್ಮನಿ ॥ ೧೪೪ ॥
ಪ್ರಬೋಧೇನ ಯಥಾ ಸ್ವಾಪ್ನಂ ಸರ್ವದುಃಖಂ ನಿವರ್ತತೇ ।
ಪ್ರತ್ಯಗಾತ್ಮಧಿಯಾ ತದ್ವದ್ದುಃಖಿತ್ವಂ ಸರ್ವಥಾತ್ಮನಃ[2] ॥ ೧೪೫ ॥
ಕೃಷ್ಣಲಾದೌ ಪ್ರಮಾಜನ್ಮ ತದನ್ಯಾರ್ಥಾನ್ಯದುತ್ವತಃ ।
ತತ್ತ್ವಮಸ್ಯಾದಿವಾಕ್ಯೇಷು ನತ್ವೇವಮವಿರೋಧತಃ ॥ ೧೪೬ ॥

೧೪೪-೧೪೬. "ಸದೇವ" (ಛಾಂ. ೬-೨-೨) ಮುಂತಾದ ವಾಕ್ಯಗಳಿಂದ 'ಹತ್ತನೆಯವನು ನೀನು' ಎಂಬ ವಾಕ್ಯದಿಂದ ಹೇಗೋ ಹಾಗೆ ಪ್ರತ್ಯಗಾತ್ಮನಲ್ಲಿ ಸ್ಫುಟತರವಾದ ಪ್ರಮೆಯುಂಟಾಗುವದು.[3] ಎಚ್ಚರದಿಂದ ಹೇಗೆ ಕನಸಿನ ಎಲ್ಲಾ ದುಃಖವೂ ತೊಲಗುತ್ತದೆಯೋ ಹಾಗೆ ಪ್ರತ್ಯಗಾತ್ಮಜ್ಞಾನದಿಂದ ಆತ್ಮನಿಗೆ ಎಲ್ಲಾ ಬಗೆಯ ದುಃಖಿತ್ವವೂ ತೊಲಗುವದು.[4] "ಕೃಷ್ಣಲ"(ಗಳನ್ನು ಬೇಯಿಸಬೇಕು) ಮುಂತಾದ ವಾಕ್ಯಗಳಲ್ಲಿ ಪ್ರಮೆಯುಂಟಾಗದಿರುವದಕ್ಕೆ (ಕಾರಣವೇನೆಂದರೆ) ಅದಕ್ಕಿಂತ ಬೇರೆ ಅರ್ಥವಿರುವದು,[5] ಕೃಷ್ಣಲಗಳು ಮೃದು

---

1. ಹೀಗೆ ಅರಿತುಕೊಂಡಮ್ಮ ಪ್ರಮಾಣದಿಂದಾದ್ದರಿಂದ ಬಾಧಿತವಾಗುವದಿಲ್ಲ. ಆ ಬಳಿಕ ಮಾಡಬೇಕಾದ ಪ್ರಸಂಖ್ಯಾನಾದಿಗಳಿಗೂ ಅವಕಾಶವಿರುವದಿಲ್ಲ- ಎಂದು ಭಾವ.

2. 'ಸರ್ವದಾ' ಎಂಬ ಮೈ॥ ಪಾಠವನ್ನು ಬಿಟ್ಟು ಈ ಬೋಧನಿಧಿಯ ಪಾಠವನ್ನು ತೆಗೆದುಕೊಂಡಿದೆ.

3. ವಾಕ್ಯವು ಅಬೋಧಕವೆಂಬ ಅಪ್ರಾಮಾಣ್ಯಪ್ರಸಕ್ತಿಯಿಲ್ಲ ಎಂದು ಭಾವ. ಒಂದು ಸಲ ವಾಕ್ಯವನ್ನು ಕೇಳಿದರೆ ಅರಿವಾಗುವದಿಲ್ಲ ಎಂಬ ೧೦೯ನೆಯ ಶ್ಲೋಕದ ಪೂರ್ವಪಕ್ಷಕ್ಕೆ ಉತ್ತರವಿದು.

4. ವಾಕ್ಯಜ್ಞಾನವು ಮಿಥ್ಯಾಜ್ಞಾನವನ್ನೂ ಅದರ ಕಾರ್ಯವನ್ನೂ ತೊಲಗಿಸುವದಿಲ್ಲ ಎಂಬ ೧೫೦ನೆಯ ಶ್ಲೋಕದ ಪೂರ್ವಪಕ್ಷಕ್ಕೆ ಉತ್ತರವಿದು. ಜ್ಞಾನಕ್ಕೆ ನಿಷ್ಫಲತ್ವವೆಂಬ ಅಪ್ರಾಮಾಣ್ಯವಿಲ್ಲ ಎಂದು ಭಾವ.

5. ಕೃಷ್ಣಲಗಳನ್ನು ಬೇಯಿಸಿ ಮೆತ್ತಗೆ ಮಾಡಬೇಕೆಂಬ ತಾತ್ಪರ್ಯವೇ ವೇದಕ್ಕಿಲ್ಲ; ಅವು ಮೆತ್ತಗಾಗುವದಿಲ್ಲವೆಂಬುದು ಪ್ರತ್ಯಕ್ಷಪ್ರಮಾಣದಿಂದಲೂ ತಿಳಿಯುತ್ತದೆ. ಆದ್ದರಿಂದ ಆ ವಾಕ್ಯಗಳಿಗೆ ಆ ಅಂಶದಲ್ಲಿ ಪ್ರಾಮಾಣ್ಯವು ಬಾಧಿತವಾಗುತ್ತದೆ. ಆದರೆ ಇಲ್ಲಿ 'ತತ್ತ್ವಮಸಿ' ಎಂದು ತಾತ್ಪರ್ಯದಿಂದ ವಾಕ್ಯವು ಹೇಳುತ್ತದೆ; ಬಾಧಕಪ್ರಮಾಣವೂ ಇಲ್ಲ. ಆದ್ದರಿಂದ ವಿಪರೀತಬೋಧಕತ್ವವೆಂಬ ಅಪ್ರಾಮಾಣ್ಯವಿಲ್ಲ ಎಂದು ಭಾವ. ವಾಕ್ಯಜ್ಞಾನವು ಪ್ರತ್ಯಕ್ಷಬಾಧಿತವೆನ್ನುವ ೧೩೯ನೆಯ ಶ್ಲೋಕದ ಪೂರ್ವಪಕ್ಷಕ್ಕೆ ಉತ್ತರವಿದು. ವಾಕ್ಯವು ಸರ್ವಥಾ ಪ್ರಮಾಣವು ಎಂದು ಉಪಸಂಹಾರಮಾಡಿದಂತೆ ಆಯಿತು.

ವಾಗದಿರುವದು. ಆದರೆ 'ತತ್ತ್ವಮಸಿ' ಮುಂತಾದ ವಾಕ್ಯಗಳಲ್ಲಿ ಹೀಗಿಲ್ಲ; ಏಕೆಂದರೆ (ಇಲ್ಲಿ ಯಾವ) ವಿರೋಧವೂ ಇಲ್ಲ.[1]

ತತ್ತ್ವಮಸಿವಾಕ್ಯದಲ್ಲಿ ಪದಗಳ ಕೃತ್ಯ

ವಾಕ್ಯೇ ತತ್ತ್ವಮಸೀತ್ಯಸ್ಮಿನ್ಜ್ಞಾತಾರ್ಥಂ ತದಸಿ ದ್ವಯಮ್ ।
ತ್ವಮರ್ಥಸ್ಮೃತಸಾಹಾಯ್ಯಾ[2]ದ್ವಾಕ್ಯಂ ನೋತ್ಪಾದಯೇತ್ ಪ್ರಮಾಮ್
ತತ್ತ್ವೋಸ್ತ್ವನೀಡಾರ್ಥಮಸೀತ್ಯೇತತ್ಪದಂ ಭವೇತ್॥೧೮೭½ ॥

ತಚ್ಛಬ್ದಃ ಪ್ರತ್ಯಗಾತ್ಮಾರ್ಥಸ್ತಚ್ಛಬ್ದಾರ್ಥಸ್ತ್ವಮಸ್ತಥಾ ।
ದುಃಖಿತ್ವಾಪ್ರತ್ಯಗಾತ್ಮತ್ವಂ ವಾರಯೇತಾಮುಭಾವಪಿ ॥ ೧೮೮ ॥
ಏವಂ ಚ ನೇತಿನೇತ್ಯರ್ಥಂ ಗಮಯೇತಾಂ ಪರಸ್ಪರಮ್ ॥೧೮೮½ ॥

೧೮೭-೧೮೮½. 'ತತ್ತ್ವಮಸಿ' ಎಂಬೀ ವಾಕ್ಯದಲ್ಲಿ 'ತತ್' 'ಅಸಿ' ಎಂಬ ಎರಡಕ್ಕೂ ಅರ್ಥವು ತಿಳಿದರೂ ತ್ವಂಪದದ ಅರ್ಥದ ಸ್ಮೃತಿಯಾಗದಿದ್ದರೆ ಸಹಾಯವಿಲ್ಲದ್ದರಿಂದ[3] (ಈ) ವಾಕ್ಯವು ಪ್ರಮೆಯನ್ನುಂಟುಮಾಡಲಾರದು.[4] 'ತತ್' ಮತ್ತು 'ತ್ವಮ್' (ಎಂಬ ಪದಗಳು) ಏಕಾರ್ಥವೃತ್ತಿಗಳೆಂದು (ತಿಳಿಸು)ವದಕ್ಕೆ 'ಅಸಿ' ಎಂಬೀ ಪದವು ಇರಬೇಕು.[5] 'ತತ್' ಎಂಬ ಶಬ್ದವು ಪ್ರತ್ಯಗಾತ್ಮನೆಂಬ ಅರ್ಥವುಳ್ಳದ್ದಾಗಿ 'ತ್ವಮ್' ಎಂಬ (ಪದ)ಕ್ಕೆ 'ತತ್' (ಎಂಬ) ಶಬ್ದದ ಅರ್ಥವೂ (ಬಂದಿರೆ ಈ) ಎರಡೂ (ಸೇರಿ) ದುಃಖಿತ್ವವನ್ನೂ ಅಪ್ರತ್ಯಗಾತ್ಮತ್ವವನ್ನೂ ಕಳೆಯುವವು.[6] (ಅಂತೂ) ಈ ರೀತಿಯಲ್ಲಿ (ಇವು)

---

1. 'ತತ್ತ್ವಮಸಿ' ವಾಕ್ಯವು ಬ್ರಹ್ಮಾತ್ಮೈಕ್ಯವನ್ನು ಹೊರತು ಮತ್ತೇನನ್ನೂ ಹೇಳುವದಕ್ಕೆ ಬಂದಿಲ್ಲ; ಆ ವಾಕ್ಯದಿಂದಾಗುವ ಜ್ಞಾನವು ಮತ್ತೊಂದು ಪ್ರಮಾಣಕ್ಕೆ ವಿಷಯವೂ ಆಲ್ಲ.

2. 'ಅಸತ್ಯಸಾಹಾಯ್ಯಾತ್' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವು ಮೇಲು.

3. ಪದಾರ್ಥಗಳ ಸ್ಮೃತಿಯೇ ವಾಕ್ಯಾರ್ಥಜ್ಞಾನಕ್ಕೆ ಬೇಕಾದ ಪರಸ್ಪರ ಸಹಾಯವು.

4. ಆದ್ದರಿಂದ ತ್ವಂಪದಾರ್ಥಸ್ಮೃತಿಯೂ ಬೇಕು.

5. ಹಾಗಿಲ್ಲದಿದ್ದರೆ ಅದೇ ಆತ್ಮನೇ ಜಗತ್ಕಾರಣನು ಮತ್ತು ಪ್ರತ್ಯಗಾತ್ಮನು ಎಂಬ ವಾಕ್ಯಾರ್ಥಜ್ಞಾನವಾಗಲಾರದು.

6. ಸಾಮಾನಾಧಿಕರಣ್ಯವಿರುವದರಿಂದ ತತ್ಪದವ ಪಾರೋಕ್ಷ್ಯಾರ್ಥತ್ವವನ್ನು ತ್ವಂಪದವು ಬಿಡಿಸುವದು; ತ್ವಂಪದವ ದುಃಖಿತ್ವಾರ್ಥತ್ವವನ್ನು ತತ್ಪದವು ಬಿಡಿಸುವದು.

ಒಂದನ್ನೊಂದು 'ನೇತಿನೇತಿ' (ಬೃ. ೨-೩-೬) ಎಂಬ (ವಾಕ್ಯದ) ಅರ್ಥವನ್ನು ತಿಳಿಸುವಂತೆ ಮಾಡುವವು.[1]

ಅನುಭವಕ್ಕಾಗಿ ಪ್ರಸಂಖ್ಯಾನವಿಧಿ ಎಂಬುದು ಸರಿಯಲ್ಲ

ಏವಂ ತತ್ತ್ವಮಸೀತ್ಯಸ್ಯ ಗಮ್ಯಮಾನೇ ಫಲೇ ಕಥಮ್ ।
ಅಪ್ರಮಾಣತ್ವಮಸ್ಯೋಕ್ತ್ವಾ[2] ಕ್ರಿಯಾಪೇಕ್ಷತ್ವಮುಚ್ಯತೇ ॥ ೧೪೯ ॥

೧೪೯. ಹೀಗೆ 'ತತ್ತ್ವಮಸಿ' ಎಂಬುದಕ್ಕೆ ಫಲವು ಕಾಣುತ್ತಿರುವಲ್ಲಿ ಇದು ಅಪ್ರಮಾಣವೆಂದು ಹೇಳಿ ಇದಕ್ಕೆ ಕ್ರಿಯೆಯ ಅಪೇಕ್ಷೆಯಿರುವುದೆಂದು ಹೇಗೆ ಹೇಳುತ್ತೀರಿ ?[3]

ತಸ್ಮಾದಾದ್ಯನ್ತಮಧ್ಯೇಷು ಕುರ್ವಿತ್ಯೇತತ್ ವಿರೋಧ್ಯತಃ ।
ನ ಕಲ್ಪ್ಯಮ್[4] ಶ್ರುತತ್ವಾಚ್ಚ ಶ್ರುತಹಾನ್ಯಾಗೋಽಪ್ಯನರ್ಥತಃ ॥ ೧೫೦ ॥

೧೫೦. ಆದ್ದರಿಂದ ಮೊದಲು, ಕೊನೆಯಲ್ಲಿ ಅಥವಾ ನಡುವೆ- ಇದಕ್ಕೆ ವಿರೋಧಿಯಾದ ಮಾಡು ಎಂಬ ಅರ್ಥವನ್ನು ಕಲ್ಪಿಸತಕ್ಕದ್ದಲ್ಲ.[5] ಶ್ರುತಿಯಲ್ಲಿ

---

1. ತತ್ಪದತ್ವಂಪದಗಳಿರತೂ ಸೇರಿದ್ದರಿಂದ ಎರಡರರ್ಥವೂ ಬರಲಿ ಎಂಬ ಶಂಕೆಗೆ ಕಾರಣವಿಲ್ಲ; ಏಕೆಂದರೆ ಈ ಎರಡೂ ಒಂದು ವಸ್ತುವಿನಲ್ಲಿರುವದು ವಿರುದ್ಧವಾಗಿದೆ. ಆದ್ದರಿಂದ ನಿರ್ವಿಶೇಷಚಿನ್ಮಾತ್ರವೇ ವಾಕ್ಯಾರ್ಥವಾಗುವದು ಎಂದು ಭಾವ.

2. 'ಉಕ್ತಾಂ' ಎಂಬ ಮೈ॥ ಪಾಠವು ಅಚ್ಚಿನ ತಪ್ಪು.

3. ವಾಕ್ಯವು ಅನುಭವರೂಪವಾದ ಫಲವನ್ನುಂಟುಮಾಡುತ್ತದೆ, ಜ್ಞಾನದಿಂದ ಅನರ್ಥನಿವೃತ್ತಿರೂಪವಾದ ಫಲವೂ ತೋರುತ್ತಿದೆ. ಹೀಗಿರುವಲ್ಲಿ ವಾಕ್ಯಕ್ಕೆ ಅಪ್ರಾಮಾಣ್ಯವನ್ನು ಹೇಳುವದು ಹೇಗೆ? ನಿಷ್ಪ್ರಯೋಜನವಾದ ಕ್ರಿಯೆಯನ್ನು ಕಲ್ಪಿಸುವದಾದರೂ ಏತಕ್ಕೆ?

4. 'ಕಲ್ಪಾಮೋ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ. ಮೇಲು.

5. 'ತತ್ತ್ವಮಸಿ' ವಾಕ್ಯಕ್ಕೆ ಜ್ಞಾನವುಂಟಾಗುವದೆಂದು ನೀವೇ ಒಪ್ಪುವದರಿಂದ ಮೊದಲು ಜ್ಞಾನಕ್ಕಾಗಿ ವಿಧಿಯು ಬೇಕಿಲ್ಲ. 'ನಡುವೆ ಅಜ್ಞಾನದಿಂದ ವಾಕ್ಯಜನ್ಯಜ್ಞಾನವು ಬಾಧಿತವಾಗುತ್ತದೆ ಎಂದು ಹೇಳುತ್ತೀರಿ; ಅದು ಅಯುಕ್ತವೆಂದು ನಾವು ತೋರಿಸಿದೇವೆ. ಆದ್ದರಿಂದ ಅಗಲೂ ವಿಧಿ ಬೇಕಿಲ್ಲ. ಕೊನೆಯಲ್ಲಿ ಅನುಭವವಾದಮೇಲೆ ವಿಧಿಯನ್ನು ನೀವೂ ಒಪ್ಪುವದಿಲ್ಲ. ಆದ್ದರಿಂದ ಶ್ರುತಜ್ಞಾನಕ್ಕೆ ವಿರುದ್ಧವಾಗಿ ವಿಧಿಯನ್ನು ಕಲ್ಪಿಸಬಾರದು.

(ಹೇಳದೆ) ಇರುವದರಿಂದಲೂ[1] (ಅದನ್ನು ಕಲ್ಪಿಸತಕ್ಕದ್ದಲ್ಲ); ಶ್ರುತಿಯಲ್ಲಿ ಹೇಳಿದ್ದನ್ನು ಬಿಡುವದೂ ನಿಷ್ಪ್ರಯೋಜನವು.[2]

ಯಥಾನುಭೂಯತೇ ತೃಪ್ತಿರ್ಭುಜೇರ್ವಾಕ್ಯಾನ್ನ ಗಮ್ಯತೇ ।
ವಾಕ್ಯಸ್ಯ ವಿವೃತಿ[3]ಸ್ತದ್ವದ್ಗೋಶಕೃತ್ಪಾಯಸೀಕ್ರಿಯಾ ॥ ೧೮೧ ॥

ಸತ್ಯಮೇವಮನಾತ್ಮಾರ್ಥವಾಕ್ಯಾತ್ ಪಾರೋಕ್ಷ್ಯಬೋಧನಮ್ ।
ಪ್ರತ್ಯಗಾತ್ಮನಿ ನ ತ್ವೇವಂ ಸಙ್ಖ್ಯಾಪ್ರಾಪ್ತಿವದಬ್ರುವನ್[4] ॥ ೧೮೨ ॥

೧೮೧–೧೮೨. (ಆಕ್ಷೇಪ); ಊಟದಿಂದ ಹೇಗೆ ತೃಪ್ತಿಯಾಗುತ್ತದೆಯೋ (ವಾಕ್ಯದಿಂದ ಅನುಭವಕ್ಕೆ ಬರುವದಿಲ್ಲವೋ,[5] ವಾಕ್ಯದ ವಿವರಣೆಯೂ ಹಾಗೆಯೇ ಸಗಣಿಯಿಂದ ಪಾಯಸವನ್ನು ಮಾಡುವ (ಪ್ರಯತ್ನವಾಗುತ್ತದೆ).[6] (ಸಮಾಧಾನ): ನಿಜ. ಅನಾತ್ಮವನ್ನು ಹೇಳುವ ವಾಕ್ಯದಿಂದ ಹೀಗೆ ಪರೋಕ್ಷ ಜ್ಞಾನವೇ ಆಗುತ್ತದೆ. ಆದರೆ ಪ್ರತ್ಯಗಾತ್ಮನಲ್ಲಿ ಹೀಗಲ್ಲ; (ಹತ್ತನೆಯವನೆಂಬ) ಸಂಖ್ಯಾಪ್ರಾಪ್ತಿಯಂತೆ (ಎಂದು ಹಿಂದೆ)[7] ಹೇಳಿದೇನೆ.

---

1. ವಿಧಿಯು ಶ್ರುತಿಯಲ್ಲಿಲ್ಲ; ನಾವೇ ಕಲ್ಪಿಸಿದ್ದು ಅತೀಂದ್ರಿಯವಾದದ್ದರ ಜ್ಞಾನವನ್ನುಂಟುಮಾಡಲಾರದು.

2. 'ನೀನು ಸದ್ಬ್ರಹ್ಮವಾಗಿರುವೆ' ಎಂದು ಶ್ರುತಿಯಲ್ಲಿ ಹೇಳಿದೆ; ಅದನ್ನು ಕೈಬಿಡುವದು ನಿಷ್ಪ್ರಯೋಜನ, ಮತ್ತು ಅನರ್ಥಕರ.

3. 'ವಿವೃತಿಃ' ಎಂಬುದು ಮೈ॥ ಪಾಠ; ಇಲ್ಲಿ ಕೊಟ್ಟಿರುವದು ಬೋಧನಿಧಿಯ ಪಾಠ.

4. 'ಅಧ್ರುವಮ್' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

5. ಊಟದಿಂದಲೇ ಅಪರೋಕ್ಷವಾದ ತೃಪ್ತಿಯ ಅನುಭವವಾಗುವಂತೆ ಊಟದ ವಾಕ್ಯದಿಂದ ಆಗುವದಿಲ್ಲ.

6. ಸಗಣಿಯಿಂದ ಪಾಯಸವು ಆಗದಿರುವಂತೆ ತತ್ತ್ವಮಸಿವಾಕ್ಯವನ್ನು ವಿವರಿಸಿದ ಮಾತ್ರದಿಂದ ಅದ್ವೈತಾನುಭವವಾಗಲಾರದು– ಎಂದು ಅಭಿಪ್ರಾಯ. ವಾಕ್ಯವು ಅನುಭವ ಹೇತುವಲ್ಲ ಎಂಬುದು ಪೂರ್ವಪಕ್ಷಿಯ ಭಾವ.

7. ವಾಕ್ಯದಿಂದ ವಸ್ತುವಿನ ಅನುಭವವುಂಟಾಗುವದಿಲ್ಲವೆಂಬುದು ಅನಾತ್ಮವಾಕ್ಯಗಳಿಗೆ ಹೊಂದುವದು; ತನ್ನ ವಿಷಯದಲ್ಲಿ ಅಪರೋಕ್ಷಾನುಭವವಾಗುವದಕ್ಕೆ ದಶಮನ ದೃಷ್ಟಾಂತವನ್ನು ಹಿಂದೆ ೧೬೯ನೆಯ ಶ್ಲೋಕದಲ್ಲಿ ಕೊಟ್ಟಿರುತ್ತದೆ.

ಸ್ವಯಂವೇದ್ಯತ್ವ[1] ಪರ್ಯಾಯಃ ಸ್ವಪ್ರಮಾಣಕ ಇಷ್ಯತಾಮ್ ।
ನಿವೃತ್ತಾವಹಮಃ[2] ಸಿದ್ಧಂ ಸ್ವಾತ್ಮತೋ[3]ಽನುಭವಶ್ಚ ನಃ ॥ ೧೯೩ ॥

೧೯೩. ಆತ್ಮನು ಸ್ವಪ್ರಮಾಣಕನೆಂಬುದು ಸ್ವಯಂವೇದ್ಯನೆಂಬುದಕ್ಕೆ ಪರ್ಯಾಯವೆಂದು ಒಪ್ಪಬೇಕು.[4] ಅಹಂಕಾರವು ನಿವೃತ್ತವಾಗಲು, ತನ್ನ ಸ್ವರೂಪವಾಗಿರುವದರಿಂದ ಅನುಭವವೂ ನಮಗೆ ಸಿದ್ಧವಾಗುತ್ತದೆ.[5]

ಬುದ್ಧೀನಾಂ ವಿಷಯೋ ದುಃಖಂ ತಾ[6] ಯಸ್ಯ ವಿಷಯಾ ಮತಾಃ ।
ಕುತೋಽಸ್ಯ ದುಃಖಸಂಬನ್ಧೋ ದೃಶೇಃ ಸ್ಯಾತ್ ಪ್ರತ್ಯಗಾತ್ಮನಃ ॥೧೯೪

೧೯೪. ದುಃಖವು ಬುದ್ಧಿ(ವೃತ್ತಿ)ಗಳಿಗೆ ವಿಷಯವು; ಅವು ಯಾವನಿಗೆ ವಿಷಯವೆಂದು ಅಭಿಮತವಾಗಿರುತ್ತದೆಯೋ ಆ ಪ್ರತ್ಯಗಾತ್ಮನಾದ ಸಾಕ್ಷಿಗೆ ದುಃಖಸಂಬಂಧವು ಹೇಗೆ ಇದ್ದೀತು ?[7]

ದೃಶಿರೇವಾನುಭೂಯೇತ ಸ್ವೇನೈವಾನುಭವಾತ್ಮನಾ ।
ತದಾಭಾಸತಯಾ ಜನ್ಮ ಧಿಯೋಽಸ್ಯಾನುಭವಃ ಸ್ಮೃತಃ ॥ ೧೯೫ ॥

---

1. 'ಸ್ವಸಂವೇದ್ಯತ್ವ' ಬೋ. ನಿ.

2. 'ಇದಮಃ' ಬೋ. ನಿ.

3. 'ಸ್ವಾತ್ಮನಃ' ಎಂದೇ ವ್ಯಾಖ್ಯಾನದಲ್ಲಿ ಒಪ್ಪಿರುವ ಪಾಠ; 'ಸ್ವಾತ್ಮತಃ' ಎಂಬುದರಲ್ಲಿ ಹೆಚ್ಚಿನ ಸ್ಪಾರಸ್ಯವಿದೆ.

4. ತನ್ನನ್ನು ತಾನು ಅರಿಯುವನೆಂಬ ಅರ್ಥವಿಲ್ಲ; ಅನ್ಯನಿರಪೇಕ್ಷವಾಗಿ ಸ್ವಯಂ ಪ್ರಕಾಶನು ಎಂದರ್ಥ.

5. ಆತ್ಮನನ್ನು ಅರಿಯುವದಕ್ಕೆ ಮತ್ತೊಂದು ಪ್ರಮಾಣವು ಬೇಡವೆನ್ನುವದೇಕೆಂದರೆ ಮಿಕ್ಕ ವಸ್ತುಗಳು ಅಚೇತನವಾಗಿರುವದರಿಂದ ಅವಕ್ಕೆ ಅನುಭವದ ಸಂಬಂಧದಿಂದ ಜ್ಞಾತತ್ವವೆಂಬ ಪ್ರಸಿದ್ಧಿಯಾಗಬೇಕು; ಆದರೆ ಆತ್ಮನು ಅನುಭವರೂಪನೇ ಆಗಿರುವದರಿಂದ ಈ ಸಂಬಂಧದ ಆವಶ್ಯಕತೆಯಿಲ್ಲ.

6. 'ನೋ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವು ಮೇಲು.

7. ದುಃಖವು ಬುದ್ಧಿಗಿಂತ ಹೊರಗಿದೆ; ಬುದ್ಧಿಯ ವೃತ್ತಿಗಳೇ ಆತ್ಮನಿಗೆ ವಿಷಯವಾಗಿರುವದರಿಂದ ಆತ್ಮನ ಧರ್ಮವಲ್ಲದಿರುವಾಗ ಅವಕ್ಕೂ ಹೊರಚ್ಚಾಗಿರುವ ದುಃಖವು ಹೇಗೆ ಆತ್ಮಧರ್ಮವಾದೀತು ?

೧೯೬. ಸಾಕ್ಷಿಯೇ ತನ್ನದೇ ಆಗಿರುವ ಅನುಭವರೂಪದಿಂದ ಅನುಭೂತವಾಗುತ್ತದೆ. ಅದರ ಆಭಾಸದಿಂದೊಡಗೂಡಿ ಉಂಟಾಗುವದೇ ಬುದ್ಧಿಗೆ ಆಗುವ ಇವನ ಅನುಭವವೆನಿಸುತ್ತದೆ.[1]

ಅಶನಾಯಾದಿವಿನಿರ್ಮುಕ್ತಃ ಸಿದ್ಧೋ ಮೋಕ್ಷಸ್ತ್ವಮೇವ ಸಃ ।
ಶ್ರೋತವ್ಯಾದಿ ತವೇತ್ಯೇತದ್ ವಿರುದ್ಧಂ ಕಥನಮುಚ್ಯತೇ ॥ ೧೯೬ ॥

೧೯೬. ಹಸಿವು ಮುಂತಾದವುಗಳಿಲ್ಲದ ಸಿದ್ಧವಾಗಿರುವ ಮೋಕ್ಷವೇ ನೀನು, ನಿನಗೆ ಶ್ರವಣವೇ ಮುಂತಾದದ್ದು ಉಂಟು – ಎಂಬೀ ವಿರುದ್ಧ (ವಿಷಯವನ್ನು) ಹೇಳುವದು ಹೇಗೆ?[2]

ಸೇತ್ಸ್ಯತೀತ್ಯೇವ ಚೇತ್ ತತ್ಸ್ಯ ಚ್ಛ್ರವಣಾದಿ ತದಾ[3] ಭವೇತ್ ।
ಮೋಕ್ಷಸ್ಯಾನಿತ್ಯತೈವಂ ಸ್ಯಾತ್ ವಿರೋಧ್ಯೇವಾನ್ಯಥಾ ವಚಃ[4] ॥೧೯೭॥

೧೯೭. (ಮೋಕ್ಷವು ಮುಂದೆ) ಸಿದ್ಧವಾಗುವದು ಎಂದೇ ಅದನ್ನು ಹೇಳಿದ್ದರೆ, ಆಗ ಶ್ರವಣಾದಿಗಳು ಆಗಬಹುದು[5]. (ಆದರೆ) ಹಾಗಾದರೆ ಮೋಕ್ಷವು ಅನಿತ್ಯವೆಂದಾಗುವದು; ಇಲ್ಲದಿದ್ದರೆ ವಚನವು ವಿರುದ್ಧವೇ ಆಗುವದು[6].

---

1. ಆತ್ಮನ ಅನುಭವವೆಂಬುದು ಆತ್ಮಸ್ವರೂಪವೇ ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದೆ. ಇದನ್ನು ಆರಿತುಕೊಂಡಾಗ ಬುದ್ಧಿಯಲ್ಲಿ ಆಗುವ ಆಭಾಸಸಹಿತವಿಕಾರವೂ ಆತ್ಮಾನುಭವವೆಂದು ವ್ಯವಹರಿಸಲ್ಪಡುತ್ತದೆ. ಆದರೆ ಈ ಅನುಭವವೂ ಅನುಭವರೂಪನಾದ ಆತ್ಮನಿಗೆ ವಿಷಯವೇ ಆಗಿದೆ ಎಂಬುದನ್ನು ಮರೆಯಬಾರದು.

2. ವಾಕ್ಯದಿಂದ ಅನುಭವವೇ ಆಗುವದೆಂಬುದನ್ನು ತೋರಿಸಿದ್ದಾಯಿತು. ಆದರೆ ವಾಕ್ಯಾರ್ಥಜ್ಞಾನಿಗೆ ಹೊಸದಾಗಿ ಶ್ರವಣಾದಿಗಳಿಂದ ಅನುಭವವಾಗುವದೆನ್ನುವ ಪ್ರಸಂಖ್ಯಾನಾದಿನಾದಿಗಳ ಮತವು ತನಗೆ ತಾನೇ ವಿರುದ್ಧವೆಂಬುದನ್ನು ಇಲ್ಲಿ ತಿಳಿಸಿದೆ.

3. 'ಶ್ರವಣಾಧೀನತಾ ಭವೇತ್' ಎಂಬ ಬೋಧನಿಧಿಯ ಪಾಠಕ್ಕಿಂತ ಇದೇ ಮೇಲು.

4. ವಿರೋಧೇ ನಾನ್ಯಥಾ ವಚಃ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವು ಮೇಲು.

5. ಏಕೆಂದರೆ ಶ್ರವಣಾದಿಗಳನ್ನು ಮಾಡಿದ ಬಳಿಕ ಮೋಕ್ಷವು ಬರತಕ್ಕದ್ದಾಗಿರುವದು. ಬೋಧನಿಧಿಯ ಪಾಠದಲ್ಲಿ 'ಶ್ರವಣಕ್ಕೆ ಅಧೀನವಾಗಿರುವದು' ಎಂದರ್ಥ.

6. ಹೊಸದಾಗಿ ಹುಟ್ಟುವದಾದರೆ ಮೋಕ್ಷವು ಅನಿತ್ಯವಾಗುವದು; ಹಾಗಿಲ್ಲದೆ ಈಗಲೇ ಇದ್ದೇಇರುವದಾದರೆ ಮೋಕ್ಷಕ್ಕಾಗಿ ಶ್ರವಣಾದಿಗಳನ್ನು ಹೇಳುವ ವಚನವು ವ್ಯಾಹತವಾಗುವದು.

ಶ್ರೋತೃಶ್ರೋತವ್ಯಯೋರ್ಭೇದೋ ಯದೀಷ್ಟಃ ಸ್ಯಾದ್ಭವೇದಿದಮ್।
ಇಷ್ಟಾರ್ಥಕೋಪ ಏವಂ ಸ್ಯಾನ್ನ ಯುಕ್ತಂ ಸರ್ವಥಾ ವಚಃ ॥ ೧೯೪ ॥
ಸಿದ್ಧೋ ಮೋಕ್ಷೋಽಹಮಿತ್ಯೇವ[1] ಜ್ಞಾತ್ವಾತ್ಮಾನಂ ಭವೇದ್ಯದಿ ।
ಚಿಕೀರ್ಷುರ್ಯಃ ಸ ಮೂಢಾತ್ಮಾ ಶಾಸ್ತ್ರಂ ಚೋದ್ಘಾಟಯತ್ಯಪಿ ॥
ನ ಹಿ ಸಿದ್ಧಸ್ಯ ಕರ್ತವ್ಯಂ ಸಕಾರ್ಯಸ್ಯ ನ ಸಿದ್ಧತಾ ।
ಉಭಯಾಲಮ್ಬನಂ ಕುರ್ವನ್ನಾತ್ಮಾನಂ ವಞ್ಚಯತ್ಯಪಿ[2] ॥ ೨೦೦ ॥

೧೯೪–೨೦೦. ಶ್ರವಣಮಾಡುವವನು, ಶ್ರವಣಮಾಡಿಸಿಕೊಳ್ಳುವವನು –(ಇಬ್ಬರಿಗೂ) ಭೇದವು ಇಷ್ಟವಾದರೆ ಇದು[3] ಆಗಬಹುದು; ಹಾಗಾದರೆ ನಿಮ್ಮ ಸಿದ್ಧಾಂತಕ್ಕೆ ವಿರೋಧವಾಗುವದು.[4] ವಚನವು ಸರ್ವಥಾ ಯುಕ್ತವಾಗದು.[5] ನಾನು ಸಿದ್ಧವಾಗಿರುವ ಮೋಕ್ಷಸ್ವರೂಪನು ಎಂದೇ ತನ್ನನ್ನು ತಿಳಿದುಕೊಂಡು ಯಾವನು (ಸಾಧನವನ್ನು) ಮಾಡಲಿಚ್ಛಿಸುವವನಾಗಿರುವನೋ ಅವನು ಮೂಢಬುದ್ಧಿಯೂ ಆಗಿರುತ್ತಾನೆ, ಶಾಸ್ತ್ರವನ್ನು ತೆಗೆಯುತ್ತಲೂ ಇರುತ್ತಾನೆ.[6] ಏಕೆಂದರೆ ಸಿದ್ಧವಾದರೆ ಕರ್ತವ್ಯವಿಲ್ಲ, ಕರ್ತವ್ಯವಿರುವದು ಸಿದ್ಧವಲ್ಲ[7]; ಈ ಎರಡನ್ನೂ ಅವಲಂಬಿಸಿ (ಅವನು) ತನ್ನನ್ನು (ತಾನೇ) ವಂಚಿಸಿಕೊಳ್ಳುತ್ತಲೂ ಇರುತ್ತಾನೆ.[8]

---

1. 'ಏವಂ' ಬೋ. ನಿ.

2. 'ವಞ್ಚಯತ್ಯಸೌ' ಬೋ. ನಿ.

3. ಶ್ರವಣಾದಿಗಳನ್ನು ವಾಕ್ಯಜ್ಞಾನವಾದ ಬಳಿಕವೂ ವಿಧಿಸಿದೆ ಎಂಬುದು.

4. ಏಕೆಂದರೆ ಮೋಕ್ಷವು ಸಿದ್ಧವಾಗಿದೆ, ಶ್ರೋತವ್ಯನಾದ ಪರಮಾತ್ಮನೂ ಶ್ರೋತೃವಾದ ಜೀವನೂ ಬೇರೆಬೇರೆಯಲ್ಲ ಎಂಬುದೇ ಪ್ರಸಂಖ್ಯಾನವಾದಿಗಳ ಸಿದ್ಧಾಂತ.

5. ಪ್ರಸಂಖ್ಯಾನವಾದದಲ್ಲಿ ಪರಮಾತ್ಮನು ಶ್ರೋತೃವಿಗಿಂತ ಭಿನ್ನನಾದರೂ ಅಭಿನ್ನನಾದರೂ ಆಯುಕ್ತವಾದದ್ದನ್ನೇ ಹೇಳಿದಂತೆ ಆಗುವದು. ಭಿನ್ನನಾದರೆ ಅವನೇ ನೀನು ಎಂಬುದು ಅಯುಕ್ತ; ಅಭಿನ್ನನಾದರೆ ಮುಕ್ತಿಯು ಹೊಸದಾಗಿ ಸಿದ್ಧವಾಗಬೇಕಾಗಿರುವದಿಲ್ಲ.

6. ಊರಿಗೆ ಹೋದವನೇ ಊರಿಗೆ ಹೋಗಬೇಕೆಂದು ಪ್ರಯತ್ನಿಸುವಂತೆ ಅವನು ಸಾಧನಕ್ಕೆ ಹವಣಿಸುವದರಿಂದ ಮೂಢನು. ಮತ್ತು ತನಗೆ ತಿಳಿಯದ ಶಾಸ್ತ್ರಾರ್ಥವನ್ನು ಮತ್ತೊಬ್ಬರಿಗೆ ಹೇಳುವವನೂ ಆಗಿರುತ್ತಾನೆ. ಏಕೆಂದರೆ ಶಾಸ್ತ್ರವು ವ್ಯಾಹತವಾದದ್ದನ್ನು ಹೇಳಲಾರದು.

7. ನಾನು ಮುಕ್ತನು ಎಂದು ಅರಿತಿರುವವನಿಗೆ ಪ್ರಸಂಖ್ಯಾನವಿರುವಹಾಗಿಲ್ಲ; ಪ್ರಸಂಖ್ಯಾನಾದಿಗಳು ಇರುವದಾದರೆ ಸಿದ್ಧ ಮುಕ್ತಿಯನ್ನು ಹೇಳುವ ವಾಕ್ಯದ ಜ್ಞಾನವಿಲ್ಲ.

8. ನಾನು ಮುಕ್ತನು, ಸಾಧನೆಯನ್ನು ಮಾಡುತ್ತೇನೆ– ಎಂಬವನು ಆತ್ಮವಂಚಕನು; ಏಕೆಂದರೆ ಈ ಹೇಳಿಕೆಯು ತನ್ನ ಅನುಭವಕ್ಕೇ ವಿರುದ್ಧ.

ಸಿದ್ಧೋ ಮೋಕ್ಷಸ್ತ್ವಮಿತ್ಯೇತದ್ವಸ್ತುಮಾತ್ರಂ ಪ್ರದರ್ಶ್ಯತೇ ।
ಶ್ರೋತುಸ್ತಥಾತ್ವವಿಜ್ಞಾನೇ ಪ್ರವೃತ್ತಿಃ ಸ್ಯಾತ್ ಕಥಂ ನ್ವಿತಿ[1] ॥ ೨೦೧ ॥

ಕರ್ತಾ ದುಃಖ್ಯಹಮಸ್ಮೀತಿ ಪ್ರತ್ಯಕ್ಷೇಣಾನುಭೂಯತೇ ।
ಕರ್ತಾ ದುಃಖೀ ಚ ನಾ ಭೂವಮಿತಿ ಯತ್ನೋ ಭವೇತ್ತತಃ ॥ ೨೦೨ ॥

ತದ್ವಿಜ್ಞಾನಾಯ ಯುಕ್ತ್ಯಾದಿ ಕರ್ತವ್ಯಂ ಶ್ರುತಿರಬ್ರವೀತ್ ।
ಕರ್ತೃತ್ವಾದ್ಯನುವಾದೇನ ಸಿದ್ಧತ್ವಾನುಭವಾಯ ತು ॥ ೨೦೩ ॥

೨೦೧-೨೦೩. (ಪ್ರಸಂಖ್ಯಾನವಾದಿ): ಸಿದ್ಧವಾದ ಮೋಕ್ಷವು ನೀನು ಎಂದು ನಸ್ತು ಮಾತ್ರವನ್ನು (ಶ್ರುತಿಯಲ್ಲಿ) ತಿಳಿಸಿರುತ್ತದೆ.[2] ಶ್ರವಣಮಾಡುವವನಿಗೆ ಹಾಗಿರುವನೆಂಬುದನ್ನು ಅರಿತುಕೊಳ್ಳುವದರಲ್ಲಿ ಹೇಗಾದರೂ ಪ್ರಯತ್ನವಾಗಲಿ ಎಂದೇ (ಈ ಉಪದೇಶವನ್ನು ಮಾಡಿದೆ). ನಾನು ಕರ್ತೃವೂ ದುಃಖಿಯೂ ಆಗಿರುವೆನು ಎಂದು ಪ್ರತ್ಯಕ್ಷವಾಗಿ ಅನುಭವದಲ್ಲಿರುತ್ತದೆ; ಆದ್ದರಿಂದ ಕರ್ತೃವೂ ದುಃಖಿಯೂ ಆಗದೆ ಇರಬೇಕೆಂದು ಪ್ರಯತ್ನವನ್ನು ಮಾಡಬಹುದಾಗಿದೆ. ಆ ಜ್ಞಾನವಾಗುವದಕ್ಕಾಗಿ ಯುಕ್ತಿಯೇ ಮುಂತಾದ (ಸಾಧನವನ್ನು) ಮಾಡಬೇಕೆಂದು ಶ್ರುತಿಯಲ್ಲಿ ಕರ್ತೃತ್ವವೇ ಮುಂತಾದದ್ದನ್ನು ಅನುವಾದಮಾಡಿಕೊಂಡು (ಮೋಕ್ಷತ್ವವು) ಸಿದ್ಧವಾಗಿರುವದೆಂಬದನ್ನು ಅನುಭವಕ್ಕೆ ತಂದುಕೊಳ್ಳುವದಕ್ಕಾಗಿ ಹೇಳಿರುತ್ತದೆ.[3]

ನಿರ್ದುಃಖೋ ನಿಷ್ಕ್ರಿಯೋಽಕಾಮಃ ಸಿದ್ಧೋ ಮೋಕ್ಷೋಽಹಮಿತ್ಯಪಿ
ಗೃಹೀತ್ವೈವ ವಿರುದ್ಧಾರ್ಥಮಾದದ್ಯಾತ್[4] ಕಥನೇವ ಸಃ ॥ ೨೦೪ ॥

---

1. 'ಕಥಂ ತ್ವಿತಿ' ಮೈ॥

2. ಇಷ್ಟು ತಿಳಿಸಿದ ಮಾತ್ರದಿಂದಲೇ ಜ್ಞಾನವಾಗಬೇಕಾದದ್ದೇನೂ ಇಲ್ಲ.

3. ಪ್ರತ್ಯಕ್ಷವಾಗಿ ನಾನು ದುಃಖಿ ಎಂಬ ಅನುಭವವಿರುವದರಿಂದ 'ತತ್ತ್ವಮಸಿ' ಎಂಬ ವಾಕ್ಯವು ಕೂಡಲೆ ಅನುಭವವನ್ನು ಉಂಟುಮಾಡುವದಕ್ಕೆ ಹೇಳಿದ್ದಲ್ಲ; ಮುಂದೆ ಪ್ರಸಂಖ್ಯಾನದಿಂದ ಅರಿತುಕೊಳ್ಳಬಹುದಾದ್ದನ್ನು ಈಗಲೇ ಹೇಳಿದೆ; ಅಷ್ಟೆ. ಆದ್ದರಿಂದ ಇಲ್ಲಿ ಯಾವ ವಿರೋಧವೂ ಇಲ್ಲ ಎಂಬುದು ಪೂರ್ವಪಕ್ಷಿಯ ಭಾವ. ಇದು ಹಿಂದೆ ೧೭ನೆಯ ಶ್ಲೋಕದಲ್ಲಿ ಹೇಳಿದ್ದರ ವಿವರಣೆ ಆಗಿದೆ.

4. 'ಆದಧ್ಯಾತ್' ಎಂಬ ಮೈ॥ ಪಾಠವು ಅಚ್ಚಿನ ತಪ್ಪು.

೨೦೪. (ಸಿದ್ಧಾಂತಿ): ನಾನು ನಿರ್ದುಃಖನು, ನಿಷ್ಕ್ರಿಯನು, ಕಾಮರಹಿತನು, ಸಿದ್ಧವಾದ ಮೋಕ್ಷಸ್ವರೂಪನು ಎಂದೂ ತಿಳಿದುಕೊಂಡೇ ಅದಕ್ಕೆ ವಿರುದ್ಧವಾದ ಅರ್ಥವನ್ನು ಅವನು ಹೇಗೆತಾನೆ ಸ್ವೀಕರಿಸಿಯಾನು ?[1]

ಸಂಸಾರಿತ್ವಾನುಭವಕ್ಕೆ ಗತಿ

ಸಕಾಮಃ ಸಕ್ರಿಯೋಽಸಿದ್ಧ ಇತಿ ಮೇಽನುಭವಃ ಕಥಮ್ ।
ಅತೋ ಮೇ ವಿಪರೀತಸ್ಯ ತದ್ಭವಾನ್ ವಕ್ತುಮರ್ಹತಿ ॥ ೨೦೫ ॥

೨೦೫. (ಪ್ರಸಂಖ್ಯಾನವಾದಿ):– ನಾನು ಕಾಮಗಳುಳ್ಳವನು, ಕ್ರಿಯೆಗಳನ್ನು ಮಾಡುವವನು, ಸಿದ್ಧ(ವಾದ ಮೋಕ್ಷಸ್ವರೂಪ)ನಲ್ಲ ಎಂದು, ಇದಕ್ಕೆ ವಿರುದ್ಧಸ್ವರೂಪನಾದ ನನಗೆ ಅನುಭವ (ವಿದೆಯಲ್ಲ, ಇದು) ಹೇಗೆ ? ಅದನ್ನು ತಾವು ಹೇಳಬೇಕು.[2]

ಇಹೈವ ಘಟತೇ ಪ್ರಶ್ನೋ ನ ಮುಕ್ತತ್ವಾನುಭೂತಯೇ ।
ಪ್ರಮಾಣೇನ ವಿರೋಧೀ ಯಃ ಸೋಽತ್ರಾರ್ಥಃ ಪ್ರಶ್ನಮರ್ಹತಿ ॥೨೦೬
ಅಹಂ ನಿರ್ಮುಕ್ತ ಇತ್ಯೇನ ಸದಸೀತ್ಯನ್ತ್ಯಮಾನಜಃ ।[3]
ಪ್ರತ್ಯಕ್ಷಾಭಾಸಜನ್ಯತ್ವಾದ್ದುಃಖಿತ್ವಂ ಪ್ರಶ್ನಮರ್ಹತಿ ॥ ೨೦೭ ॥

೨೦೬–೨೦೭. ಇಲ್ಲಿಯೇ ಕೇಳತಕ್ಕದ್ದು ಹೊಂದುತ್ತದೆಯೇ ಹೊರತು ಮುಕ್ತತ್ವವನ್ನು ಅನುಭವಿಸುವ ವಿಷಯದಲ್ಲಲ್ಲ.[4] (ಏಕೆಂದರೆ) ಪ್ರಮಾಣಕ್ಕೆ ಯಾವದು ವಿರೋಧಿಯಾದ ಅರ್ಥವೋ ಅವೇ ಇಲ್ಲಿ ಪ್ರಶ್ನೆಗೆ ತಕ್ಕದ್ದು.

---

1. ಶ್ರುತಿಯು ನಾನು ನಿರ್ದುಃಖನೆಂದು ಹೇಳುತ್ತದೆಯೆಂದು ತಿಳಿದಮೇಲೆ ನಾನು ಸಾಧನವನ್ನು ಮಾಡಬೇಕು ಎಂಬ ವಿರುದ್ಧಬುದ್ಧಿಯು ಬರಲಾರದು– ಎಂಬುದು ಸಿದ್ಧಾಂತಿಯ ಅಭಿಪ್ರಾಯ. ಇದುವರೆಗೆ 'ವಾಕ್ಯವು ವಿಧಿಶೇಷವಾಗಿಲ್ಲ, ವಸ್ತುವನ್ನೇ ತಿಳಿಸುತ್ತದೆಯಾದ್ದರಿಂದ ಅಷ್ಟರಿಂದಲೇ ಅನುಭವವಾಗುತ್ತದೆ' ಎಂದು ಹೇಳಿದ್ದರ ಸಂಗ್ರಹವೇ ಇದು.

2. ವಾಕ್ಯವು ಸಿದ್ಧವಾದ ಮೋಕ್ಷಸ್ವರೂಪನು ನೀನು ಎಂದು ಹೇಳುವದೆಂದರೆ ಪ್ರತ್ಯಕ್ಷಕ್ಕೆ ಗತಿಯೇನು ?– ಎಂದು ಪ್ರಶ್ನೆ.

3. 'ಅನ್ಯಮಾನಜಃ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವೇ ಮೇಲು.

4. ನಾನು ಮುಕ್ತಿಯನ್ನು ಅನುಭವಿಸುವದಕ್ಕೆ ಏನು ಮಾಡಲಿ ?– ಎಂದು ಪ್ರಶ್ನೆಯಿಲ್ಲ.

ನಾನು ಯಾವಾಗಲೂ ಮುಕ್ತನು ಎಂದೇ 'ಸತ್ತಾಗಿರುವೆ' ಎಂಬ **ಅಂತ್ಯ ಪ್ರಮಾಣ**ದಿಂದ[1] ಉಂಟಾದ (ಜ್ಞಾನವು) ; ದುಃಖಿತ್ವವು ಪ್ರತ್ಯಕ್ಷಾಭಾಸ ದಿಂದುಂಟಾಗಿರುವದರಿಂದ ಪ್ರಶ್ನೆಗೆ ತಕ್ಕದ್ದಾಗಿದೆ.[2]

ಪೃಷ್ಟವಾಕಾಙ್ಕ್ಷಿತಂ ವಾಚ್ಯಂ ದುಃಖಾಭಾವನುಭೀಪ್ಸಿತಮ್
ಕಥಂ ಹೀದಂ ನಿವರ್ತೇತ ದುಃಖಂ ಸರ್ವಾತ್ಮನಾ ಮಮ ।
ಇತಿ ಪ್ರಶ್ನಾನುರೂಪಂ ಯದ್ ವಾಚ್ಯಂ ದುಃಖನಿವರ್ತಕಮ್ ॥೨೦೮

೨೦೭½–೨೦೮. (ಪ್ರಸಂಖ್ಯಾನವಾದಿ): ಯಾವದನ್ನು ಕೇಳಿದೆಯೋ ಯಾವದು ಇಷ್ಟವಾದದ್ದೋ ಅದನ್ನು ಹೇಳಬೇಕು. ದುಃಖವು ಇರಬಾರ ದೆಂಬುದೇ ಇಷ್ಟ. ಈ ದುಃಖವು ನನಗೆ ಸಂಪೂರ್ಣವಾಗಿ ಹೇಗೆ ತೊಲಗೀತು?– ಎಂಬ ಪ್ರಶ್ನೆಗೆ ಅನುಗುಣವಾದದ್ದು ಯಾವದೋ ಅಂಥ ದುಃಖನಿವರ್ತಕ ವನ್ನೇ ಹೇಳಬೇಕಲ್ಲವೆ?[3]

ಶ್ರುತೇಃ ಸ್ವಾತ್ಮನಿ ನಾಶಙ್ಕ್ಯಾ ಪ್ರಾಮಾಣ್ಯೇ ಸತಿ ವಿದ್ಯತೇ ।
ತಸ್ಮಾದಾತ್ಮವಿಮುಕ್ತತ್ವಂ ಪ್ರತ್ಯಾಯಯತಿ ತದ್ವಚಃ ॥ ೨೦೯ ॥
ವಕ್ತವ್ಯಂ ತತ್ ತಥಾರ್ಥಂ ಸ್ಯಾದ್ವಿರೋಧೇಽಸತಿ ಕೇನಚಿತ್ ॥೨೦೯½ ॥

---

1. ನೀನು ಸಪ್ಪ್ರಹ್ಮವಾಗಿರುವೆ ಎಂದು ಪ್ರಮಾಣವಾದ ಶಾಸ್ತ್ರವು ಹೇಳಿದಮೇಲೆ, ನಾನು ದುಃಖಿ ಎಂಬ ಅನುಭವಕ್ಕೇನು ಗತಿ ? ಎಂದಿಷ್ಟೇ ಕೇಳಬೇಕು. ನಾನು ಸತ್ತಾಗಿರುವೆನು ಎಂಬ ಅನುಭವವುಂಟಾದಮೇಲೆ ಮತ್ತೆ ಪ್ರಮಾತೃಪ್ರಮಾಣಪ್ರಮೇಯವ್ಯವಹಾರವೇ ಇರುವದಿಲ್ಲ; ಆದ್ದರಿಂದ ವಾಕ್ಯವು ಅಂತ್ಯಪ್ರಮಾಣವು ; ಅದರಿಂದ ಜ್ಞಾನವಾದಬಳಿಕ ಪ್ರಶ್ನೆಯೇ ಹುಟ್ಟುವಹಾಗಿಲ್ಲ.

2. ಆದ್ದರಿಂದಲೇ ಅದನ್ನು ಶಾಸ್ತ್ರವು ಅನ್ವಯವ್ಯತಿರೇಕಗಳಿಂದ ಆಭಾಸವೆಂದು ತೋರಿಸಿಯೂ ಕೊಟ್ಟಿದೆ.

3. ನಾನು ಯಾರು ? ಎಂದು ಶಿಷ್ಯನು ಕೇಳುವಂತಿಲ್ಲವಾದ್ದರಿಂದ ನೀನು ಸಪ್ಪ್ರಹ್ಮವು ಎಂಬ ಉತ್ತರವನ್ನು ಹೇಳುವಂತೆಯೂ ಇಲ್ಲ. ದುಃಖವು ಹೇಗೆ ಹೋಗುವದು?– ಎಂದರೆ ಪ್ರಸಂಖ್ಯಾನದಿಂದಾದ ಆತ್ಮಾನುಭವವುಂಟಾದರೆ ಹೋಗುವದು– ಎಂಬ ಉತ್ತರವು ಹೊಂದುತ್ತದೆ ಎಂದು ಭಾವ. ಇದನ್ನು ಸಿದ್ಧಾಂತಕ್ಕೆ ವ್ಯಾಖ್ಯಾನದಲ್ಲಿ ಹೊಂದಿಸಿರುತ್ತಾರೆ. ಆದರೆ ಇದು ಪೂರ್ವಪಕ್ಷಿಗೇ ಹೆಚ್ಚು ಹೊಂದುತ್ತದೆ ಎಂದು ನಮ್ಮ ಅಭಿಪ್ರಾಯ. ಸಿದ್ಧಾಂತದಲ್ಲಿ ದುಃಖವು ಹೋಗುವದು ಹೇಗೆ? ಎಂಬ ಪ್ರಶ್ನೆಯಿಲ್ಲ ; ಒಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವದು ಹೇಗೆ?– ಎಂಬ ಪ್ರಶ್ನೆಯಿದೆ.

೨೦೯-೨೦೯½. ಶ್ರುತಿಯು ಸ್ವತಃಪ್ರಾಮಾಣವಾಗಿರುವದರಿಂದ ತನ್ನಲ್ಲಿ (ಯಾವ) ಆಶಂಕೆಯೂ ಇರುವದಿಲ್ಲ.[1] ಆದ್ದರಿಂದ ಆ ವಾಕ್ಯವು ಆತ್ಮನು ವಿಮುಕ್ತನೆಂಬುದನ್ನು ತಿಳಿಸುತ್ತದೆ.[2] ಆ ವಾಕ್ಯವು ಮತ್ತೆ ಯಾವದಕ್ಕೂ ವಿರೋಧವಿಲ್ಲದಿದ್ದರೆ ಯಥಾರ್ಥವೇ ಆಗುವದು.[3]

ಇತೋಽನ್ಯೋಽನುಭವಃ ಕಶ್ಚಿದಾತ್ಮನೋ ನೋಪಪದ್ಯತೇ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಾರಮಿತಿ ಶ್ರುತೇಃ ॥ ೨೧೦ ॥

೨೧೦. ಇದಕ್ಕಿಂತ ಬೇರೆಯ[4] ಆತ್ಮಾನುಭವವೆಂಬುದು ಯಾವದೂ ಯುಕ್ತವಾಗುವದಿಲ್ಲ.[5] "ಅರಿತವರಿಗೆ ಅರಿಯಲ್ಪಡದ್ದಾಗಿರುವದು" (ಕೇ.೨-೩) "ಅರಿಯುವಾತನನ್ನು (ಏತರಿಂದ ಅರಿತುಕೊಂಡಾನು? ಬೃ. ೨-೩-೧೪) ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ.)[6]

ಸಿದ್ಧಾಂತದಲ್ಲಿ ಸಂನ್ಯಾಸದ ವಿನಿಯೋಗ

ತ್ವಂಪದಾರ್ಥವಿವೇಕಾಯ ಸಂನ್ಯಾಸಃ ಸರ್ವಕರ್ಮಣಾಮ್ ।
ಸಾಧನತ್ವಂ ವ್ರಜತ್ಯೇವ ಶಾಸ್ತ್ರೋದಾನ್ತ್ಯಾನುಶಾಸನಾತ್ ॥ ೨೧೧ ॥

---

1. ಪ್ರತ್ಯಕ್ಷದಂತೆ ಶ್ರುತಿಯೂ ಪ್ರಮಾಣವಾಗಿರುತ್ತದೆ; ಆದ್ದರಿಂದ ಪ್ರತ್ಯಕ್ಷವು ತಿಳಿಸಿದ್ದರಮೇಲೆ ಇದೇಕೆ?- ಎಂಬ ಶಂಕೆಯು ಇರುವದಕ್ಕೆ ಹೇಗೆ ಅವಕಾಶವಿಲ್ಲವೋ ಹಾಗೆಯೇ ಶ್ರುತಿಯ ವಿಷಯದಲ್ಲಿಯೂ ಶಂಕೆಯಿರುವದಕ್ಕೆ ಅವಕಾಶವಿಲ್ಲ.

2. ಆತ್ಮನು ವಿಮುಕ್ತನೆಂಬುದನ್ನು ಶಾಸ್ತ್ರವು ತಿಳಿಸಿಯೇ, ತಿಳಿಸುವದರಿಂದ ಅದಕ್ಕೆ ಅಬೋಧಕತ್ವರೂಪವಾದ ಅಪ್ರಾಮಾಣ್ಯವಿಲ್ಲವೆಂದು ೧೪ಳರಲ್ಲಿ ಹೇಳಿದೆ.

3. ಆತ್ಮನ ವಿಷಯದಲ್ಲಿ ಪ್ರತ್ಯಕ್ಷಾದಿಗಳು ತೊಡಗುವದಿಲ್ಲವಾದ್ದರಿಂದ ಅವುಗಳಿಗೆ ಇದು ವಿರುದ್ಧವೆಂಬುದೂ ಸರಿಯಲ್ಲ. ಆದ್ದರಿಂದ ವಿಪರೀತಬೋಧಕತ್ವವೂ ಇಲ್ಲ. ಹೀಗೆ ಅಜ್ಞಾನ, ಸಂಶಯ, ವಿಪರೀತಜ್ಞಾನಗಳನ್ನುಂಟುಮಾಡದೆ ಸ್ವಾರ್ಥವನ್ನು ತಿಳಿಸುವದರಿಂದ ಶ್ರುತಿಯ ಪ್ರಾಮಾಣ್ಯಕ್ಕೆ ಯಾವ ಅಡ್ಡಿಯೂ ಇಲ್ಲ- ಎಂದರ್ಥ. ಇದನ್ನು ೧೪ಳರಿಂದ ೧೪೬ರವರೆಗಿನ ಶ್ಲೋಕಗಳಲ್ಲಿ ಹೇಳಿಯೇ ಇದೆಯಾದರೂ ಇಲ್ಲಿ ವಾಕ್ಯದಿಂದ ಆಗದೆ ಇರುವ ಅನುಭವವು ನುತ್ತೊಂದಿಲ್ಲವಾದ್ದರಿಂದ ಅದಕ್ಕಾಗಿ ಪ್ರಸಂಖ್ಯಾನದ ಆಗತ್ಯವಿಲ್ಲ ಎಂಬುದನ್ನು ತಿಳಿಸುವ ಪ್ರಸಂಗದಿಂದ ಮತ್ತೆ ಹೇಳಿದೆ.

4. ವಾಕ್ಯಜ್ಞಾನಕ್ಕಿಂತ ಬೇರೆಯಾದ.

5. ಏಕೆಂದರೆ ಆತ್ಮನ ಅನುಭವವು ಉಂಟಾಗತಕ್ಕದ್ದಲ್ಲ.

6. ಆತ್ಮನನ್ನೂ ವಿಷಯವಾಗಿಸಿಕೊಂಡು ಅರಿಯುವದಾಗದೆಂಬುದನ್ನು ಈ ಶ್ರುತಿಗಳು ತಿಳಿಸುತ್ತವೆ.

೨೧೧. ತ್ವಂಪದಾರ್ಥವನ್ನು ವಿವೇಚಿಸುವದಕ್ಕೆ ಸರ್ವಕರ್ಮಗಳ ಸಂನ್ಯಾಸವು ಸಾಧನವ್ಹವನ್ನು ಹೊಂದಿಯೇ ತೀರುತ್ತದೆ.[1] ಏಕೆಂದರೆ 'ಶಾನ್ತೋ ದಾನ್ತಃ' (ಬೃ.೪-೪-೨೩) ಎಂದು ಶಾಸ್ತ್ರವಿಧಿಯಿದೆ.[2]

ತ್ವಮರ್ಥಂ ಪ್ರತ್ಯಗಾತ್ಮಾನಂ ಪಶ್ಯೇದಾತ್ಮಾನಮಾತ್ಮನಿ ।
ವಾಕ್ಯಾರ್ಥಂ ತತ ಆತ್ಮಾನಂ ಸರ್ವಂ ಪಶ್ಯತಿ ಕೇವಲಮ್ ॥ ೨೧೨ ॥
ಸರ್ವಮಾತ್ಮೇತಿ ವಾಕ್ಯಾರ್ಥೇ ವಿಜ್ಞಾತೇಽಸ್ಯ ಪ್ರಮಾಣತಃ ।
ಅಸತ್ತ್ವೇ ಹ್ಯನ್ಯಮಾನಸ್ಯ ವಿಧಿಸ್ತಂ ಯೋಜಯೇತ್ ಕಥಮ್ ॥೨೧೩

೨೧೨–೨೧೩. ತ್ವಂಪದದ ಅರ್ಥವಾದ ಆತ್ಮನನ್ನು ಪ್ರತ್ಯಗಾತ್ಮನೆಂದು ತನ್ನಲ್ಲಿಯೇ ಕಂಡುಕೊಳ್ಳಬೇಕು. ಆಮೇಲೆ ವಾಕ್ಯಾರ್ಥವಾದ ಸರ್ವಸ್ವರೂಪನಾದ ಅದ್ವಿತೀಯನಾದ ಆತ್ಮನನ್ನು ಕಾಣುತ್ತಾನೆ.[3] ಎಲ್ಲವೂ ಆತ್ಮನೇ ಎಂಬ ವಾಕ್ಯಾರ್ಥವನ್ನು ತಿಳಿದುಕೊಂಡ ಬಳಿಕ ಇವನಿಗೆ ಮತ್ತೆ (ಯಾವ) ಪ್ರಮಾಣವೂ ಇಲ್ಲವೆಂದಾಗಲು[4] ಅವನನ್ನು ವಿಧಿಯು ಹೇಗೆ ಕಟ್ಟುಮಾಡುವದು ?[5]

ವಾಕ್ಯಜ್ಞಾನವಾದ ಬಳಿಕ ಯಾವ ವಿಧಿಯೂ ಇಲ್ಲ

ತಸ್ಮಾದ್ ವಾಕ್ಯಾರ್ಥವಿಜ್ಞಾನಾನ್ನೋರ್ಧ್ವಂ ಕರ್ಮವಿಧಿರ್ಭವೇತ್ ।
ನ ಹಿ ಬ್ರಹ್ಮಾಸ್ಮಿ ಕರ್ತೇತಿ ವಿರುದ್ಧೇ ಭವತೋ ಧಿಯೌ ॥ ೨೧೪ ॥

---

1. ಶಾಸ್ತ್ರವಾಕ್ಯದಿಂದಲೇ ಆತ್ಮಜ್ಞಾನವಾಗುತ್ತಿರುವಲ್ಲಿ ಸಂನ್ಯಾಸವನ್ನೇಕೆ ಶಾಸ್ತ್ರದಲ್ಲಿ ವಿಧಿಸಬೇಕು ? –ಎಂಬ (೧೬ನೆಯ ಶ್ಲೋಕದ) ಆಕ್ಷೇಪಕ್ಕೆ ಸಮಾಧಾನವಿದು.

2. "ತಸ್ಮಾದೇವಂವಿಚ್ಛಾನ್ತೋದಾನ್ತಃ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾತ್ಮನ್ಯೇವ ತ್ಮಾನಂ ಪಶ್ಯತಿ" ಎಂಬ (ಬೃ. ೪-೪-೨೩) ವಾಕ್ಯದಲ್ಲಿ ಶಮಾದಿಗಳ ಜೊತೆಗೆ ಉಪರತಿಯನ್ನೂ ಹೇಳಿವೆ. ಇದೇ ಸಂನ್ಯಾಸವು. ಈ ಕಾಣ್ವಪಾಠದಲ್ಲಿ ವಿಧಿಯಿಲ್ಲವಾದರೂ ಮಾಧ್ಯಂದಿನಪಾಠದಲ್ಲಿ ಇದೇ ವಾಕ್ಯದಲ್ಲಿ "ಉಪರತಸ್ತಿತಿಕ್ಷುಃ ಶ್ರದ್ಧಾವಿತ್ತೋ ಭೂತ್ವಾತ್ಮನ್ಯೇವಾತ್ಮಾನಂ ಪಶ್ಯೇತ್" ಎಂದು ಪ್ರತ್ಯಕ್ಷವಾಗಿ ವಿಧಿಯಿದೆ.

3. 'ಪಶ್ಯೇತ್' ಎಂದು ಶಮಾದಿಸಹಿತಸಂನ್ಯಾಸವನ್ನು ತ್ವಂಪದಾರ್ಥವಿವೇಕಕ್ಕಾಗಿ ವಿಧಿಸಿರುವ ವಾಕ್ಯ. ಇದರ ಮುಂದಿರುವ ಸರ್ವಮಾತ್ಮಾನಂ ಪಶ್ಯತಿ (ಕಾಣ್ವ), 'ಸರ್ವಮೇನಂ ಪಶ್ಯತಿ' ಎಂಬುದು 'ಆತ್ಮನೇ ಎಲ್ಲವೂ ಎಂದು ಕಾಣುತ್ತಾನೆ' ಎಂಬ ವಾಕ್ಯಾರ್ಥಜ್ಞಾನವನ್ನು ತಿಳಿಸುವ ವಾಕ್ಯ – ಎಂದು ಭಾವ.

4. "ಆಗ ಯಾವನು ಯಾರಿಂದ ಏನನ್ನು ಕಂಡಾನು ?" (ಬೃ. ೪-೫-೧೫) ಎಂಬ ಶ್ರುತಿಪ್ರಮಾಣದಿಂದ ವಾಕ್ಯಾರ್ಥಜ್ಞಾನವಾದ ಬಳಿಕ ಮತ್ತೆ ಪ್ರಮಾಣವ್ಯವಹಾರವಿರುವದಿಲ್ಲ.

5. ಕ್ರಿಯಾಕಾರಕಫಲಗಳನ್ನು ಕಾಣುವೆ ಪ್ರಮಾಣಾದಿವ್ಯವಹಾರವನ್ನು ಕಾಣುವವನಿಗೆ ಶಾಸ್ತ್ರವಿಧಿಯಿರದಲಾರದು ಎಂದರ್ಥ.

೨೧೪. ಆದ್ದರಿಂದ ವಾಕ್ಯಾರ್ಥವನ್ನು ಅರಿತಮೇಲೆ ಕರ್ಮವಿಧಿಯಿರಲಾರದು. 'ಬ್ರಹ್ಮವಾಗಿರುವೆನು' '(ನಾನು) ಕರ್ತೃ' ಎಂಬ (ಒಂದಕ್ಕೊಂದು) ವಿರುದ್ಧವಾದ ಬುದ್ಧಿಗಳು (ಎರಡೂ ಒಂದೇ ಕಾಲಕ್ಕೆ) ಇರಲಾರವಷ್ಟೆ ?

ಬ್ರಹ್ಮಾಸ್ಮೀತಿ ಚ[1] ವಿದ್ಯೇಯಂ ನೈವ ಕರ್ತೇತಿ ಬಾಧ್ಯತೇ ।
ಸಕಾಮೋ ಬದ್ಧ ಇತ್ಯೇವಂ ಪ್ರಮಾಣಾಭಾಸಜಾತಯಾ ॥ ೨೧೫ ॥

೨೧೫. ಮತ್ತು[2] 'ಬ್ರಹ್ಮವಾಗಿರುವೆನು' ಎಂಬ ವಿದ್ಯೆಯು ಕರ್ತೃವೆಂದೂ ಸಕಾಮನು, ಬದ್ಧನು –ಎಂಬೀ ರೀತಿಯ ಪ್ರಮಾಣಾಭಾಸದಿಂದ ಹುಟ್ಟಿರುವ (ಬುದ್ಧಿ)ಯಿಂದ[3] ಎಂದಿಗೂ ಬಾಧಿತವಾಗುವದಿಲ್ಲ.

ಶಾಸ್ತ್ರಾದ್ ಬ್ರಹ್ಮಾಸ್ಮಿ ನಾನ್ಯೋಽಹಮಿತಿ ಬುದ್ಧಿರ್ಭವೇದ್ಯದಾ ।
ಯದಾ ಯುಕ್ತಾ ತದೈವಂಧೀ ರ್ಯಥಾ ದೇಹಾತ್ಮಧೀರಿತಿ ॥ ೨೧೬ ॥

೨೧೬. ಶಾಸ್ತ್ರದಿಂದ "ನಾನು ಬ್ರಹ್ಮವಾಗಿರುವೆನು, ಬೇರೆ ಯಾವನೂ ಅಲ್ಲ" ಎಂಬ ಬುದ್ಧಿಯು ಯಾವಾಗ ಗಟ್ಟಿಯಾಗುತ್ತದೆಯೋ ಆಗ ಈ ರೀತಿಯಾದ ಬುದ್ಧಿಯು ದೇಹಾತ್ಮಬುದ್ಧಿಯಂತೆ ಅಯುಕ್ತವಾಗುತ್ತದೆ.[4]

ಜ್ಞಾನಿಯೂ ಮುಮುಕ್ಷುವೂ ಮತ್ತೆ ಕರ್ತೃತ್ವವನ್ನು ಬಯಸರು

ಸಭಯಾದಭಯಂ ಪ್ರಾಪ್ತಸ್ತದರ್ಥಂ ಯತತೇ ಚ ಯಃ ।
ಸ ಪುನಃ ಸಭಯಂ ಗನ್ತುಂ ಸ್ವತನ್ತ್ರಶ್ಚೇನ್ನ ಹೀಚ್ಛತಿ ॥ ೨೧೭ ॥

---

1. 'ಹಿ' ಬೋ. ನಿ.

2. ಬೋಧನಿಧಿಯ ಪಾಠದಲ್ಲಿ 'ಏಕೆಂದರೆ' ಎಂದು ಕನ್ನಡಿಸಬೇಕಾಗುವದು.

3. 'ವಿದ್ಯೇಯಂ' ಎಂಬ ಪಾಠವೇ ವ್ಯಾಖ್ಯಾನಕಾರರು ಒಪ್ಪಿರುವದು. ಆದರೆ 'ಇತ್ಯೇವಂ' ಎಂಬುದಕ್ಕೆ ಇದನ್ನು ಹೊಂದಿಸುವದಕ್ಕೆ ಆಗುವದಿಲ್ಲ; ಆದ್ದರಿಂದ 'ಧಿಯಾ' ಎಂಬ ಮಾತನ್ನು ಬೋಧನಿಧಿಯು ಆಧ್ಯಾಹಾರಮಾಡಿಕೊಂಡಿರುತ್ತಾನೆ. 'ಧೀಃ' ಎಂಬ ಮಾತು ಹಿಂದುಮುಂದಿನ ಶ್ಲೋಕಗಳಲ್ಲಿವೆ. ಇಲ್ಲಿಯೂ 'ವಿದ್ಯೇಯಂ' ಎಂಬುದರ ಬದಲು 'ಧೀಃ' ಎಂದೇ ಇಟ್ಟುಕೊಂಡು 'ಬ್ರಹ್ಮಾಸ್ಮೀತಿ ಹಿ ಧೀಶ್ಚೇಯಂ' ಎಂಬ ಪಾಠವನ್ನು ಇಟ್ಟುಕೊಂಡಿದ್ದರೆ ಯಾವ ಕ್ಲೇಶವೂ ಇರುತ್ತಿರಲಿಲ್ಲ.

4. ದೇಹವೇ ನಾನೆಂಬ ಬುದ್ಧಿಯು ದೇಹವ್ಯತಿರಿಕ್ತಾತ್ಮಜ್ಞಾನದಿಂದ ಬಾಧಿತವಾಗುವಂತೆ ನಾನು ಕರ್ತೃ, ಸಕಾಮನು, ಬದ್ಧನು –ಎಂಬೀ ಬುದ್ಧಿಯು ನಾನು ಬ್ರಹ್ಮ – ಎಂಬ ಬುದ್ಧಿಯಿಂದ ಬಾಧಿತವಾಗುತ್ತದೆ.

೨೧೬. ಭಯಯುಕ್ತವಾದ ಸ್ಥಲದಿಂದ ಅಭಯವಾದ ಸ್ಥಲಕ್ಕೆ ಹೋದವನೂ ಮತ್ತು ಆ (ಅಭಯಪ್ರಾಪ್ತಿಗಾಗಿ) ಯತ್ನಮಾಡುವವನೂ ಸ್ವತಂತ್ರನಾಗಿದ್ದರೆ ಮತ್ತೆ ಭಯಯುಕ್ತವಾದ ಸ್ಥಲಕ್ಕೆ ಹೋಗುವದಕ್ಕೆ ಇಚ್ಛಿಸುವ ಕಾರಣವೇನಿದೆ ?[1]

ಯಥೇಷ್ಟಾಚರಣಾಪ್ತ್ಯಿಃ ಸಂನ್ಯಾಸಾದಿವಿಧೌ ಕುತಃ ।
ಪದಾರ್ಥಜ್ಞಾನಬದ್ಧಸ್ಯ[2] ವಾಕ್ಯಾರ್ಥಾನುಭವಾರ್ಥಿನಃ ॥ ೨೧೭ ॥

೨೧೭. ಪದಾರ್ಥದ ಅಜ್ಞಾನದಿಂದ ಬದ್ಧನಾಗಿ ವಾಕ್ಯಾರ್ಥದ ಅನುಭವವನ್ನು ಬಯಸುತ್ತಿರುವವನಿಗೆ ಸಂನ್ಯಾಸವೇ ಮುಂತಾದವುಗಳ ವಿಧಿಯು ಇರುವಲ್ಲಿ, ಯಥೇಷ್ಟಾಚರಣೆಯು ಬಂದೊದಗುವದು ಹೇಗೆ ?[3]

ಅತಃ ಸರ್ವಮಿದಂ ಸಿದ್ಧಂ ಯತ್ ಪ್ರಾಗಸ್ಮಾಭಿರೀರಿತಮ್ ॥೨೧೮½॥
ಯೋ ಹಿ ಯಸ್ಮಾದ್[4] ವಿರಕ್ತಃ ಸ್ಯಾನ್ನಾಸೌ ತಸ್ಮೈ ಪ್ರವರ್ತತೇ ।
ಲೋಕತ್ರಯಾದ್ವಿರಕ್ತತ್ವಾನ್ಮುಮುಕ್ಷುಃ ಕಮಿತೀಹತೇ ॥ ೨೧೯ ॥
ಕ್ಷುಧಯಾ ಪೀಡ್ಯಮಾನೋಽಪಿ ನ ವಿಷಂ ಹ್ಯತ್ತುಮಿಚ್ಛತಿ ।
ಮೃಷ್ಟಾನ್ನಧ್ವಸ್ತತೃಡ್ ಜಾನನ್ನಾಮೂಢಸ್ತಜ್ಜಿಘೃತ್ಸತಿ[5] ॥ ೨೨೦ ॥

---

1. ಕರ್ತೃತ್ವಾದಿಯುಕ್ತವಾದ ಸಂಸಾರವು ಸಭಯವು, ಅಕರ್ತೃತ್ವಜ್ಞಾನದಿಂದ ಬರುವ ಮುಕ್ತಿಯು ಅಭಯವು. ಅದನ್ನು ಪಡೆದುಕೊಂಡವನು ಎಂದಿಗೂ ಮತ್ತೆ ಕರ್ತೃತ್ವವನ್ನು ಅಂಗೀಕರಿಸನು ; ಆದಕ್ಕಾಗಿ ಯತ್ನವನ್ನು ಮಾಡುತ್ತಿರುವ ಮುಮುಕ್ಷುವೂ ಅಂಗೀಕರಿಸುವದಿಲ್ಲ –ಎಂದರ್ಥ. 'ಸ್ವತಂತ್ರನಾಗಿದ್ದರೆ' ಎಂದರೆ ಮುಕ್ತನೇ ಆಗಿದ್ದಂತೆ ಎಂದರ್ಥ ; ಮುಮುಕ್ಷುವು ಪರತಂತ್ರನಾದರೂ ಏಕೆ ಇಚ್ಛಿಸುವದಿಲ್ಲ ಎಂಬುದನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿದೆ.

2. 'ಪದಾರ್ಥಜ್ಞಾನಬದ್ಧಸ್ಯ' ಎಂಬ ಮೈ॥ ಪಾಠಕ್ಕಿಂತ ಬೋಧನಿಧಿಯ ಪಾಠವು ಮೇಲು.

3. ಅಜ್ಞಾನದಿಂದ ನಾನು ಬದ್ಧನಾಗಿದ್ದೇನೆ, ಇದರಿಂದ ಮುಕ್ತನಾಗಬೇಕು ಎಂದು ತ್ವಂಪದಾರ್ಥಜ್ಞಾನಕ್ಕಾಗಿ ಯತ್ನಮಾಡುವ ಮುಮುಕ್ಷುವಿಗೆ ಈ ಸಂನ್ಯಾಸವನ್ನು ವಿಧಿಸಿದೆ ಎಂದು ೨೧೧ನೆಯ ಶ್ಲೋಕದಲ್ಲಿ ಹೇಳಿದೆ. ಇಂಥ ಮುಮುಕ್ಷುವು ಮತ್ತೆ ಶಾಸ್ತ್ರೀಯ ಕರ್ಮವನ್ನೇ ಮಾಡುವಂತಿಲ್ಲ ; ಯಥೇಚ್ಛೆಯಿಂದ ಹೇಗೆ ವರ್ತಿಸುವನು ? ಇದು ೨೨೦ನೆಯ ಶ್ಲೋಕದ ಪೂರ್ವಪಕ್ಷಕ್ಕೆ ಉತ್ತರ. 'ಪದಾರ್ಥಜ್ಞಾನಬದ್ಧಸ್ಯ' ಎಂಬ ಮೈ॥ ಪಾಠದಲ್ಲಿ ಜ್ಞಾನಿಗೆ ವಿಧಿ ಎಂಬ ಅನಿಷ್ಟಾರ್ಥವಾಗುತ್ತದೆ.

4. ನೈ. ಸಿ. ೬೫ರಲ್ಲಿ 'ಯತ್ರ' ಎಂಬ ಪಾಠವಿದೆ.

5. ೨೧೯-೨೨೦- ಈ ಎರಡು ಶ್ಲೋಕಗಳೂ ಬೋಧನಿಧಿಯ ಪಾಠದಲ್ಲಿಲ್ಲ ನೈಷ್ಕರ್ಮ್ಯಸಿದ್ಧಿ ೪-೬೫, ೬೬ರಲ್ಲಿವೆ. ಇವನ್ನೂ ೨೧೮½ನ್ನೂ ಯಾರೋ ಸೇರಿಸಿರುವರೋ ಮೂಲದಲ್ಲಿಯೇ ಇವೂ ಇದ್ದವೋ ತಿಳಿಯದು.

ಅಗಲ್ತ್ ೨೨೦. ಆದ್ದರಿಂದ ನಾವು ಹೇಳಿದ್ದೆಲ್ಲವೂ ಸಿದ್ಧವಾಯಿತು.[1]

ಯಾವನು ಏತರಲ್ಲಿ ವಿರಕ್ತನಾಗಿರುವನೋ ಅವನು ಅದರಲ್ಲಿ ಪ್ರವೃತ್ತನಾಗುವದಿಲ್ಲ; ಮುಮುಕ್ಷುವಾದವನು ಮೂರು ಲೋಕಗಳಲ್ಲಿಯೂ ವಿರಕ್ತನಾಗಿರುವದರಿಂದ ಏತಕ್ಕೆ ತೊಡಗುವನು? ಹಸಿವಿನಿಂದ ಸಂಕಟಪಡುತ್ತಿರುವವನು ಕೂಡ ವಿಷವನ್ನು ತಿನ್ನುವದಕ್ಕೆ ಬಯಸಲಾರನಷ್ಟೆ; ಮೃಷ್ಟಾನ್ನವನ್ನುಂಡು ಹಸಿವನ್ನು ನೀಗಿಸಿಕೊಂಡವ (ಅದು ವಿಷವೆಂದು) ತಿಳಿದಿರುವವ ವಿವೇಕಿಯು ಅದನ್ನು ತಿನ್ನುವದಕ್ಕೆ ಎಂದಿಗೂ ಇಚ್ಛಿಸನು.[2]

ಮಂಗಲ

ವೇದಾನ್ತವಾಕ್ಯಪುಷ್ಪೇಭ್ಯೋ ಜ್ಞಾನಾಮೃತಮಧೂತ್ತಮಮ್ ।
ಉಜ್ಜಹಾರಾಲಿವದ್ಯೋ ನ ಸ್ತಸ್ಮೈ ಸದ್ಗುರವೇನಮಃ ॥ ೨೨೧ ॥

೨೨೧. ವೇದಾಂತವಾಕ್ಯಗಳೆಂಬ ಪುಷ್ಪಗಳಿಂದ ಉತ್ತಮವಾದ ಜ್ಞಾನಾಮೃತಮಧುವನ್ನು ಭ್ರಮರದಂತೆ ಯಾರು ಎತ್ತಿಕೊಟ್ಟರುವನೋ ಅಂಥ ನಮ್ಮ ಸದ್ಗುರುವಿಗೆ ನಮಸ್ಕಾರ!

---

1. ತತ್ತ್ವಮಸಿ ಎಂಬ ವಾಕ್ಯವು ನಿತ್ಯಮುಕ್ತಸ್ಥಿತಿಯನ್ನೇ ತಿಳಿಸುತ್ತದೆ; ಬಂಧವು ಆಧ್ಯಾಸದಿಂದಲೇ ಆಗಿದೆ. ಆ ವಾಕ್ಯದಿಂದ ದಶಮವಾಕ್ಯದಂತೆ ಅಪರೋಕ್ಷಜ್ಞಾನವೇ ಆಗುತ್ತದೆ. ಪದಾರ್ಥಜ್ಞಾನವಿಲ್ಲದವನಿಗೆ ವಾಕ್ಯಜ್ಞಾನವಾಗುವದಿಲ್ಲ; ತ್ವಂಪದಾರ್ಥವಿವೇಕಕ್ಕಾಗಿ ಶಾಂತ್ಯಾದಿಸಾಧನಯುಕ್ತನಾಗಿ ಅನ್ವಯವ್ಯತಿರೇಕಗಳಿಂದ ಆತ್ಮಸ್ವರೂಪವನ್ನು ತಿಳಿದುಕೊಳ್ಳಬೇಕು. ಆ ಬಳಿಕ ಆತ್ಮನೇ ಎಲ್ಲವೂ ಎಂಬ ವಾಕ್ಯಜ್ಞಾನವಾಗುತ್ತದೆ. ಅದರಿಂದ ಕರ್ತೃತ್ವಜ್ಞಾನವು ಬಾಧಿತವಾಗುತ್ತದೆ. ವಾಕ್ಯಜ್ಞಾನವಾದವನಿಗೆ ಮತ್ತೇನೂ ಮಾಡತಕ್ಕದ್ದಿರುವದಿಲ್ಲ; ಶಾಸ್ತ್ರದಲ್ಲಿ ವಾಕ್ಯಜ್ಞಾನಿಗೆ ಪ್ರಸಂಖ್ಯಾನಾದಿಗಳನ್ನು ವಿಧಿಸಿದೆ ಎಂಬುದು ಸರಿಯಲ್ಲ- ಎಂದು ಹೇಳಿದ್ದೆಲ್ಲವೂ ಸಿದ್ಧವಾಯಿತು ಎಂದರ್ಥ. ಈ ಶ್ಲೋಕಾರ್ಧವು ಪ್ರಕರಣದ ಕೊನೆಯಲ್ಲಿದ್ದರೆ ಹೆಚ್ಚು ಒಪ್ಪುತ್ತಿತ್ತೆಂದು ನಮ್ಮ ಅಭಿಪ್ರಾಯ.

2. ಮುಮುಕ್ಷುವೇ ತೊಡಗದಿರುವಲ್ಲಿ ಜ್ಞಾನದಿಂದ ಕೃತಕೃತ್ಯನಾದವನು ವಿಧ್ಯುಕ್ತ ಸಾಧನದಲ್ಲಿ ಮತ್ತೇಕೆ ತೊಡಗುವನು?- ಎಂದು ಅಭಿಪ್ರಾಯ.

ತತ್ತ್ವಮಸಿಪ್ರಕರಣದ ಸಾರ

೧–೨ ಸಕಲಮನೋವೃತ್ತಿಗಳಿಗೂ ಆತ್ಮನಾಗಿರುವ ಪರಮಾತ್ಮನಿಗೂ ಉತ್ತಮ ಯುಕ್ತಿಗಳಿಂದ ವೇದವಿರುದ್ಧವಾದಗಳನ್ನು ಖಂಡಿಸಿ ವೇದಾಂತಸಿದ್ಧಾಂತವನ್ನು ರಕ್ಷಿಸಿರುವ ಪರಮಗುರುಗಳಿಗೂ ನಮಸ್ಕಾರ!

೩–೮. "ತತ್ತ್ವಮಸಿ" ಎಂಬ ಶ್ರುತಿವಾಕ್ಯವು ಪ್ರಮಾಣವಾದ್ದರಿಂದ ನಾನು ಯಾವಾಗಲೂ ಮುಕ್ತನಾಗಿರುವ ಸಚ್ಚಿದ್ಬ್ರಹ್ಮವೇ ಎಂಬುದು ಸಿದ್ಧಾಂತವು. ಕರ್ತೃತ್ವವು ಪ್ರತ್ಯಕ್ಷಾನುಭವವಾದ ಜ್ಞಾನದಿಂದ ತೋರುತ್ತದೆ, ಶಾಸ್ತ್ರವು ಲೋಕಸಿದ್ಧವಾದ ಈ ಕರ್ತೃತ್ವವನ್ನು ಅನುವಾದಮಾಡಿಕೊಂಡೇ ಕರ್ಮವನ್ನು ವಿಧಿಸುತ್ತಿರುವುದರಿಂದ ಅದು ಕರ್ತೃತ್ವವು ಸತ್ಯವೆನ್ನುವದಕ್ಕೆ ಪ್ರಮಾಣವಲ್ಲ.

೯–೧೮. ಆದರೆ ಪ್ರಸಂಖ್ಯಾನವಾದಿಗಳು ಹೀಗೆನ್ನುತ್ತಾರೆ: ತತ್ತ್ವಮಸಿ ಎಂಬ ವಾಕ್ಯದಿಂದಲೇ ಸ್ಥಿರವಾದ ಅಪರೋಕ್ಷಜ್ಞಾನವಾಗುವದಿಲ್ಲ. ಒಂದು ಸಲ ಶ್ರವಣಮಾಡಿದ ಮಾತ್ರದಿಂದ ಜ್ಞಾನವು ದೃಢವಾಗುವದಿಲ್ಲವಾದ್ದರಿಂದಲೇ ವಾಕ್ಯಯುಕ್ತಿಗಳ ಅಭ್ಯಾಸ ರೂಪವಾದ ಪ್ರಸಂಖ್ಯಾನವನ್ನು ಶ್ರುತಿಯು ವಿಧಿಸುತ್ತದೆ. ಅಪರೋಕ್ಷಜ್ಞಾನವುಂಟಾಗುವ ವರೆಗೆ ವಿಧಿಬದ್ಧನಾಗಿಯೇ ಇರಬೇಕು; ಇಲ್ಲದಿದ್ದರೆ ಜ್ಞಾನಿಯು ಸ್ವೇಚ್ಛೆಯಿಂದ ನಡೆಯಬಹುದೆಂದಾಗುತ್ತದೆ. ವಾಕ್ಯದಿಂದುಂಟಾದ ಜ್ಞಾನವು ಪ್ರತ್ಯಕ್ಷದಿಂದಾಗಿರುವ ಜ್ಞಾನದ ಅನಾದಿಸಂಸ್ಕಾರದಿಂದ ಬಾಧಿತವಾಗುತ್ತದೆ. ಇದಲ್ಲದೆ ಶ್ರುತಿಯಿಂದ ಸಾಮಾನ್ಯ ಜ್ಞಾನವಾಗುತ್ತದೆಯೇ ಹೊರತು ವಿಶೇಷಾನುಭವವುಂಟಾಗದು. ಅದಕ್ಕೆ ಪ್ರಸಂಖ್ಯಾನವು ಬೇಕು. ಯಾರಿಗಾದರೂ ವಾಕ್ಯಶ್ರವಣಮಾತ್ರದಿಂದ ಅನುಭವವುಂಟಾದರೆ ಹಿಂದಿನ ಜನ್ಮದಲ್ಲಿ ಅವರು ಪ್ರಸಂಖ್ಯಾನವನ್ನು ಮಾಡಿರಬೇಕೆಂದು ಕಲ್ಪಿಸಬೇಕು. ಪ್ರಸಂಖ್ಯಾನವು ಬೇಕಿಲ್ಲವೆನ್ನುವವರು ಸಂನ್ಯಾಸಾಶ್ರಮವು ಶಾಸ್ತ್ರವಿಹಿತವೆಂದು ಹೇಳುವದಕ್ಕೆ ಆಗುವದಿಲ್ಲ. ಆದ್ದರಿಂದ 'ತತ್ತ್ವಮಸಿ' ಎಂದು ಹೇಳಿರುವದು ಮುಂದೆ ಆಗುವ ಅನುಭವರೂಪವಾದ ಫಲವು; ಅದಕ್ಕಾಗಿ ಪ್ರಸಂಖ್ಯಾನವನ್ನು– ಶ್ರವಣಮನನನಿದಿಧ್ಯಾಸನಗಳನ್ನು– ಮಾಡಬೇಕೆಂಬುದೇ ಶಾಸ್ತ್ರದ ಉಪದೇಶವು.

೧೯–೨೩. ಈ ಪೂರ್ವಪಕ್ಷವು ಸರಿಯಲ್ಲ. ಏಕೆಂದರೆ ಶಾಸ್ತ್ರವು ಅಧ್ಯಸ್ತವಾದ ಅನಾತ್ಮಧರ್ಮವನ್ನು ಕಳೆಯುವದರಲ್ಲಿಯೇ ಪರ್ಯವಸಾನವಾಗಿದೆ. ಕರ್ಮಕಾಂಡದಂತೆ ಇಲ್ಲಿ ಯಾವ ವಿಧಿಯೂ ಕಂಡುಬರುವದಿಲ್ಲ. ಆತ್ಮನಲ್ಲಿ ನಿಜವಾಗಿ ಅನಾತ್ಮಧರ್ಮವು ಬಂದು ಸೇರಿಲ್ಲ; ಆದ್ದರಿಂದ ಅದನ್ನು ನಿಜವಾಗಿ ಸಾಧನದಿಂದ ಕಳೆದುಕೊಳ್ಳಬೇಕಾದದ್ದೂ ಇರುವದಿಲ್ಲ: ಶ್ರುತಿಯಲ್ಲಿ ನೇತಿನೇತಿ ಎಂದು ಹೇಳಿರುವದು ಅಪ್ರಾಪ್ತ ನಿಷೇಧವೇ ಆಗಿರುತ್ತದೆ.

೨೪-೩೦. ಆತ್ಮನನ್ನು ಯಾವ ಶಬ್ದದಿಂದಲೂ ತಿಳಿಸುವದಕ್ಕೆ ಆಗುವದಿಲ್ಲ; ಅವನು ಯಾವ ಪ್ರತ್ಯಯಕ್ಕೂ ಗೋಚರನಲ್ಲ. ಆದ್ದರಿಂದ ಆತ್ಮನನ್ನು ಯಾವ ಸಾಧನದಿಂದಲಾದರೂ ತಿಳಿಯಬೇಕೆಂದು ಶ್ರುತಿಯು ಉಪದೇಶಿಸುತ್ತದೆ ಎಂಬುದು ಆಗದ ಮಾತು. ಆತ್ಮನನ್ನೂ ಚಿದಾಭಾಸದಿಂದ ಕೂಡಿದ ಅಹಂಕಾರವನ್ನೂ ವಿಂಗಡಿಸಿ ತಿಳಿದುಕೊಳ್ಳಲಾರದೆ ಇರುವ ಸ್ಥಿತಿಯಲ್ಲಿ ಅತ್ತಾದಿಶಬ್ದಗಳು ಸಾಭಾಸಾಹಂಕಾರದ ಮೂಲಕ ಆತ್ಮನನ್ನು ಲಕ್ಷಣೆಯಿಂದ ತಿಳಿಸುತ್ತವೆ.

೩೧-೪೨. ಮುಖ, ಕನ್ನಡಿ- ಇವುಗಳಲ್ಲಿ ಯಾವದೊಂದರ ಧರ್ಮವೂ ಇಲ್ಲದ ಮುಖದ ಪ್ರತಿಬಿಂಬವು ಆವೆರಡೂ ಒಂದಾನೊಂದು ರೀತಿಯಿಂದ ಸಂಬದ್ಧವಾದಾಗ ತೋರುವಂತೆ ಆತ್ಮನೂ ಅಲ್ಲದ, ಅಹಂಕಾರವೂ ಅಲ್ಲದ, ಚಿದಾಭಾಸವು ಅಹಂಕಾರದಲ್ಲಿ ತೋರುತ್ತಿರುತ್ತದೆ. ಇದನ್ನು ತಿಳಿಯದೆ ಸಂಸಾರಿಜೀವನ ಸ್ವರೂಪದ ವಿಷಯದಲ್ಲಿ ವಾದಿಗಳಲ್ಲಿ ವಿವಾದವುಂಟಾಗಿರುತ್ತದೆ. ಈ ಆಭಾಸವು ಪರಮಾರ್ಥವೆಂದು ಕೆಲವರು ಹೇಳುತ್ತಾರೆ. ಇದು ವಸ್ತುವಿನ ನೆರಳಿನಂತೆ ಬರಿಯ ತೋರಿಕೆ. ನೆರಳೂ ಸತ್ಯವೆಂದು ಕೆಲವರು ವಾದಿಸುವದು ಸಾಹಸವು. ಆತ್ಮನು ಕೂಟಸ್ಥನಾಗಿರುವದರಿಂದಲೂ ಅಹಂಕಾರವು ಅಚೇತನವಾಗಿರುವದರಿಂದಲೂ ಆಭಾಸವು ಬರಿಯ ತೋರಿಕೆಯಾಗಿರುವದರಿಂದಲೂ ಸಂಸಾರವು ಯಾರಿಗೂ ಇಲ್ಲವೆಂದಾಗುವದಲ್ಲ! ಆಗ ಶಾಸ್ತ್ರೋಪದೇಶವೇ ವ್ಯರ್ಥವಾಗುವದಲ್ಲ!- ಎಂದು ಕೆಲವರು ಶಂಕಿಸುವರು. ಆದರೆ ಸಂಸಾರವು ಅವಿದ್ಯಕವೇ ಆಗಿ ಆತ್ಮನಲ್ಲಿ ತೋರುತ್ತಿರುವದರಿಂದ ಅವಿದ್ಯಾನಾಶಕ್ಕಾಗಿ ಶಾಸ್ತ್ರಪ್ರವೃತ್ತಿ ಎಂಬ ನಮ್ಮ ಸಿದ್ಧಾಂತದಲ್ಲಿ ಯಾವ ಆಕ್ಷೇಪಕ್ಕೂ ಎಡೆಯಿಲ್ಲ.

೪೩-೭೩. ಆತ್ಮನು ಚೈತನ್ಯಸ್ವರೂಪನೇ ಆಗಿರುತ್ತಾನೆ, ಅಂತಃಕರಣವು ಚೈತನ್ಯದಂತೆ ತೋರುತ್ತಿರುವದು. ಇವೆರಡರ ವಿವೇಕವನ್ನು ಮಾಡಿಕೊಳ್ಳದೆ ಇರುವಾಗ 'ಆತ್ಮನು ಅರಿಯುತ್ತಾನೆ' ಎಂಬ ವ್ಯವಹಾರವಾಗುವದು. ಆತ್ಮನಲ್ಲಿ ವಿಕಾರವಿಲ್ಲ, ಅಂತಃಕರಣದಲ್ಲಿ ವಿಕಾರವಿದ್ದರೂ ಜ್ಞಾನವಿರುವದಿಲ್ಲ. ಆತ್ಮನು ಜ್ಞಾನವೆಂದರೆ ಅರಿಯುವದೆಂಬ ಧಾತ್ವರ್ಥರೂಪವಾದ ಕ್ರಿಯೆಯಲ್ಲ; ಏಕೆಂದರೆ ಆತ್ಮನು ನಿತ್ಯನು. ಆತ್ಮನು ಅರಿಯುವ ಕರಣವಲ್ಲ, ಅರಿಯಲ್ಪಡುವ ಜ್ಞೇಯವೂ ಅಲ್ಲ. ಆತ್ಮನು ಜ್ಞಾತೃ ಎಂದು ತಿಳಿಯುವದೂ ಜ್ಞಾನವು ಉಂಟಾಗುತ್ತದೆಯೆಂದು ತಿಳಿಯುವದೂ ಆತ್ಮಚೈತನ್ಯ, ಅಂತಃಕರಣ, ಅದರಲ್ಲಿರುವ ಚಿದಾಭಾಸ- ಈ ಮೂರನ್ನೂ ವಿಂಗಡಿಸಿ ಅರಿತುಕೊಳ್ಳದಿರುವ ಅವಿದ್ಯಾವ್ಯವಹಾರವೇ. ಈ ವಿವೇಕವಿಲ್ಲದ್ದರಿಂದಲೇ ಬೌದ್ಧರು ಪ್ರತ್ಯಯಗಳೇ ಸ್ವಯಂಪ್ರಕಾಶವೆನ್ನುತ್ತಾರೆ. ಅವರನ್ನು ನಿರಾಕರಣೆಮಾಡುವದಕ್ಕೆ ವೇದಾಂತಿಗಳು ಚಿದಾಭಾಸವನ್ನು ಅವಶ್ಯವಾಗಿ ಒಪ್ಪಬೇಕು; ಇಲ್ಲದಿದ್ದರೆ ಪ್ರತ್ಯಯಗಳ ಗ್ರಾಹಕನು ಯಾರೆಂಬುದೇ ಸಿದ್ಧಿಯಾಗುವದಿಲ್ಲ.

೭೪-೭೬. 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತ್ವಂಪದಾರ್ಥವು ಆತ್ಮನು. ಆದರೆ ಆತ್ಮನು ಶಬ್ದವಾಚ್ಯನಲ್ಲವಾದ್ದರಿಂದ ಆತ್ಮ, ಅಹಂಕಾರ, ಆಭಾಸ- ಇವುಗಳನ್ನು ವಿಂಗಡಿಸಿಕೊಳ್ಳದೆ ಇರುವ ವ್ಯವಹಾರದ ದೃಷ್ಟಿಯಿಂದಲೇ ತ್ವಂಶಬ್ದವನ್ನು ಉಪಯೋಗಿಸಿರುತ್ತದೆ. ಅಹಂಕಾರವು ಚೇತನವಲ್ಲ; ಚೈತನ್ಯವು ಆದರಲ್ಲಿ ತಾನೇ ಸೇರಿಕೊಂಡಿರುತ್ತದೆ ಎಂಬುದೂ ಯುಕ್ತವಾಗುವದಿಲ್ಲ; ಏಕೆಂದರೆ ಚೈತನ್ಯವು ಕೂಟಸ್ಥನಾಗಿರುತ್ತದೆ.

ಆವ್ದರಿಂದ ‘ತತ್ತ್ವಮಸಿ’ ಎಂಬ ವಾಕ್ಯವು ಅರ್ಥವಾಗುವದಕ್ಕೆ ಚಿದಾಭಾಸವನ್ನು ಒಪ್ಪಬೇಕು. ಆಗ ಅಭಾಸದ ಮೂಲಕ ಆತ್ಮನನ್ನು ತ್ವಂಪದವು ತಿಳಿಯುತ್ತದೆ ಎಂದು ಏರ್ಪಡುತ್ತದೆ.

೮೭–೯೬. ತತ್ತ್ವಮಸಿ ವಾಕ್ಯಾರ್ಥಕ್ಕೆ ಆತ್ಮಾನಾತ್ಮವಿವೇಕವುಳ್ಳವನೇ ಅಧಿಕಾರಿಯು. ನಾನು ಎಂದು ಯಾವಾಗಲೂ ಕರೆಯಿಸಿಕೊಳ್ಳುವದಕ್ಕೆ ಅರ್ಹವಾದದ್ದು ಆತ್ಮನು; ‘ನನ್ನ’ ‘ಇದು’ ಎಂದು ಕರೆಯಿಸಿಕೊಳ್ಳುವದಕ್ಕೆ ಅರ್ಹವಾದದ್ದು ಅನಾತ್ಮವು. ‘ನಾನು ಇಂಥವನು’ ಎಂಬಲ್ಲಿ ಆತ್ಮ, ಅನಾತ್ಮ– ಎರಡು ಅಂಶಗಳೂ ಸೇರಿಕೊಂಡಿರುವವು. ಇವುಗಳಲ್ಲಿ ಅನಾತ್ಮವನ್ನು ತಳ್ಳಿಹಾಕಬೇಕು. ಯಾವದು ಪರಾರ್ಥವಾದ ವಿಶೇಷಣವೋ ಅದೆಲ್ಲವೂ ಅನಾತ್ಮವೇ. ಹೊರಗಿನ ಪದಾರ್ಥಗಳು ದೇಹಿಗೂ, ದೇಹವು ಅಹಂಕರ್ತೃವಿಗೂ ದೇಹಸಹಿತವಾದ ಅಹಂಕರ್ತೃವು ಆತ್ಮನಿಗೂ ಪರಾರ್ಥವಾದ ವಿಶೇಷಣವಾಗುತ್ತವೆ. ಆತ್ಮನು ಇವುಗಳಲ್ಲಿ ಯಾವದೊಂದನ್ನೂ ಮುಟ್ಟದೆ ಎಲ್ಲವನ್ನೂ ತನ್ನ ಚೈತನ್ಯದ ಬೆಳಕಿನಿಂದ ಬೆಳಗುತ್ತಿರುತ್ತಾನೆ. ಆತ್ಮನು ಸ್ವತಂತ್ರನಾಗಿರುತ್ತಾನೆ; ಮಿಕ್ಕವು ಎಲ್ಲವೂ ಅವಿವೇಕದಶೆಯಲ್ಲಿ ಮಾತ್ರ ಇರುವಂತೆ ಕಾಣುತ್ತದೆ. ಅನ್ವಯವ್ಯತಿರೇಕಗಳಿಂದ ‘ನಾನು’ ಯಾರು?– ಎಂಬುದನ್ನು ನಿರ್ಣಯಿಸಿಕೊಳ್ಳಬೇಕು, ಆಗ ‘ತತ್ತ್ವಮಸಿ’ ಎಂಬ ವಾಕ್ಯವಲ್ಲಿ ತ್ವಂಪದಾರ್ಥದ ವಿವೇಕವಾಗುವದು. ‘ಸುಷುಪ್ತಿಯಲ್ಲಿ ನಾನು ಏನನ್ನೂ ಅರಿಯಲಿಲ್ಲ’ ಎಂಬ ಪರಾಮರ್ಶದಲ್ಲಿ ಅಹಂಕಾರವಾಗಲಿ ಪ್ರತ್ಯಯಗಳಾಗಲಿ ಇರಲಿಲ್ಲವೆಂದೂ ಅದನ್ನು ನೋಡುವ ಚೈತನ್ಯಸ್ವರೂಪವು ಇದ್ದೇ ಇತ್ತೆಂದೂ ಕಂಡುಬರುತ್ತದೆ. ಆತ್ಮನು ಸ್ವಯಂಜ್ಯೋತಿಯು, ಅವನ ದೃಷ್ಟಿಗೆ ಲೋಪವಿಲ್ಲ, ಅವನಿಗಿಂತ ವ್ಯತಿರಿಕ್ತವಾದದ್ದೂ ಏನೂ ಇರುವದಿಲ್ಲವಾದ್ದರಿಂದ ಸುಷುಪ್ತಿಯಲ್ಲಿ ಯಾವದೂ ಕಾಣಬರುವದಿಲ್ಲ– ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಹೀಗೆ ಅಭಾಸವಿಶಿಷ್ಟ ಅಹಂಕಾರವೇ ತ್ವಂಪದಕ್ಕೆ ವಾಚ್ಯಾರ್ಥವೆಂದೂ ಆತ್ಮನು ಲಕ್ಷ್ಯಾರ್ಥವೆಂದೂ ಶ್ರುತಿಯುಕ್ತಿಗಳ ಬಲವಿಂದ ಗ್ರಹಿಸಿಕೊಂಡಿರುವವನಿಗೆ ವಾಕ್ಯಾರ್ಥವು ಅವಶ್ಯವಾಗಿ ಉಂಟಾಗುತ್ತದೆ.

೯೭–೧೧೧. ಚತುರ್ಮುಖಬ್ರಹ್ಮನು ರಾಮನಿಗೆ ವಿಷ್ಣುತ್ವವನ್ನು ತಿಳಿಸಿದಂತೆ ಈ ವಾಕ್ಯವು ಸದ್ಬ್ರಹ್ಮವೇ ನೀನು ಎಂದು ತಿಳಿಸಿಕೊಡುತ್ತದೆ. ಆದರಿಂದಲೇ ಮುಕ್ತಿಯಾಗುತ್ತದೆ. ಈ ವಾಕ್ಯದ ಶ್ರವಣಕ್ಕಿಂತಲೂ ಮೊದಲೇ ಶ್ರೋತೃವು ಬ್ರಹ್ಮಸ್ವರೂಪನೇ ಆಗಿರುತ್ತಾನೆ; ಆದ್ದರಿಂದ ಆತ್ಮನು ಬ್ರಹ್ಮವೇ ಆಗಿದ್ದು ವಾಕ್ಯಶ್ರವಣದಿಂದ ತಾನು ಬ್ರಹ್ಮವೆಂದು ತಿಳಿದುಕೊಳ್ಳುತ್ತಾನೆ; ಹೀಗಲ್ಲದಿದ್ದರೆ ಸದ್ಬ್ರಹ್ಮವಲ್ಲದ ಅಹಂಕಾರವು ನಾನು ಬ್ರಹ್ಮವೆಂದು ತಿಳಿದುಕೊಳ್ಳಬೇಕಾಗಿದೆ ಎಂದರೆ ಆಗ ವಾಕ್ಯಜನ್ಯಜ್ಞಾನವು ಮಿಥ್ಯೆಯೇ ಆಗುವದು. ಅಹಂಕಾರವೂ ಪ್ರತ್ಯಯವೂ ಅಚೇತನವಾಗಿರುವದರಿಂದ ಫಲವಾದ ಆತ್ಮಜ್ಞಾನವು ಆತ್ಮನಿಗೇ ಎನ್ನಬೇಕಾಗಿದೆ. ಕೂಟಸ್ಥನಾದ ಆತ್ಮನಿಗೂ ರಾಜನಿಗೆ ಸೇನಾಧಿಪತಿಯು ಮೂಲಕ ಜಯಾಪಜಯವಾಗುವಂತೆ ಫಲವುಂಟಾಗಬಹುದಾಗಿದೆ. ಸಾಕ್ಷಿಯನ್ನೇ ಇಲ್ಲಿ ಶ್ರೋತೃವೆಂದು ಭಾವಿಸಬೇಕು; ಏಕೆಂದರೆ ಅವನನ್ನು ಬಿಟ್ಟರೆ ಮಿಕ್ಕ ಯಾರೂ ಶ್ರೋತೃವೆನಿಸಲಾರರು. ಸಾಕ್ಷಿಯ ಸಮೀಪದಲ್ಲಿ ಅಹಂಕಾರಕ್ಕೇ ಶ್ರೋತೃತ್ವವೆಂದಾಗಲಿ ಎನ್ನುವದು ಸರಿಯಲ್ಲ; ಏಕೆಂದರೆ ಸಾಕ್ಷಿಯಿಂದ ಯಾವದಾದರೂ, ನಿಜವಾದ ಉಪಕಾರವು ಅಹಂಕಾರಕ್ಕೆ ಆಗುವದೆಂದರೆ ಆತ್ಮನು ಪರಿಣಾಮಿ ಎಂದಂತೆ ಆಗುತ್ತದೆ.

ಆದ್ದರಿಂದ ಅಸತ್ಯವಾದ ಆಭಾಸದಮೂಲಕ ಆತ್ಮನಲ್ಲಿಯೇ ಶ್ರೋತೃತ್ವಾದಿಗಳ ವ್ಯವಹಾರವಾಗುವದೆಂಬುದೇ ಸರಿ.

೧೧೨–೧೩೭. ಆಭಾಸವೆಂಬುದೇ ಇಲ್ಲ, ಆಭಾಸವೆಂದು ಸಿದ್ಧಾಂತಿಯು ಕರೆಯುತ್ತಿರುವದಕ್ಕಿಂತ ವ್ಯತಿರಿಕ್ತವಾಗಿ ಆತ್ಮನೇ ಇಲ್ಲ– ಎಂದು ಪೂರ್ವಪಕ್ಷಿಯು ವಾದಿಸಬಹುದು. ಆದರೆ ಕನಸಿನಲ್ಲಿ ಆತ್ಮನು ವಿಷಯಿಯಾಗಿಯೂ ಅಂತಃಕರಣವು ವಿಷಯವಾಗಿಯೂ ತೋರುವದು ಅನುಭವದಲ್ಲಿದೆ. ಆಭಾಸದಿಂದ ಕೂಡಿದ ಜ್ಞಾತೃ, ಪ್ರತ್ಯಯರೂಪವಾದ ಜ್ಞಾನ, ಹೊರಗಿನ ವಿಷಯಗಳು– ಇವುಗಳನ್ನು ವಿಂಗಡಿಸಿ ಅರಿಯುವಾತನಿಗೆ ಅವಶ್ಯವಾಗಿ ಸಾಕ್ಷಿಯ ಅರಿವು ಆಗುತ್ತದೆ. ಆತ್ಮನು ಎಲ್ಲಾ ಜ್ಞಾನಗಳಲ್ಲಿಯೂ ಅನುಗತನಾಗಿರುವ ಅವಗತಿಯೇ ಆಗಿರುತ್ತಾನೆ; ಪ್ರತ್ಯಯಗಳ ಸ್ವರೂಪ, ಪ್ರಕಾಶ– ಮುಂತಾದವುಗಳಿಗೆ ಮೂಲವಾಗಿರುತ್ತಾನೆ. ಅಜ್ಞಾನದವನಿಗೆ ಆತ್ಮನನ್ನು ತಿಳಿಸುವದಕ್ಕೆ ತಾನೇ ಇರುವದೆಂಬ ಸ್ವತಃಸಿದ್ಧಿಯಾಗಲಿ 'ನಾನು ಇದನ್ನು ಅರಿತೆನು' ಎಂಬ ಬರಿಯ ಸ್ಮರಣೆಯಾಗಲಿ ಸಾಕಾಗುವದಿಲ್ಲ; ಆತ್ಮನನ್ನು ಅರಿತುಕೊಳ್ಳುವದೇ ಸಿದ್ಧಿಯಾದ್ದರಿಂದ ಅದಕ್ಕೆ ಆಭಾಸದಿಂದೊಡಗೂಡಿದ ಪ್ರಮಾಣವೇ ಅವಶ್ಯವಾಗಿರುತ್ತದೆ. ಆದ್ದರಿಂದ ಶಾಸ್ತ್ರವು ಆಭಾಸದ ಮೂಲಕವೇ ಚೈತನ್ಯವನ್ನು ತಿಳಿಸಿಕೊಡುತ್ತದೆ ಎಂದು ನಿಶ್ಚಯವಾಗುತ್ತದೆ.

೧೩೮–೧೪೭. ಕ್ಷಣಿಕವಿಜ್ಞಾನಕ್ಕಿಂತ ಬೇರೆಯಾದ ಆತ್ಮಚೈತನ್ಯವೇ ಇಲ್ಲವೆಂದೂ ಆ ವಿಜ್ಞಾನವೇ ಜ್ಞಾತೃಜ್ಞಾನಜ್ಞೇಯಗಳಾಗಿ ತೋರಿಕೊಳ್ಳುವದೆಂದೂ ವಿಜ್ಞಾನವಾದಿಗಳಾದ ಬೌದ್ಧರು ಹೇಳುತ್ತಾರೆ. ಆದರೆ ಜ್ಞಾನಕ್ಕೆ ಕ್ಷಣಿಕತ್ವವೇ ಮುಂತಾದ ಧರ್ಮಗಳನ್ನು ಒಪ್ಪಿರುವ ಅವರು ಸಕರ್ತೃಕತ್ವವೆಂಬ ಧರ್ಮವನ್ನು ಒಪ್ಪದೆ ಇರಲು ಕಾರಣವಿಲ್ಲ. ಆ ಧರ್ಮಗಳೆಲ್ಲ ಅಭಾವರೂಪ ಎಂದು ಹೇಳಿದರೆ ನಿರ್ಧರ್ಮಕವಾದ ಕೂಟಸ್ಥ ಚೈತನ್ಯವನ್ನೇ ಒಪ್ಪಿದಂತಾಗುತ್ತದೆ. ಪ್ರತ್ಯಕ್ಷವೂ ಅನುಮಾನವೂ ವ್ಯವಹಾರದಲ್ಲಿ ಪ್ರಮಾಣಗಳೆಂದು ಒಪ್ಪುವ ಈ ವಾದಿಗಳು ಪ್ರಮಾತೃವನ್ನೂ ಪ್ರಮೇಯವನ್ನೂ ಒಪ್ಪಲೇಬೇಕು. ಪ್ರತ್ಯಯವು ದೀಪದಂತೆ ವ್ಯಂಜಕವಾಗಿರುವದರಿಂದ ಆದನ್ನು ಅರಿಯುವ ಪ್ರಮಾತೃವು ಬೇರೆಯಾಗಿರುತ್ತಾನೆಂದೇ ಒಪ್ಪಬೇಕು.

೧೪೮–೧೫೬. ಸಾಕ್ಷಿಗೂ ಸಾಕ್ಷ್ಯಕ್ಕೂ ದ್ರಷ್ಟೃದೃಶ್ಯತ್ವವೇ ಸಂಬಂಧವು. ಅಂತಃಕರಣವು ವಿಷಯಗಳನ್ನು ಅರಿಯುವಾಗ ವಿಷಯಾಕಾರವಾಗಿ ಪರಿಣಮಿಸಬೇಕಾಗಿರುವದರಿಂದ ಅದು ಕ್ರಮಕ್ರಮವಾಗಿಯೇ ವಿಷಯವನ್ನು ಬೆಳಗಬೇಕು; ಆಗ ಅದಕ್ಕೆ ಚಿದಾಭಾಸರೂಪವಾದ ಆತ್ಮನ ಅನುಗ್ರಹವೂ ಬೇಕು. ಆದರೆ ಆತ್ಮನು ಸಾಕ್ಷ್ಯವಾದದ್ದನ್ನು ಬೆಳಗುವದಕ್ಕೆ ಯಾವ ಕ್ರಮವನ್ನೂ ಅಪೇಕ್ಷಿಸುವದಿಲ್ಲ; ಎಲ್ಲವನ್ನೂ ಒಟ್ಟಿಗೆ ಬೆಳಗುತ್ತಾನೆ. ಅಂತಃಕರಣವು ಕರಣಫಲವನ್ನು ಬಯಸಿಯೇ ವಿಷಯವನ್ನು ತಿಳಿಸುತ್ತದೆಯಾದ್ದರಿಂದ ಅದು ಪರಿಣಾಮಿಯು; ಆದರೆ ಆತ್ಮನು ಹಾಗಲ್ಲ. ಹೀಗೆ ಅಂತಃಕರಣಕ್ಕೆ ಪರಿಣಾಮವು, ಸಾಕ್ಷಿಗೇ ಫಲವು. ಏಕೆಂದರೆ ನಾನು ಸುಖದುಃಖಿಯು ಎಂಬ ಅವಿವೇಕವಾಗಲಿ, ಜ್ಞಾನದಿಂದ ನಾನು ಸುಖದುಃಖರಹಿತನು ಎಂಬ ವಿವೇಕವಾಗಲಿ ಅಚೇತನವಾದ ಅಹಂಕರ್ತೃವಿಗೆ ಆಗಲಾರದು.

೧೫೭–೧೬೪. ಆತ್ಮನಿಗೆ ಅಧ್ಯಾಸದಿಂದ ದುಃಖವಾಗಿರುವದರಿಂದ ಜ್ಞಾನದಿಂದ ದುಃಖದ ಬಿಡುಗಡೆಯಾಗಬಹುದಾಗಿದೆ. ಶರೀರಾದಿಗಳಿಗೆ ದಾಹಚ್ಛೇದಾದಿಗಳಾದರೂ ದೇಹಾತಿರಿಕ್ತನಾದ ಆತ್ಮನಿಗೆ ಸುಡುವದೇ ಮುಂತಾದ ನಿಮಿತ್ತದಿಂದಾಗುವ ದುಃಖವು ಅವಿವೇಕದಿಂದಲೇ ಆಗುವದು. ಮಗನ ಸಾವಿನಿಂದ ತಂದೆಗೆ ಅಧ್ಯಾಸಿಕದುಃಖವಾಗುವಂತೆಯೂ ದೇಹಧರ್ಮಗಳನ್ನು ಆಧ್ಯಾಸದಿಂದ ಆತ್ಮನಿಗೆ ಸಂಬಂಧಿಸಿಕೊಂಡಿದ್ದರಿಂದ ದುಃಖವಾಗುವಂತೆಯೂ ಮನಸ್ಸಿನ ದುಃಖವೂ ಆತ್ಮನಲ್ಲಿ ಅಧ್ಯಾಸದಿಂದಲೇ ಕಾಣುತ್ತಿರುತ್ತದೆ. ಆದ್ದರಿಂದ ಪರಮಾರ್ಥವಾಗಿ ಆತ್ಮನಲ್ಲಿ ಯಾವ ದುಃಖವೂ ಇರುವದಿಲ್ಲ.

೧೬೪–೧೭೫. ತತ್ತ್ವಮಸಿ ಎಂಬ ವಾಕ್ಯದಲ್ಲಿ ತತ್ ಮತ್ತು ತ್ವಂ- ಎಂಬ ಪದಗಳು ಸಮಾನಾಧಿಕರಣವಾಗಿರುವದರಿಂದ ತ್ವಂ ಎಂಬ ಪದವು ತತ್ಪದದ ಅರ್ಥವನ್ನೂ ತತ್ಪದವು ತ್ವಂಪದದ ಅರ್ಥವನ್ನೂ ಹೊಂದುವಂತೆ ತಿರುಗಿದ್ದವಾಗಿ ವಾಕ್ಯಾರ್ಥವನ್ನು ಅರಿತುಕೊಳ್ಳಬೇಕು. 'ಹತ್ತನೆಯವನು ನೀನು' ಎಂಬಂತೆ ತ್ವಂಪದಾರ್ಥಕ್ಕೆ ತತ್ಪದಾರ್ಥ ಸ್ವರೂಪವನ್ನು ಹೇಳುವ ಅಪರೋಕ್ಷಾನುಭವವನ್ನು ಕೊಡುವ ವಾಕ್ಯವಿದು. ಈ ವಾಕ್ಯದಲ್ಲಿ ಕೇಳಬರುವ ಪದಗಳಿಗೆ ಅರ್ಥವು ಯಾವದೆಂಬುದು ಅನ್ವಯವ್ಯತಿರೇಕಗಳಿಂದ ಆಗುತ್ತದೆ; ಆದ್ದರಿಂದ ಶ್ರುತಿಯಲ್ಲಿ ಅನ್ವಯವ್ಯತಿರೇಕಗಳನ್ನು ಹೇಳಿರುತ್ತದೆ. ಅದರಲ್ಲಿಯೂ ತ್ವಂಪದದ ಅರ್ಥವನ್ನು ವಿವೇಚನೆಮಾಡಿ ಅರಿತುಕೊಂಡಹೊರತು ಈ ವಾಕ್ಯದ ಅರ್ಥವು ಆಗಲಾರದು. ಆ ಅರ್ಥವನ್ನು ಸರಿಯಾಗಿ ಅರಿತುಕೊಂಡರೆ ನಾನು ದುಃಖಿಯು ಎಂಬ ಅಭಿಪ್ರಾಯವು ಬಾಧಿತವಾಗುವದರಿಂದ ವಾಕ್ಯದ ಅರ್ಥವು ಸ್ಫುಟವಾಗಿ ತಿಳಿಯುತ್ತದೆ.

೧೭೬–೨೦೪. ಆದ್ದರಿಂದ ವಾಕ್ಯದಲ್ಲಿ ಹೇಳದೆ ಇರುವ ಪ್ರಸಂಖ್ಯಾನವಿಧಿಯನ್ನು ಕಲ್ಪಿಸುವದು ಯುಕ್ತವಲ್ಲ. ನಾನು ದುಃಖಿ ಎಂಬುದು ಪ್ರತ್ಯಕ್ಷಾಭಾಸವಾದ ಜ್ಞಾನವಾದ್ದರಿಂದ ಅದು ವಾಕ್ಯಾರ್ಥವನ್ನು ಬಾಧಿಸಲಾರದು. ದುಃಖಿತ್ವವು ನಿದ್ರೆಯಲ್ಲಿ ಕಾಣುವದೇ ಇಲ್ಲವಾದ್ದರಿಂದ ಆತ್ಮನ ಧರ್ಮವಲ್ಲವೆಂದು ನಿಶ್ಚಯವಾಗುತ್ತದೆ. ಹೀಗೆ ಅನ್ವಯವ್ಯತಿರೇಕಗಳಿಂದ ತಾನು ಅದುಃಖಿಯು ಎಂಬುದನ್ನು ತಿಳಿದುಕೊಂಡವನಿಗೆ ವಾಕ್ಯಾರ್ಥಜ್ಞಾನವಾಗಲು ಯಾವ ಅಡ್ಡಿಯೂ ಇರುವದಿಲ್ಲ. ಈ ವಾಕ್ಯದಿಂದ ಜ್ಞಾನವುಂಟಾಗುವದಿಲ್ಲವೆಂದಾಗಲಿ ಸಂಶಯಿತವಾಗಿ ಉಂಟಾಗುವದೆಂದಾಗಲಿ ವಿಪರೀತವಾಗಿಯೇ ಜ್ಞಾನವುಂಟಾಗುವದೆಂದಾಗಲಿ ಹೇಳುವದಕ್ಕೆ ಕಾರಣವಿಲ್ಲ. 'ತತ್ತ್ವಮಸಿ' (ಅದು ನೀನಾಗಿರುವೆ) ಎಂಬಲ್ಲಿ ಅದು ಎಂಬುದು ಅಪ್ರತ್ಯಗಾತ್ಮನನ್ನು ಹೇಳುವದೆಂಬುದು ತ್ವಂಪದದ ಸಾಹಚರ್ಯದಿಂದಲೂ ನೀನು ಎಂಬುದು ದುಃಖಿಯನ್ನು ಹೇಳುವದೆಂಬುದು ತತ್ಪದದ ಸಾಹಚರ್ಯದಿಂದಲೂ ತೊಲಗುವದು; ಹೀಗೆ ವಾಕ್ಯವು ನಿರ್ವಿಶೇಷಾತ್ಮನನ್ನೇ ತಿಳಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ವಾಕ್ಯದಿಂದಲೇ ಸ್ಫುಟಜ್ಞಾನವಾಗುತ್ತಿರುವಲ್ಲಿ ವಾಕ್ಯದಿಂದ ಅಪರೋಕ್ಷಜ್ಞಾನವಾಗುವದಿಲ್ಲವೆಂದೂ ಅನುಭವವುಂಟಾಗುವದಕ್ಕಾಗಿ ಪ್ರಸಂಖ್ಯಾನವನ್ನು ವಿಧಿಸಿದೆಯೆಂದೂ ಕಲ್ಪಿಸುವದು ಶ್ರುತತ್ಯಾಗ, ಅಶ್ರುತಕಲ್ಪನ, ಶ್ರುತಿಪ್ರಾಮಾಣ್ಯಹಾನಿ- ಮುಂತಾದ ದೋಷಗಳಿಗೆ ಈಡಾಗುವದು.

ಆತ್ಮನು ದುಃಖವನ್ನು ಅರಿಯುವ ಬುದ್ಧಿಯನ್ನು ಕೂಡ ಅರಿಯುತ್ತಿರುವದರಿಂದ ವಿಷಯಿಯಾದ ಅವನಲ್ಲಿ ವಿಷಯವಾದ ಬುದ್ಧಿಯ ದುಃಖವಿವೆ ಎಂದು ವಾದಿಸುವದು

ಅವಿವೇಕವು. 'ತತ್ತ್ವಮಸಿ' (ನಿರ್ಮಲನಾದ ಆತ್ಮನೇ ನೀನು) ಎಂದೂ ಉಪದೇಶಿಸಿ ಮೋಕ್ಷಕ್ಕಾಗಿ ಶ್ರವಣಾದಿಗಳನ್ನು ಮಾಡಬೇಕು ಎಂದೂ ಪ್ರಸಂಖ್ಯಾನವನ್ನು ವಿಧಿಸಿದೆ ಎನ್ನುವದು ವ್ಯಾಹತವಚನವು. ಶ್ರೋತವ್ಯನಾದ ಆತ್ಮನೇ ತಾನೆಂದು ತಿಳಿದವನು ಎಂದಿಗೂ ಮತ್ತೆ ಶ್ರವಣದಲ್ಲಿ ತೊಡಗಲಾರನು. ನೀನು ನಿತ್ಯಮುಕ್ತನು ಎಂದು ಫಲವನ್ನು ಹೇಳಿ ಪ್ರಸಂಖ್ಯಾನವನ್ನು ಶ್ರುತಿಯು ವಿಧಿಸಿದೆ ಎಂಬ ವಾದವು ತತ್ತ್ವಮಸಿ ಎಂಬ ವಾಕ್ಯದಿಂದ ಆಗುವ ಜ್ಞಾನಕ್ಕೇ ವಿರುದ್ಧವಾಗಿರುತ್ತದೆ.

೨೦೫-೨೧೦. ಹಾಗಾದರೆ ನಾನು ದುಃಖಿ ಎಂಬ ಅನುಭವಕ್ಕೇನು ಗತಿ?- ಎಂದು ಪೂರ್ವಪಕ್ಷಿಗಳು ಕೇಳಬಹುದು. ಇದು ಭ್ರಾಂತಿ ಎಂಬುದೇ ಗತಿ. ವಾಕ್ಯವು ಪ್ರಮಾಣವಾಗಿರುವದರಿಂದ ಅದು ತಾತ್ಪರ್ಯದಿಂದ ಹೇಳುವದು ಎಂದಿಗೂ ಸುಳ್ಳಾಗಲಾರದು. ದುಃಖಿತ್ವವು ಆತ್ಮನ ಧರ್ಮವಲ್ಲವೆಂಬುದು ಅನ್ವಯವ್ಯತಿರೇಕಗಳಿಂದ ಗೊತ್ತಾಗುತ್ತದೆ; ಅದನ್ನು ಬಾಧಿಸುವದಕ್ಕಾಗಿಯೇ ವಾಕ್ಯವು ಬಂದಿರುತ್ತದೆಯೇ ಹೊರತು ಆತ್ಮನ ವಿಷಯದಲ್ಲಿ ಹೊಸ ಅನುಭವವನ್ನುಂಟುಮಾಡುವದಕ್ಕಲ್ಲ. ಏಕೆಂದರೆ ಆತ್ಮನು ಅವಿಷಯನೆಂಬುದು ಶ್ರುತಿಪ್ರಮಾಣದಿಂದಲೇ ಗೊತ್ತಾಗಿರುತ್ತದೆ.

೨೧೧-೨೨೦. ವಾಕ್ಯಾರ್ಥಜ್ಞಾನವೇ ಕೊನೆಯದಾದರೆ ಸಂನ್ಯಾಸವು ವ್ಯರ್ಥವಾಗುವದೆಂಬುದು ಸರಿಯಲ್ಲ; ಏಕೆಂದರೆ ತ್ವಂಪದಾರ್ಥದ ವಿವೇಕಕ್ಕೆ ಅದನ್ನು ವಿಧಿಸಿರುತ್ತದೆ. ನಿರ್ಮಲನಾದ ಆತ್ಮನು ತಾನೆಂಬ ಪದಾರ್ಥಜ್ಞಾನವನ್ನು ಮೊದಲು ಮಾಡಿಕೊಂಡವನಿಗೆ ಈ ಆತ್ಮನೇ ಸರ್ವವೆಂಬ ವಾಕ್ಯಾರ್ಥಜ್ಞಾನವೂ ಉಂಟಾಗುತ್ತದೆ. ಈ ಜ್ಞಾನವು ಉಂಟಾದ ಬಳಿಕ ಪ್ರಮಾಣವ್ಯಾಪಾರವೇ ಬಾಧಿತವಾಗಿಬಿಡುವದರಿಂದ ಆ ಬಳಿಕ ಯಾವ ವಿಧಿಗೂ ಅವಕಾಶವಿರುವದಿಲ್ಲ. ಈ ವಾಕ್ಯಾರ್ಥಜ್ಞಾನಕ್ಕೂ ನಾನು ಕರ್ತೃವೆಂಬ ಜ್ಞಾನಕ್ಕೂ ಪರಸ್ಪರವಿರೋಧವಿರುತ್ತದೆ; ನಾನು ಕರ್ತೃವೆಂಬುದು ಸ್ವಾಭಾವಿಕಜ್ಞಾನವಾದ್ದರಿಂದ ಪ್ರಮಾಣಜನ್ಯವಾದ 'ನಾನು ಬ್ರಹ್ಮವು' ಎಂಬ ಜ್ಞಾನದಿಂದ ಅದೇ ಬಾಧಿತವಾಗುತ್ತದೆ. ಕರ್ತೃತ್ವವು ಭಯರೂಪವಾಗಿರುವದರಿಂದ ಅಭಯವಾದ ಬ್ರಹ್ಮವೇ ತಾನೆಂದು ತಿಳಿದವನು ಮತ್ತೆ ಕರ್ತೃತ್ವವನ್ನು ಅಂಗೀಕರಿಸಲಾರನು. ಮುಮುಕ್ಷುವಾದವನು ವಾಕ್ಯಾರ್ಥಜ್ಞಾನಕ್ಕಾಗಿ ಸಂನ್ಯಾಸವನ್ನು ಮಾಡಿ ಪದಾರ್ಥವನ್ನು ವಿವೇಚನೆ ಮಾಡುತ್ತಿರುವದರಿಂದ ಅವನೇ ಮತ್ತೆ ಕರ್ಮವನ್ನು ಮಾಡುವದಕ್ಕೆ ಹೋಗುವದಿಲ್ಲ; ಹೀಗಿರುವಲ್ಲಿ ನಾನು ಅಕರ್ತೃವಾದ ಬ್ರಹ್ಮವು ಎಂಬ ಜ್ಞಾನದಿಂದ ತೃಪ್ತನಾದವನು ಏತಕ್ಕೆ ಕರ್ಮದಲ್ಲಿ ತೊಡಗುವನು? ಆದ್ದರಿಂದ ವಾಕ್ಯಜ್ಞಾನವಾದಬಳಿಕ ಮಾಡತಕ್ಕ ಸಾಧನವು ಯಾವದೂ ಉಳಿದಿರುವದಿಲ್ಲ ಎಂಬುದೇ ಸಿದ್ಧಾಂತವು.

೨೨೧. ವೇದಾಂತವಾಕ್ಯಗಳ ಈ ಅರ್ಥದ ಜ್ಞಾನವನ್ನು ತಿಳಿಸಿಕೊಟ್ಟ ಗುರುಗಳಿಗೆ ನಮಸ್ಕಾರ!

೧೯. ಭೇಷಜಪ್ರಯೋಗ[1]

ಪ್ರಕರಣಾರ್ಥದ ಸಂಕ್ಷೇಪ

ಪ್ರಯುಜ್ಯ ತೃಷ್ಣಾಜ್ವರನಾಶಕಾರಣಂ
ಚಿಕಿತ್ಸಿತಂ ಜ್ಞಾನವಿರಾಗಭೇಷಜಮ್ ।
ನ ಯಾತಿ ಕಾಮಜ್ವರಸನ್ನಿಪಾತಜಾಂ
ಶರೀರಮಾಲಾ[2] ಶತಯೋಗದುಃಖಿತಾಮ್ ॥ ೧ ॥

೧. ತೃಷ್ಣೆ ಎಂಬ ಜ್ವರವನ್ನು ನಾಶಪಡಿಸುವದಕ್ಕೆ ಕಾರಣವಾದ ಜ್ಞಾನ ವೈರಾಗ್ಯಗಳೆಂಬ ಔಷಧಿಯ ಚಿಕಿತ್ಸೆಯನ್ನು ಪ್ರಯೋಗಮಾಡಿದರೆ ಕಾಮ ಜ್ವರದ ಸನ್ನಿಪಾತದಿಂದುಂಟಾಗುವ ನೂರಾರು ಶರೀರಮಾಲೆಗಳ ಸಂಬಂಧ ದಿಂದಾಗುವ ದುಃಖಿತ್ವವನ್ನು[3] ಹೊಂದುವದಿಲ್ಲ.

ಅಹಂ ನುಮೇತಿ ತ್ವಮನರ್ಥಮಾಹಸೇ
ಪರಾರ್ಥಮಿಚ್ಛನ್ತಿ ತವಾನ್ಯ ಈಹಿತಮ್ ।
ನ ತೇಽರ್ಥಬೋಧೋ ನ ಹಿ ಮೇಽಸ್ತಿ ಚಾರ್ಥಿತಾ
ತತಶ್ಚ ಯುಕ್ತಃ ಶಮ ಏವ ತೇ ಮನಃ ॥ ೨ ॥

೨. ವನಸ್ಸೆ, 'ನಾನು, ನನ್ನದು' ಎಂದು ನೀನು ವ್ಯರ್ಥವಾಗಿ ಹರಿ ದಾಡುತ್ತಿರುವೆ. (ತಿಳಿದ) ಕೆಲವರು ನಿನ್ನ (ಈ) ವ್ಯಾಪಾರವು ಮತ್ತೊಬ್ಬನಿ ಗಾಗಿ ಆಗತಕ್ಕದ್ದು[4] ಎಂದು ಅಭಿಪ್ರಾಯಪಡುತ್ತಾರೆ. (ಆದರೆ) ನಿನಗೆ

---

1. ಭೇಷಜಪ್ರಯೋಗಪ್ರಕರಣವೆಂದು ಮೈ॥ ಪುಸ್ತಕದಲ್ಲಿರುವ ಹೆಸರನ್ನು ಹೀಗೆ ತಿದ್ದಿಕೊಂಡಿದೆ.

2. 'ಶರೀರಮಾಲಾಂ' ಎಂಬ ಮೈ॥ ಪಾಠಕ್ಕಿಂತ ಈ ಜೋಧನಿಧಿಯ ಪಾಠವು ಮೇಲು.

3. ಅಜ್ಞಾನದಿಂದ ಕಾಮವೂ ಕಾಮದಿಂದ ಕರ್ಮವೂ ಕರ್ಮದಿಂದ ಶರೀರ ಗ್ರಹಣವೂ ಅದರಿಂದ ದುಃಖಿತ್ವವೂ ಉಂಟಾಗುವವು. ಆದ್ದರಿಂದ ಜ್ಞಾನವೈರಾಗ್ಯಗಳೇ ಈ ರೋಗಕ್ಕೆ ಚಿಕಿತ್ಸೆ.

4. ಸಾಂಖ್ಯರೇ ಮುಂತಾದವರು ಪ್ರಕೃತಿಯಿಂದಾಗಿರುವ ಮನಸ್ಸು ಆತ್ಮನಿಗಾಗಿ ಕೆಲಸಮಾಡುವದು ಎನ್ನುವರು.

ಅರ್ಥದ ಜ್ಞಾನವಿಲ್ಲ,[1] ನನಗೆ ಅರ್ಥಿತ್ವವೂ ಇಲ್ಲವಷ್ಟೆ.[2] ಆದ್ದರಿಂದ ನಿನಗೆ ಶಾಂತಿಯೇ ಯುಕ್ತವು.

ಪರಮಾತ್ಮನಿಗೂ ಆತ್ಮನಿಗೂ ಭೇದವಿಲ್ಲ

ಯತೋ ನ ಚಾನ್ಯಃ ಪರಮಾತ್ ಸನಾತನಾತ್
ಸದೈವ ತೃಪ್ತೋಽಹಮತೋ ನ ಮೇಽರ್ಥಿತಾ ।
ಸದೈವ ಮುಕ್ತಶ್ಚ[3] ನ ಕಾಮಯೇ ಹಿತಂ
ಯತಸ್ವ ಚೇತಃ ಪ್ರಶಮಾಯ ತೇಽಧಿಕಮ್[4] ॥ ೩ ॥

೩. ಸನಾತನನಾದ ಪರಮಾತ್ಮನಿಗಿಂತ ಬೇರೆಯಲ್ಲವಾದ್ದರಿಂದ ನಾನು ನಿತ್ಯತೃಪ್ತನಾಗಿರುವೆನು; ಆ ದ ಕಾ ರ ಣ ನನಗೆ ಅರ್ಥಿತ್ವವಿರುವದಿಲ್ಲ.[5] ಯಾವಾಗಲೂ ಮುಕ್ತನಾಗಿಯೇ ಇರುವದರಿಂದ ನಾನು ಹಿತವನ್ನು ಕೋರುವದಿಲ್ಲ.[6] ಚಿತ್ತವೆ, ನಿನ್ನ ಶಾಂತಿಗಾಗಿ ಬಹಳವಾಗಿ ಪ್ರಯತ್ನಿಸು.

ಷಡೂರ್ಮಿಮಾಲಾಭ್ಯತಿವೃತ್ತ ಏವ ಯಃ
ಸ ಏವ ಚಾತ್ಮಾ ಜಗತಶ್ಚ ನಃ ಶ್ರುತೇಃ ।
ಪ್ರಮಾಣತಶ್ಚಾಪಿ ಮಯಾ ಪ್ರವೇದ್ಯತೇ
ಮುಧೈವ ತಸ್ಮಾಚ್ಚ ಮನಸ್ತವೇಹಿತಮ್ ॥ ೪ ॥

೪. ಆರು ಊರ್ಮಿಗಳ ಮಾಲೆಯನ್ನು ತೀರ ದಾಟಿಯೇ ಇರುವವನು[7] ಯಾರೋ ಅವನೇ ಜಗತ್ತಿಗೂ ನನಗೂ ಆತ್ಮನೆಂದು ಶ್ರುತಿಯಿಂದಲೂ

---

1. ಮನಸ್ಸು ಪುರುಷನಿಗೆ ಈ ಪ್ರಯೋಜನವು ಆಗಬೇಕು ಎಂದು ಅರಿತು ಕೆಲಸ ಮಾಡುವಂತಿಲ್ಲ.

2. ನನಗೆ ಪುರುಷಾರ್ಥದ ಬಯಕೆಯಿಲ್ಲ. ಏಕೆಂದರೆ ಇಚ್ಛೆಯು ಆತ್ಮನ ಧರ್ಮವಲ್ಲ.

3-4. ಇವೆರಡೂ **ಬೋಧನಿಧಿಯ** ಪಾಠಗಳು; ತೃಪ್ತಶ್ಚ, ತೇ ಹಿತಮ್– ಎಂಬ ಮೈ॥ ಪಾಠಕ್ಕಿಂತ ಇವೇ ಮೇಲು.

5. ನಿತ್ಯತೃಪ್ತನಿಗೆ ಭೋಗದಲ್ಲಿ ಆಶೆಯಿರುವದಿಲ್ಲ.

6. ನಿತ್ಯಮುಕ್ತನಿಗೆ ಮೋಕ್ಷದಲ್ಲಿ ಆಶೆಯಿರುವದಿಲ್ಲ.

7. ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು, ಸಾವು– ಈ ಆರೂ ಸಮುದ್ರದ ಅಲೆಗಳಂತೆ ಮತ್ತೆಮತ್ತೆ ಅಜ್ಞಜೀವರಿಗೆ ತೋರುವದರಿಂದ ಇವುಗಳನ್ನು **ಷಡೂರ್ಮಿ**ಗಳು ಎನ್ನುತ್ತಾರೆ. ಪರಮಾತ್ಮನು ಈ ಆರನ್ನೂ ಯಾವಾಗಲೂ ಮೀರಿರುವ ಸ್ವರೂಪವುಳ್ಳವನೆಂದೂ ಅವನೇ ನಮ್ಮ ಆತ್ಮನೆಂದೂ ಶ್ರುತಿ. ಬೃ. ೩–೫–೧.

ಪ್ರಮಾಣದಿಂದಲೂ[1] ನಮಗೆ (ತಿಳಿದಿರುತ್ತದೆ). ಆದ್ದರಿಂದ ಮನಸ್ಸೆ, ನಿನ್ನ ಹರಿದಾಟವು ವ್ಯರ್ಥವೇ.

ಮನಸ್ಸು ಶಾಂತವಾದರೆ ದ್ವೈತವಿಲ್ಲ

ತ್ವಯಿ ಪ್ರಶಾಸ್ತೇ ನ ಹಿ ನಾಸ್ತಿ ಭೇದಧೀ
ರ್ಯತೋ ಜಗನ್ಮೋಹಮುಪೈತಿ ಮಾಯಯಾ ।
ಗ್ರಹೋ ಹಿ ಮಾಯಾಪ್ರಭವಸ್ಯ ಕಾರಣಂ
ಗ್ರಹಾದ್ವಿನೋಕೇ ನ ಹಿ ಸಾಸ್ತಿ ಕಸ್ಯಚಿತ್ ॥ ೫ ॥

೫. ಯಾವದರಿಂದ ಜಗತ್ತು ಮಾಯೆಯಿಂದ ಮೋಹವನ್ನು ಹೊಂದುತ್ತಿರುವದೋ ಆ ಭೇದಬುದ್ಧಿಯು ನೀನು ಸಂಪೂರ್ಣವಾಗಿ ಶಾಂತವಾದರೆ ಇರುವದಿಲ್ಲ. ಏಕೆಂದರೆ (ಭೇದ)ಗ್ರಹಣವೇ ಮಾಯೆಯಿಂದುಂಟಾಗುವ (ಮೋಹಕ್ಕೆ) ಕಾರಣವು;[2] ಗ್ರಹಣವಿಲ್ಲದವರಿಗೆ ಯಾವನಿಗೂ ಆ ಮಾಯೆಯಿರುವದಿಲ್ಲ.[3]

ಜ್ಞಾನಿಯು ತಾನು ನಿತ್ಯಮುಕ್ತನೆಂದು ತಿಳಿದಿರುವನು

ನ ಮೇಽಸ್ತಿ ಮೋಹಸ್ತವ ಚೇಷ್ಟಿತೇನ ಹಿ
ಪ್ರಬುದ್ಧತತ್ತ್ವಸ್ತ್ವಸಿತೋ ಹ್ಯವಿಕ್ರಿಯಃ ।
ನ ಪೂರ್ವತತ್ತ್ವೋತ್ತರಭೇದತಾ ಹಿ ನೋ
ವೃಥೈವ ತಸ್ಮಾಚ್ಚ ಮನಸ್ತವೇಹಿತಮ್ ॥ ೬ ॥

೬. ನಿನ್ನ ವ್ಯಾಪಾರದಿಂದ ನನಗೆ ಮೋಹವುಂಟಾಗಿರುವದಿಲ್ಲ. ಏಕೆಂದರೆ ನಾನು ತತ್ತ್ವವನ್ನು ಅರಿತುಕೊಂಡು ಅಬದ್ಧನಾಗಿರುತ್ತೇನೆ, ವಿಕಾರರಹಿತನಾಗಿರುತ್ತೇನೆ. ನಮ್ಮ (ಮತದಲ್ಲಿ) ಹಿಂದಿನ ತತ್ತ್ವ, ಆಮೇಲಿನ (ತತ್ತ್ವ) ಎಂಬ ಭೇದವಿಲ್ಲವೇ ಇಲ್ಲ.[4] ಆದ್ದರಿಂದಲೂ ಎಲೈ ಮನಸ್ಸೆ, ನಿನ್ನ ಚೇಷ್ಟೆಯು ವ್ಯರ್ಥ.

---

1. ಶ್ರುತಿಸ್ಮೃತಿಗಳಿಂದಲೂ ಯುಕ್ತಿಯಿಂದಲೂ ಎಂದರ್ಥ. ಕಾರ್ಯಕಾರಣೋಪಾಧಿಗಳ ಪರಾಮರ್ಶವಿಲ್ಲದೆ ಪಸಿವು ಮುಂತಾದವುಗಳು ತೋರುವದಿಲ್ಲವೆಂಬುದೇ ಯುಕ್ತಿ.

2. ದ್ವೈತವಿರುವಂತೆ ತೋರುವಾಗ ಒಬ್ಬನು ಮತ್ತೊಂದನ್ನು ಗ್ರಹಿಸುತ್ತಾನೆ ಎಂಬ ಬೃ. ೨–೪–೧೪ ಶ್ರುತಿಯ ಪ್ರಮಾಣದಿಂದ ಇದು ಸಿದ್ಧವಾಗುತ್ತದೆ.

3. ಸುಷುಪ್ತ್ಯಾದಿಗಳು ಇದಕ್ಕೆ ಪ್ರಮಾಣವಾದ ಅನುಭವವು.

4. ಜ್ಞಾನದಿಂದ ಅಬದ್ಧನು ಎಂದದ್ದರಿಂದ ಜ್ಞಾನಾಜ್ಞಾನಗಳ ಅಪೇಕ್ಷೆಯಿಂದ ಆತ್ಮತತ್ತ್ವದಲ್ಲಿ ಯಾವ ಹೆಚ್ಚುಕಡಿಮೆಯಾದರೂ ಆಗುವದೆಂದು ಭಾವಿಸಬಾರದು. ಏಕೆಂದರೆ ಮೊದಲು ಬದ್ಧನಾಗಿದ್ದು ಆ ಬಳಿಕ ಮುಕ್ತನಾಗುವದಿಲ್ಲ.

ಯತಶ್ಚ ನಿತ್ಯೋಽಹಮತೋ ನ ಚಾನ್ಯಥಾ
ವಿಕಾರಯೋಗೇ ಹಿ ಭವೇದನಿತ್ಯತಾ ।
ಸದಾ ಪ್ರಭಾತೋಽಹಮತೋ ಹಿ ಚಾದ್ವಯೋ
ವಿಕಲ್ಪಿತಂ ಚಾಪ್ಯಸದಿತ್ಯವಸ್ಥಿತಮ್ ॥ ೭ ॥

೭. ನಾನು ನಿತ್ಯನಾಗಿರುವದರಿಂದ (ನನಗೆ) ಮತ್ತೊಂದು ರೂಪವಿಲ್ಲ.[1] ವಿಕಾರದ ಸಂಬಂಧವಿದ್ದರೆ ಅನಿತ್ಯತ್ವವೇ ಆಗುವದು. ನಾನು ಯಾವಾಗಲೂ ಬೆಳಗುತ್ತಿರುವವನು.[2] ಆದ್ದರಿಂದ (ನಾನು) ಅದ್ವಯನೆಂದೂ ವಿಕಲ್ಪಿತವಾದದ್ದು[3] ಅಸತ್ತೆಂದೂ ಸಿದ್ಧವಾಗುತ್ತದೆ.

ಅಭಾವರೂಪಂ ತ್ವಮಸೀಹ ಹೇ ಮನೋ
ನಿರೀಕ್ಷ್ಯಮಾಣೇ ನ ಹಿ ಯುಕ್ತಿತೋಽಸ್ತಿತಾ ।
ಸತೋ ಹ್ಯನಾಶಾದಸತೋಽಪ್ಯಜನ್ಮತೋ
ದ್ವಯಂ ಚ ತೇಽತಸ್ತವ ನಾಸ್ತಿತೇಷ್ಯತೇ ॥ ೮ ॥

೮. ಎಲೆ ಮನಸ್ಸೆ, ನೀನು ಭಾವರೂಪನಲ್ಲ; ಏಕೆಂದರೆ ಯುಕ್ತಿಯಿಂದ ನಿಟ್ಟಿಸಿ ನೋಡಿದರೆ ನಿನ್ನಲ್ಲಿ ಅಸ್ತಿತ್ವವಿರುವದಿಲ್ಲ. ಏಕೆಂದರೆ ಸತ್ತಾದದ್ದು ನಾಶವಾಗಬಾರದು, ಅಸತ್ತಾದದ್ದಕ್ಕೆ ಜನ್ಮವಿರುವದಿಲ್ಲ. ನಿನಗೆ ಎರಡೂ ಉಂಟು; ಆದ್ದರಿಂದ ನೀನು ಇರುವದಿಲ್ಲ.[4]

ದೃಷ್ಟಾ ಚ ದೃಶ್ಯಂ ಚ ತಥಾ ಚ ದರ್ಶನಂ
ಭ್ರಮುಸ್ತು ಸರ್ವಸ್ತವ ಕಲ್ಪಿತೋ ಹಿ ಸಃ ।
ದೃಶೇಶ್ಚ ಭಿನ್ನಂ ನ ಹಿ ದೃಶ್ಯಮೀಕ್ಷ್ಯತೇ
ಸ್ವಪನ್ ಪ್ರಬೋಧೇ ಚ[5] ತಥಾ ನ ಭಿದ್ಯತೇ ॥ ೯ ॥

---

1. ಬದ್ಧಾವಸ್ಥೆ, ಮುಕ್ತಾವಸ್ಥೆ ಎಂಬ ಎರಡು ರೂಪಗಳಿಲ್ಲ.

2. ಅಜ್ಞತ್ವವನ್ನೂ ಜ್ಞಾನಿತ್ವವನ್ನೂ ಬೆಳಗುತ್ತಿರುವ ಚೈತನ್ಯಸ್ವರೂಪನು.

3. ಅಜ್ಞತ್ವ, ಬದ್ಧತ್ವ, ಜ್ಞಾನಿತ್ವ, ಮುಕ್ತತ್ವ– ಮುಂತಾದದ್ದು.

4. ಮನಸ್ಸು ಆತ್ಮನಂತೆ ಸತ್ತಾದರೆ ನಾಶವಾಗಬಾರದು; ಆದರೆ ಸುಷುಪ್ತಿಯಲ್ಲಿ ಅದು ಇಲ್ಲದಿರುವದು ಕಾಣುತ್ತದೆ. ಅದು ಮೊಲದ ಕೊಂಬಿನಂತೆ ಅತ್ಯಂತವಾಗಿ ಇಲ್ಲದ್ದಲ್ಲ; ಏಕೆಂದರೆ ಜಾಗ್ರದಾದಿಗಳಲ್ಲಿ ಮತ್ತೆ ತೋರಿಕೊಳ್ಳುತ್ತದೆ. ಆದ್ದರಿಂದ ಮನಸ್ಸು ಆತ್ಮನಂತೆ ಸತ್ತಲ್ಲ. ಆತ್ಮನ ಅದ್ವಿತೀಯತ್ವಕ್ಕೆ ಅದರಿಂದ ಯಾವ ಹಾನಿಯೂ ಇಲ್ಲ.

5. 'ಪ್ರಬೋಧೇನ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವು ಮೇಲು.

೯. ನೋಡುವವನು, ನೋಡಲ್ಪಡತಕ್ಕದ್ದು, ಮತ್ತು ನೋಟ-(ಇಲ್ಲವೂ) (ನಿನ್ನ) ಭ್ರಾಂತಿಯೇ; ಏಕೆಂದರೆ ಇದು ಕಲ್ಪನೆಯೇ. ದೃಕ್ಕಿಗಿಂತ ದೃಶ್ಯವು ಬೇರೆಯಾಗಿ ಕಾಣುವದಿಲ್ಲವಷ್ಟೆ. ಆದ್ದರಿಂದ ನಿದ್ರಿಸುವವನು ಎಚ್ಚರದಲ್ಲಿಯೂ ಭಿನ್ನನಾಗಿರುವದಿಲ್ಲ.[1]

ವಿಕಲ್ಪನಾ ವಾಪಿ ತಥಾದ್ವಯಾ ಭವೇ
ದವಸ್ತುಯೋಗಾತ್ ತದಲಾತಚಕ್ರವತ್ |
ನ ಶಕ್ತಿಭೇದೋಽಸ್ತಿ ಯತೋ ನ ಚಾತ್ಮನಾಂ
ತತೋಽದ್ವಯತ್ವಂ ಶ್ರುತಿತೋಽವಸೀಯತೇ ॥ ೧೦ ॥

೧೦. ವಿಕಲ್ಪನೆಯಾದರೂ ಹಾಗೆಯೇ ಅದ್ವಯಾತ್ಮನೇ ಆಗಿರಬೇಕು: ಏಕೆಂದರೆ ಅದು ವಸ್ತುವಿಗೆ ಸಂಬಂಧಪಟ್ಟದ್ದಲ್ಲವಾದ್ದರಿಂದ ತಿರುಗಿಸಿದ ಕೊಳ್ಳಿಯಂತೆ (ಇರುತ್ತದೆ).[2] ಶಕ್ತಿಗಳ ಭೇದವಿಲ್ಲ, ಆತ್ಮರ (ಭೇದವೂ) ಇಲ್ಲ[3]; ಅವ್ದರಿಂದ (ಆತ್ಮನು) ಅದ್ವಿತೀಯನೇ ಎಂದು ಶ್ರುತಿಯಿಂದ ನಿಶ್ಚಯವಾಗುತ್ತದೆ.

ಮಿಥಶ್ಚ ಭಿನ್ನಾ ಯದಿ ತೇ ಹಿ ಚೇತನಾಃ
ಕ್ಷಯಸ್ತು ತೇಷಾಂ ಪರಿಮಾಣಯೋಗತಃ |
ಧ್ರುವೋ ಭವೇದ್ ಭೇದವತಾಂ ಹಿ ದೃಶ್ಯತೋ
ಜಗತ್ಕ್ಷಯಶ್ಚಾಪಿ ಸಮಸ್ತನೋಕ್ಷತಃ ॥ ೧೧ ॥

೧೧. ಆ ಚೇತನರಾದ (ಆತ್ಮರು) ಒಬ್ಬರಿಗಿಂತ ಒಬ್ಬರು ಬೇರೆಯಾಗಿರುವರೆಂದರೆ, ಅವರಿಗೆ ಪರಿಚ್ಛೇದವುಂಟಾಗುವದರಿಂದ[4] ನಾಶವು ನಿಶ್ಚಿತವಾಗುವದು. ಏಕೆಂದರೆ ಭೇದವುಳ್ಳ ವಸ್ತುಗಳಿಗೆ (ಪರಿಮಿತಿಯೂ ನಾಶವೂ) ಕಂಡಿದೆ. ಎಲ್ಲರೂ ಮುಕ್ತರಾದರೆ ಜಗತ್ತೂ ಕ್ಷಯ(ವಾಗಬೇಕಾಗುತ್ತದೆ).[5]

---

1. ಎಚ್ಚರಕನಸುಗಳಲ್ಲಿ ಮಾತ್ರ ದೃಶ್ಯಾದಿಭೇದವಿರುತ್ತದೆ; ಮನಸ್ಸಿಲ್ಲದ ಸುಷುಪ್ತಿಯಲ್ಲಿ ಇರುವದಿಲ್ಲ. ಆದ್ದರಿಂದ ಅದು ವಿಕಲ್ಪವೇ; ಆದ್ದರಿಂದ ಆತ್ಮನಿಗಿಂತ ಬೇರೆಯಾದ ದೃಶ್ಯಾದಿಗಳಿಲ್ಲ. ಆತ್ಮನು ಯಾವಾಗಲೂ ಅದ್ವಯನೇ.

2. ವಿಕಲ್ಪವೆಂಬುದು ವಸ್ತುವಲ್ಲ; ಕೊಳ್ಳಿಯ ಚಕ್ರವು ಕೊಳ್ಳಿಗೆ ಸಂಬಂಧಪಟ್ಟ ಆಕಾರವಲ್ಲದಿರುವಂತೆ ಅದು ಬರಿಯ ತೋರಿಕೆ. ಅಲಾತಶಾಂತಿಪ್ರಕರಣದ ೪೭ರಿಂದ ೫೦ನೆಯ ವರೆಗೆ ಈ ದೃಷ್ಟಾಂತವನ್ನು ವಿವರಿಸಿ ೫೧, ೫೨ರಲ್ಲಿ ದಾರ್ಷ್ಟಾಂತಿಕವನ್ನು ಕೊಟ್ಟಿದೆ.

3. ದೃಷ್ಟಾದೃಶಕ್ತಿಗಳು ಬೇರೆಬೇರೆಯಲ್ಲ, (೧೭-೫೪ನ್ನು ನೋಡಿ); ಆದ್ದರಿಂದ ಶಕ್ತಿಭೇದನಿಮಿತ್ತದಿಂದ ಆತ್ಮರುಗಳು ಬೇರೆಬೇರೆ ಎನ್ನುವದಕ್ಕೂ ಬರುವದಿಲ್ಲ.

4. ವಸ್ತುಪರಿಮಿತಿಯೂ ಸಂಖ್ಯಾಪರಿಮಿತಿಯೂ ಇರುವದರಿಂದ ಎಂದರ್ಥ.

5. ಸಂಖ್ಯಾಪರಿಮಿತಿಯುಳ್ಳವರು ಎಷ್ಟು ನಿಧಾನವಾಗಿ ಮುಕ್ತರಾದರೂ ಒಂದಾನೊಂದು ಕಾಲದಲ್ಲಿ ಮುಕ್ತರಾಗದೆ ಉಳಿದವರೇ ಇರುವದಿಲ್ಲವಾಗಿ ಭೋಕ್ತೃರ್ಥವಾದ ಭೋಗ್ಯಜಗತ್ತೂ ಕ್ರಮದಿಂದ ನಾಶವಾಗಬಹುದು.

ಆತ್ಮನು ಅದ್ವಯನು, ಅಕಲ್ಪಿತನು

ನ ಮೇಽಸ್ತಿ ಕಶ್ಚಿನ್ನ ಚ ಸೋಽಸ್ಮಿ ಕಸ್ಯಚಿ
ದ್ಯತೋಽದ್ವಯೋಽಹಂ ನ ಹಿ ಚಾಸ್ತಿ ಕಲ್ಪಿತಮ್ ।
ಅಕಲ್ಪಿತಶ್ಚಾಸ್ಮಿ ಪುರಾ ಪ್ರಸಿದ್ಧತೋ[1]
ವಿಕಲ್ಪನಾಯಾ ದ್ವಯನೇವ ಕಲ್ಪಿತಮ್ ॥ ೧೭ ॥

೧೭. ನನಗೆ ಯಾರೊಬ್ಬರೂ ಇಲ್ಲ, ಆ (ನಾನು) ಯಾರೊಬ್ಬನವನೂ ಇಲ್ಲ.[2] ಏಕೆಂದರೆ ನಾನು ಅದ್ವಯನು; ಕಲ್ಪಿತವಾದದ್ದು ಇರುವದೇ ಇಲ್ಲವಷ್ಟೆ.[3] (ನಾನು) ಕಲ್ಪನೆಗಿಂತ ಮುನ್ನವೂ ಸಿದ್ಧನಾಗಿರುವದರಿಂದ ಅಕಲ್ಪಿತನಾಗಿರುವೆನು. ದ್ವೈತವೇ ಕಲ್ಪಿತವು.[4]

ವಿಕಲ್ಪನಾ ಚಾಪ್ಯಭವೇ ನ ವಿದ್ಯತೇ
ಸದನ್ಯದಿತ್ಯೇವನುತೋ ನ ನಾಸ್ತಿತಾ ।
ಯತಃ ಪ್ರವೃತ್ತಾ ತವ ಚಾಪಿ ಕಲ್ಪನಾ
ಪುರಾ ಪ್ರಸಿದ್ಧೇರ್ನ ಚ ತದ್ಧಿ ಕಲ್ಪಿತಮ್ ॥ ೧೩ ॥

೧೩. ಹುಟ್ಟಿಲ್ಲದ ಅದರಲ್ಲಿ ಇರುವದು, ಮತ್ತೊಂದು[5]– ಎಂಬೀ ರೀತಿಯ ಕಲ್ಪನೆಯೂ ಇರುವದಿಲ್ಲವಾದ್ದರಿಂದ ಅದು ಇಲ್ಲವೆಂಬುದಿಲ್ಲ.[6] ನಿನ್ನ

---

1. 'ಪುರಾ ಪ್ರಸಿದ್ಧಿತೋ' ಮೈ॥

2. ನನಗೆ ಶೇಷವಾದದ್ದೂ ಇಲ್ಲ, ನಾನೂ ಯಾವದೊಂದಕ್ಕೂ ಶೇಷವಲ್ಲ– ಎಂದರ್ಥ.

3. ಕಲ್ಪಿತವಾದದ್ದು ನಿಜವಾಗಿರುವದಿಲ್ಲವಷ್ಟೆ ಎಂದರ್ಥ. 'ನ ಹಿ ಚಾಸ್ತ್ಯಕಲ್ಪಿತಮ್' ಎಂಬ ಪಾಠವಿದ್ದರೆ ಅಕಲ್ಪಿತವಾದ ಮತ್ತೊಂದು ವಸ್ತುವಿಲ್ಲವಷ್ಟೆ ಎಂದು ಕನ್ನಡಿಸಬೇಕು.

4. ಆಸ್ಪದವಿಲ್ಲದ ಕಲ್ಪನೆಯಿಲ್ಲ; ಕಲ್ಪನೆಯು ಕಲ್ಪನಾಕಾಲವಲ್ಲಿ ಮಾತ್ರ ತೋರುತ್ತದೆ. ಆದ್ದರಿಂದ ಅದ್ವಿತೀಯನಾದ ನಾನು ಕಲ್ಪಿತನೆಂಬುವದಕ್ಕೆ ಪ್ರಮಾಣವಿಲ್ಲ. ನಾನು ಸ್ವತಃಸಿದ್ಧನೂ ನಿತ್ಯನೂ ಆಗಿರುವೆನು.

5. ಅಸತ್ತು.

6. ಹುಟ್ಟಿದ ವಸ್ತುವಿನಲ್ಲಿ ಅಸ್ತಿ ನಾಸ್ತಿ, ವರ್ಧತೇ ನ ವರ್ಧತೇ– ಮುಂತಾದ ವಿಕಲ್ಪನಮುಂಟಾಗಬಹುದು. ನಿತ್ಯವಾದ ಆತ್ಮನಲ್ಲಿ ಇಲ್ಲವೆಂಬ ವಿಕಲ್ಪವು ಹೇಗೆ ಬಂದೀತು?

ಕಲ್ಪನೆಯೂ ಯಾವದರಿಂದ ಉಂಟಾಗಿರುವದೋ[1] ಅದು ಮೊದಲೇ ಇರುವದರಿಂದ ಅದು ಕಲ್ಪಿತವಲ್ಲವಷ್ಟೆ.

ಅಸದ್ದ್ವಯಂ ತೇಽಪಿ ಹಿ ಯದ್ಯದೀಷ್ಯತೇ
ನ ದೃಷ್ಟಮಿತ್ಯೇವ ನ ಚೈವ ನಾಸ್ತಿತಾ ।
ಯತಃ ಪ್ರವೃತ್ತಾ ಸದಸದ್ವಿಕಲ್ಪನಾ
ವಿಚಾರವದ್ವಾಪಿ ತಥಾದ್ವಯಂ ಚ ಸತ್ ॥ ೧೪ ॥

೧೪. ಯಾವಯಾವದು ಕಾಣುವದೋ (ಆ) ದ್ವೈತವು ನಿನಗೂ ಅಸತ್ತೇ ಆಗಿರುವದಷ್ಟೆ ;[2] ಕಾಣುವದಿಲ್ಲವೆಂಬುದರಿಂದಲೇ ಅದು ಇಲ್ಲವೆಂಬುದೂ ಇಲ್ಲವಷ್ಟೆ.[3] (ಇದು) ಸತ್ತು, (ಇದು) ಅಸತ್ತು –ಎಂಬ ವಿಕಲ್ಪನೆಯು ಎತರಿಂದ ಪ್ರವೃತ್ತವಾಗಿರುವದೋ ಆ ಅದ್ವಯವಸ್ತುವೂ ವಿಚಾರದಂತೆಯೇ ಸತ್ತಾಗಿರುತ್ತದೆ.[4]

ಸದಭ್ಯುಪೇತಂ ಭವತಾಪಿ[5] ಕಲ್ಪಿತಂ
ವಿಚಾರಹೇತೋರ್ಯದಿ ತಸ್ಯ ನಾಸ್ತಿತಾ ।
ವಿಚಾರಹಾನಾಚ್ಚ ತಥೈವ ಸಂಸ್ಥಿತಂ
ನ ಚೇತ್ತದಿಷ್ಟಂ ನಿತರಾಂ ಸದಿಷ್ಯತೇ ॥ ೧೫ ॥

೧೫. ಕಲ್ಪಿತವಾದ (ದ್ವೈತವು) ವಿಚಾರಕ್ಕೆ ಕಾರಣವಾಗಿರುವದರಿಂದ ಸತ್ತೆಂದು (ನೀನು) ಒಪ್ಪಿರುತ್ತೀಯೆ.[6] ಅದು ಇಲ್ಲವಾದರೆ ವಿಚಾರವೇ ಇಲ್ಲವಾಗುವದರಿಂದಲೂ ಹಾಗೆಯೇ ಸಿದ್ಧವಾಗುತ್ತದೆ.[7] ಅದು ಇಷ್ಟವಲ್ಲದೆಹೋದರೆ

---

1. ಮನಸ್ಸೆಂಬ ಕಲ್ಪನೆಯೂ ಯಾವದರಲ್ಲಿ ವಿಕಲ್ಪಿತವಾಗಿರುವದೋ ಯಾರ ಬಲದಿಂದ ಮನಸ್ಸು ಕಲ್ಪಿಸುತ್ತಿರುವದೋ ಅದು ಇಲ್ಲವೆನ್ನುವದಾಗದು.

2. ಆತ್ಮನು ಕಾಣುವದಿಲ್ಲವಲ್ಲ !– ಎಂಬ ಶಂಕೆಗೆ ಪರಿಹಾರ. ಮನಸ್ಸಿಗೆ ಕಂಡ ರಜ್ಜುಸರ್ಪವು ಸತ್ತಾಗಿರುವದಿಲ್ಲ.

3. ಕಾಣದಿರುವ ಎಷ್ಟೋ ವಸ್ತುಗಳು ಸತ್ತಾಗಿರಬಹುದು; ಆದ್ದರಿಂದ ಕಾಣುವದಿಲ್ಲವಾದ್ದರಿಂದ ಅಸತ್ತು ಎಂಬ ಯುಕ್ತಿ ಸರಿಯಲ್ಲ.

4. ವಿಚಾರವಿಲ್ಲದೆ ಏನೂ ನಿರ್ಣಯವಾಗುವದಿಲ್ಲವೆಂದು ವಾದಿಗಳು ಒಪ್ಪಿರುತ್ತಾರೆ ; ಆ ವಿಚಾರವಂತೆ ವಿಕಲ್ಪನೆಗೆ ಆಧಾರವಿಲ್ಲದೆ ವಿಕಲ್ಪವು ಸಿದ್ಧಿಸುವದಿಲ್ಲ– ಎಂದು ಅಭಿಪ್ರಾಯ.

5. 'ಭವತೋಪ' ಎಂಬ ಮೈ॥ ಪಾಠಕ್ಕಿಂತ ಈ ಬೋಧನಿಧಿಯ ಪಾಠವು ಮೇಲು.

6. ಇದು ಏನು ? ಎಂಬ ವಿಚಾರಕ್ಕೆ ಆಲಂಬನವು ಏನಾದರೂ ಬೇಕೇಬೇಕು.

7. ವಿಚಾರಾನ್ಯಥಾನುಪಪತ್ತಿ ಎಂಬ ಪ್ರಮಾಣದಿಂದ ದ್ವೈತಕ್ಕೆ ಆಧಾರವೊಂದು ಇರಬೇಕೆಂದು ಸಿದ್ಧವಾಗುತ್ತದೆ.

(ಆಗ) ಸತ್ತನ್ನು ಇನ್ನೂ ಹೆಚ್ಚಾಗಿಯೇ ಒಪ್ಪಿದಂತಾಗುತ್ತದೆ.[1]

ಅಸತ್ಸಮುಂ ಚೈನ ಸದಿತ್ಯಪೀತಿ ಚೇ
ದನರ್ಥವತ್ತ್ವಾನ್ನರಶೃಙ್ಗತುಲ್ಯತಃ ।
ಅನರ್ಥವತ್ತ್ವಂ ತ್ವಸತಿ ಹ್ಯಕಾರಣಂ
ನ ಚೈವ ತಸ್ಮಾನ್ನ ವಿಪರ್ಯಯೋಽನ್ಯಥಾ ॥ ೧೯ ॥

೧೯. ಸದ್ವಸ್ತುವೂ ಅರ್ಥಕ್ರಿಯಾಕಾರಿಯಲ್ಲದೆ ಇರುವದರಿಂದ[2] ಮನುಷ್ಯನ ಕೋಡಿಗೆ ಸಮಾನವಾಗಿರುತ್ತದೆಯಾಗಿ ಅದೂ ಅಸತ್ಸಮವೇ ಆಗಿರುತ್ತದೆ.[3] ಎನ್ನುವದಾದರೆ ಅರ್ಥಕ್ರಿಯೆಯನ್ನುಂಟುಮಾಡದಿರುವದೆಂಬುದು

---

1. ಯಾವ ದ್ವೈತವನ್ನೂ ಒಪ್ಪದಿದ್ದರೆ ಅದಕ್ಕೆ ಆಧಾರವಾದ ಸದ್ವಸ್ತುವಿದ್ದೇ ಇರುತ್ತದೆ. ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು ಕೊಟ್ಟಿರುವ ಅರ್ಥವೇ ಬೇರೆಯಾಗಿದೆ :

ರಾಮತೀರ್ಥಃ (೧) ವಿಚಾರಕ್ಕಾಗಿ ಏನಾದರೊಂದು ವಸ್ತುವನ್ನೊಪ್ಪಲೇಬೇಕಾದ್ದರಿಂದ ನೀನೂ ವಿಚಾರಕ್ಕಾಗಿ ಸದ್ವಸ್ತುವನ್ನೊಪ್ಪಿದಂತೆಯೇ ಸರಿ. ಅದು ಇಲ್ಲವೆಂದರೆ ವಿಚಾರವೂ ಆಗುವದಿಲ್ಲ, ಸತ್ತು ಇಲ್ಲವೆಂದೂ ನಿರ್ಣಯವಾಗುವದಿಲ್ಲ. ಈ ದೋಷವನ್ನೊಪ್ಪದಿರುವದಕ್ಕೆ ಸತ್ತನ್ನೊಪ್ಪಲೇಬೇಕು. ಈ ವ್ಯಾಖ್ಯಾನದಲ್ಲಿ ತತ್ –ಎಂದರೆ ಅವಿಚಾರಿತ, ಅನಿರ್ಣೀತ. (೨) ದ್ವೈತವನ್ನು ಆತ್ಮತತ್ತ್ವದ ನಿಶ್ಚಯಕ್ಕಾಗಿ ಒಪ್ಪಿರುತ್ತೀಯೆ; ಅದು ಇಲ್ಲವೆಂದರೆ ಎಲ್ಲವೂ ಶೂನ್ಯವೇ ಆಗಿ ಪರಮಾರ್ಥನಿರ್ಣಯವಿಲ್ಲದೆ ಹೋಗುತ್ತದೆ. ಆದ್ದರಿಂದ ಈ ದೋಷವನ್ನು ತಪ್ಪಿಸಿಕೊಳ್ಳುವದಕ್ಕೆ ಸತ್ತನ್ನು ಒಪ್ಪಬೇಕು. ಈ ವ್ಯಾಖ್ಯಾನದಲ್ಲಿಯೂ ತತ್ ಎಂದರೆ ಅವಿಚಾರಿತವಾದದ್ದು.

ಬೋಧನಿಧಿ : ಸತ್ತನ್ನು ನೀನೂ ಕಲ್ಪಿಸಿಲ್ಲ ('ಆಕಲ್ಪಿತಂ' ಎಂದು ಪಾಠ) ; ಏಕೆಂದರೆ ಅದು ವಿಚಾರಕ್ಕೆ ಹೇತುವಾಗಿದೆ, ಅದಿಲ್ಲದೆ ವಿಚಾರವೇ ಸಿದ್ಧಿಸುವದಿಲ್ಲ. ವಿಚಾರವೇ ಬೇಡವೆಂದರೆ ಸತ್ತಿಲ್ಲವೆಂದು ನಿರ್ಣಯಿಸುವದಕ್ಕೆ ಆಗುವದಿಲ್ಲವಾಗಿ ಸತ್ತೇ ಉಳಿದುಕೊಳ್ಳುತ್ತದೆ. ಈ ವಿಚಾರಹಾನವು ಇಷ್ಟವಲ್ಲವಾದರೆ ಸತ್ತು ಇವೆ ಎಂದು ಇನ್ನೂ ನಿಶ್ಚಿತವಾಗಿ ಸಿದ್ಧಿಸುತ್ತದೆ ; ಏಕೆಂದರೆ ವಿಚಾರಕ್ಕಾಗಿ ಅದರ ಆಶ್ರಯವಾದ ಸತ್ತನ್ನು ಅಂಗೀಕರಿಸಿಯೇ ತೀರಬೇಕು. ಈ ವ್ಯಾಖ್ಯಾನದಲ್ಲಿ ತತ್ ಎಂದರೆ ವಿಚಾರತ್ಯಾಗ.

ವ್ಯಾಖ್ಯಾನರೀತಿಯಿಂದ ಹಿಂದಿನ ಶ್ಲೋಕದ ಅಭಿಪ್ರಾಯಕ್ಕೂ ಈ ಶ್ಲೋಕದ ಅಭಿಪ್ರಾಯಕ್ಕೂ ವಿಶೇಷವಿಲ್ಲ. ಈ ಶ್ಲೋಕದ ಪೂರ್ವಾರ್ಧದ ಅಭಿಪ್ರಾಯಕ್ಕೂ ಉತ್ತರಾರ್ಧದ ಅಭಿಪ್ರಾಯಕ್ಕೂ ವಿಶೇಷವಿಲ್ಲ. ಆದ್ದರಿಂದ ದ್ವೈತವನ್ನು ಒಪ್ಪದಿದ್ದರೂ ಸತ್ತನ್ನೊಪ್ಪಬೇಕು ಎಂಬ ಅರ್ಥವನ್ನು ನಾವು ತೆಗೆದಿರುತ್ತೇವೆ.

2. ನಿಜವಾದ ನೀರು ಇದ್ದರೆ ಕುಡಿದವನಿಗೆ ಬಾಯಾರಿಕೆ ಇಂಗುವದೆಂಬ ಅರ್ಥಕ್ರಿಯೆಯುಂಟಾಗಬೇಕು. ಆದರೆ ಸದ್ವಸ್ತುವಿನಿಂದ ಅರ್ಥಕ್ರಿಯೆಯಾಗುವದಿಲ್ಲ.

3. ಮನುಷ್ಯನ ಕೋಡು, ಸದ್ವಸ್ತು –ಎರಡೂ ಒಂದೇ ಆಯಿತು ; ಏಕೆಂದರೆ ಎರಡಕ್ಕೂ ಅರ್ಥಕ್ರಿಯೆಯಿಲ್ಲ ಎಂದು ಪೂರ್ವಪಕ್ಷ.

ಅಸತ್ತ್ವಕ್ಕೆ ಕಾರಣವೇ ಇಲ್ಲ. ಆದರಿಂದ ಅಸತ್ತ್ವವೂ ಇಲ್ಲ, ವಿಪರೀತವಾದರೆ ಬೇರೆ ಎಂಬದೂ ಇಲ್ಲ.[1]

ಅಸಿದ್ಧತಶ್ಚಾಪಿ[2] ವಿಚಾರಕಾರಣಾದ್
ದ್ವಯಂ ಚ ತಸ್ಮಾತ್ ಪ್ರಸ್ಯತಂ ಚ ಮಾಯಯಾ ।
ಶ್ರುತೇಃ ಸ್ಮೃತೇಶ್ಚಾಪಿ ತಥಾ ಹಿ ಯುಕ್ತಿತಃ
ಪ್ರಸಿಧ್ಯತೀತ್ಥಂ ನ ತು ಯುಜ್ಯತೇಽನ್ಯಥಾ ॥ ೧೭ ॥

೧೭. (ಹೇತು) ಅಸಿದ್ಧವಾಗಿರುವದರಿಂದಲೂ[3] (ಇದು ಸರಿಯಲ್ಲ), ಏಕೆಂದರೆ (ಸದ್ವಸ್ತು) ವಿಚಾರಕ್ಕೆ ಕಾರಣವಾಗಿರುತ್ತದೆ.[4] ಆದರಿಂದ ದ್ವೈತವು ಮಾಯೆಯಿಂದ ಹರಡಿಕೊಂಡು ಇರುತ್ತದೆ. ಶ್ರುತಿಯಿಂದಲೂ ಸ್ಮೃತಿಯಿಂದಲೂ ಹಾಗೂ ಯುಕ್ತಿಯಿಂದಲೂ ಹೀಗೆಂದು ಸಿದ್ಧವಾಗುತ್ತದೆಯೇ ಹೊರತು ಬೇರೆಯ ರೀತಿಯಿಂದ ಯುಕ್ತವಾಗುವದಿಲ್ಲ.[5]

ವಿಕಲ್ಪನಾಚ್ಚಾಪಿ ವಿಧರ್ಮಕಂ ಶ್ರುತೇಃ
ಪುರಾ ಪ್ರಸಿದ್ಧೇಶ್ಚ ವಿಕಲ್ಪತೋಽದ್ವಯಮ್ ।
ನ ಚೇತಿ ನೇತೀತಿ ಯಥಾ ವಿಕಲ್ಪಿತಂ
ನಿಷಿಧ್ಯತೇಽತ್ರಾಪ್ಯವಿಶೇಷಸಿದ್ಧಯೇ ॥ ೧೮ ॥

೧೮. ವಿರುದ್ಧ ಕಲ್ಪನೆಗಳ ಕಾರಣದಿಂದಲೂ (ಸದ್ವಸ್ತುವು) ನಿರ್ಧರ್ಮಕವೆಂದೂ[6] ವಿಕಲ್ಪಗಳಿಗಿಂತಲೂ ಮೊದಲೇ ಸಿದ್ಧವಾಗಿರುವದರಿಂದ[7] ಅದ್ವಯ

---

1. ಅರ್ಥಕ್ರಿಯೆಯನ್ನುಂಟುಮಾಡುವದು ಸತ್ತೆಂದಾಗಲಿ, ಮಾಡದಿದ್ದರೆ ಅಸತ್ತೆಂದಾಗಲಿ ಹೇಳುವದಕ್ಕಾಗುವದಿಲ್ಲ ಎಂದರ್ಥ. ಉದಾಹರಣೆಗೆ ದುರ್ಭಿಕ್ಷವಿಲ್ಲದ್ದರಿಂದ ವಾಸ ಮಾಡುತ್ತೇನೆ ಎಂಬಲ್ಲಿ ದುರ್ಭಿಕ್ಷಾಭಾವವು ಅರ್ಥಕ್ರಿಯಾಕಾರಿಯಾದರೂ ಸತ್ತಲ್ಲ; ಹೂಳಿಟ್ಟ ನಿಧಿಯು ಅರ್ಥಕ್ರಿಯಾಕಾರಿಯಾದರೂ ಅಸತ್ತಲ್ಲ. ಇಲ್ಲಿ 'ಹಿ ಕಾರಣಂ' ಎಂಬ ಪಾಠವಿದ್ದರೆ ಅನರ್ಥವತ್ತ್ವಂ ಹಿ ಅಸತೋ ಹಿ ಕಾರಣಂ ನ ಚೈವ, ತಸ್ಮಾತ್ ನ ವಿಪರ್ಯಯೇ ಅನ್ಯಥಾ (ಸತ್ಕಾರಣತ್ವಂ) ನ-ಎಂದು ಸರಳವಾಗಿ ಅನ್ವಯಿಸಬಹುದಾಗುವದು.

2. 'ಅಸಿದ್ಧಿತಶ್ಚಾಪಿ' ಎಂಬದಕ್ಕಿಂತ ಈ ಪಾಠವು ಮೇಲು.

3. ಅನರ್ಥನತ್ವವೆಂಬ ಹೇತುಸಿದ್ಧವಲ್ಲವಾದ್ದರಿಂದ ಸಾಧ್ಯವೂ ಸಿದ್ಧವಲ್ಲ.

4. ವಿಚಾರಕ್ಕೆ ಕಾರಣವಾದದ್ದು ಸತ್ತು -ಎಂತೊಪ್ಪಿದರೆ ಸಾಕು.

5. 'ಇನ್ದ್ರೋ ಮಾಯಾಭಿಃ,' (ಬೃ. ೨-೫-೧೯) ಎಂಬ ಶ್ರುತಿಯಿಂದಲೂ 'ಮಯಾ ಧ್ಯಕ್ಷೇಣ'(ಗೀ. ೯-೧೦) 'ಮಮ ಮಾಯಾ' (ಗೀ. ೭-೧೪) ಮುಂತಾದ ಸ್ಮೃತಿಯಿಂದಲೂ, ಕಾರ್ಯವು ಕಾರಣಕ್ಕೆ ಬೇರೆಯಲ್ಲ - ಎಂಬ ಯುಕ್ತಿಯಿಂದಲೂ ದ್ವೈತವು ಸಿದ್ಧವಾಗುತ್ತದೆ. ದ್ವೈತವು ಪರಮಾರ್ಥವೆಂಬುದು 'ಸ್ವಲ್ಪವೂ ನಾನಾತ್ವವಿಲ್ಲ' (ಕ. ೨-೧-೧೧) ಮುಂತಾದ ಶ್ರುತಿಗಳಿಗೆ ವಿರುದ್ಧವೂ ಆಗಿರುತ್ತದೆ.

6. ವಾದಿಗಳು ವಿರುದ್ಧವಾದ ವಿಕಲ್ಪಗಳನ್ನು ಮಾಡುತ್ತಿರುವದರಿಂದ ತತ್ತ್ವದಲ್ಲಿ ಯಾವ ಧರ್ಮವೂ ಇಲ್ಲವೆಂದಾಯಿತು.

7. ವಿಕಲ್ಪಗಳಿಗೆ ಆಧಾರವಾದ ತತ್ತ್ವವು ಇನ್ನೇ ವಿಕಲ್ಪಿಸುವದಕ್ಕೆ ಬರುತ್ತದೆ.

ವೆಂದೂ ಶ್ರುತಿಯಿಂದ ಏರ್ಪಡುತ್ತದೆ. ಏಕೆಂದರೆ ಇಲ್ಲಿ ವಿಕಲ್ಪಿತವಾದದ್ದು 'ನ ಚ' (ಗೀ. ೯-೫)[1] ಎಂದೂ, 'ನೇತಿ' (ಬೃ. ೨-೩-೬) ಎಂದೂ[2] ನಿರ್ವಿಶೇಷತ್ವಸಿದ್ಧಿಗಾಗಿ ಅಲ್ಲಗಳೆದಿರುತ್ತದೆ.

ಅಕಲ್ಪಿತೇಽಸ್ಯೇವಮಜೇಽದ್ವಯೇಽಕ್ಷರೇ
ವಿಕಲ್ಪಯನ್ತಃ ಸದಸತ್ತ್ವಜನ್ಮಭಿಃ ।
ಸ್ವಚಿತ್ತಮಾಯಾಪ್ರಭವಂ ಚ ತೇ ಭವಂ
ಜರಾಂ ಚ ಮೃತ್ಯುಂ ಚ ನಿಯಾನ್ತಿ ಸನ್ತತಮ್ ॥ ೧೯ ॥

೧೯. ಹೀಗೆ ಅಕಲ್ಪಿತನೂ ಅಜನೂ ಅದ್ವಯನೂ ಅಕ್ಷರನೂ (ಆಗಿರುವ ಆತ್ಮನಲ್ಲಿ) ಕೂಡ ಸತ್ತ್ವ, ಅಸತ್ತ್ವ, ಜನ್ಮ – ಎಂಬ (ಪ್ರಕಾರ)ಗಳಿಂದ ಕಲ್ಪಿಸುವವರು ತಮ್ಮ ಚಿತ್ತದ ಮಾಯೆಯಿಂದಾಗಿರುವ ಜರಾಮೃತ್ಯುರೂಪವಾದ ಸಂಸಾರವನ್ನು ಸಂತತವಾಗಿ ಹೊಂದುತ್ತಿರುವರು.[4]

ಕಾರ್ಯಕಾರಣಭಾವವು ಪರಮಾರ್ಥವಲ್ಲ

ಭವಾಭವತ್ವಂ ತು ನ ಚೇದವಸ್ಥಿತಿ
ರ್ನ ಚಾಸ್ಯ ಚಾನ್ಯಸ್ಥಿತಿಜನ್ಮ ನಾನ್ಯಥಾ ।
ಸತೋ ಹ್ಯಸತ್ತ್ವಾದಸತಶ್ಚ ಸತ್ತ್ವತೋ
ನ ಚ ಕ್ರಿಯಾಕಾರಕಮಿತ್ಯತೋಽಜಮ್ ॥ ೨೦ ॥

೨೦. ಹುಟ್ಟುವಿಕೆಯು (ನಿಜವಾಗಿ) ಹುಟ್ಟುವದಲ್ಲ.[5] ಹಾಗಿಲ್ಲದಿದ್ದರೆ ನಿಲುಗಡೆಯೇ ಇರುವದಿಲ್ಲ.[6] ಇದು ಮತ್ತೊಂದು ಅವಸ್ಥೆಯನ್ನು ಪಡೆಯು

---

1. 'ಶ್ರುತಿಯಿಂದ' ಏರ್ಪಡುತ್ತದೆ ಎಂಬುದು ಸ್ಮೃತಿಗೂ ಉಪಲಕ್ಷಣವೆಂದು ಭಾವಿಸಬೇಕು. ಈ ಸ್ಮೃತಿಯಲ್ಲಿ ಭೂತಗಳು ಆತ್ಮನಲ್ಲಿಲ್ಲವೆಂದು ಹೇಳಿದೆ.

2. ಮೂರ್ತಾಮೂರ್ತಗಳು ಆತ್ಮನಲ್ಲಿಲ್ಲವೆಂದು ಈ ಶ್ರುತಿಯಲ್ಲಿ ಹೇಳಿದೆ.

3. ಈ ಬೋಧನಿಧಿಯ ಪಾಠವೇ ಮೇಲು. 'ಸದಸಚ್ಚ' ಎಂಬ ಪಾಠವು ಅನ್ವಯವಾಗುವದಿಲ್ಲ.

4. ಆತ್ಮನಲ್ಲಿ ನಿಜವಾಗಿ ಜರಾಮರಣಗಳು ಇಲ್ಲದಿದ್ದರೂ ಇವನ್ನು ಕಲ್ಪಿಸಿಕೊಂಡು ಸಂಕಟಪಡುತ್ತಿರುವರು ಎಂದು ಅಭಿಪ್ರಾಯ. ಸೂಂ. ಕಾ. ಭಾ. ೪-೧೦ ನೋಡಿ.

5. ಮಾಯೆಯಿಂದ ಹಾಗೆ ತೋರುವದೇ ಹೊರತು ನಿಜವಾಗಿ ಹುಟ್ಟುವದೆಂಬುದಿಲ್ಲ.

6. ಅದು ಮತ್ತೊಂದರಿಂದ ಹುಟ್ಟುವದು ಎಂದು ಅನವಸ್ಥೆಯಾಗುತ್ತದೆ. ಸೂಂ. ಕಾ. ಭಾ. ೪-೧೩ ನೋಡಿ.

ಪಡೆಂಬ ಜನ್ಮವು ಬೇರೆ ರೀತಿಯಲ್ಲಿ[1] ಆಗುವದಿಲ್ಲ; ಏಕೆಂದರೆ (ಆಗ) ಸತ್ತು ಅಸತ್ತಾಗುವದು, ಅಸತ್ತು ಸತ್ತಾಗುವದು. ಕ್ರಿಯೆಯು ಕಾರಕವೂ ಅಲ್ಲ[2] ; ಆದ್ದರಿಂದಲೂ (ಆತ್ಮತತ್ತ್ವವು) ಜನ್ಮರಹಿತವಾದದ್ದೇ.

ಅಕುರ್ವದಿಷ್ಟಂ ಯದಿ ವಾಸ್ಯ ಕಾರಕಂ
ನ ಕಿಂಚಿದನ್ಯನ್ನನು ನಾಸ್ತ್ಯಕಾರಕಮ್ ।
ಸತೋಽವಿಶೇಷಾದಸತಶ್ಚ ಸಚ್ಚ್ಯುತೌ
ತುಲಾಸ್ತ್ಯಯೋರ್ಯದ್ವದನಿಶ್ಚಯಾನ್ನ ಹಿ ॥ ೨೧ ॥

೨೧. ಅಥವಾ ಈ (ಕಾರ್ಯಕ್ಕೆ) ಏನೂ ಮಾಡದ್ದೇ ಕಾರಕವೆಂದು ಇಷ್ಟವಾದರೆ (ಆಗ) ಮತ್ತೊಂದು ಯಾವದೂ ಇಲ್ಲ.[3] ಕಾರಕವಿಲ್ಲದ್ದು ಇಲ್ಲವೇ ಇಲ್ಲವಲ್ಲ ![4] ಸತ್ತಿಗೂ ಅಸತ್ತಿಗೂ ಯಾವ ವಿಶೇಷವೂ ಇಲ್ಲದಿರುವ ದರಿಂದ[5] ಸತ್ತು ಚ್ಯುತಿಯಾದರೆ ತಕ್ಕಡಿಯ ಕೊನೆಗಳಂತೆ ಯಾವ ನಿಶ್ಚಯವೂ ಆಗುವದಿಲ್ಲವಾದ್ದರಿಂದ[6] (ಕಾರ್ಯಕಾರಣಭಾವವು) ಇಲ್ಲವೆಂದೇ ಆಗುವದು.

---

1. ಮಾಯೆಯಿಂದ ಹುಟ್ಟುತ್ತದೆ ಎಂಬ ರೀತಿಯಲ್ಲಲ್ಲದೆ ಬೇರೆಯ ರೀತಿಯಲ್ಲಿ. ಹುಟ್ಟುವದೆಂದರೆ ವಸ್ತು ಮತ್ತೊಂದು ಅವಸ್ಥೆಯನ್ನು ನಿಜವಾಗಿ ಪಡೆಯುವದು – ಎಂದು ಹೇಳಬಾರದು. ಈ ಸಾಂಖ್ಯಮತದಲ್ಲಿ ಮುಂದೆ ಹೇಳುವ ದೋಷವಿದೆ.

2. ಕ್ರಿಯೆಯೇ ಕಾರಕವು; ಕ್ರಿಯೆಗಿಂತ ಬೇರೆಯಾದ ಸ್ಥಿರವಸ್ತುವಿಲ್ಲ ಎಂಬ ಬೌದ್ಧರ ಮತದ ನಿರಾಕರಣೆಯಿದು. ಈ ಮತದಲ್ಲಿ ಆದೇ ಈ ಸ್ಥಿತಿಗೆ ಬಂದಿದೆ ಎಂಬ ಪ್ರತ್ಯಭಿಜ್ಞೆಯನ್ನು ಸಮರ್ಥಿಸುವದಕ್ಕೆ ಆಗುವದಿಲ್ಲ.

3. ಕಾರಣವು ಏನಾದರೊಂದು ಮಾಡಿಯೇ ಕಾರ್ಯವನ್ನುಂಟುಮಾಡುವದೆಂಬುದು ಕುರ್ವತ್ಕಾರಣಪಕ್ಷವು. ಏನೂ ಮಾಡದೆ ಇರುವವೇ ಕಾರಣವೆಂದರೆ ಅಂಥ ಕಾರಣವೇ ಇಲ್ಲವಲ್ಲ !

4. ಏನಾದರೂ ಮಾಡಿಯೇ ಕಾರಣವಾಗುವದೆಂದರೆ ಹಾಗೆ ಮಾಡುವದೆಂಬ ಕಾರ್ಯಕ್ಕೆ ಮತ್ತೊಂದು ಕಾರಣವು ಇವ್ವೇ ಇರಬೇಕಾಗುವದು – ಎಂದು ಅನವಸ್ಥೆ ಬರುವದು.

5. ಸತ್ತು ಸತ್ತೇ ಆಗುವಂತಿಲ್ಲ ; ಏಕೆಂದರೆ ಸತ್ತಿನಲ್ಲಿ ವಿಶೇಷವಿಲ್ಲ. ಹೀಗೆಯೇ ಅಸತ್ತಿನಲ್ಲಿಯೂ ವಿಶೇಷವಿಲ್ಲದ್ದರಿಂದ ಅಸತ್ತಿನಿಂದ ಸತ್ತು ಹುಟ್ಟುವದಿಲ್ಲ.

6. ಆದರೆ ಈ ತಕ್ಕಡಿಯ ಪರಡಿಯು ಎದ್ದರೆ ಆ ಪರಡಿಯು ಇಳಿಯಲೇಬೇಕಾಗುವಂತೆ ಸತ್ತು ಮಾರ್ಪಟ್ಟರೆ ಅಸತ್ತೇ ಆಗಬೇಕು, ಅಸತ್ತು ಮಾರ್ಪಟ್ಟರೆ ಸತ್ತೇ ಆಗಬೇಕು. ಆಗ ಸತ್ತು ಅಸತ್ತು – ಎಂಬ ನಿಶ್ಚಯವೇ ಇಲ್ಲದೆ ಹೋಗುವದು. ಅಂತೂ ಕಾರ್ಯಕಾರಣಭಾವವು ಹೇಗೂ ಇಲ್ಲ. ಈ ವಿಷಯಕ್ಕೆ ಮಾಂ. ಕಾ. ಭಾ. ೪-೪೦ ನೋಡಿ.

ನ ಚೇತ್ ಸ ಇಷ್ಟಃ ಸದಸದ್ವಿಪರ್ಯಯಃ
ಕಥಂ ಭವಃ ಸ್ಯಾತ್ ಸದಸದ್ವ್ಯವಸ್ಥಿತೌ ।
ವಿಭಕ್ತಮೇತದ್ ದ್ವಯಮಪ್ಯವಸ್ಥಿತಂ
ನ ಜನ್ಮ ತಸ್ಮಾಚ್ಚ ಮನೋ ಹಿ ಕಸ್ಯಚಿತ್ ॥ ೨೨ ॥

೨೨. ಸದಸತ್ತುಗಳು ವಿಪರೀತವಾಗುವದೆಂಬ ಆ (ದೋಷವು)[1] ಇಷ್ಟವಲ್ಲವಾದರೆ, ಸತ್ತು, ಅಸತ್ತು – ಇವೆರಡೂ ವ್ಯವಸ್ಥಿತವಾಗಿರುವಾಗ[2] ಜನ್ಮವೆಂಬುದು ಹೇಗೆತಾನೆ ಆದೀತು ?[3] ಈ ಎರಡೂ ವಿಂಗಡವಾಗಿಯೇ (ಇರುತ್ತವೆ) ಎಂದಾಯಿತು ; ಆದ್ದರಿಂದಲೂ ಎಲೈ ಮನಸ್ಸೆ, ಯಾವದಕ್ಕೂ ಜನ್ಮವಿಲ್ಲವೇ ಇಲ್ಲ.[4]

ಮನಸ್ಸಿನ ವ್ಯಾಪಾರದಿಂದ ಆತ್ಮನಲ್ಲಿ ಅತಿಶಯವಿಲ್ಲ

ಅಥಾಭ್ಯುಪೇತ್ಯಾಪಿ ಭವಂ ತವೇಚ್ಛತೋ
ಬ್ರುವೀಮಿ ನಾರ್ಥಸ್ತವ ಚೇಷ್ಟಿತೇನ ಮೇ ।
ನ ಹಾನಿವೃದ್ಧೀ ನ ಯತಃ ಸ್ವತೋಽಸತೋ
ಭವೋಽನ್ಯತೋ ವಾ ಯದಿ ವಾಸ್ತಿತಾ ತಯೋಃ ॥ ೨೩ ॥

೨೩. ಇನ್ನು (ನಿನ್ನ) ಇಷ್ಟದಂತೆ ನಿನ್ನ ಜನ್ಮವನ್ನು ಒಪ್ಪಿಕೊಂಡು ಹೇಳುತ್ತೇನೆ. ನಿನ್ನ ವ್ಯಾಪಾರದಿಂದ ನನಗೆ ಯಾವ ಪ್ರಯೋಜನವೂ ಇಲ್ಲ, ಹಾನಿವೃದ್ಧಿಗಳೂ ಇಲ್ಲ. ಏಕೆಂದರೆ, ಅಸತ್ತಾದದ್ದಕ್ಕೆ ತನ್ನಿಂದಲಾಗಲಿ ಮತ್ತೊಂದರಿಂದಲಾಗಲಿ ಜನ್ಮವುಂಟಾಗಲಾರದು[5] ; ಅಥವಾ ಅವೆರಡೂ ಸತ್ತಾಗಿದ್ದರೂ (ಆಗಲಾರದು).[6]

---

1. ಸತ್ತು ಅಸತ್ತಾಗುವದು, ಅಸತ್ತು ಸತ್ತಾಗುವದು – ಎಂಬ ವಿಪರೀತಭಾವವು.

2. ಸತ್ತು ಸತ್ತೇ, ಅಸತ್ತು ಅಸತ್ತೇ – ಎಂದಾಗಿರುವಾಗ.

3. ಯಾವದಕ್ಕೆ ಜನ್ಮ ? ಸ್ಥಿತ್ಯಂತರವನ್ನು ಪಡೆದರಲ್ಲವೆ, ಜನ್ಮವೆಂಬುದು ?

4. ಸತ್ತೊಂದು ಅಸತ್ತೊಂದು – ಹೀಗೆ ಎರಡೂ ಬೇರೆಬೇರೆಯಾಗಿಯೇ ಇರಬೇಕೇ ಹೊರತು ಒಂದು ಬೇರೊಂದುರೂಪವನ್ನು ಪಡೆಯುವದಕ್ಕೆ ಕಾರಣವಿಲ್ಲ ಎಂದರ್ಥ.

5. ಹಾನಿವೃದ್ಧಿಗಳೆಂಬ ಪ್ರಯೋಜನವು ಆತ್ಮನಲ್ಲಿ ಉಂಟಾಗಬಹುದಲ್ಲ ? –ಎಂದರೆ ಹಾನಿವೃದ್ಧಿಗಳು ಸತ್ತೊ, ಅಸತ್ತೊ ? ಅಸತ್ತಾದರೆ ಅವು ತಮ್ಮಿಂದಾಗಲಿ ಮತ್ತೊಂದಾದ ಮನಸ್ಸಿನಿಂದಲಾಗಲಿ ಹೇಗೆ ಉಂಟಾಗುವವು ? ಅಸತ್ತಾದ ಹಾನಿವೃದ್ಧಿಗಳು ಆತ್ಮನಲ್ಲಿ ತನ್ನಿಂದಾಗಲಿ ಮತ್ತೊಂದಾದ ಮನಸ್ಸಿನಿಂದಲಾಗಲಿ ಹೇಗೆ ಉಂಟಾಗುವವು ?

6. ಹಾನಿವೃದ್ಧಿಗಳು ಸತ್ತೇ ಆದರೆ ಆತ್ಮಸ್ವರೂಪವೇ ; ಅವು ಉಂಟಾಗುವದೆಂದರೇನೂ ಅರ್ಥವಿರುವದಿಲ್ಲ.

ಧ್ರುವಾ ಹ್ಯನಿತ್ಯಾಶ್ಚ ನ ಚಾನ್ಯಯೋಗಿನೋ
ವಿಫಲಶ್ಚ ಕಾರ್ಯಂ ನ ಚ ತೇಷು ಯುಜ್ಯತೇ ।
ಅತೋ ನ ಕಸ್ಯಾಪಿ ಹಿ ಕಿಂಚಿದಿಷ್ಯತೇ
ಸ್ವಯಂ ಚ ತತ್ತ್ವಂ ನ ನಿರುಕ್ತಿಗೋಚರಮ್ ॥ ೨೪ ॥

೨೪. ನಿತ್ಯ(ವಸ್ತುಗಳೂ) ಅನಿತ್ಯವಸ್ತುಗಳೂ ಮತ್ತೊಂದಕ್ಕೆ ಸಂಬಂಧ ಪಟ್ಟಿರುವದಿಲ್ಲ[1]. ಅವುಗಳಲ್ಲಿ ಒಂದಕ್ಕೊಂದು ಕಾರ್ಯವಾಗುವದೆಂಬುದೂ ಯುಕ್ತವಾಗುವದಿಲ್ಲ[2]. ಆದ್ದರಿಂದ ಯಾವದೂ ಯಾವದಕ್ಕೂ (ಸಂಬಂಧ) ಪಟ್ಟದ್ದಲ್ಲ.[3] ತತ್ತ್ವವು ತನ್ನ ರೂಪದಲ್ಲಿ ನಿರುಕ್ತಿಗೆ ವಿಷಯವೂ ಅಲ್ಲ[4].

ಉಪಸಂಹಾರ

ಸಮಂ ತು ತಸ್ಮಾತ್ ಸತತಂ ವಿಭಾತವದ್
ದ್ವಯಾದ್ವಿಮುಕ್ತಂ ಸದಸದ್ವಿಕಲ್ಪಿತಾತ್ ।
ನಿರೀಕ್ಷ್ಯ ಯುಕ್ತ್ಯಾ ಶ್ರುತಿತಸ್ತು ಬುದ್ಧಿಮಾ-
ನಶೇಷನಿರ್ವಾಣಮುಪೈತಿ ದೀಪವತ್ ॥ ೨೫ ॥

೨೫. ಆದ್ದರಿಂದ ಸಮವಾಗಿ[5] ನಿರಂತರವಾಗಿ[6] ಬೆಳಗುತ್ತಾ[7] ಸತ್ತು, ಅಸತ್ತು – ಎಂದು ವಿಕಲ್ಪಿತವಾಗುವ ದ್ವೈತದಿಂದ ರಹಿತವಾಗಿರುವ (ತತ್ತ್ವ

1. ನಿತ್ಯವೆಸ್ತುವಾಗಲಿ ಅನಿತ್ಯವೆಸ್ತುವಾಗಲಿ ಮತ್ತೊಂದಕ್ಕೆ ಸಂಬಂಧಪಡುವದಿಲ್ಲ; ಏಕೆಂದರೆ ನಿತ್ಯವಾದದ್ದು ಮತ್ತೊಂದಕ್ಕೆ ಸಂಬಂಧಪಡುವದಕ್ಕೆ ಅನಿತ್ಯವಾಗಬೇಕು. ಅನಿತ್ಯವಸ್ತುವು ಕ್ಷಣಕ್ಷಣಕ್ಕೂ ಮಾರ್ಪಡುತ್ತಲೇ ಇರುವದು. ಸಂಬಂಧವು ನಿತ್ಯವಾಗಲಿ ಅನಿತ್ಯವಾಗಲಿ ಅದರಿಂದ ನಿತ್ಯವಸ್ತುವಿನಲ್ಲಿ ಅಥವಾ ಅನಿತ್ಯವಸ್ತುವಿನಲ್ಲಿ ಯಾವ ಅತಿಶಯವೂ ಆಗುವಂತಿಲ್ಲ.

2. ಅವುಗಳೆಲ್ಲವೂ ಕಾರ್ಯವೇ ಆದ್ದರಿಂದ ಒಂದಕ್ಕೊಂದು ಕಾರಣವೆಂಬುದು ಸರಿಯಲ್ಲ.

3. ಸಂಬಂಧವೇ ಇಲ್ಲದ್ದರಿಂದ ಮನೋವ್ಯಾಪಾರದಿಂದ ಆಗುವ ಹಾನಿವೃದ್ಧಿಗಳು ಆತ್ಮನಿಗೆ ಸಂಬಂಧಪಡುವದೆಂಬುದು ಅಯುಕ್ತ ಎಂದು ಭಾವ.

4. ಆತ್ಮತತ್ತ್ವವು ನಿತ್ಯ, ಅನಿತ್ಯ, ಸಂಬಂಧ– ಎಂದು ಮುಂತಾಗಿ ನಿರ್ವಚನಮಾಡಿ ಹೇಳುವದಕ್ಕಾದಮೇಲಲ್ಲವೆ, ಅದಕ್ಕೆ ಮನಸ್ಸಿನ ವ್ಯಾಪಾರದಿಂದಾಗುವ ಪ್ರಯೋಜನದ ಸಂಬಂಧವನ್ನು ಹೇಳಬಹುದು? ಆದರೆ ಆತ್ಮತತ್ತ್ವವು ಯಾವ ಶಬ್ದಪ್ರತ್ಯಯಗಳಿಗೂ ಗೋಚರವೇ ಅಲ್ಲ. ಆದ್ದರಿಂದ ಅದಕ್ಕೆ ಪ್ರಯೋಜನದ ಸಂಬಂಧವಾಗಲಾರದು.

5. ಎಲ್ಲೆಲ್ಲಿಯೂ ವಿಕರೂಪವಿಂದಿರುವ.

6. ಜಾತ್ಯಂತರವಲ್ಲದೆ ವಿಜ್ಞಾನೈಕರಸವಾಗಿರುವ.

7. ಮತ್ತೊಂದರ ಹಂಗಿಲ್ಲದೆ ತಾನೇ ಬೆಳಗುತ್ತಿರುವ.

ವನ್ನು) ಯುಕ್ತಿಯಿಂದಲೂ ಶ್ರುತಿಯಿಂದಲೂ ಕಂಡುಕೊಳ್ಳುವ ಬುದ್ಧಿವಂತನು ದೀಪದಂತೆ ಸಂಪೂರ್ಣನಿರ್ವಾಣವನ್ನು ಹೊಂದುತ್ತಾನೆ.[1]

ಅವೇದ್ಯಮೇಕಂ ಯದನನ್ಯವೇದಿನಾಂ
ಕುತಾರ್ಕಿಕಾಣಾಂ ಚ ಸುವೇದ್ಯಮನ್ಯಥಾ ।
ನಿರೀಕ್ಷ್ಯ ಚೇತ್ಥಂ ತ್ವಗುಣಗ್ರಹೋಽಗುಣಂ
ನ ಯಾತಿ ಮೋಪಂ ಗ್ರಹದೋಷಮುಕ್ತತಃ ॥ ೨೬ ॥

೨೬ ಅನನ್ಯವೆಂದು ಅರಿತಿರುವವರಿಗೆ[2] ಅವೇದ್ಯವಾಗಿರುವ ಯಾವ ಅದ್ವೈತ(ತತ್ತ್ವ)ವಿರುವದೋ ಅದು ಕುತಾರ್ಕಿಕರಿಗೆ ಬೇರೆಯಾಗಿ ಸುವೇದ್ಯವಾಗಿರುವದು.[3] ಗುಣವನ್ನು ಗ್ರಹಿಸದೆ,[4] ನಿರ್ಗುಣವಾದ (ಆತ್ಮತತ್ತ್ವವನ್ನು) ಹೀಗೆ ಕಂಡುಕೊಂಡರೆ ಅನಾತ್ಮಗ್ರಹಣದೋಷದಿಂದ ಬಿಡುಗಡೆಯಾಗುವದರಿಂದ ಮೋಹವನ್ನು ಹೊಂದುವದಿಲ್ಲ.[5]

ಅತೋಽನ್ಯಥಾ ನ ಗ್ರಹನಾಶ ಇಷ್ಯತೇ
ವಿಮೋಹಬುದ್ಧೇರ್ಗ್ರಹ ಏವ ಕಾರಣಮ್ ।
ಗ್ರಹೋಪ್ಯಹೇತುಸ್ತ್ವನಲಸ್ತ್ವನಿಗ್ಹನೋ
ಯಥಾ ಪ್ರಶಾಸ್ತಿಂ ಪರಮಾಂ ತಥಾ ವ್ರಜೇತ್ ॥ ೨೭ ॥

೨೭. ಇದಕ್ಕಿಂತ ಬೇರೆಯ ರೀತಿಯಿಂದ (ಭೇದ)ಗ್ರಹಣದ ನಾಶವಾಗಲಾರದು.[6] ವಿಮೋಹಬುದ್ಧಿಗೆ ಭೇದಗ್ರಹಣವೇ ಕಾರಣವು; ಆ ಗ್ರಹಣವು

---

1. ದೀಪವು ಆರಿಹೋದರೆ ಎಲ್ಲಿಗೋ ಹೋಗುವದಿಲ್ಲ; ತನ್ನ ಅವ್ಯಕ್ತರೂಪದಲ್ಲಿಯೇ ಇದ್ದುಕೊಂಡುಬಿಡುತ್ತದೆ. ಇದರಂತೆ ಆತ್ಮಸ್ವರೂಪವನ್ನು ಅರಿತುಕೊಂಡವನು ತನ್ನ ಸ್ವರೂಪದಲ್ಲಿಯೇ ನಿಂತು ಮುಕ್ತನಾಗುವನು ಎಂದು ಭಾವ.

2. ಪರಮಾತ್ಮನು ತಾನೇ ಎಂದು ತಿಳಿದುಕೊಂಡವರಿಗೆ.

3. ತನ್ನನ್ನು ತಾನು ಅರಿತುಕೊಳ್ಳಲಾಗುವದಿಲ್ಲ; ಮತ್ತೊಂದು ವಸ್ತುವನ್ನು ಅರಿಯಬಹುದು. ಆದ್ದರಿಂದ ಆತ್ಮನನ್ನು ಅರಿಯುವೆನೆಂಬುದು ತನಗಿಂತ ಬೇರೆಯೆಂದು ಭಾವಿಸುವ ಕುತರ್ಕವು. ಕೇ. ಭಾ. ೨-೩ ನೋಡಿ.

4. ಅನಾತ್ಮವಸ್ತುವನ್ನು ಗ್ರಹಿಸದೆ.

5. ಆತ್ಮತತ್ತ್ವವು ಅದ್ವಿತೀಯವು,'ನಿರ್ಗುಣವು, ನನ್ನ ಸ್ವರೂಪವೇ ಎಂದು ಅರಿತುಕೊಂಡಾಗ ಮಾತ್ರವೇ ಭೇದಗ್ರಹಣದೋಷವು ತೊಲಗುವದು.

6. ಸುಷುಪ್ತ್ಯಾದಿಗಳಲ್ಲಿ ಮರೆಯಾಗಬಹುದು; ಆದರೆ ನಾಶವಾಗಲಾರದು.

(ತನ್ನ) ಹೇತುವಿಲ್ಲವಾಗಲು ಕಟ್ಟಿಗೆಯಿಲ್ಲದ ಬೆಂಕಿಯು ಆರಿಹೋಗುವಂತೆ ಆತ್ಯಂತಿಕವಾಗಿ ನಾಶವಾಗಿಬಿಡುತ್ತದೆ.[1]

ಕೊನೆಯ ಮಂಗಲ

ವಿಮುಥ್ಯ ವೇದೋದಧಿತಃ ಸಮುದ್ಧೃತಂ
ಸುರೈರ್ಮಹಾಬ್ಧೇಸ್ತು ಯಥಾ ಮಹಾತ್ಮಭಿಃ ।
ತಥಾಮೃತಂ ಜ್ಞಾನಮಿದಂ ಹಿ ಯೈಃ ಪುರಾ
ನಮೋ ಗುರುಭ್ಯಃ ಪರಮಾಕ್ಷಿತಂ ಚ ಯೈಃ ॥ ೨೮ ॥

೨೮. ದೇವತೆಗಳು ಮಹಾಸಾಗರದಿಂದ ಹೇಗೆ (ಅಮೃತವನ್ನು ಕಡೆದು ತೆಗೆದರೋ) ಹಾಗೆ ವೇದಸಾಗರದಿಂದ ಯಾವ ಮಹಾತ್ಮರು ಈ ಜ್ಞಾನಾಮೃತವನ್ನು ಪೂರ್ವದಲ್ಲಿ ಕಡೆದು ತೆಗೆದರೋ ಪರತತ್ತ್ವವನ್ನು ಕಂಡುಕೊಂಡರೋ ಆ ಗುರುಗಳಿಗೆ ನಮಸ್ಕಾರ!



1. ಗ್ರಾಹ್ಯವಾದ ಭೇದವು ಅದ್ವೈತವನ್ನು ಅರಿಯುವುದರಿಂದ ತೋರುತ್ತಿರುವುದು; ಅದ್ವೈತಜ್ಞಾನವಾದರೆ ಗ್ರಾಹ್ಯವು ತೋರದು. ಗ್ರಾಹ್ಯವಿಲ್ಲದಿದ್ದರೆ ಭೇದವನ್ನು ಕಾಣುವ ಮನಸ್ಸು ತತ್ತ್ವನಲ್ಲಿ ಒಂದಾಗಿಬಿಡುತ್ತದೆ. ನಾಂ. ಕಾ. ಭಾ. ೩–೩೨.

ಭೇದಗ್ರಹನಾಶಪ್ರಕರಣದ ಸಾರ

೧-೨. ಆಶೆ ಎಂಬ ಜ್ವರಕ್ಕೆ ಜ್ಞಾನವೈರಾಗ್ಯಗಳೇ ಔಷಧವು; ಆ ಔಷಧಸೇವನೆಯಿಂದ ಮತ್ತೆಮತ್ತೆ ಶರೀರಗ್ರಹಣವನ್ನು ಕೊಡುವ ಈ ಜ್ವರವು ನಾಶವಾಗುವದು. ನಾನು, ನನ್ನದು –ಎಂಬ ಮನಸ್ಸಿನ ಭಾವವೇ ಕಾಮುಕ್ಕಿ ಕಾರಣವು. ಆದರೆ ಆತ್ಮನು ನಿಷ್ಕಾಮನೆಂಬದನ್ನು ಅರಿತುಕೊಂಡವನಿಗೆ ಕಾಮವೂ ಇರುವದಿಲ್ಲ, ಮನಸ್ಸೂ ಶಾಂತವಾಗುವದು.

೩-೫. ನಾನು ಪರಮಾತ್ಮನಿಗಿಂತ ಅನ್ಯನಲ್ಲ, ನಿತ್ಯತೃಪ್ತನು, ನಿತ್ಯಮುಕ್ತನು, ಷಡೂರ್ಮಿಗಳಿಲ್ಲದವನು – ಎಂದು ಶಾಸ್ತ್ರಪ್ರಮಾಣದಿಂದ ಅರಿತುಕೊಂಡರೆ ಮನಸ್ಸು ಶಾಂತವಾಗುವದು. ಏಕೆಂದರೆ ಆಗ ದ್ವೈತಗ್ರಹಣವಿರುವದಿಲ್ಲ.

೬-೧೧. ಆತ್ಮನು ನಿತ್ಯಮುಕ್ತನು, ಜ್ಞಾನಾಜ್ಞಾನಗಳಿಂದ ಅವನಲ್ಲಿ ಬದ್ಧಮುಕ್ತ ಭೇದವುಂಟಾಗುವದಿಲ್ಲ. ಅವನು ನಿತ್ಯನು, ಅಪ್ಪಯನು ; ಮನಸ್ಸು ಆದ್ಯಂತಗಳುಳ್ಳದ್ದಾದ್ದರಿಂದ ಪರಮಾರ್ಥವಲ್ಲ. ದೃಷ್ಟದೃಶ್ಯದರ್ಶನಗಳೆಂಬುದು ಮನಸ್ಸಿನ ವಿಕಲ್ಪಮಾತ್ರ. ಆತ್ಮನನ್ನು ಇಂಥವನು, ಅಂಥವನು ಎಂದು ವಿಕಲ್ಪಿಸುವದಕ್ಕೆ ಬರುವದಿಲ್ಲ ; ಅವನು ವಿಕಲ್ಪನೆಗಳಿಗೆಲ್ಲ ಆಧಾರವಾಗಿರುತ್ತಾನೆ. ವಿಕಲ್ಪನೆಗಳ ಪರಮಾರ್ಥಸ್ವರೂಪವೂ ಅವನೇ. ಅವನಲ್ಲಿ ಯಾವ ಭೇದವೂ ಇಲ್ಲ ; ಆತ್ಮರು ಅನೇಕರೆಂದು ವಿನಾಶಿಗಳೆಂಬಾಗುವದು, ಜಗತ್ತೇ ಶೂನ್ಯವೆಂದಾಗುವದು.

೧೨-೧೯. ಆತ್ಮನಿಗೂ ಮತ್ತೊಂದಕ್ಕೂ ಶೇಷಶೇಷಿಭಾವವಿಲ್ಲ. ಆತ್ಮನು ಕಲ್ಪಿತನಲ್ಲ ; ಕಲ್ಪನೆಯೂ ಅವನಿಂದಲೇ ಆಗಿರುತ್ತದೆ. ಆತ್ಮನು ಕಾಣದೆ ಇರುವನೆಂಬುದು ಅವನು ಇಲ್ಲವೆಂಬುದಕ್ಕೆ ಕಾರಣವಲ್ಲ. ಏಕೆಂದರೆ ಮನಸ್ಸಿಗೆ ತೋರಿದ್ದು ಸತ್ಯವೆಂಬ ನಿಯಮವಿಲ್ಲ, ತೋರದ್ದು ಅಸತ್ಯವೆಂದೂ ಇಲ್ಲ. ಯಾವದು ವಿಚಾರಕ್ಕೆ ಹೇತುವಾಗಿದೆಯೋ ಆದಕ್ಕೆ ಆಧಾರವಾಗಿ ಸತ್ತಾದದ್ದೂ ಇರಬೇಕು. ಅರ್ಥಕ್ರಿಯಾಕಾರಿಯಲ್ಲವೆಂಬುದು ಆತ್ಮನ ಅಸತ್ತ್ವಕ್ಕೆ ಕಾರಣವಲ್ಲ ; ಏಕೆಂದರೆ ಅರ್ಥಕ್ರಿಯಾಕಾರಿಯಾದದ್ದು ಸತ್ಯವೆಂಬ ನಿಯಮವಿಲ್ಲ. ವಿಚಾರಕ್ಕೆ ಆಸ್ಪದವಾದದ್ದಾದ ತತ್ತ್ವನೇ ಸದ್ರೂಪನಾದ ಆತ್ಮನು. ಆ ಆತ್ಮನಲ್ಲಿ ವಿರುದ್ಧವಾದ ಕಲ್ಪನೆಗಳಿರುವದರಿಂದ ಯಾವ ವಿಕಲ್ಪವೂ ಇಲ್ಲದ ನಿರ್ಗುಣನವನು. ಅವನನಲ್ಲಿಲ್ಲದ ವಿಕಲ್ಪಗಳನ್ನು ಮಾಡುತ್ತಿರುವದರಿಂದಲೇ ಜನರು ಸಂಸಾರದಲ್ಲಿ ತೊಳಲುತ್ತಿರುವರು.

೨೦-೨೨. ಸಂಸಾರವೆಂದರೆ ಜನನಮರಣಗಳಷ್ಟೆ. ನಿಜವಾಗಿ ಜನ್ಮವೆಂಬುದೇ ಇಲ್ಲ. ಏಕೆಂದರೆ ಯಾವದಾದರೂ ನಿಜವಾಗಿ ಹುಟ್ಟುವದೆಂದು ಒಪ್ಪಿದರೆ ಸತ್ತು ಅಸತ್ತಾಗುವದೆಂದೂ ಅಸತ್ತು ಸತ್ತಾಗುವದೆಂದೂ ಒಪ್ಪಬೇಕಾಗುತ್ತದೆ; ಅದನ್ನು ಒಪ್ಪಿದರೆ ತತ್ತ್ವನಿಶ್ಚಯವೇ ಇಲ್ಲದೆಹೋಗುವದು. ಸದಸತ್ತುಗಳು ಬೇರೆಬೇರೆ ಎಂದು ಒಪ್ಪಿದರೂ ಜನ್ಮವಾಗುವದಕ್ಕೆ ಕಾರಣವಿಲ್ಲ.

೨೩-೨೪. ಮನಸ್ಸಿನಿಂದಾಗುವ ಹಾನಿವೃದ್ಧಿಗಳು ಅದಕ್ಕಿಂತ ಬೇರೆಯಾದ ಆತ್ಮನಲ್ಲಿ ಆಗುವದಕ್ಕೆ ಕಾರಣವಿಲ್ಲ. ವಸ್ತುಗಳು ನಿತ್ಯವಾಗಲಿ ಅನಿತ್ಯವಾಗಲಿ ಅವಕ್ಕೆ ಒಂದ ಕ್ಕೊಂದಕ್ಕೆ ಯಾವ ಸಂಬಂಧವೂ ಸಿದ್ಧಿಸುವದಿಲ್ಲ. ಆತ್ಮನು ನಿತ್ಯಾನಿತ್ಯಾದಿವಿಕಲ್ಪಗಳಿಲ್ಲ ದವನಾದ್ದರಿಂದ ಅವನಲ್ಲಿ ಯಾವದರ ಸಂಬಂಧವೂ ಇರುವಂತೆಯೂ ಇಲ್ಲ.

೨೫-೨೭. ಹೀಗೆ ಎಲ್ಲೆಲ್ಲಿಯೂ ಸಮವಾಗಿ ನಿರಂತರವಾಗಿ ಸ್ವಯಂಪ್ರಕಾಶವಿರುವ ನಿರ್ವಿಕಲ್ಪವಾದ ಅದ್ವೈತತತ್ತ್ವವೇ ಆತ್ಮನೆಂಬುದನ್ನು ಕಂಡುಕೊಂಡವನಿಗೆ ಸದ್ಯೋ ಮುಕ್ತಿಯಾಗುವದು. ಆತ್ಮತತ್ತ್ವವು ನಮ್ಮ ಸ್ವರೂಪವೇ ಆಗಿರುವದರಿಂದ ಅದು ಯಾವ ಜ್ಞಾನಕ್ಕೂ ವಿಷಯವಲ್ಲ. ಹೀಗಿದ್ದರೂ ಕುತಾರ್ಕಿಕರು ಅದನ್ನು ಅನಾತ್ಮವಾಗಿ ಮಾಡಿ ಕೊಂಡು ಅರಿಯುತ್ತೇವೆನ್ನುವವರು. ಆತ್ಮನು ಹೀಗೆ ನಿರ್ವಿಕಲ್ಪನು, ಅವಿಷಯನು, ಅದ್ವಿತೀಯನು, ನಮ್ಮ ಸ್ವರೂಪವೇ ಎಂಬುದನ್ನು ತಿಳಿದರೆ ದ್ವೈತವನ್ನು ಗ್ರಹಿಸುವ ಮನಸ್ಸು ನಾಶವಾಗುತ್ತದೆ; ಇಲ್ಲದಿದ್ದರೆ ಎಂದಿಗೂ ನಾಶವಾಗದು. ಆತ್ಮತತ್ತ್ವವನ್ನು ಅರಿತಮೇಲೆ ಮನಸ್ಸು ತನಗೆ ತಾನೇ ನಾಶವಾಗುವದರಿಂದ ಅದಕ್ಕಾಗಿ ಬೇರೆಯ ಪ್ರಯತ್ನ ವನ್ನು ಮಾಡಬೇಕಾಗಿರುವದಿಲ್ಲ.

೨೮. ವೇದದ ಸಾರವಾಗಿರುವ ಈ ಅದ್ವೈತಜ್ಞಾನವೆಂಬ ಅಮೃತವನ್ನು ತೆಗೆದು ಜನರಿಗೆ ಕೊಟ್ಟು ಉದ್ಧಾರಮಾಡಿರುವ ಗುರುಗಳಿಗೆ ನಮಸ್ಕಾರ!

——:o:——

ಶ್ಲೋಕಗಳ ವರ್ಣಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಈ ಗ್ರಂಥದ ಪ್ರಕರಣ ಮತ್ತು ಶ್ಲೋಕ – ಇವುಗಳನ್ನು ಸೂಚಿಸುವವು. ಒಂದು ಪ್ರತೀಕದ ಮುಂದೆ ಕಂಸದಲ್ಲಿ (ನೈ.) ಅಥವಾ (ವಾ.) – ಎಂದಿದ್ದರೆ ಪ್ರಕೃತ ಶ್ಲೋಕವು ಅಥವಾ ಅದರ ಭಾಗವು ನೈಷ್ಕರ್ಮ್ಯಸಿದ್ಧಿಯಲ್ಲಿ ಅಥವಾ ಬೃಹದಾರಣ್ಯಕವಾರ್ತಿಕದಲ್ಲಿ ಇದೆ ಎಂದರ್ಥ ; (ನೈ. ವಾ.) ಎಂದಿದ್ದರೆ ಆ ಎರಡು ಗ್ರಂಥಗಳಲ್ಲಿಯೂ ಇದೆ ಎಂದರ್ಥ.

ಅಕಲ್ಪಿತೇಽಪ್ಯೇವಮಜೇ	೧೯–೧೯
ಅಕಾರ್ಯಶೇಷಮಾತ್ಮಾನಮ್	೧೪–೨೨
ಅಕಾಲತ್ವಾದವೇಶತ್ವಾತ್	೧೪–೪೯
ಅಕುರ್ವದಿಷ್ಟಂ ಯದಿ	೧೯–೨೧
ಅಕುರ್ವನ್ ಸರ್ವಕೃಚ್ಛ್ರಪ್ತಿಃ	೧೭–೭೯
ಅಕ್ರಿಯತ್ವೇಽಪಿ ತಾದಾತ್ಮ್ಯಮ್	೧೪–೭೪
ಅಗ್ನಿಷೋಮೀಯಮವದಿತ್ಯುಕ್ತಂ	೧–೨೧
ಅಚಕ್ಷುಷ್ಕಾದಿಶಾಸ್ತ್ರಾಚ್ಚ	೧೩–೧೨
ಅಚಕ್ಷುಷ್ಟಾತ್ವನ್ನ ದೃಷ್ಟಿರ್ಮೇ	೧೩–೧
ಅಜೋಽಮರಶ್ಚೈವ ತಥಾ	೧೦–೩
ಅಜೋಽಹಂ ಚಾಮರೋ ಮೃತ್ಯುಃ	೧೭–೫೯
ಅಜ್ಞಾನಂ ಕಲ್ಪನಾಮೂಲಮ್	೧೬–೧೭
ಅಜ್ಞಾನಂ ತಸ್ಯ ಮೂಲಂ ಸ್ಯಾತ್	೧–೫
ಅಜ್ಞಾಸಿಷಮಿದಂ ಮಾಂ ಚ	೧೪–೧೨೭
ಅತೋಽನ್ಯಥಾ ನ ಗ್ರಹನಾಶ–	೧೯–೨೭
ಅತ್ಯರೇಚಯದಿತ್ಯುಕ್ತ್ಯೇ	೧–೨೦
ಅಥಾಭ್ಯುಪೇತ್ಯಾಪಿ	೧೯–೨೩
ಅದೃಶಿರ್ದೃಶಿರೂಪೇಣ	೧೪–೪೦
ಅದೃಶ್ಯಸ್ಯ ಸತೋ ದೃಷ್ಟಿಃ	೧೪–೩೪
ಅದೃಶ್ಯೋಽಪಿ ಯಥಾ ರಾಹುಃ	೧೭–೩೪
ಅದೃಷ್ಟಂ ದ್ರಷ್ಟೃವಿಜ್ಞಾತಂ	೧೫–೩೯
ಅದ್ರಷ್ಟುರ್ನೈವ ಚಾನ್ಧಸ್ಯ	೧೪–೧೩೭
ಅಧ್ಯಕ್ಷಃ ಸ್ವಯಮಸ್ಯೈವ	೧೪–೧೩೪
ಅಧ್ಯಕ್ಷಸ್ಯ ದೃಶೇಃ ಕೀದೃಕ್	೧೪–೧೪೪
ಅಧ್ಯಕ್ಷಸ್ಯ ಪೃಥಕ್ಸಿದ್ಧಾವಾಭಾಸಸ್ಯ	೧೪–೧೧೩
ಅಧ್ಯಕ್ಷಸ್ಯ ಸಮೀಪೇ ತು	೧೪–೭೩
ಅಧ್ಯಕ್ಷಸ್ಯಾಪಿ ಸಿದ್ಧಿಃ ಸ್ಯಾತ್	೧೪–೧೩೧
ಅಧ್ಯಕ್ಷೇಣ ಕೃತಾ ಪೃಷ್ಟಿಃ	೧೪–೧೪೯
ಅಧ್ಯಕ್ಷೋಽಹಮಿತಿ ಜ್ಞಾನಂ	೧೪–೧೩೪
ಅನವಸ್ಥಾನ್ತರತ್ವಾಚ್ಚ	೧೬–೫೭
ಅನಾದಿತೋ ನಿರ್ಗುಣತೋ	೧೦–೭
ಅನಿತ್ಯಾ ಸಾವಿಶುದ್ಧೇತಿ	೧೩–೯
ಅನುಭೂತೇಃ ಕಿಮನ್ಯಸ್ಮಿನ್	೧೪–೧೪೪
ಅನೇಕಜನ್ಮಾನ್ತರಕರ್ಮಜ್ಞಾತೈಃ	೧೬–೭೧
ಅನ್ಯಚ್ಚೇತ್ಸದಹಂಗ್ರಾಹ–	೧೪–೧೦೩
ಅನ್ಯದೃಷ್ಟಿಃ ಶರೀರಸ್ಥಃ	೧೭–೫೬
ಅನ್ಯದೃಷ್ಟಿಸ್ತ್ವವಿದ್ಯಾಸ್ಯಾತ್	೧೭–೭
ಅನ್ಯೋನ್ಯಾಪೇಕ್ಷಯಾ ತೇಷಾಂ	೧೪–೧೯
ಅನ್ವಯವ್ಯತಿರೇಕಾಭ್ಯಾಂ (ನೈ.ವಾ.)	೧೪–೧೪೩
ಅನ್ವಯವ್ಯತಿರೇಕೋಕ್ತಿಃ	೧೪–೧೭೩
,, ,,	೧೪–೧೭೪॥
ಅನ್ವಯವ್ಯತಿರೇಕೌ ಹಿ (ನೈ.)	೧೪–೯೩
ಅನ್ವಯಿನಾ ಗ್ರಾಹಕಸ್ತೇಷಾಮ್	೧೪–೭೨
ಅಪಾಯೋದ್ಭೂತಿಹೀನಾಭಿಃ	೧೭–೫೫
ಅಪಿ ನಿರ್ದ್ವೇಷಪತ್ತೇಶ್ಚ	೧೬–೬೬
ಅಪೇಕ್ಷಾ ಯದಿ ಭಿನ್ನೇಽಪಿ	೧೬–೨೪
ಅಪೋಹೋ ಯದಿ ಭಿನ್ನಾನಾಮ್	೧೪–೧೪೩॥
ಅಪ್ರಕಾಶೋ ಯಥಾದಿತ್ಯೇ–	೧೬–೩೭

ಅಪ್ರಾಣಸ್ಯ ನ ಕರ್ಮಾಸ್ತಿ	೧೩-೨
ಅಪ್ರಾಣಸ್ಯಾಮನಸ್ಕಸ್ಯ	೧೪-೩೪
ಅಪ್ರಾಪ್ಯೈವ ನಿವರ್ತನ್ತೇ	೧೫-೩೧
ಅಭಾವರೂಪಂ ತ್ವಮಸೀಹ	೧೯-೮
ಅಭಿನ್ನೋಽಪಿ ಹಿ ಬುದ್ಧಾತ್ಮಾ(ವಾ)	೧೮-೧೩೯
ಅಭಿಯುಕ್ತ ಪ್ರಸಿದ್ಧಿಶ್ಚೇತ್	೧೮-೬೦
ಅಮನಸ್ಕಸ್ಯ ಕಾ ಚಿನ್ತಾ	೧೪-೩೮
ಅಮನಸ್ಕಸ್ಯ ಶುದ್ಧಸ್ಯ	೧೩-೧೫
ಅಮೂರ್ತಮೂರ್ತಾನಿ	೧೪-೪೮
ಅಮತಂ ಚಾಭಯಂ ನಾರ್ತಂ	೧೧-೧೬
ಅಮೃತತ್ವಂ ಶ್ರುತಂ ಯಸ್ಮಾತ್	೧-೩೧
ಅಶ್ನೀ ದುಃಖೀ ಚ ಯಃ	೧೮-೭೪
ಅಲುಪ್ತಾ ತ್ವಾತ್ಮನೋ ದೃಷ್ಟಿಃ	೧೨-೧೫
ಅವಗತ್ಯಾ ಹಿ ಸಂವ್ಯಾಪ್ತಃ	೧೮-೧೧೫
ಅವಿಕಲ್ಪಂ ತದಸ್ತ್ಯೇವ	೧೬-೧೬
ಅವಿದ್ಯಯಾ ಭಾವನಯಾ ಚ	೧೦-೯
ಅವಿದ್ಯಾಪ್ರಭವಂ ಸರ್ವಂ	೧೭-೨೦
ಅವಿದ್ಯಾಬದ್ಧಚಕ್ಷುಷ್ಟ್ವಾತ್ (ನೈ.)	೧೮-೧೬೮
ಅವಿದ್ಯಾಮಾತ್ರ ಏವಾತಃ	೧೮-೪೩
ಅವಿವಿಚ್ಯೋಭಯಂ ವಕ್ತಿ (ನೈ.)	೧೮-೭೫॥
ಅವಿನೇಕಾತ್ ಪರಾಭಾವಂ	೭-೬
ಅವೇದ್ಯಮೇಕಂ ಯದನನ್ಯವೇದಿನಾಂ	೧೯-೨೬
ಅಶನಾಯಾದಿ ನಿರ್ಮುಕ್ತಃ	೧೮-೧೯೬
ಅಶನಾಯಾದಿನಿರ್ಮುಕ್ತೈಃ [illegible]	೧೮-೧೮೦
ಅಶನಾಯಾದ್ಯತಿಕ್ರಾನ್ತಮ್	೧೪-೧೨
ಅಶಬ್ದಾದಿತ್ವತೋ ನಾಸ್ಯ	೧೭-೪೩
ಅಸತ್ಸಮಂ ಚೈವ ಸದಿತ್ಯಪೀತಿ	೧೯-೧೬
ಅಸದೇತತ್ ತತೋ ಯುಕ್ತಮ್	೧೭-೧೩
ಅಸದ್ದ್ವಯಂ ತೇಽಪಿ ಹಿ	೧೯-೧೪
ಅಸಮಾಧಿಂ ನ ಪಶ್ಯಾಮಿ	೧೪-೩೫
ಅಸಿದ್ಧಿತಶ್ಚಾಪಿ	೧೯-೧೭
ಅಸ್ತಿ ತಾವತ್ ಸ್ವಯಂ ನಾಮ	೧೬-೪೧
ಅಸ್ಪರ್ಶತ್ವಾದದೇಹತ್ವಾತ್	೧೮-೧೫೯
ಅಸ್ಪರ್ಶತ್ವಾನ್ನ ಮೇ ಸ್ಪೃಷ್ಟಿಃ	೧೩-೫
ಅಸ್ಪರ್ಶೋಽಪಿ ಯಥಾಸ್ಪರ್ಶಂ	೧೮-೧೬೨
ಅಹಂಶಬ್ದಸ್ಯ ನಿಷ್ಠಾಯಾ (ನೈ.)	೧೮-೯೮
ಅಹಂ ಕರ್ತಾ ಮಮೇದಂ ಸ್ಯಾತ್	೧-೧೩
ಅಹಂ ಕರ್ತ್ರಾತ್ಮನಿ ಸ್ಯಸ್ತಮ್	೧೮-೨೫
ಅಹಂಕಾರಾದಿಸನ್ತಾನಃ	೧೮-೩೫
ಅಹಂಕೃತ್ಯಾತ್ಮನಿರ್ಭಾಸೋ	೧೮-೩೨
ಅಹಂಕ್ರಿಯಾದ್ಯಾಹಿ	೧೪-೪೩
ಅಹಂಧೀರದಮಾತ್ಮೇತ್ಥಾ	೨-೨
ಅಹಂ ನಿರ್ಮುಕ್ತ ಇತ್ಯೇವ	೧೪-೨೦೭
ಅಹಮಜ್ಞಾನಿಷಂ ಚೇದಂ	೧೮-೧೨೫
ಅಹಮಿತ್ಯಾತ್ಮಧೀರ್ಯಾ ಚ	೧೪-೨೯
ಅಹಮೇವ ಚ ಭೂತೇಷು	೧೭-೬೯
ಅಹಮೇವ ಪರಾತ್ಮಜ್ಞಃ	೧೭-೭೪
ಅಹಂ ಪರಂ ಬ್ರಹ್ಮ	೧೦-೧೦
ಅಹಂಪ್ರತ್ಯಯಬೀಜಂ	೪-೧
ಅಹಂ ಬ್ರಹ್ಮಾಸ್ಮಿ ಕರ್ತಾ ಚ	೧೧-೪
ಅಹಂ ಬ್ರಹ್ಮಾಸ್ಮಿ ಸರ್ವೋಽಸ್ಮಿ	೧೩-೧೪
ಅಹಂ ಮಮೇತಿ ತ್ವಮದರ್ಥಮ್	೧೯-೨
ಅಹಂ ಮಮೇತ್ಯೇಷಣ-	೧೪-೪೨
ಅಹಂ ಮಮ್ಯೈಕೋ ನ	೪-೪
ಆತ್ಮಜ್ಞಸ್ಯಾಪಿ ಯಸ್ಯ ಸ್ಯಾತ್	೧೪-೧೪
ಆತ್ಮನೀಹ ತಥಾಧ್ಯಾಸಃ	೧೪-೨೨
ಆತ್ಮನೋ ಗ್ರಹಣೇ ಚಾಪಿ	೧೪-೧೨೪
ಆತ್ಮನೋಽನ್ಯಸ್ಯ ಚೇದ್ಧರ್ಮಾಃ	೩-೨
ಆತ್ಮಪ್ರತ್ಯಯಿಕಾ ಹ್ಯೇಷಾ	೧೭-೪೪
ಆತ್ಮಬುದ್ಧಿಮನಶ್ಚಕ್ಷು	೧೫-೩೫
,,	೧೬-೧೯
ಆತ್ಮರೂಪವಿಧೇಃ ಕಾರ್ಯವ್	೧೭-೪೯
ಆತ್ಮಲಾಭಃ ಪರೋ ಲಾಭಃ	೧೬-೪೪
ಆತ್ಮಾಗ್ನೇರಿನ್ದ್ರನಾ ಬುದ್ಧಿಃ	೧೫-೨೧
ಆತ್ಮಾ ಜ್ಞೇಯಃ ಪರೋ ಹ್ಯಾತ್ಮಾ	೧೭-೧
ಆತ್ಮಾನಂ ಸರ್ವಭೂತಸ್ಥಂ	೧೪-೪೨
ಆತ್ಮಾಭಾಸಸ್ತು ತಿಙ್ಮಾತ್ರೋ	೧೪-೫೧
ಆತ್ಮಾಭಾಸಾಪರಿಜ್ಞಾನಾತ್	೧೪-೪೬
ಆತ್ಮಾಭಾಸಾಶ್ರಯಶ್ಚಾತ್ಮಾ	೧೪-೪೪॥
ಆತ್ಮಾಭಾಸಾಶ್ರಯಶ್ಚೈವಂ	೧೪-೪೧
ಆತ್ಮಾಭಾಸೋ ಯಥಾಽಜ್ಞಿತ್	೧೪-೩೦
ಆತ್ಮಾರ್ಥತ್ವಾಚ್ಚ ಸರ್ವಸ್ಯ	೧೬-೪೩

ಆತ್ಮಾರ್ಥೋಽಪಿ ಹಿ ಯೋ ಲಾಭಃ	೧೭_೫
ಆತ್ಮಾಪ್ರತ್ಯಯೈಃ ಸ್ಪೈಃ	೧೪_೪೫
ಆತ್ಮಾ ಹ್ಯಾತ್ಮೀಯ ಇತ್ಯೇಷ	೧೪_೧೯
ಆತ್ಮೈಕಃ ಸರ್ವಭೂತೇಷು	೧೫_೯
ಆದರ್ಶಮುಖಸಾಮಾನ್ಯಮ್	೧೪_೬೧
ಆದರ್ಶಸ್ತು ಯದಾಭಾಸೋ	೧೪_೧೦೬
ಆದರ್ಶಾನುವಿಧಾಯಿತ್ವಮ್	೧೪_೬೪
ಆಧಾರಸ್ಯಾಪ್ಯಸತ್ತ್ವಾಚ್ಚ	೧೬_೨೬
ಆಧಿಭೇದಾದ್ಯಥಾ ಭೇದೋ	೧೪_೧೧೯
ಆಪೇಷಾತ್ ಪ್ರತಿಬುದ್ಧಸ್ಯ	೧೧_೧೨
ಆಭಾಸಸ್ತದಭಾವಶ್ಚ	೧೪_೪೧
ಆಭಾಸೋ ಯತ್ರ ತತ್ರೈವ	೧೪_೨೯
ಆರಬ್ಧಸ್ಯ ಫಲೇ ಹ್ಯೇತೇ	೪_೪
ಆಲೋಕಸ್ಥೋ ಘಟೋ ಯದ್ವತ್	೧೪_೧೫೧
ಇತರೇತರಹೇತುತ್ವೇ	೧೬_೪೬
ಇತಿ ಪ್ರಣುನ್ನಾ ದ್ವ್ಯವಾದಿ_	೧೬_೬೪
ಇತೀದಮುಕ್ತಂ ಪರಮಾರ್ಥ_	೧೦_೧೪
ಇತೋಽನ್ಯೋಽನುಭವಃ ಕಶ್ಚಿತ್	೧೪_೨೧೦
ಇತ್ಯೇತದ್ಯಾಯದಜ್ಞಾತಂ	೧೩_೧೫॥
ಇತ್ಯೇವಂ ಸರ್ವದಾತ್ಮಾನಂ	೧೩_೨೫
ಇತ್ಯೇವಂ ಕೇಚಿದಿಚ್ಛನ್ತಿ	೧_೧೧
ಇತ್ಯೇವಂ ಪ್ರತಿಪತ್ತಿಃ ಸ್ಯಾತ್	೧೪_೧೦೬॥
ಇದಂ ರಹಸ್ಯಂ ಪರಮಂ	೧೬_೭೦
ಇದಂ ವನಮತಿಕ್ರಮ್ಯ	೨_೪
ಇದಂ ತು ಸತ್ಯಂ ಮಮ	೧೦-೬
ಇದಂ ಪೂರ್ವಮಿದಂ ಪಶ್ಚಾತ್	೧೪_೧೭೦
ಇದಮಂಶೋಽಹಮಿತ್ಯತ್ರ	೬_೬
ಇಹೈವ ಘಟತೇ ಪ್ರಶ್ನೋ	೧೪_೨೦೬
ಈಕ್ಷತೇರ್ನಾಶಬ್ದಂ	೧೧-೧
ಈಶ್ವರತ್ವೇನ ಕಂ ತಸ್ಯ	೧೪-೨೪
ಈಶ್ವರಶ್ಚೇದನಾತ್ಮಾ ಸ್ಯಾತ್	೩_೧
ಉತ್ಪಾದ್ಯಾಪ್ಯವಿಕಾರಾಣಿ (ವಾ)	೧೭_೫೦
ಉಪಲಬ್ಧಿಃ ಸ್ವಯಂಜ್ಯೋತಿ	೧೪_೨೬
ಏತಾವದ್ಧ್ಯಮೃತತ್ವಂ ನ	೧೧_೨
ಏತೇನೈವಾತ್ಮನಾತ್ಮಾನೋ	೧೬_೧೪
ಏವಂ ಚ ನೇತಿನೇತ್ಯರ್ಥಂ	೧೪_೧೪೪॥
ಏವಂ ತತ್ತ್ವಮಸೀತ್ಯಸ್ಯ	೧೪_೧೪೯
ಏವಂ ವಿಜ್ಞಾತವಾಚ್ಯಾರ್ಥೇ (ನೈ)	೧೪_೯೬
ಏಷಂ ಶಾಸ್ತ್ರಾನುಮಾನಾಭ್ಯಾಂ	೧೨_೧೪
ಕಥಂ ಹೀದಂ ನಿವರ್ತೇತ	೧೪_೨೦೪
ಕರಣಂ ಕರ್ಮ ಕರ್ತಾ ಚ	೧೪_೪
ಕರ್ತಾ ದುಃಖ್ಯಹಮಸ್ಮೀತಿ	೧೪_೨೦೨
ಕುರು ಭೋಕ್ತೇತಿ ಯಚ್ಛಾಸ್ತ್ರಂ	೧೪-೪
ಕರ್ತೃಕರ್ಮಫಲಾಭಾವಾತ್	೧೪_೧೪
ಕರ್ತೃತ್ವಂ ಕಾರಕಾಪೇಕ್ಷಂ	೧೨_೧೭
ಕರ್ತ್ರಾ ಚೇದಹಮಿತ್ಯೇವಂ	೧೪-೧೫೫
ಕರ್ಮಕಾರ್ಯಸ್ತ್ವನಿತ್ಯಃ ಸ್ಯಾತ್	೧೭-೭॥
ಕರ್ಮಸ್ಥಾತ್ಮಾ ಸ್ವತನ್ತ್ರಶ್ಚೇತ್	೧೫-೭
ಕರ್ಮಾಣಿ ದೇಹಯೋಗಾರ್ಥಂ	೧_೩
ಕರ್ಮೇಪ್ಸಿತತಮತ್ವಾತ್ಸ-	೧೪_೧೧೬
ಕಲ್ಪ್ಯೋಪಾಧಿಭೇದೈವ್ಯೇತತ್	೧೭_೧೬
ಕಾರಕಾಣ್ಯುಪಮೃದ್ನಾತಿ	೧_೧೪
ಕಿಂ ಸದೇವಾಹಮಸ್ಮೀತಿ	೧೪_೧೨
ಕಿಮಜ್ಞಂ ಗ್ರಾಹಯೇತ್ ಕಶ್ಚಿತ್	೧೪_೧೨೩
ಕುಣ್ಡಲ್ಯಹಮಿತಿ ಹ್ಯೇತತ್	೧೪_೧೬೦
ಕೂಟಸ್ಥೇಽಪಿ ಫಲಂ ಯೋಗ್ಯಂ	೧೪_೧೦೫
ಕೃತಕೃತ್ಯಶ್ಚ ಸಿದ್ಧಶ್ಚ	೧೩_೨೬
ಕೃಪಣಾಸ್ತ್ರೋಽನ್ಯಥೈವಾತೋ	೧೭_೭೫
ಕೃಷ್ಣಲಾದೌ ಪ್ರಮಾ ಜನ್ಮ	೧೪_೧೪೬
ಕೃಷ್ಣಾಯೋಲೋಹಿತಾಭಾಸಮ್	೧೪_೪೩
ಕೃಷ್ಣಾದಿವತ್ ಫಲಾರ್ಥತ್ವಾತ್	೧_೨೩
ಕೇವಲಾಂ ಮನಸೋ ವೃತ್ತಿಂ	೧೭_೩೭
ಕೋಶಾದಿವ ವಿನಿಷ್ಕೃಷ್ಟಃ	೧೧_೧೧
ಕ್ರಿಯೋತ್ಪತ್ತೌ ವಿನಾಶಿತ್ವಂ	೧೬_೫೦
ಕ್ಷಣವಾಚ್ಯೋಽಪಿ ಯೋರ್ಥಃ ಸ್ಯಾತ್೧೪_೧೪೨॥	
ಕ್ಷಣಿಕಂ ಹಿ ತದತ್ಯರ್ಥಂ	೧೬_೨೩
ಕ್ಷೀರಾತ್ ಸರ್ಪಿರ್ಯಥೋದ್ಧೃತ್ಯ	೧೭_೬೧
ಕ್ಷುಧಯಾ ಪೀಡ್ಯಮಾನೋಽಪಿ (ನೈ)	೧೪_೪೨೦
ಖಮಿವೈಕರಸಾ ಜ್ಞಪ್ತಿಃ	೧೫_೧೫
ಗನ್ತವ್ಯಂ ಚ ತಥಾ ನೈವ	೧೪_೪೬
ಗುಣಾನಾಂ ಸಮಭಾವಸ್ಯ	೧೬_೪೫
ಘಟಾದಿರೂಪಂ ಯದಿ ತೇನ	೧೪_೪೬

ಘ್ರಾಣಾದೀನಿ ತದರ್ಥಾಶ್ಚ ೧೬-೨
ಚಕ್ಷುರ್ಯುಕ್ತಾ ಧಿಯೋ ವೃತ್ತಿಃ ೧೭-೩೬
ಚಕ್ಷುರ್ವತ್ ಕರ್ಮಕರ್ತೃತ್ವಂ ೧೬_೧೦
ಚಿತಿಸ್ವರೂಪಂ ಸ್ವತ ಏವ ೬_೧
ಚಿತ್ತಂ ಚೇತನಮಿತ್ಯೇತದ್ ೧೮_೪೫
ಚಿತ್ತೇ ಹ್ಯಾದರ್ಶವದ್ಯಸ್ಮಾತ್ ೧೭_೨೨
ಚಿನ್ಮಾತ್ರಜ್ಯೋತಿಷಾ ಸರ್ವಾಃ ೧೪-೭
ಚಿನ್ಮಾತ್ರಜ್ಯೋತಿಷೋ ನಿತ್ಯಂ ೧೪-೩೭
ಚೇತನಸ್ತ್ವಂ ಕಥಂ ದೇಹ ೧೪-೧೨೩
ಚೇತನೋಽಚೇತನೋ ವಾಪಿ ೧೫-೪೦
ಚೇಷ್ಟಿತಂ ಚ ತಥಾ ಮಿಥ್ಯಾ ೧೪_೧೨
ಚೈತನ್ಯಂ ಸರ್ವಗಂ ಸರ್ವಂ ೧_೧
ಚೈತನ್ಯಪ್ರತಿಬಿಂಬೇನ ೫-೪
ಚೈತನ್ಯಭಾಸ್ಯತಾಪನ್ನಃ ೫-೫
ಚೈತನ್ಯಾಭಾಸತಾ ಬುದ್ಧೇಃ ೧೪-೪೪
ಛಾಯಾಕ್ರಾನ್ತೇರ್ನಿಷೇಧೋಽಯಂ ೧೪-೩೯
ಛಾಯಾಪನ್ನೇ ಹ್ಯವಸ್ತುತ್ವಂ ೧೪-೩೫॥
ಛಿತ್ತ್ವಾತ್ಮಕ್ತೇನ ಹಸ್ತೇನ (ನೈ.) ೬_೧
ಜನಿಮಜ್ಜ್ಞಾನವಿಜ್ಞೇಯಮ್ ೯-೭
ಜನ್ಮವ್ಯತ್ಯುಪ್ರವಾಹೇಷು ೧೫_೫೨
ಜಾಗ್ರತಶ್ಚ ತಥಾ ಭೇದೋ ೧೭_೧೬॥
ಜಾಗ್ರತ್ಸ್ವಪ್ನೌ ತಯೋರ್ಬೀಜನು ೧೬-೧೭
ಜಾತಿಕರ್ಮಾದಿಮತ್ತ್ವಾದ್ಧಿ ೧೪-೨೪
ಜಾತ್ಯಾದೀನ್ ಸಂಪರಿತ್ಯಜ್ಯ ೧೫-೮
ಜಿಘತ್ಸಾ ವಾ ಪಿಪಾಸಾ ವಾ ೧೩-೪
ಜೀವಶ್ಚೇತ್ ಪರಮಾತ್ಮಾನಂ ೧೭_೭೩
ಜ್ಞಾತತಾ ಸ್ವಾತ್ಮಲಾಭೋ ವಾ ೧೪_೧೩೩
ಜ್ಞಾತಾಯತ್ನೋಽಪಿ ತದ್ವಜ್ಜ್ಞಃ ೧೫-೪೭॥
ಜ್ಞಾತುಜ್ಞಾತಿರ್ಹಿ ನಿತ್ಯೋಕ್ತಾ ೯_೮
ಜ್ಞಾತುರ್ಜ್ಞೇಯಃ ಪರೋ ಹ್ಯಾತ್ಮಾ ೧೪_೧೭
ಜ್ಞಾತೃತ್ವಾತ್ಮಾ ಸದಾಗ್ರಾಹ್ಯೋ (ನೈ.) ೬_೪
ಜ್ಞಾತೃತ್ವಾಹಮವಿಜ್ಞೇಯಃ ೧೩_೧೪
ಜ್ಞಾನಂ ಜ್ಞೇಯಂ ತಥಾ ಜ್ಞಾತಾ ೧೭_೨೪೮
ಜ್ಞಾನಜ್ಞೇಯಾದಿವಾವೇಶತಃ ೧೪-೧೬೫
ಜ್ಞಾನಯತ್ನಾದ್ಯನೇಕತ್ವಂ ೧೬-೧೧
ಜ್ಞಾನೇನೈನ ವಿಶೇಷ್ಯತ್ವಾತ್ ೧೬-೫೪

ಜ್ಞಾನ್ಯೇಕಾರ್ಥಪರತ್ವಾತ್ ತಂ ೧೭-೯
ಜ್ಞೈಕದೇಶೋ ವಿಕಾರೋ ವಾ ೧೪-೩೪
ಜ್ಯೋತಿಷೋ ದ್ಯೋತಕತ್ವೇಽಪಿ ೧೬-೧೨
ತಚ್ಛಬ್ದಃ ಪ್ರತ್ಯಗಾತ್ಮಾರ್ಥಃ ೧೪-೧೪೪
ತಂ ಚ ಮೂಢಂ ಚ ಯದ್ಯನ್ಯಂ ೧೨-೭
ತತ್ತ್ವಮಸ್ಯಾದಿವಾಕ್ಯೇಷು ೧೪_೧೭೪
ತತ್ತ್ವಮೋಸ್ತುಲ್ಯನೀಡಾರ್ಥಮ್ ೧೪-೧೪೭॥
ತತ್ರೈವಂ ಸಂಭವತ್ಯರ್ಥೇ ೧೪_೧೭೬
ತತ್ರೈವಂ ಸತಿ ಬುದ್ಧ್ವೀಜ್ಞಃ ೧೫_೨೭
ತಥಾ ಧ್ರುವಫಲಾ ವಿದ್ಯಾ ೧_೧೦॥
ತಥಾನ್ಯೇನ್ದ್ರಿಯಯುಕ್ತಾ ಯಾ ೧೩_೭
ತಥಾನ್ಯೇಷಾಂ ಚ ನಿಮಿತ್ತತ್ವಾತ್ ೧೬_೫೩
ತಥಾವಿಕ್ರಿಯರೂಪತ್ವಾತ್ ೧೬-೩೪
ತಥೈವ ಚೇತನಾಭಾಸಂ ೧೪-೪೪
ತದಪ್ಯಸ್ತ್ವಿತಿ ಚೇತ್ ತನ್ನ ೧೪-೪೬
ತದಾ ತು ದೃಶ್ಯತೇ ದುಃಖಂ ೧೪-೧೬೪
ತದೇವೈಕಂ ತ್ರಿಧಾ ಜ್ಞೇಯಂ ೧೭_೨೭
ತದ್ವಿಜ್ಞಾನಾಯ ಯುಕ್ತ್ಯಾದಿ ೧೪_೨೦೩
ತಸ್ಮಾಜ್ಜ್ಞಾಭಾಸಬುದ್ಧೀನಾಂ ೧೪_೬೭
ತಸ್ಮಾತ್ತ್ವತ್ಕೃತ್ತೇನ ಹಸ್ತೇನ (ನೈ.ನಾ.) ೬-೨
ತಸ್ಮಾದಜ್ಞಾನಹಾನಾಯ ೧೬-೨೫
ತಸ್ಮಾದಸುಭವಾಯೈವ ೧೪_೧೪
ತಸ್ಮಾದಾದ್ಯನ್ತವಮಧ್ಯೇಷು ೧೪-೧೯೦
ತಸ್ಮಾದ್ಬ್ರಾನ್ತಿರತೋಽನ್ಯಾ ಹಿ ೧೬-೬೪
ತಸ್ಮಾದ್ವಾಕ್ಯಾರ್ಥವಿಜ್ಞಾನಾತ್ ೧೪-೩೧೪
ತಸ್ಮಾನ್ನೀಲಂ ತಥಾ ಪೀತಂ ೧೪-೧೪೬
ತಸ್ಯೈವಾಜ್ಞತ್ವಮಿಷ್ಟಂ ಚೇತ್ ೧೪-೧೩೫
ತಾಪಾನ್ತ ತ್ವಾದನಿತ್ಯತ್ವಾತ್ ೧೭_೫೧
ತುಲ್ಯಕಾಲಸಮುದ್ಭೂತೌ ೧೬-೩೯
ತ್ವಂ ಕುರು ತ್ವಂ ತದೇವೇತಿ ೧೨-೪
ತ್ವಂಪದಾರ್ಥವಿವೇಕಾಯ ೧೪-೨೧೧
ತ್ವಂಸತೋಸ್ತುಲ್ಯನೀಡತ್ವಾತ್ ೧೪-೧೬೪॥
ತ್ವಮರ್ಥಂ ಪ್ರತ್ಯಗಾತ್ಮಾನಂ ೧೪_೨೧೨
ತ್ವಮಿತ್ಯಧ್ಯಕ್ಷನಿಷ್ಠಶ್ಚೇತ್ ೧೪-೨೭
ತ್ವಯಿ ಪ್ರಶಾನ್ತೇ ನ ಹಿ ೧೯_೫
ದಕ್ಷಿಣಾಕ್ಷಿಪ್ರಧಾನೇಷು ೧೫-೨೨

ದಗ್ಧೈವಮುಷ್ಣಃ ಸತ್ತಾಯಾಮ್	೧೫-೪೭	ಧರ್ಮಾಧರ್ಮಫಲೈರ್ಯೋಗಃ	೧೧-೯
ದದತಶ್ಚಾತ್ಮನೋ ಜ್ಞಾನಂ	೧೭-೪೭	ಧರ್ಮಾಧರ್ಮವಿನಿರ್ಮುಕ್ತಮ್	೧೭-೭೮
ದಶಮಸ್ತ್ವಮಸೀತ್ಯೇವಂ	೧೪-೧೬॥	ಧರ್ಮಾಧರ್ಮೌ ತತೋಽಜ್ಞಸ್ಯ	೧-೪
,, ,,	೧೪-೧೬೯	ಧೀರೇವಾರ್ಥಸ್ವರೂಪಾ ಹಿ	೧೪-೫
ದಶಮಸ್ಯ ನವಾತ್ಮತ್ವ	೧೧೨-೩	ಧ್ಯಾಯತೀತ್ಯವಿಕಾರಿತ್ವಂ	೧೭-೩೮
ದಶಾಪಾಶೌಚಕಾರ್ಯಾಣಾಂ	೧೭-೪೭	ಧ್ರುವಾ ಹ್ಯನಿತ್ಯಾಶ್ಚ ನ ಚಾನ್ಯ-	೧೯-೨೪
ದಾಹಚ್ಛೇದವಿನಾಶೇಷು	೧೪-೧೫೪	ನ ಚಾಸ್ತಿ ಶಬ್ದಾದಿರನನ್ಯ-	೧೪-೪೧
ದುಃಖೀ ಸ್ಯಾದ್ದುಃಖ್ಯಹಂ-	೧೬-೯	ನ ಚೇತ್ ಸ ಇಷ್ಟಃ ಸದಸತ್-	೧೯-೨೨
ದುಃಖೀತ್ಯೇತದಪೋಹೇನ	೧೪-೧೭೫॥	ನ ಚೇದ್ಭೂಯಃ ಪ್ರಸೂಯೇತ	೧-೧೯
ದೃಶಿರೂಪೇ ಸದಾ ನಿತ್ಯೇ	೧೨-೯	ನ ತತೋಽಮೃತತಾ ಶಾಸ್ತಿ	೧೧-೧೫
ದೃಶಿರೇವಾನುಭೂಯೇತ	೧೪-೧೯೫	ನ ತಸ್ಯೈವಾನ್ಯತೋಽಪೇಕ್ಷಾ	೧೫-೪೨
ದೃಶಿಸ್ತು ಶುದ್ಧೋಽಹಮ್	೧೦-೨	ನ ದೃಶೇರವಿಕಾರಿತ್ವಾತ್	೧೪-೪೨
ದೃಶಿಸ್ವರೂಪಂ ಗಗನೋಪಮಮ್	೧೦-೧	ನ ದೃಷ್ಟಿರ್ಲುಪ್ಯತೇ ದ್ರಷ್ಟುಃ	೧೫-೧೪
ದೃಶಿಸ್ವರೂಪೇಣ ಹಿ	೧೪-೪೪	ನನು ಕರ್ಮ ತಥಾ ನಿತ್ಯಂ	೧-೪
ದೃಶೇಶ್ಚಾಯಾ ಯದಾಭೂಢಾ	೧೨-೬	ನನು ಧ್ರುವಫಲಾ ವಿದ್ಯಾ	೧-೧೦
ದೈಶ್ಯತ್ವಾದಹಮಿತ್ಯೇಷ (ನೈ. ೧)	೧೫-೧೬	ನನ್ವಸ್ತಿ ತ್ವಾದಯೋ ಧರ್ಮಾಃ	೧೪-೧೪೧
ದೃಷ್ಟಂ ಹಿತ್ವಾ ಸ್ಮೃತಿಂ ತಸ್ಮಿನ್	೧೫-೩೩	ನನ್ವೇವಂ ದೃಶಿಸಜ್ಞಾಸ್ತಿಃ	೧೪-೪೨
ದೃಷ್ಟಂ ಚಾಪಿ ಯಥಾ ರೂಪಂ	೧೭-೧೨	ನ ಪ್ರಕಾಶ್ಯಂ ಯಥೋಷ್ಣತ್ವಂ	೧೬-೫೧
ದೃಷ್ಟಂ ಜಾಗರಿತಂ ವಿದ್ಯಾತ್	೧೭-೨೫	ನ ಪ್ರಿಯಾಪ್ರಿಯ ಇತ್ಯುಕ್ತೇಃ	೧೫-೬
ದೃಷ್ಟವಚ್ಚೇತ್ಪ್ರರೋಹಃ ಸ್ಯಾತ್	೪-೨	ನ ಬಾಹ್ಯಂ ಮಧ್ಯತೋವಾನ್ತಃ	೧೭-೭೦
ದೃಷ್ಟಿಃ ಶ್ರುತಿರ್ಮತಿರ್ಜ್ಞಾತಿಃ	೧೪-೨೬	ನ ಬುದ್ಧೇರವಭೋಧೋಽಸ್ತಿ	೧೪-೫೨
ದೃಷ್ಟಿಃ ಸ್ಪೃಷ್ಟಿಃ ಶ್ರುತಿರ್ಘ್ರಾತಿಃ	೧೭-೫೪	ನ ಬುದ್ಧೇರ್ಬುದ್ಧಿವಾಚ್ಯತ್ವಂ	೧೪-೫೪
ದೃಶ್ಯಾತ್ವ ಬಾಹ್ಯಂ ನಿಮಿಲ್ಯಾಥ	೧೭-೫೭	ನ ಮೇಽಸ್ತಿ ಕಶ್ಚಿನ್ನ ಚ-	೧೯-೧೨
ದೇಹಲಿಙ್ಗಾತ್ಮನಾ ಕಾರ್ಯಾ	೧೧-೧೪	ನ ಮೇಽಸ್ತಿ ಮೋಹಸ್ತವ	೧೯-೬
ದೇಹಾತ್ಮಜ್ಞಾನವಜ್ಜ್ಞಾನಂ	೪-೫	ನ ಮೇ ಹೇಯಂ ನ ಚಾಹೇಯಂ	೧೩-೨೪
ದೇಹಾತ್ಮಬುದ್ಧ್ಯಪೇಕ್ಷತ್ವಾತ್	೧೨-೧೬	ನ ಯೇಷಾಮೇಕ ಏವಾತ್ಮಾ	೧೪-೫೫
ದೇಹಾದಾವಭಿಮಾನೋತ್ಥೋ	೧೪-೧೫೬	ನವಬುದ್ಧ್ಯಪಹಾರಾದ್ಧಿ (ನೈ)	೧೪-೧೬೭
ದೇಹಾದ್ಯಾರಮ್ಭಸಾಮರ್ಥ್ಯಾತ್	೪-೩	ನ ಸಚ್ಚಾಹಂ ನ ಚಾನಚ್ಚ	೧೩-೨೦
ದೇಹಾದ್ಯೈರವಿಶೇಷೇಣ	೧೮-೧೬	ನ ಸ್ಮರತ್ಯಾತ್ಮನೋ ಹ್ಯಾತ್ಮಾ	೧೪-೧೬
ದೇಹಾಭಿಮಾನಿನೋ ದುಃಖಂ	೧೨-೫	ನ ಸ್ವಯಂ ಸ್ವಸ್ಯ ನಾನ್ಯಸ್ಯ	೧೭-೪೩
ದೇಹೇಽಹಂಪ್ರತ್ಯಯೋ	೧೪-೬೫	ನ ಹಸ್ತೀ ನ ತದಾರೂಢೋ	೧೭-೩೦
ದ್ರಷ್ಟಾ ಚ ದೃಶ್ಯಂ ಚ	೧೯-೯	ನ ಹಿ ದೀಪಾನ್ತರಾಪೇಕ್ಷಾ	೧೭-೪೧
ದ್ರಷ್ಟುಶ್ಚಾನ್ಯದ್ಭವೇದ್ದೃಶ್ಯಂ	೧೫-೪	ನ ಹಿ ಸಿದ್ಧಸ್ಯ ಕರ್ತವ್ಯಮ್	೧೪-೩೦೦
ದ್ರಷ್ಟೃದೃಶ್ಯತ್ವಸಂಬನ್ಧೋ	೧೪-೨೭॥	ನ ಹೇಹ ಲಾಭೋಽಭ್ಯಧಿಕೋಽಸ್ತಿ	೧೬-೨೪
ದ್ರಷ್ಟೃಶ್ರೋತೃ ತಥಾ ಮನ್ತೃ	೧೪-೩೦	ನ ಹ್ಯಜಾತ್ಮಾದಿಸಾನ್ ಕಶ್ಚಿತ್	೧೪-೨೪॥
ದ್ವಯೋರೇವೇತಿ ಚೇತ್ತನ್ನ	೧೪-೪೭॥	ನಾತ್ಮಾಧಾನತ್ವಸಿದ್ಧಿಶ್ಚೇತ್	೧೪-೧೧೨

ನಾದ್ರಾಕ್ಷಮಹಮಿತ್ಯಸ್ಮಿನ್ (ನೈ.) ೧೮-೯೪
ನಾನಯೋರ್ದ್ವಾ ಪ್ಯಾಶ್ರಯತ್ವಂ ಚ ೧೮-೫೮
ನಾನ್ಯದನ್ಯಪ್ಪವೇದ್ಯಸ್ಮಾತ್ ೧೫-೧
ನಾನ್ಯೇನ ಜ್ಯೋತಿಷಾ ಕಾರ್ಯಮ್ ೧೫-೪೧
ನಾಸ್ಯತೋ ಭಾವಶಬ್ದೇನ ೧೮-೫೩
ನಾಮರೂಪಕ್ರಿಯಾಭ್ಯೋಽನ್ಯೋ ೧೧-೭
ನಾಮಾದಿಭ್ಯಃ ಪರೇ ಭೂಮ್ನಿ ೧೭_೬೪
ನಾಹೋರಾತ್ರೇ ಯಥಾ ಸೂರ್ಯೇ ೧೫_೫೦
ನಿತ್ಯಮುಕ್ತಃ ಸದೇವಾಸ್ಮಿ ೧೮-೩
ನಿತ್ಯಮುಕ್ತತ್ವವಿಜ್ಞಾನಂ (ನಾ.ನೈ.) ೧೮-೧೮೨
ನಿತ್ಯಮುಕ್ತಸ್ಯ ಶುದ್ಧಸ್ಯ ೧೩-೩
,, ,, ೧೩-೧೬
ನಿಮಿಷೋನ್ಮೀಲನೇ ಸ್ಥಾನೇ ೧೬-೨೦
ನಿಯೋಗೋಽಪ್ರತಿಪನ್ನತ್ವಾತ್ ೧೮-೧೧
ನಿರ್ಗುಣಂ ನಿಷ್ಕ್ರಿಯಂ ನಿತ್ಯಂ ೧೭_೪೧
ನಿರ್ದುಃಖೋ ನಿಷ್ಕ್ರಿಯೋಽಕಾಮಃ ೧೮_೨೦೪
ನಿವೃತ್ತಾ ಸಾ ಕಥಂ ಭೂಯಃ ೧-೧೪
ನಿಶ್ಚಯಾರ್ಥಾ ಭವೇದ್ಬುದ್ಧಿಃ ೧೬-೪
ನೇತಿನೇತೀತಿ ದೇಹಾದೀನ್ ೧-೧೭
ನೇತಿನೇತ್ಯಾದಿಶಾಸ್ತ್ರೇಭ್ಯಃ ೧೭-೭೧
ನೈಕಕಾರಕಸಾಧ್ಯತ್ವಾತ್ ೧-೨೨
ನೈತದೇವಂ ರಹಸ್ಯಾನಾಮ್ ೧೮-೧೯
ನೈವಂ ಸ್ವಪ್ನೇ ಪೃಥಕ್ಸೃಷ್ಟೇಃ ೧೮-೧೧೪
ನೌಸ್ಥಸ್ಯ ಪ್ರಾತಿಲೋಮ್ಯೇನ ೫-೩
ಪದವಾಕ್ಯಪ್ರಮಾಣಜ್ಞೈಃ ೧೭-೨
ಪರಲೋಕಭಯಂ ಯಸ್ಯ ೧೪-೨೭
ಪರಸ್ಯ ದೇಹೇ ನ ಯಥಾ ೧೬-೭೩
ಪಾರಗಸ್ತು ಯಥಾ ನದ್ಯಾಃ ೧೪-೧೩
ಪಾರ್ಥಿವಃ ಕಠಿನೋ ಧಾತುಃ ೧೬-೧
ಪುತ್ರದುಃಖಿಂ ಯಥಾಧ್ಯಸ್ತಂ ೧೮-೨೦
ಪೂರ್ವಂ ಸ್ಯಾತ್ ಪ್ರತ್ಯಯವ್ಯಾಪ್ತಿಃ ೧೮-೧೫೨
ಪೂರ್ವವೇಹಪರಿತ್ಯಾಗೇ ೧೭_೪೫
ಪೂರ್ವಬುದ್ಧಿಮಬಾಧಿತ್ವಾ ೨-೩
ಪೂರ್ವೋಕ್ತಂ ಯತ್ತಮೋಬೀಜಂ ೧೭-೨೦
ಪೃಷ್ಪಮಾಕಾಙ್ಕ್ಷತಂ ವಾಚ್ಯಂ ೧೮_೨೦೭॥
ಪ್ರಕಾಶಸ್ತಂ ಯಥಾ ದೀಪಂ ೧೩-೧

ಪ್ರಕೃತಿಪ್ರತ್ಯಯಾರ್ಥೌ ಯೌ ೧೮_೪೯
ಪ್ರಜ್ಞಾ ಪ್ರಾಣಾನುಕಾರ್ಯೂತ್ಪಾ ೧೪-೩೩
ಪ್ರತಿಬನ್ಧವಿಹೀನತ್ವಾತ್ ೧೮_೧೧೧
ಪ್ರತಿಲೋಮಮಿದಂ ಸರ್ವಮ್ ೧೮_೯೨
ಪ್ರತಿಷಿದ್ಧೇದಮಂಶೋಜ್ಞಃ ೧೨_೧೧
ಪ್ರತಿಷೇದ್ಧುಮಶಕ್ಯತ್ವಾತ್ ೨_೧
ಪ್ರತ್ಯಕ್ಷಮನುಮಾನಂ ವಾ ೧೮-೧೪೫
ಪ್ರತ್ಯಕ್ಷಾದೀನಿ ಬಾಧೇರನ್ ೧೮_೧೭೭
ಪ್ರತ್ಯಗಾತ್ಮನ ಆತ್ಮತ್ವಂ ೧೮-೧೪೧
ಪ್ರತ್ಯಯಾ ಪ್ರತ್ಯಯಶ್ಚೈವ ೧೮_೧೦೪
ಪ್ರತ್ಯವಾಯಸ್ತು ತಸ್ಯೈವ ೧-೨೪
ಪ್ರಥನಂ ಗ್ರಹಣಂ ಸಿದ್ಧಿಃ ೧೮_೧೨೦
ಪ್ರಧಾನಸ್ಯ ಚ ಪಾರಾರ್ಥ್ಯಂ ೧೬-೪೮
ಪ್ರಬೋಧರೂಪಂ ಮನಸೋ ೧೪_೪೯
ಪ್ರಬೋಧೇನ ಯಥಾ ಸ್ವಾಪ್ನಂ ೧೮-೧೪೬
ಪ್ರಮಥ್ಯ ವಜ್ರೌಪಮಯುಕ್ತಿಭಿಃ ೧೮-೨
ಪ್ರಮಾಣಂ ವೇದ ಏವಾತ್ರ ೧೭_೪
ಪ್ರಯುಜ್ಯ ತೃಷ್ಣಾಜ್ವರ ೧೯-೧
ಪ್ರಶಾನ್ತಚಿತ್ತಾಯ ೧೬_೭೨
ಪ್ರಸನ್ನೇ ವಿಷುಲೇ ವ್ಯೋಮ್ನಿ ೧೪_೨೧
ಪ್ರಸಿದ್ಧಿರ್ಮೂರ್ಧಲೋಕಸ್ಯ ೧೮-೫೯
ಪ್ರಾಗೇನೈತದ್ವಿಧೇಃ ಕರ್ಮ ೧೭_೪೪
ಪ್ರಾಣಾದ್ಯೇವಂ ತ್ರಿಕಂ ಹಿತ್ವಾ ೧೭-೫೮
ಪ್ರಾಪ್ತಶ್ಚೇತ್ ಪ್ರತಿಷಿದ್ಧೇತ ೧೮_೨೩
ಪ್ರಾಮಾಣ್ಯೇಽಪಿ ಸ್ಮೃತೇಃ ಶೈಥ್ಯಾತ್ ೧೮-೧೨೬
ಫಲಾನ್ತಂ ಚಾನುಭೂತಂ ಯತ್ ೧೫-೩
ಫಲೇ ಚ ಹೇತೌ ಚ ಜನೋ ೯-೫
ಬನ್ಧಂ ಮೋಕ್ಷಂ ಚ ಸರ್ವಂ ೧೭_೪೨
ಬಾಧ್ಯತೇ ಪ್ರತ್ಯಯೇನೇಹ ೧೭-೧೫೭
ಬಾಹ್ಯಾಕಾರತ್ವತೋ ಜ್ಞಪ್ತೇಃ ೧೬_೨೫
ಬಿಲಾತ್ ಸರ್ಪಸ್ಯ ನಿರ್ಯಾಣೇ ೧೫-೪೬
ಬೀಜಂ ಚೈಕಂ ಯಥಾಭಿನ್ನಂ ೧೭-೨೮
ಬುದ್ಧಿಸ್ಥಶ್ಚಲತೀವಾತ್ಮಾ (ವಾ) ೫-೨
ಬುದ್ಧೀನಾಂ ವಿಷಯೋ ದುಃಖಂ ೧೮-೧೯೪
ಬುದ್ಧೇಃ ಕರ್ತೃತ್ವಮಧ್ಯಸ್ಯ ೧೮-೬೩

ಬುದ್ಧೇಸ್ತು ಪ್ರತ್ಯಯಸ್ತಸ್ಮಾತ್	೧೪-೬೯
ಬುದ್ಧೌ ಚೇತ್ ತತ್ಕೃತಃ ಕಶ್ಚಿತ್	೧೪-೧೦೯॥
ಬುದ್ಧಾ ದೃಶ್ಯಂ ಭವೇದ್ ಬುದ್ಧೌ	೭-೫
ಬುದ್ಧ್ಯರ್ಥಾನ್ಯಾಹುರೇತಾನಿ	೧೬-೩
ಬುದ್ಧ್ಯಾದೀನಾಮನಾತ್ಮತ್ವಂ	೧೪-೯
ಬುದ್ಧ್ಯಾದೌ ಸತ್ಯುಪಾಧೌ ಚ	೧೪-೩೦
ಬುದ್ಧ್ಯಾರೂಢಂ ಸದಾ ಸರ್ವಂ	೭-೧
,, ,,	೧೪-೯೧
ಬುಭುತ್ಸ್ಯೇರ್ಯದಿ ಚಾನ್ಯತ್ರ	೩-೪
ಬೋಧಸ್ಯಾತ್ಮಸ್ವರೂಪತ್ವಾತ್	೧೬-೬೦॥
ಬೋಧಾತ್ಮಜ್ಯೋತಿಷಾ ದೀಪ್ತಾ	೧೬-೬೦
ಬೌದ್ಧೇಸ್ತು ಪ್ರತ್ಯಯೈರೇವಂ	೧೪-೬೬
ಬ್ರಹ್ಮಾ ದಾಶರಥೇರ್ಯದ್ವತ್	೧೪-೯೭
ಬ್ರಹ್ಮಾದ್ಯಾಃ ಸ್ಥಾವರಾನ್ತಾಯೇ	೯-೪
ಬ್ರಹ್ಮಾಸ್ಮೀತಿ ಚ ವಿದ್ಯೇಯಂ	೧೪-೨೧೫
ಭವಾಭವತ್ವಂ ತು ನ ಚೇತ್	೧೯-೨೦
ಭಾನೋರ್ಬಿಮ್ಬಂ ಯಥಾ ಚೌಷ್ಣ್ಯಂ	೧೭-೪೫
ಭಾರೂಪತ್ವಾದ್ಯಥಾ ಭಾನೋಃ	೧೭-೬೭
ಭಿಕ್ಷಾಮಟನ್ ಯಥಾ ಸ್ವಪ್ನೇ	೧೪-೨
ಭಿದ್ಯತೇ ಹೃದಯಗ್ರನ್ಥಿಃ	೧೫-೫೩
ಭೂತದೋಷೈಃ ಸದಾಸ್ಪೃಷ್ಟಂ	೯-೫
ಭೂತಿರ್ಯೈಷಾಂ ಕ್ರಿಯಾ	೧೪-೧೨೯॥
ಭೇದಾಭಾವೇಽಪ್ಯಭಾವಸ್ಯ	೧೪-೧೪೩
ಭೇದೋಭೇದಸ್ತಥಾ ಚೈಕೋ	೧೩-೨೩
ಮುಚ್ಯೈತನ್ಯಾವಭಾಸ್ಯತ್ವಾತ್	೯-೬
ಮಣೌ ಪ್ರಕಾಶ್ಯತೇ ಯದ್ವತ್	೭-೪
ಮದನ್ಯಃ ಸರ್ವಭೂತೇಷು	೧೩-೧೯
ಮನಸಶ್ಚೇನ್ದ್ರಿಯಾಣಾಂ ಚ	೧೭-೨೪
ಮನೋಬುದ್ಧೀನ್ದ್ರಿಯಾಣಾಂ ಯಾ	೦೫-೨೬
ಮನೋವೃತ್ತಂ ಮನಶ್ಚೈವ	೧೧-೪
ಮಮಾತ್ಮಾ ಸ್ವತ ಆತ್ಮೇತಿ	೧೩-೨೨
ಮಮಾಹಜ್ಯಾರಯತ್ನೇಚ್ಛಾಃ	೧೪-೨೩
ಮಮಾಹಂ ಚೇತ್ಯತೋಽವಿದ್ಯಾ	೧೭-೪೬
ಮಮಾಹಮಿತ್ಯೇತದಪೋಹ್ಯ	೧೫-೫೪
ಮಮೇದಂ ದ್ವಯಮಸ್ಯೈತತ್	೧೪-೯೦
ಮಮೇದಂಪ್ರತ್ಯಯೌ ಜ್ಞೇಯೌ	೧೪-೪೮
ಮಮೇದಮಿತ್ಥಂ ನ ತವೇದಮ್	೧೧-೧೧
ಮಹಾರಾಜಾದಯೋ ಲೋಕಾಃ	೧೧-೧೩
ಮಾಧುರ್ಯಾದಿ ಚ ಯತ್ಕಾರ್ಯಂ	೧೪-೪೦
ಮಾನಸೇ ತು ಗೃಹೇ ವ್ಯಕ್ತಾ	೧೫_೨೪
ಮಾನಸ್ಯಸ್ತದ್ವದನ್ಯಸ್ಯ	೧೩-೪
ಮಾಯೂಹಸ್ತಿನಮಾರುಹ್ಯ	೧೭_೨೯
ಮಿಥಶ್ಚ ಭಿನ್ನಾ ಯದಿ ತೇ ಹಿ	೧೯-೧೧
ಮಿಥ್ಯಾಧ್ಯಾಸನಿಷೇಧಾರ್ಥಂ	೩-೩
ಮುಖಾದನ್ಯೋ ಮುಖಾಭಾಸೋ	೧೪-೩೧
ಮುಖಾಭಾಸೋ ಯ ಆದರ್ಶೇ	೧೪_೩೬
ಮುಖೇನ ವ್ಯಪದೇಶಾತ್ ಸ	೧೪-೩೭
ಮೂಢಯಾ ಮೂಢ ಇತ್ಯೇವಂ	೧೩-೧೦
ಮೂರ್ತ್ಯಾಶಙ್ಕ್ಯೋ ಯಥೋದಞ್ಚ್ಯೋ	೫-೧
ಮೂಷಾಸಿಕ್ತಂ ಯಥಾ ತಾಮ್ರಂ	೧೪-೩
ಮೃಷಾಧ್ಯಾಸಸ್ತು ಯತ್ರ ಸ್ಯಾತ್	೧೭-೩೦
ಮೋಕ್ಷಸ್ತನ್ನಾಶ ಏವ ಸ್ಯಾತ್	೧೬-೬೧॥
ಮೋಕ್ಷೋಽವಸ್ಥಾನ್ತರಂ ಯಸ್ಯ	೧೬-೩೯
ಯ ಆತ್ಮಾನೇತಿ ಸೇತೀತಿ	೧೪-೧೧
ಯತಶ್ಚ ನಿತ್ಯೋಽಹಮ್	೧೯-೭
ಯತೋ ನ ಚಾನ್ಯಃ ಪರಮಾತ್	೧೯-೩
ಯತೋಽಭೂತ್ವಾ ಭವೇದ್ಯಚ್ಚ	೧೫-೪೪
ಯತ್ಕಾಮಸ್ತತ್ಕ್ರತುರ್ಭೂತ್ವಾ	೧೭-೪೭
ಯತ್ರ ಯಸ್ಯಾವಭಾಸಸ್ತು	೧೪-೬೨
ಯಸ್ಸ್ಥಿತಾಪೋ ರಶೇರ್ದೇಹೇ	೧೨-೧೦
ಯಥಾತ್ಮಬುದ್ಧಿಚಾರಾಣಾಂ	೭-೨
ಯಥಾನುಭೂಯತೇ ತೃಪ್ತಿಃ	೧೪_೧೯೧
ಯಥಾನ್ಯತ್ವೇಽಪಿ ತಾದಾತ್ಮ್ಯಮ್	೧೪-೨೫
ಯಥಾ ವಿದ್ಯಾ ತಥಾ ಕರ್ಮ	೧೯-೯
ಯಥಾ ವಿಶುದ್ಧಂ ಗಗನಂ	೧೪-೪೭
ಯಥಾ ಸರ್ವಾನ್ತರಂ ವ್ಯೋಮ	೧೨_೧೯
ಯಥಾ ಹ್ಯನ್ಯಶರೀರೇಷು	೧೫_೧೨
ಯಥೇಷ್ಟಾಚರಣಪ್ರಾಪ್ತಿಃ	೧೪_೨೧೪
ಯಥೋಕ್ತಂ ಬ್ರಹ್ಮಯೋ	೧೫_೫೨
ಯದದ್ವಯ ಜ್ಞಾನಮತೀವ	೧೦-೧೨
ಯದಾ ನಿತ್ಯೇಷು ವಾಕ್ಯೇಷು	೧೪-೧೭೨
ಯದಾಭಾಸೇನ ಸಂವ್ಯಾಪ್ತಃ	೧೪_೧೧೬

ಯದಾಯಂ ಕಲ್ಪಯೇದ್ ಭೇದಂ	೧೭-೧೯
ಯದಾಹಜ್ಞಸ್ತದಾತ್ಮತ್ವಂ	೧೪-೫೬
ಯದೇವ ದೃಶ್ಯತೇ ಲೋಕೇ	೧೨-೨
ಯದ್ಧರ್ಮಾಯಃ ಪದಾರ್ಥೋ ನ	೧೬-೧೩
ಯದ್ಯೇವಂ ನಾನ್ಯದೃಶ್ಯಾಸ್ತೇ	೧೪-೭೧
ಯದ್ವಾಕ್ಯೂರ್ಯಾಂಶು	೧೭-೩
ಯನ್ಮಯಾಸ್ತನ್ಮಯೋಽನ್ಯತ್ವೇ	೧೫-೧೪
ಯಸ್ಮಾದ್ಬೀತಾಃ ಪ್ರವರ್ತಂತ್ತೇ	೧೭-೬೩
ಯಸ್ಮಿನ್ ದೇವಾಶ್ಚ ವೇದಾಶ್ಚ	೧೪-೪೦
ಯಾ ತು ಸ್ಯಾನ್ಮಾನಸೀ ವೃತ್ತಿಃ	೧೩-೬
೦ಯಾ ಮಾಹಾರಜನಾದ್ಯಾಸ್ತಾ	೧೧-೧೦
ಯಾವಾನ್ ಸ್ಯಾದಿದಮಂಶೋ ಯಃ	೬-೫
ಯುಗಪತ್ಸಮವೇತತ್ವಂ	೧೬-೫೨
ಯೇನ ವೇತ್ತಿ ಸ ವೇದಃ ಸ್ಯಾತ್	೧೭-೧೪
ಯೇನ ಸ್ವಪ್ನಗತೋ ನಕ್ತಿ	೧೭-೧೫
ಯೇನಾತ್ಮನಾ ವಿಲೀಯಂತ್ತೇ	೧೪-೧
ಯೇನಾಧಿಗಮ್ಯತೇಽಭಾವಃ	೧೬-೩೨
ಯೇಷಾಂ ವಸ್ತ್ವಂತರಾಪತ್ತಿಃ	೧೬-೬೨
ಯೋ ವೇದಾಲುಪ್ತವೃಷ್ಟಿತ್ವಂ	೧೨-೧೩
ಯೋಽಹಂಕರ್ತಾರಮಾತ್ಮಾನಂ	೧೪-೨೪
ಯೋ ಹಿ ಯಸ್ಮಾದ್ ವಿರಕ್ತಃ ಸ್ಯಾತ್ (ನೈ.)	೧೪-೨೧೯
ರಜ್ಜು ಸರ್ಪೋ ಯಥಾ ರಜ್ಜ್ವಾ(ವಾ.)	೧೪-೪೪
ರಹಸ್ಯಂ ಸರ್ವವೇದಾನಾಂ	೧೭-೪೫
ರಾಗದ್ವೇಷಕ್ಷಯಾಭಾವೇ	೧-೭
ರಾಜವತ್ ಸಾಕ್ಷಿಮಾತ್ರತ್ವಾತ್	೧೭-೪೦
ರೂಪವತ್ತ್ವಾದ್ಯಸತ್ತ್ವಾಚ್ಚ	೯-೯
ರೂಪಸಂಸ್ಕಾರತುಲ್ಯಾಧೀ	೧೫-೧೩
ರೂಪಸ್ಯೈತ್ಯಸ್ಕಾರಾರ್ಥಾಃ	೧೫-೩೪
ರೂಪಾದೀನಾಂ ಯಥಾನ್ಯಃ ಸ್ಯಾತ್	೧೪-೧೪೭
ವಾಕ್ಯಾರ್ಥಪ್ರತ್ಯಯಾ ಕಶ್ಚಿತ್	೧೪-೧೫
ವಕ್ತವ್ಯಂ ತತ್ ತಥಾರ್ಥಂ ಸ್ಯಾತ್	೧೪-೨೦೯॥
ವಾಕ್ಯೇ ತತ್ತ್ವಮಸೀತ್ಯಸ್ಮಿನ್	೧೪-೧೪೭
ವಾಚಾರಮ್ಭಣಮಾತ್ರತ್ವಾತ್	೧೭-೬೬
ವಾಚ್ಯಭೇದಾತ್ತು ತದ್ಭೇದಃ	೧೭-೧೦
ವಾಯ್ವಾದೀನಾಂ ಯಥೋತ್ಪತ್ತೇಃ	೯-೩
ವಾಸುದೇವೋ ಯಥಾಶ್ವತ್ಥೇ	೧೫-೧೧
ವಿಕಲ್ಪನಾ ಚಾಪ್ಯಭವೇ	೧೯-೧೩
ವಿಕಲ್ಪನಾಚ್ಚಾಪಿ	೧೯-೧೪
ವಿಕಲ್ಪನಾ ವಾಪಿ ತಥಾ	೧೯-೧೦
ವಿಕಲ್ಪೋದ್ಭವತೋಽಸತ್ತ್ವಮ್	೧೬-೩೪
ವಿಶೇಷಣಮಿದಂ ಸರ್ವಮ್ (ನೈ.)	೬-೩
ವಿಷಯಗ್ರಹಣಂ ಯಸ್ಯ	೧೪-೧೫೩
ವಿಷಯತ್ವಂ ವಿಕಾರಿತ್ವಂ	೧೭-೪೨
ವಿಷಯಾ ವಾಸನಾ ವಾಪಿ	೧೫-೨೫
ವೇದಾನ್ತವಾಕ್ಯಪುಷ್ಪೇಭ್ಯೋ	೧೯-೨೫
ವೇದಾರ್ಥೋ ನಿಶ್ಚಿತೋ ಹ್ಯೇಷ	೧೩-೨೭
ವ್ಯಕ್ತಿಃ ಸ್ಯಾದಪ್ರಕಾಶಸ್ಯ	೧೫-೪೩
ವ್ಯಞ್ಜಕತ್ವಂ ತದೇವಾಸ್ಯಾ	೧೪-೬
ವ್ಯಞ್ಜಕಸ್ತು ಯಥಾಲೋಕೋ	೧೬-೫
ವ್ಯಞ್ಜಕೋ ವಾ ಯಥಾಲೋಕೋ	೧೪-೪
ವ್ಯವಧಾನಾದ್ಧಿ ಪಾರೋಕ್ಷ್ಯಂ	೧೭-೪೦
ವ್ಯಸ್ತಂ ನಾಹಂ ಸಮಸ್ತಂ ವಾ	೧೫-೨೦
ವ್ಯಾಪಕಂ ಸರ್ವತೋ ವ್ಯೋಮ	೧೫-೪೨
ವ್ಯಾಪ್ತುಮಿಷ್ಟಂ ಚ ಯತ್ಕರ್ತುಃ	೧೪-೧೨೯
ವ್ಯೋಮವತ್ ಸರ್ವಭೂತಸ್ಥೋ	೧೧-೬
ವ್ರಣಸ್ನಾಯ್ವೋರಭಾವೇನ	೧೫-೧೦
ಶಕ್ತ್ಯಲೋಪಾತ್ ಸುಷುಪ್ತೇ ಜ್ಞಃ	೧೭-೪೯
ಶಬ್ದಾದೀನಾಮಭಾವಶ್ಚ	೧೩-೧೩
ಶಬ್ದಾದ್ವಾನುಮಿತೇರ್ವಾಪಿ	೧೪-೧೩೦
ಶಬ್ದಾನಾಮಯಥಾರ್ಥತ್ವೇ	೧೪-೫೪೪
ಶಬ್ದೇನೈವ ಪ್ರಮಾಣೇನ	೧೪-೧೨೨
ಶರೀರಬುದ್ಧೀನ್ದ್ರಿಯ-	೧೦-೫
ಶರೀರಬುದ್ಧ್ಯೋಃ	೧೪-೪೫
ಶರೀರೇನ್ದ್ರಿಯಸಙ್ಘಾತೇ (ವಾ.)	೧೬-೭
ಶಾನ್ತಂ ಪ್ರಾಜ್ಞಂ ತಥಾ	೧೭-೫೨
ಶಾನ್ತೇಶ್ಚಾಯತ್ನಸಿದ್ಧತ್ವಾತ್	೧೬-೨೭
ಶಾರೀರಾದಿತಪಃ ಕುರ್ಯಾತ್	೧೭-೨೩
ಶಾರೀರಾ ಪೃಥಿವೀ ತಾವತ್	೯-೨
ಶಾಸ್ತ್ರಪ್ರಾಮಾಣ್ಯತೋ ಜ್ಞೇಯಾ	೧೪-೫
ಶಾಸ್ತ್ರಯುಕ್ತಿವಿಹೀನತ್ವಾತ್	೧೬-೬೫
ಶಾಸ್ತ್ರಸ್ಯಾನತಿಶಙ್ಕ್ಯತ್ವಾತ್	೧೭-೬೮

ಶಾಸ್ತ್ರಾದ್ಬ್ರಹ್ಮಾಸ್ಮಿ ನಾನ್ಯೋಽಹಂ	೧೮-೨೧೬
ಶಾಸ್ತ್ರಾನರ್ಥಕ್ಯಮೇವ ಸ್ಯಾತ್	೧೬-೫೯
ಶಿರೋದುಃಖಾದಿನಾತ್ಮಾನಂ	೧೬-೮
ಶೂನ್ಯತಾಪಿ ನ ಯುಕ್ತೈವಂ	೧೬-೧೫೫
ಶ್ರದ್ಧಾಭಕ್ತೀ ಪುರಸ್ಕೃತ್ಯ	೧೬-೬೭
ಶ್ರುತಮಾತ್ರೇಣ ಚೇನ್ನ ಸ್ಯಾತ್	೧೮-೯೯
ಶ್ರುತಾನುಮಾನಜನ್ಯಾನೌ	೧೮-೧೪
ಶ್ರುತೇಃ ಸ್ವಾತ್ಮನಿ ನಾಶಜ್ಞಾ	೧೮-೨೦೯
ಶ್ರೋತುಃ ಸ್ಯಾದುಪದೇಶಶ್ಚೇತ್	೧೮-೧೦೮
ಶ್ರೋತೃಶ್ರೋತವ್ಯಯೋರ್ಭೇದೋ	೧೮-೧೯೮
ಷಡೂರ್ಮಿಮಾಲಾಭ್ಯತಿವೃತ್ತ	೧೯-೪
ಸಙ್ಕಲ್ಪಾಧ್ಯವಸಾಯೌ ತು	೧೬-೨೧
ಸಜ್ಞಾತೋ ವಾಸ್ಮಿ ಭೂತಾನಾಂ	೧೫-೧೯
ಸಂನಿಧೌ ಸರ್ವದಾ ತಸ್ಯ	೧೮-೨೭
ಸಂಬನ್ಧಗ್ರಹಣಂ ಶಾಸ್ತ್ರಾತ್	೧೮-೭೯
ಸಂಬನ್ಧಾನುಪಪತ್ತೇಶ್ಚ	೧೬-೪೯
ಸಂಭಾವ್ಯೋ ಗೋಚರೇ ಶಬ್ದಃ	೧೮-೨೪
ಸಂಯೋಗಸ್ಯಾಪ್ಯನಿತ್ಯತ್ವಾತ್	೧೬-೪೦
ಸಂವಾದಮೇತಂ ಯದಿ	೪-೬
ಸಂಸಾರಿಣಾಂ ಕಥಾ ತ್ವಾಸ್ತಾಂ	೧೮-೧೫॥
ಸಂಸಾರೀ ಚ ಸ ಇತ್ಯೇಕೇ	೧೮-೧೩
ಸಂಸಾರೋ ವಸ್ತುಸಂಸ್ತೇಷಾಂ	೧೮-೪೭
ಸಕಾಮಃ ಸಕ್ರಿಯೋಽಸಿದ್ಧಃ	೧೮-೨೦೫
ಸಕೃದುಕ್ತಂ ನ ಗೃಹ್ಣಾತಿ	೧೮-೧೦
ಸ ಗುರುಸ್ತಾರಯೇದ್ ಯುಕ್ತಂ	೧೭-೫೩
ಸ ಚೋಕ್ತಸ್ತನ್ನಿಭತ್ವಂ ಪ್ರಾಕ್	೧೮-೧೫೦
ಸತ್ತಾಮಾತ್ರೇ ಪ್ರಕಾಶಸ್ಯ	೧೫-೪೫
ಸತ್ಯಂ ಜ್ಞಾನಮನನ್ತಂ ಚ	೧೭-೬೨
ಸತ್ಯಮೇವಮನಾತ್ಮಾರ್ಥ-	೧೮-೧೯೨
ಸತ್ತ್ವಂ ನಾಶಿತ್ವಮಸ್ಯಾಶ್ಚೇತ್	೧೮-೧೪೦
ಸದಭ್ಯುಪೇತಂ ಭವತೋಽಪ	೧೯-೧೫
ಸದಸತ್ಸದಚ್ಚೇತಿ	೧೬-೩೩
ಸದಸೀತಿ ಫಲಂ ಜೋಕ್ತ್ವಾ	೧೮-೧೭
ಸದಸ್ಮೀತಿ ಚ ವಿಜ್ಞಾನಮ್	೧೮-೧೪
ಸದಸ್ಮೀತಿ ಧಿಯೋಽಭಾವೇ (ನೈ.)	೧೮-೪೬॥
ಸದಸ್ಮೀತಿ ಪ್ರಮಾಣೋತ್ಥಾ	೧೮-೭
ಸದಾ ಚ ಭೂತೇಷು ಸಮೋ	೧೦-೮
ಸದೇರುಪನಿಪೂರ್ವಸ್ಯ	೧-೨೬
ಸದೇವ ತ್ವಮಸೀತ್ಯುಕ್ತೇ	೧೮-೯
ಸದೇವೇತ್ಯಾದಿವಾಕ್ಯೇಭ್ಯಃ (ನೈ.)	೧೮-೧೮೪
ಸಪ್ರಪಾಪಂ ಕರೋಮೀತಿ	೧೮-೬
ಸಬಾಹ್ಯಾಭ್ಯನ್ತರೇ ಶುದ್ಧೇ	೧೪-೧೦
ಸಬಾಹ್ಯಾಭ್ಯನ್ತರೋಽಜೇರ್ಣೋ	೧೭-೪೩
ಸಭಯಾದಭಯಂ ಪ್ರಾಪ್ತ-	೧೮-೨೧೭
ಸಮಂ ತು ತಸ್ಮಾತ್ ಸತತಂ	೧೯-೨೫
ಸಮಸ್ತಂ ಸರ್ವಗಂ ಶಾನ್ತಮ್	೧೫-೩೭
ಸಮಾಧಿರ್ವಾ ನಮಾಧಿರ್ವಾ	೧೩-೧೭
ಸಮಾಪಯ್ಯ ಕ್ರಿಯಾಃ ಸರ್ವಾಃ	೧-೨
ಸಮಾಪ್ತೇಸ್ತು ಹಿ ದುಃಖಸ್ಯ	೧೮-೧೪೦
ಸಮ್ಯಕ್ಸಂಶಯಮಿಥ್ಯೋಕ್ತಾ	೧೮-೧೧೪
ಸರ್ವಜ್ಞೋಽಸ್ಯತ ಏವ	೧೫-೨೪
ಸರ್ವಪ್ರತ್ಯಯಸಾಕ್ಷಿತ್ವಾತ್	೧೭-೧೭
ಸರ್ವಪ್ರತ್ಯಯಸಾಕ್ಷೀ ಜ್ಞಃ	೧೫-೩೪
ಸರ್ವಮಾತ್ಮೇತಿ ವಾಕ್ಯಾರ್ಥೇ	೧೪-೨೧೩
ಸರ್ವಮೂರ್ತಿವಿಮುಕ್ತಂ ಯತ್	೧೩-೨೧
ಸರ್ವಸ್ಯಾತ್ಮಾಪಮೇವೇತಿ	೧೭-೭೨
ಸರ್ವೇಷಾಂ ಮನಸೋ ವೃತ್ತಂ	೧೧-೩
ಸಾಕ್ಷಾದ್ಜೀವಃ ಸವಿಜ್ಞೇಯಃ	೧೭-೩೨
ಸಾದಿತ್ಯಂ ಹಿ ಜಗತ್ ಪ್ರಾಣಃ	೧೪-೧೫
ಸಿದ್ಧಾದೇವಾಹಮಿತ್ಯಸ್ಮಾತ್	೧೪-೪
ಸಿದ್ಧಿಃ ಸ್ಯಾತ್ಸಾತ್ಮಲಾಭಶ್ಚೇತ್	೧೪-೧೩೪
ಸಿದ್ಧೇ ದುಃಖಿತ್ವ ಇಷ್ಟಂ ಸ್ಯಾತ್	೧೪-೧೬೧
ಸಿದ್ಧೋ ಮೋಕ್ಷಸ್ತ್ವಮಿತ್ಯೇತತ್	೧೪-೨೦೧
ಸಿದ್ಧೋ ಮೋಕ್ಷೋಽಹಮಿತ್ಯೇವ	೧೪-೧೯೯
ಸುಖಾದೇರ್ನಾತ್ಮಧರ್ಮತ್ವಮ್	೧೬-೫೫
ಸುಷುಪ್ತಜಾಗ್ರತ್ಸ್ವಪತಶ್ಚ	೧೦-೪
ಸುಷುಪ್ತವಜ್ಜಾಗ್ರತಿ ಯೋ	೧೦-೧೩
ಸುಷುಪ್ತ್ಯಾಖ್ಯಮ್ಮಿಂ ತಮೋಽಜ್ಞಾನಂ (ನೈ.)	೧೭-೨೬
ಸೂಕ್ಷ್ಮತಾವ್ಯಾಪಿತೇ ಜ್ಞೇಯೇ	೯-೧
ಸೂಕ್ಷ್ಮೈಕಾಗೋಚರೇಭ್ಯಶ್ಚ	೧೬-೫೭॥
ಸೇತುಂ ಸರ್ವವ್ಯವಸ್ಥಾನಾಂ	೧೭-೨೭

ಸೇತ್ಸ್ನಾತೀತ್ಯೇವ ಚೇಲ್ ತತ್ಸ್ಯಾತ್	೧೮-೧೯೭	ಸ್ವಯಂವೇದ್ಯತ್ವಪರ್ಯಾಯಃ	೧೮-೧೯೩
ಸೋಽಧ್ಯಾಸೋ ನೇತಿ ನೇತೀತಿ	೧೮-೨೧	ಸ್ವಯಮೇವಾಬ್ರವೀಚ್ಚಾಸ್ತ್ರಮ್	೧೮-೯೫॥
ಸೋಪಾಧಿಶ್ಚೈವಮಾತ್ಮೋಕ್ತೌ	೧೫-೨೯	ಸ್ವಯಮೇವಾವಭಾಸ್ಯಂತೇ	೧೮-೭೧
ಸ್ಥಾನಾವಚ್ಛೇದದೃಷ್ಟಿಃ ಸ್ಯಾತ್	೧೬-೨೨	ಸ್ವರೂಪಂ ಚಾತ್ಮತೋ ಜ್ಞಾನಂ	೧೮-೬೪
ಸ್ಥಾವರಂ ಜಙ್ಗಮಂ ಚೈವ	೧೪-೨೧	ಸ್ವರೂಪತ್ವಾನ್ನ ಸರ್ವಸ್ಯ	೧೬-೪೨
ಸ್ಥಿತೋ ದೀಪೋ ಯಥಾಯತ್ನಃ	೧೬-೬	ಸ್ವರೂಪಸ್ಯಾನಿಮಿತ್ತತ್ವಾತ್	೧೬-೪೧
ಸ್ಪಷ್ಟತ್ವಂ ಕರ್ಮಕರ್ತ್ರಾದೇಃ	೧೮-೧೩೬	ಸ್ವರೂಪಾವ್ಯವಧಾನಾಭ್ಯಾಂ	೧೫-೪೧
ಸ್ಮರತೋ ದೃಶ್ಯತೇ ದೃಷ್ಟಂ	೧೫-೨	ಸ್ವಲಕ್ಷಣಾವಧಿರ್ವಾಶೋ	೧೮-೧೪೨
ಸ್ಯಾನ್ಮಾಲಾಪರಿಪಾರ್ಯಾ ತು	೧೬-೫೬	ಸ್ವಸಾಕ್ಷಿಕಂ ಜ್ಞಾನಮತೀವ	೧೬-೬೯
ಸ್ವಪ್ನಃ ಸತ್ಯೋ ಯಥಾಬೋಧಾತ್	೧೧-೫	ಸ್ವಾಕಾರಾನ್ಯಾವಭಾಸ್ಯಂ ಚ	೧೬-೨೪
ಸ್ವಪ್ನಸೃತ್ಯೋರ್ಘಟಾದೇರ್ಹಿ	೧೪-೧	ಸ್ವಾತ್ಮಬುದ್ಧಿಮಪೇಕ್ಷ್ಯಾಸೌ	೧೫-೫
ಸ್ವಪ್ನೇ ತದ್ವತ್ ಪ್ರಬೋಧೇ ಯೋ	೧೭-೧೪	ಸ್ವಾರ್ಥಸ್ಯ ಹಿ ಪ್ರಹಾಣೇನ	೧೪-೧೬೬
ಸ್ವಪ್ನೇ ಮಃಖ್ಯಿಹಮಧ್ಯಾಸಂ	೧೪-೧೭೯	ಹನ್ತ ತರ್ಹಿ ನ ಮುಖ್ಯಾರ್ಥೋ	೧೪-೫೭
ಸ್ವಭಾವಶುದ್ಧೇ ಗಗನೇ ಘನಾದಿಕೇ	೧೪-೫೦	ಹಿತ್ವಾ ಜಾತ್ಯಾದಿಸಂಬನ್ಧಾನ್	೧೭-೭೬
ಸ್ವಯಂಜ್ಯೋತಿರ್ನ ಹಿ ದ್ರಷ್ಟುಃ	೧೪-೯೫	ಹೂಯನ್ತೇ ತು ಹವೀಂಷೀತಿ	೧೫-೨೩
ಸ್ವಯಂಲಬ್ಧಸ್ವಭಾವತ್ವಾತ್	೧೭-೬		

——:೦:——

ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಪ್ರಕರಣವನ್ನೂ ಶ್ಲೋಕವನ್ನೂ ಸೂಚಿಸುವವು

೧. ಅಕ್ಷಜಮ್—
ಇಂದ್ರಿಯಗಳಿಂದಾಗುವ ಜ್ಞಾನ, ೧೪-೧೪

೨. ಅಕ್ಷಜಾದಿನಿಭ—
ಪ್ರತ್ಯಕ್ಷಾಭಾಸವೇ ಮುಂತಾದ, ೧೪-೧೭೭

೩. ಅಗ್ನಿಃ—
ಬೆಂಕಿ, ತನ್ನನ್ನೇ ತಾನು ಸುಡಲಾರದು, ಬೆಳಗಲಾರದು (ಆತ್ಮನು ತನ್ನನ್ನು ತಾ ನು ಅರಿಯಲಾರನೆಂಬುದಕ್ಕೆ ದೃಷ್ಟಾಂತ) ೧೬-೧೩

೪. ಅಜ್ಞಾನಮ್—
ಸಂಸಾರಕ್ಕೆ ಕಾರಣವಾದ ತಪ್ಪುತಿಳಿವಳಿಕೆ, ೧-೫, ೧-೬, ೧-೨೫

೫. ಅಧ್ಯಕ್ಷಃ—
ಎಲ್ಲವನ್ನೂ ನೋಡುತ್ತಿರುವ ಸಾಕ್ಷಿ, ೧೪-೭೩, ೭೪, ೭೪, ೧೦೪, ೧೧೩, ೧೨೨,೧೨೪, ೧೩೫

೬. ಅಧ್ಯಕ್ಷ್ಯ—
ಸಾಕ್ಷಿಗೆ ವಿಷಯವಾದ ಅನಾತ್ಮ, ೧೪-೧೩೫.

೭. ಅಧ್ಯಾಸಃ—
ಒಂದನ್ನು ಮತ್ತೊಂದೆಂದು ತಿಳಿಯುವದು, ೧೪-೨೧, ೨೨

೮. ಅನರ್ಥವತ್ತ್ವಮ್—
ಪ್ರಯೋಜನವಿಲ್ಲದಿರುವದು, ಅರ್ಥಕ್ರಿಯಾಕಾರಿಯಲ್ಲದಿರುವದು. ೧೯-೧೬

೯. ಅನಲಃ—
ಕಟ್ಟಿಗೆಯಿಲ್ಲದ ಬೆಂಕಿ, (ದೃಷ್ಟಾತಗ್ರಹಣವು ಇಲ್ಲವಾಗುವದಕ್ಕೆ ದೃಷ್ಟಾಂತ) ೧೯-೨೭

೧೦. ಅನಾದ್ಯವಿವೇಕಃ—
ಆತ್ಮನನ್ನೂ ಅಂತಃಕರಣವನ್ನೂ ಕಲೆಬೆರಕೆಮಾಡಿಕೊಂಡಿರುವ ಅನಾದಿಯಾದ ತಪ್ಪುತಿಳಿವು ೧೬-೬೧

೧೧. ಅನುಪಾಧಿಕ—
ಯಾವ ಉಪಾಧಿಯೂ ಇಲ್ಲದ ಆತ್ಮ, ೧೫-೨೯

೧೨. ಅನುಭವಃ—
ಆತ್ಮನನ್ನು ನೇರಾಗಿ ಅನುಭವಿಸುವದು, ಸಾಕ್ಷಾತ್ಕಾರ, ೫-೫; ೧೨-೮, ೯, ೧೮-೧೯೩, ೨೦೩

೧೩. ಅನುಭವಾತ್ಮಾ—
ಅನುಭವಸ್ವರೂಪನೇ ಆಗಿರುವ ಆತ್ಮ ೧೪-೧೦೧ . ಅನುಭವಸ್ವರೂಪ, ೧೪ ೧೯೫.

೧೪. ಅನ್ವಯವ್ಯತಿರೇಕೌ—
ಅದಿದ್ದರೆ ಅದೂ ಇದೆ ಎಂಬುದು ಅನ್ವಯ, ಅದಿದ್ದರೆ ಅದು ಇಲ್ಲ ಎಂಬುದು ವ್ಯತಿರೇಕ. ೧೪-೯೩, ೧೭೧, ೧೪೩

೧೫. ಅನ್ವಯಾ—
ಎಲ್ಲವನ್ನೂ ಅನುಸರಿಸಿಕೊಂಡಿರು (ಅಹಂಕಾರ), ೧೪-೭೨

೧೬. ಅಮೃತಮ್—
ದೇವತೆಗಳು ಸಮುದ್ರದಿಂದ ಕಡೆದು ತೆಗೆದ ಅಮೃತ (ಜ್ಞಾನಕ್ಕೆ ದೃಷ್ಟಾಂತ), ೨೯-೨೪

೧೭. **ಅಮೃತತ್ವಮ್**—
ಸಾವಿಲ್ಲದ ಸ್ಥಿತಿ, ಮೋಕ್ಷ, ೧-೨೧, ೧೧-೨

೧೮. **ಅರ್ಕಃ**—
ಸೂರ್ಯ, ಪ್ರಕಾಶಕ್ಕೆ ಕರ್ತೃವಲ್ಲ (ಆತ್ಮನು ಜ್ಞಾನಕ್ಕೆ ಕರ್ತೃವಲ್ಲವೆಂಬುದಕ್ಕೆ ದೃಷ್ಟಾಂತ), ೧೫-೪೩

೧೯. **ಅರ್ಥಿತಾ**—
ಆತ್ಮಸ್ವರೂಪಕ್ಕೆ ಪುರುಷಾರ್ಥನನ್ನು ಬಯಸುವದೆಂಬ ಸ್ವಭಾವವಿಲ್ಲ, ೧೯-೨

೨೦. **ಅಲುಪ್ತದೃಕ್, ಅಲುಪ್ತದೃಷ್ಟಿಃ**—
ಎಂದಿಗೂ ಲೋಪವಾಗದ ಚೈತನ್ಯದೃಷ್ಟಿಯುಳ್ಳ (ಆತ್ಮ), ೧೭-೧೩, ೧೭-೩೬

೨೧. **ಅಲ್ಪವಿತ್**—
ಅಳತೆಯುಳ್ಳ ವಸ್ತುವನ್ನು ಮಾತ್ರ ತಿಳಿದಿರುವವ, ೧೫-೧೭

೨೨. **ಅವಗತಿಃ**—
ಫಲರೂಪವಾದ ಅರಿವು, ಆತ್ಮಚೈತನ್ಯ, ೧೪-೧೧೪, ೧೧೬

೨೩. **ಅವಸ್ತುಯೋಗಃ**—
ವಸ್ತುವಿನ ಸಂಬಂಧವಿಲ್ಲದ್ದು, ೧೯-೧೦

೨೪. **ಅವಸ್ತುಸನ್**—
ನಿಜವಾಗಿರುವದಲ್ಲದ, ೧೪-೪೪

೨೫. **ಅವಿಕಲ್ಪನಮ್**—
ಯಾವ ವಿಕಲ್ಪವೂ ಇಲ್ಲದ (ಆತ್ಮನಸ್ತು), ೧೬-೧೬

೨೬. **ಅವಿದ್ಯಾ**—
ಅಜ್ಞಾನ, ತಪ್ಪುತಿಳಿವಳಿಕೆ, ೧-೧೬, ೧೭; ೧೪-೪೪; ಅನ್ಯದೃಷ್ಟಿ, ೧೭-೭, ೨೧, ೫೬

೨೭. **ಅವಿದ್ಯಾಕರ್ಮವಾಸನಾ**—
ಕನಸಿನಲ್ಲಿ ತೋರುವ ಅನುಭವದ ವಾಸನೆ ೧೫-೨೪

೨೮. **ಅವಿದ್ಯಾಕಲ್ಪಿತ**—
ಅಧ್ಯಸ್ತವಾದ, ತಪ್ಪುತಿಳಿವಳಿಕೆಯಿಂದ ತೋರುವ (ಜ್ಞೇಯತ್ವ) ೧೪-೭, (ನಾನು ನನ್ನದೆಂಬ ಭಾವ), ೧೪-೧೯

೨೯. **ಅವಿದ್ಯಾಧ್ಯಾಸಃ**—
ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟಿದ್ದು, (ಆತ್ಮನ ವಿಶೇಷಣ), ೬-೩, ೧೪-೩

೩೦. **ಅವಿದ್ಯಾಪ್ರಭವಃ**—
ಅವಿದ್ಯೆಯಿಂದ ಹುಟ್ಟಿದ್ದು, ತನಿನಿದ್ರೆಯಲ್ಲಿಲ್ಲದ ಜಗತ್ತು, ೧೭-೨೦

೩೧. **ಅವಿವೇಕಃ**—
ಆತ್ಮನನ್ನು ವಿಂಗಡಿಸಿಕೊಳ್ಳದ ಅಜ್ಞಾನ, ೭-೬

೩೨. **ಅವಿಶೇಷಾತ್ಮಬೋಧಃ**—
ಯಾವ ವಿಶೇಷವೂ ಇಲ್ಲದ ಆತ್ಮನ ಜ್ಞಾನ, ೧-೧೭

೩೩. **ಅಶೇಷಬುದ್ಧಿಸಾಕ್ಷೀ**—
ತಾನು ಇದ್ದಂತೆ ಇದ್ದು ಬುದ್ಧಿವೃತ್ತಿಗಳೆಲ್ಲವನ್ನೂ ಅರಿಯುವ (ಆತ್ಮ). ೭-೩

೩೪. **ಅಸತ್**
ನಿಜವಲ್ಲದ, ಹುಸಿಯಾದ, ೬-೩, ೧೯-೮, ೧೪, ೨೦, ೨೧

೩೫. **ಅಹಮ್, ಅಹಙ್ಕಾರಃ, ಅಹಙ್ಕರ್ತಾ, ಅಹಙ್ಕೃತ್**—
ನಾನು ಎಂದು ಅಭಿಮಾನಿಸುವ ಅಂತಃಕರಣ, ೧-೨೪, ೪-೧, ೧೫-೧೬, ೧೪-೨೦, ೨೫, ೩೫, ೬೫.

೩೬. **ಅಹಂಪ್ರತ್ಯಯಃ**—
ನಾನು ಎಂಬಾಕಾರದ ಪ್ರತ್ಯಯ, ೪-೧, ೧೪-೬೫

೩೭. **ಆತ್ಮಪ್ರತ್ಯಯಿಕ**—
ತನ್ನ ಅನುಭವದಿಂದ ಗೊತ್ತಾಗುವ, ೧೭-೪೬

೩೮. ಆತ್ಮಲಾಭಃ—
ಜ್ಞಾನದಿಂದ ತನ್ನ ಸ್ವರೂಪವನ್ನು ಪಡೆದು ಕೊಳ್ಳುವದು, ೧೭-೪

೩೯. ಆತ್ಮಾ—
ತನ್ನ ಸ್ವರೂಪ, ೨-೪, ೪-೫, ೫-೩, ೬-೧

೪೦. ಆತ್ಮಾಭಾಸಃ—
ಆತ್ಮನಂತೆ ತೋರುವ ಅಂತಃಕರಣದ ತೋರಿಕೆ, ೧೮-೩೦, ೪೬, ೫೧. ೬೯

೪೧. ಆದಿತ್ಯಃ—
ಸೂರ್ಯ, (ತನ್ನ ಇರುವಿಕೆಯಿಂದಲೇ ಆತ್ಮನು ಬೆಳಗುವದಕ್ಕೆ ದೃಷ್ಟಾಂತ) ೧೫-೪೫ ; (ಆತ್ಮನಿಗೆ ಅಜ್ಞಾನವಿಲ್ಲ ವೆಂಬುದಕ್ಕೆ ದೃಷ್ಟಾಂತ), ೧೬-೩೭

೪೨. ಆಧಿಃ—
ಉಪಾಧಿ, ೧೭-೧೬, ೧೮-೧೧೯

೪೩. ಆರಬ್ಧ—
ಫಲವನ್ನು ಕೊಟ್ಟಿರುವ (ಕರ್ಮ), ೪-೪

೪೪. ಆಲೋಕಃ—
ಬೆಳಕು, ವಸ್ತುವಿನ ಆಕಾರವನ್ನು ಪಡೆಯುವ ಅಂತಃಕರಣಕ್ಕೆ ದೃಷ್ಟಾಂತ, ೧೪-೪

೪೫. ಇದಂವನಮ್—
ದಾಟುವದಕ್ಕೆ ಕಷ್ಟವಾಗಿ ವನದಂತಿರುವ ಅನಾತ್ಮ, ೨-೪

೪೬. ಇದಮುಂಶಃ—
ನಾನು ಎಂಬ ಅಹಂಕಾರದಲ್ಲಿ ಸೇರಿ ಕೊಂಡಿರುವ ಅನಾತ್ಮಾಂಶ, ೫-೫, ೬-೬, ೧೨-೧

೪೭. ಇದಮಾತ್ಮಾ—
ಇದು ಎಂದು ಹೇಳಿಸಿಕೊಳ್ಳುವದಕ್ಕೆ ತಕ್ಕ ಅನಾತ್ಮ, ೨-೨

೪೮. ಉತ್ಪಾದ್ಯಾಪ್ಯವಿಕಾರಾಣಿ—
ಹುಟ್ಟುವ, ಪಡೆಯುವ, ಮಾರ್ಪಾಡುವ ಕಾರ್ಯ, ಕ್ರಿಯಾಫಲ, ೧೭-೫೦

೪೯. ಉಪನಿಷತ್—
ಬ್ರಹ್ಮವಿದ್ಯೆ, ಉಪನಿಷತ್ತು ೧-೨೬.

೫೦. ಉಪಾಧಿಃ, ಉಪಧಾನಮ್—
ಆತ್ಮವಸ್ತುವನ್ನು ತೋರಿಸುವ, ಆತ್ಮನಿಗೆ ಸೇರದೆ ಇರುವ ದೇಹಾದಿ, ೧೪-೩೦; ೧೫-೪೭, ೧೫-೧೫

೫೧. ಉಪಾದೇಯಃ—
ಸ್ವೀಕರಿಸಬೇಕಾದ, ಕ್ರಿಯಾಶೇಷ, ೧೬-೩೬, ೧೭-೪೨, ೪೩

೫೨. ಏಕರಸಃ—
ಒಂದೇ ತೆರನಾದ, (ಚೈತನ್ಯಮಾತ್ರ), ೧೫-೧೫

೫೩. ಕರ್ತೃಧೀನ—
ಕರ್ತೃವಿನ ವಶವಾಗಿರುವ ಕರ್ಮ, ೧-೧೩

೫೪. ಕರ್ಮ—
ಶಾಸ್ತ್ರದಲ್ಲಿ ವಿಧಿಸಿರುವ ಕ್ರಿಯೆ, ೧೫-೭ ೧೬-೧೦ ; ವಿಷಯ, ೧೫-೩

೫೫. ಕರ್ಮಕರ್ತೃತ್ವಮ್—
ಒಂದು ಕ್ರಿಯೆಗೆ ತಾನೇ ಕರ್ಮವೂ ಕರ್ತೃವೂ ಆಗಿರುವದು ೧೬-೧೦

೫೬. ಕಲ್ಪಿತಸ್ಯಾಪನೇತೃ—
ಅಧ್ಯಸ್ತವಾದದ್ದನ್ನು ಅಲ್ಲಗಳೆಯುವ (ವಾಕ್ಯ), ೧೧-೧೨

೫೭. ಕಾರಕಾಪೇಕ್ಷ—
ಕರ್ಮವೇ ಮುಂತಾದವನ್ನು ಬಯಸುವ (ಕರ್ತೃತ್ವ), ೧೨-೧೭

೫೮. ಕಾರ್ಯಕಾರಣವರ್ಜಿತಃ—
ಕಾರ್ಯಕರಣಗಳಾದ ದೇಹೇಂದ್ರಿಯಗಳಿಲ್ಲದ (ಆತ್ಮ), ೧೧

೫೯. ಕುಣ್ಡಲೀಪ್ರತ್ಯಯಃ—
ನಾನು ಒಂಟಿಯನ್ನು ಧರಿಸಿರುವೆನೆಂಬ ಅಭಿಮಾನ, ೧೮-೧೫೬

೬೦. ಕುತಾರ್ಕಿಕಾಃ—
ಆತ್ಮನು ಜ್ಞೇಯನೆಂಬ ತಪ್ಪು ತರ್ಕದವರು, ೧೯-೨೬

೬೧. **ಕೇವಲಾಹವಮ್**—
ಅನಾತ್ಮದ ವಿರಕ್ತಿಯಿಲ್ಲದ ಆತ್ಮ, ೧೪-೧೬೦, ೧೭೫

೬೨. **ಕೌಟಸ್ಥ್ಯಮ್**—
ವಿಕಾರವಿಲ್ಲದ್ದು ೧೩-೩, ೧೪-೯೫

೬೩. **ಖಮ್**—
ಆಕಾಶ (ಏಕರಸಕ್ಕೆ ದೃಷ್ಟಾಂತ), ೧೨-೧೧, ೧೫-೧೫, ಯಾವ ಆಕಾರವೂ ಇಲ್ಲದ್ದಕ್ಕೆ ದೃಷ್ಟಾಂತ, ೧೩-೨೧, ಮಲಾಧ್ಯಾಸನಿಷೇಧದಿಂದ ವಿಶೇಷ ವಿಲ್ಲದ್ದಕ್ಕೆ ದೃಷ್ಟಾಂತ, ೧೪-೨೨.

೬೪. **ಗಗನೋಪಮಮ್**—
ಆಕಾಶದಂತೆ ವ್ಯೆಪ್ತದಿಂದ ಯಾವ ವಿಶೇಷವೂ ಇಲ್ಲದ ಆತ್ಮ, ೧೪-೫೦

೬೫. **ಗಾನ್ಧಾರಕಃ**—
ಅನಾತ್ಮದಿಂದ ತಪ್ಪಿಸಿಕೊಳ್ಳುವವನಿಗೆ ಶ್ರುತಿಯಲ್ಲಿ ಕೊಟ್ಟಿರುವ ದೃಷ್ಟಾಂತ, ೨-೪

೬೬. **ಗ್ರಹನಾಶಃ**—
ಭೇದಬುದ್ಧಿ ಹೋದರೆ ಆಗುವ ವ್ಯೆತ ಗ್ರಹಣದ ನಾಶ, ೧೯-೨೭

೬೭. **ಚಿತಿಸ್ವರೂಪ**—
ಜ್ಞಾನದ ಸ್ವರೂಪನೇ ಆಗಿರುವ ಆತ್ಮ, ೪೧, ೧೪-೪೩

೬೮. **ಚಿನ್ಮಾತ್ರಜ್ಯೋತಿಃ**—
ಬರಿಯ ಜ್ಞಾನದ ಬೆಳಕುಳ್ಳ ಆತ್ಮ, ೧೪-೬, ೩೭-೧

೬೯. **ಚೇತನಾಭಾಸಃ, ಚೈತನ್ಯಾಭಾಸಃ, ಚೈತನ್ಯಪ್ರತಿಬಿಮ್ಬಃ**—
ಅಂತಃಕರಣದಲ್ಲಿ ತೋರುವ ಚೈತನ್ಯದ ಹೊಳಪು, ೫-೪, ೧೪-೪೪, ೪೪

೭೦. **ಜಲೇನ್ದುಃ**—
ನೀರಿನಲ್ಲಿ ಕಾಣುವ ಚಂದ್ರ. ಆತ್ಮನ ಅನೇಕತ್ವಕ್ಕೆ ದೃಷ್ಟಾಂತ, ೧೭-೨೪, ಆತ್ಮನಲ್ಲಿ ಮತ್ತೊಂದು ಸ್ವಭಾವವು ತೋರುವದಕ್ಕೆ ದೃಷ್ಟಾಂತ, ೧೭-೫೬

೭೧. **ಜಾತಿಕರ್ಮಾದಿಮತ್ತ್ವ**—
ಜಾತಿ, ದ್ರವ್ಯ, ಗುಣ, ಕ್ರಿಯೆ- ಎಂಬ ಶಬ್ದಪ್ರವೃತ್ತಿನಿಮಿತ್ತಗಳಿರುವದು, ೧೪-೩೪

೭೨. **ಜಾತ್ಯಾದಿಃ**—
ವರ್ಣ, ಆಶ್ರಮ- ಇವು ೧೫-೫, ೪; ೧೭-೪೫, ೪೭, ೭೬

೭೩. **ಜಾಗ್ರಜ್ಜಾಗ್ರತಿಃ**—
ಎಚ್ಚರದಲ್ಲಿರುವ ವಿಶೇಷಜ್ಞಾನ, ೯-೪

೭೪. **ಜ್ಞಾನಲಕ್ಷಣಃ ಪ್ರತ್ಯಯಃ**—
ಅನೇಕ ಕಾರಣಗಳಿಂದಾಗುವ ಅಂತಃಕರಣದ ಜ್ಞಾನವೃತ್ತಿ, ೧೫-೩೫

೭೫. **ಜ್ಞಾನವಿರಾಗಭೇಷಜಮ್**—
ಜ್ಞಾನವೈರಾಗ್ಯಗಳೆಂಬ ತೃಷ್ಣಾಜ್ವರದ ಔಷಧ, ೧೯-೧

೭೬. **ಜ್ಞಾನಭಾಸಬುದ್ಧಯಃ**—
ಚೈತನ್ಯದಂತೆ ತೋರುವ ಬುದ್ಧಿವೃತ್ತಿಗಳು, ೧೪-೬೭

೭೭. **ತಪ್ತಾಯೋವಿಸ್ಫುಲಿಙ್ಗವತ್**
ಕಾದ ಕಬ್ಬಿಣದ ಕಿಡಿಗಳಂತೆ, ಚೈತನ್ಯವಲ್ಲದ ಬುದ್ಧಿ ಚೈತನ್ಯದಂತೆ ಕಾಣುವ ದಕ್ಕೆ ದೃಷ್ಟಾಂತ, ೧೪-೪೦

೭೮. **ತಮಃ, ತಮೋಬೀಜಮ್**—
ಸುಷುಪ್ತಿ, ೧೪-೩೭, ೧೫-೨೩; ೧೭-೨೬, ೬೦

೭೯. **ತುರೀಯಃ**—
ಅವಸ್ಥಾತ್ರಯಕ್ಕೆ ನಾಲ್ಕನೆಯವ (ಆತ್ಮ), ೧೦-೪

೮೦. ತುಲಾಸ್ತೌ—
ತಕ್ಕಡಿಯ ಕೊನೆಯ ಪರಡಿಗಳು, ಬಂದು ತಪ್ಪಿದರೆ ಇನ್ನೊಂದಾಗುವ ಸದಸತ್ತುಗಳಿಗೆ ದೃಷ್ಟಾಂತ, ೧೯-೨೧

೮೧. ತುಲ್ಯನೀಡತ್ವಮ್—
ತತ್ತ್ವಂಪದಗಳ ಸಾಮಾನಾಧಿಕರಣ್ಯ, ೧೪-೧೬॥, ೧೪೩॥

೮೨. ತ್ವಂಪದಾರ್ಥವಿವೇಕಃ—
ತತ್ತ್ವಮಸಿ ಎಂಬ ವಾಕ್ಯದಿಂದ ಪ್ರತ್ಯಗಾತ್ಮನನ್ನು ಬೆಂಗಡಿಸಿ ಅರಿತುಕೊಳ್ಳುವದು, ೧೪-೧೫೫, ೨೧೧

೮೩. ದಶಮಃ —
ಹತ್ತನೆಯವನು, ತಾನೇ ತನ್ನನ್ನು ಪುಟೆ ತಿದ್ದಿದ್ದಕ್ಕೆ ದೃಷ್ಟಾಂತ, ೧೨-೩ ೧೪-೧೬॥, ೧೩೪, ೧೩೯, ೧೪೪

೮೪. ದಾಶರಥಿಃ—
ತಾನು ವಿಷ್ಣುವೆಂಬುದನ್ನು ಬ್ರಹ್ಮನಿಂದ ಅರಿತುಕೊಂಡ ರಾಮ ೧೪-೬೭

೮೫. ದೃಶೇಶ್ಚಾಯಾ—
ಆತ್ಮನ ಆಭಾಸ, ೧೨-೬

೮೬. ದೃಶ್ಯ—
ಆತ್ಮನಿಗೆ ವಿಷಯವಾಗಿರುವ (ಅನಾತ್ಮ), ೧೫-೪, ೧೬

೮೭. ದೃಷ್ಟವಮ್—
ಅನುಭವಕ್ಕೆ ಬರುವ ಜಾಗ್ರತ್ತು, ೧೫-೨೩

೮೮. ದೃಷ್ಟಾನ್ತಃ—
ಕಂಡಿರುವ ವಸ್ತು, ದಾರ್ಷ್ಟಾಂತಿಕಕ್ಕೆ ಎಲ್ಲಾ ಭಾಗದಲ್ಲೂ ಸಮನಾಗಿರಬೇಕಾದದ್ದಿಲ್ಲ, ೧೪-೨೩

೮೯. ದೇಹಯೋಗಃ—
ದೇಹದ ಸಂಬಂಧ, ಜನ್ಮ, ೧-೧೪, ೧೫೬

೯೦. ದೇಹಾತ್ಮಜ್ಞಾನಮ್, ದೇಹಾತ್ಮತ್ವಮ್—
ನೇಪನೇ ತಾನೆಂಬ ಜ್ಞಾನ, ೪-೫, ೧೧-೫

೯೧. ದೇಹಾಭಿಮಾನೀ—
ದೇಹವೇ ತಾನೆಂದುಕೊಂಡು ಮೈಮರೆಸುವವನು, ೧೨-೫

೯೨. ದೀಪಃ—
ಆತ್ಮನಿಗೆ ದೃಷ್ಟಾಂತ, ೧೬-೬, ಮೋಕ್ಷಕ್ಕೆ ದೃಷ್ಟಾಂತ, ೧೯-೨೫

೯೩. ದೃಗಾದಿಶಕ್ತಯಃ—
ನೋಟವೇ ಮುಂತಾದ ಚೈತನ್ಯರೂಪ ಶಕ್ತಿಗಳು, ೧೨-೯

೯೪. ದೇಹಾದ್ಯಾರಮ್ಭಃ—
ನೇಪನೇ ನುಂತಾದ ಕಾರ್ಯವನ್ನುಂಟು ಮಾಡಿರುವದು, ೪-೩

೯೫. ದ್ರಷ್ಟಾ—
ಸಾಕ್ಷಿಯಾದಾತ್ಮ, ೨-೫; ೧೪-೪, ೨೦; ೧೬-೪

೯೬. ದ್ರಷ್ಟೃತ್ವಮ್—
ಅಂತಃಕರಣವನ್ನು ವ್ಯಾಪಿಸುವ ಮೂಸಾಕ್ಷಿತ್ವವು, ೧೪-೬

೯೭. ದೃಷ್ಟ್ಯಾಭಾಸವಮ್—
ಚೈತನ್ಯದಂತೆ ಕಾಣುವ ಚಿತ್ತ, ೧೨-೧

೯೮. ದ್ವಂದ್ವಾನಿ—
ಶೀತೋಷ್ಣದುಃಖಾದಿಗಳು, ೧೫-೪೭

೯೯. ಧೀಪ್ರತ್ಯಯಾತ್ಮಾ—
ಅಂತಃಕರಣ ಪ್ರತ್ಯಯಗಳಿಗೆ ಆತ್ಮ, ೧೪-೧

೧೦೦. ಧೀಸಾಕ್ಷೀ—
ಅಂತಕರಣವನ್ನು ನೋಡುವ ಆತ್ಮ, ೧೫-೧೨

೧೦೧. ಧ್ರುವಕಾರ್ಯಮ್, ಧ್ರುವಫಲಮ್— ಆವಶ್ಯವಾಗಿ ಫಲವನ್ನು ಕೊಡುವ (ಕರ್ಮ), ೧-೯, ೧೧

೧೦೨. ಧ್ಯಾನಮ್— ಆತ್ಮಚಿಂತನೆ, ೧೪-೩೯

೧೦೩. ನಭಃ— ಎಲ್ಲೆಲ್ಲಿಯೂ ಒಬ್ಬನೇ ಇರುವ ಆತ್ಮನಿಗೆ ದೃಷ್ಟಾಂತವಾದ ಆಕಾಶ, ೧೭-೬೯

೧೦೪. ನರಶೃಙ್ಗಮ್— ಅರ್ಥಕ್ರಿಯಾಕಾರಿಯಲ್ಲದ್ದಕ್ಕೆ ದೃಷ್ಟಾಂತವಾದ ಮನುಷ್ಯನ ಕೋಡು, ೧೯-೧೬

೧೦೫. ನಿತ್ಯಮುಕ್ತ— ಯಾವಾಗಲೂ ಮುಕ್ತನಾಗಿರುವ ಆತ್ಮ, ೧೩-೧೧, ೧೬ ; ೧೪-೩, ೧೭೪, ೧೪೨

೧೦೬. ನಿತ್ಯವಿಜ್ಞಾನರೂಪಃ, ನಿತ್ಯಾವಗತಿಃ— ನಿತ್ಯವಾದ ಚೈತನ್ಯಸ್ವರೂಪನಾದ ಆತ್ಮ, ೧೩-೫, ೧೪-೧

೧೦೭. ನಿರುಪಾಖ್ಯಃ— ವರ್ಣಿಸಿ ಹೇಳುವದಕ್ಕೆ ಆಗದು, ೧೫-೩೯

೧೦೪. ನಿಃಶ್ರೇಯಸಮ್— ಮೋಕ್ಷ, ೧-೫, ೭

೧೦೯. ನೀಲಾಶ್ವಃ— ಕರಿಯ ಕುದುರೆ, ತತ್ತ್ವಂಪದಾರ್ಥಗಳ ಸಾಮಾನಾಧಿಕರಿ ಇದಕ್ಕೆ ದೃಷ್ಟಾಂತ, ೧೪-೧೬೪॥

೧೧೦. ನ್ಯಾಸಃ— ಕರ್ಮಸಂನ್ಯಾಸ, ೧-೨೦

೧೧೧. ಪಟೇ ಚಿತ್ರಮ್— ಬಟ್ಟೆಯಲ್ಲಿ ಬರೆದ ಚಿತ್ರ, ಸ್ಮರಣೆಯಿಂದ ಕಾಣುವ ವಸ್ತುವಿಗೆ ದೃಷ್ಟಾಂತ, ೧೫-೨

೧೧೨. ಪರಮಾರ್ಥದರ್ಶನಮ್— ನಿಜವಾಗಿರುವ ಬ್ರಹ್ಮದ ಜ್ಞಾನ, ೧೦-೧೪

೧೧೩. ಪರಾಪೋಹಃ— ಅನಾತ್ಮವನ್ನು ಅಲ್ಲಗಳೆಯುವದು, ೧೪-೧೧

೧೧೪. ಪಾರಗಃ— ನದಿಯ ಆಚೆಯ ದಡವನ್ನು ಕಂಡವನು, ಕೃತಕೃತ್ಯ, ೧೪-೧೩

೧೧೫. ಪ್ರತ್ಯಕ್ಷತಾ— ನೇರಾಗಿ ಅನುಭವಕ್ಕೆ ಬರುವಿಕೆ, ೧೪-೩೬

೧೧೬. ಪ್ರತಕ್ಷಾದೀನಿ— ಪ್ರತ್ಯಕ್ಷವೇ ಮುಂತಾದ ಲೌಕಿಕಪ್ರಮಾಣಗಳು, ೧೧-೫, ೧೪-೧೭೭

೧೧೭. ಪ್ರತ್ಯಕ್ಷಾದಿನಿಭ, ಪ್ರತ್ಯಕ್ಷಾಭಾಸ— ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಂತೆ ಕಾಣುವ ಭ್ರಾಂತಿ, ೧೪-೭, ೧೭೪, ೩೦೭

೧೧೪. ಪ್ರತ್ಯಗಾತ್ಮಾ— ಒಳಗಿನ ಆತ್ಮ, ೧-೧೪, ೩-೪, ೧೪-೯೪, ೧೬೪, ೧೬೫, ೧೪೪, ೧೯೩, ೧೯೪

೧೧೯. ಪ್ರತ್ಯಯಾವಗತೀ— ಅಂತಃಕರಣದ ವೃತ್ತಿ ಮತ್ತು ಫಲರೂಪ ಜ್ಞಾನ, ೧೪-೯೫॥

೧೨೦. ಪ್ರಮಾ— ಪ್ರಮಾಣದಿಂದಾಗುವ ಜ್ಞಾನ, ೧೪-೧೦೧, ೧೪೭

೧೨೧. ಪ್ರಸಜ್ಯಾಖ್ಯಾನಮ್, ಪ್ರಸಜ್ಯಪ್ರತಿಷೇಧ— ಸಾಕ್ಷಾತ್ತಾರಕ್ಕಾಗಿ ಮಾಡುವ ಶಾಸ್ತ್ರಯುಕ್ತಿಗಳ ಅಭ್ಯಾಸ, ೧೪-೯,೧೨-೧೭

೧೨೨. ಪ್ರತ್ಯವಾಯಃ— ಕರ್ಮವನ್ನು ಮಾಡದೆ ಇರುವದರಿಂದಾಗುವ ದೋಷ, ೧-೯, ೧-೨೪

೧೨೩. **ಫಲಮ್**—
ಪ್ರಮಾಣದಿಂದುಂಟಾಗುವಂತಿರುವ ಜ್ಞಾನ, ಆತ್ಮಚೈತನ್ಯವು, ೨-೩

೧೨೪. **ಫಲಾರ್ಥಿತ್ವಮ್**—
ಕರ್ಮದ ಫಲವನ್ನು ಬಯಸುವಿಕೆ, ೧-೨೪

೧೨೫. **ಬನ್ಧನೋಕ್ಷಾದಯಃ**—
ಬಂಧಮೋಕ್ಷಾದಿಗಳು ಕಲ್ಪಿತ, ನಿಜವಾದ ಅವಸ್ಥೆಗಳಲ್ಲ, ೧೫-೪೯, ೧೬-೩೯

೧೨೬. **ಬಿಮ್ಬವಮ್**—
ಚಂದ್ರಾದಿಗಳ ಪ್ರತಿಬಿಂಬವು, ಅವೈಶ್ಯನಾದ ಆತ್ಮನು ಅಂತಃಕರಣದಲ್ಲಿ ಕಾಣುತ್ತಾನೆಂಬುದಕ್ಕೆ ದೃಷ್ಟಾಂತ, ೧೭-೩೪, ೪೫

೧೨೭. **ಬೀಜಮ್**—
(೧) ಎಚ್ಚರಕನಸುಗಳ ಕಾರಣವಾದ ನಿದ್ರೆ, ೧೬-೧೮, ೧೭-೨೫, (೨) ಸುಟ್ಟ ಬೀಜ. ಜ್ಞಾನದಿಂದ ಹೋದದ್ದು ಮತ್ತೆ ಹುಟ್ಟುವದಿಲ್ಲವೆಂಬುದಕ್ಕೆ ದೃಷ್ಟಾಂತ, ೧೭-೨೬ (೩) ಕಾರಣ, ೧೦-೧೦, ೧೪-೧೯

೧೨೮. **ಬುದ್ಧಿಚಾರಾಃ**—
ಅಂತಃಕರಣವೃತ್ತಿಗಳು, ೭-೨

೧೨೯. **ಬುಭುತ್ಸುಃ**—
ತತ್ತ್ವವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವ, ೩-೪

೧೩೦. **ಬೋಧಾಬೋಧೌ**
ಜ್ಞಾನಾಜ್ಞಾನಗಳು (ನಿಜವಾಗಿ ಆತ್ಮನಲ್ಲಿಲ್ಲ), ೧೫-೫೦

೧೩೧. **ಬ್ರಹ್ಮ**—
ಅಪರೋಕ್ಷವಾಗಿರುವ ನಮ್ಮಗಳ ಆತ್ಮ, ೧೭-೪೦

೧೩೨. **ಬ್ರಹ್ಮವಿತ್**
ಬ್ರಹ್ಮವನ್ನು ಅರಿತುಕೊಂಡವನು, ೧೪-೧೧ ೧೫ ; ೧೫-೧೧

೧೩೩. **ಬ್ರಹ್ಮವಿದ್ಯಾ**—
ಬ್ರಹ್ಮದ ಜ್ಞಾನ, ೧-೨, ೫, ೨೫

೧೩೪. **ಭಾನುಃ**—
ಸೂರ್ಯ, ಆತ್ಮನಿಗೆ ಜ್ಞಾನಾಜ್ಞಾನಗಳಿಲ್ಲವೆಂಬುದಕ್ಕೆ ದೃಷ್ಟಾಂತ, ೧೭-೬೭

೧೩೫. **ಭಾನೋರ್ಬಿಮ್ಬವತ್**—
ಸೂರ್ಯನ ಪ್ರತಿಬಿಂಬ, ಅಂತಃಕರಣದಲ್ಲಿ ತೋರುವ ಜ್ಞಾನವು ಆದರದ್ದಲ್ಲವೆಂಬುದಕ್ಕೆ ದೃಷ್ಟಾಂತ, ೧೭-೩೫

೧೩೬. **ಭಾವನಾ**—
ಕರ್ಮಕ್ಕೆ ಕಾರಣವಾದ ಕಾಮ, ೧೦-೯

೧೩೭. **ಭಾವಾಭಾವಜ್ಞಃ**—
ಭಾವಕ್ಕೂ ಅಭಾವಕ್ಕೂ ಸಾಕ್ಷಿಯಾಗಿರುವ ಆತ್ಮ, ೧೬-೩೧

೧೩೮. **ಭ್ರಾನ್ತಿಕಃ**
ಸೂಜಿಗಲ್ಲು, ಆತ್ಮನ ಕರ್ತೃತ್ವಕ್ಕೆ ದೃಷ್ಟಾಂತ, ೧೫-೪೭॥, ೧೭-೨೦

೧೩೯. **ಮಣಿಃ**—
ಸ್ಫಟಿಕ, ಬುದ್ಧಿಯಲ್ಲಿ ನಾನಾವೃತ್ತಿಗಳಾಗುವದಕ್ಕೆ ದೃಷ್ಟಾಂತ, ೭-೪, ೧೭-೧೬, ೧೮-೧೦೯

೧೪೦. **ಮಾಯಾ**—
(೧) ಕಣ್ಣುಕಟ್ಟಿನಿಂದ ಕಾಣುವ ಹುಸಿತೋರಿಕೆ, ೧೭-೩೧. (೨) ಜಗತ್ತೆಂಬ ಹುಸಿತೋರಿಕೆ, ೧೯-೫. ಅವಿದ್ಯೆ, ೧೯-೧೭

೧೪೧. **ಮಾಯಾಬೀಜಮ್**—
ಅವಸ್ತ್ವಾತ್ಮಯವಾಗಿ ಕಾಣುವ ಸುಷುಪ್ತಿ, ೧೭-೩೭

೧೪೨. **ಮಾಯೋಮಯಕಾರ್ಯತಾ**
ಹುಸಿತೋರಿಕೆಗಳನ್ನು ಸೃಷ್ಟಿಸುವ ಅಂತಃಕರಣದ ಧರ್ಮ, ೪-೨

೧೪೩. **ಮಾಯಾಹಸ್ತೀ—**
ಇಂದ್ರಜಾಲದಿಂದ ನಿರ್ಮಿತವಾದ ತೋರಿಕೆಯು ಆನೆ, ೧೭-೨೯

೧೪೪. **ಮಿಥ್ಯಾಭಿಮಾನಃ—**
ಸುಳ್ಳಾಗಿಯೇ ತನ್ನದೆಂದು ತಿಳಿಯುವದು, ೧೪-೧೫, ೧೬೧

೧೪೫. **ಮಿಥ್ಯಾಧ್ಯಾಸನಿಷೇಧಃ—**
ಹುಟ್ಟುಗಟ್ಟಿರುವ ಹುಸಿತೋರಿಕೆಯನ್ನು ಅಲ್ಲಗಳೆಯುವದು, ೧೬-೩೦

೧೪೬. **ಮೃಷಾಧ್ಯಾಸಃ—**
ಸುಳ್ಳಾಗಿಯೇ ಮೇಲೆಹಾಕಿ ಹುಟ್ಟುಗಟ್ಟಿರುವದು, ೧೬-೩೦

೧೪೭. **ಮುಮುಕ್ಷುಃ—**
ಮೋಕ್ಷದಲ್ಲಿ ದೃಢವಾದ ಇಚ್ಛೆಯುಳ್ಳವನು, ೧-೧೫, ೨೧

೧೪೮. **ಯುಷ್ಮದಸ್ಮದ್ವಿಭಾಗಜ್ಞಃ—**
ನಾನು ನೀನು ಎಂಬ ಪ್ರತ್ಯಯಕ್ಕೆ ಆರ್ಹವಾದ ಆತ್ಮಾನಾತ್ಮಗಳನ್ನು ವಿಂಗಡಿಸಿ ಅರಿತಿರುವವನು, ೧೪-೪೭

೧೪೯. **ಯುಷ್ಮದ್ಧರ್ಮಃ—**
ಅನಾತ್ಮಧರ್ಮ, ೧೪-೪

೧೫೦. **ಯೋಗೀ—**
ಜ್ಞಾನಿ, ೧೨-೭

೧೫೧. **ರಜ್ಜುಸರ್ಪಃ, ರಜ್ಜ್ವಾಮಹಿಃ, ರಜ್ಜ್ವಾಂ ಸರ್ಪಃ—**
ಪಗ್ಗದಲ್ಲಿ ಹುಟ್ಟುಗಟ್ಟಿರುವ ಹಾವು, ೧೪-೧೭ ; ೧೪-೪, ೪೪

೧೫೨. **ರಾಜಾ—**
ಸುಮ್ಮನಿರುವವನಿಗೂ ಫಲವುಂಟೆಂಬುದಕ್ಕೆ ದೃಷ್ಟಾಂತ, ೧೪-೧೦೫

೧೫೩. **ರಾಹುಃ—**
ತಾನು ಅವೃಶ್ಯನಾದರೂ ಚಂದ್ರನಲ್ಲಿ ತೋರುವ ರಾಹು, ಆತ್ಮನು ಅಂತಃಕರಣದಲ್ಲಿ ಕಾಣುವನೆಂಬುದಕ್ಕೆ ದೃಷ್ಟಾಂತ, ೧೭-೩೪

೧೫೪. **ರೂಪಸ್ಮೃತ್ಯನ್ಧಕಾರಾಃ—**
ಕಾಣುವದು, ನೆನಸುವದು, ಕತ್ತಲೆ— ಎಂಬ ರೂಪದ ಜಾಗ್ರದಾದ್ಯವಸ್ಥೆಗಳು, ೧೫-೩೪

೧೫೫. **ಲೋಕಬುದ್ಧಿಃ—**
ಅವಿಚಾರಿತವೃಷ್ಟಿಯ ಜನರ ಬುದ್ಧಿ, ೧೪-೪

೧೫೬. **ವಸ್ತುಸತ್—**
ನಿಜವಾಗಿಯೂ ಇರುವ, ೧೪-೪೪, ೪೭

೧೫೭. **ವಸ್ತ್ವಧೀನ—**
ವಸ್ತುವಿಗೆ ಅಧೀನವಾಗಿರುವ (ಜ್ಞಾನ,) ೧-೧೩

೧೫೮. **ವಿಕಲ್ಪಃ, ವಿಕಲ್ಪನಾ—**
ಸುಮ್ಮನೆ ಕಲ್ಪಿಸುವದು, ೧೬-೧೬, ೩೪, ೩೬ ; ೧೯-೧೦, ೧೨, ೧೩

೧೫೯. **ವಿಕಾರಃ—**
(೧) ಕಾರ್ಯ, ೧೬-೩೫, ೧೪-೩೪, (೨) ಮಾರ್ಪಾಡು, ೧೦-೬

೧೬೦. **ವಿದ್ಯೆ—**
ಆತ್ಮಜ್ಞಾನ, ೧-೭, ೪, ೯, ೧೨, ೧೯, ೨೨

೧೬೧. **ವಿದ್ಯಾವಿದ್ಯೇ—**
ಏಕತ್ವಬುದ್ಧಿ ಎಂಬ ಜ್ಞಾನ, ಅನ್ಯತ್ವಬುದ್ಧಿ ಎಂಬ ಅಜ್ಞಾನ, ೧೭-೨೧

೧೬೨. **ವಿವೇಕಃ—**
ಆತ್ಮನನ್ನು ವಿಂಗಡಿಸಿ ಅರಿತುಕೊಳ್ಳುವದು, ೭-೬

೧೬೩. **ವಿಷಾಪೋಹಃ—**
ಗರುಡಧ್ಯಾನದಿಂದ ವಿಷಹೋಗುವದು, ೧೪-೫

೧೬೪. **ವೇದಃ**—
ಯಾವದರಿಂದ ತಿಳಿಯುತ್ತಾರೋ ಆ ಚೈತನ್ಯವೆಂಬ ಮುಖ್ಯವೇದ. ೧೭-೧೩

೧೬೫. **ವ್ಯಞ್ಜಕಃ**—
ವಿಷಯವನ್ನು ತೋರಿಸುವ ಬೆಳಕು, ಬೆಳಕಿನಂತೆ ವಿಷಯಾಕಾರವಾಗುವ ಮನಸ್ಸು, ೧೪-೬, ೧೬-೫

೧೬೬. **ವ್ಯಸ್ತವ್**—
ಬಿಡಿಬಿಡಿಯಾಗಿರುವ, ೧೫-೨೦

೧೬೭. **ವ್ಯೋಮ**—
(೧) ಕಪ್ಪೆಂಬ ಅಧ್ಯಾಸವಿರುರುವ ಆಕಾಶ, ೯-೫; (೨) ಉಪಾಧಿಯಿಂದ ಅನೇಕವೆಂದು ತೋರುವ ಆಕಾಶ, ೧೩-೨೦; ಏತರ ಲೇಪವೂ ಇಲ್ಲದ ನಿರ್ಮಲವಾದ ಆಕಾಶ, ೧೦-೧೪, ೧೧-೬, ೧೪-೩೧; ವ್ಯಾಪಕವಾದ ಆಕಾಶ, ೧೪-೩೪, ೧೫-೯

೧೬೮. **ಶಕ್ತಯಃ**—
ಚೈತನ್ಯದಲ್ಲಿ ಉಪಾಧಿಯಿಂದ ಕಲ್ಪಿತವಾಗಿರುವ ದೃಶ್ಯಾದಿಶಕ್ತಿಗಳು, ೧೦-೯, ೧೭-೫೪

೧೬೯. **ಶರೀರಮಾಲಾ**—
ಒಂದಾಗುತ್ತಲೊಂದು ಬರುವ ಶರೀರಗಳ ಸಾಲು, ೧೯-೧

೧೭೦. **ಶಿರೋದುಃಖಮ್**—
ತಲೆನೋವು (ದೇಹದಲ್ಲಿ ಒಂದು ಭಾಗದಲ್ಲಾಗುವ ಅನಾತ್ಮಧರ್ಮ), ೧೬-೪

೧೭೧. **ಶ್ರುತಾನುಮಾನಜಜ್ಞಾನೌ**—
ಶ್ರುತಿಯಿಂದಲೂ ಅನುಮಾನದಿಂದಲೂ ಹುಟ್ಟುವ ಸಾಮಾನ್ಯರೂಪಜ್ಞಾನಗಳು, ೧೪-೧೪

೧೭೨. **ಷಡೂರ್ಮಯಃ**—
ಹಸಿವುಬಾಯಾರಿಕೆ, ಮುಪ್ಪುಸಾವು, ಶೋಕಮೋಹ ಎಂಬ ಅನಾತ್ಮಧರ್ಮಗಳು, ೧೯-೪

೧೭೩. **ಸಂಹತ**—
ಒಟ್ಟುಗೂಡಿ ವ್ಯಾಪಾರಮಾಡುವ, ೧೬-೯

೧೭೪. **ಸಙ್ಘಾತಃ**—
ಕಾರ್ಯಕಾರಣಗಳ ಗುಂಪು, ೧೫-೧೯, ೧೬-೭

೧೭೫. **ಸತ್ತ್ವಕ್ಷೇತ್ರಜ್ಞೌ**—
ಅಂತಃಕರಣವೂ ಸಾಕ್ಷಿಯಾದ ಆತ್ಮನೂ, ೧೫-೨

೧೭೬. **ಸದಸದ್ವಿಕಲ್ಪನಾ**—
ಇರುವದು, ಇಲ್ಲದ್ದು ಎಂದು ವಿಕಲ್ಪಿಸುವದು, ೧೯-೨೦

೧೭೭. **ಸದಸದ್ವಿಪರ್ಯಯಃ**—
ಇದ್ದದ್ದು ಇಲ್ಲವಾಗುವದು, ಇಲ್ಲದ್ದು ಇರುವದಾಗುವದು, ೧೯-೨೨

೧೭೮. **ಸಮಸ್ತವ್**—
ವ್ಯಷ್ಟಿಗಳನ್ನೆಲ್ಲ ಸೇರಿಸಿಕೊಂಡು ವ್ಯಾಪಿಸಿರುವ ಒಟ್ಟು, ೧೫-೨೦

೧೭೯. **ಸಮಾಧಿಃ** —
ನಿಲುಗಡೆಗೆ ಬರುವದು, ಚಾಂಚಲ್ಯವಿಲ್ಲದಿರುವದು, ೧೩-೧೪. ೧೪-೫೫.

೧೮೦. **ಸರ್ಪಿಃ** —
ಹಾಲಿನಿಂದ ಹೊರಕ್ಕೆ ಬಂದು ಅವರಲ್ಲಿ ಮತ್ತೆ ಬೆರೆಯದ ಬೆಣ್ಣೆ ಅಥವಾ ತುಪ್ಪ, ಜ್ಞಾನದಿಂದ ದೇಹಕ್ಕಂಟದ ಆತ್ಮನಿಗೆ ದೃಷ್ಟಾಂತ, ೧೭-೬೧.

೧೮೧. **ಸರ್ವಪ್ರತ್ಯಯಸಾಕ್ಷೀ**—
ಎಲ್ಲಾ ಪ್ರತ್ಯಯಗಳನ್ನೂ ನೇರಾಗಿ ನೋಡುವ ಕೂಟಸ್ಥಚೈತನ್ಯ, ೧೫-೧೭, ೩೮

೧೮೨. **ಸರ್ವಾನ್ತರಃ** —
ಎಲ್ಲಕ್ಕೂ ಒಳಗಿನ ಆತ್ಮ, ೧೨-೯

೧೮೩. **ಸುಷುಪ್ತವ್, ಸ್ವಾಪಃ** —
ಗಾಢನಿದ್ರೆ, ೯-೪, ೧೦-೧೩, ೧೭-೫೯

೧೪೪. **ಸೋಪಾಧಿಃ** —
ಉಪಾಧಿಯಿಂದ ಬೇರೆಯಾಗಿ ತೋರುವ ಆತ್ಮ, ೧೫-೨೯

೧೪೫. **ಸ್ಥೂಲದೇಹಃ** —
ಮಾಂಸಮಯವಾಗಿ ಇಂದ್ರಿಯಗಳಿಗೆ ಕಾಣುವ ದೇಹ, ೧೫-೧೦

೧೪೬. **ಸ್ಮೃತಿಃ** —
(೧) ಶ್ರುತ್ಯರ್ಥವನ್ನು ಹೇಳುವ ಗ್ರಂಥ, ೧೪-೨೩ ;
(೨) ನೆನಪು, ೧೪-೬೭, ೧೫೫.
(೩) ಅನ್ವಯವ್ಯತಿರೇಕಗಳಿಂದಾಗುವ ಪದಾರ್ಥಗಳ ಸ್ಮರಣೆ, ೧೧-೧೭೧
(೪) ಸ್ವಪ್ನಾವಸ್ಥೆ, ೧೫-೨೩, ೩೪ ; ೧೭-೨೫

೧೪೭. **ಸ್ವಬೋಧಃ** —
ತನ್ನ ಸ್ವರೂಪವಾಗಿ ಚೈತನ್ಯರೂಪವಾದ ಜ್ಞಾನ, ೧೫-೪೧

೧೪೮. **ಸ್ವಯಂಲಬ್ಧ**—
ತಾನೇ ಪ್ರಾಪ್ತವಾಗಿರುವ ಆತ್ಮ ೧೭-೬

೧೪೯. **ಸ್ವಯಂಸಿದ್ಧ**—
ಮತ್ತೊಂದು ಜ್ಞಾನವನ್ನು ಅಪೇಕ್ಷಿಸ ಗೊತ್ತಾಗುವ, ೧-೩,

೧೫೦ **ಸ್ವರೂಪಲಾಭಃ** —
ಆತ್ಮಸ್ವರೂಪದ ಪ್ರಾಪ್ತಿ, ೧೬-೭೪

೧೫೧. **ಸ್ವರೂಪಾವ್ಯವಧಾನೇ**—
ತನ್ನ ರೂಪವೂ ನಡುವೆ ಯಾವ ಮರೆ ಮರೆಯಿಲ್ಲದ್ದೂ ಆಗಿರುವದೆಂಬ ಹೇತುಗಳು, ೧೫-೪೦

೧೫೨. **ಸ್ವಲಕ್ಷಣಮ್**—
ತನ್ನ ಅಸಾಧಾರಣರೂಪ, ೧೪-೧೪೨

೧೫೩. **ಸ್ವಾಭಾವಿಕಂ ಪದಮ್**—
ತನ್ನ ರೂಪವೇ ಆಗಿರುವ ಸ್ಥಾನ, ಆತ್ಮ, ೧೧-೨೨

೧೫೪ **ಹಾನೋಪಾದಾನೇ**—
ಬಿಡುವದು ಮತ್ತು ತೆಗೆದುಕೊಳ್ಳುವದು (ಅನಾತ್ಮದ ಧರ್ಮ), ೧೪-೯, ೧೪.


ॐ

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಸಂಖ್ಯೆ ೫೨

ಶ್ರೀ ಶಂಕರಾಚಾರ್ಯವಿರಚಿತ

ಅಪರೋಕ್ಷಾನುಭೂತಿ



ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು:
ಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರು

ಅಧ್ಯಾತ್ಮಗ್ರಂಥಾವಳಿಯ ಕ್ರಮಾಂಕ ೨೧

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೧೯೪೯

ಮೊದಲನೆಯ ಸಂಸ್ಕರಣ ೧೯೪೯
(೧೦೦೦ ಪ್ರತಿಗಳು)

ಇವರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಕಾರರು:
ವೈ. ನರಸಪ್ಪ
ಅಧ್ಯಾತ್ಮಪ್ರಕಾಶ ಮುದ್ರಣಾಲಯ,
ಹೊಳೆನರಸೀಪುರ.

ಮೊದಲ ಮಾತು



ಅಪರೋಕ್ಷಾನುಭೂತಿಯು ವಿಸ್ತಾರವಾದ ಕನ್ನಡ ವ್ಯಾಖ್ಯಾನದೊಡನೆ ಕಾರ್ಯಾಲಯದಲ್ಲಿ ಅಚ್ಚಾಗಿ ಒಂಬತ್ತು ವರ್ಷಗಳಾದವು. ಈಗ ಶ್ರೀಜಯ ಚಾಮರಾಜೇಂದ್ರಗ್ರಂಥರತ್ನಮಾಲೆಗೆ ತಕ್ಕಂತೆ ಮೂಲ, ಅನುವಾದ, ಟಪ್ಪಣಿ, ಅನುಕ್ರಮಣಿಕೆಗಳು, ಪೀಠಿಕೆ – ಇಷ್ಟು ಪರಿಕರಗಳೊಡನೆ ಮುದ್ರಿಸಲಾಗಿದೆ. ಪೀಠಿಕೆಯಲ್ಲಿ ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳವರು ಗ್ರಂಥದ ವಿಷಯದಲ್ಲಿ ವಿವೇಚನೆಮಾಡಿರುವ ವಿಷಯಗಳು ವಿಶೇಷಮಹತ್ತ್ವದವಾಗಿವೆ. ಸಂಪುಟದಲ್ಲಿ ಸೇರಿರುವ ಇತರ ಪ್ರಕರಣಗಳ ಹೋಲಿಕೆಯಿಂದ ಗ್ರಂಥದ ತತ್ತ್ವ ನಿರ್ಧಾರಣೆಗೆ ಪ್ರಯೋಜನವಾಗುವದೆಂದು ನಮ್ಮ ನಂಬಿಕೆ.

ಅಧ್ಯಾತ್ಮಪ್ರಕಾಶ ಕಾರ್ಯಾಲಯ
30—10—49

ಪ್ರಕಾಶಕರು

ಪೀಠಿಕೆ

ಅಪರೋಕ್ಷಾನುಭೂತಿಗ್ರಂಥವು ಮೂರ್ತಿಯಲ್ಲಿ ಚಿಕ್ಕದಾದರೂ ಬೆಲೆಯಲ್ಲಿ ಅತ್ಯುತ್ತಮವಾದ ಪ್ರಕರಣಗಳಲ್ಲೊಂದೆನಿಸಿರುತ್ತದೆ. ಇದರ ವಿಷಯದಲ್ಲಿ ವಿಸ್ತಾರವಾದ ಪೀಠಿಕೆಯನ್ನು ಕಾರ್ಯಾಲಯದ ಸವ್ಯಾಖ್ಯಾನಸಂಸ್ಕರಣದಲ್ಲಿ ಬರೆದಿತ್ತು. ಅದರಲ್ಲಿ ''ಗ್ರಂಥಕರ್ತರು ಶ್ರೀ ಶಂಕರಾಚಾರ್ಯರೇ ಅಲ್ಲದಿದ್ದರೂ ಅವರ ಸಿದ್ಧಾಂತವನ್ನೇ ಎತ್ತಿಹಿಡಿಯುವದಕ್ಕೆ ಬದ್ಧಾದರರಾಗಿರುವರೆಂತಲೂ ಈ ಗ್ರಂಥದಲ್ಲಿ ಯಾವ ಅರ್ವಾಚೀನ ಗ್ರಂಥಗಳಿಂದಲೂ ಪ್ರಮಾಣವಚನಗಳನ್ನು ಉದಾಹರಿಸಿಲ್ಲವಾದ್ದರಿಂದ ಇವರು ತಕ್ಕಮಟ್ಟಿಗೆ ಪ್ರಾಚೀನರೇ ಆಗಿರುವರೆಂತಲೂ ಹೇಳಬೇಕಾಗಿದೆ'' ಎಂದು ಹೇಳಿತ್ತು.

ಗ್ರಂಥವು ಆಚಾರ್ಯರದ್ದಾಗಿರಲಾರದೆಂದು ಕಲ್ಪಿಸುವವರಿಗೆ ಯುಕ್ತಿಗಳು ಯಾವವೆಂದರೆ (೧) ನಿದಿಧ್ಯಾಸನವನ್ನು ಧ್ಯಾನಾಭ್ಯಾಸವೆಂಬಂತೆ ಪರಿಗಣಿಸಿ ಬ್ರಹ್ಮಾಕಾರವೃತ್ತಿಯನ್ನು ಅಭ್ಯಾಸಮಾಡಿದರೆ ವೃತ್ತಿವಿಸ್ಮರಣರೂಪವಾದ ಸಮಾಧಿಜ್ಞಾನವುಂಟಾಗುವದೆಂದು ತಿಳಿಸಿರುವದು (೧೨೪, ೧೩೭) ಮತ್ತು (೨) ನಿದಿಧ್ಯಾಸನವನ್ನು ರಾಜಯೋಗವೆಂದು ಕರೆದು ಅದಕ್ಕೆ ಹದಿನೈದು ಅಂಗಗಳನ್ನೂ (೧೦೦) ಸಮಾಧಿಗೆ ಎಂಟು ವಿಘ್ನಗಳನ್ನೂ (೧೨೭, ೧೩೮) ಕಲ್ಪಿಸಿ ಪಾತಂಜಲಯೋಗಕ್ಕೆ ಇದನ್ನು ಪ್ರತಿಪಕ್ಷವಾಗಿ ನಿಲ್ಲಿಸಿರುವದು. ಶ್ರೀ ಶಂಕರಾಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯದಲ್ಲಿ ಬಳಸದೆ ಇರುವ ಕೆಲವು ಪಾರಿಭಾಷಿಕಶಬ್ದಗಳನ್ನು ಪಯೋಗಿಸಿರುವದು ಈ ಗ್ರಂಥವು ಅರ್ವಾಚೀನವೆಂಬುದಕ್ಕೆ ಸಾಕಾದಷ್ಟು ಸಾಕ್ಷ್ಯವನ್ನು ಕೊಡುತ್ತದೆ ಎಂದು ವಿಮರ್ಶಕರ ಅಭಿಪ್ರಾಯವಿದೆ. ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಶಬ್ದಾನುಕ್ರಮಣಿಕೆಯಲ್ಲಿ ಇಂಥ ಕೆಲವು ಶಬ್ದಗಳನ್ನು ನಕ್ಷತ್ರಚಿಹ್ನೆಯಿಂದ ತೋರಿಸಿರುತ್ತದೆ. ಪುರಾತತ್ತ್ವವಿಮರ್ಶನದಕ್ಷರಾದವರು ಈ ವಾದದ ಸಾರಾಸಾರತೆಯನ್ನು ನಿರ್ಧರಿಸಬೇಕಾಗಿರುತ್ತದೆ.

ಇದು ಹೇಗಾದರೂ ಇರಲಿ. ಗ್ರಂಥವು ಕರ್ತೃಗಳ ಹೆಸರಿನ ಮರೆಯಲ್ಲಿ ಬಾಳುವದಾಗಿಲ್ಲ. ಇದರಲ್ಲಿ ದೇಹಾತ್ಮಜ್ಞಾನನಿರಾಸ, ದೇಹಾಸತ್ಯತ್ವ, ಜ್ಞಾನಿಗೆ ಯಾವ ಕರ್ಮದ ಬಂಧವೂ ಇಲ್ಲವೆಂಬ ವಾದ –ಇವುಗಳನ್ನು ನಿರೂಪಿಸಿರುವ ಕ್ರಮವು ಜಿಜ್ಞಾಸುಗಳಿಗೆ ಅಮೂಲ್ಯವಾದ ಸಹಾಯವಾಗಿರುತ್ತದೆ. ನಿದಿ

ಧ್ಯಾಸನದಲ್ಲಿ ವೃತ್ತ್ಯನುಸಂಧಾನವನ್ನು ಮಾಡಬೇಕೆಂದು ಹೇಳಿರುವದನ್ನು ಬಾಧಿತಾನುವೃತ್ತಿಯಿಂದ ತೋರುವ ಧ್ಯಾನದಿಂದ ಕೃತ್ರಿಮಾನಂದವೂ ಜ್ಞಾನದಿಂದ ಮನೋವಾಕ್ಕುಗಳಿಗೆ ಅಗೋಚರವಾದ ಸುಖವೂ ದೊರಕುವದೆಂದು (೧೨೫, ೧೨೬) ಹೇಳಿರುವದರೊಡನೆ ಏಕವಾಕ್ಯತೆಮಾಡಿಕೊಂಡರೆ ಸಿದ್ಧಾಂತಕ್ಕೆ ಯಾವ ಹಾನಿಯೂ ಇರುವದಿಲ್ಲ ; ಸಾಧಕರಿಗೆ ಮನನಕ್ಕೆ ಕೆಲವು ಅತ್ಯುತ್ತಮಸೂಚನೆಗಳೂ ಆ ಪ್ರಕರಣದಲ್ಲಿ ದೊರೆಯುವವು.

ವೇದಾಂತವು ಪರೋಕ್ಷವಾದ ಕಾಲಾಂತರದಲ್ಲಿ ಲೋಕಾಂತರದಲ್ಲಾಗುವ ಫಲಕ್ಕೆ ಬೆಲೆಯನ್ನು ಕೊಡದೆ ಈಗಲೇ ಇಲ್ಲಿಯೇ ನಮ್ಮ ಅನುಭವಕ್ಕೆ ಬರುವ ನಿರತಿಶಯವಾದ ಆನಂದವನ್ನು ಕೊಡುವ ಉಪಾಯವನ್ನು ತಿಳಿಸುವದೆಂಬುದೂ ಯೋಗಾದಿಗಳಂತೆ ಆಯಾ ಪುರುಷನಿಗೆ ಆಗುವ ವಿಶೇಷಾನುಭವಮಾತ್ರದ ಆಧಾರದಿಂದ ವಿಚಾರವನ್ನು ಮಾಡದೆ ಸರ್ವರಿಗೂ ಆಗುವ ಅವಸ್ಥಾತ್ರಯಗಳ ವಿಚಾರದಿಂದುಂಟಾಗುವ ಜ್ಞಾನವೇ ಈ ಉಪಾಯವೆಂಬುದೂ ಈ ಗ್ರಂಥದಿಂದ ಮನದಟ್ಟಾದರೆ ಗ್ರಂಥಕರ್ತರ ಉದ್ದೇಶವು ಈಡೇರಿದಂತೆ ಆಗುವದು. ಇದನ್ನು ವಾಚಕರಿಗೆ ಮನಗಾಣಿಸುವದಕ್ಕೆ ಈ ಕನ್ನಡದ ಅನುವಾದವು ಒಂದಿಷ್ಟಾದರೂ ಸಹಾಯಕವಾದರೆ ಅನುವಾದಕನ ಶ್ರಮವು ಸಾರ್ಥಕವಾದಂತಾಗುವದು.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ವಿರೋಧಿಸಂವತ್ಸರ,
ಆಶ್ವಯುಜ ಬ. ೧೫

ಅನುವಾದಕ

ವಿಷಯಾನುಕ್ರಮಣಿಕೆ

——:o:——

ಮಂಗಲ	....	೧
ಅನುಬಂಧಗಳು	....	೧
ಸಾಧನಸಂಪತ್ತು	....	೧
ವಿಚಾರದ ಆವಶ್ಯಕತೆ	....	೩
ವಿಚಾರವು ಹೇಗಿರಬೇಕು ?	....	೩
ಅಜ್ಞಾನ	....	೪
ಜ್ಞಾನಸ್ವರೂಪ	....	೬
ಆತ್ಮನು ದೇಹಗಳೆರಡಕ್ಕೂ ಭಿನ್ನನೆಂಬುದು ಹೇಗೆ ?	....	೭
ದೇಹಗಳೆಂಬುದೇ ಸುಳ್ಳು	....	೧೦
ಚಿದಾತ್ಮನು ಒಬ್ಬನೇ	....	೧೦
ಅದ್ವೈತಬ್ರಹ್ಮಾತ್ಮತ್ವಕ್ಕೆ ಶ್ರುತಿಪ್ರಮಾಣ	....	೧೧
ಅದ್ವೈತಬ್ರಹ್ಮಾತ್ಮತ್ವವನ್ನು ತಿಳಿಸುವ ಯುಕ್ತಿ	....	೧೩
ಬ್ರಹ್ಮವೇ ಎಲ್ಲಾ ವ್ಯವಹಾರಕ್ಕೂ ಆಶ್ರಯ	....	೧೬
ಜ್ಞಾನಾಜ್ಞಾನದೃಷ್ಟಿಗಳ ತಾರತಮ್ಯ	....	೧೬
ಅನಾತ್ಮವೆಲ್ಲ ನಿಜವಾಗಿ ಆತ್ಮನು	....	೧೭
ಆತ್ಮನನ್ನೇ ದೇಹವೆಂದು ತಿಳಿಯುವರೆಂಬುದಕ್ಕೆ ದೃಷ್ಟಾಂತಗಳು	....	೧೭
ಆತ್ಮನನ್ನು ದೇಹವೆಂದರಿಯುವದಕ್ಕೆ ಅಜ್ಞಾನವೇ ಕಾರಣ	....	೧೮

ಜ್ಞಾನಿಯು ಕೃತಕೃತ್ಯನು	....	೨೧
ಜ್ಞಾನಿಗೆ ಪ್ರಾರಬ್ಧಕರ್ಮವೂ ಇಲ್ಲ	....	೨೨
ನಿದಿಧ್ಯಾಸನದ ಅಂಗಗಳು	....	೨೪
ನಿದಿಧ್ಯಾಸನದ ಅವಧಿ	....	೨೯
ಸಾಧಕನಿಗೆ ಒದಗುವ ಅಡ್ಡಿಗಳು	....	೩೦
ಬ್ರಹ್ಮವೃತ್ತಿಯ ಸ್ತುತಿ	....	೩೦
ನಿದಿಧ್ಯಾಸನದ ಉಪಸಂಹಾರ	....	೩೧
ರಾಜಯೋಗಕ್ಕೆ ಅಧಿಕಾರಿಗಳು	....	೩೩

ಅಪರೋಕ್ಷಾನುಭೂತಿಯ ಸಾರ	....	೩೪
ಶ್ಲೋಕಗಳ ಅನುಕ್ರಮಣಿಕೆ	....	೩೭
ಶಬ್ದಗಳ ಅಕ್ಷರಾನುಕ್ರಮಣಿಕೆ	....	೪೦

——::——

ಸಂಕೇತಗಳ ವಿವರಣೆ

ಸಂಕೇತ	ವಿವರಣೆ
ಅ॥	ಪೂನ ಆಷ್ಟೇಕರ್ ಕಂಪೆನಿ ಮುದ್ರಿತ ಅಪರೋಕ್ಷಾನುಭೂತಿಯ ಪಾಠ.
ನಿ॥	ಬೊಂಬಾಯಿ ನಿರ್ಣಯಸಾಗರ ಮುದ್ರಣಾಲಯದಲ್ಲಿ ಅಚ್ಚಾದ ಅಪರೋಕ್ಷಾನುಭೂತಿಯ ಪಾಠ.
ವಾ॥	ಶ್ರೀರಂಗದ ವಾಣೀವಿಲಾಸಮುದ್ರಣಾಲಯದಲ್ಲಿ ಅಚ್ಚಾದ ಅಪರೋಕ್ಷಾನುಭೂತಿಯ ಪಾಠ.
ತೈ.ಆ.=	ತೈತ್ತಿರೀಯಾರಣ್ಯಕ
ತೈ.ನಾ.=	ತೈತ್ತಿರೀಯೋಪನಿಷತ್ತಿನ ನಾರಾಯಣಪನ್ನ

ಉಪನಿಷತ್ತುಗಳನ್ನು ಮೊದಲನೆಯ ಅಕ್ಷರದಿಂದ ತಿಳಿಸಿದೆ. ಉದಾಹರಣೆಗೆ

ಈ. = ಈಶಾವಾಸ್ಯೋಪನಿಷತ್ತು.

ಕ. = ಕಠೋಪನಿಷತ್ತು.

ಛಾಂ. = ಛಾಂದೋಗ್ಯೋಪನಿಷತ್ತು.

ಬೃ. = ಬೃಹದಾರಣ್ಯಕೋಪನಿಷತ್ತು.

ಮುಂ. = ಮುಂಡಕೋಪನಿಷತ್ತು.

॥ ಓಂ ॥

ಅಪರೋಕ್ಷಾನುಭೂತಿ

ಮಂಗಲ

ಶ್ರೀಹರಿಂ ಪರಮಾನನ್ದಮುಪದೇಷ್ಟಾರಮೀಶ್ವರಮ್ ।
ವ್ಯಾಪಕಂ ಸರ್ವಲೋಕಾನಾಂ ಕಾರಣಂ ತಂ ನಮಾಮ್ಯಹಮ್ ॥೧॥

೧. ಪರಮಾನಂದರೂಪನೂ (ತತ್ತ್ವವನ್ನು) ಉ ಪ ದೇ ಶಿ ಸು ವ (ಗುರುವೂ) ಈಶ್ವರನೂ ವ್ಯಾಪಕನೂ ಸರ್ವಲೋಕಗಳಿಗೂ ಕಾರಣನೂ ಆಗಿರುವ ಆ ಶ್ರೀಹರಿಯನ್ನು ನಾನು ನಮಸ್ಕರಿಸುತ್ತೇನೆ.

ಅನುಬಂಧಗಳು

ಅಪರೋಕ್ಷಾನುಭೂತಿರ್ವೈ ಪ್ರೋಚ್ಯತೇ ಮೋಕ್ಷಸಿದ್ಧಯೇ ।
ಸದ್ಭಿರೇವ[1] ಪ್ರಯತ್ನೇನ ವೀಕ್ಷಣೀಯಾ ಮುಹುರ್ಮುಹುಃ ॥೨॥

೨. ಮೋಕ್ಷವುಂಟಾಗುವದಕ್ಕಾಗಿ ಪ್ರಸಿದ್ಧವಾದ ಅಪರೋಕ್ಷಾನುಭೂತಿಯನ್ನು[2] ಹೇಳಲಾಗುತ್ತದೆ. ಇದನ್ನು ಸತ್ಪುರುಷರೇ[3] ಪ್ರಯತ್ನದಿಂದ ಮತ್ತೆ ಮತ್ತೆ (ವಿಚಾರಿಸಿ) ನೋಡಬೇಕು.

ಸಾಧನಸಂಪತ್ತು

ಸ್ವವರ್ಣಾಶ್ರಮಧರ್ಮೇಣ ತಪಸಾ ಹರಿತೋಷಣಾತ್ ।
ಸಾಧನಂ ಪ್ರಭವೇತ್ ಪುಂಸಾಂ ವೈರಾಗ್ಯಾದಿಚತುಷ್ಟಯಮ್ ॥೩॥

---

1. 'ಸದ್ಭಿರೇಷಾ' ಎಂದು ವಾ॥ ಪಾಠ.

2. ಅಪರೋಕ್ಷವಾದ ಅನುಭವವನ್ನು, ಎಂದರೆ ಈಗಲೇ ಇಲ್ಲಿಯೇ ಉಂಟಾಗುವ ಅನುಭವವನ್ನು– ಎಂದರ್ಥ. ಈ ಅನುಭವವನ್ನು ತಿಳಿಸುವದರಿಂದ ಗ್ರಂಥಕ್ಕೂ 'ಅಪರೋಕ್ಷಾನುಭೂತಿ' ಎಂಬ ಹೆಸರು ಬಂದಿದೆ.

3. 'ಸದ್ಭಿರೇಷಾ' ಎಂಬ ಪಾಠಕ್ಕೆ ಸತ್ಪುರುಷರು ಈ ಗ್ರಂಥವನ್ನು– ಎಂದು ಅರ್ಥ.

೩. ತನ್ಮಾತ್ರಮ್ಮ ವರ್ಣಾಶ್ರಮಧರ್ಮವೆಂಬ ತಪಸ್ಸಿನಿಂದ ಹರಿಪ್ರೀತಿಯನ್ನು ಉಂಟುಮಾಡುವದರಿಂದ ಜನರಿಗೆ ವೈರಾಗ್ಯವೇ ಮುಂತಾದ ನಾಲ್ಕು ಸಾಧನವು ಉಂಟಾಗುವದು.

ಬ್ರಹ್ಮಾದಿಸ್ಥಾವರಾನ್ತೇಷು ವೈರಾಗ್ಯಂ ವಿಷಯೇಷ್ವನು ।
ಯಥೈವ ಕಾಕವಿಷ್ಠಾಯಾಂ ವೈರಾಗ್ಯಂ ತದ್ಧಿ ನಿರ್ಮಲಮ್ ॥೪॥

೪. ಬ್ರಹ್ಮನು ಮೊದಲಾಗಿ ಸ್ಥಾವರಪ್ರಾಣಿಯವರೆಗೂ ಇರುವ ವಿಷಯಗಳಲ್ಲಿ (ವಿಮರ್ಶೆಮಾಡಿದ) ಬಳಿಕ ಕಾಗೆಯ ಹೇಸಿಗೆಯಲ್ಲಿ ಉಂಟಾಗುವ ವೈರಾಗ್ಯದಂತೆ ಉಂಟಾಗುವ ವೈರಾಗ್ಯವೇ ಶುದ್ಧವಾದ ವೈರಾಗ್ಯವು.

ನಿತ್ಯಮಾತ್ಮಸ್ವರೂಪಂ ಹಿ ದೃಶ್ಯಂ ತದ್ವಿಪರೀತಗಮ್ ।
ಏವಂ ಯೋ ನಿಶ್ಚಯಃ ಸಮ್ಯಗ್ವಿವೇಕೋ ವಸ್ತುನಃ ಸ ವೈ ॥೫॥

೫. ಆತ್ಮಸ್ವರೂಪವೇ ನಿತ್ಯವು, ದೃಶ್ಯನಾದ (ಅನಾತ್ಮವು) ಅದಕ್ಕೆ ವಿಪರೀತವಾದದ್ದು– ಹೀಗೆಂಬ ನಿಶ್ಚಯವಿದೆಯಲ್ಲ, ಅದೇ ಸರಿಯಾದ ವಸ್ತುವಿನ ವಿವೇಕವು.

ಸದೈವ ವಾಸನಾತ್ಯಾಗಃ ಶಮೋಽಯಮಿತಿ ಶಬ್ದಿತಃ ।
ನಿಗ್ರಹೋ ಬಾಹ್ಯವೃತ್ತೀನಾಂ ದಮ ಇತ್ಯಭಿಧೀಯತೇ ॥೬॥

೬. ಯಾವಾಗಲೂ ವಾಸನೆಗಳನ್ನು ತ್ಯಜಿಸುವ(ದಿದೆಯಲ್ಲ), ಅದು ಶಮವೆನಿಸುತ್ತದೆ. ಹೊರಗಿನ ವೃತ್ತಿಗಳ ನಿಗ್ರಹವು ದಮವೆನ್ನಲ್ಪಡುವದು.

ವಿಷಯೇಭ್ಯಃ ಪರಾವೃತ್ತಿಃ ಪರಮೋಪರತಿರ್ಹಿ ಸಾ ।
ಸಹನಂ ಸರ್ವದುಃಖಾನಾಂ ತಿತಿಕ್ಷಾ ಸಾ ಶುಭಾ ಮತಾ ॥೭॥
ನಿಗಮಾಚಾರ್ಯವಾಕ್ಯೇಷು ಭಕ್ತಿಃ ಶ್ರದ್ಧೇತಿ ವಿಶ್ರುತಾ ।
ಚಿತ್ತೈಕಾಗ್ರ್ಯಂ ತು ಸಲ್ಲಕ್ಷ್ಯೇ ಸಮಾಧಾನಮಿತಿ ಸ್ಮೃತಮ್ ॥೮॥

೭-೮. ವಿಷಯಗಳನ್ನು ಬಿಟ್ಟು ಹಿಂತಿರುಗುವದಿದೆಯಲ್ಲ, ಅದು ಹೆಚ್ಚಿನ ಉಪರತಿಯು. ಎಲ್ಲಾ ದುಃಖಗಳನ್ನೂ ಸಹಿಸಿಕೊಳ್ಳುವದಿದೆಯಲ್ಲ, ಅದು ಶುಭವಾದ ತಿತಿಕ್ಷೆಯೆನಿಸುವದು. ಶಾಸ್ತ್ರವಾಕ್ಯದಲ್ಲಿಯೂ ಗುರುವಾಕ್ಯದಲ್ಲಿಯೂ ಇಟ್ಟಿರುವ ಭಕ್ತಿಯು ಶ್ರದ್ಧೆಯೆಂದು ಪ್ರಸಿದ್ಧವಾಗಿರುತ್ತದೆ. ಉತ್ತಮವಾದ ಗುರಿಯಲ್ಲಿ ಚಿತ್ತವನ್ನು ಏಕಾಗ್ರವಾಗಿಟ್ಟುಕೊಂಡಿರುವದು ಸಮಾಧಾನವೆನಿಸುವದು.

---

1. ಅತ್ಯಂತಪುಣ್ಯದಿಂದ ಬ್ರಹ್ಮಲೋಕವು ದೊರಕುವದು; ಅತ್ಯಂತಪಾಪದಿಂದ ಸ್ಥಾವರತ್ವವು ಪ್ರಾಪ್ತವಾಗುವದು.

ಸಂಸಾರಬನ್ಧನಿರ್ಮುಕ್ತಿಃ ಕಥಂ ಮೇ ಸ್ಯಾತ್ ಕದಾ ವಿಧೇ ![1]
ಇತಿ ಯಾ ಸುದೃಢಾ ಬುದ್ಧಿರ್ವಕ್ತವ್ಯಾ ಸಾ ಮುಮುಕ್ಷುತಾ ॥೯॥

೯. ಅಯ್ಯೋ ವಿಧಿಯೆ, (ಈ) ಸಂಸಾರಬಂಧದಿಂದ ನನಗೆ ಹೇಗೆ ಯಾವಾಗ ಬಿಡುಗಡೆಯಾದೀತು? ಎಂದು (ಹಂಬಲಿಸುವ) ಈ ದೃಢಬುದ್ಧಿಯನ್ನೇ ಮುಮುಕ್ಷುತೆ ಎನ್ನಬೇಕು.

ವಿಚಾರದ ಆವಶ್ಯಕತೆ

ಉಕ್ತಸಾಧನಯುಕ್ತೇನ ವಿಚಾರಃ ಪುರುಷೇಣ ಹಿ ।
ಕರ್ತವ್ಯೋ ಜ್ಞಾನಸಿದ್ಧ್ಯರ್ಥಮಾತ್ಮನಃ ಶುಭಮಿಚ್ಛತಾ ॥ ೧೦ ॥
ನೋತ್ಪದ್ಯತೇ ವಿನಾ ಜ್ಞಾನಂ ವಿಚಾರೇಣಾನ್ಯಸಾಧನೈಃ ।
ಯಥಾ ಪದಾರ್ಥಭಾನಂ ಹಿ ಪ್ರಕಾಶೇನ ವಿನಾ ಕ್ವಚಿತ್ ॥ ೧೧ ॥

೧೦-೧೧. ತನಗೆ ಒಳ್ಳೆಯದಾಗಬೇಕೆಂದು ಬಯಸುವ ಪುರುಷನು ಮೇಲೆ ಹೇಳಿದ ಸಾಧನಗಳಿಂದ ಕೂಡಿ ಜ್ಞಾನೋತ್ಪತ್ತಿಗಾಗಿ ವಿಚಾರವನ್ನು ಮಾಡಬೇಕು. ಬೆಳಕಿಲ್ಲದೆ ಪದಾರ್ಥಗಳು ಹೇಗೆ ತೋರಲಾರವೋ ಹಾಗೆ ವಿಚಾರವನ್ನು ಬಿಟ್ಟು ಬಿಕ್ಕ ಸಾಧನಗಳಿಂದ ಜ್ಞಾನವು ಎಂದಿಗೂ ಉಂಟಾಗಲಾರದು.

ವಿಚಾರವು ಹೇಗಿರಬೇಕು?

ಕೋಽಹಂ ಕಥಮಿದಂ ಜಾತಂ ಕೋ ವೈ ಕರ್ತಾಸ್ಯ ವಿದ್ಯತೇ ।
ಉಪಾದಾನಂ ಕಿಮುಸ್ತೀಹ ವಿಚಾರಃ ಸೋಽಯಮಿದೃಶಃ ॥೧೨॥

೧೨. ನಾನು ಯಾರು? ಈ ಜಗತ್ತು ಹೇಗೆ ಉಂಟಾಯಿತು? ಇದಕ್ಕೆ ಕರ್ತನು ಯಾರಿರುವನು? ಇದಕ್ಕೆ ಉಪಾದಾನವು ಯಾವದಿದೆ? ಹೀಗೆ (ಆಲೋಚಿಸುವದೇ) ವಿಚಾರವು.

ನಾಹಂ ಭೂತಗಣೋ ದೇಹೋ ನಾಹಂ ಚಾಕ್ಷಗಣಸ್ತಥಾ ।
ಏತದ್ವಿಲಕ್ಷಣಃ ಕಶ್ಚಿದ್ವಿಚಾರಃ ಸೋಽಯಮಿದೃಶಃ ॥೧೩॥

೧೩. ನಾನು ಭೂತಗಳ ಗುಂಪಾದ ದೇಹವಲ್ಲ; ಇದರಂತೆ ನಾನು ಇಂದ್ರಿಯಗಳ ಸಮೂಹವೂ ಅಲ್ಲ. ಇವುಗಳಿಗಿಂತ ಬೇರೆಯಾದ ಯಾವನೋ ಒಬ್ಬನಾಗಿರಬೇಕು. ಹೀಗೆ (ಆಲೋಚಿಸುವದೇ) ವಿಚಾರವು.

ಅಜ್ಞಾನಪ್ರಭವಂ ಸರ್ವಂ ಜ್ಞಾನೇನ ಪ್ರವಿಲೀಯತೇ ।
ಸಜ್ಯೋಲ್ಪೋ ವಿವಿಧಃ ಕರ್ತಾ ವಿಚಾರಃ ಸೋಽಯಮಿದೃಶಃ ॥೧೪॥

1. 'ಪಯಾನಥೇ' ವಾ॥ ಪಾಠ.

೧೪. ಎಲ್ಲವೂ ಅಜ್ಞಾನದಿಂದ ಹುಟ್ಟಿರುವದು, ಜ್ಞಾನದಿಂದ ನಾಶವಾಗುವದು. ಬಗೆಬಗೆಯ ಸಂಕಲ್ಪವೇ ಕರ್ತೃ[1]. ಹೀಗೆಂದು (ಯೋಚಿಸುವದೇ) ವಿಚಾರವು.

ಏತಯೋರ್ಯದುಪಾದಾನಮೇಕಂ ಸೂಕ್ಷ್ಮಂ ಸದವ್ಯಯಮ್ ।
ಯಥೈವ ಮೃದ್ಘಟಾದೀನಾಂ ವಿಚಾರಃ ಸೋಽಯಮಿದೃಶಃ ॥೧೫॥

೧೫. ಗಡಿಗಯೇ ಮುಂತಾದವುಗಳಿಗೆ (ಉಪಾದಾನವಾಗಿರುವ ಮಣ್ಣಿನಂತೆ)ಯೇ ಈ ಎರಡಕ್ಕೂ[2] ಉಪಾದಾನಕಾರಣವಾದದ್ದು ಒಂದು, ಸೂಕ್ಷ್ಮವಾದದ್ದು, ಸದ್ರೂಪವಾದದ್ದು, ಅವ್ಯಯವಾದದ್ದು. ಹೀಗೆಂದು (ತಿಳಿಯುವದೇ) ವಿಚಾರವು.

ಅಹಮೇಕೋಽಪಿ ಸೂಕ್ಷ್ಮಶ್ಚ ಜ್ಞಾತಾ ಸಾಕ್ಷೀ ಸದವ್ಯಯಃ ।
ತದಹಂ ನಾತ್ರ ಸಂದೇಹೋ ವಿಚಾರಃ ಸೋಽಯಮಿದೃಶಃ ॥೧೬॥

೧೬. ನಾನು ಒಬ್ಬನೂ ಸೂಕ್ಷ್ಮನೂ (ಆಗಿರುತ್ತೇನೆ); ಜ್ಞಾತೃವೂ ಸಾಕ್ಷಿಯೂ ಸದ್ರೂಪನೂ ಅವ್ಯಯನೂ ಆಗಿದ್ದೇನೆ. ಆದ್ದರಿಂದ ಅದೇ ನಾನೆಂಬುದರಲ್ಲಿ ಸಂದೇಹವಿಲ್ಲ. ಹೀಗೆಂದು (ತಿಳಿಯುವದೇ) ವಿಚಾರವು.

ಅಜ್ಞಾನ

ಆತ್ಮಾ ನಿರವಯಲೋ ಹ್ಯೇಕೋ ದೇಹೋ ಬಹ್ವವಯವಾವೃತಃ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮಿತಃಪರಮ್ ॥ ೧೭ ॥

೧೭. ಆತ್ಮನು ನಿರವಯವನು, ಏಕನು; ದೇಹವು ಬಹು (ಅವಯವ)ಗಳಿಂದ ಕೂಡಿರುವದು. ಇವೆರಡೂ ಒಂದೆಂದು ತಿಳಿಯುವರಲ್ಲ! ಇದಕ್ಕಿಂತ ಹೆಚ್ಚಿನ ಅಜ್ಞಾನವು ಯಾವದು ?

ಆತ್ಮಾ ನಿಯಾಮಕಶ್ಚಾನ್ತರ್ದೇಹೋ ಬಾಹ್ಯೋ ನಿಯಮ್ಯಕಃ[3] ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃಪರಮ್ ॥ ೧೮ ॥

---

1. ಅಜ್ಞಾನದಿಂದಾದ ಸಂಕಲ್ಪವೇ ಜಗತ್ತನ್ನು ತೋರಿಸುತ್ತಿರುವದು ಎಂದರ್ಥ.

2. ಅಜ್ಞಾನಕ್ಕೂ ಸಂಕಲ್ಪಕ್ಕೂ ಎಂದು ಅಭಿಪ್ರಾಯ. ಈ ಅಭಿಪ್ರಾಯವು ಮುತ್ತೆ ಯಾವ ಪ್ರಕರಣವಲ್ಲಿಯೂ ಇರುವಂತೆ ಕಾಣಲಿಲ್ಲ.

3. 'ನಿಯಮ್ಯ ಬಾಹ್ಯಕಃ' ಎಂದು ವಾ॥, 'ಬಾಹ್ಯೋ ನಿಯಾಮಕಃ' ಎಂದು ಆ॥ ; ನಾವು ಅನುಸರಿಸಿರುವದು ನಿ॥ ಪಾಠ.

೧೮. ಆತ್ಮನು ಒಳಗಿರುವ ನಿಯಾಮಕನು, ದೇಹವು ಹೊರಗಿನ ನಿಯಾಮ್ಯವು. ಇವೆರಡೂ ಒಂದೆಂದು ಭಾವಿಸುವರಲ್ಲ! ಇದಕ್ಕಿಂತ ಹೆಚ್ಚಿನ ಅಜ್ಞಾನವು ಯಾವದು?

ಆತ್ಮಾ ಜ್ಞಾನಮಯಃ ಪುಣ್ಯೋ ದೇಹೋ ಮಾಂಸಮಯೋಽಶುಚಿಃ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಮ್ ॥೧೯॥

೧೯. ಆತ್ಮನು ಜ್ಞಾನಮಯನು, ಶುದ್ಧನು; ದೇಹವು ಮಾಂಸಮಯವು, ಅಶುಚಿಯು, ಇವೆರಡೂ ಒಂದೆಂದು ಭಾವಿಸುವರಲ್ಲ! ಇದಕ್ಕಿಂತ ಹೆಚ್ಚಿನ ಅಜ್ಞಾನವು ಯಾವದು?

ಆತ್ಮಾ ಪ್ರಕಾಶಕಃ ಸ್ವಚ್ಛೋ ದೇಹಸ್ತಾಮಸ ಉಚ್ಯತೇ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಮ್ ॥ ೨೦ ॥

೨೦. ಆತ್ಮನು ಪ್ರಕಾಶಸ್ವರೂಪನು, ಸ್ವಚ್ಛನು; ದೇಹವು ತಾಮಸವೆನಿಸಿರುತ್ತದೆ. ಇವೆರಡೂ ಒಂದೆಂದು ಭಾವಿಸುವರಲ್ಲ! ಇದಕ್ಕಿಂತ ಹೆಚ್ಚಿನ ಅಜ್ಞಾನವು ಯಾವದು?

ಆತ್ಮಾ ನಿತ್ಯೋ ಹಿ ಸದ್ರೂಪೋ ದೇಹೋಽನಿತ್ಯೋ ಹ್ಯಸನ್ಮಯಃ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಮ್ ॥ ೨೧ ॥

೨೧. ಆತ್ಮನು ಸದ್ರೂಪನು, ನಿತ್ಯನು; ದೇಹವು ಅಸದ್ರೂಪವು, ಅನಿತ್ಯವು. ಇವೆರಡೂ ಒಂದೆಂದು ತಿಳಿಯುವರಲ್ಲ! ಇದಕ್ಕಿಂತ ಹೆಚ್ಚಿನ ಅಜ್ಞಾನವು ಯಾವದು?

ಆತ್ಮನಸ್ತತ್ಪ್ರಕಾಶತ್ವಂ ಯತ್ಪದಾರ್ಥಾವಭಾಸನಮ್ ।
ನಾಗ್ನ್ಯಾದೀನ್ತಿವದ್ದೀಪ್ತಿರ್ಭವತ್ಯಾನ್ಧ್ಯಂ ಯತೋ ನಿಶಿ ॥ ೨೨ ॥

೨೨. ಆತ್ಮನು ಪ್ರಕಾಶರೂಪನೆಂದರೆ ಪದಾರ್ಥಗಳನ್ನು ತೋರಿಸಿಕೊಡುವವನು ಎಂದರ್ಥ. ಬೆಂಕಿ ಮುಂತಾದವುಗಳಂತೆ (ಆತ್ಮನಿಗೆ) ಬೆಳಕು ಇರುವದು ಎಂದರ್ಥವಲ್ಲ. ಏಕೆಂದರೆ ರಾತ್ರಿಯಲ್ಲಿ ಕತ್ತಲೆಯಾಗಿಬಿಡುತ್ತದೆ.[1]

---

1. ಸ್ವಯಂಪ್ರಕಾಶನೆಂದು ಜನರು ನಂಬಿರುವ ಸೂರ್ಯನ ಬೆಳಕು ರಾತ್ರಿಯಲ್ಲಿ ಇಲ್ಲವಾಗುವದು. ಇದರಂತೆ ಬೆಂಕಿಯ ಬೆಳಕು ಬೆಂಕಿಯು ಆರಿಹೋದಾಗ ಇಲ್ಲವಾಗುವದು. ಹೀಗೆ ಆತ್ಮನ ಬೆಳಕು ಇಲ್ಲವಾಗುವದಲ್ಲ; ಏಕೆಂದರೆ ಅದು ಎಲ್ಲವನ್ನೂ ತೋರಿಸಿಕೊಡುತ್ತಾ ಯಾವಾಗಲೂ ಇರುತ್ತದೆ ಎಂದು ಭಾವ.

ದೇಹೋಽಹಮಿತ್ಯಯಂ ಮೂಢೋ ಧೃತ್ವಾ[1] ತಿಷ್ಠತ್ಯಹೋ ಜನಃ ।
ಮನೂಯಮಿತ್ಯಪಿ ಜ್ಞಾತ್ವಾ ಘಟದ್ರಷ್ಟೇವ ಸರ್ವದಾ ॥ ೨೩ ॥

೨೩. ಗಡಿಗೆಯನ್ನು ನೋಡುವವನಂತೆ ಈ ದೇಹವು ನನ್ನದು ಎಂದು (ಅದನ್ನು) ಅರಿತುಕೊಂಡಿದ್ದರೂ (ಈ) ಜನವು ದೇಹವೇ ತಾನೆಂದು ನಂಬಿ ಕೊಂಡಿರುವದಲ್ಲ ! (ಇದು) ಆಶ್ಚರ್ಯವು !

ಜ್ಞಾನಸ್ವರೂಪ

ಬ್ರಹ್ಮೈವಾಹಂ ಸಮಃ ಶಾನ್ತಃ ಸಚ್ಚಿದಾನನ್ದಲಕ್ಷಣಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ ॥೨೪॥

೨೪. ನಾನು ಸಮನು, ಶಾಂತನು, ಸಚ್ಚಿದಾನಂದಸ್ವರೂಪನು ; (ಆದ್ದ ರಿಂದ) ಬ್ರಹ್ಮವೇ ಹೊರತು ಅಸದ್ರೂಪವಾದ ದೇಹವಲ್ಲ –ಎಂಬುದು ಜ್ಞಾನ ವೆಂದು ಬಲ್ಲವರು ಹೇಳುತ್ತಾರೆ.

ನಿರ್ವಿಕಾರೋ ನಿರಾಕಾರೋ ನಿರವದ್ಯೋಽಹಮವ್ಯಯಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ ॥೨೫॥

೨೫. ನಾನು ನಿರ್ವಿಕಾರನು, ನಿರಾಕಾರನು, ನಿರ್ದೋಷನು, ಅವ್ಯಯನು. ಅಸದ್ರೂಪವಾದ ದೇಹವು ನಾನಲ್ಲ– ಎಂಬುದು ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ನಿರಾಮಯೋ ನಿರಾಭಾಸೋ ನಿರ್ವಿಕಲ್ಪೋಽಹಮನಾತತಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ ॥೨೬॥

೨೬. ಯಾವ ರೋಗವೂ ಇಲ್ಲದವನು, ಮತ್ತೊಂದರಿಂದ ಬೆಳಗದವನು, ಯಾವ ಕಲ್ಪನೆಗೂ ಅವಕಾಶವನ್ನು ಕೊಡದವನು, ಎಲ್ಲೆಲ್ಲಿಯೂ ವ್ಯಾಪಿಸಿರು ವವನು ನಾನು ; ನಾನು ಅಸದ್ರೂಪವಾದ ದೇಹವಲ್ಲ– ಎಂಬುದು ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ನಿರ್ಗುಣೋ ನಿಷ್ಕ್ರಿಯೋ ನಿತ್ಯೋ ನಿತ್ಯಮುಕ್ತೋಽಹಮಚ್ಯುತಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ ॥೨೭

೨೭. ಗುಣಗಳಿಲ್ಲದವನು, ಕ್ರಿಯೆಯಿಲ್ಲದವನು, ನಿತ್ಯನು, ನಿತ್ಯ ಮುಕ್ತನು, ಚ್ಯುತಿಯಿಲ್ಲದವನು ; ನಾನು ಅಸದ್ರೂಪವಾದ ದೇಹವಲ್ಲ –ಎಂಬುದು ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

---

1. 'ಮತ್ವಾ' ಎಂದು ಪಾ॥ ಅ॥

ನಿರ್ಮಲೋ ನಿಶ್ಚಲೋಽನನ್ತಃ ಶುದ್ಧೋಽಹಮಜರೋಽಮರಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ ॥೨೮॥

೨೮. ದೋಷವಿಲ್ಲದವನು, ಚಲನವಿಲ್ಲದವನು, ಅಂತವಿಲ್ಲದವನು, ಶುದ್ಧನು, ಮುಪ್ಪಿಲ್ಲದವನು, ಮರಣವಿಲ್ಲದವನು ; ನಾನು ಅಸದ್ರೂಪವಾದ ದೇಹವಲ್ಲ– ಎಂಬುದು ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ಆತ್ಮನು ದೇಹಗಳೆರಡಕ್ಕೂ ಭಿನ್ನನೆಂಬುದು ಹೇಗೆ ?

ಸ್ವದೇಹೇ ಶೋಭನಂ ಸನ್ತಂ[1] ಪುರುಷಾಖ್ಯಂ ಚ ಸನ್ಮತಮ್ ।
ಕಿಂ ಮೂರ್ಖ ಶೂನ್ಯಮಾತ್ಮಾನಂ ದೇಹಾತೀತಂ ಕರೋಷಿ ಭೋಃ ॥

೨೯. ಎಲೈ ಮೂರ್ಖನೆ, ನಿನ್ನ ದೇಹದಲ್ಲಿಯೇ ಮಂಗಲಕರನಾಗಿದ್ದು ಕೊಂಡು,[2] ಪುರುಷನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ದೇಹಾತೀತನಾದ ಆತ್ಮನನ್ನು ಏತಕ್ಕೆ ಶೂನ್ಯವಾಗಿ ಮಾಡುತ್ತೀಯೆ ?

ಸ್ವಾತ್ಮಾನಂ ಶೃಣು ಮೂರ್ಖ ತ್ವಂ ಶ್ರುತ್ಯಾ ಯುಕ್ತ್ಯಾ ಚ ಪೂರುಷಮ್
ದೇಹಾತೀತಂ ಸದಾಕಾರಂ ಸುದುರ್ದರ್ಶಂ ಭವಾದೃಶೈಃ[3] ॥ ೩೦ ॥

೩೦. ಎಲೈ ಮೂರ್ಖನೆ, ಶ್ರುತಿಯಿಂದಲೂ ಯುಕ್ತಿಯಿಂದಲೂ ಪುರುಷನೆನ್ನಿಸಿಕೊಂಡಿರುವ ದೇಹಾತೀತನಾಗಿ ಸದ್ರೂಪನಾಗಿ ನಿನ್ನಂಥವರಿಗೆ ಕಾಣುವದಕ್ಕೆ ಬಹುಕಷ್ಟವಾಗಿರುವ ನಿನ್ನ ಆತ್ಮನನ್ನು ಹೇಳುವೆನು, ಕೇಳು.

ಅಹಂಶಬ್ದೇನ ವಿಖ್ಯಾತ ಏಕ ಏವ ಸ್ಥಿತಃ ಪರಃ ।
ಸ್ಥೂಲಸ್ತ್ವನೇಕತಾಂ ಪ್ರಾಪ್ತಃ ಕಥಂ ಸ್ಯಾದ್ದೇಹಕಃ ಪುಮಾನ್ ॥ ೩೧

---

1. ಸ್ವದೇಹೇ ಎಂಬುದಕ್ಕೆ 'ಸ್ವದೇಹಂ' ಎಂದು ವಾ॥ ಮುಂತಾದ ಪಾಠವಿದೆ. ಈ ಪಾಠಕ್ಕೆ 'ರೇ ಮೂರ್ಖ, ಶೋಭನಂ ಸ್ವದೇಹಂ ಸನ್ತಂ ಪುರುಷಾಖ್ಯಂ ಸಮ್ಮತಂ ಆತ್ಮಾನಂ ಕಿಂ ದೇಹಾತೀತಂ ಶೂನ್ಯಂ ಕರೋಷಿ ?' -ಎಂದು ಅನ್ವಯ. ದೇಹವೇ ಪುರುಷನಾಗಿರುವಾಗ ದೇಹಾತೀತನಾದವನೆಂದು ಭಾವಿಸಿ ಪುರುಷನನ್ನು ಶೂನ್ಯವಾಗಿ ಏಕೆ ಮಾಡುತ್ತೀಯೆ ?- ಎಂದು ಪೂರ್ವಪಕ್ಷಿಯು ಕೇಳುತ್ತಾನೆಂದೂ ಮುಂದಿನ ಶ್ಲೋಕದಲ್ಲಿ ಸಿದ್ಧಾಂತಿಯು ಉತ್ತರವನ್ನು ಕೊಡುತ್ತಾನೆಂದೂ ಕಲ್ಪಿಸಬೇಕು. ನಾವು ಕೊಟ್ಟಿರುವ ಪಾಠವಲ್ಲಿ ಯಾವ ಕ್ಲೇಶವೂ ಇಲ್ಲ.

2. ನನ್ನದು ಎಂಬುದು ನನಗಿಂತ ಬೇರೆಯಾಗಿರಬೇಕು.

3. 'ಭವಾದೃಶಾಂ' ವಾ॥

೩೧. ನಾನು ಎಂಬ ಶಬ್ದದಿಂದ ಪ್ರಸಿದ್ಧನಾಗಿರುವ ಈ ಪರಮಾತ್ಮನು ಒಬ್ಬನೇ ಆಗಿರುವನು ; ಸ್ಥೂಲದೇಹವಾದರೋ ಅನೇಕವಾಗಿರುವದು. ಈ ಕುತ್ಸಿತದೇಹವು ಹೇಗೆ ಪುರುಷನಾದೀತು ?

ಅಹಂ ದ್ರಷ್ಟೃತಯಾ ಸಿದ್ಧೋ ದೇಹೋ ದೃಶ್ಯತಯಾ ಸ್ಥಿತಃ |
ಮಮಾಯಮಿತಿ ನಿರ್ದೇಶಾತ್ ಕಥಂ ಸ್ಯಾದ್ದೇಹಕಃ ಪುಮಾನ್ ॥ ೩೨

೩೨. 'ನಾನು' (ಎನ್ನಿಸಿಕೊಳ್ಳುವ ಆತ್ಮನು) ನೋಡುವಾತನು ; ದೇಹವೋ ನೋಡಲ್ಪಡತಕ್ಕದ್ದು, ಏಕೆಂದರೆ (ಇದನ್ನು) 'ನನ್ನದು' ಎಂದು ತಿಳಿಸುತ್ತಾರೆ. (ಹೀಗಿರುವಾಗ) ಈ ಕುತ್ಸಿತದೇಹವು ಹೇಗೆ ಪುರುಷನಾದೀತು ?

ಅಹಂ ವಿಕಾರಹೀನಸ್ತು ದೇಹೋ ನಿತ್ಯಂ ವಿಕಾರವಾನ್ |
ಇತಿ ಪ್ರತೀಯತೇ ಸಾಕ್ಷಾತ್ ಕಥಂ ಸ್ಯಾದ್ದೇಹಕಃ ಪುಮಾನ್ || ೩೩ ||

೩೩. ನಾನು ವಿಕಾರಗಳಿಲ್ಲದವನು, ದೇಹವು ಯಾವಾಗಲೂ ವಿಕಾರಗಳುಳ್ಳದ್ದು ಎಂದು ಕಾಣಿಸುತ್ತದೆ.[1] ಈ ಕುತ್ಸಿತದೇಹವು ಹೇಗೆ ಪುರುಷನಾದೀತು ?

ಯಸ್ಮಾತ್ ಪರಮಿತಿ ಶ್ರುತ್ಯಾ ತಯಾ ಪುರುಷಲಕ್ಷಣಮ್ |
ವಿನಿರ್ಣೀತಂ ವಿಮೂಢೇನ[2] ಕಥಂ ಸ್ಯಾದ್ದೇಹಕಃ ಪುಮಾನ್ || ೩೪ ||

೩೪. "ಯಸ್ಮಾತ್ ಪರಮ್" (ತೈ. ನಾ. ೧೦-೩) ಎಂಬ ಆ (ಪ್ರಸಿದ್ಧವಾದ) ಶ್ರುತಿಯಲ್ಲಿ ಪುರುಷಸ್ವರೂಪವು ನಿರ್ಣೀತವಾಗಿರುತ್ತದೆ. ಎಲ್ಲಿ ಪರಮ ಮೂಢನೆ, ಈ ಕುತ್ಸಿತದೇಹವು ಹೇಗೆ ಪುರುಷನಾದೀತು ?

ಸರ್ವಂ ಪುರುಷ ಏವೇತಿ ಸೂಕ್ತೇ ಪುರುಷಸಂಜ್ಞಿತೇ |
ಅಪ್ಯುಚ್ಯತೇ ಯತಃ ಶ್ರುತ್ಯಾ ಕಥಂ ಸ್ಯಾದ್ದೇಹಕಃ ಪುಮಾನ್ ॥ ೩೫ ॥

೩೫. ಪುರುಷಸೂಕ್ತವೆಂಬ ಹೆಸರಿನ ಸೂಕ್ತದಲ್ಲಿಯೂ 'ಸರ್ವವೂ ಪುರುಷನೇ' (ತೈ. ಆ. ೩-೧೨) ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಈ ಕುತ್ಸಿತ ದೇಹವು ಹೇಗೆ ಪುರುಷನಾದೀತು ?

ಅಸಙ್ಗಃ ಪುರುಷಃ ಪ್ರೋಕ್ತೋ ಬೃಹದಾರಣ್ಯಕೇಽಪಿ ಚ |
ಅನನ್ತಮಲಸಂಶ್ಲಿಷ್ಟಃ ಕಥಂ ಸ್ಯಾದ್ದೇಹಕಃ ಪುಮಾನ್ || ೩೬ ||

---

1. ವಿಕಾರಗಳನ್ನು ನೋಡಿ ಅರಿಯುವವನು ಸ್ವತಃ ಅವಿಕಾರಿಯಾದ್ದರಿಂದ ಅದಕ್ಕಿಂತ ಬೇರೆಯಾಗಿರಬೇಕು.

2. 'ವಿಕುದ್ಧೇನ' ಎಂಬ ವಾ॥ ಪಾಠಕ್ಕಿಂತ ಈ ಪಾಠವು ಉತ್ತಮ.

೩೬. ಬೃಹದಾರಣ್ಯಕದಲ್ಲಿಯೂ ಪುರುಷನು ಅಸಂಗನೆಂದು (ಬೃ. ೪-೩-೧೫) ಹೇಳಿರುತ್ತದೆ ; ಅನಂತಮಲದಿಂದ ಕೂಡಿದ ದೇಹವು ಹೇಗೆ ಪುರುಷನಾದೀತು ?

ತತ್ರೈವ ಚ ಸಮಾಖ್ಯಾತಃ ಸ್ವಯಂಜ್ಯೋತಿರ್ಹಿ ಪೂರುಷಃ ।
ಜಡಃ ಪರಪ್ರಕಾಶ್ಯೋಽಸೌ ಕಥಂ ಸ್ಯಾದ್ದೇಹಕಃ ಪುಮಾನ್ ॥ ೩೭ ॥

೩೭. ಮತ್ತು ಅಲ್ಲಿಯೇ 'ಪುರುಷನು ಸ್ವಯಂಜ್ಯೋತಿಯು' (ಬೃ. ೪-೩-೯) ಎಂದು ಹೇಳಿರುತ್ತದೆಯಲ್ಲವೆ ? ಜಡವಾಗಿಯೂ ಮತ್ತೊಂದರಿಂದ ಬೆಳಗತಕ್ಕದ್ದಾಗಿಯೂ ಈ ಕುತ್ಸಿತದೇಹವು ಹೇಗೆ ಪುರುಷನಾದೀತು ?

ಪ್ರೋಕ್ತೋಽಪಿ ಕರ್ಮಕಾಣ್ಡೇನ ಹ್ಯಾತ್ಮಾ ದೇಹಾದ್ವಿಲಕ್ಷಣಃ ।
ನಿತ್ಯಶ್ಚ ತತ್ಫಲಂ ಭುಙ್ಕ್ತೇ ದೇಹಪಾತಾದನನ್ತರಮ್ ॥ ೩೮ ॥

೩೮. ಆತ್ಮನು ದೇಹಕ್ಕಿಂತ ಬೇರೆಯಾಗಿರುವನೆಂದೂ ನಿತ್ಯನಾಗಿರುವದರಿಂದ ದೇಹವು ಬಿದ್ದ ಬಳಿಕ ಕರ್ಮಫಲವನ್ನು ಅನುಭವಿಸುವನೆಂದೂ ಕರ್ಮಕಾಂಡದಲ್ಲಿ ಕೂಡ[1] ಹೇಳಿರುತ್ತದೆ.

ಲಿಙ್ಗಂ ಚಾನೇಕಸಂಯುಕ್ತಂ ಚಲಂ ದೃಶ್ಯಂ ವಿಕಾರಿ ಚ ।
ಅವ್ಯಾಪಕಮಸದ್ರೂಪಂ ತತ್ಕಥಂ ಸ್ಯಾತ್ಪುಮಾನಯಮ್ ॥ ೩೯ ॥

೩೯. ಲಿಂಗ(ಶರೀರ)ವೂ[2] ಅನೇಕಾವಯವಗಳಿಂದ ಕೂಡಿದ್ದು, ಚಂಚಲವಾದದ್ದು, ಕಾಣುವಂಥದ್ದು, ವಿಕಾರಗಳುಳ್ಳದ್ದು, ವ್ಯಾಪಕವಲ್ಲ, ಸದ್ರೂಪವಲ್ಲ. ಅದು ಹೇಗೆ ಪುರುಷನಾದೀತು ?

ಏವಂ ದೇಹದ್ವಯಾದನ್ಯ ಆತ್ಮಾ ಪೂರುಷ ಈಶ್ವರಃ ।
ಸರ್ವಾತ್ಮಾ ಸರ್ವರೂಪಶ್ಚ ಸರ್ವಾತೀತೋಽಹಮವ್ಯಯಃ ॥ ೪೦ ॥

---

1. ಕರ್ಮಕಾಂಡದಲ್ಲಿ ದೇಹಾದಿಗಳು ಅಸತ್ಯವೆಂದು ಹೇಳದಿದ್ದರೂ ಆತ್ಮನು ದೇಹಕ್ಕಿಂತ ವಿಲಕ್ಷಣನೆಂದು ಹೇಳಿರುತ್ತದೆ.

2. ಇಂದ್ರಿಯಗಳು, ಪ್ರಾಣಗಳು, ಮನಸ್ಸು, ಬುದ್ಧಿ- ಇವುಗಳ ಒಟ್ಟನ್ನು ಲಿಂಗ ಶರೀರವು ಅಥವಾ ಸೂಕ್ಷ್ಮಶರೀರವು ಎಂದು ಕರೆಯುವರು.

೪೦. ಹೀಗೆ ನಾನು ಎರಡು ಬಗೆಯ ದೇಹಕ್ಕೂ ಬೇರೆಯಾಗಿರುವ ಆತ್ಮನು, ಪುರುಷನು, ಈಶ್ವರನು, ಸರ್ವಾತ್ಮನು, ಸರ್ವರೂಪನು, ಸರ್ವಾತೀತನು, ಅವ್ಯಯನು.[1]

ದೇಹಗಳೆಂಬುದೇ ಸುಳ್ಳು

ಇತ್ಯಾತ್ಮದೇಹಭಾಗೇನ[2] ಪ್ರಪಞ್ಚಸ್ಯೈವ ಸತ್ಯತಾ ।
ಯಥೋಕ್ತಾತರ್ಕಶಾಸ್ತ್ರೇಣ ತತಃ ಕಿಂ ಪುರುಷಾರ್ಥತಾ ॥ ೪೧ ॥

೪೧. ಹೀಗೆ ಆತ್ಮನನ್ನೂ ದೇಹವನ್ನೂ ಬೇರ್ಪಡಿಸಿ ಪ್ರಪಂಚವೇ ಸತ್ಯವೆಂದು ತರ್ಕಶಾಸ್ತ್ರದಲ್ಲಿ ಹೇಳಿರುವಂತೆಯೇ ಇಲ್ಲಿಯೂ ಹೇಳಿದಂತಾಯಿತು. ಇವರಿಂದ ಪುರುಷಾರ್ಥವೇನಿದೆ ?

ಇತ್ಯಾತ್ಮದೇಹಭೇದೇನ ದೇಹಾತ್ಮತ್ವಂ ನಿವಾರಿತಮ್ ।
ಇದಾನೀಂ ದೇಹಭೇದಸ್ಯ ಹ್ಯಸತ್ತ್ವಂ ಸ್ಫುಟಮುಚ್ಯತೇ ॥ ೪೨ ॥

೪೨. ಹೀಗೆ ಆತ್ಮನನ್ನೂ ದೇಹವನ್ನೂ ಬೇರ್ಪಡಿಸಿ ದೇಹವೇ ಆತ್ಮನೆಂಬುದನ್ನು ತಿರಸ್ಕರಿಸಿದ್ದಾಯಿತು. ಈಗ ಬೇರೆಯಾದ ದೇಹವೇ ಇಲ್ಲವೆಂಬುದನ್ನು ಸ್ಫುಟವಾಗಿ ತಿಳಿಸಲಾಗುತ್ತದೆ.

ಚಿದಾತ್ಮನು ಒಬ್ಬನೇ

ಚೈತನ್ಯಸ್ಯೈಕರೂಪತ್ವಾದ್ಭೇದೋ ಯುಕ್ತೋ ನ ಕರ್ಹಿಚಿತ್ ।
ಜೀವತ್ವಂ ಚ ವ್ಯಷಾ ಜ್ಞೇಯಂ ರಜ್ಜ್ವಾಂ[3] ಸರ್ಪಗ್ರಹೋ ಯಥಾ ॥ ೪೩

---

1. ಆತ್ಮನು ಎಂದರೆ ದೇಹಕ್ಕಿಂತ ವಿಲಕ್ಷಣನಾದ ಚೇತನನು, ಪುರುಷನು ಎಂದರೆ ಹೃದಯದಲ್ಲಿರುವ ಆತ್ಮನು, ಈಶ್ವರನೆಂದರೆ ಆಳುವವನು, ಸರ್ವಾತ್ಮನು ಎಂದರೆ ಎಲ್ಲಕ್ಕೂ ಆತ್ಮನು, ಸರ್ವರೂಪನೆಂದರೆ ಎಲ್ಲರ ರೂಪದಿಂದಲೂ ಕಾಣುವವನು, ಸರ್ವಾತೀತನು ಎಲ್ಲವನ್ನೂ ಮೀರಿರುವ ತತ್ತ್ವವು. ಅವ್ಯಯನು ಎಂದರೆ ನಾಶರಹಿತಸ್ವಭಾವನು.

2. 'ಭಾನೇನ' ಎಂಬ ವಾ॥ ಪಾಠಕ್ಕಿಂತ ಇದು ಉತ್ತಮ. 'ಭಾನೇನ' ಎಂಬ ಆ॥ ಪಾಠವೂ ಅಷ್ಟು ಹೊಂದಿಕೆಯಾಗಿಲ್ಲ. 'ಭೇದೇನ' ಎಂಬ ಪಾಠವು ಮೂಲದಲ್ಲಿದ್ದು ಹೀಗೆ ಪಾಠಾಂತರವಾಗಿರಬಹುದು ಎಂದು ಮುಂದಿನ ಶ್ಲೋಕದಿಂದ ತೋರುತ್ತದೆ.

3. 'ರಜ್ಜ್ವಂ' ಎಂದು ಪಾಠಾಂತರ.

೪೫. ಚೈತನ್ಯವು ಒಂದೇ ರೂಪವಾಗಿರುವದರಿಂದ (ಅದರಲ್ಲಿ) ಯಾವಾಗಲೂ[1] ಭೇದವು ಯುಕ್ತವಲ್ಲ. ಹಗ್ಗದಲ್ಲಿ (ಇದು) ಹಾವೆಂಬ ಬುದ್ಧಿಯು ಹೇಗೋ ಹಾಗೆ ಜೀವತ್ವವೂ ಸಟೆಯೆಂದು ತಿಳಿಯಬೇಕು.[2]

ರಜ್ಜ್ವಜ್ಞಾನಾತ್ ಕ್ಷಣೇನೈವ ಯದ್ವದ್ರಜ್ಜುರ್ಹಿ ಸರ್ಪಣೇ |
ಭಾತಿ ತದ್ವಚ್ಚಿತಿಃ ಸಾಕ್ಷಾದ್ವಿಶ್ವಾಕಾರೇಣ ಕೇವಲಾ ॥ ೪೪ ॥

೪೪. ಹಗ್ಗವನ್ನು ಅರಿತುಕೊಳ್ಳದ್ದರಿಂದ ಹೇಗೆ ಹಗ್ಗವು ಕ್ಷಣಮಾತ್ರದಲ್ಲಿ ಹಾವಾಗಿ ತೋರುವದೋ ಅದರಂತೆ ಚೈತನ್ಯವೊಂದೇ ತಾನೇ ಪ್ರಪಂಚದ ಆಕಾರವಾಗಿ ತೋರುತ್ತಿರುವದು[3].

ಅದ್ವೈತಬ್ರಹ್ಮಾತ್ಮತ್ವಕ್ಕೆ ಶ್ರುತಿಪ್ರಮಾಣ

ಉಪಾದಾನಂ ಪ್ರಪಞ್ಚಸ್ಯ ಬ್ರಹ್ಮಣೋಽನ್ಯನ್ನ ವಿದ್ಯತೇ |
ತಸ್ಮಾತ್ ಸರ್ವ ಪ್ರಪಞ್ಚೋಽಯಂ ಬ್ರಹ್ಮೈವಾಸ್ತಿ ನ ಚೇತರತ್ ॥೪೫

೪೫. ಪ್ರಪಂಚಕ್ಕೆ ಬ್ರಹ್ಮಕ್ಕಿಂತ ಬೇರೆಯಾದ ಉಪಾದಾನವು ಇರುವದಿಲ್ಲ ; ಆದ್ದರಿಂದ ಈ ಪ್ರಪಂಚವೆಲ್ಲವೂ ಬ್ರಹ್ಮವೇ ಹೊರತು ಬೇರೆಯಿರುವದಿಲ್ಲ.[4]

ವ್ಯಾಪ್ಯವ್ಯಾಪಕತಾ ಮಿಥ್ಯಾ ಸರ್ವಮಾತ್ಮೇತಿ ಶಾಸನಾತ್ |
ಇತಿ ಜ್ಞಾತೇ ಪರೇ ತತ್ತ್ವೇ ಭೇದಸ್ಯಾವಸರಃ ಕುತಃ ॥ ೪೬ ॥

೪೬. "ಎಲ್ಲವೂ ಆತ್ಮನೇ" (ಛಾಂ. ೭-೨೫-೨, ಬೃ. ೨-೪-೬) ಎಂದು ಶಾಸ್ತ್ರವಿರುವದರಿಂದ ವ್ಯಾಪ್ಯವ್ಯಾಪಕತ್ವವು ಸುಳ್ಳೇ.[5] ಹೀಗೆಂದು ಪರತತ್ತ್ವವನ್ನು ತಿಳಿದುಕೊಂಡರೆ ಭೇದಕ್ಕೆ ಅವಕಾಶವೆಲ್ಲಿಯದು ?

---

1. ತನ್ನ ಸ್ವರೂಪದಿಂದಾಗಲಿ ಉಪಾಧಿಯಿಂದಾಗಲಿ ಭೇದವಿಲ್ಲ ಎಂದಭಿಪ್ರಾಯ. ಉಪಾಧಿಯಿಂದ ಭೇದವುಂಟಾಗಿರುವಂತೆ ಭ್ರಾಂತಿಯಾಗುತ್ತದೆ, ಆಕ್ಷೇ.

2. ಜೀವರುಗಳು ಅನೇಕರಾಗಿ ಕಾಣುತ್ತಾರೆ. ಆದ್ದರಿಂದ ಚೈತನ್ಯದಲ್ಲಿ ಭೇದವಿವೆಯೆಂದಾಯಿತಲ್ಲ !- ಎಂಬ ಆಕ್ಷೇಪಕ್ಕೆ ಪರಿಹಾರವಿದು.

3. ಜೀವರುಗಳಿಗೆ ಉಪಾಧಿಯಾಗಿರುವ ಅಚೇತನಾಂಶವಾದರೂ ಸತ್ಯವಷ್ಟೆ ; ಆದ್ದರಿಂದ ಚೇತನದಲ್ಲಿ ಸಜಾತೀಯಭೇದವಿಲ್ಲದ್ದರೂ ವಿಜಾತೀಯಭೇದವಿರಬಹುದಲ್ಲ !- ಎಂಬ ಶಂಕೆಗೆ ಇದು ಪರಿಹಾರ.

4. ಉಪಾದಾನಕಾರಣಕ್ಕಿಂತ ಕಾರ್ಯವು ಬೇರೆಯಲ್ಲ.

5. ಆತ್ಮನು ವ್ಯಾಪಕನು, ಜಗತ್ತು ವ್ಯಾಪ್ಯವು- ಎಂದು ಕಲ್ಪಿಸುವದು ಪರಮ ಸಿದ್ಧಾಂತವಲ್ಲ.

ಶ್ರುತ್ಯಾ ನಿವಾರಿತಂ ನೂನಂ ನಾನಾತ್ವಂ ಸ್ವಮುಖೇನ ಹಿ ।
ಕಥಂ ಭಾಸೋ ಭವೇದನ್ಯಃ ಸ್ಥಿತೇ ಚಾದ್ವಯಕಾರಣೇ ॥ ೪೭ ॥

೪೭. ನಾನಾತ್ವವನ್ನು ಶ್ರುತಿಯು (ಕ. ೨-೧-೧೧) ಬಾಯಿಬಿಟ್ಟು ಅಲ್ಲಗಳೆದಿರುತ್ತದೆ. ಅದ್ವಯವಾದ ಕಾರಣವು ಇರುವಲ್ಲಿ ಮತ್ತೊಂದು ಹೇಗೆ ತೋರೀತು ?

ದೋಷೋಽಪಿ ವಿಹಿತಃ ಶ್ರುತ್ಯಾ ಮೃತ್ಯೋರ್ಮೃತ್ಯುಂ ಸ ಗಚ್ಛತಿ ।
ಇಹ ಪಶ್ಯತಿ ನಾನಾತ್ವಂ ಮಾಯಯಾ ವಞ್ಚಿತೋ ನರಃ ॥ ೪೮ ॥

೪೮. ಇದಲ್ಲದೆ (ಭೇದದೃಷ್ಟಿಯಲ್ಲಿ) ದೋಷವನ್ನು "ಯಾವ ಮನುಷ್ಯನು ಮಾಯೆಯಿಂದ ವಂಚಿತನಾಗಿ ನಾನಾತ್ವವನ್ನು ಈ (ಆತ್ಮ)ನಲ್ಲಿ ಕಾಣುತ್ತಾನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಪಡೆಯುತ್ತಿರುವನು" (ಕ. ೨-೧-೧೧) ಎಂದು ಶ್ರುತಿಯು ಹೇಳಿರುತ್ತದೆ.

ಬ್ರಹ್ಮಣಃ ಸರ್ವಭೂತಾನಿ ಜಾಯನ್ತೇ ಪರಮಾತ್ಮನಃ ।
ತಸ್ಮಾದೇತಾನಿ ಬ್ರಹ್ಮೈವ ಭವನ್ತೀತ್ಯವಧಾರಯೇತ್ ॥ ೪೯ ॥

೪೯. ಬ್ರಹ್ಮವೆಂಬ ಪರಮಾತ್ಮನಿಂದಲೇ ಎಲ್ಲಾ ಭೂತಗಳೂ ಹುಟ್ಟುತ್ತವೆ. ಆದ್ದರಿಂದ ಇವು ಬ್ರಹ್ಮವೇ ಆಗಿರುತ್ತವೆ[1] ಎಂದು ನಿಶ್ಚಯಿಸಬೇಕು.

ಬ್ರಹ್ಮೈವ ಸರ್ವನಾಮಾನಿ ರೂಪಾಣಿ ವಿವಿಧಾನಿ ಚ ।
ಕರ್ಮಾಣ್ಯಪಿ ಸಮುಗ್ರಾಣಿ ಬಿಭರ್ತೀತಿ ಶ್ರುತಿರ್ಜಗೌ ॥ ೫೦ ॥

೫೦. "ಬ್ರಹ್ಮವೇ ಎಲ್ಲಾ ನಾಮಗಳನ್ನೂ ವಿಧವಿಧವಾದ ರೂಪಗಳನ್ನೂ ಎಲ್ಲಾ ಕರ್ಮಗಳನ್ನೂ ಧರಿಸುತ್ತದೆ" (ಬೃ. ೧-೬-೧) ಎಂದು ಶ್ರುತಿಯು ಹೇಳಿರುತ್ತದೆ.

ಸುವರ್ಣಾಜ್ಜಾಯಮಾನಸ್ಯ ಸುವರ್ಣತ್ವಂ ಚ ಶಾಶ್ವತಮ್ ।
ಬ್ರಹ್ಮಣೋ ಜಾಯಮಾನಸ್ಯ ಬ್ರಹ್ಮತ್ವಂ ಚ ತಥಾ ಭವೇತ್ ॥ ೫೧ ॥

೫೧. ಚಿನ್ನದಿಂದ ಹುಟ್ಟಿರುವದು ಯಾವಾಗಲೂ ಚಿನ್ನವೇ ಆಗಿರುವದಷ್ಟೆ. ಬ್ರಹ್ಮದಿಂದ ಹುಟ್ಟಿರುವದೂ ಹಾಗೆಯೇ (ಯಾವಾಗಲೂ ಬ್ರಹ್ಮವೇ) ಆಗಿರಬೇಕು.

---

1. ಮುಂ. ೨-೨-೧೧ರ ಸೂಚನೆಯಿದು. ಬ್ರಹ್ಮದಿಂದ ಎಲ್ಲವೂ ಹುಟ್ಟುತ್ತದೆ ಎಂದು ಶ್ರುತಿಯಲ್ಲಿ ಹೇಳಿರುವದು ಎಲ್ಲವೂ ಬ್ರಹ್ಮವೇ ಎಂದು ತಿಳಿಸುವದಕ್ಕೆ ಎಂದು ಭಾವ.

ಸ್ವಲ್ಪಮಪ್ಯನ್ತರಂ ಕೃತ್ವಾ ಜೀವಾತ್ಮಪರಮಾತ್ಮನೋಃ ।
ಯಃ ಸನ್ತಿಷ್ಠತಿ ಮೂಢಾತ್ಮಾ ಭಯಂ ತಸ್ಯಾಭಿಭಾಷಿತಮ್ ॥ ೫೨ ॥

೫೨. ಜೀವಾತ್ಮಪರಮಾತ್ಮರಿಗೆ ಸ್ವಲ್ಪವಾದರೂ ಭೇದವನ್ನು ಮಾಡಿ ಯಾವ ಮೂಢಾತ್ಮನು ಇರುವನೋ ಅವನಿಗೆ ಭಯವನ್ನು (ಶ್ರುತಿಯಲ್ಲಿ) ಹೇಳಿರುತ್ತದೆ.[1]

ಯತ್ರಾಜ್ಞಾನಾದ್ಭವೇದ್ದ್ವೈತಮಿತರಸ್ತತ್ರ ಪಶ್ಯತಿ ।
ಆತ್ಮತ್ವೇನ ಯದಾ ಸರ್ವಂ ನೇತರಸ್ತತ್ರ ಚಾಣ್ವಪಿ ॥ ೫೩ ॥

೫೩. ಎಲ್ಲಿ ಅಜ್ಞಾನದಿಂದ ದ್ವೈತವಾಗಿರುವದೋ ಅಲ್ಲಿ ಒಬ್ಬನು (ಮತ್ತೊಬ್ಬನನ್ನು) ಕಾಣುವನು. ಎಲ್ಲವೂ ಆತ್ಮನೇ ಎಂದು ಯಾವಾಗ (ಆಗುವದೋ) ಅಲ್ಲಿ ಮತ್ತೊಂದು (ಪದಾರ್ಥವು) ಒಂದಿಷ್ಟೂ ಇರುವದಿಲ್ಲ.[2]

ಯಸ್ಮಿನ್ ಸರ್ವಾಣಿ ಭೂತಾನಿ ಹ್ಯಾತ್ಮತ್ವೇನ* ವಿಜಾನತಃ ।
ನ ವೈ ತಸ್ಯ ಭವೇನ್ಮೋಹೋ ನ ಚ ಶೋಕೋಽದ್ವಿತೀಯತಃ ॥ ೫೪ ॥

೫೪. ಯಾವ (ಕಾಲ)ದಲ್ಲಿ ಜ್ಞಾನವುಂಟಾದವನಿಗೆ ಎಲ್ಲಾ ಭೂತಗಳೂ ಆತ್ಮನೆಂದೇ (ಆಗುವದೋ ಆಗ) ಅಂಥವನಿಗೆ ಎರಡನೆಯದು ಇರುವದಿಲ್ಲವಾಗಿ ಮೋಹವೂ ಆಗಲಾರದು, ಶೋಕವೂ ಆಗಲಾರದು.[4]

ಅಯಮಾತ್ಮಾ ಹಿ ಬ್ರಹ್ಮೈವ ಸರ್ವಾತ್ಮಕತಯಾ ಸ್ಥಿತಃ ।
ಇತಿ ನಿರ್ಧಾರಿತಂ ಶ್ರುತ್ಯಾ ಬೃಹದಾರಣ್ಯಸಂಸ್ಥಯಾ ॥ ೫೫ ॥

೫೫. ಎಲ್ಲಾ ರೂಪದಿಂದಲೂ ಇರುವ ಈ ಆತ್ಮನೇ ಬ್ರಹ್ಮವು (ಬೃ. ೪-೪-೫) ಎಂದು ಬೃಹದಾರಣ್ಯಕದಲ್ಲಿರುವ ಶ್ರುತಿಯಿಂದ ನಿಶ್ಚಯಿಸಲ್ಪಟ್ಟಿರುತ್ತದೆ.

ಅದ್ವೈತಬ್ರಹ್ಮಾತ್ಮತ್ವವನ್ನು ತಿಳಿಸುವ ಯುಕ್ತಿ

ಅನುಭೂತೋಽಯಂ ಲೋಕೋ ವ್ಯವಹಾರಕ್ಷಮೋಽಪಿ ಸನ್ ।
ಅಸದ್ರೂಪೋ ಯಥಾ ಸ್ವಪ್ನ ಉತ್ತರಕ್ಷಣಬಾಧತಃ ॥ ೫೬ ॥

---

1. ತೈ. ೨-೭ರ ಅಭಿಪ್ರಾಯವಿದು.
2. ಬೃ. ೨-೪-೧೪ರ ಅಭಿಪ್ರಾಯ.
3. 'ಆತ್ಮತ್ವೇನ ವಿಜಾನತಃ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಇದು ಶ್ರುತಿಗೂ ಅನುಗುಣವಾಗಿದೆ, ಅನ್ವಯವೂ ಸರಳವಾಗಿ ಆಗುತ್ತದೆ.
4. ಈ. ೭ರ ಅಭಿಪ್ರಾಯವಿದು.

೫೬. ಈ ಪ್ರಪಂಚವು ಅನುಭವದಲ್ಲಿದೆಯಾದರೂ[1] ವ್ಯವಹಾರಕ್ಕೆ ಉಪಯೋಗವಾಗಿರುತ್ತದೆಯಾದರೂ[2] ಅಸದ್ರೂಪವೇ. ಏಕೆಂದರೆ ಇದು ಕನಸಿನಂತೆ ಉತ್ತರಕ್ಷಣದಲ್ಲಿಯೇ[3] ಬಾಧಿತವಾಗುವದು.

ಸ್ವಪ್ನೇ ಜಾಗರಣೇಽಲೀಕಃ ಸ್ವಪ್ನೇಽಪಿ ಜಾಗರೋ ನ ಹಿ[4] ।
ದ್ವಯಮೇವ ಲಯೇ ನಾಸ್ತಿ ಲಯೋಽಪಿ ಹ್ಯುಭಯೋರ್ನ ಚ ॥ ೫೭

೫೭. ಕನಸು ಎಚ್ಚರದಲ್ಲಿ ಇರುವದಿಲ್ಲ. ಕನಸಿನಲ್ಲಿಯೂ ಎಚ್ಚರವು ಇರುವದಿಲ್ಲ. ಇವೆರಡೂ ತಸಿಸಿದ್ರೆಯಲ್ಲಿರುವದಿಲ್ಲ. (ಆ) ನಿದ್ರೆಯೂ ಇವೆರಡರಲ್ಲಿರುವದಿಲ್ಲ.

ತ್ರಯಮೇವಂ ಭವೇನ್ಮಿಥ್ಯಾ ಗುಣತ್ರಯವಿನಿರ್ಮಿತಮ್ |
ತಸ್ಯ ದ್ರಷ್ಟಾ ಗುಣಾತೀತೋ ನಿತ್ಯೋ ಹ್ಯೇಕಶ್ಚಿದಾತ್ಮಕಃ ॥ ೫೮ ॥

೫೮. ಹೀಗೆ ಮೂರು ಗುಣಗಳಿಂದ[5] ನಿರ್ಮಿತವಾಗಿರುವ ಈ ಮೂರೂ ಮಿಥ್ಯೆಯೇ. ಆದರೆ ಇದನ್ನು ನೋಡುವವನು ಗುಣಗಳನ್ನು ಮೀರಿದವನಾಗಿಯೂ ನಿತ್ಯನಾಗಿಯೂ ಒಬ್ಬನಾಗಿಯೂ ಚಿದ್ರೂಪನಾಗಿಯೂ ಇರುತ್ತಾನೆ.

ಯದ್ವನ್ಮೃದಿ ಘಟಭ್ರಾನ್ತಿಂ ಶುಕ್ತೌ ವಾ ರಜತಸ್ಥಿತಿಮ್ |
ತದ್ವದ್ಬ್ರಹ್ಮಣಿ ಜೀವತ್ವಂ ವೀಕ್ಷ್ಯಮಾಣೇ ನ ಪಶ್ಯತಿ[6] ॥ ೫೯ ॥

೫೯. ಹೇಗೆ ಮಣ್ಣಿನಲ್ಲಿ ಗಡಿಗೆ ಎಂಬ ಭ್ರಾಂತಿಯನ್ನು ಅಥವಾ ಕಪ್ಪೆ ಚಿಪ್ಪಿನಲ್ಲಿ ಬೆಳ್ಳಿಯಿರುವದನ್ನೂ (ವಿಚಾರಿಸಿ ನೋಡಿದರೆ ಅದು ಕಾಣಿಸದೆ

---

1. ಪ್ರತೀತವಾಗಿದ್ದರೆ ನಿಜವಾಗಿರಬೇಕಾದದ್ದಿಲ್ಲ; ಉದಾಹರಣೆಗೆ ಆಕಾಶವು ನೀಲ ವರ್ಣವಾಗಿ ತೋರಿದರೂ ನಿಜವಾಗಿ ಅದಕ್ಕೆ ವರ್ಣವಿಲ್ಲ.

2. ಕುಡಿದು ಬಾಯಾರಿಕೆ ಇಂಗಿದರೆ ನಿಜವಾದ ನೀರೆನ್ನುವದಕ್ಕೆ ಬರುವದಿಲ್ಲ. ಇದಕ್ಕೆ ಸ್ವಪ್ನದ ನೀರೇ ದೃಷ್ಟಾಂತ.

3. ಜ್ಞಾನಕ್ಷಣದಲ್ಲಿಯೇ ಎಂದರ್ಥ.

4. 'ನ ಹಿ ಜಾಗರಃ' ಎಂಬ ಪಾಠವೂ ಉಂಟು; ಅದರಿಂದ ಅರ್ಥದಲ್ಲಿ ಯಾವ ಹೆಚ್ಚು ಕಡಿಮೆಯೂ ಆಗುವದಿಲ್ಲ.

5. ಸತ್ತ್ವರಜಸ್ತಮೋಗುಣಗಳಿಂದ ಎಂದರ್ಥ. ಅವಸ್ಥೆಗಳು ಗುಣತ್ರಯದ ಕಾರ್ಯವೆಂಬ ಅಭಿಪ್ರಾಯವು ಭಾಷ್ಯಗಳಲ್ಲಿ ಕಾಣುವದಿಲ್ಲ.

6. 'ಭ್ರಾಂತ್ಯಾ ಪಶ್ಯತಿ ನ ಸ್ವತಃ' (ಭ್ರಾಂತಿಯಿಂದ ಕಾಣುತ್ತಾನೆಯೇ ಹೊರತು ಅದು ನಿಜವಾಗಿಯವಿಲ್ಲ) ಎಂದು ವಾ॥ ಪಾತ.

ಹೋಗುವದೋ) ಅದರಂತೆ ಚೆನ್ನಾಗಿ ನೋಡಿದರೆ ಬ್ರಹ್ಮದಲ್ಲಿ ಜೀವತ್ವವೂ ನೋಡಿದರೆ ಕಾಣಿಸದೆ ಹೋಗುವದು.

ಯಥಾ ವೃದಿ ಘಟೋ ನಾಮ ಕನಕೇ ಕುಣ್ಡಲಾಭಿಧಾ ।
ಶುಕ್ತೌ ಹಿ ರಜತಖ್ಯಾತಿರ್ಜೀವಶಬ್ದಸ್ತಥಾ ಪರೇ ॥ ೬೦ ॥

೬೦. ಮಣ್ಣಿನಲ್ಲಿ ಗಡಿಗೆಯೆಂಬ ಹೆಸರು, ಚಿನ್ನದಲ್ಲಿ ಕುಂಡಲವೆಂಬ ಹೆಸರು, ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿಯೆಂಬ ಹೆಸರು ಹೇಗೋ ಹಾಗೆ ಪರ(ಬ್ರಹ್ಮ)ದಲ್ಲಿ ಜೀವಶಬ್ದವು ಹಾಗೆ.[1]

ಯಥೈವ ವ್ಯೋಮ್ನಿ ನೀಲತ್ವಂ ಯಥಾ ನೀರಂ ಮರುಸ್ಥಲೇ ।
ಪುರುಷತ್ವಂ ಯಥಾ ಸ್ಥಾಣೌ ತದ್ವದ್ವಿಶ್ವಂ ಚಿದಾತ್ಮನಿ ॥ ೬೧ ॥

೬೧. ಆಕಾಶದಲ್ಲಿ ನೀಲವರ್ಣವು ಹೇಗೋ, ಮರುಭೂಮಿಯಲ್ಲಿ ನೀರು ಹೇಗೋ, ಮೋಟು ಮರದಲ್ಲಿ ಮನುಷ್ಯನೆಂಬುದು ಹೇಗೋ ಚಿದಾತ್ಮನಲ್ಲಿ ವಿಶ್ವವು ಹಾಗೆ.[2]

ಯಥೈವ ಶೂನ್ಯೇ ವೇತಾಲೋ ಗನ್ಧರ್ವಾಣಾಂ ಪುರಂ ಯಥಾ ।
ಯಥಾಕಾಶೇ ದ್ವಿಚನ್ದ್ರತ್ವಂ ತದ್ವತ್ಸತ್ಯೇ ಜಗತ್ಸ್ಥಿತಿಃ ॥ ೬೨ ॥

೬೨. ಏನೂ ಇಲ್ಲದೆಡೆಯಲ್ಲಿ ವೇತಾಳನು ಹೇಗೋ (ಅಂತರಿಕ್ಷದಲ್ಲಿ) ಗಂಧರ್ವನಗರವು ಹೇಗೋ ಆಕಾಶದಲ್ಲಿ ಇಬ್ಬರು ಚಂದ್ರರು ಹೇಗೋ ಸತ್ಯ ರೂಪನಾದ ಪರಮಾತ್ಮನಲ್ಲಿ ಜಗತ್ತು ಇರುವದು ಹಾಗೆ.[3]

ಯಥಾ ತರಙ್ಗಾಕಲ್ಲೋಲೈರ್ಜಲಮೇವ ಸ್ಫುರತ್ಯಲಮ್ ।
ಪಾತ್ರರೂಪೇಣ ತಾಮ್ರಂ ಹಿ ಬ್ರಹ್ಮಾಣ್ಡೈಸ್ತಥಾತ್ಮತಾ ॥ ೬೩ ॥

೬೩. ನೀರೇ ತೆರೆಗಳಿಂದೂ ಅಲೆಗಳಿಂದೂ ಹೇಗೆ ಕಾಣಿಸುತ್ತಿರುವದೋ ತಾಮ್ರವೊಂದೇ ಪಾತ್ರೆಯ ರೂಪದಿಂದ ತೋರುತ್ತಿರುವದೋ ಹಾಗೆಯೇ ಆತ್ಮ ಸ್ವರೂಪವೊಂದೇ ಬ್ರಹ್ಮಾಂಡಸಮೂಹವಾಗಿ (ತೋರುತ್ತಿರುವದು).

---

1. ಬರಿಯ ಮಾತು ಪ್ರಯೋಗವಾಗಿರುತ್ತದೆ, ವಸ್ತುವಿಲ್ಲ ಎಂದರ್ಥ.
2. ಅಧ್ಯಾರೋಪವಾಗಿರುತ್ತದೆ.
3. ಆಕಾಶವನ್ನು ಅಧಿಷ್ಠಾನಮಾಡಿ ಇಬ್ಬರು ಚಂದ್ರರ ಆರೋಪವನ್ನು ಹೇಳುವಷ್ಟು ಭಾಷ್ಯಗಳಲ್ಲಿ ಕಾಣಬರುವದಿಲ್ಲ. ಒಬ್ಬ ಚಂದ್ರನಲ್ಲಿ ಸದ್ವಿತೀಯತ್ವವು ಆರೋಪಿತವೆಂದು ಸೂತ್ರಭಾಷ್ಯದಲ್ಲಿದೆ.

ಬ್ರಹ್ಮವೇ ಎಲ್ಲಾ ವ್ಯವಹಾರಕ್ಕೂ ಆಶ್ರಯ

ಘಟನಾವ್ನಾ ಯಥಾ ಪೃಥ್ವೀ ಪಟನಾವ್ನಾ ಹಿ ತನ್ತವಃ ।
ಜಗನ್ನಾವ್ನಾ ಚಿದಾಭಾತಿ ಜ್ಞೇಯಂ ತತ್ತದಭಾವತಃ ॥ ೬೪ ॥

೬೪. ಗಡಿಗೆಯೆಂಬ ಹೆಸರಿನಿಂದ ಹೇಗೆ ಮಣ್ಣೂ ಬಟ್ಟೆಯೆಂಬ ಹೆಸರಿನಿಂದ ನೂಲುಗಳೂ ಹೇಗೋ ಹಾಗೆ ಜಗತ್ತೆಂಬ ಹೆಸರಿನಿಂದ ಚಿತ್ತೇ ತೋರುತ್ತಿರುವದು ; ಆಯಾ (ತೋರಿಕೆಯ) ಅಭಾವದಿಂದ (ವಸ್ತುಸ್ವರೂಪವನ್ನು) ಅರಿಯಬೇಕು.

ಸರ್ವೋಽಪಿ ವ್ಯವಹಾರಸ್ತು ಬ್ರಹ್ಮಣಾ ಕ್ರಿಯತೇ ಜನೈಃ ।
ಅಜ್ಞಾನಾನ್ನ ವಿಜಾನನ್ತಿ ಮೃದೇವ ಹಿ ಘಟಾದಿಕಮ್ ॥ ೬೫ ॥

೬೫. ಬ್ರಹ್ಮದಿಂದಲೇ ಜನರು ಎಲ್ಲಾ ವ್ಯವಹಾರವನ್ನೂ ಮಾಡುತ್ತಿರುವರು. ಆದರೂ ಅಜ್ಞಾನದಿಂದ (ಇದನ್ನು) ಅರಿಯದೆ ಇರುವರು. ಗಡಿಗೆ ಮುಂತಾದದ್ದು (ಬರಿಯ) ಮಣ್ಣೇ ಅಷ್ಟೆ ?

ಕಾರ್ಯಕಾರಣತಾ ನಿತ್ಯಮಾಸ್ತೇ ಘಟಮೃದೋರ್ಯಥಾ ।
ತಥೈವ ಶ್ರುತಿಯುಕ್ತಿಭ್ಯಾಂ ಪ್ರಪಞ್ಚಬ್ರಹ್ಮಣೋರಿಹ ॥ ೬೬ ॥

೬೬. ಗಡಿಗೆಗೂ ಮಣ್ಣಿಗೂ ಕಾರ್ಯಕಾರಣಭಾವವು ಯಾವಾಗಲೂ ಹೇಗೆ ಇದ್ದುಕೊಂಡಿರುವದೋ ಹಾಗೆಯೇ ಪ್ರಪಂಚಬ್ರಹ್ಮಗಳಿಗೂ ಇರುವದೆಂದು ಶ್ರುತಿಯುಕ್ತಿಗಳಿಂದ (ಗೊತ್ತಾಗುತ್ತದೆ)[1].

ಜ್ಞಾನಾಜ್ಞಾನದೃಷ್ಟಿಗಳ ತಾರತಮ್ಯ

ಗೃಹ್ಯಮಾಣೇ ಘಟೇ ಯದ್ವನ್ಮೃತ್ತಿಕಾಯಾತಿ ನೈ ಬಲಾತ್ ।
ವೀಕ್ಷ್ಯಮಾಣೇ ಪ್ರಪಞ್ಚೇಽಪಿ ಬ್ರಹ್ಮೈವಾಭಾತಿ ಭಾಸುರಮ್ ॥೬೭॥

೬೭. ಗಡಿಗೆಯನ್ನು ಗ್ರಹಿಸಿದರೆ ಮಣ್ಣು ಬಲಾತ್ಕಾರದಿಂದ ಹೇಗೆ (ಆ ಗ್ರಹಣದಲ್ಲಿ) ಬಂದೇ ತೀರುವದೋ (ಹಾಗೆ) ಪ್ರಪಂಚವನ್ನು ಕಾಣುತ್ತಿದ್ದರೂ ಪ್ರಕಾಶರೂಪವಾದ ಬ್ರಹ್ಮವೇ ತೋರುತ್ತಿರುವದು[2].

---

1. ಘಟಾದಿಕಾರ್ಯವು ಕಾರಣಕ್ಕಿಂತ ಬೇರೆಯಲ್ಲವೆ ಕಾರಣರೂಪದಿಂದಲೇ ಇರುವಂತೆ ಜಗದ್ರೂಪಕಾರ್ಯವು ಕಾರಣವಾದ ಬ್ರಹ್ಮರೂಪದಿಂದಲೇ ಇರುವದು — ಎಂದು ಅಭಿಪ್ರಾಯ.

2. ಅಜ್ಞಾನಿಗಳು ಪ್ರಪಂಚವೆಂದು ಕಾಣುವದು ಆಗಲೂ ಪರಮಾರ್ಥವಾಗಿ ಬ್ರಹ್ಮವೇ.

ಸದೈವಾತ್ಮಾ ವಿಶುದ್ಧೋಽಸ್ತಿ ಹ್ಯಶುದ್ಧೋ ಭಾತಿ ವೈ ಸದಾ ।
ಯಥೈವ ದ್ವಿವಿಧಾ ರಜ್ಜುರ್ಜ್ಞಾನಿನೋಽಜ್ಞಾನಿನೋಽಪಿ ವಾ ॥ ೬೮ ॥

೬೮. ಹೇಗೆ ಹಗ್ಗವು ಯಾವಾಗಲೂ (ಬೇರೆಬೇರೆಯಾಗಿ) ಎರಡು ವಿಧವಾಗಿ ಕಾಣುತ್ತಿರುವುದೋ[1] (ಹಾಗೆ) ಆತ್ಮನು ಯಾವಾಗಲೂ ವಿಶುದ್ಧನೇ ಆಗಿರುತ್ತಾನೆ, ಯಾವಾಗಲೂ ಅಶುದ್ಧನಾಗಿ ತೋರುತ್ತಿರುತ್ತಾನೆ[2].

ಅನಾತ್ಮವೆಲ್ಲ ನಿಜವಾಗಿ ಆತ್ಮನು

ಯಥೈವ ಮೃನ್ಮಯಃ ಕುಮ್ಭಸ್ತಪ್ತಪ್ತೋಽಪಿ ಚಿನ್ಮಯಃ ।
ಆತ್ಮಾನಾತ್ಮವಿಭಾಗೋಽಯಂ ಮುಧೈವ ಕ್ರಿಯತೇಽಬುಧೈಃ ॥ ೬೯ ॥

೬೯. ಹೇಗೆ ಗಡಿಗೆಯು ಮಣ್ಣಿನ ರೂಪವಾಗಿಯೇ (ಇದ್ದುಕೊಂಡಿರುವದೋ) ಹಾಗೆ ದೇಹವೂ ಚಿದ್ರೂಪವಾಗಿಯೇ (ಇದ್ದುಕೊಂಡಿರುತ್ತದೆ. ಆದರೂ) ತಿಳಿಯದವರ ಈ ಆತ್ಮಾನಾತ್ಮವಿಭಾಗವನ್ನು ಸುಮ್ಮನೆ ಮಾಡಿಕೊಂಡಿರುವರು[3].

ಆತ್ಮನನ್ನೇ ದೇಹವೆಂದು ತಿಳಿಯುವುದೆಂಬುದಕ್ಕೆ ದೃಷ್ಟಾಂತಗಳು

ಸರ್ಪತ್ವೇನ ಯಥಾ ರಜ್ಜೂ ರಜತತ್ವೇನ ಶುಕ್ತಿಕಾ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ[4] ॥ ೭೦ ॥

೭೦. ಹೇಗೆ ಹಗ್ಗವನ್ನು ಹಾವೆಂದೂ ಕಪ್ಪೆಯ ಚಿಪ್ಪನ್ನು ಬೆಳ್ಳಿಯೆಂದೂ ಮೂಢನು ನಿಶ್ಚಯಿಸುವನೋ ಹಾಗೆಯೇ ಆತ್ಮನನ್ನು ದೇಹವೆಂದು ನಿಶ್ಚಯಿಸಿಕೊಂಡಿರುವನು.

ಘಟತ್ವೇನ ಯಥಾ ಪೃಥ್ವೀ ಪಟತ್ವೇನೈವ ತನ್ತವಃ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೭೧ ॥

---

1. ಹಗ್ಗ, ಹಾವು –ಎಂದು ಎರಡು ವಿಧವಾಗಿ ತೋರುತ್ತಿದ್ದರೂ ಅದು ನಿಜವಾಗಿ ಹಗ್ಗವೇ ಆಗಿರುತ್ತದೆ ಎಂದು ಭಾವ.

2. ಅಜ್ಞಾನಿಗೆ ಅಶುದ್ಧನೆಂದು ತೋರಿದ ಮಾತ್ರದಿಂದ ನಿಜವಾಗಿಯೂ ಅಶುದ್ಧನೇ ಆಗಿರುವದಿಲ್ಲ; ಆಗಲೂ ನಿಜವಾಗಿ ವಿಶುದ್ಧನೇ ಆಗಿರುತ್ತಾನೆ.

3. ಅವರು ಅನಾತ್ಮವೆಂದು ಭಾವಿಸಿರುವದೂ ಪರಮಾರ್ಥವಾಗಿ ಆತ್ಮನೇ ಎಂದರ್ಥ.

4. ಆತ್ಮತಾ ಎಂಬುವರ ಬದಲು 'ಆತ್ಮಾ' ಎಂದಿಷ್ಟೇ ಇದ್ದರೆ ಸಾಕಾಗಿತ್ತು. ಛಾಂದಸ್ಸಿಗೆ 'ಆತ್ಮತಾ' ಬೇಕು.

೭೧. ಪೃಥ್ವಿಯನ್ನು ಗಡಿಗೆಯೆಂದೂ ನೂಲುಗಳನ್ನು ಬಟ್ಟೆಯೇ ಎಂದೂ ಹೇಗೆ ಮೂಢನು ನಿಶ್ಚಯಿಸಿಕೊಂಡಿರುವನೋ ಹಾಗೆಯೇ ಆತ್ಮನನ್ನು ದೇಹವೆಂದು ನಿಶ್ಚಯಿಸಿರುವನು.

ಕನಕಂ ಕುಣ್ಡಲತ್ವೇನ ತರಙ್ಗತ್ವೇನ ವೈ ಜಲಮ್ ।
ವಿನಿರ್ಣೇತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೭೨ ॥

೭೨. ಚಿನ್ನವನ್ನು ಕುಂಡಲವೆಂದೂ ನೀರನ್ನು ಅಲೆಯೇ ಎಂದೂ ಮೂಢನು ಹೇಗೆ ನಿಶ್ಚಯಿಸಿಕೊಳ್ಳುವನೋ ಹಾಗೆಯೇ ಆತ್ಮನನ್ನು ದೇಹವೆಂದು ನಿಶ್ಚಯಿಸಿರುವನು.

ನರತ್ವೇನ ಯಥಾ ಸ್ಥಾಣುರ್ಜಲತ್ವೇನ ಮರೀಚಿಕಾ ।
ವಿನಿರ್ಣೇತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೭೩ ॥

೭೩. ಮೋಟುಮರವನ್ನು ಮನುಷ್ಯನೆಂದೂ ಬಿಸಿಲುಕುದುರೆಯನ್ನು ನೀರೆಂದೂ ಮೂಢನು ಹೇಗೆ ನಿಶ್ಚಯಿಸಿಕೊಳ್ಳುವನೋ ಹಾಗೆ ಆತ್ಮನನ್ನು ದೇಹವೆಂದು ನಿಶ್ಚಯಿಸಿರುವನು.

ಗೃಹತ್ವೇನೈವ ಕಾಷ್ಠಾನಿ ಖಡ್ಗತ್ವೇನೈವ ಲೋಹತಾ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೭೪ ॥

೭೪. ಮರಮುಟ್ಟುಗಳನ್ನು ಮನೆಯೇ ಎಂದೂ ಕಬ್ಬಿಣವನ್ನು ಕತ್ತಿಯೇ ಎಂದೂ ಮೂಢನಾದವನು ಹೇಗೆ ನಿಶ್ಚಯಿಸಿಕೊಳ್ಳುವನೋ[1] ಹಾಗೆ ಆತ್ಮನನ್ನು ದೇಹವೆಂದು ನಿಶ್ಚಯಿಸಿರುವನು.

ಆತ್ಮನನ್ನು ದೇಹವೆಂದರಿಯುವದಕ್ಕೆ ಅಜ್ಞಾನವೇ ಕಾರಣ

ಯಥಾ ವೃಕ್ಷವಿಪರ್ಯಾಸೋ ಜಲಾದ್ಭವತಿ ಕಸ್ಯಚಿತ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೫ ॥

---

1 ಇಲ್ಲಿ ಪರಿಣಾಮಕಾರಣಗಳನ್ನೂ ವಿವರ್ತಕಾರಣಗಳನ್ನೂ ಮಿಶ್ರಮಾಡಿ ದೃಷ್ಟಾಂತಗಳಲ್ಲಿ ಕೊಟ್ಟಿರುವದು ಆ ಎರಡು ಬಗೆಯ ಕಾರ್ಯಕಾರಣಭಾವವೂ ನಿಜವಾಗಿ ಒಂದೇ ಎಂಬ ಭಾವದಿಂದ.

೭೫. ಹೇಗೆ ನೀರಿನ (ಸಂಬಂಧ)ದಿಂದ ಮರದಲ್ಲಿ ವಿಪರೀತಪ್ರತ್ಯಯವು[1] ಯಾವನಿಗಾದರೂ ಆಗುವದೋ ಅದರಂತೆ ಅಜ್ಞಾನದ ಸಂಬಂಧದಿಂದ ಆತ್ಮನಲ್ಲಿ ದೇಹತ್ವವನ್ನು ಕಾಣುತ್ತಾನೆ.

ಪೋತೇನ ಗಚ್ಛತಃ ಪುಂಸಃ ಸರ್ವಂ ಭಾತೀವ ಚಞ್ಚಲಮ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೬ ॥

೭೬. ದೋಣಿಯಲ್ಲಿ (ಕುಳಿತುಕೊಂಡು) ಪ್ರಯಾಣಮಾಡುತ್ತಿರುವ ಮನುಷ್ಯನಿಗೆ ಎಲ್ಲವೂ ಚಲಿಸುತ್ತಿರುವಂತೆ ಕಾಣುತ್ತದೆ. ಅದರಂತೆ ಅಜ್ಞಾನದ ಸಂಬಂಧದಿಂದ ಆತ್ಮನಲ್ಲಿ ದೇಹತ್ವವನ್ನು ಕಾಣುತ್ತಾನೆ.

ಪೀತತ್ವಂ ಹಿ ಯಥಾ ಶುಭ್ರೇ ದೋಷಾದ್ಭವತಿ ಕಸ್ಯಚಿತ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೭ ॥

೭೭. ಬೆಳ್ಳಗಿರುವ (ವಸ್ತುವಿನಲ್ಲಿ) ದೋಷವಶದಿಂದ ಯಾವನಿಗಾದರೂ ಹಳದಿಯ (ಬಣ್ಣವು) ಹೇಗೆ ತೋರುವದೋ ಅದರಂತೆ ಅಜ್ಞಾನದ ಸಂಬಂಧದಿಂದ ಆತ್ಮನಲ್ಲಿ ದೇಹತ್ವವನ್ನು ಕಾಣುತ್ತಾನೆ.

ಚಕ್ಷುರ್ಭ್ಯಾಂ ಭ್ರಮಶೀಲಾಭ್ಯಾಂ ಸರ್ವಂ ಭಾತಿ ಭ್ರಮಾತ್ಮಕಮ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೮ ॥

೭೮. ಕಣ್ಣುಗಳು ತೊಳಸುವದರಿಂದ ಎಲ್ಲವೂ ಚಲಿಸುತ್ತಿರುವಂತೆಯೇ ತೋರುತ್ತದೆ. ಅದರಂತೆ ಅಜ್ಞಾನದ ಸಂಬಂಧದಿಂದ ಆತ್ಮನಲ್ಲಿ ದೇಹತ್ವವನ್ನು ಕಾಣುತ್ತಾನೆ.

ಅಲಾತಂ ಭ್ರಮಣೇನೈವ ವರ್ತುಲಂ ಭಾತಿ ಸೂರ್ಯವತ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೯ ॥

೭೯. ತಿರುಗಿಸಿದ ಮಾತ್ರಕ್ಕೇ ಕೊಳ್ಳಿಯು ಸೂರ್ಯನಂತೆ ದುಂಡಗೆ ಕಾಣುತ್ತದೆ. ಅದರಂತೆ ಆತ್ಮನಲ್ಲಿ ದೇಹತ್ವವನ್ನು ಅಜ್ಞಾನದ ಸಂಬಂಧದಿಂದ ಕಾಣುತ್ತಾನೆ.

ಮಹತ್ತ್ವೇ ಸರ್ವವಸ್ತೂನಾಮಣುತ್ವಂ ಹ್ಯತಿದೂರತಃ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೦ ॥

---

1. ತಲೆಕೆಳಗಾಗಿದೆ ಎಂಬ ತಪ್ಪುತಿಳಿವಳಿಕೆಯು. ಆತ್ಮನಿಗಿಂತ ಬೇರೆಯಾದ ದೇಹವು ಇಲ್ಲದಿದ್ದರೂ ಅದು ಇರುವಂತೆ ಕಾಣುವದುಕೂಡ ಅಧ್ಯಾಸದ ಕಾರ್ಯವು ಎಂದರ್ಥ.

೮೦. ದೊಡ್ಡವಾಗಿದ್ದರೂ ಯಾವ ವಸ್ತುಗಳೇ ಆಗಲಿ, ಅತಿ ದೂರದಲ್ಲಿರುವುದರಿಂದ ಸಣ್ಣವಾಗಿರುವಂತೆ (ಕಾಣುತ್ತವೆ)ಯಲ್ಲವೆ? ಅದರಂತೆ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಸೂಕ್ಷ್ಮತ್ವೇ ಸರ್ವಭಾವಾನಾಂ ಸ್ಥೂಲತ್ವಂ ಚೋಪಪದ್ಯತೇ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೧ ॥

೮೧. ಸಣ್ಣವಾಗಿದ್ದರೂ ಯಾವ ವಸ್ತುಗಳೇ ಆಗಲಿ ಕಣ್ಣಿಗೆ ಹತ್ತಿರವಿರುವುದರಿಂದ ದೊಡ್ಡವಾಗಿರುವಂತೆ (ಕಾಣುತ್ತವೆ). ಅದರಂತೆ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಕಾಚಭೂಮೌ ಜಲತ್ವಂ ವಾ ಜಲಭೂಮೌ ಹಿ ಕಾಚತಾ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೨ ॥

೮೨. ಗಾಜಿನ ನೆಲದಲ್ಲಿ ನೀರನ್ನೂ ನೀರಿನ ಸ್ಥಲದಲ್ಲಿ ಗಾಜನ್ನೂ (ಕಾಣುವ)ರಷ್ಟೆ, ಅದರಂತೆ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಯದ್ವದಗ್ನೌ ಮಣಿತ್ವಂ ಹಿ ಮಣೌ ವಾ ವಹ್ನಿತಾ[1] ಪುಮಾನ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೩ ॥

೮೩. ಬೆಂಕಿಯಲ್ಲಿ ರತ್ನವೆಂದೂ ರತ್ನದಲ್ಲಿ ಬೆಂಕಿಯೆಂದೂ ಹೇಗೆ (ಬುದ್ಧಿಯುಂಟಾಗುವಮೋ) ಅದರಂತೆ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಅಭ್ರೇಷು ಸತ್ಸು ಧಾವತ್ಸು ಸೋಮೋ ಧಾವತಿ ಭಾತಿ ಮೈ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೪ ॥

೮೪. ಮೋಡಗಳು ಓಡಾಡುತ್ತಿರುವಲ್ಲಿ ಚಂದ್ರನು ಓಡಾಡುತ್ತಿರುವಂತೆ ಕಾಣುವದಷ್ಟೆ. ಅದರಂತೆ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಯಥೈವ ದಿಗ್ವಿಪರ್ಯಾಸೋ ಮೋಹಾದ್ಭವತಿ ಕಸ್ಯಚಿತ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೫ ॥

---

1. 'ವಹ್ನಿತಾಂ' ಎಂಬ ಪಾಠವಿದ್ದರೆ ಇನ್ನೂ ಸರಳವಾಗಿ ಅನ್ವಯವಾಗುವದು.

೮೫. ಹೇಗೆ ಮೋಹದಿಂದ ಯಾವನಿಗಾದರೂ ದಿಕ್ಕಿನ ತಪ್ಪುತಿಳಿವಳಿಕೆಯು (ಉಂಟಾಗಬಹುದೋ) ಹಾಗೆಯೇ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಯಥಾ ಶಶೀ ಜಲೇ ಭಾತಿ ಚಞ್ಚ್ವಾಲತ್ವೇನ ಕಸ್ಯಚಿತ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೬ ॥

೮೬. ಹೇಗೆ ಚಂದ್ರನು ನೀರಿನಲ್ಲಿ ತೂಗಾಡುತ್ತಿರುವಂತೆ ಯಾವನಿಗಾದರೂ ತೋರುವನೋ ಅವರಂತೆಯೇ ಅಜ್ಞಾನದ ಸಂಬಂಧದಿಂದ ಆತ್ಮನಲ್ಲಿ ದೇಹತ್ವವನ್ನು ಕಾಣುತ್ತಾನೆ.

ಜ್ಞಾನಿಯು ಕೃತಕೃತ್ಯನು

ಪರಮಾತ್ಮನ್ಯವಿದ್ಯಾತೋ[1] ದೇಹಾಧ್ಯಾಸೋ ಹಿ ಜಾಯತೇ ।
ಸ ನಿವಾತ್ಮಪರಿಜ್ಞಾನಾಲ್ಲೀಯತೇ[2] ಚ ಪರಾತ್ಮನಿ ॥ ೮೭ ॥

೮೭. ಪರಮಾತ್ಮನಲ್ಲಿ ಅವಿದ್ಯೆಯಿಂದ ದೇಹಾಧ್ಯಾಸವುಂಟಾಗಿರುತ್ತದೆ. ಆತ್ಮನನ್ನು ಚೆನ್ನಾಗಿ ಅರಿತುಕೊಳ್ಳುವದರಿಂದ ಆ (ಅಧ್ಯಾಸವೇ) ಪರಮಾತ್ಮನಲ್ಲಿ ಲಯವಾಗುತ್ತದೆ.

ಸರ್ವಮಾತ್ಮತಯಾ ಜ್ಞಾತಂ ಜಗತ್ಸ್ಥಾವರಜಙ್ಗಮಮ್ ।
ಅಭಾವಾತ್ ಸರ್ವಭಾವಾನಾಂ ದೇಹಸ್ಯ ತ್ವಾತ್ಮತಾ[4] ಕುತಃ ॥ ೮೮ ॥

೮೮. ಸ್ಥಾವರಜಂಗಮಾತ್ಮಕವಾದ ಜಗತ್ತೆಲ್ಲವೂ ಆತ್ಮನೆಂದೇ ತಿಳಿದದ್ದಾಯಿತು. ಯಾವ (ಮಿಕ್ಕ) ವಸ್ತುಗಳೂ ಇಲ್ಲದ್ದರಿಂದ ದೇಹಕ್ಕೆ ಆತ್ಮತ್ವವು ಎಲ್ಲಿಂದ (ಬಂದೀತು) ?

---

1. "ಏವಮಾತ್ಮನಿ ನ ಜ್ಞಾತೇ" ಎಂಬ ವಾ॥ ಪಾಠಕ್ಕಿಂತ ಇದೇ ಮೇಲು.

2. "ಸ ಏವಾತ್ಮಾ ಪರಿಜ್ಞಾತೋ" ಎಂಬ ವಾ॥ ಪಾಠವು ಸರಿಯಲ್ಲ; ಏಕೆಂದರೆ ಇಲ್ಲಿ ಅಧ್ಯಾಸವು ಪ್ರಕೃತವಾಗಿದೆ, ಆತ್ಮನಲ್ಲ.

3. ಅಧ್ಯಾಸವೂ ಆತ್ಮನೆಂದೇ ಸಿದ್ಧವಾಗಿಬಿಡುತ್ತದೆ ಎಂದರ್ಥ.

4. 'ದೇಹಾನಾಂ ಚಾತ್ಮತಾ' ಎಂದು ವಾ॥ ಪಾಠ. 'ದೇಹಗಳಿಗೆ' ಎಂದು ಆ ಪಾಠಕ್ಕೆ ಅನುವಾದ.

ಆತ್ಮಾನಂ ಸತತಂ ಜಾನನ್ ಕಾಲಂ ನಯ ಮಹಾಮತೇ[1] ।
ಪ್ರಾರಬ್ಧಮಖಿಲಂ ಭುಞ್ಜನ್ನೋದ್ವೇಗಂ ಕರ್ತುಮರ್ಹಸಿ ॥ ೮೯ ॥

೮೯. ಎಲ್ಲೆ ಮಹಾಬುದ್ಧಿಶಾಲಿಯೆ, ನೀನು ಆತ್ಮನೆಂದೇ ಯಾವಾಗಲೂ ತಿಳಿದುಕೊಂಡು ಪ್ರಾರಬ್ಧವನ್ನೆಲ್ಲ ಅನುಭವಿಸುತ್ತಾ ಕಾಲವನ್ನು ಕಳೆಯುತ್ತಿರು. ಮನಸ್ಸಿಗೆ ತಳಮಳವನ್ನು ಮಾಡಿಕೊಳ್ಳಬೇಡ.

ಜ್ಞಾನಿಗೆ ಪ್ರಾರಬ್ಧಕರ್ಮವೂ ಇಲ್ಲ

ಉತ್ಪನ್ನೇಽಪ್ಯಾತ್ಮವಿಜ್ಞಾನೇ ಪ್ರಾರಬ್ಧಂ ನೈವ ಮುಞ್ಚತಿ ।
ಇತಿ ಯಚ್ಛ್ರೂಯತೇ ಶಾಸ್ತ್ರೇ[2] ತನ್ನಿರಾಕ್ರಿಯತೇಽಧುನಾ ॥ ೯೦ ॥

೯೦. ಆತ್ಮಜ್ಞಾನವುಂಟಾದರೂ ಪ್ರಾರಬ್ಧವು ಬಿಡುವದೇ ಇಲ್ಲ ಎಂದು ಶಾಸ್ತ್ರದಲ್ಲಿ ಹೇಳಿದೆಯಷ್ಟೆ. ಅದನ್ನು ಈಗ ನಿರಾಕರಿಸಲಾಗುತ್ತದೆ.

ತತ್ತ್ವಜ್ಞಾನೋದಯಾದೂರ್ಧ್ವಂ ಪ್ರಾರಬ್ಧಂ ನೈವ ವಿದ್ಯತೇ ।
ದೇಹಾದೀನಾಮಸತ್ತ್ವಾತ್ತು[3] ಯಥಾ ಸ್ವಪ್ನೋ ವಿಬೋಧತಃ[4] ॥

೯೧. ಎಚ್ಚರವಾದೊಡನೆ ಹೇಗೆ ಸ್ವಪ್ನವು ಇರುವದೇ ಇಲ್ಲವೋ ಆದರಂತೆ ತತ್ತ್ವಜ್ಞಾನವಾದ ಮೇಲೆ ದೇಹಾದಿಗಳು ಇಲ್ಲದಿರುವದರಿಂದ ಪ್ರಾರಬ್ಧವು ಇರುವದೇ ಇಲ್ಲ.

ಕರ್ಮ ಜನ್ಮಾನ್ತರೀಯಂ ಯತ್[5] ಪ್ರಾರಬ್ಧಮಿತಿ ಕೀರ್ತಿತಮ್ ।
ತತ್ತು ಜನ್ಮಾನ್ತರಾಭಾವಾತ್ಪುಂಸೋ ನೈವಾಸ್ತಿ ಕರ್ಹಿಚಿತ್ ॥ ೯೨ ॥

೯೨. ಹಿಂದಿನ ಜನ್ಮದ ಕರ್ಮವು ಪ್ರಾರಬ್ಧವೆನಿಸುವದಷ್ಟೆ ? ಜನ್ಮಾಂತರವೇ ಇಲ್ಲದ್ದರಿಂದ ಮನುಷ್ಯನಿಗೆ ಅದು ಯಾವಾಗಲೂ ಇರುವದೇ ಇಲ್ಲ.[6]

---

1. 'ಮಹಾದ್ಯುತೇ' ಎಂಬ ನಿ॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.
2. 'ಶಾಸ್ತ್ರಾತ್' ಎಂದು ವಾ॥ ಪಾಠ.
3. 'ದೇಹಾದೀನಾಮಸತ್ಯತ್ವಾತ್' ಎಂದು ವಾ॥ ಪಾಠ.
4. 'ಸ್ವಪ್ನಃ ಪ್ರಬೋಧತಃ' ಎಂದು ವಾ॥ ಪಾಠ.
5. 'ಜನ್ಮಾನ್ತರಕೃತಂ' ಎಂದು ವಾ॥ ಪಾಠ.
6. ದೇಹವು ಪರಮಾರ್ಥವಾಗಿರುವದಲ್ಲವಾದ್ದರಿಂದ ಜನ್ಮವೂ ಇಲ್ಲ ; ಜನ್ಮ ವಿಲ್ಲದ್ದರಿಂದ ಜನ್ಮಾಂತರವೂ ಇಲ್ಲ. ಆದ್ದರಿಂದ ಜನ್ಮಾಂತರಕರ್ಮದ ಫಲವು ಈಗ ಪ್ರಾರಂಭವಾಗಿರುತ್ತದೆ ಎಂಬುದು ಪರಮಾರ್ಥವಲ್ಲ ಎಂದು ಅಭಿಪ್ರಾಯ.

ಸ್ವಪ್ನದೇಹೋ ಯಥಾಧ್ಯಸ್ತಸ್ತಥೈವಾಯಂ ಹಿ ದೇಹಕಃ ।
ಅಧ್ಯಸ್ತಸ್ಯ ಕುತೋ ಜನ್ಮ ಜನ್ಮಾಭಾವೇ ಹಿ ತತ್ಕುತಃ[1] ॥ ೯೩ ॥

೯೩. ಕನಸಿನ ದೇಹವು ಹೇಗೆ ಆರೋಪಿತವಾಗಿರುವದೋ ಹಾಗೆಯೇ ಈ ದೇಹವೂ (ಆರೋಪಿತವಾಗಿರುತ್ತದೆ). ಆರೋಪಿತವಾಗಿರುವದಕ್ಕೆ ಜನ್ಮ ವೆಲ್ಲಿಯದು ? ಜನ್ಮವಿಲ್ಲವಿದ್ದರೆ ಆ (ಪ್ರಾರಬ್ಧ)ವೆಲ್ಲಿಯದು ?

ಉಪಾದಾನಂ ಪ್ರಪಞ್ಚಸ್ಯ ಮೃದ್ಭಾಣ್ಡಸ್ಯೇವ ಕಥ್ಯತೇ ।
ಅಜ್ಞಾನಂ ಚೈವ ವೇದಾನ್ತೈಸ್ತಸ್ಮಿನ್ನಷ್ಟೇ ಕ್ವ ವಿಶ್ವತಾ ॥ ೯೪ ॥

೯೪. ಮಣ್ಣುಗಡಿಗೆಗೆ ಉಪಾದಾನವಾಗಿರುವಂತೆ ಪ್ರ ಪ ಂ ಚ ಕ್ಕೆ ಅಜ್ಞಾನವೇ ಉಪಾದಾನವೆಂದು ವೇದಾಂತಗಳಲ್ಲಿ ಹೇಳಿರುತ್ತದೆ.[2] ಅದು ನಷ್ಟವಾದ ಮೇಲೆ ಪ್ರಪಂಚವೆಂಬುದೆಲ್ಲಿ ಬಂತು ?

ಯಥಾ ರಜ್ಜುಂ ಪರಿತ್ಯಜ್ಯ ಸರ್ಪಂ ಗೃಹ್ಣಾತಿ ವೈ ಭ್ರಮಾತ್ ।
ತದ್ವತ್ಸತ್ಯಮವಿಜ್ಞಾಯ ಜಗತ್ಪಶ್ಯತಿ ಮೂಢಧೀಃ ॥ ೯೫ ॥

೯೫. ಹೇಗೆ ಹಗ್ಗವನ್ನು ಬಿಟ್ಟು ಭ್ರಾಂತಿಯಿಂದ ಹಾವನ್ನು ಗ್ರಹಿಸುವನೋ, ಅದರಂತೆ ಮೂಢಬುದ್ಧಿಯುಳ್ಳವನು ಸತ್ಯವನ್ನು ಬಿಟ್ಟು ಜಗತ್ತನ್ನು ಕಾಣುತ್ತಿರುವನು.

ರಜ್ಜುರೂಪೇ ಪರಿಜ್ಞಾತೇ ಸರ್ಪಖಣ್ಡಂ ನ ತಿಷ್ಠತಿ ।
ಅಧಿಷ್ಠಾನೇ ತಥಾ ಜ್ಞಾತೇ ಪ್ರಪಞ್ಚಃ ಶೂನ್ಯತಾಂ ಗತಃ ॥ ೯೬ ॥

೯೬. ಹಗ್ಗದ ಸ್ವರೂಪವನ್ನು ಅರಿತುಕೊಂಡರೆ ಹಾವಿನಂಶವು ಇರುವದಿಲ್ಲ.[3] ಹಾಗೆಯೇ ಅಧಿಷ್ಠಾನವನ್ನು ಅರಿತುಕೊಂಡಮೇಲೆ ಪ್ರಪಂಚವು ಶೂನ್ಯವಾಗುವದು.

ದೇಹಸ್ಯಾಪಿ ಪ್ರಪಞ್ಚತ್ವಾತ್ ಪ್ರಾರಬ್ಧಾವಸ್ಥಿತಿಃ ಕುತಃ ।
ಅಜ್ಞಾನಜನಬೋಧಾರ್ಥಂ ಪ್ರಾರಬ್ಧಂ ವಕ್ತಿ ವೈ ಶ್ರುತಿಃ ॥ ೯೭ ॥

---

1. 'ಸ್ಥಿತಿಃ ಕುತಃ' ಎಂದು ವಾ॥ ಪಾಠ.

2. ಶ್ರುತಿಗಳಲ್ಲಿ ಅಜ್ಞಾನವು ಉಪಾದಾನವೆಂದು ಹೇಳಿಲ್ಲ. ಈ ವಾಕ್ಯವು ೪೫ನೆಯ ಶ್ಲೋಕದ ಅಭಿಪ್ರಾಯಕ್ಕೆ ವಿರುದ್ಧವಾಗಿರುವಂತೆಯೂ ಕಾಣುತ್ತದೆ. ಆದರೆ ಈ ಶ್ಲೋಕದ ವಿಷಯಕ್ಕೆ ನಮ್ಮ ಸವಿವರಣಅಪರೋಕ್ಷಾನುಭೂತಿಯನ್ನು ನೋಡಿ.

3. ಪ್ರಾರಬ್ಧಕರ್ಮವೂ ದೇಹವೂ ಆರೋಪಿತಜಗತ್ತಿನ ಅಂಶವೆಂಬುದನ್ನು ತಿಳಿಸುವದಕ್ಕೆ ಅಂಶವೆಂಬ ಮಾತನ್ನು ಪ್ರಯೋಗಿಸಿದೆ.

೯೭. ದೇಹವೂ ಪ್ರಪಂಚವೇ ಆಗಿರುವದರಿಂದ ಪ್ರಾರಬ್ಧವು ಉಳಿದು ಕೊಳ್ಳುವದು ಹೇಗೆ ? ತಿಳಿವಳಿಕೆಯಿಲ್ಲದ ಜನರಿಗೆ ಶ್ರುತಿಯು ಪ್ರಾರಬ್ಧವನ್ನು ಹೇಳುತ್ತಿರುವದು.

ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ।
ಬಹುತ್ವಂ ತನ್ನಿಷೇಧಾರ್ಥಂ ಶ್ರುತ್ಯಾ ಗೀತಂ ಚ ಯತ್ನ್ಲುಟಿಮ್[1] ॥

೯೮. "ಆ ಪರಾವರನನ್ನು ಕಂಡುಕೊಂಡರೆ ಇವನ ಕರ್ಮಗಳೂ ನಾಶ ವಾಗುತ್ತವೆ" (ಮುಂ. ೨-೨-೮ ಎಂಬ ಶ್ರುತಿಯಲ್ಲಿ) ಈ (ಪ್ರಾರಬ್ಧವನ್ನು) ಅಲ್ಲಗಳೆಯುವದಕ್ಕಾಗಿ ಬಹುವಚನವನ್ನು (ಪ್ರಯೋಗಿಸಿರುತ್ತದೆ).

ಉಚ್ಯತೇಽಜ್ಞೈರ್ ಬಲಾಚ್ಛೈ[2]ತ್ತದಾನರ್ಥದ್ವಯಾಗಮಃ ।
ವೇದಾನ್ತಮತಹಾನಂ ಚ ಯತೋ ಜ್ಞಾನಮಿತಿ ಶ್ರುತಿಃ ॥ ೯೯ ॥

೯೯. ಅಜ್ಞರು ಈ (ಪ್ರಾರಬ್ಧವು ಉಂಟೆಂದು) ಬಲಾತ್ಕರಿಸಿ ಹೇಳುವ ದಾದರೆ ಅನರ್ಥರೂಪವಾದ ದ್ವೈತವು ಬರುವದು; ವೇದಾಂತಮತವನ್ನು ಬಿಟ್ಟಂತೆಯೂ ಆಗುವದು. ಏಕೆಂದರೆ ಜ್ಞಾನವು (ಅದ್ವಿತೀಯವಾದ ಬ್ರಹ್ಮವೇ) ಎಂದು ಶ್ರುತಿ ಹೇಳುತ್ತಿರುವದು.[3]

ನಿದಿಧ್ಯಾಸನದ ಅಂಗಗಳು

ತ್ರಿಪಞ್ಚಾದ್ಯಾಜ್ಞಾನ್ಯಥೋ ವಕ್ಷ್ಯೇ ಪೂರ್ವೋಕ್ತಸ್ಯ ಹಿ[4] ಸಿದ್ಧಯೇ ।
ತಚ್ಚ ಸರ್ವೈಃ ಸದಾ ಕಾರ್ಯಂ ನಿದಿಧ್ಯಾಸನಮೇವ ತು ॥ ೧೦೦ ॥

೧೦೦. ಇನ್ನು ಹಿಂದೆ ಹೇಳಿದ್ದು ಸಿದ್ಧವಾಗುವದಕ್ಕಾಗಿ (ಸಾಧನವಾಗಿ) ಹದಿನೈದು ಅಂಗಗಳನ್ನು[5] ಹೇಳುವೆನು. ಈ ನಿದಿಧ್ಯಾಸನವನ್ನು ಎಲ್ಲಾ (ಅಂಗಗಳೊಡನೆ) ಯಾವಾಗಲೂ ಮಾಡುತ್ತಿರಬೇಕು.

---

1. "ಮೈ ಸ್ಲುಟಿಮ್" ಎಂದು ವಾ॥ ಪಾಠ.

2. 'ಬಲಾಚ್ಛೈತತ್' ಎಂಬ ಪಾಠಕ್ಕಿಂತ ಇದು ಮೇಲು. ಇಲ್ಲಿ ಬಲಾತ್ ಚೇತ್ ತತ್ ಎಂದು ಪದಚ್ಛೇದಮಾಡಿಕೊಳ್ಳಬೇಕು.

3. 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಮುಂತಾದ ಶ್ರುತಿಗಳಲ್ಲಿ ಜ್ಞಾನವು ಅದ್ವಿತೀಯಬ್ರಹ್ಮವೆಂದು ಹೇಳಿವೆ. ಅದರಲ್ಲಿ ಅಜ್ಞಾನದ ಕಾರ್ಯವಾದ ಪ್ರಾರಬ್ಧವಿದೆ ಎಂಬುದು ವೇದಾಂತವಿರುದ್ಧ.

4. 'ಪೂರ್ವೋಕ್ತಸ್ಯೈವ' ಎಂದು ವಾ॥ ಪಾಠ.

5. ಈ ಅಂಗಗಳನ್ನು ಭಾಷ್ಯಕಾರರಲ್ಲಿ ಎಲ್ಲಿಯೂ ಹೇಳಿಲ್ಲ.

ನಿತ್ಯಾಭ್ಯಾಸಾದೃತೇ ಪ್ರಾಪ್ತಿರ್ನ ಭವೇತ್ ಸಚ್ಚಿದಾತ್ಮನಃ ।
ತಸ್ಮಾದ್ಬ್ರಹ್ಮ ನಿದಿಧ್ಯಾಸೇಜ್ಜಿಜ್ಞಾಸುಃ ಶ್ರೇಯಸೇ ಚಿರಮ್ ॥ ೧೦೧ ॥

೧೦೧. ಯಾವಾಗಲೂ ಅಭ್ಯಾಸಮಾಡದಿದ್ದರೆ ಸಚ್ಚಿದಾತ್ಮನ ಪ್ರಾಪ್ತಿ ಯಾಗಲಾರದು. ಆವ್ದರಿಂದ ಜಿಜ್ಞಾಸುವಾದವನು ತನಗೆ ಶ್ರೇಯಸ್ಸಾಗುವದ ಕ್ಕಾಗಿ ಬ್ರಹ್ಮವನ್ನು ಯಾವಾಗಲೂ ನಿದಿಧ್ಯಾಸನಮಾಡುತ್ತಿರಬೇಕು.

ಯಮೋ ಹಿ ನಿಯಮಸ್ತ್ಯಾಗೋ ಮೌನಂ ದೇಶಶ್ಚ ಕಾಲತಾ ।
ಆಸನಂ ಮೂಲಬನ್ಧಶ್ಚ ದೇಹಸಾಮ್ಯಂ ಚ ದೃಕ್ಸ್ಥಿತಿಃ ॥ ೧೦೨ ॥
ಪ್ರಾಣಸಂಯಮನಂ ಚೈವ ಪ್ರತ್ಯಾಹಾರಶ್ಚ ಧಾರಣಾ ।
ಆತ್ಮಧ್ಯಾನಂ ಸಮಾಧಿಶ್ಚ ಪ್ರೋಕ್ತಾನ್ಯಙ್ಗಾನಿ ವೈ ಕ್ರಮಾತ್ ॥ ೧೦೩ ॥

೧೦೨–೧೦೩. ಯಮ, ನಿಯಮ, ತ್ಯಾಗ, ಮೌನ, ದೇಶ, ಕಾಲ, ಆಸನ, ಮೂಲಬನ್ಧ, ದೇಹಸಾಮ್ಯ, ದೇಶ, ಕಾಲ, ಪ್ರಾಣಾಯಾಮ, ಪ್ರತ್ಯಾ ಹಾರ, ಧಾರಣೆ, ಆತ್ಮಧ್ಯಾನ, ಸಮಾಧಿ. (ಇಲ್ಲಿ) ಕ್ರಮದಿಂದ ಹೇಳಿರುವವು (ನಿದಿಧ್ಯಾಸನದ) ಅಂಗಗಳು.

ಸರ್ವಂ ಬ್ರಹ್ಮೇತಿ ವಿಜ್ಞಾನಾದಿನ್ದ್ರಿಯಗ್ರಾಮಸಂಯಮಃ ।
ಯಮೋಽಯಮಿತಿ ಸಂಪ್ರೋಕ್ತೋಽಭ್ಯಸನೀಯೋ ಮುಹುರ್ಮುಹುಃ

೧೦೪. ಎಲ್ಲವೂ ಬ್ರಹ್ಮನೇ ಎಂಬ ಅರಿವಿನಿಂದ ಇಂದ್ರಿಯಸಮೂಹ ವನ್ನು ತಡೆದುಕೊಳ್ಳುವದೇ **ಯಮವೆನಿಸಿರುತ್ತದೆ**. ಇದನ್ನು ಮತ್ತೆಮತ್ತೆ ಅಭ್ಯಾಸಮಾಡಬೇಕು.

ಸಜಾತೀಯಪ್ರವಾಹಶ್ಚ ವಿಜಾತೀಯತಿರಸ್ಕೃತಿಃ ।
ನಿಯಮೋ ಹಿ ಪರಾನನ್ದೋ ನಿಯಮಾತ್ ಕ್ರಿಯತೇ ಬುಧೈಃ ॥೧೦೫

೧೦೫. ಸಜಾತೀಯವಾದ (ಭಾವನೆಯನ್ನು) ಹರಿಯಿಸುವದೂ ವಿಜಾತೀಯವಾದದ್ದನ್ನು ಬಿಡುವದೂ ಪರಮಾನಂದರೂಪವಾದ **ನಿಯಮವು**. ತಿಳಿದವರು (ಇದನ್ನು) ನಿಯಮದಿಂದ ಮಾಡುತ್ತಾರೆ.

ತ್ಯಾಗಃ ಪ್ರಪಞ್ಚರೂಪಸ್ಯ ಚಿದಾತ್ಮತ್ವಾವಲೋಕನಾತ್ ।
ತ್ಯಾಗೋ ಹಿ ಮಹತಾಂ ಪೂಜ್ಯಃ ಸದ್ಯೋ ಮೋಕ್ಷಸುಯೋ ಯತಃ ॥

೧೦೬. (ಇದು) ಚಿದ್ರೂಪವೇ ಎಂಬುದನ್ನು ಕಂಡುಕೊಂಡು ಪ್ರಪಂಚ ರೂಪದ (ಭಾವನೆಯನ್ನು) ಬಿಡುವದೇ **ತ್ಯಾಗವು**. ಸದ್ಯೋಮೋಕ್ಷರೂಪ ವಾಗಿರುವದರಿಂದ (ಇದು) ದೊಡ್ಡವರಿಗೆ ಪೂಜ್ಯವಾಗಿರುವದು.

ಯಸ್ಮಾದ್ವಾಚೋ[1] ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ ।
ಯನ್ಮೌನಂ ಯೋಗಿಭಿರ್ಗಮ್ಯಂ ತದ್ಭವೇತ್ ಸರ್ವದಾ ಬುಧಃ ॥ ೧೦೬

೧೦೬. 'ಮನಸ್ಸಿನೊಡಗೂಡಿ ವಾಕ್ಕುಗಳು ಪಡೆಯಲಾರದೆ ಯಾವದರಿಂದ ಹಿಂದಿರುಗುವವೋ', ಯಾವದು ಯೋಗಿಗಳಿಗೆ ಮಾತ್ರ ಗೊತ್ತಿರುವಜೋ, ವಿವೇಕಿಯಾದವನು ಯಾವಾಗಲೂ ಆ **ಮೌನ**ವಾಗಿರಬೇಕು.

ವಾಚೋ ಯಸ್ಮಾನ್ನಿವರ್ತನ್ತೇ ತದ್ವಕ್ತುಂ ಕೇನ ಶಕ್ಯತೇ ।
ಪ್ರಪಞ್ಚೋ ಯದಿ ವಕ್ತವ್ಯಃ ಸೋಽಪಿ ಶಬ್ದವಿವರ್ಜಿತಃ ॥ ೧೦೭ ॥
ಇತಿ ವಾ ತದ್ಭವೇನ್ಮೌನಂ ಸತಾಂ ಸಹಜಸಂಜ್ಞಿತಮ್ ।
ಗಿರಾ ಮೌನಂ ತು ಬಾಲಾನಾಂ ಪ್ರಯುಕ್ತಂ ಬ್ರಹ್ಮವಾದಿಭಿಃ ॥ ೧೦೮

೧೦೭-೧೦೮. "ಅಥವಾ ಯಾವದರಿಂದ ವಾಕ್ಕುಗಳು ಹಿಂದಿರುಗುವವೋ ಅದನ್ನು ಹೇಳುವದಕ್ಕೆ ಯಾರಿಂದ ಶಕ್ಯವಾದೀತು ? ಪ್ರಪಂಚವನ್ನು ವರ್ಣಿಸಿ ಹೇಳೋಣವೆಂದರೆ ಅದೂ ಮಾತಿಗೆ ಸಿಕ್ಕುವದಿಲ್ಲ[2] " ಎಂದು ಸುಮ್ಮನಿರುವದೇ ಸತ್ಪುರುಷರಿಗೆ ಸಹಜವೆನಿಸುವ **ಮೌನವು.** ಮಾತನಾಡದೆ ಇರುವದೆಂಬ ಮೌನವನ್ನು ಬಾಲಕರಿಗಾಗಿ ಬ್ರಹ್ಮವಾದಿಗಳು ಹೇಳಿರುವರು.

ಆದಾವನ್ತೇ ಚ ಮಧ್ಯೇ ಚ ಜನೋ ಯಸ್ಮಿನ್ನ ವಿದ್ಯತೇ ।
ಯೇನೇದಂ ಸತತಂ ವ್ಯಾಪ್ತಂ ಸ ದೇಶೋ ವಿಜನಃ ಸ್ಮೃತಃ ॥ ೧೦೯ ॥

೧೦೯. ಮೊದಲು, ಕೊನೆಯಲ್ಲಿ, ಮತ್ತು ನಡುವೆ ಯಾವದರಲ್ಲಿ ಜನವಿಲ್ಲವೋ ಯಾವದರಿಂದ ಈ ಸಕಲಪ್ರಪಂಚವೂ ವ್ಯಾಪ್ತವಾಗಿರುವದೋ ಅದೇ **ವಿಜನದೇಶವು.**

ಕಲನಾತ್ಸರ್ವಭೂತಾನಾಂ ಬ್ರಹ್ಮಾದೀನಾಂ ನಿಮೇಷತಃ ।
ಕಾಲಶಬ್ದೇನ ನಿರ್ದಿಷ್ಟೋ ಹ್ಯಖಣ್ಡಾನನ್ದ ಅದ್ವಯಃ ॥ ೧೧೦ ॥

೧೧೦. ಬ್ರಹ್ಮನೇ ಮುಂತಾದ ಸರ್ವಭೂತಗಳನ್ನೂ ನಿಮಿಷಮಾತ್ರದಿಂದ ಅಳತೆಮಾಡುವದರಿಂದ ಎರಡನೆಯದಿಲ್ಲದ ಅಖಂಡಾನಂದವು **ಕಾಲ**ವೆಂಬ ಶಬ್ದದಿಂದ ಹೇಳಲ್ಪಡುವದು.

ಸುಖೀನ್ಯೈವ ಭವೇದ್ಯಸ್ಮಿನ್ನಜಸ್ರಂ ಬ್ರಹ್ಮಚಿನ್ತನಮ್ ।
ಆಸನಂ ತದ್ವಿಜಾನೀಯಾನ್ನೇತರತ್ ಸುಖನಾಶನಮ್ ॥ ೧೧೧ ॥

---

1. 'ಯತೋ ವಾಚೋ' ಎಂದು ವಾ॥ ಪಾಠ. ಅದು ತೈತ್ತಿರೀಯಶ್ರುತಿಗೆ ಅನುಗುಣವಾಗಿದೆ.

2. ಏಕೆಂದರೆ ಅದು ಸ್ವರೂಪದಿಂದ ಇಲ್ಲವೇ ಇಲ್ಲ.

೧೧೨. ಯಾವುದರಲ್ಲಿ ಯಾವಾಗಲೂ ಸುಖವಾಗಿಯೇ ಬ್ರಹ್ಮಚಿಂತನೆ ಯಾಗುವುದೋ **ಅದೇ ಆಸನವು.** ಉಳಿದದ್ದು ಸುಖನಾಶಕವಾದದ್ದರಿಂದ (ಆಸನ)ವಲ್ಲ.

ಸಿದ್ಧಂ ಯತ್ಸರ್ವಭೂತಾದಿ ವಿಶ್ವಾಧಿಷ್ಠಾನಮವ್ಯಯಮ್ ।
ಯಸ್ಮಿನ್ ಸಿದ್ಧಾಃ ಸಮಾವಿಷ್ಟಾಸ್ತದ್ವೈ ಸಿದ್ಧಾಸನಂ ವಿದುಃ ॥ ೧೧೩ ॥

೧೧೩. ಯಾವುದು ಸರ್ವಭೂತಗಳಿಗೂ ಆದಿಯಾಗಿ ಪ್ರಪಂಚಕ್ಕೆ ಅವ್ಯಯವಾದ ಅಧಿಷ್ಠಾನವಾಗಿ ಸಿದ್ಧವಾಗಿರುವುದೋ, ಯಾವುದರಲ್ಲಿ ಸಿದ್ಧರು ಸೇರಿಕೊಂಡಿರುವರೋ ಅದೇ **ಸಿದ್ಧಾಸನವೆನ್ನುವರು.**

ಯನ್ಮೂಲಂ ಸರ್ವಭೂತಾನಾಂ ಯನ್ಮೂಲಂ ಚಿತ್ತಬನ್ಧನಮ್ ।
ಮೂಲಬನ್ಧಃ ಸದಾ ಸೇವ್ಯೋ ಯೋಗ್ಯೋಽಸೌ[1] ರಾಜಯೋಗಿನಾಮ್

೧೧೪. ಯಾವುದು ಸರ್ವಭೂತಗಳಿಗೂ ಮೂಲವೋ ಯಾವುದು ಚಿತ್ತವನ್ನು ಕಟ್ಟಿಹಾಕುವುದಕ್ಕೆ ಕಾರಣವಾಗಿರುವುದೋ **ಆ ಮೂಲಬಂಧವನ್ನು**[2] ಯಾವಾಗಲೂ ಸೇವಿಸುತ್ತಿರಬೇಕು. ಇದೇ ರಾಜಯೋಗಿಗಳಿಗೆ[3] **ತಕ್ಕದ್ದು.**

ಅಜ್ಞಾನಾಂ ಸಮತಾಂ ವಿದ್ಯಾತ್ಸಮೇ ಬ್ರಹ್ಮಣಿ ಲೀಯತೇ ।
ನೋ ಚೇನ್ನೈವ ಸಮಾನತ್ವಮುಜುತ್ವಂ ಶುಷ್ಕವೃಕ್ಷವತ್ ॥ ೧೧೫ ॥

೧೧೫. ಸಮವೆನಿಸಿರುವ ಬ್ರಹ್ಮದಲ್ಲಿ (ಮನಸ್ಸು) ಲಯವಾಗುವಂತೆ ಇರುವುದೇ **ದೇಹದ ಸಮತೆ** ಎಂದು ತಿಳಿಯಬೇಕು. ಹಾಗಿಲ್ಲದಿದ್ದರೆ ಅದು (ದೇಹ)ಸಾಮ್ಯವಲ್ಲ, ಒಣಗಿದ ಮರದಂತೆ **ನೆಟ್ಟಗಿರುವುದು.**

ದೃಷ್ಟಿಂ ಜ್ಞಾನಮಯಾಂ ಕೃತ್ವಾ ಪಶ್ಯೇದ್ಬ್ರಹ್ಮಮಯಂ ಜಗತ್ ।
ಸಾ ದೃಷ್ಟಿಃ ಪರಮೋದಾರಾ ನ ನಾಸಾಗ್ರಾವಲೋಕಿನೀ ॥ ೧೧೬ ॥

೧೧೬. ದೃಷ್ಟಿಯನ್ನು ಜ್ಞಾನಮಯವಾಗಿ ಮಾಡಿಕೊಂಡು ಜಗತ್ತನ್ನು ಬ್ರಹ್ಮಮಯವೆಂದು ಕಾಣಬೇಕು. ಅಂಥ ದೃಷ್ಟಿಯೇ ಬಹಳ ಉದಾರವಾದದ್ದು, ಮೂಗಿನ ತುದಿಯನ್ನು ನೋಡುವದು (ದೃಷ್ಟಿಯಲ್ಲ).

---

1. 'ಯೋಗೋಽಸೌ' ವಾ॥

2. ಸಿದ್ಧಾಸನ, ಮೂಲಬಂಧ ಎಂಬ ಹಠಯೋಗದ ಪಾರಿಭಾಷಿಕಶಬ್ದಗಳನ್ನು ಹೀಗೆ ಅನುವಾದಮಾಡಿರುವದಾಗಲಿ ವಿವರಿಸಿರುವದಾಗಲಿ ಭಾಷ್ಯದಲ್ಲಿಲ್ಲ.

3. 'ರಾಜಯೋಗ'ವೆಂಬ ಶಬ್ದವು ಭಾಷ್ಯದಲ್ಲಿ ಕಾಣುವದಿಲ್ಲ.

ದ್ರಷ್ಟೃ[1] ದರ್ಶನದೃಶ್ಯಾನಾಂ ವಿರಾಮೋ ಯತ್ರ ವಾ ಭವೇತ್ ।
ದೃಷ್ಟಿಸ್ತತ್ರೈವ ಕರ್ತವ್ಯಾ ನ ನಾಸಾಗ್ರಾವಲೋಕನೀ ॥ ೧೧೭ ॥

೧೧೭. ಅಥವಾ ದ್ರಷ್ಟೃ (ನೋಡುವವನು), ದರ್ಶನ (ನೋಡುವಿಕೆ), ದೃಶ್ಯ (ನೋಡಲ್ಪಡತಕ್ಕದ್ದು)– ಇವುಗಳ (ಭೇದವು) ಎಲ್ಲಿ ಇಲ್ಲವಾಗುವುದೋ, ಅಲ್ಲಿಯೇ **ದೃಷ್ಟಿ**ಯನ್ನು ಮಾಡಬೇಕು. ಮೂಗಿನ ತುದಿಯನ್ನು ನೋಡುವದು (ದೃಷ್ಟಿ)ಯಲ್ಲ.

ಚಿತ್ತಾದಿಸರ್ವಭಾವೇಷು ಬ್ರಹ್ಮತ್ವೇನೈವ ಭಾವನಾತ್ ।
ನಿರೋಧಃ ಸರ್ವವೃತ್ತೀನಾಂ ಪ್ರಾಣಾಯಾಮಃ ಸ ಉಚ್ಯತೇ ॥ ೧೧೮ ॥

೧೧೮. ಚಿತ್ತವೇ ಮುಂತಾದ ಸರ್ವವಸ್ತುಗಳಲ್ಲಿಯೂ ಬ್ರಹ್ಮವೆಂಬ ಭಾವನೆಯನ್ನು ಮಾಡುವದರಿಂದ ಎಲ್ಲಾ ವೃತ್ತಿಗಳನ್ನೂ ಅಡಗಿಸುವದು **ಪ್ರಾಣಾಯಾಮ**ವೆನಿಸುವದು.

ನಿಷೇಧನಂ ಪ್ರಪಞ್ಚಸ್ಯ ರೇಚಕಾಖ್ಯಃ ಸಮೀರಣಃ ।
ಬ್ರಹ್ಮೈವಾಸ್ಮೀತಿ ಯಾ ವೃತ್ತಿಃ ಪೂರಕೋ ವಾಯುರೀರಿತಃ ॥ ೧೧೯

೧೧೯. ಪ್ರಪಂಚವನ್ನು ಇಲ್ಲವೆನ್ನುವದು **ರೇಚಕ**ವೆಂಬ ಪ್ರಾಣಾಯಾಮವು[2]; **ಬ್ರಹ್ಮ**ವೇ ಆಗಿರುವೆನು ಎಂಬ ವೃತ್ತಿಯು **ಪೂರಕ**ವೆಂಬ ಪ್ರಾಣಾಯಾಮವೆನಿಸುವದು.

ತತಸ್ತದ್ವೃತ್ತಿನೈಶ್ಚಲ್ಯಂ ಕುಮ್ಭಕಃ ಪ್ರಾಣಸಂಯಮಃ ।
ಅಯಂ ಚಾಪಿ ಪ್ರಬುದ್ಧಾನಾಮಜ್ಞಾನಾಂ ಶ್ವಾಸರೋಧನಮ್ ॥೧೨೦

೧೨೦. ಆಮೇಲೆ ಆ ವೃತ್ತಿಯನ್ನು ಅಲುಗಾಡದಂತೆ ಇರಿಸಿಕೊಳ್ಳುವದೇ **ಕುಂಭಕಪ್ರಾಣಾಯಾಮ**ವೆನಿಸುವದು. ಈ (ಪ್ರಾಣಾಯಾಮವು) ತಿಳಿದವರಿಗೆ (ತಕ್ಕದ್ದು); ಅಜ್ಞರಿಗೆ ಮೂಗನ್ನು ತೊಂದರೆಗೊಳಿಸುವದೇ (ಪ್ರಾಣಾಯಾಮವು).

ವಿಷಯೇಷ್ವಾತ್ಮತಾಂ ದೃಷ್ಟ್ವಾ ಮನಸಶ್ಚಿತಿ ಮಜ್ಜನಮ್ ।
ಪ್ರತ್ಯಾಹಾರಃ ಸ ವಿಜ್ಞೇಯೋಽಭ್ಯಸನೀಯೋ ಮುಮುಕ್ಷುಭಿಃ ॥ ೧೨೧

---

1. 'ದೃಷ್ಟಿ' ಎಂಬ ೫॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.

2. ಸಮೀರಣ ಎಂದರೆ ಪ್ರಾಣ, ವಾಯು ಎಂದಿಷ್ಟೇ ಅರ್ಥವಾದರೂ ಪ್ರಕೃತಾನುಸಾರವಾಗಿ **ಪ್ರಾಣಾಯಾಮ** ಎಂದು ಅರ್ಥವನ್ನು ಮಾಡಿದೆ. **ಪೂರಕ**ವೆಂಬ ಮಾತನ್ನೂ ಹೀಗೆಯೇ ತಿಳಿಯಬೇಕು

೧೨೧. ವಿಷಯಗಳಲ್ಲಿ ಆತ್ಮತ್ವವನ್ನು ಕಂಡುಕೊಂಡು ಮನಸ್ಸನ್ನು ಚಿತ್ತ ನಲ್ಲಿ ಮುಳುಗಿಸಿಬಿಡುವದು **ಪ್ರತ್ಯಾಹಾರ**ವೆಂಬ ತಿಳಿಯಬೇಕು. ಮುಮುಕ್ಷು ಗಳು (ಇದನ್ನು) ಅಭ್ಯಾಸಮಾಡಬೇಕು.

ಯತ್ರ ಯತ್ರ ಮನೋ ಯಾತಿ ಬ್ರಹ್ಮಣಸ್ತತ್ರ ದರ್ಶನಾತ್ ।
ಮನಸೋ ಧಾರಣಾ ಯೈವ[1] ಧಾರಣಾ ಸಾ ಪರಾ ಮತಾ ॥ ೧೨೨

೧೨೨. ಎಲ್ಲೆಲ್ಲೆ ಮನಸ್ಸು ಹರಿಯುತ್ತಿರುವದೋ ಅಲ್ಲಲ್ಲಿ ಬ್ರಹ್ಮವನ್ನು ಕಂಡುಕೊಂಡು ಮನಸ್ಸನ್ನು ನಿಲ್ಲಿಸಿಕೊಳ್ಳುವದೇ ಪೆಚ್ಚಿನ **ಧಾರಣೆ** ಎನಿಸುವದು.

ಬ್ರಹ್ಮೈವಾಸ್ಮೀತಿ ಸದ್ವೃತ್ತ್ಯಾ ನಿರಾಲಮ್ಬನತಯಾ ಸ್ಥಿತಿಃ ।
ಧ್ಯಾನಶಬ್ದೇನ ವಿಖ್ಯಾತಾ ಪರಮಾನನ್ದದಾಯಿನೀ ॥ ೧೨೩ ॥

೧೨೩. 'ಬ್ರಹ್ಮವೇ ಆಗಿರುತ್ತೇನೆ' ಎಂಬ ಉತ್ತಮವಾದ ವೃತ್ತಿಯಿಂದ ಮತ್ತೊಂದು ವಿಷಯವನ್ನು ಧ್ಯಾನಿಸದೆ ಇರುವದೇ **ಧ್ಯಾನ**ಶಬ್ದದಿಂದ ಪ್ರಸಿದ್ಧ ವಾಗಿರುತ್ತದೆ. (ಅದು) ಪರಮಾನಂದವನ್ನು ಕೊಡುವಂಥದ್ದು.

ನಿರ್ವಿಕಾರತಯಾ ವೃತ್ತ್ಯಾ ಬ್ರಹ್ಮಾಕಾರತಯಾ ಸ್ಥಿತಿಃ ।
ವೃತ್ತಿವಿಸ್ಮರಣಂ ಸಮ್ಯಕ್ ಸಮಾಧಿರ್ಜ್ಞಾನಸಂಜ್ಞಕಃ ॥ ೧೨೪ ॥

೧೨೪. ಯಾವ ವಿಕಾರಗಳೂ ಇಲ್ಲದೆ ಬ್ರಹ್ಮಾಕಾರವಾಗಿಯೇ ಇರುವ ವೃತ್ತಿಯಿಂದ (ಇದ್ದುಕೊಂಡು) ವೃತ್ತಿಗಳನ್ನು ಚೆನ್ನಾಗಿ ಮರೆತುಬಿಡುವದು **ಸಮಾಧಿ**ಯು. ಇದಕ್ಕೆ ಜ್ಞಾನವೆಂದು ಹೆಸರು.

ನಿದಿಧ್ಯಾಸನದ ಅವಧಿ

ಇಮಂ ಚ ಕೃತ್ರಿಮಾನನ್ದಂ[2] ತಾವತ್ಸಾಧು ಸಮಭ್ಯಸೇತ್ ।
ವಶ್ಯೋ ಯಾವತ್ಕ್ಷಣಾತ್ಪುಂಸಃ ಪ್ರಯುಕ್ತಃ ಸನ್ ಭವೇತ್ ಸ್ವಯಮ್

೧೨೫. ಪ್ರಯೋಗಿಸಿದ ಮಾತ್ರದಿಂದ ಕ್ಷಣದಲ್ಲಿ ತನಗೆ ತಾನೇ ವಶ ವಾಗುವವರೆಗೂ (ಸಾಧಕನು) ಈ ಕೃತ್ರಿಮಾನಂದವನ್ನು ಚೆನ್ನಾಗಿ ಅಭ್ಯಾಸ ಮಾಡುತ್ತಿರಬೇಕು.[3]

---

1. 'ಚೈವ' ಎಂಬ ನಿ॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.
2. 'ಏವಂ ಚಾಕೃತ್ರಿಮಾನನ್ದಂ' ಎಂಬ ವಾ॥ ಪಾಠವು ಸರಿಯಲ್ಲವೆಂದು ತೋರುತ್ತದೆ.
3. ಸಾಧಕನಿಗೆ ಯತ್ನಸಾಧ್ಯವಾದದ್ದು ಸಿದ್ಧನ ಲಕ್ಷಣವಾಗಿರುವದು.

ತತಃ ಸಾಧನನಿರ್ಮುಕ್ತಃ ಸಿದ್ಧೋ ಭವತಿ ಯೋಗಿರಾಟ್ ।
ತತ್ಸ್ವರೂಪಂ ನ ಚೈತಸ್ಯ[1] ವಿಷಯೋ ಮನಸೋ ಗಿರಾಮ್ ॥ ೧೩೬

೧೩೬. ಆಮೇಲೆ ಸಾಧನಗಳಿಲ್ಲದೆ (ಈ) **ಯೋಗಿರಾಜನು**[2] ಸಿದ್ಧನಾಗುವನು, ಆ (ಸಿದ್ಧನ) ಸ್ವರೂಪವು ಈ ಮನಸ್ಸಿಗಾಗಲಿ ಮಾತುಗಳಿಗಾಗಲಿ ವಿಷಯವಲ್ಲ.

ಸಾಧಕನಿಗೆ ಒದಗುವ ಅಡ್ಡಿಗಳು

ಸಮಾಧೌ ಕ್ರಿಯಮಾಣೇ ತು ವಿಘ್ನಾ ಆಯಾನ್ತಿ ವೈ ಬಲಾತ್ ।
ಅನುಸನ್ಧಾನರಾಹಿತ್ಯಮಾಲಸ್ಯಂ ಭೋಗಲಾಲಸಾ ॥ ೧೩೭ ॥
ಲಯಸ್ತಮಶ್ಚ ವಿಕ್ಷೇಪೋ ರಸಾಸ್ವಾದಶ್ಚ ಶೂನ್ಯತಾ ।
ಏವಂ ಯದ್ವಿಘ್ನಬಾಹುಲ್ಯಂ ತ್ಯಾಜ್ಯಂ ಬ್ರಹ್ಮವಿದಾ ಶನೈಃ ॥ ೧೩೮ ॥

೧೩೭-೧೩೮. ಸಮಾಧಿಯನ್ನು ಅಭ್ಯಾಸಮಾಡುತ್ತಿರುವಾಗ ವಿಘ್ನಗಳು ಬಲಾತ್ಕಾರದಿಂದ ಬಂದೊದಗುತ್ತಿರುವವು. ತತ್ತ್ವವನ್ನು ಅನುಸಂಧಾನ ಮಾಡದಿರುವದು, ಸೋಮಾರಿತನ, ವಿಷಯಭೋಗಗಳಲ್ಲಿ ಬಲವಾದ ಇಚ್ಛೆ, ಲಯ, ತಮಸ್ಸು, ವಿಕ್ಷೇಪ, ರಸಾಸ್ವಾದ, ಶೂನ್ಯತ್ವ- ಹೀಗೆ ಒಂದರ ಮೇಲೊಂದು ಬರುತ್ತಿರುವ ಅನೇಕ ವಿಘ್ನಗಳನ್ನು **ಬ್ರಹ್ಮಜ್ಞಾನಿಯು**[3] ಮೆಲ್ಲ ಮೆಲ್ಲಗೆ ತಪ್ಪಿಸಿಕೊಳ್ಳಬೇಕು.

ಭಾವವೃತ್ತ್ಯಾ ಹಿ ಭಾವತ್ವಂ ಶೂನ್ಯವೃತ್ತ್ಯಾ ಹಿ ಶೂನ್ಯತಾ ।
ಬ್ರಹ್ಮವೃತ್ತ್ಯಾತು ಪೂರ್ಣತ್ವಂ ತಥಾ ಪೂರ್ಣತ್ವಮಭ್ಯಸೇತ್ ॥೧೩೯॥

೧೩೯. ವಿಷಯಾಕಾರವೃತ್ತಿಯಿಂದ ವಿಷಯಮಯತ್ವವೂ, ಶೂನ್ಯವೃತ್ತಿಯಿಂದ ಶೂನ್ಯತ್ವವೂ (ಬರುವವು). ಬ್ರಹ್ಮವೃತ್ತಿಯಿಂದ ಪೂರ್ಣತ್ವವುಂಟಾಗುವದು). ಆದ್ದರಿಂದ ಪೂರ್ಣತ್ವವನ್ನೇ ಅಭ್ಯಾಸಮಾಡಬೇಕು.[4]

ಬ್ರಹ್ಮವೃತ್ತಿಯ ಸ್ತುತಿ

ಯೋ ಹಿ ವೃತ್ತಿಂ ಜಹತ್ಯೇನಾಂ ಬ್ರಹ್ಮಾಖ್ಯಾಂ ಪಾವನೀಂ ಪರಾಮ್ ।
ತೇ ವೃಥೈವ ತು ಜೀವನ್ತಿ ಪಶುಭಿಶ್ಚ ಸಮಾ ನರಾಃ ॥ ೧೪೦ ॥

---

1. 'ನ ಚೈಕಸ್ಯ' ವಾ॥
2. ನಿದಿಧ್ಯಾಸನವನ್ನು ಮಾಡುತ್ತಿರುವ ಮುಮುಕ್ಷುವು.
3. ಸಾಧಕನು ಎಂದರ್ಥ.
4. ವೃತ್ತಿಯನ್ನು ಅಭ್ಯಾಸಮಾಡಬೇಕೆಂಬುದನ್ನು ಭಾಷ್ಯದಲ್ಲಿ ಹೇಳಿದ್ದು ಕಾಣಬರುವದಿಲ್ಲ.

೧೩೦. ಪವಿತ್ರವಾದ ಬ್ರಹ್ಮನೆಂಬ ಹೆಸರಿನ ಈ ವೃತ್ತಿಯನ್ನು ಯಾರು ಕೈಬಿಟ್ಟಿರುವರೋ ಅಂಥ ಮನುಷ್ಯರು ಬದುಕಿರುವದು ವ್ಯರ್ಥ. (ಆ) ಮನುಷ್ಯರು ಪಶುಗಳಿಗೆ ಸಮಾನರು.

ಯೇ ಹಿ ವೃತ್ತಿಂ ವಿಜಾನನ್ತಿ ಜ್ಞಾತ್ವಾಪಿ ವರ್ಧಯನ್ತಿ ಯೇ[1] ।
ತೇ ವೈ ಸತ್ಪುರುಷಾ ಧನ್ಯಾ ವನ್ದ್ಯಾಸ್ತೇ ಭುವನತ್ರಯೇ ॥ ೧೩೧ ॥

೧೩೧. ಯಾರು (ಈ) ವೃತ್ತಿಯನ್ನು ಅರಿತುಕೊಂಡಿರುವರೋ ಯಾರು ಅರಿತುಕೊಂಡವ್ವಲ್ಲದೆ ಇದನ್ನು ಬೆಳಿಸಿಕೊಳ್ಳುತ್ತಲೂ ಇರುವರೋ ಅವರೇ ಸತ್ಪುರುಷರು, ಅವರು ಮೂರು ಲೋಕಗಳಿಗೂ ವಂದನೀಯರು.

ಯೇಷಾಂ ವೃತ್ತಿಃ ಸಮಾ ವೃದ್ಧಾ ಪರಿಪಕ್ವಾ ಚ ಸಾ ಪುನಃ ।
ತೇ ವೈ ಸದ್ಬ್ರಹ್ಮತಾಂ ಪ್ರಾಪ್ತಾ ನೇತರೇ ಶಬ್ದವಾದಿನಃ ॥ ೧೩೨ ॥

೧೩೨. ಯಾರ ವೃತ್ತಿಯು ಸಮನಾಗಿದ್ದು, ಬೆಳೆದು, ಪರಿಪಕ್ವವಾಗಿರುವದೋ ಅವರೇ ಸದ್ರೂಪವಾದ ಬ್ರಹ್ಮದ ಸ್ವರೂಪವನ್ನು ಪಡೆದವರು; ಮಿಕ್ಕವರೆಲ್ಲ ಸುಮ್ಮನೆ ಮಾತಾಡುವವರು.

ಕುಶಲಾ ಬ್ರಹ್ಮವಾರ್ತಾಯಾಂ ವೃತ್ತಿಹೀನಾಃ ಸುರಾಗಿಣಃ ।
ತೇಽಪ್ಯಜ್ಞಾನಿತಯಾ ನೂನಂ ಪುನರಾಯಾನ್ತಿ ಯಾನ್ತಿ ಚ ॥ ೧೩೩ ॥

೧೩೩. ಯಾರು ಬ್ರಹ್ಮ(ವಿಷಯದ) ಮಾತಿನಲ್ಲಿ ಜಾಣರಾಗಿ ವೃತ್ತಿಯನ್ನು ಪಡೆದುಕೊಳ್ಳದೆ (ವಿಷಯಗಳಲ್ಲಿ) ಹೆಚ್ಚಿನ ರಾಗವುಳ್ಳವರಾಗಿರುವರೋ ಅವರೂ ನಿಜವಾಗಿ ಅಜ್ಞಾನಿಗಳಾಗಿರುವದರಿಂದ ಮತ್ತೆಮತ್ತೆ ಬರುತ್ತಲೂ ಹೋಗುತ್ತಲೂ ಇರುವರು.

ನಿಮೇಷಾರ್ಧಂ ನ ತಿಷ್ಠನ್ತಿ ವೃತ್ತಿಂ ಬ್ರಹ್ಮಮಯೀಂ ವಿನಾ ।
ಯಥಾ ತಿಷ್ಠನ್ತಿ ಬ್ರಹ್ಮಾದ್ಯಾಃ ಸನಕಾದ್ಯಾಃ ಶುಕಾದಯಃ ॥ ೧೩೪ ॥

೧೩೪. ಬ್ರಹ್ಮಾದಿಗಳೂ ಸನಕಾದಿಗಳೂ ಶುಕಾದಿಗಳೂ ಇರುವಂತೆ ತಿಳಿದವರು ಬ್ರಹ್ಮಮಯವಾದ ವೃತ್ತಿಯನ್ನು ಬಿಟ್ಟು ಅರ್ಧನಿಮಿಷವಾದರೂ ಇರುವದಿಲ್ಲ.

ನಿದಿಧ್ಯಾಸನದ ಉಪಸಂಹಾರ

ಕಾರ್ಯೇ ಕಾರಣತಾಯಾತಾ ಕಾರಣೇ ನ ಹಿ ಕಾರ್ಯತಾ ।
ಕಾರಣತ್ವಂ ತತೋ ಗಚ್ಛೇತ್ ಕಾರ್ಯಾಭಾವೇ ವಿಚಾರತಃ ॥ ೧೩೫ ॥

1. 'ಯೇ ಜ್ಞಾತ್ವಾ ವರ್ಧಯನ್ತ್ಯಪಿ' ವಾ॥

೧೩೫. ಕಾರ್ಯದಲ್ಲಿ ಕಾರಣತ್ವವು ಬಂದಿರುವದು, ಕಾರಣದಲ್ಲಿ ಕಾರ್ಯತ್ವವಿರುವದಿಲ್ಲ. ಆದ್ದರಿಂದ ವಿಚಾರಿಸಲು ಕಾರ್ಯವು ಇಲ್ಲವಾಗಲು ಕಾರಣತ್ವವೂ ಹೋಗಿಬಿಡುವದು[1].

ಅಥ ಶುದ್ಧಂ ಭವೇದ್ವಸ್ತು ಯದ್ವೈ ವಾಚಾನುಗೋಚರಮ್ ।
ದೃಷ್ಟವ್ಯಂ ಮೃದ್ಘಟೇನೈವ ದೃಷ್ಟಾನ್ತೇನ ಪುನಃ ಪುನಃ ॥ ೧೩೬ ॥

೧೩೬. ಆಮೇಲೆ ಶುದ್ಧವಾದ ವಸ್ತುವೇ ಆಗಿಬಿಡುವದು. ಅದು ಮಾತುಗಳಿಗೆ ಗೋಚರವಲ್ಲದ್ದೆಂದು ಪ್ರಸಿದ್ಧವಾಗಿದೆ. ಇದನ್ನು ಮಣ್ಣುಗಡಿಗೆಯ ದೃಷ್ಟಾಂತದಿಂದ ಮತ್ತೆ ಮತ್ತೆ ನೋಡಿಕೊಳ್ಳಬೇಕು.

ಅನೇನೈವ ಪ್ರಕಾರೇಣ ವೃತ್ತಿರ್ಬ್ರಹ್ಮಾತ್ಮಿಕಾ ಭವೇತ್ ।
ಉದೇತಿ ಶುದ್ಧಚಿತ್ತಾನಾಂ ವೃತ್ತಿಜ್ಞಾನಂ ತತಃ ಪರಮ್ ॥ ೧೩೭ ॥

೧೩೭. ಈ ಪ್ರಕಾರದಿಂದಲೇ ಬ್ರಹ್ಮಾಕಾರವೃತ್ತಿಯೂ ಆಗುವದು. ಶುದ್ಧಚಿತ್ತರಾದವರಿಗೆ ಅದರಿಂದ (ಈ) ಉತ್ತಮವೃತ್ತಿಜ್ಞಾನವು ಉಂಟಾಗುವದು.

ಕಾರಣಂ ವ್ಯತಿರೇಕೇಣ ಪುಮಾನಾದೌ ವಿಲೋಕಯೇತ್ ।
ಅನ್ವಯೇನ ಪುನಸ್ತದ್ಧಿ ಕಾರ್ಯೇ ನಿತ್ಯಂ ಪ್ರಪಶ್ಯತಿ ॥ ೧೩೮ ॥

೧೩೮. (ಸಾಧಕ)ಪುರುಷನು ಕಾರಣವು ಬೇರೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಆಮೇಲೆ ಕಾರ್ಯದಲ್ಲಿ ಅದು ಸೇರಿಕೊಂಡಿರುವದರಿಂದ (ಅದರಲ್ಲಿ) ಯಾವಾಗಲೂ ಇರುವದೆಂಬುದನ್ನು ಕಾಣುತ್ತಾನೆ.

ಕಾರ್ಯೇ ಹಿ ಕಾರಣಂ ಪಶ್ಯೇತ್ ಪಶ್ಚಾತ್ಕಾರ್ಯಂ ವಿಸರ್ಜಯೇತ್ ।
ಕಾರಣತ್ವಂ ತತೋ ಗಚ್ಛೇದವಶಿಷ್ಟಂ ಭವೇನ್ಮುನಿಃ ॥ ೧೩೯ ॥

೧೩೯. ಕಾರ್ಯದಲ್ಲಿ ಕಾರಣವನ್ನು ಕಾಣಬೇಕು; ಆಬಳಿಕ ಕಾರ್ಯವನ್ನು ಬಿಟ್ಟುಬಿಡಬೇಕು. ಆಮೇಲೆ ಕಾರಣತ್ವವೂ ಹೋಗುವದು; ಆಗ (ಆ ಸಾಧಕನಾದ) ಮುನಿಯು ಉಳಿದ (ಬ್ರಹ್ಮವೇ) ಆಗುವನು.

ಭಾವಿತಂ ತೀವ್ರವೇಗೇನ ಯದ್ವಸ್ತು ನಿಶ್ಚಯಾತ್ಮನಾ ।
ಪುಮಾಂಸ್ತದ್ಧಿ ಭವೇಚ್ಛೀಘ್ರಂ ಜ್ಞೇಯಂ ಭೃಙ್ಗರಕೀಟವತ್ ॥ ೧೪೦ ॥

---

1. ಕಾರ್ಯವನ್ನು ವಿಚಾರಿಸಿದರೆ ಕಾರಣಕ್ಕಿಂತ ಅದು ಬೇರೆಯಿರುವದಿಲ್ಲ; ಕಾರ್ಯತ್ವವು ನಿಜವಲ್ಲವಾದ್ದರಿಂದ ಕಾರಣತ್ವವೂ ನಿಜವಲ್ಲ.

೧೪೧. ಯಾವ ವಸ್ತುವನ್ನು ನಿಶ್ಚಯರೂಪ(ಬುದ್ಧಿ)ಯಿಂದ ಬಹಳ ಬಲವಾಗಿ (ಸಾಧಕನಾದ) ಪುರುಷನು ಭಾವಿಸುತ್ತಿರುವನೋ ಅವನು ಬೇಗನೆ ಅದೇ ಆಗಿಬಿಡುವನು. (ಇದನ್ನು) ಭೃಮರಕೀಟದಂತೆ[1] ತಿಳಿಯಬೇಕು.

ಅದೃಶ್ಯಂ ಭಾವರೂಪಂ ಚ ಸರ್ವಮೇವ ಚಿದಾತ್ಮಕಮ್ |
ಸಾವಧಾನತಯೊ ನಿತ್ಯಂ ಸ್ವಾತ್ಮಾನಂ ಭಾವಯೇದ್ಬುಧಃ ॥ ೧೪೧ ॥

೧೪೧. ಜಾಣನಾದವನು ಇದೆಲ್ಲವೂ ಅದೃಶ್ಯವಾದ ಭಾವರೂಪವಾಗಿರುವ ಚಿದ್ರೂಪವಾದ ನನ್ನ ಆತ್ಮನೇ ಎಂದು ಅವಧಾನಪೂರ್ವಕವಾಗಿ ನಿತ್ಯವೂ ಭಾವಿಸುತ್ತಿರಬೇಕು.

ದೃಶ್ಯಂ ಹ್ಯದೃಶ್ಯತಾಂ ನೀತ್ವಾ ಬ್ರಹ್ಮಾಕಾರೇಣ ಚಿನ್ತಯೇತ್ |
ವಿದ್ವಾನ್ನಿತ್ಯಸುಖೇ ತಿಷ್ಠೇದ್ಧಿಯಾ ಚಿದ್ರಸಪೂರ್ಣಯಾ ॥ ೧೪೨ ॥

೧೪೨. ಕಾಣುತ್ತಿರುವ (ಪ್ರಪಂಚವನ್ನು) ಕಾಣದಂತೆ ಮಾಡಿಕೊಂಡು ಬ್ರಹ್ಮಾಕಾರದಿಂದ (ಅದನ್ನು) ಚಿಂತಿಸಬೇಕು. ಜ್ಞಾನಿಯಾಗಿ ಚಿದ್ರಸಪೂರ್ಣವಾದ ಬುದ್ಧಿಯಿಂದೊಡಗೂಡಿ ನಿತ್ಯಸುಖದಲ್ಲಿ ನಿಲ್ಲಬೇಕು.

ರಾಜಯೋಗಕ್ಕೆ ಅಧಿಕಾರಿಗಳು

ಏಭಿರಙ್ಗೈಃ ಸಮಾಯುಕ್ತೋ ರಾಜಯೋಗ ಉದಾಹೃತಃ |
ಕಿಞ್ಚಿತ್ಪಕ್ವಕಷಾಯಾಣಾಂ ಹಠಯೋಗೇನ ಸಂಯುತಃ ॥ ೧೪೩ ॥

೧೪೩. ಈ (ಮೇಲೆ ಹೇಳಿರುವ) ಲಿಂಗಗಳಿಂದ ಕೂಡಿದ್ದು ರಾಜಯೋಗವೆನಿಸುವದು. ಕಷಾಯವು ಸ್ವಲ್ಪಮಟ್ಟಿಗೇ ಪಕ್ವವಾಗಿರುವವರಿಗೆ (ಇದು) ಹಠಯೋಗದಿಂದ ಕೂಡಿ (ಸಿದ್ಧವಾಗುವದು).

ಪರಿಪಕ್ವಂ ಮನೋ ಯೇಷಾಂ ಕೇವಲೋಽಯಂ ಚ ಸಿದ್ಧಿದಃ |
ಗುರುದೈವತಭಕ್ತಾನಾಂ ಸರ್ವೇಷಾಂ ಸುಲಭೋ ಜವಾತ್ ॥ ೧೪೪ ॥

೧೪೪. ಯಾರಿಗೆ ಮನಸ್ಸು ಪರಿಪೂರ್ಣವಾಗಿ ಪಕ್ವವಾಗಿರುವದೋ[2] (ಅವರಿಗೆ) ಕೇವಲವಾಗಿಯೇ[3] ಇದು ಸಿದ್ಧಿಯನ್ನು ಕೊಡುವದು. ಗುರುವಿನಲ್ಲಿಯೂ ಈಶ್ವರನಲ್ಲಿಯೂ ಭಕ್ತಿಯುಳ್ಳವರಿಗೆಲ್ಲ ಬೇಗನೆ ಅನಾಯಾಸವಾಗಿ ದಕ್ಕುವದು.

ಓಂ ತತ್ಸತ್.

———o———

1. ಈ ದೃಷ್ಟಾಂತವನ್ನು ಭಾಷ್ಯದಲ್ಲಿ ಎಲ್ಲಿಯೂ ಕೊಟ್ಟಿಲ್ಲ.
2. ರಾಗಾದಿಗಳು ಸ್ವಲ್ಪವೂ ಇರುವದಿಲ್ಲವೋ.
3. ಹಠಯೋಗವಿಲ್ಲದೆಯೇ ಬರಿಯ ರಾಜಯೋಗವೇ.

ಅಪರೋಕ್ಷಾನುಭೂತಿಯ ಸಾರ

೧–೩. ಶ್ರೀಹರಿಯನ್ನು ನಮಸ್ಕರಿಸಿ ಅಪರೋಕ್ಷಾನುಭೂತಿಯನ್ನು ಮೋಕ್ಷಾರ್ಥಿಗಳಿಗಾಗಿ ತಿಳಿಸುತ್ತೇವೆ.

೪–೯. ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಮಾಡಿ ಈಶ್ವರಾರ್ಪಣಮಾಡುವವರಿಗೆ ವೈರಾಗ್ಯ, ಆತ್ಮಾನಾತ್ಮವಿವೇಕ, ಶಮದಮಾದಿಗಳು, ಮೋಕ್ಷೇಚ್ಛೆ– ಎಂಬ ಸಾಧನಚತುಷ್ಟಯವು ದೊರಕುತ್ತದೆ.

೧೦–೧೬. ಸಾಧನಸಂಪನ್ನನಾದವನು ವಿಚಾರದಿಂದಲೇ ಜ್ಞಾನವನ್ನು ಪಡೆಯುತ್ತಾನೆ. ನಾನು ದೇಹೇಂದ್ರಿಯಗಳಲ್ಲ, ಅಜ್ಞಾನದಿಂದ ಉಂಟಾಗಿರುವವೆಲ್ಲವೂ ಜ್ಞಾನದಿಂದ ನಾಶವಾಗುವದು, ಎಲ್ಲಕ್ಕೂ ಉಪಾದಾನಕಾರಣನಾದ ಆತ್ಮನೇ ಸೂಕ್ಷ್ಮನು, ಜ್ಞಾತೃ, ಸಾಕ್ಷಿ– ಎಂದು ಚಿಂತಿಸುವದು ವಿಚಾರವು.

೧೭–೩೮. ದೇಹವು ಸಾವಯವ, ನಿಯಾಮ್ಯ, ಮಾಂಸಮಯ, ತಾಮಸ, ಅನಿತ್ಯ, ಅಸದ್ರೂಪ. ಇದು ನಿರವಯವನಾಗಿ, ನಿಯಾಮಕನಾಗಿ, ಚಿನ್ಮಯನಾಗಿ, ಪ್ರಕಾಶರೂಪನಾಗಿ, ನಿತ್ಯನಾಗಿ, ಸದ್ರೂಪನಾಗಿರುವ ಆತ್ಮನಾಗಲಾರದು. ದೇಹವು ನಾನಲ್ಲ, ಬ್ರಹ್ಮವೇ ನಾನು– ಎಂದರಿಯುವದೇ ಜ್ಞಾನವು.

೩೯–೪೦. ಆತ್ಮನು ಏಕನು, ದ್ರಷ್ಟೃ, ವಿಕಾರಹೀನನು; ಇದಕ್ಕೆ ವಿಪರೀತ ಸ್ವಭಾವವುಳ್ಳ ದೇಹವು ಆತ್ಮನಾಗಲಾರದು. ಪುರುಷನಿಗಿಂತ ಹೆಚ್ಚಿನದಿಲ್ಲ, ಎಲ್ಲವೂ ಪುರುಷನೇ, ಪುರುಷನು ಅಸಂಗನು, ಸ್ವಯಂಜ್ಯೋತಿಯು– ಎಂದು ಶ್ರುತಿ ಸಾರುತ್ತಿದೆ. ಈ ಸ್ವಭಾವವು ದೇಹದಲ್ಲಿಲ್ಲವಾದ್ದರಿಂದ ಅದು ಈ ಪುರುಷನಾಗಲಾರದು. ಲಿಂಗದೇಹವೂ ಅನೇಕಾತ್ಮಕವಾಗಿರುವದರಿಂದ ಅದೂ ಈ ಪುರುಷನಾಗಲಾರದು.

೪೧–೫೫. ನಿಜವಾಗಿ ನೋಡಿದರೆ ದೇಹವಾಗಲಿ ಜೀವತ್ವವಾಗಲಿ ಸತ್ಯವಲ್ಲ. ಹಗ್ಗವು ಹಾವಾಗಿ ತೋರುವಂತೆ ಚೈತನ್ಯವೇ ಪ್ರಪಂಚವಾಗಿ ತೋರುತ್ತಿದೆ. ಎಲ್ಲವೂ ಬ್ರಹ್ಮವೇ ಎಂದು ಶ್ರುತಿ ಹೇಳುತ್ತಿದೆ; ಶ್ರುತಿಯು ನಾನಾತ್ವವನ್ನು ನಿಂದಿಸಿ ಭೇದದೃಷ್ಟಿಯವರಿಗೆ ಸಾವಿನ ಮೇಲೆ ಸಾವಾಗುವದೆಂದು ಹೇಳುತ್ತಿದೆ. ಬ್ರಹ್ಮದಿಂದಲೇ ಎಲ್ಲವೂ ಆಗುವದೆಂದು ಶ್ರುತಿ ಹೇಳುತ್ತಿರುವದರಿಂದ ಎಲ್ಲವೂ ಬ್ರಹ್ಮವೇ ಎಂದರಿಯಬೇಕು. ಶ್ರುತಿಯು ಹಾಗೆಂದೇ ಹೇಳುತ್ತಿದೆ, ದ್ವೈತವು ಅಜ್ಞಾನಕೃತವೆಂದೂ ಹೇಳುತ್ತಿದೆ.

೫೬–೬೭. ಪ್ರಪಂಚವು ತೋರುತ್ತಿದ್ದರೂ ವ್ಯವಹಾರಕ್ಕೆ ತಕ್ಕದ್ದಾಗಿದ್ದರೂ ಕನಸಿನಂತೆ ಮಿಥ್ಯೆಯೇ. ಎಚ್ಚರಕನಸುನಿದ್ರೆಗಳೆಂಬ ಅವಸ್ಥೆಗಳು ಒಂದಿರುವಾಗ ಮತ್ತೆರಡೂ ಇಲ್ಲದ್ದರಿಂದ ಅವು ಮಿಥ್ಯೆಯೇ. ಆದ್ದರಿಂದ ಬ್ರಹ್ಮವೊಂದೇ ಸತ್ಯವು. ಕಾರಣವಾದ ಮಣ್ಣು, ಚಿನ್ನ– ಮುಂತಾದವುಗಳಲ್ಲಿ ಕಾರ್ಯವಾದ ಗಡಿಗೆ ಕುಂಡಲ ಮುಂತಾದವುಗಳು ಇರುವಂತೆ ಭ್ರಾಂತಿಯಾಗುವ ಹಾಗೂ ಆಕಾಶದಲ್ಲಿ ನೀಲತ್ವ, ಬಿಸಿಲುಕುದುರೆಯಲ್ಲಿ ನೀರು

ನುಂತಾದವು ತೋರುವಹಾಗೂ ಬ್ರಹ್ಮದಲ್ಲಿ ಜೀವತ್ವವೂ ಜಗದ್ರೂಪವೂ ತೋರುತ್ತಿರುವವು. ನಿಜವಾಗಿ ಬ್ರಹ್ಮವನ್ನೇ ನಾವು ಬೇರೆಬೇರೆಯು ಹೆಸರುಗಳಿಂದ ವ್ಯವಹರಿಸುತ್ತಿರುವೆವು.

೬೮-೭೦. ಅಜ್ಞರಿಗೂ ಜ್ಞಾನಿಗಳಿಗೂ ಬ್ರಹ್ಮವೊಂದೇ ಬೇರೆಬೇರೆಯ ರೂಪದಲ್ಲಿ ತೋರುತ್ತಿರುವದು. ಹಗ್ಗವೇ ಮುಂತಾದವನ್ನು ಹಾವು ಮುಂತಾದವೆಂದು ತಿಳಿಯುವಂತೆ ಆತ್ಮನನ್ನೇ ಅಜ್ಞರು ದೇಹವೆನ್ನುತ್ತಿರುವರು. ಹೀಗೆ ಆತ್ಮನಲ್ಲಿ ಅವಿದ್ಯೆಯಿಂದ ದೇಹಾದ್ಯಧ್ಯಾಸಗಳು ಆಗಿರುವವು; ವಿದ್ಯೆಯು ಉಂಟಾಗಲಾಗಲೆಲ್ಲವೂ ಪರಮಾತ್ಮನೇ ಆಗಿಬಿಡುತ್ತಾನೆ. ಆಗ ಬೇರೆ ಯಾವದೊಂದು ವಸ್ತುವೂ ಇರುವದಿಲ್ಲವಾದ್ದರಿಂದ ದೇಹವು ಆತ್ಮನೆಂಬ ಭಾವನೆಗೆ ಅವಕಾಶವೇ ಇರುವದಿಲ್ಲ.

೭೯-೯೯. ಹೀಗೆ ಆತ್ಮಸ್ವರೂಪವನ್ನು ತಿಳಿದುಕೊಂಡು ಜ್ಞಾನಿಯು ಆನಂದದಿಂದ ಪ್ರಾರಬ್ಧವನ್ನು ಉತ್ಸೀಗವಿಲ್ಲದೆ ಅನುಭವಿಸಿಕೊಂಡು ಇರುತ್ತಾನೆ. ಸರಿಯಾಗಿ ನೋಡಿದರೆ ಜ್ಞಾನಿಗೆ ಪ್ರಾರಬ್ಧವಿದೆ ಎಂಬುದೂ ವ್ಯವಹಾರದ ದೃಷ್ಟಿಯಿಂದ. ಏಕೆಂದರೆ ದೇಹಾದಿಗಳು ಅನವದ್ರೂಪವಾಗಿರುತ್ತದೆ. ಆತ್ಮನಿಗೆ ಜನ್ಮವೇ ಇಲ್ಲದ್ದರಿಂದ ಜನ್ಮಾಂತರವಿಲ್ಲ; ಜನ್ಮಾಂತರ ಕರ್ಮರೂಪವಾದ ಪ್ರಾರಬ್ಧವೂ ಇಲ್ಲ. 'ಹಗ್ಗವನ್ನು ಹಾವೆಂದು ತಪ್ಪಾಗಿ ತಿಳಿದವನು ಅದು ಹಗ್ಗವೆಂದು ಸರಿಯಾಗಿ ತಿಳಿದುಕೊಂಡಾಗ ಅದರಲ್ಲಿ ಹಾವಿನಂಶವು ಉಳಿಯುವದಿಲ್ಲವಷ್ಟೆ; ಇವರಂತೆ ಪ್ರಪಂಚವೆಲ್ಲವೂ ಬ್ರಹ್ಮವೆಂದು ತಿಳಿದುಕೊಂಡವನಿಗೆ ಅದರ ಒಂದಂಶವಾದ ದೇಹವು ಉಳಿಯುವದಿಲ್ಲ. ಆದ್ದರಿಂದ ಪ್ರಾರಬ್ಧವೂ ಉಳಿದುಕೊಂಡಿರುವದಿಲ್ಲ. ಶ್ರುತಿಯಲ್ಲಿ ಎಲ್ಲಾ ಕರ್ಮಗಳೂ ಜ್ಞಾನದಿಂದ ನಾಶವಾಗುವವೆಂದು ಸ್ಪಷ್ಟವಾಗಿ ಹೇಳಿದೆ; ಜ್ಞಾನಿಗೂ ಪ್ರಾರಬ್ಧವುಂಟೆನ್ನುವದು ಈ ವೇದಾಂತಮತಕ್ಕೆ ವಿರುದ್ಧವಾಗುವದು.

೧೦೦-೧೨೯. ಮೇಲೆ ಹೇಳಿದ್ದನ್ನೆಲ್ಲ ಅನುಭವಕ್ಕೆ ತಂದುಕೊಳ್ಳಬೇಕೆನ್ನುವವರು ಹದಿನೈದು ಅಂಗಗಳ ನಿದಿಧ್ಯಾಸನವನ್ನು ಅಭ್ಯಾಸಮಾಡಬೇಕು. ಯಮ, ನಿಯಮ, ತ್ಯಾಗ, ಮೌನ, ದೇಶ, ಕಾಲ, ಆಸನ, ಮೂಲಬಂಧ, ದೇಶಾತ್ಮಿಕ್ಯ, ದೃಷ್ಟಿ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ, ಆತ್ಮಧ್ಯಾನ, ಸಮಾಧಿ- ಇವೇ ಆ ಅಂಗಗಳು. ಇವು ಹಠಯೋಗದಲ್ಲಿ ಹೇಳಿದ ಸಾಧನಗಳಲ್ಲ; ವೇದಾಂತಕ್ಕೆ ಅನುಗುಣವಾದ ಬ್ರಹ್ಮಚಿಂತನೆ, ಅನಾತ್ಮ ಚಿಂತನೆಯ ತ್ಯಾಗ- ಇವಕ್ಕೆ ಅನುಗುಣವಾದವುಗಳು, ಸಮಾಧಿಯಿಂದ ಈ ಕೃತ್ರಿಮಾನುಭವನ್ನು ಅನುಭವಿಸುವ ಅಭ್ಯಾಸದಲ್ಲಿಸ್ಸರೆ ಕೊನೆಗೆ ವಾಕ್ಕಿಗೂ ಮನಸ್ಸಿಗೂ ಅಗೋಚರವಾದ ಸಿದ್ಧಿಯು ಪ್ರಾಪ್ತವಾಗುವದು.

ಸಮಾಧಿಗೆ ಅನುಸಂಧಾನರಾಹಿತ್ಯ, ಆಲಸ್ಯ, ಭೋಗಲಾಲಸೆ, ಲಯ, ತಮಸ್ಸು, ವಿಕ್ಷೇಪ, ರಸಾಸ್ವಾದ, ಶೂನ್ಯತ್ವ- ಎಂಬ ಅಡ್ಡಿಗಳು ಬರುತ್ತವೆ. ಸಾಧಕನು ಅವುಗಳನ್ನೆಲ್ಲ ತಪ್ಪಿಸಿಕೊಳ್ಳಬೇಕು.

೧೩೦-೧೪೦. ಬ್ರಹ್ಮಾಕಾರವೃತ್ತಿಯನ್ನು ಬಿಟ್ಟವರ ಜೀವನವು ವ್ಯರ್ಥ. ಅದನ್ನು ಅರಿತುಕೊಂಡು ವೃದ್ಧಿಗೊಳಿಸಿಕೊಂಡವನು ಸತ್ಪುರುಷರು. ಅದನ್ನು ಪರಿಪಕ್ವಗೊಳಿಸಿಕೊಂಡವರಿಗೇ ಬ್ರಹ್ಮಪ್ರಾಪ್ತಿಯು; ಮಿಕ್ಕವರು ಬರಿಯ ವೇದಾಂತದ ಮಾತನ್ನು ಆಡುತ್ತಿರುತ್ತಾರೆ. ತಿಳಿದವರು ಈ ವೃತ್ತಿಯನ್ನು ಸ್ವಲ್ಪಹೊತ್ತೂ ಬಿಡುವದಿಲ್ಲ. ಕಾರ್ಯವನ್ನು

ಕಾರಣದಲ್ಲಿ ಲಯಗೊಳಿಸಿ, ಕಾರಣತ್ವವನ್ನೂ ಕಳೆದುಹಾಕಿ, ಬ್ರಹ್ಮವಲ್ಲಿ ನಿಲ್ಲುವಂತೆ ವೃತ್ತಿಯನ್ನು ಹಿಡಿದುಕೊಳ್ಳುವವರಿಗೆ ತೀವ್ರವೇಗದಿಂದ ಭಾವನೆಮಾಡಿದರೆ ಭೃಮರಕೀಟನ್ಯಾಯದಿಂದ ಬ್ರಹ್ಮಸಾಯುಜ್ಯವೇ ದೊರಕುವದು. ಆದ್ದರಿಂದ ಎಲ್ಲವೂ ಸದ್ರೂಪವಾದ ಬ್ರಹ್ಮವೇ ಎಂದು ಭಾವಿಸುತ್ತಿರಬೇಕು. ದೃಶ್ಯವೆಲ್ಲವನ್ನೂ ಬ್ರಹ್ಮಾಕಾರದಿಂದ ಚಿಂತಿಸಿ ನಿತ್ಯಾನಂದರೂಪವಾದ ಬ್ರಹ್ಮವಲ್ಲಿಯೇ ನಿಲ್ಲಬೇಕು.

೧೪೩–೧೪೪. ಈ ನಿದಿಧ್ಯಾಸನವೇ ರಾಜಯೋಗವು. ಮಂದಾಧಿಕಾರಿಗಳಿಗೆ ಸ್ವಲ್ಪ ಹಠಯೋಗವೂ ಇವರ ಜೊತೆಗೆ ಬೇಕಾಗುವದು. ಮನಸ್ಸು ಪರಿಪಕ್ವವಾಗಿರುವವರಿಗೆ ಇದೊಂದೇ ಸಿದ್ಧಿಯನ್ನು ಮಾಡಬಲ್ಲದು. ಗುರುಭಕ್ತಿಯುಳ್ಳವರಿಗೆಲ್ಲ ಇದು ಸುಲಭವಾಗಿ ದೊರಕುತ್ತದೆ.

ಶ್ಲೋಕಗಳ ಅನುಕ್ರಮಣಿಕೆ

ಇಲ್ಲಿ ಕೊಟ್ಟಿರುವದು ಶ್ಲೋಕ ಸಂಖ್ಯೆ– ಪ್ರತೀಕದ ಮುಂದೆ ಬರೆದಿರುವ ಸಂಕೇತಗಳ ವಿವರವು ಹೀಗೆ: ತೇ= ತೇಜೋಬಿಂದೂಪನಿಷತ್ತು ; ನಾ= ನಾದಬಿಂದೂಪನಿಷತ್ತು ; ಯೋ= ಯೋಗಶಿಖೋಪನಿಷತ್ತು ; ವ= ವರಾಹೋಪನಿಷತ್ತು. ಆಯಾ ಉಪನಿಷತ್ತಿನಲ್ಲಿ ಈ ಶ್ಲೋಕಗಳು ಮಾರ್ಪಾಡಿಲ್ಲದೆ ಅಥವಾ ಅಲ್ಪಸ್ವಲ್ಪ ಮಾರ್ಪಾಡಾಗಿ ಕಂಡುಬರುತ್ತವೆ.

ಅಜ್ಞಾನಾಂ ಸಮತಾಂ ವಿದ್ಯಾತ್ (ತೇ.)	೧೧೫	ಆದಾವನ್ತೇ ಚ ಮಧ್ಯೇ ಚ	೧೧೦
ಅಜ್ಞಾನಪ್ರಭವಂ ಸರ್ವಮ್	೧೪	ಇತಿ ವಾ ತಪ್ಪವೇನೌನಮ್ (ತೇ.)	೧೦೯
ಅಥ ಶುದ್ಧಂ ಭವೇದ್ವಸ್ತು (ತೇ.)	೧೩೬	ಇತ್ಯಾತ್ಮದೇಹಭೋಗೇನ	೪೧
ಅದೃಶ್ಯಂ ಭಾವರೂಪಂ ಚ	೧೪೧	ಇತ್ಯಾತ್ಮದೇಹಭೇದೇನ	೪೩
ಅನುಭೂತೋಽಪ್ಯಯಂ ಲೋಕೋ (ಯೋ.)	೫೬	ಇಮಂ ಚ ಕೃತ್ರಿಮಾನನ್ದಮ್ (ತೇ.)	೧೩೫
ಅನೇನೈವ ಪ್ರಕಾರೇಣ	೧೩೭	ಉಕ್ತಸಾಧನಯುಕ್ತೇನ	೧೦
ಅಪರೋಕ್ಷಾನುಭೂತಿರ್ನೈ	೨	ಉಚ್ಯತೇಽಜ್ಞೈರ್ಬಲಾಚ್ಚೇತ್ತತ್	೯೯
ಅಭ್ರೇಷು ಸತ್ಸು ಧಾವತ್ಸು	೮೪	ಉತ್ಪನ್ನೇಽಪ್ಯಾತ್ಮವಿಜ್ಞಾನೇ (ನಾ.)	೯೦
ಅಯಮಾತ್ಮಾ ಹಿ ಬ್ರಹ್ಮೈವ	೫೫	ಉಪಾದಾನಂ ಪ್ರಪಞ್ಚಸ್ಯ (ಯೋ.)	೪೫
ಅಲಾತಂ ಭ್ರಮಣೇನೈವ	೭೯	ಉಪಾದಾನಂ ಪ್ರಪಞ್ಚಸ್ಯ (ನಾ.)	೯೪
ಅಸಙ್ಗಃ ಪುರುಷಃ ಪ್ರೋಕ್ತೋ	೩೬	ಏತಯೋರ್ಯದುಪಾದಾನಮ್	೧೫
ಅಹಂಶಬ್ದೇನ ವಿಖ್ಯಾತಃ	೩೧	ಏಭಿರಙ್ಗೈಃ ಸಮಾಯುಕ್ತೋ	೧೪೩
ಅಹಂ ವಿಕಾರಹೀನಸ್ತು	೩೩	ಏವಂ ದೇಹದ್ವಯಾದನ್ಯಃ	೪೦
ಅಹಂ ದ್ರಷ್ಟೃತಯಾ ಸಿದ್ಧೋ	೩೨	ಏವಮಾತ್ಮನ್ಯವಿದ್ಯಾತೋ	೮೭
ಅಹಮೇಕೋಽಪಿ ಸೂಕ್ಷ್ಮತ್ವಾ	೧೬	ಕನಕಂ ಕುಣ್ಡಲತ್ವೇನ	೭೨
ಆತ್ಮನಸ್ತತ್ಪ್ರಕಾಶತ್ವಮ್	೨೨	ಕರ್ಮ ಜನ್ಮಾನ್ತರೀಯಂ ಯತ್ (ನಾ.)	೯೨
ಆತ್ಮಾ ಜ್ಞಾನಮಯಃ ಪುಣ್ಯೋ	೧೯	ಕಲನಾತ್ ಸರ್ವಭೂತಾನಾಮ್ (ತೇ.)	೧೧೧
ಆತ್ಮಾನಂ ಸತತಂ ಜಾನನ್ (ನಾ.)	೪೯	ಕಾಚಭೂಮೌ ಜಲತ್ವಂ ವಾ	೮೨
ಆತ್ಮಾನಿತ್ಯೋ ಹಿ ಸದ್ರೂಪೋ	೨೧	ಕಾರಣಂ ವ್ಯತಿರೇಕೇಣ	೧೩೮
ಆತ್ಮಾ ನಿಯಾಮಕಶ್ಚಾನ್ತಃ	೧೮	ಕಾರ್ಯಕಾರಣತಾ ನಿತ್ಯಮ್	೬೬
ಆತ್ಮಾ ಪ್ರಕಾಶಕಃ ಸ್ವಚ್ಛೋ	೩೦	ಕಾರ್ಯೇ ಕಾರಣತಾಯಾತಾ	೧೩೫
ಆತ್ಮಾ ವಿನಿಷ್ಕಲೋ ಹ್ಯೇಕೋ	೧೭	ಕಾರ್ಯೇ ಹಿ ಕಾರಣಂ ಪಶ್ಯೇತ್	೧೩೯
		ಕುಶಲಾ ಬ್ರಹ್ಮವಾರ್ತಾಯಾಮ್ (ತೇ.)	೧೩೩

ಕೋಽಹಂ ಕಥಮಿಮಂ ಜಾತಮ್	೧೨	ಪ್ರೋಕ್ತೋಽಪಿ ಕರ್ಮಕಾಣ್ಡೇನ	೨೮
ಕ್ಷೀಯನ್ತೇ ಚಾಸ್ಯ ಕರ್ಮಾಣಿ	೯೮	ಬ್ರಹ್ಮಣಃ ಸರ್ವಭೂತಾನಿ (ಯೋ.)	೪೯
ಗೃಹೀತ್ವೈನೈವ ಕಾಷ್ಠಾನಿ (ಯೋ.)	೭೪	ಬ್ರಹ್ಮಾದಿಸ್ಥಾವರಾನ್ತೇಷು	೪
ಗೃಹ್ಯಮಾಣೇ ಘಟೇ ಯದ್ವತ್ (ಯೋ.)	೬೭	ಬ್ರಹ್ಮೈವ ಸರ್ವನಾಮಾನಿ (ಯೋ.)	೫೦
ಘಟತ್ವೇನ ಯಥಾ ಪೃಥ್ವೀ	೭೧	ಬ್ರಹ್ಮೈವಾಸ್ಮೀತಿ ಸದ್ವೃತ್ತ್ಯಾ (ತೇ.)	೧೩೩
ಚಿತ್ತಾದಿಸರ್ವಭಾವೇಷು (ತೇ.)	೧೧೪	ಬ್ರಹ್ಮೈವಾಹಂ ಸಮಃ ಶಾನ್ತಃ	೨೪
ಜೈತನ್ಯಸ್ಯೈಕರೂಪತ್ವಾತ್	೪೩	ಭಾವನಾವೃತ್ತ್ಯಾ ಹಿ ಭಾವಿತತ್ವಮ್	೧೨೯
ತತಸ್ತದ್ವೃತ್ತಿನೈಶ್ಚಲ್ಯಮ್ (ತೇ.)	೧೨೦	ಭಾವಿತಂ ತೀವ್ರವೇಗೇನ (ತೇ.)	೧೪೦
ತತ್ರೈವ ಚ ಸಮಾಖ್ಯಾತಃ	೬೭	ಮಹತ್ತ್ವೇ ಸರ್ವವಸ್ತೂನಾಮ್	೪೦
ತತ್ತ್ವಜ್ಞಾನೋದಯಾದೂರ್ಧ್ವಮ್	೯೧	ಯತ್ರ ಯತ್ರ ಮನೋ ಯಾತಿ (ತೇ).	೧೨೩
ತ್ಯಾಗಃ ಪ್ರಪಞ್ಚರೂಪಸ್ಯ (ತೇ.)	೧೦೬	ಯತ್ಯಾಜ್ಞಾನಾದ್ಭವೇದ್ದ್ವೈತಮ್ (ಯೋ.)	೫೩
ತ್ರಯಮೇವಂ ಭವೇನ್ಮಿಥ್ಯಾ (ಯೋ.)	೫೮	ಯಥಾ ತಜ್ಜಕಲ್ಲೋಲೇತೇ (ಯೋ.)	೬೩
ತ್ರಿಪಞ್ಚಾಜ್ಞಾನಸ್ಯಧೋ ವಕ್ಷ್ಯೇ	೧೦೦	ಯಥಾ ರಜ್ಜುಂ ಪರಿತ್ಯಜ್ಯ (ನಾ.)	೯೫
ದೃಶ್ಯಂ ಹ್ಯದೃಶ್ಯತಾಂ ನೀತ್ವಾ (ತೇ.)	೧೪೨	ಯಥಾ ವೃಕ್ಷನಿಪರ್ಯಾಸೋ (ಯೋ.)	೫೭
ದೃಷ್ಟಿಂ ಜ್ಞಾನಮಯೀಂ ಕೃತ್ವಾ (ತೇ.)	೧೧೬	ಯಥಾ ಶಶೀ ಜಲೇ ಭಾತಿ	೪೬
ದ್ರಷ್ಟೃದರ್ಶನದೃಶ್ಯಾನಾಮ್ (ತೇ.)	೧೧೭	ಯಥೈವ ದಿಗ್ವಿಪರ್ಯಾಸೋ	೪೫
ದೇಶಸ್ಯಾಪಿ ಪ್ರಪಞ್ಚತ್ವಾತ್ (ನಾ.)	೯೭	ಯಥೈವ ಮೃನ್ಮಯಃ ಕುಮ್ಭಃ (ಯೋ.)	೬೯
ದೇಹೋಽಪಮಿತ್ಯಯಂ ಮೂಢೋ	೨೩	ಯಥೈವ ವ್ಯೋಮ್ನಿ ನೀಲತ್ವಮ್ (ಯೋ.)	೬೧
ದೋಷೋಽಪಿ ವಿಹಿತಃ ಶ್ರುತ್ಯಾ	೪೮	ಯಥೈವ ಶೂನ್ಯೇ ನೇತಾಽಯೋ (ಯೋ.)	೬೨
ನರತ್ವೇನ ಯಥಾ ಸ್ಥಾಣುಃ	೭೩	ಯದ್ವದಗ್ನೌ ನುಷ್ಣತ್ವಂ ಹಿ	೪೩
ನಾಹಂ ಭೂತಗಣೋ ದೇಹೋ	೧೩	ಯದ್ವನ್ಮೃದಿ ಘಟಭ್ರಾನ್ತಿಮ್ (ಯೋ.)	೫೯
ನಿಗಮಾಚಾರ್ಯವಾಕ್ಯೇಷು	೪	ಯನ್ಮೂಲಂ ಸರ್ವಭೂತಾನಾಮ್ (ತೇ.)	೧೧೪
ನಿತ್ಯಮಾತ್ಮಸ್ವರೂಪಂ ಹಿ	೫	ಯಸ್ಮಾತ್ಪದಮಿತಿ ಶ್ರುತ್ಯಾ	೭೪
ನಿತ್ಯಾಭ್ಯಾಸಾದ್ಯತೇ ಪ್ರಾಪ್ತಿಃ	೧೦೧	ಯಸ್ಮಾದ್ವಾಚೋ ನಿವರ್ತನ್ತೇ (ತೈ.)	೧೦೭
ನಿಮೇಷಾರ್ಧಂ ನ ತಿಷ್ಠನ್ತಿ (ತೇ.)	೧೩೪	ಯಸ್ಮಿನ್ ಸರ್ವಾಣಿ ಭೂತಾನಿ	೫೪
ನಿರಾಮಯೋ ನಿರಾಭಾಸೋ	೨೬	ಯೇಷಾಂ ವೃತ್ತಿಃ ಸಮಾ ವ್ಯದ್ಧಾ	೧೪೨
ನಿರ್ಗುಣೋ ನಿಷ್ಕ್ರಿಯೋ ನಿತ್ಯೋ	೨೭	ಯೇ ಹಿ ವೃತ್ತಿಂ ಜಪತ್ಯೇನಾಮ್ (ತೇ.)	೧೩೦
ನಿರ್ಮಲೋ ನಿಶ್ಚಲೋಽನನ್ತಃ	೨೮	ರಜ್ಜುರೂಪೇ ಪರಿಜ್ಞಾತೇ (ನಾ.)	೯೬
ನಿರ್ವಿಕಾರತಯಾ ತೃತ್ತ್ಯಾ (ತೇ.)	೧೨೪	ಲಯಸ್ತಮಶ್ಚ ವಿಕ್ಷೇಪೋ (ತೇ.)	೧೩೮
ನಿರ್ವಿಕಾರೋ ನಿರಾಕಾರೋ	೨೫	ಲಿಙ್ಗಂ ಚಾನೇಕಸಂಯುಕ್ತಮ್	೪೯
ನಿಷೇಧನಂ ಪ್ರಪಞ್ಚಸ್ಯ	೧೧೯	ವಾಚೋ ಯಸ್ಮಾನ್ನಿವರ್ತನ್ತೇ (ತೈ.)	೧೦೮
ನೋತ್ಪದ್ಯತೇ ವಿನಾ ಜ್ಞಾನಮ್	೧೧	ವಿಷಯೇಭ್ಯಃ ಪರಾ ವೃತ್ತಿಃ	೭
ಪರಿಪಕ್ವಂ ಮನೋ ಯೇಷಾಮ್	೧೪೪	ವಿಷಯೇಷ್ವಾತ್ಮತಾಂ ದೃಷ್ಟ್ವಾ (ತೇ.)	೧೩೧
ಪೀತತ್ವಂ ಹಿ ಯಥಾ ಶುಭ್ರೇ	೭	ವ್ಯಾಸ್ಯವ್ಯಾಪಕತಾ ಮಿಥ್ಯಾ (ಯೋ.)	೪೬
ಪೋತೇನ ಗಚ್ಛತಃ ಪುಂಸಃ	೭೬	ಶ್ರೀಹರಿಂ ಪರಮಾನನ್ದಮ್	೧
ಪ್ರಾಣಸಂಯಮನಂ ಚೈವ	೧೩	ಶ್ರುತ್ಯಾ ನಿವಾರಿತಂ ನೂನಮ್	೪೭

ಸಂಸಾರಬನ್ಧನಿರ್ಮುಕ್ತಿಃ	೯	ಸುಖೇನೈವ ಭವೇದ್ಯಸ್ಮಿನ್ (ತೇ.)	೧೧೨
ಸಜಾತೀಯಸ್ರವಾಹಶ್ಚ	೧೦೫	ಸುವರ್ಣಾಜ್ಞಾಯಮಾನಸ್ಯ (ಯೋ.)	೫೧
ಸತ್ಯೇವ ವಾಸನಾತ್ಯಾಗಃ	೬	ಸೂಕ್ಷ್ಮತ್ವೇ ಸರ್ವಭಾವಾನಾಮ್	೮೧
ಸತ್ಯೈವಾತ್ಮಾ ಽಶುದ್ಧೋಽಸ್ತಿ (ಯೋ.)	೬೮	ಸ್ವದೇಽಪೀ ಶೋಭನಂ ಸನ್ತಮ್	೨೯
ಸರ್ಪತ್ವೇನ ಯಥಾ ರಜ್ಜುಃ	೭೦	ಸ್ವಲ್ಪಮಪ್ಯನ್ತರಂ ಕೃತ್ವಾ (ಯೋ.)	೫೨
ಸರ್ವೋಽಪಿ ವ್ಯವಹಾರಸ್ತು	೬೫	ಸ್ವವರ್ಣಾಶ್ರಮಧರ್ಮೋಣ (ಸ.)	೧೩
ಸರ್ವಂ ಪುರುಷ ಏವೇತಿ	೫೫	ಸಸ್ನವೇಹೋ ಯಥಾಧ್ಯಸ್ತಃ (ವಾ.)	೯೩
ಸರ್ವಂ ಬ್ರಹ್ಮೇತಿ ವಿಜ್ಞಾನಾತ್ (ತೇ.)	೧೦೪	ಸ್ವಪ್ನೋ ಜಾಗರಣೇಽಲೀಕಃ (ಯೋ.)	೫೬
ಸರ್ವಮಾತ್ಮತಯಾ ಜ್ಞಾತಮ್	೮೮	ಸ್ವಾತ್ಮಾನಂ ಶೃಣು ಮೂರ್ಖ ತ್ವಮ್	೩೦
ಸಿದ್ಧಂ ಯತ್ಸರ್ವಭೂತಾದಿ (ತೇ.)	೧೧೩		

ಶಬ್ದಗಳ ಅಕ್ಷರಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವದು ಶ್ಲೋಕಸಂಖ್ಯೆ. ಶಬ್ದಕ್ಕೆ ನಕ್ಷತ್ರಚಿಹ್ನೆ ಹಾಕಿದ್ದರೆ ಭಾಷ್ಯದಲ್ಲಿ ಅದರ ಪ್ರಯೋಗವು ಕಾಣುವದಿಲ್ಲ ಎಂದರ್ಥ.

ಅಕ್ಷಗಣಃ*
ಇಂದ್ರಿಯಗಳ ಸಮೂಹ, ೧೩.

ಅಖಣ್ಡಾನನ್ದಃ*—
ಕಡಿಯದೆ ಒಂದೇ ಆಗಿರುವ ಆನಂದ, ಆತ್ಮ, ೧೧೩.

ಅಜ್ಞಾನಮ್—
ಒಂದನ್ನೊಂದೆಂದು ತಿಳಿಯುವದು, ಅಧ್ಯಾಸ, ೧೭ರಿಂದ ೨೧, ೫೩, ೯೪.

ಅಜ್ಞಾನಯೋಗತಃ—
ಅಜ್ಞಾನಸಂಬಂಧದಿಂದ, ಅಜ್ಞಾನದ ನಿಮಿತ್ತದಿಂದ, ೨೬ರಿಂದ ೪೬.

ಅದ್ವಯಕಾರಣಮ್—
ಅದ್ವಿತೀಯವಾದ ಕಾರಣಸ್ಥ, ಬ್ರಹ್ಮವು, ೪೭.

ಅಧಿಷ್ಠಾನಮ್*—
ಆರೋಪಿತವಾದ ವಸ್ತುವಿಗೆ ಆಧಾರ, ೯೬, ೧೧೩.

ಅಧ್ಯಸ್ತಮ್—
ಆರೋಪಿತವಾದ, ಹುಟ್ಟುಗಟ್ಟಿದ, ೯೩.

ಅನುಭೂತ*—
ತೋರುವ, ೫೬.

ಅಸತ್ತ್ವಮ್—
ನಿಜವಲ್ಲ, ಹುಸಿ, ೪೨, ೯೧.

ಅಸದ್ಗ್ರಹ, ಅಸನ್ಮಯ—
ಹುಸಿಯಾಗಿರುವ, ೨೧, ೨೪ರಿಂದ ೨೬, ೪೯, ೫೬.

ಆತ್ಮದೇಹಭೇದಃ—
ಆತ್ಮನು ಬೇರೆ, ದೇಹವು ಬೇರೆ—ಎಂಬುದು, ೪೨.

ಆತ್ಮಾನಾತ್ಮವಿಭಾಗ*—
ಆತ್ಮನನ್ನೂ ಅನಾತ್ಮನನ್ನೂ ನಿಗಡಿಸಿಕೊಳ್ಳುವದು, ೬೯.

ಉಪರತಿಃ—
ವಿಷಯಗಳಿಂದ ಹಿಂತಿರುಗುವದು, ೭.

ಉಪಾದಾನಮ್—
ಮಡಕೆಗೆ ಮಣ್ಣಿನಂತೆ ಕಾರಣವಾಗಿರುವ ವಸ್ತು, ೧೨, ೧೫, ೪೫, ೯೪.

ಕರ್ಮಕಾಣ್ಡಃ—
ಕರ್ಮಗಳನ್ನು ಪ್ರತಿಪಾದಿಸುವ ವೇದ ಭಾಗ, ೪೮.

ಕರ್ಮಾಣಿ—
ಕೆಲಸಗಳು, ೫೦.

ಕಾಕವಿಷ್ಠಾ*—
ಕಾಗೆಯ ಹೇಸಿಕೆ. ಅತ್ಯಂತ ಅಶುಚಿಯಾದ ವಿರಕ್ತಿಗೆ ಕಾರಣವಾದ ವಸ್ತು, ೪.

ಕಾರ್ಯಕಾರಣತಾ—
ಇದು ಕಾರ್ಯ, ಇದು ಕಾರಣ ಎಂಬ ಸಂಬಂಧ, ೬೬.

ಗುಣತ್ರಯಮ್—
ಸತ್ತ್ವರಜಸ್ತಮೋಗುಣಗಳು, ೫೮.

ಗುಣಾತೀತಃ---

ಮೂರು ಗುಣಗಳಿ, ಸತ್ತ್ವರಜಸ್ತಮಸ್ಸು ಗಳ, ಸಂಬಂಧವಿಲ್ಲದ ಆತ್ಮ, ೫೮.

ಚಿತ್, ಚಿತಿಃ—

ಅರಿವಿನ ಸ್ವರೂಪವಾದ ಆತ್ಮ, ೬೪, ೧೨೧; ೪೪.

ಚಿತಿ ಮಜ್ಜನಮ್*—

ಚೈತನ್ಯದಲ್ಲಿ ಮುಳುಗುವದು; ಚಿದ್ರೂಪ ನಾಗುವದು, ೧೨೧.

ಚಿತ್ತೈಕಾಗ್ರ್ಯಮ್—

ಚಿತ್ತವನ್ನು ಒಂದೇ ಕಡೆಯಲ್ಲಿಡುವದು, ೮

ಚಿದಾತ್ಮಾ, ಚಿದಾತ್ಮಕಃ —

ಜ್ಞಾನಸ್ವರೂಪನಾದ ಆತ್ಮ, ೫೮, ೬೦, ೧೨೦, ೧೪೧.

ಚಿದ್ರಸಪೂರ್ಣ* —

ಚಿದಾತ್ಮನಿಂದ ತುಂಬಿದ ಬುದ್ಧಿ, ೧೪೩.

ಚಿನ್ಮಯ* —

ಚಿದ್ರೂಪನಾದ ಆತ್ಮ, ೬೯.

ಚೈತನ್ಯಮ್ —

ಜ್ಞಾನಸ್ವರೂಪವು, ೪೩.

ಜಡ* —

ಅಚೇತನವಾದ, ೩೭.

ಜೀವಾತ್ಮಾ —

ಪ್ರಾಣಧಾರಣೆಮಾಡಿರುವ ಸಂಸಾರ್ಯಾತ್ಮ, ೫೩.

ಜ್ಞಾನಮ್ —

ಸರಿಯಾದ ತಿಳಿವು. ಆತ್ಮನನ್ನು ಅರಿತು ಕೊಳ್ಳುವದು, ೨೪ರಿಂದ ೨೮.

ಜ್ಞಾನಮಯ —

ಜ್ಞಾನಸ್ವರೂಪನಾದ ಆತ್ಮ, ೧೯.

ತರ್ಕಶಾಸ್ತ್ರಮ್—

ಆತ್ಮನು ದೇಹಕ್ಕಿಂತ ಬೇರೆ ಎಂದು ತಿಳಿಸುವ ನ್ಯಾಯಶಾಸ್ತ್ರ, ೪೧.

ದಿಗ್ವಿಪರ್ಯಾಸಃ—

ಒಂದು ದಿಕ್ಕನ್ನು ಮತ್ತೊಂದೆಂದು ತಪ್ಪಾಗಿ ತಿಳಿಯುವದು, ೮೫.

ದೃಶ್ಯಮ್—

ನೋಡಲ್ಪಡತಕ್ಕದ್ದು, ಅರಿವಿಗೆ ವಿಷಯ, ೩೨.

ದ್ರಷ್ಟಾ—

ನೋಡುವವನು, ಅರಿಯುವ ಆತ್ಮ, ೩೨, ೫೮.

ದೇಹಕಃ*—

ಕುತ್ಸಿತವಾದ ದೇಹ, ೩೧ರಿಂದ ೩೭.

ದೇಹದ್ವಯಮ್—

ಸ್ಥೂಲದೇಹ ಮತ್ತು ಸೂಕ್ಷ್ಮದೇಹ— ಎಂಬ ಎರಡು ದೇಹಗಳು, ೪೦

ದೇಹಪಾತಃ—

ದೇಹವು ಬಿದ್ದುಹೋಗುವದು, ಮರಣ, ೩೮.

ದೇಹಾತ್ಮತ್ವಮ್—

ದೇಹವೇ ಆತ್ಮನೆಂಬುದು, ೪೩.

ನಿಗಮಾಚಾರ್ಯೌ---

ಶಾಸ್ತ್ರ ಮತ್ತು ಆಚಾರ್ಯರು— ಇವರು, ೮.

ನಿತ್ಯಮುಕ್ತ—

ಯಾವಾಗಲೂ ಮುಕ್ತನಾಗಿರುವ ಆತ್ಮ, ೨೭.

ನಿದಿಧ್ಯಾಸನಮ್—

ಪರಮಾತ್ಮಚಿಂತನ, ೧೦೦.

ಪರಪ್ರಕಾಶ್ಯಃ—

ಮತ್ತೊಂದರಿಂದ ಬೆಳಗತಕ್ಕದ್ದು, ಅಚೇತನ, ೩೭.

ಪರಮಾತ್ಮಾ, ಪರಾತ್ಮಾ—

ಅಸಂಸಾರಿಯಾದ ಆತ್ಮ, ೪೯, ೫೨, ೮೭.

ಪರಮಾನನ್ದಃ—

ಎಲ್ಲಕ್ಕೂ ಹೆಚ್ಚಿನ ಆನಂದದ ಸ್ವರೂಪವಾದ ಪರಮಾತ್ಮ, ೧.

ಪುರುಷಃ, ಪೂರುಷಃ—

ಹೃದಯದಲ್ಲಿರುವ, ಅಥವಾ ಪೂರ್ಣನಾದ ಆತ್ಮ, ೨೯, ೩೦, ೩೫, ೪೦.

ಪುಮಾನ್—

ಪುರುಷ, ಆತ್ಮ, ೫೧ರಿಂದ ೫೭.

ಪ್ರಾರಬ್ಧಮ್*—

ಫಲವನ್ನು ಕೊಟ್ಟಿರುವ ಕರ್ಮ, ೪೯ರಿಂದ ೯೨, ೯೭.

ಬಾಧಃ—

ಹುಸಿಯೆಂಬ ಜ್ಞಾನ, ೫೬.

ಬ್ರಹ್ಮ—

ಪರಮಾತ್ಮ, ೨೫, ೪೫, ೪೯ರಿಂದ ೫೧, ೬೫ರಿಂದ ೬೭, ೧೦೧, ೧೨೩.

ಬ್ರಹ್ಮಚಿನ್ತನಮ್—

ಬ್ರಹ್ಮವನ್ನೇ ಧ್ಯಾನಿಸುತ್ತಿರುವದು, ೧೧೨,

ಬ್ರಹ್ಮವಾದಿನಃ—

ಬ್ರಹ್ಮವನ್ನು ಹೇಳುವವರು, ವೇದಾಂತಿಗಳು, ೧೦೯.

ಬ್ರಹ್ಮವಿತ್—

ವಿವೇಕಿಯಾದ ಸಾಧಕ, ೧೨೮.

ಬ್ರಹ್ಮವೃತ್ತಿಃ, ಬ್ರಹ್ಮಾತ್ಮಿಕಾ ವೃತ್ತಿಃ*

ಬ್ರಹ್ಮವನ್ನೇ ಚಿಂತಿಸುವ ಅಂತಃಕರಣದ ವೃತ್ತಿ, ೧೨೦, ೧೩೦, ೧೩೫, ೧೩೭.

ಬ್ರಹ್ಮಾಣ್ಡೌಘಾಃ*—

ಬ್ರಹ್ಮಾಂಡಗಳ ಸಮೂಹಗಳು, ೬೩.

ಬ್ರಹ್ಮಾದ್ಯಾಃ—

ಬ್ರಹ್ಮವೃತ್ತಿಯನ್ನೇ ಇಟ್ಟುಕೊಂಡಿರುವ ಬ್ರಹ್ಮನೇ ಮುಂತಾದವರು, ೧೩೪.

ಬ್ರಹ್ಮಾದಿಸ್ಥಾವರಾನ್ತಾನಿ—

ಬ್ರಹ್ಮನು ಮೊದಲಾಗಿ ಸ್ಥಾವರಪ್ರಾಣಿಯವರೆಗಿನ ಭೂತಗಳು, ೪.

ಭಾವವೃತ್ತಿಃ*—

ಭಾವರೂಪವಾದ ಪದಾರ್ಥದ ವೃತ್ತಿ, ೧೨೯.

ಭೂತಗಣಾಃ*—

ಪಂಚಭೂತಗಳ ಸಮೂಹ, ೧೩.

ಭ್ರಮರಕೀಟನ್ಯಾಯಃ*—

ಭ್ರಮರದ ಆಂಜಿಕೆಯಿಂದ ಅದನ್ನೇ ಚಿಂತಿಸುತ್ತಾ ಭ್ರಮರನೇ ಆಗುವ ಹುಳು, ೧೪೦.

ಮಾಯಾ—

ಹುಸಿತೋರಿಕೆ, ೪೮.

ಮಿಥ್ಯಾ, ಮೃಷಾ—

ಹುಸಿತೋರಿಕೆ, ೪೩, ೪೬.

ಮುಮುಕ್ಷುಃ—

ಮೋಕ್ಷವನ್ನು ಪಡೆಯಲಿಚ್ಛಿಸುವವ ೯, ೧೩೧.

ಯೋಗಿರಾಟ್*—

ನಿದಿಧ್ಯಾಸನಮಾಡಿ ಸಿದ್ಧನಾದವನು, ೧೨೬.

ರಾಜಯೋಗೀ*—

ನಿದಿಧ್ಯಾಸನವನ್ನು ಮಾಡುವ ಸಾಧಕ, ೧೧೪.

ಲಯಃ—

ಸುಷುಪ್ತ್ಯವಸ್ಥೆ, ೫೭.

ವಾಸನಾತ್ಯಾಗಃ*—

ಶಮವೆಂಬ ಸಾಧನ, ೬.

ವಿಚಾರಃ—

ತತ್ತ್ವವನ್ನು ಮನಸ್ಸಿನಲ್ಲಿ ವಿಮರ್ಶಿಸುವದು, ೧೦೮ರಿಂದ ೧೬.

ವಿಜಾತೀಯತಿರಸ್ಕೃತಿಃ*—

ಬೇರೆಯ ವಿಧದ ಪ್ರತ್ಯಯವನ್ನು ಬರಗೊಡದಿರುವದು, ೧೦೫.

ವೃಕ್ಷವಿಪರ್ಯಾಸಃ*—

ಮರದ ವಿಷಯಕ್ಕೆ ತಪ್ಪುತಿಳಿವಳಿಕೆ. ೭೫.

ವೃತ್ತಿಜ್ಞಾನಮ್*—

ಬ್ರಹ್ಮವೃತ್ತಿಯಿಂದ ಉಂಟಾಗುವ ಸಾಕ್ಷಾತ್ಕಾರವೃತ್ತಿರೂಪವಾದ ಜ್ಞಾನ, ೧೩೭

ವೃತ್ತಿವಿಸ್ಮರಣಮ್*—

ಬ್ರಹ್ಮವೃತ್ತಿಯು ಬಲಿತರೆ ಆಗುವ ಸಮಾಧಿ, ೧೨೪.

ವೃತ್ತಿಹೀನಾಃ*—

ಬ್ರಹ್ಮವೃತ್ತಿಯನ್ನು ಸಂಪಾದಿಸಿಕೊಳ್ಳದ ವೇದಾಂತಿಗಳು, ೧೩೩.

ವ್ಯವಹಾರಃ—

ಜನರ ನಡೆನುಡಿಗಳು; ಇದಕ್ಕೆ ಬ್ರಹ್ಮವೇ ವಿಷಯ, ೬೫.

ವ್ಯವಹಾರಕ್ಷಮಃ*—

ವ್ಯವಹಾರಕ್ಕೆ ತಕ್ಕದ್ದು, ಅರ್ಥಕ್ರಿಯಾಕಾರಿ, ೫೬.

ವ್ಯಾಪ್ಯವ್ಯಾಪಕತಾ*—

ಆತ್ಮನು ವ್ಯಾಪಕನು, ಅನಾತ್ಮವು ವ್ಯಾಪ್ಯ –ಎಂಬ ವಿಭಾಗ, ೪೬.

ಶಬ್ದವಾದಿನಃ*—

ಬರಿಯ ಮಾತನ್ನಾಡುವವರು, ಅನುಭವವಿಲ್ಲದವರು, ೧೩೨.

ಶ್ರೇಯಃ—

ಮೋಕ್ಷ, ೧೦೧.

ಸಂಸಾರಬಂಧಃ—

ಸಂಸಾರದ ಕಟ್ಟು, ೯.

ಸಚ್ಚಿದಾತ್ಮಾ*—

ಇರವು ಅರಿವುಗಳ ಸ್ವರೂಪನಾಗಿರುವ ಆತ್ಮ, ೧೦೧.

ಸಚ್ಚಿದಾನನ್ದಲಕ್ಷಣಃ*—

ಇರವು, ಅರಿವು, ಸುಖ– ಇವುಗಳ ಸ್ವರೂಪನಾದ ಆತ್ಮ, ೨೪.

ಸಜಾತೀಯಪ್ರವಾಹಃ*—

ಅದೇ ಬಗೆಯ ವೃತ್ತಿಯನ್ನು ನಡೆಯಿಸುವದು, ೧೦೫.

ಸದ್ಯೋಮೋಕ್ಷಃ—

ತ್ಯಾಗದಿಂದ ಕೂಡಲೆ ಆಗುವ ಮುಕ್ತಿ, ೧೦೬.

ಸಮಾಧಾನಮ್—

ಚಿತ್ತೈಕಾಗ್ರ್ಯ, ೮.

ಸಮಾಧಿಃ*—

ವೃತ್ತಿವಿಸ್ಮರಣರೂಪವಾದ ಜ್ಞಾನ, ೧೩೪.

ಸರ್ವರೂಪಃ—

ಎಲ್ಲವರ ರೂಪದಲ್ಲಿರುವ ಆತ್ಮ, ೪೦.

ಸರ್ವವೃತ್ತೀನಾಂ ನಿರೋಧಃ*—

ಬ್ರಹ್ಮಭಾವನೆಯಿಂದ ವೃತ್ತಿಗಳನ್ನೆಲ್ಲ ತಡೆಗಟ್ಟುವದು, ೧೧೮.

ಸರ್ವಾತ್ಮಾ—

ಎಲ್ಲಕ್ಕೂ ಆತ್ಮನಾಗಿರುವ ಪರಮಾತ್ಮ,

ಸಲ್ಲಕ್ಷ್ಯಮ್*—

ಉತ್ತಮವಾದ ಧ್ಯೇಯ, ೮.

ಸ್ಥಾವರಜಙ್ಗಮಮ್—

ಚೇತನಾಚೇತನರೂಪವಾದ ಜಗತ್ತು, ೮೮.

ಸ್ವಪ್ನದೇಹಃ—

ಕನಸಿನಲ್ಲಿ ಕಾಣಬರುವ ತನ್ನ ದೇಹ, ೯೩.

ಸ್ವವರ್ಣಾಶ್ರಮಧರ್ಮಃ—

ತನ್ನ ವರ್ಣಕ್ಕೂ ಆಶ್ರಮಕ್ಕೂ ತಕ್ಕ ಧರ್ಮ, ೩.


ॐ

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಸಂಖ್ಯೆ ೫೨

ಶ್ರೀ ಶಂಕರಾಚಾರ್ಯವಿರಚಿತ

ಅದ್ವೈತಾನುಭೂತಿ



ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು:
ಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರು

ಅಧ್ಯಾತ್ಮಗ್ರಂಥಾವಳಿಯ ಕ್ರಮಾಂಕ ೨೨

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೧೯೪೯

ಮೊದಲನೆಯ ಸಂಸ್ಕರಣ ೧೯೪೯
(೧೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಕಾರರು:
ಸೈ. ನರಸಪ್ಪ
ಅಧ್ಯಾತ್ಮಪ್ರಕಾಶ ಮುದ್ರಣಾಲಯ,
ಹೊಳಿನರಸೀಪುರ.

ಪೀಠಿಕೆ

—★—

ಅದ್ವೈತಾನುಭೂತಿಯು ಅದ್ವೈತತತ್ತ್ವವನ್ನು ಅನುಸಂಧಾನಮಾಡ ಬೇಕೆನ್ನುವವರಿಗೆ ಒಂದು ಒಳ್ಳೆಯ ಸಾಧನವು. ಭಾಷೆಯು ಲಲಿತವಾಗಿಯೂ ಗ್ರಂಥಪರಿಣಾಮವು ಮಿತವಾಗಿಯೂ ಇರುವದು ಇದನ್ನು ಗಟ್ಟಿಮಾಡಿಕೊಂಡು ಹೇಳಿಕೊಳ್ಳುವವರಿಗೂ ಅನುಕೂಲವಾಗಿರುತ್ತದೆ.

ಇಂಥ ಪ್ರಕರಣಗಳಿಗೆ ಗ್ರಂಥಕರ್ತೃಗಳ ಹೆಸರಿನಿಂದ ಬೆಲೆಯನ್ನು ಕಟ್ಟ ತಕ್ಕದ್ದು ಸರಿಯಲ್ಲ. ಆದರೆ ಶ್ರೀ ಶಂಕರಾಚಾರ್ಯರವರ ಹೆಸರಿನಲ್ಲಿ ಪ್ರಖ್ಯಾತ ವಾಗಿರುವದು ಈ ಗ್ರಂಥದ ಉತ್ಕೃಷ್ಟತೆಗೆ ಒಂದು ಗುರುತೆಂದು ಭಾವಿಸಬಹು ದಾದರೂ ಭಾಷ್ಯಕಾರರ ಪರಮಸಿದ್ಧಾಂತವನ್ನು ಪ್ರಸ್ಥಾನತ್ರಯಭಾಷ್ಯಗಳಿಂದ ನಿಶ್ಚಯಿಸಬೇಕೇ ಹೊರತು ಯಾವದಾದರೊಂದು ಪ್ರಕರಣದ ಆಧಾರದಿಂದ ಮಾರ್ಪಡಿಸತಕ್ಕದ್ದಲ್ಲ ಎಂಬ ಅಭಿಪ್ರಾಯದವರ ಪ್ರಯೋಜನಕ್ಕಾಗಿ ಕೆಲವು ವಾಕ್ಯಗಳನ್ನು ಇಲ್ಲಿ ಬರೆಯುವೆವು.

ಈ ಪ್ರಕರಣದಲ್ಲಿ ಮೊದಲಿಂದ ಕೊನೆಯವರೆಗೂ ದೃಷ್ಟಾಂತಗಳ ಬಲ ದಿಂದ ಆತ್ಮನ ಏಕತ್ವ, ಅಸಂಗತ್ವ, ನಿರ್ವಿಕಾರತ್ವಗಳನ್ನು ತೋರಿಸಿರುತ್ತದೆ ; ಅವಿದ್ಯಾಯೋಗದಿಂದ ಆತ್ಮನು ಜೀವೇಶ್ವರಾದಿಭೇದಗಳುಳ್ಳ ಪ್ರಪಂಚದ ಆಕಾರ ದಿಂದ ತೋರುತ್ತಿರುವನೆಂದೂ ಅವನಲ್ಲಿ ಗುಣತ್ರಯ, ದೇಹತ್ರಯ, ಅವಸ್ಥಾ ತ್ರಯ – ಮುಂತಾದವುಗಳೆಲ್ಲವೂ ಅಧ್ಯಸ್ತವಾಗಿರುವವೆಂದೂ ತೋರಿಸಿಕೊಟ್ಟಿರು ತ್ತದೆ. ಈ ದೃಷ್ಟಾಂತಗಳನ್ನು ಉಪಯೋಗಿಸಿರುವ ರೀತಿಯೂ ಇಲ್ಲಿರುವ ಕೆಲವು ಪಾರಿಭಾಷಿಕಶಬ್ದಗಳ ಮತ್ತು ಇತರ ಶಬ್ದಗಳ ಪ್ರಯೋಗಕ್ರಮವೂ ಭಾಷ್ಯಗಳಲ್ಲಿರುವದಕ್ಕಿಂತ ಭಿನ್ನವಾಗಿರುತ್ತದೆ. ಇದನ್ನು ಟಿಪ್ಪಣಿಯಲ್ಲಿಯೂ ಶಬ್ದಾನುಕ್ರಮಣಿಕೆಯಲ್ಲಿಯೂ ತಿಳಿಸಿರುತ್ತದೆ. ಅಪರೋಕ್ಷಾನುಭೂತಿಯ ಗ್ರಂಥಗಳಲ್ಲಿರುವ ಪ್ರತಿಪಾದನಕ್ರಮವನ್ನು ಈ ಗ್ರಂಥದ ಕ್ರಮಕ್ಕೆ ಹೋಲಿಸು ವದರಿಂದ ಕೆಲವು ಉಪಸಿದ್ಧಾಂತಗಳು ಹೊರಡಬಹುದು. ಇದನ್ನೆಲ್ಲ ತತ್ತ್ವ ಶೋಧಕರಾದ ವಿದ್ವಾಂಸರೇ ನಿರ್ಣಯಿಸಬೇಕಾಗಿದೆ.

ಇದು ಹೇಗಾದರೂ ಇರಲಿ. ಅದ್ವೈತವೇದಾಂತವು ಕಾಲಾಂತರದಲ್ಲಿ ಲೋಕಾಂತರದಲ್ಲಿ ಆಗುವ ಪರೋಕ್ಷಫಲವನ್ನು ಹೇಳದೆ ಅಧಿಕಾರಿಗಳು ಈ ಜನ್ಮದಲ್ಲಿಯೇ ಅನುಭವಕ್ಕೆ ತಂದುಕೊಳ್ಳಬಹುದಾದ ಪರಮಾರ್ಥತತ್ತ್ವವನ್ನು

ತಿಳಿಸುವದೆಂಬುದನ್ನೂ ಸರ್ವಸಾಕ್ಷಿಯಾದ ಆತ್ಮನಲ್ಲಿಯೇ ಪ್ರಪಂಚವೆಲ್ಲವೂ ಅಧ್ಯಸ್ತವಾಗಿರುವದೆಂಬುದನ್ನೂ ಮನಗಾಣುವದರಿಂದ ಸಂಸಾರದ ಅಂಜಿಕೆಯೆಲ್ಲವೂ ತೊಲಗುವದೆಂಬುದನ್ನೂ ಈಪ್ರಕರಣದಲ್ಲಿ ಸ್ಪಷ್ಟವಾಗಿ ತಿಳಿಸಿರುವದರಿಂದ ಇದಕ್ಕೆ "ಅದ್ವೈತಾನುಭೂತಿ" ಎಂಬ ಹೆಸರು ಅನ್ವರ್ಥವಾಗಿರುತ್ತದೆ ಎಂಬುದು ನಿಸ್ಸಂಶಯ.

ಈ ಗ್ರಂಥದ ಅನುವಾದವು ಮುಮುಕ್ಷುಗಳಿಗೆ ಅದ್ವೈತಾನುಸಂಧಾನಕ್ಕೆ ಸ್ವಲ್ಪಮಟ್ಟಿಗಾದರೂ ಸಹಾಯವನ್ನುಂಟುಮಾಡಿದರೆ ನಮ್ಮ ಶ್ರಮವು ಸಾರ್ಥಕವಾಗುವದು.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ವಿರೋಧಿಸಂವತ್ಸರ,
ಕಾರ್ತಿಕ ಶು. ೧೫

ಅನುವಾದಕ

ವಿಷಯಾನುಕ್ರಮಣಿಕೆ

ಚಂದ್ರದೃಷ್ಟಾಂತದಿಂದ ಏಕತ್ವ	....	೧
ಆಕಾಶದೃಷ್ಟಾಂತದಿಂದ ಆತ್ಮೈಕತ್ವ	....	೩
ಆಲಿಕಲ್ಲಿನ ದೃಷ್ಟಾಂತದಿಂದ ಆತ್ಮೈಕತ್ವ	....	೪
ನೀರುಗುಳ್ಳೆಯ ದೃಷ್ಟಾಂತದಿಂದ ಆತ್ಮೈಕತ್ವ	....	೪
ಹಾಲಿನ ಪೊರೆಯ ದೃಷ್ಟಾಂತದಿಂದ ಆತ್ಮೈಕ್ಯ	....	೫
ಉಪ್ಪಿನ ದೃಷ್ಟಾಂತದಿಂದ ಅಸಂಗತ್ವ	....	೫
ಬೆಂಕಿಯ ದೃಷ್ಟಾಂತದಿಂದ ಆತ್ಮಾನಾತ್ಮವಿವೇಕ	....	೬
ಸೂರ್ಯನ ದೃಷ್ಟಾಂತದಿಂದ ಆತ್ಮಾನಾತ್ಮವಿವೇಕ	....	೬
ಬೆಲ್ಲದ ದೃಷ್ಟಾಂತದಿಂದ ಆತ್ಮನ ಆನಂದತ್ವ	....	೭
ಬೆಂಕಿಯ ದೃಷ್ಟಾಂತದಿಂದ ಸ್ಫೂರ್ತಿರೂಪತ್ವ	....	೭
ಆಕಾಶದೃಷ್ಟಾಂತದಿಂದ ಆತ್ಮನಿಗೆ ಏಕತ್ವ, ಅಸಂಗತ್ವ, ಅವಿಕಾರಿತ್ವ	....	೮
ನಾರಿನ ದೃಷ್ಟಾಂತದಿಂದ ಏಕತ್ವ, ಅಸಂಗತ್ವ, ಅವಿಕಾರತ್ವ	....	೮
ಸೂರ್ಯಪ್ರಕಾಶದೃಷ್ಟಾಂತದಿಂದ ಏಕತ್ವಾದಿಗಳು	....	೯
ಆತ್ಮನು ದೇಹಾದಿಗಳಿಂದ ವಿಲಕ್ಷಣನು	....	೧೦
ಆತ್ಮನ ನಿರ್ವಿಕಾರತ್ವ	....	೧೧
ಆತ್ಮನು ದೇಹವಿಲಕ್ಷಣನು	....	೧೨
ಆತ್ಮನಿಗೆ ನಿಜವಾಗಿ ಭೋಕ್ತೃತ್ವವಿಲ್ಲ	....	೧೩
ಚಿದಾಭಾಸವೂ ಆತ್ಮನೂ	....	೧೪
ಆತ್ಮನು ಪ್ರಕಾಶ್ಯವಾದ ಚಿದಾಭಾಸಾದಿಗಳಿಂದಲೂ ವಿಲಕ್ಷಣನು	....	೧೬
ಆತ್ಮನಲ್ಲಿ ತೋರುವ ಭೇದವು ಹುಸಿ	....	೧೭
ಜೀವೇಶ್ವರಭೇದಕ್ಕೆ ಕಾರಣ	....	೧೯
ಜೀವೇಶ್ವರೈಕ್ಯಜ್ಞಾನದ ಸ್ತುತಿ	....	೧೯
ಆತ್ಮಜ್ಞಾನಿಗೆ ಸಂಸಾರಭಯವಿಲ್ಲ	....	೨೦
ಉಪಸಂಹಾರ	....	೨೦

ಅದ್ವೈತಾನುಭೂತಿಯ ಸಾರ	....	೨೨
ಪರಿಶಿಷ್ಟ	....	೨೪
ಶ್ಲೋಕಗಳ ವರ್ಣಾನುಕ್ರಮಣಿಕೆ	....	೨೫
ತಬ್ದಾನುಕ್ರಮಣಿಕೆ	....	೨೭

ಸಂಕೇತಗಳ ವಿವರಣೆ

ಸಂಕೇತ	ವಿವರಣೆ
ಆ॥ ಪಾಠ.	ಆಷ್ಟೇಕರ್‌ಕಂಪೆನಿಯಲ್ಲಿ ಅಚ್ಚಾಗಿರುವ ಶ್ರೀ ಶಂಕರಾಚಾರ್ಯವಿರಚಿತ ಪ್ರಕರಣಗ್ರಂಥಸಂಗ್ರಹದ ಪಾಠ.
ವಾ॥ ಪಾಠ.	ವಾಣೀವಿಲಾಸ ಮುದ್ರಣಾಲಯದಲ್ಲಿ ಅಚ್ಚಾಗಿರುವ ಶಂಕರಾಚಾರ್ಯ ಕೃತಿಗಳಲ್ಲಿ ಹದಿನಾರನೆಯ ಸಂಪುಟದಲ್ಲಿರುವ ಪಾಠ.

ಉಪನಿಷತ್ತುಗಳನ್ನು ಮೊದಲನೆಯ ಅಕ್ಷರದಿಂದ ತಿಳಿಸಿದೆ.

———:o:———

॥ ಓಂ ॥

ಅದ್ವೈತಾನುಭೂತಿ

ಅಹಮಾನನ್ದಸತ್ಯಾದಿಲಕ್ಷಣಃ[1] ಕೇವಲಃ ಶಿವಃ ।
ಸದಾನನ್ದರೂಪಂ ಯತ್ ತೇನಾಹಮಚಲೋಽದ್ವಯಃ ॥ ೧ ॥

೧. ನಾನು ಆನಂದ, ಸತ್ಯ– ಮುಂತಾದ ಲಕ್ಷಣವುಳ್ಳ ಕೇವಲನಾದ ಮಂಗಲರೂಪನಾಗಿರುತ್ತೇನೆ. ಸತ್ತು[2] ಆನಂದಾದಿರೂಪವಾಗಿದೆಯಷ್ಟೆ ; ಅದರಿಂದ ನಾನು ಅಚಲನೂ ಅದ್ವಿತೀಯನೂ ಆಗಿರುತ್ತೇನೆ.

ಚಂದ್ರದೃಷ್ಟಾಂತದಿಂದ ಏಕತ್ವ

ಅಕ್ಷಿದೋಷಾದ್ ಯಥೈಕೋಽಪಿ ದ್ವಯವದ್ ಭಾತಿ ಚನ್ದ್ರಮಾಃ ।
ಏಕೋಽಸ್ಯಾತ್ಮಾ ತಥಾ ಭಾತಿ ದ್ವಯವನ್ಮಾಯಯಾ ಮೃಷಾ ॥ ೨ ॥

೨. ಚಂದ್ರನು ಒಬ್ಬನೇ ಆಗಿದ್ದರೂ ಕಣ್ಣಿನ ದೋಷದಿಂದ ಇಬ್ಬರಂತೆ ಕಾಣುತ್ತಾನೆ. ಹಾಗೆಯೇ ಆತ್ಮನು ಒಬ್ಬನೇ ಆಗಿದ್ದರೂ ಮಾಯೆಯಿಂದ[3] ಸುಳ್ಳುಸುಳ್ಳಾಗಿಯೇ ದ್ವೈತವಾಗಿ ಕಾಣಿಸುತ್ತಾನೆ.

ಅಕ್ಷಿದೋಷವಿಹೀನಾನಾಮೇಕ ಏವ ಯಥಾ ಶಶೀ ।
ಮಾಯಾದೋಷವಿಹೀನಾನಾಮಾತ್ಮೈಕಸ್ತಥಾ ಸದಾ ॥ ೩ ॥

೩. ಕಣ್ಣಿನದೋಷವಿಲ್ಲದವರಿಗೆ ಚಂದ್ರನು ಹೇಗೆ ಒಬ್ಬನೇ ಆಗಿರುವನೋ ಹಾಗೆಯೇ ಮಾಯಾದೋಷವಿಲ್ಲದವನಿಗೆ ಯಾವಾಗಲೂ ಆತ್ಮನು ಒಬ್ಬನೇ.

---

1. 'ಆನಂದಸತ್ಯಾದಿ' ಎಂಬ ಆನುಕ್ರಮದಲ್ಲಿ ಭಾಷ್ಯದಲ್ಲಿ ಶಬ್ದಪ್ರಯೋಗವು ಕಾಣಿಸುವದಿಲ್ಲ.
2. ಜಗತ್ಕಾರಣವಾಗಿರುವ ಬ್ರಹ್ಮವು.
3. ಅವಿದ್ಯೆಯಿಂದ ಎಂದರ್ಥ.

ದ್ವಿತ್ವಂ ಭಾತ್ಯಕ್ಷಿದೋಷೇಣ ಚನ್ದ್ರೇ ಸ್ವೇ ಮಾಯಯಾ ಜಗತ್ ।
ದ್ವಿತ್ವಂ ಮೃಷಾ ಯಥಾ ಚನ್ದ್ರೇ ಮೃಷಾ ದ್ವೈತಂ ತಥಾತ್ಮನಿ ॥ ೪ ॥

೪. ಕಣ್ಣಿನ ದೋಷದಿಂದ ಚಂದ್ರನಲ್ಲಿ ಹೇಗೆ ದ್ವಿತ್ವವು ಕಾಣಿಸುವದೋ ಹಾಗೆ ಆತ್ಮನಲ್ಲಿ ಮಾಯೆಯಿಂದ ಜಗತ್ತು (ಕಾಣಿಸುತ್ತದೆ). ಚಂದ್ರನಲ್ಲಿ ಹೇಗೆ ದ್ವಿತ್ವವು ಸುಳ್ಳಾಗಿಯೇ ಕಾಣಿಸುವದೋ ಹಾಗೆ ಆತ್ಮನಲ್ಲಿ ದ್ವೈತವು ಸುಳ್ಳಾಗಿಯೇ ಕಾಣಿಸುತ್ತದೆ.

ಆಕಾಶದೃಷ್ಟಾಂತದಿಂದ ಆತ್ಮೈಕತ್ವ

ಆತ್ಮನಃ ಕಾರ್ಯಮಾಕಾಶೋ ವಿನಾತ್ಮಾನಂ ನ ಸಂಭವೇತ್ ।
ಕಾರ್ಯಸ್ಯ ಪೂರ್ಣತಾ ಸಿದ್ಧಾ ಕಂ ಪುನಃ ಪೂರ್ಣತಾತ್ಮನಃ ॥ ೫ ॥

೫ ಆಕಾಶವು ಆತ್ಮನ ಕಾರ್ಯವು.[1] ಆತ್ಮನಿಲ್ಲದೆ ಅದು ಇರಲೇ ಆರದು.[2] ಕಾರ್ಯವಾದ (ಆಕಾಶವು) ಪೂರ್ಣವೆಂದು ಗೊತ್ತೇ ಇದೆ.[3] ಹೀಗಿರುವಲ್ಲಿ ಆತ್ಮನು ಪೂರ್ಣನೆಂಬುದನ್ನು ಹೇಳುವದೇನಿದೆ?[4]

ಕಾರ್ಯಭೂತೋ ಯಥಾಕಾಶ ಏಕ ಏವ ನ ಹಿ ದ್ವಿಧಾ ।
ಹೇತುಭೂತಸ್ತಥಾತ್ಮಾಯಮೇಕ ಏವ ವಿಜಾನತಃ ॥ ೬ ॥

೬. ಕಾರ್ಯವಾಗಿರುವ ಆಕಾಶವು ಹೇಗೆ ಒಂದೇ ಹೊರತು ಎರಡು ಬಗೆಯಲ್ಲವೋ ಹಾಗೆ ಕಾರಣವಾಗಿರುವ ಈ ಆತ್ಮನೂ ಅರಿತವನಿಗೆ ಒಬ್ಬನೇ.

ಏಕೋಽಪಿ ದ್ವಯವದ್ ಭಾತಿ ಯಥಾಕಾಶ ಉಪಾಧಿತಃ ।
ಏಕೋಽಪಿ ದ್ವಯವತ್ ಪೂರ್ಣಸ್ತಥಾತ್ಮಾಯಮುಪಾಧಿತಃ ॥ ೭ ॥

೭. ಹೇಗೆ ಆಕಾಶವು ಒಂದಾದರೂ ಉಪಾಧಿಯಿಂದ ಎರಡರಂತೆ ಕಾಣಿಸುತ್ತದೆಯೋ ಹಾಗೆ ಈ ಪೂರ್ಣನಾದ ಆತ್ಮನೂ ಉಪಾಧಿಯಿಂದ ಎರಡಾಗಿ[5] ಕಾಣಿಸುವನು.

---

1. ತೈ. ೨-೧ ಎಂಬ ಶ್ರುತಿಪ್ರಮಾಣದಿಂದ ಇದು ಸಿದ್ಧವಾಗುತ್ತದೆ.
2. ಆತ್ಮಚೈತನ್ಯದಿಂದಲೇ ಆಕಾಶಸಿದ್ಧಿ. ಇದು ಯುಕ್ತಿ.
3. ಮಿಕ್ಕ ಭೂತಭೌತಿಕಗಳೆಲ್ಲವೂ ಆಕಾಶದಿಂದ ಪೂರ್ಣವಾಗಿರುತ್ತವೆ.
4. ಆಕಾಶಕ್ಕೂ ಕಾರಣನಾದ ಆತ್ಮನು ಪೂರ್ಣನೆಂಬುದು ತಾನೇ ಸಿದ್ಧವಾಗುತ್ತದೆ.
5. ಅನೇಕವಾಗಿ ಎಂದರ್ಥ.

ಕಾರಣೋಪಾಧಿಚೈತನ್ಯಂ ಕಾರ್ಯಸಂಸ್ಥಚ್ಚಿತೋಽಧಿಕಮ್ ।
ನ ಘಟಾಭ್ರಾನ್ಮೃದಾಕಾಶಃ ಕುತ್ರಚಿನ್ನಾಧಿಕೋ ಭವೇತ್ ॥ ೮ ॥

೮. ಕಾರಣವೆಂಬ ಉಪಾಧಿಯುಳ್ಳ ಚೈತನ್ಯವು ಕಾರ್ಯದಲ್ಲಿರುವ ಚೈತನ್ಯಕ್ಕಿಂತ ಹೆಚ್ಚಲ್ಲ.[1] ಗಡಿಗೆಯ ಆಕಾಶಕ್ಕಿಂತ ಮಣ್ಣಿನ ಆಕಾಶವು ಹೆಚ್ಚಾಗಲಾರದಷ್ಟೆ?[2]

ನಿರ್ಗತೋಪಾಧಿರಾಕಾಶ ಏಕ ಏವ ಯಥಾ ಭವೇತ್ ।
ಏಕ ಏವ ತಥಾತ್ಮಾಯಂ ನಿರ್ಗತೋಪಾಧಿಕಃ ಸದಾ ॥ ೯ ॥

೯. ಯಾವ ಉಪಾಧಿಯೂ ಇಲ್ಲದ ಆಕಾಶವು ಹೇಗೆ ಒಂದೇ ಆಗಿರುವದೋ ಹಾಗೆ ಯಾವ ಉಪಾಧಿಯೂ ಇಲ್ಲದ ಆತ್ಮನು ಯಾವಾಗಲೂ ಒಬ್ಬನೇ.[3]

ಆಕಾಶಾದನ್ಯ ಆಕಾಶ ಆಕಾಶಸ್ಯ ಯಥಾ ನ ಹಿ ।
ಏಕತ್ವಾದಾತ್ಮನೋ ನಾನ್ಯ ಆತ್ಮಾ ಸಿಧ್ಯತಿ ಚಾತ್ಮನಃ ॥ ೧೦ ॥

೧೦. ಆಕಾಶಕ್ಕೆ ಆಕಾಶಕ್ಕಿಂತ ಬೇರೆಯಾದ ಆಕಾಶವು ಹೇಗೆ ಇರುವದಿಲ್ಲವೋ[4] ಹಾಗೆಯೇ ಆತ್ಮನು ಒಬ್ಬನೇ ಆಗಿರುವದರಿಂದ ಆತ್ಮನಿಗೆ ಮತ್ತೊಬ್ಬ ಆತ್ಮನು ಸಿದ್ಧಿಸುವದಿಲ್ಲ.[5]

---

1. 'ಅದೂ ಪೂರ್ಣವು ಇದೂ ಪೂರ್ಣವು' ಎಂಬ ಬೃಹದಾರಣ್ಯಕಶ್ರುತಿಯ ಅಭಿಪ್ರಾಯವಿದು.

2. ಗಡಿಗೆಯು ಮಣ್ಣೇ ಆಗಿರುವದರಿಂದ ಗಡಿಗೆಯ ಆಕಾಶವೆಂದರೆ ಮಣ್ಣಿನ ಆಕಾಶವೇ ಆಗಿರುತ್ತದೆ. ಕಾರಣವು ವ್ಯಾಪಕವೆಂಬ ಕಾರಣದಿಂದ ಕಾರ್ಯಚೈತನ್ಯಕ್ಕಿಂತ ಕಾರಣಚೈತನ್ಯವು ಹೆಚ್ಚು ಎನ್ನುವದಕ್ಕೆ ಬರುವದಿಲ್ಲವೆಂದು ಭಾವ.

3. ಉಪಾಧಿಗಳಿಂದ ಅನೇಕವಾಗಿ ತೋರುತ್ತಿರುವಾಗಲೂ ಒಬ್ಬನೇ ಎಂದರ್ಥ.

4. ಆಕಾಶದಲ್ಲಿ ಎಲ್ಲವೂ ಇರುವಂತೆ ಆಕಾಶಕ್ಕೆ ಮತ್ತೊಂದು ಆಕಾಶವನ್ನು ಆಧಾರವಾಗಿ ಕಲ್ಪಿಸುವದಕ್ಕೆ ಬರುವದಿಲ್ಲ.

5. ಆಕಾಶವು ಒಂದೇ ಆದ್ದರಿಂದ ಅದಕ್ಕೆ ಆಧಾರವಾದ ಮತ್ತೊಂದು ಆಕಾಶವಿಲ್ಲದಿರುವಂತೆ ಆತ್ಮನು ಒಬ್ಬನೇ ಆದ್ದರಿಂದ ಅವನಿಗೆ ಮತ್ತೊಬ್ಬ ಆತ್ಮನು ಇಲ್ಲವದಿಲ್ಲ. ಆತ್ಮನೆಂದರೆ ಸ್ವರೂಪವಾದ ತಿರುಳು; ಸ್ವರೂಪವು ಒಂದಾದೀತೇ ಹೊರತು ಎರಡಾಗಲಾರದು.

ಆಲಿಕಲ್ಲಿನ ದೃಷ್ಟಾಂತದಿಂದ ಆತ್ಮೈಕತ್ವ

ಮೇಘಯೋಗಾದ್ ಯಥಾ ನೀರಂ ಕರಕಾಕಾರತಾ ಮಿಯಾತ್ |
ಮಾಯಾಯೋಗಾತ್ ತಥೈವಾತ್ಮಾ ಪ್ರಪಞ್ಚಾಕಾರತಾಮಿಯಾತ್ ॥

೧೧. ಮೋಡದ ಸಂಬಂಧದಿಂದ ಹೇಗೆ ನೀರು ಆಲಿಕಲ್ಲಿನ ಆಕಾರವನ್ನು ಹೊಂದುವದೋ ಹಾಗೆಯೇ ಆತ್ಮನು ಮಾಯೆಯ ಸಂಬಂಧದಿಂದ ಪ್ರಪಂಚದ ಆಕಾರವನ್ನು ಹೊಂದುತ್ತಾನೆ.[1]

ವಹ್ನೌ ತಪ್ತ ಇವಾಭಾತಿ ನೀರಮೇವಾಭ್ರಯೋಗತಃ |
ವಹ್ನೌ ತಪ್ತವಿನಾಶೇನ ನೀರನಾಶೋ ಯಥಾ ನ ಹಿ ॥ ೧೨ ॥
ಆತ್ಮೈವಾಯಂ ತಥಾ ಭಾತಿ ಮಾಯಾಯೋಗಾತ್ ಪ್ರಪಞ್ಚವತ್ |
ಪ್ರಪಞ್ಚಸ್ಯ ವಿನಾಶೇನ ಸ್ವಾತ್ಮನಾಶೋ ನ ಹಿ ಕ್ವಚಿತ್ ॥ ೧೩ ॥

೧೨–೧೩. ಹೇಗೆ ನೀರೇ ಮೋಡದ ಸಂಬಂಧದಿಂದ ಆಲಿಕಲ್ಲಿನಂತೆ ಕಾಣುತ್ತದೆಯೋ, ಆಲಿಕಲ್ಲಿನ ನಾಶದಿಂದ ಹೇಗೆ ನೀರಿಗೆ ನಾಶವಿಲ್ಲವೋ, ಹಾಗೆ ಈ ಆತ್ಮನೇ ಮಾಯೆಯ ಸಂಬಂಧದಿಂದ ಪ್ರಪಂಚದಂತೆ ಕಾಣಿಸುತ್ತಾನೆ. ಪ್ರಪಂಚದ ವಿನಾಶದಿಂದ ಆತ್ಮನಿಗೆ ಎಂದಿಗೂ ನಾಶವಿಲ್ಲ.[2]

ನೀರುಗುಳ್ಳೆಯ ದೃಷ್ಟಾಂತದಿಂದ ಆತ್ಮೈಕತ್ವ

ಜಲಾದನ್ಯ ಇವಾಭಾತಿ ಜಲೋತ್ಥೋ ಬುದ್ಬುದೋ ಯಥಾ |
ತಥಾತ್ಮನಃ ಪೃಥಗಿವ ಪ್ರಪಞ್ಚೋಽಯಮನೇಕಧಾ ॥ ೧೪ ॥

೧೪. ನೀರಿನಿಂದ ಎದ್ದ ಗುಳ್ಳೆಯು ಹೇಗೆ ನೀರಿಗಿಂತ ಬೇರೆಯಾಗಿ ಕಾಣುವದೋ ಹಾಗೆ ಅನೇಕರೂಪವಾಗಿರುವ ಈ ಪ್ರಪಂಚವು ಆತ್ಮನಿಗಿಂತ ಬೇರೆಯಾಗಿ ಕಾಣುತ್ತದೆ.

ಯಥಾ ಬುದ್ಬುದನಾಶೇನ ಜಲನಾಶೋ ನ ಕರ್ಹಿಚಿತ್ |
ತಥಾ ಪ್ರಪಞ್ಚನಾಶೇನ ನಾಶಃ ಸ್ಯಾದಾತ್ಮನೋ ನ ಹಿ ॥ ೧೫ ॥

1. ದೃಷ್ಟಾಂತದಲ್ಲಿ ನೀರು ಆಲಿಕಲ್ಲಾಗಿ ಪರಿಣಮಿಸುವದೆಂದು ವ್ಯವಹಾರದೃಷ್ಟಿಯಿಂದ ಹೇಳಬಹುದಾದರೂ ಆತ್ಮನಿಗೆ ಮಾಯೆಯ ಸಂಬಂಧದಿಂದ ಯಾವ ಪರಿಣಾಮವೂ ಆಗುವಂತಿಲ್ಲ; ಏಕೆಂದರೆ ಮಾಯೆಯು ಹುಸಿಯಾಗಿರುತ್ತದೆ.

2. ದೃಷ್ಟಾಂತದಲ್ಲಿ ಅವಸ್ಥಾಂತರವನ್ನಾದರೂ ಹೇಳಬಹುದು; ದಾರ್ಷ್ಟಾಂತಿಕದಲ್ಲಿ ಅದೂ ಇಲ್ಲ.

೧೫. ಹೇಗೆ ನೀರುಗುಳ್ಳೆಯ ನಾಶವಾದರೆ ಎಂದಿಗೂ ನೀರು ನಾಶವಾಗುವದಿಲ್ಲವೋ ಹಾಗೆಯೇ ಪ್ರಪಂಚದ ನಾಶದಿಂದ ಆತ್ಮನಿಗೆ ನಾಶವಿಲ್ಲ.

ಹಾವಿನ ಪೊರೆಯ ದೃಷ್ಟಾಂತದಿಂದ ಆತ್ಮೈಕ್ಯ

ಅಹಿನಿರ್ಲ್ವಯನೀಜಾತಃ ಶುಚ್ಯಾದಿರ್ನಾಹಿವಾಪ್ನುಯಾತ್ ।
ತಥಾ ಸ್ಥೂಲಾದಿಸಂಭೂತಃ ಶುಚ್ಯಾದಿರ್ನಾಪ್ನುಯಾದಿಮಮ್ ॥ ೧೬ ॥

೧೬. ಹಾವಿನ ಪೊರೆಯಿಂದಾದ ಶುಚಿತ್ವ ಮುಂತಾದದ್ದು[1] ಹಾವಿಗೆ ಸೇರಲಾರದು. ಅದರಂತೆ ಸ್ಥೂಲ(ದೇಹ)ವೇ ಮುಂತಾದವುಗಳಿಂದಾದ ಶುಚಿತ್ವವೇ ಮುಂತಾದದ್ದು ಈ (ಆತ್ಮನಿಗೆ) ಸೇರಲಾರದು.

ತ್ಯಕ್ತಾಂ ತ್ವಚಮಹಿರ್ಯದ್ವದಾತ್ಮತ್ವೇನ ನ ಮನ್ಯತೇ ।
ಆತ್ಮತ್ವೇನ ತಥಾ ಜ್ಞಾನೀ ತ್ಯಕ್ತದೇಹತ್ರಯಂ ತಥಾ ॥ ೧೭ ॥

೧೭. ಬಿಟ್ಟ ಪೊರೆಯನ್ನು ಹಾವು ಹೇಗೆ ತಾನೆಂದು ಎಣಿಸದೆ ಇರುವದೋ ಹಾಗೆ ಜ್ಞಾನಿಯು (ಜ್ಞಾನದಿಂದ) ಬಿಟ್ಟ ದೇಹತ್ರಯವನ್ನು[2] ತಾನೆಂದು ಎಣಿಸದೆ ಇರುವನು.

ಅಹಿನಿರ್ಲ್ವಯನೀನಾಶಾದಹೇರ್ನಾಶೋ ಯಥಾ ನ ಹಿ ।
ದೇಹತ್ರಯವಿನಾಶೇನ ನಾತ್ಮನಾಶಸ್ತಥಾ ಭವೇತ್ ॥ ೧೮ ॥

೧೮. ಹಾವಿನ ಪೊರೆಯು ನಾಶವಾದ್ದರಿಂದ ಹಾವಿನ ನಾಶವು ಹೇಗೆ ಆಗುವದಿಲ್ಲವೋ ಹಾಗೆ ದೇಹತ್ರಯದ ನಾಶದಿಂದ ಆತ್ಮನಾಶವುಂಟಾಗಲಾರದು.

ಉಪ್ಪಿನ ದೃಷ್ಟಾಂತದಿಂದ ಅಸಂಗತ್ವ

ತಕ್ರಾದಿರ್ಲವಣೋಪೇತಮಜ್ಞೈರ್ಲವಣವದ್ ಯಥಾ ।
ಆತ್ಮಾ ಸ್ಥೂಲಾದಿ ಸಂಯುಕ್ತೋ ದೂಷ್ಯತೇ ಸ್ಥೂಲಕಾದಿವತ್ ॥ ೧೯ ॥

---

1. ಶುಚಿತ್ವವೂ ಅಶುಚಿತ್ವವೂ. ಇಲ್ಲಿ ಬಿಟ್ಟ ಪೊರೆಯನ್ನು ದೃಷ್ಟಾಂತವಾಗಿ ಕೊಟ್ಟದೆ.

2. ಸ್ಥೂಲ, ಸೂಕ್ಷ್ಮ, ಕಾರಣ- ಎಂಬ ದೇಹತ್ರಯವನ್ನು ಎಂದರ್ಥ. ಕಾರಣ ಶರೀರವನ್ನು ಈಶಾವಾಸ್ಯ ಹೊರತು ಮತ್ತೆ ಯಾವ ಭಾಷ್ಯದಲ್ಲಿಯೂ ಹೇಳಿಲ್ಲ.

೧೯. ಹೇಗೆ ಉಪ್ಪಿನಿಂದ ಕೂಡಿದ ಮಜ್ಜಿಗೆ ಮುಂತಾದದ್ದನ್ನು ಅಜ್ಞರು ಉಪ್ಪಾಗಿರುವದೆಂದು ಮೂಷಿಸುವರೋ[1] ಹಾಗೆ (ಸ್ಥೂಲಾದಿಶರೀರಗಳಿಂದ) ಕೂಡಿರುವ ಆತ್ಮನನ್ನು ಸ್ಥೂಲ(ಶರೀರ)ನೇ ಮುಂತಾದವೆಂದೇ ಮೂಷಿಸುವರು.

ಬೆಂಕಿಯ ದೃಷ್ಟಾಂತದಿಂದ ಆತ್ಮಾನಾತ್ಮವಿವೇಕ

ಅಯಃಕಾಷ್ಠಾದಿಕಂ ಯದ್ವದಗ್ನಿವದ್ ವಹ್ನಿಯೋಗತಃ ।
ಭಾತಿ ಸ್ಥೂಲಾದಿಕಂ ಸರ್ವಮಾತ್ಮವತ್ ಸ್ವಾತ್ಮಯೋಗತಃ ॥ ೨೦ ॥

೨೦. ಕಬ್ಬಿಣ, ಕಟ್ಟಿಗೆ– ಮುಂತಾದದ್ದು ಹೇಗೆ ಬೆಂಕಿಯ ಸಂಯೋಗದಿಂದ ಬೆಂಕಿಯಂತೆ ತೋರುವದೋ ಹಾಗೆ ಸ್ಥೂಲಶರೀರವೇ ಮುಂತಾದ ದ್ದೆಲ್ಲವೂ ತನ್ನ ಸಂಬಂಧದಿಂದ ಆತ್ಮನಂತೆ ತೋರುತ್ತದೆ.

ದಾಹಕೋ ನೈವ ದಾಹ್ಯಂ ಸ್ಯಾದ್ದಾಹ್ಯಂ ತದ್ವನ್ನ ದಾಹಕಃ ।
ನೈವಾತ್ಮಾಯಮನಾತ್ಮಾ ಸ್ಯಾದನಾತ್ಮಾಯಂ ನ ಚಾತ್ಮಕಃ ॥ ೨೧ ॥

೨೧. ದಾಹಕವು ದಾಹ್ಯವಾಗಲೀ ಆಗದು; ಅದರಂತೆ ದಾಹ್ಯವು ದಾಹಕವಾಗಲಾರದು.[2] (ಹಾಗೆಯೇ) ಈ ಆತ್ಮನು ಅನಾತ್ಮವಾಗಲಾರನು, ಈ ಅನಾತ್ಮವು ಆತ್ಮನೂ ಆಗಲಾರದು.

ಸೂರ್ಯನ ದೃಷ್ಟಾಂತದಿಂದ ಆತ್ಮಾನಾತ್ಮವಿವೇಕ

ಪ್ರಮೇಯಾದಿತ್ರಯಂ ಸಾರ್ಥಂ ಭಾನುನಾ ಘಟಕುಡ್ಯವತ್ ।
ಯೇನ ಭಾತಿ ಸ ಏವಾಹಂ ಪ್ರಮೇಯಾದಿವಿಲಕ್ಷಣಃ ॥ ೨೨ ॥

೨೨. ಪ್ರಮೇಯವೇ ಮುಂತಾದ ಮೂರೂ[3] ಅರ್ಥದಂತೆಯೇ[4] ಸೂರ್ಯನಿಂದ ಗಡಿಗೆ, ಗೋಡೆ– ಇವುಗಳು (ಬೆಳಗುವಂತೆ) ಯಾವನಿಂದ

---

1. ನಿಜವಾಗಿ ಹೇಗೆ ಉಪ್ಪೆಂಬ ರಸವು ಮಜ್ಜಿಗೆಗೆ ಸೇರಿದ್ದಿಲ್ಲವೋ ಎಂಬ ಅಭಿಪ್ರಾಯವನ್ನು ಇಲ್ಲಿ ಸೇರಿಸಿಕೊಳ್ಳಬೇಕು.

2. ಬೆಂಕಿಯು ಎಂದಿಗೂ ದಾಹಕವೇ, ಸುಡತಕ್ಕದ್ದೇ; ಕಟ್ಟಿಗೆ ಮುಂತಾದದ್ದು ಎಂದಿಗೂ ದಾಹ್ಯವೇ, ಸುಡಲ್ಪಡತಕ್ಕದ್ದೇ.

3. ಪ್ರಮೇಯ, ಪ್ರಮಾಣ, ಪ್ರಮಾತೃ– ಎಂಬ ಮಾತು.

4. ಸಾರ್ಥ ಎಂದರೆ ಅರ್ಥ(ವಿಷಯ)ಕ್ಕೆ ಸಮನಾಗಿ, ವಿಷಯದಂತೆಯೇ ಎಂದರ್ಥ. ಇಂದ್ರಿಯಾರ್ಥವು ವಿಷಯವಾಗಿರುವದು ಸ್ವಾಭಾವಿಕ; ಆದರೆ ಆತ್ಮನಿಗೆ ಪ್ರಮಾತೃ ಪ್ರಮಾಣಗಳೂ ವಿಷಯವೇ ಆಗಿರುತ್ತವೆ ಎಂಬ ಅಭಿಪ್ರಾಯವು ಈ ವಿಶೇಷಣದಲ್ಲಿದೆ.

ಬೆಳಗುತ್ತಿರುವವೋ ಪ್ರಮೇಯಾದಿಗಳಿಗಿಂತ ವಿಲಕ್ಷಣನಾಗಿ ಆ (ಪರಮಾತ್ಮ) ನೇ ನಾನು.

ಭಾನುಸ್ಫುರಣತೋ ಯದ್ವತ್ ಸ್ಫುರತೀವ ಘಟಾದಿಕಮ್ ।
ಸ್ಫುರತೀವ ಪ್ರಮೇಯಾದಿರಾತ್ಮಸ್ಫುರಣತಸ್ತಥಾ ॥ ೨೩ ॥

೨೩. ಸೂರ್ಯನ ಬೆಳಕಿನಿಂದ ಹೇಗೆ ಗಡಿಗೆ ಮುಂತಾದದ್ದು ಬೆಳಗಿ ತೋರುವಂತಿರುವದೋ[1] ಹಾಗೆ ಆತ್ಮನ ಸ್ಫುರಣದಿಂದ ಪ್ರಮೇಯವೇ ಮುಂತಾದದ್ದು ತೋರುವಂತೆ ಇರುತ್ತದೆ.[2]

ಬೆಲ್ಲದ ದೃಷ್ಟಾಂತದಿಂದ ಆತ್ಮನ ಆನಂದತ್ವ

ಪಿಷ್ಟಾದಿರ್ಗುಲಸಂಪರ್ಕಾತ್ ಗುಲವತ್ ಪ್ರೀತಿಮಾನ್ ಯಥಾ ।
ಆತ್ಮಯೋಗಾತ್ ಪ್ರಮೇಯಾದಿರಾತ್ಮವತ್ ಪ್ರೀತಿಮಾನ್ ಭವೇತ್ ॥

೨೪. ಹಿಟ್ಟು ಮುಂತಾದದ್ದು ಬೆಲ್ಲದ ಸಂಬಂಧದಿಂದ ಬೆಲ್ಲದಂತೆ ಹೇಗೆ ಪ್ರಿಯವಾಗಿರುವದೋ ಹಾಗೆ ಆತ್ಮನ ಸಂಬಂಧದಿಂದ ಪ್ರಮೇಯಾದಿಗಳೂ ಆತ್ಮನಂತೆ ಪ್ರಿಯವಾಗಿರುವವು.

ಬೆಂಕಿಯ ದೃಷ್ಟಾಂತದಿಂದ ಸ್ಫೂರ್ತಿರೂಪತ್ವ

ಘಟನೀರಾನ್ನಪಿಷ್ಟಾನಾಮುಷ್ಣತ್ವಂ ವಹ್ನಿಯೋಗತಃ ।
ವಹ್ನಿಂ ವಿನಾ ಕಥಂ ತೇಷಾಮುಷ್ಣತಾ ಸ್ಯಾದ್ಯಥಾ ಕ್ವಚಿತ್ ॥ ೨೫ ॥

ಭೂತಭೌತಿಕದೇಹಾನಾಂ ಸ್ಫೂರ್ತಿತಾ ಸ್ಯಾತ್ಮಯೋಗತಃ ।
ವಿನಾತ್ಮಾನಂ ಕಥಂ ತೇಷಾಂ ಸ್ಫೂರ್ತಿತಾ ಸ್ಯಾತ್ತಥಾ ಕ್ವಚಿತ್ ॥ ೨೬ ॥

೨೫-೨೬. ಗಡಿಗೆ, ನೀರು, ಅನ್ನ, ಹಿಟ್ಟು- ಇವುಗಳು ಬೆಂಕಿಯ ಸಂಬಂಧದಿಂದ ಬಿಸಿಯಾಗಿರುವವು. ಬೆಂಕಿಯಿಲ್ಲದೆ ಅವು ಹೇಗೆತಾನೆ ಯಾವಾಗಲಾದರೂ ಬಿಸಿಯಾದಾವು? ಇದು ಹೇಗೋ ಹಾಗೆಯೇ ಭೂತಭೌತಿಕ

---

1. ನಿಜವಾಗಿ ತಾವೇ ತೋರುವದಿಲ್ಲವೋ ಹಾಗೆ.

2. ಪ್ರಮೇಯಾದಿಗಳಿಗೆ ಸ್ವತಃ ಸ್ಫುರಣವಿಲ್ಲ.

ದೇಹಗಳು ತೋರುವದು ಆತ್ಮಸಂಬಂಧದಿಂದ. ಆತ್ಮನಿಲ್ಲದೆ ಅವುಗಳಿಗೆ ತೋರುವಿಕೆಯು ಹೇಗೆತಾನೆ ಯಾವಾಗಲಾದರೂ ತೋರಿಕೊಂಡಾವು[1] ?

ಆಕಾಶದೃಷ್ಟಾಂತದಿಂದ ಆತ್ಮನಿಗೆ ಏಕತ್ವ, ಅಸಂಗತ್ವ, ಅವಿಕಾರಿತ್ವ

ನಾನಾವಿಧೇಷು ಕುಂಭೇಷು ವಸತ್ಯೇಕಂ ನಭೋ ಯಥಾ ।
ನಾನಾವಿಧೇಷು ದೇಹೇಷು ತದ್ವದೇಕೋ ವಸಾಮ್ಯಹಮ್ ॥ ೨೭ ॥

೨೭. ಬಗೆಬಗೆಯಾದ ಗಡಿಗೆಗಳಲ್ಲಿ ಒಂದೇ ಆಕಾಶವು ಹೇಗಿರುವದೋ ಅದರಂತೆ ಬಗೆಬಗೆಯಾದ ದೇಹಗಳಲ್ಲಿ ನಾನೊಬ್ಬನೇ ವಾಸಮಾಡುತ್ತಿದ್ದೇನೆ.

ನಾನಾವಿಧತ್ವಂ ಕುಮ್ಭಾನಾಂ ನ ಯಾತ್ಯೇವ ಯಥಾ ನಭಃ ।
ನಾನಾವಿಧತ್ವಂ ದೇಹಾನಾಂ ತದ್ವದೇವ ನ ಯಾಮ್ಯಹಮ್ ॥ ೨೮ ॥

೨೮. ಗಡಿಗೆಗಳ ನಾನಾವಿಧತ್ವವನ್ನು ಹೇಗೆ ಆಕಾಶವು ಹೊಂದುವದೇ ಇಲ್ಲವೋ ಹಾಗೆಯೇ ದೇಹಗಳ ನಾನಾವಿಧತ್ವವನ್ನು ನಾನು ಹೊಂದುವದೇ ಇಲ್ಲ.

ಯಥಾ ಘಟೇಷು ನಷ್ಟೇಷು ಘಟಾಕಾಶೋ ನ ನಶ್ಯತಿ ।
ತಥಾ ದೇಹೇಷು ನಷ್ಟೇಷು ನೈವ ನಶ್ಯಾಮಿ ಸರ್ವಗಃ ॥ ೨೯ ॥

೨೯. ಹೇಗೆ ಗಡಿಗೆಗಳು ನಷ್ಟವಾದರೆ ಗಡಿಗೆಯ ಆಕಾಶವು ನಷ್ಟವಾಗುವದಿಲ್ಲವೋ, ಹಾಗೆ ದೇಹಗಳು ನಷ್ಟವಾದರೆ ಸರ್ವಗತನಾದ ನಾನು ನಾಶವಾಗುವದೇ ಇಲ್ಲ.

ನಾರಿನ ದೃಷ್ಟಾಂತದಿಂದ ಏಕತ್ವ, ಅಸಂಗತ್ವ, ಅವಿಕಾರತ್ವ

ಉತ್ತಮಾದೀನಿ ಪುಷ್ಪಾಣಿ ವರ್ತನ್ತೇ ಸೂತ್ರಕೇ ಯಥಾ ।
ಉತ್ತಮಾದ್ಯಾಸ್ತಥಾ ದೇಹಾ ವರ್ತನ್ತೇ ಮಯಿ ಸರ್ವದಾ ॥ ೩೦ ॥

---

1. ತೋರುವಿಕೆಯು ಅವುಗಳ ಸ್ವಭಾವವಲ್ಲ; ಆ ಸ್ವಭಾವವುಳ್ಳ ಆತ್ಮನಿಂದಲೇ ಬರಬೇಕು- ಎಂಬುದಕ್ಕೆ ಮಾತ್ರ ಬೆಂಕಿಯ ದೃಷ್ಟಾಂತ. ಬಿಸಿಯು ಗಡಿಗೆ ಮುಂತಾದವುಗಳಲ್ಲಿ ನಿಜವಾಗಿ ಪಸರಿಸಿಕೊಂಡಂತೆ ತೋರುವಿಕೆಯೆಂಬ ಧರ್ಮವು ಅವುಗಳಲ್ಲಿ ಸೇರಿಕೊಳ್ಳ ದೆಂಬದರಲ್ಲಿ ತಾತ್ಪರ್ಯವಿಲ್ಲ.

೩೦. ಉತ್ತಮವಾದವು ಮುಂತಾದ ಹೂಗಳು ಹೇಗೆ ನಾರಿನಲ್ಲಿ ಇರುತ್ತವೆಯೋ ಹಾಗೆ ಉತ್ತಮನಾದವೇ ಮುಂತಾದ ದೇಹಗಳು ನನ್ನಲ್ಲಿಯೇ-ಯಾವಾಗಲೂ ಇರುತ್ತವೆ.[1]

ಯಥಾ ನ ಸಂಸ್ಪೃಶೇತ್ ಸೂತ್ರಂ ಪುಷ್ಪಾಣಾಮುತ್ತಮಾದಿತಾ ।
ತಥಾ ನೈಕಂ ಸರ್ವಗಂ ಮಾಂ ದೇಹಾನಾಮುತ್ತಮಾದಿತಾ ॥ ೩೧ ॥

೩೧. ಹೇಗೆ ಹೂಗಳ ಉತ್ತಮತ್ವವೇ ಮುಂತಾದದ್ದು ನಾರನ್ನು ಮುಟ್ಟಲಾರದೋ[2] ಹಾಗೆ ಒಬ್ಬನೂ ಸರ್ವಗತನೂ ಆಗಿರುವ ನನ್ನನ್ನು ದೇಹಗಳ ಉತ್ತಮತ್ವವೇ ಮುಂತಾದದ್ದು (ಮುಟ್ಟಲಾರದು).

ಪುಷ್ಪೇಷು ತೇಷು ನಷ್ಟೇಷು ಯದ್ವತ್ ಸೂತ್ರಂ ನ ನಶ್ಯತಿ ।
ತಥಾ ದೇಹೇಷು ನಷ್ಟೇಷು ನೈವ ನಶ್ಯಾಮ್ಯಹಂ ಸದಾ ॥ ೩೨ ॥

೩೨. ಆ ಹೂಗಳು ನಷ್ಟವಾದರೆ ಹೇಗೆ ನಾರು ನಾಶವಾಗುವದಿಲ್ಲವೋ ಹಾಗೆ ದೇಹಗಳು ನಷ್ಟವಾದರೆ ನಾನು ಎಂದಿಗೂ ನಾಶವಾಗುವದಿಲ್ಲ.

ಸೂರ್ಯಪ್ರಕಾಶದೃಷ್ಟಾಂತದಿಂದ ಏಕತ್ವಾದಿಗಳು

ಪರ್ಯಙ್ಕುರಜ್ಜುರನ್ಧ್ರೇಷು ನಾನೈವೈಕಾಪಿ ಸೂರ್ಯಭಾ ।
ಏಕೋಽಪ್ಯನೇಕವದ್ಭಾತಿ ತಥಾ ಕ್ಷೇತ್ರೇಷು ಸರ್ವಗಃ ॥ ೩೩ ॥

೩೩. ಹೊರಸಿನ ಹಗ್ಗದ ರಂಧ್ರಗಳಲ್ಲಿ ಒಂದೇ ಸೂರ್ಯಕಾಂತಿಯು ಹೇಗೆ ಬೇರೆಬೇರೆಯಾಗಿರುವಂತೆ ತೋರುವದೋ ಹಾಗೆ ಸರ್ವಗತನಾದ (ಆತ್ಮನು) ಏಕನಾದರೂ ಅನೇಕರಂತೆ ಕಾಣುತ್ತಿರುವನು.

ರಜ್ಜುರನ್ಧ್ರಸ್ಥದೋಷಾದಿ ಸೂರ್ಯಭಾಂ ನ ಸ್ಪೃಶೇದ್ಯಥಾ ।
ತಥಾ ಕ್ಷೇತ್ರಸ್ಥದೋಷಾದಿ ಸರ್ವಗಂ ಮಾಂ ನ ಸಂಸ್ಪೃಶೇತ್ ॥ ೩೪ ॥

೩೪. ಹಗ್ಗದ ರಂಧ್ರಗಳಲ್ಲಿರುವ ದೋಷಾದಿಗಳು[3] ಸೂರ್ಯಪ್ರಕಾಶಕ್ಕೆ ಹೇಗೆ ಸೋಕದೆ ಇರುವದೋ ಹಾಗೆ ಕ್ಷೇತ್ರಗಳಲ್ಲಿರುವ ದೋಷಾದಿಗಳು ಸರ್ವಗತನಾದ ನನ್ನನ್ನು ಸೋಕಲಾರದೆ ಇರುವವು.

---

1. ಉತ್ತಮ, ಮಧ್ಯಮ, ಅಧಮ- ಎಂಬ ಹೂಗಳಿಗೆ ಹೇಗೆ ಒಂದೇ ದಾರವು ಆಧಾರವೋ ಹಾಗೆ ದೇಹಗಳಿಗೆಲ್ಲ ಆತ್ಮನೊಬ್ಬನೇ ಆಧಾರವು.

2. ಅವು ಯಾವಾಗಲೂ ಹೂಗಳ ಧರ್ಮವೇ ಆಗಿರುವವೋ ಎಂದರ್ಥ.

3. ದೋಷಗಳೂ ಗುಣಗಳೂ.

ತದ್ರಜ್ಜುರನ್ಧ್ರನಾಶೇಷು[1] ನೈವ ನಶ್ಯತಿ ಸೂರ್ಯಭಾ ।
ತಥಾ ಕ್ಷೇತ್ರವಿನಾಶೇಷು ನೈವ ನಶ್ಯಾಮಿ ಸರ್ವಗಃ ॥ ೩೫ ॥

೩೫. ಆ ಹಗ್ಗದ ರಂಧ್ರಗಳ ನಾಶವಾದರೆ ಸೂರ್ಯಪ್ರಕಾಶವು ನಾಶವಾಗುವದೇ ಇಲ್ಲ. ಹಾಗೆಯೇ ಕ್ಷೇತ್ರಗಳು ನಾಶವಾದರೆ ಸರ್ವಗತನಾದ ನಾನು ನಾಶವಾಗುವದಿಲ್ಲವೇ ಇಲ್ಲ.

ಆತ್ಮನು ದೇಹಾದಿಗಳಿಗಿಂತ ವಿಲಕ್ಷಣನು

ದೇಹೋ ನಾಹಂ ಪ್ರದೃಶ್ಯತ್ವಾದ್ಭೌತಿಕತ್ವಾನ್ನ ಚೇನ್ದ್ರಿಯಮ್ ।
ಪ್ರಾಣೋ ನಾಹಮನೇಕತ್ವಾನ್ನಮನೋ ನಾಹಂ ಚಲತ್ವತಃ ॥ ೩೬ ॥

೩೬. ನಾನು ದೇಹವಲ್ಲ; ಏಕೆಂದರೆ (ಅದು) ದೃಶ್ಯವಾಗಿದೆ. (ನಾನು) ಇಂದ್ರಿಯವೂ ಅಲ್ಲ; ಏಕೆಂದರೆ (ಅದು) ಭೌತಿಕವಾಗಿರುತ್ತದೆ. ನಾನು ಪ್ರಾಣವಲ್ಲ; ಏಕೆಂದರೆ (ಅದು) ಅನೇಕಾತ್ಮಕವಾಗಿರುತ್ತದೆ. ನಾನು ಮನಸ್ಸಲ್ಲ, ಏಕೆಂದರೆ ಅದು ಚಂಚಲವಾಗಿರುತ್ತದೆ.

ಬುದ್ಧಿರ್ನಾಹಂ ವಿಕಾರಿತ್ವಾತ್ತನೋ ನಾಹಂ ಜಡತ್ವತಃ ।
ದೇಹೇನ್ದ್ರಿಯಾದಿಕಂ ನಾಹಂ ವಿನಾಶಿತ್ವಾದ್ಘಟಾದಿನತ್ ॥ ೩೭ ॥

೩೭. ನಾನು ಬುದ್ಧಿಯಲ್ಲ; ಏಕೆಂದರೆ (ಅದು) ವಿಕಾರಪಡುವದಾಗಿದೆ. ನಾನು ತಮಸ್ಸಲ್ಲ; ಏಕೆಂದರೆ (ಅದು) ಜಡವಾಗಿರುತ್ತದೆ. ದೇಹೇಂದ್ರಿಯಗಳೇ ಮುಂತಾದವುಗಳು ನಾನಲ್ಲ; ಏಕೆಂದರೆ (ಅವು) ಘಟಾದಿಗಳಂತೆ ನಾಶವುಳ್ಳವಾಗಿರುತ್ತವೆ.

ದೇಹೇನ್ದ್ರಿಯಪ್ರಾಣಮನೋಬುದ್ಧ್ಯಜ್ಞಾನಾನಿ ಭಾಸಯನ್ ।
ಅಹಙ್ಕಾರಂ ತಥಾ ಭಾನಿ ಚೈತೇಷಾಮಭಿಮಾನಿನಮ್ ॥ ೩೮ ॥

೩೮. ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು, ಬುದ್ಧಿ, ಅಜ್ಞಾನ– ಇವುಗಳನ್ನು ಬೆಳಗುತ್ತಾ, ಇವುಗಳ ಅಭಿಮಾನಿಯಾಗಿರುವ ಅಹಂಕಾರವನ್ನೂ ಹಾಗೆಯೇ ಬೆಳಗುತ್ತಿರುವೆನು.

---

1. ನಾಶೇಷು ಎಂದು ಬಹುವಚನವಿರುವದು ರಂಧ್ರಗಳು ಅನೇಕವಿರುವದರಿಂದ; 'ನಾಶೇ ತು' ಎಂಬ ಪಾಠವಿದ್ದರೆ ಯಾವ ಆತಂಕವೂ ಇರುವದೇ ಇಲ್ಲ.

2. ಇಂದ್ರಿಯವು ಮಾತ್ರ ಭೌತಿಕ, ದೇಹವು ಮಾತ್ರ ದೃಶ್ಯ – ಎಂಬ ವಿವೇಕವನ್ನು ತಿಳಿಯಬಾರದು. ದೇಹಾದಿಗಳು ಆತ್ಮನಲ್ಲವೆಂಬುದಕ್ಕೆ ಆತ್ಮನಲ್ಲಿಲ್ಲದ ದೃಶ್ಯಾದಿಗಳು ದೇಹಾದಿಗಳಲ್ಲಿರುವದೇ ಹೇತುವೆಂದು ತಿಳಿಯಬೇಕು.

ಸರ್ವಂ ಜಗದಿದಂ ನಾಹಂ ವಿಷಯತ್ವಾದಿದಂಧಿಯಃ ।
ಅಹಂ ನಾಹಂ ಸುಷುಪ್ತ್ಯಾದಾವಹಮಃ ಸಾಕ್ಷಿತಃ ಸದಾ ॥ ೩೯ ॥

೩೯. ಈ ಜಗತ್ತೆಲ್ಲವೂ ನಾನಲ್ಲ; ಏಕೆಂದರೆ ಇದು ಎಂಬ ಬುದ್ಧಿಗೆ (ಅದು) ವಿಷಯವಾಗಿರುತ್ತದೆ.[1] ನಾನು ಅಹಂಕಾರವೂ ಅಲ್ಲ, ಏಕೆಂದರೆ ನಾನು ಸುಷುಪ್ತ್ಯಾದಿಗಳಲ್ಲಿ[2] ಅಹಂಕಾರಕ್ಕೆ ಸಾಕ್ಷಿಯಾದ (ವಿಲಕ್ಷಣರೂಪ) ನಲ್ಲಿರುತ್ತೇನೆ.[3]

ಆತ್ಮನ ನಿರ್ವಿಕಾರತ್ವ

ಸುಪ್ತೌ ಯಥಾ ನಿರ್ವಿಕಾರಸ್ತಥಾವಸ್ಥಾದ್ವಯೇಽಪಿ ಚ ।
ದ್ವಯೋರ್ಮಾತ್ರಾಭಿಯೋಗೇನ ವಿಕಾರೀವ ವಿಭಾಮ್ಯಹಮ್ ॥ ೪೦ ॥

೪೦. ನಿದ್ರೆಯಲ್ಲಿ ಹೇಗೆ ನಿರ್ವಿಕಾರನೋ (ಮಿಕ್ಕ) ಎರಡು ಅವಸ್ಥೆಯಲ್ಲಿಯೂ ಹಾಗೆಯೇ (ನಿರ್ವಿಕಾರನು). (ಆ) ಎರಡರಲ್ಲಿ (ಭೂತ)ಮಾತ್ರೆಗಳ ಸಂಬಂಧದಿಂದ[4] ವಿಕಾರಿಯಂತೆ ನಾನು ತೋರುತ್ತಿರುವೆನು.

ಉಪಾಧಿನೀಲರಕ್ತಾದ್ಯೈಃ ಸ್ಫಟಿಕೋ ನೈವ ಲಿಪ್ಯತೇ ।
ತಥಾತ್ಮಾ ಕೋಶಜೈಃ ಸರ್ವೈಃ ಕಾಮಾದ್ಯೈರ್ನೈವ ಲಿಪ್ಯತೇ ॥ ೪೧ ॥

೪೧. ಉಪಾಧಿಯ ಕಪ್ಪು, ಕೆಂಪು –ಮುಂತಾದವುಗಳಿಂದ[5] ಸ್ಫಟಿಕವು ಲಿಪ್ತವಾಗುವದೇ ಇಲ್ಲ. ಹಾಗೆಯೇ ಆತ್ಮನು ಕೋಶಗಳಿಂದುಂಟಾದ[6] ಕಾಮನೇ ಮುಂತಾದವುಗಳಿಂದ ಲಿಪ್ತನಾಗುವದೇ ಇಲ್ಲ.

---

1. ಇದು ಎಂಬ ಬುದ್ಧಿಗೆ ವಿಷಯವಾದದ್ದು ಅನಾತ್ಮವಾದೀತೇ ಹೊರತು ಆತ್ಮನ ಸ್ವರೂಪವಾಗಲಾರದು.

2. ಸುಷುಪ್ತಿ, ಸಮಾಧಿ, ಮದ, ಮೂರ್ಛೆ – ಇವುಗಳಲ್ಲಿ ಎಂದರ್ಥ.

3. ಈ ಅವಸ್ಥೆಗಳಲ್ಲಿ ಅಹಂಕಾರವು ತೋರುವದಿಲ್ಲವಾದರೂ ಜಗತ್ತಿನಲ್ಲಿ ತೋರುವ ಅಹಂಕಾರಕ್ಕೆ ಯಾವ ಸಾಕ್ಷಿಚೈತನ್ಯವಿರುವದೋ ಅದೇ ಸಾಕ್ಷಿಯ ರೂಪದಿಂದ ಸುಷುಪ್ತ್ಯಾದಿಗಳಲ್ಲಿ ಇರುತ್ತೇನೆ ಎಂದರ್ಥವನ್ನು ಮಾಡಬೇಕು. ಸುಷುಪ್ತಿಯಲ್ಲಿ ಅಹಂಕಾರವಿಲ್ಲವೆಂದರಿಂದ 'ಸುಷುಪ್ತಿಯಲ್ಲಿ ಅಹಂಕಾರಕ್ಕೆ ಸಾಕ್ಷಿಯಾಗಿರುವದರಿಂದ' ಎಂದು ಕನ್ನಡಿಸುವದಕ್ಕೆ ಬರುವದಿಲ್ಲ.

4. ಭೂತಮಾತ್ರೆಗಳಿಂದಾಗಿರುವ ದೇಹಾದಿಗಳಿಂದ ಎಂದರ್ಥ.

5. ಸ್ಫಟಿಕದ ಹತ್ತಿರವಿರುವ ವಸ್ತುವಿನ ಬಣ್ಣದಿಂದ.

6. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ –ಇವುಗಳಿಂದುಂಟಾದ.

ಭಾಲೇನ[1] ಭ್ರಾಮ್ಯಮಾಣೇನ ಭ್ರಮತೀವ ಯಥಾ ಮಹೀ ।
ಅಗೋಽಸ್ಯಾತ್ಮಾ ವಿಮೂಢೇನ ಚಲತೀವ ಪ್ರದೃಶ್ಯತೇ ॥ ೪೨ ॥

೪೨. ತಲೆಯು ತಿರುಗುತ್ತಿರುವಲ್ಲಿ ಭೂಮಿಯು ತಿರುಗುತ್ತಿರುವಂತೆ ಹೇಗೆ ಕಾಣುವದೋ ಹಾಗೆ ಚಲನವಿಲ್ಲದ ಆತ್ಮನೂ ಅಜ್ಞನಿಗೆ ಚಲಿಸುತ್ತಿರುವಂತೆ ಕಾಣಿಸುತ್ತಾನೆ.

ಆತ್ಮನು ದೇಹವಿಲಕ್ಷಣನು

ದೇಹತ್ರಯಮಿದಂ ನಿತ್ಯಮಾತ್ಮತ್ವೇನಾಭಿಮನ್ಯತೇ ।
ಯಾವತ್ ತಾವದಯಂ ಮೂಢೋ ನಾನಾಯೋನಿಷು ಜಾಯತೇ ॥

೪೩. ಈ ಮೂರು ದೇಹವನ್ನೂ ಎಲ್ಲಿಯವರೆಗೆ ತಾನೆಂದು ಅಭಿಮಾನಿಸಿಕೊಂಡಿರುವನೋ ಅಲ್ಲಿಯವರೆಗೂ ಈ ಮೂಢನು ಬಗೆಬಗೆಯ ಯೋನಿಗಳಲ್ಲಿ ಹುಟ್ಟುತ್ತಿರುವನು.

ನಿದ್ರಾದೇಹಜದುಃಖಾದಿ ಜಾಗ್ರದ್ದೇಹಂ ನ ಸಂಸ್ಪೃಶೇತ್ ।
ಜಾಗ್ರದ್ದೇಹಜದುಃಖಾದಿಸ್ತಥಾತ್ಮಾನಂ ನ ಸಂಸ್ಪೃಶೇತ್ ॥ ೪೪ ॥

೪೪. ನಿದ್ರೆಯ ದೇಹದಿಂದ[2] ಆದ ದುಃಖವೇ ಮುಂತಾದದ್ದು ಎಚ್ಚರದ ದೇಹವನ್ನು ಸೋಂಕಲಾರದು. ಹಾಗೆಯೇ ಎಚ್ಚರದ ದೇಹದ ದುಃಖವೇ ಮುಂತಾದವನ್ನು ಆತ್ಮನನ್ನು ಸೋಂಕಲಾರದು

ಜಾಗ್ರದ್ದೇಹವದಾಭಾತಿ ನಿದ್ರಾದೇಹಸ್ತು ನಿದ್ರಯಾ ।
ನಿದ್ರಾದೇಹವಿನಾಶೇನ ಜಾಗ್ರದ್ದೇಹೋ ನ ನಶ್ಯತಿ ॥ ೪೫ ॥
ತಥಾಯಮಾತ್ಮವದ್ಭಾತಿ ಜಾಗ್ರದ್ದೇಹಸ್ತು ಜಾಗರಾತ್ ।
ಜಾಗ್ರದ್ದೇಹವಿನಾಶೇನ ನಾತ್ಮಾ ನಶ್ಯತಿ ಕರ್ಹಿಚಿತ್ ॥ ೪೬ ॥

---

1. 'ಫಾಲೇನ' ಎಂದು ಅಚ್ಚಿನಲ್ಲಿದೆ; ಅದಕ್ಕೆ ನೇಗಿಲಿನ ಗುಳದಿಂದ ಎಂದು ಅರ್ಥವಾಗುತ್ತದೆ. ಅದನ್ನು 'ಭಾಲೇನ' (ಹಣೆಯಿಂದ) ಎಂದು ತಿದ್ದಿಕೊಂಡಿದೆ. ಆದರೂ ಸರಿಯಾದ ಅರ್ಥವು ಹೊಂದುವದಿಲ್ಲ. ಇಲ್ಲಿ ಮೂಲದಲ್ಲಿ ಯಾವದೋ ಬೇರೆ ಶಬ್ದವಿದ್ದು ಬರಹದಲ್ಲಿ ಬದಲಾಯಿಸಿರಬೇಕೆಂದು ತೋರುತ್ತದೆ.

2. ಕನಸಿನ ದೇಹದಿಂದ.

3. ಸುಖದುಃಖಗಳು.

೪೫–೪೬. ನಿದ್ರೆಯ ದೇಹವು ನಿದ್ರೆಯ (ದೋಷ)ದಿಂದ ಎಚ್ಚರದ ದೇಹದಂತೆ ಕಾಣಿಸುತ್ತಿರುತ್ತದೆ. ನಿದ್ರಾದೇಹದ ವಿನಾಶದಿಂದ ಎಚ್ಚರದ ದೇಹವು ನಾಶವಾಗುವದಿಲ್ಲ. ಹಾಗೆಯೇ ಈ ಎಚ್ಚರದ ದೇಹವಾದರೋ ಎಚ್ಚರ(ವೆಂಬ ಅವಸ್ಥೆಯ ದೋಷ)ದಿಂದ ಆತ್ಮನಂತೆ ಕಾಣಿಸುತ್ತಿರುತ್ತದೆ. ಎಚ್ಚರದ ದೇಹವು ನಾಶವಾದರೆ ಆತ್ಮನು ಎಂದಿಗೂ ನಾಶವಾಗುವದಿಲ್ಲ.

ಹಿತ್ವಾಯಂ ಸ್ವಾಪ್ನಿಕಂ ದೇಹಂ ಜಾಗ್ರದ್ದೇಹಮಪೇಕ್ಷತೇ ।
ಜಾಗ್ರದ್ದೇಹಂ[1] ಪ್ರಬುದ್ಧೋಽಯಂ ಹಿತ್ವಾತ್ಮಾನಂ ಯಥಾ ತಥಾ ॥

೪೭. ಈ (ಜೀವನು) ಸ್ವಪ್ನದ ದೇಹವನ್ನು ಬಿಟ್ಟು (ಎಚ್ಚತ್ತಾಗ) ಎಚ್ಚರದ ದೇಹವನ್ನು ಹೇಗೆ ಇಚ್ಛಿಸುತ್ತಾನೋ, ಹಾಗೆಯೇ ಈ ಜ್ಞಾನಿಯಾದವನು ಎಚ್ಚರದ ದೇಹವನ್ನು ಬಿಟ್ಟು ಆತ್ಮನನ್ನು (ಇಚ್ಛಿಸುತ್ತಾನೆ).

ಸ್ವಪ್ನಭೋಗೇ ಯಥೈವೇಚ್ಛಾ ಪ್ರಬುದ್ಧಸ್ಯ ನ ವಿದ್ಯತೇ ।
ಅಸತ್ಸ್ವರ್ಗಾದಿಕೇ ಭೋಗೇ ನೈವೇಚ್ಛಾ ಜ್ಞಾನಿನಸ್ತಥಾ ॥ ೪೮ ॥

೪೮. ಕನಸಿನ ಭೋಗದಲ್ಲಿ ಹೇಗೆ ಎಚ್ಚತ್ತವನಿಗೆ ಇಚ್ಛೆಯಿರುವದಿಲ್ಲವೋ ಹಾಗೆ ಹುಸಿಯಾದ ಸ್ವರ್ಗಾದಿಭೋಗದಲ್ಲಿ ಜ್ಞಾನಿಗೆ ಇಚ್ಛೆಯಿರುವದೇ ಇಲ್ಲ.

ಆತ್ಮನಿಗೆ ನಿಜವಾಗಿ ಭೋಕ್ತೃತ್ವವಿಲ್ಲ

ಭೋಕ್ತಾ ಬಹಿರ್ಯಥಾ ಭೋಗ್ಯಃ ಸರ್ವೋ ದೃಷದಿ[2] ಕಲ್ಪಿತಃ ।
ರೂಪಶೀಲಾದಯಶ್ಚಾತ್ಮಭೋಗಾ[3] ಭೋಗ್ಯಸ್ವರೂಪಕಾಃ ॥ ೪೯ ॥

೪೯. ಭೋಕ್ತೃವಾದವನು ಹೇಗೆ ಹೊರಗೆ ಕಲ್ಲಿನಲ್ಲಿ ಹಾವನ್ನು ಕಲ್ಪಿಸಿಕೊಂಡಿರುವನೋ ಹಾಗೆ ರೂಪ, ಶೀಲ –ಮುಂತಾದ ಆತ್ಮಭೋಗಗಳು[4] ಭೋಗ್ಯಸ್ವರೂಪವಾಗಿರುವವು.

---

1. 'ಜಾಗ್ರದ್ದೇಹ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2. 'ದೃಷತ್' ಎಂದರೆ ಬೀಸುವಕಲ್ಲು. ಅದರಲ್ಲಿ ಹಾವನ್ನು ಕಲ್ಪಿಸುತ್ತಾರೆಂಬ ದೃಷ್ಟಾಂತವು ಭಾಷ್ಯದಲ್ಲಿ ಕಂಡುಬರುವದಿಲ್ಲ.

3. 'ಆಲ್ಪಭೋಗಾ' ಎಂಬ ಅ॥ ಪಾಠವು ಸರಿಯಲ್ಲ.

4. ಆತ್ಮನಲ್ಲಿರುವಂತೆ ತೋರುವ ಭೋಗಗಳು. ಭೋಗಸಾಮಾಗ್ರಿಯಾದದ್ದು ಹೊರಗೆ ಇರುತ್ತದೆ; ಇದರಂತೆ ರೂಪ, ಶೀಲ- ಮುಂತಾದವು ಭೋಗ್ಯವಾಗಿರುವದರಿಂದ ಆತ್ಮನಿಗಿಂತ ಬೇರೆಯಾದ ಶರೀರ, ಮನಸ್ಸು- ಮುಂತಾದ ಹೊರಗಿನ ಪದಾರ್ಥಗಳಿಗೇ ಸೇರಿರಬೇಕು. ಆದರೂ ಅಜ್ಞಾನದಿಂದ ಆತ್ಮನ ಭೋಗಸಾಮಾಗ್ರಿಗಳೆಂದು ಕಲ್ಪಿತವಾಗಿರುತ್ತವೆ.

ಜ್ಞಸ್ಯ ನಾಸ್ತ್ಯೇವ ಸಂಸಾರೋ ಯದ್ವದಜ್ಞಸ್ಯ ಕರ್ಮಿಣಃ ।
ಜಾನತೋ ನೈವ ಭೀರ್ಯದ್ವದ್ರಜ್ಜುಸರ್ಪಮಜಾನತಃ ॥ ೫೦ ॥

೫೦. ಜ್ಞಾನಿಯಾದವನಿಗೆ[1] ಅಜ್ಞಾನಿಯಾದ ಕರ್ಮಿಗೆ ಇರುವಂತೆ ಸಂಸಾರವಿರುವದೇ ಇಲ್ಲ. ರಜ್ಜುಸರ್ಪದ (ತತ್ತ್ವವನ್ನು) ತಿಳಿಯದವನಿಗೆ ಹೇಗೆ ಹೆದರಿಕೆಯಿರುವದೋ ಹಾಗೆ ಅರಿತಿರುವವನಿಗೆ ಇರುವದೇ ಇಲ್ಲ.

ಸೈನ್ಧವಸ್ಯ ಘನೋ ಯದ್ವಜ್ಜಲಯೋಗಾಜ್ಜಲಂ ಭವೇತ್ ।
ಸ್ವಾತ್ಮಯೋಗಾತ್ ತಥಾ ಬುದ್ಧಿರಾತ್ಮೈವ ಬ್ರಹ್ಮವೇದಿನಃ ॥ ೫೧ ॥

೫೧. ಉಪ್ಪಿನ ಹರಳು ಹೇಗೆ ನೀರಿನ ಸಂಬಂಧದಿಂದ ನೀರೇ ಆಗುವದೋ ಹಾಗೆ ಬ್ರಹ್ಮಜ್ಞಾನಿಗೆ ಆತ್ಮಸಂಬಂಧದಿಂದ ಬುದ್ಧಿಯು ಆತ್ಮನೇ ಆಗಿರುತ್ತದೆ.[2]

ಚಿದಾಭಾಸವೂ ಆತ್ಮನೂ

ತೋಯಾಶ್ರಯೇಷು ಸರ್ವೇಷು ಭಾನುರೇಕೋಽಪ್ಯನೇಕವತ್ ।
ಏಕೋಽಪ್ಯಾತ್ಮಾ ತಥಾ ಭಾತಿ ಸರ್ವಕ್ಷೇತ್ರೇಷ್ವನೇಕವತ್ ॥ ೫೨ ॥

೫೨. ಜಲಾಶಯಗಳಲ್ಲೆಲ್ಲ ಸೂರ್ಯನೊಬ್ಬನೇ ಅನೇಕವಾಗಿರುವಂತೆ ತೋರುತ್ತಾನೆ. ಹಾಗೆಯೇ ಆತ್ಮನು ಒಬ್ಬನೇ ಆದರೂ ಕ್ಷೇತ್ರಗಳಲ್ಲೆಲ್ಲ ಅನೇಕನಾಗಿ ಕಾಣುತ್ತಾನೆ.[3]

ಭಾನೋರನ್ಯ ಇವಾಭಾತಿ ಜಲಭಾನುರ್ಜಲೇ ಯಥಾ ।
ಆತ್ಮನೋಽನ್ಯ ಇವಾಭಾಸೋ ಭಾತಿ ಬುದ್ಧೌ ತಥಾತ್ಮನಃ ॥ ೫೩ ॥

೫೩. ನೀರಿನಲ್ಲಿರುವ ಜಲಸೂರ್ಯಕವು ಹೇಗೆ ಸೂರ್ಯನಿಗಿಂತ ಬೇರೆಯಾಗಿರುವಂತೆ ತೋರುತ್ತಿರುತ್ತದೆಯೋ ಹಾಗೆಯೇ ಬುದ್ಧಿಯಲ್ಲಿರುವ ಆಭಾಸವು ಆತ್ಮನಿಗಿಂತ ಬೇರೆಯಾಗಿರುವಂತೆ ತೋರುತ್ತವೆ.

ಬಿಮ್ಬಂ ವಿನಾ ಯಥಾ ನೀರೇ ಪ್ರತಿಬಿಮ್ಬೋ ಭವೇತ್ ಕಥಮ್ ।
ವಿನಾತ್ಮಾನಂ ತಥಾ ಬುದ್ಧೌ ಚಿದಾಭಾಸೋ ಭವೇತ್ ಕಥಮ್ ॥ ೫೪ ॥

---

1. ಜ್ಞ ಎಂಬ ಮಾತನ್ನು ಆತ್ಮಜ್ಞಾನಿ ಎಂಬರ್ಥದಲ್ಲಿ ಭಾಷ್ಯದಲ್ಲಿ ಪ್ರಚುರವಾಗಿ ಪ್ರಯೋಗಿಸಿರುವದು ಕಂಡುಬರುವದಿಲ್ಲ. ಈ ಶಬ್ದಕ್ಕೆ ಆತ್ಮವೆಂಬರ್ಥವೇ ಭಾಷ್ಯದಲ್ಲಿದೆ.

2. ಆದ್ದರಿಂದ ಜ್ಞಾನಿಗೆ ಸಂಸಾರವಿಲ್ಲ.

3. ಚಿದಾಭಾಸವನ್ನೂ ಸಾಕ್ಷಿಯನ್ನೂ ವಿಂಗಡಿಸಿಕೊಳ್ಳದ್ದರಿಂದ ಚಿದಾಭಾಸ ಪ್ರಯುಕ್ತವಾದ ಅನೇಕತ್ವವು ಆತ್ಮನದೆಂದು ತೋರುತ್ತಿದೆ ಎಂದರ್ಥ.

೫೪. ಬಿಂಬವಿಲ್ಲದೆ ನೀರಿನಲ್ಲಿ ಪ್ರತಿಬಿಂಬವು ಹೇಗೆತಾನೆ ಇದ್ದೀತು ? ಹಾಗೆಯೇ ಆತ್ಮನಿಲ್ಲದೆ ಬುದ್ಧಿಯಲ್ಲಿ ಚಿದಾಭಾಸವು ಹೇಗೆತಾನೆ ಇದ್ದೀತು ?

ಪ್ರತಿಬಿನ್ಬಚಲತ್ವಾದ್ಯಾ ಯಥಾ ಬಿನ್ಬಸ್ಯ ಕರ್ಹಿಚಿತ್ ।
ನ ಭವೇಯುಸ್ತಥಾಭಾಸಕರ್ತೃತ್ವಾದ್ಯಾಸ್ತು ನಾತ್ಮನಃ ॥ ೫೫ ॥

೫೫. ಪ್ರತಿಬಿಂಬವು ಚಲಿಸುವದೇ ಮುಂತಾದದ್ದು ಹೇಗೆ ಎಂದಿಗೂ ಬಿಂಬಕ್ಕೆ ಸೇರಿದ್ದಾಗಲಾರದೋ ಹಾಗೆಯೇ ಆಭಾಸದ ಕರ್ತೃತ್ವವೇ ಮುಂತಾವವು[1] ಆತ್ಮನಿಗೆ ಸೇರಿದವಾಗಲಾರವು.

ಜಲೇ ಶೈತ್ಯಾದಿಕಂ ಯದ್ವಜ್ಜಲಭಾನುಂ ನ ಸಂಸ್ಪೃಶೇತ್ ।
ಬುದ್ಧೇಃ ಕರ್ಮಾದಿಕಂ ತದ್ವಚ್ಚಿದಾಭಾಸಂ ನ ಸಂಸ್ಪೃಶೇತ್ ॥ ೫೬ ॥

೫೬. ನೀರಿನಲ್ಲಿರುವ ತಂಪು ಮುಂತಾದದ್ದು ಜಲಸೂರ್ಯನನ್ನು ಹೇಗೆ ಸೋಂಕದೆ ಇರುವದೋ ಹಾಗೆ ಬುದ್ಧಿಯ ಕರ್ತೃತ್ವಾದಿಗಳು ಚಿದಾಭಾಸನನ್ನು ಸೋಂಕದೆ ಇರುವವು.

ಬುದ್ಧೇಃ ಕರ್ತೃತ್ವಭೋಕ್ತೃತ್ವದುಃಖಿತ್ವಾದ್ಯೈಸ್ತು ಸಂಯುತಃ ।
ಚಿದಾಭಾಸೋ ವಿಕಾರೀವ ಶರಾವಸ್ಥಾಮ್ಬುಭಾನುವತ್ ॥ ೫೭ ॥

೫೭. ಬುದ್ಧಿಯ ಕರ್ತೃತ್ವ, ಭೋಕ್ತೃತ್ವ, ದುಃಖಿತ್ವ– ಮುಂತಾದವುಗಳಿಂದ ಕೂಡಿರುವ ಚಿದಾಭಾಸವು ಶ್ರಾವೆಯಲ್ಲಿರುವ ಜಲಸೂರ್ಯಕದಂತೆ ವಿಕಾರಿಯಾಗಿರುವಂತೆ ತೋರುತ್ತದೆ.

ಶರಾವಸ್ಥೋದಕೇ ನಷ್ಟೇ ತತ್ಸ್ಥೋ ಭಾನುರ್ವಿನಶ್ಯತಿವತ್ ।
ಬುದ್ಧೇರ್ಲಯೇ ತಥಾ ಸುಪ್ತೌ ನಶ್ಯತಿವತ್ ಪ್ರತಿಭಾತ್ಯಯಮ್ ॥ ೫೮ ॥

೫೮. ಶ್ರಾವೆಯಲ್ಲಿರುವ ನೀರು ನಾಶವಾದರೆ ಆ ದರಲ್ಲಿರುವ ಸೂರ್ಯನೂ ನಾಶವಾದಂತೆ ಕಾಣುತ್ತದೆ. ಹೀಗೆಯೇ ಸುಷುಪ್ತಿಯಲ್ಲಿ ಬುದ್ಧಿಯು ಲಯವಾದರೆ ಈ (ಚಿದಾಭಾಸವು) ನಶ್ಯವಾದಂತೆ ಕಾಣಿಸುತ್ತದೆ.[2]

---

1. ಬರಿಯ ಆಭಾಸಕ್ಕೆ ನಿಜವಾಗಿ ಕರ್ತೃತ್ವವೇ ಮುಂತಾದದ್ದು ಚಿದಾಭಾಸಕ್ಕೂ ಇಲ್ಲವಾದರೂ ಚಿದಾಭಾಸವಿಶಿಷ್ಟವಾದ ಅಂತಃಕರಣವನ್ನೂ ಆತ್ಮನನ್ನೂ ವಿಂಗಡಿಸಿಕೊಳ್ಳದ ದಶೆಯಲ್ಲಿ ಆತ್ಮನಿಗೆ ಇರುವಂತೆ ತೋರುತ್ತದೆ. ಆದ್ದರಿಂದ ಆಭಾಸದ ಕರ್ತೃತ್ವಾದಿಗಳು ಎಂದಿದೆ.

2. ಚಿದಾಭಾಸವು ಆವಸ್ತುವಾದ್ದರಿಂದ ಅದಕ್ಕೆ ಯಾವ ವಿಕಾರವೂ ಇಲ್ಲ ಎಂಬವನ್ನು "ನಶ್ಯವಾದಂತೆ' ಎಂಬ ಮಾತು ಸೂಚಿಸುವದು.

ಆತ್ಮನು
ಪ್ರಕಾಶ್ಯವಾದ ಚಿದಾಭಾಸಾದಿಗಳಿಗಿಂತಲೂ ವಿಲಕ್ಷಣನು

ಜಲಸ್ಯಾರ್ಕಂ ಜಲಂ ಚೋರ್ಮಿಂ ಭಾಸಯನ್ ಭಾತಿ ಭಾಸ್ಕರಃ ।
ಆತ್ಮಾಭಾಸಂ ಧಿಯಂ ಬುದ್ಧೇಃ ಕರ್ತೃತ್ವಾದೀನಯಂ ತಥಾ ॥ ೫೯ ॥

೫೯. ಜಲಸೂರ್ಯಕವನ್ನೂ ನೀರನ್ನೂ ಅಲೆಯನ್ನೂ ಬೆಳಗುತ್ತಾ ಹೇಗೆ ಸೂರ್ಯನು (ತಾನೇ) ಬೆಳಗುತ್ತಿರುವನೋ, ಹಾಗೆ ಈ (ಆತ್ಮನು) ಆತ್ಮಾಭಾಸವನ್ನೂ ಬುದ್ಧಿಯನ್ನೂ ಬುದ್ಧಿಯ ಕರ್ತೃತ್ವಾದಿಗಳನ್ನೂ (ಬೆಳಗುತ್ತಾ ತಾನೇ ಬೆಳಗುತ್ತಿರುವನು).[1]

ನೋಷ್ಣಾವಭಾಸಕೋ ಭಾನುರ್ಮೋಷ್ಣಚ್ಛನ್ನೋಽವಭಾಸತೇ ।
ನೋಹಾವಭಾಸಕಸ್ತದ್ವನ್ನೋಹಚ್ಛನ್ನೋ ವಿಭಾತ್ಯಯಮ್ ॥ ೬೦ ॥

೬೦. ಮೋಡವಸ್ನ್ನು ಬೆಳಗುವ ಸೂರ್ಯನು ಮೋಡದಿಂದ ಮುಚ್ಚಿರುವಂತೆ ತೋರುತ್ತಿರುತ್ತಾನೆ. ಅದರಂತೆ ಅಜ್ಞಾನವನ್ನು ಬೆಳಗುವ ಈ (ಆತ್ಮನು) ಅಜ್ಞಾನದಿಂದ ಮುಚ್ಚಿಕೊಂಡಿರುವಂತೆ ಕಾಣಿಸುತ್ತಾನೆ.

ಭಾಸ್ಯಂ ನೋಷ್ಣಾದಿಕಂ ಭಾನುರ್ಭಾಸಯನ್ ಪ್ರತಿಭಾಸತೇ ।
ತಥಾ ಸ್ಥೂಲಾದಿಕಂ ಭಾಸ್ಯಂ ಭಾಸಯನ್ ಪ್ರಭಾತ್ಯಯಮ್ ॥ ೬೧ ॥

೬೧. ಭಾಸ್ಯನಾದ ಮೋಡವೇ ಮುಂತಾದದ್ದನ್ನು ಬೆಳಗುತ್ತಾ ಸೂರ್ಯನು ತಾನೇ ಬೆಳಗುತ್ತಿರುತ್ತಾನೆ ಹಾಗೆಯೇ ಸ್ಥೂಲ(ಶರೀರ)ವೇ ಮುಂತಾದ ಭಾಸ್ಯವನ್ನು ಬೆಳಗುತ್ತಾ ಈ (ಆತ್ಮನು ತಾನೇ) ಬೆಳಗುತ್ತಿರುತ್ತಾನೆ.

ಸರ್ವಪ್ರಕಾಶಕೋ ಭಾನುಃ ಪ್ರಕಾಶ್ಯೈರ್ನೈವ ದೂಷ್ಯತೇ ।
ಸರ್ವಪ್ರಕಾಶಕೋ ಹ್ಯಾತ್ಮಾ ಸರ್ವೈಸ್ತದ್ವನ್ನ ದೂಷ್ಯತೇ ॥ ೬೨ ॥

೬೨. ಎಲ್ಲವನ್ನೂ ಬೆಳಗುವ ಸೂರ್ಯನು ಬೆಳಗಲ್ಪಡುತ್ತಿರುವ ವಸ್ತುಗಳಿಂದ ಯಾವ ದೋಷವನ್ನೂ ಹೊಂದುವದಿಲ್ಲ. ಅದರಂತೆ ಎಲ್ಲವನ್ನೂ ಬೆಳಗುತ್ತಿರುವ ಆತ್ಮನು ಯಾವ ದೋಷವನ್ನೂ ಹೊಂದುವದಿಲ್ಲ.[2]

---

1. ಪ್ರತಿಬಿಂಬವು ಮಿಕ್ಕ ವಸ್ತುಗಳನ್ನು ಬೆಳಗಬಹುದಾದರೂ ಸೂರ್ಯನನ್ನು ಬೆಳಗಲಾರದು; ಸೂರ್ಯನೇ ಅದರ ಬೆಳಗುವಿಕೆಗೆ ಮೂಲವು. ಇದರಂತೆ ಆತ್ಮಾಭಾಸವು ಮಿಗು ಅತ್ಮನಿಗೆ ಇಲ್ಲ; ಆತ್ಮನ ಬಲದಿಂದಲೇ ಅದು ಬೆಳಗುತ್ತಿರುವಂತೆ ಕಾಣುವದು.

2. ಕ. ೩–೨–೧೧.

ಮುಕುರಸ್ಥಂ ಮುಖಂ ಯದ್ವನ್ಮುಖವತ್ ಪ್ರಥತೇ ಮೃಷಾ ।
ಬುದ್ಧಿಸ್ಥಾಭಾಸಕಸ್ತದ್ವದಾತ್ಮವತ್ ಪ್ರಥತೇ ಮೃಷಾ ॥ ೬೩ ॥

೬೩. ಕನ್ನಡಿಯಲ್ಲಿರುವ ಮುಖವು ಹೇಗೆ ಸುಳ್ಳಾಗಿಯೇ ಮುಖದಂತೆ ತೋರುತ್ತಿರುವದೋ, ಅದರಂತೆ ಬುದ್ಧಿಯಲ್ಲಿರುವ ಆಭಾಸವು ಸುಳ್ಳಾಗಿಯೇ ಆತ್ಮನಂತೆ ತೋರುತ್ತಿರುವದು.

ಮುಕುರಸ್ಥಸ್ಯ ನಾಶೇನ ಮುಖನಾಶೋ ಭವೇತ್ ಕಥಮ್ ।
ಬುದ್ಧಿಸ್ಥಾಭಾಸನಾಶೇನ ನಾಶೋ ನೈವಾತ್ಮನಃ ಕ್ವಚಿತ್ ॥ ೬೪ ॥

೬೪. ಕನ್ನಡಿಯಲ್ಲಿರುವ (ಪ್ರತಿಬಿಂಬದ) ನಾಶದಿಂದ ಹೇಗೆ ಮುಖದ ನಾಶವು ಆದೀತು? ಬುದ್ಧಿಯಲ್ಲಿರುವ ಆಭಾಸದ ನಾಶದಿಂದ ಆತ್ಮನಿಗೆ ಎಂದಿಗೂ ನಾಶವಾಗಲಾರದು.[1]

ಆತ್ಮನಲ್ಲಿ ತೋರುವ ಭೇದವು ಹುಸಿ

ತಾನ್ಮ್ರಕಲ್ಪಿತದೇವಾದಿಸ್ತಾನ್ಮ್ರಾದನ್ಯ ಇವ ಸ್ಫುರೇತ್ ।
ಪ್ರತಿಭಾಸ್ಯಾದಿರೂಪೇಣ ತಥಾತ್ಮೋತ್ಥಮಿದಂ ಜಗತ್ ॥ ೬೫ ॥

೬೫. ತಾನ್ಮ್ರದಿಂದ ಮಾಡಿದ ದೇವರೇ ಮುಂತಾದದ್ದು ತಾನ್ಮ್ರಕ್ಕಿಂತ ಬೇರೆಯಾಗಿರುವಂತೆ ತೋರುತ್ತಿರುತ್ತದೆ. ಹಾಗೆಯೇ ಆತ್ಮನಿಂದ ಉಂಟಾಗಿರುವ ಜಗತ್ತು ಪ್ರತಿಭಾಸ್ಯವೇ ಮುಂತಾದ ರೂಪದಿಂದ (ತೋರುತ್ತಿರುತ್ತದೆ).

ಈಶಜೀವಾತ್ಮವದ್ ಭಾತಿ ಯಥೈಕಮಪಿ ತಾನ್ಮ್ರಕಮ್ ।
ಏಕೋಽಪ್ಯಾತ್ಮಾ ತಥೈವಾಯಮಿಶಜೀವಾದಿವನ್ಮೃಷಾ ॥ ೬೬ ॥

೬೬. ಹೇಗೆ ಒಂದೇ ತಾನ್ಮ್ರವೇ ಈಶ್ವರ, ಜೀವಾತ್ಮ–ಎಂಬಂತೆ ತೋರುವದೋ[2] ಹಾಗೆಯೇ ಆತ್ಮನು ಒಬ್ಬನೇ ಆದರೂ ಈಶ್ವರ, ಜೀವ –ಮುಂತಾದವುಗಳಾಗಿ ಹುಸಿಯಾಗಿ ತೋರುತ್ತಾನೆ.

ಯಥೇಶ್ವರಾದಿನಾಶೇನ ತಾನ್ಮ್ರನಾಶೋ ನ ವಿದ್ಯತೇ ।
ತಥೇಶ್ವರಾದಿನಾಶೇನ ನಾಶೋ ನೈಕಾತ್ಮನಃ ಸದಾ ॥ ೬೭ ॥

---

1. ಆಭಾಸಕ್ಕೆ ನಾಶಾಂತವಾದ ಯಾವ ವಿಕಾರವೂ ನಿಜವಾಗಿಲ್ಲವೆಂದು ಹಿಂದೆ ೫೮, ೫೯ನೆಯ ಶ್ಲೋಕಗಳಲ್ಲಿ ಹೇಳಿರುವದನ್ನೂ ಇಲ್ಲಿ ನೆನಪಿಡಬೇಕು.

2. ತಾನ್ಮ್ರದಿಂದ ದೇವರ ಆಕಾರವನ್ನೂ ಮಾಡಬಹುದು; ಮನುಷ್ಯಾದಿಗಳ ಆಕಾರವನ್ನೂ ಮಾಡಬಹುದು.

೬೭. ಹೇಗೆ ಈಶ್ವರಾದಿಗಳ ನಾಶದಿಂದ ತಾಮ್ರಕ್ಕೆ ನಾಶವಿಲ್ಲವೋ ಹಾಗೆ ಈಶ್ವರಾದಿ(ಭೇದವು) ನಾಶವಾದ್ದರಿಂದ ಆತ್ಮನಿಗೆ ಯಾವಾಗಲೂ ನಾಶವಿಲ್ಲ.

ಅಧ್ಯಸ್ತೋ ರಜ್ಜುಸರ್ಪೋಽಯಂ ಸತ್ಯವದ್ ರಜ್ಜುಸತ್ತಯಾ ।
ತಥಾ ಜಗದಿದಂ ಭಾತಿ ಸತ್ಯವತ್ ಸ್ವಾತ್ಮಸತ್ತಯಾ ॥ ೬೮ ॥

೬೮. ಅಧ್ಯಸ್ತವಾಗಿರುವ ಈ ರಜ್ಜುಸರ್ಪವು ಹೇಗೆ ಹಗ್ಗದ ಸತ್ತೆಯಿಂದ ಸತ್ಯವಾಗಿರುವಂತೆ ತೋರುತ್ತಿರುವದೋ ಹಾಗೆಯೇ ಈ ಜಗತ್ತು ತನ್ನ ಆತ್ಮನ ಸತ್ತೆಯಿಂದ ಸತ್ಯವೆಂದು ತೋರುತ್ತಿರುತ್ತದೆ[1].

ಅಧ್ಯಸ್ತಾಭೇರಭಾವೇನ ರಜ್ಜುರೇವಾವಶಿಷ್ಯತೇ ।
ತಥಾ ಜಗದಭಾವೇನ ಸದಾತ್ಮೈವಾವಶಿಷ್ಯತೇ ॥ ೬೯ ॥

೬೯. ಅಧ್ಯಸ್ತವಾದ ಹಾವು ಇಲ್ಲವಾದರೆ ಹಗ್ಗವೇ ಉಳಿದುಕೊಳ್ಳುತ್ತದೆ. ಹಾಗೆಯೇ ಜಗತ್ತು ಇಲ್ಲವಾದರೆ ಸದ್ರೂಪನಾದ ಆತ್ಮನೇ ಉಳಿದುಕೊಳ್ಳುತ್ತಾನೆ.

ಸ್ಫಟಿಕೇ ರಕ್ತತಾ ಯದ್ವದುಪಾಧೇರ್ನೀಲತಾಮ್ಬರೇ ।
ಯಥಾ ಜಗದಿದಂ ಭಾತಿ ತಥಾ ಸತ್ಯಮಿವಾದ್ವಯೇ ॥ ೭೦ ॥

೭೦. ಸ್ಫಟಿಕದಲ್ಲಿ ಹೇಗೆ (ಉಪಾಧಿಯ) ಕೆಂಪು (ತೋರುವದೋ), ಆಕಾಶದಲ್ಲಿ ಹೇಗೆ ನೀಲತ್ವವು (ತೋರುತ್ತಿರುವದೋ)[2], ಹಾಗೆಯೇ ಈ ಜಗತ್ತು ಅದ್ವಿತೀಯಾತ್ಮನಲ್ಲಿ ಸತ್ಯವಾಗಿರುವಂತೆ ತೋರುತ್ತಿರುವದು.

ಸ್ಫಟಿಕೇ ರಕ್ತತಾ ಮಿಥ್ಯಾ ಮೃಷಾ ಚೇ ನೀಲತಾ ಯಥಾ ।
ತಥಾ ಜಗದಿದಂ ಮಿಥ್ಯಾ ಏಕಸ್ಮಿನ್ನದ್ವಯೇ ಮಯಿ ॥ ೭೧ ॥

೭೧. ಸ್ಫಟಿಕದಲ್ಲಿ ಹೇಗೆ ಕೆಂಪು ಮಿಥ್ಯವಾಗಿರುವದೋ, ಆಕಾಶದಲ್ಲಿ ನೀಲವರ್ಣವೂ ಮಿಥ್ಯವಾಗಿರುವದೋ, ಹಾಗೆ ಎರಡನೆಯದಿಲ್ಲದ ಅದ್ವಿತೀಯನಾದ ನನ್ನಲ್ಲಿ ಈ ಜಗತ್ತು ಮಿಥ್ಯ.

ಜೀವೇಶ್ವರಾದಿಭಾವೇನ ಭೇದಂ ಪಶ್ಯತಿ ಮೂಢಧೀಃ ।
ನಿರ್ಭೇದೇ ನಿರ್ವಿಶೇಷೇಽಸ್ಮಿನ್ ಕಥಂ ಭೇದೋ ಭವೇದ್ ಧ್ರುವಮ್ ॥

---

1. ಅದಕ್ಕೆ ಬೇರೆಯ ಇರವು ಇಲ್ಲ.
2. ಇದು ನಿರುಪಾಧಿಕವಾದ ಅಧ್ಯಾಸಕ್ಕೆ ಉದಾಹರಣೆ

೭೨. ಮೂಢಬುದ್ಧಿಯುಳ್ಳವನು ಜೀವೇಶ್ವರತ್ವವೇ ಮುಂತಾದ ರೂಪದಿಂದ ಭೇದವನ್ನು ಕಾಣುತ್ತಿರುವನು. ಯಾವ ಭೇದವೂ ಇಲ್ಲದ, ಯಾವ ವಿಶೇಷವೂ ಇಲ್ಲದ ಈ (ಆತ್ಮ)ನಲ್ಲಿ ಹೇಗೆತಾನೆ ನಿಜವಾಗಿ ಭೇದವಿದ್ದೀತು ?

ಜೀವೇಶ್ವರಭೇದಕ್ಕೆ ಕಾರಣ

ಲಿಙ್ಗಸ್ಯ ಧಾರಣಾದೇವ ಶಿವೋಽಯಂ ಜೀವತಾಂ ವ್ರಜೇತ್ ।
ಲಿಙ್ಗನಾಶೇ ಶಿವಸ್ಯಾಸ್ಯ ಜೀವತಾವೇಶತಾ ಕುತಃ ॥ ೭೩ ॥

೭೩. ಲಿಂಗಶರೀರವನ್ನು[1] ಧರಿಸುವದರಿಂದಲೇ ಈ ಶಿವನು ಜೀವತ್ವವನ್ನು ಹೊಂದುವನು. ಲಿಂಗವು ನಾಶವಾದರೆ ಈ ಶಿವನಿಗೆ ಜೀವತ್ವಾವೇಶವು ಎಲ್ಲಿಂದ ಬರುವದು ?

ಜೀವೇಶ್ವರೈಕ್ಯಜ್ಞಾನದ ಸ್ತುತಿ

ಶಿವ ಏವ ಸದಾ ಜೀವೋ ಜೀವ ಏವ ಸದಾ ಶಿವಃ ।
ವೇತ್ತೈಕ್ಯಮನಯೋರ್ಯಸ್ತು ಸ ಆತ್ಮಜ್ಞೋ ನ ಚೇತರಃ ॥ ೭೪ ॥

೭೪. ಶಿವನೇ ಯಾವಾಗಲೂ ಜೀವನು, ಜೀವನೇ ಯಾವಾಗಲೂ ಶಿವನು.[2] ಇವರಿಬ್ಬರಿಗೂ ಐಕ್ಯವನ್ನು ಯಾವನು ಅರಿತುಕೊಂಡಿರುವನೋ ಅವನೇ ಆತ್ಮಜ್ಞನು, ಮತ್ತೊಬ್ಬನಲ್ಲ[3].

ಕ್ಷೀರಯೋಗಾದ್ ಯಥಾ ನೀರಂ ಕ್ಷೀರವದ್ ದೃಶ್ಯತೇ ಮೃಷಾ ।
ಆತ್ಮಯೋಗಾದನಾತ್ಮಾಯಮಾತ್ಮವದ್ ದೃಶ್ಯತೇ ತಥಾ ॥ ೭೫ ॥

೭೫. ಹಾಲಿನ ಸಂಬಂಧದಿಂದ ಹೇಗೆ ನೀರು ಹಾಲಿನಂತೆ ಸುಳ್ಳಾಗಿಯೇ ತೋರುತ್ತಿರುವದೋ ಹಾಗೆಯೇ ಈ ಅನಾತ್ಮವು ಆತ್ಮನಂತೆಯೇ ಕಾಣುತ್ತಿರುವದು.

ನೀರಾತ್ ಕ್ಷೀರಂ ಪೃಥಕ್ಕೃತ್ಯ ಹಂಸೋ ಭವತಿ ನಾನ್ಯಥಾ ।
ಸ್ಥೂಲಾದೇಃ ಸ್ವಂ ಪೃಥಕ್ಕೃತ್ಯ ಮುಕ್ತೋ ಭವತಿ ನಾನ್ಯಥಾ ॥ ೭೬ ॥

1. ಸೂಕ್ಷ್ಮಶರೀರವನ್ನು.

2. ಜೀವನಾಗಿ ತೋರುತ್ತಿರುವವನು ಶಿವನೇ, ಜೀವನಾಗಿ ತೋರುವವನು ಶಿವನಾಗಿ ಶಿವನೇ ಆಗಿರುತ್ತಾನೆ– ಎಂದರ್ಥವನ್ನು ಮಾಡಬೇಕು. ಸಂಸಾರಿಯಾದ ಜೀವನಿಗೂ ಅಸಂಸಾರಿಯಾದ ಶಿವನಿಗೂ ಐಕ್ಯವಿಲ್ಲ. ಭಾಷ್ಯದಲ್ಲಿ ಪರಮಾತ್ಮನನ್ನು ಶಿವನೆಂದು ಕರೆದಿರುವದು ಎಲ್ಲಿಯೂ ಕಂಡುಬರುವದಿಲ್ಲ.

3. ಜೀವಶಿವಭೇದವನ್ನು ನಿಜವೆಂದುಕೊಂಡಿರುವನನು.

೨೨. ನೀರಿನಿಂದ ಹಾಲನ್ನು ಬೇರ್ಪಡಿಸಿಕೊಂಡರೇ ಹಂಸವಾಗುವದು. ಬೇರೆ ರೀತಿಯಲ್ಲಿ ಆಗದು. ಹಾಗೆಯೇ ಸ್ಥೂಲ(ಶರೀರ)ವೇ ಮುಂತಾದ್ದರಿಂದ ತನ್ನ (ಆತ್ಮನನ್ನು) ಬೇರ್ಪಡಿಸಿಕೊಂಡರೇ ಮುಕ್ತನಾಗುವನು, ಬೇರೆಯ ರೀತಿಯಿಂದ (ಆಗನು).

ಕ್ಷೀರನೀರವಿವೇಕಜ್ಞೋ ಹಂಸ ಏವ ನ ಚೇತರಃ ।
ಆತ್ಮಾನಾತ್ಮವಿವೇಕಜ್ಞೋ ಯತಿರೇವ ನ ಚೇತರಃ ॥ ೨೨ ॥

೨೨. ಹಾಲುನೀರುಗಳ ವಿಂಗಡವನ್ನು ಬಲ್ಲದ್ದು ಹಂಸವೇ, ಮತ್ತೊಂದಲ್ಲ. ಆತ್ಮಾನಾತ್ಮರ ವಿಂಗಡವನ್ನು ಅರಿತವನು ಯತಿಯೇ, ಮತ್ತೊಬ್ಬನಲ್ಲ.

ಆತ್ಮಜ್ಞನಿಗೆ ಸಂಸಾರಭಯವಿಲ್ಲ

ಅಧ್ಯಸ್ತ ಚೋರಜಃ ಸ್ಥಾಣೋರ್ವಿಕಾರಃ ಸ್ಯಾನ್ನ ಹಿ ಕ್ವಚಿತ್ ।
ನಾತ್ಮನೋ ನಿರ್ವಿಕಾರಸ್ಯ ವಿಕಾರೋ ವಿಶ್ವಜಸ್ತಥಾ ॥ ೨೩ ॥

೨೩. ಆಧ್ಯಸ್ತವಾದ ಜೋರಸಿಂದಾದದ್ದು ಮೋಟುಮರದ ವಿಕಾರವಲ್ಲ[1]. ಪ್ರಪಂಚದಿಂದಾದದ್ದು ನಿರ್ವಿಕಾರನಾದ ಆತ್ಮನ ವಿಕಾರವೂ ಅಲ್ಲ.

ಜ್ಞಾತೇ ಸ್ಥಾಣೌ ಕುತಶ್ಚೋರಶ್ಚೋರಾಭಾವೇ ಭಯಂ ಕುತಃ ।
ಜ್ಞಾತೇ ಸ್ವಸ್ಮಿನ್ ಕುತೋ ವಿಶ್ವಂ ವಿಶ್ವಾಭಾವೇ ಕುತೋಽಶಿವಮ್[2] ॥

೨೯. ಮೋಟುಮರವೆಂದು ಅರಿತುಕೊಂಡರೆ ಕಳ್ಳನೆಲ್ಲಿರುವನು ? ಕಳ್ಳನಿಲ್ಲದಿದ್ದರೆ ಹೆದರಿಕೆಯೆಲ್ಲಿರುವದು ? ಆತ್ಮನನ್ನು ಅರಿತುಕೊಂಡರೆ ಜಗತ್ತಿಲ್ಲಿರುವದು ? ಜಗತ್ತಿಲ್ಲದಿದ್ದರೆ ಅಮಂಗಲ(ವಾದ ಸಂಸಾರ)ವೆಲ್ಲಿರುವದು ?

ಉಪಸಂಹಾರ

ಗುಣವೃತ್ತಿತ್ರಯಂ ಭಾತಿ ಪರಸ್ಪರವಿಲಕ್ಷಣಮ್ ।
ಸತ್ಯಾತ್ಮಲಕ್ಷಣೇ ಯಸ್ಮಿನ್ ಸ ನಿವಾಹಂ ನಿರಂಶಕಃ ॥ ೨೦ ॥

೨೦. ಒಂದಕ್ಕಿಂತ ಒಂದು ವಿಲಕ್ಷಣವಾದ ಗುಣವೃತ್ತಿಗಳು ಮೂರೂ ಸತ್ಯಾತ್ಮಲಕ್ಷಣನಾದ ಯಾವನಲ್ಲಿ ತೋರುತ್ತಿರುವದೋ ಆ ನಿರಂಶನೇ ನಾನು[4].

---

1. ಕಾರ್ಯವಲ್ಲ.
2. 'ಅಖಿಲಮ್' ಎಂಬ ಅಚ್ಚಿನ ಪಾಠವನ್ನು ಸಂದರ್ಭಕ್ಕೆ ಸತಿಯಾಗಿ ಹೀಗೆಂದು ತಿದ್ದಿಕೊಂಡಿದೆ.
3. ಸತ್ತ್ವರಜಸ್ತಮೋಗುಣಗಳ ವ್ಯಾಪಾರಗಳು.
4. ಜಾಗ್ರತ್ತೇ ಮುಂತಾದವು ನನ್ನ ಅಂಶಗಳಲ್ಲ.

ದೇಹತ್ರಯಮಿದಂ ಭಾತಿ ಯಸ್ಮಿನ್ ಬ್ರಹ್ಮಣಿ ಸತ್ಯವತ್ ।
ತದೇವಾಹಂ ಪರಂ ಬ್ರಹ್ಮ ದೇಹತ್ರಯವಿಲಕ್ಷಣಃ ॥ ೮೧ ॥

೮೧. ಈ ಮೂರು ದೇಹಗಳೂ ಸತ್ಯವಾಗಿರುವಂತೆ ಯಾವ ಬ್ರಹ್ಮದಲ್ಲಿ ಕಾಣುತ್ತಿರುವವೋ ದೇಹತ್ರಯವಿಲಕ್ಷಣನಾಗಿರುವುದರಿಂದ ಆ ಪರಬ್ರಹ್ಮವೇ ನಾನು.

ಜಾಗ್ರದಾದಿತ್ರಯಂ ಯಸ್ಮಿನ್ ಪ್ರತ್ಯಗಾತ್ಮನಿ ಸತ್ಯವತ್ ।
ಸ ಏವಾಹಂ ಪರಂ ಬ್ರಹ್ಮ ಜಾಗ್ರದಾದಿವಿಲಕ್ಷಣಃ ॥ ೮೨ ॥

೮೨. ಎಚ್ಚರವೇ ಮುಂತಾದ ಮೂರು (ಅವಸ್ಥೆಗಳೂ) ಯಾವ ಪ್ರತ್ಯಗಾತ್ಮನಲ್ಲಿ ಸತ್ಯವಾಗಿರುವಂತೆ ತೋರುತ್ತಿರುವವೋ, ಜಾಗ್ರದಾದಿವಿಲಕ್ಷಣನಾಗಿರುವುದರಿಂದ ಆ ಪರಬ್ರಹ್ಮವೇ ನಾನು.

ವಿಶ್ವಾದಿಕತ್ರಯಂ ಯಸ್ಮಿನ್ ಪರಮಾತ್ಮನಿ ಸತ್ಯವತ್ ।
ಸ ಏವ ಪರಮಾತ್ಮಾಹಂ ವಿಶ್ವಾದಿಕವಿಲಕ್ಷಣಃ ॥ ೮೩ ॥

೮೩. ವಿಶ್ವನೇ[1] ಮುಂತಾದ ಮೂವರು (ಆತ್ಮರೂ) ಯಾವ ಪರಮಾತ್ಮನಲ್ಲಿ ಸತ್ಯವಾಗಿರುವಂತೆ ಕಾಣಿಸುತ್ತಿರುವರೋ, ವಿಶ್ವಾದಿವಿಲಕ್ಷಣನಾಗಿರುವ ಆ ಪರಮಾತ್ಮನೇ ನಾನು.

ವಿರಾಡಾದಿತ್ರಯಂ ಭಾತಿ ಯಸ್ಮಿನ್ ಸಾಕ್ಷಿಣಿ ಸತ್ಯವತ್ ।
ಸ ಏವ ಸಚ್ಚಿದಾನನ್ದಲಕ್ಷಣೋಽಹಂ ಸ್ವಯಂಪ್ರಭಃ ॥ ೮೪ ॥

೮೪. ಯಾವ ಸಾಕ್ಷಿಯಲ್ಲಿ ವಿರಾಡಾದಿತ್ರಯವೂ[2] ಸತ್ಯವಾಗಿರುವಂತೆ ತೋರುತ್ತಿರುವುದೋ ಅದೇ ಸಚ್ಚಿದಾನಂದಲಕ್ಷಣನಾದ ಸ್ವಯಂಪ್ರಕಾಶನಾದ ಪರಮಾತ್ಮನು ನಾನು.

॥ ಓಂ ತತ್ ಸತ್ ॥

1. ವಿಶ್ವನು ಜಾಗ್ರದಭಿಮಾನಿವ್ಯಷ್ಟಿಯೆಂದೂ ವಿರಾಟ್ಪುರುಷನು ಸಮಷ್ಟಿಯೆಂದೂ ನಿಂಗಡಿಸುವ ವಾಡಿಕೆಯು ಭಾಷ್ಯದಲ್ಲಿಲ್ಲ.

2. ವಿಶ್ವವಿರಾಜರ ಐಕ್ಯವನ್ನು ಇಲ್ಲಿ ಏಕೆ ಹೇಳಲಿಲ್ಲವೊ ತಿಳಿಯದು.

ಅದ್ವೈತಾನುಭೂತಿಯ ಸಾರ

೧. ನಾನು ಸಚ್ಚಿದಾನಂದ ಸ್ವರೂಪನಾದ ಅದ್ವಿತೀಯನಾದ ನಿಶ್ಚಲನಾದ ಪರಮಾತ್ಮನೇ.

೨-೨೩. ಚಂದ್ರನಿಗೆ ಕಣ್ಣಿನ ದೋಷದಿಂದ ದ್ವಿತ್ವವು ತೋರಿದರೂ ನಿಜವಾಗಿ ಅವನು ಒಬ್ಬನೇ ಆಗಿರುವಂತೆ ಆತ್ಮನು ಅವಿದ್ಯೆಯಿಂದ ಸದ್ವಿತೀಯನಾಗಿ ತೋರಿದರೂ ನಿಜವಾಗಿ ಅದ್ವಿತೀಯನಾಗಿರುವನು. ಆತ್ಮನ ಕಾರ್ಯವಾದ ಆಕಾಶವು ಪೂರ್ಣವಾಗಿ, ಅದ್ವಿತೀಯವಾಗಿ, ನಿರ್ವಿಕಾರವಾಗಿ ಆಕಾಶಾಂತರರಹಿತವಾಗಿ, ಇರುವಂತೆ ಆತ್ಮನೂ ಪೂರ್ಣನಾಗಿ ಅದ್ವಿತೀಯನಾಗಿ ನಿರ್ವಿಕಾರನಾಗಿ ಆತ್ಮಾಂತರರಹಿತನಾಗಿರುತ್ತಾನೆ. ನೀರೇ ಆಲಿಕಲ್ಲಾಗಿರುವಂತೆ, ಗುಳ್ಳೆಯಾಗಿರುವಂತೆ, ಆತ್ಮನೇ ಅವಿದ್ಯೆಯಿಂದ ಪ್ರಪಂಚವಾಗಿರುತ್ತಾನೆ. ಹಾವು ಹಿಟ್ಟ ಪೊರೆಯಂತೆಯೂ ಮಜ್ಜಿಗೆಗೆ ಸೇರಿದ ಉಪ್ಪಿನಂತೆಯೂ ಬೆಂಕಿಯಿಂದ ಉರಿಯುವ ಕಟ್ಟಿಗೆಯಂತೆಯೂ ಆತ್ಮನ ಸ್ಥೂಲಾದಿದೇಹಗಳನ್ನು ತಿಳಿಯಬೇಕು; ಅವನು ಅದಕ್ಕಿಂತ ವಿಲಕ್ಷಣನು, ಅವುಗಳ ದೋಷವು ಅವನಿಗೆ ಸೋಂಕುವದಿಲ್ಲ; ಅವನು ಎಲ್ಲವನ್ನೂ ಬೆಳಗುವನು, ಅವು ಅವನಿಂದಲೇ ಬೆಳಗುತ್ತಿರುವವು.

೨೪-೨೬. ಬೆಲ್ಲವೆ ಸಂಪರ್ಕದಿಂದ ಹಿಟ್ಟು ಮುಂತಾದವು ಸಿಹಿಯಾಗಿ ಇಷ್ಟವಾಗುವಂತೆ, ಬೆಂಕಿಯ ಸಂಪರ್ಕದಿಂದ ಪದಾರ್ಥಗಳು ಬಿಸಿಯಾಗುವಂತೆ, ಆತ್ಮನ ಸಂಪರ್ಕದಿಂದ ನಸ್ತುಗಳು ಪ್ರಿಯವಾಗಿ ಸ್ಫೂರ್ತಿಯನ್ನು ಪಡೆದಿರುತ್ತವೆ.

೨೭-೩೯. ಆತ್ಮನು ಬಗೆಬಗೆಯ ದೇಹಗಳಿಂದ ನಾನಾತ್ವವನ್ನಾಗಲಿ ವಿಕಾರವನ್ನಾಗಲಿ ಹೊಂದುವದಿಲ್ಲ. ಆಕಾಶವು ಗಡಿಗೆ ಮುಂತಾದವುಗಳಿಂದಲೂ ನೀರು ಬಗೆಬಗೆಯ ಹೂಗಳಿಂದಲೂ ಸೂರ್ಯಕಾಂತಿಯು ಹೊರಸಿನ ಕಂಡಿಗಳಿಂದಲೂ ಅವುಗಳ ಧರ್ಮವನ್ನು ಪಡೆಯದಿರುವಂತೆ ಆತ್ಮನು ದೇಹಗಳ ಯಾವ ಸ್ವಭಾವವನ್ನೂ ಪಡೆಯುವೆ ಇರುತ್ತಾನೆ. ದೃಶ್ಯವಾಗಿರುವದರಿಂದಲೂ ಭೌತಿಕವಾಗಿರುವದರಿಂದಲೂ ಅನೇಕಾತ್ಮಕವಾಗಿರುವದರಿಂದಲೂ ಚಂಚಲವಾಗಿರುವದರಿಂದಲೂ ದೇಹೇಂದ್ರಿಯಪ್ರಾಣಮನಸ್ಸುಗಳು ವಿಲಕ್ಷಣನಾದ ಆತ್ಮನಲ್ಲ. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಜ್ಞಾನ, ಅಹಂಕಾರ – ಎಲ್ಲವನ್ನೂ ಬೆಳಗುತ್ತಿರುವದರಿಂದ ಆತ್ಮನು ಅವೆಲ್ಲಕ್ಕಿಂತಲೂ ವಿಲಕ್ಷಣಸ್ವಭಾವದವನಾಗಿರುತ್ತಾನೆ. ಎಲ್ಲವೂ ವಿಷಯವಾಗಿರುವದರಿಂದ ಆತನಲ್ಲ; ಅಹಂಕಾರವು ವಿಷಯಿಯಾಗಿ ತೋರಿದರೂ ಸುಷುಪ್ತಿಯಲ್ಲಿ ಮರೆಯಾಗುವದರಿಂದ ಅದೂ ಆತ್ಮನಲ್ಲ.

೪೦-೪೨. ಸುಷುಪ್ತಿಯಲ್ಲಿ ನಿರ್ವಿಕಾರನಾಗಿರುವಂತೆ ಜಾಗ್ರತ್ಸ್ವಪ್ನಗಳಲ್ಲಿಯೂ ಆತ್ಮನು ನಿರ್ವಿಕಾರನಾಗಿಯೇ ಇರುತ್ತಾನೆ, ಉಪಾಧಿವಶದಿಂದ ವಿಕಾರಿಯಾಗಿ ತೋರಿದರೂ ಉಪಾಧಿಯ ಧರ್ಮಗಳು ಯಾವವೂ ನಿಜವಾಗಿ ಅವನಿಗೆ ಸೇರಿರುವದಿಲ್ಲ; ಅವನು ಉಪಾಧಿಗಳಿಂದ ಚಲಿಸುವಂತೆ ತೋರಿದರೂ ಕೂಟಸ್ಥನಾಗಿರುತ್ತಾನೆ.

೪೩-೫೨. ದೇಹತ್ರಯವೇ ತಾನೆಂದು ತಿಳಿದಿರುವವರೆಗೂ ಆತ್ಮನಿಗೆ ಸಂಸಾರವಿರುತ್ತದೆ. ಕನಸಿನ ದೇಹದ ಸುಖದುಃಖಗಳು ಎಚ್ಚರದ ದೇಹಕ್ಕೆ ಅಂಟದಿರುವಂತೆ ಯಾವ

ದೇಹದ ಧರ್ಮವೂ ನಿಜವಾದ ಆತ್ಮನಿಗೆ ಅಂಟದೆ ಇರುತ್ತದೆ. ಆದರೂ ಅಜ್ಞಾನವನು ಇಲ್ಲದ ಸಂಸಾರವನ್ನು ತನ್ನ ಧರ್ಮವೆಂಬಂತೆ ಕಲ್ಪಿಸಿಕೊಂಡಿರುತ್ತಾನೆ. ಜ್ಞಾನಿಗೆ ಅಂತಃಕರಣವೇ ಮುಂತಾಗಿ ಎಲ್ಲವೂ ಆತ್ಮನೇ ಆಗಿಬಿಡುತ್ತದೆ. ಹೀಗೆ ಆತ್ಮನು ದೇಹ ಗಳಿಗೆ ಸಂಬಂಧಪಡದೆ ಇರುವದರಿಂದ ತಾನು ನಿಜವಾಗಿ ಒಬ್ಬನೇ ಆಗಿದ್ದು ಬೇರೆಬೇರೆ ದೇಹಗಳಲ್ಲಿ ಬೇರೆಬೇರೆಯಾಗಿರುವಂತೆ ಮೂಢರಿಗೆ ತೋರುತ್ತಾನೆಂದು ತಿಳಿಯಬೇಕು.

೫೩-೫೮. ಸೂರ್ಯನ ಪ್ರತಿಬಿಂಬದಂತೆ ಚಿದಾಭಾಸವು ಅಂತಃಕರಣದಲ್ಲಿ ತೋರು ತ್ತಿರುತ್ತದೆ. ಆದರ ಕರ್ತೃತ್ವಾದಿಗಳು ಆತ್ಮನಿಗೆ ಸೇರಿಲ್ಲ. ಅದು ಅಸತ್ತಾಗಿರುವದರಿಂದ ಉಪಾಧಿಯ ಅಂತಃಕರಣದ ಧರ್ಮವು ಯಾವದೂ ನಿಜವಾಗಿ ಆ ಚಿದಾಭಾಸಕ್ಕೆ ಸೇರಿರುವದಿಲ್ಲ. ಆದರೂ ಬುದ್ಧಿಯ ಸಂಬಂಧದಿಂದ ವಿಕಾರಿಯೆಂದು ತೋರುತ್ತಿರುವದು.

೫೯-೬೪. ಚಿದಾಭಾಸಸಹಿತವಾಗಿ ಎಲ್ಲವನ್ನೂ ಆತ್ಮನು ಬೆಳಗುತ್ತಿರುವನು. ಅವನಿಗೆ ಪ್ರಕಾಶ್ಯವಾದ ಬೇರೆ ಧರ್ಮವೂ ಅಂಟುವದಿಲ್ಲ. ಕನ್ನಡಿಯಲ್ಲಿರುವ ಮುಖವು ನಿಜವಾಗಿ ಮುಖದಂತೆಯೇ ಕಾಣುತ್ತಿರುವಂತೆ ಚಿದಾಭಾಸವೂ ಆತ್ಮನೆಂದೇ ತೋರುತ್ತಿರುವದು.

೬೫-೭೨. ತಾಮ್ರವು ಬೇರೆಬೇರೆಯ ಪ್ರತಿಮೆಗಳ ಆಕಾರದಲ್ಲಿ ತೋರುತ್ತಿರುವಂತೆ ಒಬ್ಬನೇ ಆತ್ಮನು ಈಶ್ವರಜೀವಾದಿಭೇದಗಳ ರೂಪದಲ್ಲಿ ತೋರುತ್ತಿರುವನು. ಆದರೆ ಅವುಗಳ ದೋಷಗಳು ಅವನಿಗೆ ಅಂಟುವದಿಲ್ಲ. ಜಗತ್ತೆಲ್ಲವೂ ಆತ್ಮನಲ್ಲಿ ಅಧ್ಯಸ್ತವಾಗಿರು ತ್ತದೆ; ಆದು ಸತ್ಯವಾಗಿ ತೋರುತ್ತಿದ್ದರೂ ಮಿಥ್ಯೆಯಾಗಿದೆ. ನಿರ್ವಿಕೇಷನಾದ ಆತ್ಮನಲ್ಲಿ ಯಾವ ಭೇದವೂ ನಿಜವಾಗಿ ಇರುವದಿಲ್ಲ.

೭೩-೭೯. ಲಿಂಗದೇಹಸಂಬಂಧದಿಂದ ಈಶ್ವರನಿಗೇ ಜೀವತ್ವವು ತೋರುತ್ತಿರು ತ್ತದೆ; ಜೀವೇಶ್ವರಭೇದವು ಯಾವಾಗಲೂ ಸತ್ಯವಲ್ಲ. ಹಾಲಿನಲ್ಲಿ ಬೆರೆತಿರುವದರಿಂದ ನೀರೂ ಹಾಲಾಗಿ ತೋರುವಂತೆ ಆತ್ಮನ ಸಂಬಂಧದಿಂದ ಅನಾತ್ಮವೂ ಆತ್ಮನಾಗಿ ತೋರು ತ್ತಿರುವದು. ಹಾಲುನೀರುಗಳನ್ನು ಹಂಸವು ವಿಂಗಡಿಸುವಂತೆ ಆತ್ಯನಾತ್ಮಗಳನ್ನು ಯತಿ ಯಾದವನು ವಿಂಗಡಿಸಿಕೊಳ್ಳಬೇಕು. ಅನಾತ್ಮವು ಆತ್ಮನಲ್ಲಿ ಅಧ್ಯಸ್ತವಾಗಿರುವದೆಂದು ತಿಳಿದುಕೊಂಡರೆ ಮೋಟುಮರದಲ್ಲಿ ಅಧ್ಯಸ್ತವಾಗಿದ್ದ ಕಳ್ಳನಂತೆ ಅವರ ಅಂಜಿಕೆಯು ತಪ್ಪುವದು. ಪ್ರಪಂಚವೇ ಇಲ್ಲದನೆಲೆ ಸಂಸಾರದ ಅಂಜಿಕೆಯೆಲ್ಲಿಯದು?

೮೦. ಪರಮಾತ್ಮನು ನಿರಂಶನು; ಅವನಲ್ಲಿ ಪರಸ್ಪರವಿಲಕ್ಷಣವಾದ ಗುಣ ತ್ರಯವು ತೋರುತ್ತಿರುವದು. ಆ ಆತ್ಮನು ದೇಹತ್ರಯವಿಲಕ್ಷಣನು, ಅವನಲ್ಲಿ ಈ ಮೂರು ದೇಹವೂ ತೋರುತ್ತಿರುವದು. ಅವನು ನಿರವಸ್ಥನು; ಅವನಲ್ಲಿ ಅವಸ್ಥಾತ್ರಯವು ತೋರು ತ್ತಿರುವದು. ಅವನು ವಿಶ್ವತೈಜಸಾನರಾದಿಭೇದಗಳಿಲ್ಲದವನು; ಆದರೂ ಅವು ಅವನಲ್ಲಿ ತೋರುತ್ತಿರುವದು. ಇಂಥ ಸಚ್ಚಿದಾನಂದಲಕ್ಷಣನಾದ ಆತ್ಮನು ನಾನು, ಆನ್ನರಿಂದ ಪರಬ್ರಹ್ಮವೇ ನಾನು.

—✕✕✕—

ಪರಿಶಿಷ್ಟ

ಅದ್ವೈತಾನುಭೂತಿಯಲ್ಲಿರುವ ಉಪಮಾನಗಳು

ಇಲ್ಲಿ ಕೊಟ್ಟಿರುವ ಉಪಮಾನಗಳು ಯಾವ ಯಾವ ಅಂಶದಲ್ಲಿ ಉಪಮೇಯಗಳಿಗೆ ಅನುಗುಣವಾಗಿವೆ ಎಂಬುದನ್ನು ಲಕ್ಷಿಸಿ ಭಾಷ್ಯದಲ್ಲಿ ಈ ಉಪಮಾನಗಳನ್ನು ಹೇಗೆ ಪ್ರಯೋಗಿಸಿದೆ ಎಂಬುದನ್ನು ಹೋಲಿಸಿನೋಡಬೇಕು. ಇಲ್ಲಿ ಉಪಮಾನದ ಮುಂದೆ ಕೊಟ್ಟಿರುವ ಸಂಖ್ಯೆಗಳು ಶ್ಲೋಕವನ್ನು ಸೂಚಿಸುತ್ತವೆ; ನಕ್ಷತ್ರಚಿಹ್ನೆಯು ಈ ಉಪಮಾನವು ಭಾಷ್ಯದಲ್ಲಿ ಕಾಣಬರುವದಿಲ್ಲವೆಂಬುದನ್ನು ಸೂಚಿಸುತ್ತದೆ.

೧.	ಕಣ್ಣಿನ ದೋಷದಿಂದ ತೋರುವ ಚಂದ್ರದ್ವಿತ್ವ,	೨	
೨.	ಆಕಾಶಕ್ಕೆ ಉಪಾಧಿಯಿಂದ ತೋರುವ ದ್ವಿತ್ವ,	೩	
೩.	ಮೋಡದ ಸಂಬಂಧದಿಂದ ನೀಲ ಆಲಿಕಲ್ಲಾಗುವದು,*	೨೦	
೪.	ನೀರಿನ ಗುಳ್ಳೆ,	೨೪	
೫.	ಹಾವಿನ ಪೊರೆ,	೧೬	
೬.	ಮಜ್ಜಿಗೆ, ಉಪ್ಪು,*	೧೯	
೭.	ಕಬ್ಬಿಣವೂ ಬೆಂಕಿಯೂ,	೨೦	
೮.	ಸೂರ್ಯನಿಂದ ಸೃಷ್ಟಾದಿಗಳ ಪ್ರಕಾಶ,	೨೩	
೯.	ಬೆಲ್ಲದಿಂದ ಹಿಟ್ಟು ಮುಂತಾದವೂ ಪ್ರಿಯವಾಗುವದು,	೨೪	
೧೦.	ಸುಂಜದ ಹಗ್ಗದ ರಂಧ್ರಗಳು,*	೪೩	
೧೧.	ಸ್ಫಟಿಕಕ್ಕೆ ಉಪಾಧಿಯಿಂದ ಕಪ್ಪು, ಕೆಂಪು ಮುಂತಾದ ಬಣ್ಣಗಳು,	೪೧	
೧೨.	ತಲೆ ತಿರುಗುವಿಕೆಯಿಂದ ನೆಲ ತಿರುಗುವಂತೆ ಕಾಣುವದು,*	೪೨	
೧೩.	ಕನಸಿನ ದೇಹ,	೪೪	
೧೪.	ಬೀಸುವಕಲ್ಲಿನಲ್ಲಿ ಸರ್ಪ,*	೪೬	
೧೫.	ಉಪ್ಪಿನ ಪರಳು ನೀರಿನಲ್ಲಿ ಕರಗುವದು,	೪೮	
೧೬.	ನೀರಲ್ಲಿ ತೋರುವ ಸೂರ್ಯಪ್ರತಿಬಿಂಬ,	೫೩	
೧೭.	ಮೋಡಮುಚ್ಚಿದ ಸೂರ್ಯ,*	೫೦	
೧೮.	ಕನ್ನಡಿಯಲ್ಲಿ ತೋರುವ ಮುಖಾಭಾಸ,	೫೩	
೧೯.	ತಾಮ್ರದ ಪ್ರತಿಮೆಗಳು,	೫೫	
೨೦.	ಹಗ್ಗದಲ್ಲಿ ಕಲ್ಪಿತವಾದ ಹಾವು,	೫೮	
೨೧.	ಆಕಾಶದ ನೀಲವರ್ಣ,	೭೦	
೨೨.	ಹಾಲಿನಲ್ಲಿ ಬೆರೆಸಿದ ನೀರು,	೭೫	
೨೩.	ಮೋಟುಮರದಲ್ಲಿ ತೋರುವ ಕಳ್ಳ,	೭೮	

ಶ್ಲೋಕಗಳ ವರ್ಣಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಶ್ಲೋಕವನ್ನು ಸೂಚಿಸುತ್ತವೆ.

ಅಷ್ಟಧೀಷ್ವವಿಹೀನಾನಾಮ್	೩	ತಕ್ರಾದಿಲಗಣೋಪೇತಮ್	೧೬
ಅಸ್ಪಷ್ಟೋಷ್ಣಾದ್ಯಭೈಕೋಽಪಿ	೨	ತಥಾಯಮಾತ್ಮವದ್ ಭಾತಿ	೪೬
ಅಧ್ಯಸ್ತಜೋರಜಃ ಸ್ಥಾನೋಃ	೭೮	ತದ್ರಜ್ಜುರಜ್ಜ್ವಾನಾಶೇಷು	೩೫
ಅಧ್ಯಸ್ತಾಪೇರಪಾವೇನ	೬೯	ತಾಮ್ರುಕಲ್ಪಿತದೇವಾದಿಃ	೬೫
ಅಧ್ಯಸ್ತೇ ರಜ್ಜುಸರ್ಪೋಽಯಮ್	೬೮	ತೋಯಾಶ್ರಯೇಷು ಸರ್ವೇಷು	೫೨
ಅಯಃಕಾಷ್ಠಾದಿಕಂ ಯದ್ವತ್	೨೦	ತ್ಯಕ್ತ್ವಾ ತ್ವಜಮಹಿರ್ಯದ್ವತ್	೧೪
ಅಹಮಾನಾದ್ಯಸತ್ಯಾದಿ	೧	ದಾಪಕೋ ನೈವ ದಾಪ್ಯಂ ಸ್ಯಾತ್	೨೧
ಆಪಿನಿರ್ವ್ಯಯನೀಜಾತಃ	೧೬	ದೇಪತ್ರಯಮಿದಂ ನಿತ್ಯಮ್	೪೩
ಆಪಿನಿರ್ವ್ಯಯನೀನಾಶಾತ್	೧೪	ದೇಹತ್ರಯಮಿದಂ ಭಾತಿ	೪೧
ಆಕಾಶಾದನ್ಯ ಆಕಾಶಃ	೧೦	ದೇಹೇನ್ದ್ರಿಯಪ್ರಾಣಮನೋ	೨೮
ಆತ್ಮನಃ ಕಾರ್ಯಮಾತಾಶೋ	೫	ದೇಹೋ ನಾಹಂ ಪ್ರಪೃತ್ಯತ್ವಾತ್	೩೬
ಆತ್ಮೈವಾಯಂ ತಥಾ ಭಾತಿ	೧೩	ದ್ವಿತ್ವಂ ಭಾತ್ಯಕ್ಷಿದೋಷೇಣ	೪
ಈಶಜೀವಾತ್ಮವದ್ ಭಾತಿ	೬೬	ನಾನಾನಿಧತ್ವಂ ಕುಂಭಾನಾಂ	೨೧
ಉತ್ತಮಾದೀನಿ ಪುಷ್ಪಾಣಿ	೩೦	ನಾನಾವಿಧೇಷು ಕುಂಭೇಷು	೨೧
ಉಪಾಧಿನೀಲಪಕ್ತ್ಯೈಕ್ಯೈಃ	೪೦	ನಿದ್ರಾದೇಹಜ ದುಃಖಾದಿ	೪೪
ಏಕೋಽಪಿ ದ್ವಯವದ್ ಭಾತಿ	೭	ನಿರ್ಗತೋಪಾಧಿರಾಕಾಶಃ	೪
ಕಾರಣೋಪಾಧಿಜೈತನ್ಯಂ	೪೮	ನೀರಾತ್ ಕ್ಷೀರಂ ಪೃಥಕ್ಕೃತ್ಯ	೭೫
ಕಾರ್ಯಭೂತೋ ಯಥಾಕಾಶಃ	೬	ಪರ್ಯಙ್ಕರಜ್ಜುರಜ್ಜ್ವೀಷು	೩೫
ಕ್ಷೀರನೀರವಿವೇಕಜ್ಞೋ	೭೭	ಪಿಷ್ಟಾದಿರ್ಗುಲಸಂಪರ್ಕಾತ್	೨೪
ಕ್ಷೀರಯೋರ್ಗಾವ್ ಯಥಾ ನೀರಂ	೭೫	ಪುಷ್ಪೇಷು ತೇಷು ನಷ್ಟೇಷು	೩೨
ಗುಣನ್ಯತ್ತ್ರಯಂ ಭಾತಿ	೪೦	ಪ್ರತಿಬಿಮ್ಬಚಲತ್ವಾದ್ಯಾಃ	೫೫
ಘಟನೀರಾನ್ನವಿಶ್ವಾನಾಮ್	೨೫	ಪ್ರಮೇಯಾದಿತ್ರಯಂ ಸಾರ್ಥಂ	೨೨
ಜಲಸ್ಥಾರ್ಕಂ ಜಲಂ ಚೋರ್ಮಿಂ	೫೯	ಬಿಮ್ಬಂ ವಿನಾ ಯಥಾ ನೀರೇ	೫೪
ಜಲಾದನ್ಯ ಇವಾಭಾತಿ	೧೪	ಬುದ್ಧಿರ್ನಾಹಂ ವಿಕಾರಿತ್ವಾತ್	೩೧
ಜಲೇ ಶೈತ್ಯಾದಿಕಂ ಯದ್ವತ್	೫೬	ಬುದ್ಧೇಃ ಕರ್ತೃತ್ವಭೋಕ್ತೃತ್ವ	೫೭
ಜಾಗ್ರದಾದಿತ್ರಯಂ ಯಸ್ಮಿನ್	೮೨	ಭಾಸುಸ್ಫುರಣತೋ ಯದ್ವತ್	೨೩
ಜಾಗ್ರದ್ದೇಹವದಾಭಾತಿ	೪೫	ಭಾನೋರನ್ಯ ಇವಾಭಾತಿ	೫೩
ಜೀವೇಶ್ವರಾದಿಭಾವೇನ	೭೨	ಭಾಲೇನ ಭ್ರಾಮ್ಯಮಾಣೇನ	೪೨
ನ್ಲಸ್ಯ ನಾಸ್ತ್ಯೇವ ಸಂಸಾರೋ	೫೦	ಭಾಸ್ಯಂ ನೇಷ್ಟಾದಿಕಂ ಭಾನುಃ	೬೧
ನ್ಹಾತೇ ಸ್ಥಾಣೌ ಕುತಶ್ಚೋರಃ	೭೯	ಭೂತಭೌತಿಕದೇಪಾನಾಂ	೨೬

ಭೋಕ್ತ್ರಾ ಬಹಿರ್ಯಥಾ ಭೋಗ್ಯಃ	೪೯	ವಿರಾಡಾದಿತ್ರಯಂ ಭಾತಿ	೮೪
ಮುಕುರಸ್ಥಂ ಮುಖಂ ಯದ್ವತ್	೬೩	ವಿಶ್ವಾದಿಕತ್ರಯಂ ಯಸ್ಮಿನ್	೮೩
ಮುಕುರಸ್ಥಸ್ಯ ನಾಶೇನ	೬೪	ಶರಾವಸ್ಫೋದಕೇ ನಷ್ಟೇ	೫೮
ಮೇಘಯೋಗಾತ್ ಯಥಾ ನೀರಂ	೧೧	ಶಿವ ಏವ ಸದಾ ಜೀವೋ	೭೪
ಮೇಘಾವಭಾಸಕೋ ಭಾನುಃ	೬೦	ಸರ್ವಂ ಜಗದಿದಂ ನಾಹಂ	೩೯
ಯಥಾ ಘಟೇಷು ನಷ್ಟೇಷು	೩೯	ಸರ್ವಪ್ರಕಾಶಕೋ ಭಾನುಃ	೬೨
ಯಥಾ ನ ಸಂಸ್ಪೃಶೇತ್ ಸೂತ್ರಂ	೩೧	ಸುಪ್ತೌ ಯಥಾ ನಿರ್ವಿಕಾರಃ	೪೧
ಯಥಾ ಬುದ್ಬುದನಾಶೇನ	೧೫	ಸ್ನೈಗ್ಧವಸ್ಯ ಘನೋ ಯದ್ವತ್	೫೧
ಯಥೇಶ್ವರಾದಿನಾಶೇನ	೬೭	ಸ್ಫಟಿಕೇ ರಕ್ತತಾ ಮಿಥ್ಯಾ	೭೧
ರಜ್ಜುರನ್ಧ್ರಾಸ್ಥದೋಷಾದಿ	೪೪	ಸ್ಫಟಿಕೇ ರಕ್ತತಾ ಯದ್ವತ್	೭೦
ಲಿಙ್ಗಸ್ಯ ಧಾರಣಾದೇವ	೭೩	ಸ್ವಪ್ನಭೋಗೇ ಯಥೈವೇಚ್ಛಾ	೪೮
ವಸೋರೀಪಲ ಇವಾಭಾತಿ	೧೨	ಹಿತ್ವಾಯಂ ಸ್ವಾಪ್ನಿಕಂ ದೇಹಂ	೪೭

ಶಬ್ದಾನುಕ್ರಮಣಿಕೆ

ಇಲ್ಲಿರುವ ಸಂಖ್ಯೆಗಳು ಶ್ಲೋಕವನ್ನು ಸೂಚಿಸುತ್ತವೆ. ನಕ್ಷತ್ರಚಿಹ್ನೆಯು ಭಾಷ್ಯದಲ್ಲಿ ಈ ಪ್ರಯೋಗವು ಕಾಣುವದಿಲ್ಲವೆಂಬುದನ್ನು ತಿಳಿಸುತ್ತವೆ.

ಅಧ್ಯಸ್ತ—
ಹುಟ್ಟುಗಟ್ಟಿದ ಯುಸಿತೋರಿಕೆ, ೬೮, ೬೯, ೭೮

ಆತ್ಮಾ—
ಜೀವೇಶ್ವರಭೇದವಿಲ್ಲದ ಶುದ್ಧಾತ್ಮ, ೨೦, ೩, ೪, ೫....

ಆತ್ಮಾನಾತ್ಮವಿವೇಕಃ—
ಆತ್ಮನನ್ನೂ ಅನಾತ್ಮವನ್ನೂ ಬೇಗಡಿಸಿ ಅರಿಯುವದು, ೭೬

ಆತ್ಮಾಭಾಸಃ*—
ಅಂತಃಕರಣದಲ್ಲಿ ಕಾಣಿಸುವ ಆತ್ಮಚೈತನ್ಯದ ತೋರಿಕೆ, ೫೯

ಆನಂದಸತ್ಯಾದಿಲಕ್ಷಣಃ*—
ಆನಂದ, ಸತ್ಯ- ಮುಂತಾದವುಗಳ ಸ್ವರೂಪದಲ್ಲಿರುವ ಆತ್ಮ, ೧

ಈಶಜೀವಾತ್ಮಾನೌ—
ಈಶ್ವರ ಮತ್ತು ಜೀವ- ಎಂಬ ಕಲ್ಪಿತ ಭೇದಗಳು, ೬೬

ಉತ್ತಮಾದೀನಿ*—
ಉತ್ತಮ, ಮಧ್ಯಮ, ಅಧಮ, ೩೦, ೩೧

ಉಪಾಧಿಃ—
ಒಂದು ವಸ್ತುವಿನ ಸ್ವರೂಪಕ್ಕೆ ಸೇರದೆ ಅದರಲ್ಲಿ ವಿಶೇಷವನ್ನು ತೋರಿಸುವ ಹತ್ತಿರವಿರುವ ಮತ್ತೊಂದು ವಸ್ತು, ೭೦ರಿಂದ ೧೧

ಕಾರಣೋಪಾಧಿಚೈತನ್ಯಮ್*—
ಕಾರಣವೆಂಬ ಉಪಾಧಿಯಿಂದ ತಿಳಿದು ಬರುವ ಚೈತನ್ಯ, ೮

ಕೋಶಜಃ*—
ಅನ್ನಮಯಾದಿಕೋಶಗಳಿಂದಾದ (ಕಾಮಾದಿಗಳು), ೪೧

ಕ್ಷೇತ್ರಮ್—
ದೇಹ, ೫೭

ಗುಣವೃತ್ತಯಃ—
ಸತ್ತ್ವ, ರಜಸ್ಸು, ತಮಸ್ಸು- ಎಂಬ ಗುಣಗಳ ವ್ಯಾಪಾರಗಳು, ೬೦

ಘಟಾಕಾಶಃ, ಘಟಾಭ್ರಃ—
ಗಡಿಗೆಯ ಅಳತೆಯುಳ್ಳಂತೆ ತೋರುವ ಆಕಾಶ, ೮, ೨೯

ಚಿದಾಭಾಸಃ, ಆಭಾಸಃ—
ಅಂತಃಕರಣದಲ್ಲಿ ತೋರುವ ಚೈತನ್ಯದ ಯುಸಿತೋರಿಕೆ, ೫೩ರಿಂದ ೫೭, ೬೩, ೬೪

ಜಾಗ್ರದಾದಿತ್ರಯಮ್—
ಜಾಗ್ರತ್, ಸ್ವಪ್ನ, ಸುಷುಪ್ತಿ- ಎಂಬ ಮೂರವಸ್ಥೆಗಳು, ೮೨

ಜಾಗ್ರದ್ದೇಹಃ—
ಎಚ್ಚರದ ದೇಹ, ೪೪ರಿಂದ ೪೭

ಜೀವಃ—
ಆತ್ಮನಲ್ಲಿ ಕಲ್ಪಿತವಾಗಿರುವ ಸಂಸಾರಿರೂಪ, ೭೩, ೭೪

ಜೀವೇಶ್ವರತಾ—
ಆತ್ಮನಲ್ಲಿ ಕಲ್ಪಿತವಾಗಿರುವ ಜೀವ, ಈಶ್ವರ- ಎಂಬ ಭೇದಗಳು, ೭೨

ಜ್ಞಃ*—
ಜ್ಞಾನಿ, ೫೯

ದೇಹತ್ರಯಮ್*—
ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ದೇಹಗಳು, ೧೭, ೧೮, ೪೧, ೪೧

ನಿದ್ರಾದೇಹಃ, ಸ್ವಾಪ್ನಿಕದೇಹಃ*—
ನಿದ್ರೆಯಲ್ಲಿ, ಎಂದರೆ ಕನಸಿನಲ್ಲಿ ಕಾಣುವ ದೇಹ, ೪೪, ೪೫, ೪೭

ನಿರ್ಗತೋಪಾಧಿಃ—
ಯಾವ ಉಪಾಧಿಯೂ ಇಲ್ಲದ, ೧

ನಿರ್ವಿಕಾರಃ—
ಮಾರ್ಪಾಡುಗಳಿಲ್ಲದ, ೪೦

ಪೂರ್ಣಃ—
ಎಲ್ಲೆಲ್ಲಿಯೂ ತುಂಬಿಕೊಂಡಿರುವ, ೫, ೭

ಪರಂ ಬ್ರಹ್ಮ, ಪರಮಾತ್ಮಾ—
ಅದ್ವಿತೀಯ ಪರಮಾರ್ಥತತ್ತ್ವ, ೪೧, ೪೨

ಪ್ರಪಂಚಃ—
ಆತ್ಮನಲ್ಲಿ ಕಲ್ಪಿತವಾಗಿರುವ ಜಗತ್ತು, ೧೧, ೧೪ರಿಂದ ೧೫

ಪ್ರಮೇಯಾದಿಃ,
ಪ್ರಮೇಯಾದಿತ್ರಯಮ್ *—
ಪ್ರಮೇಯ, ಪ್ರಮಾಣ, ಪ್ರಮಾತೃ ಎಂಬ ಮೂರು, ೨೨, ೨೪

ಪ್ರೇತಿವಾನ್*—
ಪ್ರಿಯವಾದದ್ದು, ೨೪

ಮಾಯಾ* —
ಅವಿದ್ಯೆ, ೨೮ರಿಂದ ೪

ಮಾಯಾಯೋಗಃ—
ಅವಿದ್ಯಾಸಂಬಂಧ, ೧೧, ೧೩

ಮಿಥ್ಯಾ, ಮೃಷಾ—
ಯಸ್ಸು, ೨, ೪, ೬೩, ೭೧, ೭೫

ರಜ್ಜುಸರ್ಪಃ—
ಹಗ್ಗದಲ್ಲಿ ಕಲ್ಪಿತವಾಗಿರುವ ಹಾವು, ೫೦, ೬೮

ಲಿಙ್ಗಮ್ —
ಸೂಕ್ಷ್ಮಶರೀರ, ೭೩

ವಿಕಾರಃ—
ಕಾರ್ಯ, ೭೮

ವಿಕಾರೀ—
ಮಾರ್ಪಾಡುಗಳುಳ್ಳದ್ದು, ೪೦, ೫೭

ವಿರಾಡಾದಿತ್ರಯಮ್—
ವಿರಾಟ್, ಹಿರಣ್ಯಗರ್ಭ, ಅವ್ಯಾಕೃತಾತ್ಮ ೮೩

ವಿಶ್ವಾದಿತ್ರಯಮ್* —
ಜಾಗ್ರದಾದ್ಯವಸ್ಥೆಗಳ ಅಭಿಮಾನಿಗಳಾದ ವಿಶ್ವ, ತೈಜಸ, ಪ್ರಾಜ್ಞರೆಂಬ ಮೂವರು, ೮೩

ಶಿವಃ*—
ಜೀವನನ್ನು ಆಳುವ ಈಶ್ವರನು, ೧, ೭೧, ೭೪

ಸಚ್ಚಿದಾನನ್ದಲಕ್ಷಣಃ*—
ಸತ್ಯ, ಜ್ಞಾನ, ಆನಂದ ಇವೇ ಮೊದಲಾದ ಪರಮಾತ್ಮ, ೭೪

ಸಾಕ್ಷೀ—
ಎಲ್ಲವನ್ನೂ ನೋಡುತ್ತಿರುವ ಅರಿವು, ೭೯, ೭೪

ಸುಪ್ತಿಃ—
ಕನಸಿಲ್ಲದ ನಿದ್ರೆ, ೪೦

ಸುಷುಪ್ತ್ಯಾದಿಃ—
ಸುಷುಪ್ತಿ, ಸಮಾಧಿ ಮುಂತಾದ ಅವಸ್ಥೆಗಳು, ೭೯

ಸ್ಥೂಲಾದಿಃ*—
ಸ್ಥೂಲ, ಸೂಕ್ಷ್ಮ, ಕಾರಣ ಎಂಬ ದೇಹಗಳು, ೧೬, ೧೯, ೨೦, ೬೧

ಸ್ವಯಂಪ್ರಭಃ—
ತಾನೇ ಬೆಳಗುವ ಆತ್ಮ, ೪೪

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

(ಸ್ಥಾಪಿತವಾದದ್ದು ೧೯೨೦)

ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ತಮ್ಮ ಪೂರ್ವಾಶ್ರಮದಲ್ಲಿ ಸ್ಥಾಪಿಸಿದ ಧಾರ್ಮಿಕಸಂಸ್ಥೆಯಿದು.

ಪರಿಪಾಲಕರು :

ಕರ್ಣಾಟಕ ಸಿಂಹಾಸನಾಧೀಶ್ವರ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,
ಜಿ.ಸಿ.ಬಿ.,ಜಿ.ಸಿ.ಎಸ್.ಐ. ಮಹಾಸ್ವಾಮಿಯವರು

ಅಧ್ಯಕ್ಷರು:

ಶ್ರೀಯುತ ಯಲ್ಲಂಬಳಸೆ ನರಸಪ್ಪನವರು

ಉಪಾಧ್ಯಕ್ಷರು:

ಶ್ರೀಯುತ ಅರಕಲಗೂಡು ಶ್ರೀಕಂಠಯ್ಯನವರು, ಪ್ಲೀಡರ್

ಕಾರ್ಯಕಾರಿಸಮಿತಿಯ ಇತರ ಸದಸ್ಯರುಗಳು:

ಶ್ರೀಯುತ ೧. ನಂ. ಭಾಗವತರು.

,, ೨. ಪಿ.ಎನ್. ನರಸಿಂಹಯ್ಯನವರು ಪ್ಲೀಡರ್

,, ೩. ಸಂತೆಬಾಚಳ್ಳಿ ಸುಬ್ಬರಾಯರು ಬಿ.ಎ.,ಎಲ್.ಎಲ್.ಬಿ., ,,

,, ೪. ಆರ್. ರಾಮಸ್ವಾಮಯ್ಯನವರು ,,

,, ೫. ಎನ್. ಜನಾರ್ದನಶೆಟ್ಟರು ವರ್ತಕರು

,, ೬. ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು,
ಆಸ್ಥಾನವಿದ್ವಾನ್, ವೇದಾಂತಶಿರೋಮಣಿ,
ವೇದಾಂತವಿಶಾರದ, ವಿದ್ಯಾವಾಚಸ್ಪತಿ.

,, ೭. ಬ್ರ॥ ಶ್ರೀ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು,
ಪಂಡಿತಪ್ರವರ, ಸಾಹಿತ್ಯವೇದಾಂತನ್ಯಾಯವಿದ್ವಾನ್

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.

—o—

ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ
ಆದರವನ್ನುಂಟುಮಾಡಬೇಕೆಂಬ **ಉದ್ದೇಶವುಳ್ಳ ಈ** ಸಂಸ್ಥೆಯು

೧ ಕನ್ನಡ, ಸಂಸ್ಕೃತ, ಇಂಗ್ಲಿಷು– ಈ ಭಾಷೆಗಳಲ್ಲಿ **ಅನೇಕ ಅಧ್ಯಾತ್ಮ ಗ್ರಂಥಗಳನ್ನು ಪ್ರಕಟಿಸಿರುತ್ತದೆ.** ಇವುಗಳಲ್ಲಿ ಭಾಷ್ಯ, ಟಿಪ್ಪಣಿ, ಪರಿಶಿಷ್ಟ, ಗ್ರಂಥದ ಸಾರ, ಶಬ್ದಾನುಕ್ರಮಣಿಕೆ– ಮುಂತಾದವುಗಳೊಡನೆ ಹೊರಕ್ಕೆ ಬಂದಿರುವ ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ– ಇವೂ ಸೇರಿವೆ.

ಈಗ ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಗೆ ಸೇರಿದಂತೆ ಶ್ರೀ ಶಂಕರಾಚಾರ್ಯರವರ ಎಲ್ಲಾ ಗ್ರಂಥರತ್ನಗಳನ್ನೂ ಸಮೂಲವಾಗಿ ಟಿಪ್ಪಣಿ ಮುಂತಾದ ಸೌಕರ್ಯಗಳೊಡನೆ ಕನ್ನಡಿಸಿ ಒಂದೊಂದಾಗಿ ಬಿಳಕಗೆ ಹಿಡಿಯುತ್ತಲಿದೆ.

೨. ಅಧ್ಯಾತ್ಮಸಂಬಂಧವಾದ **ಗ್ರಂಥಕಾಲಕ್ಷೇಪ, ಉಪನ್ಯಾಸಗಳು, ಪುರಾಣಶ್ರವಣ, ಭಜನೆ, ಅನುಷ್ಠಾನ, ಉತ್ಸವಗಳು**– ಇವುಗಳನ್ನು ಏರ್ಪಡಿಸುತ್ತಿದೆ.

ಪ್ರತಿದಿನವೂ ಗ್ರಂಥಕಾಲಕ್ಷೇಪವೂ ಪುರಾಣಶ್ರವಣವೂ ನಡೆಯುತ್ತಿವೆ; **ಪ್ರತಿ ಗುರುವಾರ ಶನಿವಾರವೂ** ಸಾಯಂಕಾಲ ಭಜನೆಯಾಗುತ್ತಿದೆ; **ಪ್ರತಿ ವರ್ಷವೂ** ಚೈತ್ರಶರನ್ನವರಾತ್ರೆಗಳಲ್ಲಿ ಅನುಷ್ಠಾನಗಳು ನಡೆಯುವವು; ಗೀತಾ ಜಯಂತಿಯೇ ಮುಂತಾದ ಸಣ್ಣ ಅನುಷ್ಠಾನಗಳೂ ಜರುಗುವವು; **ಶಂಕರ ಸಪ್ತಾಹವೆಂಬ** ತತ್ತ್ವಪ್ರಚಾರದ ಉತ್ಸವವು ಈಗ ಹದಿನೆಂಟು ವರ್ಷಗಳಿಂದಲೂ **ಪ್ರತಿವೈಶಾಖದಲ್ಲಿಯೂ** ಕರ್ನಾಟಕದ ಬೇರೆಬೇರೆಯ ಸ್ಥಲಗಳಲ್ಲಿ ನಡೆಯುತ್ತಿದೆ; ಸಲವು ಜನ ವಿದ್ವಾಂಸರುಗಳೂ ಆಸ್ತಿಕಶಿಖಾಮಣಿಗಳೂ ಈ ಕಾರ್ಯಗಳಲ್ಲಿ ಭಾಗವನ್ನು ವಹಿಸುತ್ತಿರುವರು.

೩. ಜನರ ಉಪಯೋಗಕ್ಕೆ ಒಂದು **ಅಧ್ಯಾತ್ಮಪುಸ್ತಕಭಂಡಾರವನ್ನೂ** ಒಂದು **ವಾಚನಾಲಯವನ್ನೂ** ಇಟ್ಟುಕೊಂಡಿದೆ.

ಪುಸ್ತಕಭಂಡಾರದಲ್ಲಿ ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲಿಷು – ಮುಂತಾದ ಭಾಷೆಗಳ ಅಧ್ಯಾತ್ಮಗ್ರಂಥಗಳು ಇರುತ್ತವೆ. ವಾಚನಾಲಯದಲ್ಲಿ ಅಧ್ಯಾತ್ಮವಿಚಾರದ ಪತ್ರಿಕೆಗಳನ್ನೇ ಮುಖ್ಯವಾಗಿ ಸಂಗ್ರಹಿಸಿರುತ್ತದೆ ಕಾರ್ಯಾಲಯಕ್ಕೆ ಬಂದು ಓದುವ ಮುಖಾಂತರ ಜನರಿಗೆ ಸೌಕರ್ಯವನ್ನು ಕಲ್ಪಿಸಲಾಗುವದು.

೪. ಅಧ್ಯಾತ್ಮವಿದ್ಯೆಯ ಪ್ರಸಾರಕರನ್ನು ಸಜ್ಜುಗೊಳಿಸುವ ಉದ್ದೇಶದಿಂದ **ಅಧ್ಯಾತ್ಮವಿದ್ಯಾನಿಲಯ**ವೊಂದನ್ನು ಸ್ಥಾಪಿಸಿದೆ.

ಇಲ್ಲಿ ಐದು ವರ್ಷಗಳ ಪಾಠಕ್ರಮವನ್ನು ಏರ್ಪಡಿಸಿದೆ. ವೇದಾಂತದ ಸಿದ್ಧಾಂತ ತ್ರಯದಲ್ಲಿಯೂ ಪ್ರಪಂಚದ ವೀರೆವೀರೆಯ ಮತಾಚಾರ್ಯರುಗಳ ಜೀವನಚರಿತ್ರೆ, ಉಪದೇಶಗಳು ಮತ್ತು ಪರಮಾರ್ಥಸಾಧನಕ್ರಮ – ಇವುಗಳ ವಿಷಯದಲ್ಲಿಯೂ ಶಿಕ್ಷಣವನ್ನು ಕೊಡಿಸಲಾಗುವದು. ಮುದ್ರಣಾಲಯದ ಕೆಲಸದ ಪರಿಚಯವನ್ನು ಮಾಡಿಸಿಕೊಡಲಾಗುವದು. ಉಪಾಧ್ಯಾಯರೂ ಉಪನ್ಯಾಸಕರೂ ಪುರಾಣಶ್ರವಣವನ್ನು ಮಾಡಿಸುವ ಕೀರ್ತನಕಾರರೂ ಆಗಬೇಕೆನ್ನುವವರು ಈ ವಿದ್ಯಾಸಂಸ್ಥೆಯಲ್ಲಿ ಲಾಭವನ್ನು ಪಡೆಯಬಹುದು. ಯೋಗ್ಯರಾದ ವಿದ್ಯಾರ್ಥಿಗಳಿಗೆ ಊಟಕ್ಕೂ ವಸತಿಗೂ ಏರ್ಪಡಿಸಲಾಗುವದು.

೫. **ಅಧ್ಯಾತ್ಮಪ್ರಕಾಶಮುದ್ರಣಾಲಯವೆಂಬ** ಒಂದು ಮುದ್ರಣಭಾಗವನ್ನು ಏರ್ಪಡಿಸಿಕೊಂಡಿದೆ. ಇಲ್ಲಿ ಕಾರ್ಯಾಲಯದ ಪ್ರಕಟನೆಗಳೂ ಕಾರ್ಯಾಲಯದ ನೀತಿಗೆ ಹೊಂದುವ ಇತರರ ಮುದ್ರಣಕಾರ್ಯಗಳೂ ಆಚ್ಛಾಗುವವು.

೬. **"ಅಧ್ಯಾತ್ಮಪ್ರಕಾಶ"ವೆಂಬ ಮಾಸಪತ್ರಿಕೆ**ಯೊಂದನ್ನು ಪ್ರಕಟಿಸುತ್ತಿರುವದು. 1948ನೇ ಸೆಪ್ಟೆಂಬರಿನಿಂದ ಹದಿನೆಂಟನೆಯ ಸಂಪುಟವು ನಡೆಯುತ್ತಿದೆ.

ಇದರಲ್ಲಿ ಸಾಧಕರಿಗೂ ತತ್ತ್ವಜಿಜ್ಞಾಸುಗಳಿಗೂ ಉಪಯೋಗವಾಗುವ ಸಾಧನ ಸಿದ್ಧಾಂತಗಳನ್ನು ಕುರಿತ ಲೇಖನಗಳು ಪ್ರಕಟವಾಗುವವು. ಶ್ರೀ ಸಚ್ಚಿದಾನಂದ ಸರಸ್ವತೀಸ್ವಾಮಿಗಳೂ ನುರಿತ ಬರಹಗಾರರಾದ ಹಲವು ವಿದ್ವಾಂಸರುಗಳೂ ಸ್ವಬಂಧ, ಕಥೆ, ಸಂಭಾಷಣೆ, ಕವಿತೆ, ಪದ, ಪದ್ಯ– ಮುಂತಾದ ಉಪಯುಕ್ತ ಲೇಖನಗಳನ್ನು ಪತ್ರಿಕೆಗೆ ಕಳುಹಿಸುತ್ತಿರುವರು. ಕಾರ್ಯಾಲಯದ ಸಮೃದ್ಧಿಯನ್ನು ತಿಳಿಯುವದಕ್ಕೆ ಇದೊಂದು ಮುಖ್ಯಸಾಧನವಾಗಿರುವದು. ಹದಿನೆಂಟನೆಯ ಸಂಪುಟಕ್ಕೆ ಚಂದಾ ರೂ ೩-೪-೦ ; ಪೋಷಕರಿಗೆ ರೂ. ೫-೪-೦ ಮತ್ತು ಮೇಲೆ.

೭. ಕಾರ್ಯಾಲಯದ **ಕಟ್ಟಡ**ವು ಸಿದ್ಧವಾಗುತ್ತಿದೆ. ಒಂದು ಜಿಂಕುಷೀಟನ ಕುಟೀರ, ಅಡಿಗೆಯ ಮನೆ, ಸ್ನಾನದ ಮನೆ, ವಿದ್ಯಾರ್ಥಿಗಳ ಕೊಟಡಿಗಳು ಎರಡು, ಇನ್ನೊಂದು ಕೊಟಡಿ –ಇಷ್ಟನ್ನು ಕಟ್ಟಿಸಲಾಗಿದೆ. ಒಂದು ಕಲ್ಲುಕಟ್ಟಿದ ಭಾವಿಯನ್ನು ನಿರ್ಮಿಸಲಾಗಿದೆ.

ಈಗ ಸಭಾಂಗಣದ ನಿರ್ಮಾಣಕ್ಕೆ ಆರಂಭಿಸಿದೆ. ಬೇಸ್‌ಮೆಂಟುವರೆಗೆ ಕೆಲಸವು ಆಗಿರುತ್ತದೆ. ಕಬ್ಬಿಣದ ತೊಲೆಗಳನ್ನೂ ಮುಚ್ಚುವಳಿಗೆಗೆ ಬೇಕಾಗುವ ಕಬ್ಬಿಣದ ಸಲಾಕೆಗಳನ್ನೂ ತರಿಸಿದೆ. ಉದಾರಮಹಾಶಯರು ಕೆಲಸದ ಸಹಾಯದ ವಾಗ್ದಾನವನ್ನು ಮಾಡಿರುತ್ತಾರೆ. ಉಪನ್ಯಾಸಗಳು, ಪುರಾಣಶ್ರವಣ, ವೇದಾಂತತರಗತಿಗಳಿಗೂ ಸಂಸ್ಕೃತತರಗತಿಗಳಿಗೂ ಪಾಠ, ಪುಸ್ತಕಭಂಡಾರವಾಚನಾಲಯಗಳ ಉಪಯೋಗ, ಪುಸ್ತಕಗಳ ವಿಕ್ರಯಕ್ಕೆ ಬೇಕಾದ ಉಗ್ರಾಣ, ಮಾಸಪತ್ರಿಕೆಯ ಪ್ರಕಟನೆ, ಮುದ್ರಣಕಾರ್ಯ, ಆಗಂತುಕರಿಗೆ ವಸತಿ– ಇವುಗಳಿಗೆಲ್ಲ ಕಟ್ಟಡವು ಬೇಕಾಗಿದೆ. ಪೂಜಾಮಂದಿರವು ನಿರ್ಮಾಣವು ಕೂಡಲೆ ಆಗಬೇಕಾಗಿದೆ.

೮. ಅಧ್ಯಾತ್ಮವಿಚಾರದ **ಧರ್ಮಾರ್ಥವಾಚ್ಯ**ದ ಕರಪತ್ರಗಳನ್ನು ಒನರಲ್ಲಿ ಹಂಚಲಾಗುತ್ತಿದೆ.

ಜನರು ಮಾಡಬಹುದಾದ ಸಹಾಯ

೯. ಕಾರ್ಯಾಲಯದಲ್ಲಿ ನಡೆಯುವ ಕೆಲಸವು ಧರ್ಮಾರ್ಥವಾಗಿರುತ್ತದೆ. ಸದ್ಯಕ್ಕೆ ಒಬ್ಬರು ಪಂಡಿತರು, ಒಬ್ಬ ಗುಮಾಸ್ತೆ, ಮುದ್ರಣಾಲಯದ ಕೆಲಸಗಾರರು-ಹೊರತು ಮತ್ತೆ ಯಾವ ಸಿಬ್ಬಂದಿಯನ್ನೂ ಸಂಬಳದಮೇಲೆ ಇಟ್ಟುಕೊಂಡಿಲ್ಲ. ಕಾರ್ಯದರ್ಶಿಗಳೂ ಕಾರ್ಯಕಾರಿಸಮಿತಿಯ ಸದಸ್ಯರೂ ಯಾವ ಪ್ರತಿಫಲವೂ ಇಲ್ಲದೆ ಕೆಲಸಮಾಡುತ್ತಿರುವದಲ್ಲದೆ, ತಾವೂ ಉದಾರವಾದ ಧನಸಹಾಯವನ್ನು ಮಾಡಿ ಇತರರನ್ನೂ ಸಹಾಯಮಾಡುವಂತೆ ಪ್ರೋತ್ಸಾಹಿಸುತ್ತಿರುತ್ತಾರೆ. ಇಲ್ಲಿ ಬಂದ ಹಣವನ್ನೆಲ್ಲ ಧಾರ್ಮಿಕಕಾರ್ಯಕ್ಕೇ ವಿನಿಯೋಗಿಸಲಾಗುತ್ತಿದೆ. ಆಯವ್ಯಯಗಳ ಲೆಕ್ಕವನ್ನು ಬರೆಯಿಸಿಟ್ಟಿದೆ.

(ಅ) **ಪುಸ್ತಕಪ್ರಕಟನೆಗೆ:** ರೂ ೨೫೦ ಅಥವಾ ಅದಕ್ಕಿಂತ ಹೆಚ್ಚಾಗಿ ಕೊಟ್ಟವರನ್ನು **ಆಶ್ರಯದಾತರಿಂದೂ**, ರೂ. ೧೦೦ ಅಥವಾ ಅದಕ್ಕಿಂತ ಹೆಚ್ಚಾಗಿ ಕೊಟ್ಟವರನ್ನು **ಮಹಾಪೋಷಕರಿಂದೂ** ರೂ. ೫೦ ಅಥವಾ ಹೆಚ್ಚಿಗೆ ಕೊಟ್ಟವರನ್ನು **ಪೋಷಕರಿಂದೂ** ಕರೆಯುವೆವು.

(ಆ) **ಕಟ್ಟಡಕ್ಕೆ:** ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದೆ ದಾನಮಾಡುವವರನ್ನು **ಮಹಾಶ್ರಯದಾತರು** ಎಂದೂ, ಮೂರುಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದೆ ದಾನಮಾಡುವವರನ್ನು **ಆಶ್ರಯದಾತರು** ಎಂದೂ, ಒಂದು ಸಾವಿರದ ಐದುನೂರು ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡುವವರನ್ನು **ಮಹಾಪೋಷಕರು** ಎಂದೂ, ಏಳುನೂರು ಎಪ್ಪತ್ತು ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡುವವರನ್ನು **ಪೋಷಕರು** ಎಂದೂ, ಇನ್ನೂರೈವತ್ತು ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡುವವರನ್ನು **ಸಹಾಯಕರು** ಎಂದೂ, ಒಂದುನೂರು ರೂಪಾಯಿಗಳಿಗೆ ಕಡಮೆಯಿಲ್ಲದೆ ಸಹಾಯಮಾಡುವವರನ್ನು **ಪ್ರೋತ್ಸಾಹಕರು** ಎಂದೂ ಸಂಭಾವಿಸಿ ಕಾರ್ಯಾಲಯದ ಪತ್ರಿಕೆಯಲ್ಲಿಯೂ ವರದಿಯಲ್ಲಿಯೂ ಪ್ರಕಟಿಸಲಾಗುವದು.

ಕೃತಜ್ಞತಾಪ್ರದರ್ಶನ

ಕಾರ್ಯಾಲಯದ ಕಟ್ಟಡ, ಪೂಜಾಮಂದಿರ, ವಿದ್ಯಾಲಯ, ವಿದ್ಯಾಲಯ ಮೂಲನಿಧಿ, ಪತ್ರಿಕೆ, ಪುಸ್ತಕಪ್ರಕಟನೆ, ಪುಸ್ತಕಭಂಡಾರ, ಧರ್ಮಾರ್ಥವಾಜ್ಯ –ಇವುಗಳಲ್ಲಿ ಯಾವದೊಂದಕ್ಕೆ ಕಳುಹಿಸುವ ಸಹಾಯಧನವನ್ನೂ, ಅದು ಎಷ್ಟೇ ಅಲ್ಪವಾಗಿದ್ದರೂ, ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವದು ; ಒಂದು ರಿಜಸ್ಟರಿನಲ್ಲಿ ಅದನ್ನು ಬರೆದಿಡಲಾಗುವದು.

ಪ್ರಕಟನೆಗೆ ಸಹಾಯಮಾಡುವ ಆಶ್ರಯದಾತರುಗಳಿಗೆ ನಮ್ಮ ಗ್ರಂಥಗಳನ್ನು ಕಾಣಿಕೆಯಾಗಿ ಸಮರ್ಪಿಸುವೆವು; ಪೋಷಕರಿಗೂ ಮಹಾಪೋಷಕರಿಗೂ ತಾವು ಕೊಡುವಷ್ಟು ಹಣದ ಬೆಲೆಯ ಗ್ರಂಥಗಳನ್ನು ಕಾರ್ಯಾಲಯದಿಂದ ಪಡೆದು ಕೊಳ್ಳುವದಕ್ಕೆ ಅವಕಾಶವಿದೆ. **ಕಟ್ಟಡಕ್ಕೆ** ಸಹಾಯಮಾಡುವ ಮಹನೀಯರುಗಳ ಹೆಸರನ್ನು ಭಾವಚಿತ್ರವೇ ಮುಂತಾದವುಗಳ ಮೂಲಕ ಶಾಶ್ವತಗೊಳಿಸುವ ವಿಷಯವು ಕಟ್ಟಡದ ಕಾರ್ಯನಿರ್ವಾಹಕಸಮಿತಿಯ ಆಲೋಚನೆಯಲ್ಲಿರುವದು.

ಮಾಸಪತ್ರಿಕೆಯ ಕಡೆಯ ಸಂಚಿಕೆಯಲ್ಲಿ ಆಯಾ ವರ್ಷದಲ್ಲಿದ್ದ ಕಾರ್ಯನಿರ್ವಾಹಕಸಮಿತಿಗಳ ಸದಸ್ಯರನ್ನೂ ವಿಶೇಷಸಹಾಯವನ್ನು ಮಾಡಿದ ಮಹಾಶಯರ ಹೆಸರುಗಳನ್ನೂ ಪ್ರಕಟಿಸಲಾಗುವದು.

———:o:———

★ ಹಿಂದಿನ ಬೆಲೆಪಟ್ಟಿಗಳೆಲ್ಲ ರದ್ದಾಗಿವೆ. ‡ ಜನವರಿ ೧೯೪೯ ★

ಅಧ್ಯಾತ್ಮಪ್ರಕಾಶಕಾರ್ಯಾಲಯದ

ಅಗ್ಗವಾದ ಮೇಲ್ತರದ ಗ್ರಂಥಗಳ ಬೆಲೆಪಟ್ಟಿ

ಅಧ್ಯಾತ್ಮಗ್ರಂಥಾವಳಿ

ಉಪನಿಷತ್ತುಗಳು

ಇವುಗಳಲ್ಲಿ ಸಂಸ್ಕೃತಮೂಲ, ಶಂಕರಭಾಷ್ಯದ ಅನುವಾದ, ಟಿಪ್ಪಣಿ, ಸಾರ ಕ್ಲಿಷ್ಟಪದಗಳ ಅರ್ಥ, ವಿಷಯವಿವೇಚಕಪೀಠಿಕೆ –ಮುಂತಾದ ವಿವರಗಳಿರುತ್ತವೆ. ಈ ಪುಸ್ತಕಗಳ ಪ್ರತಿಗಳು ಮುಗಿಯುತ್ತಾ ಬಂದಿವೆ; ಇವು ಖರ್ಚಾದ ಬಳಿಕ ಮತ್ತೆ ಅಚ್ಚಾಗವದಿಲ್ಲ. ಆಮೇಲೆ ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲೆಯ ಪುಸ್ತಕಗಳನ್ನೇ ಎಲ್ಲರೂ ಕೊಳ್ಳಬೇಕಾಗುವದು.

ಪುಸ್ತಕ	ಬೆಲೆ ರೂ. ಆ.
೧. **ಈಶಾವಾಸ್ಯೋಪನಿಷತ್ತು** (ಸಂಹಿತೋಪನಿಷತ್ತು)	೦– ೮
೨. **ಕೇನೋಪನಿಷತ್ತು** (ತಲವಕಾರೋಪನಿಷತ್ತು)	೦–೧೦
೩. **ಕಠೋಪನಿಷತ್ತು** (ಕಾಠಕೋಪನಿಷತ್ತು)	೧– ೪
೪. **ಮುಂಡಕೋಪನಿಷತ್ತು**	೧– ೦
೫. **ಈಶಾವಾಸ್ಯ ಮತ್ತು ಮುಂಡಕ** (ಒಟ್ಟಾಗಿ)	೧– ೮
೬. **ಪ್ರಶ್ನೋಪನಿಷತ್ತು**	೧– ೪
೭. **ಮಾಂಡೂಕ್ಯೋಪನಿಷತ್ತು** (ಗೌಡಪಾದರ ಆಗಮಪ್ರಕರಣ ಸಹ)	೦– ೯
೮. **ಅಲಾತಶಾಂತಿಪ್ರಕರಣ**	೧– ೪
೯. ,, (ದಪ್ಪರಟ್ಟು)	೧– ೮

ಭಗವದ್ಗೀತೆ

೧೦. **ಗೀತೆ** (ಮೂಲ, ಪಾರಾಯಣಕ್ಕೆ)	೦– ೪
೧೧. **ಗೀತೆ ಸಾರ್ಥ**	೦–೧೨
೧೨. **ಗೀತಾ ಭಾಷ್ಯ** (ಇದರ ಮೊದಲನೆಯ ಮೂರು ಅಧ್ಯಾಯಗಳಿಲ್ಲ)	
೧೩. **ಗೀತಾಭಾಷ್ಯ** ೪ರಿಂದ ೭ನೆಯ ಅಧ್ಯಾಯ ಪೂರ	೨–೧೨
೧೪. ,, ೧೩ರಿಂದ ಕೊನೆಯವರೆಗೆ	೩– ೦
೧೫. **ಗೀತಾಭಾಷ್ಯ** ೧ನೆಯ ಅಧ್ಯಾಯದ ಅವಶಿಷ್ಟ (ಪುಟ ೬೯ರಿಂದ ೬೯೯ರವರೆಗೆ)	೦–೧೦

ವಿಶೇಷ:- ಗೀತಾಭಾಷ್ಯದ ಈಗಿನ ಪ್ರತಿಗಳು ಮುಗಿದಮೇಲೆ ಇವನ್ನು ಮತ್ತೆ ಅಚ್ಚು ಮಾಡಿಸುವದಿಲ್ಲ. ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯ ಪುಸ್ತಕವನ್ನೇ ಎಲ್ಲರೂ ಕೊಳ್ಳಬೇಕಾಗುವದು.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ, ಮೈಸೂರು ರೈಲ್ವೆ

ಬ್ರಹ್ಮಸೂತ್ರ

ಇದರಲ್ಲಿ ಐದು ಅಧಿಕರಣಗಳ ಭಾಷ್ಯಾನುವಾದವಿದೆ. ಸೂತ್ರ, ಸೂತ್ರಗಳ ಪದಾರ್ಥ, ಸೂತ್ರಾರ್ಥ, ಭಾಷ್ಯಾನುವಾದ, ಟಿಪ್ಪಣಿ, ಅಧಿಕರಣದ ಸಾರ-ಇವಿಷ್ಟೂ ಇರುತ್ತವೆ. ಭಾಷ್ಯದ ವಿವರಣೆಯ ರೂಪವಾದ ಪರಿಶಿಷ್ಟ, ವ್ಯಾಖ್ಯಾನಗಳ ಮತ್ತು ಭಾಷ್ಯಾಂತರಗಳ ಸಮಾಲೋಚನಾರೂಪವಾಗಿರುವ ಪರಿಶಿಷ್ಟ- ಹೀಗೆ ಎರಡು ಪರಿಶಿಷ್ಟಗಳನ್ನು ಬರೆದಿದೆ. ಸೂತ್ರಭಾಷ್ಯದ ಸರ್ವಸ್ವವನ್ನು ಹಿಂಡಿಟ್ಟಿರುವ ಈ ಪುಸ್ತಕವು ಜಿಜ್ಞಾಸುಗಳಲ್ಲಿ ಅವಶ್ಯವಾಗಿರಬೇಕು.

೧೫. **ಬ್ರಹ್ಮಸೂತ್ರ ಸಭಾಷ್ಯ** (ಅರ್ಧ ಕ್ಯಾಲಿಕೊ) ೪- ೮

೧೬. **ಬ್ರಹ್ಮಸೂತ್ರ ಸಭಾಷ್ಯ** (ಲೈಬ್ರರಿ ಎಡಿಷನ್, ಉತ್ತಮಪ್ರತಿ) ೮- ೦

ಉಪದೇಶಸಾಹಸ್ರಿ

ಇದು ಶಂಕರಾಚಾರ್ಯರ ಅತ್ಯಮೋಘವಾದ ಪ್ರಕರಣವು. ಬೆಲೆಯಲ್ಲಿ ಭಾಷ್ಯಕ್ಕೆ ಸಮಾನ. ಇದು ಗದ್ಯ, ಪದ್ಯ- ಎಂದು ಎರಡು ಪ್ರಕಾರವಾಗಿದೆ. ಎರಡನ್ನೂ ವಿಸ್ತಾರವಾದ ಕನ್ನಡದ ವಿವರಣೆಯೊಂದಿಗೆ ಕನ್ನಡಕ್ಕೆ ಅನುವಾದಮಾಡಿರುತ್ತದೆ.

೧೭. **ಉಪದೇಶಸಾಹಸ್ರಿ ಗದ್ಯ** ೧- ೪

೧೮. ,, ,, (ಅರ್ಧ ಕ್ಯಾಲಿಕೊ) ೧- ೮

೧೯. **ಉಪದೇಶಸಾಹಸ್ರಿ ಪದ್ಯ** (ಅರ್ಧ ಕ್ಯಾಲಿಕೊ ೧೬ರಿಂದ ೧೩ ಪ್ರಕರಣಗಳವರೆಗೆ) ೧-೧೨

೨೦. **ಉಪದೇಶಸಾಹಸ್ರಿ ಪದ್ಯ** (ಪೂರ ಕ್ಯಾಲಿಕೊ) ೨- ೪

೨೧. **ಉಪದೇಶಸಾಹಸ್ರಿ ಪದ್ಯ** (ಪ್ರಕರಣಗಳು ೧೪ರಿಂದ ೧೩ರವರೆಗೆ) ೧-೧೨

೨೨. **ಕೇನೋಪನ್ಯಾಸಮುಂಜರಿ** ೦- ೮

೨೩. **ಮುಂಡಕೋಪನ್ಯಾಸಮುಂಜರಿ** ೦-೧೨

೨೪. **ಕೇನೋಪನ್ಯಾಸ ಮತ್ತು ಮುಂಡಕೋಪನ್ಯಾಸಮುಂಜರಿ** ೧- ೪

ಪ್ರಸ್ಥಾನತ್ರಯವಿವರಣೆ

ಈ ಪುಸ್ತಕಗಳಲ್ಲಿ ವಾದದ ಗಡಿಬಿಡಿಯಿಲ್ಲದೆ ಉಪನಿಷತ್ತುಗಳ, ಭಗವದ್ಗೀತೆಯ ಮತ್ತು ಬ್ರಹ್ಮಸೂತ್ರದ ತಾತ್ಪರ್ಯವನ್ನು ಸರಳವಾದ ನಡೆಗನ್ನಡದಲ್ಲಿ ವಿವರಿಸಿರುತ್ತದೆ.

ಪುಸ್ತಕ	ಬೆಲೆ ರೂ. ಆ.
೨೫. ಭಗವದ್ಗೀತೆಯ ಉಪನ್ಯಾಸಗಳು (೩೨ ಉಪನ್ಯಾಸಗಳು)	೧-೧೨
೨೬. ಭಗವದ್ಗೀತೆಯ ಉಪನ್ಯಾಸಗಳು (ಎರಡನೆಯ ಭಾಗ ೬೨ನೆಯ ಉಪನ್ಯಾಸದ ವರೆಗೆ)	೧-೧೨
೨೭. ವೇದಾಂತದರ್ಶನ (ಬ್ರಹ್ಮಸೂತ್ರದ ಮೊದಲನೆಯ ಪರಿಚಯ)	೦- ೬
೨೮. ಉಪನಿಷತ್ತುಗಳ ಮೊದಲನೆಯ ಪರಿಚಯ	೦- ೮

ವೇದಾಂತಪ್ರಕರಣಗಳು

ಪುಸ್ತಕ	ಬೆಲೆ ರೂ. ಆ.
೨೯. ಪರಮಾರ್ಥಚಿಂತಾಮಣಿ (ವಿಚಾರಪ್ರಧಾನವಾದ ಸ್ವತಂತ್ರಗ್ರಂಥ, ಅರ್ಧಕ್ಯಾಲಿಕೊ)	೩–೧೩
೩೦. ಪರಮಾರ್ಥಚಿಂತಾಮಣಿ (ಪೂರಕ್ಯಾಲಿಕೊ)	೪–೧೨
೩೧. ಶಂಕರಸಿದ್ಧಾಂತ (ದಪ್ಪರಟ್ಟು), ಶಂಕರಸೂರ್ಯ ಸಹ.	೦–೧೨
೩೨. ವೇದಾಂತಬಾಲಬೋಧೆ (ಪ್ರಾತಃಸ್ಮರಣಸ್ತೋತ್ರವಿವರಣ)	೦– ೬
೩೩. ನೇದಾಂತಪ್ರವೇಶಿಕೆ (ಅದ್ವೈತಪಂಚರತ್ನದ ವಿವರಣ)	೦– ೮
೩೪. ಲಕ್ಷ್ಮೀನರಸಿಂಹಪಂಚರತ್ನ (ಅರ್ಥವಿವರಣಗಳ ಸಹಿತ)	೦– ೪
೩೫. ಮೋಹಮುದ್ಗರ (ಭಜಗೋವಿಂದ ಸ್ತೋತ್ರ)	೦– ೨
೩೬. ಸವಾರ್ತಿಕಪಂಚೀಕರಣ (ಸಾರ್ಥ)	೦– ೬
೩೭. ಆತ್ಮಬೋಧೆ (ಭಾವಾರ್ಥ, ಟಿಪ್ಪಣಿ, ಪರಿಶಿಷ್ಟ ಸಹ)	೦– ೪
೩೮. ದೃಗ್ದೃಶ್ಯವಿವೇಕ (ಅರ್ಥವಿವರಣೆಗಳೊಡನೆ)	೦– ೪
೩೯. ವಾಕ್ಯವೃತ್ತಿ (ಮೂಲ, ಅರ್ಥ, ಟಿಪ್ಪಣಿ, ಪರಿಶಿಷ್ಟ ಸಹ)	೦– ೪
೪೦. ಸ್ವಾತ್ಮಪ್ರಕಾಶಿಕೆ (,, ,,)	೦– ೪
೪೧. ಶಂಕರಮಹಾಮನನ	೦– ೩
೪೨. ವೇದಾಂತಡಿಂಡಿಮ (ಭಾವಾರ್ಥ ಸಹಿತ)	೦– ೪
೪೩. ಅಪರೋಕ್ಷಾನುಭೂತಿ (ಭಾವಾರ್ಥ, ವಿವರಣಸಹಿತ)	೦–೧೨
೪೪. ಅಪರೋಕ್ಷಾನುಭೂತಿ (ದಪ್ಪರಟ್ಟು)	೧– ೦
೪೫. ಆತ್ಮವಿದ್ಯಾವಿಲಾಸ (ಭಾವಾರ್ಥಸಹಿತ)	೦– ೬
೪೬. ಶ್ರೀರಾಮಹೃದಯ (ಅರ್ಥ ಸಾರಸಹಿತ)	೦– ೨
೪೭. ಅಧ್ಯಾತ್ಮನೆಂದರೇನು?	೦– ೨
೪೮. ವೇದಾಂತವಿಚಾರವ ಇತಿಹಾಸ	೧–೧೨
೪೯. ಸದ್ಗುರುವಿನ ಅನುಗ್ರಹ	೦– ೨
೫೦. ಸರ್ವೇಷ್ಟಸಿದ್ಧಿ (ತಿದ್ದಿದ ಎರಡನೆಯ ಸಂಸ್ಕರಣ)	೦– ೬

ಸ್ತೋತ್ರ, ಪದ, ಪದ್ಯ

೫೧. ವಾಗ್ದೇವೀಸ್ತೋತ್ರ (ಭಜನೆಗೆ ಅನುಕೂಲವಾದದ್ದು)	೦– ೧
೫೨. ಗಣೇಶಾಷ್ಟಕ (ಭಾವಾರ್ಥ ವಿವರಣೆಗಳೊಡನೆ)	೦– ೪
೫೩. ಭಗವಚ್ಚರಣಸ್ತೋತ್ರ (ಭಾವಾರ್ಥ ವಿವರಣೆಗಳೊಡನೆ)	೦– ೬
೫೪. ಹರಿಶರಣಾಷ್ಟಕ (ಭಾವಾರ್ಥ ವಿವರಣೆಗಳೊಡನೆ)	೦– ೨

ಸ್ತೋತ್ರ, ಪದ, ಪದ್ಯ.

ಪುಸ್ತಕ	ಬೆಲೆ ರೂ. ಅ.
೫೫. ಮುಕುಂದಮಾಲಾಸ್ತೋತ್ರ (ಭಾವಾರ್ಥಸಹಿತ)	೦– ೩
೫೬. ಭೀಷ್ಮಸ್ತವರಾಜ (ಅರ್ಥವಿವರಣೆಗಳ ಸಮೇತ)	೦– ೬
೫೭. ಶ್ರೀರಾಮಗೀತಾ (ಅರ್ಥವಿವರಣೆಗಳ ಸಹಿತ)	೦– ೪
೫೮. ಶಿವನಾಮಾಷ್ಟೋತ್ತರಶತಕ (ಅರ್ಥವಿವರಣೆಗಳೊಡನೆ)	೦– ೬
೫೯. ಶಿವಕವಚ (ಅರ್ಥವಿವರಣೆಗಳೊಡನೆ)	೦– ೬
೬೦. ಗುರುಭಕ್ತಿಸಾರ (ಕುಸುಮಷಟ್ಪದಿ, ವಿವರಣಾತ್ಮಕಟಿಪ್ಪಣಿಸಹಿತ)	೦– ೪
೬೧. ಅಧ್ಯಾತ್ಮಗೀತಾವಳಿ (ಹಾಡು, ಕೀರ್ತನೆ)	೦– ೬
೬೨. ಚಿದಾನಂದರಗಳೆ (ಟಿಪ್ಪಣಿಸಹಿತ)	೦– ೨
೬೩. ಚಿದಾನಂದಸವಾಯಿ (ಟಿಪ್ಪಣಿಸಹಿತ)	೦– ೪

ಕಥೆಗಳು

೬೪. ವೇದಾಂತಕಥಾವಳಿ (ತಿದ್ದಿದ ೨ನೆಯ ಸಂಸ್ಕರಣ)	೦– ೬
೬೫. ವಿಲಕ್ಷಣಮೌನಿ (ಸಂಭಾಷಣೆ, ಉಪನಿಷತ್ತುಗಳ ತಾತ್ಪರ್ಯ)	೦– ೩
೬೬. ಲಕ್ಷಣಶಾಸ್ತ್ರಿ ಉರುಫ್ ಹಸೇನ್ (ತರ್ಕವೇದಾಂತಗಳ ಸಂಬಂಧವನ್ನು ತಿಳಿಸುವದು)	೦– ೪
೬೭. ಸಮುದ್ರಮಥನ (ರಹಸ್ಯಾರ್ಥದೊಡನೆ)	೦– ೬

ಶ್ರೀವಿವೇಕಾನಂದಸ್ವಾಮಿಗಳ ಉಪನ್ಯಾಸಗಳು

೬೮. ವಿಶ್ವಧರ್ಮಸಮ್ಮೇಳನದಲ್ಲಿ (ಚಿಕಾಗೊ)	೦– ೬
೬೯. ವೇದಾಂತೋಪನ್ಯಾಸಗಳು (ನ್ಯೂಯಾರ್ಕ್)	೦–೧೦
೭೦. ವೇದಾಂತೋಪನ್ಯಾಸಗಳು (ಅವಶಿಷ್ಟ)	೦– ೨
೭೧. ಜ್ಞಾನಯೋಗ (೧ನೆಯ ಭಾಗ)	೦–೧೦
೭೨. ಜ್ಞಾನಯೋಗ (೨ನೆಯ ಭಾಗ)	೦–೧೦
೭೩. ಭಕ್ತಿಯೋಗ (ಮರಿಹಾಳಿ)	೦–೧೦
೭೪. ಭಕ್ತಿಯೋಗ (ಪಪ್ಪರಟ್ಟಿ)	೧– ೦

ಇತರ ಪುಸ್ತಕಗಳು

	ಪುಸ್ತಕ	ಬೆಲೆ ರೂ. ಆ.
೭೫.	ಧಮ್ಮಪದ (ಬುದ್ಧಗೀತೆ)	೦-೧೨
೭೬.	ತತ್ತ್ವಸಮಾಸ (ಸಾಂಖ್ಯಸೂತ್ರಗಳ ವಿವರಣ)	೦- ೬
೭೭.	ಅಧ್ಯಾತ್ಮಸೂಕ್ತಿಮಂಜರಿ(ಶ್ರೀಶಿವಾನಂದಸರಸ್ವತೀಕೃತ)ಭಾಗ ೧	೦- ೮
೭೮.	ಅಧ್ಯಾತ್ಮಸೂಕ್ತಿಮಂಜರಿ ,, (ದಪ್ಪರಟ್ಟು)	೦-೧೦
೭೯.	ಅಧ್ಯಾತ್ಮಸೂಕ್ತಿಮಂಜರಿ ,, (ಭಾಗ ೨)	೦-೧೦
೮೦.	ಅದ್ವೈತಸಿದ್ಧಾಂತ (ವಾದಗ್ರಂಥ)	೦- ೧
೮೧.	ಜಿಜ್ಞಾಸುಗಳ ತೊಡಕು (,,)	೦- ೪

ದೇವನಾಗರಿಯಲ್ಲಿ ಸಂಸ್ಕೃತಗ್ರಂಥಗಳು

೮೨.	ಮೂಲಾವಿದ್ಯಾನಿರಾಸಃ (ಶ್ರೀಶಂಕರಹೃದಯಮ್)	೨- ೮
೮೩.	ಮೂಲಾವಿದ್ಯಾನಿರಾಸಃ (ಪೂರ್ಣಕ್ಯಾಲಿಕೊ)	೪-೧೨
೮೪.	ಈಶಾವಾಸ್ಯೋಪನಿಷತ್ (ಶಂಕರಭಾಷ್ಯಸಹಿತಾ, ಸುಬ್ರಹ್ಮಣ್ಯ ಶರ್ಮವಿರಚಿತ ಟಿಪ್ಪಣಿಸಮೇತಾ)	೦- ೮
೮೫.	ವೇದಾಂತಡಿಂಡಿಮಃ (ಭಾವಬೋಧಿನೀಸಹಿತಃ)	೦- ೮

ENGLISH

86.	**Words of Wisdom:** By Sri Swami Rajeswarana:daji *Wrapper Edn.*	1- 0
87.	,, *Calico Edn.*	1-12
88.	**Narada's Aphorisms on Bhakti:** With Translation and Notes	0- 6
89.	**Avasthatraya or the Unique Method of Vedanta:**	0- 4
90.	**Minor Works of Sri Sankaracharya:**	0-12
91.	**Vedanta or the Science of Reality;**	12- 0

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಈ ಗ್ರಂಥರತ್ನಮಾಲೆಗೆ ಸೇರಿದಂತೆ ಕೆಳಗೆ ಕಂಡ ಅಮೂಲ್ಯವಾದ ಗ್ರಂಥಗಳು ಒಂದೊಂದಾಗಿ ಪ್ರಕಟವಾಗುವವು. ಇವರ ಪ್ರತಿಯೊಂದು ಪುಸ್ತಕದಲ್ಲಿಯೂ (ಉಪನಿಷತ್ತಿನ, ಗೀತೆಯ, ಮತ್ತು ಶ್ರೀ ಶಂಕರಾಚಾರ್ಯರವರ ಭಾಷ್ಯಾದಿಗಳ) **ಸಂಸ್ಕೃತ ಮೂಲ** ಕನ್ನಡ ಅಕ್ಷರದಲ್ಲಿ, ಕನ್ನಡ **ಅನುವಾದ, ಟಿಪ್ಪಣಿ, ಗ್ರಂಥಸಾರ, ವಿಮರ್ಶಾತ್ಮಕಪೀಠಿಕೆ, ಪರಿಶಿಷ್ಟಗಳು,** ಪಾರಿಭಾಷಿಕಶಬ್ದಗಳ ಅರ್ಥವನ್ನು ತಿಳಿಸುವ **ಶಬ್ದಾನುಕ್ರಮಣಿಕೆ**–ಮುಂತಾದ ಹಲವು ಸೌಕರ್ಯವಿಶೇಷಗಳಿರುವವು.

ಉಪನಿಷದ್ಭಾಷ್ಯಗಳು

೧. **ಈಶ, ಕೇನ, ಕಠ:** ಈ ಉಪನಿಷತ್ತುಗಳ ಭಾಷ್ಯ ಬೆಲೆ ೫ ರೂ. ಅಂಚೆ ಹಾ. ೧೧ ಆ.

೨. **ಮುಂಡಕ, ಪ್ರಶ್ನ, ಮತ್ತು ಮಾಂಡೂಕ್ಯ:** ಈ ಉಪನಿಷತ್ತುಗಳ ಭಾಷ್ಯ ಶ್ರೀ ಗೌಡಪಾದರವರ ಕಾರಿಕೆಯ ನಾಲ್ಕು ಪ್ರಕರಣಗಳ ಸಹಿತ. ಇವುಗಳಲ್ಲಿಯೇ ಹೊರಕ್ಕೆ ಬರುವದು. ಬೆಲೆ ೮ ರೂ.

೩. **ಐತರೇಯ, ತೈತ್ತಿರೀಯ:** ಇವುಗಳ ಭಾಷ್ಯ, ಬೆಲೆ ೫ ರೂ. ಅಂಚೆ ಹಾ. ೧೧ಆ. ಬೃಹದಾರಣ್ಯಕ, ಛಾಂದೋಗ್ಯ, ಶ್ವೇತಾಶ್ವತರ, ನೃಸಿಂಹತಾಪನೀಯ –ಮುಂತಾದ ಉಪನಿಷತ್ತುಗಳ ಭಾಷ್ಯಗಳು ಒಂದೊಂದಾಗಿ ಹೊರಕ್ಕೆ ಬರಲಿವೆ.

ಭಗವದ್ಗೀತಾಭಾಷ್ಯ

೪–೫. ಎರಡು ಸಂಪುಟಗಳಲ್ಲಿ ಪೂರ್ಣ. ಬೆಲೆ ೧೨ ರೂ; ಅಂ. ಹಾ. ೧–೧೨ ಬ್ರಹ್ಮಸೂತ್ರವು ಅಚ್ಚಿನಲ್ಲಿದೆ. ಉಪದೇಶಸಾಹಸ್ರಿ, ಅಪರೋಕ್ಷಾನುಭೂತಿ –ಮುಂತಾದ ಪ್ರಕರಣಗಳ ವಿವರವನ್ನು ಹಿಂದಿನಿಂದ ಪ್ರಕಟಿಸುವೆವು.

ಗ್ರಂಥಗಳಿಗೆ ಫ್ರೀಹಾಸಲೂ ರಿಜಿಸ್ಟ್ರೇಷನ್ ಪ್ಯಾಕಿಂಗ್‌ಹಾಸಲೂ ಬೇರೆ ಬೀಳುವದು.

ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಚಂದಾದಾರರುಗಳಿಗೆ ಗ್ರಂಥಗಳೆಲ್ಲವೂ ರಿಯಾಯಿತಿ ದರದಲ್ಲಿ ಸಿಕ್ಕುವವು.

ಅಧ್ಯಾತ್ಮಪ್ರಕಾಶ ಕಾರ್ಯಾಲಯ,

ಹೊಳೆನರಸೀಪುರ. (ಮೈಸೂರು ಸ್ಟೇಟ್)

ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೆ ಹಣವನ್ನು ಕಳುಹಿಸುವವರಿಗೆ ತಿಳಿವಳಿಕೆ

೧. **ಯಾವ ಹಣವನ್ನಾದರೂ "ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ" ಎಂಬ ವಿಳಾಸಕ್ಕೆ ಕಳುಹಿಸಬಹುದು.** ಚಕ್ಕು ಕಳುಹಿಸುವದಾದರೆ ಬ್ಯಾಂಕು ಕಮಿಷನ್ ಬಗ್ಗೆ ಸೇರಿಸಿ ಕಳುಹಿಸಿರಿ. ಚೆಕ್ಕಿನಲ್ಲಿ ಯಾರೊಬ್ಬರ ಹೆಸರನ್ನೂ ಬರೆಯಬಾರದು.

೨. **ಅಧ್ಯಾತ್ಮಪ್ರಕಾಶಪತ್ರಿಕೆಗೆ:** ಚಂದಾಹಣವನ್ನು ಕಳುಹಿಸುವಾಗ ಕಾಗದ್ದಲ್ಲಿ ತಮ್ಮ ಚಂದಾನಂಬರನ್ನೂ, ವಿಳಾಸವನ್ನೂ ಸ್ಪಷ್ಟವಾಗಿ ಬರೆಯಿರಿ. ಯಾವ ವರ್ಷದ ಸಂಪುಟಕ್ಕೆ ಎಂಬುದನ್ನೂ ತಿಳಿಸಿ. ಪತ್ರಿಕೆಯು ಹೊಸ ಸಂಪುಟವು ಸೆಪ್ಟೆಂಬರಿನಿಂದ ಪ್ರಾರಂಭವಾಗುತ್ತದೆ.

೩. **ಪುಸ್ತಕಗಳಿಗೆ:** ಈ ಹಬ್ಬವುಂಟಿರುವ ಕ್ರಯವಿವರಗಳನ್ನು ತಿಳಿದು ಪುಸ್ತಕಗಳ ಹೆಸರನ್ನೂ ಬರೆಯಿರಿ. ವಿ.ಪಿ. ಕೇಳುವದಾದರೆ ಸ್ಪಷ್ಟವಾಗಿ ಸೂಚಿಸಿರಿ. ನಮ್ಮ ಚಂದ ಸಂಬರನ್ನೂ ತಿಳಿಸಿ ಬರೆದುಕೊಂಡರೆ ೧೦೦ ರೂ.ಗೆ ೨ ಆ. ಯಂತೆ ಬೆಲೆಯನ್ನು ತಗ್ಗಿಸಿಕೊಡುವೆವು. ಈ ರಿಯಾಯಿತಿ ತ್ರೀ ಜಯ ಚಾಮರಾಜೇಂದ್ರ ಗ್ರಂಥರತ್ನಮಾಲೆಗೆ ಇಲ್ಲ; ಆದರೆ ಈವರೆಗಿನ ಪುಸ್ತಕಗಳನ್ನೆಲ್ಲ ಕೊಂಡು ಮುಂದಿನ ಪುಸ್ತಕಗಳನ್ನು ಕೊಳ್ಳುವ ವಾಗ್ದಾನಸಮೇತ ರೂ ೫ ಮುಂಗಡ ಕಳುಹಿಸುವವರಿಗೆ ಯಥೋಚಿತವಾಗಿ ತಗ್ಗಿಸಿದ ಬೆಲೆಗೆ ಆ ಪುಸ್ತಕಗಳನ್ನು ಕೊಡುವೆವು.

೪. **ಪೋಷಣದ್ರವ್ಯವನ್ನು:** ಕಟ್ಟಡ, ಪೂಜಾಮಂದಿರ, ವಿದ್ಯಾಲಯ, ಪುಸ್ತಕ ಭಂಡಾರ, ಧರ್ಮಾರ್ಥವಾಜ್ಞೆಯ, ಸಾಮಾನ್ಯನಿಧಿ- ಇವುಗಳಲ್ಲಿ ಯಾವ ಬಗ್ಗೆ ಎಂಬುದನ್ನು ತಿಳಿಸಿ ಕಳುಹಿಸಿರಿ; ಇಲ್ಲದಿದ್ದರೆ ಕಮಿಟಿಯವರು ಯುಕ್ತತೋರಿದಂತೆ ವಿನಿಯೋಗಿಸುವರು.

೫. ಯಾವ ಹಣವನ್ನು ಕಳುಹಿಸಿದರೂ ಬೇರೆ ಒಂದು ಪತ್ರವನ್ನು ಬರೆದು ತಿಳಿಸುವದರಲ್ಲಿ ಲೆಕ್ಕಪತ್ರಗಳಿಗೂ ತಮಗೆ ಉತ್ತರವನ್ನು ಕೊಡುವದಕ್ಕೂ ಅನುಕೂಲವಾಗುವದು. ಹೆಚ್ಚಿನ ವಿಷಯಗಳಿಗೆ ಮಾಸಪತ್ರಿಕೆಯನ್ನು ನೋಡಿ ಅಥವಾ ನಮಗೆ ಬರೆಯಿರಿ.

ಗ್ರಂಥಗಳಿಗೆಲ್ಲ ಅಂಚೆಹಾಸಲೂ ರಿಜಿಸ್ಟ್ರೇಷನ್ ಪ್ಯಾಕಿಂಗ್‌ಹಾಸಲೂ ಬೇರೆಬೀಳುವದು.

POSTAGE, REGISTRATION & PACKING CHARGES EXTRA

ADHYATMA PRAKASHA KARYALAYA

HOLENARSIPUR, Mysore Railway

ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.